
ಥಾಮಸ್ ಹಾರ್ಡಿ

ಮಲೆನಾಡಿಗರು

ಅನುವಾದ ಗೌರೀಶ ಕಾಯ್ಕಿಣಿ



[illegible]
[illegible]
[illegible]
[illegible]
- 1974

ಮಲೆನಾಡಿಗರು

ಮೂಲ :
ಥಾಮಸ್ ಹಾರ್ಡಿ

ಅನುವಾದ :
ಗೌರೀಶ ಕಾಯ್ಕಿಣಿ

ಬೆಂಗಳೂರು

MALENADIGARU is a Kannada Translation of Thomas Hardy's Woodlanders by Gourish Kaikini. Publishers: Karnataka Co-operative Publishing House Limited, Bangalore. Pages: iv+452, Price: Rs. 20-00

ಬೆಲೆ : ಇಪ್ಪತ್ತು ರೂಪಾಯಿ

ರಕ್ಷಾ ಚಿತ್ರ : ಕೆ. ಮುರಲೀಧರ

ಮುದ್ರಕರು :

ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ ನಿಯಮಿತ
ಚಾಮರಾಜಪೇಟೆ, ಬೆಂಗಳೂರು-560018

ಈ ಕೃತಿಯನ್ನು ಕುರಿತು

ಆಂಗ್ಲ ಸಾಹಿತ್ಯದ ಮಹಾನ್ ಕೃತಿಗಳಲ್ಲೊಂದು ಥಾಮಸ್ ಹಾರ್ಡಿಯ *'Woodlanders'* ಕಾದಂಬರಿ. ಅದರ ಕನ್ನಡ ಅನುವಾದವೇ 'ಮಲೆನಾಡಿಗರು'.

ಕನ್ನಡಿಸಿರುವ ಗೌರೀಶ ಕಾಯ್ಕಿಣಿ ನಮ್ಮ ನಾಡಿನ ಹೆಸರಾಂತ ಲೇಖಕರು.

ಕೆಲವು ವರ್ಷಗಳಿಗೆ ಹಿಂದೆಯೇ ಬೆಳಕು ಕಾಣಬೇಕಾಗಿದ್ದ ಈ ಕೃತಿ ಈಗ ಹೊರಬರುತ್ತಿದೆ. ವಿಲಂಬವಾದಂದಕ್ಕೆ ವಿಷಾದಿಸಿ, ಕನ್ನಡಿಗರು ಈ ಕೃತಿಯ ರಸಾಸ್ವಾದನೆ ಮಾಡಲಿ ಎಂದು ಪ್ರಕಾಶನ ಮಂದಿರ ಹಾರೈಸುತ್ತದೆ.

ಬೆಂಗಳೂರು
ಮಾರ್ಚ್ ೧, ೧೯೭೪ **ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ**

೧

ಬ್ರಿಸ್ಟಲದಿಂದ ಇಂಗ್ಲೆಂಡಿನ ದಕ್ಷಿಣ ದಂಡೆಗೆ ಒಯ್ಯುವ ಹಳೆಯ ಸಾರೋಟು ರಸ್ತೆಯಲ್ಲಿ ಹಳೆಯ ಋಣಾನುಬಂಧಗಳನ್ನು ನೆನೆದು ಪ್ರವಾಸಿಯೊಬ್ಬನು ಹೊರಟರೆ ಅವನು ತನ್ನ ಪ್ರವಾಸದ ಉತ್ತರಾರ್ಧದಲ್ಲಿ ಕೆಲವು ಮಲೆನಾಡಿನ ದಟ್ಟಡವಿಯ ಸೀಮೆಯನ್ನು ಪ್ರವೇಶಿಸುವನು. ಈ ಬೆಟ್ಟಕಾಡುಗಳ ಸೀಮೆಯಲ್ಲಿ ನಡುನಡುವೆ ಸೇಬಿನ ತೋಟಗಳು ಚಾಚಿರುವುವು. ಇಲ್ಲಿಯ ಮರಗಳು ಹಣ್ಣಿನವಿರಲಿ, ಕಟ್ಟಿಗೆಯವಿರಲಿ, ಹಾದಿಯ ಬದಿಯ ಬೇಲಿಗಳನ್ನೆಲ್ಲ ಎಡಬಿಡದಾವರಿಸಿರುವವು. ಎಲೆ ಹನಿಗಳಿಂದ ಮತ್ತು ತಣ್ಣೆರಳಿಂದ ಒದ್ದೆ-ಮುದ್ದೆಯಾಗಿ ಇಡುವವು. ಈ ಮರಗಳ ಕೆಳಮಟ್ಟದ ಟೊಂಗೆಗಳು ಹಾದಿಯಲ್ಲಿ ಅಲ್ಲಲ್ಲಿ ಬಗ್ಗಿ ಅಡ್ಡ ಚಾಚಿರುವವು.

ಅದೂ ಒಂದು ಸ್ಥಳದಲ್ಲಿ, ಬ್ಲಾಕ್‌ಮೂರಕೊಳ್ಳದಲ್ಲಿ ನೋಡಬೇಕು. ಅಲ್ಲಿಂದ ಹಾಯ್‌ಸ್ಟೋಯಿ ಗುಡ್ಡದ ಕೋಡು ಎರಡು ಮೂರು ಮೈಲಿನಷ್ಟೇ ದೂರ ಹಣೆ ಎತ್ತಿ ನಿಂತದ್ದು ಕಾಣುತ್ತದೆ. ಈ ತಾಣದಲ್ಲಿ ಮರಗಳಿಂದ ಸದಾಕಾಲವು ಬಿದ್ದ ತರಗೆಲೆಗಳಿಂದ—ಅದೂ ಮಾಗಿಯ ಹಂಗಾಮಿನಲ್ಲಿ, ಹಾದಿಯೇ ಮುಚ್ಚಿಹೋಗುತ್ತದೆ. ದಾರಿಕಾರನಿಗೆ ದಾರಿಯೇ ಕಾಣಿಸದು. ಅಷ್ಟು ದಟ್ಟ ಎಲೆಗಳ ಹಾಸು ಹರಡಿರುತ್ತದೆ. ಈ ಸ್ಥಾನವೇ ನಿಬಿಡ ಏಕಾಂತದ್ದು. ಸಂಜೆಗತ್ತಲಾಗುತ್ತಲೇ ಹಗಲು ಚಿಕ್ಕದಾಗುತ್ತಿದ್ದಂತೆ, ಕಳೆದ ಶತಮಾನದಲ್ಲಿ ಆ ಹಾದಿಯಿಂದ ಹಾದು ಹೋದ ಹಿಗ್ಗಿನ ಷೋಕಿ ಸಾರೋಟುಗಾರರೂ, ಆ ಹಾದಿಯ ಕಲ್ಲು ಮುಳ್ಳು ತುಳಿದು ಗುಳ್ಳೆ ಎದ್ದ ಅಂಗಾಲುಗಳೂ ನಡೆನಡೆದು ಬಳಲಿದವರು ಆ ಹಾದಿಯನ್ನು ತೊಯ್ಸಿದ ಕಣ್ಣೀರೂ ಇಂದಿನ ನಮ್ಮ ಪ್ರವಾಸಿಯ ಮನಸ್ಸಿನಲ್ಲಿ ಮರಳಿ ಮೂಡುವ ಚಿತ್ರಗಳು.

ಈ ಚಿತ್ರಗಳದೊಂದು ವಿಚಿತ್ರ. ಹೀಗೆ ಬಳಕೆ ಇಲ್ಲದೆ ಹಾಳುಬಿದ್ದ ಹೆದ್ದಾರಿ ಬರಿಯ ಗುಡ್ಡ, ಕೊಳ್ಳ, ಬೆಟ್ಟ, ಬಯಲುಗಳಿಗಿಂತ ಹೆಚ್ಚು ಏಕಾಂತವನ್ನೂ ಶೂನ್ಯತೆಯನ್ನೂ ಪ್ರಕಟಿಸುತ್ತದೆ. ಕೊಳಗಳಿಗಿಂತಲೂ ಕಾಡುಕೊಳ್ಳಗಳಿಗಿಂತಲೂ ಇಂಥ ಹಳೆಯ ಹಾಳುಬಿದ್ದ ಹಾದಿ ಸ್ಮಶಾನದ ಸಮಾಧಿಯ ಶಾಂತಿಯನ್ನು ಹೆಚ್ಚು ಹಠಾತ್ತಾಗಿ ವ್ಯಕ್ತ ಮಾಡುತ್ತದೆ. ಈಗ ಇದ್ದುದು ಹಿಂದೆ ಇದ್ದಿರಬಹುದಾದ ಸನ್ನಿವೇಶದೊಂದಿಗೆ ತೀವ್ರ ವ್ಯತ್ಯಾಸವನ್ನೂ ನೆನಪಿಗೆ ತಂದುಕೊಡುತ್ತದೆ. ಅದರಿಂದ ಈ ಶೂನ್ಯತೆಯ ಅರಿವು ಅಷ್ಟೊ ಅಸಹ್ಯವೆನಿಸುತ್ತಿರಬೇಕು.

ಉದಾಹರಣೆಗೆ ಈಚೆಯ ತೋಟದಿಂದ ಈ ಹಳೆಯ ಸಾರೋಟು ರಸ್ತೆಯಲ್ಲಿ ಹೆಜ್ಜೆ ಇಟ್ಟು ಒಂದು ಕ್ಷಣ ಅಲ್ಲಿಯ ಶೂನ್ಯತೆಯಲ್ಲಿ ನಿಲ್ಲುವದೆಂದರೆ, ಒಂದೇ ದಾಪಿಗೆ ಮಾನವ ಸಹವಾಸವನ್ನು ಕಳೆದುಕೊಂಡು ಹತಾಶ ಒಂಟಿಗತನದ ಮಬ್ಬನ್ನು ಅಪ್ಪಿಕೊಂಡಂತೆಯೇ ಆಗುತ್ತಿತ್ತು.

ಒಂದು ಮಬ್ಬುಗವಿದ ಸಂಜೆಗೆ ಅದೇ ಸ್ಥಳದಲ್ಲಿ ಒಬ್ಬ ಮನುಷ್ಯ ನಿಂತಿದ್ದ. ಅವನು ಹೇಗೋ ಹತ್ತಿರದ ಒಂದು ಬೇಲಿಯ ದಣಪೆ ದಾಟಿ ಫಕ್ಕನೆ ಈ ನಿರ್ಜನ ಹಾದಿಯ ನಿಬಡ ಶೂನ್ಯತೆಯನ್ನು ಅನುಭವಿಸುವಂತೆ ಆಗಿತ್ತು—ಈ ಹಳೆಯ ಸಾರೋಟು ರಸ್ತೆಯಲ್ಲಿ ಆತ ಬಂದು ಮುಟ್ಟಿದನು.

ಅವನ ಪೋಷಾಕು ಒಳ್ಳೆಯ ಷೋಕಿಯಾಗಿತ್ತು. ತುಸು ಹೆಚ್ಚೇ ಓರಣವಾಗಿತ್ತು. ಅದರಿಂದ ಆವನು ಈ ಹಳ್ಳಿಗಾಡಿನವನಿರಲಾರನೆಂದು ಒಮ್ಮೆ ಕಣ್ಣು ಹಾಯಿಸಿದರೂ ಕಂಡು ಬರುತ್ತಿತ್ತು. ಇನ್ನೂ ಒಂದು ಸಂಗತಿ ಕಂಡು ಬರುತ್ತಿತ್ತು, ಅವನ ಚರ್ಯೆಯಿಂದ. ಅಲ್ಲಿಯ ಪ್ರಕೃತಿಯು ಚೆಲ್ಲುವರಿದ ಚೆಲುವು, ಗಾಳಿಯೊಳಗಿನ ಗಾನ, ಶೂನ್ಯ ಹೆದ್ದಾರಿಯಲ್ಲಿನ ಹಳೆಯ ಸಾರೋಟು-ಸಾಗಾಟದ ಹಳೆಯ ಮೆರವಣಿಗೆಯ ಭ್ರಮೆ, ಇವೆಲ್ಲ ಏನೇ ಇದ್ದರೂ, ಈ ಓರಣದ ಮನುಷ್ಯನಿಗೆ ಅತ್ತ ಕಡೆಗೆ ಗಮನವಿದ್ದಿಲ್ಲ. ದಾರಿ ಯಾವುದು? ಯಾವ ಕಡೆಗೆ ಹೋಗಬೇಕು? ಎಂಬುದೇ ಅವನನ್ನು ವ್ಯಗ್ರ ಮಾಡಿದಂತೆ, ಒಗಟಿಗಿಟ್ಟಂತೆ ಕಾಣುತ್ತಿತ್ತು.

ಆತ ಉತ್ತರಕ್ಕೂ ದಕ್ಷಿಣಕ್ಕೂ ಒಮ್ಮೆ ನೋಡಿದನು. ಮತ್ತು ತನ್ನ ಕೈಯ ಬೆತ್ತದಿಂದ ನೆಲವನ್ನು ಒಮ್ಮೆ ಕುಟ್ಟಿದನು.

ಮೊದಲಿಗೆ ಒಂದು ಪ್ರಾಣಿಯೂ ಅತ್ತಕಡೆ ಹಾಯಲಿಲ್ಲ—ಅವನಿಗೆ ಬೆಳಕು ಬೀರಲಿಕ್ಕೆ ಆ ರಾತ್ರೆಯ ಹೊತ್ತಿಗೆ ಯಾರೂ ಅಲ್ಲಿ ಕಾಣಿಸಿಕೊಳ್ಳುವಂತೆಯೂ ಇಲ್ಲ. ಆದರೆ ಗಳಿಗೆಯಲ್ಲೇ ಗಾಲಿಗಳ ಸದ್ದು ಕೇಳಿಸಿತು. ಕುದುರೆಗಳ ಖುರಗಳ ಲಯಬದ್ಧ ದನಿಯೂ ಜತೆಗೆ ಕೇಳಿಬಂದಿತು. ಮತ್ತು ತುಸು ದೂರ ಬಾನು ಮತ್ತು ತೋಟಗಳ ನಡುವಿನ ಬಿರುಕಿನಲ್ಲಿ ಒಂಟಿ ಕುದುರೆಯು ಎಳೆಯುತ್ತಿರುವ ಒಂದು ಗಾಡಿ—ಸಾರಿಗೆಯ ಜಟಕಾಗಾಡಿ ಕಂಡು ಬಂತು.

ಈ ಗಾಡಿಯು ಪ್ರಯಾಣಿಕರಿಂದ ಅರ್ಧ ತುಂಬಿತ್ತು—ಈ ಪ್ರಯಾಣಿಕರೂ ಹೆಂಗಸರೇ. ಹಾದಿ ಹುಡುಕುತ್ತಿದ್ದ ಆ ಗೃಹಸ್ಥನು ತನ್ನ ಕೋಲನ್ನು ಎತ್ತಿ ಹಿಡಿದನು ಮತ್ತು ಗಾಡಿ ಹೊಡೆಯುತ್ತಿದ್ದ ಒಬ್ಬ ಹೆಂಗಸು ಲಗಾಮನ್ನು ಜಗ್ಗಿದಳು.

'ಅರ್ಧ ತಾಸಾಯಿತಂ, ನಾನು ಕಿರಿ ಹಿಂಟೋಕ್‌ಕ್ಕೆ ಅಡ್ಡಹಾದಿ ಹುಡುಕುತ್ತಿದ್ದೇನೆ, ಡಾಲರಿಯಮ್ಮನವರೇ', ಅತ ಆ ಹೆಣ್ಣುಮಗಳಿಗೆ ಅಂದನು, 'ಹಿರಿ ಹಿಂಟೋಕಿಗೂ ಹಿಂಟೋಕ್ ಹೌಸಿಗೂ ಆರೇಳು ಸಲ ಹೋಗಿ ಬಂದಿದ್ದೇನೆ—ಅಲ್ಲಿಯ ಆ ದಿವಂಕಿನ ಯಜಮಾನಿಯೊಂದಿಗೆ ವ್ಯವಹಾರವಿದ್ದಾಗಲೆಲ್ಲ. ಆದಾಗ್ಯೂ ಈ ಕಿರಿಯ ಹಳ್ಳಿಯ ಬಗ್ಗೆ ಯಾವಾಗಲೂ ತಪ್ಪಿಬೀಳುತ್ತೇನೆ. ನೀವು ಸ್ವಲ್ಪ ಸಹಾಯ ಮಾಡುತ್ತೀರಾ?'

ಆಕೆ ಹೂಂ ಎಂದು ಆಶ್ವಾಸನೆಯಿತ್ತಳು. ಆಕೆ ಅಬಟ್ಸ್‌ಸರ್ನಲಿಗೇ ಹೋಗುವವಳು. ಅವಳ ಗಾಡಿಯು ದಾರಿಯಲ್ಲಿ ಕಿರಿಹಿಂಟಾಕನ್ನು ಹಾದೇ ಹೋಗಬೇಕು. ಆಕೆ ಹಿಡಿದ ಹಾದಿಯಿಂದ ಒಂದು ಓಣಿ ಕವಲೊಡೆಯುತ್ತದೆ. ಅದರ ತುದಿಗೆ ಇದೆ ಕಿರಿಹಿಂಟಾಕ್.

'ಆದರೆ' ಡಾಲರಿಯಮ್ಮ ಮುಂದುವರಿದಳು, 'ರಾಯರೇ, ಆ ಊರು ಇಷ್ಟು ಸಣ್ಣ ಸ್ಥಳ. ನಿಮ್ಮಂಥ ಪೇಟೆಯ ಮಂದಿ ಕೈಯಲ್ಲಿ ಮೋಂಬತ್ತಿ, ಲಾಂದ್ರು ಹಿಡಿದುಕೊಂಡೇ ಅದನ್ನು ಹುಡುಕಿಕೊಳ್ಳಬೇಕು, ಅದು ಎಲ್ಲಿದೆಯೆಂದು ಗೊತ್ತಿರದಿದ್ದರೆ! ಅಯ್ಯೋ ನಮ್ಮಪ್ಪಾ! ಯಾರು ಹಣಕೊಟ್ಟರೂ ನಾನು ಅಲ್ಲಿ ಉಳಿಯಲೊಲ್ಲೆ. ಅದೇ ಅಬಟ್ಸಸರ್ನಲದಲ್ಲೋ ಲೋಕ ಸ್ವಲ್ಪವಾದರೂ ಕಾಣುತ್ತೆ."

ಈ ಗೃಹಸ್ಥ ಗಾಡಿಯನ್ನು ಏರಿ ಕುಳಿತನು—ಡಾಲರಿಯಮ್ಮನ ಪಕ್ಕದಲ್ಲಿ. ಅವನು ಪಾದಗಳನ್ನು ಹೊರಗೆ ಚಾಚಿದ್ದ ; ಕುದುರೆಯ ಬಾಲವು ಆಗಾಗ್ಗೆ ಅವನ್ನು ಒರಸಿ ಹೋಗುತ್ತಿತ್ತು, ಗಾಡಿ ಓಡುವಾಗ.

ಆ ಗಾಡಿಯು ಆ ರಸ್ತೆಯದೇ ಒಂದು ಸರಿದಾಡುವ ಅವಯುವದಂತಿತ್ತು. ಆ ಮುದಿ ಕುದುರೆ ಕಳೆದ ಇಪ್ಪತ್ತು ವರ್ಷಗಳಿಂದಲೂ ಆ ಹಾದಿಯನ್ನು ತುಳಿದಿತ್ತು; ಆ ಗಾಡಿಯನ್ನೇ ಎಳೆದಿತ್ತು. ಅಬಟ್ಸಸರ್ನಲದಿಂದ ಆರ್ಟನ್ ಊರಿನವರೆಗಿನ ಹತ್ತು ಮೈಲಿನಲ್ಲಿಯ ಒಂದೊಂದು ತಿರುವೂ ಏರು-ಇಳಿಜಾರೂ ಅದಕ್ಕೆ ಗೊತ್ತು. ಅಷ್ಟು ಪರಿಜ್ಞಾನ ಆ ಸೀಮೆಯ ಸರ್ವೆ ಅಧಿಕಾರಿಗೂ ಇರಲಾರದು.

ಆ ಗಾಡಿಗೆ ಒಂದು ಕಪ್ಪು ಬಟ್ಟೆಯ ಚಚ್ಚೌಕಾದ ಕೊಲ್ಲಾರ (ಕಮಾನು) ಇತ್ತು. ಅದು ಗಾಡಿಯೊಂದಿಗೇ ಅಡ್ಡತಿಡ್ಡ ಹೊಯ್ದಾಡುತ್ತಿತ್ತು. ಗಾಡಿಕಾರನ ತಲೆಯ ಮೇಲೆ ಈ ಕಮಾನಿಗೆ ಒಂದು ಕೊಂಡಿ. ಅದರಲ್ಲಿ ಕುದುರೆಯ ಲಗಾಮಿನ ಹುರಿಗಳನ್ನು ಆತ ಸಿಕ್ಕಿಸಿ ಇಡುವನು ; — ಮತ್ತೆ ಮತ್ತೆ ಗಾಡಿಯಿಂದ ಇಳಿದು ಹತ್ತಬೇಕಾದಾಗೆಲ್ಲ. ಗಾಲಿಗಳ ನಡುವೆ ಅಚ್ಚಿನ ಹಾರೆಗೆ ಒಂದು ಜೋಲುಬಿದ್ದ ಸರಪಳಿ. ಅದರ ಉದ್ದೇಶ ಬರೆ ಖಳಖಳ ಸಪ್ಪಳ ಮಾಡುವುದು — ಗಾಡಿ ಹೋಗುತ್ತಿದ್ದಾಗ. ಗಾಡಿಗಾರ್ತಿ ಡಾಲರಿಯಮ್ಮ ಪದೇ ಪದೇ ಗಾಡಿಯಿಂದ ಇಳಿಯಬೇಕು. ಆಗ ಗೌನು ಮೇಲೆ ಆಗಿ ಕಾಲು ಕಾಣಿಸಬಾರದೆಂದು ಕಾಲಿಗೆ ಚರ್ಮದ ಪಟ್ಟಿಗಳನ್ನು ಸುತ್ತಿಕೊಳ್ಳುವಳು. ತಲೆಗೊಂದು ಫೆಲ್ಟ ಹ್ಯಾಟು ; ಅದರ ಮೇಲಿಂದ ಕಿವಿ ಮುಚ್ಚಿಕೊಳ್ಳುವಂತೆ ಒಂದು ಟುವಾಲು ಸುತ್ತುವಳು — ಚಳಿ ಗಾಳಿಯಲ್ಲಿ ಕಿವಿ ನೋವು ಹೆಚ್ಚಾಗಬಾರದೆಂದು. ಗಾಡಿಯ ಒಳಗೆ ಬೆನ್ನು ಬದಿಗೆ ಒಂದು ಗಾಜಿನ ಕಿಂಡಿ. ಸಂತೆಯ ದಿನ ಡಾಲರಿಯಮ್ಮ ಆ ಗಾಜು ಒರೆಸಿ ಸ್ವಚ್ಛ ಮಾಡುವಳು. ಹಿಂದಿನಿಂದ ಈ ಕಿಂಡಿಯೊಳಗಿಂದ ನೋಡಿದರೆ ಕಾಣುವುದು ಬಾನಿನ ಬೆಳಕಿನ ಒಂದು ಚೌಕು. ಅದರಲ್ಲಿ ಒಳಗೆ ಕೂತ ಪ್ರಯಾಣಿಕರ ಮಗ್ಗಲು ಮೊಗಗಳ ಛಾಯಾಕೃತಿಗಳು. ಆ ಗಾಡಿ ಗಡಗಡಿಸಿ ಉರುಳುತ್ತಿದ್ದಂತೆ ಅವರ ಅದುರುವ ತುಟಿಗಳು ಮತ್ತು ತೂಗಾಡುವ ತಲೆಗಳು — ಇವೆಲ್ಲ ಆ ಚೌಕಟ್ಟಿನಲ್ಲಿ

ಕೊರೆದಿಟ್ಟ ಚಿತ್ರಗಳಂತೆ ಹೊರಗಿನ ಹಾದಿಹೋಕರಿಗೆ ಮನೋರಂಜಕವಾಗಿ ಕಾಣುವವು ಎಂಬ ಪರಿವೆ ಇಲ್ಲದೆ ಆ ಪ್ರಯಾಣಿಕರು ಗಾಡಿಯಲ್ಲಿ ಏನೆಲ್ಲ ಹರಟುತ್ತ ತೂಗಾಡುತ್ತ ಕೂತಿರುತಿದ್ದರು !

ಯಾವಾಗಲೂ ಪೇಟೆಯಿಂದ, ಸಂತೆಯಿಂದ ಮನೆಗೆ, ತಮ್ಮ ತಮ್ಮ ಊರಿಗೆ ಮರಳುವ ಈ ಸಂಜೆಯ ಸವಾರಿ ಈ ಹಳ್ಳಿಗರಿಗೆಲ್ಲ ಬಲು ಮೋಜಿನದು. ಪ್ರಪಂಚವನ್ನೇ ಮರೆತು ಅವರು ತಮ್ಮ ಹಗಲಿನ ಮಾರಾಟದ ಕೊಡುಕೊಳ್ಳುವ ಹಲವಾರು ಚಿಕ್ಕ ಪುಟ್ಟ ಸಂಗತಿಗಳನ್ನು ಸ್ವಾರಸ್ಯವಾಗಿ ಮಾತಿನಲ್ಲಿ ಮೆಲುಕು ಹಾಕುತ್ತ ಹಿಂದಿರುಗುವರು — ಸಂತೃಪ್ತಿಯ ನಗೆಮೊಗಗಳಿಂದ.

ಗಾಡಿಯ ಹಿಂಭಾಗದಲ್ಲಿ ಕುಳಿತ ಪ್ರಯಾಣಿಕರೆಲ್ಲ ಒಂದು ಗುಂಪು. ಹಾದಿಯ ಈ ಹೊಸಬನು ಗಾಡಿಯನ್ನು ತಡೆದು ಡಾಲರಿಯಮ್ಮನನ್ನು ಮಾತನಾಡಿಸಿದಾಗ ಅವರೆಲ್ಲ ಅವನ ಬಗೆಗೆ ಮಾತನಾಡಹತ್ತಿದರು — ಅದೂ ತಮ್ಮತಮ್ಮೊಳಗೆ ಗುಟ್ಟಾಗಿ. ಗಾಡಿಯ ಕಟಕಟೆಯಲ್ಲಿ ಅವರ ದನಿಗಳು ಅಡಗಿಹೋಗಿದ್ದವು. ಮುಂದೆ ಕೂತ ಡಾಲರಿಯಮ್ಮನಿಗಾಗಲಿ ಆ ಗೃಹಸ್ಥನಿಗಾಗಲಿ ಅವರ ಮಾತು ಕೇಳುತ್ತಿದ್ದಿಲ್ಲ.

'ಆತ ಹಜಾಮ ಪರಕೊಮ — ಗೊತ್ತಿಲ್ಲವೇ — ಅಂಗಡಿಯ ಕಿಟಕಿಯಲ್ಲಿ ಮೇಣದ ಹೆಣ್ಣು ಗೊಂಬೆಯೊಂದು ಇಟ್ಟುಕೊಂಡವ' ಒಬ್ಬ ಪ್ರಯಾಣಿಕನು ಪ್ರಸ್ತಾಪಿಸಿದನು. 'ಈ ಹೊತ್ತಿನಲ್ಲಿ ಇವನನ್ನು ಇಲ್ಲಿಗೆ ತರುವಂಥ ವ್ಯವಹಾರ ಯಾವುದೋ ! ಈತ ಊರು ಸುತ್ತುವ ನಾಪಿತನೂ ಅಲ್ಲ. ಮತ್ತೆ, ತನ್ನ ಅಂಗಡಿಯ ಮುಂದಿನ ಗುರುತಿನ ಗೂಟವನ್ನು ಕಿತ್ತುಹಾಕಿಟ್ಟ ಪ್ರತಿಷ್ಠಿತ ಹಜಾಮನು ಇವನು. ಹಾಗೆ ಗೂಟ ಇಟ್ಟುಕೊಳ್ಳುವುದು ಇವನಿಗೆ ಸಂಭಾವಿತತನವೆಂದು ಅನಿಸಲಿಲ್ಲವಂತೆ.'

ಆ ಹಜಾಮನೂ ಒಳ್ಳೆ ಪ್ರತಿಷ್ಠಿತನಂತೆ ಎಲ್ಲರ ಕಡೆಗೆ ಒಮ್ಮೆ ಲೋಕಾಭಿರಾಮವಾಗಿ ನಗೆಬೀರಿ ತಲೆದೂಗಿ ಕೆಲವು ಕುಶಲ ಪ್ರಶ್ನೆಗಳನ್ನು ತೂರಿ ಕೂತುಬಿಟ್ಟಿದ್ದನು. ತನ್ನಿಂದ ಕೆರಳಿದ ಈ ಸಾರ್ವತ್ರಿಕ ಕುತೂಹಲನ್ನು ತಣಿಸುವ ಆತುರ ಅಥವಾ ಅಗತ್ಯ ಅವನಿಗೆ ಅನಿಸಲೇ ಇಲ್ಲ. ಆದರೆ ಅವನ ಈ ಧಡೀರ ಪ್ರವೇಶದಿಂದ ಗಾಡಿಯೊಳಗಿನ ಆವರೆಗಿನ ಸ್ವಚ್ಛಂದ ಮಾತುಕತೆ — ವಿಚಾರಧಾರೆಗಳ ಓಟವು ತಡೆದುಹೋಯಿತು. ಆ ಕುರಿತೂ ಅವನಿಗೆ ಪರಿವೆ ಇದ್ದಿಲ್ಲ.

ಹಾಗೆಯೇ ಗಾಡಿ ಮುಂದುವರಿಯಿತು. ಹಾಯರ್‌ಸ್ಟ್ರ್ಯೂಯರ್ ಗುಡ್ಡ ದೊಡ್ಡದಾಗಿ ಕಾಣಹತ್ತಿತ್ತು. ಕೊನೆಗೊಮ್ಮೆ ಆ ಸಂಜೆಯ ಮಬ್ಬಿನಲ್ಲಿ ಅರ್ಧ ಮೈಲಿಗೆ ಒಂದು ಬದಿಗೆ ಹಣ್ಣುದೋಟಗಳಿಂದಲೂ ತುಂಬಿದ ಒಂದು ತಗ್ಗು. ಆ ಮಲೆನಾಡಿನಿಂದಲೇ ಕೊರೆದು ತೆಗೆದಿಟ್ಟಂತೆ ಕಂಡುಬಂದಿತು. ತನ್ನೊಟ್ಟಿಗೆ ತಾನೇ ತೆಪ್ಪಗೆ ಬಿದ್ದಿತ್ತು ಆ ಕೊಳ್ಳ. ಅಲ್ಲಿಂದ ಹೊಗೆಯ ಕಂಬಗಳು ಸದ್ದಿಲ್ಲದೆ ಕಳ್ಳ ನಡೆಯಲ್ಲಿ ಮೇಲೇರಿ ಬರುತ್ತಿದ್ದವು. ನಮ್ಮ ಕಲ್ಪನೆ ಕಣ್ಣು, ಈ ಕಂಬಗಳ ಬುಡದಲ್ಲಿ ನೆಮ್ಮದಿಯಾಗಿ ಚಳಿ ಕಾಸುವ ಬೆಚ್ಚಗಿನ ಗೋಡೆಯಗಷ್ಟಿಗೆಗಳ, ಅವುಗಳ ಮೇಲೆ ಒಣಗಿಸಲು ತೋರಣದಂತೆ

ತೂಗಿಬಿಟ್ಟ ಹಂದಿಯ ಮಾಂಸದ ಉದ್ದ ತುಂಡುಗಳವರೆಗೆ ಕೆಳಕ್ಕೆ ಅವನ್ನು ಹಿಂಬಾಲಿಸ ಬಹುದಾಗಿತು.

ಲೋಕದ ಹೆಬ್ಬಾಗಿಲಿನಾಚೆ ಇರುವ ಏಕಾಂತ ಸ್ಥಳಗಳಲ್ಲಿ—ಒಂದು ಇದು, ಏಕಾಂತ ಜೀವಿ. ಇಲ್ಲಿ ಕೃತಿಗಿಂತ ಹೆಚ್ಚು ಚಿಂತನೆ. ಚಿಂತನೆಗಿಂತ ಹೆಚ್ಚು ಚಿತ್ತದ ಅಶಾಂತಿ. ವಿಚಾರ ಓಡಿದರೂ ಅದು ಚಿಕ್ಕ ಚಿಕ್ಕ ಸುಳಿಗಳಲ್ಲಿ. ಅದರ ಅನುಮಾನ ವಿಧಾನಗಳೆಲ್ಲ ವಿಚಿತ್ರ ಕಲ್ಪನೆಗಳೇ. ಆದಾಗ್ಯೂ ಈ ಪುಟ್ಟ ಪ್ರಪಂಚದಲ್ಲಿಯೂ ಆಗೊಮ್ಮೆ ಈಗೊಮ್ಮೆ ಸೋಫೋಕ್ಲಿಸನ ನಾಟಕದಂಥ ಗಾಂಭೀರ್ಯ ಮತ್ತು ಐಕ್ಯ ರೂಪದ ದುರಂತ ಪ್ರಕರಣಗಳು ವಾಸ್ತವ ರಂಗದಲ್ಲಿಯೇ ಒದಗಿ ಬರುವುದುಂಟು. ಈ ರುದ್ರಜೀವನ ನಾಟಕಗಳಿಗೆ ಕಾರಣ ಇಲ್ಲಿ ಜೀವಿಸುವವರ ಉತ್ಕಟವಾಗಿ ಪುಟವೇರಿಸು ವಂಥ ಮನೋವಿಕಾರಗಳ ವಿಸ್ಫೋಟ; ಮತ್ತು ಆ ಸ್ಫೋಟಕ್ಕೆ ಕಾರಣ, ಈ ಜನರು ಒಬ್ಬರನ್ನೊಬ್ಬರು ಅಂಟಿಕೊಂಡು, ಹೊಂದಿಕೊಂಡು ಬದುಕುವ ಪರಸ್ಪರಾವಲಂಬನದ ಮಾದರಿ.

ಕಿರಿಯ ಕೊಳ್ಳದ ಹಳ್ಳಿಯೇ ನಮ್ಮ ಈ ನಾಪಿತೋತ್ತಮನು ದಾರಿಯರಸುತ್ತಿದ್ದ ಕಿರಿಯ ಹಿಂಟಾಕ್. ಇರುಳು ಕವಿದಂತೆ ಮನೆಯ ಮಾಡುಗಳಿಂದ ಏರುವ ಹೊಗೆಗಂಬ ಗಳೂ ಮಸುಕಾದವು. ಆದರೂ ಈ ಬೆಟ್ಟ ಸುತ್ತಿದ ಸಮಾಜದ ಅಸ್ತಿತ್ವವನ್ನು ಅಲ್ಲಿ ಇಲ್ಲಿ ಮಿನುಗುವ ದೀಪಗಳಿಂದ ಗುರುತಿಸಬಹುದಾಗಿತ್ತು. ಎಲೆಯುದುರಿದ ಬರಡು ಟೊಂಗೆಗಳಿಂದ ಅವು ಪಿಳಿ ಪಿಳಿ ಕಣ್ಣು ಮಿಟಿಕಿಸುತ್ತಿದ್ದವು. ಗರಿಯ ಚೆಂಡುಗಳಂತೆ ಸದ್ದಿಲ್ಲದೆ ಮುದ್ದೆಯಾಗಿ ಬಿದ್ದಿರುವ ಪುಟ್ಟ ಹಕ್ಕಿಗಳ ಗೂಡುಗಳನ್ನು ಆ ಬರಡು ಟೊಂಗೆಗಳೂ ಸುಮ್ಮನೆ ಹೊತ್ತು ನಿಂತಿದ್ದವು.

ಹೆದ್ದಾರಿಯಿಂದ ಕೆಳಗೆ ಆ ಹಳ್ಳಿಗೆ ಹೋಗುವ ಓಣಿಯ ಕವಲಿನಲ್ಲಿ ಹಜಾಮ ಪೆರಕೊಮ ಗಾಡಿಯಿಂದ ಇಳಿದನು. ಡಾಲರಿಯಮ್ಮನ ಗಾಡಿ ಮುಂದಿನ ಹಳ್ಳಿಗೆ ಭರದಿಂದ ಹೊರಟಿತು. ಈ ಕಿರಿಹಿಂಟಾಕಿನ ಕ್ಷುದ್ರ ಹಳ್ಳಿಗಿಂತ ಅದು ಎಷ್ಟೋ ಪಟ್ಟು ಶ್ರೇಷ್ಠ ಎಂಬ ಅರ್ಥ ಅಲ್ಲಿಗೆ ಹೋಗುವವರಿಗೆ ಅನಿಸಿದ್ದರೂ ಅಲ್ಲಿಗೊಯ್ಯುವ ಆ ದಾರಿಯಿಂದ ಮಾತ್ರ ಅಂಥ ಯಾವ ಶ್ರೇಷ್ಠತೆಯೂ ವ್ಯಕ್ತವಾಗುತಿದ್ದಿಲ್ಲ.

‘ನೀವು ಈಗ ಹೋಗುವ ಸ್ಥಳದಲ್ಲಿ ಬಹಳ ಬುದ್ಧಿವಂತನೂ ಪಂಡಿತನೂ ಆದ ಹರೆಯದ ಡಾಕ್ಟರನೊಬ್ಬ ವಾಸಿಸುತ್ತಾನೆ. ಈ ಕಗ್ಗಾಡಿನ ಹಳ್ಳಿಯಲ್ಲಿ ಆತ ಇದ್ದುದು ಅಲ್ಲಿ ರೋಗಿಗಳಾರೂ ಉಪಚಾರಕ್ಕೆ ಸಿಗುವರೆಂದಲ್ಲ; ಆದರೆ ಆತ ಸೈತಾನನೊಂದಿಗೆ ಸಂಚುಮಾಡಿರುವನಂತೆ, ಸಂಬಂಧವಿಟ್ಟುಕೊಂಡಿರುವನಂತೆ. ಮಂದಿ ಆಡಿಕೊಳ್ಳುತ್ತಾರೆ!’ ಹಜಾಮ ಪರಕೊಮ ಕೆಳಗೆ ಇಳಿದು ಹೋಗುವಾಗ ಗಾಡಿಯಲ್ಲಿ ಕೂತ ಒಬ್ಬ ಹೆಂಗಸು ಈ ಅಭಿಪ್ರಾಯವನ್ನು ಅವನತ್ತ ಎಸೆದಳು. ಆತ ಅಲ್ಲಿಗೆ ಆ ಹೊತ್ತಿಗೆ ಏಕೆ ಹೊರಟಿರ ಬಹುದೆಂದು ಹೇಗಾದರೂ ಅರಿತುಕೊಳ್ಳಲಿಕ್ಕೆ ಇದೊಂದು ಕೊನೆಯ ಯತ್ನವಾಗಿತ್ತು.

ಆದರೆ ಆತ ಉತ್ತರವನ್ನೇ ಕೊಡಲಿಲ್ಲ. ಹೆಚ್ಚು ಹೊತ್ತು ಕಳೆಯದೆ ಅವನು ಆ

ದಟ್ಟ ನೆಳಲಿನ ಕೊಂಪೆಯತ್ತ ನಡೆದನು—ದಾರಿಯನ್ನು ಪೂರ್ತಿಯಾಗಿ ಮುಚ್ಚಿದ ತರಗೆಲೆಗಳ ರಾಶಿಯಲ್ಲಿ ಜಾಗ್ರತೆಯಾಗಿ ಹೆಜ್ಜೆಯನ್ನು ಎತ್ತಿ ಇಡುತ್ತ. ಇತ್ತಕಡೆಗೆ ಬರ ಹೋಗುವವರು ಆ ಕಿರಿಹಿಂಟಾಕ್ ಹಳ್ಳಿಯವರೇ ಅಲ್ಲದೇ ಬೇರೆ ಜನ ತೀರಾ ಕಡಿಮೆ. ಆದ್ದರಿಂದ ಹಳ್ಳಿಗರು ತಮ್ಮ ಮನೆಯ ಕಿಟಕಿಗಳಿಗೆ ಪರದೆಗಳೇ ಅನಗತ್ಯವೆಂದು ಭಾವಿಸಿದ್ದರು. ಇದರ ಪ್ರಯೋಜನವನ್ನು ನಮ್ಮ ಈ ಆಗಂತುಕ ಭೆಟ್ಟಿಗಾರನು ಪೂರ್ತಿ ಪಡೆಯುವಂತೆ ಆಯಿತು. ಆತ ಪ್ರತಿಯೊಂದು ಗುಡಿಸಲಿನ ಕಿಟಕಿಯ ಇದಿರಿಗೆ ನಿಂತು ಒಳಗೆ ನೋಡಿಕೊಂಡು ಮುಂದೆ ಹೋಗತೊಡಗಿದನು. ಅವನ ನೋಟದ ರೀತಿಯಿಂದ ಒಳಗಿದ್ದ ವ್ಯಕ್ತಿಗಳ ಗೊತ್ತುಪತ್ತೆಯನ್ನು ಆತ ಅಂದಾಜು ಮಾಡಿಕೊಳ್ಳುವಂತೆ ಇತ್ತು.

ಅಲ್ಲಿಯೂ ಚಿಕ್ಕ ಪುಟ್ಟ ಮನೆಗಳೇ ಅವನ ಕುತೂಹಲಕ್ಕೆ ಕಾರಣಗಳಾಗಿದ್ದವು. ಒಂದೆರಡು ದೊಡ್ಡ ಮನೆಗಳು ಹಳೆಯವು; ಅವಾಢವ್ಯವಾಗಿ ಕಟ್ಟಿ ನಿಂತವು. ಸಾಮಾಜಿಕ ಪ್ರತಿಷ್ಠೆಯುಳ್ಳ ಜನರು ವಾಸಿಸುವಂಥವು. ಅವನ್ನು ಪೂರ್ತಿ ಅಲಕ್ಷಿಸಿ ಅವನು ಮುಂದೆ ನಡೆದನು. ಸುತ್ತಲೆಲ್ಲ ಕೊಳೆತು ಬಿದ್ದ ತರಗೆಲೆಗಳ ಕಂಪಿನೊಂದಿಗೆ ಮನೆಮನೆಯಲ್ಲಿಯ ಅಡಿಗೆಯ ಮತ್ತು ಉರುವಲದ ವಾಸನೆ ಬೆರೆತು ಕವಿದ ವಾತಾವರಣ ದಲ್ಲಿ ಆತ ಮುಂದುವರಿದನು.

ಆರೇಳು ಮನೆಗಳನ್ನು ಆತ ಹೀಗೆಯೇ ಹಿಂದೆ ಹಾಕಿರಬೇಕು — ಫಲವಿಲ್ಲದೆ ಕಿಟಕಿಗಳಲ್ಲಿ ಇಣುಕಿ ನೋಡುತ್ತ. ಆದರೆ ಮುಂದಿನ ಮನೆಯು ಒಂದು ಎತ್ತರದ ಮರದ ಎದುರಿಗೆ ನಿಂತಿತ್ತು. ಒಳಗೆ ಮಿರಿಮಿರಿ ಬೆಳಕು ಚೆಲ್ಲಿತ್ತು. ಆ ಬೆಳಕು ಹೊಗೆಕಿಂಡಿ ಒಳಗಿಂದಲೂ ಮೇಲೆ ಹಾಯ್ದು ಮನೆಯ ಮಾಡಿನ ಮೇಲೆ ಹಬ್ಬಿದ ಹೊಗೆಯನ್ನು ಹೊಳೆಯುವ ಮಂಜಿನಂತೆ ಮಾಡಿತ್ತು. ಒಳಗಿನ ನೋಟವು ಕಿಟಕಿಯೊಳಗಿಂದ ಇಣಕಿ ದಾಗಲೇ, ಆತನು ಅಲ್ಲಿಯೇ ನಿಂತು ನಿರೀಕ್ಷಿಸುವಂತೆ ಮಾಡಿತು. ಆ ಮನೆ ಗುಡಿಸಲಿಗೂ ದೊಡ್ಡದು. ಅದರ ಬಾಗಿಲು ತೆರದೇ ಇತ್ತು — ನೇರವಾಗಿ ನಡುಮನೆಗೆ. ಬಾಗಿಲಿ ನಿಂದ ಹೊರಗೆ ಕತ್ತಲೆಯನ್ನು ಕಡಿದು ಬೆಳಕಿನ ಕಂಬಿಯು ದಾರಿಯಲ್ಲಿ ಚೆಲ್ಲಿತ್ತು. ಆಗೊಮ್ಮೆ ಈಗೊಮ್ಮೆ ಒಂದು ಪತಂಗವು (ತಪ್ಪಿ ಹಿಂದೆ ಉಳಿದದ್ದು). ಆ ಹೊರ ಚೆಲ್ಲಿದ ಕಿರಣಗಳಲ್ಲಿ ಸುಳಿದು ಆಚೆ ಕತ್ತಲಲ್ಲಿ ಕಾಣದಾಗುತ್ತಿತ್ತು.

೨

ಬೆಳಕಿನ ಹರ್ಷಭರಿತವಾದ ಹೊನಲು ಸೂಸುವ ಆ ಕೋಣೆಯೊಳಗೆ ಒಬ್ಬ ಹುಡುಗಿಯು ಒಂದು ಬೆತ್ತದ ಕುರ್ಚಿಯಲ್ಲಿ ಕುಳಿತಿದ್ದನ್ನು ಪರಕೊಮ ಕಂಡನು. ಆಕೆ ಹತ್ತಿರದ ಬೆಂಕಿಯ ಬೆಳಕಿನಲ್ಲಿ ತುಂಬ ಕೆಲಸದಲ್ಲಿ ಮಗ್ನಳಾಗಿದ್ದಳು. ಆ ಬೆಂಕಿಯೂ ಬಹಳ ಸೌದೆ ಒಟ್ಟಿ ದೊಡ್ಡದಾಗಿ ಧಗಧಗಿಸುತಿತ್ತು. ಕೈಗಳಿಗೆ ದೊಡ್ಡದಾಗುವ ಕೈಚೀಲಗಳನ್ನು

ಏರಿಸಿಕೊಂಡು ಕೈಗತ್ತಿಯಿಂದ ಉದ್ದ ಗೂಟಗಳನ್ನು ಸೀಳಿ ಕೆತ್ತಿ ರಾಶಿ ಹಾಕುತ್ತಿದ್ದಳು. ಈ ಗೂಟಗಳನ್ನು ಮಾಡಿನ ಚಪ್ಪರಕ್ಕೆ ಉಪಯೋಗಿಸುವರು. ಆಕೆ ಭರಭರನೆ ತೊಣೆಗಳನ್ನು ಸೀಳಿ, ಗೂಟಗಳನ್ನು ಕೆತ್ತಿ ಚೆಲ್ಲುತ್ತಿದ್ದಳು. ಇದಕ್ಕಾಗಿಯೇ ಆಕೆ ಒಂದು ತೊಗಲಿನ ಮೇಲಂಗಿಯನ್ನು ತೊಟ್ಟಿದ್ದಳು. ಆ ಅಂಗಿಯೂ ಕೈಚೀಲಗಳಂತೆಯೇ ಆಕೆಯ ಮೈಗೆ ದೊಡ್ಡದಾಗಿತ್ತು. ಆಕೆಯ ಎಡಕ್ಕೆ ಹೆರಭಲ ಮರದ ತೊಣೆಗಳು ಇದ್ದವು. ಇವು ಆ ಗೂಟಗಳಿಗೆ ಕಚ್ಚಾಮಾಲು. ಆಕೆಯ ಬಲಕ್ಕೆ ಕೆತ್ತಿ ಕಡಿದು ಸವರಿ ಹಾಕಿದ ಚೆಕ್ಕೆ ಚೂರುಗಳ ಕಸ ಹರಡಿತ್ತು. ಆಕೆಯ ಎದುರಿಗೆ ಕೆತ್ತಿ ಸರಿಮಾಡಿ ಹಾಕಿದ ಗೂಟಗಳ ರಾಶಿ. ಎಡದ ಒಂದು ತೊಣೆಯನ್ನು ಎತ್ತಿಕೊಂಡು ಅದನ್ನೊಮ್ಮೆ ತುದಿಯಿಂದ ತುದಿಯವರೆಗೆ ದಿಟ್ಟಿಸಿ ನೋಡಿ ಆರಿಸಿ, ಅದನ್ನು ನಾಲ್ಕು ಭಾಗವಾಗಿ ಉದ್ದ ಸೀಳಿ, ಸವರಿ ಸರಿಮಾಡಿ, ಅದರ ತುದಿಯನ್ನು ಚೂಪಾಗಿ ಕೆತ್ತಿ ಆಕೆ ಇದುರಿಗೆ ರಾಶಿ ಒಟ್ಟುತ್ತಿದ್ದಳು.

ಆಕೆಯ ಪಕ್ಕದಲ್ಲಿಯೇ — ಇನ್ನೂ ಬೆಳಕು ಕಡಿಮೆ ಬಿದ್ದರೆ ತುಂಬಿಕೊಳ್ಳುವುದಕ್ಕೆ — ಒಂದು ಸ್ಟೂಲಿನ ಮೇಲೆ ಮೇಣಬತ್ತಿಯ ಗುಡ್ಡಣವಿತ್ತು. ಆ ಗುಡ್ಡಣ ಮತ್ತು ಆ ಸ್ಟೂಲಿನ ರಚನೆಯೇ ಹೇಳುತ್ತಿತ್ತು — ಆ ಮನೆಯ ಹಿಂದಿನ ಸಾಮಾಜಿಕ ಪ್ರತಿಷ್ಠೆ. ಆ ಸ್ಟೂಲ್ ಶವಪೆಟ್ಟಿಗೆ ಇಡುವ ಸ್ಟೂಲ್. ಬರೆ ಗದ್ದೆಯಾಳು ಅಲ್ಲದ ರೈತರ ಮನೆಯಲ್ಲಿ ಎಲ್ಲ, ಅದೂ ಅವರು ತುಸು ಆಸ್ತಿವಂತರಿದ್ದರೆ, ಇಂಥ ಎರಡೆರಡು ಸ್ಟೂಲುಗಳು ಇರುತ್ತಿದ್ದುವು, ಶವ ಪೆಟ್ಟಿಗೆಯನ್ನು ಇಡಲಿಕ್ಕೆ. ಅಂಥ ಒಂದು ಸ್ಟೂಲ್ ಮೇಣಬತ್ತಿಯ ಸ್ಟ್ಯಾಂಡಿಗೆ ಈಗ ಆಧಾರವಾಗಿತ್ತು.

ಈ ಹರಯದ ಹುಡುಗಿ ಕೈಗತ್ತಿಯನ್ನು ಬದಿಗಿಟ್ಟು ಒಂದು ಕ್ಷಣ ತಡೆದು ತನ್ನ ಬಲ ಅಂಗೈಯನ್ನು ನೋಡಿಕೊಂಡಳು. ಆ ಕೈಗೆ ಚೀಲವಿದ್ದಿಲ್ಲ. ಅದು ಜಡ್ಡು ಬಿದ್ದು ಬಿರುಸು ಅಥವಾ ಒರಟು ಆಗಿದ್ದಿಲ್ಲ. ಆದ್ದರಿಂದ ಆ ಅಂಗೈ ಅಲ್ಲಲ್ಲಿ ಕೆಂಪಾಗಿ ಗುಳ್ಳೆ ಬಂದು ಈ ಕೆಲಸದ ರೂಢಿ ಆಕೆಗೆ ಇನ್ನೂ ಆಗಿದ್ದಿಲ್ಲವೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತಿತ್ತು. ಕಾಯ ಕಷ್ಟಕ್ಕಾಗಿಯೇ ಹುಟ್ಟಿಬಂದ ಅನೇಕ ಬಲಗೈಗಳು ತಮ್ಮ ಆಕಾರದಿಂದ ಒರಟುತನದಿಂದ ಗಂಟುಗೆರೆಗಳಿಂದ ತಮ್ಮ ಸಾಮಾಜಿಕ ಅಂತಸ್ತುಗಳನ್ನು ಸೂಚಿಸುವುದುಂಟು. ಆದರೆ ಈ ಹುಡುಗಿಯ ಕೈ ಹಾಗೆ ಇದ್ದಿಲ್ಲ. ಕೇವಲ ದೈವದ ದಾಳವು ಮುಗಿದು ಬಿದ್ದು ಆಕೆ ಈ ಕೆಲಸಕ್ಕೆ ಕೈಹಾಕಿದ್ದಳು — ಕತ್ತಿ ಕೈಗೆತ್ತಿಕೊಂಡಿದ್ದಳು. ಇದೇ ಅಂಗೈಯು ಸೀಸಕಡ್ಡಿಯನ್ನು ಹಿಡಿದು ಚಿತ್ರ ಬರೆಯಬಹುದಿತ್ತು. ತಂತಿ ಹಿಡಿದು ಮಿಾಟಬಹುದಿತ್ತು—ಆ ಕಸುಬಗಳಿಗೆ ಅದನ್ನು ಸಕಾಲಕ್ಕೆ ಹಚ್ಚಿದ್ದರೆ!

ಆಕೆಯದು ತುಂಬಿದ ಮೊಗ. ಏಕಾಂತ ಜೀವನದಲ್ಲೆ ಬೆಳೆದು ನಿಂತ ದುಂಡು ಮೊಗ. ಜನಜಂಗುಳಿಯ ಸಾವಿರ ಕಣ್ಣುಗಳ ಅಲೆಗಳು ಬಂದು ಬಡಿಯುವಲ್ಲಿ ಇಂಥ ಮೊಗವು ತನ್ನ ಚರ್ಯೆಯ ಚಾಂಚಲ್ಯವನ್ನು ಕಳೆದುಕೊಳ್ಳುತ್ತದೆ. ಆದರೆ ಏಕಾಂತದ ತಿಳಿಗೊಳದಲ್ಲಿ ತಾವರೆಯಂತೆ ಅರಳಿ ನಿಲ್ಲುತ್ತದೆ. ಪ್ರತಿಯೊಂದು ಭಾವವನ್ನು ಹಾವವಾಗಿ

ಮಾಡಿಸಿ, ಓದುಗರಿಗೆ ಅರ್ಥಮಾಡಿಕೊಡಬಲ್ಲ ಅಕ್ಷರಗಳಂತೆ ಜೊಡಿಸಿ ಅಂಥ ಮುಖ ಚರ್ಯೆ ವಿಕಾಸಗೊಳಿಸುತ್ತದೆ.

ಅವಳ ಪ್ರಾಯಂ ಹತ್ತೊಂಭತ್ತು ಇಪ್ಪತ್ತನ್ನು ಮಿಕ್ಕಿಲ್ಲ. ಆದರೆ ಬದುಕಿನ ಆರಂಭದ ಭಾಗದಲ್ಲಿಯೇ ವಿಚಾರ ಮಾಡುವ ಅಗತ್ಯ ಬಿದ್ದುದರಿಂದ ಅವಳ ಬಾಲಿಶ ಮುಖಮಂಡಲದ ರೂಪರೇಖೆಗಳು ಪ್ರೌಢವಾಗಿ ದೃಢವಾಗಿದ್ದವು. ಇದರಿಂದ ಅವಳಿಗೆ ಚೆಲುವೆಯೆಂದು ಹೇಳಿಕೊಳ್ಳಲು ಬರುವಂತೆ ಏನೂ ಇದ್ದಿಲ್ಲ. ಅವಳ ವಿಪುಲವಾದ ಕೇಶಪಾಶವನ್ನು ಬಿಟ್ಟು ಕೇಶರಾಶಿಯ ವಿಪುಲತೆಯು ಅವಳ ಅಂಕೆಯನ್ನೇ ಯಾವ ವ್ಯವಸ್ಥೆಯನ್ನೂ ಮೀರಿತ್ತು. ಆ ಕೂದಲಿನ ಕಾಂತಿ ಬೆಂಕಿಯ ಬೆಳಕಿನಲ್ಲಿ ಕಂದು ಬಣ್ಣದ್ದಾಗಿತ್ತು. ಆದರೆ ಹಗಲ ಬೆಳಕಿನಲ್ಲಿ ಲಕ್ಷ್ಯಗೊಟ್ಟು ನೋಡಿದರೆ ಅದು ಅಪರೂಪದ ಸುರಮ್ಯವಾದ ಚೆಸ್ಟನಟ್ ಕಾಯಿಯ ಬಣ್ಣದ ಛಾಯೆಯನ್ನು ತೋರ್ಪಡಿಸುತ್ತಿತ್ತು.

ಕಾಲಪುರುಷನು ಆ ಕನ್ನಿಕೆಗೆ ಇತ್ತ ಇದೊಂದು ಕಾಣಿಕೆಯ ಮೇಲೆ ನಮ್ಮ ಆಗಂತುಕ ನಿರೀಕ್ಷಕನ ಕಣ್ಣು ನಟ್ಟಿದ್ದವು. ನೋಡುತ್ತಿದ್ದಂತೆಯೇ ಅವನ ಬಲಗೈಯ ಬೆರಳುಗಳು ತಾವಾಗಿ ಅವನ ವಾಸ್ಕೋಟಿನ ಜೇಬಿನ ಮೇಲೆ ಆಡಿದವು. ಅಲ್ಲಿ ಕತ್ತರಿಯ ಅಲಗು ಕಿಸೆಯಿಂದ ತಲೆಯೆತ್ತಿ ನಿಂತಿದ್ದವು. ಅವುಗಳ ನುಣುಪು ಆ ಮನೆ ಯಿಂದ ಹೊರಚೆಲ್ಲಿದ ಬೆಳಕಿನಲ್ಲಿ ಮಂದ ಹೊಳಪಾಗಿ ಕಾಣಿಸುತ್ತಿತ್ತು. ಈ ಆಗಂತುಕ ನಿರೀಕ್ಷಕನ ಮನಸ್ಸಿನಲ್ಲಿ ಆ ಚೌಕಟ್ಟಿನಲ್ಲಿ ಕಾಣಿಸುವ ಗೂಟ ಕೆತ್ತುವ ಆ ಹುಡುಗಿಯ ಚಿತ್ರವು ನವ್ಯ ಕಲಾಕೃತಿಯಂತೆ ತೋರಿದರೆ ಆಶ್ಚರ್ಯವಿಲ್ಲ. ಆಕೆಯ ತಲೆಗೂದಲು ಒಂದೇ ರಾಶಿಯಾಗಿ ನಿಚ್ಚಳವಾಗಿ ಒಡೆದೆದ್ದು ಮೂಡಿ, ಅವಳ ಮೋರೆ, ಹೆಗಲು, ಕೈ ಮೈಗಳೆಲ್ಲ ಗೌಣವಾಗಿ ಮಸುಮಸುಕಾದ ಗೆರೆಬಣ್ಣಗಳಲ್ಲಿ ಬರೆದಂತೆ ಮಂಜಿನಲ್ಲಿ ಹಿಂಜಿ ಮಾಯವಾದಂತೆ ಕಂಡಿರಬೇಕು !

ಅವನಿಂದ ಇನ್ನೂ ತಡೆಯಲು ಆಗಲಿಲ್ಲ. ಬಾಗಿಲ ಕದವನ್ನು ಅವನು ತಟ್ಟಿದನು, ಮತ್ತು ಒಳಗೆ ಕಾಲಿಟ್ಟನು. ಆ ತರುಣಿಯು ಮಳಲಲ್ಲಿ ಬೂಟಿನ ಕರಕರ ಸಪ್ಪಳ ಕೇಳಿದೊಡನೆ ಆ ಕಡೆಗೆ ಹೊರಳಿ ಉದ್ಗರಿಸಿದಳು, 'ಓ ಮಿಸ್ಟರ್ ಪರಕೊಮ, ಎಷ್ಟು ಗಾಬರಿಗೊಳಿಸಿಬಿಟ್ಟಿರಿ ನನ್ನನ್ನು' ಒಂದು ಕ್ಷಣ ಅವಳ ಮುಖದ ಬಣ್ಣ ಇಳಿಯಿತು.

ಆತ ಅಂದನು, 'ಬಾಗಿಲು ಮೊದಲು ಮುಚ್ಚು. ಕದ ಇಕ್ಕಿ ಬಾ. ಇಲ್ಲವಾದರೆ ಮಂದಿ ಅದನ್ನು ತೆರೆದು ಕೇಳಲು ಬರುವರು.'

'ಕದ ಹಾಕಲಾರೆ', ಆಕೆ ಅಸಹಾಯಕತೆಯಿಂದ ನುಡಿದಳು. ಈ ಹೊಗೆಕಿಂಡಿ ಮುಚ್ಚಿಹೋಗಿದೆ. ತುಂಬ ಹೊಗೆಯಾಡುತ್ತದೆ. ಓ ಮಿಸ್ಟರ್ ಪರಕೊಮ ನಿಮ್ಮ ತಲೆಯ ಟೋಪಿ ತೆಗೆದಾಗ ಆಗ ನೀವು ಬಹಳ ವಿಚಿತ್ರ ಕಾಣುವಿರಿ. ತೀರಾ ಅಸ್ವಾಭಾವಿಕ. ಮುಳ್ಳುಬೇಲಿಯಲ್ಲಿ ಸಿಲುಕಿದ ಗಿಳಿಯಂತೆ. ಅಲ್ಲ, ನೀವು ನನಗೋಸ್ಕರವೇ ಬಂದಿಲ್ಲ ತಾನೇ ?

'ಹೌದು ಹೌದು, ಇದರ ಬಗ್ಗೆ ನಿನ್ನ ಜವಾಬು ಕೇಳಲಿಕ್ಕೆ' ಎಂದು ತನ್ನ ಕೈಗೋಲಿನಿಂದ ಅವಳ ತಲೆಗೂದಲನ್ನು ಮುಟ್ಟಿ ಕಾಣಿಸಿದನು. ಆ ಮುಟ್ಟಿಗೆ ಆಕೆ ಒಮ್ಮೆ ಸಗ್ಗನೆ ಮಿಸುಕಿದಳು. 'ನಿನ್ನ ಒಪ್ಪಿಗೆಯೇ ?' ಆತ ಮುಂದುವರಿದ, 'ನನಗೆ ಕೂಡಲೇ ಜವಾಬು ಬೇಕು. ಇದು ಅಗತ್ಯ. ಏಕೆಂದರೆ ಆ ಬಾಯಿಯವರು ಸದ್ಯದಲ್ಲಿಯೇ ಹೊರಟುಹೋಗಲಿದ್ದಾರೆ. ಮತ್ತು ಇದನ್ನು ಅವರಿಗಾಗಿ ಸಜ್ಜು ಗೊಳಿಸಲಿಕ್ಕೆ ತುಸು ಸಮಯ ಬೇಕಾಗುತ್ತದೆ.

'ಅಯ್ಯೋ, ನನ್ನನ್ನು ಒತ್ತಾಯ ಪಡಿಸಬೇಡಿ. ಇದು ಶುದ್ಧ ಚಿಂತೆಗೆ ಕಾರಣವಾಗಿದೆ. ನೀವು ಇದರ ವಿಚಾರ ಬಿಟ್ಟುಕೊಟ್ಟಿರಬೇಕೆಂದು ನಾನು ಆಶೆ ಕಟ್ಟಿಕೊಂಡಿದ್ದೆ. ನಾನು ಇದನ್ನು ಕೊಡಲಾರೆ. ಆಯಿತಲ್ಲ ?'

'ನೋಡು ತಂಗೀ, ಮಾರ್ಟೀ,' ಆ ಮೇಣಬತ್ತಿ ಇಟ್ಟ ಶವಪೆಟ್ಟಿಗೆಯ ಸ್ಟೂಲಿನ ಮೇಲೆ ಕೂತುಕೊಳ್ಳುತ್ತ, ಆ ನಾಪಿತನು ಮಾತು ಮುಂದುವರಿಸಿದನು, 'ಈ ಗೂಟಗಳನ್ನು ಕೆತ್ತುವುದರಿಂದ ನೀನು ಗಳಿಸುವದೆಷ್ಟು ?'

'ಹುಶ್, ಅಪ್ಪ ಮೇಲೆ ಮಾಳಿಗೆಯಲ್ಲಿ ಎಚ್ಚರವಾಗಿಯೇ ಇದ್ದಾನೆ. ನಾನು ಇಲ್ಲಿ ಕೆಲಸ ಮಾಡುತ್ತಿದ್ದೇನೆಂದು ಅವನಿಗೆ ಗೊತ್ತಿಲ್ಲ' ಮಾರ್ಟಿ ಎಚ್ಚರಿಸಿದಳು.

'ಸರಿ ನಿನಗೆ ಈ ಕೆಲಸದಿಂದ ಎಷ್ಟು ಹಣ ಸಿಗುತ್ತದೆ' ಪರಕೊಮ ದನಿ ತಗ್ಗಿಸಿ ಕೇಳಿದನು ; ನನಗೊಮ್ಮೆ ಹೇಳಿ ಬಿಡು.'

'ಸಾವಿರಕ್ಕೆ ಹದಿನೆಂಟು ಪೆನ್ಸು' ಆಕೆ ಮನಸಿಲ್ಲದ ಮನಸ್ಸಿನಿಂದ ಒಪ್ಪಿಕೊಂಡಳು.

'ಅವುಗಳನ್ನು ನೀನು ಯಾರ ಸಲುವಾಗಿ ಮಾಡುತ್ತೀ ?'

'ಮಿಸ್ಟರ ಮೆಲ್ಬರಿ—ಆ ಅಲ್ಲಿ ಕೆಳಗೆ ಇರುವನಲ್ಲ, ಕಟ್ಟಿಗೆಯ ವ್ಯಾಪಾರಿ ಅವನಿಗಾಗಿ.'

'ಸರಿ. ದಿನಕ್ಕೆ ಎಷ್ಟು ಗೂಟ ತಯಾರಿಸುತೀ ?'

'ಒಂದು ಹಗಲು ಮತ್ತು ಅರ್ಧ ರಾತ್ರೆಯಲ್ಲಿ ಕೂಡಿ ಮೂರು ಮೂಟೆಗಳು— ಒಂದೂವರೆ ಸಾವಿರ ಗೂಟಗಳು.'

'ಅಂದರೆ ಎರಡು ಶಿಲಿಂಗ್ ಮೂರು ಪೆನ್ಸ್!' ಆಗಂತುಕನು ಲೆಕ್ಕಹಾಕಿ ನಕ್ಕು ಹೇಳಿದನು. ಒಂದು ಕ್ಷಣ ತಡೆದು ಆತ ಮುಂದುವರಿದನು, 'ಇದು ನೋಡು, ಇಲ್ಲಿ ಒಂದು ಸಾವರಿನ್ ಇದೆ. ಹೊನ್ನಿನ ಸಾವರಿನ್. ಹೊಚ್ಚ ಹೊಸದೇ ಅನ್ನು.' ಮಿರಿಮಿರಿ ಮಿಂಚುವ ಆ ಸಾವರೀನು ಆತ ತನ್ನ ಹೆಬ್ಬೆರಳ ಮತ್ತು ಚಿಮಟಿಗೆಯಲ್ಲಿ ಎತ್ತಿ ಹಿಡಿದನು. 'ಇದು ನೀನು ಒಂದೂವರೆ ವಾರದಲ್ಲಿ ಈ ಒರಟು-ಗರಟು ದುಡಿತ ಮಾಡಿ ಪಡೆಯಬಹುದಾದ ರಕಮಿನಷ್ಟು. ಮತ್ತು ಇದು ನಿನ್ನದು—ಬರೆ ನಿನಗೆ ಬೇಕಾಗುವುದಕ್ಕಿಂತ ಹೆಚ್ಚಾಗಿ ತಲೆಗೆ ಹೊರೆಯಾಗಿ ಬಿದ್ದ ಈ ಕೂದಲನ್ನು ಕತ್ತರಿಸಲು ನನಗೆ ಕೊಟ್ಟರೆ !'

ಮಾರ್ಟಿಯ ಎದೆ ಮೇಲೆ ಕೆಳಗೆ ಆಯಿತು. 'ಆ ಬಾಯಿಯವರು ನನ್ನ ಬದಲು

ಬೇರೆ ಯಾರೊಬ್ಬ ಹರಡುಗೆಯ ಬಳಿಗೆ ನಿಮ್ಮನ್ನು ಕಳುಹಿಸಬಾರದೇಕೆ?' ಆಕೆ ಸಿಡುಕಿನಿಂದ ಉದ್ಗರಿಸಿದಳು.

'ಏಕೆಂದರೆ, ಮಂಕೇ, ನಿನ್ನ ಕೂದಲು ಅವರ ಕೂದಲಿನದೇ ಬಣ್ಣದ್ದು ಛಾಯೆಯದ್ದು. ಈ ಕಾಂತಿ ಈ ಛಾಯೆ ಕೂದಲಿಗೆ ಬಣ್ಣ ಹಾಕಿ ಬರುವಂತಹದಲ್ಲ. ಮತ್ತೆ ನಾನು ಇಷ್ಟು ದೂರ ಶರ್ಟನ್ನಿನಿಂದ ಇಲ್ಲಿಗೆ ಬಂದಿರುವಾಗ ನೀನೀಗ ನನಗೆ ಇಲ್ಲ ಎನ್ನಲಾರೆ.'

'ಅಂದೆನಲ್ಲ ನಾನು—ಒಲ್ಲೆ, ಒಲ್ಲೆ, ನನ್ನ ಕೂದಲು ನಾನು ಯಾರಿಗೂ ಮಾರಲಾರೆ—ನಿಮಗೂ ಇಲ್ಲ, ಯಾರಿಗೂ ಇಲ್ಲ!'

ಆದರೆ ಪರಕೊಮ ತಾಳ್ಮೆಗೆಡಲಿಲ್ಲ, 'ಇಲ್ಲಿ ಕೇಳು' ಎಂದು ಆಕೆಯ ಇನ್ನಷ್ಟು ಹತ್ತಿರಕ್ಕೆ ಸರಿದು ಮುಂದರಿದನು: ಆ ಬಾಯಿಯವರು ಶ್ರೀಮಂತರು. ಕೆಲ ಶಿಲ್ಲಿಂಗು ಹೆಚ್ಚುಕಡಮೆ ಆದರೇನೂ ಲೆಕ್ಕಿಸುವವರಲ್ಲ. ಆದ್ದರಿಂದ ಇದನ್ನು ನಾನು ನನ್ನ ಹೊಣೆಯ ಮೇಲೆಯೇ ಮುಂಗಡ ಕೊಡುತ್ತಿದ್ದೇನೆ. ಒಂದರ ಬದಲು ಎರಡು ಸಾವರೀನು (ಪವನ) ಮಾಡುತ್ತೇನೆ, ಆಯಿತೇ? ಬರಿಗೈಯಲ್ಲಿ ಹಿಂದಿರುಗುವದರ ಬದಲು?'

'ಇಲ್ಲ ಇಲ್ಲ ಇಲ್ಲ', ಮಾರ್ಟ ಹಟದಿಂದ ಕೂಗಿದಳು. ಆಕೆಯ ಮನಸ್ಸು ಕ್ಷೋಭೆಗೊಳ್ಳುತ್ತಲಿತ್ತು. 'ನೀವು ನನಗೆ ಆಮಿಷ ತೋರಿಸುತ್ತಿದ್ದೀರಿ, ಕಥೆಯ ಪುಸ್ತಕ ದಲ್ಲಿಯ ಶೈತಾನ ಡಾಕ್ಟರ ಫಾಸ್ಟಸನಿಗೆ ಮರುಳುಗೊಳಿಸಿದಂತೆ ನೀವು ಮಾಡು ತ್ತಿದ್ದೀರಿ. ಆದರೆ ನನಗೆ ನಿಮ್ಮ ಹಣವೂ ಬೇಕಿಲ್ಲ. ನಾನು ಒಪ್ಪುವುದೂ ಇಲ್ಲ. ನೀವು ಬಂದದ್ದಾದರೂ ಯಾಕೆ? ನೀವು ಅಂದು ಅಂಗಡಿಯಲ್ಲಿ ನನ್ನನ್ನು ಕರೆದು ಕೇಳಿದಾಗ ನಾನು ಕೂದಲನ್ನು ಮಾರಲೊಲ್ಲನೆಂದು ಆಗಲೇ ಹೇಳಿಬಿಟ್ಟಿದ್ದೆನಲ್ಲವೇ?'

'ಮಾರ್ಟ, ಸುಮ್ಮನೆ ಕೇಳು. ಆ ಬಾಯಿಯವರಿಗೆ ಈ ಕೂದಲು ಅಗತ್ಯ ಅಂದರೆ ಅಗತ್ಯ ಬೇಕು. ನನ್ನ ಮಾತು ಕೇಳು ಅವರಿಗೆ ಕೂದಲು ಕೊಟ್ಟು ಬಿಡು. ನೀನು ಕೊಡದಿದ್ದರೆ, ನಿನಗೆ ಅದು ಕೇಡು.'

'ನನಗೆ ಕೇಡು? ಅದು ಹೇಗೆ? ಅವಳು ಯಾರು ಅಂಥವಳು?'

'ಟೋಪು' ತಯಾರಿಸುವ ಈ ನಾಪಿತೋತ್ತಮನು ಮೌನ ತಾಳಿದನು. ಹುಡುಗಿಯು ತನ್ನ ಪ್ರಶ್ನೆಯನ್ನು ಮತ್ತೆ ಕೇಳಿದಳು.

'ನಾನು ಅದನ್ನು ನಿನಗೆ ಹೇಳಲಾರೆ. ಆ ಸ್ವಾತಂತ್ರ್ಯ ನನಗೆ ಇಲ್ಲ. ಅಲ್ಲದೆ ಅವಳು ಊರು ಬಿಟ್ಟು ದೂರ ವಿದೇಶಕ್ಕೆ ಹೋಗಲಿದ್ದಾಳೆ ಬೇಗ. ಅಂದಾಗ ಅವಳು ಯಾರು ಎಂಬ ವಿಚಾರ ತಿಳಿದರೇನು ಬಿಟ್ಟರೇನು? ಎರಡರಲ್ಲಿಯೂ ಯಾವ ಅಭ್ಯಂತರವೂ ಇಲ್ಲ'.

'ಅವಳಿಗೆ ವಿದೇಶಕ್ಕೆ ಹೋಗಲು ಕೂದಲು ಬೇಕೆ?'

ಪರಕೊಮ ಮಾತನಾಡಲಿಲ್ಲ. ತಲೆದೂಗಿಯೇ ಅಹುದೆಂದು ಸೂಚಿಸಿದನು.

ಮಾರ್ಟಿ ಕ್ಷಣಹೊತ್ತು ಅವನನ್ನೇ ಧೇನಿಸಿದಳು. 'ಈಗ ಗೊತ್ತಾಯಿತು. ಮಿಸ್ಟರ್ ಪರಕೊಮ, ಆ ಬಾಯಿಯವರು ಯಾರೆಂಬುದು. ಅವಳು ಆ...ಅಕೆ, ಆ ದೊಡ್ಡ ಮನೆಯಲ್ಲಿ ಇರುವಾಕೆ. ಮಿಸೆಸ್ ಚಾರಮಂದ.'

'ನೀನು ನನ್ನನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಆ ರಹಸ್ಯವನ್ನು ಹೇಳದ ಹೊರತು ನಾನು ಇದನ್ನು ಕೊಡಲಾರೆ. ಆಕೆ ಮಿಸೆಸ್ ಚಾಮುಂದಳೇ ಹೌದು; ಅಲ್ಲವೆ ?' ಮಾರ್ಟಿ ಹಟಕ್ಕೆ ಬಿದ್ದು ಕೇಳಿದಳು.

ನಾಪಿತನು ಇನ್ನು ದನಿ ತಗ್ಗಿಸಿ ಅಂದನು, 'ಸರಿ. ಅವಳೇ. ಮೊನ್ನೆ ನೀನು ಚರ್ಚಿನಲ್ಲಿ ಅವಳ ಮುಂದೆಯೇ ಕೂತಿದ್ದೆಯಂತೆ. ಆಗ ನಿನ್ನ ಕೂದಲು ತನ್ನದನ್ನೇ ಹೇಗೆ ಚೆನ್ನಾಗಿ ಹೋಲುತ್ತದೆಂಬುದನ್ನು ಅವಳು ನೋಡಿಕೊಂಡಳಂತೆ. ಆ ದಿವಸ ದಿಂದ ಆಕೆ ನಿನ್ನ ಕೂದಲಿಗಾಗಿ ಹಪಾಪಿಸುತ್ತಿದ್ದಾಳೆ. ಅವಳಿಗೆ ಕೂದಲು ಕಡಮೆ. ನಿನ್ನವನ್ನ ಸೇರಿಸಿ ಮುಡಿ ತುಂಬಿಕೊಳ್ಳಲು ಆಶೆ ಪಡುತ್ತಿದ್ದಾಳೆ. ಅದಕ್ಕಾಗಿ ನಿರ್ಧಾ ರವನ್ನೇ ಮಾಡಿದ್ದಾಳೆ. ಆದರೆ ವಿದೇಶಕ್ಕೆ ಹೋದ ಹೊರತು ಅವಳು ಇಲ್ಲಿ ಹೊಸ ಕೂದಲು 'ಟೋಪ'ನ್ನು ತೊಡಲು ಸುರು ಮಾಡುವುದಿಲ್ಲ. ಅಲ್ಲಿ ಯಾರಿಗೂ ಈ ಬದಲಾವಣೆ ಗೊತ್ತಾಗಲಾರದು. ಆದ್ದರಿಂದ ಈ ಕೂದಲ ರಾಶಿಯನ್ನು ಪಡೆಯಲು ಆಕೆ ನನಗೆ ಅಧಿಕಾರ ಕೊಟ್ಟಿದ್ದಾಳೆ. ಅದನ್ನು ನಾನು ಸರಿಯಾಗಿ 'ಟೋಪಾ'ಗಿ ತಯಾರಿಸುವೆನು. ಅಂಥ ದೊಡ್ಡ ಗಿರಾಕಿ ಅಥವಾ ಯಜಮಾನಿ ಇಲ್ಲ ವಾದರೆ ನಾನು ಅಂಗಡಿ ಬಿಟ್ಟು ಇಷ್ಟು ದೂರ ಮೈಲಿಗಟ್ಟಲೆ ಓಡಿ ಬರುತ್ತಿದ್ದೇನೆ? ಆದರೆ ಇಕೊ ನೋಡು, ಆಕೆಯ ಹೆಸರು ರಟ್ಟು ಮಾಡಬೇಡ. ನಾನು ನನ್ನ ಧಂದೆಯ ಬೆಲೆಯನ್ನೆ ಆಕೆಯ ಬಳಿ ಒತ್ತೆ ಇಟ್ಟಂತೆ ಆಗಿದ್ರೆ. ಇದು ಇನ್ನು ನಮ್ಮಿಬ್ಬರ ಪಣ. ಮರ್ಯಾದೆಯ ಆಣೆ, ಮಾರ್ಟಿ, ಇದನ್ನು ಎಲ್ಲಿಯೂ ತುಟಿ ಬಿಚ್ಚಿ ಹೇಳಬಾರದು. ಆದರಿಂದ ನಾನು ಸತ್ತೆ.' ಜೋಕೆ.

'ನನಗೇಕೆ ಅವಳ ಉಸಾಬರಿ. ಅವಳ ಮೇಲೆ ನಾನು ಚಾಡಿ ಹೇಳುವವಳಲ್ಲ. ಆದರೆ ನನ್ನ ಕೂದಲು ನನ್ನದೇ. ಅದನ್ನು ನಾನು ಇಟ್ಟುಕೊಳ್ಳುವವಳೇ!'—ಮಾರ್ಟಿ ಶಾಂತ ಚಿತ್ತದಿಂದ ಹೇಳಿದಳು.

'ಇದೋ—ಇದು ನ್ಯಾಯವಲ್ಲ ನೋಡು. ಅದೂ ಇಷ್ಟೆಲ್ಲ ವಿಶ್ವಾಸದಿಂದ ಹೇಳಿದ ಮೇಲೆ.' ಹೇಳು ಈ ರಾಯಭಾರಿ ಸಿಡುಕಿನಿಂದ ಪೇಚಿಗೆ ಸಿಕ್ಕಿ ಅಂದನು, 'ಇದುನೋಡು ಮಾರ್ಟಿ ಹುಡುಗಾಟಿಕೆ ಮಾಡಬೇಡ. ನೀನು ಅವಳ ಊರಿನಲ್ಲಿಯೇ ಇರುವಿ. ಅವಳ ಒಂದು ಗುಡಿಸಲಿನಲ್ಲಿ ಉಳಿದಿರುವಿ. ನಿನ್ನ ಅಪ್ಪನಿಗೂ ಕಾಯಿಲೆ. ಅವನನ್ನು ಮನೆಯ ಹೊರಗೆ ಹಾಕುವಂತೆಯೂ ಇಲ್ಲ. ಆದ್ದರಿಂದ ಮಿಸೆಸ್ ಚಾರ ಮಂದಳಿಗೆ ಉಪಕಾರ ಮಾಡುವದರಲ್ಲಿಯೇ ನಿನ್ನ ಕ್ಷೇಮ. ಇದನ್ನು ನಾನು ನಿನ್ನ ಗೆಳೆಯನೆಂದೇ ಆಡುತ್ತಿದ್ದೇನೆ. ಆದರೆ ಈ ರಾತ್ರೆಯೇ ನೀನು ಮನಸ್ಸು ಮಾಡಬೇಕೆಂದು ನನ್ನ ಒತ್ತಾಯವಿಲ್ಲ, ನೋಡು. ನಾಳೆಗೆ ನೀನು ಪೇಟೆಗೆ ಬರುವಿಯಂತೆ. ಆಗ

ನನ್ನನ್ನು ಕಂಡು ಹೋಗು. ನೀನು ರಾತ್ರಿಯಿಡೀ ಈ ಬಗ್ಗೆ ವಿಚಾರ ಮಾಡಿನೋಡು. ನನಗೆ ಗೊತ್ತು, ನಾನು ಬೇಡಿದ್ದನ್ನು ಆಕೆ ಬಯಸಿದ್ದನ್ನು ನೀನು ಕೊಡಲು ಒಪ್ಪುವಿ.'

'ನಾನು ಇನ್ನೇನೂ ಹೇಳುವಂತೆ ಇಲ್ಲ', ಮಾರ್ಟಿ ಖಂಡಿತವಾಗಿ ಅಂದಳು.

ಪರಕೊಮ ಅರಿತುಕೊಂಡ-ಬರೆ ಮಾತಾಡಿ ಅವಳ ಮೇಲೆ ಒತ್ತಾಯ ತರುವುದು ಪ್ರಯೋಜನದ್ದಲ್ಲ. 'ನೀನು ನಂಬಿಗಸ್ತ ಹುಡುಗಿ, ನಾನು ಬಲ್ಲೆ,' ಆತ ಅಂದನು, ಈ ಸಾವರೀನುಗಳನ್ನು ಇಲ್ಲಿಯೇ ಇಡುತ್ತೇನೆ—ಬರೆ ಅಲಂಕಾರಕ್ಕೆ ನೀನು ನೋಡುವಿಯಂತೆ—ಅವು ಎಷ್ಟು ಚಂದವಾಗಿರುವವೆಂದು.' ನಾಳೆ ಮುಂಜಾನೆ ನಿನ್ನ ಮಾಲನ್ನು ತಾ, ಇಲ್ಲವೇ ಈ ಸಾವರಿನ್‌ಗಳನ್ನು ತಿರುಗಿಕೊಡು.' ಅವನು ಚಿನ್ನದ ನಾಣ್ಯಗಳನ್ನು ಅಲ್ಲಿ ಗೋಡೆಗೆ ಜೋಡಿಸಿದ ಶೆಲ್ಫಿನ ಮೇಲಿದ್ದ ಸಣ್ಣ ಕನ್ನಡಿಯ ಚೌಕಟ್ಟಿನಲ್ಲಿ ಸಿಕ್ಕಿಸಿದನು. 'ನೀನು ಅದನ್ನು ತಂದೇ ತರುವಿ. ನಿನ್ನ ಒಳ್ಳೆಯದಕ್ಕೆ, ನನ್ನ ಒಳ್ಳೆಯದಕ್ಕೆ. ನನಗೆ ಭರವಸೆ ಇದೆ. ನನಗೆ ಅನ್ನಿಸಿತ್ತು ಆಕೆ ತನ್ನ ಬಯಕೆ ಬೇರೆ ಎಲ್ಲಿಯಾದರೂ ತೀರಿಸಿಕೊಳ್ಳಲಿ, ಎಂದು. ಆದರೆ ಅವಳಿಗೆ ಇದೇ ಲಹರಿ. ನಿನ್ನ ಮೇಲೆಯೇ ಖಾಯಷಿ. ಅದನ್ನು ಪೂರೈಸಲೇಬೇಕಲ್ಲ. ಇಕೋ ಇನ್ನೊಂದು ಮಾತು; ನೀನೇ ನಿನ್ನ ಕೈಯಿಂದ ಕತ್ತರಿಸಿ ತರುವುದಾದರೆ, ಹೇಗೆಂಬುದನ್ನು ಲಕ್ಷ್ಯದಲ್ಲಿಟ್ಟು ಕೇಳು. ಎಲ್ಲ ಕೂದಲ ಗಂಟು ಒಂದೆಡೆಗೆ ಕಟ್ಟಿ ಕತ್ತರಿಸಬೇಕು.— ಅಲ್ಲ, ಒಂದು ಮಾತು ಹೇಳಿಟ್ಟೆ' ಎಂದು ಆತ ಎದ್ದು ಅದನ್ನು ಹೇಗೆ ಮಾಡುವುದೆಂಬುದನ್ನು ತಾನೇ ತೋರಿಸಿಕೊಟ್ಟನು.

'ಆದರೆ ನಾನೊಲ್ಲೆ'—ಮಾರ್ಟಿ ಉಪೇಕ್ಷೆಯಿಂದ ಚುಟುಕಾಗಿ ಉತ್ತರಿಸಿದಳು. 'ನನ್ನ ಮುಖ ಚರ್ಯೆಯ ಬಗೆಗೆ ನನೆಗೆ ತುಂಬ ಕಾಳಜಿ. ಅದನ್ನು ನಾನು ಅಂದಗೆಡಿಸಿಕೊಳ್ಳಲಾರೆ. ಅವಳಿಗೆ ನನ್ನ ಕುರುಳು ಕೂದಲು ಏಕೆ ಬೇಕು?—ಇನ್ನೊಬ್ಬ ಗೆಳೆಯನನ್ನು ಗಂಟು ಹಾಕಿಕೊಳ್ಳಲಿಕ್ಕೆ. ಕೇಳಿದ ಕತೆಗಳನ್ನೆಲ್ಲ ನಂಬುವರಾದರೆ, ಈಗಾಗಲೇ ಅವಳು ಎಷ್ಟೆಲ್ಲ ಮನೆತನಸ್ಥ ತರುಣರ ಎದೆಯನ್ನು ಒಡೆದಿರುವಳೋ ಏನೊ.'

'ಅಬ್ಬಾ, ಹುಡುಗಿ., ನೀನು ಇದನ್ನೆಲ್ಲ ಊಹಿಸಿದ್ದು ಭಾರಿ ಆಶ್ಚರ್ಯವಪ್ಪಾ. ಮಾರ್ಟಿ, ಆಕೆಯ ಒಳಗುಟ್ಟು ಬಲ್ಲವರಿಂದ ನನಗೆ ಗೊತ್ತಾಯಿತು—ಅವಳ ಕಣ್ಣಲ್ಲಿ ಸದ್ಯ ಒಬ್ಬ ವಿದೇಶೀ ಸದ್ಗ್ರುಹಸ್ಥ ತುಂಬಿದ್ದಾನಂತೆ. ಅದೇನೇ ಇರಲಿ, ನಾನು ಹೇಳಿದಷ್ಟು ನೆನಪಿನಲ್ಲಿಟ್ಟುಕೋ.'

'ನನ್ನಿಂದ ಅವಳು ಆತನನ್ನು ಗಿಟ್ಟಿಸಿಕೊಳ್ಳಲಾರಳು!' ಮಾರ್ಟಿ ಹಟದಿಂದ ಗುರುಗುಟ್ಟಿದಳು.

ಆಗಲೇ ಪರಕೊಮ ಎದ್ದು ಬಾಗಿಲ ತನಕ ಹೋಗಿದ್ದನು. ಆತ ಈ ಮಾತಿಗೆ ತಿರುಗಿ ಬಂದನು. ತನ್ನ ಕೈಗೋಲನ್ನು ಆ ಶವ ಪೆಟ್ಟಿಗೆಯ ಮೇಲೆ ಊರಿದನು. ಮತ್ತು ಅವಳ ಮುಖವನ್ನೆ ದಿಟ್ಟಿಸುತ್ತ ಒಂದೊಂದು ಮಾತನ್ನು ಒತ್ತಿ ಅಂದನು,

'ಮಾರ್ಟಿ ಸೌಥ್, ನಿನಗೂ ಒಬ್ಬ ಗೆಳೆಯನಿದ್ದಾನೆ. ಅದಕ್ಕಾಗಿಯೇ ನೀನು ಈ ಕೂದಲನ್ನು ಕಳೆದುಕೊಳ್ಳಲು ಸಿದ್ಧಳಿಲ್ಲ!'

ಮಾರ್ಟಿಯ ಮೋರೆ ಒಮ್ಮೆಲೇ ಕೆಂಪೇರಿತು. ಅದು ಚೆಲುವಿನ ಕಳೆಯೇರಿಸುವ ಛಾಯೆಗಿಂತ ಹೆಚ್ಚು ಅಚ್ಚ ಕೆಂಪು. ಅವಳು ಒಮ್ಮೆಲೇ ತೊಗಲಿನ ಹಳದಿ ಕೈಚೀಲ ಏರಿಸಿಕೊಂಡಳು. ಕೈಗತ್ತಿಯನ್ನು ಎತ್ತಿಕೊಂಡಳು; ತನ್ನ ಗೂಟ ಕೆತ್ತುವ ಕೆಲಸಕ್ಕೆ ಹಠಾತ್ತಾಗಿ ಕುಳಿತುಬಿಟ್ಟಳು — ಪರಕೊಮನ ಮೇಲೆ ಬೆನ್ನು ತಿರುಗಿಸಿ. ಆತ ಅವಳ ತಲೆಯನ್ನೆ ಒಂದು ನಿಮಿಷ ನೋಡುತ್ತ ನಿಂತನು. ಆನಂತರ ಹೊರಡುವ ಮುಂಚೊಮ್ಮೆ ಅವಳತ್ತ ಹೊರಳಿ ನೋಡಿ ಹೊರಗೆ ಬಿದ್ದು ಮನೆಯ ಹಾದಿ ಹಿಡಿದನು.

ಮಾರ್ಟಿ ತನ್ನ ಕೆಲಸವನ್ನು ಕೆಲವು ಗಳಿಗೆ ಮುಂದರಿಸಿದಳು. ಅನಂತರ ಫಕ್ಕನೆ ಕೈಗತ್ತಿಯನ್ನು ಕೆಳಗಿಟ್ಟು ಜಗ್ಗನೆ ಜಿಗಿದೆದ್ದು ಆ ಕೋಣೆಯ ಹಿಂಭಾಗಕ್ಕೆ ಹೋದಳು. ಅಲ್ಲಿಯ ಬಾಗಿಲನ್ನು ತೆರೆದಳು. ಒಳಗೆ ಒಂದು ನಿಚ್ಚಣಿಕೆ ಕಾಣುತ್ತಿತ್ತು. ಅದರ ಪಾವಟಿಗೆಗಳು ತೊಳೆದು ತಿಕ್ಕಿ ಬೆಳ್ಳಗಾಗಿ, ಮರದ ಸೆರೆಗಳು ಕಾಣಿಸುವಂತಿತ್ತು. ಆ ನಿಚ್ಚಣಿಕೆಯನ್ನೇರಿ ಆಕೆ ಮಾಳಿಗೆಯಲ್ಲಿಯ ಮಲಗುವ ಕೋಣೆಯ ಹತ್ತಿರ ಹೋದಳು. ಒಳಗೆ ಹೊಕ್ಕದೆ, 'ಅಪ್ಪಾ, ನಿನಗೆ ಏನಾದರೂ ಬೇಕೆ?' ಎಂದು ಕೇಳಿದಳು.

ಒಳಗಿಂದ ಒಂದು ಕ್ಷೀಣ ದನಿಯು ಕೇಳಿಬಂದಿತು. 'ನಾಳೆಯೊಳಗೆ ನನಗೆ ಆರಾಮು ಆಗುತ್ತಿತ್ತು — ಆ ಕೆಟ್ಟ ಮರ ಒಂದು ಇರದಿದ್ದರೆ' ಆತ ಗೊಣಗುಟ್ಟಿದನು.

'ಮತ್ತೆ ಆ ಮರ — ಯಾವಾಗಲೂ ಅದೇ ಮರದ ಮಾತು!' ಅಪ್ಪಾ, ಆ ಮರದ್ದೇ ಚಿಂತೆ ಮಾಡುತ್ತ ಮಲಗಬೇಡ. ನಿನಗೆ ಗೊತ್ತು, ಅದು ನಿನಗೆ ಯಾವ ಅಪಾಯವನ್ನೂ ಮಾಡಲಾರದು.'

'ನೀನು ಕೆಳಗೆ ಯಾರೊಂದಿಗೆ ಮಾತಾಡುತ್ತಿದ್ದೆ?'

'ಶರ್ಟನ್ನಿನಿಂದ ಒಬ್ಬ ಬಂದಿದ್ದ. ಅದೇನು ತೊಂದರೆ ಪಡಬೇಕಾದ ವಿಷಯವಲ್ಲ.' ಆಕೆ ಪುಸಲಾಯಿಸುವ ದನಿಯಲ್ಲಿ ಹೇಳಿದಳು. 'ಅಪ್ಪಾ, ಆ ಮಿಸೆಸ್ ಚಾರ್ಮಂಡ ಮನಸ್ಸು ಮಾಡಿದರೆ ನಮ್ಮನ್ನು ಈ ಮನೆಯಿಂದ ಹೊರಗೆ ಅಟ್ಟಬಹುದೇ?'

'ಹೊರಗೆ ಅಟ್ಟುವುದು? ಛೇ. ಶಕ್ಯವೇ ಇಲ್ಲ. ನನ್ನ ಈ ಬಡಜೀವ ದೇಹದಿಂದ ಹೊರಬೀಳುವ ತನಕವೂ ಯಾರೊಬ್ಬರೂ ನಮ್ಮನ್ನು ಇಲ್ಲಿಂದ ಹೊರಹಾಕಲಾರರು. ಈ ಮನೆಯ ಮೇಲೆ ಜೀವಾವಧಿಯ ಕಬ್ಜಾ. ಜೈಲ್ಸ ವಿಂಟರ್ ಬೋರ್ನನ ಹಕ್ಕಿನಂತೆಯೇ. ನನ್ನ ಜೀವ ಬಿದ್ದಮೇಲೆ ಇದು ಅವಳದಾಗುವುದು. ಆ ತನಕ ಇಲ್ಲ.' ಇಷ್ಟು ಮಾತಾಡುವತನಕ ಅವನ ಮಾತಿನಲ್ಲಿ ವಿವೇಕ — ವಿಚಾರವಿತ್ತು. ಆದರೆ ಈಗ ಮತ್ತೆ ಅವನು ಮರಗುವ, ಗೊಣಗಾಡುವ ಧಾಟಿ ಹಿಡಿದನು. 'ಮತ್ತು ಆ ಮರ ಅಷ್ಟು ಮಾಡದೆ ಬಿಡದು!'

'ಹುಚ್ಚುಚ್ಚಾಗಿ ಏನಾದರೂ ಅನ್ನಬೇಡ, ಅಪ್ಪಾ, ನಿನಗೇ ಚೆನ್ನಾಗಿ ಗೊತ್ತು. ಅದು ಹೇಗೆ ಸಾಧ್ಯ?', ಮಾತು ಮುಂದರಿಸದೆ ಮಾರ್ಟಿ ಮಾಳಿಗೆ ಇಳಿದು ಕೆಳಗಿನ ಕೋಣೆಗೆ ಬಂದಳು.

'ಹಾಗಾದರೆ, ದೇವರಿಗೆ ದಮ್ಮಯ್ಯ,' ಅವಳು ಪರಿಹಾರದ ನಿರ್ಧಾರದ ನಿಟ್ಟುಸಿರು ಬಿಟ್ಟು ತನ್ನಲ್ಲಿಯೇ ಅಂದಳು, 'ನನ್ನದಾದ ಒಡವೆ ನಾನು ಕಾಪಾಡಿ ಕೊಳ್ಳುವವಳೇ!'

೨

ಹಳ್ಳಿಯ ದೀಪಗಳು ಆರಿದವು. ಈ ಮನೆ ಆ ಮನೆ ಕತ್ತಲೆಯನ್ನು ಸೇರಿತು. ಕೊನೆಗೆ ಉಳಿದವು ಎರಡೇ ದೀಪಗಳು. ಒಂದು ಮಾರ್ಟಿಯ ಮನೆಯಿಂದ ಬೆಳಗುವಂತಹದ್ದು; ಇನ್ನೊಂದು ದೂರ ಗುಡ್ಡದ ಮಗ್ಗಲಲ್ಲಿ ಒಂದು ಮನೆಯಿಂದ ಮಿನುಗುವಂತಹದ್ದು. ದೀಪದ ಕಿರಣ ಬರುವ ಮನೆ ಆ ತರುಣ ಡಾಕ್ಟರನದು — ಸೈತಾನನೊಂದಿಗೆ ಸಂಬಂಧ ವಿಟ್ಟುಕೊಂಡವನು, ಎಂದು ಮಂದಿ ಆಡಿಕೊಳ್ಳುವವನದು. ಅವನ ಸಮಾಚಾರ ಮುಂದೆ ನೋಡೋಣ.

ಮಾರ್ಟಿಯ ಮನೆಯಲ್ಲಿ ದೀಪ ಉರಿಯುತ್ತಲೇ ಇತ್ತು. ಆದರೆ ಅದು ಆರಿದಂತೆ ತೋರಲು, ಆಕೆ ಕೆಲಸ ಬಿಟ್ಟು ಎದ್ದು ಬಾಗಿಲಿಗೆ ಒಂದು ಪರದೆಯನ್ನು ಇಳಿಬಿಟ್ಟಳು. ಇತರ ಗುಡಿಸಲುಗಳಂತೆ ಇಲ್ಲಿಯೂ ಮನೆಯ ತಲೆಬಾಗಿಲು ಹಗಲೂ ಇರುಳೂ ತೆರೆದೇ ಇಡಬೇಕಾಗುತ್ತಿತ್ತು — ಹೊಗೆ ಹೊರಗೆ ಹಾಕಲಿಕ್ಕೆ. ಆದರೆ ಬಾಗಿಲ ಸಂದಿನ ಬೆಳಕಿನ ಕಂಬಿಯನ್ನು ಅಳಿಸಲಿಕ್ಕೆ ಮಾರ್ಟಿ ಹೀಗೆ ಪರದೆಯನ್ನು ಕಟ್ಟುತ್ತಿದ್ದಳು.

ಕೆಲವರು ನೆರೆಹೊರೆಯವರಿಗಿಂತಲೂ ಹೆಚ್ಚು ಹೊತ್ತು ದುಡಿಯಬೇಕಾಗಿದ್ದರೆ, ಆ ಅಗತ್ಯವನ್ನು ಆದಷ್ಟು ಅಡಗಿಸಲು ಹವಣಿಸುತ್ತಾರೆ. ಮಾರ್ಟಿ ಆ ಮಾದರಿಯವಳು. ಆದ್ದರಿಂದ ಗೂಟ ಕೆತ್ತುವ ಚಿಕ್ಕಪುಟ್ಟ ಸದ್ದು ಬಿಟ್ಟರೆ, ಹೊರಗಿನ ದಾರಿಹೋಕರಿಗೆ ಆ ಹೊತ್ತಿಗೆ ಈ ಗುಡಿಸಲು ಈ ಊರಿನ ಬೇರೆ ಮನೆಗಳಂತೆ ನಿದ್ದೆ ಹೋಗಿದೆಯೆಂದೇ ಅನಿಸುವಂತೆ ಆಯಿತು.

ಹನ್ನೊಂದು, ಹನ್ನೆರಡು, ಒಂದು ಬಡಿಯಿತು, ಗಡಿಯಾರದಲ್ಲಿ. ಗೂಟಗಳ ರಾಶಿ ಇನ್ನೂ ಎತ್ತರವಾಯಿತು. ಚಿಕ್ಕೆ ಚೂರುಗಳ ರಾಶಿ ಇನ್ನೂ ದೊಡ್ಡದಾಯಿತು. ಅಲ್ಲಿ ಗುಡ್ಡದ ಮೇಲಿನ ದೀಪವೂ ಆರಿತು. ಆದರೆ ಮಾರ್ಟಿ ಕೆಲಸ ಮಾಡುತ್ತಲೇ ಇದ್ದಳು. ಹೊರಗೆ ರಾತ್ರಿಯ ಉಷ್ಣತಾಮಾನವೂ ಇಳಿಯುತ್ತಲೇ ಹೋಯಿತು. ಆಕೆಗೆ ಕುಳಿತಲ್ಲಿ ಚಳಿ ಏರಿತು. ಆಕೆ ಎದ್ದು ನೀಲಿ ಬಣ್ಣದ ಒಂದು ದೊಡ್ಡ ಕೊಡೆಯನ್ನು ಬಿಚ್ಚಿ ಬಾಗಿಲ ಮುಂದೆ ಇಟ್ಟಳು—ಹೊರಗಿನಿಂದ ನುಗ್ಗುವ ಚಳಿ ಗಾಳಿಯನ್ನು ತಡೆಯಲಿಕ್ಕೆ.

ಕನ್ನಡಿಯ ಚೌಕಟ್ಟಿನಲ್ಲಿ ಸಿಕ್ಕಿಸಿಟ್ಟ ಆ ಎರಡು ಸಾವರಿನುಗಳು ಮಾರ್ಟಿಯನ್ನೆ

ದುರುಗುಟ್ಟಿ ನೋಡುತಿದ್ದವು—ಹೊತ್ತು ಸಾಧಿಸಲು ಹೊಂಚುಹಾಕಿದ ಎರಡು ಕಾಮಲಿ ಯೇರಿದ ಹಳದಿ ಕಣ್ಣುಗಳಂತೆ! ದಣಿದು ನಿಟ್ಟುಸಿರು ಎಳೆದಾಗೆಲ್ಲ ಮಾರ್ಟಿಯ ದೃಷ್ಟಿ ಆ ನಾಣ್ಯಗಳ ಮೇಲೆ ಹಾಯುತ್ತಿತ್ತು. ಆದರೆ ಮರುಕ್ಷಣದಲ್ಲಿ ಅವಳು ಕಣ್ಣನ್ನು ಬೇರೆ ಕಡೆಗೆ ಹೊರಳಿಸುವಳು. ಒಂದು ಕ್ಷಣ ತನ್ನ ಹೆಗಲ ಮೇಲೆ ಹರಡಿದ ಕೇಶ ಪಾಶಗಳ ಮೇಲಿಂದ ಬೆರಳು ಆಡಿಸುವಳು. ಅವು ಇನ್ನೂ ಅಲ್ಲಿಯೇ ಸುರಕ್ಷಿತವಾಗಿ ಇರುವವಲ್ಲ! ಎಂಬ ಸಮಾಧಾನದಲ್ಲಿ.

ಗಡಿಯಾರದಲ್ಲಿ ಮೂರು ಬಡಿದಾಗ ಅವಳು ಎದ್ದಳು. ಗೂಟಗಳನ್ನೆಲ್ಲ ಮೂಟೆ ಕಟ್ಟಿದಳು. ಅಂಥ ಕೆಲವು ಮೂಟೆ ಮೊದಲೇ ಕಟ್ಟಿದವು ಮೂಲೆಯಲ್ಲಿ ಗೋಡೆಗೆ ಆನಿಸಿ ನಿಂತಿದ್ದವು. ಅವಳು ದೊಡ್ಡದೊಂದು ಕೆಂಪು ಉಣ್ಣೆಯ ಕೊರಳ ಪಟ್ಟಿಯನ್ನು ತಲೆಗೆ ಸುತ್ತಿಕೊಂಡಳು - ಕಿವಿ, ಕುತ್ತಿಗೆ ಎಲ್ಲ ಮುಚ್ಚಿಕೊಳ್ಳುವಂತೆ; ಮತ್ತು ಬಾಗಿಲು ತೆರೆದಳು. ಇರುಳು ತನ್ನ ತುಂಬಿದ ಕತ್ತಲೆಯ ದಟ್ಟಣೆಕೆಯಿಂದ ಹೊಸ್ತಿಲಲ್ಲಿಯೇ ಅವಳ ಮುಖಕ್ಕೆ ಬಡಿಯಿತು. ಅವಳ ಕಣ್ಣು ಒಳಗಿನ ಬೆಳಕಿನಿಂದ ಕುಕ್ಕಿದ್ದವು. ಅಲ್ಲಿ ಹೊರಗೆ ದಾರಿಯಲ್ಲಿ ದೀಪವೂ ಇದ್ದಿಲ್ಲ—ಆ ಬೆಳಕಿನಿಂದ ಈ ಕತ್ತಲೆಗೆ ದೃಷ್ಟಿ ಪಳಗಿಸಲಿಕ್ಕೆ.

ತಡೆತಡೆದು ಬೀಸುತ್ತಿರುವ ತಂಗಾಳಿಯು ನೆರೆಯ ಕಾಡಿನಲ್ಲಿ ಮರದ ಟೊಂಗೆಗಳು ಒಂದಕ್ಕೊಂದು ತಿಕ್ಕುವ ಕರ್ಕಶ ಸಪ್ಪಳವನ್ನು ತಂದಿತು; ಜತೆಗೆ ಮರಗಳ ನೂರಾರು ನೋವುಗಳೂ ಕಾಡಿನ ನರಳಿಕೆಯೂ ಅದರಲ್ಲಿ ತೋಡಿಕೊಂಡಿತ್ತು—ಗೂಗೆಗಳೂ ಕಾಡುಪಾರಿವಾಳಗಳೂ ಅದಕ್ಕೆ ತಮ್ಮ ದನಿಗೂಡಿಸಿದ್ದವು.

ಇಷ್ಟರಲ್ಲಿ ಮಾರ್ಟಿಯ ಎಳೆಗಣ್ಣುಗಳು ಆ ಕತ್ತಲಿಗೆ ಪಳಗಿದವು. ಸಾಕಷ್ಟು ತಿಳಿಯಾಗಿ ಆಕೆಗೆ ದಾರಿ ದಿಕ್ಕು ಕಾಣಹತ್ತಿತು. ಕಂಕುಳಿಗೆ ಒಂದೊಂದು ಗೂಟದ ಮೂಟೆಯನ್ನು ಎತ್ತಿಕೊಂಡು, ಆಕಾಶದಲ್ಲಿ ಕೆತ್ತಿಟ್ಟಂತೆ ಕಾಣುವ ಮರಗಳ ತುದಿಗಳ ಸಾಲನ್ನೆ ದಿಕ್ಕುತೋರಿಸಲು ಇಟ್ಟುಕೊಂಡು ಆ ಕೇರಿಗುಂಟ ನೂರಿನ್ನೂರು ಗಜ ದೂರ ಆಕೆ ನಡೆದು ಹೋದಳು. ಅಲ್ಲಿ ಒಂದು ತೆರವಾದ ಉದ್ದ ಶೆಡ್ಡಿನ ಕದವನ್ನು ತಟ್ಟಿದಳು.

ಗೋಡೆಗಳೊಳಗೆ, ಕೋಣೆಯಲ್ಲಿ ಕೂತವರಿಗೆ ಇರುಳ ಕತ್ತಲೆ ವಿಚಿತ್ರ ಕಂಗೆಡಿಸುವ ಅಸ್ವಸ್ಥತೆಯನ್ನು ತರುತ್ತದೆ. ಆದರೆ ಬಯಲು ಬಾನಿನಡಿಗೆ ಅಂಥ ಚಿಂತೆ ಚಾಂಚಲ್ಯ ಗಳನ್ನು ತೀರಾ ಕ್ಷುದ್ರವೆಂದು ಅದು ಮನವರಿಕೆ ಮಾಡಿಕೊಡುತ್ತದೆ. ಈಗ ಈ ಕತ್ತಲೆಯಲ್ಲಿ ಮಾರ್ಟಿ ಹೆಚ್ಚು ಸ್ವಸ್ಥಚಿತ್ತಳು. ಆ ಶೆಡ್ಡಿನಲ್ಲಿ ಅವೆರಡು ಮೂಟೆಗಳನ್ನು ಇಟ್ಟು ಮತ್ತೆ ಮನೆಯಿಂದ ತರಲು ಹಿಂದಿರುಗಿದಳು. ಹೀಗೆ ಮತ್ತೆ ಮತ್ತೆ ಹೋಗಿ ಬಂದು ತಾನು ತಯಾರಿಸಿದ್ದ ಎಲ್ಲ ಗೂಟದ ಮೂಟೆಗಳನ್ನು ಅಲ್ಲಿ ತಂದಿಟ್ಟಳು.

ಆ ಹಳ್ಳಿಯಲ್ಲಿಯೇ ಮಿಸ್ಟರ್ ಜಾರ್ಜ ಮೆಲಬರಿ ದೊಡ್ಡ ವ್ಯವಹಾರಸ್ಥ. ಅವನ ಗಾಡಿಗಳಿಗಾಗಿಯೇ ಆ ಶೆಡ್ಡು (ಮಾಲು ತಂಗುಮನೆಯಂತೆ ಕಟ್ಟಿದ್ದು.) ಮೆಲಬರಿಯು

ಕಟ್ಟಿಗೆ ತೊಗಟೆ ಮತ್ತು ನಾರು ಮುಂತಾದ ಬೆಟ್ಟದ ಜೀನಸುಗಳಿಗೆಲ್ಲ ದೊಡ್ಡ ವ್ಯಾಪಾರಿ. ಅವನಿಗಾಗಿ ಮಾರ್ಟಿಯ ತಂದೆ ಚಿಕ್ಕ ದೊಡ್ಡ ನಾಟೆ ಹಿಡಿಯುತ್ತಿದ್ದ. ಮೆಲಬರಿಯ ಮನೆಯೂ ಅಸಡ್ಡಾಳವಾಗಿ ಅಲ್ಲಿ ನಡುವೆಯೇ ಹಬ್ಬಿ ನಿಂತಿತ್ತು. ಅದರ ಹೊಗೆಗೊಳವೆಗಳು ಆ ಕತ್ತಲಲ್ಲೂ ಎತ್ತರವಾಗಿ ಕಾಣಿಸುತಿದ್ದವು. ಮನೆಯ ಸುತ್ತಲು ಇಂಥ ಚಿಕ್ಕ ದೊಡ್ಡ ಮಾಲುಗಳು ಇದ್ದವು. ಈ ಮಾಲಿನಲ್ಲಿ ನಾಲ್ಕು ದೊಡ್ಡ ಸಾಮಾನುಗಾಡಿಗಳು ನಿಂತಿದ್ದವು. ಗಾಡಿಗಳೂ ಹಳೆಯ ಮಾದರಿಯಲ್ಲಿ ಕಟ್ಟಿದ್ದವು—ಹಳೆಯ ಯುದ್ಧ ನೌಕೆಯ ಆಕಾರದಲ್ಲಿ.

ಒಂದರಲ್ಲಿ ಕುರಿಗಳಿಗಾಗಿ ದಾವಣಿಗಳು, ಇನ್ನೊಂದರಲ್ಲಿ ದಣಪೆಯ ತೊಣೆಗಳು, ಮೂರನೆಯದರಲ್ಲಿ ಏಶ್ ಮರದ ತುಂಡುಗಳು ಮತ್ತು ನಾಲ್ಕನೆಯದರಲ್ಲಿ ಇದೀಗ ಮಾರ್ಟಿ ಹೊತ್ತು ತಂದು ಕೆಳಗೆ ಹಾಕಿದಂಥ ಮಾಡಿನ ಗೂಟಗಳ ಮೂಟೆಗಳು ಅರ್ಧ ತುಂಬಿದ್ದವು. ಅವಳು ತಂದ ಮೂಟೆಗಳು ಅದೇ ಗಾಡಿಯನ್ನು ತುಂಬಲಿದ್ದವು. ಆಕೆ ಅಲ್ಲಿಯೇ ಪಕ್ಕದಲ್ಲಿ ಒಂದು ಬಗೆಯ ಸಂತೃಪ್ತಿಯಲ್ಲಿ ನಿಂತಿದ್ದಳು. ಅದು ಕೊನೆಗೂ ಒಮ್ಮೆ ಕಠಿಣವಾದ ಕೆಲಸವನ್ನು ಕೈಗೂಡಿಸಿದ ಸಂತೃಪ್ತಿ.

ಆಕೆ ಅಲ್ಲಿ ನಿಂತಾಗಲೇ ಬೇಲಿಯ ಆಚೆಯಿಂದ ಒಂದು ಹೆಣ್ಣುದನಿ ಕರೆದದ್ದು ಕೇಳಿದಳು ‘ ಜಾರ್ಜ್’, ಮರುಕ್ಷಣಕ್ಕೆ ಆ ಹೆಸರನ್ನು ಮತ್ತೆ ಕೂಗಲಾಯಿತು. ಜತೆಗೆ ಸೂಚನೆಯೂ ಬಂದಿತು, ‘ ಒಳಗೆ ಬಾಗಿಲೊಳಗೆ ಬಂದುಬಿಡಿ. ಅಲ್ಲಿ ಏನು ಮಾಡುವಿರಿ ? ’

ಗಾಡಿಯ ತಂಗುಮನೆ ಕೈತೋಟಕ್ಕೆ ತಾಗಿಯೇ ಇತ್ತು. ಕಟ್ಟಿಗೆ ವ್ಯಾಪಾರಿಯ ಮನೆಯ ಹಿಂಬಾಗಿಲಿನಿಂದ ಆ ತೋಟದಲ್ಲಿ ಒಬ್ಬ ಪ್ರೌಢವಯಸ್ಸಿನ ಹೆಂಗಸು ಬರುತ್ತಿದ್ದುದನ್ನು ಮಾರ್ಟಿ ಕಂಡಳು. ಆ ಹೆಂಗಸಿನ ಕೈಯಲ್ಲಿ ಒಂದು ಮೇಣಬತ್ತಿ ಉರಿಯುತ್ತಿತ್ತು. ಅದನ್ನು ಇನ್ನೊಂದು ಕೈಯಿಂದ ಅವಳು ಗಾಳಿಗೆ ಮರೆಮಾಡಿದ್ದಳು. ಆ ಬತ್ತಿಯ ಬೆಳಕು ಮಾರ್ಟಿಯ ಮೋರೆಯ ಮೇಲೆ ಬೇಲಿಯ ಮುಳ್ಳು—ಹಂದರದ ಹೊಯ್ದಾಡುವ ನೆರಳನ್ನು ಚೆಲ್ಲುತ್ತಿತ್ತು. ಅದರ ಬೆಳಕು ಆ ಹೆಂಗಸಿಗೂ ಮುಂದೆ ತೋಟದಲ್ಲಿ ನಿಂತಿದ್ದ ಮನುಷ್ಯನ ಮೇಲೆ ಬಿದ್ದಿತು. ಬಡಕಲು ಮೈಯವನು, ತುಸು ಬಾಗಿದ ಬೆನ್ನು, ಪುಟ್ಟ ಅಳುಕು ತೋರಿಸುವ ಬಾಯಿ ಮತ್ತು ಚೊಕ್ಕ ಗಡ್ಡ ಬೋಳಿಸಿದ ಮೊಗ, ಹೀಗಿತ್ತು ಆ ಮನುಷ್ಯನ ರೂಪ. ಆತ ದಾರಿಗುಂಟ ನೆಲಕ್ಕೆ ಕಣ್ಣು ನೆಟ್ಟಿಯೇ ನಡೆಯುತ್ತಿದ್ದನು. ಆ ಜೋಡಿಯಲ್ಲಿ ಮಾರ್ಟಿ ಗುರುತಿಸಿದಳು—ಆತ ಮಿಸ್ಟರ್ ಮೆಲಬರೀ. ಆಕೆ ಅವನ ಸೌಭಾಗ್ಯವತಿ. ಅವಳದು ಎರಡನೆಯ ಸೌಭಾಗ್ಯ. ಅಂದರೆ ಮೆಲಬರಿಗೆ ಆಕೆ ಎರಡನೆಯ ಹೆಂಡತಿ. ಹಿರಿಯವಳು ಒಂದು ಕೂಸು ಹುಟ್ಟಿದಾಗಲೇ ಬಿಟ್ಟು ಪರಲೋಕಕ್ಕೆ ಹೋಗಿದ್ದಳು. ಮೆಲಬರಿಗೆ ಅದೊಂದೇ ಕೂಸು—ಹುಡುಗಿ.

‘ ಇನ್ನು ಹಾಸುಗೆಯಲ್ಲಿ ಬಿದ್ದಿರುದು ಪ್ರಯೋಜನವಿಲ್ಲ ’. ಆತ ಚಂಚಲ ಚಿತ್ತದಿಂದ ಶತಪಥ ಹಾಕುವಲ್ಲಿಗೆ ಆಕೆ ಬಂದಾಗ ಅಂದನು, ‘ ನನಗೆ ನಿದ್ದೆ ಬರುವದಿಲ್ಲ. ನಾನು ಏನೆಲ್ಲ ವಿಚಾರ ಮಾಡುತ್ತ ಇರುತ್ತೇನೆ ’.

‘ ಏನು—ಯಾತರ ವಿಚಾರ ? ’

ಆತ ಉತ್ತರ ಕೊಡಲಿಲ್ಲ.

‘ ಆ ದೊಡ್ಡ ಮನೆಯ ಬಾಯಿಯವರದೇ ? ’

‘ ಅಲ್ಲ ’

‘ ಹಳೆಯ ರಸ್ತೆಗಳಿಗಾಗಿ ಸರಕಾರ ತೆಗೆದ ಸಾಲದ ಬಾಂಡುಗಳ ಬಗೆಗೋ ? ’

‘ ಅಲ್ಲ. ಆದರೂ ಆ ಬಾಂಡುಗಳನ್ನು ನಾನು ಕೊಂಡಿಲ್ಲದಿದ್ದರೇ ಲೇಸಾಗುತ್ತಿತ್ತೇನೋ ! ನನಗೆ ಈಗ ಅನಿಸುತ್ತದೆ.’

‘ ಹಾಗಾದರೆ, ಆ ಜವಳಿ ಸೋದರರ ಭೂತದ ವಿಚಾರವೋ ? ’

ಆತ ತಲೆ ಅಲ್ಲಾಡಿಸಿದನು—ಅಲ್ಲವೆಂದು.

‘ ಅಂದಾಗ ನಮ್ಮ ಗ್ರೇಸಳ ಕುರಿತು ಅಲ್ಲವಷ್ಟೇ ? ’

‘ ಹೌದು. ಅವಳ ಕುರಿತೇ ’

(ಗ್ರೇಸ ಆ ಕಟ್ಟಿಗೆ ವ್ಯಾಪಾರಿಯ ಒಬ್ಬಳೇ ಹುಡುಗಿ)

‘ ಅವಳ ಬಗ್ಗೆ ಏಕೆ ಹೀಗೆ ಯಾವಾಗಲೂ ಚಿಂತಿಸಬೇಕು ?’

‘ ಏಕೆಂದರೆ, ಅವಳು ನನ್ನ ಪತ್ರಗಳಿಗೇಕೆ ಉತ್ತರ ಬರೆಯುವದಿಲ್ಲ? ನನಗೆ ಅರ್ಥವೇ ಆಗುವುದಿಲ್ಲ. ಅವಳು ಬೇನೆ ಬಿದ್ದಿರಬೇಕು ’.

‘ ಛೇ, ಛೇ. ಶಕ್ಯವೇ ಇಲ್ಲ. ಈ ಮಬ್ಬು ಕತ್ತಲೆಯಲ್ಲಿ ಹೀಗೆಲ್ಲ ಕಳಕಳಿವೆನಿಸುವದು. ಎಲ್ಲ ಉದಾಸೀನವೆನಿಸುವದು ’.

‘ ಎರಡನೆಯದೆಂದರೆ, ನಾನು ಅವಳಿಗೋಸ್ಕರವೇ ಹಣವೇನೂ ಠೇವಾಗಿ ಇಟ್ಟಿರುವುದಿಲ್ಲ. ನನ್ನ ಈ ವ್ಯವಸಾಯ ಕಟ್ಟಾದರೆ, ಧಂದೆಗೆ ಧಕ್ಕೆ ತಟ್ಟರೆ ಅವಳನ್ನು ಬಡತನದ ತೆಕ್ಕೆಯಿಂದ ದೂರವಿಡಲು ಯಾವ ವ್ಯವಸ್ಥೆಯನ್ನೂ ಮಾಡಿರುವುದಿಲ್ಲ ’.

ಧಂದೆಯೆಲ್ಲ ಭದ್ರವಿದೆ. ಅದಕ್ಕೇನು ಭಯವಿಲ್ಲ. ಅಲ್ಲದೆ ನಮ್ಮ ಮಗಳು ಪುಣ್ಯವಂಶದಲ್ಲಿಯೇ ಮದುವೆಯಾಗುವಳು. ಖಂಡಿತ ’.

‘ ಅಲ್ಲೇ ನೀನು ತಪ್ಪುವುದು. ಇದೇ ನನ್ನ ಮೂರನೆಯ ತೊಂದರೆ. ನಾನು ಹಿಂದೆಲ್ಲ ಹತ್ತೆಂಟು ಸಲ ನಿನಗೆ ಹೇಳಿದ್ದೇನೆ ; ಸೂಚಿಸಿದ್ದೇನೆ. ಅವಳ ಮದುವೆಯ ಬಗೆಗೆ ನನ್ನ ತಲೆಯಲ್ಲಿ ಒಂದು ಯೋಜನೆ ಇದೆ. ಆ ಯೋಜನೆಯ ಮೇರೆಗೆ ಅವಳು ಪುಣ್ಯವಂತರಲ್ಲಿ ಮದುವೆಯಾಗುವುದಿಲ್ಲ ’.

‘ ಅದೇಕೆ ಆಗೋದಿಲ್ಲ ? ’ ಹೆಂಡತಿ ಪೃಚ್ಛೆ ಮಾಡಿದಳು.

‘ ಏಕೆಂದರೆ ಆ ಯೋಜನೆ, ಅವಳು ಒಬ್ಬ ವಿಶಿಷ್ಟ ಮನುಷ್ಯನನ್ನು ಮದುವೆಯಾಗಬೇಕೆಂದು. ಆ ಮನುಷ್ಯ ಜೈಲ್ಸ ವಿಂಟರ ಬೋರ್ನ. ಮತ್ತು ಆತ ಬಡವನೇ ಸರಿ ’.

‘ ಇರಲಿ, ಅದೆಲ್ಲ ಸರಿಯೇ, ಅವನ ಹಣದ ಕೊರತೆ ಗುಣದಿಂದ, ಪ್ರೀತಿಯಿಂದ ತುಂಬಿ ಬರುವುದು. ಅವಳು ಹೆಜ್ಜೆ ಇಟ್ಟ ನೆಲವನ್ನು ಆತ ಆರಾಧಿಸುತ್ತಾನೆ.

ಈ ಮಾತು ಕೇಳಿ ಮಾರ್ಟಿ ಸೌಥ ಬೆಚ್ಚಿಬಿದ್ದಳು. ಆದರೆ ಅಲ್ಲಿಂದ ಕಾಲು ಕೀಳಲೇ ಆಗಲಿಲ್ಲ ಅವಳಿಗೆ.

'ಅದು ನಿಜ', ಆ ಕಟ್ಟಿಗೆಯ ವರ್ತಕ ಅಂದನು, 'ಅದು ನನಗೆ ಚೆನ್ನಾಗಿ ಗೊತ್ತು. ಅವನಲ್ಲಿ ಅದಕ್ಕೆ ಎಂದೂ ಕೊರತೆ ಬೀಳಲಿಕ್ಕಿಲ್ಲ. ಆದರೆ ನಾನು ಅವಳನ್ನು ಇಷ್ಟು ಚೆನ್ನಾಗಿ ಇಷ್ಟೆಲ್ಲ ದೀರ್ಘಕಾಲ, ಈ ನೆರೆಕರೆಯ ಹುಡುಗಿಯರಿಗಿಂತ ಇಷ್ಟು ಮೇಲ್ಮಟ್ಟದಲ್ಲಿ ಓದಿಸಿದ್ದೇನೆ. ಶಿಕ್ಷಣ ಕೊಡಿಸಿದ್ದೇನೆ ಅಂದಾಗ ಅವನಂಥ ಸ್ಥಾನ ಮಾನದ, ಅವನಿಗಿಂತ ಹೆಚ್ಚಿನ ಅಂತಸ್ತು ಇಲ್ಲದವನಿಗೆ ಮದುವೆ ಮಾಡಿಕೊಡುವುದೆಂದರೆ ಅವಳನ್ನು ವ್ಯರ್ಥ ಒಗೆದುಬಿಟ್ಟಂತೆಯೇ !'

'ಹಾಗಾದರೆ ಅದೇಕೆ ಮಾಡಬೇಕು ?' ಆಕೆ ಕೇಳಿದಳು.

'ಏಕೆಂದರೆ ? ನಿನಗೆ ಚೆನ್ನಾಗಿ ಗೊತ್ತು. ಅದು ನಾನು ಗಂಭೀರವಾಗಿ ಮಾಡಿದ ಪ್ರತಿಜ್ಞೆಗಾಗಿ ; ಆ ಪ್ರತಿಜ್ಞೆ ನಾನೇಕೆ ಮಾಡಿದೆ? ಅವನ ಜೈಲ್ಸ ವಿಂಟರ ಬೋರ್ನನ ತಂದೆಗೆ ನಾನು ಒಂದು ಭಯಂಕರ ಅನ್ಯಾಯ ಮಾಡಿದ್ದೆ. ಆ ತಪ್ಪು ನನ್ನ ಅಂತಃಕರಣದ ಮೇಲೆ ಒಂದು ಭಾರೀ ಓಜ್ಜೆಯಾಗಿ ಕೂತಿದೆ. ಈಗ ಜೈಲ್ಸ ಅವಳನ್ನು ಮನಸಾರೆ ಮೆಚ್ಚಿದ್ದಾನೆಂದು ಕಂಡಂದಿನಿಂದ ನನಗೆ ಆ ಅನ್ಯಾಯದ ಪರಿಮಾರ್ಜನೆಗೆ ಒಂದು ಯೋಜನೆ ಹೊಳೆಯಿತು. ಆಗಿನಿಂದ ಮನಸ್ಸು ತುಸು ಹಗುರೆನಿಸಹತ್ತಿದೆ.

'ತಂದೆಗೆ ಅನ್ಯಾಯ ?' ಶ್ರೀಮತಿ ಮೆಲಬರಿ ಪ್ರಶ್ನಿಸಿದಳು.

'ಅಹುದು, ಅವನಿಗೆ ಘೋರ ಅನ್ಯಾಯ ಮಾಡಿದ್ದೆ'. ಅವಳ ಗಂಡ ಅಂದನು, 'ಆ ಬಗ್ಗೆ ನಾನು ನಿನಗೆ ಹೇಳಿದ್ದುಂಟು'.

'ಸರಿ. ಹಾಗಾದರೆ, ಆ ಬಗ್ಗೆ ಈ ರಾತ್ರೆಗೆ ಆ ವಿಚಾರ ಬೇಡ'. ಆಕೆ ಒತ್ತಾಯಪಡಿಸಿದಳು, 'ಒಳಗೆ ಬನ್ನಿ'.

'ಛೇ ಛೇ. ಇಲ್ಲಿ ಹವ ತಂಪಿದೆ. ತಲೆ ತಂಪಾಗುತ್ತದೆ. ನಾನಿಲ್ಲಿ ಬಹಳ ಹೊತ್ತು ನಿಲ್ಲುವುದಿಲ್ಲ'.

ಕೆಲಹೊತ್ತು ಆತ ಮೌನವಾಗಿದ್ದನು. ಅವನ ಈ ಮಗಳ ತಾಯಿ, ಮೊದಲಿನ ಹೆಂಡತಿ, ಮೊದಲು ವಿಂಟರ ಬೋರ್ನನ ತಂದೆಗೆ ಗೊತ್ತಾಗಿದ್ದಳು. ಆತ ಅವಳನ್ನು ಅತ್ಯಂತವಾಗಿ ಪ್ರೀತಿಸುತ್ತಿದ್ದನು. ಆದರೆ ಮೆಲಬರಿಯು ಅವಳನ್ನು ಹಿರಿಯ ವಿಂಟರ ಬೋರ್ನನಿಂದ ಏನೋ ಠಕ್ಕು ಮಾಡಿ ಕೈ ಚಳಕದಿಂದ ಗೆದ್ದುಕೊಂಡನು. ಏಕೆಂದರೆ ಅವಳನ್ನು ತಾನೇ ಮದುವೆಯಾಗಬೇಕೆಂದು ಅವನ ಆಸೆ ಇತ್ತು. ಇದರಿಂದ ಆ ಇನ್ನೊಬ್ಬ ಪ್ರೇಮಿಯ ಬಾಳು ಹುಳಿಯಾಯಿತು ; ಹಾಳಾಯಿತು. ಆತ ಮುಂದೆ ಜೈಲ್ಸನ ತಾಯಿಯನ್ನೇ ಮದುವೆಯಾದ. ಜೈಲ್ಸ ಹುಟ್ಟಿದ. ಆದರೂ ಆ ಮದುವೆ ಅರೆಮನಸ್ಸಿನ ಹದಗೆಟ್ಟ ಬದುಕಾಗಿತ್ತು. ಇದನ್ನೆಲ್ಲ ಮೆಲಬರಿ ಹೆಂಡತಿಗೆ ಮತ್ತೆ ಜ್ಞಾಪಿಸಿಕೊಟ್ಟನು. ಇದೆಲ್ಲ ಹಳೆಯ ಕತೆ ಮಾರ್ಟಿಗೂ ಗೊತ್ತು.

ಆದರೆ ಮುಂದೆ ಮೆಲಬರಿಗೆ ಕೃತಕರ್ಮಕ್ಕಾಗಿ ಪಶ್ಚಾತ್ತಾಪವಾಗತೊಡಗಿತು. ಕಾಲ

ಕಳೆದಂತೆ, ಈ ಮಕ್ಕಳು ಬೆಳೆದಂತೆ, ಅವರು ಒಬ್ಬರನ್ನೊಬ್ಬರು ಸಲಿಗೆಯಿಂದ ಅಂಟಿಕೊಂಡದ್ದು ಕಂಡು ಆತ ನಿರ್ಧರಿಸಿಯೇ ಬಿಟ್ಟ; ತಾನು ತಂದೆಗೆ ಮಾಡಿದ ಅನ್ಯಾಯವನ್ನು ಅವನ ಮಗನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟು ತೊಳೆಯ ಬೇಕು, ಕಳೆಯಬೇಕು. ಮತ್ತು ಈ ಕಾಣಿಕೆಯ ಬೆಲೆ ಹೆಚ್ಚಿಸಲಿಕ್ಕೆ ಅವಳಿಗೆ ಅತ್ಯುತ್ತಮ ಶಿಕ್ಷಣವನ್ನು ಕೊಡಬೇಕು. 'ಈಗಲೂ ನನ್ನದು ಅದೇ ಸಂಕಲ್ಪ' ಮೆಲಬರಿ ಹೆಂಡತಿಗೆ ತಿಳಿಸಿದನು.

'ಹಾಗಾದರೆ ಹಾಗೆಯೇ ಮಾಡು' ಆಕೆ ಅನುಮೋದಿಸಿದಳು.

'ಆದರೆ ಇವೆಲ್ಲ ಸಂಗತಿ ನನ್ನನ್ನು ಕಾಡುತ್ತವೆ', ಆತ ಗೊಣಗುಟ್ಟಿದನು. 'ಏಕೆಂದರೆ ನನ್ನ ಪಾಪಕ್ಕಾಗಿ ನಾನು ಆಕೆಯನ್ನು ಬಲಿಕೊಡುತ್ತಿದ್ದೇನೋ — ಎಂದು ಅನಿಸುತ್ತದೆ. ನನಗೆ ಅವಳ ನೆನಪು ಉಮ್ಮಳಿಸಿ ಬರುತ್ತದೆ. ಮತ್ತು ಆಗೆಲ್ಲ ನಾನು ಇಲ್ಲಿ ಬರುತ್ತೇನೆ, ಇದನ್ನು ನೋಡಲಿಕ್ಕೆ. ಈಗಲೂ ಇದಕ್ಕಾಗಿಯೇ ಬಂದಿದ್ದು'.

ಹೀಗೆಂದು ಅವನು ಹೆಂಡತಿಯ ಕೈಯಿಂದ ಮೇಣದ ಬತ್ತಿಯನ್ನು ಎತ್ತಿಕೊಂಡು ನೆಲಕ್ಕೆ ಹತ್ತಿರವಾಗಿ ಹಿಡಿದನು. ಮತ್ತು ಅಲ್ಲಿ ಆ ತೋಟದ ದಾರಿಯಲ್ಲಿ ಬಿದ್ದಿದ್ದ ಒಂದು ಹಂಚನ್ನು ಆಚೆಗೆ ಸರಿಸಿದನು. 'ಇದು ಅವಳ ಬೂಟಿನ ಗುರುತು. ಮಿದು ಮಣ್ಣಿನಲ್ಲಿ ಅಚ್ಚೊತ್ತಿದೆ. ತಿಂಗಳುಗಟ್ಟಲೆ ಆಯಿತು. ಅವಳು ನಮ್ಮನ್ನು ಅಗಲಿ ಶಾಲೆಗಾಗಿ ಹೋಗುವಾಗ ಈ ದಾರಿಯಿಂದ ಆ ದಿನ ಓಡುವಾಗ ಈ ಹೆಜ್ಜೆ ಗುರುತು ಇಲ್ಲಿ ಮೂಡಿತು. ಅದನ್ನು ನಾನು ಈ ಹಂಚಿನಿಂದ ಮುಚ್ಚಿಟ್ಟೆ. ಆಕೆ ಹೊರಟು ಹೋದ ಮೇಲೆ ಅದನ್ನು ಆಗಾಗ್ಗೆ ನೋಡಿಕೊಳ್ಳುತ್ತೇನೆ. ಈ ಬಡವನಿಗೋಸ್ಕರ ಅವಳ ಬಲಿ ಏಕೆ ಕೊಡಬೇಕು?'

ಆಗ ಹೆಂಡತಿಯು ಅಂದಳು, 'ಇದೇನು ಅಂಥ ಬಲಿದಾನವಲ್ಲ. ಜೈಲ್ಸ ಅವಳನ್ನು ಪ್ರೀತಿಸುತ್ತಾನೆ. ಆತ ಪ್ರಾಮಾಣಿಕನಿದ್ದಾನೆ. ಒಳ್ಳೆಯ ನೇರ ನಡತೆಯುಳ್ಳವ ನಿದ್ದಾನೆ. ಅವಳು ಅವನನ್ನು ಪ್ರೋತ್ಸಾಹಿಸುತ್ತಿದ್ದರೆ, ಅದಕ್ಕೂ ಹೆಚ್ಚೇನು ನೀವು ಬಯಸುವಿರಿ?'

'ಏನು ಬಯಸುವೆನೋ ಖಚಿತವಾಗಿ ಗೊತ್ತಿಲ್ಲ. ಅಲ್ಲ ಖಚಿತವಾಗಿ ಇಂತಹದೇ ಎಂದು ನಾನು ಏನೂ ಬಯಸುವುದೂ ಇಲ್ಲ. ಆದರೆ ಅವಳಿಗೆ ಇನ್ನೂ ಅನೇಕ ಬಗೆಯ ಬದುಕು ಶಕ್ಯವಿದೆ. ಅದೇಕೆ? ಮಿಸೆಸ್ ಚಾರ್ಮಂಡ ವಿದೇಶಕ್ಕೆ ಹೊರಟಿದ್ದಾಳೆ. ಅವಳಿಗೆ ಜತೆಯಾಗಲು ಒಬ್ಬ ಸುವಿದ್ಯ ಸುಸಂಸ್ಕೃತ ತರುಣಿ ಬೇಕಂತೆ. ಅವಳು ನಮ್ಮ ಗ್ರೇಸಳನ್ನು ಜಿಗಿದೆತ್ತಿಕೊಳ್ಳಬಹುದು' ಅಂದನು ಮೆಲ್ಬರಿ.

'ಅದೆಲ್ಲಾ ಅನಿಶ್ಚಿತ. ಖಂಡಿತವಾಗಿ ಇದ್ದುದಕ್ಕೇ ಅಂಟಿಕೊಳ್ಳಿರಿ' ಹೆಂಡತಿ ಸಲಹೆ ಕೊಟ್ಟಳು.

'ಹೌದು, ಹೌದು.' ಆತ ಒಪ್ಪಿದ, 'ಅಲ್ಲದೆ, ಆಗುವುದೆಲ್ಲ ಒಳಿತೇ ಆಗುವದೆಂದು

ನನ್ನ ಭರವಸೆ. ಅವರಿಬ್ಬರನ್ನು ಆದಷ್ಟು ಬೇಗ ಮದುವೆ ಮಾಡಿ ಹಾಕಿದರೆ ನನಗೆ ನಿಶ್ಚಿಂತೆ; ನೆಮ್ಮದಿ.' ಆತ ಆ ಪುಟ್ಟ ಪಾದಮುದ್ರೆಯನ್ನೇ ನೋಡುತ್ತ ನಿಂತ. 'ಅಲ್ಲ ಅವಳು ಸಾಯುತ್ತಿದ್ದರೆ, ಸತ್ತೇ ಹೋದರೆ, ಈ ದಾರಿಯಲ್ಲಿ ಮತ್ತೆ ತಿರುಗಿ ನಡೆಯಲಾರದೆ ಹೋದರೆ?'

'ಛೇ ಉಂಟೇ? ಅವಳು ಪತ್ರ ಹಾಕುವಳು. ನೀವು ನಂಬಿರಿ. ಬನ್ನಿ ಒಳಗೆ. ಹೀಗೆ ಇಲ್ಲಿ ನಿಂತು ಚಿಂತಿಸಿ ತಲೆ ಹಾಳು ಮಾಡಿಕೊಳ್ಳುವುದು ತಪ್ಪು!' ಹೆಂಡತಿಯು ಒತ್ತಾಯಪಡಿಸಿದಳು.

ಒತ್ತಾಯಕ್ಕೆ ಆತ ಒಪ್ಪಿದ. ಆದರೆ ಹಾಗೆ ಚಿಂತಿಸದೆ ಇರಲಾರ. 'ಅವಳು ಬರೆಯಲಿ ಬಿಡಲಿ. ನಾನು ಕೆಲವು ದಿನಗಳಲ್ಲಿ ಹೋಗಿ ಅವಳನ್ನು ಕರೆದುಕೊಂಡೇ ಬರುತ್ತೇನೆ.' ಹೀಗೆ ಹೇಳಿ ಆ ಬೂಟಿನ ಅಚ್ಚನ್ನು ಹಂಚಿನಿಂದ ಮತ್ತೆ ಮುಚ್ಚಿಟ್ಟು ಹೆಂಡತಿಯೊಂದಿಗೆ ಮನೆಯೊಳಗೆ ಹೊಕ್ಕಿದನು.

ಮಧ್ಯರಾತ್ರಿ ಕಳೆದ ಮೇಲೂ ಮಗಳ ಪಾದಮುದ್ರೆಯನ್ನು ಧೇನಿಸಲಿಕ್ಕೆ ಹೊರಬೀಳುವಷ್ಟು ಹಳಹಳಿಸುವ ಹೃದಯ ಮೆಲ್ಬರಿಯದು. ಆತ ಅಷ್ಟು ದುರ್ದೈವಿ. ಆದರೆ ಇಂಥ ಹಳಹಳ ಕಳವಳಗಳನ್ನು ಪ್ರಕೃತಿಯ ಆಡಳಿತವು ಲೆಕ್ಕಿಸುವದಿಲ್ಲ. ಅದು ಹೃದಯಗಳನ್ನು, ಅವು ಮುದಿಯಿರಲಿ ಎಳೆಯಿರಲಿ, ಮೆಟ್ಟಿಯೇ ತನ್ನ ನಿರ್ವಾಹ ನಡೆಯಿಸುತ್ತದೆ.

ಮಾರ್ಟಿಯ ಹೃದಯವೂ ಅದರ ಪೆಟ್ಟಿಗೆ ಗಾಸಿಯಾಯಿತು. ಅವಳಿಗೆ ಮೆಲ್ಬರಿಗಿಂತ ತನ್ನ ಬದುಕೇ ಎಲ್ಲ ಅರಿವಿನ ಕೇಂದ್ರವಾಗಿತ್ತು. ಆ ಕೇಂದ್ರದ ಮರ್ಮ ಬಿಂದುವನ್ನೇ ಈ ಪ್ರಕರಣವು ನಾಟಿತು. ಆ ಗಾಯ, ಆ ನೋವು ಹೊತ್ತುಕೊಂಡು ಆಕೆ ಹಿಂದಿರುಗಿದಳು.

'ಇದೇ, ಇದೇ ಆ ರಹಸ್ಯ, ಹಾಗಾದರೆ,' ಮಾರ್ಟಿ ಪಿಸುಗುಟ್ಟಿದಳು, 'ನನಗೂ ಇದು ಅರೆ ಹೊಳೆದಿತ್ತು. ಇನ್ನೂ ಜೈಲ್ಸ ನನಗಾಗಿ ಇಲ್ಲ!'

ಅವಳು ತನ್ನ ಗುಡಿಸಲಿಗೆ ಮರಳಿದಳು. ಕನ್ನಡಿಯ ಚೌಕಟ್ಟಿನಿಂದ ಅವೆರಡು ಪವನಗಳು ಅವಳನ್ನೇ ದುರುದುರು ದಿಟ್ಟಿಸುತ್ತಿದ್ದವು. ಅವಳು ಏನೋ ತನ್ಮಯ ಚರ್ಯೆಯಿಂದ, ಕೋಡಿವರಿಯುವ ಕಣ್ಣೀರಿನಿಂದ, ಕತ್ತರಿಯನ್ನು ಎತ್ತಿಕೊಂಡಳು ಮತ್ತು ಮರುಕವಿಲ್ಲದೆ ತನ್ನ ಉದ್ದನಕೇಶ ಕಲಾಪಗಳನ್ನು ಕರಕರನೆ ಕತ್ತರಿಸಿಕೊಳ್ಳಲು ಆರಂಭಿಸಿದಳು. ಕತ್ತರಿಸಿ ಚೆಲ್ಲಿದ ಹೆಳಲುಗಳನ್ನೆಲ್ಲ ಆ ನಾಪಿತ ಪರಕೊಮ ಹೇಳಿ ದಂತೆಯೇ ತುದಿಗಳನ್ನೆಲ್ಲ ಜೋಡಿಸಿ ಸರಿಯಾಗಿ ಚವರಿಗಳಂತೆ ಗಂಟು ಕಟ್ಟಿ ಇಡ ಹತ್ತಿದಳು. ಆಕೆ ಮತ್ತೆ ಆ ಕನ್ನಡಿಯತ್ತ ಕಣ್ಣೆತ್ತಿ ನೋಡಲೊಲ್ಲಳು. ಕೇವಲ ಆತ್ಮ-ಕಾರುಣ್ಯವೇ ಇದಕ್ಕೆ ಕಾರಣ. ತನ್ನ ಕುರಿತೇ ಅವಳಿಗೆ ಕನಿಕರವೆನಿಸಿತು. ಕನ್ನಡಿಯಲ್ಲಿ ಕಾಣುವುದೇನು? ಹೆಳಲು ಕತ್ತರಿಸಿ ತೆಗೆದ ಗುಂಡು ತಲೆಯು ಅವಳನ್ನು ನಿಟ್ಟಿಸಿ ಅಣಕಿಸುವದು ಆ ನೋಟ ಅವಳ ಎದೆಯನ್ನೇ ಒಡೆಯಬಹುದು.

ಆದ್ದರಿಂದ ಕನ್ನಡಿಯತ್ತ ಕಣ್ಣುಹಾಯಿಸಿದೆ ಮಾರ್ಟಿ ಒಂದೇ ಸಮನೆ ತನ್ನ ಚವರಿ ಕಟ್ಟಿಡುವ ಕೆಲಸ ಮುಂದುವರಿಸಿದಳು. ಉದ್ದನ ಕಚಕಲಾಪಗಳ ಒಂದೊಂದು ಗಂಟನ್ನು ಹಾಳೆಯಲ್ಲಿ ಕಟ್ಟಿ ಸೀಲು ಮಾಡಿಟ್ಟಳು. ಅನಂತರ ಬೆಂಕಿಯನ್ನು ಆರಿಸಿ ಹಾಸುಗೆಯಲ್ಲಿ ಬಿದ್ದಳು. ಆಗಲೂ ನಸುಕಿಗೇ ಏಳಬೇಕೆಂಬ ಹಂಬಲ. ಅದಕ್ಕಾಗಿ ಮೇಣಬತ್ತಿಗೆ ಒಂದು ದಾರ ಕಟ್ಟಿ ಅದಕ್ಕೆ ಭಾರದ ಕಲ್ಲೊಂದು ತೂಗುಬಿಟ್ಟು ಅದು ಆ ಮೇಣವನ್ನು ಕತ್ತರಿಸಿ ಟಪ್ಪನೆ ಬೀಳುವ ಸದ್ದು ಏಳುವ ಸೂಚನೆ—ಅವಳ ಮಟ್ಟಿಗೆ 'ಅಲಾರಾಂ' ಗಂಟೆ!—ಆಗಬೇಕೆಂದು ಹೂಡಿಟ್ಟು ನಿದ್ದೆ ಹೋದಳು.

ಆದರೆ ಅಂಥ ಅಲಾರಾಂ ಮಾರ್ಟಿಗೆ ಆ ರಾತ್ರೆ ಅವಶ್ಯವೇ ಇದ್ದಿಲ್ಲ. ಅವಳಿಗೆ ನಿದ್ದೆ ಹತ್ತಬೇಕಲ್ಲವೇ? ಐದು ಗಂಟೆಯ ತನಕ ಹಸೆಯಲ್ಲಿ ಹೇಗೋ ಉರುಳಾಡಿದಳು. ಮಾಡಿನ ಚಪ್ಪರದ ಕನ್ನುಗಳಿಂದ ಗುಬ್ಬಿಗಳು ಚಿಲಿಪಿಲಿಗುಟ್ಟುವ ಸದ್ದು ಕೇಳಿಬಂದಿತು. ಕೂಡಲೇ ಮಾರ್ಟಿ ಎದ್ದಳು, ಮತ್ತು ಕೆಳಗಿಳಿದು ಬಂದಳು.

ಇನ್ನೂ ಕತ್ತಲೆ ಕವಿದಿತ್ತು. ಆದರೆ ಅವಳ ಚಲನವಲನ ಯಾಂತ್ರಿಕವಾಗಿ ನಡೆದಿದ್ದವು. ಹೊಸ ಹಗಲಗೆಲಸದ ಸಿದ್ಧತೆಗೆ ಸ್ವಯಂಚಾಲಿತವಾಗಿ ನಡೆಯುವ ಗರತಿಯರ ಚಟುವಟಿಕೆಗಳು ಅವು. ಆಗಲೇ ಮಿಸ್ಟರ ಮೆಲಬರಿಯ ಗಾಡಿಗಳ ಗಡಗಡ ಸದ್ದು ಕೇಳಿಸಿತು. ಅಲ್ಲಿಯೂ ಹೊಸಹಗಲಿನ ಹೋರೆ ಆರಂಭವಾಗಿತ್ತು. ಆಕೆ ನಿನ್ನೆಯ ಚಿಕ್ಕೆ ಚೂರುಗಳನ್ನು ಹಿಡಿಹಿಡಿಯಾಗಿ ಬೆಂಕಿಗೆ ಚೆಲ್ಲಿದಳು. ಬೆಂಕಿ ಭುಗ್ಗನೆ ಉರಿದೆದ್ದಿತು. ಅದರ ಹೊಂಬೆಳಕಿನಲ್ಲಿ ಗೋಡೆಯ ಮೇಲೆ ಅವಳ ಗುಂಡಂ ತಲೆ, ಸಣ್ಣ ಗಾತ್ರದ ಮಂಡೆಯ ಮಂಡಲ, ನೆಳಲಾಗಿ ಮೂಡಿತು. ಇದೇ ಸಮಯಂ ಬಾಗಿಲಲ್ಲಿ ಒಂದು ಹೆಜ್ಜೆಯ ಸದ್ದು ಆಯಿತು.

'ಯಾರಾದರೂ ಎದ್ದಿದ್ದಾರೆಯೇ?' ಒಂದು ದನಿ ಕೇಳಿಸಿತು. ಆ ದನಿ ಅವಳಿಗೆ ಚೆನ್ನಾಗಿ ಪರಿಚಿತ.

'ಹೌದು. ಮಿಸ್ಟರ್ ವಿಂಟರಬೋರ್ನ!' ಅಂದಳು ಮಾರ್ಟಿ. ತಲೆಯನ್ನು ಪುಗ್ಗಿ ಟೊಪ್ಪಿಗೆಯಿಂದ ಪೂರ್ತಿ ಮುಚ್ಚಿಕೊಳ್ಳುತ್ತ. ಈಗ ಕತ್ತರಿಯ ಅತ್ಯಾಚಾರದ ಪರಿಣಾಮವೇನೂ ಕಾಣಿಸುವಂತೆ ಇದ್ದಿಲ್ಲ. ಕಿವಿವರೆಗೆ ಟೊಪ್ಪಿಗೆ ಕೂತಿತ್ತು. ಒಳಗೆ ಬನ್ನಿ.'

ಬಾಗಿಲು ಒಳಗಡೆಗೆ ತೆರೆಯಿತು. ಮತ್ತು ವಿಂಟರಬೋರ್ನ ಒಳಗೆ ಚಾಪೆಯ ಮೇಲೆ ಹೆಜ್ಜೆ ಇಟ್ಟನು. ಆತ ಪ್ರೇಮಿ ಎನಿಸುವಷ್ಟು ಎಳೆವಯಸ್ಸಿನವನಲ್ಲ; ವ್ಯವಹಾರಸ್ಥನಾಗಿ ಕಾಣುವಷ್ಟು ಪ್ರಾಯವೇರಿದವನೂ ಇದ್ದಿಲ್ಲ. ಆದರೆ ಇವೆರಡೂ ಭೂಮಿಕೆಗಳನ್ನು ಅವನು ಕೆಲಮಟ್ಟಿಗೆ ನಿರ್ವಹಿಸುತ್ತಿದ್ದನು. ಅವನ ಕಣ್ಣಿನಲ್ಲಿ ತಾಳ್ಮೆ ಇತ್ತು. ಮುಖದಲ್ಲಿ ಸಂಯಮವಿತ್ತು. ಅವನು ಕೈಯಲ್ಲಿ ಒಂದು ಕಂದೀಲು ಹಿಡಿದಿದ್ದನು. ಅದರ ಬರುಡೆ ಗಾಜಿನದಲ್ಲ; ಅದಕ್ಕೆ ತುಂಬ ತೂತುಗಳು. ಅದು ತೂಗಾಡುವಾಗ ಗೋಡೆಯ ಮೇಲೆ ವಿಚಿತ್ರ ನೆರಳುಗಳು ಕುಣಿಯುತ್ತಿದ್ದವು.

ಅವನು ಆ ಹಾದಿಯಿಂದ ಹಾಯುವಾಗ ಒಳಗೆ ಬಂದಿದ್ದನು. ವಿಶೇಷ ಕೆಲಸವಿದ್ದಿಲ್ಲ. ಇಷ್ಟೇ ಅವಳ ತಂದೆಯು ಕರಾರಿನಂತೆ ಗೂಟಗಳನ್ನು ಸಿದ್ಧಮಾಡಿಲ್ಲ ವಾದರೆ ಮೆಲಬರಿ ಇನ್ನೊಂದು ವಾರ ಅವಧಿಕೊಡುವವನಿದ್ದನು. ಏಕೆಂದರೆ ಅವಳ ತಂದೆಯು ಮೈಯಲ್ಲಿ ನೆಟ್ಟಗಿದ್ದಿಲ್ಲ.

'ಆದರೆ ಅವು ಸಿದ್ಧವಾಗಿವೆ', ಮಾರ್ಟಿ ಅಂದಳು; 'ಗೂಟಗಳ ಮೂಟೆಗಳೆಲ್ಲ ಗಾಡಿಗಳ ಸಾಲೆಯಲ್ಲಿ ಬಿದ್ದಿವೆ.'

'ಸಿದ್ಧವಾಗಿವೆ?' ಅವನು ಎತ್ತಿ ನುಡಿದನು, 'ನಿನ್ನ ತಂದೆ ಕೆಲಸ ಮಾಡಲಾರ ದಷ್ಟು ಕಾಯಿಲೆ ಬಿದ್ದಿಲ್ಲ ಹಾಗಾದರೆ?'

'ನೀನು ಅತ್ತ ಕಡೆಗೇ ಹೋಗುತ್ತಿದ್ದರೆ, ಅವು ಎಲ್ಲಿ ಇರುವವೆಂಬುದನ್ನು ಕಾಣಿಸುತ್ತೇನೆ'. ಅವಳು ಅವನ ಪ್ರಶ್ನೆಯನ್ನು ತೇಲಿಸಿ ನುಡಿದಳು.

ಇಬ್ಬರೂ ಹೊರಗೆ ಬಿದ್ದು ಜತೆಗೆ ಸಾಗಿದರು. ಒಬ್ಬರಿಗೊಬ್ಬರು ಹೇಳಿಕೊಳ್ಳುವ ವಿಷಯವೇನೂ ಇದ್ದಿಲ್ಲ. ಆದ್ದರಿಂದ ಅವರು ಮಾತನಾಡದೇ ಸಾಗಿದರು. ಇಬ್ಬರ ಬದುಕೂ ಬಿಡಿಬಿಡಿಯಾಗಿದ್ದಂತೆ ತೋರುತ್ತಿತ್ತು — ಆ ನಸುಕಿನ ನರೆಯ ಮಬ್ಬಿನಲ್ಲಿ. ಆದರೆ ಅವರಿಬ್ಬರ ಬಾಳಿನ ಎಳೆಗಳೂ ಭೂಮಿಗೋಲವನ್ನೆ ಸುತ್ತು ಕೊಂಡಿದ್ದ ಮಾನವತೆಯ ಜಾಡಿನ ಹಾಸುಹೊಕ್ಕಿನಲ್ಲಿಯೇ ಹೆಣೆದುಕೊಂಡಿದ್ದವು.

ಗಾಡಿಯ ಸಾಲೆಯನ್ನು, ಮೆಲಬರಿಯ ಶೆಡ್ಡನ್ನು ಇಬ್ಬರೂ ತಲ್ಪಿದರು. ಮಾರ್ಟಿ ವಿಂಟರಬೋರ್ನನಿಗೆ ಗೂಟಗಳ ಮೂಟೆಗಳನ್ನು ಕಾಣಿಸಿದಳು. ಆತ ಅದನ್ನು ಮಾತು ಇಲ್ಲದೆ ದಿಟ್ಟಿಸಿ ನೋಡಿದ. ಅನಂತರ ಆಕೆಯ ಕಡೆಗೆ ನೋಡಿದ.

'ಮಾರ್ಟಿ, ನ ನ ಗ ನಿ ಸು ತ್ತ ದೆ...' ಎಂದು ಇಷ್ಟೇ ಅಡಿ ತಲೆಯನ್ನು ಅಲ್ಲಾಡಿಸಿದನು.

'ಏನು?'

'... ನೀನೇ ಈ ಕೆಲಸವನ್ನೆಲ್ಲ ಮಾಡಿರುವಿ'.

'ಸರಿ. ಆದರೆ ಅದನ್ನು ಯಾರಿಗೂ ಹೇಳಬೇಡ'. ಅವಳು ಬಿನ್ನಹದ ಬಾಯಿ ಯಿಂದ ಅಡಿದಳು; 'ನಾನೇ ಇದನ್ನೆಲ್ಲ ಮಾಡಿದ್ದೇನೆಂದು ತಿಳಿದರೆ ಮಿಸ್ಟರ ಮೆಲಬರಿ ಈ ಕೆಲಸವನ್ನು ಒಪ್ಪಿಕೊಳ್ಳಲಿಕ್ಕೇ ಇಲ್ಲ'.

'ಆದರೆ ನೀನಾದರೂ ಇದನ್ನು ಮಾಡಲು ಹೇಗೆ ಕಲಿತೆ? ಇದೊಂದು ಕಸುಬು'.

'ಕಸಬು'! ಆಕೆ ಅಂದಳು, 'ಇದನ್ನು ನಾನು ಎರಡು ತಾಸುಗಳಲ್ಲಿ ಕಲಿಯ ಬಲ್ಲೆ!'

'ಛೇ ಛೇ. ಮಾರ್ಟಿ, ನೀ ಕಲಿಯಲಾರೆ'. ವಿಂಟರಬೋರ್ನ ಉದ್ಗರಿಸಿದನು. ಕಂದೀಲು ಕೆಳಗೆ ಹಿಡಿದು ಆತ ಆ ಚೊಕ್ಕ ಕೆತ್ತಿದ ಗೂಟಗಳನ್ನು ನೋಡಿದನು. 'ಮಾರ್ಟಿ ಒಣ ಪ್ರಶಾಂತ ದನಿಯಲ್ಲಿ ಆತ ಮುಂದುವರಿಸಿದನು. 'ನಿನ್ನ ತಂದೆ ೪೦ ವರ್ಷಗಳ

ಅನುಭವದಿಂದಲೂ ಇದಕ್ಕಿಂತ ಚೊಕ್ಕವಾಗಿ ಗೂಟ ಕೆತ್ತಿದ್ದಿಲ್ಲ! ಇವು ಮಾಡು ಚಪ್ಪರಗಳಿಗಲ್ಲ, ಮಂಚಮಣೆಗಳಂಥ ಬಡಿಗತನದ ಕೆಲಸಕ್ಕೆ ಬರುವಷ್ಟು ಚೆನ್ನಾಗಿವೆ. ಇಲ್ಲ, ನಾನು ಯಾರಿಗೂ ಹೇಳುವುದಿಲ್ಲ. ಆದರೆ ನಿನ್ನ ಕೈಗಳನ್ನು ಕಾಣಿಸು, ನೋಡೋಣ—ಪಾಪ, ಬಡಕೈಗಳು!' ಅವನ ದನಿಯಲ್ಲಿ ಮರುಕವಿತ್ತು. ಆದರೆ ಮರುಕದಲ್ಲಿ ನಿಷೇಧದ ನಿಷ್ಠುರವೂ ಇತ್ತು. ಕೈಗಳನ್ನು ಕಾಣಿಸಲು ಮಾರ್ಟಿಗೆ ಮನಸ್ಸಿಲ್ಲ. ಆಗ ಅವನು ಒಂದನ್ನು ತಾನೇ ಎತ್ತಿ ನೋಡಿ ಪರೀಕ್ಷಿಸಿವನು — ತನ್ನದೇ ಕೈಯನ್ನು ನೋಡಿಕೊಳ್ಳುವಂತೆ. ಅವಳ ಬೆರಳುಗಳ ಮೇಲೆ ಗುಳ್ಳೆಗಳು ಎದ್ದಿದ್ದವು.

'ಅವು ವಾಡಿಕೆಯಿಂದ ಬಿರುಸಾಗುವುವು'. ಆಕೆ ಸ್ಪಷ್ಟೀಕರಣ ಕೊಟ್ಟಳು. 'ಏಕೆಂದರೆ ಅಪ್ಪ ಹಾಸಿಗೆಯನ್ನೇ ಹಿಡಿದು ಬಿದ್ದರೆ ನಾನೇ ಈ ಕೆಲಸ ಸಾಗಿಸಿಕೊಂಡು ಹೋಗಬೇಕು. ಇನ್ನು ಇವನ್ನು ಗಾಡಿಯಲ್ಲಿ ಹೇರಲು ನಾನು ಸಹಾಯ ಮಾಡುತ್ತೇನೆ'.

ವಿಂಟರಬೋರ್ನ ಮಾತಾಡಲಿಲ್ಲ. ಕೈಯೊಳಗಿನ ಕಂದೀಲು ಕೆಳಗಿಟ್ಟು ಮಾರ್ಟಿ ಆ ಮೂಟೆಗಳನ್ನೆತ್ತಲು ಮುಂದೆ ಬಗ್ಗಿದಾಗ ಅವಳನ್ನು ಒಂದು ಮಗುವಿನಂತೆ ಎತ್ತಿ ತನ್ನ ಹಿಂಬದಿಗೆ ಇಟ್ಟನು. ಮತ್ತು ತಾನೇ ಮೂಟೆಗಳನ್ನು ಗಾಡಿಯಲ್ಲಿ ಒಗೆಯಲು ಸುರುಮಾಡಿದನು. 'ನಿನಗಿಂತ ನಾನೇ ಈ ಕೆಲಸಕ್ಕೆ ಲೇಸು' ಆತ ಅಂದನು. 'ಅಲ್ಲದೆ, ಮಂದಿ ಇದೀಗ ಇಲ್ಲಿಗೆ ಬರುತ್ತಾರೆ. ಆದರೆ, ಇದೇನು, ಮಾರ್ಟೀ? — ನಿನ್ನ ತಲೆಗೆ ಏನಾಗಿದೆ? ಅಯ್ಯೋ ದೇವರೇ, ನಿನ್ನ ತಲೆ ಮುದುಡಿ ಸಣ್ಣದಾಗಿಬಿಟ್ಟಿದೆ! ಬಾಗಿಲ ಕಂಬದ ಮೇಲಿಟ್ಟ ಸೇಬಿನ ಹಣ್ಣಿನಂತೆ ಕಾಣುತ್ತದೆ!'

ಮಾರ್ಟಿಯ ಎದೆ ಉಕ್ಕಿ ಬಂದಿತು. ಆದರೆ ಅವಳು ತುಟಿ ಬಿಚ್ಚದಾದಳು. ಕೊನೆಗೊಮ್ಮೆ ಅವಳಿಗೆ ಮರುಗಲು ಸಾಧ್ಯವಾಯಿತು—ಅದೂ ನೆಲವನ್ನು ನೋಡುತ್ತ. 'ನಾನು ನನ್ನನ್ನು ಕುರೂಪಿಯಾಗಿ ಮಾಡಿಕೊಂಡಿದ್ದೇನೆ — ತಿರಸ್ಕಾರಕ್ಕೆ ತಕ್ಕವಳಾಗಿ ಮಾಡಿಕೊಂಡಿದ್ದೇನೆ. ಮತ್ತೇನಿಲ್ಲ'.

'ಇಲ್ಲ ಇಲ್ಲ. ನೀನು ಬರೇ ನಿನ್ನ ತುರುಬನ್ನು ಕತ್ತರಿಸಿಕೊಂಡಿದ್ದೀಯೇ. ನನಗೀಗ ಗೊತ್ತಾಯಿತು'.

'ಹಾಗಾದರೆ ನೀನೇಕೆ ಬಾಗಿಲ ಕಂಬಗಳ ಮತ್ತು ಸೇಬು ಹಣ್ಣುಗಳ ವಿಷಯ ಮಾತಾಡಬೇಕು?

'ಸರಿ ನೋಡೋಣ. ಇತ್ತ ನೋಡು, 'ವಿಂಟರಬೋರ್ನ ಮಾರ್ಟಿಯ ತಲೆಯ ಪುಗ್ಗಿ ಟೋಪಿಯನ್ನು ಎತ್ತಿದನು. ಆದರೆ ಅವಳು ದಿಗ್ಗನೆ ಆ ನಸುಕಿನ ಮಬ್ಬು ಮುಸುಕಿನಲ್ಲಿ ದೂರ ಓಡಿದಳು. ವಿಂಟರಬೋರ್ನ ಅವಳನ್ನು ಬೆನ್ನಟ್ಟಲಿಲ್ಲ. ಅವಳು ನೇರವಾಗಿ ತನ್ನ ಮನೆಗೇ ಓಡಿದಳು; ಹೊಸ್ತಿಲಲ್ಲಿ ನಿಂತು ಹಿಂದಕ್ಕೆ ನೋಡಿದಳು. ಮಿಸ್ಟರ ಮೆಲಬರಿಯ ಆಳುಗಳು ಬಂದು ಗೂಟಗಳ ಮೂಟೆಗಳನ್ನು ಗಾಡಿಯಲ್ಲಿ ತುಂಬುತ್ತಿದ್ದರು. ಆ ಮಂಜುಗವಿದ ನಸುಕಿನಲ್ಲಿ ಅವರ ಕಂದೀಲುಗಳ ಜ್ಯೋತಿಗಳ ಸುತ್ತಲೆಲ್ಲ

ವರ್ತುಲಗಳೆದ್ದಿದ್ದವು—ದಿಟ್ಟಿಸಿ ದಾರಿನೋಡಿ ದಣಿದ ಕಣ್ಣುಗಳಂತೆ. ಅವರು ಕುದುರೆಗಳನ್ನು ಗಾಡಿಗೆ ಹೂಡುವ ತನಕ ಮಾರ್ಟಿ ಅತ್ತ ದಿಟ್ಟಿಸುತ್ತಲೇ ನಿಂತಳು. ಆ ಮೇಲೆ ಮನೆಯ ಒಳಗೆ ಹೋದಳು.

೪

ಹವೆಯು ಹಗಲಿನ ಹೊಳಪು ಸ್ಪಷ್ಟವಾಯಿತು. ಮಿಸ್ಟರ ಮೆಲಬರಿಯ ಮನೆ ನಿಚ್ಚಳವಾಗಿ ಕಾಣತೊಡಗಿತು. ಒಂದು ಚೌಕಿನ ಮೂರೂ ಬದಿಗಳನ್ನು ಆ ಹಳೆಯ ಮನೆ ವ್ಯಾಪಿಸಿ ನಿಂತಿತ್ತು. ಅದು ಸಾಕಷ್ಟು ವಿಶಾಲವಾಗಿತ್ತು. ಹಿಂದೊಮ್ಮೆ ಕಿರಿಯ ಹಿಂಟೊಕ್ ಹಿರಿಯದೇ ಆಗಿತ್ತು ಎಂಬುದರ ಸ್ಮಾರಕವಾಗಿತ್ತು — ಅಂಥ ಇನ್ನಿತರ ಹಳೆಯ ಬೀಡುಗಳ ಭಗ್ನಾವಶೇಷಗಳ ನಡುವೆ.

ಮಾರ್ಟಿ ಓಡಿಹೋದ ಮೇಲೆಯೂ ವಿಂಟರಬೋರ್ನ ಆ ಗಾಡಿಯ ಸಾಲೆಯಲ್ಲಿಯೇ ನಿಂತು ಉಳಿದನು. ಮೆಲಬರಿಯ ಮನೆಯೊಂದಿಗೆ ಈ ತರುಣನ ಸಂಬಂಧ ಇಂಥ ಹಲವು ಬಗೆಯಿಂದ ಕೂಡಿಬಂದಿತ್ತು. ಮಿಸ್ಟರ ಮೆಲಬರಿಯ ಮೊದಲನೆಯ ಹೆಂಡತಿ ಇವನ ತಂದೆಯ ಪ್ರೇಯಸಿಯಾಗಿದ್ದಳೆಂಬುದೊಂದೇ ಸಂಬಂಧವಲ್ಲ. ಇವನ ಅಬಚಿಯೊಬ್ಬಳು ಮೆಲಬರಿಯ ಸೋದರನನ್ನು ಮದುವೆಯಾಗಿ ಇಬ್ಬರೂ ಪರಸ್ಥಳಕ್ಕೆ ಎಲ್ಲಿಯೋ ಹೋಗಿ ನೆಲೆಸಿದ್ದರು. ಈ ಸಂಬಂಧದಿಂದ ವಿಂಟರಬೋರ್ನ ಬಡವನಾಗಿದ್ದರೂ, ಮೆಲಬರಿಗಳೊಂದಿಗೆ ಆತ್ಮೀಯತೆಯ ಆಪ್ತಾವ್ಯ ಸ್ಥಾಪಿಸಿದಂತೆ ಆಗಿತ್ತು.

ಇದರಿಂದಾಗಿ ಅವರಿಬ್ಬರಲ್ಲಿ ಒಂದು ವಿಚಿತ್ರ ಪಾಲುಗಾರಿಕೆಯು ನಡೆದು ಬಂದಂತೆ ಇತ್ತು. ಈ ಪಾಲುಗಾರಿಕೆಗೆ ಯಾವ ಕರಾರು ಪತ್ರವೂ ಇದ್ದಿಲ್ಲ. ಆದರೆ ಇದರಂತೆ ವಿಂಟರಬೋರ್ನ ಆಗಲಿ, ಮೆಲಬರಿ ಆಗಲಿ, ತನಗೆ ತೋಚಿದಂತೆ ಇನ್ನೊಬ್ಬನಿಗೆ ಅನ್ಯಾಯವಾಗದಂತೆ ಕೊಡು-ಕೊಳ್ಳುವ ಭಾವದಲ್ಲಿ ನಡೆದುಕೊಳ್ಳುತ್ತಿದ್ದನು. ಮೆಲಬರಿಯ ವ್ಯವಸಾಯ ಮರದ್ದು — ಇಮಾರತು ಕಟ್ಟಿಗೆ ಮತ್ತು ಬೆಟ್ಟದ ಸರಕಿನ ಧಂದೆ. ಅದರ ಒತ್ತಡ ಚಳಿಗಾಲದಲ್ಲಿ, ಸುಗ್ಗಿಯಲ್ಲಿ ಹೆಚ್ಚು. ವಿಂಟರಬೋರ್ನ ಸೇಬಿನ ಮತ್ತು ಸಿಡರ ಮದ್ಯ ತಯಾರಿಕೆಯ ಹೋರೆ ಮಾಡುತ್ತಿದ್ದನು. ಅವನಿಗೆ ಬೇಕಾಗುವ ಗಾಡಿ ಸಾರಿಗೆ ಇತರ ನೆರವೆಲ್ಲ ಮಾಗಿಯಲ್ಲಿ. ಶರತ್ಕಾಲದಲ್ಲಿ ಸೇಬಿನ ಹಣ್ಣು ಕೀಳುವ, ಬೀಳುವ ಹಂಗಾಮಿನಲ್ಲಿ ಮೆಲಬರಿ ತನ್ನ ಗಾಡಿಗಳನ್ನು, ಕುದುರೆಗಳನ್ನು, ಜವಾನರನ್ನು ಅವನಿಗೆ ಬಳಿಸಲಿಕ್ಕೆ ಕೊಡುತ್ತಿದ್ದನು. ಅವನೂ ಇದಕ್ಕೆ ಪ್ರತಿಯಾಗಿ ಮೆಲಬರಿಗೆ ಮರಕಡಿಯುವ ಹಂಗಾಮಿಯಲ್ಲಿ ಸಹಾಯ ಮಾಡುತ್ತಿದ್ದನು.

ಗಾಡಿ ಸಾಲೆಯಿಂದ ಹೊರಡಬೇಕೆನ್ನುವಷ್ಟರಲ್ಲಿ ಒಬ್ಬ ಹುಡುಗ ಬಂದ—ಮೆಲಬರಿಯಿಂದ ನಿರೂಪ ತೆಗೆದುಕೊಂಡು. ಮೆಲಬರಿಯು ಅವನನ್ನು ಕಾಣಬೇಕಿತ್ತು.

ಆತ ಬರುವತನಕ ತಡೆಯಬೇಕೆಂದು. ಮೆಲಬರಿಗಾಗಿ ಕಾಯಬೇಕಾಯಿತು. ಆ ತನಕ ವಿಂಟರಬೋರ್ನ ಆಚೆಗೆ ಗೂಟ ಕೆತ್ತುವ ಸಾಲೆಯಲ್ಲಿ ಹೋಗಿ ಕೆಲಸಕ್ಕೆ ಹತ್ತಿದ ಇಬ್ಬರು ಆಳುಗಳೊಂದಿಗೆ ಸೇರಿಕೊಂಡನು.

ಕಿರಿಯ ಹಿಂಟ್‌ಕ್‌ನಲ್ಲಿ ಕೊರತೆ ಬೀಳದ ಸರಕೆಂದರೆ ಉರುವಲ. ಚಳಿ ಕಾಸಲಿಕ್ಕೆ ಬೆಂಕಿಗೇನೂ ಬರಗಾಲವಿದ್ದಿಲ್ಲ. ಆ ಸಾಲೆಯಲ್ಲಿ ಚಕ್ಕೆಚೂರುಗಳ ದೊಡ್ಡ ಬೆಂಕಿ ಉರಿಯುತ್ತಿತ್ತು. ಅದರ ಬೆಳಕು ಏರುವ ಬಿಸಿಲಿನೊಂದಿಗೇ ಸೆಣಸಾಟಕ್ಕೆ ನಿಂತಂತೆ ಇತ್ತು. ಆ ಬೆಂಕಿಯ ಕೆಂಬೆಳಕು ಅಲ್ಲಿ ಹಲವಾರು ಮಂದಿಯನ್ನು ಸೆಳೆದು ತಂದಿತ್ತು. ಕರಗಸದ ಟಿಮೊಥಿ ಟಾಂಗ್ಸ್ ಮತ್ತು ಅವನ ಮಗ, ಮೆಲಬರಿಯ ನಿತ್ಯದ ಆಳು ಜಾನ್ ಅಪಜಾನ್, ಸಿಡರಗಾಣವಿಟ್ಟ ಗಾಡ ಕಾಟ್ರೀ ಮತ್ತು ನಮ್ಮ ವಿಂಟರಬೋರ್ನನ ಮುದಿಕೆಲಸದಾಳು ರಾಬರ್ಟ್ ಕ್ರೀಡ್ಲ್ — ಇವರೆಲ್ಲ ಆ ಅಗ್ನಿ-ಹೋತ್ರದ ದೀಕ್ಷಿತ ರಾಗಿದ್ದರು.

ಇವರಲ್ಲಿ ಕ್ರೀಡಲ್‌ನ ಬಗೆಗೆ ಎರಡು ಮಾತು ಹೇಳಲೇ ಬೇಕು. ಅವನನ್ನು ಪೂರ್ತಿ ಬಣ್ಣಿಸಲಿಕ್ಕೆ ಸೈನಿಕ, ನಾವಿಕ ಮತ್ತು ಬೇಟೆಯ ವೃತ್ತಾಂತಗಳ ಕಾಗದ ಪತ್ರಗಳೇ ಬೇಕು. ಅವನ ಮೈ ಮೇಲೆ ಇವೆಲ್ಲ ಅಂಗಿಗಳ ಕುರುಹುಗಳು ಇದ್ದವು. ಅವನ ಅಂಗಿಯ ಕೆಳಗಿಂದ ಕಳಚಿ ಒಗೆದ ಹಳೆಯ ಸೈನಿಕ ಕೋಟು ಇಣುಕು ಹಾಕುತ್ತಿತ್ತು. ಅದರ ಕೊರಳ ಪಟ್ಟಿಯೂ ಮೇಲಂಗಿಯ ಮೇಲೆ ಕಿವಿಯುತ್ತ ನಿಂತಿತ್ತು. ಅವನ ದೊಡ್ಡ ಬೂಟುಗಳು ಬೇಟೆಯ ಕತೆಯನ್ನು ಹೇಳಬಹುದಿತ್ತು. ಅವನ ಕಿಸೆಯೊಳಗಿನ ಚಾಕುವು ಯಾವನೋ ನಾವಿಕನ ಕಾಣಿಕೆಯಾಗಿತ್ತು. ಹೀಗೆ ಕಾಳಗ, ಬೇಟೆ ಮತ್ತು ಕಡಲ ಬದುಕಿನ ಅದ್ಭುತಗಳ ಆ ಕುರುಹುಗಳನ್ನೆಲ್ಲ ರಾಬರ್ಟ್ ಕ್ರೀಡಲ್‌ನು ತನ್ನ ತೀರಾ ಸಾಮಾನ್ಯ ಬದುಕಿನ ಯಾವ ಸಾಹಸ ಪ್ರಸಂಗಗಳೂ ಇಲ್ಲದ ಕೆಲಸಗಳ ಸೂಳಿನಲ್ಲಿ ಹೊತ್ತು ತಿರುಗುತ್ತಿದ್ದನು.

ಬೆಟ್ಟದ ಕೆಲಸಕ್ಕೆ ವಿಶೇಷ ಮೆದುಳಿನ ದುಡಿಮೆ ಬೇಕಿಲ್ಲ. ತೋಳು-ಕೈಗಳ ಪಳಗಿದ ಗೈಮೆಯೇ ಸಾಕು. ಅದು ಯಂತ್ರದಂತೆ ಕೆಲಸ ಮಾಡುವಾಗ ಕೆಲಸಗಾರರ ಮನಸ್ಸು ಅತ್ತಿತ್ತ ಬ್ರಹ್ಮಾಂಡ ಸುತ್ತಾಡಿ ಹರಟೆಯಲ್ಲಿ ಹಾದಿಗೆಟ್ಟು ಹೊತ್ತು ಕಳೆಯ ಬಹುದು. ಅದೇ ಹರಟೆ ಅಲ್ಲಿಯ ಬೆಚ್ಚಗಿನ ಚಳಿಕಾಸುವ ವಾತಾವರಣದಲ್ಲಿ ಸರಾಗ ವಾಗಿ ಸಾಗಿತ್ತು. ವಿಂಟರಬೋರ್ನ ಅಲ್ಲಿಗೆ ಬಂದಾಕ್ಷಣಕ್ಕೆ ಅದು ತುಸು ತಡೆಯಿತು. ಮತ್ತೆ ಹರಿದಾಡಿತು.

ಹರಟೆಯ ವಿಷಯ ಒಂದೇ — ಸುತ್ತಲಿನ ಕೊಳ್ಳ ಕಾನು ಕೊಪ್ಪಗಳ ಒಡತಿ ಮಿಸೆಸ್ ಚಾರಮಂಡಳ ಶೀಲ-ಚಾರಿತ್ರ್ಯ. ಕ್ರೀಡಲ್ ಹೇಳುತ್ತಿದ್ದ, 'ನನ್ನ ಭಾವಯ್ಯ ಅಂತಿದ್ದ — ಆ ಹೆಂಗಸು ಊಟಕ್ಕೆ ಕೂಡ್ರುವಾಗ ತೊಟ್ಟ ಗೌನು ಅವಳ ಮೊಣಕೈಗಳ ಮಟ್ಟಕ್ಕೂ ಬರುತ್ತಿದ್ದಿಲ್ಲ.' ಭಾವಯ್ಯ ಮಾತಿನಲ್ಲಿ ನನಗೆ ಅಪನಂಬಿಕೆಯ ಅಂಶವೇನೂ ಕಾಣೋದಿಲ್ಲ, ನೋಡಿ. ಅಂಥ ಬಟ್ಟೆ ತೊಟ್ಟು ಭಾನುವಾರ ಇಗರ್ಜಿಗೆ ಹೋಗಿ

ಮಂಡಿಯೂರುವುದೇ ? — ಅಂದ ನಮ್ಮ ಭಾವ. ಈಗ ಆಕೆ ಸುಧಾರಿಸಿದ್ದಾಳೋ ಗೊತ್ತಿಲ್ಲ. ಆದರೆ ಅವಳಲ್ಲಿ ನಮ್ಮ ಭಾವ ಕೆಲಸಕ್ಕೆ ಇದ್ದಾಗ ಹೀಗಿತ್ತು ಸಂಗ್ತಿ'.

'ಅವಳ ಗಂಡ ಇದ್ದಾಗಲೂ ಹೀಗೇ ನಡೀತಿದ್ದಳೋ ಏನು ?'

'ಅದು ನಂಗೊತ್ತಿಲ್ಲ. ಆದರೆ ಅವನ ಸಿಡುಕಿನ ಬುದ್ಧಿ ಯೋಚಿಸಿದ್ರೆ ಆಕೆ ಹೀಗೆಲ್ಲ ಆಗ ಹುಚ್ಚಾಟ ಮಾಡಿರಲಿಕ್ಕಿಲ್ಲ.' ಕ್ರೀಡಲ್ ಇಲ್ಲಿ ಚಾರಮಂದನ ಗಂಡನ ಸಿಡುಕಿನ ಅವಿರ್ಭಾವವನ್ನೇ ನಟಿಸಿ ಕಾಣಿಸಿದನು. 'ಅಬ್ಬ ಆ ಮನುಷ್ಯ? ಆದರೆ ನಾನೀಗ ಹೋಗಬೇಕು. ಈ ಗ್ರೂಟಗಳನ್ನು ಮನೆಗೆ ಒಯ್ಯುಬೇಕು'. ಎಂದು ರಾಬರ್ಟ್ ಕ್ರೀಡಲ್ ಎದ್ದೇಬಿಟ್ಟನು.

ಇದೇ ಸಮಯ ಒಬ್ಬ ಮುದುಕಿ ಅಲ್ಲಿ ರಂಗಪ್ರವೇಶ ಮಾಡಿದಳು. ಅವಳು ಮೆಲಬರಿಯ ಒಬ್ಬ ಕೆಲಸಗಿತ್ತಿ. ಅವಳ ಕೆಲಸದ ಬಹುಭಾಗ ವೇಳೆ, ಮನೆ ಗೂಟದ ಮನೆಗಳ ನಡುವೆ ಅಂಗಳ ಹಾಯುವದರಲ್ಲಿಯೇ ಕಳೆಯುತ್ತಿತ್ತು. ಅವಳಿಗೆ ಎರಡು ಮೋರೆ. ಮನೆಯೊಳಗಿನವರಿಗಾಗಿ, ಮೃದು ; ಹೊರಗಿನವರಿಗಾಗಿ ಬಿರುಸು.

'ಓ ಅಜ್ಜಿ ಆಲಿವರ', ಜಾನ್‌ಅಪ್‌ಜಾನ್ ಕೂಗಿದ, 'ನಿನ್ನಂಥ ಮುದುಕಿ ಹೀಗೆ ಇಷ್ಟು ಬೇಗ ಓಡಾಡಬಾರ್ದು. ಐವತ್ತು ದಾಟಿದ್ಮೇಲೆ. ಒಂದೊಂದು ವರ್ಷ ಎರಡೆರಡೆಂದು ಲೆಕ್ಕ ಹಿಡಿಬೇಕು. ಆದರೂ ಈ ಹೊತ್ತು ನಿನ್ನ ಹೊಗೆ ಏಳು ಬಡಿಯುವ ಮೊದಲು ಏಳಲೇ ಇಲ್ಲ ! ಅಜ್ಜಿಗೆ ಇಂದೇಕೆ ಇಷ್ಟು ತಡ ?'

'ಎಲಾ ಕುಳ್ಳ. ನೀನು ಇಡೀ ಆಳೇ ಅಲ್ಲ. ನಿನ್ನ ಮಾತು ನಾನೇಕೆ ಹಚ್ಚಿ ಕೊಳ್ಲಿ ? ಇಕೋ ಈ ಕಿರಿಕಡಬು ಕೊಳ್ಳಿ. ನಿಮ್ಮ ನಾಶ್ತಾಕ್ಕೆ ನಿಮಗೆ ಚಹ ಬೇಕಿದ್ದರೆ ಒಳಗಿಂದ ತಂದುಕೊಳ್ರಿ.'

'ಇಂದೇಕೋ ಮಿಸ್ಟರ ಮೆಲಬರಿಗೆ ತಡವಾಯ್ತು !' ಕೆಳಕರಗಸದಾರ ಕಿರಿಯ ಟಾಂಗ ಅಂದ.

'ಹೌದು. ಇಂದು ಮುಂಜಾವೆಲ್ಲ ಮಬ್ಬುಗತ್ತಲೆ. ಏಳು ಗಂಟೆಗೆ ನಾನು ಬಾಗಿಲು ತೆರೆದೆ. ಆಗಲೂ ಈ ಜಾನ್ ಯಾರು ಮಾರದ ತುಂಡು ಯಾವುದು—ಬೇರೆ ಗೊತ್ತಾಗುತಿದ್ದಿಲ್ಲ. ಅಷ್ಟು ಕತ್ತಲೆ ! ಅಲ್ಲದೆ ನಮ್ಮ ಧಣಿ ರಾತ್ರೆ ಚೆನ್ನಾಗಿ ನಿದ್ದೆ ಮಾಡೇ ಇಲ್ಲ. ಅವರಿಗೆ ತಮ್ಮ ಮಗಳದೇ ಚಿಂತೆ. ನನಗೂ ಗೊತ್ತು ಈ ಮಗಳ ಚಿಂತೆ ಏನೆಂಬುದು. ನಾನೂ ಬಕೇಟುಗಟ್ಲೆ ಅತ್ತದ್ದುಂಟು.

ಆ ಮುದುಕಿ ಹೋದೊಡನೆ ಕ್ರೀಡಲ್ ಅಂದ. 'ಆ ಗೃಹಸ್ಥ ಆ ಹುಡುಗಿ ಯಿಂದ ಇನ್ನೂ ಸುದ್ದಿ ಬರದಿದ್ದರೆ ಚಿಂತೆಯಿಂದ ಹುಚ್ಚಾಗಿ ಬಿಡುತ್ತಾನೆ ; ಖಂಡಿತ.' ಕಲಿಯೋದೂ ಓದೋದೂ ಎಲ್ಲ ಸರಿ. ಹೊಲ ಮನೆ ಕೆಲಸಕ್ಕಿಂತ ಒಳ್ಳೇದು. ಆದರೆ ಮಗಳನ್ನು ಇಷ್ಟು ಬೆಳೆದು ದೊಡ್ಡವಳಾದರೂ, ತಾಯಿಯ ಬೂಟಿನಲ್ಲೂ ಹಿಡಿಸದಷ್ಟು ಪಾದ ದೊಡ್ಡದಾಗಿ ಇಪ್ಪತ್ತರ ಬೆಳೆದ ಮೇಲೂ ಆ ಶಾಲೇಲಿ ಇಡುವುದೆಂದರೆ ದೈವ ವನ್ನು ಕೆಣಕಿದಂತೆ'.

ತಿಮೊಥಿ ಟಾಂಗ್ಸ್ ಅಂದ, 'ಆದರೆ ಪುಟ್ಟ ಹುಡುಗೆಯಾಗಿ ಆಕೆ ಆಟ ಆಡ್ತಾ ಇದ್ದು ಬಹಳ ಕಾಲವಾಗಿಲ್ಲ.'

'ಅವಳ ತಾಯಿ ನೆನಪು ಚೆನ್ನಾಗಿದೆ. ನನಗೆ ಜ್ಞಾಪಕಕ್ಕೆ ಬರ್ತ್ತಾಳೆ.' ಸಾಣೆ ಹಾಕುವ ಮೇಸ್ತ್ರಿ ಅಂದನು. 'ಯಾವಾಗಲೂ ನಾಜೂಕು. ಪ್ರಕೃತಿ ಭಾಳ ಸೂಕ್ಷ್ಮ. ಅವಳ ಕೈ ನಮ್ಮ ಕೈಮುಟ್ಟಿದರೆ ಗಾಳಿ ಸೋಂಕಿದಷ್ಟು ಹಗುರ. ಅವಳಿಗೆ ಮೈಲಿ ಚುಚ್ಚಿಸಿದ್ದಾಗಿನ ನೆನೆಪು ನಂಗೆ ಬರ್ತಾ ಇದೆ. ಮೈತುಂಬ ಚಂದ ಬೊಕ್ಕೆ ಎದ್ದು ಬಂದದ್ದು. ಆಗಲೇ ನಾನು ಈ ಕೆಲಸದ ಉಮೇದ್ವಾರಿ ಮುಗಿಸಿದ್ದೆ—ಅದೆಂಥ ಉಮೇದ್ವಾರಿ ಮತ್ತೆ! ಉದ್ದನ್ನ ಅಜ್ಞಾತವಾಸವೇ! ನಮ್ಮ ಯಜಮಾನ್ರರಲ್ಲಿ ನಾನು ಆರು ವರ್ಷ ಮುನ್ನೂರ ಹದಿನಾಲ್ಕು ದಿನ ಉಮೇದ್ವಾರಿಕೆ ಮಾಡ್ದೆ ನೋಡ್ರಿ!' ಸಾಣದ ಮೇಸ್ತ್ರಿ ಆ ದಿನಗಳ ಲೆಕ್ಕ ಗಡುಸಾಗಿಯೇ ಹೇಳಿದ. ಆ ದನಿಯಲ್ಲಿ ಆರು ವರ್ಷಗಳಿಗಿಂತ ಆ ದಿನಗಳ ಅವಧಿಯೇ ದೊಡ್ಡದು ಎಂಬಂತೆ ಇತ್ತು.'

'ಅಲ್ಲ, ವಿಂಟರಬೋರ್ನರ ತಂದೆ ಒಂದು ಕಾಲ ಒಡನಾಡ್ತಾ ಓಡಾಡ್ತಾ ಇದ್ದನಲ್ವೆ?'—ಮುದಿ ಟಿಮೊಥೀ ಟಾಂಗ್ಸ ಮಧ್ಯೆ ಮಾತಾಡಿದನು. ಆದರೆ 'ಮೆಲಬರಿ ಆಕೆಯನ್ನು ಗಿಟ್ಟಿಸಿಕೊಂಡು ಬಿಟ್ರು. ಆಗ ಆಕೆ ಹಸುಳೆಯಂಥ ಹೆಣ್ಣು. ಆತ ಏನಾದರೂ ಮಾತಾಡಿದ್ರೆ ಗೊಳೋಂತ ಅತ್ತು ಬಿಡ್ತಿದ್ದಳು. ಗಂಡ ಅವಳು ಕೂಡಿ ತಿರುಗಾಡ್ತಾ ತಿರುಗಾಡ್ತಾ ಒಂದು ಹೊಂಡವೋ ಹಳ್ಳವೋ ನಡುವೆ ಬಂದ್ರೆ ಅವನು ಅವಳನ್ನು ಹಾಯಾಗಿ ಪಿಂಗಾಣಿ ಬೊಂಬೆಯಂತೆ ಎತ್ತಿ ಹಿಡಿದು ಆಚೆಗೆ ಹೊತ್ತೊಯ್ದು ಇಡುತ್ತಿದ್ದ — ಅವಳ ಮೈ ಕೈಗೆ ಒಂದು ಚೂರೂ ಮಣ್ಣು ತಾಗದಂತೆ! ಇನ್ನು ಅವಳ ಮಗಳನ್ನು ಹೀಗೆ ಪರಸ್ಥಳದಲ್ಲಿ ಶಾಲೆ ಓದಲಿಕ್ಕೆಂದು ಇಟ್ಟು ಬಿಟ್ಟಾ ಅಂದ್ರೆ ಸರಿ ಹೋಯ್ತು. ಮಗಳನ್ನು ತಾಯಿಯಂತೇ ಬಣ್ಣದ ಬೀಸಣಿಕೆ ಮಾಡಿ ಬಿಡ್ತಾನೆ! ಆಕೋ ಅವನೇ ಬರ್ತಾ ಇದ್ದಾನೆ'.

ಈ ಕ್ಷಣಕ್ಕೆ ಮೊದಲು ಮೆಲಬರಿ ತನ್ನ ಬಾಗಿಲಿಂದ ಹೊರಟು ಅಂಗಳ ದಾಟಿದ್ದು ವಿಂಟರಬೋರ್ನ ಕಂಡಿದ್ದನು. ಮೆಲಬರಿಯ ಕೈಯಲ್ಲಿ ಒಂದು ತೆರೆದ ಪತ್ರವಿತ್ತು. ಅವನು ನೇರವಾಗಿ ವಿಂಟರಬೋರ್ನ ಇದ್ದಲ್ಲಿಗೆ ಬಂದನು. ಹಿಂದಿನ ರಾತ್ರಿಯ ಅವನ ಮಬ್ಬು ಪೂರ್ತಿ ಮಾಯವಾಗಿತ್ತು.

'ಇಕೋ ಜೈಲ್ಸ. ನಮ್ಮ ಗ್ರೇಸ ಬರಲೂ ಇಲ್ಲ, ಪತ್ರವೂ ಬರೆಯಲಿಲ್ಲ— ಎಂದು ಚಿಂತೆ ಮಾಡ್ತಾ ನಾನೇ ಹೋಗಿ ನೋಡಬೇಕು ಎಂದು ಕೊಳ್ಳುತ್ತಾ ಇದ್ದೆ. ಅಷ್ಟರಲ್ಲಿ ಅವಳಿಂದಲೇ ಪತ್ರ ಬಂತು ನೋಡು. ಅವಳು ಬರೀತಾಳೆ, — ನನ್ನ ಪ್ರಿಯ ಅಪ್ಪ, ನಾನು ನಾಳೆಗೆ — ಅಂದರೆ ಈ ಹೊತ್ತು ಮನೆಗೆ ಬರುತ್ತೇನೆ. ಆದರೆ ಆ ಬಗ್ಗೆ ಮೊದಲೇ ನಿನಗೆ ಬರೆಯುವುದು ಮಹತ್ವದ್ದು ಎಂದು ನನಗೆ ಅನಿಸಲಿಲ್ಲ! ಪುಟ್ಟ ಪಿಶಾಚಿ! ಮಹತ್ವದ್ದೇ ಅನಿಸಲಿಲ್ಲವಂತೆ! ಈವಾಗ, ಜೈಲ್ಸ ನೀನು ಶರ್ಟನ್ ಸಂತೆಗೆ ಹೋಗಲು ಹೊರಟೇ ಇದ್ದೀಯೋ ಈ ಹೊತ್ತು — ನಿನ್ನ ಸೇಬಿನ ಗಿಡ

ಹೊತ್ಕೊಂಡು. ನೀನೂ, ನನ್ನ ಮತ್ತು ಗ್ರೇಸಳನ್ನು, ಸಂತೆ ಮುಗಿಸಿ ಅಲ್ಲೇ ಕೂಡಿ ಕೊಂಡು ಬಿಡು ಆಗದೇ? ನಾವೆಲ್ಲರೂ ಒಟ್ಟಾಗಿ ಮನೆಗೆ ಬರೋಣ'.

ಈ ಪ್ರಸ್ತಾಪವನ್ನು ಆತ ಒಳ್ಳೆ ಹಿಗ್ಗಿನ ಹುರುಪಿನಲ್ಲಿಯೇ ಮಾಡಿದನು. ನಸುಕಿನ ಆ ಮಬ್ಬಿನ ಹೊತ್ತಿನ ಮನುಷ್ಯನೇ ಆಗಿದ್ದಿಲ್ಲ ಆತ ಈಗ. ಎಂಥ ಹೊಗೆ ಮೋರೆಯ ಮಬ್ಬಿನ ಮನಸ್ಸಿನ ಮಂದಿಯಲ್ಲಿಯೂ, ಕುಗ್ಗಿ ಹೋಗುವುದಕ್ಕಿಂತ, ನೆಪ ಮಾತ್ರಕ್ಕೆ ಹಿಗ್ಗಿ ಅರಳುವ ಪ್ರವೃತ್ತಿಯೇ ಬಲವಾಗಿರುತ್ತದೆ. ಜಪಾನೀ ಆಟಿಗೆ ಗೊಂಬೆ ಇರುತ್ತದಲ್ಲ. ಹೇಗೆ ಕೆಳಗೆ ಒಗೆದರೂ ದಿಗ್ಗನೆ ಎದ್ದು ನೇರವಾಗಿಯೇ ಕೂತು ಬಿಡುತ್ತದೆ. ಅದೇ ರೀತಿ ಆತ್ಮದ ವಿಶಿಷ್ಟ ಗುರುತ್ವವು ಯಾವಾಗಲೂ ತಿರುಗಿ ತನ್ನ ಸ್ಥಿಮಿತವನ್ನು ಕಾಪಾಡಿಕೊಳ್ಳುತ್ತಲೇ ಇರುತ್ತದೆ — ಎಂಥ ದುಃಖ ಕಷ್ಟ ಗಳ ಕಡಲಲ್ಲಿ ಅದನ್ನು ಬಿಸಾಡಿಬಿಟ್ಟಿದ್ದರೂ!

ವಿಂಟರಬೋರ್ನನದು ಆಡಿತೋರಿಸುವ ಬಹಿರಂಗ ಅಲ್ಲ. ಆದಾಗ್ಯೂ ಈ ಸೂಚನೆಯನ್ನು ಒಳ್ಳೆ ಲವಲವಿಕೆಯಿಂದಲೇ ಒಪ್ಪಿಕೊಂಡನು. ಮಾರ್ಟಿ ತನ್ನ ಹೆರಳು ಗಳನ್ನು ಕತ್ತರಿಸಿಕೊಂಡುದಕ್ಕೆ ಅಂಥ ಬಲವಾದ ಕಾರಣಗಳೇ ಇದ್ದಿರಬೇಕು; ಆದರೆ ಇವನ ಕಣ್ಣಿನ ಮೋಹವೂ ಅವನ್ನು ಇಟ್ಟುಕೊಳ್ಳುವುದಕ್ಕೆ ಬಲವಾದ ಕಾರಣವಾಗಿತ್ತು. ಇನ್ನು ಈ ಕಟ್ಟಿಗೆಯ ವ್ಯಾಪಾರಿಯೇ, ಕೇವಲ ತನ್ನ ಪೂರ್ವ ಯೋಜನೆಯಂತೆ ಅವರ ಇಬ್ಬರ ಜತೆಗೂಡಿಸಲಿಕ್ಕೆಂದೇ ಆಮಂತ್ರಣವನ್ನು ಇತ್ತಿರಬೇಕೆಂಬುದು ಸ್ಪಷ್ಟ. ಇದು ಒಂದು ಕರ್ತವ್ಯವೆಂದು ಇವನು ಬಗೆದಿದ್ದನು. ಅದನ್ನು ಪಾಲಿಸುವುದಕ್ಕೆ ಆತ ಪರಿಶ್ರಮ ಪೂರ್ವಕವಾಗಿ ತೊಡಗಿದನು.

ವಿಂಟರಬೋರ್ನನೊಂದಿಗೆ ಅವನು ಗೂಟಗಳ ಸಾಲೆಯುತ್ತ ತಿರುಗಿದನು. ಆಗಲೇ ಮೇಲೆ ಹೇಳಿದಂತೆ ಒಳಗೆ ಕೆಲಸ ಮಾಡುತ್ತಿದ್ದ ಆ ಜನರು ಅವನ ಹೆಜ್ಜೆಯ ಸದ್ದು ಕೇಳಿದ್ದ.

'ಸರಿ, ಜಾನ್ ಮತ್ತು ರಾಬರ್ಟ್', ಆತ ಅವರತ್ತ ತಲೆ ಬಗ್ಗಿಸುತ್ತ ಕೇಳಿದನು, 'ಒಳ್ಳೆ ಹಿಮಬಿದ್ದ ಮುಂಜಾವು ಅಲ್ವೇ?'

'ಹೌದು ರಾಯರೇ ಹೌದು'. ಕ್ರೀಡಲ್ ಜೋರಾಗಿಯೇ ಒಪ್ಪಿಗೆ ಇತ್ತನು. ಇನ್ನು ಕೆಲಸಕ್ಕೆ ತೊಡಗಲಿಕ್ಕೆ ಅವನಿಗೆ ಸಾಕಷ್ಟು ಒಲುಮೆ ಅನಿಸಿದ್ದಿಲ್ಲ. ಆದ್ದರಿಂದ ಕೆಲಸದಲ್ಲಿ ತೊಡಗಿಸಬೇಕಾದ ಜೋರು ಮಾತಿನಲ್ಲಿಯೇ ತುಂಬಿದನು. 'ಯಾರು ಏನೇ ಹೇಳಲಿ, ಈ ಚಳಿಗಾಲದಲ್ಲಿ ಇಷ್ಟು ಹಿಮ ಹೊತ್ತ ಹಗಲು ಈವರೆಗೆ ನಾನು ನೋಡಿಲ್ಲ, ನೋಡ್ರಿ!'

'ಅಲ್ಲ, ನಾನು ನನ್ನ ಮಗಳನ್ನು ಇಷ್ಟು ದೀರ್ಘಕಾಲ ಪರಸ್ಥಳದಲ್ಲಿ ಬೋರ್ಡಿಂಗ್ ಶಾಲೆಯಲ್ಲಿ ಯಾಕೆ ಇಟ್ಟಿದ್ದೇನೆಂದು ನೀವು ಸೋಜಿಗ ಪಡುತ್ತಿದ್ದೀರಿ' — ಮೆಲಬರಿ ಪಕ್ಕನೆ ಮಾತೆತ್ತಿದನು. ಅಲ್ಲಿಯ ಬೆಂಕಿಯ ಬೆಳಕಿನಲ್ಲಿ ಮಗಳ ಪತ್ರವನ್ನು ಮತ್ತೊಮ್ಮೆ ಓದುತ್ತಿದ್ದಂತೆ ಅವರ ಕಡೆಗೆ ಹೊರಳಿ. ಪಕ್ಕನೆ ಹೀಗೆ ಏನಾದರೂ ಆಡುವುದು ಮಾಡು

ವುದು ಮೆಲಬರಿಯ ಸ್ವಭಾವದ ಒಂದು ಲಕ್ಷಣವಾಗಿತ್ತು. 'ಏನಂದ್ರಿ?' ಅವನು ತೋರಿಕೆಯ ಜಾಣ್ಮೆಯಿಂದ ಕೇಳಿದನು. 'ಅಲ್ಲ ನೀವು ಹಾಗೆ ಸೋಜಿಗದಿಂದ ಮಾತಾಡ್ತಾ ಇದ್ದಿದ್ರಿ. ನಿಮಗೂ ಗೊತ್ತು. ಇನ್ನು ಆ ಬಗ್ಗೆ ಕೇಳಿರಿ. ಈ ವಿಷಯ ನಿಜವಾಗಿಯೂ ನನ್ನದೇ ಸಂಗತಿ; ಬೇರೊಬ್ಬರಿಗೆ ಯಾರಿಗೂ ಸಂಬಂಧಿಸಿದ್ದು ಅಲ್ಲ. ಆದಾಗ್ಯೂ ತಿಳಿಸಿಯೇ ಬಿಡುತ್ತೇನೆ. ನಾನು ಹುಡುಗನಾಗಿದ್ದಾಗ, ಇನ್ನೊಬ್ಬ ಹುಡುಗ — ನಮ್ಮ ಪಾದರಿಯ ಮಗ, ಇನ್ನು ಕೆಲವು ಹುಡುಗರ ಸಂಗಡ ನನಗೆ ಕೇಳಿದನು. 'ಯಾರು ಯಾರನ್ನು ಯಾತರ ಗೋಡೆಯ ಸುತ್ತಲೂ ಒಯ್ದಿದ್ದನು?' ಆಗ ನಾನೆಂದೆ, 'ನ್ಯಾಮ ಬೆರೆಟ್ ತನ್ನ ಕುಂಟ ಹೆಂಡತಿಯನ್ನು ಚರ್ಚಿಗೆ ಒಯ್ಯುವಾಗ ಆ ಗೋಪುರದ ಸುತ್ತು ಗಾಲಿಯುಳ್ಳ ಕುರ್ಚಿಯಲ್ಲಿ ಎಳೆದು ಒಯ್ದಿದ್ದ'. ಆ ಮಾತಿಗೆ ಅವರೆಲ್ಲ ಪೋರರು ಇಷ್ಟು ಬಿದ್ದುಬಿದ್ದು ನಕ್ಕರು—ನನಗೆ ಆ ರಾತ್ರಿ ನಾಚಿಕೆಯಿಂದ ನಿದ್ದೆ ಹತ್ತಲಿಲ್ಲ. ದಿಂಬು ಒದ್ದೆ ಮುದ್ದೆ ಆಗುವವರೆಗೂ ನಾನು ಇಡಿಯ ರಾತ್ರಿ ಅತ್ತದ್ದೇ ಅತ್ತದ್ದು. ಆಗ ಕೊನೆಗೆ ನಾನು ವಿಚಾರ ಮಾಡಿದೆ — ನನ್ನ ಅಜ್ಞಾನಕ್ಕಾಗಿ ಅವರು ನನಗೆ ನಗಬಹುದು, ನಗಲಿ. ಆದರೆ ಇದು ನಮ್ಮಪ್ಪನ ತಪ್ಪು. ನಾನು ಮಾಡಿದ್ದೇನೂ ಅಲ್ಲ. ಇದನ್ನು ನಾನು ಮಾಡಿದ್ದೇನೂ ಅಲ್ಲ. ಇದನ್ನು ನಾನು ಸಹಿಸಬೇಕು. ಆದರೆ ಅವರು ನನ್ನ ಮಕ್ಕಳಿಗೆ ಹೀಗೆ ನಗಲಾರರು — ಅಂದರೆ, ನನಗೆ ಮುಂದೆ ಮಕ್ಕಳು ಆದರೆ! ನಾನು ಹೊಟ್ಟೆಗೆ ಇಲ್ಲದೇ ಹೋದೇನು. ಆದರೆ ಮಕ್ಕಳಿಗೆ ಶಾಲೆ ಓದಿಸದೇ ಬಿಡಲಿಕ್ಕಿಲ್ಲ! ದೇವರ ದಯೆ, ನಾನು ನನ್ನ ಮಗಳನ್ನು ವರ್ಷಕ್ಕೆ ನೂರು ಹಣ ಚಿಲ್ಲಿ ಆದರೂ ಶಾಲೆಯಲ್ಲಿ ಇಡಲು ಸಮರ್ಥನಾದೆ. ಮತ್ತು ಅವಳ ವಿದ್ವತ್ತೆಯೂ ಏನು! ಓದು ಮುಗಿದ ಮೇಲೂ ಅವಳು ಅಲ್ಲಿ ಗವರ್ನೆಸ್ ಆಗಿ ಮುಂದುವರಿದಿದ್ದಾಳೆ. ಈಗ ಅವರು ಬೇಕಾದರೆ ಬೇಕಾದಷ್ಟು ನಗಲಿ. ನಮ್ಮೂರ ಶ್ರೀಮತಿ ಚಾರ್ಮಂದಳೂ ನನ್ನ ಗ್ರೇಸಳಿಗಿಂತ ಹೆಚ್ಚು ತಿಳಿದವಳಲ್ಲ!'

ಮೆಲಬರಿಯ ಈ ಮಾತಿನಲ್ಲಿ ಮಿಗಿಲಾದ ಉದಾಸೀನವೂ ಇತ್ತು; ಸರಳವಾದ, ನಮ್ರವಾದ ಭಾವನೆಯೂ ಇತ್ತು. ಆದ್ದರಿಂದ ಇದಕ್ಕೆ ಪ್ರತಿಯಾಗಿ ಏನೂ ಉತ್ತರ ಕೊಡುವುದು ಆ ಮಂದಿಗೆ ಕಷ್ಟವಾಯಿತು. ವಿಂಟರಬೋರ್ನನ ಆಸಕ್ತಿ ಮಾತಿನಲ್ಲಿ ವ್ಯಕ್ತ ಮಾಡಲು ಬಾರದಂಥ ರೂಪದ್ದಾಗಿತ್ತು. ಆತ ಆ ಮಾ ತಿ ಗೆ ಕಿವಿ ಕೊಡುತ್ತ ಬೆಂಕಿಯ ಬಳಿಯಲ್ಲಿ, ಒಂದು ಗೂಟದ ತುಂಡಿನಿಂದ ಅದರ ಕೆಂಡಗಳನ್ನು ಕೆದರುತ್ತ ನಿಂತನು.

'ಹಾಗಾದರೆ ನೀನು ಸಜ್ಜಾಗು, ಜೈಲ್ಸ'. ಮೆಲಬರಿ ಹಗಲುಗನಸಿನಿಂದ ಎಚ್ಚೆತ್ತವನಂತೆ ಅಂದನು, 'ಇರಲಿ, ಕಾಟ್ರೀ, ಶಾಟ್ಸಫೋರ್ಡಿನಿಂದ ಹೊಸ ಹೊಸ ಸುದ್ದಿ ಏನು?'

'ಓ, ಅದೋ, ಶಾಟ್ಸಫೋರ್ಡ್, ಶಾಟ್ಸಫೋರ್ಡ್. ಅಲ್ಲಿ ಕೈಯಲ್ಲಿ ರೊಕ್ಕ ವಿದ್ದ ಹೊರತು ನಿಮ್ಮ ಹೆಣ ಮಾಂಸವೆಂತ ಮಾರಲು ಬರುವ ಹಾಗಿಲ್ಲ. ಮತ್ತೆ ಅಲ್ಲಿ

ಒಂದು ಲೋಟ ಸರಿಯಾದ ಸರಾಯಿ ಕೂಡಾ ಕೊಳ್ಳುವ ಹಾಗಿಲ್ಲ. ನೋಡ್ರೀ, ಆದರೆ ಅಂತಾರಲ್ಲ, — ಪರದೇಶಕ್ಕೆ ಹೋಗಿರಿ. ಅಲ್ಲಿ ಮನೆಕಡೆ ಸುದ್ದಿಯನ್ನೇ ಕೇಳುವಿರಿ! ಎಂತ. ನಮ್ಮ ಹೊಸ ನೆರೆಹೊರೆಯವರು ಆ ಒಳ್ಳೆ ಹರೆಯದ ಡಾಕ್ಟರು ಇದ್ದಾರಲ್ಲ. ಅವರ ಹೆಸರು ಏನೋ ಇದೆ ಬಿಡಿ. ಅವರೊಬ್ಬ ವಿಚಿತ್ರ ಆಳವಾದ ಧೂರ್ತ ಆಸಾಮಿ ಅವರು ದೆವ್ವಕ್ಕೋ ಸೈತಾನನಿಗೋ ತಮ್ಮ ಆತ್ಮ ಮಾರಿಕೊಂಡಿರಬೇಕೆಂದು ಹೇಳಲಿಕ್ಕೆ ತುಂಬಾ ಆಧಾರವಿದೆ ನೋಡ್ರೀ!

'ಹಾಂ. ಅವರ ಹೆಸರೇನೋ ವಿಚಿತ್ರ ಇದೆ'. ಕಟ್ಟಿಗೆಯ ವ್ಯಾಪಾರಿ ಆ ಸುದ್ದಿಯಿಂದ ಪ್ರಭಾವಿತನಾಗದಿದ್ದರೂ, ಆ ವಿಷಯದಿಂದ ಇನ್ನೇನೋ ಅವಾಂತರ ವಿವರಗಳ ನೆವವಾಗಿ ಅಂದನು, 'ಈ ಮುಂಜಾನೆ ನಾನು ಒಬ್ಬ ಗೃಹಸ್ಥನನ್ನು ಕಾಣ ಬೇಕಾಗಿದೆ. ಆದರೂ ನಮ್ಮ ಮಗಳಿಗಾಗಿ ಶರ್ಟಿನ ಅಬ್ಯಾಸಿಗೆ ಹೋಗುವ ಯೋಜನೆಯೂ ಮಾಡಿದ್ದೇನೆ.

'ಈ ಡಾಕ್ಟರ ದೆವ್ವದೊಂದಿಗೆ ಎಂಥ ಸಾಟೆ ಮಾಡಿದ್ದಾನೆಂದು ಗೊತ್ತಾದ ಹೊರತು ನಾನು ಅವರ ಜಾಣ್ಮೆಯನ್ನು ಹೊಗಳಲಾರೆ', ಕರಗಸದಾರನೊಬ್ಬ ಅಂದನು. ಆತ ನಾಟಿನ ಮೇಲೆ ನಿಂತು ಕರಗಸ ಎಳೆಯುವ ಬಂಟ.

'ಅದು ಬರೆ ಅಡುಗಲಜ್ಜಿಯ ಕತೆ ಕಣ್ರೋ' ಕಾರ್ಟೆ, 'ಆದರೂ ಅದು ಹೀಗೆ. ಆ ಡಾಕ್ಟರನಿಗೆ ಏನೋ ಮಾಟೀ ವಿದ್ಯೆಗಾಗಿ ಕೆಲವು ಪುಸ್ತಕಗಳು ಬೇಕಾಗಿದ್ದವು. ಇಲ್ಲಿಯ ಮಂದಿಗೆ ಅದೇನೆಂದು ಪತ್ತೆಯಾಗಬಾರದೂ ಎಂದು ಆತ ಆ ಹೊತ್ತಿಗೆಗಳನ್ನು ಶರ್ಟನ್ನಿನ ಪುಸ್ತಕದಂಗಡಿಯವನಿಂದ ಕೊಳ್ಳುವ ಬದಲು ನೆಟ್ಟಗೆ ಲಂಡನ್ನಿನಿಂದಲೇ ತರಿಸಿಕೊಂಡನಂತೆ. ಆದರೆ ಆ ಪಾರ್ಸಲ್ ಕೈತಪ್ಪಿ ನಮ್ಮೂರ ಪಾದರಿಗಳ ಮನೆಗೆ ಮುಟ್ಟಿಸಲಾಯಿತು. ಆಗ ಪಾದರಿಗಳೂ ಮನೆಯಲ್ಲಿ ಇದ್ದಿಲ್ಲ. ಅವರ ಹೆಂಡತಿ ಅದನ್ನು ತೆರೆದು ನೋಡಿದಳು. ನೋಡಿದ್ದೇ ಅವಳಿಗೆ ಉನ್ಮಾದವಾಯಿ ಸಂಚಾರ ವಾದಂತೆ ಆಯ್ತಂತೆ. ತನ್ನ ಗಂಡ ಹೀಗೆ ಪಾಖಂಡಿ ಆಗಿ ಹೋದನಲ್ಲ; ಇನ್ನೂ ಇದು ಮಕ್ಕಳಿಗೆ ಸರ್ವನಾಶ, ಎಂದು ಆಕೆ ಹೌಹಾರಿದಳಂತೆ. ಆದರೆ ಪಾದರಿ ಮನೆಗೆ ಬಂದು ನೋಡುತ್ತಾರೆ, ಆ ಪಾರ್ಸಲ್ ಕತೆ ಅವಳಿಗೆಷ್ಟು ಗೊತ್ತೋ ಅವರಿಗೂ ಅಷ್ಟೇ ಗೊತ್ತು. ಆಗ ಅವರಿಗೆ ಗೊತ್ತಾಯ್ತು ಈ ಸಾಮಾನು ಡಾ॥ ಫಿಟ್ಜ್ ಪಿಯರ್ಸನದೆಂದು. ಆಗ ಪಾದರಿಗಳು ಆ ಗಂಟಿನ ಮೇಲೆ 'ಎಚ್ಚರಿಕೆ' ಎಂದು ಬರೆದು ಅದನ್ನು ಇಗರ್ಜಿಯ ಜವಾನನೊಂದಿಗೆ ಆ ಡಾಕ್ಟರ ಮಹಾಶಯರಲ್ಲಿಗೆ ಕಳುಹಿಸಿದರಂತೆ.

'ಹಾಗಾದರೆ ಈ ಡಾಕ್ಟರು ಒಳ್ಳೆ ಸೋಜಿಗದ ಇಸಮು'. ಸಾಣೆಯ ಮೇಸ್ತ್ರಿ ಅಂದನು.

'ಇರಲೇ ಬೇಕು' ಟಿಮೊಥಿ ಟಾಂಗ್ಸ ದನಿಗೂಡಿಸಿದ.

'ಬರಿ ಹುಚ್ಚು. ಮಳ್ಳು ಮಳ್ಳನೆ ಮಾತಾಡಬೇಡಿರಿ. ಆತ ಕೇವಲ ಸದ್ಗೃಹಸ್ಥ ವಿಜ್ಞಾನ, ತತ್ವಜ್ಞಾನ ಮತ್ತು ಕಾವ್ಯದಲ್ಲಿ ಮೆಚ್ಚಿಗೆ ಇದ್ದ ಗೃಹಸ್ಥ. ಇಷ್ಟೇ ಅಲ್ಲ

ಜ್ಞಾನದ ಪ್ರತಿಯೊಂದು ಅಂಗದಲ್ಲಿಯೂ ಅವನಿಗೆ ಜಿಜ್ಞಾಸೆ ಇದೆ. ಇಲ್ಲಿ ಒಬ್ಬಂಟಿಗನಾಗಿದ್ದಾನೆ. ಒಂಟಿ ಬಾಳಿಗೆ ಬೇಸತ್ತು ಅಂಥ ವಿಷಯಗಳ ವ್ಯಾಸಂಗವನ್ನು ತನ್ನ ಕಾಲಕ್ಷೇಪದ ಷೋಕಿಯಾಗಿ ಮಾಡಿಕೊಂಡಿದ್ದಾನೆ'.

'ಒಂದು ಮಾತು ಇದೆ' ಟಿಮೊಥಿ ಟಾಂಗ್ಸ ಅಭಿಪ್ರಾಯ ಪಟ್ಟ, 'ಈ ಡಾಕ್ಟರುಗಳ ಬಗೆಗೆ ಒಂದು ಮಾತು ಸೋಜಿಗದ್ದು — ಅವರು ಎಷ್ಟು ಕೆಟ್ಟವರೆಂದಾಗುವರೋ ಅಷ್ಟು ಒಳ್ಳೆಯವರೆಂದು ಕಂಡು ಬರುವರು. ಅಂದರೆ ಹೇಗೆ — ಇಂಥವರ ಕುರಿತು ಇಂಥದೇನಾದರೂ ಕೆಟ್ಟ ಸುದ್ದಿ ಕೇಳಿ ಬಂದರೂ, ಒಂದಕ್ಕೆ ಹತ್ತು ಒಡ್ಡ ಕಟ್ಟಿ ಹೇಳ್ತೇನೆ, ಇವರಷ್ಟು ಚೆನ್ನಾಗಿ ಬೇರೆ ಯಾರೂ ರೋಗ ಗುಣ ಮಾಡಲಾರರು!'

'ಖರೇರಪ್ಪಾ', ಕಾರ್ಟ ಗಡುಸಾಗಿಯೇ ಒಪ್ಪಿಕೊಂಡ, 'ನನ್ನ ಮಟ್ಟಿಗೆ ಹೇಳುವದಾದ್ರೆ, ನಮ್ಮ ಹಳೆ ಜೋನ್ಸನ ಕಡೆಯಿಂದ ನಾನು ಕಿರಾಣೀ ಸರಕನ್ನೆಲ್ಲ ತೆಗೊಳ್ಳುತ್ತೇನೆ. ಆದರೆ ನನ್ನ ಹೊಟ್ಟೆಯೊಳಗೆ ಏನಾದರೂ ತೊಂದರೆ ಆದರೆ, ಈ ಡಾಕ್ಟರ ಹತ್ತಿರವೇ ನಾನು ಸೀದಾ ಹೋಗುತ್ತೇನೆ. ಆ ಮುದಿ ಜೋನ್ಸ ಹಿಂದೆ ಕೊಟ್ಟ ಮದ್ದಿಗೆ ಯಾವ ರುಚಿಯೂ ಯಾವ ಜೋರೂ ಇದ್ದಿಲ್ಲ!'

ಮೆಲಬರಿ ಹೆಚ್ಚು ಬಲ್ಲವನಿಗೆ ಒಪ್ಪುವಂತೆ ಇವೆಲ್ಲ ವಾಚಾಟಗಳಿಗೆ ಕಿವಿಗೊಡಲಿಲ್ಲ. ಅಲ್ಲದೆ ಅವನ ತಲೆಯಲ್ಲಿ ಹೊಸ ವ್ಯವಹಾರದ ವಿಚಾರ ಸುಳಿದಿತ್ತು. ಅದರಲ್ಲಿಯೇ ತೊಡಗಿ ಅವನು ಅನಿಶ್ಚಯದ ಅವಸ್ಥೆಯಲ್ಲಿ ಅವನ ವಾಡಿಕೆಯಂತೆ, ನೆಲವನ್ನೇ ನೋಡುತ್ತ ಅತ್ತಿತ್ತ ಶತಪಥ ಹಾಕಹತ್ತಿದನು. ಹರೆಯದಲ್ಲಿ ಆತ ದೇಹದ ಪರಿವೆ ಮಾಡದೆ ಮರಗಳನ್ನು, ಕಟ್ಟಿಗೆಯ ತೊಣೆಗಳನ್ನೂ ಎತ್ತಿ, ಹೊತ್ತು ಹಾಕಿ ಹೇರಿ ತುಂಬ ದುಡಿದಿದ್ದನು. ಅದರ ಫಲವಾಗಿ ಹಲವಾರು ಉಳುಕು, ಹಲುಬಗೆಯ ಅತಿಗೈಮೆಗಳೆಲ್ಲ ಒಟ್ಟಾಗಿ ಈಗ ಇಳಿ ವಯಸ್ಸಿನಲ್ಲಿ ತಮ್ಮ ಸೇಡು ತೀರಿಸಿಕೊಂಡಿದ್ದವು. ಅದು ಅವನ ತೋಳು, ಸೊಂಟ ಮತ್ತು ಮೊಣಕಾಲು ಕೀಲುಗಳಲ್ಲಿ — ಹೀಗೆ ನಡೆದಾಡುವಾಗ, ಕಂಡು ಬರುತ್ತಿತ್ತು. ಆತ ಸ್ವಯಂಸಿದ್ಧ ಜಾತಿಯ ಆಳಾಗಿ ಮುಂದೆ ಬಂದಿದ್ದನು. ಯಾರನ್ನೂ ಅವಲಂಬಿಸದೆ, ಯಾರ ನೆರವನ್ನೂ ಹೊಂದದೆ, ತನ್ನ ರಟ್ಟೆಯ ಬಲದಿಂದ ಬಲುಮೆಯ ದುಡಿತದಿಂದ ವ್ಯವಸಾಯದಲ್ಲಿ ಮೇಲೆ ಎದ್ದಿದ್ದನು.

ತನ್ನ ಈ ನೋವು ಹಿಡಿತಗಳಲ್ಲಿ ಒಂದೊಂದೂ ಹೇಗೆ ಹುಟ್ಟಿತೆಂದು ಅವನಿಗೆ ನೆನಪಿತ್ತು. ಯಾರ ನೆರವೂ ಇಲ್ಲದೆ ಟಟಿಕ್ಕೋ ಬೊಟಂದಿಂದ ಮನೆಯವರೆಗೆ ಟೊಂಗೆ ಸವರಿದ ಒಂದು ಮರವನ್ನು ಒಮ್ಮೆ ಅವನು ಹೊತ್ತು ತಂದಿದ್ದನು. ಅದರ ನೋವಿದು — ಎಡ ಹೆಗಲಿನಲ್ಲಿ; ಇನ್ನೊಮ್ಮೆ ಅವರು ಮರ ಕಡಿಯುವಾಗ ಒಂದು ದೊಡ್ಡ ಎಲ್ಮ ಮರವು ಮುರಿದುಬಿದ್ದಿತು. ಅದರಿಂದ ಆದ ನೋವದು — ಒಂದು ಕಾಲಿನಲ್ಲಿ; ಮತ್ತೊಮ್ಮೆ ಒಂದು ಮರದ ಕಾಂಡವನ್ನು ಆತ ಹೊತ್ತಿ ಹಾಕಿದ್ದನು. ಆಗ ಉಂಟಾದ ಉಳುಕು ಇದು — ಇನ್ನೊಂದು ಕಾಲಿನಲ್ಲಿ. ಹೀಗೆ ಅನೇಕ ಸಲ ದಿನವೆಲ್ಲ ಇಂಥ ಪ್ರಚಂಡ ಪ್ರಯಾಸಗಳಿಂದ ಸೋತು ಮಲಗಿದ್ದರೂ ಆಗ ಹೊತ್ತಾರೆ

ಎದ್ದಿದ್ದೆನು — ನಿತ್ಯದಂತೆ ನಳನಳಿಸುವ ಹುರುಪಿನಲ್ಲಿ. ಏಕೆಂದರೆ ಆಗ ಅವನಿಗೆ ಏರು ಜವ್ವನದ ಪೋಷಕ ಶಕ್ತಿಯಿತ್ತು. ಆದ್ದರಿಂದ ಅಂಥ ಬಲುಮೆ ಬಿಗುಮೆಯು ಗೈಮೆ ಆತ ಮತ್ತೆ ಮತ್ತೆ ಪರಿವೆ ಇಲ್ಲದೆ ಮಾಡುತ್ತಿದ್ದನು. ಆದರೆ ಕಾಲನು ಅವಸಾನಗೇಡಿ. ಪ್ರಾಯದ ರಕ್ಷಣೆಯಲ್ಲಿ ತಾಳಬಹುದಾದ ಆ ದುಷ್ಪರಿಣಾಮ ಗಳನ್ನು ಆ ರಕ್ಷಣೆ ತಪ್ಪುವ ವಯಸ್ಸಿಗೆ ಹೆಚ್ಚು ಪ್ರಭಾವಿಯಾಗುವಂತೆ ಆತನು ಬಚ್ಚಿಟ್ಟಿದ್ದನು. ಇಂದು ಮೆಲಬರಿಯ ಇಳಿವಯಸ್ಸಿನಲ್ಲಿ ಅದನ್ನೆಲ್ಲ ಸಂಧಿವಾತ, ನರಗುಂದು, ಮೈ ಕೈ ನೋವುಗಳ ರೂಪದಲ್ಲಿ ಕಾಲನು ಕಾಣಿಸಿಕೊಳ್ಳುವಂತೆ ಮಾಡಿದ್ದನು. ಇಂಥ ಪ್ರತಿಯೊಂದರಲ್ಲಿಯೂ ಇಂದು ಮೆಲಬರಿಯು ಹಿಂದಿನ ಒಂದೊಂದು ಅತಿಕ್ರಮದ ಕೃತ್ಯವನ್ನು ಗುರುತಿಸಿಕೊಳ್ಳುತ್ತಿದ್ದನು.

ಅಷ್ಟರಲ್ಲಿ ಅಜ್ಜಿ ಅಲಿವರ ಮುಂಜಾವಿನ ಫಲಾಹಾರಕ್ಕಾಗಿ ಕರೆದಳು. ಅದನ್ನು ಕೇಳಿ ಮೆಲಬರಿ ಅಡಿಗೆಯ ಮನೆಯನ್ನು ಹೊಕ್ಕನು. ಚಳಿಗಾಲದಲ್ಲಿ ಮನೆಯವರೆಲ್ಲ ಅಡುಗೆಯ ಮನೆಯಲ್ಲೇ ಮುಂಜಾವಿನ ತಿಂಡಿತೀರ್ಥಕ್ಕಾಗಿ ಕೂಡುತ್ತಿದ್ದರು. ಇದ ರಿಂದ ಮನೆಗೆಲಸದ ತೊಂದರೆ ಕಡಿಮೆ ಆಗುತ್ತಿತ್ತು. ಅಲ್ಲಿ ಧಗಧಗಿಸುವ ಬೆಂಕಿಯ ಬಳಿಯಲ್ಲಿ, ಹೊಗೆಕಿಂಡಿಯ ಮೂಲೆಯ ಗೋಡೆಯ ಮೇಲೆ ಕುಣಿದಾಡುತ್ತಿರುವ ಉದ್ದುದ್ದ ನೆಳಲುಗಳನ್ನು ಬಹುಕಾಲ ದಿಟ್ಟಿಸುತ್ತ ಕುಳಿತನು. ಕಿಟಕಿಯಿಂದ ಬರುವ ಬೆಳಕಿನಲ್ಲಿ ಮೂಡಿದ ನೆಳಲು ಹಳದಿಯಿತ್ತು; ಅಗ್ಗಿಷ್ಟಿಕೆಯ ಬೆಂಕಿಯಿಂದ ಬಿದ್ದ ನೀಲಿ ನೆಳಲೊಂದಿಗೆ ಚೆನ್ನಾಟವಾಡುತ್ತಿತ್ತು.

'ಈ ಹೊತ್ತು ನಾನು ಏನು ಮಾಡಬೇಕೆಂಬುದೇ ನನಗೆ ಸರಿಯಾಗಿ ಗೊತ್ತಾಗು ವುದಿಲ್ಲ' — ಮೆಲಬರಿ ಹೆಂಡತಿಗೆ ಅಂದನು, ನಿಧಾನವಾಗಿ. 'ಆ ಚಾರಮುಂದ ಬಾಯವರ ಪಾರುಪತ್ಯಗಾರನಿಗೆ ಹನ್ನೆರಡು ಗಂಟೆಗೆ ಕೌಂಟರ್‌ವುಡ್ ಕಾನಿನಲ್ಲಿ ಭೆಟ್ಟಿ ಯಾಗುತ್ತೇನೆಂದು ಹೇಳಿದ್ದೆ. ಅದೀಗ ನೆನಪಾಯಿತು. ಆದರೆ ಇತ್ತ ಗ್ರೇಸಳನ್ನು ಕರೆತರಲೂ ನಾನು ಹೋಗಬೇಕು'.

'ಅದೇಕೆ? ಜೈಲ್ಸನೇ ಹೋಗಿ ತರಲೊಲ್ಲನೇಕೆ? ಅದು ಅವರಿಬ್ಬರನ್ನು ಇನ್ನಿಷ್ಟು ಬೇಗ ಹತ್ತಿರ ತರಬಹುದು; ಜತೆಗೂಡುವಂತೆ ಮಾಡಬಹುದು'.

'ಹಾಗೂ ಮಾಡಬಹುದಾಗಿತ್ತು — ಆದರೆ ಪ್ರತಿಸಲವೂ ತಪ್ಪದೇ ನಾನೇ ಹೋಗಿದ್ದೆ, ಅವಳನ್ನು ಕರೆದುಕೊಂಡು ಬರಲಿಕ್ಕೆ. ಆದ್ದರಿಂದ ಈ ಸಲ ನಾನು ಹೋಗದೆ ಉಳಿದರೆ ಅವಳಿಗೆ ನಿರಾಸೆ ಆಗಬಹುದು.

'ನಿಮಗೆ ನಿರಾಸೆ ಆದೀತು, ಅವಳಿಗೆ ಅಲ್ಲ, ನೀವು ಜೈಲ್ಸನನ್ನು ಕಳುಹಿಸಿದರೆ' ಮೆಲಬರಿಯ ಹೆಂಡತಿ ನಿರ್ಭಾವವಾಗಿ ಹೇಳಿದಳು.

'ಸರಿ ಹಾಗಾದರೆ — ಅವನನ್ನೆ ಕಳುಹಿಸಿಕೊಡುತ್ತೇನೆ'.

ಯಾವಾಗಲೂ ಹೀಗೆಯೇ ಆಗುತ್ತಿತ್ತು. ಹೆಂಡತಿಯು ವಾದಿಸಿ ಅಗ್ರಹದಿಂದ ಧನಿಯೆತ್ತಿ ರೇಗಾಡಿದರೆ ಯಾವ ಪರಿಣಾಮವೂ ಆಗದಿರುವಲ್ಲಿ, ಹೀಗೆ ನಿರ್ಭಾವ

ತೆಪ್ಪಗಿನ ದನಿಯಲ್ಲಿ ಆಡಿದ ಅವಳ ಮಾತು ಅವನ ಮನಸ್ಸನ್ನು ಒಲಿಸಿಬಿಡುತ್ತಿತ್ತು. ಇವಳು ಮೆಲಬರಿಗೆ ಎರಡನೆಯ ಸಂಬುಧ. ಶಾಂತ ಸಮಾಧಾನ ವೃತ್ತಿಯ ಹೆಂಗಸು ; ತಾಯಿ ತೀರಿದ ಬಾಲೆ ಗ್ರೇಸಳ ಶುಶ್ರೂಷೆಗಾಗಿ ದಾದಿಯಂತೆ ಇದ್ದವಳು. ಪುಟ್ಟ ಗ್ರೇಸಳು ಈ ದಾದಿಯನ್ನು ಅಕ್ಕರೆಯಿಂದ ಅಂಟಿಕೊಂಡುಬಿಟ್ಟಳು. ಇದರ ಫಲವು ಏನಾಯಿತೆಂದರೆ, ಕೊನೆಯಲ್ಲಿ ತನ್ನ ತಬ್ಬಲಿ ಮಗುವನ್ನು ಇಷ್ಟೊಂದು ಪ್ರೀತಿಯಿಂದ ನೋಡಿಕೊಳ್ಳುವ ಈ ಸಾಕು ತಾಯಿಯೂ ಬಿಟ್ಟು ಹೋಗಬಹುದೆಂಬ ಭೀತಿಯಿಂದ ಮೆಲಬರಿ ಈ ಮೃದುಸ್ವಭಾವದ ಲ್ಯೂಸಿಯನ್ನೇ ಮದುವೆಯಾದನು. ಈ ಹೊಸ ವ್ಯವಸ್ಥೆ ತುಂಬ ತೃಪ್ತಿಯನ್ನೂ ಕೊಟ್ಟಿತು. (ಮೆಲಬರಿಯ ದೃಷ್ಟಿಯಿಂದ ಇದು ಒಂದು ವ್ಯವಹಾರಿಕ ವ್ಯವಸ್ಥೆಗಿಂತ ಮಿಗಿಲಾಗಿದ್ದಿಲ್ಲ!) ಗ್ರೇಸಳು ಚೆನ್ನಾಗಿ ಪಾಲನೆ ಪೋಷಣೆ ಪಡೆದಳು. ಮೆಲಬರಿಗೂ ಈ ಎರಡನೆಯ ಸಂಬಂಧಕ್ಕಾಗಿ ಪಶ್ಚಾತ್ತಾಪ ಪಡಬೇಕಾಗಲಿಲ್ಲ.

ತಿಂಡಿತೀರ್ಥ ಮುಗಿಸಿ ಮೆಲಬರಿ ಮತ್ತೆ ಗೂಟಗಳಿಟ್ಟ ಮಾಳಕ್ಕೆ ಬಂದನು. ಅಲ್ಲಿ ಜೈಲ್ಸ ಬಳಿಯಲ್ಲಿಯೇ ಇದ್ದನು. ಅವನಿಗೆ ತನ್ನ ಬದಲಾದ ಯೋಜನೆಯನ್ನು ಆತ ತಿಳಿಸಿದನು. ‘ಅವಳು ಐದು ಗಂಟೆಯ ಮೊದಲು ಬರುವುದಿಲ್ಲ. ಆ ತನಕ ನಿನ್ನ ಬೇರೆ ಕೆಲಸಗಳನ್ನು ಮುಗಿಸಿಕೊಂಡು ಬಿಡು. ಅವಳನ್ನು ಭೇಟಿಯಾಗಲಿಕ್ಕೆ ನಿನಗೆ ತುಂಬಾ ವೇಳೆ ಸಿಗುತ್ತದೆ’. ಮೆಲಬರಿ ಅಂದನು, ‘ಆ ಹಸಿರು ಗಿಗ್ಗ ಗಾಡಿ ಅವಳಿಗಾಗಿ ಅಡ್ಡಿ ಇಲ್ಲ. ಅದರಲ್ಲಿ ನೀನು ಲಗು ಬಂದುಬಿಡಬಹುದು. ರಸ್ತೆಯಲ್ಲಿ ವಿಲಂಬವಾಗಲಿಕ್ಕಿಲ್ಲ. ಅವಳ ಪೆಟ್ಟಿಗೆ ಸಾಮಾನುಗಳನ್ನೆಲ್ಲ ಹಿಂದಿನಿಂದ ಹೊತ್ತು ತರಲು ನಮ್ಮ ಗಾಡಿಗಳಲ್ಲಿ ಒಂದನ್ನು ಅಟ್ಟಿದರಾಯಿತು’.

ವಿಂಟರಬೋರ್ನನಿಗೆ ಮೆಲಬರಿಯ ಅಂತಸ್ಥ ಹೇತುಗಳೇನೂ ಗೊತ್ತಾಗಲಿಲ್ಲ. ಅವನು ಇದೊಂದು ಉಪಕಾರ ಸಲ್ಲಿಸುವ ಅವಕಾಶವೆಂದುಕೊಂಡನು. ಅವನಿಗೆ ಗ್ರೇಸಳು ಬಂದು ಮುಟ್ಟುವ ಮುಂಚೆಯೇ ತನ್ನ ಸೇಬಿನ ಗಿಡಗಳ ಮಾರಾಟದ ವ್ಯವಹಾರವನ್ನೆಲ್ಲ ಮುಗಿಸಬೇಕೆಂದು ತವಕ. ಆದ್ದರಿಂದ ಅವನು ಕೂಡಲೇ ಹೊರಡುವ ಸಿದ್ಧತೆ ಮಾಡಿದನು.

ಮೆಲಬರಿಗೆ ಇನ್ನೊಂದು ತವಕ. ಮಗಳು ಮನೆಗೆ ಬರುವ ಈ ಏರ್ಪಾಟು ಚೆಂದವಾಗಬೇಕು. ಆ ಗಿಗ್ಗ ಗಾಡಿಯ ಗಾಲಿಗಳೋ ಚಳಿಗಾಲದಲ್ಲಿ ಇಂಥ ಪ್ರಯಾಣದ ಮುಂಚೆ ತೊಳೆದು ಸ್ವಚ್ಛವಾಗಿ ಇಟ್ಟವಲ್ಲ. ಏಕೆಂದರೆ ರಸ್ತೆಗಳೆಲ್ಲ ಕೆಸರುರಾಡಿ. ಗಾಲಿಗಳನ್ನು ತೊಳೆದಷ್ಟು ವ್ಯರ್ಥವೇ ಆಗುತ್ತಿತ್ತು. ಆದರೆ ಈ ಹೊತ್ತು ಆ ಗಾಲಿಗಳನ್ನು ಚೊಕ್ಕ ತೊಳೆಯಲಾಯಿತು. ಕುದುರೆಯ ಲಗಾಮು, ಪಟ್ಟಿ, ಥಡಿಗಳನ್ನೆಲ್ಲ ಉಜ್ಜಿ ಹೊಳಪುಗೊಳಿಸಲಾಯಿತು. ಬೂದಿ ಬಣ್ಣದ ಕುದುರೆಯನ್ನು ನೊಗಕ್ಕೆ ಕಟ್ಟಿದಾಗ ವಿಂಟರಬೋರ್ನ ಅದನ್ನು ಅಟ್ಟಲು ಗಾಡಿಯೇರಿ ಕೂತಾಗ, ಮೆಲಬರಿ ಕೈಯಲ್ಲಿ ಒಂದು ಕಪ್ಪು ಪಾಲಿಶ್ ಕೊಡುವ ಬ್ರಶನ್ನು ಹಿಡಿದುಬಂದು ಆ ಕುದುರೆಯ ಹಳದಿಯಾದ ಖುರಗಳಿಗೆ ತಾನೇ ಒಪ್ಪ ಕೊಡಲು ತೊಡಗಿದನು.

'ನೋಡು ಜೈಲ್ಸ,' ಖುರಗಳನ್ನು ಕಪ್ಪುಗೊಳಿಸುತ್ತ ಮೆಲಬರಿ ಅಂದನು, 'ಒಳ್ಳೆ ಓರಣದ ಶಾಲೆಯಿಂದ ಗ್ರೇಸ್ ಮನೆಗೆ ಬರುತ್ತಾಳೆ. ಅವಳಿಗೆ ಮನೆಯು, ಮನೆ ಬಳಕೆಯ ಅಂದುಗೇಡಿತನ ಕಂಡು ಅಸಹ್ಯವೆನಿಸಬಹುದು. ಇಂಥ ಚಿಕ್ಕ-ಪುಟ್ಟ ಸಂಗತಿಗಳೇ ಅಚ್ಚುಕಟ್ಟಿನ ಎಳೆ ಹೆಣ್ಣಿನ ಸುಟಿಯಾದ ಕಣ್ಣಿಗೆ ಕುಕ್ಕುವವು. ನಾವು ಇಲ್ಲಿಯೇ ಹಳ್ಳಿಗಾಡಿನಲ್ಲಿಯೇ ಸಮ್ಮಷ್ಟಕ್ಕೇ ಬಿದ್ದಿದ್ದವರು ನೆಲದಿಂದ ಕಂಡು ಬಿಳಿ ಬುರುಸು ಬಂದು ನಮ್ಮ ಮೇಲೆ ಏರಿ ಹಬ್ಬಿದರೂ ನಮಗೆ ಗೊತ್ತಾಗುವುದಿಲ್ಲ. ಆದರೆ ಅವಳು, ಶಹರದಿಂದ ಹೊಸತಾಗಿ ಬರುವವಳು — ಅವಳು ಇದನ್ನೆಲ್ಲ ನೋಡೇ ನೋಡುವಳು'.

'ಸರಿ ಮತ್ತೆ. ನೋಡುವವಳೇ', ಜೈಲ್ಸ ಒಪ್ಪಿದ.

'ಮತ್ತೆ ನಾವು ಇದನ್ನು ನೋಡದಿದ್ದರೆ. ಅವಳು ನಮ್ಮನ್ನೇ ಹೀಗಳೆಯುವಳು'.

'ಇಲ್ಲ. ಹಾಗೆ ಹೀಗಳೆಯಲಿಕ್ಕಿಲ್ಲ'. ಜೈಲ್ಸ ಈಗ ಒಪ್ಪಲಿಲ್ಲ.

'ಅಲ್ಲ, ಅಲ್ಲ, ಇದು ಬರೇ ಮಾತು. ಅವಳು ಹಾಗೆಲ್ಲ ಮಾಡುವಂಥವಳಲ್ಲ, ಬಹಳ ಒಳ್ಳೆಯ ಹುಡುಗಿ. ಆದರೆ ಅವಳು ಹಿಂದೆ ನಮ್ಮನ್ನು ಕಂಡು ಹೋದ ಅಂದಿನಿಂದ ಏನೆಲ್ಲ ಓದಿರಬೇಕು, ನೋಡಿರಬೇಕು. ಅದನ್ನೆಲ್ಲ ಆಲೋಚಿಸಿ ಅವಳ ಅಭಿಪ್ರಾಯಗಳನ್ನು ನಾವಾಗಿ ಊಹಿಸಿ ಇದುರಾಗ ಬೇಡವೇ? ಅವಳು ಇಲ್ಲಿಗೆ ಬಂದು ಹೋಗಿ ಒಂದು ವರ್ಷ ಆಯಿತು. ಕಳೆದ ಬೇಸಿಗೆಯಲ್ಲಿ ಅವಳು ಯುರೋಪದಲ್ಲಿ ಸಂಚಾರಕ್ಕೆ ಹೊರಟುಹೋಗಿದ್ದಳು. ಅಂದಾಗ ನಾವೀಗ ಅವಳ ಕಣ್ಣಿಗೆ ಸಣ್ಣವರಾಗಿ ಕಾಣಬಹುದು' ಮೊದಮೊದಲಿಗೆ, ಮೆಲಬರಿಯ ದನಿಯಲ್ಲಿ ಒಂದು ಹಿಗ್ಗು ಇತ್ತು. ತಮ್ಮ ಹೀನಾಯವನ್ನು ಹೀಗಳೆಯುವ ಆ ತೋರಿಕೆಯ ಭಾವದಲ್ಲಿಯೇ ಅವನಿಗೆ ಹಿಗ್ಗು ಅನಿಸಿದಂತೆ ಇತ್ತು. ಏಕೆಂದರೆ ಸುಸಂಸ್ಕೃತ ಸುಧಾರಿಸಿದ ಸ್ವರೂಪದಲ್ಲಿಯೂ ಅವಳು ಎಂದೆಂದಿಗೂ ಅವನದೇ ಕರುಳಿನ ತುಣುಕಲ್ಲವೇ? ಆದರೆ ಜೈಲ್ಸ ಹಾಗಲ್ಲ. ಅವನಿಗೆ ಕುಗ್ಗು ಅನಿಸಿತು. ಅನುಮಾನವೆನಿಸಿತು. ತನ್ನ ಬಟ್ಟೆಗಳನ್ನು ಅವನು ಒಮ್ಮೆ ಸಂದೇಹದಿಂದ ನೋಡಿಕೊಂಡನು. ಆದರೆ ಏನೂ ಅನ್ನಲಿಲ್ಲ.

ಅಪನದೊಂದು ವಾಡಿಕೆ. ಸಸಿ ನೆಡುವ ಶ್ರಾಯದಲ್ಲಿ ತನ್ನ ವ್ಯವಹಾರದ ಜಾಹಿರಾತೆಂದು ಒಂದು ಸೇಬಿನ ದೊಡ್ಡ ಗಿಡವನ್ನು ಅವನು ಸಂತೆಗೋ ಪೇಟೆಗೋ ಮಾದರಿಯಾಗಿ ಒಯ್ಯುತ್ತಿದ್ದನು. ಅದನ್ನು ಅವನು ಆ ಗಿಗ್ಗ ಗಾಡಿಯ ಮೇಲೆ ಅಡ್ಡ ಕಟ್ಟಿದನು — ಕುದುರೆಯ ಪ್ರತಿ ಹೆಜ್ಜೆಗೂ ಆ ಗಿಡದ ಟೊಂಗೆ-ಟಿಸಿಲುಗಳು ತಲೆದೂಗಾಡುತ್ತಾ ನಡೆದವು. ಮೆಲಬರಿ ಮನೆಯೊಳಗೆ ನಡೆದನು. ಆದರೆ ಆ ಗಿಗ್ಗ ಗಾಡಿ ಕಣ್ಮರೆಗೆ ಸರಿಯುವ ಮುಂಚೆ ಒಮ್ಮೆ ಆತ ಹೊರಗೆ ಕಾಣಿಸಿಕೊಂಡು ಹಿಂದಿನಿಂದ ಕೂಗಿದನು. 'ಇಕೋ ಜೈಲ್ಸ' — ಕೆಲು ಹೊದೆಯುವ ಶಾಲುಗಳನ್ನು ಎತ್ತಿ

ಕೊಂಡು ಮುಂದೆ ಓಡಿ ಬಂದು ಉಬ್ಬಸಬಿಡುತ್ತ ಅಂದನು, 'ಇಂದು ರಾತ್ರಿ ಬಹುಶಃ ಚಳಿ ಬೀಳಬಹುದು. ಅವಳಿಗೆ ಸ್ವಲ್ಪ ಹೆಚ್ಚು ಹೊದ್ದಿಕೊಳ್ಳಲಿಕ್ಕೆ'. ಕುದುರೆಯನ್ನು ಮತ್ತೆ ಓಡಿಸಲು ಹತ್ತಿದಾಗ ಪೆಲಬರಿ ಅಂದನು, 'ಅವಳಿಗೆ ಹೇಳು, ನಾನೇ ಬರುತ್ತಿದ್ದೆ ; ಆದರೆ ನನಗೆ ಆ ಚಾರಮುಂದ ಅಮ್ಮನ ಪಾರುಪತ್ಯಗಾರನೊಂದಿಗೆ ವಿಶೇಷ ಕೆಲಸ ಒಂದು ಗಂಟು ಬಿತ್ತು ; ಹೇಳಲು ಮರೆಯಬೇಡ'.

ವಿಂಟರಬೋರ್ನ್ ಹಾದಿಯ ಪಕ್ಕದ ಮರದ ಟೊಂಗೆಗಳ ಹಿಂದೆ ಕಣ್ಮರೆಯಾಗುವ ತನಕ ಅವನು ನೋಡುತ್ತ ನಿಂತನು. ಆ ಟೊಂಗೆಗಳಲ್ಲಿ ಹಬ್ಬಿದ ಜೇಡನ ಬಲೆಗಳಲ್ಲಿ ಈಗ ತಿಳಿಗೊಳ್ಳುತ್ತಿರುವ ಹವೆಯಲ್ಲಿ ಇಬ್ಬನಿಗಳು ಹೊಳೆಯಹತ್ತಿದವು. ಅವುಗಳ ಹೊಳಪು ಕಿರಿ-ಅಗಲ, ಕಿರಿ-ಅಗಲ ಆಗುತ್ತಿತ್ತು — ಜಗ್ಗಿಬಿಟ್ಟ ಸೂಜಿಗಳಂತೆ. ಕಾಡು ಪಾರಿವಾಳಗಳು ಬುರ್ರನೆ ಎದ್ದು ಹಾರಿದವು — ಜೈಲ್ಸ ಹಾದುಹೋಗುವಾಗ, ಮತ್ತು ಆಗ ತನ್ನಷ್ಟಕ್ಕೇ ಅಂದುಕೊಂಡನು 'ಅಕೋ, ಅಲ್ಲಿ ಅವರಿಬ್ಬರೂ ಒಂದು ಹೊಂದಿಕೆಯ ಮಟ್ಟಕ್ಕೆ ಬರಲಿ — ಇದೇ ನನ್ನ ಆಸೆ' — ಅವನ ಭಾವನೆ ಉಕ್ಕಿದಾಗೆಲ್ಲ ಇದೇ ಉದ್ಗಾರದಲ್ಲಿ ರೂಪುಗೊಳ್ಳುತ್ತಿತ್ತು ! — 'ಅಂಥ ಹುಡುಗಿಯನ್ನು ಇವನಿಗೆ ಒಗೆಯು ವುದು ಅಯ್ಯೋ ಪಾಪ! ಆದರೂ ಅದು ನನ್ನ ಕರ್ತವ್ಯ, ನನ್ನ ಧರ್ಮ — ಅವನ ತಂದೆಯ ಸಲುವಾಗಿ ..'

೫

ವಿಂಟರಬೋರ್ನ್ ಶರ್ಟನ್ ಅಬ್ಬಾಸಿಗೆ ಗಾಡಿ ಓಡಿಸಿದನು. ಅವನಲ್ಲಿ ಆಗ ಹರ್ಷದ ಉದ್ರೇಕವೂ ಇದ್ದಿಲ್ಲ. ಗಾಬರಿ ಕಂಗೇಡೂ ಇದ್ದಿಲ್ಲ. ಆತ ತನ್ನ ಅಂತರಾತ್ಮವನ್ನೂ ಪ್ರತ್ಯೇಕವಾಗಿ ನೋಡುವಂತಿದ್ದರೆ, — ಇಂದಿನ ದಿನಮಾನದ ಪ್ರೇಮಿಕರಿಗೆ ಆ ವಾಡಿಕೆ ಇದೆ — ಅವನಿಗೆ ನಿಜವಾಗಿಯೂ ಹೆಮ್ಮೆ ಅನಿಸಬಹುದಿತ್ತು. ತನ್ನಲ್ಲಿ ಒಂದು ಬಗೆಯ ಅಪರೂಪದ ಸಾಮರ್ಥ್ಯವು ತಲೆದೋರಿದ್ದನ್ನು ಕಂಡು,—ನಿರ್ಣಯವನ್ನು ಮಾತ್ರವಲ್ಲ ವಿಕಾರ ಭಾವನೆಯನ್ನೂ, ಇಂಥ ಬಿಕ್ಕಟ್ಟು ಸನ್ನಿವೇಶಗಳಲ್ಲಿ ಸ್ಥಗಿತವಾಗಿ ಇಡಬಲ್ಲ ತನ್ನ ಈ ಮನಸ್ಸಿನ ಸಾಮರ್ಥ್ಯವನ್ನೂ ಕಂಡು.

ಆದರೆ ಇದನ್ನು ಆತ ನೋಡಿಕೊಳ್ಳಲಿಲ್ಲ.

ಉದ್ದವಾದ ಸಪಾಟಾದ ಒಂದು ಓಣಿಯ ಬಾಯಿಗೆ ಆತ ತಲ್ಪಿದನು. ಅನೇಕ ಪಾದ ಚಾರಿಗಳನ್ನು ಧೃತಿಗೆಡಿಸಿದ ಓಣಿಯದು. ಅಲ್ಲಿ ಸಾಗಿಹೋಗುವುದೆಂದರೆ ಬರೆ ನಡೆಯುವುದು, ಸುಳಿದಾಡುವುದು. ಅಲ್ಲಿ ಆತ ಇದುರಿಗೆ ಒಬ್ಬ ತರಳೆಯನ್ನು ಕಂಡನು. ಆಕೆ ಕಾಲಿಗೆ ಹಾವಿಗೆಯಂಥ ಮರದ ಚಪ್ಪಲಿಗಳನ್ನು ತೊಟ್ಟಿದ್ದಳು—ಕೆಸರಿನಲ್ಲಿ ನಿರಾಳ ವಾಗಿ ನಡೆಯಲಿಕ್ಕೆ. ಆಕೆಯ ನಡಿಗೆಯಲ್ಲಿ ಏಕಾಗ್ರತೆ ಇತ್ತು. ಆನಂದವಿದ್ದಿಲ್ಲ.

ಆಕೆಯು ಮೈಕಟ್ಟು ಸುಟಿಯಾಗಿತ್ತು. ಆಕೆ ಯಾರೆಂದು ಗುರುತಿಸುವಷ್ಟು ಹತ್ತಿರಕ್ಕೆ ಆತ ಲಗು ಬಂದನು. ಆಕೆ ಮಾರ್ಟಿ ಸೌಥ. ಕ್ಲಿಕ್...ಕ್ಲಿಕ್...ಕ್ಲಿಕ್ — ಅವಳ ಮರದ ಚಪ್ಪಲಿ ಸದ್ದು ಮಾಡುತ್ತಾ ಸಾಗಿದ್ದುವು. ಅವಳು ತಲೆಯನ್ನು ಹೊರಳಿಸಲಿಲ್ಲ.

ಆದಾಗ್ಯೂ ಅವಳು ಅವನನ್ನು ಕಂಡಿದ್ದಳು, ಮತ್ತು ಅವನು ಹೀಗೆ ಹಿಂದಿನಿಂದ ಬಂದು ಬೆನ್ನು ಹಿಡಿಯಬಾರದೆಂದು ಅವಳು ಹಿಂಜರಿದಂತೆ ಇದ್ದಳು. ಆದರೆ ಅದನ್ನು ತಪ್ಪಿಸಲು ಬರುವಂತೆ ಇದ್ದಿಲ್ಲ. ಅವಳು ಅವಡುಗಚ್ಚಿ ಅವನ ಪರೀಕ್ಷಣೆಗೆ ಸಜ್ಜಾದಳು. ಮುಖವನ್ನು ಆದಷ್ಟು ನಿರ್ವಿಕಾರ ನಿರ್ಭಾವವಾಗಿ ಮಾಡಿಕೊಂಡಳು. ತನ್ನ ಹೆಜ್ಜೆಯಲ್ಲಿ ತುಸು ಹೆಚ್ಚಿನ ದೃಢತೆಯನ್ನು ಮೆಟ್ಟಿ ತುಂಬಿ ನಿಂತಳು.

'ಹಾವಿಗೆ ಚಪ್ಪಲಿ ಏಕೆ ತೊಡುವೆ ಮಾರ್ಟಿ ? ಓಣಿಗಳು ಕೆಸರು ತುಂಬಿದ್ದರೂ ಸುಂಕದ ಹೆದ್ದಾರಿ ಸ್ವಚ್ಛವಾಗಿಯೇ ಇದೆ'.

'ಇವು ನನ್ನ ಬೂಟುಗಳನ್ನು ಉಳಿಸುತ್ತವೆ'.

'ಆದರೆ ಹನ್ನೆರಡು ಮೈಲು ಹಾವಿಗೆ ತುಳಿದು ನಿನ್ನ ಪಾದಗಳು ಮರಳಿ ಉಳುಕಿ ಹೋದಾವು! ಬಾ, ಹತ್ತು, ನನ್ನೊಂದಿಗೆ ಗಾಡಿಯಲ್ಲಿ ಕುಳಿತುಕೋ'.

ಅವಳು ಅನುಮಾನಿಸಿದಳು. ಹಾವಿಗೆ ಚಪ್ಪಲಿ ಕಳಚಿದಳು. ಗಾಡಿಯ ಗಾಲಿಯ ಮೇಲೆ ಬಡಿದು ಅವುಗಳೊಳಗಿನ ಕಲ್ಲು, ಹರಳುಗಳನ್ನೆಲ್ಲ ಹೊರಚೆಲ್ಲಿದಳು ಮತ್ತು ಆ ತೂಗಾಡುವ ಸೇಬಿನ ಗಿಡದ ಮುಂದೆ ಗಾಡಿಯ ಮುಂಗಡೆಯಲ್ಲಿ ಏರಿ ಕೂತಳು. ನೀಳ್ಗೂದಲ ಕೊರತೆಯಿಂದಾಗಿ ತನ್ನ ಮೋರೆಯು ಅಂದಗೆಡದಂತೆ ಅವಳು ತುಂಬ ಅಗಲ ಅಂಚಿನ 'ಬೊನೆಟ್' ಟೊಪ್ಪಿಗೆಯನ್ನೂ ಅದರ ಮುಂಗಟ್ಟುಗಳನ್ನೂ ಒಪ್ಪಾಗಿ ಇಟ್ಟುಕೊಂಡಿದ್ದಳು. ಆದರೆ ಜೈಲ್ಸನಿಗೆ ಅವಳು ಕೇಶರಾಶಿಯನ್ನು ಕಳೆದು ಕೊಂಡಿದ್ದದ್ದು ಗೊತ್ತು ಆಗಿರಬಹುದು. ಅದರ ಉದ್ದೇಶವನ್ನು ಆತ ಊಹಿಸಿಯೂ ಇದ್ದಿರಬಹುದು. ಏಕೆಂದರೆ ಆ ಸುತ್ತಿನಲ್ಲಿ ಅಂಥ ಘಟನೆ ವಾಡಿಕೆಯದಲ್ಲದಿದ್ದರೂ ಕೇಳದ, ಕಾಣದ ಕತೆ ಅಲ್ಲ.

ಆದಾಗ್ಯೂ ಪ್ರಕೃತಿಯ ಅಲಂಕಾರವು, ಆ ಶಿರೋಭೂಷಣವು ಅವನಿಂದ ಎರಡೇ ಅಡಿಯ ಅಂತರಕ್ಕೆ ಇತ್ತು. ಮಾರ್ಟಿಯ ಕೈಬುಟ್ಟಿಯಲ್ಲಿ ಕಂದು ಕಾಗದದ ಒಂದು ಗಂಟಿನಲ್ಲಿ ಅವಳ ಪಿಂಗಲ ಕುಂತಲಗಳಿದ್ದುವು. ಗೌಪ್ಯವಾಗಿಡಬೇಕೆಂಬ ನಾಪಿತನ ವಿನಂತಿಯ ಮೂಲಕ ಅವಳು ಆ ಗಂಟನ್ನು ಹೆರವರ ಕೈಗೆ ಒಪ್ಪಿಸಿದ್ದಿಲ್ಲ.

ಜೈಲ್ಸ ತುಸು ಸಂಕೋಚದಿಂದಲೇ ವಿಚಾರಿಸಿದನು. ಅವಳ ತಂದೆ ಹೇಗೆ ಇದ್ದಾನೆಂದು.

ಆತ ಚೆನ್ನಾಗಿದ್ದಾನೆಂದಳು ಆಕೆ. ಒಂದೆರಡು ದಿನಗಳಲ್ಲಿ ಅವನು ಕೆಲಸಕ್ಕೆ ಶಕ್ತನಾಗುವನು. ಆ ಮರ ಮೈ ಮೇಲೆ ಬೀಳುವುದೆಂಬ ಹುಚ್ಚು ಹೆದರಿಕೆಯೊಂದಿಲ್ಲವಾದರೆ ಆತ ಚೆನ್ನಾಗಿಯೇ ಸುಧಾರಿಸಿಕೊಳ್ಳುತ್ತಿದ್ದನು.

‘ ನಿನಗೆ ಗೊತ್ತಿರಬೇಕು. ನಾನು ಅವನ ಬಗೆಗೆ ಎಷ್ಟು ವಿಚಾರಿಸಬೇಕೋ ಅಷ್ಟು ಯೋಗಕ್ಷೇಮ ಕೇಳಲು ಬರುವದಿಲ್ಲವೇಕೆಂಬುದು ’ ವಿಂಟರಬೋರ್ನ ಅಂದನು, ‘ ಅಲ್ಲಾ ನಿನಗೆ ಗೊತ್ತಿಲ್ಲವೇ ? ’

‘ ನನಗೆ ಗೊತ್ತು ಎಂತ ಕಾಣ್ತದೆ.’

‘ ಆ ಮನೆಗಳ ಕಾರಣದಿಂದ.’

ಮಾರ್ಟಿ ತಿಳಿದವಳಂತೆ ತಲೆದೂಗಿದಳು.

‘ ಹೌದು ಆ ಮನೆಗಳ ಬಗ್ಗೇ ನನ್ನ ಚಿಂತೆ ಎಂತ ತೋರಬಹುದು. ಅವನು ಸತ್ತರೆ ಅವು ನನ್ನ ಕೈ ಬಿಡುತ್ತವೆ. ಆದ್ದರಿಂದ ಅವನಿಗಿಂತ ಆ ಮನೆಗಳ ಚಿಂತೆಯೇ ನನಗೆ ಹೆಚ್ಚು ಎಂತ ತೋರಬಹುದು. ಮಾರ್ಟಿ, ನಿಜ ಹೇಳ್ತೇನೆ, ಆ ಮನೆಗಳ ಚಿಂತೆ ನನಗೆ ಇದ್ದೇ ಇದೆ. ಏಕೆಂದರೆ ನನ್ನ ಉತ್ಪನ್ನದ ಅರ್ಧ ಪಾಲು ಅವುಗಳಿಂದ ಬರುತ್ತದೆ. ಆದರೆ ಅವನ ಬಗ್ಗೆ ನನಗೆ ಚಿಂತೆ ಅನಿಸುತ್ತದೆ. ಮತ್ತು ಹೀಗೆ ಮನೆಗಳನ್ನು ಜೀವಾವಧಿಗೆ ಲಾವಣಿಗೆ ಕೊಡುವುದೇ ತಪ್ಪೆಂದು ಅನಿಸುತ್ತದೆ. ಇದರಿಂದ ಹೀಗೆಲ್ಲ ಭಾವನೆಗಳು ಕಲಬೆರಕೆ ಆಗಿಬಿಡುತ್ತವೆ.

‘ ಅಪ್ಪನು ಸತ್ತ ಮೇಲೆ ಆ ಮನೆಗಳೆಲ್ಲ ಚಾರಮುಂದ ಅಮ್ಮನವರದಾಗುವವು. ಅಲ್ವೇ ? ’

‘ ಅವು ಅವಳದಾಗುವವು.’

‘ ಆಗ ಅವು ನನ್ನ ಹೆಳಲುಗಳ ಸಂಗಡ ಉಳಿಯುವವು’—ಮಾರ್ಟಿ ಮನಸ್ಸಿನಲ್ಲಿಯೇ ಅಂದುಕೊಂಡಳು.

ಹೀಗೆ ಮಾತಾಡುತ್ತ ಅವರು ಶರ್ಟನ್ ಅಬ್ಬಾಸ ಊರನ್ನು ಮುಟ್ಟಿದರು. ಏನು ಒತ್ತಾಯ ಮಾಡಿದರೂ ಅವಳು ಅವನ ಜತೆಯಲ್ಲಿ ಅಲ್ಲಿಯ ಕೇರಿಯಲ್ಲಿ ಗಾಡಿಯಲ್ಲಿ ಕೂತು ನಡೆಯಲು ಒಪ್ಪಲಿಲ್ಲ. ‘ ಅದು ಇನ್ನೊಬ್ಬ ಹೆಣ್ಣಿನ ಅಧಿಕಾರವಪ್ಪ.’ ಆಕೆ ದುಷ್ಟ ಹುಡುಗಾಟಿಕೆಯಿಂದ ಅಂದಳು, ಹಾವಿಗೆ ಚಪ್ಪಲಿ ಏರಿಸಿಕೊಳ್ಳುತ್ತ, ‘ ನನಗೆ ಗೊತ್ತು. ನೀನು ಏನು ವಿಚಾರ ಮಾಡುತ್ತಿಯೆಂದು. ಆದರೂ ಈ ಅಂದವಾದ ಗಿಗ್ಗಿನಲ್ಲಿ ಸಾರಿಗೆ ಕೊಟ್ಟದ್ದಕ್ಕಾಗಿ ನಿನಗೆ ಅಭಾರಿ ! ನಮಸ್ಕಾರ ! ಬರ್ತೇನೆ !’

ಜೈಲ್ಸ ತುಸು ನಾಚಿ ಕೆಂಪಾದನು. ಅವಳತ್ತ ತಲೆ ಅಲ್ಲಾಡಿಸಿದನು ಮತ್ತು ಕೇರಿಗಳಲ್ಲಿ ಮುಂದೆ ಗಿಗ್ಗ ಗಾಡಿಯನ್ನು ಓಡಿಸಿದನು. ಚರ್ಚುಗಳು, ಸಮಾಧಿಗಳು, ಇತರ ಮಧ್ಯಯುಗೀನ ಕಟ್ಟಡಗಳು ಆ ನಿಚ್ಚಳ ಮುಂಬೆಳಕಿನಲ್ಲಿ ಮೂಲದ ಶಿಲ್ಪಿಗಳ ಕನಸು—ನಕ್ಷೆಗಳನ್ನೇ ಮೂರ್ತಮಾಡಿ ಇಂದಿನ ಅರಸಿಕ ಯುಗಕ್ಕೆ ಇದ್ದಕ್ಕಿದ್ದಂತೆ ತಮ್ಮ ಸುಸ್ಪಷ್ಟ ರೇಖಾಕೃತಿಗಳಲ್ಲಿ ಶತಮಾನಗಳ ಆಚೆಯಿಂದ ಒಮ್ಮೆ ಒಮ್ಮೆ ಮಿಂಚಿಸಿ ಕಾಣಿಸುವಂತೆ ಭಾಸವಾಗುತ್ತಿತ್ತು. ಆದರೆ ಅದನ್ನು ಅರ್ಥ ಮಾಡಿಕೊಳ್ಳಲು ಅವನಿಗೆ ಆಗಲಿಲ್ಲ. ಅವನು ಖಾನಾವಳಿಯ ಆವಾರದತ್ತ ಹೊರಳಿದನು.

ಮಾರ್ಟಿಯೂ ಅದೇ ದಾರಿಯಲ್ಲಿ ಹಿಂಬಾಲಿಸಿ ನಾಪಿತನ ಅಂಗಡಿಯನ್ನು ನೇರವಾಗಿ ಸೇರಿದಳು. ಪರಕೊಮ ಶರ್ಟಿನ್ ಅಬ್ಬಾಸದಲ್ಲಿ ತನ್ನ ಕಸಬುಗಾರರಲ್ಲಿಯೇ ಹಿರಿಯ. ಸುತ್ತಲಿನ ಜಮೀನುದಾರರ ಸಣ್ಣ ಮನೆತನದವರು ಅವನಿಗೆ ಉದಾರಾಶ್ರಯ ನೀಡಿದ್ದರು. ಅವರ ಬೋಳು ತಲೆಗಳಿಗೆ ಅವನೇ ಕೂದಲ ಟೋಪುಗಳನ್ನು ತಯಾರಿಸಿ ಕೊಡುವವನು. ಬದುಕಿದ್ದಾಗ ಅವನನ್ನು ಅಪೇಕ್ಷಿಸದವರೂ ಸತ್ತಮೇಲೆ ಅವನಿಂದ ಆಯುಷ್ಕರ್ಮ ಮಾಡಿಸಿಕೊಂಡು ಅವನಿಗೆ ಆಶ್ರಯ ನೀಡಿದ್ದುಂಟು. ಹೀಗೆ ಆ ಸುತ್ತಿನ ಸಿರಿವಂತರಿಗೆ, ಒಳ್ಳುಲದವರಿಗೆ ಅವನೇ ಕೇಶಕರ್ತಕನೆಂದು ಪರಕೊಮ ತನ್ನ ಅಂಗಡಿಯ ಇದುರಿಗೆ ಬೋರ್ಡು ಬರೆಯಿಸಿಕೊಂಡು ಕಂಬ ನಿಲ್ಲಿಸಿದ್ದನು.

ಆದರೆ ಈ ಸಿರಿವಂತರ ತಲೆಗಳಿಂದಲೇ ಅವನ ಮಕ್ಕಳಿಗೆ ಬಾಯಿ ತುಂಬ ತುತ್ತು ಸಿಗುತ್ತಿದ್ದಿಲ್ಲ. ಆದ್ದರಿಂದ ಅವನು ಆ ಅಂಗಡಿಯ ಹಿಂಗಡೆಗೆ ಇನ್ನೊಂದು ಕಂಬ ನಿಲ್ಲಿಸಿ ಅದರ ಕೆಳಗೆ ಇನ್ನೊಂದು ಅಂಗಡಿ ಇಟ್ಟಿದ್ದನು—ಕಿರಿ ಅಂಗಳದಲ್ಲಿ, ಅಲ್ಲಿ ಪ್ರತಿ ಶನಿವಾರ ರಾತ್ರೆ ಏಳರಿಂದ ಹತ್ತರ ತನಕ ಎರಡು ಪೆನ್ನುಗಳಿಗೆ ರೈತರ ಹಾಗೂ ಹೊಲದ ಕೆಲಸಗಾರರ ಕ್ಷೌರ ಮಾಡಿ ಪರಕೊಮ ತನ್ನ ಸಂಸಾರವನ್ನು ಸಾಗಿಸುತ್ತಿದ್ದನು.

ಮಾರ್ಟಿಯು ಮಾತ್ರ ಮುಂದುಗಡೆಯ ಅಂಗಡಿಗೇ ಹೋಗಿ ತನ್ನ ಕಾಗದದ ಗಂಟನ್ನು ಅವನ ಕೈಗೆ ಮಾತಿಲ್ಲದೆ ಇಟ್ಟಳು.

'ಧನ್ಯವಾದ' ನಾಪಿತನು ಹರ್ಷದಿಂದ ಅಂದನು, 'ನಿನ್ನೆ ರಾತ್ರೆ ನೀನು ಆಡಿದ ಮಾತುಗಳನ್ನು ಕೇಳಿದ ಮೇಲೆ ನಾನು ಇದನ್ನು ಕಲ್ಪಿಸಿದ್ದೇ ಇಲ್ಲ!'

ಅವಳು ಬದಿಗೆ ಸರಿದು ಮೋರೆ ಹೊರಳಿಸಿದಳು. ಆ ನೆನಪಿಗೆ ಅವಳ ಕಣ್ಣಿನಲ್ಲಿ ಹನಿಗಳು ಉಕ್ಕಿ ಬಂದವು.

'ನಾನು ಅಂದದ್ದು—ಯಾರಿಗೂ ಹೇಳಬಾರದು.' ಅವನು ಪಿಸುಗುಟ್ಟಿದನು. 'ಆದರೆ ನಿನಗೆ ಗೊತ್ತು. ನಿನ್ನನ್ನು ನಾನು ನಂಬಬಹುದು.'

ಇಷ್ಟು ಹೊತ್ತಿಗೆ ಮಾರ್ಟಿ ಆ ಬೇಸರದ ಕೆಲಸದ ಕೊನೆಯನ್ನು ಮುಟ್ಟಿದ್ದಳು. ಈಗ ಅವಳು ತನ್ನ ಬೇರೆ ಕೆಲಸಗಳಿಗಾಗಿ ಓಣಿಗುಂಟ ಅಸ್ವಸ್ಥ ಮನಸ್ಸಿನಿಂದ ನಡೆದಳು. ಈ ಕೆಲಸ ಬೊಗಸೆಗಳು ಅವಳನ್ನು ನಾಲ್ಕು ಗಂಟೆಯವರೆಗೂ ತೊಡಗಿಸಿ ಇಟ್ಟವು. ಅನಂತರ ಅವಳು ಮತ್ತೆ ಪೇಟೆಯ ಚೌಕದಲ್ಲಿ ಹಾದು ಬಂದಳು. ಅಲ್ಲಿಂದ ಪ್ರತಿಸಲವೂ ಹಾಯುವಾಗ ವಿಂಟರಬೋರ್ನನನ್ನು ಕಂಡುಕೊಳ್ಳದೇ ಇರುವದು ಅಶಕ್ಯವಿತ್ತು. ಏಕೆಂದರೆ ವರ್ಷದಲ್ಲಿ ಈ ಹಂಗಾಮಿಗೆ ಆತನು ಅಲ್ಲಿ ಸೇಬಿನ ಗಿಡದ ಒಂದು ಮಾದರಿ ಹಿಡಿದು ನಿಂತಿರುತ್ತಿದ್ದನು. ಅಲ್ಲಿ ನೆರೆದ ರೈತರ ತಲೆಗಳ ಮೇಲೆ ಅದರ ಟೊಂಗೆಗಳು ತೂಗಾಡುತ್ತಿದ್ದವು. ಪಟ್ಟಣದ ಎದೆಯಲ್ಲಿ ಹಣ್ಣಿನ ತೋಪಿನ ಒಂದು ಸುಖಕರವಾದ ಸೂಚನೆಯನ್ನು ನಟ್ಟಿದಂತೆ ಅನಿಸುತಿತ್ತು.

ಅಂದು, ಕೊನೆಗೊಮ್ಮೆ ಅವಳ ಕಣ್ಣು ಅವನ ಮೇಲೆ ಬಿದ್ದಾಗ ಆತನು ತುಸು ದೂರ ಸರಿದು ನಿಂತಿದ್ದನು. ಆ ಗಿಡವನ್ನು ರಾಜಚಿಹ್ನವಂತೆ ಎತ್ತಿಹಿಡಿದಿದ್ದನು. ತನ್ನ

ಸರಕನ್ನು ಮುಂದೊತ್ತಿ ಕೂಗುವ ಬದಲು ನೆಲವನ್ನೆ ನೆಟ್ಟ ದಿಟ್ಟಿಯಿಂದ ನೋಡುತ್ತ ನಿಂತಂತೆ ಇತ್ತು. ಹಾಗೆ ನೋಡಿದರೆ ಅವನು ತನ್ನ ಸೇಬಿನ ಸಸಿಗಳನ್ನಾಗಲಿ ಸೇಬಿನ ಮದ್ಯವನ್ನಾಗಲಿ ಮಾರುವದರಲ್ಲಿ ಎಂದೂ ಯಶಸ್ವಿಯಾದ ವರ್ತಕನಿದ್ದಿಲ್ಲ. ಆತ ಮಾತಾಡುವದೇ ಕಡಿಮೆ. ಮಾತಾಡಿದರೆ ಅವನ ಮಾತಿನ ರೀತಿ ಅಂಥ ಮಾರಾಟದ ವ್ಯವಹಾರಕ್ಕೆ ಮಾರಕವೇ ಆಗುವಂತೆ ಇತ್ತು.

ಅವಳು ಅವನ್ನು ನೋಡುತ್ತಿರುವಾಗಲೆ ಆತ ಅವಳಿಂದ ದೂರ, ಬೇರೆ ನಿಟ್ಟಿನಲ್ಲಿ ಕಣ್ಣನ್ನೆತ್ತಿದನು. ಮತ್ತು ಅವನ ಮುಖವು ಗುರುತಿನಿಂದಲೂ ಬೆರಗಿನಿಂದಲೂ ಬೆಳಗಿದಂತೆ ಆಯಿತು. ಅವಳು ಅವನ ನೆಟ್ಟ ನೋಟವನ್ನು ಹಿಂಬಾಲಿಸಿದಳು ಮತ್ತು ಅವನ ಕಡೆಗೆ ಬರುತ್ತಿರುವ ಮಣಿಬಲ್ಲ ಮೈಕಟ್ಟಿನ ತರುಣಿಯೊಬ್ಬಳನ್ನು ಕಂಡಳು. ಆ ಹರಿಣಾಕೃತಿಯಲ್ಲಿ ಅವಳು ಮೆಲಬರಿಯ ಮಗಳು ಗ್ರೇಸಳನ್ನು ಗುರುತಿಸಿದಳು. ಆದರೆ ಇವಳು ಹಿಂದಿನ ಗ್ರೇಸಳಲ್ಲ. ತನ್ನ ಹಿಂದಿನ ಅಂತಸ್ತಿಗಿಂತ ಬಹಳ ಮೇಲಿನ ಪರಿಷ್ಕಾರದ ಹಾಗೂ ಥಳಕಿನವಳಾಗಿ ಕಾಣುತಿದ್ದಳು. ವಿಂಟರಬೋರ್ನ ನಿಂತಲ್ಲಿಯೇ ಸೇಬಿನ ಗಿಡದ ಪಕ್ಕದಲ್ಲಿಯೇ ಬೇರುಬಿಟ್ಟಂತೆ ನಿಶ್ಚಲನಾಗಿಬಿಟ್ಟನು. ಅವಳನ್ನು ಇದಿರುಗೊಳ್ಳಲು ಮುಂದರಿಯದಾದನು. ತನ್ನ ಬೇಡಿಕೆಯನ್ನೇ, ಹ್ಯಾಟಿನ ಸಮೇತವಾಗಿ ಅವಳ ಕಡೆಗೆ ಆತ ಚಾಚಿದನು ; ಮತ್ತು ಆ ಬೀದಿಯ ಕೆಸರೊಳಗಿಂದ ತುದಿಗಾಲಿನ ಮೇಲೆ ಜಪ್ಪಿಸಿ ನಡೆಯುತ್ತ ಅವಳು ಆ ಪೇಟೆಯ ಚೌಕಿನ ಮಧ್ಯಕ್ಕೆ ಅವನು ನಿಂತಲ್ಲಿಗೆ ಬರುವುದನ್ನು ತುಸು ಕಂಗೆಟ್ಟುಕೊಂಡು ನೋಡಿದನು.

ಮಾರ್ಟಿಗೆ ಗೊತ್ತಾಯಿತು, ಜೈಲ್ಸನು ಕುಮಾರಿ ಮೆಲಬರಿಯು ಅಷ್ಟು ಮುಂಚೆ ಬರುವಳೆಂದು ಕಲ್ಪಿಸಿದ್ದಿಲ್ಲ. ನಿಜವಾಗಿಯೂ ಅವಳ ತಂದೆ ಅಂದಾಜು ಮಾಡಿದಂತೆ ಅವಳು ಬರುವ ಹೊತ್ತು ಐದು ಗಂಟೆ ಆಗಿತ್ತು. ಆ ಹೊತ್ತು, ಅವನ ತಲೆಯಲ್ಲಿ, ಬಯಲಲ್ಲಿ ಎದ್ದು ನಿಂತ ಕಟ್ಟಡದಂತೆ ದೊಡ್ಡದಾಗಿ ಕವಿದು ನಿಂತಿತ್ತು. ಆದರೆ ಈಗ ಆಕೆ ಬಂದೇ ಬಿಟ್ಟಿದ್ದಳು. ಇಷ್ಟು ಮುಂಚೆ—ಹೇಗೋ, ಅವನಿಗೆ ಅರ್ಥವಾಗಲೇ ಇಲ್ಲ ಮತ್ತು ಅವಳ ಸ್ವಾಗತದ ಅವನ ಸಿದ್ಧತೆಯೆಲ್ಲ ಹಿಗ್ಗುಮುಗ್ಗಾಯಿತು.

ಅವನ ಮೋರೆ ಕಪ್ಪಿಟ್ಟಿತು. ಅವಳು ನಡು ಬೀದಿಯಲ್ಲಿ ಹೆಜ್ಜೆ ಇಡಬೇಕು. ಅಷ್ಟೇ ಅಲ್ಲ ಅವಳ ಮೋರೆಯಲ್ಲಿ ನಾಚಿಕೆ ಗಂಟಿಕ್ಕಿತ್ತು. ಏಕೆಂದರೆ ಆ ಪೇಟೆಯ ಚೌಕದ ನಡುವೆ ಹತ್ತು ಅಡಿ ಎತ್ತರದ ಆ ಸೇಬಿನ ಗಿಡದ ಅಡಿಯಲ್ಲಿ ಅವನೊಂದಿಗೆ ಅವಳ ಭೆಟ್ಟಿ ಜರುಗಬೇಕು ! ಮನೆಗೆ ಬರುವಾಗ ಕೊಂಡುಕೊಂಡು ತೊಟ್ಟ ಹೊಸ ಕೈಚೀಲಗಳನ್ನು ಅವಳು ಅಷ್ಟರಲ್ಲಿ ಕಳಚಿದಳು—ಅವನಿಗೆ ಕುಲುಕಲಿಕ್ಕೆ ಒಂದು ಕೈಯನ್ನು ಮುಂದೆ ಮಾಡಿದಳು ; ಬೆರಳ ತುದಿಯ ನಸುಗೆಂಪಿನಿಂದ ಅಂಗೈಯ ಅಚ್ಚ ಬಿಳುಪಿನವರೆಗೆ ಬಣ್ಣದ ಛಾಯೆಗಳನ್ನು ಸೂಸುವ ಕೈ ಅದು. ಮತ್ತು ಆ ಸ್ವಾಗತ—ಸಂದರ್ಶನ ಅವರೀರ್ವರ ತಲೆಗಳ ಮೇಲೆ ಆ ಗಿಡದ ಟೊಂಗೆಗಳು ಎದ್ದು ತೊನೆದಾಡುತ್ತಿರುವಾಗ, ಅಂಥ ಊರ ಕೇರಿಗಳಲ್ಲಿ ಎಂದೂ ಒಂದು ಸಾಮಾನ್ಯ ನೋಟವಾಗಿದ್ದಿಲ್ಲ.

ಅವಳ ಕಣ್ಣಿನಲ್ಲಿ ತುಟಿಯಲ್ಲಿ ಮೂಡಿದ ಧನ್ಯವಾದವು ಸಂಕುಚಿತವಾಗಿಯೇ ಇತ್ತು. ಅದು ಅಸ್ವಾಭಾವಿಕವೂ ಆಗಿದ್ದಿಲ್ಲ. ಏಕೆಂದರೆ ಜೈಲ್ಸ ವಿಂಟರಬೋರ್ನ ಒಳ್ಳೆಯ ಉಡಿಗೆ ತೊಟ್ಟು ಒಳ್ಳೆಯ ನಡತೆ ಇಟ್ಟು ಬೇರೆ ಯಾವ ಹಳ್ಳಿಗನಿಗಿಂತ ಸುಟಿಯಾಗಿ ಕಂಡರೂ ಅವಳ ಪಕ್ಕದಲ್ಲಿ ಅತ ಗೊಡ್ಡಾಗಿಯೇ ಕಾಣುತ್ತಿದ್ದನು. ಅವನ ಆ ಮೊದಲನೋಟಕ್ಕೆ ಅವಳು ತೋರ್ಪಡಿಸಿದ ಗಾಂಭೀರ್ಯದ ಸಂಯಮದ ಪ್ರವೃತ್ತಿಯು ತನ್ನ ಅಸಡ್ಡಾಳತನಕ್ಕೆ ಅವನು ತಾನೇ ತೆತ್ತ ದಂಡವಾಗಿತ್ತು.

ಜೈಲ್ಸನು ಸೇಬಿನ ಗಿಡವನ್ನು ಬದಿಯಲ್ಲಿ ನಿಂತವನೊಬ್ಬನ ಕೈಗೆ ಕೊಟ್ಟನು—ಅಂದರೆ ಅಂಥ ಒಂದು ಅಸಡ್ಡಾಳ ತೊಡಕಿನ ವಸ್ತುವನ್ನು ಹಿಡಿದುಕೊಳ್ಳಲು ಒಬ್ಬನು ಸಿಕ್ಕಮೇಲೆ! ಅವರಿಬ್ಬರೂ ಅವನು ತಂಗಿದ ಖಾನಾವಳಿಗೆ ಹೊರಟರು. ಮಾರ್ಟಿ, ಮೆಲಬರಿಯ ಮಗಳು ತನ್ನನ್ನು ಗುರುತಿಸಲೆಂಬ ಹಿಗ್ಗಿನಿಂದ ಒಮ್ಮೆ ಮುಂದೆ ಹೆಜ್ಜೆ ಇಡಲು ಮಾಡಿದಳು. ಆದರೆ ಫಕ್ಕನೆ ತಡೆದು ಹತ್ತಿರದ ಒಂದು ಸರಕು ಹೇರುವ ಬಂಡಿಯ ಹಿಂದೆ ಜಾರಿದಳು. 'ಬೇಡ; ನಾನು ಇಲ್ಲಿ ಇರುವದು ಬೇಡ'—ಎಂದು ಪುಟಿಪುಟಿಸುತ್ತ ಅಲ್ಲಿಂದಲೆ ವಿಂಟರಬೋರ್ನನ ಜತೆಗಾತಿಯನ್ನು ವಿಮರ್ಶಕ ವೀಕ್ಷಣೆಗೆ ಗುರಿಮಾಡಿದಳು.

ಗ್ರೇಸ ಮೆಲಬರಿಯನ್ನು ಅಂದಾಗಲಿ ಮುಂದೆ ಎಂದಾಗಲಿ ಖಚಿತವಾಗಿ ವರ್ಣಿಸುವುದು ಕಠಿಣವಿತ್ತು. ಅವಳನ್ನೇ ಅಲ್ಲ, ಮಾನವ ಪ್ರಾಣಿಯನ್ನೇ, ವಿಶ್ವದ ಕೇಂದ್ರ ಬಿಂದುವಾದ ಒಬ್ಬ ಮನುಷ್ಯನನ್ನೇ ಅತ್ಯುನ್ನತ ದೃಷ್ಟಿಕೋನದಿಂದ ವರ್ಣಿಸುವದು ಎಷ್ಟು ಅಶಕ್ಯ! ಈ ಲೋಕಾತೀತ ಭಾವವನ್ನು ಬಿಟ್ಟರೂ ಇವಳಂಥ ಬಣ್ಣನೆಗೆ ಅಸಂಬದ್ಧವಾಗಿ ಕಾಣುವ ಹೆಣ್ಣು ಮುಖದ ಹಾಗೂ ಮೈಕಟ್ಟಿನ ಮಾಟ ಮೋಡಿಗಳ ತೋರಿಕೆಯಲ್ಲಿ ಇನ್ನಾರೂ ಇರಲಾರರು.

ಸಾಮಾನ್ಯವಾಗಿ ಹೇಳುವದಾದರೆ ಗ್ರೇಸಳು ಅವಳ ಆರೋಗ್ಯ ಮತ್ತು ಮನಸ್ಸಿನ ಗೆಲುವಿಗೆ ಅನುಕೂಲವಾಗಿ ಕೆಲವೊಮ್ಮೆ ಚೆಲುವೆಯಾಗಿ ಇದ್ದಳು. ಒಮ್ಮೊಮ್ಮೆ ಚೆಲುವೆಯಾಗಿ ಇರುತ್ತಿದ್ದಿಲ್ಲ. ಆದರೆ ಈ ಬಿಳುಪಿನಲ್ಲಿ ಕೆಂಪಿನ ಛಾಯೆ ಕಡಿಮೆ ಇತ್ತು. ಮೈಕಟ್ಟಿನಲ್ಲಿ ಅವಳು ಬಡಕಲು, ನಡೆದಾಟದಲ್ಲಿ ಚಪಲ. ಅವಳ ಮುಖಚರ್ಯೆ ತನ್ನ ಮನೋಗತವನ್ನು ಆಡಿ ತೋರಿಸುವ ಮೊದಲು ಇತರರ ಭಾವಪ್ರಕಟಣೆಯನ್ನೆ ಕಾಯುವಂತೆ ಇತ್ತು; ಇದೇ ರೀತಿ ತಾನು ನಡೆಯುವ ಮೊದಲು ಇತರರ ನಡತೆಯನ್ನು ಹಾರೈಸುವಂತೆ ಇತ್ತು. ಅವಳ ಪುಟ್ಟ ನಾಜೂಕು ಬಾಯಿಯು ದುಂಡು ಇನ್ನೂ ಪ್ರೌಢ ರೇಖೆಯನ್ನು ಪಡೆದಿದ್ದಿಲ್ಲ. ಅದರ ಮಾರ್ದವವೂ ಸೌಮ್ಯತೆಯೂ ಅವಳು ತನ್ನ ಹಿತಕ್ಕಾಗಿ ತೋರಿಸಬೇಕಾದ ಹಟಕ್ಕೇ ಅಡ್ಡಿಯಾಗುವಂತೆ ಇತ್ತು. ಅವಳ ಹುಬ್ಬುಗಳು ಒಳ್ಳೆ ಮಾಟವಾಗಿ ರೂಪುಗೊಂಡಿದ್ದವು—ತಿಬ್ಬು ಏರಿಸಿದ ಕಾಮನ ಬಿಲ್ಲಿನಂತೆ.

ಆಗ ಅವಳ ಉಡಿಗೆ ತೊಡಿಗೆಯಲ್ಲಿ ಹೇಳತಕ್ಕ ಮಾಟವೇನೂ ಇದ್ದಿಲ್ಲ. ಇದ್ದ ಮಾಟವೆಂದರೆ ಮೈಗೆ ಅಂಟಿಕೊಳ್ಳುವ ನೈಸರ್ಗಿಕ ಹದಕಟ್ಟು ಮತ್ತು ಶರ್ಟನ ಊರಿನ

ಕೇರಿಗಳಿಗೆ ಆಧುನಿಕವೆನಿಸುವಂಥ ರೀತಿ, ರಚನೆ. ಆದರೆ ಈ ಉಡಿಗೆ ತೊಡಿಗೆ ಒಳ್ಳೆಯ ಆಕರ್ಷಕವಿದ್ದರೂ ಅದು ಅಷ್ಟೇ ಅರ್ಥ ಕೊಡುತ್ತಿತ್ತು. ಏಕೆಂದರೆ ತಾನೇ ಆಯ್ಕೆ ಮಾಡದ ಹೊಲಿಯದ, ತಯಾರಿಸದ ಕಸೂತಿ ತುಂಬದ ಆಕಾರ ರಚಿಸದ ಬಟ್ಟೆ ಬರೆಯುಷ್ಟು ದೂರದ ಅವಾಂತರದ ಉಡಿಗೆಯ ಲಕ್ಷಣ ಹೆಣ್ಣಿನ ವ್ಯಕ್ತಿತ್ವಕ್ಕೆ ಬೇರೊಂದು ಇಲ್ಲ. ರೂಢಿ ಮೆಚ್ಚಿನ ಶೃಂಗಾರ, ರೂಪದ ಉತ್ಕರ್ಷ ಸಾಧಿಸುವುದು ಅಷ್ಟಕಷ್ಟೇ.

ಆದ್ದರಿಂದ ಜನರ ಅವಸರದ ಹಾಯು ನೋಟಕ್ಕೆ ಅವಳಲ್ಲಿ ಕಾಣುವ ಅಂಶ ತೀರ ಕಡಮೆ. ನಿಜವಾಗಿಯೂ ಅದು ಅವಳನ್ನೆ ಅಲ್ಲ, ಶರ್ಟನ್ ಊರಿನ ಕಣ್ಣಿಗೆ ಕಾಣಿಸಿಕೊಂಡ ರೂಪ ರೇಖೆಗಳೊಂದಿಗೆ ನಿಜವಾದ ಆ ಹೆಣ್ಣು ಕೇವಲ ಊಹೆಯ ಪ್ರಾಣಿ, ಮಬ್ಬಿನ ಆಕೃತಿ ; ಈಗೊಂದು ಚಲನ ಆಗೊಂದು ಕಟಾಕ್ಷ ತಾಳ್ಮೆಯ ಅಲಕ್ಷ್ಯದಿಂದ ಪ್ರೀತಿ ಸಹಾನುಭೂತಿಗಳು ಕಂಡು ಒಟ್ಟುಹಾಕಿ ಊಹಿಸಿಕೊಳ್ಳಬೇಕಾದ ನಿಜವಾದ ಸತ್ವ.

ಆ ಊರಿನಿಂದ ಹೊರಡಲಿಕ್ಕೆ ತುಸು ವಿಲಂಬವಾಯಿತು. ಮಾರ್ಟಿ ಮುಂದಕ್ಕೆ ಹೋಗಲಿಕ್ಕೆ ಆ ವಿಲಂಬವನ್ನು ಉಪಯೋಗಿಸಿಕೊಂಡಳು. ಅವಳಿಗೆ ಅವರಿಂದ ತಪ್ಪಿಸಿಕೊಂಡು ಪಾರಾಗಿ ಹೋಗುವದು ಬೇಕಿತ್ತು. ಅವಳನ್ನು ಕಂಡು ಗಾಡಿಯಲ್ಲಿ ಕರೆದು ಕೂಡ್ರಿಸಿಕೊಂಡು ಜತೆಗೆ ಸವಾರಿ ಮಾಡಲು ಒತ್ತಾಯ ಪಡಿಸಿ ಅವರಿಬ್ಬರ ಸರಸಕ್ಕೆ ವಿರಸ ತರುವದು ಅವಳಿಗೆ ಬೇಡವಿತ್ತು ; ಅವಳು ವೇಗದಿಂದ ನಡೆದಳು. ಮೂರರಲ್ಲಿ ಒಂದು ಪಾಲು ಹಾದಿ ಕ್ರಮಿಸಿದಳು. ಸಂಜೆಗತ್ತಲೆ ಕವಿಯು ತೊಡಗಿದಾಗ ದಿಬ್ಬ ಒಂದನ್ನು ಏರುತ್ತಿರುವಾಗ ಅವಳು ಹಿಂದೆ ನೋಡಿದಳು. ಅವರ ಗಾಡಿ ದಿಬ್ಬದ ಇಳುಕಲ ತಳವನ್ನೂ ಸಮೀಪಿಸುತ್ತಿತ್ತು. ಅವರ ತಲೆಗಳು ಒಂದಕ್ಕೆ ಒಂದು ಬಾಗಿದ್ದವು—ಅವರ ಆತ್ಮಗಳೇ ಅವುಗಳನ್ನು ಹಾಗೆ ಹತ್ತಿರ ಸೆಳೆದಿರಬೇಕು, ಖಂಡಿತ, ಲಗಾಮಿನ ಪಟ್ಟಿ ಹಿಡಿದ ಬಲವಾದ ರಟ್ಟೆ ಜೋಡಿ ಕುದುರೆಗಳ ತಲೆಗಳನ್ನು ಒಟ್ಟಿಗೆ ಜಗ್ಗುವಂತೆ. ಮಾರ್ಟಿ ಇನ್ನಷ್ಟು ಭರಭರನೆ ಹೆಜ್ಜೆ ಇಟ್ಟು ಮುಂದೆ ನಡೆದಳು.

ಆದರೆ ಅವರ ಮತ್ತು ಅವಳ ನಡುವೆ ಒಂದು ಸಾರೋಟು ಗಾಡಿ ಅದೇ ನಿಟ್ಟಿನಲ್ಲಿ ಬರುತ್ತಿತ್ತು. ಅವರ ದೀಪಗಳು ಉರಿಯುತ್ತಿದ್ದವು. ಅದು ಅವಳನ್ನು ಹಾಯ್ದಾಗ—ಅವಳ ನಡಿಗೆಯಿಂದಾಗಿ ಅದು ಅಷ್ಟು ಬೇಗೆ ಆಗಲಿಲ್ಲ—ಆ ದೀಪಗಳು ಅವಳ ಕಣ್ಣನ್ನು ಕುಕ್ಕಿದವು. (ಆಗ ಸುತ್ತಲಿನ ಕತ್ತಲೆ ಇನ್ನೂ ಹೆಚ್ಚಿತ್ತು.) ಅವಳಿಗೆ ಸಾರೋಟಿನ ಸರಂಜಾಮೇನೂ ಅಷ್ಟು ಕಣ್ಣಿಗೆ ಹೊಳೆಯುಲಿಲ್ಲ.

ಆ ಸಾರೋಟಿನ ಬೆನ್ನು ಹಿಡಿದು ಅದರ ಗುಂಟವೇ ನಡೆದರೆ, ಹಿಂದಿನಿಂದ ಬರುವ ಗಿಗ್ ಗಾಡಿಯೊಳಗಿನ ಜೋಡಿಯ ಭೆಟ್ಟಿ ಆಗಲಿ, ಕನಿಕರದ ತನ್ನ ಎತ್ತುಗಡೆ ಆಗಲಿ ತಪ್ಪಿಸಿಕೊಳ್ಳಬಹುದು.—ಅನಿಸಿತು ಮಾರ್ಟಿಗೆ. ದಿಬ್ಬದ ಉದ್ದ ಏರಿಯಲ್ಲಿ ಆ ಸಾರೋಟು ಅವಳ ತೀರ ಹತ್ತಿರ ಬಂದೊಡನೆ ಅವಳು ಅದರ ಗಾಲಿಗಳಿಗೆ ತಾಗಿ

ನಡೆಯುಹತ್ತಿದಳು. ಆಗ ಹತ್ತಿರದ ದೀಪದ ಕಿರಣವೂ ಅವಳ ರೋಮರೋಮಂಗಳನ್ನೇ ಬೆಳಗಿಸಿತು. ತುಸು ಹೆಜ್ಜೆ ಹಿಂದಿಟ್ಟ ಕೂಡಲೆ ಸಾರೋಟು ನಿಂತಿತು. ಮತ್ತು ಅವಳ ಸೋಜಿಗಕ್ಕೆ, ಸಾರೋಟಿನ ಸಾಬಿಯು ಹೆಗಲಮೇಲಿಂದಲೇ ಹಣಕಿ ಕೇಳಿದನು— 'ಗಾಡಿಯಲ್ಲಿ ಬರುವಿಯೋ?' ಎಂದು. ಈ ಪ್ರಶ್ನೆ ಇನ್ನಿಷ್ಟು ಸೋಜಿಗವೆನಿಸಲಿಕ್ಕೆ ಕಾರಣವೆಂದರೆ, ಅದು ಸಾರೋಟಿನ ಒಳಗಡೆಯಿಂದ ಹೊರಟ ಒಂದು ಅಪ್ಪಣೆಯ ಮೇರೆಗೆ ಕೇಳಿದ್ದಾಗಿತ್ತು.

ಮಾರ್ಟೆ ಸಂತೋಷದಿಂದ ಒಪ್ಪಿಕೊಂಡಳು. ಏಕೆಂದರೆ ಆಕೆ ದಣಿದಿದ್ದಳು, ವಿಪರೀತ ದಣಿದಿದ್ದಳು. ರಾತ್ರೆ ಎಲ್ಲ ದುಡಿದು ಹಗಲೆಲ್ಲ ಹಾದಿ ನಡೆದು. ಅವಳು ಸಾರೋಟ ಸಾಬಿಯ ಪಕ್ಕದಲ್ಲಿಯೇ ಏರಿ ಕುಳಿತಳು, ಈ ಸೌಭಾಗ್ಯ ತನಗೆ ಏಕೆ ಒದಗಿ ಬಂದಿತೆಂದು ಸೋಜಿಗ ಪಡುತ್ತ. ಆ ಸಾರೋಟ ಸಾರಥಿ ಭವ್ಯ ಆಳು. ಅವನೊಂದಿಗೆ ಆ ಕುರಿತು ವಿಚಾರಿಸಲಿಕ್ಕೆ ಅವಳು ಇಷ್ಟಪಡಲಿಲ್ಲ. ಆದರೆ ಅದು ಕೆಲವೇ ಹೊತ್ತು.

ಕಟ್ಟ ಕಡೆಗೆ ಅವಳು ಕೇಳಿಯೇ ಬಿಟ್ಟಳು, 'ನನ್ನನ್ನು ಗಾಡಿಯನ್ನೇರಿ ಕೂಡ್ರಲು ಹೇಳುವಷ್ಟು ದಯೆ ತೋರಿಸಿದವರು ಯಾರು ?'

'ಚಾರಮಂದ ಅಮ್ಮನವರು', ಆ ಪ್ರತಿಮಾಕಾರದ ಸಂಗಾಡಿ ಅಂದನು.

ಮಾರ್ಟೆ ಆ ಹೆಸರು ಕೇಳಿದೊಡನೆ ಚಲವಿಚಲವಾದಳು. ಕಳೆದ ರಾತ್ರೆಯ ಅವಳ ಅನುಭವಗಳೊಂದಿಗೆ ಅದು ಅಷ್ಟೊಂದು ಅಂಟಿಕೊಂಡಿತ್ತು. 'ಇದು ಅವರ ಸಾರೋಟೋ ?'

'ಹೌದು. ಅವರು ಒಳಗಡೆಗೆ ಇದ್ದಾರೆ'

ಮಾರ್ಟೆ ಆಲೋಚನೆ ಮಾಡಿದಳು. ತಾನು ದಿಬ್ಬದ ಏರಿಯಲ್ಲಿ ಹೆಜ್ಜೆ ಎಳೆಯುತ್ತ ಬರುವುದನ್ನು ಈ ಚಾರಮಂದ ಅಮ್ಮ ನೋಡಿರಬೇಕು. ಜತೆಗೆ ಈ ದೀಪಗಳ ಉರಿಬೆಳಕಿನಲ್ಲಿ ನನ್ನ ಜಡ್ಡಿ ಕಿತ್ತ ತಲೆಯನ್ನೂ ಕಂಡಿರಬೇಕು. ಮತ್ತು ಈ ಬೋಳ್ಕತಲೆ ತನ್ನ ಬಯಕೆಯದೇ ಫಲವೆಂದು ಆಕೆ ತಿಳಿದಿರಬೇಕು.

ಮಾರ್ಟೆ ಹೀಗೆ ತಿಳಿಯುವುದರಲ್ಲಿ ಬಹಳೇನು ತಪ್ಪಿದ್ದಿಲ್ಲ. ಆ ಸಾರೋಟಿನಲ್ಲಿ ಆಳವಾದ ಎರಡು ಕಣ್ಣುಗಳು ಮಾಗಿದ ಚೆಲುವಿನ ಮೋರೆಯೊಳಗಿಂದ ಹೊರಗೆ ನೋಡುತ್ತಿದ್ದವು. ಆ ಕಣ್ಣುಗಳ ಹಿಂದೆ ಅಗಾಧವಾದ ರಹಸ್ಯದ ಮನಸ್ಸು ಮಿಡಿಯುತ್ತಿತ್ತು. ಆ ರಹಸ್ಯದಡಿಗೆ ತೀವ್ರವಾಗಿ ಶೀಘ್ರವಾಗಿ ಆಶುತೋಷದ ಕಾವಿನಿಂದ ಉಕ್ಕುವ ಹೃದಯವಿತ್ತು. ಆ ಹೃದಯವು ಕೆಲವೊಮ್ಮೆ ಹಿಂದುಮುಂದಿನ ಯೋಚನೆಯಿಲ್ಲದೆ, ದುಡುಕಿ ಆವೇಶಗೊಳ್ಳುತ್ತಿತ್ತು. ಸದ್ಯ ಈ ಹುಡುಗಿಯನ್ನು ಗುರುತಿಸಿದೊಡನೆ ತತ್‌ಕ್ಷಣದ ಪ್ರೇರಣೆಯಿಂದ, ಬಹುಶಃ ತನ್ನ ಹಸ್ತಕನ, ಪರಕೋಮನ ಯಶಸ್ಸಿಗೆ ದ್ಯೋತಕವಾದ ಅವಳ ರಿಕ್ತ ಸ್ವರೂಪವನ್ನು ಕಂಡು ತನ್ನ ಇಷ್ಟಸಿದ್ಧಿಗಾಗಿ ತೃಪ್ತಿಪಟ್ಟು ಆಕೆ ಹಾಗೆ ಅಪ್ಪಣೆ ಮಾಡಿದಳು.

'ಅಮ್ಮನವರು ನಿನ್ನನ್ನು ಹೀಗೆ ಕೇಳಿದ್ದೇ ಒಂದು ಆಶ್ಚರ್ಯ' ಅರಸು

ಕೀವಿಯಲ್ಲಿ ಆ ಸಾರೋಟು ಸಾಬಿ ಉದ್ಗರಿಸಿದನು, 'ಈ ಹಿಂದೆ ಅವರು ಹೀಗೆ ಎಂದೂ ಮಾಡಿದ್ದೇ ಇಲ್ಲ. ಅವರು ಈ ಹಳ್ಳಿಯ ಮಂದಿಯಲ್ಲಿ ಯಾವ ಆಸಕ್ತಿಯನ್ನೂ ವಹಿಸುವುದಿಲ್ಲ.'

ಮಾರ್ಟ ಮತ್ತೇನೂ ಅನ್ನಲಿಲ್ಲ. ಆದರೆ ಆ ದೇವತಾ ಮನುಷ್ಯಳ ಇಣುಕು ನೋಟವೇನಾದರೂ ಸಿಗಬಹುದೇ ಎಂದು ತಲೆಯನ್ನು ಹೊರಳಿಸಿದಳು. ಏಕೆಂದರೆ ಆ ಸಾರೋಟಿನ ಸಾರಥಿಯು ಹೇಳಿದ್ದು ನಿಜವಿತ್ತು. ಈ ಮಹಿಳೆಯು ತನ್ನ ಮುಗಿಲಟ್ಟದಿಂದ ಆ ಊರಿನ ಮಣ್ಣು ನೆಲದಲ್ಲಿ ಇಳಿದು ಬಂದದ್ದು ಯಾರೂ ನೋಡಿದ್ದೇ ಇಲ್ಲ. ಆದರೆ ಅವಳಿಗೆ ಆ ಅಮ್ಮನವರು ನೋಡಲು ಸಿಗಲಿಲ್ಲ. ಅತ್ತ ಮೆಲಬರಿಯ ಮಗಳನ್ನೂ ವಿಂಟರಬೋರ್ನನನ್ನೂ ನೋಡಲು ಅವಳು ಹವಣಿಸಿದಳು. ಅವರ ಗಿಗ್ಗು ಗಾಡಿಯು ಕುದುರೆಯ ಮೂತಿಯೂ ಕೆಲಸಲ ಚಾರಮಂದ ಅಮ್ಮನ ಸಾರೋಟಿನ ಹಿಂಬದಿಗೆ ತಾಗುವಷ್ಟು ಹತ್ತಿರ ಬರುತ್ತಿತ್ತು. ಆದರೆ ಅವರು ಅದನ್ನು ಹಾಯಲು ಹವಣಿಸುತ್ತಿದ್ದಿಲ್ಲ. ಮುಂದೆ ಸಾರೋಟು ಬಾಗಾಯತದ ಗೇಟಿನ ಕಡೆಗೆ ತಿರುಗಿತು. ಆಗ ಅವರು ಭರದಿಂದ ಮುಂದೆ ಹಾಯ್ದು ಹೋದರು. ಗೇಟನ್ನು ತೆರೆಯಲೆಂದು ಸಾರೋಟು ನಿಂತಿತು. ಆಗ ಒಂದು ಕ್ಷಣದ ಮೌನದಲ್ಲಿ ಮಾರ್ಟ ಒಂದು ಮಂದ ಮಂಜುಳ ದನಿಯನ್ನು ಕೇಳಿದಳು, — ಅದು ತಂಗಾಳಿಯಂತೆ ಮೃದುವಾಗಿತ್ತು.

'ಅದೇನು ?' ಆಕೆ ಪಿಸುಗುಟ್ಟಿದಳು.

'ಒಡತಿ ಆಕಳಿಕೆ ತೆಗೆತಾರೆ !'

'ಅವರು ಆಕಳಿಕೆ ಏಕೆ ತೆಗೆಬೇಕು ?'

'ಓ, ಅವರಿಗೆ ಎಂಥೆಂಥ ಅದ್ದೂರಿಯ ಬಣ್ಣದ ಬದುಕಿನ ರೂಢಿ ಆಗಿದೆ. ಆದರೆ ಇಲ್ಲಿ ಅವರಿಗೆ ಬೇಸರ ಅನಿಸುತ್ತದೆ. ಆದ್ದರಿಂದ ಅವರು ಬೇಗನೆ ಮತ್ತೆ ಇಲ್ಲಿಂದ ಹೊರಟು ಹೋಗುವವರಿದ್ದಾರೆ.'

'ಅಷ್ಟು ಸಿರಿವಂತಿಕೆ, ಅಷ್ಟು ಅದ್ದೂರಿ, ಆದರೂ ಹೀಗೆ ಆಕಳಿಕೆ ?' ಆ ಹುಡುಗಿ ಗೊಣಗುಟ್ಟಿದಳು. 'ಅಂದಾಗ, ನಮ್ಮಂಥ ಬದುಕೂ ಈ ಅಮ್ಮನವರಿಗೆ ಒಡಿಸುವುದಿಲ್ಲ ವೆಂದಾಯಿತು.'

ಮಾರ್ಟಿನ್‌ಳೂ ಸಾರೋಟಿನಿಂದ ಇಳಿದಳು. ದೀಪ ಮತ್ತೆ ಮೋರೆಯನ್ನು ಬೆಳಗಿತು. ಮತ್ತು ಸಾರೋಟು ಗೇಟಿನೊಳಗಡೆ ಸಾಗುತ್ತಿದ್ದಂತೆ, ಅದರ ಒಳಗಿನಿಂದ ಒಂದು ದನಿ ಅಂದಿತು 'ನಮಸ್ಕಾರ.'

'ನಮಸ್ಕಾರ, ಅಮ್ಮಾವರೆ' ಮಾರ್ಟ ಅಂದಳು ಕೈ ಹಣೆಗೆ ಎತ್ತಿ. ಆದರೆ ಅವಳಲ್ಲಿ ಅಷ್ಟೊಂದು ಕುತೂಹಲವನ್ನು ಹುಟ್ಟಿಸಿದ ಆ ಹೆಂಗಸನ್ನು, ಆ ದಿವಸ ಅವಳ ಮನಸ್ಸಿನಲ್ಲಿ ಅಷ್ಟೊಂದು ಬಲವಾಗಿ ಪ್ರಭಾವ ಬೀರಿದ ಹೆಣ್ಣು ಜಾತಿಯ ಎರಡನೆಯ ಒಂದು ವ್ಯಕ್ತಿಯನ್ನು ನೋಡಲು ಅವಳಿಗೆ ಸಾಧ್ಯವಾಗಲೇ ಇಲ್ಲ.

೬

ಈ ನಡುವೆ ವಿಂಟರಬೋರ್ನ್ ಮತ್ತು ಗ್ರೇಸ್ ಮೆಲಬರಿ ಇವರಿಬ್ಬರೂ ತಮ್ಮ ಸೀಮೆಯ ಚಿಕ್ಕ ಅನುಭವಗಳಿಗೆ ಒಳಪಟ್ಟಿದ್ದರು.

ಆ ಊರಿನಿಂದ ಹೊರಗೆ ಅವಳೊಂದಿಗೆ ಗಾಡಿಯೋಡಿಸಿಕೊಂಡು ಹೋಗುತ್ತಿರುವಾಗ ಮಂದಿಯ ಕಡೆಗಣ್ಣುಗಳು ಅವರ ಮೇಲೆ ಬಿದ್ದಿದ್ದುವು. ಮಂದಿಯಲ್ಲಿಯ ಹರೆಯುದವರಿಗೆಲ್ಲ ಒಂದೇ ಯೋಚನೆ — 'ಈ ವಿಂಟರಬೋರ್ನ ಮಹಾಶಯ ಒಳ್ಳೆಯ ಸೊಗಸಿನ ಸ್ಥಳದಲ್ಲಿ ಕೂತಿರುವನಲ್ಲ!' ಜತೆಗೆ ಇನ್ನೊಂದು ಯೋಚನೆ— 'ಇವನಿಗೆ ಇವಳೊಂದಿಗೆ ಯಾವ ನಂಟು? ಏನು ಸಂಬಂಧ?'. ಆದರೆ ವಿಂಟರಬೋರ್ನನಿಗೊ ಈ ಯಾತರದೂ ಅರಿವು ಇದ್ದೇ ಇಲ್ಲ — 'ಇವಳನ್ನು ನನ್ನ ವಶಕ್ಕೆ ಒಪ್ಪಿಸಿದ್ದಾಗಿದೆ. ಇವಳ ಜೋಪಾನ ನನ್ನ ಕೆಲಸ'— ಇದೊಂದೇ ಯೋಚನೆಯಲ್ಲಿ ಮಗ್ನನಾದ ಅವನ ಹೊರಗಣ್ಣು ಬೇರೆ ಯಾವ ಮಾತನ್ನೂ ಗ್ರಹಿಸುತ್ತಿದ್ದಿಲ್ಲ.

ಅವರಿಬ್ಬರ ಮಾತುಕತೆ ಕೆಲವು ಹೊತ್ತು ತೀರ ಚಿಕ್ಕ ಮಾತುಗಳಲ್ಲಿ ನಡೆಯುತ್ತಿತ್ತು. ಗ್ರೇಸಳು ತುಸು ಅಸ್ವಸ್ಥಳಾಗಿದ್ದಳು — ಹೊರಡುವ ವೇಳೆಯವರೆಗೂ ಅವಳಿಗೆ ಗೊತ್ತಾಗಿದ್ದಿಲ್ಲ, ತನ್ನ ಪ್ರವಾಸದಲ್ಲಿ ಏಕೈಕ ಸಾರಥಿ ಮತ್ತು 'ಸಾಥಿ' ಜೈಲ್ಸನೇ ಹೊರತು ತನ್ನ ತಂದೆ ಅಲ್ಲವೆಂದು.

ಶರ್ಟನ್ ಪಾರ್ಕ್ ಮತ್ತು ಕೋಟೆಯನ್ನು ಕಣ್ಮರೆಯಾಗುವಷ್ಟು ಹಿಂದೆ ಬಿಟ್ಟು ಬಯಲು ಪ್ರದೇಶಕ್ಕೆ ಬಂದಾಗ ಅವನು ಅಂದನು.

'ಆ ಬೌನ್ನಿಯ ಹೊಲಮನೆಯ ಇಮಾರತು ನಿನಗೆ ವಿಚಿತ್ರ ಕಾಣುವುದಿಲ್ಲವೇ? ಅವುಗಳನ್ನು ಆ ತಗ್ಗಿನೊಳಗಿಂದ ಮೈಗೂಡಕಿತ್ತು ಆ ದಿಬ್ಬದ ತುದಿಗೆ ನಿಲ್ಲಿಸಲಾಗಿದೆ. ಅಂದರೆ ಹಳೆಯ ಇಮಾರತು ಆ ತಗ್ಗಿನಲ್ಲಿ ಇತ್ತು'.

ಅವಳು ಅಹುದೆಂದು ಒಪ್ಪಿದಳು. ಆದರೆ ಅವನು ಕೈಯೆತ್ತಿ ಕಾಣಿಸದಿದ್ದರೆ ಅವಳಿಗೆ ಈ ಹಳೆ ಹೊಸವೆಂಬ ಭೇದ ಆ ಇಮಾರತಿನಲ್ಲಿ ಗೊತ್ತಾಗುತ್ತಿರಲಿಲ್ಲ.

'ಅವರದು ಈ ಸಲ ಸೇಬಿನ ಹಣ್ಣಿನ ಕೊಯಿಲು ಚೆನ್ನಾಗಿಯೇ ಆಗಿದೆ. ಪಾಡಾದ ಹಣ್ಣಿಲ್ಲ. ಗಾಣದಲ್ಲಿ ಹಿಂಡಲು ಅವರಿಗೆ ಆಗಲೇ ಇಲ್ಲ — ಗಾಡಿ ಹಾಯ್ದು ಹೋಗುವಾಗ ಅವನು ಒಂದು ಹಣ್ಣಿನ ತೋಪಿನ ಕಡೆಗೆ ತಲೆತೂಗಿದನು. ಅಲ್ಲಿ ಸೇಬಿನ ಕೊಯಿಲು ಅದಂದಿನಿಂದಲೂ ಹಣ್ಣು ರಾಶಿಗಳು ಬಿದ್ದಲ್ಲಿಯೇ ಇದ್ದವು.

ಅವಳು 'ಹೌದು' ಅಂದಳು, ಆದರೆ ಬೇರೆ ಇನ್ನೊಂದು ತೋಪನ್ನು ನೋಡಿ!

'ಅರೆ, ಅದಲ್ಲ. ನೀನು ಆ ಜಾನ್ — ಎಪಲ್ ಮರಗಳತ್ತ ನೋಡುವಿ. ನಿನಗೆ ಆ ಕಹಿ-ಸಿಹಿ ಸೇಬು ಗೊತ್ತಿಲ್ಲವೇ? ಹಿಂದೆ ಚೆನ್ನಾಗಿಯೇ ಗೊತ್ತಿತ್ತಲ್ಲ?

'ಅಯ್ಯೋ ಹೌದೇ? ನಾನು ಮರತೇ ಹೋಗಿದ್ದೆ. ಅಲ್ಲದೆ, ಗುರುತಿಸಲಿಕ್ಕೆ ಬಾರದಷ್ಟು ಕತ್ತಲೆ ಆಗಿ ಬಿಟ್ಟಿದೆ'.

ವಿಂಟರಬೋರ್ನ್ ಮಾತು ಮುಂದರಿಸಲಿಲ್ಲ. ಅವನಿಗೆ ಅನಿಸಿತು — ಹಿಂದೆ ಗ್ರೇಸಳ ಮನಸ್ಸಿಗೆ ಚಾಲನೆ ಕೊಡುತ್ತಿದ್ದ ತಿಳಿವಳಿಕೆಗಳೂ ಆಸಕ್ತಿಗಳೂ ಪೂರ್ತಿ ಸತ್ತು ಹೋಗಿವೆ. ಈ ಇತರ ಸಂಗಾತಿಗಳೊಂದಿಗೇ, ತನ್ನ ಹಿಂದಿನ ಬಿಂಬದ ವಿಶೇಷ ಲಕ್ಷಣಗಳೂ ಆರಿ ಆವಿಯಾಗಿ ಹೋಗಿರಬಹುದೇ — ಎಂದು ಅವನು ಸೋಜಿಗ ಪಟ್ಟನು.

ಅದು ಏನೇ ಇರಲಿ, ಆಗಿನ ವಿದ್ಯಮಾನವೇನಿತ್ತೆಂದರೆ, ಆತನು ಒರೆ ಜಾನ್-ಎಪಲ್ ಹಣ್ಣು ಮತ್ತು ಹೊಲಮನೆಗಳನ್ನು ನೋಡುವಲ್ಲಿ ಆಕೆಯು ಅದಕ್ಕೆ ವಿಪರೀತ ವಾದ ಇನ್ನಾವುದೋ ದೃಶ್ಯವನ್ನು ಕಾಣುತ್ತಿದ್ದಳು. ಭರದಿಂದ ಬೆಳೆಯುವ ಒಂದು ನಗರ ; ಆ ನಗರದಲ್ಲಿ ಒಂದು ಹೊಸ ಅಭಿರುಚಿಯ ಉಪನಗರ. ಅಲ್ಲಿಯ ಅಗಲವಾದ ಹಸಿರು ಹಾಸಿದ ಆವಾರ. ಸಂಜೆಯ ಹೊಂಬಿಸಿಲಲ್ಲಿ ಹೊಳೆಯುತ್ತಿದ್ದ ಸದಾ ಹರಿವ ವರ್ಣರಾಜಿ. ಅದರ ನಡುವೆ ಪುಟಿದಾಡುವ ಮುದ್ದು ಮಾಟದ, ನೀಲಿ, ಕಂದಿ, ಕೆಂಪು, ಬಿಳಿ ಬಣ್ಣಗಳನ್ನು ಕಲಾಪೂರ್ಣವಾಗಿ ರಚಿಸಿದಂತೆ ಶೋಭಿಸುವ ಬಟ್ಟೆತೊಟ್ಟು ಹರಟೆ, ಹಾಸ್ಯ, ವಿನೋದಗಳ ಬುಗ್ಗೆಗಳನ್ನು ಚಿಮ್ಮಿಸುತ್ತಿರುವ ಹುಡುಗೆಯರು : ಬಾಳಿನ ಹರಯದ ಹೆಮ್ಮೆಯಲ್ಲಿ ನಲಿದಾಡುವವರು ! ಹತ್ತಿರದ ಕಿಟಕಿಗಳಿಂದ ತೂರಿ ಬಂದು ಹವೆಯಲ್ಲಿ ಕಂಪಿಸುವ ಪಿಯಾನೋ ಮತ್ತು ಹಾರ್ಪ ವಾದ್ಯಗಳ ಸ್ವರಗಳು. ಆ ಹುಡುಗೆಯರಾದರೂ ಎಂಥವರು ? ಗ್ರೇಸಳ ಕೋಮಲ ಹೆಂಗರುಳು ಇದನ್ನು ಕಣ್ಮರೆಯಿಸುವಂತಿಲ್ಲ — ಆ ಹುಡುಗೆಯರ ತಂದೆ ತಾಯಂದಿರನ್ನು ಈ ಜೈಲ್ಸನು ತುಂಬ ಆದರದಿಂದ, ' ಜೀ ಹುಜೂರ ' ಎಂತ ' ಒಡೆಯಾ ' ' ಒಡತಿ ' ಎಂದು ಕರೆಯಬಹುದಿತ್ತು.

ಕಣ್ಣು ಕಟ್ಟಿದ ದೃಶ್ಯದ ಇದಿರು, ದಿನಬಳಕೆಯ ಆ ಹೊಲಮನೆಗಳು ಅವಳ ಇಪ್ಪತ್ತರ ಮಟ್ಟದ ದೃಷ್ಟಿಕೋನಕ್ಕೆ ತಡೆಯಲಾರದೆ ಹೋದುವು. ಮಲೆನಾಡಿನ ಏಕಾಂತ ಜೀವನದ ಒಕ್ಕಳ್ಳಿತನದ ತಿಳಿವಳಿಕೆಯೊಳಗೂ ಜೈಲ್ಸನಿಗೆ ಗೊತ್ತಾಯಿತು — ತಾನು ಮಾತಿಗೆ ಮೊದಲು ಮಾಡಿದ ವಿಷಯವು ತೀರಾ ಗಾಂಪನ ಸರಳತನದ್ದೆಂದು. ಆದ್ದರಿಂದ ಆತ ಇನ್ನೂ ಗಂಭೀರವಾದ ಶ್ರುತಿಯಲ್ಲಿ ಮಾತಿನ ತಂತಿಯನ್ನು ಮೀಂಟಿದನು.

' ಅಲ್ಲ. ಈಗ ಅದೆಲ್ಲ ಏನೋ ವಿಚಿತ್ರವೆನಿಸುತ್ತದೆ. ಅಲ್ಲವೇ ? — ವರ್ಷಗಟ್ಲೆ ಹಿಂದೆ ನಾವಿಬ್ಬರೂ ಒಬ್ಬರಿಗೊಬ್ಬರೂ ಆಡಿಕೊಳ್ಳುತ್ತಿದ್ದ ಮಾತು ? ನಾವು ಅಂದುಃ ಕೊಳ್ತಿದ್ದೆವಲ್ಲ ? — ನಿಂಗೆ ಇಪ್ಪತ್ತು ಮತ್ತು ನಂಗೆ ಇಪ್ಪತ್ತೈದು ಪ್ರಾಯ ಆಗೋ ತನಕ ನಾವು ಒಬ್ಬರನ್ನೊಬ್ಬರು ಹಾಗೇ ಮೆಚ್ಚತಾ ಇದ್ರೆ, ನಾವು...'

' ಓ ಅದೋ ? ಅದು ಹುಡುಗಾಟಿಕೆಯ ಬಡಂಬಡಿಕೆಯಾಗಿತ್ತು ! '

' ಆಂ...? ಹೂಂ...'

ಜೈಲ್ಸ ಫಕ್ಕನೆ ಉದ್ಗರಿಸಿದನು.

ಆಕೆ ಹೆಚ್ಚು ವಿಚಾರ ಪೂರ್ವಕವಾಗಿ ಅನ್ನತೊಡಗಿದಳು. 'ಅಲ್ಲ ನಾ ಅನ್ನೋದರ ಅರ್ಥವೇನೆಂದರೆ, ಆಗ ನಾವು ತೀರ ಎಳೆಯವರಿದ್ದೆವು'. ಅವನು ಹಾಗೆ ಫಕ್ಕನೆ ಹಳೆಯ ವಿಚಾರಗಳನ್ನೆತ್ತಿ ವಿಚಾರಣೆ ಆರಂಭಿಸಿದ ರೀತಿಯಿಂದ ಅವಳಿಗೆ ಹೊಳೆಯಿತು — ಈತ ಇನ್ನೂ ಬದಲಿಸಿಯೇ ಇಲ್ಲ. ಹಿಂದಿನಂತೆಯೇ ಇಂದೂ ಇದ್ದಾನೆ.

'ಅಂ! ಹಾಂ! ನನ್ನ ಕ್ಷಮಿಸಿಬಿಡು. ಮಿಸ್ ಮೆಲಬರಿ, ನಿನ್ನ ತಂದೆ ನಿನ್ನನ್ನು ಭೇಟಿಮಾಡಿ ಕರೆದುಕೊಂಡು ಬರಲು ನನ್ನ ಕಳಿಸಿದ್ದು'.

'ಅದು ನನಗೆ ಗೊತ್ತು. ಮತ್ತು ಅದಕ್ಕಾಗಿ ನನಗೆ ಬಹಳ ಆನಂದ'. ಗ್ರೇಸ ಹೀಗೆ ಹೇಳುತ್ತ ಅವನ ಕಡೆಗೆ ಮಮತೆಯಿಂದ ನೋಡಿದಳು.

ಅವನೂ ಅದರಿಂದ ಸಂತುಷ್ಟನಾದಂತೆ ಅನಿಸಿತು. ಅವನು ಮುಂದರಿದನು — 'ಆ ಕಾಲಕ್ಕೆ ನೀನು ನನ್ನ ಜತೇಲಿ ನಿಮ್ಮಪ್ಪನ ಕೊಲ್ಲಾರಿ ಬಂಡಿಯ ಹಿಂಬದಿಯಲ್ಲಿ ಕೂತಿದ್ದೆ. ನಾವು ಎಲ್ಲೋ ಊರು ಸುತ್ತಾಡಿ ಮನೆಗೆ ಹಿಂದಿರುಗಿ ಹೊರಟಿದ್ದೆವು. ನಾವೆಲ್ಲ ಗಾಡಿಯಲ್ಲಿ ಕೂತವರು, ಹರಾಜಕಟ್ಟೆಯ ಹಟ್ಟಿಯಲ್ಲಿ ಕುರಿಗಳನ್ನು ಕಟ್ಟಿಟ್ಟಂತೆ ಒತ್ತಾಗಿ ಹತ್ತಾಗಿ ಜಡಿದು ಕೂತಿದ್ದೆವು. ಹೊರಗೆ ಕತ್ತಲಾಗುತ್ತಾ ಬಂತು. ಆಗ ನಾನಂದೆ — ನಾನೇನೆಂದೆನೋ ನೆನಪಿಲ್ಲ. ಆದರೆ ನಿನ್ನ ಸೊಂಟದ ಸುತ್ತಲೂ ನನ ತೋಳನ್ನು ಚಾಚಿದೆ. ಮತ್ತು ನೀನು ಅದನ್ನು ಅಲ್ಲಿಯೇ ಇರಲು ಬಿಟ್ಟೆ. ಮುಂದೆ ಕೂತ ನಿನ್ನ ತಂದೆ ಬೊಲ್ಲನಗೌಡರಿಗೆ ಏನೇನೋ ಕತೆಹೇಳ್ತಾ ಇದ್ದವನು ಫಕ್ಕನೆ ತಡೆದು ಮಾತು ನಿಲ್ಲಿಸಿ ಚಿಲುಮೆ ಹೊತ್ತಿಸಿದ. ಆ ತನಕಾನೂ ನನ್ನ ತೋಳು ನಿನ್ನ ನಡುಬಳಸಿ ಇರಲು ನೀನು ಬಿಟ್ಟೆ. ಆದರೆ ಚಿಲುಮೆಯ ಉರಿ ಭಗ್ಗನೆ ಗಾಡಿಯ ಒಳವನ್ನೆಲ್ಲ ಬೆಳಗಿತು. ನಾವೆಲ್ಲ ಒಡೆದೆದ್ದು ಕಂಡಿವಿ. ಆಗ ನನ್ನ ತೋಳು ನಿನ್ನ ಸೊಂಟದಿಂದ ಜಗ್ಗನೆ, ಮಿಂಚಿನ ಹಾಂಗೆ ಹಿಂಜರಿದು ಹಾರಿತು. ಆದರೂ ಗಾಡೀಲಿ ಕೂತ ಕೆಲವರು ಅದನ್ನು ನೋಡೇಬಿಟ್ಟರು! ನಾನು ಅಷ್ಟು ಜೋರು ಹಿಂದೆಗೆದನಲ್ಲ, ನೋಡಿದವರು ನಕ್ಕೇಬಿಟ್ಟರು! ಆದರೆ ನಿಮ್ಮಪ್ಪ ಸಿಟ್ಟಾಗುವ ಬದಲು, ಹಾಲಿನಂತೆ ಹಾಯಾಗಿದ್ದ; ನುಣ್ಣಗಾಗಿದ್ದ. ಇದು ಆಶ್ಚರ್ಯವೆನಿಸಿತ್ತು, ಆಗ ನಂಗೆ. ನುಣ್ಣಗಿದ್ದನಷ್ಟೇ ಅಲ್ಲ ಅವನಿಗೆ ನಮ್ಮನ್ನು ಹಾಂಗ ಕಂಡು ಸಂತೋಷವೇ ಅನಿಸಿರಬೇಕೆಂದು ಅನಿಸ್ತು. ಅದೆಲ್ಲ ನೀನು ಮರೆತು ಬಿಟ್ಟೆಯೋ ಇಲ್ಲವೆ ನೆನಪುಂಟೋ?'

ಆಕೆ ಒಪ್ಪಿಕೊಂಡಳು; ಈವಾಗ ಆತ ಆ ವಿದ್ಯಮಾನಗಳನ್ನೆಲ್ಲ ಹೇಳಿದ ಮಾತ್ರಕ್ಕೆ ಅವಳಿಗೆ 'ನಾನು ಲಂಡಲಂಗ ಹಾಕುತ್ತಿದ್ದಿರಬೇಕಲ್ಲವೇ?' — ಆಕೆ ತುಸು ಠಕ್ಕತನದಿಂದಲೇ ಕೇಳಿದಳು.

'ಸಾಕು ಬಾ, ಮಿಸ್ ಮೆಲಬರಿ. ಇದೆಂಥ ಮಾತು? ಲಂಡಲಂಗವೇ? ನಂಗಿಂತ ನಿಂಗೇ ಹೆಚ್ಚು ಗೊತ್ತಿರಬೇಕು.'

ಆಗ ಗ್ರೇಸ ಹೇಳಿಕೊಂಡಳು — ಅವನಂಥ ಹಳೆಯ ಗೆಳೆಯನೊಡನೆ, ತಾನು ಅಷ್ಟೊಂದು ಹೆಚ್ಚಾಗಿ ಬೆಲೆಕೊಡುವಂಥ ಗೆಳೆಯನೊಡನೆ ತಾನು ವಾದಮಾಡುವುದಿಲ್ಲ.

ಇನ್ನೂ ಆತ ಅಂದಂತೆಯೇ ಆಗಿದ್ದು ಇದ್ದರೆ, ಈಗ ಅವಳು ಆ ಮಾನದಲ್ಲಿ ಮುದುಕಿಯೇ ಆಗಿರಬೇಕು. ಸದ್ಯದ ಕಾಲದಿಂದ ಆ ಪ್ರಸಂಗ ಅಷ್ಟು ಹಿಂದಿನದು, ದೂರದ್ದಾಗಿ ಕಾಣುತ್ತದೆ,

'ಆದರೆ ಕೆಲವು ಮಂದಿಯಲ್ಲಿ ಹಳೆಯ ಭಾವನೆಗಳು ಮರುಕಳಿಸಿ ಜೀವಂತ ವಾಗುತ್ತವೆ'. ಆಕೆ ಮುಂದರಿದು ಮೃದುವಾಗಿ ಅಂದಳು ; 'ಮತ್ತು ಇನ್ನು ಕೆಲವರಲ್ಲಿ ಅವು ಸತ್ತಿರುವುದೇ ಇಲ್ಲ.' ಆತನು ಆಡಿದನು.

'ಓ, ಅಂಥವರು ಪ್ರೇಮದೇವತೆಯ ಪರಮಭಕ್ತರು. ಅವರು ಉತ್ತಮರು. ಎಂದು ನಾನು ಭಾವಿಸುತ್ತೇನೆ. ನಾನೇನು ಅಷ್ಟು ಎತ್ತರದ ಮಟ್ಟಕ್ಕೆ ನಿಲ್ಲುವಂಥವಳೆಂದು ನಟಿಸಲಾರೆ.'

'ಅವರು' ಅಲ್ಲ — 'ಅವನು'.

ಗ್ರೇಸ ನಿಟ್ಟಿಸಿರುಬಿಟ್ಟಳು. 'ನಾನು ನಿನಗೆ ಬ್ರಾಯಟನ್‌ದ ಬಗೆಗೆ ಅಥವಾ ಶೆಲ್ಟನ್‌ಹ್ಯಾಮದ ಅಥವಾ ಕಳೆದ ಬೇಸಿಗೆಯಲ್ಲಿ ನಾನು ಭೆಟ್ಟಿ ಕೊಟ್ಟು ಬಂದ ಯುರೋಪದ ಬೇರೆ ಬೇರೆ ಸ್ಥಳಗಳ ಬಗ್ಗೆ ಹೇಳಲೇ ?' ಆಕೆ ಕೇಳಿದಳು.

'ಹೋ ಹೇಳು. ನಾನು ಮನವಾರೆ ಕೇಳುತ್ತೇನೆ.' ಆತ ಅಂದನು.

ಆಗ ಆಕೆ ವಿವಿಧ ಸ್ಥಳಗಳ ವ್ಯಕ್ತಿಗಳ ಕುರಿತು ಬಣ್ಣಿಸಹತ್ತಿದಳು. ಆದರೆ ಅವನು ಕೇಳಲಿಕ್ಕೆ ತೀರ ಆತುರ ಪಟ್ಟಿದ್ದನ್ನೇ ಅವಳು ಹೇಳದೇ ಬಿಟ್ಟಳು. ಅದೆಂದರೆ, ಅವಳ ಸ್ವಂತದ ಅಂತರಂಗದ ಅನುಭವಕ್ಕೆ ಸಂಬಂಧಪಟ್ಟ ಪ್ರತಿಯೊಂದನ್ನೂ ಆಕೆ ಉಲ್ಲೇಖಿಸಲೇ ಇಲ್ಲ! ಅವಳು ಮಾತು ಮುಗಿಸಿದ ಮೇಲೆ ಹಿಗ್ಗಿನಲ್ಲಿ ಅಂದಳು, 'ಈಗ ಇದಕ್ಕೆ ಪ್ರತಿಯಾಗಿ, ನೀನು ಹೇಳು. ನಾನು ಊರು ಬಿಟ್ಟು ದೂರಹೋದಂದಿನಿಂದ ಈ ಹಿಂಟಾಕ್ ಹಳ್ಳಿಯಲ್ಲಿ ಏನೇನು ಒದಗಿ ಬಂತು ?'

ಜೈಲ್ಸ್ ಒಳಒಳಗೆ ಅಂದುಕೊಂಡನು, 'ಅವಳ ಮತ್ತು ನನ್ನ ಇಬ್ಬರಿಂದ ಮಾತುಕತೆಯನ್ನು ಆದಷ್ಟು ದೂರವಿಡಲಿಕ್ಕೆ ಏನೇನಾದರೂ ಸರಿಯೇ'

ಅದು ನಿಜವಿತ್ತು. ಮಿಸ್ ಮೆಲಬರಿಯ ಮನೋಭೂಮಿಯ ಸಂಸ್ಕಾರದ ಕೃಷಿ ಇಷ್ಟು ಮುಂದುವರಿದಿತ್ತು. ಅವಳಿಗೆ ಚೆನ್ನಾಗಿ ಗೊತ್ತಿದ್ದು, ಅವಳು ಅದರ ವಿಕಾಸದಲ್ಲಿ ಅತ್ಯಂತ ಆಸಕ್ತಿ ತಳೆದಂಥ ವಿಷಯ ಏನೆಂದು, — ಅಂದರೆ, ತನ್ನದೇ ವಿಷಯವನ್ನು ಬಿಟ್ಟು ಬೇರೆ ಯಾವ ಸಂಗತಿಯನ್ನು ಕುರಿತು, — ಮಾತಾಡಲು ಆಕೆ ಸಮರ್ಥಳಾಗಿದ್ದಳು. ಹಳೆಯ ಹಿಂಟಾಕ್ ಹಳ್ಳಿಗಾಡು ವೃತ್ತಿಯ ಆ ಒಳ್ಳೆಯ ದಿನಗಳಿಂದ ಅವಳು ಬಹಳ ಜಾರಿದ್ದಳು.

ಆತ ತುಸು ಬೋಳು ಬೋಳಾದ ಮಾತಿನಲ್ಲಿಯೇ ಊರಿನ ಆಗುಹೋಗುಗಳನ್ನು ಬಣ್ಣಿಸುತ್ತಿರುವಾಗಲೇ, ಅವರಿಗೆ ಹಿಂದೆ ಹಾಕಿ ಸಂಜೆಯ ಮಬ್ಬಿನಲ್ಲಿ ಮುಂದೆ ಹೋಗುತ್ತಿದ್ದ ಒಂದು ಸಾರೋಟನ್ನು ಅವರು ಸಮೀಪಿಸಿದರು. 'ಆ ಸಾರೋಟು ಯಾರದೆಂದು ನೀನು ಬಲ್ಲೆಯಾ ?', ಮೆಲಬರಿಯ ಮಗಳು ಕೇಳಿದಳು.

ವಿಂಟರಬೋರ್ನ್ ಆ ಸಾರೋಟನ್ನು ಕಂಡಿದ್ದರೂ, ಗಮನಿಸಿದ್ದಿಲ್ಲ. ಈಗ ಅದನ್ನು ಪರಿಕಿಸಿ ಶ್ರೀಮತಿ ಚಾರ್ಮಂದಳದೆಂದು ಹೇಳಿದನು.

ಗ್ರೇಸಳು ಆ ವಾಹನವನ್ನು ಅದರ ಸುಗಮ ಸಾಗಾಟದ ಒಯ್ಯಾರವನ್ನು ವೀಕ್ಷಿಸುತ್ತ, ತಾನು ಕೂತಿದ್ದ ಗಾಡಿಗಿಂತ ಆ ವಾಹನದೊಂದಿಗೇ ತನಗೆ ಆತ್ಮೀಯತೆ ಹೆಚ್ಚುಂಟೆಂದು ಭಾವಿಸಿದಳು.

ಅವಳ ಮನೋಭಾವ ಜೈಲ್ಸನಿಗೂ ಗೊತ್ತಾಯಿತು. 'ಹೂಂ...ನಾವೂ ಅವರಷ್ಟೇ ಬೇಗ ಮೈಲುಗಳನ್ನು ಓಡಿ ಮುಗಿಸಬಹುದು.—ಅಂಥ ಅಗತ್ಯವೇ ಇದ್ದರೆ.' ಆತ ಅಂದನು. ಮತ್ತು ತನ್ನ ಮಾತಿಗೆ ಸರಿಯಾದ ಸ್ಪರ್ಧೆಯ ಹುರುಪಿನಲ್ಲಿ ತನ್ನ ಕುದುರೆಗೆ ಚಾಟಿ ಎಳೆದನು. ಇದರಿಂದ ಆದದ್ದೇನೆಂದರೆ ಮೆಲಬರಿಯ ಕುದುರೆಯ ಮೂತಿಯು ಶ್ರೀಮತಿ ಚಾರ್ಮಂದಳ ಹೆಚ್ಚು ಪ್ರಭಾವದ ಸಾರೋಟಿನ ಬೆನ್ನಿಗೆ ಹತ್ತಿರ ಬಂದಿತು.

'ಅದೋ — ಅಲ್ಲಿ ಮಾರ್ಟಿ ಸೌಥ್ ಕೂತಿದ್ದಾಳೆ. ಸಾರೋಟ ನಡೆಯಿಸುವವನ ಸಂಗಡ, ಅವನ ಪೆಟ್ಟಿಗೆಯ ಮೇಲೆ.' ಅವಳ ಬಟ್ಟೆಗಳನ್ನು ಗುರುತಿಸುತ್ತ ಜೈಲ್ಸ ಹೇಳಿದನು.

'ಓ, ಬಡ ಮಾರ್ಟಿ! ಅವಳಿಗೆ ಹೇಳಬೇಕು, ಇದೇ ಸಂಜೆಗೇ ನನ್ನನ್ನು ಕಾಣಲು ಬರಲಿಕ್ಕೆ. ಅವಳು ಅಲ್ಲಿ — ಸಾರೋಟಿನಲ್ಲಿ ಸವಾರಿ ಮಾಡಿ ಬಂದದ್ದು ಹೇಗೆ?'

'ನಂಗೊತ್ತಿಲ್ಲ. ಇದು ತೀರಾ ವಿಚಿತ್ರವೇ!'

ಹೀಗೆ ಈ ಜನರು ಏಕಮುಖವಾಗಿ ಹೊರಳಿದ ತಮ್ಮ ತಮ್ಮ ನಿಯತಿಯ ಗತಿಯಲ್ಲಿ ಆ ಹಾದಿಯಲ್ಲಿ ಒಟ್ಟಿಗೆ ಸಾಗಿದರು — ಆ ಸಾರೋಟಿನ ದಾರಿ ಮತ್ತು ವಿಂಟರಬೋರ್ನನ ದಾರಿ ಕವಲೊಡೆಯುವ ತನಕ ಮುಂದೆ ಆತನು ಕಿರಿ ಹಿಂಟೋಕದತ್ತ ತಿರುಗಿದನು. ಅಲ್ಲಿಯ ಮೊದಲಿನ ಮನೆಯೇ ಆ ಕಟ್ಟಿಗೆ ವ್ಯಾಪಾರಿಯ ದಾಗಿತ್ತು. ಕಿಟಿಕಿಯ ಕಿಂಡಿಗಳೊಳಗಿಂದ ಬೆಳಕಿನ ಕಂಬಿಗಳು ಹೊರಚಾಚಿದ್ದವು. ಅವುಗಳಲ್ಲಿ ಬಿಳಿಯ ನಿತ್ಯಪುಷ್ಪಗಳು, ನುಣುಪಾದ ಹಚ್ಚಗಿನ ಲಾರೆಲ್ ಎಲೆಗಳ ಪೊದೆಗಳ ಹಿನ್ನೆಲೆಗೆ ಸಾಕಷ್ಟು ಸ್ಪಷ್ಟವಾಗಿ ಬೆಳಗಿದ್ದವು. ಒಳಮನೆಯೂ ನಿಚ್ಚಳವಾಗಿ ಗೋಚರಿಸುತ್ತಿತ್ತು — ಗೋಡೆಯ ಕುಲಿಮೆಯಲ್ಲಿ ಹೊತ್ತಿ ಉರಿಯುತ್ತಿದ್ದ ಬೆಂಕಿಯ ಪ್ರಭೆಯಲ್ಲಿ. ಆ ಪ್ರಭೆಯು ನಡುಮನೆಯಲ್ಲಿ ಗೋಡೆಯ ಮೇಲಿನ ಚಿತ್ರಗಳಿಂದ ಮತ್ತು ಪುಸ್ತಕಗಳ ಕಪಾಟುಗಳಿಂದ, ಅಡುಗೆಯ ಮನೆಯಲ್ಲಿ ತಿಕ್ಕಿ ತೊಳೆದಿದ್ದ ಪಾತ್ರೆಗಳಿಂದ ಪಡಿಮೂಡಿ ಒಳಮನೆಯನ್ನು ಇನ್ನಷ್ಟು ಬೆಳಗಿತ್ತು.

'ಒಳಗೆ ಹೋಗುವ ಮೊದಲು, ಒಳಗಿನವರನ್ನು ಕರೆಯುವ ಮುಂಚೆ, ಈ ಮುದ್ದು ಮನೆಯನ್ನು ಒಂದು ಗಳಿಗೆ ಇಲ್ಲಿ ಹೊರಗೆ ನಿಂತು ಕಣ್ತುಂಬ ನೋಡೋಣ'— ಗ್ರೇಸ ಅಂದಳು.

ಅಡುಗೆಯ ಮನೆಯಲ್ಲಿ ರಾತ್ರೆಯ ಊಟ ಸಿದ್ಧವಾಗುತ್ತಿತ್ತು. ಸಾಮಾನ್ಯ

ವಾಡಿಕೆಯಲ್ಲಿ ಮೆಲಬರಿ ಮಧ್ಯಾಹ್ನ ಒಂದು ಗಂಟೆಗೇ ಊಟ ಮುಗಿಸುತ್ತಿದ್ದನು. ಆದರೆ ಈ ಹೊತ್ತು ಗ್ರೇಸಳಿಗಾಗಿ ಆ ದಿನದ ಮುಖ್ಯ ಭೋಜನವನ್ನು ಮುಂದೆ ಹಾಕಲಾಗಿತ್ತು. ಗೋಡೆ - ಕುಲುಮೆ (ಅಗ್ಗಿಷ್ಟಿಕೆ) ಯು ಬೆಂಕಿಗೆ ಗಾಳಿಯನ್ನು ಪೂರೈಸುವ ತಿದಿಯನ್ನು ಗಡಗಡೆ ಮತ್ತು ಹುರಿಗಳ ಒಂದು ಯಾಂತ್ರಿಕ ರಚನೆಯಿಂದ ಎಡಬಿಡದೆ ನಡೆಯಿಸುವ ಏರ್ಪಾಟಿತ್ತು. ಆ ಹುರಿಯ ಇನ್ನೊಂದು ತುದಿಯನ್ನು ಕೋಣೆಯ ಒಂದು ಮೂಲೆಯಲ್ಲಿ ಒಂದು ದೊಡ್ಡ ಕಲ್ಲಿಗೆ ತೂಗು ಬಿಟ್ಟಿದ್ದರು. ಮುದಿ ಅಜ್ಜಿ ಒಲಿವರ ಬಂದು ಈ ಕಲ್ಲು ಕಟ್ಟಿಟ್ಟು ಆ ಯಂತ್ರವನ್ನು ಚಲನೆಯಲ್ಲಿ ತಂದಳು. ಆಗ ಅದು ಗಿರಣಿಯಂತೆ ಕಟಕಟ ಸದ್ದು ಮಾಡತೊಡಗಿತು.

ನಡುಮನೆಯಲ್ಲಿ ಶ್ರೀಮತಿ ಮೆಲಬರಿಯ ತಲೆಯ ಭೂತಾಕಾರದ ನೆರಳು ಗೋಡೆಯ ಮೇಲೂ ಛತ್ತಿನ ಮೇಲೂ ಬಿದ್ದಿತ್ತು. ಆದರೆ ಮಗಳು ಒಳಮನೆಯ ನಿರೀಕ್ಷಣೆಯನ್ನು ಕೆಲವು ಕ್ಷಣ ಮುಂದರಿಸುವ ಮುಂಚೆಯೇ, ಅವರ ಆಗಮನದ ಅರಿವು ಒಳಗೆ ಇದ್ದವರಿಗೆ ಮತ್ತೆ ಆಗಿ, ತಂದೆ ಮತ್ತು ಮಲತಾಯಿ ಅವಳನ್ನು ಸ್ವಾಗತಿಸಲಿಕ್ಕೆ ಹೊರಗೆ ಬಂದರು.

ಮೆಲಬರಿ ಕುಟುಂಬದ ಒಂದು ಲಕ್ಷಣವೆಂದರೆ, ತಮ್ಮ ತಮ್ಮೊಳಗೆ ಕೂಡ ಅವರು ಬಲವಾದ ಭಾವನೆಗಳನ್ನು ಕಾಣಿಸಿಕೊಳ್ಳಲು ನಾಚುತ್ತಾರೆ. ಈ ಲಕ್ಷಣ ಈ ನಾಚಬುರುಕತನ ಸಾಮಾನ್ಯವಾಗಿ ಹಳ್ಳಿಗ ಕುಟುಂಬಗಳಿಗೆಲ್ಲ ಇರುವುದುಂಟು. ಈ ಲಕ್ಷಣ, ಹಳ್ಳಿಗರನ್ನು ಪಟ್ಟಣಿಗರಿಂದ ವಿಂಗಡಿಸುವ ಅನೇಕ ಗುಣವಿಶೇಷಗಳಿಗೆ ತೀರ ವ್ಯಸ್ತವಾಗಿರುವ ಸಂಗತಿ. ಹೀಗೆ ತಮ್ಮ ಎದೆಯುಬ್ಬಿನ ಭಾವನೆಗಳನ್ನು ವ್ಯವಹಾರದ ತೀರ ಸಾಮಾನ್ಯ ಮಾತುಗಳಲ್ಲಿ ಅಡಗಿಸುತ್ತ, ಗ್ರೇಸಳ ಗೃಹಾಗಮನದ ಸ್ವಾಗತವು ಯಾವ ಅಸಮಾನ್ಯ ಉತ್ಸವವನ್ನು ಉಂಟುಮಾಡಲಿಲ್ಲ. ಆದರೆ ಅಲ್ಲಿ ನಟಿಸಿದ್ದಕ್ಕಿಂತ ಅನಿಸಿದ್ದ ಭಾವಾವೇಶ ಹೆಚ್ಚಾಗಿತ್ತು ಎಂಬುದಕ್ಕೆ ಒಂದೇ ಒಂದು ಘಟನೆ ಸಾಕ್ಷಿ. ಅದೆಂದರೆ ಗ್ರೇಸಳನ್ನು ಮನೆಯೊಳಗೆ ಕರೆದೊಯ್ಯುವ ಸಂಭ್ರಮದಲ್ಲಿ ಅವಳ ತಂದೆಯೂ ಸ್ವತಃ ಗ್ರೇಸಳೂ ಬಡ ಜೈಲ್ಸನ ಅಸ್ತಿತ್ವವನ್ನೇ ಪೂರ್ತಿ ಮರೆತರು ! ಆತನನ್ನು ಯಾರೂ ಒಳಗೆ ಕರೆಯಲಿಲ್ಲ.

ಆತ ಏನೂ ಅನ್ನಲಿಲ್ಲ. ಆ ಗಿಗ್ಗ ಗಾಡಿಯನ್ನು ಆಚೆಗೆ ಆವಾರದಲ್ಲಿ ಒಯ್ದು ಗೂಟಗಳ ಮಾಳದಿಂದ ಒಬ್ಬ ಆಳನ್ನು ಆತ ಕರೆದನು, ಈ ಕುದುರೆ-ಗಾಡಿಗಳ ಕೆಲಸ ನೋಡಿಕೊಳ್ಳಲಿಕ್ಕೆ. ಅನಂತರ ಮನೆಯ ಒಳಗೆ ಹೋಗಲು ಹೆಬ್ಬಾಗಿಲಿಗೆ ಹಿಂದಿರುಗಿ ಬಂದನು.

ಮನೆಯವರೆಲ್ಲ ನಡುಮನೆಯಲ್ಲಿ ಇದ್ದರು, ತಮ್ಮೊಳಗೇ ತಲ್ಲೀನರಾಗಿದ್ದರು. ಆಗಿನಂತೆ ಈಗಲೂ ಗೋಡೆಯ ಅಗ್ಗಿಷ್ಟಿಕೆಯ ಬೆಂಕಿಯೊಂದೇ ಅಲ್ಲಿಯ ಬೆಳಕಾಗಿತ್ತು. ಅದು ಗ್ರೇಸಳ ಮೋರೆಯನ್ನು ಕೈಗಳನ್ನು ಬೆಳಗಿ, ಉಳಿದ ಇಬ್ಬರು ಹಿರಿಯರ ಕೈಮೋರೆಗಳಿಗಿಂತ ಅವನ್ನು ಅದ್ಭುತ ನುಣುಪಾಗಿ ಚೆಂದವಾಗಿ ಮಾಡುತ್ತಿತ್ತು. ಆ ಬೆಳಕು

ಅವಳ ಸಡಿಲಾದ ಹೆಳಲುಗಳೊಳಗಿಂದಲೂ ಸೂಸಿ ಹೊಳೆಯುತ್ತಿತ್ತು, ಕೆನ್ನೆಗಳ ಮೇಲೆಯೂ ಚೆಲ್ಲಿತ್ತು — ಪೊದೆಗಳೊಳಗಿಂದ ಬಿಸಿಲು ತೂರಿ ಬಂದಂತೆ. ಅವಳ ತಂದೆ ಅವಳನ್ನೇ ದಿಙ್ಮೂಢನಂತೆ ದುರುಗುಟ್ಟಿ ನೋಡುತ್ತ ನಿಂತಿದ್ದ. ಅವನು ಹಿಂದೆ ಕಂಡಂದಿನಿಂದ ಆಕೆ ಅಷ್ಟೊಂದು ಬೆಳೆದು ಬಿಟ್ಟಿದ್ದಳು, ನಿಲುವಿಕೆ, ನಡತೆ, ಸಂಸ್ಕಾರ ಮತ್ತು ಸುಧಾರಣೆಗಳಲ್ಲಿ !

ಇವೆಲ್ಲ ಸಂಗತಿಗಳನ್ನು ಪರಾಂಬರಿಸುತ್ತ ಬೋರ್ನ ಅಲ್ಲಿಯೇ ಬಾಗಿಲ ಬಳಿಯಲ್ಲಿ ಒಳಗೆ ನಿಂತು ಉಳಿದನು — ಬಾಗಿಲ ಚೌಕಟ್ಟಿನ ಕಂಬದ ಮೇಲೆ ಆ ಮನೆಯ ಹಿಂದಿನ ತಲೆಮಾರುಗಳ ಒಡೆಯರು ಕೊರೆದಿಟ್ಟ ತಮ್ಮ ಹೆಸರುಗಳ ಅಕ್ಷರಗಳ ಮೇಲೆ ಬೆರಳು ಹಾಯಿಸುತ್ತ.

ಬೇಡ. ಮುಂದೆ ಹೋಗಿ ಈ ಕೌಟುಂಬಿಕ ಕೂಟವನ್ನು ಸೇರುವುದು ಬೇಡ ಎಂದು ಅವನಿಗೆ ಅನಿಸಿತು. ಅವರು ಅವನನ್ನು ಮರತೇಬಿಟ್ಟಿದ್ದರು, ಅವಳನ್ನು ಅವನು ಮನೆಗೆ ತಂದು ಬಿಟ್ಟಿದ್ದನ್ನು ಇಂದಿನ ಮಟ್ಟಿಗೆ ಇಷ್ಟೇ ಸಾಕು. ಆದರೂ ಅವನಿಗೆ ತುಸು ಆಶ್ಚರ್ಯ—ಗ್ರೇಸಳನ್ನು ಕರೆತರಲು ಕಳುಹಿಸುವಾಗ ಅವಳ ತಂದೆಯು ತನ್ನಲ್ಲಿ ಕಾಣಿಸಿದ ಕುತೂಹಲ ಆತುರಗಳು ಈಗ ಇಂಥ ಅಸಡ್ಡೆ - ಅಪೇಕ್ಷೆಗಳಾಗಿ ಪರಿಣಮಿಸಬೇಕೇ ?

ಅವನು ಮೃದುವಾಗಿ ಆ ಓಣಿಯೊಳಗಿಂದ ತನ್ನ ಮನೆಯತ್ತ ಹೊರಟನು. ಓಣಿ ಹೊರಳುವಲ್ಲಿ ನಿಂತು ಹಿಂದಿರುಗಿ ನೋಡಿದನು ಆ ಕ್ಷಣಕ್ಕೆ ಗ್ರೇಸ ಅಲ್ಲಿ ಏನು ಅನ್ನುತ್ತಿರಬಹುದು ? ಆತ ಊಹಾಪೋಹಕ್ಕೆ ದುಡುಕಿದನು ; ಮತ್ತು ಆತ್ಮ ಜಿಗುಪ್ಸೆಯಿಂದ ಗೊಣಗಿದನು — 'ನನ್ನ ವಿಷಯವೇನೂ ಇರಲಿಕ್ಕಿಲ್ಲ !'

ಅಲ್ಲಿಂದ ಅವನು ವಿರುದ್ಧ ದಿಕ್ಕಿನಲ್ಲಿಯೂ ದೃಷ್ಟಿ ಹಾಯಿಸಿದನು. ಅಲ್ಲಿ ಆಕಾಶಕ್ಕೆ ಕಟ್ಟಿ ಮಾರ್ಟಿಯ ಮನೆಯ ಚಪ್ಪರವನ್ನು ಅದರಿಂದ ಒಂಟಿಯಾಗಿ ಮೇಲಕ್ಕೆ ಹೊಗೆಗಿಂಡಿಯ ಕೊಳವೆಯನ್ನು ಕಂಡನು. ಅಲ್ಲಿ ತನ್ನ ಬಡಪರಿಸರದ ಆಶ್ರಯದಲ್ಲಿ ಅಡುಗೆಯ ಪಾತ್ರೆಗಳ, ಕೊಡಗಳ, ಕೆನೆ ತೆಗೆಯುವ ಉಪಕರಣಗಳ ಮತ್ತು ಗೂಟಗಳ ನಡುವೆ ಒಳ್ಳೆಯ ಧೈರ್ಯದಿಂದ ಬದುಕಿನ ಹೋರಾಟ ನಡೆಯಿಸುತ್ತಿರುವ ಅವಳನ್ನು ನೆನೆದುಕೊಂಡನು.

ಅದೇ ಸಮಯ ಇತ್ತ ಕಟ್ಟಿಗೆ ವ್ಯಾಪಾರಿಯ ಮನೆಯಲ್ಲಿ ಮಾತುಕತೆ ಹೊಸಲಾಗಿ ಹರಿದಿತ್ತು — ಮತ್ತು ಜೈಲ್ಸ ವಿಂಟರಬೋರ್ನನ ತರ್ಕ ಸರಿಯಿತ್ತು. ಆ ಮಾತು ಕತೆಯ ವಿಷಯಗಳಲ್ಲಿ ಅವನಿಗೆ ಯಾವ ಸ್ಥಾನವೂ ಇಲ್ಲ. ಆ ವಿಷಯಗಳಲ್ಲಿ ಮುಖ್ಯ ವಾದದ್ದು ಮೆಲಬರಿಯ ಮಗಳ ಬೆಳೆದ ಹೆಣ್ಣು ಠೀವಿ ಮತ್ತು ರೀತಿ. ಈ ಹೊಸ ಆವಿರ್ಭಾವ ತಂದೆಯನ್ನು ಇಷ್ಟು ಚಕಿತನನ್ನಾಗಿ ಮಾಡಿತು,— ಅವಳನ್ನು ಮನೆಗೆ ಮುಟ್ಟಿಸಲು ಬಂದ ಮಾರ್ಗದರ್ಶಕನನ್ನು ಅವನ ಮಿದುಳಿನ ಯಾವುದೋ ಮೂಲೆಯ ಬಿಲದಲ್ಲಿ ತಳ್ಳಿ ಬಿಟ್ಟಿತ್ತು.

ಇನ್ನೊಂದು ಮಹತ್ವದ ವಿಷಯ, ಅವನು ಆ ಮುಂಜಾನೆ ಶ್ರೀಮತಿ ಚಾರಮಂದ ಳೊಂದಿಗೆ ಪಡೆದ ಭೆಟ್ಟಿಯಲ್ಲಿ ನಡೆದ ಸಂಭಾಷಣೆ — ಕೆಲವು ನಿಮಿಷ ಪ್ರತ್ಯಕ್ಷ ಆ ಶ್ರೀಮತಿಯೇ ಹಾಜರಿದ್ದು ನಡೆದ ಸಂಭಾಷಣೆ! ಅವಳಿಂದ ಬಹಳ ಕಾಲ ಹಿಂದೆ ಮೆಲಬರಿ ಕೆಲವು ನಿಂತ ಮರಗಳನ್ನು ಖರೀದಿ ಮಾಡಿದ್ದನು. ಈಗ ಅವುಗಳನ್ನು ಕಡಿದು ಕೆಡಹುವ ದಿನ ಸಮೀಪಿಸಿತ್ತು. ಆ ಕೆಲಸ ಅವನ ಮೈಯ ಮೇಲೆಯೇ ಪೂರ್ತಿ ಬಿದ್ದಂತೆಯೇ ಇತ್ತು. ಜೈಲ್ಸ ಹೊರಗೆ ಓಣಿಯಲ್ಲಿ ಊಹಾಪೋಹ ಮಾಡುತ್ತಿದ್ದಾಗ ಆ ಮನೆಯಲ್ಲಿ ಇದೇ ವಿಷಯವನ್ನೇ ಮಾತಾಡುತ್ತಿದ್ದರು.

'ಅವಳು ನನ್ನನ್ನು ಪೂರ್ತಿ ನಂಬಿದ್ದಾಳೆ' ಮೆಲಬರಿ ಅನ್ನುತ್ತಿದ್ದ 'ಅವಳ ಕೊಪ್ಪದಲ್ಲಿ ಯಾವುದೇ ಮರವನ್ನು ಬುಡಗೂಡಿ, ಬೊಡ್ಡೆ ಕಡಿದು, ನನಗೆ ಯೋಗ್ಯ ಕಂಡಂತೆ ನಾನೇ ಕೊಯ್ದು, ಅದರ ಬೆಲೆ ಏನೆಂದು ನಾನೇ ಗೊತ್ತು ಮಾಡಿದರೆ ಆಯಿತು. ಅವಳಿಗೆ ಅದು ಒಪ್ಪಿಗೆ. ಆದರೆ ನಾನು ಹಾಗೆಲ್ಲ ಮಾಡುವವನೇ ಅಲ್ಲ. ಆದರೂ ಅವಳೊಂದಿಗೆ ಇಂಥ ಸದ್ಭಾವನೆಯ ಒಡಂಬಡಿಕೆ ಇಟ್ಟುಕೊಳ್ಳುವುದು ಹಿತ. ಅವಳು ಇಲ್ಲಿಯೇ ಉಳಿದು, ತನ್ನ ಈ ಆಸ್ತಿಯಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದರೆ ಚೆನ್ನಾಗಿತ್ತು ಎಂದು ನನಗೆ ಅನಿಸುತ್ತದೆ'.

ಇದಕ್ಕೆ ಮೆಲಬರಿಯ ಹೆಂಡತಿ ಅಂದಳು, 'ನನಗೆ ಅನಿಸಿದ್ದು ಹೀಗೆ—ಮರಗಳ ಬಗ್ಗೆ ಅವಳು ಇಷ್ಟು ಸುಮ್ಮನೆ ಒಪ್ಪಿದ್ದು ನಿಮ್ಮ ಮೇಲಿನ ನಂಬಿಗೆ, ಇಲ್ಲವೆ ಸದ್ಭಾವನೆ ಯಿಂದ ಅಲ್ಲ. ಈ ಹಿಂಟಾಕ ಹಳ್ಳಿಯ ಬಗ್ಗೆಯೇ ಅವಳಿಗೆ ಇರುವ ತಿರಸ್ಕಾರದ ಮೂಲಕ!'

ಊಟ ಮುಗಿದೊಡನೆ ಗ್ರೇಸಳು ಒಂದು ಮೇಣ ಬತ್ತಿಯ ಸೊಡರನ್ನು ಎತ್ತಿ ಕೊಂಡು ಸುಖವಾಗಿ ಅಲೆದಾಡ ಹತ್ತಿದಳು ತನ್ನ ಹಳೆಮನೆಯ ಕೋಣೆಗಳೊಳಗಿಂದ. ಈ ಕೋಣೆ ಈ ಮನೆಯಿಂದ ಇತ್ತೀಚೆಗೆ ಆಕೆ ತೀರ ಹೊರತಾಗಿ ಪರಕೀಯಳಂತೆ ಆಗಿ ಬಿಟ್ಟಿದ್ದಳು. ಮನೆಯ ಒಂದೊಂದು ಮೂಲೆಯೂ ಒಂದೊಂದು ವಸ್ತುವೂ ಅವಳಲ್ಲಿ ಹಳೆಯ ಒಂದೊಂದು ನೆನಪನ್ನು ಚೇತರಿಸುತ್ತಿತ್ತು, ಜೊತೆಗೆ ಆ ನೆನಪು ಹೊಸ ಸಂದರ್ಭದಲ್ಲಿ ರೂಪಾಂತರವನ್ನು ಹೊಂದುತ್ತಿತ್ತು. ಹಿಂದೆ ಮನೆಯಲ್ಲಿ ಕಳೆದಂದಿಗಿಂತ ಈಗ ಆ ಕೋಣೆಗಳು ಇನ್ನೂ ಕಿರಿದಾಗಿ ತಗ್ಗಾಗಿ ಕಂಡವು. ಮತ್ತು ಗೋಡೆಗಳು — ಪರಿಸರದ ತೀರ ಚಿಕ್ಕಪುಟ್ಟ ಕುಂದುಕೊರತೆಗಳೂ ಸೊಟ್ಟಮೊಟ್ಟಗಳೂ ಸೂಕ್ಷ್ಮದರ್ಶಕ ದಲ್ಲಿ ನೋಡಿದಂತೆ ಎದ್ದು ಕಾಣುತ್ತಿದ್ದುವು. ಅವಳ ಮಲಗುವ ಕೋಣೆ — ಒಮ್ಮೆಲೆ ಹಿಂದಿಗಿಂತ ಹೆಚ್ಚು ಪರಿಚಿತ, ಆದರೂ ಮೋರೆ ಹೆಚ್ಚು ಪರಕೀಯವೆನಿಸಿತು. ಅಲ್ಲಿಯ ವಸ್ತುಗಳ ಪುಟ್ಟ ಪ್ರಪಂಚವು ಅವಳನ್ನು ಅಚಲತೆಯ ಅಸಹಾಯತೆಯಿಂದ ದಿಟ್ಟಿಸುವಂತೆ ಅನಿಸಿತು. ಅವಳು ಅಲ್ಲಿ ಇಲ್ಲದಾಗ ಪ್ರಯತ್ನ ಮಾಡಿಯೂ ಏನೂ ಪ್ರಗತಿಯನ್ನು ಸಾಧಿಸಲು ಅಶಕ್ತರಾದಂತೆ ಅವುಗಳ ಆವಿರ್ಭಾವವಿತ್ತು. ಅವಳು ನಡುರಾತ್ರಿ ಕಳೆಯುವ ತನಕವೂ ಓದುತ್ತಿರುವ ಸಮಯ ಅವಳ ಮೇಣಬತ್ತಿಯು ನಿಲ್ಲುವ ಆ ವಾಡಿಕೆಯ

ಸ್ಥಳದ ಗೋಡೆಗೆ ಇನ್ನೂ ಆಗಿನ ಆ ಹೊಗೆಯ ಕಂದೀ ಕಲೆಯು ಕಂದದೇ ಇತ್ತು. ಆ ಕಲೆಯನ್ನು ಅವಳ ತಂದೆಯೇ ಹಾಗೆ ಉದ್ದು ಹಾಕಲು ಕೊಡದೆ ಬಿಟ್ಟಿದ್ದನು. ಆದರೆ ಇದು ಅವಳಿಗೇನು ಗೊತ್ತು ?

ಈಗ ವ್ಯರ್ಥವಾಗಿ ವಿಶಾಲವಿದ್ದಂತೆ ಕಾಣುವ ಆ ಮನೆಯಲ್ಲಿ ಅತ್ತಿತ್ತ ಭ್ರಮಂತಿಯನ್ನು ಮುಗಿಸಿದ ನಂತರ ಗ್ರೇಸಳಿಗೆ ಅನಿಸಹತ್ತಿತು — ತಾನು ಮುಂಜಾವಿನಿಂದ ಬಲು ದೀರ್ಘವಾದ ಪ್ರವಾಸಮಾಡಿಬಂದಿದ್ದಾಯಿತು. ಮತ್ತು ಅವಳ ತಂದೆಯೂ ತಾಯಿಯೂ ಅವಳ ಕೋಣೆಯು ಸುಖಸಜ್ಜಿಕೆಯಿಂದ ಸಿದ್ಧವಾಗಿದೆಯೊ — ಎಂಬುದನ್ನು ಮಹಡಿಯೇರಿ ಹೋಗಿ ನೋಡಿಕೊಂಡು ಬಂದಮೇಲೆ ಅವಳು ಮಲಗಲಿಕ್ಕೆ ತೆರಳಿದಳು.

ಆದರೆ ಮೇಣದ ಬತ್ತಿಯನ್ನು ಆರಿಸಿದ್ದೇ ತಡ, ಅವಳ ಕ್ಷಣಿಕ ತೂಕಡಿಕೆ ಎಲ್ಲೊ ಮಾಯವಾಯಿತು. ತಾನು ಇನ್ನಿಷ್ಟು ವೇಳೆ ಕೆಳಗೆ ಕೂತಿದ್ದರೆ ಚೆನ್ನಾಗಿತ್ತು, ಅನಿಸಿತು ಅವಳಿಗೆ. ಕೆಳಗೆ ಇನ್ನೂ ನಡೆಯುತ್ತಿದ್ದ ಹಳೆಯ ಸುಪರಿಚಿತ ಸದ್ದುಗಳಿಗೆ ಕಿವಿಗೊಟ್ಟು ಅವಳು ಕೆಲಕಾಲ ಮನಸ್ಸನ್ನು ರಮಿಸಿಕೊಂಡಳು. ಅನಂತರ ಅಲ್ಲಿ ಮಂಚದಲ್ಲಿ ಒರಗಿದಲ್ಲಿಂದಲೇ ಕಿಟಕಿಯ ಹೊರಗೆ ಕಣ್ಣುಹಾಯಿಸಿದಳು. ಹತ್ತಿರದ ಗುಡ್ಡದ ಮೇಲೆ ಆಕಾಶಕ್ಕೆ ಇದುರಾಗಿ ಮರದ ಚಂಡೆಗಳು ಮಸುಕಾಗಿ ಕಾಣುತ್ತಿದ್ದವು. ಆ ನೆರಳು ಬೆಳಕಿನ ಸಂಯೋಗ ರೇಖೆಯ ಕೆಳಗೆ ಒಂದೇ ಒಂದು ದೀಪದ ಹೊರತು ಇನ್ನೇನೂ ಮಿನುಗುತ್ತಿದ್ದಿಲ್ಲ. ಮರದ ಟೊಂಗೆಗಳು ಅದರ ಕಿರಣಗಳ ಇದುರು ಅತ್ತಿತ್ತ ಬೀಸಾಡುತ್ತಿದ್ದದ್ದರಿಂದ ಆ ದೀಪವು ಹಾಗೆ ಮಿನುಗುತ್ತಿದ್ದಂತೆ ತೋರುತ್ತಿತ್ತು.

ಅದರ ನಿಟ್ಟು ನೋಡಿದರೆ ಆ ಗುಡ್ಡದ ಮಗ್ಗುಲಿನ ಒಂದು ಮನೆಯ ಕಿಟಕಿಯಿಂದ ಆ ಬೆಳಕು ಬರುವಂತಿತ್ತು. ಗ್ರೇಸಳು ಹಿಂದೆ ಮನೆಯಲ್ಲಿ ಇದ್ದಾಗ ಆ ಮನೆಯು ಖಾಲಿಯಾಗಿತ್ತು. ಈಗ ಅಲ್ಲಿ ಯಾರೂ ವಾಸಿಸುತ್ತಿರುಬಹುದು ? — ಎಂದು ಅವಳು ಸೋಜಿಗಪಡಹತ್ತಿದಳು.

ಅವಳ ಈ ಊಹಾಪೋಹ ಅಷ್ಟೊಂದು ಉತ್ಕಂಠೆಯಿಂದ ನಡೆದಿದ್ದಿಲ್ಲ. ಆ ದೀಪವನ್ನು ಅವಳು ಬರೆ ಆಲಸಿಕೆಯಿಂದ ದಿಟ್ಟಿಸುತ್ತಿದ್ದಳು. ಆಗ ಅದು ಕ್ರಮೇಣ ಬಣ್ಣ ಬದಲಿಸಿತು ; ಮತ್ತು ಕೊನೆಗೆ ನೀಲಮಣಿಯಂತೆ ಅಚ್ಚುನೀಲವಾಗಿ ಹೊಳೆಯಹತ್ತಿತು. ಹಾಗೆಯೇ ಅದು ಕೆಲವು ಗಳಿಗೆ ಉಳಿಯಿತು. ಆ ಮೇಲೆ ಅದು ಪಾಟಲದಿಂದ ಕೆಂಪಿಗೆ ಪಲ್ಲಟಿಸಿತು.

ಇದರಿಂದ ಅವಳ ಕುತೂಹಲ ಪೂರ್ತಿ ಜಾಗೃತವಾಯಿತು. ಅವಳು ತಟ್ಟನೆ ಹಾಸಿಗೆಯಲ್ಲಿ ಎದ್ದು ಕೂತಳು. ಮತ್ತು ಪ್ರಭೆಯನ್ನೇ ಸ್ಥಿರವಾಗಿ ದಿಟ್ಟಿಸಹತ್ತಿದಳು. ಇಂಥ ಒಂದು ದೃಶ್ಯವು ಎಲ್ಲಿ ಒದಗಿದರೂ ಕುತೂಹಲವನ್ನು ಕೆರಳಿಸುವಂತಹದೇ. ಅಂಥಲ್ಲಿ ಹಿಂಟಾಕದಂಥ ಹಳ್ಳಿಯಲ್ಲಿ — ಗ್ರೇಸಳಿಗೆ ಈ ಹಳ್ಳಿಯ ಸ್ವರೂಪ ಚೆನ್ನಾಗಿಯೇ ಗೊತ್ತು — ಅದು ಒಂದು ಅದ್ಭುತ ವೈಚಿತ್ರ್ಯಕ್ಕೆ ಏನು ಕಡಿಮೆಯಾದ ಘಟನೆ ಅಲ್ಲ.

ಆ ಮೇಲೆ ನಾಡಿನಲ್ಲಿ ರಾತ್ರಂದಿನ ಪ್ರತಿಯೊಂದು ದೃಶ್ಯ ಪಲ್ಲಟವೂ ಪೃಥ್ವಿಯ ಪರಿಭ್ರಮಣದಿಂದಾಗುವ ಋತು ಪರಿವರ್ತನಗಳದೇ ನೇರವಾದ ಪರಿಣಾಮದಂತಿತ್ತು. ಆದರೆ ಇದೀಗ ಆ ಸಾಮಾನ್ಯ ಘಟನಾವಲಿಗೆ ವಿಪರೀತವಾದ, ಸ್ಥಾನಿಕ ತಿಳುವಳಿಕೆಗೆ ತೀರ ಹೊರತಾದ ಸಂಗತಿ ಆಗಿತ್ತು.

ಮತ್ತು ಇದೇ ಕ್ಷಣಕ್ಕೆ ಕೆಳಗೆ ಮನೆಯೊಳಗಿನವರೆಲ್ಲ ಮಲಗಲಿಕ್ಕೆ ಸಿದ್ಧರಾದದ್ದು ಗ್ರೇಸಳಿಗೆ ಕೇಳಿಸಿತು — ಕೇಳಿದ ಇಂಥ ಸದ್ದುಗಳಲ್ಲಿ ತಂದೆಯು ಬಾಗಿಲ ಮಿಡಗಳನ್ನು ಇಕ್ಕುವ ಸಪ್ಪಳ ಹೆಚ್ಚು ಸ್ಫುಟವಾಗಿತ್ತು. ಆ ಮೇಲೆ ಮಾಳಿಗೆಯ ಮೆಟ್ಟಲುಗಳು ಕರ ಕರವೆಂದವು ; ಮತ್ತು ಅವಳ ತಂದೆ ತಾಯಿ ಅವಳ ಕೋಣೆಯ ಮುಂದಿನಿಂದ ಹಾದು ಹೋದರು. ಕೊನೆಗೆ ಮಾಳಿಗೆ ಹತ್ತಿ ಬಂದವಳು, ಅಜ್ಜಿ ಆಲಿವರ.

ಗ್ರೇಸ ತನ್ನ ಮಂಚದಿಂದ ಜಾರಿ ಇಳಿದು ಕೋಣೆಯ ಬಾಗಿಲಿಗೆ ದಿಗ್ಗನೆ ಓಡಿದಳು ಚಿಲಕ ಎತ್ತಿ ಕದ ತೆರೆಯುತ್ತ ಅಂದಳು, ' ನಾನು ಮಲಗಲಿಲ್ಲ ಅಜ್ಜಿ, ಒಳಗೆ ಬಾ, ತುಸು ಹರಟೆ ಹೊಡೆಯೋಣ '.

ಆ ಮುದುಕಿ ಒಳಗೆ ಬರುವಷ್ಟರೊಳಗೇ ಗ್ರೇಸ ತನ್ನ ಹಸೆಯಲ್ಲಿ ಹೊದಿಕೆಯಡಿಗೆ ಮೈಚಾಚಿದ್ದಳು. ಆಲಿವರ ಅಜ್ಜಿ ತಾನು ತಂದ ಮೇಣ ಬತ್ತಿಯನ್ನು ಕೆಳಗಿಟ್ಟು ಗ್ರೇಸಳ ಮಂಚದ ಅಂಚಿಗೆ ಕೂತಳು.

' ನೀನು ನನಗೆ ಒಂದು ಮಾತು ಹೇಳಬೇಕು. ಅಲ್ಲಿ ಆ ಗುಡ್ಡದ ಬದಿಗೆ ಕಾಣುವ ಆ ದೀಪವು ಯಾವುದು ? ' ಗ್ರೇಸ ಕೇಳಿದಳು.

ಆಲಿವರಳು ಅತ್ತ ಕಣ್ಣು ಹಾಯಿಸಿದಳು. ' ಓ ಅದೋ ! ಅದು ಆ ಪ್ರಾಯದ ಡಾಕ್ಟರನದು. ಅವನು ಅಂಥದೆಲ್ಲ ಕೆಲಸ ಮಾಡುತ್ತಿರುತ್ತಾನೆ. ಆದರೆ, ನಿನಗೆ ಗೊತ್ತಿಲ್ಲವೇನೋ, ಇಲ್ಲಿ ನಮ್ಮಲ್ಲಿ ಒಬ್ಬ ಡಾಕ್ಟರ ಬಂದು ಉಳಿದಿದ್ದಾನೆ — ಮಿಸ್ಟರ್ ಫಿಟ್ಜಪಿಯರ್ ಎಂದು ಅವನ ಹೆಸರು '.

ಗ್ರೇಸಳಿಗೆ ಈ ಸಮಾಚಾರ ಗೊತ್ತಿದ್ದಿಲ್ಲ ; ಅವನ ಬಗೆಗೆ ಆಕೆ ಕೇಳಿಯೇ ಇದ್ದಿಲ್ಲವೆಂದು ಒಪ್ಪಿಕೊಂಡಳು.

' ಹಾಗಾದರೆ, ಮಗಳೇ, ಆತ ನಮ್ಮ ಸೀಮೆಯ ತೀರ ಹಳೆಯ ಮತ್ತು ಪುರಾತನ ಮನೆತನದವನು. ಆದಾಗ್ಯೂ ಆತ ಸಾಮಾನ್ಯ ಜನಕ್ಕೆಲ್ಲ ಉಪಯೋಗಕ್ಕೆ ಬೀಳಬೇಕೆಂದು ಈ ಕೆಲಸಕ್ಕೆ ಇಳಿದಿದ್ದಾನೆ. ನನಗೆ ಆತ ಚೆನ್ನಾಗಿ ಗೊತ್ತು. ಅವನಲ್ಲಿ ನಾನು ಕೆಲಸಲ ಮನೆ ಸಾರಿಸಲಿಕ್ಕೆ ಹೋಗುತ್ತೇನೆ — ನಿನ್ನ ತಂದೆಯೇ ಹೇಳಿದರು, ವೇಳೆ ಬಿಡುವಾದರೆ ನಾನು ಹಾಗೆ ಮಾಡಬಹುದೆಂದು. ಅವನಿಗೆ ಮದುವೆ ಆಗಿಲ್ಲ, ವಸತಿಗಷ್ಟೇ ಆ ಮನೆ. ನನಗೆ ಚೆನ್ನಾಗಿ ಗೊತ್ತು ಆತ. ನನ್ನ ಸಂಗಡ ಆತ ತುಂಬ ಮಾತಾಡುತ್ತಾನೆ ಒಮ್ಮೊಮ್ಮೆ — ತಾಯಿಯ ಸಂಗಡ ಹೇಗೋ ಹಾಗೆ '.

' ಹೌದೇ ? '

' ಹೌದು. ಒಂದಿನ ನಾ ಅವನಿಗೆ ಕೇಳಿದೆ, ' ನೀನು ಇಲ್ಲಿಯಾಕೆ ಬಂದಿಯಪ್ಪ,

ಇಲ್ಲಿ ಯಾರೂ ಜನವೇ ಇಲ್ಲ.' ಆಗ ಅವನು ಅಂದ, 'ಅಜ್ಜೀ ಹೇಳ್ತೇನೆ ಕೇಳು, ನಾ ಯಾಕೆ ಬಂದೆಯಂತ. ನಾನು ಈ ಸೀಮೆಯ ಒಂದು ನಕಾಶೆ ತೆಗೆದುಕೊಂಡು ನೋಡಿದೆ. ಡಾ|| ಜೋನ್ಸನ ವ್ಯವಸಾಯ, ಸೀಮೆಯ ಉತ್ತರಕ್ಕೆ. ಟೇಲಿರನದು ಇದರ ದಕ್ಷಿಣಕ್ಕೆ. ಆ ಪುಟ್ಟ ಜೆಮಿಗ್ರೀವಂದು ಪೂರ್ವಕ್ಕೆ ಮತ್ತು ಯಾರೋ ಒಬ್ಬನದು ಪಶ್ಚಿಮಕ್ಕೆ ಎಲ್ಮಿಯವರೆಗೆ ಹಬ್ಬಿ ಬಂದಿದೆ ಎಂತ. ಅವರಿಗೆ ಒಪ್ಪಿದ ಸೀಮೆಯಲ್ಲ ಬಿಟ್ಟು ಉಳಿದ ನೆಲದ ಸರಿಯಾದ ನಟ್ಟ ನಡುವಿನ ಸ್ಥಳವನ್ನು ಒಂದು ಕಂಪಾಸು ತೆಗೆದುಕೊಂಡು ಕಂಡುಕೊಂಡೆ. ಆಗ ಆ ಸ್ಥಳ ಇದೆ, ಕಿರಿ ಹಿಂಟೋಕ್ ಆಯಿತು. ಆದ್ದರಿಂದ ನಾನು ಇಲ್ಲಿ ಬಂದೆ! ಆದರೆ ಪಾಪ ಆತ ಬಡಪಾಯಿ'.

'ಅದೇಕೆ ಹಾಗೆ?'

'ಅವನೆಂದ, 'ಅಜ್ಜಿ ಆಲಿಪರ. ನಾ ಇಲ್ಲಿ ಬಂದು ಮೂರು ತಿಂಗಳಾಯ್ತು. ಆ ಹಿಂಟೋಕ್ಸ್ ಮತ್ತು ಸುತ್ತಲಿನ ಹಳ್ಳಿಗಳಲ್ಲಿ ಮಂದಿ ಬಹಳ. ಮತ್ತು ವ್ಯವಸಾಯ ಹೀಗೆ ಹರಡಿಕೊಂಡಿದ್ದರೂ ಲೇಸೇ. ಆದರೂ ನನಗೆ ಸಾಕಷ್ಟು ರೋಗಿಗಳೇ ಸಿಗುವ ಹಾಗೆ ಕಾಣುವುದಿಲ್ಲ; ಮತ್ತು ನಾನೂ ಶ್ರೀಮಂತನಲ್ಲ. ಮತ್ತೆ ಇಲ್ಲಿ ಒಂದು ಒಳ್ಳೆ ಸಮಾಜ ಎಂಬುದೇ ಇಲ್ಲ. ನನಗಂತೂ ಬೇಸರದಿಂದ ಹುಚ್ಚು ಹಿಡಿಯುವಂತೆ ಆಗಿ ಬಿಟ್ಟಿದೆ' — ಹೀಗೆ ಅಂದದ್ದೇ ಆತ ದೊಡ್ಡ ಆಕಳಿಕೆಯನ್ನೇ ತೆಗೆದ. 'ನಾ ಹುಚ್ಚೇ ಆಗಿಬಿಡುತ್ತಿದ್ದೆ — ನನ್ನ ಪುಸ್ತಕಗಳು ನನ್ನ ಪ್ರಯೋಗಶಾಲೆ ಇಲ್ಲದಿದ್ದರೆ. ಅಜ್ಜಿ, ನಾನು ಇದಕ್ಕೂ ಹೆಚ್ಚಿನ, ಮೇಲಿನ ಬದುಕಿಗಾಗಿ ಹುಟ್ಟಿ ಬಂದವನೇ!' ಮತ್ತೆ ಆತ ಆಕಳಿಕೆಯ ಮೇಲೆ ಆಕಳಿಕೆ ತೆಗೆಯ ಹತ್ತಿದ'.

'ಆತ ನಿಜವಾಗಿಯೂ ಮೇಲಿನ ಬದುಕಿಗಾಗಿ ಹುಟ್ಟಿ ಬಂದವನೇ? ನಿನಗೆ ಹಾಗೆ ತೋರುತ್ತದೆಯೋ? ಆತ ಅಷ್ಟು ಚತುರನೇ?

'ಛೇ ಇಲ್ಲ. ಅವನೇನು ಅಂಥ ಜಾಣ? ಮುರಕೊಂಡು ಬಿದ್ದ ಗಂಡಸನ್ನೋ ಹೆಂಗಸನ್ನೋ ಆತ ಸಂದು ಜೋಡಿಸಿ ಸರಿ ಮಾಡಬಹುದು. ಅಲ್ಲವೇ ನೀನು ಇಂಥಲ್ಲಿಯೇ ನೋವು ಇದೆಯೆಂದು ಹೇಳಿದಾಗ ಅವನೂ ಅಲ್ಲಿ ಬೆರಳಿಟ್ಟು ತೋರಿಸ ಬಹುದು. ಆದರೆ ಈ ಪ್ರಾಯದ ಪೋರರು! — ಇವರು ನನ್ನಷ್ಟು ವರ್ಷ ಬದುಕಿ ಉಳಿಯಬೇಕು. ಮತ್ತು ಆಗ ಅವರಿಗೆ ಕಾಣಬಹುದು ಇಪ್ಪತ್ತೈದು ವರ್ಷ ಪ್ರಾಯಕ್ಕೆ ತಮಗೆ ಎಷ್ಟು ಬುದ್ಧಿ ಇತ್ತು ಎಂತ! ಆದರೆ ಜ್ಞಾನಿ, ನಿಜವಾಗಿಯೂ ಜ್ಞಾನಿ, ತೀರಾ ವಿಚಿತ್ರ ಮಾತು ಆಡ್ತಾ ಇರ್ತಾನೆ. ಇನ್ನೊಂದು ಸಲ ಆತ ಅಂದ, 'ಅಜ್ಜಿ, ನಾ ಹೇಳ್ತೇನೆ ಕೇಳು, ಪ್ರತಿ ಒಂದೂ ಏನೆಂದೂ ಅಲ್ಲ. ಜಗತ್ತಿನಲ್ಲಿ ಇದ್ದದ್ದು ಬರೇ ಎರಡು—ನಾನು ಮತ್ತು ನಾನಲ್ಲದಿದ್ದು!' ಮತ್ತೆ ಆತ ಮುಂದೆ ಹೇಳಿದ, 'ಯಾವ ಮನುಷ್ಯನ ಕೈಗಳೂ ತಾವು ಮಾಡುವ ಕೆಲಸ ಮಾಡದೇ ಇರಲು ಸಾಧ್ಯವೇ ಇಲ್ಲ — ಗ ಡಿ ಯಾ ರ ದ ಕೈಗಳಂತೆಯೇ!' ಹೌದು ಮಗಳೇ, ಆತ ವಿಚಿತ್ರ ವಿಚಾರಗಳ ಮನುಷ್ಯ. ಮತ್ತು ಅವನ ಕಣ್ಣು ದೂರ—ಉತ್ತರ ಧ್ರುವ ನಕ್ಷತ್ರದವರೆಗೂ, ಅಷ್ಟು ದೂರ ನೋಡಬಲ್ಲವು'.

'ಹಾಗಾದರೆ ಆತ ಇಲ್ಲಿಂದ ಬೇಗ ಹೊರಟು ಹೋಗಬಹುದಲ್ಲವೇ?

'ನನಗೇನೂ ಹಾಗೆ ಅನಿಸುವುದಿಲ್ಲ'

'ಅದೇಕೆ?'— ಎಂದು ಗ್ರೇಸ ಕೇಳಲಿಲ್ಲ. ಅಜ್ಜಿ ಆಲಿವರ ತುಸು ಅನುಮಾನಿಸಿದಳು. ಕೊನೆಗೆ ತಾನೇ ಮಾತು ಮುಂದರಿಸಿದಳು, 'ಮಗಳೇ ನಿನಗೆ ಒಂದು ಗುಟ್ಟು ಹೇಳುತ್ತೇನೆ. ಅದನ್ನು ನಿನ್ನ ತಂದೆ, ತಾಯಿಗಳಿಗೆ ಯಾರಿಗೂ ರಟ್ಟು ಮಾಡುವುದಿಲ್ಲವಷ್ಟೇ?'

ಗ್ರೇಸಳು ಅವಳಿಗೆ ಬೇಕಾದಂತೆ ಮಾತು ಕೊಟ್ಟಳು.

'ಅವನು ನನ್ನನ್ನು ಕ್ರಯಕ್ಕೆ ಕೊಳ್ಳುವ ಮಾತಾಡುತ್ತಾನೆ. ಆದ್ದರಿಂದ ಆತ ಈಗಾಗಲೇ ಹೊರಟು ಹೋಗಲಿಕ್ಕಿಲ್ಲ'.

'ಅವನು ನಿನ್ನನ್ನು ಕ್ರಯಕ್ಕೆ ಕೊಳುತ್ತಾನೆ? — ಅದು ಹೇಗೆ?'

'ನನ್ನ ಪ್ರಾಣ — ಆತ್ಮ ಅಲ್ಲ. ನನ್ನ ದೇಹ, ಕಳೇಬರ. ಅದು ನಾನು ಸತ್ತ ಮೇಲೆ! ಒಂದು ದಿನ ನಾನು ಅಲ್ಲಿ ಸಾರಣೆಗೆ ಹೋಗಿದ್ದೆ. ಆಗ ಅವನು ಅಂದ, 'ಅಜ್ಜಿ, ನಿನಗೆ ದೊಡ್ಡ ಮಿದುಳು ಇದೆ — ಬಹಳ ದೊಡ್ಡ ಮಿದುಳು. ಹೆಣ್ಣಿನ ಮಿದುಳು ಗಂಡಿನದಕ್ಕಿಂತ ನಾಲ್ಕು ಔನ್ಸ್ ಕಡಿಮೆ ಇರುತ್ತದೆ; ಆದರೆ ನಿನ್ನದು ಗಂಡಸಿನದಷ್ಟೇ ಆಯದ್ದಾಗಿದೆ' ಸರಿ, ಹೀಗೆ ನನ್ನನ್ನು ತಾಸುಹೊತ್ತು ಹೊಗಳಿ ಹೊಗಳಿ, ಆತ, ನಾನು ಸತ್ತ ಮೇಲೆ ನನ್ನ ತಲೆ ಬುರುಡೆ ಪಡೆದುಕೊಳ್ಳಲಿಕ್ಕೆ ಹತ್ತು ಪೌಂಡು ಕೊಡುವುದಾಗಿ ಹೇಳಿದ. ಸರಿ, ನನಗೆ ಮಕ್ಕಳಿಲ್ಲ, ಮರಿ ಇಲ್ಲ. ಆಪ್ತರಿಲ್ಲ, ಇಷ್ಟರಿಲ್ಲ; ನನ್ನಲಿ ಆಸ್ಥೆ ಇದ್ದವರು ಯಾರೂ ಇಲ್ಲ. ಅಂದಾಗ ಸತ್ತಮೇಲೆ ನಾನು ನಮ್ಮ ಜನಕ್ಕೆ ಏನಾದರೂ ಪ್ರಯೋಜನಕ್ಕೆ ಬರುವಂತಿದ್ದರೆ ಏಕೆ ಆಗಬಾರದು? ಅದು ನನಗೆ ಇಷ್ಟದ್ದೇ.

ಆದ್ದರಿಂದ ನಾನಂದೆ—'ಈ ಬಗ್ಗೆ ನಾನು ವಿಚಾರಮಾಡಿನೋಡುತ್ತೇನೆ.' ಮತ್ತೆ ಆ ಹತ್ತು ಪೌಂಡು ತೆಗೆದುಕೊಳ್ಳಲಿಕ್ಕೆ ನಾನು ಒಪ್ಪಲೂ ಬಹುದು. ಆ ಹಣ ನನಗೆ ಬಹಳ ಉಪಯೋಗಕ್ಕೆ ಬರುವಂತಿದೆ. ಅದನ್ನು ತೆಗೆದುಕೊಂಡರೆ ಯಾವ ಅಪಾಯವೂ ಇಲ್ಲ.'

'ಹೌದು ಅಜ್ಜಿ, ಯಾವ ಅಪಾಯವೂ ಇಲ್ಲ. ಆದರೂ ಅಜ್ಜಿ, ನೀನಾದರೂ ಹೇಗೆ ಇಂಥ ವಿಚಾರ ಮಾಡಲು ಹೋದೆ? ಈ ಕತೆ ನೀನು ನನಗೆ ಹೇಳಲೇ ಬಾರದಿತ್ತೆಂದು ಈಗ ಅನಿಸುತ್ತದೆ.'

'ಹೌದು ನನಗೂ ಅನಿಸುತ್ತದೆ — ನಾನು ಹೇಳಬಾರದಿತ್ತೇನೋ ಎಂದು — ನಿನಗೆ ಇದನ್ನು ಕೇಳುವುದು ಸೇರಲಿಲ್ಲವೆಂದಾಗ; ಆದರೆ ಇರಲಿ ಇದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ದೇವರೇ! ದೇವರೇ! ಹಾ, ಹ, ಹ, ಅವನಿಗೆ ಇನ್ನೂ ಬಹಳಷ್ಟು ವರ್ಷ ನಾನು ಕಾಯಲಿಕ್ಕೆ ಹಚ್ಚುತ್ತೇನೆ! ಹ, ಹ, ಹ! ದೇವರು ನಿನಗೆ ಒಳ್ಳೇದು ಮಾಡಲಿ, ಮಗಳೇ!'

' ನೀನು ಹಾಗೆ ಹಚ್ಚೀ ಹಚ್ಚುವಿ, ನನಗೂ ಅದೇ ಆಸೆ.'

ಅನಂತರ ಆ ಹುಡುಗಿಯು ಒಮ್ಮೆಲೆ ಆಳವಾದ ವಿಚಾರದಲ್ಲಿ ಮುಳುಗಿದಳು. ಅದರಿಂದ ಅವರ ಮಾತುಕತೆ ಜಳ್ಳುಬಿತ್ತು ಮತ್ತು ಅಜ್ಜಿ ಆಲಿವರಳು ಮೇಣಬತ್ತಿ ಎತ್ತಿಕೊಂಡು ಗ್ರೇಸಳಿಗೆ ಸುಖನಿದ್ರೆ ಕೋರಿ ಎದ್ದು ಹೋದಳು.

ಆಗ ಮಿಸ್ ಮೆಲಬರಿಯ ಕಣ್ಣು ಮತ್ತೆ ಆ ದೂರದ ಮಿಣುಕು ಬೆಳಕಿನಲ್ಲಿ ನಟ್ಟಿತು. ಅದರ ಸುತ್ತಲೂ ಅವಳು ತನ್ನ ಲಹರಿಯನ್ನು ಸುಳಿಸುಳಿಯಾಗಿ ಹರಿಬಿಟ್ಟಳು. ಈಗ ಅವನ ಬಗೆಗೆ ಸಿಕ್ಕ ಸಮಾಚಾರದ ಆಧಾರದ ಮೇಲೆ, ಆ ಬೆಳಕಿನ ಹಿಂದೆ ಆ ತತ್ವಜ್ಞಾನಿಯು ನಡೆಯಿಸಿರಬಹುದಾದ ಚಟುವಟಿಕೆಗಳೊಂದಿಗೆ ಅವಳ ಚಿತ್ತ ಚಿನ್ನಾಟ ಮಾಡಹತ್ತಿತು. ಹೊರಗಿನ ಪ್ರಪಂಚದಿಂದ ಕಿರಿ ಹಿಂಟೋಕ್ ಹಳ್ಳಿಗೆ ಬಂದಾಗ ಇವರ ಒಂದು ಮೂಲೆಯಲ್ಲಿ ಬೇಲಿಯ ಒಳಗೆ ಬೆಳೆಯಿಸಿದ ಸೆಕೆ ನಾಡಿನ ಒಂದು ಅಪರೂಪದ ಸಸಿಯಂತೆ, ಸುತ್ತಲಿನ ಬದುಕಿನೊಡನೆ ಏನೂ ತಳಕು ಇಲ್ಲದ ಪ್ರಗತಿಪರ ವ್ಯವಹಾರಗಳ ವಿಚಾರಗಳ ಕೇಂದ್ರ ಬಿಂದುವೊಂದು ಕಂಡು ಬಂದದ್ದು ಅವಳಿಗೆ ಸೋಜಿಗದ ಸಂಗತಿಯೆನಿಸಿತು. ರಸಾಯನಶಾಸ್ತ್ರದ ಪ್ರಯೋಗಗಳೂ, ಶರೀರ ಶಾಸ್ತ್ರದ ಯೋಜನೆಗಳೂ, ದಾರ್ಶನಿಕ ವಿಚಾರಗಳೂ ಇಲ್ಲಿ ಮನೆ ಮಾಡಿಕೊಂಡಿರುವುವೆಂದರೆ !

ಹೀಗೆ ಗ್ರೇಸ ಚಿಂತಿಸುತ್ತ ಉಳಿದಳು. ಆ ಬೆಳಕಿನ ಹಿಂದಿದ್ದ ವ್ಯಕ್ತಿಯ ಕಲ್ಪಿತ ವ್ಯವಹಾರ ಕ್ರಮವು ಊಹೆ ರೂಪಿಸಿದ ಅವನ ವ್ಯಕ್ತಿತ್ವದ ಆಕೃತಿಯೊಂದಿಗೆ ಬೆರೆಯಿತು. ಈ ಮನೋವ್ಯಾಪಾರದಲ್ಲಿಯೇ ಅವಳ ಎವೆಗಳು ಮುಚ್ಚಿದವು ; ಆಯಾಸದ ಭಾರದಿಂದ ಮತ್ತು ಅವಳು ನಿದ್ದೆ ಹೋದಳು.

೭

ಬಹುರೂಪದರ್ಶಕದೊಳಗಿನ ನೋಟಗಳಂತಿದ್ದ ವಿಚಿತ್ರ ಕನಸುಗಳ ವ್ಯೂಹದೊಳಗಿಂದ ಗ್ರೇಸ ಮೆಲಬರಿ ಮರುದಿನ ಮುಂಜಾನೆ ಎಚ್ಚೆತ್ತಳು. ವಿಚಿತ್ರ ಪ್ರಪಂಚದ ಆ ಸರ್ಜನ್, ಅಜ್ಜಿ ಆಲಿವರಳ ಅಸ್ಥಿಪಂಜರ, ಜೈಲ್ಸ ವಿಂಟರಬೋರ್ನಿನ ಮುಖ, ಇವೆಲ್ಲ ಕನಸುಗಳಲ್ಲಿ ಕಲಬೆರಕೆ ಆಗಿದ್ದವು. ಮುಂಜಾವು ಚೆಂದವಾಗಿತ್ತು. ಬಡಗಣಿಂದ ಗಾಳಿ ಬೀಸುತ್ತಿತ್ತು. ಮೂಡಗಾಳಿಯ ಕೊರೆತ ಮತ್ತು ಪಡುವ ಗಾಳಿಯ ಸ್ಪಂಜಿನಂಥ ಮಂಜಿನ ಬೆಳಕು ಇವೆರಡರಲ್ಲಿಯ ಹೊಂದಾಣಿಕೆಯುಂತಿದ್ದ ಆ ಗಾಳಿ ಅಷ್ಟೇನು ಅಸಹ್ಯವಿರಲಿಲ್ಲ.

ಗ್ರೇಸ ಕಿಟಕಿಯೊಳಗಿಂದ ಹೊರಗೆ ನೋಡಿದಳು — ಹಿಂದಿನ ರಾತ್ರೆಯ ಬೆಳಕಿನ ನಿಟ್ಟಿನಲ್ಲಿ. ಅಲ್ಲಿ ಮರಗಳ ಮರೆಯಲ್ಲಿ ಆ ಸರ್ಜನನ ಮನೆಯ ಆಕೃತಿ ಮಾತ್ರ ಅಸ್ಪಷ್ಟ ಕಂಡು ಬಂದಿತು. ಅದೇಕೋ ಹಗಲಿನ ವ್ಯವಹಾರದ ಹೆಬ್ಬೆಳಕಿನಲ್ಲಿ ಆ ಅಜ್ಞಾತ

ಏಕಾಂತ ಸದ್ಗೃಹಸ್ಥನು ಕತ್ತಲೆಯಲ್ಲಿ ಆರೋಪಿಸಿಕೊಂಡ ವ್ಯಕ್ತಿತ್ವದ ಮತ್ತು ವೃತ್ತಿ ವ್ಯವಸಾಯದ ಕುರಿತಾದ ಬಹಳಷ್ಟು ಆಸಕ್ತಿ ಆಕರ್ಷಣೆಗಳನ್ನು ಕಳೆದುಕೊಂಡಂತೆಯೂ ಕಂಡಿತು. ಮತ್ತು ಗ್ರೇಸಳ ವೇಷಭೂಷೆ ನಡೆಯುತ್ತಿದ್ದಂತೆ ಆತ ಅವಳ ಮನಸ್ಸಿನಿಂದಲೂ ಮಾಯವಾಗಿಬಿಟ್ಟನು.

ಆದರೆ ಈ ನಡುವೆ ವಿಂಟರಬೋರ್ನ ತುಸು ಅಸ್ಪಷ್ಟನಾದನು. ಗ್ರೇಸಳ ತಂದೆಯಿಂದ ಅರೆಪಾಲು ಆಶ್ವಾಸನ ಪಡೆದಿದ್ದರೂ ಅವಳ ವರ್ತನೆಯು ಅವನನ್ನು ಹಾಗೆ ಮಾಡಿತು. ಅವನು ಸ್ವಭಾವತಃ ಸಂತೋಷವೃತ್ತಿಯವನು. ನಾಚುಬುರುಕ ಮತ್ತು ಆತ್ಮ ಸಂಯಮಿ. ಆದಾಗ್ಯೂ ತನ್ನ ಬಾಗಿಲಿನಿಂದ ಆ ಕಟ್ಟಿಗೆ ವ್ಯಾಪಾರಿಯ ಮನೆಯತ್ತ, ಯಾರಾದರೂ ಅಲ್ಲಿಂದ ಹೊರಬೀಳಬಹುದೆಂಬ ನಿರೀಕ್ಷೆಯಲ್ಲಿ, ಅವನು ಎಡಬಿಡದೆ ನೋಡುತ್ತ ಉಳಿಯದೆ ಇರದಾದನು.

ಕೊನೆಗೂ ಅವನ ನಿರೀಕ್ಷೆ ಸಾರ್ಥಕವಾಯಿತು.—ಎರಡು ಆಕೃತಿಗಳು ಸ್ವತಃ ಮಿಸ್ಟರ ಮೆಲಬರಿ ಮತ್ತು ಅವನ ಜತೆಯಲ್ಲಿ ಗ್ರೇಸಳು ಹೊರಗೆ ಕಾಣಿಸಿಕೊಂಡರು. ಅವರಿಬ್ಬರೂ ಅಡವಿಯ ಅತಿದಟ್ಟ ಭಾಗದ ಕಡೆಗೆ ನಡೆದರು. ವಿಂಟರಬೋರ್ನ ಅವರ ಬೆನ್ನಿಗೆ ಆಲೋಚನೆಯಲ್ಲಿ ವ್ಯಗ್ರವಾಗಿ ಹೋದನು. ಮೂವರೂ ಮರಗಳಡಿಗೆ ಲಗುವೆ ತಲುಪಿದರು.

ರೆಂಬೆಕೊಂಬೆಗಳು ಬೋಳುಬರಲಾಗುವ ಹಂಗಾಮು ಈಗಾಗಲೇ ಆರಂಭ ವಾಗಿತ್ತು. ಆದರೂ ಹಿಂಟೋಕದ ಅಡವಿಗಳಲ್ಲಿ ಮರೆಯಾಗಿ ಅವಿತುಕೊಂಡ ಹೊದರುಗಳು ಸಾಕಷ್ಟು ಇದ್ದವು. ಅವುಗಳಲ್ಲಿ ಎಲೆಗಳ ಉದುರಾಟ, ಗುಡ್ಡದ ತುದಿಯಲ್ಲಿಗಿಂತ ನಿಧಾನವಾಗಿ ನಡೆದಿತ್ತು. ಇದರಿಂದ ಅಲ್ಲಿ ಇಲ್ಲಿ ಋತುಗಳ ಮಿಶ್ರಣ ವಾದಂತೆ ಇತ್ತು. ಕೆಲವು ಕಣಿವೆಗಳಲ್ಲಿ ಹೊಲ್ಲಿ - ಕಾಯಿಗಳು ಕೆಂಪಾಗಿ ಬೆಳೆದಿದ್ದವು ; ಅವುಗಳ ಬದಿಯಲ್ಲಿಯೆ ಓಕ ಮತ್ತು ಹೆರೆಬಲ ಮರಗಳು ಇನ್ನೂ ಎಲೆಗಳ ಹಸುರನ್ನು ಹಿಡಿಯದೆ ನಿಂತಿದ್ದವು. ಬ್ರಾಂಬಲ ಮುಳ್ಳುಕಂಟಿಗಳ ಹಚ್ಚಹಸಿರಂತೂ ಆಗಸ್ಟ ತಿಂಗಳಿನಲ್ಲಿಯಂತೆ ಆಳವಾಗಿತ್ತು. ಗ್ರೇಸಳಿಗೆ ಇವೆಲ್ಲ ಚಿರಪರಿಚಿತ ವೈಚಿತ್ರ್ಯಗಳು ಹಳೆಯ ಚಿತ್ರವನ್ನು ತಿರುಗಿ ತೊಳೆದು ತಿದ್ದಿ ಇಟ್ಟಂತೆ ಅನಿಸಿದವು.

ಚಳಿಗಾಲ ಕಾಲಿಡುವಾಗ ಬನಸಿರಿಯು ಚೆಲುವಿನಿಂದ ವಿಚಿತ್ರವಾಗಿ ಮಾರ್ಪಡು ವುದನ್ನು ಈಗ ನೋಡಬಹುದಿತ್ತು. ಗೋಲಗಳ ಸ್ಥಳಕ್ಕೆ ಕೋನಗಳು ಬರುತ್ತಿದ್ದವು. ಪಾತಳಿಗಳ ಬದಲಿಗೆ ತಗ್ಗು ದಿನ್ನೆಗಳು ತೋರುತ್ತಿದ್ದವು. ಅಲಂಕಾರದಿಂದ ಒಮ್ಮೆಲೆ ನಿಸರ್ಗದ ಪ್ರಾಥಮಿಕ ರೂಪಕ್ಕೆ ಜಾರಿದಂತಿತ್ತು. ಆ ಹಿನ್ನಡೆಯು, ಪುರೋಗಾಮಿಯಾದ ಕಲೆಯಿಂದ ಪ್ಯಾಸಿಫಿಕ ದ್ವೀಪದವರ ಚಿತ್ರಗಾರಿಕೆಯ ಒಂದು ಮಾದರಿಗೆ ಇಳಿದಂತೆ ಕಾಣುತ್ತಿತ್ತು.

ವಿಂಟರಬೋರ್ನ ಅವರಿಬ್ಬರನ್ನು ಹಿಂಬಾಲಿಸಿದನು. ಅವರು ಈ ಬನಸಿರಿಯ ದಟ್ಟಣೆಯೊಳಗಿಂದ ದಾರಿಮಾಡಿಕೊಂಡು ಹೋಗುವಾಗ ಅವರ ಮೇಲೆಯೇ ಕಣ್ಣಿಟ್ಟು

ಹೆಜ್ಜೆ ಹಾಕುತ್ತ ನಡೆದನು. ತಂದೆ ಮೆಲಬರಿಯ ಕಾಲು ಉದ್ದ; ಅವನ ತೊಗಲ ಕಾಲಚೀಲಗಳು ಹಿಮ್ಮಡದ ಎಲುಬಿನ ತನಕವೂ ಬಿಗಿದುಕಟ್ಟಿದವು. ಅವನ ಬೆನ್ನಿನ ಕಿರಿಬಾಗು, ನಡೆಯುತ್ತಿದ್ದಂತೆ ನಡುವೆಯೇ ವಿಚಾರತಂದ್ರಿಯಲ್ಲಿ ಮೈಮರೆಯುವ ಚಟ, ಮತ್ತೆ ಫಕ್ಕನೆ ಎಚ್ಚೆತ್ತು 'ಹಾ !' ಎಂದು ತಲೆಯನ್ನು ಒಮ್ಮೆ ಜೋರಾಗಿ ನಿಗುರಿಸಿ ಮುಂದರಿಯುವ ರೀತಿ — ಇವೆಲ್ಲ ಅವನ ಕಣ್ಣ ತೆಕ್ಕೆಯಲ್ಲಿ ಬರುವ ಯಾವ ನೆರೆಹೊರೆಯವನಿಗೂ ಅವನ ವ್ಯಕ್ತಿತ್ವದ ಪರಿಚಯ ನೀಡುವಂತಿದ್ದವು. ಆ ಬೆಟ್ಟದ ಇಣಚಿಗಳು ಹಕ್ಕಿಗಳು ಕೂಡ ಅವನನ್ನು ಬಲ್ಲವು. ಇಣಚಿಯೊಂದು ಒಂದೊಮ್ಮೆ ಅವನ ಹಾದಿಯಿಂದ ಬದಿಗೆ ಓಡಿ ಮರದ ತೋಳಿನ ಹಿಂದೆ ಅವಿತು ಮೆಲಬರಿ ಮತ್ತು ಅವನ ಮಗಳು ಮುಂದೆ ಹಾದುಹೋದೊಡನೆ, ಅಣಕಿಸುವ ನೋಟದಿಂದ ಅನ್ನುವಂತೆ ತೋರುತ್ತಿತ್ತು, 'ಓಹೋ, ನೀವೋ ! ನೀನು ಬರೆ ಕಟ್ಟಿಗೆ ವ್ಯಾಪಾರಿ, ಕೋವಿ ಹೊತ್ತ ಶಿಕಾರಿ ಅಲ್ಲ.'

ಅವರು ಚಿಕ್ಕೆಚೆಲ್ಲಿದ ಹಸಿರು ಪಾಚಿಯ ಚಾಪೆಗಳ ಮೇಲಿಂದ ಸದ್ದಿಲ್ಲದೆ ನಡೆದರು ; ಅಲ್ಲಲ್ಲಿ ಹರಡಿಬಿದ್ದ ತರಗೆಲೆಗಳಲ್ಲಿ ಸರಸರ ಸದ್ದುಮಾಡುತ್ತ ನಡೆದರು ; ಪಾಚಿ ಮುಚ್ಚಿದ್ದರಿಂದ ಹಸಿರು ಕೈಚೀಲ ಹಾಕಿಕೊಂಡು ಚಾಚಿದಂತೆ ಕಾಣುವ ಬೇರುಗಳ ಬೊಡ್ಡೆಗಳಿಗೆ ಸುತ್ತು ಹಾಕಿ ನಡೆದರು ; ಎಲ್ಮ ಹೆಮ್ಮರಗಳ ಕವಲೊಡೆದ ಟೊಂಗೆಗಳಿಗೆ ಹೆಗಲು ಬಡಿಯುತ್ತ, ಅವುಗಳ ಹೊದರುಗಳಲ್ಲಿ ತುಂಬಿನಿಂತ ಮಳೆ ನೀರನ್ನು ಚಿಕ್ಕ ತಡಸಲುಗಳಂತೆ ಕೆಳಗೆ ಚೆಲ್ಲಿಸುತ್ತ ನಡೆದರು ; ಇನ್ನೂ ಹಳೆಯ ಮರಗಳ ಮೇಲೆ ಬದನಿಕೆ ಪೊದೆಪೊದೆ ಬೆಳೆದು ಪುಪ್ಪುಸಗಳಂತೆ ಅಂಟಿತ್ತು. ಇನ್ನೆಲ್ಲಿಯಂತೆ ಇಲ್ಲಿಯೂ ಬಾಳನ್ನು ರೂಪಿಸುವ ಅಪೂರ್ತ ಅಮೂರ್ತ ದೈವೇಚ್ಛೆಯು ನಗರಗಳ ಕೊಳಚೆಯ ಭಾಗಗಳಲ್ಲಿಯಂತೆಯೇ ವ್ಯಕ್ತವಾಗಿತ್ತು ; ಎಲೆ ಆಕಾರಗೆಟ್ಟಿತ್ತು, ಕಮಾನು ಸೊಟ್ಟವಾಗಿತ್ತು. ಸುಳಿಯು ತಡೆಗಟ್ಟಿತ್ತು. ಬಂದಳಿಕೆಯು ಹೊಸ ಸಸಿಯನ್ನು ಕತ್ತು ಹಿಸುಕಿ ಕೊಲ್ಲುತ್ತಿತ್ತು.

ಅವರು ಬೀಚಮರಗಳ ನಡುವೆ ನುಗ್ಗಿದರು. ಗ್ರೇಸಳ ಬಟ್ಟೆಯೊಳಗಿನ ಬಿಳಿಯ ಎಳೆಗಳು, ಅವಳನ್ನೂ ಅವಳ ತಂದೆಯನ್ನೂ ಕಣ್ಣೆದಿರಿಗೆ ಇಟ್ಟುಕೊಂಡು ಹಿಂಬಾಲಿಸಲಿಕ್ಕೆ, ಕೆಲಹೊತ್ತು ಜೈಲ್ಸನಿಗೆ ನೆರವಾದವು. ಆದರೆ ಈಗ ಅವರು ಕಣ್ಮರೆಯಾಗಿದ್ದರು. ಅವರನ್ನು ಕಿವಿಗೊಟ್ಟೇ ಹಿಂಬಾಲಿಸಬೇಕಾಗಿತ್ತು. ಆದರೆ ಅದೇನೂ ಕಷ್ಟವಾಗಿದ್ದಿಲ್ಲ. ಏಕೆಂದರೆ ಅವರು ಹಾಯುವ ದಾರಿಗುಂಟ ಕಾಡು ಪಾರಿವಾಳಗಳು ಬರ್ರನೆ ಮೇಲೆದ್ದು ಟೊಂಗೆಗಳಿಗೆ ರೆಕ್ಕೆಗಳನ್ನು ಜೋರಿನಿಂದ ಬಡಿದುಕೊಳ್ಳುತ್ತ ಹಾರಾಡುತ್ತಿದ್ದವು. ಆ ಜೋರಿಗೆ ಅವುಗಳ ಗರಿಗಳು ಮುರಿಯುತ್ತಿರಬೇಕು. ಈ ಸದ್ದಿನ ಜಾಡು ಹಿಡಿದು ಅವನು ಒಂದು ಬೇಲಿ ದಾಟುವ ಮೆಟ್ಟಿಲ ದಣಪೆಗೆ ಬಂದು ಮುಟ್ಟಿದನು.

ಇನ್ನೂ ಮುಂದರಿಯುವುದರಲ್ಲಿ ಅರ್ಥವಿದೆಯೋ ಎಂದು ಅಲ್ಲಿ ದಣಪೆಯ

ಬುಡಕ್ಕೆ ಇದ್ದ ಜಿಗುಟು ಮಣ್ಣಿನಲ್ಲಿ ಆತ ನೋಡಿದನು. ಅಗಲವಾದ ಅಂಗಾಲು - ಹಿಮ್ಮಡಗಳ ಅಚ್ಚುಗಳೊಂದಿಗೆ ಸ್ಥಾನಿಕವಲ್ಲದ ಹೊಸತಾದ ಹಗುರವಾದ ಬೂಟಿನ ಗುರುತುಗಳೂ ಮೂಡಿದ್ದವು. ಆ ಕೆಸರ ಚಿತ್ರವು ಅವನಿಗೆ ಸಾಕೆನಿಸಿತು. ಆತ ಬೇಲಿಯ ದಣಪೆಯನ್ನು ಒಂದು ಜೀಕಿಗೆ ದಾಟಿ ಮುಂದರಿದನು.

ಈಗ ಆ ಬೆಟ್ಟದ ಸ್ವರೂಪವೆ ಬದಲಾಯಿತು. ಕಿರಿಯ ಮರಗಳ ಬುಡಗಳನ್ನು ಮೊಲಗಳು ಕೊರೆದು ಹಾಕಿದ್ದವು. ಬೇರೆ ಬೇರೆ ಕಡೆಗೆ ಹೊಸದಾಗಿ ಕೆತ್ತಿಚೆಲ್ಲಿದ ಚೆಕ್ಕೆಗಳ ರಾಶಿಗಳು ಒಟ್ಟಿದ್ದವು. ಅಲ್ಲೊಂದು ಇಲ್ಲೊಂದು ಮರದ ಹೊಸದಾಗಿ ಕಡಿದು ಮಾಡಿದ ಪೀಠವಿತ್ತು -- ಹುಲ್ಲಿನೊಳಗೆ ಬೆಳ್ಳಗೆ ಕಾಣುತ್ತಿತ್ತು. ಈ ವರ್ಷ ದೊಡ್ಡ ಮೊತ್ತದಲ್ಲಿ ಮರಗಳನ್ನು ಕಡಿದು ಹಾಕಿರಬೇಕು. ಅವನ ಕಿವಿಗೆ ಬರುವ ಕೆಲವು ಸದ್ದುಗಳು ಅದನ್ನೆ ತಿಳಿಸುವಂತಿತ್ತು.

ಮಾನವೀ ಬೊಗಳಿಕೆಯೋ ಎಂಬಂತೆ ಒಂದು ದೊಡ್ಡ ದನಿಯು ತಡೆತಡೆದು ಕೂಗುತ್ತಿತ್ತು — ಅದೇ ದಿನ ಮರಗಳ ಹಾಗೂ ಕಟ್ಟಿಗೆಯ ಹೊರೆಗಳ ವಿಕ್ರಯ ನಡೆಯುವದಿದೆಯೆಂದು ಅದು ಜೈಲ್ಸನಿಗೆ ನೆನಪು ಮಾಡಿಕೊಡುತ್ತಿತ್ತು. ಮೆಲಬರಿಯು ಅಲ್ಲಿ ಸ್ವಾಭಾವಿಕವಾಗಿಯೇ ಹಾಜರು ಇರಬೇಕು. ವಿಂಟರಬೋರ್ನನಿಗೂ ಅನಿಸಿತು, ತನಗೂ ಕೆಲವು ಕಟ್ಟಿಗೆಯ ಹೊರೆಗಳು ಬೇಕೆಂದು. ಮತ್ತು ಅವನೂ ಆ ದೃಶ್ಯವನ್ನು ಪ್ರವೇಶಿಸಿದನು.

ಹರಾಜು ಮಾಡುವವನ ಸುತ್ತಲೂ ಖರೀದಿ ಮಾಡುವವರ ದೊಡ್ಡದೊಂದು ಗುಂಪು ನಿಂತಿತ್ತು, ಅಥವಾ ಅವನು ಕೂಗುವುದನ್ನು ತಡೆದು ನಾಟುಗಳ ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಅಲೆದಾಡುವಾಗ ಅವನ ಬೆನ್ನಿಗೆ ಹೋಗುತ್ತಿತ್ತು. ಹಳೆಯ ಗ್ರೀಸದ ಲಿಸಿಯಂದ ಉಪವನಗಳಲ್ಲಿ ಪರಿವ್ರಾಜಕ ತತ್ವಜ್ಞಾನಿಗಳ ಸಂಚಾರಿ ಶಾಲೆಯ ಶಿಷ್ಯವೃಂದದಂತೆ! ಅವನ ಸಂಗಾತಿಗಳು ಕಟ್ಟಿಗೆ ವ್ಯಾಪಾರಿಗಳು, ಒಕ್ಕಲು, ಕೂಲಿಗಾರರು, ಹಳ್ಳಿಗರು -- ಹೆಚ್ಚಾಗಿ ಎಲ್ಲರೂ ಮಲೆನಾಡವರು. ಆ ಮಲೆನಾಡವರು ತಮ್ಮ ಕೈಗೋಲುಗಳಲ್ಲಿಯೇ ವೈಚಿತ್ರ್ಯವನ್ನು ಪ್ರಕಟಿಸುತ್ತಿದ್ದರು. ಈ ಕೋಲುಗಳಲ್ಲಿ ವನಸ್ಪತಿ ಲೋಕದ ವಿಕಾರಗೆಟ್ಟ ರೂಪಗಳನ್ನೆಲ್ಲ ಪ್ರದರ್ಶಿಸುವಂತಿತ್ತು. ಅವುಗಳಲ್ಲಿ ವಿಶೇಷವಾಗಿ ಕಾಣುವಂಥವು ಕಪ್ಪು ಬಿಳಿ ಬಣ್ಣದ ಮಲಸೂತ್ರದಂಥ ತಿರುಪಿನ ಆಕಾರದ ಕೋಲುಗಳು — ಚೀನಿಯರು ಮಂದಿಯನ್ನು ತೀರ ಬಾಲ್ಯದಲ್ಲಿಯೇ ಒತ್ತಿ ಕಟ್ಟಿ ನಿಧಾನವಾಗಿ ಚಿತ್ರಹಿಂಸೆಗೆ ಗುರಿಮಾಡಿ ಚಿತ್ರವಿಚಿತ್ರ ಆಕಾರವುಳ್ಳವರಾಗಿ ಮಾಡುವಂತೆ; ಈ ಬೆತ್ತಗಳನ್ನು ಎಳೆಯುತರಲ್ಲಿಯೇ ಹೀಗೆ ರೂಪಗೆಡಿಸಲಾಗಿತ್ತು.

ಇಬ್ಬರು ಹೆಂಗಸರು ತಮ್ಮ ಗೌನುಗಳ ಮೇಲೆ ಗಂಡಸರ ಜಾಕೀಟುಗಳನ್ನೆ ತೊಟ್ಟು, ಈ ಮಂದಿಯ ನೆರವಿಯ ಹಿಂಬದಿಗೆ ಒಂದು ತಟ್ಟಿನ ಗಾಡಿಯಲ್ಲಿ ಬ್ರೆಡ್ಡು ಚೀಸು, ಆಯ್ದು ಮಂದಿಗಾಗಿ ಉಗ್ರ ಅಮಲಿನ ಏಲಮದ್ಯ, ಹಾಲಿನ ಪಾತ್ರೆಗಳಲ್ಲಿ ಸೇಬಿನ ಸರಾಯಿ (ಸಿಡರ) ತುಂಬಿಕೊಂಡು ತೆಗೆದುಕೊಂಡು ತಿರುಗುತ್ತಿದ್ದರು. ಸಿಡರ

ಬೋಗುಣಿಗಳಲ್ಲಿ ಯಾರು ಬೇಕಾದರೂ ತಟ್ಟೆ ಅದ್ದಿಸಿ ತುಂಬಿತೆಗೆದು ಕುಡಿಯುತ್ತಿದ್ದರು.

ಹರಾಜು ಮಾಡುವವನು ತನ್ನ ಕೈಗೋಲನ್ನೆ ಹರಾಜಿನ ಸುತ್ತಿಗೆಯಂತೆ ಬಳಸುತ್ತ ಪ್ರಾಪ್ತ ಪರಿಸ್ಥಿತಿಗೆ ಹೊಂದಿಕೊಂಡಿದ್ದನು. ಆತ ತನಗೆ ಲಹರಿ ಬಂದಂತೆ ಯಾವುದೇ ಅನುಕೂಲ ವಸ್ತುವಿನ ಮೇಲೆ ಆ ಕೋಲನ್ನು ಜಡಿದು ತನ್ನ ಸವಾಲು ಮುಗಿಸುತ್ತಿದ್ದನು — ಒಬ್ಬ ಹುಡುಗನ ತಲೆಯ ಮೇಲೋ, ಬದಿಗೆ ನಿಂತ ಒಬ್ಬನ ಹೆಗಲ ಮೇಲೋ. (ಆ ಬದಿಗೆ ನಿಂತವನಿಗೆ ಸಿಡರು ಕುಡಿಯುವುದರ ಹೊರತಾಗಿ ಬೇರೆ ಯಾವ ವ್ಯವಹಾರವೂ ಅಲ್ಲಿ ಇದ್ದಿಲ್ಲ!) ಹರಾಜುಗಾರನ ಈ ಲೀಲೆಯನ್ನು ವಿನೋದವೆಂದು ಎಣಿಸಬಹುದಿತ್ತು. ಆದರೆ ಅವನ ಮುಖವು ಕೆಟ್ಟ ಗಾಂಭೀರ್ಯವನ್ನು ಬಿರುಸಾಗಿ ಕಾಪಾಡಿಕೊಂಡಿರುತ್ತಿತ್ತು! ಅವನು ಹಾಗೆ ತಲೆಕುಟ್ಟುವುದು ಅವನ ಕಾರ್ಯದ ಒತ್ತಡದ ಫಲವಾಗಿ ಬಂದ ಅತಿ ಮರವಲ್ಲದೆ ಹುಚ್ಚು ಲಹರಿಯಲ್ಲವೆಂದು ಆ ಮುಖಮುದ್ರೆ ಸೂಚಿಸುತ್ತಿತ್ತು.

ಈ ಜಂಗಮ ಜನಸಮುದಾಯದಿಂದ ಮೆಲಬರಿಯು ತುಸು ದೂರ ನಿಂತಿದ್ದನು. ಮತ್ತು ಗ್ರೇಸಳೂ ಅವನ ಹತ್ತಿರವೆ ಅವನ ತೋಳಿಗೆ ಅಂಟಿಕೊಂಡು ನಿಂತಿದ್ದಳು. ಪ್ರತಿಯೊಂದೂ ಹಳಬತನದ್ದಾಗಿರುವ ಆ ಸನ್ನಿವೇಶದಲ್ಲಿ ಅವಳ ಆಧುನಿಕ ವೇಷಭೂಷೆಯೂ ಎದ್ದು ಕಾಣುತ್ತಿತ್ತು. ಗ್ರೇಸಳು ಆ ಮರಗಳ ಮಾರಾಟವನ್ನು ಆಸಕ್ತಿಯಿಂದ ಗಮನಿಸುವಂತೆ ತೋರಿತು — ದೀರ್ಘ ಕಾಲದ ಮರವಿನ ನಂತರ ಚೇತರಿಸಿಕೊಂಡ ನೆನಹುಗಳಿಂದ ಮೂಡಿದ ಆಸಕ್ತಿಯದು.

ವಿಂಟರಬೋರ್ನ ಹೋಗಿ ಅವರ ಹತ್ತಿರವೇ ನಿಂತನು. ಕಟ್ಟಿಗೆ ವ್ಯಾಪಾರಿ ಮೆಲಬರಿ ಮಾತನಾಡುತ್ತ ಮರಗಳನ್ನು ಖರೀದಿ ಮಾಡುತ್ತಿದ್ದನು. ಗ್ರೇಸಳು ಬರೆ ನಗುತ್ತಿದ್ದಳು. ತನ್ನ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳುವ ಹಟದಿಂದ ವಿಂಟರಬೋರ್ನನೂ ತನಗೆ ಬೇಡವಾದ ಕಟ್ಟಿಗೆಯ ಹೊರೆಗಳನ್ನು ಮರಗಳ ತೋಣಿಗಳನ್ನೂ ಸವಾಲಿಗೆ ಕೇಳಲು ಹತ್ತಿದನು. ಅವನ ಈ ವ್ಯವಹಾರವೆಲ್ಲ ಅನ್ಯಮನಸ್ಕ ಭಾವದಲ್ಲಿ ನಡೆದಿತ್ತು.

ಕೆಲವು ಹಿಮಕಣಗಳು ಉದುರಿದವು. ಅವನ್ನು ಕಂಡು ಒಂದು ಪುಟ್ಟ ರೊಬಿನ್ ಹಕ್ಕಿಯು ಚಳಿಗಾಲದ ಮುಂಗುರುಹಿಗೆ ಗಾಬರಿಯಾಗಿ, ಕಾಡಿನಲ್ಲಿಯ ಈ ನರ — ಮನುಷ್ಯರ ದಾಳಿಯಿಂದ ಯಾವ ಅಪಾಯವೂ ಇಲ್ಲವೆಂದು ಮನಗಂಡು ಹಾರಿಬಂದು ಒಂದು ಸೌದೆಯ ಹೊರೆಯ ಮೇಲೆ ಕೂತುಕೊಂಡಿತು. ರೊಟ್ಟಿಯ ಬುಟ್ಟಿಯಿಂದ ಏನಾದರೂ ತುಣುಕು ಸಿಗಬಹುದೇ ಎಂದು ಕಾಯುತ್ತ ಹರಾಜುಗಾರನ ಮೋರೆಯನ್ನೆ ದಿಟ್ಟಿಸಿ ನೋಡಿತು. ಗ್ರೇಸಳ ಹಿಂಬದಿಗೆ ನಿಂತಲ್ಲಿ ಜೈಲ್ಸನು ಒಂದು ಹಿಮಕಣವು ಅವಳ ಕೂದಲಿನ ಒಂದು ಕುರುಳಿನ ಮೇಲೆ ಇನ್ನೊಂದು ಹೆಗಲ ಮೇಲೆ ಮತ್ತೊಂದು ಅವಳ ಕಿರಿಟೊಪ್ಪಿಗೆಯ ಅಂಚಿಗೆ ಹೇಗೆ ತೇಲಿ ಬಂದು ಕೂಡ್ರುವವು ವೆಂಬುದನ್ನೆ ನೋಡುತ್ತಿದ್ದನು. ಅವನ ಈ ಅವಲೋಕನೆಯ ಏಕಾಗ್ರತೆಯಲ್ಲಿ ಸವಾಲು ಹಾಕುವುದು ಹುಚ್ಚಾಪಟ್ಟೆ ಆಯಿತು; ಅಸ್ಪಷ್ಟವಾಯಿತು. ಮತ್ತು ಆ ಹರಾಜುಗಾರನು

'ಮಿಸ್ಟರ ವಿಂಟರಬೋರ್ನ್ ಇದು ನಿಮ್ಮದು' ಎಂದು ಒಂದೊಂದು ರಾಶಿಯು ಹರಾಜು ಮುಗಿಸಿದಾಗ ಅದು ಮರವೋ, ಸೌದೆಯೋ ಗೂಟಗಳ ಹೊರೆಯೋ— ಯಾವುದೆಂಬುದೂ ಅವನಿಗೆ ಕಲ್ಪನೆ ಇದ್ದಿಲ್ಲ.

ಅವನಿಗೆ ಒಂದೇ ವ್ಯಥೆ. ಮೊನ್ನೆ ತಾನೆ ತನ್ನೊಂದಿಗೆ ಗ್ರೇಸಳ ಮದುವೆಯ ಪ್ರಸ್ತಾಪ ನಿಶ್ಚಿತಾರ್ಥದಂತೆ ಗೊತ್ತು ಮಾಡಿದ ಮೇಲೂ ಅವಳ ತಂದೆ ಅವಳನ್ನೂ ಹೀಗೆ ತನ್ನ ತೋಳ ಮೇಲೆಯೇ ಇಷ್ಟೆಲ್ಲ ಹೊತ್ತು ಹಿಡಿದಿಟ್ಟುಕೊಳ್ಳುವಷ್ಟು ಪಕ್ಷಪಾತ ತೋರಿಸುವುದೇ ? ಇದೇ ಚಿಂತನೆಯಲ್ಲಿ ಆತ ಯಾರೊಂದಿಗೂ ಮಾತುಕತೆಯಲ್ಲಿ ಸಿಲುಕದೆ, ನೇರವಾಗಿ ಮಾತಾಡಿಸಿದಾಗಷ್ಟೇ ಬಾಯಿಬಿಚ್ಚುತ್ತ ಎಲ್ಲ ಹರಾಜು ಮುಗಿಯುವವರೆಗೂ ಆ ಗುಂಪಿನೊಂದಿಗೆ ತಾನೂ ಅತ್ತಿಂದಿತ್ತ ಅಲೆದಾಡುತ್ತಿದ್ದ. ಎಲ್ಲ ಮುಗಿದಾಗಲೆ ಅವನಿಗೆ ಗೊತ್ತು — ತಾನು ಏನೆಲ್ಲ ಖರೀದಿ ಮಾಡಿದೆನೆಂದು. ನೂರುಗಟ್ಟಲೆ ಸೌದೆಯ ಹೊರೆ, ವಿವಿಧ ನಾಟುಗಳ ರಾಶಿ ಅವನವೆಂದು ಕೊಟ್ಟಿಡ ಲಾಗಿತ್ತು. ಅವನಿಗೆ ನಿಜವಾಗಿಯೂ ಬೇಕಾದದ್ದು ಆವನ ಆಳು ರಾಬರ್ಟ ಕ್ರೀಡಲಿನ ರೊಟ್ಟಿ ಸುಡುವ ಭಟ್ಟಿಗೋ ಒಲೆಗೋ ಕೆಲವು ಉರುವಲವಾಗಿತ್ತು.

ಹರಾಜಿನ ವ್ಯವಹಾರ ಮುಗಿದ ಮೇಲೆ ಆತ ನಮ್ಮ ಕಟ್ಟಿಗೆ ವ್ಯಾಪಾರಿ ಯೊಂದಿಗೆ ಮಾತಾಡಲು ಹವಣಿಸಿದನು. ಆದರೆ ಮೆಲಬರಿಯ ರೀತಿ ಲಘುವಾಗಿತ್ತು, ದೂರದ ಅಂತರವಿತ್ತು. ಗ್ರೇಸಳೂ ಸಿಡುಕಿನಿಂದ ಛೀ ಹಾಕುವಂತೆ ಕಂಡಳು. ಆಗ ಅವನಿಗೆ ತಿಳಿದು ಬಂತು — ಹರಾಜಿನ ಉದ್ದಕ್ಕೂ ಅವನು ಅವಳ ತಂದೆಯ ವಿರುದ್ಧವೇ ತನಗೇ ತಿಳಿಯದಂತೆ, ಸವಾಲು ಏರಿಸುತ್ತ ನಡೆದಿದ್ದ ; ಅವಳ ತಂದೆ ಮೆಚ್ಚಿ ಆರಿಸಿದ ರಾಶಿಗಳನ್ನೆ ತಾನೂ ಆಯ್ದು ಸವಾಲಿಗೆ ಕೇಳುತ್ತಿದ್ದ. ಕೆಲವೆ ಮಾತುಗಳು ನಡೆದು ಅವರೆಲ್ಲರೂ ಆ ಸ್ಥಳವನ್ನು ಬಿಟ್ಟು ತಮ್ಮ ಮನೆಯ ಹಾದಿ ಹಿಡಿದರು.

ಆದರೆ ಉಳಿದವರೆಲ್ಲ ಹಾದಿ ಹಿಡಿದರೂ ಜೈಲ್ಸ ಮರಗಳಡಿಯಲ್ಲಿ ಹಾಗೆಯೇ ಶೂನ್ಯಚಿತ್ತದಿಂದ ನಿಂತಿಯೇ ಇದ್ದನು. ತಾನು ಇದೇನು ಮಾಡಿದೆ ?— ಎಂದು ಆತ ಅತ್ಯಂತ ವ್ಯಗ್ರನಾದನು. ಮೆಲಬರಿ ಮತ್ತು ಗ್ರೇಸ ಒಂದು ಚಿಕ್ಕ ಕಣಿವೆಯಗುಂಟ ಹೊರಳಿಯೂ ನೋಡದೆ ಸಾಗಿ ಹೋಗುವುದನ್ನೂ ಆತ ಕಂಡನು. ಅವರು ಮೆಲ್ಲಗೆ ಹೋಗುತ್ತಿದ್ದಂತೆ ಒಬ್ಬ ಮಹಿಳೆಯು ನಡುದೂರದಲ್ಲಿ, ಕುದುರೆಯನ್ನೇರಿ ಬರುತ್ತಿರುವುದು ಕಾಣಿಸಿತು. ಅವಳ ಗತಿಯ ಮಾರ್ಗವು ಮೆಲಬರಿಯ ದಾರಿಯನ್ನೆ ಸಂಧಿಸುತ್ತಿತ್ತು, ಅವರು ಸಂಧಿಸಿದರು. ಮೆಲಬರಿ ತನ್ನ ಹ್ಯಾಟನ್ನು ತೆಗೆದು ವಂದನೆ ಸೂಚಿಸಿದನು. ಅವಳು ಕುದುರೆಯ ಕಡಿವಾಣ ಜಗ್ಗಿದಳು. ಆ ಮೇಲೆ ಗ್ರೇಸ ಅವಳ ತಂದೆ ಮತ್ತು ಈ ಕುದುರೆಯ ಸವಾರಳ ನಡುವೆ ಸಂಭಾಷಣೆ ನಡೆಯಿತು. ಆ ಸವಾರಳು ಶ್ರೀಮತೀ ಚಾರ್ಮಂದ ಎಂದು ಜೈಲ್ಸ ಗುರುತಿಸಿದನು. ಅವಳ ಆಕೃತಿಗಿಂತ ನಾಲ್ಕು ಮಾರು ದೂರ ನಿಂತ ಅವಳ ಕುದುರೆಯಾಳಿನ ಬಿಲ್ಲೆ — ಬಟ್ಟೆಗಳಿಂದಲೇ ಅವನಿಗೆ ಆ ಗುರುತು ಹತ್ತಿದ್ದು.

ಸಂಭಾಷಣೆಕಾರರು ಬಹಳ ಹೊತ್ತು ಕದಲಲಿಲ್ಲ. ಆ ನಡುವೆ ಅವರಲ್ಲಿ ಬಹಳಷ್ಟು ಮಾತು ನಡೆದಿರಬೇಕು. ಮೆಲಬರಿ ಮತ್ತು ಅವನ ಮಗಳು ಮತ್ತೆ ದಾರಿ ಹಿಡಿದಾಗ ಅವರ ಹೆಜ್ಜೆ ಹಿಂದಿಗಿಂತ ಹಗುರಾಗಿತ್ತು.

ವಿಂಟರಬೋರ್ನ್ ತನ್ನ ಮನೆಯ ಹಾದಿ ಹಿಡಿದು ನಡೆದನು. ಯಾವುದೇ ಕ್ಷುಲ್ಲಕ ನಿಮಿತ್ತದಿಂದ ತನ್ನ ಹಾಗೂ ಮೆಲಬರಿಯ ಕುಟುಂಬದ ನಡುವೆ ಉದಾಸೀನ ಸಂಕೋಚ ಬೆಳೆಯುವುದು ಅವನಿಗೆ ಇಷ್ಟವಿದ್ದಿಲ್ಲ. ಆದ್ದರಿಂದ ಆ ಸಂಜೆಗೆ ಅವನು ಅವರಲ್ಲಿಗೆ ಹೋದನು. ಮನೆಯ ಆವಾರದ ಬಾಗಿಲಿಗೆ ಬಂದಾಗಲೆ ಅವನ ಲಕ್ಷ್ಯ ಮನೆಯ ಮಲಗುವ ಕೋಣೆಗಳಲ್ಲಿ ಒಂದರ ಕಡೆಗೆ ಹೋಯಿತು. ಆ ಕೋಣೆ ದೀಪಗಳ ಪ್ರಭೆಯಿಂದ ಥಳಕುಗೊಂಡಿತ್ತು. ಕೋಣೆಯೊಳಗೆ ಗ್ರೇಸಳು ನಿಂತಿದ್ದಳು. ಅವಳು ಹಲವಾರು ಮೇಣಬತ್ತಿಗಳನ್ನು ಹಚ್ಚುತ್ತಿದ್ದಳು. ಅವಳ ಬಲಗೈಯು ಉರಿಯುತ್ತಿರುವ ಬತ್ತಿಯನ್ನು ಎತ್ತುತ್ತಿತ್ತು. ಎಡಗೈಯು ಅವಳ ಎದೆಯ ಮೇಲೆ ಇತ್ತು. ಅವಳು ಮುಖ ಭಾವಗಂಭೀರವಾಗಿ ಹೊತ್ತುವ ಪ್ರತಿಯೊಂದು ಮೇಣ ಬತ್ತಿಯ ಮೇಲೆ ತೊಡಗಿತ್ತು. ಒಂದೊಂದು ಜ್ಯೋತಿಯೂ ಬಾಳಿನ ಪ್ರೌಢಿಮೆಗೆ ಏರುತ್ತಿದ್ದಂತೆ ಅನಿಸುತ್ತಿರಬೇಕು. ಈ ರಾತ್ರೆ ಈ ದೀಪೋತ್ಸವ, ಈ ಅಸಮಾನ್ಯ ಬೆಳಕು-ಥಳಕು ಏಕಿರಬಹುದು? ಎಂದು ಜೈಲ್ಸ ಸೋಜಿಗ ಪಟ್ಟನು.

ಮನೆಯ ಒಳಗೆ ಹೊಕ್ಕಾಗ ಗ್ರೇಸಳ ತಂದೆ ಮತ್ತು ಮಲತಾಯಿ ಯಾವುದೊ ಸಂಭ್ರಮವನ್ನು ಹತ್ತಿಕ್ಕಿರುವಂತೆ ಕಂಡಿತು. ಅದೂ ಅವನಿಗೆ ಅರ್ಥವಾಗಲಿಲ್ಲ. 'ಇಂದಿನ ನನ್ನ ಸವಾಲುಗಳಿಗಾಗಿ ನನಗೆ ವ್ಯಥೆಯಾಗಿದೆ', ಜೈಲ್ಸ ಅಂದನು. 'ನಾನು ಏನು ಮಾಡುತ್ತಿದ್ದೆನೋ ನನಗೇ ಗೊತ್ತಾಗಲಿಲ್ಲ. ನಿಮಗೆ ಇಷ್ಟವಿದ್ದ ಯಾವುದೆ ಕಟ್ಟಿಗೆಯ ರಾಶಿಯನ್ನು ನೀವು ತೆಗೆದುಕೊಳ್ಳಬಹುದು. ಅದು ನಿಮ್ಮದು — ಎಂದು ಹೇಳಲಿಕ್ಕೆ ನಾನು ಬಂದಿದ್ದೇನೆ'.

'ಓ, ಹೋಗಲಿ ಬಿಡು, ಹೋಗಲಿ ಬಿಡು ಪರವಾಗಿಲ್ಲ!' ಮೆಲಬರಿಯು ಕೈಯನ್ನು ಹಾಯಾಗಿ ಬೀಸಿ ಉತ್ತರವಿತ್ತನು. 'ನಾನು ಬೇರೆ ಎಷ್ಟೋ ವಿಚಾರ ಮಾಡುವುದು ಬಂತು. ಆದ್ದರಿಂದ ಆ ವಿಷಯ ಮರತೇ ಹೋದಂತೆ ಆಗಿತ್ತು. ಈಗಲೂ ವ್ಯಾಪಾರ-ವ್ಯವಹಾರದಿಂದ ಬೇರೆಯಾದ ಕೆಲವು ವಿಷಯಕ್ಕೆ ಲಕ್ಷ್ಯಕೊಡ ಬೇಕಾಗಿದೆ. ಆದ್ದರಿಂದ ಅದರ ಗೊಡವೆ ನಿನಗೆ ಬೇಡ'.

ಕಟ್ಟಿಗೆಯ ವ್ಯಾಪಾರಿ ತನ್ನೊಂದಿಗೆ, ತುಸು ಎತ್ತರದ ಮಟ್ಟದಿಂದ ಮಾತಾಡಿದಂತೆ ಅನಿಸಿ ಜೈಲ್ಸ ಮೆಲಬರಿಯ ಹೆಂಡತಿಯ ಕಡೆಗೆ ಹೊರಳಿದನು.

'ಗ್ರೇಸಳು ನಾಳೆ ದೊಡ್ಡಮನೆಗೆ ಹೋಗುವಳು' ಆಕೆ ಶಾಂತವಾಗಿ ನುಡಿದಳು. 'ಅವಳು ಈಗ ತನ್ನ ಸಾಮಾನು ಸರಿಪಡಿಸಿಕೊಳ್ಳುತ್ತಿದ್ದಾಳೆ. ಇದೀಗ ಅವಳಿಗೆ ನನ್ನ ನೆರವು ಬೇಕಾಗಿದೆ' ಎಂದವಳೆ ಶ್ರೀಮತಿ ಮೆಲಬರಿ ಆ ಕೋಣೆಯನ್ನು ಬಿಟ್ಟು ಹೊರಟಳು.

ನಾಲಿಗೆಯು ಆಗೊಮ್ಮೆ ಈಗೊಮ್ಮೆ ವಹಿಸಿಕೊಳ್ಳುವ ಸ್ವಚ್ಛಂದ ಸ್ವಾತಂತ್ರ್ಯದ ವ್ಯಕ್ತಿತ್ವದಷ್ಟು ಸೋಜಿಗದ ಸಂಗತಿ ಇನ್ನೊಂದು ಇಲ್ಲ. ಮೆಲಬರಿಗೆ ಗೊತ್ತು — ತನ್ನ ಮಾತು ಒಂದು ರೀತಿ ಜಂಭದ್ದಾಗಿದೆ. ಅವನು ಯಾವಾಗಲೂ ಜಂಭ-ಬಡಿವಾರಗಳನ್ನು ನಿಷೇಧಿಸುವಾತ. ಆದಾಗ್ಯೂ, ಗ್ರೇಸಳ ವಿಷಯ ಬಂದಾಗಲೆಲ್ಲ ಅವನ ನಿರ್ಣಯ-ಬುದ್ಧಿಯು ಅವನದೇ ವಿರುದ್ಧವಾಣಿಯು ಅಧಿಕಾರಕ್ಕೆ ರಾಜಿನಾಮೆ ಕೊಡುತ್ತಿತ್ತು !

ವಿಂಟರಬೋರ್ನನಿಗೆ ಈ ಸಮಾಚಾರದಿಂದ ಆಶ್ಚರ್ಯವೆನಿಸಿತು. ಸಂತೋಷವೆನಿಸಿತು. ತುಸು ಭಯವೂ ಎನಿಸಿತು. ಆತ ಶ್ರೀಮತಿ ಮೆಲಬರಿಯ ಮಾತುಗಳನ್ನೇ ತಿರುಗಿ ಉಚ್ಚರಿಸಿದನು.

'ಹೌದು', ತಂದೆಯ ಅಭಿಮಾನ ಮಾತನಾಡಿತು. ಅವನ ಬಾಯಿಯಿಂದ ಮುಂಜಾವಿನ ಅವಿವೇಕದ ಕುರಿತು ಕ್ಷಮಾಯಾಚನೆಯ ಮಾತು ಹೊರಗೆಡುಹಿದ ನೆಂಬುದಕ್ಕೆ ಮೆಲಬರಿಗೆ ವ್ಯಥೆ ಅನಿಸಲಿಲ್ಲ. ಅವನೂ ತನ್ನ ಅಚಾತುರ್ಯದ ಬಗೆಗೆ ಯಾವ ಮನೋವ್ಯಥೆಯನ್ನೂ ಬಚ್ಚಿಟ್ಟುಕೊಂಡವನಲ್ಲ. ಆದರೂ ಮೆಲಬರಿಗೆ ಹೆಮ್ಮೆ. ಮಗಳ ಬಗೆಗೆ ಹೇಗೋ ಹಾಗೆಯೇ ಜೈಲ್ಸ ಅಂದು ತಪ್ಪು ಒಪ್ಪಿಕೊಂಡ ಬಗೆಗೆ. 'ಬೆಟ್ಟದಿಂದ ಮನೆಗೆ ಮರಳುವಾಗ ಒಂದು ಸಂಜೆ ನಾವು ಸವಾರಿಗೆ ಹೊರಟ ಶ್ರೀಮತಿ ಚಾರಮಂದಳನ್ನು ಭೇಟಿಯಾದೆವು. ಅವಳು ನನ್ನೊಂದಿಗೆ ಏನೊ ಚಿಕ್ಕ ವ್ಯವಹಾರದ ಮಾತನ್ನು ಆಡಿದಳು. ಆ ಮೇಲೆ ಗ್ರೇಸಳ ಪರಿಚಯ ಮಾಡಿಕೊಂಡಳು. ಅವಳು ನೋಡಿದಾಕ್ಷಣ ಒಂದು ಗಳಿಗೆಯಲ್ಲಿಯೇ ನಮ್ಮ ಗ್ರೇಸಳಿಗೆ ಮೆಚ್ಚಿಕೊಂಡಿದ್ದು ಒಂದು ಸೋಜಿಗ. ಅದಕ್ಕೆ ಅವರ ಶಿಕ್ಷಣದ ವಿಶ್ವಬಾಂಧವ್ಯವೇ ಕಾರಣವೆನ್ನಬೇಕು. ಇಬ್ಬರೂ ಕಲಿತವರು. ಕೂಡಲೇ ಕೂಡಿಬಿಟ್ಟರು. ಆದರೂ ಆ ಮಹಿಳೆಗೆ ಸ್ವಾಭಾವಿಕವಾಗಿಯೇ ಆಶ್ಚರ್ಯ — ನನ್ನ ಮನೆಯಿಂದ ಈ ಇಂಥ ಸರಕು ಹಃ ಹಃ ಹಃ — ಹೊರಟಿದ್ದು ಹೇಗೆ ಎಂದು ! ಅಂತೂ ಅದರಿಂದ ಅವಳ ದೊಡ್ಡ ಮನೆಗೆ ನಮ್ಮ ಕುಮಾರಿ ಗ್ರೇಸಳಿಗೆ ಬರಲು ಆಮಂತ್ರಣ ಸಿಗುವಂತೆ ಆಯಿತು. ಆದ್ದರಿಂದ ಈಗ ಗ್ರೇಸ ತುಂಬ ಕೆಲಸದಲ್ಲಿ ತೊಡಗಿದ್ದಾಳೆ — ಲೇಸು-ಗೀಸು ಗೌನುಗಿವುನುಗಳ ಸರಂಜಾಮು ಹುಡುಕಿಕೊಳ್ಳುವುದರಲ್ಲಿ'. ಈ ವಾಗ್ಝರಿಗೆ ಯಾವ ಪ್ರತಿಕ್ರಿಯೆಯನ್ನೂ ಕಾಣದೆ ಮೆಲಬರಿ ಮುಂದುವರಿದ, 'ಇರಲಿ, ಅವಳನ್ನು ಕೆಳಗೆ ಕರೆಯುತ್ತೇನೆ'.

'ಬೇಡಿ, ಬೇಡಿ. ಹಾಗೆ ಮಾಡಬೇಡಿ. ಅವಳು ಕೆಲಸದಲ್ಲಿ ತೊಡಗಿದ್ದಾಳೆ'. ವಿಂಟರಬೋರ್ನ ಉದ್ಗರಿಸಿದನು.

ಆ ತರುಣನ ರೀತಿಯಿಂದ ಮೆಲಬರಿಗೆ ಅನಿಸಿರಬೇಕು — ತನ್ನ ಈ ವರೆಗಿನ ಮಾತು ಜೈಲ್ಸನನ್ನು ಕುರಿತು ಇತ್ತೇ ಹೊರತು ಅವನೊಂದಿಗೆ ನಡೆದಂತೆ ಇದ್ದಿಲ್ಲ. ಆದ್ದರಿಂದ ಅವನ ಮುಖಚರ್ಯೆ ಬದಲಾಯಿತು. ಅವನು ದನಿತಗ್ಗಿಸಿ ಮಾತ

ನಾಡಿದನು, 'ಜೈಲ್ಸ ಅವಳು ನಿನ್ನವಳು. ನನ್ನ ಮಟ್ಟಿಗೆ ಅವಳನ್ನು ನಿನಗೆ ಒಪ್ಪಿಸಿ ಆಗಿದೆ'. ಈ ಮಾತು ಆಡಲು ಅವನಿಗೆ ತುಸು ಕಷ್ಟವಾಯಿತು.

'ಥ್ಯಾಂಕ್ಸ್ — ತುಂಬಾ ಥ್ಯಾಂಕ್ಸ್, ಸ್ವಾಮೀ. ಆದರೆ ಆ ಹರಾಜಿನ ಸವಾಲು ಗಳ ಬಗೆಗೆ ಇನ್ನು ನಮ್ಮಿಬ್ಬರಲ್ಲಿ ತಿಳುವಳಿಕೆ ತಿದ್ದಿ ಸರಿಯಾಯಿತಷ್ಟೆ. ಇನ್ನು ನಾನು ಅವಳನ್ನು ಈಗ ತೊಂದರೆ ಕೊಡುವುದಿಲ್ಲ. ಈಗ ಮನೆಗೆ ಹೋಗುತ್ತೇನೆ. ಮತ್ತೆ ಒಮ್ಮೆ ಅವಳನ್ನು ಕಾಣುತ್ತೇನೆ'.

ಮನೆಬಿಟ್ಟು ಹೊರಟ ಮೇಲೆ ಜೈಲ್ಸ ಕತ್ತೆತ್ತಿ ಮೇಲೆ ಗ್ರೇಸಳ ಮಲಗುವ ಕೋಣೆಯ ಕಡೆಗೆ ನೋಡಿದ. ಗ್ರೇಸಳು ಆತ್ಮ ಪರೀಕ್ಷಣೆಗೆ ಸಾಕಾಗುವಷ್ಟು ಮೇಣಬತ್ತಿಗಳನ್ನು ಸುತ್ತಲೂ ಉರಿಸಿಟ್ಟು ನಿಲುವುಗನ್ನಡಿಯ ಇದುರಿಗೆ ನಿಂತಿದ್ದಳು. (ಆ ಕನ್ನಡಿಯನ್ನೂ ಅವಳಿಗಾಗಿಯೇ ಅವಳ ತಂದೆ ಕೊಂಡು ತಂದು ಕೊಟ್ಟಿದ್ದು). ಅವಳು ತಲೆಗೆ ಬೋನೆಟ್, ಕೈಗೆ ಚೀಲ ತೊಟ್ಟಿದ್ದಳು. ಹಿಂದಕ್ಕೆ ತಿರುಗಿ ಹೆಗಲ ಮೇಲಿಂದ ಕನ್ನಡಿ ಯಲ್ಲಿ ತನ್ನ ನಿಲುವನ್ನು ನೋಡಿಕೊಳ್ಳುತ್ತಿದ್ದಳು. ಅವಳ ಮೋರೆಯು ದೀಪದಂತೆ ಬೆಳಗಿತ್ತು. ದಿನಬೆಳಗಾದರೆ ಹೊಸದಾಗಿ ಸ್ವಾರಸ್ಯಪೂರ್ಣವಾದ ಒಂದು ಪ್ರಭಾವಿ ಯಾದ ಗೆಳತಿಯ ಆತ್ಮೀಯವಾದ ಪರಿಚಯ ಆರಂಭವಾಗುವುದಿತ್ತು. ಅದರ ನಿರೀಕ್ಷೆ-ಅಪೇಕ್ಷೆಗಳಿಂದ ಒಬ್ಬ ಎಳೆ ತರುಣಿಯಲ್ಲಿ ಸ್ವಾಭಾವಿಕವಾಗಿಯೇ ಉಕ್ಕುವ ಉಲ್ಲಾಸದಿಂದ ಅದು ಬೆಳಗಿತ್ತು.

೮

ಆರು ಮೇಣಬತ್ತಿಗಳ ದೀಪಾರಾಧನೆಯಲ್ಲಿ ತನ್ನ ವೇಷಭೂಷೆಯ ಸಜ್ಜಿಕೆ ಮಾಡಿ ಕೊಳ್ಳಲು ಪ್ರೇರಿಸಿದ ಆ ಉತ್ತೇಜಕ ಭೆಟ್ಟಿಯೇ, ಮರುದಿನ ಗ್ರೇಸ ಮೆಲಬರಿಗೆ ಪುಟಿಯುವ ಹೆಜ್ಜೆಗಳಿಂದ ನೆಲವನ್ನು ಮೆಟ್ಟುವಂತೆ ಮಾಡಿತು. ತಾನು ಹುಟ್ಟಿದೂರಿ ನಲ್ಲಿಯೇ ತನ್ನನ್ನು ಒಮ್ಮೆ ಸರಿಯಾಗಿ ಚೆನ್ನಾಗಿ ಮೆಚ್ಚಿಕೊಂಡರೆಂಬ ಅರಿವು ಅವಳ ಎದೆ ಯನ್ನು ಧನ್ಯತೆಯಿಂದ ಹಿಗ್ಗುವಂತೆ ಮಾಡಿತು. ಅವಳು ಮುಂದೆ ನಡೆದಳು, ಭಾವನೆ ಗಳಿಂದ ತುಂಬಿದ ಚಕ್ಕಂದದ ನಾವೆಯಂತೆ. ನಾವೆ ತನ್ನ ಸರಕನ್ನು ಎಲ್ಲಿ ಬರಿದುಮಾಡು ವಳೋ ಅವಳಿಗೆ ಗೊತ್ತಿದ್ದಿಲ್ಲ.

ಇಪ್ಪತ್ತು ಮಿನಿಟು ಕಾನಿನೊಳಗಿಂದ ನಡೆಯುತ್ತ ಒಂದೆ ದಣಪೆ ದಾಟಿ, ಏರಿನ ಗುಂಟ ಸಾಗುತ್ತ ಅವಳು ಆಳವಾದ ಒಂದು ಕಿರಿಕೊಳ್ಳದಂಚಿಗೆ ಬಂದಳು. ಅಲ್ಲಿಂದ ಹಿಂಟೋಕದ ಆ ಮನೆ ಅವಳ ಕಣ್ಣ ಕೆಳಗೆ ನೇರವಾಗಿ ಕಾಣುತ್ತಿತ್ತು. ಅದು ತಗ್ಗಿನಲ್ಲಿ ಪೊಳ್ಳಿನಲ್ಲಿ ನಿಂತಿತ್ತು ಎಂದರೆ ಸಾಲದು. ಅದೊಂದು ಕುಳಿಯಲ್ಲಿಯೇ ನಿಂತಿತ್ತು.

ಆದರೆ ಆ ಕುಳಿಯು ಚೆಲುವಿನಿಂದ ತುಂಬಿ ತುಳುಕುತ್ತಿತ್ತು. ಗ್ರೇಸಳು ನಿಂತಸ್ಥಳದಿಂದ ಆ ಮನೆಯ ಹೊಗೆಕಿಂಡಿಗಳ ನಡುವೆ ಹಕ್ಕಿಗೂಡುಗಳಲ್ಲಿ ನೇರವಾಗಿ ಒಂದು ಕಲ್ಲು ಬೀಸಿ ಒಗೆಯಬಹುದಿತ್ತು. ಆ ಮನೆಯ ಗೋಡೆಗಳಿಗೆ ಕೋಟೆಯಂಥ ಆವಾರದ ಪ್ರಾಕಾರವಿತ್ತು. ಆದರೆ ಪ್ರಾಕಾರದ ಹಿಂದೆ ಸೀಸದ ತಗಡಿನ ಮಾಡುಗಳು, ಅವುಗಳ ಹರಣಿ, ಸುರುಳಿ, ಮಡಿಕೆ, ಬಿಳಕಿಂಡಿಗಳೊಂದಿಗೆ ಸ್ಪಷ್ಟವಾಗಿ ಕಾಣುತ್ತಿದ್ದುವು. ಪ್ರಾಕಾರದ ಮೇಲೆ ಸೋರಿಗಳು ಕೆಲಸಗೇಡಿಗಳು ಏನೇನೋ ಅಕ್ಷರಗಳನ್ನೂ ಬೂಟಿನ ಆಕೃತಿಗಳನ್ನೂ ಬರೆದದ್ದೂ ಕಾಣುತ್ತಿತ್ತು.

ಮನೆಯ ಮುಂಭಾಗವು ಎಲಿಜಬೆಥ ಯುಗದ ಸರದಾರಿಕೆಯ ಸೌಧದ ಸಾಮಾನ್ಯ ಸ್ವರೂಪದಲ್ಲಿತ್ತು. ನಾಸೀಪುಡಿ ಬಣ್ಣದ ಕಲ್ಲಿನ ಕಟ್ಟೋಣವು ಹತ್ತಿರದ ಹ್ಯಾಮದಿಬ್ಬದ ಕಣಿಗಳಿಂದ ತಂದವು. ಕಿಟಕಿಗಳಿಗೆ ಉದ್ದನೆ ಸರಳುಗಳು ಮತ್ತು ಹೊರಗೆ ಕಿರುಮಾಡುಗಳು. ಗೋಡೆಯ ಹೊರಮೈಯ ಕಲ್ಲುಗಳು ಈವ್ಹಿ ಬಳ್ಳಿಗಳಿಂದ ಮುಚ್ಚಿಹೋಗದಿದ್ದಲ್ಲಿ ಎಲ್ಲ ಛಾಯೆಗಳೂ ಹಾವಸೆಯಿಂದ ಹೊದ್ದಿದ್ದಂತೆ ಇತ್ತು.

ಮನೆಯ ಹಿಂದೆ ಮೇಲ್ಬದಿಗೆ ದಟ್ಟವಾದ ಬೆಟ್ಟ ಬೆಳೆದಿತ್ತು. ಅಲ್ಲಿಯ ಮರಗಳ ಬೇರುಗಳು ಮನೆಯ ಹೊಗೆಕಿಂಡಿಗಳ ಎತ್ತರಕ್ಕೆ ಇದ್ದುವು. ಗ್ರೇಸಳು ನಿಂತ ನೆಲ ಹಚ್ಚಗಿನ ಹುಲ್ಲಿನಿಂದ ದಟ್ಟವಾಗಿ ಹಾಸಿತ್ತು. ಅಲ್ಲೊಂದು ಇಲ್ಲೊಂದು ಹಳೆಯ ಮರ ನಿಂತಿತ್ತು. ಕೆಲವು ಕುರಿಗಳು ಸುತ್ತಲು ಮೇಯುತ್ತಿದ್ದುವು. ಮೆಲುಕು ಹಾಕುತ್ತಿದ್ದಂತೆ ಅವು ಆ ಮನೆಯ ಮಲಗುವ ಕೋಣೆಗಳ ಕಿಟಕಿಗಳಲ್ಲಿ ಶಾಂತವಾಗಿ ಇಣಕಿ ನೋಡುವಂತೆ ಇತ್ತು.

ಆ ಮನೆಯ ನೆಲೆಯು ಮನುಷ್ಯ ವಸತಿಗೆ ಪ್ರತಿಕೂಲವಿದ್ದರೂ ವನಸ್ಪತಿಯ ಅಭಿವೃದ್ಧಿಗೆ ಅನುಕೂಲವಿತ್ತು. ಅಲ್ಲಿಯ ಕೊಬ್ಬಿ ಬೆಳೆದ ಈವ್ಹಿ ಬಳ್ಳಿಯ ತೋಳುಗಳನ್ನೂ ಮರದ ಟೊಂಗೆಗಳನ್ನೂ ಕಂಟಿಗಳನ್ನೂ ಒಂದೇ ಸಮನೆ ಕಡಿದು ಚೆಲ್ಲುತ್ತಿರಬೇಕಾಗುತ್ತಿತ್ತು. ಮಂದಿಯ ಮೈಕಟ್ಟು ಎಂಥ ತೇವಿಗೂ ತಡೆದು ನಿಲ್ಲಬಲ್ಲ ಹಳೆಯ ದೇಹದಾರ್ಢ್ಯದ ಕಾಲದಲ್ಲಿ ಕಟ್ಟಿದ ಮನೆಯದು. ಆಗ ಗದ್ದಲ-ಗೊಂದಲ ದೊಂಬಿ ದಾಳಿ ಬಿರುಗಾಳಿಗಳಿಂದ ಏಕಾಂತ ಆಶ್ರಯ ಒಂದೇ ಮಂದಿ ಮನೆ ಕಟ್ಟಲು ಆಯುವ ನೆಲದ ಲಕ್ಷಣವಾಗಿತ್ತು. ಈಗ ಆಧುನಿಕ ಜೀವನದ ಸುಖಜೀವಿ ಸುಕುಮಾರತೆಗೆ ಆ ಮನೆಯ ಆ ತಗ್ಗಿನ ನೆಲೆಯು ಎಷ್ಟು ಅಯೋಗ್ಯವೆಂಬುದು ಸ್ವತಃ ಸಿದ್ಧವಾಗಿತ್ತು.

ಶಿಲ್ಪ ಕೌಶಲ್ಯದ ಎಂಥ ಚಾತುರ್ಯವೂ ಹಿಂಟೋಕ ಮನೆಯನ್ನು ಆರೋಗ್ಯಕರ ಒಣನೆಲದ ವಸತಿಯಾಗಿ ಮಾಡುವುದು ಶಕ್ಯವಿದ್ದಿಲ್ಲ. ಜತೆಗೆ ಅದರ ಚಿತ್ರಮಯತೆಯನ್ನು ಕಡಿಮೆ ಮಾಡುವುದೂ ಸಾಧ್ಯವಿದ್ದಿಲ್ಲ. ಅದು ಸಸ್ಯ ಪ್ರಕೃತಿಯ ಬನಸಿರಿಯ ಸ್ವಂತಮನೆಯಂತಿತ್ತು; ಚಿತ್ರಕಾರನಿಗೂ, ಕವಿಗೂ — ಆತ ಅಲ್ಲಿಯ ಆರ್ದ್ರ ಹವೆಯಿಂದ ಬೇನೆಬಿದ್ದು ಬಳಲದಿದ್ದಲ್ಲಿ — ಸ್ಫೂರ್ತಿಕೊಡುವ ಸ್ಥಾನವಾಗಿತ್ತು. ಆದರೆ ಸಮಾಜಪ್ರಿಯ ಜನರು ಮಾತ್ರ ಅಲ್ಲಿ ಮರುಗುವಂತೆ ಇತ್ತು.

ಗ್ರೇಸಳು ಹಸಿರು ಹಾಸಿದ ಕಡಿದಾದ ಇಳಕಲುಗುಂಟ ಅಂಕುಡೊಂಕಾದ ಕಾಲು ದಾರಿಯಿಂದ ಇಳಿದು ಆ ಮನೆಗೆ ಹೋಗುವ ಹರವಾದ ಹಾದಿಗೆ ಬಂದಳು. ಆ ಮನೆಯ ಹೊರಭಾಗವು ಅವಳಿಗೆ ಚಿಕ್ಕಂದಿನಿಂದಲೂ ಪರಿಚಿತ. ಆದರೆ ಅವಳು ಅದರ ಒಳಗೆ ಎಂದೂ ಹೋಗಿದ್ದಿಲ್ಲ ಮತ್ತು ಯಾವುದೇ ಹಳೆಯ ಸಂಗತಿಯನ್ನು ಹೊಸಬಗೆಯಿಂದ ತಿಳಿಯಲು ಇಡುವ ಮೊದಲಿನ ಹೆಜ್ಜೆ ಯಾವಾಗಲೂ ಕೌತುಕದ ಅನುಭವವೇ ಸರಿ.

ಅವಳನ್ನು ಒಳಗೆ ಒಯ್ಯಲಾಯಿತು. ಅದೂ ಒಂದು ಗಡಿಬಿಡಿಯ ಅನುಭವವೇ ಅನಿಸಿತು. ಆದರೆ ಶ್ರೀಮತಿ ಚಾರಮುಂದ ಒಂಟಿಯಾಗಿ ಇರಬಹುದೆಂದು ಅವಳ ಹಂಬಲವಾಗಿತ್ತು. ಕೆಲವು ದಿನ ಹಿಂದಿನವರೆಗೆ ಅವಳು ಬರಹೋಗುವಾಗ ಅವಳೊಂದಿಗೆ ಅವಳ ದೊಡ್ಡಮ್ಮಳೆಂದು ಭಾವಿಸಲಾದ ಒಬ್ಬ ಪ್ರೌಢ ಅಪ್ಪಳು ಇರುತ್ತಿದ್ದಳು. ಆದರೆ ಅವರಿಬ್ಬರೂ ಏನೋ ಜಗಳ ನಡೆದು ಅಗಲಿದ್ದರು. ಅಂದಿನಿಂದ ಶ್ರೀಮತಿ ಚಾರ್ಮುಂದ ಏಕಾಕಿನಿಯಾಗಿ ಇದ್ದಳು. ಬಹುಶಃ ಅವಳು ಏಕಾಂತ ಜೀವಿ ಇದ್ದಿರಲಿಲ್ಲ. ಆದ್ದರಿಂದಲೇ ಆ ಕೊರತೆ ನೀಗಿಸಲಿಕ್ಕೆ ಅವಳು ಗ್ರೇಸಳಲ್ಲಿ ಒಮ್ಮೆಲೆ ಇಷ್ಟು ಆಸಕ್ತಿ ತೋರಿಸಿರಬೇಕು.

ಶ್ರೀಮತಿ ಚಾರ್ಮುಂದ ನಡುಮನೆಯಿಂದ ತೆರೆಯುವ ಉದ್ದನ್ನ ಗ್ಯಾಲರಿ (ಉದ್ದ ಜಗಲಿ) ಯಲ್ಲಿ ಇದ್ದಳು. ಕುಮಾರೀ ಮೆಲಬರಿ ಬಂದಳೆಂದು ತಿಳಿಸಿದಾಗ ಅವಳು ಕಾಜಿನ ಕದಗಳೊಳಗಿಂದ ಇವಳನ್ನು ಕಂಡಳು. ಮೋರೆಯ ಮೇಲೆ ನಗೆಯಾಡಿಸಿ ಅವಳು ಮುಂದೆ ಬಂದಳು. ಗ್ರೇಸಳು ಬಂದದ್ದು ಚೆನ್ನಾಯಿತೆಂದಳು.

'ಓ, ಅವನ್ನು ನೀನು ನೋಡಿದೆಯಾ?' ಚಾರ್ಮುಂದ ಅಂದಳು, ಗ್ರೇಸಳ ಕಣ್ಣು ಗೋಡೆಯ ಬದಿಗಿಟ್ಟ ಕೆಲವು ವಿಚಿತ್ರ ವಸ್ತುಗಳ ಕಡೆಗೆ ಹಾಯ್ದುದ್ದು ನೋಡಿ. 'ಅವು ಕಳ್ಳರನ್ನು ಹಿಡಿಯುವ ಪಂಜರಗಳು — ನಮ್ಮ ನೆಲದಲ್ಲಿ ಕೇಳದೇ ಕಾಲಿಡುವವರನ್ನು ಹಿಡಿದಿಡಲಿಕ್ಕೆ. ನನ್ನ ಯಜಮಾನರಿಗೆ ಇಂಥ ಪಂಜರ, ಸ್ಪ್ರಿಂಗು, ಕೋವಿಗಳೆಂದರೆ ಒಳ್ಳೇ ಹುಚ್ಚಿತ್ತು. ನೆರೆಹೊರೆಯವರಿಂದ ಅವನ್ನೆಲ್ಲ ಸಂಗ್ರಹಿಸುತ್ತಿದ್ದರು. ಇವುಗಳ ಇತಿಹಾಸವೆಲ್ಲ ಅವರಿಗೆ ಗೊತ್ತಿತ್ತು. ನನಗೆ ಅವು ಯಾವುದೂ ಸೇರುವುದಿಲ್ಲ. ಆದರೆ ಅವನ್ನು ಕಣ್ಣೆದುರಿನಿಂದ ಎಲ್ಲಾದರೂ ಒಯ್ದಿಡಲಿಕ್ಕೆ ನಾನು ಇನ್ನೂ ಯಾರಿಗೂ ಹೇಳಿಲ್ಲ'. ಮುಂದೆ ಅವಳು ಚಿನ್ನಾಟದ ದನಿಯಲ್ಲಿ ಅಂದಳು, 'ನಮ್ಮ ಜಾತಿಯ ಜನ ವಾಸಿಸುವಲ್ಲಿ ಈ ಗಂಡಸರ ಪಂಜರಗಳು ತುಂಬ ಸ್ವಾರಸ್ಯ ಅಲ್ಲವೇ ?'

ಗ್ರೇಸಳಿಗೆ ನಗದೆ ಇರಲು ಆಗಲಿಲ್ಲ. ಆದರೆ ಹೆಣ್ಣು ಜಾತಿಯ ಆ ಅಂಶದ ಕುರಿತು, ಅನುಭವದಿಂದಾಗಿ, ಅವಳು ಹೆಚ್ಚಿನ ವಿಚಾರ ಕೊಡಬೇಕೆಂದು ಅವಳಿಗೆ ಅನಿಸಲಿಲ್ಲ.

'ಅವು ಸ್ವಾರಸ್ಯದವು ನಿಜ. ಸಂದೇಹವೇ ಇಲ್ಲ. ಆದರೆ ಹಳೆಯ ಕಾಡುಯುಗದ ಅವಶೇಷಗಳಾಗಿ, ಸದ್ಯ ಆ ಕಾಲ ಕಳೆದು ಹೋಗಿದೆ. ಅದೊಂದು ಸುಖ.' ಅವಳಂದಳು,

ಆ ವಿವಿಧ ಆಕಾರ — ರಚನೆಯ ಆ ಆಯುಧಗಳನ್ನು ಆಲೋಚನೆಯಿಂದ ನೋಡುತ್ತ.

'ಸರಿ, ನಾವು ಅವುಗಳನ್ನು ಗಂಭೀರವಾಗಿ ಗ್ರಹಿಸಬಾರದು.' ಶ್ರೀಮತಿ ಚಾಮುಂಡಳು ಅಂದಳು, ಆಲಸಿಕೆಯಿಂದ ತಲೆಯನ್ನು ತೂರಾಡಿ. ಅವರಿಬ್ಬರೂ ಒಳಗಡೆಗೆ ನಡೆದರು.

ತನ್ನ ಅತಿಥಿಗೆ ನಡುಮನೆಯಲ್ಲಿ ಕರಂಡಕಗಳಲ್ಲಿಟ್ಟ ಪರಿಪರಿಯ ಪ್ರೇಕ್ಷಣೀಯ ಒಡವೆಗಳನ್ನು ಹಸ್ತಿದಂತದ ಪ್ರತಿಮೆ ಕಟ್ಟಿಗೆಯ ಕೆತ್ತನೆಗೆಲಸ, ಚಿತ್ರಪಟ ನೆಯ್ದ ಪರದೆ, ಚಿಕ್ಕ ಚಿತ್ರಾಕೃತಿ ಮುಂತಾದುವುಗಳನ್ನು ತೋರಿಸಿದ ನಂತರ ಯಜಮಾನಿಯು ಅವಳೊಂದಿಗೆ ಚಹಾಪಾನಕ್ಕೆ ಕೂತಳು. ಇದನ್ನೆಲ್ಲ ತೋರಿಸುವಾಗ ಚಾಮುಂಡಳ ವೃತ್ತಿಯು ಚಂಚಲವೂ ಅಸ್ಪಷ್ಟವೂ ಆಗಿತ್ತು. ಅದು ಅವಳ ಸ್ವಭಾವ ಧರ್ಮವೋ, ಆ ಸ್ಥಳದ ಗುಣವೋ ಗೊತ್ತಾಗಲಿಲ್ಲ.

'ದಯಮಾಡಿ, ಚಹವನ್ನು ಕಪ್ಪುಗಳಿಗೆ ಹಾಕುವಿಯಾ? ಹಾಕು.' ಅವಳೆಂದಳು, ತನ್ನ ಕುರ್ಚಿಯಲ್ಲಿ ಬೆನ್ನಿಗೆ ಒರಗಿ, ಕೈಯನ್ನು ಎತ್ತಿ ಹಣೆಗೆ ಇಟ್ಟುಕೊಂಡು. ಅವಳ ಬಾದಾಮಿ ಕಣ್ಣುಗಳು — ಆರಂಭಿಕ ಇಟಾಲಿಯನ್ ಚಿತ್ರಕಲೆಯಲ್ಲಿ ಕಂಡುಬರುವ ದೇವಕನ್ನಿಕೆಯರ ಕಣ್ಣಿನಂಥವು — ಇನ್ನಿಷ್ಟು ಉದ್ದ ಬಾದಾಮಿನಾಕಾರ ತಾಳಿದವು. ಅವಳ ದನಿ ಇನ್ನಷ್ಟು ಮೃದುವೂ ಕ್ಷೀಣವೂ ಆಯಿತು. ಶ್ರೀಮತಿ ಚಾಮುಂದಳಿಗಿಂತ ಆಳವಾದ ಅಂಗಕಾಂತಿಯು ಮತ್ತು ಆಲಸಿಕೆಯ ಹೆಂಗಸರಲ್ಲಿ ಕಂಡು ಬರುವ ವಕ್ರ ವೃತ್ತಿಯ ಮಾರ್ದವವನ್ನು ಅವಳು ವ್ಯಕ್ತಮಾಡುತ್ತಿದ್ದಳು. ಇಂಥ ಹೆಂಗಸರು ತಮ್ಮ ಮನೋಗತವನ್ನು ಗಂಡಸರಿಗೆ ಮಾತಿಗಿಂತ ನಿಧಾನವಾದ ಮಂದಹಾಸದಿಂದ ತಿಳಿಸುತ್ತಾರೆ, ಸೂಚಿಸುವುದಕ್ಕಿಂತ ಮೋಹಿಸುತ್ತಾರೆ; ಹುಟ್ಟಿ ಹಾಕುವುದಕ್ಕಿಂತ ಹಳ್ಳದ ಗುಂಟ ಹರಿದುಬಿಡುತ್ತಾರೆ.'

'ಇಲ್ಲಿದ್ದಾಗ ನಾನು ಅತ್ಯಂತ ನಿಷ್ಕ್ರಿಯ ಹೆಣ್ಣು.' ಆಕೆ ಅಂದಳು. 'ನನಗೆ ಅನಿಸುತ್ತದೆ, ನಾನು ಹುಟ್ಟಿದ್ದೇ ಏನೇನೂ ಮಾಡದೆ ಇರಲಿಕ್ಕೆ. ಬರೆ ಅತ್ತಿತ್ತ ತೇಲಾಡಲಿಕ್ಕೆ, ಕನಸಿನಲ್ಲಿ ಹೇಗೋ ಹಾಗೆ. ಆದರೆ ಅದೇ ನನ್ನ ಭಾಗ್ಯವಿರಲಾರದು. ಅಂಥ ಕಲ್ಪನೆಯ ಲಹರಿಗಳ ವಿರುದ್ಧ ನಾನು ಸೆಣಸಾಡಬೇಕು.'

'ನೀವು ದುಡಿಮೆಯಲ್ಲಿ ಸುಖ ಕಾಣಲಾರಿರಿ ಎಂಬುದಕ್ಕೆ ನನಗೆ ತುಂಬ ವ್ಯಸನವಾಗುತ್ತದೆ. ನಿಮ್ಮ ಆರೈಕೆ ವಹಿಸಿಕೊಂಡು ನಿಮ್ಮನ್ನು ಸುಟಿಯಾಗಿ ಮಾಡುವ ಇಚ್ಛೆ ಆಗಿದೆ ನನಗೆ.'

ಗ್ರೇಸಳ ದನಿಯಲ್ಲಿ ಯಾವಾಗಲೂ ಮಾರ್ದನಿ ಕೊಡುವ ಮರುಕ ಮಿಡಿಯುತ್ತಿತ್ತು. ಅದರಿಂದ ಮಂದಿ ಉಪಚಾರದ ಮಾತನ್ನು ಮಾನವನ್ನೂ ಮೀರಿ ಅವಳೊಂದಿಗೆ ತಮ್ಮ ಹೃದ್ಗತವನ್ನು ತೋಡಿಕೊಳ್ಳುತ್ತಿದ್ದರು. 'ನಿನಗೆ ಹಾಗೆ ಅನಿಸುವುದು ತುಂಬ ಸಲಿಗೆಯ ಮತ್ತು ದಯೆಯ ಸಂಗತಿ.' ಚಾಮುಂದ ಹೇಳಿದಳು, 'ಬಹುಶಃ ನನ್ನ ಆಲಸಿಕೆ ಇದ್ದುದಕ್ಕಿಂತ ಹೆಚ್ಚಿನದೆಂಬ ಕಲ್ಪನೆ ನಾನು ಕೊಟ್ಟಂತೆ

ಆಯಿತೇನೋ. ಆದರೆ ಈ ಸ್ಥಳವು ನನ್ನ ಹತ್ತಿಕ್ಕಿದಂತಿದೆ. ಹೊರಗೆ ದೇಶಾಂತರಕ್ಕೆ ದೀರ್ಘಾವಧಿ ಹೋಗಬೇಕೆಂದು ಯೋಜನೆ ಮಾಡಿದ್ದೇನೆ. ಹಿಂದೆಲ್ಲ ಒಬ್ಬ ಆಪ್ತಳೊಂದಿಗೆ ಹಾಗೆ ಹೋಗುತ್ತಿದ್ದೆ. ಆದರೆ ಆ ವ್ಯವಸ್ಥೆ ಈಗ ಕುಸಿದು ಬಿದ್ದಿದೆ.'

ಗ್ರೇಸಳನ್ನು ಕೊನೆಗೊಮ್ಮೆ ವಿಮರ್ಶಕ ದೃಷ್ಟಿಯಿಂದ ನೋಡಿಕೊಂಡು, ಆ ಹುಡುಗಿ ಸಮಾಧಾನಕರಳೆಂಬುದನ್ನು ಮನಸ್ಸಿನಲ್ಲಿಯೆ ತೀರ್ಮಾನಿಸಿ ಆಕೆ ಮುಂದುವರಿದಳು, 'ಈವಾಗ, ಹೊಸದೊಂದು 'ಭಾವಯಾತ್ರೆ'ಯನ್ನು ಬರೆಯಬೇಕೆಂದು ವಿಚಾರಮಾಡಿದ್ದೇನೆ. ಆದರೆ ಅದನ್ನು ಒಂಟಿಯಾಗಿ ಒಬ್ಬಳೆ ಮಾಡುವಷ್ಟು ಕಸುವು ನನ್ನಲ್ಲಿ ಇಲ್ಲ. ದಕ್ಷಿಣ ಯುರೋಪಿನಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಇದ್ದಾಗ ನನ್ನಲ್ಲಿ ಅನೇಕ ಕಲ್ಪನೆಗಳ ವಿಚಾರಗಳ ಸಂದಣಿಯು ಒಂದೇ ಸಮನೆ ಕಿಕ್ಕಿರಿದು ಮೂಡುವಂತೆ ಅನಿಸುತ್ತದೆ. ಆದರೆ ಲೇಖನ ಸಾಮಗ್ರಿಯನ್ನು ತೆರೆದು ಬಿಡಿಸಿ, ಕೂತು ತಣ್ಣಗಿನ ಉಕ್ಕಿನ ಮೊನೆಯ ಚಾಕನ್ನು ಎತ್ತಿದಾಗ, ತಣ್ಣಗಿನ ನುಣ್ಣಗಿನ ಬಿಳಿ ಹಾಳೆಯ ಮೇಲೆ ಅವುಗಳನ್ನು ವ್ಯವಸ್ಥಿತವಾಗಿ ಒಡಮೂಡಿಸಲು ಹವಣಿಸಿದಾಗ — ಅದೊಂದು ಕೆಲಸ ಮಾತ್ರ ನನ್ನಿಂದ ಆಗುವುದೇ ಇಲ್ಲ. ಆದ್ದರಿಂದ ನಾನು ಆಲೋಚನೆ ಮಾಡಿದೆ — ನನ್ನ ಪಕ್ಕದಲ್ಲಿಯೇ ನಾನು ಸಹಾನುಭೂತಿಯಿಂದ ಕಾಣುವ ಒಬ್ಬರು ಯಾವಾಗಲೂ ಇದ್ದರೆ ನನ್ನ ತಲೆಯಲ್ಲಿ ಬಂದ ವಿಚಾರಗಳನ್ನು ಅವರಿಗೆ ಹೇಳಿ ಬರೆಯಿಸಬಹುದು. ಮತ್ತು ಆ ದಿನ ನಿನ್ನ ಪರಿಚಯ ಮಾಡಿಕೊಂಡಾಕ್ಷಣವೆ ನನಗೆ ಹೊಳೆಯಿತು, ನೀನೇ ನನಗೆ ಬಲು ಚೆನ್ನಾಗಿ ಕೂಡುವಿಯೆಂದು. ಈ ಕೆಲಸವನ್ನು ವಹಿಸಿಕೊಳ್ಳುವುದು ನಿನಗೆ ಸೇರಬಹುದೇ? ನಿನಗೆ ಮೆಚ್ಚಿಗೆ ಆದರೆ ನನಗೆ ಪುಸ್ತಕಗಳನ್ನು ಓದಿ ಹೇಳಲೂಬಹುದು. ಆ ಕುರಿತು ನೀನು ವಿಚಾರಮಾಡಿನೋಡುವಿಯಾ? ನಿನ್ನ ತಂದೆತಾಯಿಗಳು ಒಪ್ಪುವರೋ ಏನೆಂದು ಕೇಳಿ ತಿಳಿಸುವಿಯಾ?'

'ಓ, ಅಡ್ಡಿಯಿಲ್ಲ.' ಗ್ರೇಸಳು ಅಂದಳು, 'ನನಗೆ ಖಂಡಿತ ಗೊತ್ತು, ಅವರು ಆನಂದದಿಂದ ಒಪ್ಪುವರು.'

'ನೀನು ತುಂಬ ಸುಸಂಸ್ಕೃತೆ. ನಾನು ಕೇಳಿದ್ದೇನೆ. ನಿನ್ನಂಥವಳ ಬೌದ್ಧಿಕ ಸಮಾಗಮದಿಂದ ನಾನು ಧನ್ಯೆ.'

ಗ್ರೇಸಳು ಈ ಪ್ರಶಂಸೆಗೆ ವಿನಯದಿಂದ ನಾಚಿದಳು. ಅದನ್ನು ಅಲ್ಲಗಳೆದಳು.

'ನೀನು ರಾತ್ರೆಯ ಅಭ್ಯಾಸದ ಚಟವಿಟ್ಟುಕೊಂಡಿರುವಿಯಾ, ಈ ಹಳ್ಳಿಯಲ್ಲಿ?' ಚಾರ್ಮಂದ ಪ್ರಶ್ನಿಸಿದಳು.

'ಓ ಇಲ್ಲ. ರಾತ್ರೆಯ ಅಭ್ಯಾಸದ ಚಟ ಈ ಹಿಂಟೋಕ್ ಹಳ್ಳಿಗೆ ಅಪರಿಚಿತವಲ್ಲ. ಆದರೆ ಅವನ್ನು ನಾನು ನಡೆಯಿಸುತ್ತಿಲ್ಲ.'

'ಏನು? ಈ ಠಾವಿನಲ್ಲಿ ಇನ್ನೊಬ್ಬ ಅಭ್ಯಾಸ ವ್ಯಾಸಂಗಿ ಇರುವುದುಂಟೆ?'

'ಇಲ್ಲಿಗೊಬ್ಬ ಸರ್ಜನ್ ಇತ್ತೀಚೆಗೆ ಬಂದಿದ್ದಾನೆ. ಆತ ರಾತ್ರೆಯೆಲ್ಲ ಬಹಳ

ಓದುತ್ತಾನಂತೆ. ನಾನು ಕೇಳಿದ್ದೇನೆ. ಅವನ ದೀಪ ಉರಿಯುತ್ತಿರುವುದನ್ನು ನಾನು ಬಹಳ ಸಲ ನೋಡಿದ್ದೇನೆ, ಮರಗಳ ಆಚೆಯಿಂದ.'

'ಓಹೋ, ಹೌದು. ಒಬ್ಬ ಡಾಕ್ಟರು. ಯಾರೋ ನನಗೆ ಹೇಳಿದ್ದರು. ಅಂಥವನು ಇಲ್ಲಿ ಬೀಡುಬಿಡುವುದೆಂದರೆ ವಿಚಿತ್ರವೇ! ಈ ಸ್ಥಳ ಅವನಿಗೆ ಅಪರೂಪದ್ದೇ ಸರಿ.'

'ಆ ಸ್ಥಳ ಸುತ್ತಲಿನ ಪ್ರಾಕ್ಟಿಸಿಗೆ, ಅವನ ವ್ಯವಸಾಯಕ್ಕೆ ಒಳ್ಳೆ ಮಧ್ಯವರ್ತಿಯಂತೆ; ಜನ ಅನ್ನುತ್ತಿದ್ದರು. ಆದರೆ ಆತ ಬರೆ ಮದ್ದುಗಾರಿಕೆಗೇ ಕಟ್ಟುಬಿದ್ದಿಲ್ಲವೆಂದು ತೋರುತ್ತದೆ. ಆತ ಧರ್ಮಶಾಸ್ತ್ರ ತತ್ವಶಾಸ್ತ್ರ ಮತ್ತೆ ಏನೆಲ್ಲ ಶಾಸ್ತ್ರ ವಿಷಯಗಳಲ್ಲಿ ವ್ಯಾಸಂಗ ನಡೆಯಿಸಿರುವಂತೆ.'

'ಅವನ ಹೆಸರೇನು?'

'ಫಿಟ್‌ರ್ಘುಪಿಯರ್ಸ್. ಆತ ಈ ಕಡೆಯದೆ ಒಂದು ಹಳೆಯ ಮನೆತನದವನು. ಓಕಬರಿಯ ಫಿಟ್‌ರ್ಘುಪಿಯರ್ಸ್‌ರ ಮನೆತನದ ವಂಶಜ. ಓಕಬರಿ ಇಲ್ಲಿಂದ ಬಹಳ ಮೈಲು ದೂರವಿಲ್ಲ.'

'ಇಲ್ಲಿಯ ಸ್ಥಳ ಪುರಾಣ, ಕುಲೇತಿಹಾಸ ತಿಳಿಯುವಷ್ಟು ನಾನೇನೂ ಸಾಕಷ್ಟು ಸ್ಥಳವಂತಿಕಳಲ್ಲ. ನನ್ನ ಯಜಮಾನರು ನನ್ನನ್ನು ಇಲ್ಲಿಗೆ ತರುವತನಕ ನಾನು ಈ ಹಳ್ಳಿಗಾಡಿಗೆ ಬಂದವಳೇ ಅಲ್ಲ.'

ಶ್ರೀಮತಿ ಚಾರ್ಮಂದ ಈ ನಿಟ್ಟಿನಲ್ಲಿ ಇನ್ನು ಹೆಚ್ಚಿನ ತನಿಖೆಗೆ ಬೀಳಲಿಲ್ಲ. ಕುಲ-ಕುಟುಂಬಗಳ ಇತಿಹಾಸ ಎಷ್ಟೇ ಪ್ರಾಚೀನದ್ದಿರಲಿ, ಅವಳಿಗೆ ಅದನ್ನು ಪರಿಶೀಲಿಸುವುದು ತುಂಬ ಬೇಸರ. ಅವಳ ಚಂಚಲ ಲಘು ನಾಗರ ವೃತ್ತಿಗೆ ಒಗ್ಗದು. ಈ ಲಕ್ಷಣದಲ್ಲಿ ಅವಳು ನೆರೆಹೊರೆಯವರಿಂದ ತೀವ್ರ ಭಿನ್ನ.

'ಒಬ್ಬ ಮನುಷ್ಯ ತಾನೇ ಏನು ಎಂಥವನು ಎಂಬುದನ್ನು ಅರಿಯುವುದು ಅವನ ಕುಲ-ಕುಟುಂಬವೇನಿದೆಯೆಂಬುದಕ್ಕಿಂತ ಯಾವಾಗಲೂ ಹೆಚ್ಚು ಮಹತ್ವದ್ದು. ಅದೂ ಆತ ನಮ್ಮಲ್ಲಿ, ನಮ್ಮ ಮೇಲೆ ಸರ್ಜನನೆಂದು ಕೆಲಸ ಮಾಡುವವನಿದ್ದಾಗ! ದೇವರೇ ಅವನಿಗೆ ಯೋಗ್ಯ ಕೌಶಲ್ಯ ದಯಪಾಲಿಸಲಿ! ನೀನು ಅವನನ್ನು ಕಂಡಿದ್ದೀಯಾ?'

ಗ್ರೇಸಳು ಕಂಡಿದ್ದಿಲ್ಲ. 'ಅವನು ಅಷ್ಟೇನು ವಯಸ್ಸಾದವನಲ್ಲವೆಂದು ನನ್ನ ಭಾವನೆ' ಆಕೆ ಅಂದಳು.

'ಅವನಿಗೆ ಹೆಂಡತಿ ಇರುವಳೇ?'

'ಇದ್ದರೆ ನನಗೇನೂ ಗೊತ್ತಿಲ್ಲ.'

'ಸರಿ. ಅವನು ಇಲ್ಲಿ ಪ್ರಯೋಜನಕ್ಕೆ ಬೀಳುವನೆಂದು ಆಶಿಸೋಣ. ನಾನು ತಿರುಗಿ ಬಂದ ಮೇಲೆ ಆತನ ಪರಿಚಯ ಮಾಡಿಕೊಳ್ಳಬೇಕು. ಒಬ್ಬ ಮದ್ದಿನ ಮನುಷ್ಯ — ಆತ ನಿಜವಾಗಿಯೂ ನಿಪುಣನಿದ್ದರೆ — ನಮ್ಮ ಮಾಗಣೆಯಲ್ಲಿ ಇರುವುದು ಯಾವಾಗಲೂ ಲೇಸೇ. ಈ ವಿಚಿತ್ರ ಸ್ಥಳದಲ್ಲಿ ಇದ್ದ ನನಗೆ ಕೆಲವೊಮ್ಮೆ ಭಯಂಕರ

ಗಾಬರಿ ಅನಿಸುತ್ತಿದೆ. ಶರ್ಟನ್ ಪಟ್ಟಣಕ್ಕೆ ಯಾರಿಗಾದರೂ ಕರೆಕಳುಹಿಸೋಣವೆಂದರೆ ಅದೆಷ್ಟು ದೂರ! ಬೆಟ್ಟಗಿನ ನಿರ್ಭರ ಪ್ರದೇಶಗಳಲ್ಲಿ ಸಂಚರಿಸುವ ಬದುಕಿನ ನಂತರ ಕಿರಿಯ ಹಿಂಟೋಕದ ಬಾಳು ಬಲು ದೊಡ್ಡ ಬದಲಾವಣೆಯೆಂದು ನಿನಗೂ ಅನಿಸುವುದಿಲ್ಲವೇ?'

'ಅನಿಸದೆ? ಅನಿಸೇ ಅನಿಸುತ್ತದೆ. ಆದರೆ ಏನಂದರೂ ಇದು ಮನೆ, ಹುಟ್ಟಿದೂರು. ಇದರ ಲಾಭಗಳೂ ಇವೆ. ಹಾನಿಯೂ ಇವೆ' — ಹೀಗೆನ್ನುವಾಗ ಗ್ರೇಸ ಅಲ್ಲಿಯ ಏಕಾಂತವಾಸಕ್ಕಿಂತ ಇತರ ಆನುಷಂಗಿಕ ಸ್ಥಿತಿಗತಿಗಳನ್ನು ಕುರಿತೇ ಹೆಚ್ಚು ಚಿಂತಿಸುತ್ತಿದ್ದಳು.

ಹೀಗೆ ಕೆಲಹೊತ್ತು ಅವರಿಬ್ಬರು ಹರಟೆ ಕೊಚ್ಚಿದ್ದರು. ಅವಳ ಯಜಮಾನಿಯು ಗ್ರೇಸಳನ್ನು ಪೂರ್ತಿ ಹಾಯಾಗಿ ಸೋಜಿಗವೆನಿಸುವಂತೆ ಮಾಡಿಬಿಟ್ಟಳು. ಶ್ರೀಮತಿ ಚಾಮುಂಡ ಒಳ್ಳೆಯ ಅನುಭವಸ್ಥ ಹೆಂಗಸು. ಅವಳಿಗೆ ಗೊತ್ತು ಗ್ರೇಸಳಂಥ ತೀವ್ರ ತಿಳುವಳಿಕೆಯ ನವಯುವತಿಗೆ ಅನುಗ್ರಹ ಔದಾರ್ಯಗಳನ್ನು ತೋರಿಸುವುದೆಂದರೆ, ಅವಳ ದೃಷ್ಟಿಯಲ್ಲಿ ತನ್ನ ಪ್ರತಿಷ್ಠೆ ಬೆಳಸಿಕೊಳ್ಳುವುದಕ್ಕಿಂತ ಹೆಚ್ಚು ಪತ್ತನ್ನೆ ಕಳೆದುಕೊಂಡಂತೆ. ಈ ತರುಣಿಯ ಪರಿಚಯದ ಪೂರ್ತಿ ಪ್ರಯೋಜನ ಪಡೆದುಕೊಳ್ಳಲಿಕ್ಕೇ ಬೇಕು — ಎಂಬೊಂದೆ ವಿಚಾರ ಅವಳನ್ನು ಬಲವಾಗಿ ಕಾಡಿತ್ತು. ಆದರಿಂದ ಅವಳ ಬಾಗಿಲಿಗೆ ಬಂದು ಹೀಗೆ ಸಜ್ಜಾಗಿ ಕಾಯುತ್ತಿರುವ ಗ್ರೇಸಳ ವಿಶ್ವಾಸವನ್ನು ಗೆದ್ದುಕೊಳ್ಳಲಿಕ್ಕೆ ಆಕೆ ಬಹಳ ಪ್ರಯಾಸಪಟ್ಟಳು.

ಗ್ರೇಸಳು ಹೊರಟು ಹೋಗುವ ಮುಂಚೆ ಇಬ್ಬರೂ ಒಂದು ನಿಲುವುಗನ್ನಡಿಯ ಇದುರಿಗೆ ಕ್ಷಣಕಾಲ ನಿಂತಿದ್ದರು. ಆಗ ಅವರೀರ್ವರ ಮುಖಬಿಂಬಗಳು ತಮ್ಮ ಸಾಮ್ಯ-ವೈಷಮ್ಯಗಳ ಎಲ್ಲ ಲಕ್ಷಣಗಳು ಒಡೆದೆದ್ದು ಕಾಣುವಂತೆ ಅಕ್ಕಪಕ್ಕದಲ್ಲಿ ಕಾಣಿಸಿಕೊಂಡವು. ಇಬ್ಬರೂ ತುಂಬ ಆಕರ್ಷಕರಾಗಿ ಕಂಡರು — ಆ ಪ್ರಾಮಾಣಿಕ ಕನ್ನಡಿಯಲ್ಲಿ; ಆದರೆ ಗ್ರೇಸಳ ಮುಖಬಿಂಬವು ಚಾಮುಂಡಳ ಮುಖವನ್ನು ಅದರ ಪೂರ್ಣ ವಯೋಮಾನಕ್ಕಿಂತಲೂ ಹೆಚ್ಚು ಪ್ರೌಢವಾಗಿ ತೋರುವಂತೆ ಪ್ರಭಾವ ಚೆಲ್ಲಿತು. ಅಂಗಕಾಂತಿಗಳಲ್ಲಿ ಎರಡು ವಿಧ. ಕೆಲವು ಒಂದನ್ನೊಂದು ಸಂಧಿಸಿದಾಗ ಒಂದಕ್ಕೊಂದು ಪೂರಕವಾಗಿ ಕಳೆಯೇರಿಸುವುವು. ಇನ್ನೂ ಕೆಲವು ಪೂರಕವಾಗಿ ಕಳೆಗುಂದಿಸುವುವು.

ಈ ಜತೆಯು ದುರ್ಭಾಗ್ಯ ವಶವಾಗಿ ಎರಡನೆಯ ಮಾದರಿಯದಾಯಿತು. ಉಭಯ ಮುಖಬಿಂಬಗಳನ್ನು ಕಂಡು ಶ್ರೀಮತಿ ಚಾಮುಂಡಳು ಭಯಶಂಕಿತಳಾದಳು; ವಿಚಾರಮಗ್ನಳಾದಳು. ಜತೆಗಾರ್ತಿಯ ಮಾತಿಗೆ ಏನೋ ಅಲಕ್ಷ್ಯದಿಂದ ಉತ್ತರ ಕೊಡತೊಡಗಿದಳು. ಆದಾಗ್ಯೂ ಆಕೆ ಪ್ರಗಲ್ಭೆ, ತನ್ನ ಹೊಸ ಎಳೆಯ ಗೆಳತಿಯನ್ನು ತುಂಬ ಸ್ನೇಹದಿಂದ ಬೀಳ್ಕೊಟ್ಟಳು. ತಾನು ಸೂಚಿಸಿದ ಹೊಸ ಏರ್ಪಾಟಿನ ಬಗೆಗೆ ಯಾವದೊಂದು ನಿರ್ಧಾರಕ್ಕೆ ಬಂದೊಡನೆ ತಾನೇ ಹೇಳಿ ಕಳುಹಿಸುವುದಾಗಿ ಆಶ್ವಾಸನ ವಿತ್ತಳು.

ಗ್ರೇಸಳು ಮನೆಯಿಂದ ಹೊರಬಿದ್ದು, ಗುಡ್ಡದ ಇಳುಕಲನ್ನು ಏರಿ ತುದಿ ಮುಟ್ಟಿದಾಗ ಅಲ್ಲಿ ನಿಂತು ಒಮ್ಮೆ ಹಿಂದಿರುಗಿ ನೋಡಿದಳು. ಆಗಲೂ ಶ್ರೀಮತಿ ಚಾರ್ಮಂದ ಮನೆ ಬಾಗಿಲಲ್ಲಿ ವಿಚಾರಮಗ್ನಳಾಗಿ ತನ್ನನ್ನೇ ದಿಟ್ಟಿಸುತ್ತ ನಿಂತಿದ್ದು ಅವಳು ಕಂಡಳು.

ಇತ್ತ ಮುಂಚಿನ ರಾತ್ರೆ ಮೆಲಬರಿಯ ಮನೆಗೆ ಹೋಗಿ ಬಂದ ಮೇಲೆ ವಿಂಟರ ಬೋರ್ನನ ವಿಚಾರಗಳೆಲ್ಲ ಒಂದೇ ಬೇಟೆಯನ್ನು ಬೆನ್ನಟ್ಟಿದ್ದವು — ಗ್ರೇಸಳು ಹಿಂಟೋಕ ದೊಡ್ಡ ಮನೆಗೆ ಭೇಟಿಕೊಡುವಳೆಂಬ ಸಮಾಚಾರವೇ ಆ ಬೇಟೆ. ಅವಳೊಂದಿಗೆ ಅರ್ಧ ದಾರಿಯಾದರೂ ತಾನೇಕೆ ಜತೆಗೆ ಹೋಗುವ ಇಚ್ಛೆ ವ್ಯಕ್ತ ಮಾಡಲಿಲ್ಲ ? ಅವನಿಗೆ ಅದೇನೋ ಕಿವಿಯಲ್ಲಿ ಪಿಸುಗುಟ್ಟಿತು — ತಾನು ಕೇಳಿದರೂ, ಅಂಥ ಪ್ರಸಂಗದಲ್ಲಿ ಆಕೆ ತನ್ನ ಸಂಗಾತವನ್ನು ಲೆಕ್ಕಿಸಲಿಕ್ಕಿಲ್ಲವೆಂದು.

ಮರುದಿನ ತನ್ನ ಹಿತ್ತಲಲ್ಲಿ ನಿಂತು, ಗ್ರೇಸಳು ಪುಟ್ಟ ಬಿಂಕದಲ್ಲಿ ಚಾರ್ಮಂದಳ ಭೆಟ್ಟಿಗೆಂದು ಆ ಹಾದಿಯಿಂದ ಹೋಗುವಾಗ ಆತ ನೋಡಿದಾಗಲೂ ಅದೇ ವಿಚಾರ ಇನ್ನಿಷ್ಟು ದೃಢವಾಯಿತು. ಗ್ರೇಸಳಿಗೆ ಸಂಸ್ಕೃತಿಯನ್ನು ಸದ್ವಿದ್ಯೆಯನ್ನು ಕೊಂಡುಕೊಟ್ಟ ಅವಳ ತಂದೆಯ ಹಿರಿಯಾಸೆಯು ಆ ಹಳ್ಳಿಯ ಯಾವುದೇ ತಂದೆಯ ಅಳವಿನ ಆಚೆಗೆ ದುಡಿಕಿದಂತೆ ಆಗಿರಬಹುದೇ ಎಂದು ಆತ ಶಂಕಿಸಿದನು. ಈ ವಿದ್ಯೆ, ಈ ಸಂಸ್ಕೃತಿ, ಈ ಬೌದ್ಧಿಕ ಪ್ರಕಾಶ ಅವಳ ಭವಿಷ್ಯದ ಹಿತಾಸಕ್ತಿಗಳನ್ನು ಸ್ಥಾನಿಕ ಬದುಕಿನಿಂದ ದೂರ ಹಾರಿ ಹೋಗುವಂತೆ ಮಾಡಲಾರದೇ ಎಂದು ಅವನಿಗೆ ಅನಿಸಿತು.

ಏನೇ ಇರಲಿ ಅವಳ ತಂದೆಯ ಅನುಮತಿ ಇದೆ; ಸಾಧ್ಯವಾದರೆ ಅವಳ ಮನಸ್ಸನ್ನು ಒಲಿಸಿ ಅವಳನ್ನು ಆತ ಗೆದ್ದುಕೊಳ್ಳಬಹುದೆಂದು ಮತ್ತು ಈ ನಿಟ್ಟಿನಲ್ಲಿ ಆಗುಹೋಗುಗಳನ್ನು ಒಂದು ನಿಕರಕ್ಕೆ ತರಬೇಕೆಂದು ಆತ ನಿಶ್ಚಯಿಸಿದನು. ಅವಳು ತಾನು ಈ ಹಳ್ಳಿಯ ಹೈದನಿಗೆ ಮೀರಿದ ಮಟ್ಟದವಳೆಂದು ತಿಳಿದುಕೊಂಡಿದ್ದರೆ ಹಾಗೆಯೇ ಇರಲಿ, ಅವನು ಅವಳನ್ನು ಹೋಗಬಿಡಬೇಕು. ತನ್ನ ಹಾನಿಯನ್ನು ಹೇಗಾದರೂ ತುಂಬಿಕೊಳ್ಳಬೇಕು. ಪಂಚಗವ್ಯವೇನು ಪಂಚಾಮೃತವೇನು ? ಪಾಲಿಗೆ ಬಂದದ್ದೇ ಪವಿತ್ರ ! ಈಗ ಮುಖ್ಯ ಪ್ರಶ್ನೆ, ಈ ಕೊನೆಯ ನಿರ್ಣಯಕ್ಕೆ ಅಭಿಮುಖವಾಗಿ ಘಟನೆಗಳ ವೇಗವನ್ನು ಹೆಚ್ಚಿಸಬೇಕೆಂಬುದು.

ಜೈಲ್ಸ ವಿಂಟರಬೋರ್ನ ವಿಚಾರ ಮಾಡಿಯೇ ಮಾಡಿದ. ಕೊನೆಗೂ ಒಂದು ಯೋಜನೆ ಹಾಕಿದ. ತಾನೊಂದು ಕ್ರಿಸ್‌ಮಸ್ ಹಬ್ಬದ ಔತಣವನ್ನು ಕೊಡಬೇಕು. ಆ ಹಬ್ಬದೂಟಕ್ಕೆ ಗ್ರೇಸಳನ್ನು ಅವಳ ತಾಯಿ ತಂದೆಗಳನ್ನು ಮುಖ್ಯ ಅತಿಥಿಯಾಗಿ ಕರೆಯಬೇಕು.

ಇವೇ ವಿಚಾರಗಳನ್ನು ಮೆಲುಕು ಹಾಕುತ್ತಿರುವಾಗಲೆ ಅವನ ಮುಂಬಾಗಿಲಿನ ಮೇಲೆ ಯಾರೋ ಹಗುರಾಗಿ ತಟ್ಟಿದಂತಾಯಿತು. ಆತ ದಾರಿ ಇಳಿದು ಬಂದು ನೋಡಿದ. ಮಾರ್ಟಿ ಸೌಥ ನಿಂತಿದ್ದಳು, ಹೊರಗೆಲಸಕ್ಕೆ ಹೋಗುವ ಉಡುಪಿನಲ್ಲಿ.

‘ನೀನೇಕೆ ಬರಲಿಲ್ಲ. ವಿಂಟರಬೋರ್ನ? ಗಂಟೆಗಟ್ಲೆ ಆಯಿತು. ನಾನು ಕಾದೆ. ಕೊನೆಗೆ ಬಂದು ನೋಡಿದೆ, ನೀನು ಒಳಗೆ ಇದ್ದಿಯೋ ಇಲ್ಲವೋ ಎಂದು’ ಮಾರ್ಟಿ ಅಂದಳು.

‘ಅಯ್ಯೋ ದೇವರೆ, ನಾ ಮೈಮರೆತೇ ಹೋಗಿದ್ದೆ’ ಜೈಲ್ಸ ಅಂದನು.

ಆತ ಮರೆತದ್ದು ನೆರೆಹೊರೆಯ ಒಂದು ಬೆಟ್ಟದಲ್ಲಿ ಒಂದು ಸಾವಿರ ಫರ್ ಮರಗಳ ಸಸಿಗಳನ್ನು ನೆಡುವುದಿತ್ತೆಂಬ ಕೆಲಸ. ಮರಕಡಿಯುವವರು ಅಲ್ಲಿ ನೆಲವನ್ನು ಸವರಿ ಬಯಲು ಮಾಡಿದ್ದರು. ಜೈಲ್ಸ ತನ್ನ ಕೈಯಿಂದಲೆ ಈ ಹೊಸ ಸಸಿಗಳನ್ನು ನೆಡುವವನಿದ್ದ. ಮರ ಬೆಳೆಯಿಸುವುದರಲ್ಲಿ ಜೈಲ್ಸನ ಕಸಬು ಅದ್ಭುತವಿತ್ತು. ಸಸಿಯನ್ನು ಅಗೆಯಲ್ಲಿಟ್ಟು ಆತ ಹೇಗೆ ಮಣ್ಣು ತೂರಿದರೂ ಆ ಗಿಡ ಮರವಾಗಿ ಹುಲುಸಾಗಿ ಬೆಳೆಯುತ್ತಿತ್ತು. ಅವನು ಎಷ್ಟೇ ಅಲಕ್ಷ್ಯದಿಂದ ನೆಟ್ಟಂತೆ ತೋರಿದರೂ ಫರ್, ಓಕ್, ಬೀಚ್ ಮುಂತಾದ ಮರಗಳಿಗೂ ಅವನಿಗೂ ಏನೋ ಒಂದು ಬಗೆಯ ಆಳವಾದ ಋಣಾನುಬಂಧವಿದ್ದಂತೆ ಅನಿಸುತ್ತಿತ್ತು. ಅವು ಬೇರುಬಿಟ್ಟು ನೆಲವನ್ನು ಹಿಡಿದು ನಿಲ್ಲುತ್ತಿದ್ದುವು, ಕೆಲವೇ ದಿನಗಳಲ್ಲಿ. ಅದೇ ಮರನೆಡುವ ಬೇರೆ ಗುತ್ತಿಗೆದಾರರು ನೆಟ್ಟರೋ, ಇದೇ ರೀತಿ ನಿಂತಂತೆ ಕಂಡರೂ ನೆಟ್ಟ ಗಿಡಗಳಲ್ಲಿ ಕಾಲುಪಾಲು ಆಗಸ್ಟ ತಿಂಗಳೊಳಗೆ ಸತ್ತು ಹೋಗುತ್ತಿದ್ದುವು.

ಆದ್ದರಿಂದ ವಿಂಟರಬೋರ್ನನಿಗೂ ಹಿಗ್ಗು — ತಮ್ಮದಲ್ಲದ ನೆಲದಲ್ಲಿಯೂ ಬೆಟ್ಟ ಸವರಿದಲ್ಲೆಲ್ಲ ಹೀಗೆ ಮರನೆಡುವ ಗುತ್ತಿಗೆ ಹಿಡಿಯಲಿಕ್ಕೆ. ಈ ಕೆಲಸದಲ್ಲಿ ಅವನಿಗೆ ಯಾವಾಗಲೂ ಮಾರ್ಟಿಯದೇ ನೆರವು. ಆಕೆ ಯಾವ ಕೆಲಸಕ್ಕೂ ಮುಂದೆ — ಒಂದು ಕೈ ನೋಡಿಯೇ ಬಿಡುವಳು. ಈ ಗುತ್ತಿಗೆಯಲ್ಲಿ ಅವಳ ಪಾಲಿನ ಕೆಲಸ ಅಗೆಗಳಲ್ಲಿ ಜೈಲ್ಸ ಮಣ್ಣು ತೂರುವಾಗ ಸಸಿಗಳನ್ನು ನೀಟಾಗಿ ಹಿಡಿದು ನಿಲ್ಲಿಸುವುದು.

ಈಗ ಅವಳೊಂದಿಗೆ ಆತ ಮರನೆಡುವ ಸ್ಥಳದ ಕಡೆಗೆ ಹೊರಟ. ಆ ನೆಲ ಹಾದಿಯ ಗುಂಟವೆ ಇತ್ತು. ಆ ಹಾದಿಯಿಂದಲೇ ಗ್ರೇಸ ಬರಬೇಕು, ಹಿಂಟೋಕ್ ದೊಡ್ಡ ಮನೆಯಿಂದ.

‘ನಿನಗೆ ನೆಗಡಿ, ಮಾರ್ಟಿ’ ಜೈಲ್ಸ ಅಂದ, ಅವಳೊಂದಿಗೆ ಹೆಜ್ಜೆ ಹಾಕುತ್ತ, ‘ನೀನು ಕೂದಲು ಕತ್ತರಿಸಿಕೊಂಡ ಪರಿಣಾಮವದು.

‘ಹಾಗೆ ಕಾಣುತ್ತದೆ. ಹೌದು. ನನಗೆ ಒಂದೇ ವೇಳೆಗೆ ಮೂರು ಶೂಲಿ ತಲೆಯಲ್ಲಿ’.

‘ಮೂರು ತಲೆಶೂಲಿ?’

‘ಹೌದು ವಿಂಟರಬೋರ್ನ. ಒಂದು ವಾತದ ಶೂಲಿ ನೆತ್ತಿಯಲ್ಲಿ, ವಾಕರಿಕೆ ತರಬಲ್ಲ ಶೂಲಿ ಕಣ್ಣುಗಳ ನಡುವೆ ಮತ್ತು ಘೋರ ದರಿದ್ರ ಶೂಲಿ ಮೆದುಳಿನೊಳಗೆ! ಆದರೂ ನಾನು ಹೊರಟು ಬಂದೆ. ನೀನು ದಾರಿಕಾಯುತ್ತಿರಬಹುದು. ಮತ್ತು ನಾನು ಬಂದಿಲ್ಲವೆಂದು ಗೊಣಗುತ್ತಿರಬಹುದು ಎಂದುಕೊಂಡು’.

ಮರ ನೆಡುವ ಬಯಲು ಸ್ಥಳದಲ್ಲಿ ಅಗೆಗಳನ್ನು ಆಗಲೇ ಮಾಡಿ ಮುಗಿದಿತ್ತು. ಈಗ ಇವರಿಬ್ಬರೂ ಕೆಲಸಕ್ಕೆ ತೊಡಗಿದರು. ವಿಂಟರಬೋರ್ನನ ಬೆರಳುಗಳಲ್ಲಿ ಏನೋ ಮಾಂತ್ರಿಕರ ಮೋಡಿ ಇತ್ತು. ಆತ ಮೃದುವಾಗಿ ಸಸಿಗಳ ಬೇರುಗಳನ್ನು ಹರಡು ತ್ತಿದ್ದರು. ಅವನ ಕೈಸೋಂಕು ಅವುಗಳಿಗೆ ಮುದ್ದಾಡಿದಂತೆ ಅನಿಸುತ್ತಿರಬೇಕು. ಅವು ಹಾಯಾಗಿ ಬೆಳೆಯಲು ಅನಾನುಕೂಲವಾಗುವ ನಿಟ್ಟುಗಳಲ್ಲಿಯೇ ಹರಡಿ ನಿಲ್ಲುತ್ತಿದ್ದುವು. ಆತ ಈ ಬೇರುಗಳನ್ನು ಹೆಚ್ಚಾಗಿ ನೈಋತ್ಯ ದಿಕ್ಕಿನಲ್ಲಿಯೇ ಪಸರಿಸುತ್ತಿದ್ದ. ಏಕೆಂದರೆ ಅವನ ಹೇಳಿಕೆಯಂತೆ ಮುಂದೆ ನಾಲ್ವತ್ತು ವರ್ಷಗಳ ಮೇಲೂ ಆ ನಿಟ್ಟಿನಿಂದ ಬಿರುಗಾಳಿ ಬೀಸುತ್ತಿದ್ದರೂ ಈ ಮರಗಳು ಆ ಬದಿಯನ್ನು ಬಲಿಷ್ಠವಾಗಿ ಹಿಡಿದು ಮೆಟ್ಟಿ ನಿಂತು ಗಾಳಿಯ ವಿರುದ್ಧ ತಾಳಿಬಾಳಬಹುದು, ಬೀಳಲಾರವು.

'ಇವು ನೀಟನಿಲ್ಲಿಸಿದೊಡನೆ ಹೇಗೆ ನಿಟ್ಟುಸಿರು ಬಿಡುತ್ತವೆ ನೋಡು. ಅಡ್ಡ ಬಿದ್ದಿರುವಾಗ ಹಾಗೆ ಬಿಡುವುದಿಲ್ಲ' ಮಾರ್ಟಿ ಅಂದಳು.

'ಬಿಡುತ್ತಾವೇ ? ನಾನು ನೋಡಿಯೇ ಇಲ್ಲ' ಜೈಲ್ಸ ಕೇಳಿದನು.

ಮಾರ್ಟಿ ಒಂದು ಪೈನ್ ಗಿಡವನ್ನು ಅಗೆಯಲ್ಲಿ ನಿಲ್ಲಿಸಿ ಒಂದು ಬೆರಳಿಂದ ಆನಿಸಿ ಇಟ್ಟಳು. ಕೂಡಲೇ ಮೃದುವಾಗಿ ಸಂಗೀತದಂಥ ಉಸಿರಿನ ಸದ್ದು ಆರಂಭವಾಯಿತು. ಈ ಮೃದು ಮರ್ಮರ ಆ ಮರವು ಬೆಳೆದು ನಿಂತು ಕೊನೆಗೊಮ್ಮೆ ಕಡಿದು ಅಡ್ಡಬೀಳುವ ತನಕವೂ ಹೀಗೆಯೇ ನಡೆಯುವುದೆ — ಅದು ಇಬ್ಬರೂ ಮರ ನೆಡುವವರು ತಾವೆ ಕಡಿದು ನೆಲಕ್ಕೆ ಬಿದ್ದ ಬಹು ಕಾಲದ ನಂತರ !

'ನನಗೆ ಅನಿಸುತ್ತದೆ', ಆ ಹುಡುಗಿಯು ಅಂದಳು, 'ಅವು ಬದುಕನ್ನು ಗಂಭೀರವಾಗಿ ಆರಂಭಿಸುವುದಕ್ಕೆ ಬಹಳ ವ್ಯಸನಪಟ್ಟಂತಿದೆ — ನಮ್ಮಂತೆಯೆ ! ಅದಕ್ಕೆ ಅವು ನಿಟ್ಟುಸಿರು ಬಿಡುತ್ತಿರಬೇಕು'.

'ನಮ್ಮಂತೆಯೇ ?' ಜೈಲ್ಸ ಅವಳನ್ನೆ ಪರೀಕ್ಷಿಸುವಂತೆ ಕಣ್ಣಿಟ್ಟು ನೋಡುತ್ತ ಕೇಳಿದ, 'ನೀನು ಹಾಗೇನೂ ಅನಿಸಿಕೊಳ್ಳಬಾರದು, ಮಾರ್ಟಿ'.

ಇದಕ್ಕೆ ಮಾರ್ಟಿ ಕೊಟ್ಟ ಒಂದೇ ಉತ್ತರ, ಮಾತಿಲ್ಲದೆ ಇನ್ನೊಂದು ಗಿಡವನ್ನು ನಿಲ್ಲಿಸಲಿಕ್ಕೆ ಎತ್ತಿಕೊಂಡದ್ದು. ಮತ್ತು ಅವರಿಬ್ಬರೂ ದಿನದ ಮುಕ್ಕಾಲುಪಾಲು ಸದ್ದಿಲ್ಲದೆ ಹಾಗೆಯೇ ಗಿಡಗಳನ್ನು ನೆಡುವುದರಲ್ಲಿ ಕಳೆದರು. ವಿಂಟರಬೋರ್ನನ ಮನಸ್ಸು ಅವನ ಸಂಕಲ್ಪಿತ ಸಂಜೆಯ ಸಂತೋಷಕೂಟದ ಔತಣದ ಬಗೆಗೆ ಹರಿಯಿತು. ಅವನ ಅನ್ಯಮನಸ್ಕತೆ ಅರೆ ಮರವು ಇಷ್ಟು ಆಳವಾಗಿತ್ತು. ಮಾರ್ಟಿ ಕೆಲಸಮಾಡುತ್ತ ತನ್ನ ಪಕ್ಕದಲ್ಲಿಯೇ ಇರುವಳೆಂಬ ಅರಿವೆ ಅವನಿಗೆ ಉಳಿಯಲಿಲ್ಲ.

ಅವರು ತೊಡಗಿದ ಕೆಲಸದ ಸ್ವರೂಪದಿಂದ, ಆತ ಕುಠಾರಿಯನ್ನು ಉಪಯೋಗಿಸು ತ್ತಿರುವಾಗ ಗಿಡವನ್ನು ಹಿಡಿದು ನಿಲ್ಲುತ್ತಿದ್ದಳು. ಆದ್ದರಿಂದ ಅವನಿಗೆ ಒಳ್ಳೆಯ ವ್ಯಾಯಾಮವಾಗಿ ಅವಳಿಗೆ ಏನೂ ಶ್ರಮ ಬೀಳುತ್ತಿದ್ದಿಲ್ಲ. ಆದರೆ ಅವಳು ಧೀರ ಹುಡುಗಿ. ಅವಳು ಚಾಚಿದ ತೋಳು ಕಲ್ಲಿನಂತೆ ತಣ್ಣಗಾದರೂ, ಅವಳ ಕೆನ್ನೆ

ಕಪ್ಪಿಟ್ಟರೂ, ಚಳಿಯು ಅವಳಿಗೆ ಎಂದಿಗಿಂತ ಹೆಚ್ಚು ಕೊರೆಯುತ್ತಿದ್ದರೂ ಅವಳು ಸುಮ್ಮನೆ ನಿಂತಿದ್ದಳು. ಅವನು ಕೆಲಸ ಮಾಡುತ್ತಿರುವಾಗ ತಾನೂ ಕೈಕಾಲು ಆಡಿಸಿ ಮೈಕಾವು ಹುಟ್ಟಿಸಿಕೊಳ್ಳಬೇಕೆಂದು ದೂರಿಕೊಳ್ಳಲಿಲ್ಲ. ಆದರೆ ಅವನು ಕೆಲಸದಲ್ಲಿ ಒಮ್ಮೆ ತಡೆದಾಗ ಆಕೆ ಕೇಳಿದಳು, 'ವಿಂಟರಬೋರ್ನ್, ನಾನೊಮ್ಮೆ ಓಣಿಯುದ್ದಕ್ಕೂ ಓಡಿ ಹೋಗಿ ಬರಲೇ?, ನನ್ನ ಕಾಲುಗಳನ್ನು ತುಸು ಬೆಚ್ಚಗೆ ಮಾಡಿಕೊಳ್ಳಲಿಕ್ಕೆ?'

'ಅರೇ, ಅಡ್ಡಿ ಇಲ್ಲ.' ಜೈಲ್ಸ ಅವಳ ಅವಸ್ಥೆಯ ಕುರಿತು ಎಚ್ಚರಾಗಿ ಅಂದನು. 'ಆದರೂ ಇದೀಗಲೇ ನನಗೆ ಹೊಳೆದಿತ್ತು. ಈ ಹೊತ್ತು ಈ ಋತುವಿನ ಮಾನದಲ್ಲಿ ಒಳ್ಳೆಯ ಸೌಮ್ಯವಿದೆ. ಆದರೆ ನಿನಗೆ ಸಾರಿ ಹೇಳುತ್ತೇನೆ, ನಿನ್ನ ಈ ಥಂಡಿ ಇದ್ದುದಕ್ಕೂ ಇಮ್ಮಡಿ ಹಾಳು. ನೀನು ಹಾಗೆ ತಲೆಗೂದಲನ್ನು ಕತ್ತರಿಸಿ ಹಾಕುವ ಯಾವ ಕಾರಣವೂ ಇಲ್ಲ, ಮಾರ್ಟಿ, ಅದಕ್ಕೆ ಇದು ನಿನಗೆ ತಕ್ಕ ಪ್ರಾಯಶ್ಚಿತ್ತ. ನೋಡಿಲ್ಲಿ, ಇನ್ನು ನೀನು ಕೂಡಲೆ ಮನೆಗೆ ಓಡು.'

'ಮನೆಗೆ ಬೇಡ, ಓಣಿಯ ಉದ್ದಕ್ಕೂ ಜೋರಾಗಿ ಓಡಿದರೆ ಸಾಕು.'

'ಸಾಕಾಗದು. ನೀನು ಈ ಹೊತ್ತು ಹೀಗೆ ಹೊರಗೆ ಬರಲೇ ಬಾರದಿತ್ತು.'

'ಆದರೆ ನಾನು ಈ ಕೆಲಸ ಮುಗಿಸಿ...'

'ಮಾರ್ಟಿ ನಾ ಹೇಳುತ್ತೇನೆ — ನೀನು ಮನೆಗೆ ಹೋಗು' ಆತ ಹಠಾತ್ತಾಗಿಯೇ ಅಂದ, 'ಉಳಿದ ಈ ಗಿಡಗಳನ್ನು ನಾನು ಕವೆಗೋಲಿನಿಂದ ಇಲ್ಲವೆ ಇನ್ಯಾತರಿಂದಲೋ ನೀಟಾಗಿ ನಿಲ್ಲಿಸಿಕೊಳ್ಳ ಬಲ್ಲೆ!'

ಮಾರ್ಟಿ ಮತ್ತೆ ಮಾತಾಡದೆ ಹೊರಟು ಹೋದಳು. ಆದರೆ ತುಸು ಅಂತರ ನಡೆದು ಹೋದಮೇಲೆ ಆಕೆ ನಿಂತು ಹಿಂದಿರುಗಿ ನೋಡಿದಳು. ಜೈಲ್ಸ ಒಮ್ಮೆಲೆ ಅವಳ ಕಡೆಗೆ ನಡೆದನು. 'ಮಾರ್ಟಿ, ನಾನು ಬಿರುಸಾಗಿ ನುಡಿದದ್ದು ನಿನ್ನ ಹಿತಕ್ಕಾಗಿಯೇ. ತಿಳಿಯಿತೋ? ಆದರೆ ನಿನಗೆ ಸರಿ ಕಂಡಂತೆ ಮೈಯಲ್ಲಿ ಕಾವು ತಂದುಕೊ. ನನಗೆ ಅದರ ಪರಿವೆ ಇಲ್ಲ.' ಅವನು ಅವಳ ಕೈಯನ್ನು ಮರುಕದಿಂದ ಒಂದು ಕ್ಷಣ ಎತ್ತಿ ಹಿಡಿದನು.

ಅವಳು ಓಡಿಹೋದಮೇಲೆ, ಆಚೆಗೆ, ಹಾದಿಯಿಂದ ಕಾನನ್ನು ವಿಂಗಡಿಸುವ ಹೊಲ್ಲಿಯ ಪೊದೆಗಳೊಳಗಿಂದ ಅವನಿಗೆ ಹೆಂಗಸಿನ ಉಡಿಗೆ ಕಂಡಂತೆ ಆಯಿತು. ಕೊನೆಗೂ ಗ್ರೇಸಳು ಬರುತ್ತಿದ್ದಳು. ಶ್ರೀಮತಿ ಚಾರ್ಮಂದಳ ಸಂದರ್ಶನ ಮುಗಿಸಿ ಮನೆಗೆ ಹಿಂದಿರುಗಿ ಬರುತ್ತಿದ್ದಳು. ಆತ ನೆಡುತ್ತಿದ್ದ ಗಿಡವನ್ನು ಕೆಳಗೆ ಒಗೆದು ಹೊಲ್ಲಿಯ ಪೊದೆಗಳಲ್ಲಿ ನುಗ್ಗಿ ಮುಂದೆ ಬರಬೇಕೆಂದಿದ್ದ; ಅಷ್ಟರಲ್ಲಿ ಅವನಿಗೆ ಇನ್ನೊಬ್ಬನಾರೋ ಆಚೆಗೆ ಇದ್ದದ್ದು ಅರಿವಾಯಿತು. ಆಚೆಯ ಬೇಲಿಯ ಹಿಂದೆ ನಿಂತು ಆ ವ್ಯಕ್ತಿಯು ಅತ್ತ ಕಡೆಯ ಅರಿವಿಲ್ಲದೆ ಬರುತ್ತಿರುವ ಗ್ರೇಸಳ ಆಕೃತಿಯನ್ನೆ ದಿಟ್ಟಿಸುತ್ತಿದ್ದನು.

ಆ ಆಗಂತುಕನು ಸುಮಾರು ಇಪ್ಪತ್ತಾರು ಇಪ್ಪತ್ತೆಂಟು ವರ್ಷದ ಸಭ್ಯನೂ ಶಿಷ್ಟನೂ, ಸುಮುಖನೂ ಆಗಿ ಕಂಡನು. ಅವನು ಕಣ್ಣಿಗೆ ದುರ್ಬೀನು ಇಟ್ಟು ಅವಳನ್ನೆ ನೋಡುತ್ತಿದ್ದನು.

ಜೈಲ್ಸನಿಗೆ ಒಂದು ಕ್ಷಣದಲ್ಲಿ ಗೊತ್ತಾಯಿತು, ಆತ ಡಾಕ್ಟರ ಫಿಟ್‌ಝಫಿಯರ್ಸ್ ಇರಬೇಕೆಂದು. ಆತ ಅಲ್ಲಿಂದ ಸರಿದು ಹೋದನಂತರ ಜೈಲ್ಸ ಹೊಲ್ಲಿ ಪೊದೆಗಳೊಳಗಿಂದ ಮುನ್ನುಗ್ಗಿ ತನ್ನ ಧ್ಯಾನದ ಆಸಕ್ತಿಯ ವಿಷಯವಾದವಳನ್ನು ಸಮೀಪಿಸಿದನು.

೬

'ನಿನ್ನನ್ನು ನೋಡುವ ಮುಂಚೆಯೇ ಆ ಪೊದೆಗಳಲ್ಲಿ ಸರಿದಾಟದ ಸದ್ದು ಕೇಳಿದೆನು,' ಅವಳು ಆರಂಭಿಸಿದಳು, "ಮೊದಲು ನಾನೆಂದೆ, 'ಇದೇನೋ ಭಯಂಕರ ಪ್ರಾಣಿ ಇರಬೇಕು,' ಆ ಮೇಲೆ ಅನಿಸಿತು, 'ಓ ಇವನಾರೋ ಹುಡುಗು, ತೋಟದಲ್ಲಿ ಹಣ್ಣು ಕದಿಯಲು ಬಂದ ಕಳ್ಳ,' ಆ ಮೇಲೆ ಅಂದುಕೊಂಡೆ, 'ಇವನು ನನ್ನ ಮಿತ್ರ.'"

ಆತ ಅವಳನ್ನು ನಸುನಗೆಯಿಂದ ನೋಡುತ್ತ ನಿಂತ. ಅವಳ ಮಾತನ್ನು ಆತ ತೂಗುತ್ತಿದ್ದಿಲ್ಲ. ಇದೀಗ ಒಬ್ಬ ಸದ್ಗೃಹಸ್ಥ ಅವಳನ್ನೆ ಪ್ರಶಂಸೆಯ ಕಣ್ಣಿನಿಂದ ಪರೀಕ್ಷಿಸುತ್ತಿದ್ದನೆಂಬುದನ್ನು ಅವಳಿಗೆ ತಿಳಿಸಲೋ ಬೇಡವೋ ಎಂಬುದನ್ನೆ ಆಲೋಚಿಸುತ್ತಿದ್ದ. ಕೊನೆಗೆ ತಿಳಿಸಬಾರದೆಂಬ ತೀರ್ಮಾನಕ್ಕೆ ಒಪ್ಪಿದ.

'ನೀನು ದೊಡ್ಡ ಮನೆಗೆ ಹೋಗಿದ್ದಿಯಾ?' ಆತ ಅಂದನು, 'ಆದರೆ ಅದೆಲ್ಲ ಕೇಳಬಾರದು.' ಮೆಲಬರಿಯ ಮಗಳ ಮೋರೆಯಲ್ಲಿ ಆತ ಒಂದು ಬಗೆಯ ಹರ್ಷ ಸಂಭ್ರಮವನ್ನು ಕಂಡನು. ಆ ಸಂಭ್ರಮಕ್ಕೆ ಸುತ್ತಲಿನ ಪರಿಸರದ ವಿವರಗಳು ಕಾಣುತ್ತಿದ್ದಿಲ್ಲ. ಜೈಲ್ಸನ ಕೆಲಸವೂ ಅವಳ ಕಣ್ಣಿಗೆ ಹೋಗಲಿಲ್ಲ. ಬರೆ ಅವನು ಅಲ್ಲಿ ಇದ್ದುದನ್ನಷ್ಟೇ ಅವಳು ನೋಡಿದಳು.

'ನೀನೇಕೆ ಕೇಳಬಾರದು?'

'ನಿನ್ನ ಮೋರೆ ಸಾಕ್ಷಾತ್ಕಾರದ ಪರ್ವತದಿಂದ ಇಳಿದು ಬಂದಾಗಿನ ಮೊಸಸ್‌ನ ಮೋರೆಯಂತೆ ಕಾಣುತ್ತದೆ.'

ಅವಳು ಈ ಮಾತಿಗೆ ತುಸು ಕೆಂಪಾದಳು. ಅವಳೆಂದಳು, 'ಇದೇನು ಮಾತು? ಇಷ್ಟು ಭಂಡ ಮಾತು ನೀನು ಆಡುವಿಯಾದರೂ ಹೇಗೆ, ಜೈಲ್ಸ ವಿಂಟರಬೋರ್ನ?'

'ಅಲ್ಲ, ನೀನು ಆ ವರ್ಗದ ಮಂದಿಯ ಬಗೆಗೆ ಅಷ್ಟೊಂದು ಮೇಲಾಗಿ ವಿಚಾರ ಮಾಡುವಿಯಾದರೂ ಹೇಗೆ? ಇರಲಿ, ನನ್ನನ್ನು ಕ್ಷಮಿಸು. ಆ ಬಗ್ಗೆ ನಾನು ಇಷ್ಟೆಲ್ಲ ಸ್ವೈರವಾಗಿ ಆಡಬೇಕೆಂದು ಇದ್ದಿಲ್ಲ. ಅವಳ ಮನೆ, ಅವಳು ನಿನಗೆ ಹೇಗೆ ಏನು ಮೆಚ್ಚಿಗೆ ಆದಳು?'

'ಹೇಗೆಂದು ಏನು ಕೇಳುವಿಯಾ, ವಿಪರೀತ ಮೆಚ್ಚಿಗೆ! ಆ ಮನೆಯ ಕಡೆಗೆ ನಾನು ಚಿಕ್ಕಂದಿನಿಂದಲೂ ಹಾಯ್ದಿದ್ದೇ ಇಲ್ಲ. ಆಗ ಶ್ರೀಮತಿ ಚಾರ್ಮಂದಳ ಗಂಡ

ಆ ಆಸ್ತಿಯನ್ನು ಕೊಂಡಿದ್ದಿಲ್ಲ. ಆಗ ಆಗಂತುಕರಿಗೆ ಅದನ್ನು ಬಾಡಿಗೆಗೆ ಕೊಡುತ್ತಿದ್ದರು. ಅವಳು ಎಷ್ಟು ಚೆನ್ನಾಗಿದ್ದಾಳೆ!' ಗ್ರೇಸ ಶ್ರೀಮತಿ ಚಾರ್ಮುಂದಳ ಕಲ್ಪನಾ ಚಿತ್ರದಲ್ಲಿಯೇ ತನ್ಮಯಳಾಗಿ ತೇಲ್ಗಣ್ಣು ಹಾಕಿದಳು. ಇದರಿಂದ ಅವಳ ಚೆನುತನದ ಒಂದು ಬಿಂಬವು ಜೈಲ್ಸನ ಕಣ್ಣಿಗೂ ಕಟ್ಟುವಂತೆ ಆಯಿತು.

'ಅವಳು ಇಲ್ಲಿ ಬಂದು ಒಂದೋ ಎರಡೋ ತಿಂಗಳಾಯಿತು. ಇನ್ನೂ ಹೆಚ್ಚು ಅವಳು ಇಲ್ಲಿ ಉಳಿಯಲೊಲ್ಲಳು. ಏಕೆಂದರೆ ಅವಳಿಗೆ ಈ ಸ್ಥಳವು ತುಂಬ ಏಕಾಕಿ, ಮತ್ತು ತೇವವುಳ್ಳದ್ದೆನಿಸುತ್ತದೆ—ಚಳಿಗಾಲದಲ್ಲಿ. ಅವಳು ವಿದೇಶಕ್ಕೆ ಹೋಗಲಿದ್ದಾಳೆ. ಮತ್ತು ಇದಕ್ಕೆ ನಿನ್ನ ವಿಚಾರವೇನು? ಅವಳು ನನ್ನನ್ನು ಸಂಗಡ ಕರೆದೊಯ್ಯು ವವಳಿದ್ದಾಳೆ.'

ಈ ಸುದ್ದಿ ಕೇಳಿದೊಡನೆ ಜೈಲ್ಸನ ಮುಖಚರ್ಯೆ ಇದ್ದಕ್ಕಿದ್ದಂತೆ ತುಸು ಹೆಪ್ಪು ಗಟ್ಟಿತು. ಬಿರುಸಾಯಿತು. 'ಹೌದೇ, ನಿಜವೇ? ಅದೇಕೆ ನೀನು ಹೋಗುವುದು? ಆದರೆ ನಾನು ಹೀಗೆ ನಿನ್ನನ್ನು ಹಾದಿಯಲ್ಲಿ ತಡೆದು ನಿಲ್ಲಿಸಲಾರೆ. 'ಹೊರೆಯ್ ರಾಬರ್ಟ್.' ಆತ ಕೂಗಿದ. ಹಳೆಯ ಬಟ್ಟೆಗಳ ಒಂದು ಗಂಟು ತೂರಾಡುತ್ತ ದೂರದಲ್ಲಿ ಬರುತ್ತಿತ್ತು, ಅದು ರಾಬರ್ಟ್‌ಕ್ರೀಡಲ್‌ನ ರೂಪ ತಾಳಿತು. ಅದನ್ನೆ ಕುರಿತು ಜೈಲ್ಸ ಕೂಗಿದ್ದು. 'ನಾನು ತಿರುಗಿ ಬರುವತನಕ ಕುಳಿಗಳನ್ನು ತುಂಬು.' ಕ್ರೀಡಲ್ ಅವನ ಆಳು. ಅವನನ್ನೆ ಹುಡುಕಿಕೊಂಡು ಬಂದಿದ್ದನು.

'ಬಂದೆ ಒಡೆಯಾ ಬರ್ತೇನೆ', ರಾಬರ್ಟ್ ಅಂದನು.

'ಅದೇಕೆಂದು ಕೇಳಿದಿಯಲ್ಲ, ಅದು ಹೀಗೆ', ಗ್ರೇಸ ಸ್ಪಷ್ಟೀಕರಿಸ ಹತ್ತಿದಳು, ಇಬ್ಬರೂ ಮುಂದೆ ಸಾಗುವಾಗ. 'ಶ್ರೀಮತಿ ಚಾರ್ಮುಂದಳ ಸ್ವಭಾವಕ್ಕೆ ಆನಂದಕರ ವಾದ ಮಗ್ಗಲೊಂದಿದೆ — ತನ್ನ ಸಂಚಾರ ಪ್ರವಾಸಗಳ ಅನುಭವಗಳನ್ನು ಬರೆದಿಡುವ ಅಪೇಕ್ಷೆ, — ಅಲೆಗ್ಸಾಂಡರ ಡೂಮಾ, ಮದಿ, ಸ್ಮರ್ನ ಮುಂತಾದವರಂತೆ. ಆದರೆ ಅವಳಿಗೆ ತಾನೇ ಅದನ್ನು ಮಾಡುವಷ್ಟು ಕಸುವು ಕಡಿಮೆ ಅನಿಸುತ್ತದೆ. ಮುಂದೆ ಗ್ರೇಸ ಚಾರ್ಮುಂಡಳ ಪ್ರಸ್ತಾಪವನ್ನು ವಿವರಿಸಿದಳು. 'ನನ್ನ ಮತವೇನೆಂದರೆ ಮರಿಯ ಶೈಲಿಯೇ ಅವಳಿಗೆ ಉತ್ತಮ ಒಪ್ಪಬಹುದು. ಆತ ಅವಳಂತೆಯೇ ಮೃದುವಾದ ಭಾವನಾಮಯವಾದ ಹುಲುಸಾದ ರೀತಿಯಲ್ಲಿ ಬರೆಯುತ್ತಾನೆ'.

'ಓ, ನಿಜವೇ?' ಜೈಲ್ಸ ಅಂದನು, ನಿಡಿದಾಗಿ ಉಸಿರುಬಿಡುತ್ತ. 'ಕುಮಾರೀ ಗ್ರೇಸ ಮೆಲಬರಿಯವರೇ ಹೀಗೆಯೇ ಇನ್ನಿಷ್ಟು ಕಾಲ ನನ್ನ ತಲೆಯ ಮೇಲಿಂದಲೇ ಹಾಯುವಂತೆ ಮಾತನಾಡುತ್ತ ಇರಿ'.

'ಓ, ನನ್ನ ಉದ್ದೇಶ ಇದಲ್ಲ' ಪಶ್ಚಾತ್ತಾಪದಿಂದ ಅವನ ಕಣ್ಣಲ್ಲಿಯೇ ಕಣ್ಣಿಟ್ಟು ನುಡಿದಳು. 'ನನ್ನ ಮಟ್ಟಿಗೆ ಹೇಳುವುದಾದರೆ, ಈ ಫ್ರೆಂಚ್ ಪುಸ್ತಕಗಳೆಂದರೆ ನನಗೆ ಸೇರವು. ನನಗೆ ಸೇರುವುದು, ನಾನು ಮೆಚ್ಚುವುದು ಈ ಮುದ್ದು ಹಸೆಯ ಹಿಂಟೋಕ ಹಳ್ಳಿಯನ್ನು, ಮತ್ತು ಇದರೊಳಗಿನ ಜನರನ್ನು. ಯುರೋಪಕ್ಕಿಂತ ಐವತ್ತು ಪಟ್ಟು

ಹೆಚ್ಚು ನನಗೆ ನನ್ನ ಹಳ್ಳಿಯೇ ಲೇಸು. ಆದರೂ ಈ ಯೋಜನೆ, ಇದು ತುಂಬ ಮೋಹಕವೆನಿಸುತ್ತದೆ ನನಗೆ. ನಿನಗೆ ಹಾಗೆ ಅನ್ನಿಸುವುದಿಲ್ಲವೇ ಜೈಲ್ಸ ? '

' ಅದೆಲ್ಲ ಒಳ್ಳೆಯದೇ ಒಂದು ಅರ್ಥದಲ್ಲಿ. ಆದರೆ ... ಅದರಿಂದ ನಾನು ದೂರ ಹೋಗುವೆ ', ಆತ ಅಂದ ಉತ್ಸಾಹ ಕುಗ್ಗಿ.

' ಅದು ಸ್ವಲ್ಪವೇ ಕಾಲ ; ನಾವು ಮೇ ತಿಂಗಳಲ್ಲಿ ಮರಳುವೆವು.'

' ಸರಿ. ಗ್ರೇಸ, ಅದು ನಿನ್ನ ತಂದೆಗೆ ಒಪ್ಪಿದ ಪ್ರಶ್ನೆ ' ಆತ ಎಂದನು.

ಅವಳ ಮನೆಯ ತನಕವೂ ಆತ ಅವಳೊಂದಿಗೆ ನಡೆದನು. ಆತ ಅವಳಿಗಾಗಿ ಕಾಯ್ದು ನಿಂತದ್ದು ಮುಖ್ಯವಾಗಿ ಅವಳಿಗೆ ಕ್ರಿಸ್‌ಮಸ್ ಔತಣದ ಪ್ರಸ್ತಾಪವನ್ನು ತಿಳಿಸಲಿಕ್ಕಾಗಿತ್ತು ; ಆದರೆ ಅವಳ ಸಂಭಾಷಣದ ಆ ಉನ್ನತ ವಿಷಯಗಳ ಇದುರಿಗೆ ಕ್ರಿಸ್‌ಮಸ್ ಹಬ್ಬದ ಮನೆಬಳಕೆಯ ಆ ಹಿಂಟೋಕ್ ಹಳ್ಳಿಗಾಡಿನ ರೀತಿಯ ಔತಣವು ತೀರ ಕಗ್ಗವೂ ಅಸಡ್ಡಾಳವೂ ಆಗಿ ಕಂಡಿತು ; ಆತ ಅದರ ಮಾತನ್ನೇ ಅವಳ ಮುಂದೆ ಎತ್ತಲಿಲ್ಲ.

ಆಕೆ ಮನೆಯೊಳಗೆ ಹೋದೊಡನೆಯೇ ಜೈಲ್ಸ ಗಿಡ ನೆಡುವ ತಾಣದ ಕಡೆಗೆ ಹಿಂದಿರುಗಿದನು, ತಿರುಗಿ ಹೋಗುತ್ತ ಅವನಿಗೆ ತನ್ನೊಳಗೆ ತಾನು ಅಂದುಕೊಳ್ಳದೆ ಇರಲು ಆಗಲಿಲ್ಲ. ಈ ಹೆಣ್ಣಿನೊಂದಿಗೆ ವಾಙ್ನಿಶ್ಚಯವೆಂಬುದು ಒಳ್ಳೆ ನಿರಾಶಾದಾಯಕ ವ್ಯವಹಾರವಾಗುವಂತಿದೆ ! ಅವಳ ಇಂದಿನ ತಿರುಗಾಟವೂ ಅದನ್ನು ಸುಧಾರಿಸಿದಂತಿಲ್ಲ. ಆ ಹಿಂಟೋಕ ದೊಡ್ಡ ಮನೆಗೆ ಭೇಟಿ ಕೊಡಲು ಹೋಗುವಾಕೆ, ಅಲ್ಲಿಯ ಯಜಮಾನಿಯ ಅಭಿಪ್ರಾಯಗಳ ಚರ್ಚೆಯಲ್ಲಿ ಸರಾಗವಾಗಿ ಸೇರುವಾಕೆ, ಅವಳಂತೆಯೇ ಮಾತಾಡುವಾಕೆ, ಉಡಿಗೆ-ತೊಡಿಗೆಗಳಲ್ಲಿ ಅವಳಿಗೇನೂ ಕಡಿಮೆ ಅಲ್ಲದಾಕೆ — ಇನ್ನೇನು ಅವನಂಥ ಹಳ್ಳಿಯ ಹೈದನಲ್ಲಿ ರೈತಾಪಿಯ ಆಳಿನಲ್ಲಿ, ಆತ ಮರಗಳನ್ನು ಎಷ್ಟೇ ಚೆನ್ನಾಗಿ ನೆಡಲೊಲ್ಲನೇಕೆ ? — ಇವಳು ಸಮಾಧಾನ ಪಡುವಾಕೆಯೆ ? ಮರಗಳ ಲಾಗುವಾಡಿನಲ್ಲಿ ಮುಳುಗಿದವನಲ್ಲಿ ಇವಳಿಗೆ ತೃಪ್ತಿ ಸಿಗಬಹುದೇ ? ಆದಾಗ್ಯೂ ಇವಳು ಪ್ರಾಮಾಣಿಕ ಹೃದಯದವಳು, ' ಅವಳು ಹಿಂಟೋಕ ಹಳ್ಳಿಯ ಬಗೆಗೆ ಆಡಿದ ಮಾತುಗಳ ನೆನಪಾಗಿ ಆತ ಅಂದನು, ' ನಾನು ಹೀಗೇ ಇಳಿಚಾಪಿಗೆ ಬಿಡಬಾರದು. ವಿಷಯವನ್ನು ಒಂದು ಇತ್ಯರ್ಥಕ್ಕೆ ತಂದು ಮುಗಿಸಿಬಿಡಬೇಕು.'

ಮರನೆಡುವ ತಾಣಕ್ಕೆ ಬಂದಾಗ ಆತನಿಗೆ ಮಾರ್ಟಿ ಅಲ್ಲಿ ತಿರುಗಿ ಬಂದದ್ದು ಕಂಡುಬಂತು. ಆಗ ಕ್ರೀಡಲ್‌ನನ್ನು ಕೆಲಸದಿಂದ ಬಿಡುಗಡೆ ಮಾಡಿ ಆಕೆಯೊಂದಿಗೆ ಹಿಂದಿನಂತೆ ಗಿಡಗಳನ್ನು ನೆಡುವುದನ್ನು ಮುಂದುವರಿಸಿದನು — ಹಿಂದಿನಂತೆಯೇ ಮೌನವಾಗಿ.

ಸ್ವಲ್ಪ ಹೊತ್ತಿನ ಮೇಲೆ ಆತ ಮಾರ್ಟಿಯು ಚಾಚಿದ ತೋಳಿನ ಕಡೆಗೆ, (ಆ ತೋಳಿನ ಮೇಲೆ ಕಂಚಿ-ಮುಳ್ಳುಗಳ ಹಳೆಯ ಗಾಯದ ಗೆರೆಗಳು ಚಳಿಯಲ್ಲಿ ಕರಿಗೆಂಪಾಗಿ ಎದ್ದು ಕಾಣುತ್ತಿದ್ದವು) ನೋಡುತ್ತ ಅಂದನು, 'ಒಂದು ಮಾತು, ಮಾರ್ಟಿ ತಿಳಿದುಕೋ

ನಿನಗೆ ಒಂದು ವ್ಯಕ್ತಿಯ ಪರಿಚಯವಿದೆ. ಆ ವ್ಯಕ್ತಿಯನ್ನು ಇನ್ನೂ ಚೆನ್ನಾಗಿ ಅರಿತು ಕೊಳ್ಳಲು ನಿನ್ನ ಪರಿಚಯದಲ್ಲಿ ತಂದುಕೊಳ್ಳುವುದು ನಿನಗೆ ಬೇಕಾಗಿದೆ ಅಂದಾಗ ಕ್ರಿಸ್ ಮಸ್ ಹಬ್ಬಕ್ಕೆ ಒಂದು ಔತಣ ಕರೆದರೆ ಅದು ಅಂಥ ಉದ್ದೇಶವನ್ನು ಲಗು ಸಾಧಿಸಲಿಕ್ಕೆ ಅನುಕೂಲ ಹಂಚಿಕೆಯಾದೀತೆ ? '

' ಅಲ್ಲಿ ಕುಣಿತವಿರುವುದೇ ? '

' ಇರಲೂಬಹುದು, ನಿಜ.'

' ಆಗ ಆತ ಆಕೆಯೊಂದಿಗೆ ಕುಣಿಯಬಹುದೇ ? '

' ಹೌದು ಮತ್ತೆ '

' ಹಾಗಾದರೆ ವಿಷಯವು ಒಂದು ಇತ್ಯರ್ಥಕ್ಕೆ ಬರಬಹುದು. ಅದು ಹೀಗೋ ಹಾಗೋ ಹೇಳಲಾರೆ. ಅದನ್ನು ಹೇಳಲು ನಾನು ಯಾವ ಹುಡುಗಿ ? '

' ಹಾಗಾದರೆ, ಅ ದ ನ್ನು ಮಾಡುವುದೇ ? ' ವಿಂಟರಬೋರ್ನ ಅವಳನ್ನು ಕುರಿತಲ್ಲ, ತನ್ನಷ್ಟಕ್ಕೆ ಈ ಮಾತನ್ನು ದೊಡ್ಡದಾಗಿಯೇ ಆಡಿದನು. ದಿನದ ಕೆಲಸವೂ ಬಹುತೇಕ ಮುಗಿದಿತ್ತು. ಆದ್ದರಿಂದ ಆತ ಮಾತು ಮುಂದರಿಸಿದ, ' ಇಲ್ಲಿ ನೋಡು, ಮಾರ್ಟಿ, ನಾಳೆ ಗಿಡ ನೆಡಲಿಕ್ಕೆ ಒಬ್ಬ ಆಳನ್ನು ಕಳುಹಿಸುತ್ತೇನೆ. ನನಗೆ ಇದೀಗ ಬೇರೆ ವಿಷಯಗಳಿರುತ್ತವೆ, ತಲೆತುಂಬ ವಿಚಾರಮಾಡಲಿಕ್ಕೆ.

ಅವಳು ಕೇಳಲಿಲ್ಲ – ಅದ್ಯಾವ ವಿಷಯಗಳೆಂದು ಆಕೆ ನೋಡಿದ್ದಳು, ಗ್ರೇಸ ಮೆಲ ಬರಿಯೊಂದಿಗೆ ಅವನು ಹಾದಿ ನಡೆದದ್ದು. ಅವಳು ಪಡುವಣಬಾನಿನತ್ತ ನೋಡಿದಳು. ಕಬ್ಬಿಣದ ದೊಡ್ಡ ಕುಲುಮೆಯಂತೆ ಬಾನು ಹೊತ್ತಿ ಕೆಂಪಾಗಿತ್ತು. ಆ ಕುಲುಮೆಯಲ್ಲಿ ಹೊಸ ಲೋಹಗಳು ಎರಕ ಹೊಯ್ಯಲು ಕುದಿಯುತ್ತಿರಬೇಕು. ಆ ಬಾನಿಗೆ ಅಡ್ಡವಾಗಿ ಒಂದು ಮರದ ಬೋಳು ಬರಲು ತೋಳು ಚಾಚಿತ್ತು — ಆ ಸಂಜೆಗೆಂಪಿನ ಬೆಂಕಿಯಲ್ಲಿ ಅದರ ಒಂದೊಂದು ರೆಂಬೆ-ಕೊಂಬೆಯೂ ನಿಚ್ಚಳವಾಗಿ ಒಡಮೂಡಿತ್ತು. ಅದರ ಮೇಲೆ ಮೂರು ಫಿಸಂತಹಕ್ಕಿಗಳು ಸಾಲಾಗಿ ಬಂದು ಕೂತಿದ್ದುವು. ಅವುಗಳ ಚಲನವಲನಗಳೂ ಸ್ಫುಟವಾಗಿ ಕಾಣುತ್ತಿದ್ದವು.

' ನಾಳೆ ಹವೆ ಚೆನ್ನಾಗಿಯೇ ಇರುವಂತೆ ಕಾಣುತ್ತದೆ ' ಮಾರ್ಟಿ ಅಂದಳು. ಆ ಹಕ್ಕಿಗಳನ್ನು ನಿರೀಕ್ಷಿಸುತ್ತ. ಅವಳ ಕಣ್ಣಾಲಿಗಳಲ್ಲಿ ಆ ಕುಂಕುಮ ಕಾಂತಿಯು ತುಳು ಕಾಡುತ್ತಿತ್ತು. ' ಏಕೆಂದರೆ ಆ ಹಕ್ಕಿಗಳು ಟೊಂಗೆಯ ತುದಿಗೆ ಗೂಡುಕಟ್ಟುತ್ತಿವೆ. ಅದೇ ನಾಳೆ ಬಿರುಗಾಳಿ ಬೀಸುವಂತಿದ್ದರೆ ಅವು ಮರದ ಕಾಂಡದ ಬದಿಗೇ ಅಂಟಿ ಕೊಂಡು ಕಟ್ಟುತ್ತಿದ್ದವು. ಅವು ವಿಚಾರ ಮಾಡುವುದು ಯಾವಾಗಲೂ ಹವಾಮಾನ ಒಂದನ್ನೇ ಅಲ್ಲವೇ ವಿಂಟರಬೋರ್ನ ? ಆದ್ದರಿಂದ ಅವು ನಮಗಿಂತ ಹಗುರು ಹೃದಯದವಾಗಿರಲಿಕ್ಕೆ ಬೇಕು.

' ಹೌದು ಹಾಗೆಯೇ ಇರಬೇಕು ', ವಿಂಟರಬೋರ್ನ ಉತ್ತರಿಸಿದನು.

ಆ ದಿನ ಸಂಜೆಗೆ ವಿಂಟರಬೋರ್ನ ಮೆಲಬರಿಯ ಮನೆಗೆ ಹೋದನು. ಔತಣದ

ಸಿದ್ಧತೆಗೆ ಯಾವುದೇ ಹೆಜ್ಜೆಯನ್ನು ಇಡುವ ಮುಂಚೆ, ಆ ಬಗ್ಗೆ ವಿಶೇಷ ಆಶೆಯೇನೂ ಇಟ್ಟುಕೊಳ್ಳದೆ ಆತ ಮರದ ವ್ಯಾಪಾರಿಯ ಭೆಟ್ಟಿಗೆ ಹೋದನು. ಗ್ರೇಸಳೂ ಅವಳ ತಂದೆ ತಾಯಿಗಳೂ ಆ ಪ್ರಸಂಗಕ್ಕೆ ತಮ್ಮಲ್ಲಿ ಬಂದು ಕಾರ್ಯಕ್ಕೆ ಶೋಭೆ ತರ ಬಹುದೋ ಎಂಬುದನ್ನು ಮೊದಲು ನಿರ್ಣಯಿಸುವುದಿತ್ತು. ಅವನ ಹಿತ್ತಲಲ್ಲಿಯ ತರಕಾರಿಗಳನ್ನು ತಿನ್ನಲು ಬರುವ ಮೊಲಗಳನ್ನು ಹಿಡಿಯಲಿಕ್ಕೆ ಬಲೆಯನ್ನು ಮೊದಲು ಕಟ್ಟಿಟ್ಟು ಹೊರಡುವ ತನಕ ಅವನಿಗೆ ತುಸು ತಡವಾಯಿತು. ಆಗ ತಿಂಗಳು ಮೂಡಿತ್ತು. ತಿಂಗಳ ಬೆಳಕು ಮರಗಳ ನಡುವಿನಿಂದ ನಸುಮಸುಕಾಗಿ ಹಿಂಟೋಕ ಹಳ್ಳಿಯ ಮನೆಗಳ ಚಪ್ಪರಗಳನ್ನು ಮುಟ್ಟುತ್ತಿತ್ತು. ಮೆಲಬರಿಯು ತನ್ನ ಅಂಗಳ ದಾಟುತ್ತಿದ್ದನು — ದೊಡ್ಡಹಳ್ಳಿಯಲ್ಲಿ ಯಾರನ್ನೋ ಕಾಣಲಿಕ್ಕೆ ಹೊರಟಂತಿತ್ತು. ಆದರೆ ಈ ತರುಣನನ್ನು ಕಾಣುತ್ತಲೆ ಆತ ಅವನೊಂದಿಗೆ ಅಂಗಳದಲ್ಲಿಯೇ ಅತ್ತಿತ್ತ ಅಡ್ಡಾಡ ಹತ್ತಿದನು.

ಜೈಲ್ಸನಿಗೆ ಆತ್ಮ ಜಿಗುಪ್ಸೆ; ಮೆಲಬರಿಯ ಬದುಕಿಗಿಂತ ತನ್ನದು ಕಡಿಮೆ ಆದದ್ದು ಎಂದು. ಆದ್ದರಿಂದ ತನ್ನ ಆಮಂತ್ರಣ ಅಂಥದೇನು ಮಹತ್ವದ ಸಮಾವೇಶ ವಲ್ಲವೆಂಬುವಂತೆಯೇ ಸೂಚಿಸಿದನು. ತನ್ನ ಇಂಗಿತವನ್ನು ಆತ ಹೀಗೆ ಸೌಮ್ಯ ಶಬ್ದ ಗಳಲ್ಲಿಯೇ ಮುಂದಿಟ್ಟನು. ‘ ನಾಡಿದ್ದು, ನಿಮ್ಮ ಕೆಲಸವೆಲ್ಲ ಮುಗಿದ ಮೇಲೆ ನೀವು, ನಿಮ್ಮ ಹೆಂಡತಿ ಮತ್ತು ಮಗಳು ನಮ್ಮಲ್ಲಿ ಬರುವಿರಾ? — ನಿಮಗೆ ಇನ್ನೇನೂ ಅಗತ್ಯದ ಬೇರೆ ಕೆಲಸಬೊಗಸೆ ಇಲ್ಲದಿದ್ದರೆ? ’

ಮೆಲಬರಿ ಕೂಡಲೆ ಉತ್ತರ ಕೊಡದಾದನು. ‘ ಇಲ್ಲ, ನಾನು ಇಂದೇ ಏನೂ ಹೇಳಲಾರೆ. ಮನೆಯಲ್ಲಿ ಹೆಂಗಸರೊಂದಿಗೆ ಮೊದಲು ಮಾತನಾಡಿಕೊಳ್ಳಬೇಕು. ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ನೆಚ್ಚಿನ ಜೈಲ್ಸನೆ, ನಾನು ಬರಲಿಕ್ಕೆ ಸಂತೋಷದಿಂದ ಸಿದ್ಧ. ಆದರೆ ಗ್ರೇಸಳ ಭಾವನೆ ಹೇಗಿದೆಯೋ ನನಗೆ ಹೇಗೆ ತಿಳಿಯಬೇಕು? ನೋಡು, ಅವಳು ಒಳ್ಳೆಯ ಸುಸಂಸ್ಕೃತ ಜನರಲ್ಲಿ ಸಾಕಷ್ಟು ಕಾಲ ಕಳೆದವಳು. ಈಗ ಮತ್ತೆ ಈ ಶ್ರೀಮತಿ ಚಾರ್ಮಂದಳ ಪರಿಚಯ ಸರಿ, ನಾನು ಅವಳನ್ನು ಕೇಳುತ್ತೇನೆ. ಇದಕ್ಕೂ ಹೆಚ್ಚಿಗೆ ಈಗ ಹೇಳಲಾರೆ ’.

ವಿಂಟರಬೋರ್ನ ಹೊರಟು ಹೋದ ಮೇಲೆ ಆ ಮರದ ವ್ಯಾಪಾರಿ ತನ್ನ ಹಾದಿ ಹಿಡಿದು ಮುಂದರಿದನು. ಅವನಿಗೆ ಚೆನ್ನಾಗಿಯೇ ಗೊತ್ತಿತ್ತು. ಅವಳ ಭಾವನೆ ಏನೇ ಇದ್ದರೂ, ತಾನು ಸೂಚಿಸಿದಂತೆಯೇ ಗ್ರೇಸ ಹೋಗಬಲ್ಲಳು. ಹೋಗದೆ ಇರ ಬಲ್ಲಳು. ಮತ್ತು ಅವನ ವೃತ್ತಿ ಆ ಕ್ಷಣಕ್ಕೆ ಅವಳು ಮನೆಯಲ್ಲಿಯೇ ಇರಬೇಕೆಂದಿತ್ತು. ಅವನ ಕೆಲಸ ಅವನನ್ನು ಚರ್ಚಿನ ಹತ್ತಿರ ಒಯ್ಯಿತು. ಮತ್ತು ಅವನು ಮುಟ್ಟತಕ್ಕ ಸ್ಥಳವು ಚರ್ಚಿನ ಆವಾರದೊಳಗಿನಿಂದ ಹಾಯ್ದರೂ ಹೊರಗಿನಿಂದ ಹೋದರೂ ಅಷ್ಟೇ ಸುಲಭವಾಗಿತ್ತು. ಅವನು ಅದೇಕೋ ಆವಾರದೊಳಗಿಂದಲೇ ಹಾಯಲು ಮನಸ್ಸು ಮಾಡಿದನು.

ಬೆಳದಿಂಗಳು ಆಗ ಆ ಆವಾರದೊಳಗಡೆಯ ಸಮಾಧಿಯ ಕಲ್ಲುಗಳನ್ನು, ಕಾಲುದಾರಿಯನ್ನು ಮುಂದಿನ ಕಟ್ಟಟದ ಮುಂಬದಿಯನ್ನು ಮಂದವಾಗಿ ಬೆಳಗಲು ತೊಡಗಿತ್ತು. ಒಮ್ಮೆಲೆ ಮೆಲಬರಿ ತಡೆದನು. ಹುಲ್ಲಿನಲ್ಲಿ ಮರಳಿದನು, ಒಂದು ಸಮಾಧಿಯ ತಲೆಗಲ್ಲಿನ ಹತ್ತಿರಕ್ಕೆ ಹೋದನು. ಅಲ್ಲಿಯ ಬರಹವನ್ನು ಓದಿದನು. 'ಜಾನ್ ವಿಂಟರಬೋರ್ನ್‌ರ ಸ್ಮಾರಕವಾಗಿ' ಅದರ ಕೆಳಗೆ ಮೃತನ ವಯಸ್ಸು ಮರಣ ಮಿತಿ ಕೊರೆದಿತ್ತು. ಆದು ಜೈಲ್ಸನ ತಂದೆಯ ಸಮಾಧಿಯಾಗಿತ್ತು.

ಮೆಲಬರಿ ಆ ಕಲ್ಲಿನ ಮೇಲೆ ತನ್ನ ಕೈಯನ್ನಿಟ್ಟನು. ಆ ಕ್ಷಣಕ್ಕೆ ಅವನಲ್ಲಿ ಮಾನವ್ಯ ಉಕ್ಕಿ ಬಂದಿತು. 'ಜಾಕ್, ನನ್ನ ಅನ್ಯಾಯಗೊಂಡ ಗೆಳೆಯನೆ,' ಆತ ಉದ್ಗರಿಸಿದನು. 'ನಾನು ನಿನಗೆ ಮಾಡಿದ ಅನ್ಯಾಯದ ಪರಿಮಾರ್ಜನೆಗೆ ಹಾಕಿದ ಯೋಜನೆಗೆ ನಿಷ್ಠೆಯಿಂದ ನಡೆದುಕೊಳ್ಳುವೆನು.

ಆ ರಾತ್ರೆ ಅವನು ಮನೆಯನ್ನು ಸೇರಿದಾಗ ಹೆಂಡತಿಗೂ ಗ್ರೇಸಳಿಗೂ ಅಂದನು, 'ಜೈಲ್ಸನ ಅಪೇಕ್ಷೆ, ನಾಡಿದ್ದು ನಾವು ಅವನಲ್ಲಿ ಹೋಗಿ ಒಂದು ಗಂಟೆ ಕಾಲ ಕಳೆಯಬೇಕಂತೆ; ನನಗೆ ಅನಿಸುತ್ತದೆ; ನಾವು ಹೋಗಬೇಕು, ಏಕೆಂದರೆ ನಮ್ಮನ್ನು ಕರೆಯುವವನು ಜೈಲ್ಸನಲ್ಲವೇ ?' ಅಗ ಗ್ರೇಸ ಮತ್ತು ಮೆಲಬರಿಯ ಹೆಂಡತಿ ಇಬ್ಬರೂ ಬೆಂಕಿಯ ಹತ್ತಿರ ಒಂದು ಮೇಜಿನ ಮೇಲೆ ಏನೋ ಕೆಲಸ ಮಾಡುತ್ತಿದ್ದರು. ಅವರು ಪಿಟ್ಟೆನ್ನದೆ ತಲೆದೂಗಿ ಒಪ್ಪಿಕೊಂಡರು; ಮತ್ತು ಮರುದಿನ ಆ ಮರದ ವ್ಯಾಪಾರಿಯು ಜೈಲ್ಸನಿಗೆ ಒಪ್ಪಿಗೆಯ ಉತ್ತರವನ್ನು ತಿಳಿಸಿದನು.

ವಿಂಟರಬೋರ್ನ ತನ್ನ ನಾಚುಬುರುಕುತನದಲ್ಲಿ ಮೆಲಬರಿಗೆ ಔತಣದ ನಿರ್ದಿಷ್ಟ ವೇಳೆಯನ್ನು ಹೇಳಿದ್ದಿಲ್ಲ. ಆದರೆ ಇತರ ಕೆಳತರಗತಿಯ ಅತಿಥಿಗಳಿಗೆ ತಿಳಿಸಿದ್ದನು. ಆದ್ದರಿಂದ ಮೆಲಬರಿ ಮತ್ತು ಅವನ ಪರಿವಾರದವರು ಬೇರೆ ಮಂದಿ ಬರುವರೆಂದು ಬಗೆಯದೆ, ತಮಗೆ ಅನುಕೂಲವಾದ ವೇಳೆಗೆ, ಅಂದರೆ ಸಂಜೆಗೆ ತುಸು ಮುಂಚಿತವಾಗಿಯೇ, ಔತಣಕ್ಕೆಂದು ಹೊರಟು ಬಂದರು. ಅಂದು ಮರದ ವ್ಯಾಪಾರದ ದಿನದ ವ್ಯವಹಾರ ಲಗು ಮುಗಿದು ಹೋದದ್ದು ಇದಕ್ಕೆ ಒಂದು ಕಾರಣವಿತ್ತು.

ಆದರೆ ಅವರು ಹೊರಟದ್ದು ಮುಂಚೆ ಆದರೂ ಬಂದದ್ದು ನಿಧಾನವಾಗಿಯೇ. ಔತಣದ ಪ್ರಸಂಗ ಅಷ್ಟೇನು ಮಹತ್ವದ್ದಲ್ಲವೆಂದು ಕಾಣಿಸಿಕೊಳ್ಳುವಂತೆ, ಅವರು ಜೈಲ್ಸನ ಮನೆಯ ಕಡೆಗೆ ತೀರ ಮೆಲ್ಲಗೆ ನಡೆದು ಬಂದರು, ಅಲ್ಲಿಗೆ ಬರೆ ಅಡ್ಡಾಡುತ್ತ ಹೊಟಿದ್ದಾರೆ, ಹೊರತು ವಿಶೇಷವೇನೂ ಅಲ್ಲ ಎಂಬಂತೆ; ಅಥವಾ ಹೆಚ್ಚೆಂದರೆ ಜೈಲ್ಸನಲ್ಲಿಗೆ ಒಂದು ಭೆಟ್ಟಿಕೊಟ್ಟು ಒಂದು ಕಪ್ಪು ಚಹ ಕುಡಿದು ಬರಲಿಕ್ಕೆ ಎಂಬಂತೆ.

ಈ ಹೊತ್ತಿಗೆ ವಿಂಟರಬೋರ್ನನ ಮನೆಯ ಒಳಗಡೆಗೆ ಮಧ್ಯದ ನೆಲಮನೆಯಿಂದ, ಸೇಬು ಹೇರಿಡುವ ಅಟ್ಟದ ಕೋಣೆಯವರೆಗೂ ಗದ್ದಲ, ಗಡಬಿಡಿ ಹಬ್ಬಿತ್ತು. ಅವನು ಆರು ಗಂಟೆಯ ಸುಮಾರಿಗೆ ವಿಶೇಷ ಚಹಾಪಾನದ ಏರ್ಪಾಟು ಮಾಡಿದ್ದನು. ಆ ಮೇಲೆ ಹನ್ನೊಂದು ಗಂಟೆಯ ಸುಮಾರಿಗೆ ಒಳ್ಳೆಯ ಗಡದ್ದಾದ ಊಟ. ಜೈಲ್ಸ

ಅವಿವಾಹಿತ. ಅದರಲ್ಲಿಯೂ ತನ್ನ ಪಾಡಿಗೆ ತಾನು ಬಿಡಿಯಾಗಿ ಬಾಳುವ ಚಟದವನು. ಆದ್ದರಿಂದ ಊಟ ಉಪಹಾರಗಳ ಎಲ್ಲ ಸೋಪಸ್ಕರ, ಸಿದ್ಧತೆಗಳ ಹೊಣೆ ಅವನ ಹಾಗೂ ಅವನ ನಂಬಿಗೆಯ ಆಳಾದ ರಾಬರ್ಟ್ ಕ್ರೀಡಲ್ ಇವರಿಬ್ಬರ ಮೇಲೆಯೇ ಬಿದ್ದಿತು. ಕ್ರೀಡಲ್ ಜೈಲ್ಸನ ಬಂಟ, ಹನುಮಂತ. ಅವನ ಹಾಸಿಗೆ ಹಾಸುವುದರಿಂದ ಹೊಲದಲ್ಲಿ ಮೊಲ ಹಿಡಿಯಲು ಬಲೆ ಹಾಸುವವರೆಗೂ ಎಲ್ಲ ಅಗತ್ಯಗಳಿಗೆ ಅವನೊಬ್ಬನೆ ಒದಗುವ ಸಲುಗೆಯ ಬಳಕೆಯ ಆಳು. ಆತ ಜೈಲ್ಸನ ತಂದೆ ಮನೆಯ ಯಜಮಾನನಾಗಿದ್ದಾಗಿನಿಂದ, ಜೈಲ್ಸ ಚಿನ್ನಾಟದ ಹುಡುಗನಿದ್ದಾಗಿನಿಂದ ಬಾಳಿ ಬಂದ ಆ ಮನೆಯ ಸೇವಕ.

ಅವರಿಬ್ಬರೂ ಮನೆಯ ಹಿಂಭಾಗದಲ್ಲಿ ರೊಟ್ಟಿ ಸುಡುವ ಭಟ್ಟಿಯ ಕೋಣೆಯಲ್ಲಿ ಜೋರಾಗಿ ಕೆಲಸದಲ್ಲಿ ತೊಡಗಿದ್ದರು. ಆ ಜೋರಿನಲ್ಲಿಯೂ ಇಬ್ಬರಿಗೂ ಕಾಲಹರಣದ ಆಲಸಿಕೆ ಮೈಯುಂಡಿಹೋದದ್ದು ಕಂಡು ಬರುತ್ತಿತ್ತು. ಇಬ್ಬರೂ ಬಗೆದಿದ್ದರು — ಸಂಜೆ ಆರರ ಮೊದಲು ಯಾರೂ ಬರಲಿಕ್ಕಿಲ್ಲ. ವಿಂಟರಬೋರ್ನ ಇಟ್ಟಿಗೆಯ ದೊಡ್ಡ ಒಲೆಯ ಇದುರು, ಶರ್ಟಿನ ತೋಳು ಮೇಲಕ್ಕೆ ಮಾಡಿ ನಿಂತಿದ್ದನು. ಆತ ಬೆಂಕಿಯನ್ನು ಧಗಧಗ ಉರಿಯುವಂತೆ ಕೆದರುತ್ತಿದ್ದನು. ಬೆಂಕಿಯ ಬೇಗೆಗಳು ಅವನ ಬೆವರಿಳಿಯುವ ಮೋರೆಯನ್ನು ಬೆಳಗಿ ಅವನ ಕಣ್ಣುಗಳನ್ನು ಕಿರಿಯ ಭಟ್ಟಿಗಳಂತೆ ಕೆಂಪಗೆ ಮಾಡುತ್ತಿದ್ದವು. ಮುಳ್ಳು ಟಿಸಿಲುಗಳು ಒಲೆಯಲ್ಲಿ ಚಟಚಟನೆ ಉರಿಯುತ್ತಿದ್ದವು. ಕ್ರೀಡಲ್ ಕಣಿಕದ ಮುದ್ದೆಗಳನ್ನು ಬಟ್ಟಲುಗಳಲ್ಲಿ ಸಾಲಾಗಿ ಮೇಜಿನ ಮೇಲೆ ಇರಿಸಿ ಒಲೆಯು ಸಾಕಷ್ಟು ಬಿಸಿಯಾಗಲು ಕಾಯುತ್ತಿದ್ದನು. ಅದೇ ಸಮಯ ಸೇಬಿನ ಒಂದು ಖಾದ್ಯಕ್ಕಾಗಿ ಲಟ್ಟಣಿಗೆಯಿಂದ ಅದರ ಮುದ್ದೆಯನ್ನು ಒತ್ತುತ್ತಿದ್ದನು. ಬೆಂಕಿಯ ಮೇಲೆ ದೊಡ್ಡದೊಂದು ಪಾತ್ರೆ ಕುದಿಯುತ್ತಿತ್ತು. ಅಡಿಗೆಯ ಕೋಣೆಯ ಹಿಂಬಾಗಿಲಿನಲ್ಲಿ ಒಬ್ಬ ಹುಡುಗ ಕೂತಿದ್ದು ; ಆತ ಮೇಣಬತ್ತಿಗಳನ್ನು ಸಜ್ಜು ಮಾಡುತ್ತಿದ್ದನು.

ಕಣಿಕದ ಮುದ್ದೆಯನ್ನು ಒತ್ತುತ್ತಿರುವಾಗ ಕ್ರೀಡಲ್ ಕಿಟಿಕಿಯ ಮುಂದಿನಿಂದ ಮೆಲಬರಿ ಅವನ ಹಿಂದೆ ಶ್ರೀಮತಿ ಮೆಲಬರಿ ಮತ್ತು ಅವಳ ಬೆನ್ನಿಗೆ ಗ್ರೇಸ ಹಾದು ಹೋದುದನ್ನು ನೋಡಿದನು. ಮೆಲಬರಿಯ ಬಟ್ಟೆ ಉತ್ತಮತೆಯಲ್ಲಿ ಎರಡನೆಯ ತರಗತಿಯದಿತ್ತು. ಅವನ ಹೆಂಡತಿಯದು ಉತ್ತಮ ರೇಶಿಮೆಯದಿತ್ತು. ಗ್ರೇಸಳು ಅಂದು ಚಾರ್ಮಂದಳಲ್ಲಿಗೆ ಭೆಟ್ಟಿಕೊಟ್ಟಾಗ ತೊಟ್ಟ, ಸದ್ಯವೇ ಯುರೋಪದಿಂದ ತಂದ ಹೊಚ್ಚ ಹೊಸ ಮಾದರಿಯ ಅಂಗಿ ಧರಿಸಿದ್ದಳು. ಮೂವರ ಕಣ್ಣುಗಳೂ ಕಿಡಕಿಯಲ್ಲಿಯ ಚಟುವಟಿಕೆಗಳತ್ತ ಸೆಳೆಯಲ್ಪಟ್ಟವು. ಆ ಬೆಳಕು ಒಳಗಿನ ಈ ಕೆಲಸಗಾರರ ಮೇಲೂ ಅವರ ಕೈಯ ಪಾತ್ರೆಗಳ ಮೇಲೂ ಹೊಳಪು ಚೆಲ್ಲಿತ್ತು.

‘ ಅಯ್ಯೋ ! ದೇವರೇ ! ಅವರು ಬಂದೇ ಬಿಟ್ಟರೋ, ಈವಾಗ ?’ ಕ್ರೀಡಲ್ ಅಂದನು.

‘ ಛೇ. ಇಲ್ಲ — ಹೇಯ್.’ ಜೈಲ್ಸ ತಬ್ಬಿಬ್ಬಾಗಿ ತಿರುಗಿ ನೋಡಿದನು.

ಈಗ ಬೇರೆ ಉಪಾಯವೇ ಉಳಿಯಲಿಲ್ಲ. ಜೈಲ್ಸ ಲಗುಬಗೆಯಿಂದ ಶರ್ಟಿನ ತೋಳುಗಳನ್ನು ಕೆಳಗೆ ಸರಿಸಿ ಅತಿಥಿ ಅಭ್ಯಾಗತರ ಸ್ವಾಗತಕ್ಕಾಗಿ ಬಾಗಿಲಿಗೆ ಹೋದನು.

'ಪ್ರಿಯ ಮಿತ್ರನೆ, ನನಗೆ ಅನಿಸುತ್ತದೆ — ನಾವು ವೇಳೆಯ ಬಗೆಗೆ ತಪ್ಪು ಮಾಡಿದ್ದೇವೆ'. ಮರದ ವ್ಯಾಪಾರಿಯ ಹೆಂಡತಿಯು ತುಸು ಕಳವಳದಿಂದ ಮೋರೆ ಉದ್ದ ಮಾಡುತ್ತ ಅಂದಳು.

'ಓ, ಹಾಗೇನಿಲ್ಲ. ಅಷ್ಟೇನು ವ್ಯತ್ಯಾಸವಾಗಿಲ್ಲ. ನೀವು ಒಳಗೆ ಬನ್ನಿ — ಬರಬೇಕೆಂದು ನನ್ನ ಆಸೆ.'

'ಆದರೆ ಇದು ಕೇವಲ ಅದ್ಧೂರಿ ಆಯಿತು.' ಮೆಲಬರಿಯು ಸುತ್ತಲೂ ಕಣ್ಣು ಹಾಯಿಸುತ್ತ ತನ್ನ ಕೋಲಿನಿಂದ ಅಲ್ಲಿ ಹಿಂಬದಿಗೆಲ್ಲ ಹರಡಿಬಿದ್ದ ಭಕ್ಷ್ಯ ಭೋಜ್ಯಗಳ ಸಾಮಾನುಗಳತ್ತ ಕಾಣಿಸಿ ನುಡಿದನು.

'ಅದು ಹೌದು' ಜೈಲ್ಸ ಅಂದನು.

'ಇಲ್ಲೊಂದು ದೊಡ್ಡ ಮೇಜವಾನಿಯೇ ಆಯಿತು. ಇಷ್ಟೆಲ್ಲ ಸಮಾರಾಧನೆಯ ತಯಾರಿಯ ಜತೆಗೆ ಹಿರಿಯ ಹಿಂಟೋಕಿನಿಂದ ಬ್ಯಾಂಡು ವಾದ್ಯ ಮತ್ತು ನರ್ತನ ಕಾರ್ಯ —'

'ನಾನು ಮೂವರಿಗೆ ಹೇಳಿ ಬಂದಿದ್ದೇನೆ. ಅವರು ಬೇರೆ ಕೆಲಸವಿಲ್ಲದಿದ್ದರೆ ಬರಬಹುದು.' ಜೈಲ್ಸ ವಿನಯದಿಂದ ಒಪ್ಪಿಕೊಂಡನು.

'ಅರೆ, ಮೊದಲೆ ನಮಗೇಕೆ ಹೇಳಲಿಲ್ಲ ಇದು ಹೀಗೆ ದೊಡ್ಡ ಹಬ್ಬವೇ ಆಗು ವುದಿತ್ತೆಂದು? ಮುಂದಿ ಬಾಯಿಬಿಟ್ಟು ಹೇಳದಿದ್ದರೆ ನನಗೆ ಹೇಗೆ ಗೊತ್ತಾಗಬೇಕು? ಈವಾಗ ನಾವು ಒಳಗೆ ಬರುವುದೋ ಅಥವಾ ಮನೆಗೆ ಹೋಗಿ ಒಂದೆರಡು ತಾಸು ಕಳೆದು ಆ ಮೇಲೆ ಬರಬಹುದೋ?'

'ಛೇ, ಛೇ. ನೀವು ಬಂದವರು ಇಲ್ಲಿಯೇ ಉಳಿಯಬೇಕೆಂದು ನನ್ನ ಇಚ್ಛೆ, ನಿಮಗೆ ಅದರಿಂದೇನೂ ತೊಂದರೆ ಆಗದಿದ್ದರೆ. ಗಳಿಗೆ ಹೊತ್ತಿನಲ್ಲಿ ನಾನು ಎಲ್ಲ ಸರಿ ಪಡಿಸುವೆನು. ನಾನು ಹೀಗೆ ಹಿಂದೆ ಬೀಳಬಾರದಿತ್ತು. ಆದರೆ ಈ ಕ್ರೀಡಲ್ ಮುಂದಿ ಎತ್ತು, ತುಂಬ ಸಾವಕಾಶ'.

ಜೈಲ್ಸ ಸ್ವಭಾವತಃ ಸಂಕೋಚ ಪ್ರವೃತ್ತಿಯವನು. ಬಹಳ ಆಡಿ ತೋರಿಸುವವ ನಲ್ಲ. ಆತ ತನ್ನ ಕಳವಳವನ್ನು ಇಷ್ಟು ತೋಡಿಕೊಂಡಿದ್ದೆ ಹೆಚ್ಚು. ಏಕೆಂದರೆ ಅವನಿಗೆ ಅಂಜಿಕೆ. ಮೆಲಬರಿಗಳು ಒಮ್ಮೆ ಮನೆಗೆ ಹಿಂದಿರುಗಿ ಹೋದರೆ ಮುಗಿಯಿತು. ಅವರು ಮತ್ತೆ ಇತ್ತ ಕಡೆ ಹೊರಳುವರಲ್ಲ.

'ಇದು ನಮ್ಮದೇ ತಪ್ಪು. ನಾವೇ ಹೀಗೆ ಇಷ್ಟು ಮುಂದೆ ಮುಂದಾಗಿ ಬರ ಬಾರದಿತ್ತು'. ಮೆಲಬರಿ ತುಸು ಒಗರಾಗಿಯೇ ನುಡಿದನು. 'ನಮ್ಮನ್ನು ಇನ್ನೂ ಈ ನಡುಮನೆಯಲ್ಲಿ ಕೂಡ್ರಿಸಿ ಇಡಬೇಡ. ನಮ್ಮನ್ನು ನಿನ್ನ ಆ ಭಟ್ಟಿಯ ಕೋಣೆಗೆ ಒಯ್ಯು ಮಾರಾಯ. ಹೇಗೂ ನಾವಿಲ್ಲಿ ಬಂದಾಗಿದೆ. ನಾವೂ ನಿನಗೆ ನೆರವಾಗು

ತ್ತೇವೆ. ಹೊಯ್ ಯಜಮಾನಿ, ನಿನ್ನ ತೊಡಪೆಲ್ಲ ತೆಗೆದಿಟ್ಟು ಇವನಿಗೆ ರೊಟ್ಟಿ ಸುಡು ವಲ್ಲಿ ನೆರವಾಗು. ಇಲ್ಲವಾದರೆ ಪಾಪ, ಈ ಒಂಟಿ ಗುಲಾಮು ರಾತ್ರೆ ಇಡಿ ಕೆಲಸ ಮಾಡಿ ದರೂ ಊಟ ಸಿದ್ಧವಾಗಲಾರದು. ನಾನು ಒಲೆಯನ್ನು ಕಾಯಿಸಿಕೊಡುತ್ತೇನೆ. ನೀನು ಹೋಗಿ ಆ ಬಾತುಕೋಳಿಗಳ ಮಾಂಸವನ್ನು ಹೊರೆದು ಸಿದ್ಧಮಾಡು, ನಡೆ' ಮೆಲಬರಿಯ ಕಣ್ಣು ನಿರ್ದಯ ವಿಮರ್ಶೆಯಲ್ಲಿ ತೀರ ಆಚೆಗೆ ಆ ಅಸಡ್ಡಾಳವಾಗಿ ಕಟ್ಟಿದ ಮನೆಯ ಒಳ ಮೂಲೆಯಲ್ಲಿ ತೂಗಿಟ್ಟ ಈ ಹಕ್ಕಿಗಳನ್ನು ಕಂಡು ಬಿಟ್ಟಿದ್ದುವು !

'ಹಾಗಾದರೆ ನಾನೂ ನಂಜಿಕೊಳ್ಳುವ ಮೇಲಾರಗಳನ್ನು ಮಾಡಿ ಮುಗಿಸುತ್ತೇನೆ' ಗ್ರೇಸ ಉಲ್ಲಾಸದಿಂದ ಎಂದಳು.

'ಅದೇನೂ ನಾನರಿಯೆ' ಅವಳ ತಂದೆ ಅಂದನು. 'ಅಂಥ ಕೆಲಸ ನಿನ್ನ ಮಲತಾಯಿಗೆ, ನನಗೆ ವೈಯುಂಡಂತೆ ನಿನ್ನ ಕೈಗೆ ಒಗ್ಗುವ ಮಾತಲ್ಲ !'

'ಹೌದು, ನಿಜವೇ. ನಿನಗೆ ಕೆಲಸಕ್ಕೆ ಹಚ್ಚಲಾರೆ, ಗ್ರೇಸ', ಜೈಲ್ಸ ವ್ಯಥೆ ಯಿಂದಲೇ ಆಡಿದನು.

'ಅಡ್ಡಿ ಇಲ್ಲ. ನಾನು ಮಾಡುತ್ತೇನೆ' ಶ್ರೀಮತಿ ಮೆಲಬರಿಯು ತನ್ನ ರೇಶಿಮೆಯ ಮೇಲಂಗಿ ಕಳಚಿ ಗೂಟಕ್ಕೆ ತೂಗಿಟ್ಟು, ಗೌನಿನ ತೋಳುಗಳನ್ನು ಮೇಲಕ್ಕೆ ಏರಿಸಿ ಜೈಲ್ಸನು ಸುತ್ತುಕೊಂಡ ಅಪ್ರಾನ್ ಬಟ್ಟೆಯನ್ನು ತೆಗೆಯಿಸಿ ತಾನು ತೊಟ್ಟು ಕೊಂಡು ಕೆಲಸಕ್ಕೆ ಮುಂದಾದಳು.

ಆದ್ದರಿಂದ ಗ್ರೇಸಳು, ತಂದೆ ತಾಯಿ ಅಡಿಗೆಯ ತಯಾರಿಗೆ ತೊಡಗಿದಾಗ ಅವರ ಹಿಂದೆ ಓಡಾಡಿದಳು. ವಿಂಟರಬೋರ್ನನಿಗೆ ಅವಳ ಕಡೆಗೆ ನೋಡಿದಾಗಲೆಲ್ಲ ಅವಳ ಕಣ್ಣಿನಲ್ಲಿ ಒಂದು ಮರುಕದ ಛಾಯೆ ಕಾಣುತ್ತಿತ್ತು. ಆ ಮರುಕ ಅವನ ಗೃಹಕೃತ್ಯಗಳ ವ್ಯವಸ್ಥೆಯ ಕುರಿತಾಗಿತ್ತು. ಅವಳು ಸರಿಯಾಗಿ ತಿರಸ್ಕಾರ ತೋರಿಸುವುದಕ್ಕಿಂತ ಈ ಮರುಕವು ಅವನಿಗೆ ಹೆಚ್ಚು ಸಿಗ್ಗನ್ನೂ ಕುಗ್ಗನ್ನೂ ಉಂಟುಮಾಡಿತು.

ಅವರು ಅಲ್ಲಿಯ ಹೊಸ ಉಪಕರಣ-ಉಪಸ್ಕರಗಳ ತೊಡಕಿನಲ್ಲಿ ಸಿಕ್ಕಿ ಪೇಚಾಡುತ್ತಿರುವಾಗ ಕ್ರೀಡಲ್ ಜೈಲ್ಸನಿಗೆ ಹೊರಗೆ ನೀರಿನ ಪಂಪಿನ ಬಳಿಯಲ್ಲಿ ಸಂಧಿಸಿ ದನು. ಅವನು ತನ್ನ ತರುಣ ಒಡೆಯನಲ್ಲಿ ತೋಡಿಕೊಂಡನು. 'ಇದೊಂದು ಪೀಕಲಾಟವೇ ನೋಡಿ ಒಡೆಯಾ ! ಇವರು ಇಷ್ಟು ಬೇಗ ಬರುವರೆಂದು ಯಾರು ತಿಳಿದಿದ್ದರು ?'

ಅದಕ್ಕೆ ಜೈಲ್ಸ ಕಟುವಾಗಿಯೂ ಶಾಂತನಾಗಿದ್ದ. ಅವನ ಮುಖಭಾವ ಅವನಿಗೆ ಅನಿಸಿದ ಸಂದೇಹಗಳನ್ನು ಸೂಚಿಸುತ್ತಿತ್ತು. 'ನೀನು ಹರಗಿಯದೇಟುಗಳನ್ನು ತಂದು ಸಿದ್ಧಮಾಡಿದಿಯೋ ?', ಆತ ಕ್ರೀಡಲ್‌ನಿಗೆ ಪ್ರಶ್ನೆ ಹಾಕಿದನು.

'ನನಗೆ ಅದೊಂದು ಯಾರು ಮಾಡಿದರು ಸರಿ ಆಗದು. ಎಂಥ ಬೆಳ್ಳಿ ಬಂಗಾರ ಕೊಟ್ಟರೂ ನಾನು ಅದನ್ನು ಸಹಿಸೆ. ಆ ದೇಟುಗಳನ್ನು ಚೆನ್ನಾಗಿ ತೊಳೆದು ಚೊಕ್ಕ ಮಾಡಬೇಕು. ಕೆಲಸ ಯಾರೇ ಮಾಡಲಿ !' ಕ್ರೀಡಲ್ ದೂರಿಕೊಂಡನು.

‘ ಸರಿ, ಸರಿ. ನಾನು ಅದನ್ನು ನೋಡಿಕೊಳ್ಳುತ್ತೇನೆ. ನೀನು ಒಳಗೆ ಹೋಗಿ ಅವರಿಗೆಲ್ಲ ಅನುಕೂಲ ಮಾಡಿಕೊಡು, ನಡೆ ’.

ಹೀಗೆಂದು ಜೈಲ್ಸ ಹಿತ್ತಲಿಗೆ ಓಡಿದನು. ಶೀಘ್ರವೆ ಹರಗಿಯ ದೇಟುಗಳನ್ನು ಕಡಿದು ತಂದು ಕ್ರೀಡಲ್‌ನ ಕಡೆಗೆ ಒಗೆದನು. ಕ್ರೀಡಲ್ ಇನ್ನೂ ವ್ಯಗ್ರಭಾವದಲ್ಲಿಯೇ ಇದ್ದನು. ಆತ ಅಂದ, ‘ ನೀವು ಮದುವೆ ಆಗಿದ್ದರೆ, ಒಡೆಯರಾ, ಈ ಒಂದು ಸಂಕಟ ನಮಗೆ ಬರುತ್ತಿದ್ದಿಲ್ಲ ’.

ಕೊನೆಗೊಮ್ಮೆ ಎಲ್ಲ ಸಜ್ಜಾಯಿತು. ರಾತ್ರಿಯ ಊಟದ ಏರ್ಪಾಡು ಇನ್ನೂ ಕೆಲವು ಹೊತ್ತಿನಲ್ಲಿ ಆಗುವಂತಾಯಿತು. ಜೈಲ್ಸ ಮತ್ತು ಅವನು ಗೆಳೆಯರು ನಡುಮನೆ ಯನ್ನು ಹೊಕ್ಕರು ಮೆಲಬರಿ ಪರಿವಾರವೂ ಅಡಿಗೆಯ ಪರಿಚಾರಿಕೆಯನ್ನು ಬಿಟ್ಟು ತಿರುಗಿ ಅತಿಥಿಗಳ ಆವಿರ್ಭಾವವನ್ನು ವಹಿಸಿದರು. ಈ ನಡುಮನೆ ಭಟ್ಟಿಯ ಕೋಣೆ ಯಷ್ಟು ಬೆಚ್ಚಗಿದ್ದಿಲ್ಲ. ಇತರ ಅತಿಥಿಗಳೂ ಈಗ ಬಂದರು. ಅವರೊಂದಿಗೆ ಕೊಟ್ರೀ ಗೌಡನೂ, ತರಣಿಗೆಲಸದ ಕಮ್ಮಾರನೂ ಬಂದಿದ್ದರು. ಚಹಾಪಾನದ ವಿಧಿಯು ಚೆನ್ನಾಗಿಯೇ ಸಾಂಗ್ಯವಾಯಿತು.

ಗ್ರೇಸ ಬಂದದ್ದೆಲ್ಲ ಬರಲಿ ಎಂಬ ವೃತ್ತಿಯಿಂದ ವಿಂಟರಬೋರ್ನನ ಬದುಕಿನ ಬಗೆಯ ಯಾವ ಕುಂದುಕೊರತೆಗಳಿಗೂ ಕಣ್ಣುಮುಚ್ಚಿಕೊಂಡಂತೆ ನಡೆದಳು. ಇದ್ದ ದ್ದನ್ನು ಆದಷ್ಟು ಚೆನ್ನಾಗಿ ಭಾವಿಸುವ ಅವಳು ಭೂಮಿಕೆಯನ್ನು ಇಷ್ಟು ಸತತ ಮತ್ತು ಸಮರೂಪದಲ್ಲಿ ನಿರ್ವಹಿಸಿದಳು. ಆಕೆ ತನ್ನಲ್ಲಿ ತನಗೂ ಗೊತ್ತಿಲ್ಲದಷ್ಟು ಹೆಚ್ಚು ಕುಂದು ಕೊರತೆಗಳನ್ನು ಅವಳು ಗಮನಿಸಿರಬಹುದೇ ಎಂದು ಅವನು ಶಂಕೆಪಟ್ಟನು. ಮನೆಗೆ ಬಂದಂದಿನಿಂದ ಅವಳ ಮೋರೆಯಲ್ಲಿ ಹೊಳೆದ ಹತ್ತಿಕ್ಕಿದ ಮರುಕವು ಅವನಿಗೆ ಈ ಭಾವವನ್ನೇ ಸ್ಪಷ್ಟಮಾಡಿತು.

ಅವರಿಬ್ಬರೂ ತುಸು ಬದಿಗೆ ದೂರ ಒಟ್ಟಿಗಿದ್ದಾಗ ಅವನು ಕೇಳಿದನು. ‘ ಈ ಅಸ್ತವ್ಯಸ್ತ ಮನೆವಾರ್ತೆಯ ವ್ಯವಸ್ಥೆಯು ನಿನಗೆ ಇತ್ತೀಚೆಗೆ ರೂಢಿ ಇಲ್ಲ, ತಪ್ಪಿದೆ ಅಲ್ಲವೇ ? ’

‘ ಇಲ್ಲ, ಆದರೆ ನನಗೆ ಇದು ಸೇರುತ್ತದೆ. ಇದರಿಂದ ನನಗೆ ಒಂದು ಸೊಗಸಾದ ನೆನಪು ಉಳಿಯುವಂತಾಗುತ್ತದೆ — ಈ ನನ್ನ ಮುದ್ದು ಹಿಂಟೋಕ ಹಳ್ಳಿ ಹಿಂದೆ ಇದ್ದ ಹಾಗೆಯೇ ಇದೆ. ಏನೂ ಬದಲಾಗಲಿಲ್ಲ. ಆ ಎಣ್ಣೆ — ಅಷ್ಟೊಂದು ಚೆನ್ನಾಗಿಲ್ಲ. ಉಳಿದದ್ದೆಲ್ಲ ಸೊಗಸಾಗಿದೆ ’.

‘ ಆ ಎಣ್ಣೆ ?’

‘ ಆ ಕುರ್ಚಿಗಳ ಮೇಲೆ ಬಿದ್ದದ್ದು. ಅದು ಬಟ್ಟೆಗೆ ಹಿಡಿಯುತ್ತದೆ. ಆದರೂ ಪರಿವೆ ಇಲ್ಲ. ನನ್ನ ಈ ಪೋಷಾಕು ಹೊಸತಲ್ಲ !’

ಜೈಲ್ಸ ನೋಡಿದ — ಮನೆಗೆಲಸದ ಹುಡುಗ ಎಲ್ಲ ಲಕಲಕ ಹೊಳೆಯುವಂತೆ ಮಾಡಲಿಕ್ಕೆ ಕುರ್ಚಿಗಳಿಗೆಲ್ಲ ಏನೋ ನಯದ ಪಾಲೀಶ್ ಬಳಿದಿಟ್ಟಿದ್ದ ! ಕನ್ನಡಿಯಂತೆ

ಥಳಥಳಿಸಬೇಕೆಂದು ಅದನ್ನು ಉಜ್ಜದೆ ಹಾಗೆಯೇ ಬಿಟ್ಟಿದ್ದ ! ಜೈಲ್ಸ ಕ್ಷಮೆ ಕೋರಿದ ; ಈ ಹುಡುಗನನ್ನು ಛೀ ಹಾಕಿದ. ಆದರೂ ಅವನಿಗೆ ಅನಿಸಿತು, ದೈವವೆಲ್ಲ ಅವನಿಗೆ ಪ್ರತಿಕೂಲವೇ ಆಗಿದೆ !

೧೦

ರಾತ್ರಿಯ ಊಟದ ಸಮಯ ಸಮೀಪಿಸಿತು, ಮತ್ತು ಅದರೊಂದಿಗೇ ಬಿಸಿಬಿಸಿ ಬೆಂದ ಮಾಂಸದ ಸ್ತಬಕಗಳು. ಹಿಮದಂತೆ ಬೆಳ್ಳಗಾದ ಚಪ್ಪರು ಹೊದ್ದಿಟ್ಟ ಮೇಜಿನ ಮೇಲೆ ರಾಬರ್ಟ್ ಕ್ರೀಡಲ್ ಮತ್ತು ಕೆಲಸದ ಹುಡುಗ ಬಡಿಸಿದ ಪ್ಲೇಟುಗಳನ್ನು ತರ ಒಯ್ಯಲಿಕ್ಕೆ ಸುಟಿಯಾಗಿ ಓಡಾಡಿದರು. ಆ ತುಂಟ ಹುಡುಗನು ಮುದಿ ಕ್ರೀಡಲ್‌ನ ಬುದ್ಧಿವಂತಿಕೆಯನ್ನು ಧಾರಾಳವಾಗಿ ಪ್ರಶಂಸಿಸುತ್ತ ಅವನನ್ನು ತನ್ನದೇ ಆದ ರೀತಿಯಲ್ಲಿ ಹೀಯಾಳಿಸುತ್ತಿದ್ದನು.

ಇತ್ತ ಜೈಲ್ಸ ಊಟದ ಮೇಜಿಗೆ ಅರೆಮರವಿನಲ್ಲಿಯೇ ಅಧ್ಯಕ್ಷತೆ ವಹಿಸಿದ್ದನು. ತನ್ನ ಪ್ರೀತಿಯ ಆರಾಧನೆಯನ್ನು ಮುಂದುವರಿಸಲಿಕ್ಕೆ ಅವನಿಗೆ ಆರಂಭದಲ್ಲಿಯೇ ಅನುಭವಿಸಬೇಕಾಗಿ ಬಂದ ಅಪಯಶಸ್ಸು ಮರೆಯುವುದೆ ಬಿಗಿಯಾಗಿತ್ತು. ತಾನು ಏನು ಮಾಡುತ್ತಿದ್ದೇನೆ. ಏನು ತಿನ್ನುತ್ತಿದ್ದೇನೆ ಇದರ ಪ್ರಶ್ನೆಯೇ ಅವನಿಗೆ ಇದ್ದಿಲ್ಲವೇನೋ. ಆತ ಬರೆ ಬ್ರೆಡ್ ಬಾಯಲ್ಲಿ ತುರುಕಿಕೊಳ್ಳುತ್ತಿದ್ದ. ಬೇರೆ ಏನೂ ಮುಟ್ಟಲಿಲ್ಲ.

ಅಷ್ಟರಲ್ಲಿ ಕ್ರೀಡಲ್ ವಿಶೇಷವಾಗಿ ತಯಾರಿಸಿದ 'ಸ್ಟ್ಯೂ' ಹುಳಿಯನ್ನು ತಂದು ಅದರ ಪಾತ್ರೆಯನ್ನೆ ಬಟ್ಟಲುಗಳಲ್ಲಿ ಬರಿದು ಮಾಡಲು, ಎತ್ತಿ ಸುರುವ ತೊಡಗಿದನು. 'ಸಭ್ಯ ಸ್ತ್ರೀ ಪುರುಷರೇ ! ದಯಮಾಡಿ ಹಿಂದೆ ಸರಿಯಿರಿ.' ಆತ ಶ್ರೀಮದ್ಗಾಂಭೀರ್ಯದಿಂದ ಕೂಗಹತ್ತಿದನು. ಏಕೆಂದರೆ ಆ 'ಸ್ಟ್ಯೂ'ದ ರಸವೆಲ್ಲ ಪ್ಲೇಟುಗಳಲ್ಲಿ ಬೀಳುವಾಗ ಅತ್ತಿತ್ತ ಜೋರಾಗಿ ಸೀರುತ್ತಿತ್ತು !

ಗ್ರೇಸ ಒಮ್ಮೆಲೇ ಹಾರಿಬಿದ್ದಳು. ಕಣ್ಣು ಪಿಳುಕಿಸಿ, ಮೋರೆಗೆ ಕರವಸ್ತ್ರವನ್ನು ಎತ್ತಿಟ್ಟಳು.

ಜೈಲ್ಸ ಹಾರಿ ಎದ್ದು ನಿಂತು ಗದರಿಸಿದನು 'ಅಯ್ಯೋ ದೇವರೇ ! ಇದೇನು ಮಾಡಿದೆ, ಕ್ರೀಡಲ್ ?'

'ಇವರಾರೂ ಇಲ್ಲಿ ಇಲ್ಲದಿದ್ದಾಗ ನಾನು ಬಡಿಸುವುದೇ ಹೀಗೆ, ಸ್ವಾಮಿ !'— ಆತ ಜನಾಂತಿಕವಾಗಿ (ನಾಟಕದಲ್ಲಿಯಂತೆ) 'ಪಿಸುಗುಟ್ಟಿ'ದನು. ಆದರೆ ಈ ಪಿಸುಗುಟ್ಟು ಅಲ್ಲಿ ಕೂತ ಮಂಡಳಿಗೆ ಕೇಳಿಸಿತು.'

'ಸರಿ, ಆದರೆ', ಜೈಲ್ಸ ಉತ್ತರಿಸಿದನು. 'ಗ್ರೇಸಳ ಹತ್ತಿರ ಹೋಗಿ ಅವಳ ಕಣ್ಣಿನಲ್ಲಿ ಆ ರಸ ಚಿಮ್ಮಿರಬಹುದೇ ?'— ಎಂದು ವಿಚಾರಿಸಿದನು.

'ಓ ಇಲ್ಲ. ನನ್ನ ಗಲ್ಲದ ಮೇಲೆ ಹಾರಿತು ಇಷ್ಟೇ' ಆಕೆ ಅಂದಳು.

ಅದಕ್ಕೆ ಗ್ರೇಸಳು ಕೆನ್ನೆ ತುಂಬ ಕೆಂಪಾಗಿ ನಾಚಿದಳು.

ಮರದ ವ್ಯಾಪಾರಿ ಲಗುಬಗೆಯಿಂದ ಅಂದನು, 'ಓ, ಅದೇನು ಮಹಾ. ಇಂಥ ಚಿಕ್ಕಪುಟ್ಟ ತೊಂದರೆಗಳನ್ನು ಅವಳು ತಾಳಲು ಕಲಿಯಬೇಕು.' ಆದರೂ ಅವನ ಮುಖಭಾವ ಹೀಗೆ ಸೂಚಿಸುವಂತಿತ್ತು. 'ಇದೆಲ್ಲ ನಾನು ಮೊದಲಿಗೇ ಊಹಿಸ ಬೇಕಿತ್ತು. ಇಲ್ಲಿ ಅವಳನ್ನು ತರಲೇಬಾರದಿತ್ತು!'

ಜೈಲ್ಸನಿಗೂ ಹಾಗೆಯೇ ಅನಿಸುತ್ತಿತ್ತು. ಆ ಔತಣದ ಅಂದಗೇಡಿಯಾದ ಆರಂಭದಿಂದಲೂ ಗ್ರೇಸಳು ಅಲ್ಲಿ ಇರಲೇ ಬಾರದಿತ್ತೆಂದೇ ಅವನಿಗೆ ಅನಿಸಿತ್ತು. ಅದರಲ್ಲಿಯೂ ಗೌಡಕೊಟ್ರಿ ಕಮ್ಮಾರರಂಥವರನ್ನು ಬೇರೆ ಕರೆಯಕೂಡದಿತ್ತೆಂದೂ ಅನಿಸಿತು. ಉಳಿದ ಗೆಳೆಯರು ಬರದಿದ್ದರೆ ತನ್ನ ಮನೆ ತುಂಬಿಕಾಣಲಿಕ್ಕಿಲ್ಲವೆಂದು ಹೆದರಿ ಆತ ಅವರನ್ನು ಕೊರತೆಯಾಗದಂತೆ ಕರೆದಿದ್ದನು. ಅವನ ಮನಸ್ಸಿನ ಕಣ್ಣಲ್ಲಿ, ಈ ಘಟನೆ ನಡೆಯುವ ಮುಂಚೆ ಆ ಮಂದಿ ಈ ದೃಶ್ಯದ ಹಿನ್ನೆಲೆಯವರೋ ಹೊರ ಸುತ್ತಿನವರೋ ಅನಿಸಿದ್ದರು. ಆದರೆ ಈಗ ನೋಡಿದರೆ ನಿಜವಾಗಿಯೂ ಔತಣದ ಅತಿಥಿಗಳಲ್ಲಿ ಅವರೇ ಪ್ರಮುಖರೆಂಬಂತೆ ಕಾಣುತ್ತಿದ್ದರು!

ಊಟ ಮುಗಿದ ಮೇಲೆ ಅವರೆಲ್ಲ ಇಸ್ಪೀಟು ಆಟಕ್ಕೆ ಕೂತರು. ಆಗಲೂ ಗೌಡ ಕೊಟ್ರಿ ಮತ್ತು ಆ ಕಮ್ಮಾರ ಇಬ್ಬರೂ ಹೊಸ ಇಸ್ಪೇಟ ಪಟ್ಟನ್ನು ತಾವೇ ಎತ್ತಿಕೊಂಡು ತಮ್ಮ ಎಂದೂ ಮುಗಿಯದ ಪ್ರೀತಿಯ ಆಟವೊಂದನ್ನು ಆಡಲಿಕ್ಕೆ ಎದ್ದು ಹೋದರು. ಅವರಿಬ್ಬರು ಕೂಡಿದಲ್ಲೆಲ್ಲ ಅದೇ ಆಟ ಆಡುತ್ತಿದ್ದರು. ಅದಕ್ಕೆ ಲೆಕ್ಕವಿಡಲು ಒಂದು ಖಡುವಿನ ಹೆಟ್ಟೆ ಮತ್ತು ಒಂದು ಉರಿಯುವ ಮೇಣಬತ್ತಿ ಎರಡನ್ನೂ ಹಿಡಿದು ಕೊಂಡು ದೂರದ ಮೂಲೆಯಲ್ಲಿ ಬೇರೊಂದು ಮೇಜಿಗೆ ಹೋಗಿ ಕೂತರು—ಏನೋ ಗುಟ್ಟಾದ ಗಂಭೀರ ವಿಚಾರವಿನಿಮಯಕ್ಕೋ ಎಂಬಂತೆ. ಉಳಿದವರೆಲ್ಲ ಹಳೆಯ ಪಟ್ಟನ್ನೆ ಹಿಡಿದುಕೊಂಡು ಎಲೆ ಹಂಚಿದರು. ಜೈಲ್ಸನ ಅಜ್ಜಿಯ ಕಾಲದಿಂದಲೂ ಅವನ ಮೇಜಿನ ಕಣದಲ್ಲಿ ಬಿದ್ದುಳಿದ ಪಟ್ಟು! ಒಂದೊಂದು ಎಲೆಯ ಬೆನ್ನಿಗೂ ನಡುವೆ ದೊಡ್ಡದೊಂದು ಕಲೆ — ತಲೆಮಾರುಗಳು, ಒದ್ದೆ ಮಾಸಿದ ಹೆಬ್ಬೆರಳುಗಳು ಮಾಂಸವೆಲ್ಲ ಕರಗಿ ತಮ್ಮ ಗೋರಿ ಕಲ್ಲುಗಳ ಕೆಳಗೆ ಹೂತು ಬಿದ್ದಿವೆ. ರಾಜ — ರಾಣಿಯರೂ ಪದಚ್ಯುತರಾಗಿ ದಾರಿದ್ರ್ಯದಲ್ಲಿ ತೊಳಲಾಡುತ್ತ ತಮ್ಮ ಅರಸುಠೀವಿಯನ್ನು ಕೊಳಕು ಕೇರಿಯಲ್ಲಿ ಅಡಗಿಸಿ ಬದುಕುತ್ತಿರುವ ಚರ್ಯೆ ಹೊತ್ತಿದ್ದರು.

ಆಗಾಗ್ಗೆ ಇವರು ಮೆಲುದನಿಯಲ್ಲಿ ಆಟದ ಕೈಗಳ ಕುರಿತು ಮಾತಾಡುವಾಗ ಆಚೆಮೂಲೆಯಿಂದ ಕೊಟ್ರಿಯ ಮತ್ತು ಕಮ್ಮಾರನ ಕಿರುಚುದನಿಯ ಹಾಡಿನ ಸೊಲ್ಲು ಕಿವಿ ಸೀಳುವಂತೆ ಬರುತ್ತಿತ್ತು.

'ನಿನ್ನ ಕೂಡ ಕಟ್ಟುವೆ ನಾನೊಂದು ಒಡ್ಡ.

ಒಟ್ಟು ಮೂವತ್ತೆರಡು ಕೊಡಬೇಕು ದುಡ್ಡ'. ಇದರ ಬೆನ್ನಿಗೆ ಒಂದು

ಹರ್ಷೋದ್ಗಾರದ ಕೂಗು. ಆ ಮೇಲೆ ಮತ್ತೆ ಪಟ್ಟು ಮುರಿದು ಎಲೆ ಹಂಚುವಿಕೆ. ಮತ್ತೆ ಕರ್ಣಕಠೋರ ಹಾಡು.

ವಿಂಟರಬೋರ್ನ ತನ್ನ ಅಳುಕನ್ನು ಆಡಿ ಕಾಣಿಸಿದ. ಮೆಲಬರಿ ಮತ್ತು ಅವನ ಕುಟುಂಬ ಈ ಔತಣದಿಂದ ಸಂತೋಷ ಪಡೆದಂತಿಲ್ಲ. ಆದರೆ ಆ ಮರದ ವ್ಯಾಪಾರಿ ದೊಡ್ಡಸ್ತಿಕೆಯ ಔದಾರ್ಯ ಬೀರುತ್ತ ಅಂದಿನ ಸಂಜೆಯ ಆ ಸಂತೋಷ ಕೂಟವನ್ನು ಹೊಗಳಿದ, ಆದರೂ ಹೊಗಳಿಕೆಯ ಮಾತುಗಳಲ್ಲಿಯ ಬಿಗುಮಾನದಲ್ಲಿಯೇ ಅವನ ಭಾವನೆಗಳ ಹೊಳಪು ಕಾಣುವಂತಿತ್ತು.

'ಸರಿ, ಸರಿ. ಬಹಳ ಚೆನ್ನಾಗಿ ಆಯಿತು. ಭರ್ಜರಿ ಔತಣ. ಎಂಥ ಚೆಂದ ಗ್ಲಾಸುಗಳಿವು. ನಿನ್ನ ಮನೆಯಲ್ಲಿ ಇಷ್ಟು ಚೆಂದ ಗಾಜಿನ ಲೋಟಾಗಳಿರುವವೆಂದು ನಾನು ತಿಳಿದಿರಲಿಲ್ಲ. ಇಗೋ ಲೂಸೀ, (ಹೆಂಡತಿಗೆ) ನಾವೂ ಇಂಥ ಕೆಲವು ಗ್ಲಾಸು ಕೊಂಡುಕೊಳ್ಳಬೇಕು ನೋಡು,' ಮುಂದೆ, ಇಸ್ಪೀಟ ಆಟ ಮುಗಿದು ವಿಂಟರಬೋರ್ನ ಮೆಲಬರಿಯೊಂದಿಗೆ ಅಗ್ಗಿಷ್ಟಿಕೆಯ ಮುಂದೆ ಮಾತಾಡುತ್ತಿರುವಾಗ, ತಾನೇ ಮನೆಯ ಯಜಮಾನನೆಂಬ ರೀತಿಯಲ್ಲಿ ಒಲೆಯಟ್ಟದ ಮಂಚಿಕೆಗೆ ಬೆನ್ನು ಆನಿಸಿ ನಿಂತು ಮೆಲಬರಿ, ಜೈಲ್ಸನೊಂದು ಪರೀಕ್ಷೆಯ ವಸ್ತುವೇ ಹೊರತು ಬುದ್ಧಿ ಭಾವನೆಗಳುಳ್ಳ ವ್ಯಕ್ತಿಯಲ್ಲ ವೆಂಬಂತೆ ಅವನನ್ನು ಚಿಕಿತ್ಸಕ ಕಣ್ಣಿನಿಂದ ನೋಡುತ್ತ 'ಎಂಥ ಅರ್ಭಾಟದ ಕೋಟು ತೊಟ್ಟಿರುವಿ ನೀನು ಜೈಲ್ಸ ! ಇಂಥ ಕೋಟು ನನಗೂ ಸಿಗಲಿಲ್ಲ. ನನಗಿಂತ ನೀನು ಚೆನ್ನಾಗಿ ಬಟ್ಟೆ ತೊಡುವಿ ನೋಡು' ಅಂದನು.

ರಾತ್ರಿಯ ಊಟದ ಉಪಚಾರ ಮುಗಿದ ಮೇಲೆ ನೃತ್ಯ ನಡೆಯಿತು. ಹಿರಿಯ ಹಿಂಟೋಕದಿಂದ ಬ್ಯಾಂಡ್ ವಾದಕರು ತುಸು ಹಿಂದೆಯೇ ಬಂದು ಮುಟ್ಟಿದರು. ಗ್ರೇಸಳು ಊರು ಬಿಟ್ಟು ಬಹು ಕಾಲವಾಗಿತ್ತು. ಹೊಸ ನೃತ್ಯಗಳನ್ನು ಅನೇಕ ಕಲಿತಿದ್ದಳು. ಆದ್ದರಿಂದ ಹಳ್ಳಿಯ ಕುಣಿತದ ಹಳೆಯ ಹೆಜ್ಜೆಗಳ ರೂಢಿ ತಪ್ಪಿ ಹೋಗಿತ್ತು. ಅದಕ್ಕಾಗಿ ಆಕೆ ನೃತ್ಯದಲ್ಲಿ ಭಾಗವಹಿಸಲಿಲ್ಲ. ಆಗಂತು ಜೈಲ್ಸನಿಗೆ ಅನಿಸಿತು, 'ಎಲ್ಲ ಮುಗಿದೇ ಹೋಯಿತು.'

ಯಾರೋ ಅಪರಿಚಿತ ಹೆಂಗಸೊಬ್ಬಳು ಬಂದು ಗ್ರೇಸಳ ಭವಿಷ್ಯ ಹೇಳುತ್ತೇ ನೆಂದಳು — ಆಡದೆ ಬಿಟ್ಟ ಇಸ್ಪೀಟ ಎಲೆಗಳಿಂದ. ಆಗ ಮೆಲಬರಿ ಉದ್ಗರಿಸಿದ ; 'ಭವಿಷ್ಯ ಹೇಳುವವಳೆ ! ಏನು ಮಣ್ಣು ಹೇಳ್ಯಾಳು ? ಇವಳ ಭವಿಷ್ಯವನ್ನು ವಿಜ್ಞಾನ ಓದಿದವರೇ ಹೇಳಿದ್ದಾರೆ. ಅವರನ್ನು ಏನೆಂದು ಕರೆಯುತ್ತಾರೆ ? ಹಾಂ, ಕಪಾಲ ಲಕ್ಷಣ ಶಾಸ್ತ್ರಜ್ಞರು ! ನೀನೇನು ಅವಳಿಗೆ ಹೊಸತು ಹೇಳಬೇಕಿಲ್ಲ. ಜಾಣರ, ಪಂಡಿತರ ಮಧ್ಯದಲ್ಲಿ ಅವಳು ಇಷ್ಟು ಕಾಲಕಳೆದಿದ್ದಾಳೆ, ನಮ್ಮ ಹಿಂಟೋಕ ಹಳ್ಳಿಗರಲ್ಲಿ ಏನೇ ಕೇಳಿದ್ದರೂ ಅವಳಿಗೆ ಆಶ್ಚರ್ಯವಾಗಲಾರದು.'

ಕೊನೆಗೊಮ್ಮೆ ಅತಿಥಿಗಳು ಅಗಲುವ ಹೊತ್ತು ಬಂದಿತು. ಎಲ್ಲರಿಗೂ ಮುಂಚೆ ಎದ್ದು ಹೊರಟವರು ಮೆಲಬರಿ ಮತ್ತು ಅವನ ಪರಿವಾರ. ಆ ಕೋಣೆಯ ಮೂಲೆಯ

ಇಸ್ಪೀಟ ಆಟಗಾರರು ದೃಢ ನಿರ್ಧಾರದಿಂದ ತಮ್ಮ ಆಟವನ್ನು ಮುಂದರಿಸಿದರು — ಜೈಲ್ಸನ ಮೇಜನ್ನೆಲ್ಲ ಖಡುವಿನ ಗೆರೆ ಗುರುತುಗಳಿಂದ ತುಂಬಿ ಬಿಟ್ಟಿದ್ದರು. ಮೆಲಬರಿಗಳು ಮನೆಗೆ ನಡೆದೆ ಹೋದರು. ಅಂತರ ಚಿಕ್ಕದಿತ್ತು, ರಾತ್ರೆಯೂ ನಿರಭ್ರವಾಗಿತ್ತು.

'ಸರಿ, ಜೈಲ್ಸ ಚೆನ್ನಾಗಿದ್ದಾನೆ. ಒಳ್ಳೆಯ ಮನುಷ್ಯ.' ಮೆಲಬರಿ ಅಂದನು. ಅವರು ಆಚೆ ಈಚೆಯ ಮರಗಳ ಟೊಂಗೆಗಳ ಕೆಳಗಿಂದ ಓಣಿಗಳೊಳಗೆ ಹಾಯುತ್ತಿದ್ದಾಗ, ಆ ಟೊಂಗೆಗಳು ಕಸೂತಿಗೆಲಸದ ಅಂಚಿನಂತೆ ಹೆಣೆದುಕೊಂಡು ನಡುವೆ ಚಿಕ್ಕೆಗಳು ಮಿನುಗುತ್ತಿದ್ದವು, ಕೆತ್ತಿದ ಮಣಿಗಳಂತೆ.

'ಹೌದು. ನಿಜವಾಗಿಯೂ ಸರಿ' ಗ್ರೇಸಳು ಕೂಡಲೇ ಉತ್ತರಿಸಿದಳು. ಅವಳ ದನಿಯಲ್ಲಿ, ಆತ ತನ್ನ ಮಟ್ಟಿಗೆ ಎಂದಿನಂತೆಯೇ ಇದ್ದಾನೆ; ಮೇಲೇರದಿದ್ದರೂ ಕೆಳಗೆ ಇಳಿದಿಲ್ಲ, ಎಂದು ಸೂಚಿಸುವ ದೃಢತೆ ಇತ್ತು.

ಅವರು ಓಣಿಯಲ್ಲಿ ಒಂದು ತೆರವಾದ ಸ್ಥಳಕ್ಕೆ ಬಂದರು. ಅಲ್ಲಿಂದ ಹಗಲು ಡಾಕ್ಟರನ ಮನೆ ಕಾಣುತ್ತಿತ್ತು. ಈಗ ರಾತ್ರೆಯ ಎರಡು ಗಂಟೆ ಆಗಿದ್ದರೂ ಅವನ ಕೋಣೆಯಲ್ಲಿ ದೀಪ ಮಿನುಗುತ್ತಿತ್ತು.

'ಡಾಕ್ಟರರು ಇನ್ನೂ ಮಲಗಿಲ್ಲವೆಂದು ಕಾಣುತ್ತದೆ.' ಶ್ರೀಮತಿ ಮೆಲಬರಿ ಅಂದಳು.

'ಘೋರ ಅಭ್ಯಾಸ ನಡೆದಿರಬೇಕು' ಗಂಡ ಗೊಣಗುಟ್ಟಿದನು.

'ಇವನಿಗೆ ಹಗಲೆಲ್ಲ ಏನೂ ಕೆಲಸವಿದ್ದಂತಿಲ್ಲ. ಅಂದಾಗ ರಾತ್ರೆಯಾದರೂ ಆತ ಲಗು ಮಲಗಬಹುದೆಂದು ಮಾಡಿದ್ದೆ. ಇವನ ಸುಳಿವೇ ನಮಗೆ ಸಿಗುವದಿಲ್ಲ — ಇದೂ ಒಂದು ಆಶ್ಚರ್ಯವೇ.'

ಸಂಜೆಯ ಘಟನಾವಳಿಯ ನಂತರ ಈ ಫಿಟ್‌ಝ್‌ಫಿಯರ ಬಗೆಗೆ ವಿಚಾರ ಮಾಡುವತ್ತ ಮನಸ್ಸನ್ನು ಹಾಯಿಸುವುದು ಮೆಲಬರಿಗೆ ಹಾಯೆನಿಸಿತು. 'ಅದು ಸ್ವಾಭಾವಿಕ', ಆತ ಅಂದ, 'ಅವನಂಥ ಗೃಹಸ್ಥನಿಗೆ ಈ ಹಿಂಟೋಕ್ ಹಳ್ಳಿಯಲ್ಲಿ ಮೆಚ್ಚಿಗೆ ಆಗಬಲ್ಲ, ಮನಸ್ಸು ಹಿಡಿದಿಡಬಲ್ಲ ಸಂಗತಿ ಆವರೂ ಯಾವದಿದೆ ? ಆತ ಇಲ್ಲಿ ಇನ್ನು ಬಹಳ ಕಾಲ ಉಳಿಯುವನೆಂದು ನನಗೆನಿಸುವುದಿಲ್ಲ.'

ಅನಂತರ ಮೆಲಬರಿಯ ವಿಚಾರ ಮತ್ತೆ ಜೈಲ್ಸನ ಔತಣ ಕೂಟದ ಕಡೆಗೆ ಹೊರಳಿತು. ತೀರ ಮನೆಯ ಹತ್ತಿರ ಬಂದಾಗ ಅವನು ಮತ್ತೆ ಮಾತೆತ್ತಿದನು. ಆಗ ಮಗಳು ನಾಲ್ಕು ಹೆಜ್ಜೆ ಮುಂದಿದ್ದಳು. 'ಜೈಲ್ಸನ ಬದುಕು ಗ್ರೇಸಳಂಥ ಹುಡುಗಿಗೆ ಹೇಳಿದ ದಾರಿಯೇ ಅಲ್ಲ, ಈವರೆಗೆ ಅವಳಿಗೆ ರೂಢಿಯಾದ ರೀತಿಯ ಬಾಳಿನ ನಂತರ. ಇದು ನನಗೆ ಮುಂಚೆಯೇ ಹೊಳೆಯಲಿಲ್ಲ. ಇವಳನ್ನು ಬಾರ್ಡಿಂಗ್ ಸ್ಕೂಲಿಗೆ ಹಾಕಿ, ಪ್ರವಾಸಕ್ಕೆ ಕಳುಹಿಸಿ ಈಗ ಜೈಲ್ಸನ ಮಟ್ಟಿಗೆ ನಾನು ಚೊಕ್ಕ ವ್ಯವಹಾರ ಮಾಡಿದಂತೆ ಆಗಲಿಲ್ಲ. ಅವನ ಮಟ್ಟಿಗೆ ನಾನು ಇವಳನ್ನು ಮುದ್ದುಗೆಡಿಸಿ ಬಿಟ್ಟಂತೆಯೇ ! ಓ, ಇದು ಕನಿಕರಕ್ಕೆ ಕಾರಣ. ಆದಾಗ್ಯೂ ಅವಳು ಸಲ್ಲುವುದು ಅವನಿಗೇ — ಅವನ ಪಾಲಿಗೇ.'

ಈ ಸುಮಾರಿಗೆ ಆ ಖಿಡುವಿನ ಜೋಡಿ ಕೊನೆಗೂ ಆಟ ಮುಗಿಸಿ ಹಿಂದಿನಿಂದ ಬರುತ್ತಿರುವುದು ಕೇಳಿಸಿತು — ಉದ್ದುದ್ದ ದಾಪು ಹಾಕುತ್ತ ಅದರ ತಾಲಕ್ಕೆ ದೊಡ್ಡ ದನಿಯಲ್ಲಿ ಲಾವಣಿಯೊಂದನ್ನು ಹಾಡುತ್ತ ಅವರು ಬರುತ್ತಿದ್ದರು ಜೋರು ಜೋರಾಗಿ—

‘... ಅಂದಳು ಆಕೆ
ಹಳ್ಳಿಯ ಹುಡುಗಿ ಇನ್ನೆಂದೂ ಆಗೆ
ಸೇಬು ಬಿಟ್ಟರೂ ಕಿತ್ತಳೆ ಮರಕೆ.’

ಮರದ ವ್ಯಾಪಾರಿ ಸಿಟ್ಟಿಗೆದ್ದು ಹೆಂಡತಿಯ ಕಡೆಗೆ ಹೊರಳಿದನು. ‘ ಕೇಳಿದೆಯಾ ! ಇಂಥವರ ಸಹವಾಸಕ್ಕಾಗಿ ನಮ್ಮನ್ನು ಕರೆದದ್ದು ! ಇಂಥ ಸಮಾಜವನ್ನು ಭೇಟಿಯಾಗ ಬೇಕೆಂದು ನಮ್ಮನ್ನು ಕೇಳಿಕೊಂಡದ್ದು.’ ಆತ ಉರಿದಾಡಿದನು, ‘ ನಮಗೆ ಹಳೆಮಂದಿಗೆ ಅಡ್ಡಿ ಇಲ್ಲ ; ಆದರೆ ಗ್ರೇಸಳಿಗೆ ? ಜೈಲ್ಸನಿಗೆ ಸ್ವಲ್ಪ ಬುದ್ಧಿ ಇರಬೇಕಿತ್ತು.’

೧೧

ಇದೇ ಹೊತ್ತಿಗೆ ಈ ಅತಿಥಿ ಅಭ್ಯಾಗತರೆಲ್ಲ ಹೊರಟು ಹೊರಬಿದ್ದು ಹೋಗಿ ಬರಿದಾದ ಮನೆಯಲ್ಲಿ ಅವರ ಆ ಚರ್ಚೆಯ ವಿಷಯನಾದ ವ್ಯಕ್ತಿಯು ಕೋಣೆಯಿಂದ ಕೋಣೆಗೆ ಅಲ್ಲಿ ಅಸ್ತವ್ಯಸ್ತವಾಗಿ ಬಿದ್ದ ಮೇಜು, ಕುರ್ಚಿ, ಬೆಂಚುಗಳನ್ನು ಪರೀಕ್ಷಿಸುತ್ತ ತಿರುಗಾಡು ತ್ತಿದ್ದನು. ಅವನ ತಿರುಗಾಟದಲ್ಲಿ ಯಾವ ಆನಂದದ ಭಾವವೂ ತೋರುತ್ತಿದಿಲ್ಲ. ತದ್ವಿರುದ್ಧವೇ ಆದ ಭಾವನೆ ಕಾಣುತ್ತಿತ್ತು. ಕೊನೆಗೆ ಆತ ಭಟ್ಟಿ ಮನೆಯನ್ನು ಹೊಕ್ಕನು. ಅಲ್ಲಿ ರಾಬರ್ಟ ಕ್ರೀಡಲ್ ಆರಿದ ಬೆಂಕಿಯ ನಿಗಿನಿಗಿ ಕೆಂಡಗಳ ಮೇಲೆ ಬಗ್ಗಿ ಕೂತದ್ದನ್ನು ಆತ ಕಂಡನು. ಕ್ರೀಡಲ್‌ನೂ ಏನೋ ವಿಚಾರಮಗ್ನನಾಗಿದ್ದನು. ವಿಂಟರಬೋರ್ನ ಅವನ ಹತ್ತಿರ ಹೋಗಿ ಕುಳಿತನು.

‘ ಅಚ್ಛಾ, ರಾಬರ್ಟ್. ನೀನು ದಣಿದಿರಬೇಕು. ಹೋಗಿ ಮಲಗುವುದು ಒಳ್ಳೇದು.’

‘ ಸೈ, ಸೈ ಜೈಲ್ಸ. ನಾನು ನಿನ್ನನ್ನು ಕರೆಯುವುದು ಹೇಗೆ ? ಒಡೆಯಾ, ಸ್ವಾಮಿ, ಯಜಮಾನರೇ ಎಂದಲ್ಲವೇ ? ಏನೇ ಇರಲಿ, ದಿವಸದ ದಗದ ಮುಗಿಯಿತು. ಕೆಲಸ ಮುಗಿದಾಗ ದಿನ ಮುಗಿಯಿತು.’

ವಿಂಟರಬೋರ್ನ ಕೆಂಡ ಕೆದರುವ ಕೋಲು ಎತ್ತಿಕೊಂಡು, ಹಣೆ ತುಂಬ ನಿರಿಗೆ ಹಾಕಿ, ಅಗ್ಗಿಷ್ಟಿಕೆಯೊಳಗಿನ ಕೆಂಡಗಳನ್ನು ಕೆದರಹತ್ತಿದನು. ಕೆದರಿ-ಕೆದರಿ ಅವೆಲ್ಲ ಹರಡಿ ಬಿದ್ದು ಉರಿಯುವ ಸಹಾರಾ ಪಸರಿಸಿತು — ಕೆಂಪು ಉರಿಯುವ ಬಂಡೆಗಳೆಲ್ಲ ಎಲ್ಲ ಕಡೆ

ಬಿತ್ತು. 'ಔತಣ ಚೆನ್ನಾಗಿ ನಡೆಯಿತೇ? ನಿನಗೇನು ಅನಿಸುತ್ತದೆ?' ಆತ ಕೇಳಿದನು.

'ತಿಂಡಿ ಚೆನ್ನಾಗಿ ಆಯಿತು. ನನಗೆ ಗೊತ್ತು ತೀರ್ಥಾನೂ ಚೆನ್ನಾಗಿತ್ತು. ಇದೂ ನಾನು ಬಲ್ಲೆ — ಶಿಪಾಯಿಗಳ ಪೊಳ್ಳು ದನಿಯಿಂದ. ಒಳ್ಳೆ ಪ್ರಾಮಾಣಿಕ ಸರಾಯಿ ನೋಡಿ. ನಾನು ಭಟ್ಟಿ ಇಳಿಸಿದ ಸರಾಯಿಯಲ್ಲಿಯೇ ಉತ್ತಮ — ಅದರಲ್ಲಿ ನಾನು ಹಾಕಿದ ಮಸಾಲೆ ಸಾಮಾನು ಬಿಡಿ. ಎಂಥ ಅರಸನ ಎದೆಯನ್ನು ಹಿಗ್ಗಿಸಲಿಕ್ಕೂ ಸಾಕು ಇಂಥ ಸರಾಯಿ. ಎದೆ ಮಾತ್ರವಲ್ಲ ಅವನ ಹೆಣವಿಡಿ ನಗಿಸಬಹುದು! ಆದಾಗ್ಯೂ ಒಂದು ಮಾತು ನಾನು ಅಲ್ಲಗಳೆಯಲಾರೆ. ಏನೋ ಒಂದು ಸಂಗತಿ ಅವ ಮತ್ತು ಅವನ ಜನಕ್ಕೆ ಅಷ್ಟು ಸರಿಹೋಗಲಿಲ್ಲ!' ಈ ಮಾತಾಡುವಾಗ ಕ್ರೀಡಲ್ ಮೇಲಬರಿಯು ವಾಸಿಸುವ ದಿಕ್ಕಿಗೆ ತಲೆ ದೂಗಿ ತೋರಿಸಿದನು.

'ನನಗೂ ಅದೇ ಭಯ. ನಮ್ಮ ಔತಣ ಎಲ್ಲಿ ಕೈಕೊಟ್ಟಿತೊ!'

'ಹಾಗಾದರೆ ಹಾಗೆಯೇ ಆಗುವುದಿತ್ತು, ದೈವದ ಇಚ್ಛೆ. ಇನ್ನೂ ಅವಳ ಪ್ಲೇಟಿನಲ್ಲಿಯೇ ಬರಬೇಕೇ ಆ 'ಅದು.' ಬೇರೆ ಯಾರಿಗೂ ಸಿಗಬಾರದೇ?'

'ಏನದು?'

'ಓ, ನಿಮಗೆ ಗೊತ್ತೇ ಇಲ್ಲ! ಅವಳ ಪ್ಲೇಟಿನ ಅಂಚಿಗೆ ಅದೊಂದು ಬಸವನ ಹುಳ ಇತ್ತು. ನಾನು ಪ್ಲೇಟ್ ತುಂಬಿ ಅವಳಿಗೆ ತಿನ್ನಲು ಕೊಟ್ಟಾಗ. ಅದು ಅವಳ ಆ ಹರಿಗೆಯ ಹಸಿರುವಾಣಿಯಲ್ಲಿ ಎಲ್ಲೋ ಇದ್ದಿರಬೇಕು.'

'ಆದರೆ ಮಾರಾಯಾ, ಅದು ಅಲ್ಲಿ ಹೇಗೆ ಬಂತೋ?'

'ಅದೇ ನನಗೆ ಗೊತ್ತಾಗಲಿಲ್ಲ, ನೋಡಿ. ಅಂತೂ ಆ ಸಭ್ಯ ಪ್ರಾಣಿ ಅಲ್ಲಿತ್ತು ಅವಳ ಬಟ್ಟಲಲ್ಲಿ.'

'ಆದರೆ ಅಲ್ಲೇ ಅದು ಇರಬಾರದಾಗಿತ್ತು ಅಲ್ಲೋ, ರಾಬರ್ಟ್!'

'ಅಲ್ಲಿ ಇಲ್ಲದೆ ಮತ್ತೆಲ್ಲಿ ಇರಬೇಕು? ಹರಿಗೆ ಹಸಿರುವಾಣಿ ಅದರ ಮನೆ, ಹಾಗೆ ನೋಡಲು ಹೋದರೆ. ಯಾರೇ ಇರಲಿ. ಬಸವನ ಹುಳು ಇಂಥ ಹಸಿರು ಎಲೆಗಳ ಕ್ಯಾಬೇಜುಗಳ ದೇಂಟಿಗೆ ಅಂಟಿಕೊಂಡು ಇರುವುದೇ, ಬರುವುದೇ!'

'ಅದು ಮತ್ತೆ ಜೀವಂತವಿದ್ದಿರಲಿಕ್ಕಿಲ್ಲ' ಆ ನೆನಪಿನಿಂದಲೇ ಗ್ರೇಸಳ ಪರವಾಗಿ ಜೈಲ್ಸ ನಡುಗಿದನು.

'ಓ, ಇಲ್ಲ ಅದಕ್ಕೆ ಜೀವವೆಲ್ಲಿಂದ ಬಂತು? ಅದು ಚೆನ್ನಾಗಿ ಬೆಂದು ಹೋಗಿತ್ತು ಸಾಫು ಬೆಂದಿತ್ತು. ರಾಬರ್ಟ್ ಕ್ರೀಡಲ್ ಬಡಿಸಿದ ಪಲ್ಲೆಯಲ್ಲಿ ಜೀವಂತ ಬಸವನಹುಳ ಬರುವುದು ಸಾಧ್ಯವೇ? ದೇವರು ಮೆಚ್ಚ್ಯಾನೇ? .... ಆದರೆ ನಾನಾದರೆ ಅದಕ್ಕೆ ಪರಿವೆ ಮಾಡುತ್ತಿದ್ದಿಲ್ಲ. ಅವು ಹಸಿರು ಹುಳುಗಳು, ಕ್ಯಾಬೇಜಿನಲ್ಲಿಯೇ ಹುಟ್ಟಿ ಕ್ಯಾಬೇಜಿನಲ್ಲಿಯೇ ಬದುಕಿ ಕ್ಯಾಬೇಜಿನಿಂದಲೇ ಮಾಡಿದಂತೆ ಇರುತ್ತವೆ. ನಾನಾದರೆ ಅದಕ್ಕೆ ಪರಿವೆ ಮಾಡುತ್ತಿದ್ದಿಲ್ಲ. ಆದರೆ ಆ ಹೆಣ್ಣು ತುಟಿಪಿಟ್ಟೆನ್ನದೆ ಸುಮ್ಮನಿದ್ದಳು. ಅದರ ಬಗ್ಗೆ ಏನಾದರೂ ಚಿಕ್ಕ-ಪುಟ್ಟ ಚರ್ಚೆ ನಡೆಯಬಹುದಿತ್ತು.'

'ಹೌದಪ್ಪ. ಇರಲಿ. ಅದೆಲ್ಲ ಈಗ ಮುಗಿದು ಹೋಯಿತು', ಜೈಲ್ಸ ತನ್ನಲ್ಲಿಯೇ ಗೊಣಗುಟ್ಟಿದನು — ಆ ಕಪ್ಪಿಡುವ ಇಂಗಾಳಗಳ ಮೇಲೆ ಬಗ್ಗಿ ತಲೆ ದೂಗುತ್ತ ಮತ್ತೆ ಹಣೆತುಂಬ ನಿರಿಗೆ ಹಾಕುತ್ತ. 'ನಿನಗೆ ಗೊತ್ತೇ ರಾಬರ್ಟ್, ಅವಳಿಗೆ ಆಳುಹೋಳುಗಳ, ಒಳ್ಳೊಳ್ಳೆ ವಸ್ತು ಒಡವೆಗಳ ವಾಡಿಕೆ — ಈಗ ಕೆಲವು ವರ್ಷಗಳಿಂದ? ಅಂದಾಗ ಅವಳು ನಮ್ಮ ನಡತೆ, ನಡಪಳಿ ಹೇಗೆ ಸಹಿಸಿಯಾಳು?'

'ಹಾಗಾದರೆ ನಾ ಹೇಳಲೋ, ಆಕೆ ಇನ್ನೆಲ್ಲಾದರೂ ಯಾರೊಂದಿಗಾದರೂ ಗುಂಜಾಡುವುದು ಲೇಸು. ಅವರು ಅವಳಿಗೆ ಇಷ್ಟು ದೊಡ್ಡ ಶಾಲೆಯ ಓದು ಕಲಿಸಲೇ ಬಾರದಿತ್ತು. ಇಲ್ಲವಾದರೆ ಮದುವೆ ಆಗದ ಪ್ರಾಯದ ಪೋರರು ಉದ್ದ ನಾಲಿಗೆಯ ಹೊಯ್ಮಾಲಿಗಳನ್ನು ಮೆಚ್ಚುತ್ತಾರೋ? ಈಗ ಅವಳನ್ನು ಅವಳ ಮಟ್ಟದವರಲ್ಲಿಯೇ ಕೊಡಬೇಕು.'

'ಹೌದು. ನೀನಂದದ್ದೇ ನಿಜ ಇರಬಹುದು' ವಿಂಟರಬೋರ್ನ ಅಂದನು. ಮತ್ತು ಎದ್ದು ಒಂದು ಆಕಳಿಕೆ ತೆಗೆದು ನಿಟ್ಟುಸಿರು ಬಿಟ್ಟನು.

೧೨

'ಅಯ್ಯೋ ಪಾಪ — ಸಾವಿರ ಪಾಪ!' ಮೆಲಬರಿ ಮರುದಿನ ಮುಂಜಾನೆ ಉಪಾಹಾರದ ಹೊತ್ತಿಗೂ ಹೇಳುತ್ತಿದ್ದ, ಗ್ರೇಸಳು ಇನ್ನು ಅವಳ ಮಲಗುವ ಕೋಣೆಯಲ್ಲಿಯೇ ಇದ್ದಳು.

ಇದೀಗ ಅವನು ಮುಚ್ಚುಮರೆ ಇಲ್ಲದೆ ಒಪ್ಪಿಕೊಳ್ಳಲೇ ಬೇಕಾದ ಸಂಗತಿಯೆಂದರೆ ಕಳೆದ ಹನ್ನೆರಡು ತಿಂಗಳು, ಊರಿಂದ ದೂರವಿದ್ದ ಅವಧಿಯು ತನ್ನ ಮಗಳಲ್ಲಿ ವಿಪರೀತ ಬದಲಾವಣೆಯನ್ನು ಉಂಟುಮಾಡಿತ್ತು. ಅವಳ ಶಿಕ್ಷಣಕ್ಕಾಗಿ ಆತ ಪ್ರತಿ ವರ್ಷ ಭಾರಿ ರಕಮುಗಳನ್ನು ತೆತ್ತ ಮೇಲೆ ಅವಳು ಈಗ ಜೈಲ್ಸ ವಿಂಟರಬೋರ್ನನನ್ನು, ಮರ ಕಡಿಯುವ, ಸಿಡರ ಸರಾಯಿಯ ಈಡಿಗ, ಸೇಬಿನ ಲಾಗುವಾಡಿನ ರೈತ, ಇನ್ನು ಏನೇನೋ ವೃತ್ತಿಯಲ್ಲಿ ಅನಿಶ್ಚಿತ ಉಪಜೀವಿಕೆಯನ್ನು ಸಾಗಿಸುತ್ತಿರುವ ಹಳ್ಳಿಯ ಹೈದನನ್ನು ಮದುವೆಯಾಗಲು ಬಿಡಲು ಅವನ ಮನಸ್ಸು ಒಪ್ಪುತ್ತಿದ್ದಿಲ್ಲ. ಅವಳು ತಾನೇ ಈ ಮದುವೆಯನ್ನು ಒಪ್ಪಿಕೊಂಡಿದ್ದರೂ ಈ ತಂದೆ ಒಪ್ಪುತ್ತಿದ್ದಿಲ್ಲ.

ಆದರೆ ಈ ಮಟ್ಟದಲ್ಲಿ ವಿಂಟರಬೋರ್ನನ ಕನ್ಯಾಯಾಚನೆಯನ್ನು, ಪ್ರಿಯಾರಾಧನೆಯನ್ನು ಆತ ಅಲ್ಲಗಳೆಯುವುದಾದರೂ ಹೇಗೆ? ಅದಕ್ಕೆ ಆತಂಕ ಒಡ್ಡುವುದಾದರೂ ಹೇಗೆ? ತಾನೇ ಉತ್ತೇಜನ ಕೊಟ್ಟ, ಬರೆ ಯಾಂತ್ರಿಕವಾಗಿಯೇ ಆಗಿರಲಿ. ಹೀಗೆ ಬೆಳೆಯಲು ಬಿಟ್ಟ, ಯೋಜನೆಯನ್ನು ಈಗ ರದ್ದುಮಾಡಲು ಬರೆಯು

ವುದು, ಮೆಲಬರಿಯಲ್ಲಿ ಏನಾದರೂ ಆತ್ಮಗೌರವವಿದ್ದದ್ದೇ ಆದರೆ, ಅದಕ್ಕೆ ಮಾರಕವಾಗಿತ್ತು. ಆದರೂ ಏನೋ ಒಂದು ಮುಗ್ಗಟ್ಟು, ಅವನೇ ಹೂಡಿದ ಹೊಂಚು-ಹಂಚಿಕೆಗಳ ಫಲವಾಗಿ ತಲೆದೋರಿದ ಬಿಕ್ಕಟ್ಟು ಸಮಿಾಪಿಸುತ್ತಿತ್ತು. ಅದನ್ನು ಇದುರಿಸಲೇಬೇಕಿತ್ತು.

'ಅವಳು ಅವನದೇ ಹೆಂಡತಿ ಆಗುವಳು, ಅವನನ್ನೇ ಒಪ್ಪಿಕೊಳ್ಳಬೇಕೆಂಬ ಅವಳ ಒಡಂಬಡಿಕೆಯ ಭಾವನೆಯನ್ನು ನೀವು ಏನಾದರೂ ಬುಡಮೇಲೆ ಮಾಡದಿದ್ದರೆ.' ಶ್ರೀಮತಿ ಮೆಲಬರಿ ಅಂದಳು, 'ದೇವರು ನಿಮಗೆ ಸದ್ಬುದ್ಧಿ ಕೊಡಲಿ; ಅವಳು ಇಲ್ಲಿಯೇ ಹಿಂಟೋಕದಲ್ಲಿ ಉಳಿಯಲು ಹತ್ತಿ ಜೈಲ್ಸನ ಬದುಕಿನಲ್ಲಿಯೆ ತೃಪ್ತಿಯನ್ನು ಪಡೆಯುವಳು. ನೀವು ಅವಳಿಗೆ ಕೊಡುವ ಹಣದಿಂದ ಅವನ ಬದುಕಿನ ಮಟ್ಟವೂ ಸುಧಾರಿಸುವುದು. ಇದೀಗ ಶಿಷ್ಟ ಮಟ್ಟದ ಬದುಕಿನ ನಂತರ ಈ ಬದುಕಿನ ಹೊಸತನವೇನೋ ಅವಳಿಗೆ ಮೊದಮೊದಲಿಗೆ ತುಸು ಮೆಚ್ಚಲಿಕ್ಕಿಲ್ಲ. ಆದರೆ ವಾಡಿಕೆಯಿಂದ ಎಲ್ಲ ಪರಿಚಿತವಾಗುತ್ತದೆ. ಕಲ್ಲು ಹಾಸಿದ ನೆಲವು ಆಗ ಅಷ್ಟೇನು ತಣಗೆನಿಸುವುದಿಲ್ಲ; ರಾತ್ರಿ ಗೂಗೆಯ ಕೂಗು ಅಷ್ಟೇನೂ ಬೆದರಿಕೆ ಹುಟ್ಟಿಸುವುದಿಲ್ಲ; ಒಬ್ಬಂಟಿತನ ಕೆಲ ಕಾಲದ ಮೇಲೆ ಅಷ್ಟೇನು ಬೇಸರವೆನಿಸುವುದಿಲ್ಲ.'

'ಹೌದು. ನಿನ್ನ ಮಾತು ಒಪ್ಪಿದೆ. ನೀನಂದಂತೆಯೇ ಸರಿ. ನನಗೆ ಗೊತ್ತು. ಗ್ರೇಸ ಕ್ರಮೇಣ ನಮ್ಮ ಪಾತಳಿಗೆ ಇಳಿದು, ನಮ್ಮ ಚಾಳಿಗಳನ್ನೇ ಹಿಡಿದು, ನಮ್ಮ ಮಾತಿನ ದಾಟಿಯನ್ನೇ ಕಲಿತುಕೊಂಡು, ಜೈಲ್ಸನ ಹೆಂಡತಿಯಾಗಿ ಬದುಕುವುದರಲ್ಲಿ ಜೊಂಪು ಹತ್ತಿದವರಂತೆ ಒಂದು ಸಮಾಧಾನವನ್ನು ಕಾಣಬಹುದು. ಆದರೆ ಅವಳಂಥ ಮೇಲ್ಮಟ್ಟದ ಕೌಮಾರ್ಯವನ್ನು, ನಾನು ಇಷ್ಟೆಲ್ಲ ಕಷ್ಟಪಟ್ಟು ಮೇಲೇರಿಸಿದ ಆ ಮಟ್ಟದಿಂದ, ಅವಳ ಎಳೆವರೆಯದ ಅರಮನೆಗೆ ಅಲಂಕಾರವಾಗಬಲ್ಲ ಆ ಸೊಬಗನ್ನು ತಿರುಗಿ ನಮ್ಮ ಆ ಹಳೆಯ ಪಾತಳಿಗೆ ಎಳೆದು ಇಳಿಸುವುದನ್ನು ನಾನೇ ಸಹಿಸಲಾರೆ. ಕಲ್ಪನೆಮಾಡು, ಅವಳ ಬೆಳ್ಳಗಿನ ಕೈಗಳು ದಿನಹೋದಂತೆ ಕೆಂಪಾದರೆ? ಅವಳ ಆ ನಾಲಿಗೆಯು ಸೀಮೆಯ ಮಾತಿನ ಒನಪನ್ನೇ ಕಳಕೊಂಡರೆ? ಅವಳ ಆ ಪುಟಿಯುವ ನಡಿಗೆಯು ಹಿಂಟೋಕ ಹಳ್ಳಿಗಿತ್ತಿಯ ಭಾರಿ ಹೆಜ್ಜೆಯ ತೂರಾಡುವ ನಡೆಯಾಗಿ ಬಿಟ್ಟರೆ?'

'ಅವಳು ತೂರಾಡಬಹುದು. ಆದರೆ ಅವಳ ಹೆಜ್ಜೆ ಖಂಡಿತ ಭಾರಿ ಆಗಲಿಕ್ಕಿಲ್ಲ!' ಯಜಮಾನಿಯು ತೀರ್ಪಿನ ದನಿಯಲ್ಲಿ ಮಾತನ್ನು ಮುಗಿಸಿದಳು.

ಗ್ರೇಸಳು ಮಹಡಿಯಿಂದ ಇಳಿದು ಬಂದಳು. ಅವಳು ಅಷ್ಟು ತಡವಾಗಿ ಹಾಸಿಗೆಯಲ್ಲಿ ಹೊತ್ತುಗಳೆದುದಕ್ಕೆ ತಂದೆ ದೂರಿದನು. ಆ ದೂರಿನಲ್ಲಿ ನಿಜವಾಗಿಯೂ ಅವಳ ಆಲಸಿಕೆಯ ಬಗೆಗೆ ಆಕ್ಷೇಪ ಅಷ್ಟಿದ್ದಿಲ್ಲ. ಇದೀಗ ನಡೆದ ಚರ್ಚೆಯೊಳಗಿನ ಅವಾಂತರ ವಿಚಾರಗಳಿಂದ ಕೆರಳಿದ ದನಿ ಇತ್ತು.

ಅವಳ ಚೆಂದುಟಿಗಳು ಮುದುಡಿಕೊಂಡವು. 'ನಾನು ಹುಡುಗಿಯಾಗಿದ್ದಾಗ

ಹೀಗೆ ನೀನು ದೂರುತ್ತಿದ್ದೆ. ಆಗ ಅದು ನ್ಯಾಯ ' ಗ್ರೇಸ ಅಂದಳು, ' ಆದರೆ ಈಗ ನಾನು ಹೆಂಗಸು. ನಾನೇ ನಿರ್ಣಯ ಮಾಡಬಲ್ಲೆ...ಆದರೆ ಈಗ ಅದಲ್ಲ. ಬೇರೆ ಏನೋ ಆಗಿದೆ.' ಅಲ್ಲಿ ಕೂಡ್ರುವ ಬದಲು ಅವಳು ಬಾಗಿಲಿಂದ ಹೊರಬಿದ್ದು ಹೋದಳು.

ತಂದೆಗೆ ಬೇಸರವಾಯಿತು. ಇಂಥ ಸಿಟ್ಟು ಸಿಡುಕು ಮನೆಯಮಂದಿ ಒಬ್ಬರಿಗೊಬ್ಬರು ತೋರ್ಪಡಿಸುವುದು ನಿಜವಾಗಿಯೂ ಅವರವರ ವಿರುದ್ಧವಲ್ಲ. ಅದು ಆ 'ಆದಿಮೂಲ'ದ ವಿರುದ್ಧ. ಅದು ನೊಂದವರನ್ನು ನೋಯಿಸಿದವರನ್ನೂ ಕೂಡಿಯೇ ಕಾಡುವ ಇಂಥ ಪ್ರಸಂಗವನ್ನು ರೂಪಿಸುತ್ತದೆ. ಆದರೆ ಹರಿ ಹಾಯೋಣವೆಂದರೆ ಅದು ಕೈಗೆ ಸಿಕ್ಕುವುದಿಲ್ಲ, ಕಣ್ಣಿಗೆ ಬೀಳುವುದಿಲ್ಲ. ಬಡ ಮಾನವರನ್ನು ಇನ್ನಿಷ್ಟು ಕೆರಳಿಸಿ ಪೇಚಿಗೆ ಈಡುಮಾಡುತ್ತದೆ. ಇರಲಿ.

ಮೆಲಬರಿ ಅವಳನ್ನು ಹಿಂಬಾಲಿಸಿದನು. ಅವಳು ಹುಲ್ಲುಗಾವಲಿನತ್ತ ಅಲೆದಾಡುತ್ತ ಹೋಗಿದ್ದಳು. ಅಲ್ಲಿ ಬಿಳಿಮಂಜು ಬಿದ್ದಿತ್ತು—ಹುಲ್ಲನ್ನು ಅವರ ಕಾಲ ಕೆಳಗೆ ಕಾಗದದ ಚೂರುಗಳಂತೆ ಕರಕರ ಸಪ್ಪಳಗೊಳಿಸುತ್ತ. ಅಲ್ಲಿ ಪಾರಿವಾಳಗಳು ಇಪ್ಪತ್ತು ಮೂವತ್ತು ಹಿಂಡುಗಟ್ಟಿ ಅತ್ತಿಂದಿತ್ತ ಚಕ್ಕಂದವಾಗಿ ಸುಳಿದಾಡುತ್ತಿದ್ದವು. ಹೊಗೆಕಿಂಡಿಯಿಂದ ಹಾಯ್ದು ಬಳ್ಳಿಯೊಂದರ ಮೇಲೆ ಸಾಲಾಗಿ ಕೂತ ಗುಬ್ಬಚ್ಚಿಗಳು ಬಿಸಿಲಿನಲ್ಲಿ ಮೈಯನ್ನು ಉಜ್ಜಿಕೊಳ್ಳುತ್ತ ಆ ಚಕ್ಕಂದವನ್ನು ನೋಡುತ್ತಿದ್ದವು.

'ಒಳಗೆ ತಿಂಡಿ ತಿನ್ನಲು ಬಾ ಮಗಳೆ', ಆತ ಅಂದ, 'ಮತ್ತು ಜೈಲ್ಸನ ಬಗೆಗೆ ನಿನ್ನ ಮನಸ್ಸಿಗೆ ಬಂದಂತೆಯೇ ಮಾಡು. ನಿನ್ನ ಇಷ್ಟವೇ ನನ್ನ ಇಷ್ಟ.'

'ಅಪ್ಪಾ, ನಾನು ಅವನಿಗೆ ವಾಗ್ದತ್ತಳು. ಅಂದಾಗ ನಾನು ಎಂದಾದರೂ ಮದುವೆ ಆಗುವುದಾದರೆ ಅವನನ್ನೇ ಆಗಬೇಕಾದ್ದು ನನ್ನ ಗೌರವಕ್ಕೆ ಒಪ್ಪಿದ್ದು ಎಂದು ನಾನು ಬಗೆಯದೆ ಇರಲಾರೆ.'

ಆಗ ಅವನಿಗೆ ಒಂದು ಸಂಶಯ. ಅವಳ ಎದೆಯ ಆಳದ ತಳದಲ್ಲಿ ಎಲ್ಲಿಯೇ ಜೈಲ್ಸನಿಗೆ ಅನುಕೂಲವಾಗುವಂಥ ಸ್ವಜನಭಾವನೆಯೊಂದು ಸರಳವಾದ ಒಲವೊಂದು, ಮೇಲೆ ಎಷ್ಟು ಬೆಳೆಯಿಸಿಕೊಂಡ ಅಭಿರುಚಿಗಳ ಜಾಲ ಹಬ್ಬಿದ್ದರೂ, ಮಿಡಿಯುತ್ತಿರಬೇಕು. 'ಸರಿ', ಆತ ಅಂದ, 'ಆದರೂ ಇದೀಗಲೇ ನಿನ್ನನ್ನು ನಾನು ಕಳೆದುಕೊಳ್ಳುವುದಿಲ್ಲವೆಂದು ನನ್ನ ಹಂಬಲ. ಒಳಗೆ ತಿಂಡಿ ತಿನ್ನಲು ಬಾ. ಹಿಂಟೋಕ್ ದೊಡ್ಡ ಮನೆಯ ಒಳಗಡೆ ನೋಡಿ ಬಂದೆಯಷ್ಟೇ? ಆ ಕುರಿತು ನಿನ್ನ ಅಭಿಮತವೇನು?

'ನನಗೆ ಅದು ಬಹಳ ಸೇರಿತು.'

'ವಿಂಟರಬೋರ್ನನ ಮನೆಯಿಂದ ತೀರ ಬೇರೆ ತಾನೇ?'

ಗ್ರೇಸ ಮಾತಾಡಲಿಲ್ಲ. ಆದರೆ ಆತ ಅವಳನ್ನು ಬಲ್ಲ. ಅವಳು ತನ್ನ ಮೌನದಿಂದ ಅವನನ್ನು ಜರೆಯುತ್ತಿದ್ದಳು—ಈ ರೀತಿ ಕ್ರೂರವಾದ ತುಲನೆ ಮಾಡಿದ್ದಕ್ಕೆ.

'ಶ್ರೀಮತಿ ಚಾರ್ಮಂಡ ನಿನಗೆ ಮತ್ತೊಮ್ಮೆ ಬರಲು ಹೇಳಿದ್ದಾಳೆ — ಅದು ಯಾವಾಗೆಂದು ನೀನು ಹೇಳಿದ್ದು?'

'ಮಂಗಳವಾರವೆಂದಿದ್ದಳು. ಆದರೆ ಅದರ ಮುಂಚಿನ ದಿನ ಆಕೆ ಹೇಳಿ ಕಳುಹಿಸುವವಳಿದ್ದಾಳೆ — ಆ ದಿನ ಅವಳಿಗೆ ಸರಿಹೋಗುವುದೋ ಹೇಗೆಂತ.' ಮತ್ತು ಈ ವಿಷಯ ಮಾತನಾಡುತ್ತ ಅವರಿಬ್ಬರೂ ಮುಂಜಾನೆಯ ಉಪಾಹಾರಕ್ಕಾಗಿ ಒಳಗೆ ಹೋದರು.

ಮಂಗಳವಾರ ಬಂದಿತು. ಆದರೆ ಚಾರ್ಮಂದಳಿಂದ ನಿರೂಪ ಬರಲಿಲ್ಲ. ಬುಧವಾರವೂ ಯಾರೂ ಇದ್ದಿಲ್ಲ. ವಸ್ತುತಃ ಹೀಗೆ ಒಂದು ಪಕ್ಷವೇ ಕಳೆದು ಹೋಯಿತು. ಹದಿನೈದು ದಿನ ಯಾರ ಸುಳಿವೂ, ಯಾವ ಸೂಚನೆಯೂ ಇರಲಿಲ್ಲ. ಚಾರ್ಮಂದ ಗ್ರೇಸಳನ್ನು ಸ್ವೀಕರಿಸುವ ನಿಟ್ಟಿನಲ್ಲಿ ಸದ್ಯಕ್ಕೆ ಯಾವ ಹೆಜ್ಜೆಯನ್ನು ಮುಂದಿಡುವುದಿಲ್ಲವೋ, ಎಂಬ ಸಂಶಯ ಉಂಟಾಯಿತು.

ಇದಕ್ಕೆ ಮೆಲಬರಿ ಭಾಷ್ಯ ಹಚ್ಚಿದನು ; ತನ್ನ ಮಗಳು ನಿಸ್ಸಂದೇಹವಾಗಿ ಎರಡು ಗೆಲವು ಗಳಿಸಿದಳು ಚಾರ್ಮಂದಳೊಂದಿಗೆ — ಒಂದು ಅಡವಿಯ ದಾರಿಯಲ್ಲಿಯ ಭೆಟ್ಟಿಯಲ್ಲಿ, ಇನ್ನೊಂದು ಅವಳ ದೊಡ್ಡ ಮನೆಯಲ್ಲಿಯೇ. ಅನಂತರ ಅವಳು ವಿಂಟರಬೋರ್ನನ ಮನೆಯ ಔತಣದಲ್ಲಿ ಭಾಗವಹಿಸಿದ್ದಳು. ಆ ರಾತ್ರಿಯ ಅಲ್ಲಿಯ ಉಲ್ಲಾಸ — ಸಂಭ್ರಮಗಳ ಕೇಕೆ ಕಲೆದಾಟಗಳು ನೆರೆಹೊರೆಯ ಹರಟೆಯ ವಿಷಯವಾಗಿರಬೇಕು. ಅಲ್ಲಿ ನೆರೆದ ಪ್ರತಿಯೊಬ್ಬ ಅಭ್ಯಾಗತನ ಬಗೆಗೂ ಬಹಳವಾಗಿ ಚರ್ಚೆ ಆಗಿರಭೇಕು, ಅವರಲ್ಲಿಯೂ ತನ್ನ ಅಲೌಕಿಕ ಗುಣಗಳಿಂದ ಒಡೆದೆದ್ದು ಕಂಡ ಗ್ರೇಸಳ ಬಗೆಗೆ. ಅಂದಾಗ ಶ್ರೀಮತಿ ಚಾರ್ಮಂದಳು ಆ ಹಳ್ಳಿಯ ಹರಟೆಗಳ ಸುದ್ದಿ ಕೇಳಿ ಗ್ರೇಸಳು ಇಂಥ ಮಟ್ಟದ ಸಹವಾಸದಲ್ಲಿ! ಕಾಣಿಸಿಕೊಂಡದ್ದಕ್ಕೆ ಅವಳ ಕುರಿತು ತಾನು ಇಟ್ಟುಕೊಂಡ ಆಶೋತ್ತರಗಳ ಬಗೆಗೇ ನಿರಾಶಳಾಗಿದ್ದರೆ ಅದು ಸ್ವಾಭಾವಿಕವಲ್ಲದೆ ಇನ್ನೇನು ?

ಈ ಬಗೆಯ ಕಾರ್ಯೋತ್ತರಮೀಮಾಂಸೆಯಲ್ಲಿ ಮೆಲಬರಿಯು, ಹೆಂಗಸು ತನ್ನ ಮನಸ್ಸನ್ನು ಬದಲಿಸಲಿಕ್ಕೆ ಶಕ್ಯವಾಗುವ ಅಸಂಖ್ಯವಾದ ಕಾರಣಗಳನ್ನು ವಿನಾಕಾರಣಗಳನ್ನು ಗಮನಿಸಲೇ ಇಲ್ಲ. ಉದಾಹರಣೆಗಾಗಿ ಆತ ಒಂದು ಸಣ್ಣ ಸಂಗತಿಯನ್ನು ಮರೆತುಬಿಟ್ಟ. ಅದೇನೆಂದರೆ, ಅವನ ಗ್ರೇಸಳು ತುಂಬ ಆಕರ್ಷಕಳಿದ್ದರೂ ಶ್ರೀಮತಿ ಚಾರ್ಮಂದಳು ತಾನೂ ಒಬ್ಬ ಸುಂದರಿ ಎಂಬ ಮಿಗಿಲಾದ ಆವಿರ್ಭಾವದಲ್ಲಿ ಇದ್ದಳು.

ಹೀಗೆ, ತನ್ನ ಮಗಳು ದುರ್ದೈವಿಯಾದ ವಿಂಟರಬೋರ್ನನ ಮನೆಯಲ್ಲಿ ಹಳ್ಳಿಯ ಹೈದ — ಹುಂಬರೊಂದಿಗೆ ಕೂಡಿ ಒಡನಾಡಿದ್ದೆ ಅವಳಿಗೆ ಹಿಂಟೋಕ್ ದೊಡ್ಡ ಮನೆಯ ಮಟ್ಟಿಗೆ ದೊಡ್ಡ ಹಾನಿಗೆ ಕಾರಣವಾಯಿತೆಂದು ಆತ ತನ್ನೊಳಗೆ ತೀರ್ಮಾನಕ್ಕೆ ಬಂದುಬಿಟ್ಟನು.

'ಇದೊಂದು ದೊಡ್ಡ ನಷ್ಟವಾಯಿತು !' ಆತ ತನ್ನಷ್ಟಕ್ಕೆ ಪದೇಪದೇ ಅನ್ನ ತೊಡಗಿದ. 'ನಾನು ಅವಳನ್ನು ಹಾಳುಮಾಡುತ್ತಿದ್ದೇನೆ, ಬರೆ ನನ್ನ ಮನಃಸಾಕ್ಷಿಯ ಮೋಹಕ್ಕೆ ಬಿದ್ದು.'

ಕೆಲವು ದಿನ ನಂತರ ಒಂದು ಮುಂಜಾನೆ ಅವನ ಮನಸ್ಸು ಇದೇ ವಿಚಾರಗಳಿಂದ ಕದಡಿಕೊಂಡಿರುವಾಗ, ಅವರು ಮುಂಜಾನೆಯ ಉಪಾಹಾರ ಮುಗಿಸುತ್ತಿರುವಾಗಲೇ ಕಿಟಿಕಿಯಲ್ಲಿ ಯಾರೋ ನೆರಳು ಚೆಲ್ಲಿದ್ದನ್ನು ಆತ ಕಂಡನು. ತಲೆ ಎತ್ತಿ ನೋಡಿದಾಗ, ಜೈಲ್ಸನು ಅವರ ಗಮನವನ್ನು ಸೆಳೆದುಕೊಳ್ಳಲಿಕ್ಕೆ ಸ್ವಲ್ಪ ಹೊತ್ತಿನಿಂದಲೂ ಕಿಟಿಕಿಯತ್ತ ಕುತ್ತಿಗೆ ಚಾಚಿ ಚಡಪಡಿಸುತ್ತಿದ್ದನು. ಅವನನ್ನು ಮೊದಲು ನೋಡಿದವಳು ಗ್ರೇಸ. 'ಅಕೋ ಅಲ್ಲಿ ಬಂದ,— ಮತ್ತೆ ಹೊಸ ಕುದುರೆ ತಂದಿದ್ದಾನೆ' ಆಕೆ ಉದ್ಗರಿಸಿದಳು.

ಅವರ ಮುಖಗಳ ಮೇಲೆ ಜೈಲ್ಸನ ಕುರಿತು ಮೂಡಿದ ಬೇರೆಬೇರೆ ವಿಚಾರ— ವಿಕಾರಗಳು ಅಚ್ಚೊತ್ತಿದ್ದು ಅವನು ಓದಬಹುದಿತ್ತು, ಕಿಟಿಕಿಯ ಹಳೆಯ ಕಾಜಿನೊಳಗಿಂದಲೂ. ಆದರೆ ಅದೇನೂ ಅವನಿಗೆ ಕಾಣಲಿಲ್ಲ. ಅವನ ಚರ್ಯೆ ಆಶ್ಚರ್ಯದಿಂದ, ನಗೆಯಿಂದ ಕೆಂಪಾಗಿ ಬೆಳಗಿತು.— ಆ ನಗೆಗೆ ಬೇರೆ ಏನೋ ವಿಚಾರ ಕಾರಣ. ಆಗ ಅವರೆಲ್ಲರೂ ಊಟದ ಮೇಜಿನಿಂದ ಎದ್ದು ಬಾಗಿಲಿಗೆ ಹೋದರು— ಗ್ರೇಸಳ ರೀತಿ ಸಚಿಂತ, ವ್ಯಗ್ರವಿತ್ತು; ಅವಳ ತಂದೆಯದು ಹಗಲುಗನಸು ಕಂಡಂತೆ, ಅವನ ಹೆಂಡತಿಯದು ಸೌಮ್ಯವೂ ಕುತೂಹಲಿಯೂ ಆಗಿತ್ತು.

'ನಾವು ನಿನ್ನ ಕುದುರೆಯನ್ನು ನೋಡಲಿಕ್ಕೆ ಹೊರಬಂದೆವು,' ಅವಳು ಅಂದಳು. ಅವರ ಈ ಗಮನದಿಂದ ಆತ ಹಿಗ್ಗಿದ್ದು ಸ್ಪಷ್ಟವಿತ್ತು. ಆ ಹೊಸ ಕುದುರೆಯ ನಡಿಗೆ ಪರೀಕ್ಷಿಸಲಿಕ್ಕೆ ಆತ ಒಂದೆರಡು ಮೈಲು ಅದನ್ನು ಏರಿ ಓಡಿಸಿಕೊಂಡು ಬಂದಿದ್ದನು. 'ನಾನು ಇದನ್ನು ಕ್ರಯಕ್ಕೆ ಕೊಂಡೆ' ತನ್ನ ಎದೆಯಲ್ಲಿ ಉಕ್ಕುವ ಕಾವನ್ನು ಉಪೇಕ್ಷೆಯಾಗಿ ಕಾಣುವಷ್ಟು ಹತ್ತಿಕ್ಕಿ ಆತ ಅಂದ, 'ಏಕೆಂದರೆ ಇದು ಹೆಂಗಸು ಸವಾರಿ ಮಾಡುವ ಕುದುರೆ.'

ಇಷ್ಟಾದರೂ ಮೆಲಬರಿ ಪ್ರಸನ್ನನಾಗಲಿಲ್ಲ. ಶ್ರೀಮತಿ ಮೆಲಬರಿ ಕೇಳಿದಳು, 'ಇದು ಸೌಮ್ಯ ಸಾಧು ಪ್ರಾಣಿಯೋ?'

ಆ ಕುರಿತು ಸಂದೇಹವೇ ಇಲ್ಲವೆಂದು ವಿಂಟರಬೋರ್ನ ಅವಳಿಗೆ ಆಶ್ವಾಸನವಿತ್ತನು. 'ಆ ಬಗ್ಗೆ ನಾನು ಖಾತ್ರಿ ಮಾಡಿಕೊಂಡಿದ್ದೇನೆ. ಇದಕ್ಕೆ ಈಗ ಇಪ್ಪತ್ತೊಂದು ಮತ್ತು ತನ್ನ ಪ್ರಾಯಕ್ಕೂ ಮೀರಿ ಜಾಣವಾಗಿದೆ.'

'ಸರಿ ಕೆಳಗಿಳಿ. ಒಳಗೆ ಬಾ.', ಮೆಲಬರಿ ಒರಟಾಗಿಯೇ ಅಂದ. ಜೈಲ್ಸ ಕುದುರೆಯಿಂದ ಇಳಿದ.

ಈ ಘಟನೆಯು ವಿಂಟರಬೋರ್ನನ ಕಳೆದ ಒಂದೆರಡು ವಾರಗಳ ವಿಚಾರದ ಫಲವಾಗಿತ್ತು. ಆ ದಿನ ಸಂಜೆಯ ಔತಣ ಕೂಟದ ಅಪಯಶಸ್ಸನ್ನು ಆತನು ಆದಷ್ಟು ತಾತ್ವಿಕವೃತ್ತಿಯಿಂದಲೆ ಸ್ವೀಕರಿಸಿದ್ದನು. ಆದರೂ ಒಂದು ದಿನ ಶರ್ಟನ ಅಭ್ಯಾಸದ ಸಂತೆಪೇಟೆಗೆ ಹೋದಾಗ ಆ ಹೆಣ್ಣು ಕುದುರೆಯನ್ನು ಕೊಂಡುಕೊಳ್ಳುವಷ್ಟು ಅವನಲ್ಲಿ ಉತ್ಸಾಹ ಇನ್ನೂ ಉಳಿದಿತ್ತು, ಗ್ರೇಸಳ ಬಗೆಗೆ ಈ ಕುದುರೆ ನೆರೆಹೊರೆಯ ಒಬ್ಬ

ಪಾದ್ರಿಯದಾಗಿತ್ತು. ಪಾದ್ರಿಗೆ ಬಹಳ ಹೆಣ್ಣು ಮಕ್ಕಳು. ಅವರು ಸವಾರಿ ಮಾಡಿದ ಕುದುರೆ ಅದು. ಈಗ ಸಭ್ಯ ಹೆಣ್ಣನ್ನೋ ಗಂಡನ್ನೋ ಅದು ಒಯ್ಯುತ್ತಿತ್ತು. ಅಲ್ಲದೆ ಜೈಲ್ಸನಿಗೆ ಹೊಲಗೆಲಸಕ್ಕೆ ಗಾಡಿಕಟ್ಟಲಿಕ್ಕೆ — ಯಾವ ಅಡ್ಡ ಕೆಲಸಕ್ಕೂ ಅದು ಅನು ಕೂಲವಿತ್ತು. ತಾನೊಬ್ಬ ತಿಳುವಳಿಕೆಯುಳ್ಳ ಗೃಹಸ್ಥ ಅಹುದು ಎಂದು ಮೆಲಬರಿಯ ಸದಭಿಪ್ರಾಯವಾಗುವಂತೆ ತಿರುಗಿ ಅವನ ಮರ್ಜಿಯಲ್ಲಿ ಏರಲಿಕ್ಕೆ ಈ ಚತುರ ಚತುಷ್ಪಾದವು ತನಗೆ ತುಂಬ ಉಪಕಾರಿಯಾದೀತು, ತನ್ನ ಹೆಂಡತಿ ಆದಾಗ ಗ್ರೇಸಳಿಗೆ ಸವಾರಿಯ ಅನುಕೂಲತೆಯೂ ಇದರಿಂದ ಆದೀತು, — ಈ ಸಂಗತಿಯೂ ಮೆಲಬರಿಯ ಮನಸ್ಸಿಗೆ ಬಂದೀತು ಎಂದೆಲ್ಲ ಜೈಲ್ಸ ಎಣಿಕೆ ಹಾಕಿದನು.

ಆಕೆಯೋ, ಇಂದು ಮುಂಜಾನೆ ಎಂದಿಗಿಂತ ಹೆಚ್ಚು ತೀವ್ರವಾದ ಆಸಕ್ತಿಯಿಂದ ಅವನನ್ನು ನೋಡಿದ್ದಳು. ಈ ವೃತ್ತಿಯು ಹೆಣ್ಣಿನದೊಂದು ವಿಶೇಷ. ಇದನ್ನು ಬಿಡಿಸಿ ಹೇಳಲು ಹೋದರೆ ಪದಾರ್ಥ — ವಸ್ತುವಿನ ಅಭೇದ್ಯತೆಯಷ್ಟೇ ರಹಸ್ಯದ ಸಂಗತಿ ಅನಿಸುತ್ತದೆ. ತನ್ನ ಅನಾವಶ್ಯಕ ಉಪೇಕ್ಷೆಗೆ ಒಳಪಟ್ಟವನ ಬಗೆಗೆ ತಾನೆ ಮರುಕವನ್ನು ತಾಳುವ ಹೆಣ್ಣಿನ ಈ ವಿಚಿತ್ರವೃತ್ತಿ.

ಸಾಮಾನ್ಯವಾಗಿಯೇ ವಿಂಟರಬೋರ್ನ ಗಂಭೀರ ಪ್ರಕೃತಿಯವನು. ಆದರೆ ಇಂದು, ಈಗ ಒಂದು ಪ್ರಸನ್ನತೆಯೂ ಉತ್ತೇಜನೆಯೂ ಅವನಲ್ಲಿ ಉಕ್ಕಿ ಅವನ ಕಣ್ಣಿಗೂ ಕೆನ್ನೆಗೂ ಹೊಸ ಹೊಳಪನ್ನು ತಂದಿತ್ತು. ಮೆಲಬರಿಯ ಹೆಂಡತಿ ಅವನಿಗೆ ಉಪಾಹಾರ ಸೇವಿಸಲು ಕೇಳಿಕೊಂಡಳು. ಆತ ಓಗ್ಗಿನಿಂದಲೆ ಒಪ್ಪಿಕೊಂಡ, ಅವರೊಂದಿಗೇ ಉಣ್ಣುವೆನೆಂದು. ಅವರ ಉಪಾಹಾರ ಮುಗಿದದ್ದು. ಕಿಟ್ಲೆ ಬರಿದಾದ ಸದ್ದು ಅದರ ಉಗಿಯೊಂದಿಗೆ ಬರುತ್ತಿದ್ದುದು — ಯಾವುದನ್ನೂ ಆತ ಗಮನಿಸಲೇ ಇಲ್ಲ. ಆದ್ದರಿಂದ ಮತ್ತೆ ನೀರು ಬಿಸಿ ಮಾಡಬೇಕಾಯಿತು. ಮೇಜು ಸಜ್ಜುಗೊಳಿಸ ಬೇಕಾಯಿತು. ತನ್ನ ಅಂತಸ್ಥ ಉಲ್ಲಾಸದಲ್ಲಿ, ಹೊಸ ಕುದುರೆಯನ್ನು ಕೊಳ್ಳುವುದರ ಹಿಂದಿನ ತನ್ನ ಕೋಮಲವಾದ, ಪ್ರಿಯವಾದ ಉದ್ದೇಶದ ಹಂಬಲದಲ್ಲಿ ಆತ ಪೂರ್ತಿ ತನ್ಮಯನಾಗಿ ಬಿಟ್ಟಿದ್ದ. ಆದ್ದರಿಂದ ಹೊತ್ತು ಏರುತ್ತಿದ್ದದ್ದೂ, ಮನೆಯ ಮಂದಿಯನ್ನು ಅವರವರ ದಿನದ ಕೆಲಸಕ್ಕೆ ಹೋಗದಂತೆ ತಾನೆ ತಡೆಯಲು ಕಾರಣ ವಾದದ್ದೂ — ಯಾವುದೂ ಅವನಿಗೆ ಅರಿವಾಗಲಿಲ್ಲ.

ಆ ಮೇಲೆ ಆ ಕುದುರೆ ಖರೀದಿ ಮಾಡಿದ ಸ್ವಾರಸ್ಯದ ಕತೆಯನ್ನು ಆತ ಸಾದ್ಯಂತ ಹೇಳಿದ. ಅದನ್ನು ಹೇಳುವಾಗ ಕತೆಯು ವಿನೋದಿಯಾಗಿದ್ದರೂ ಆತ ಕೋಣೆಯೊಳಗಿನ ಒಂದು ವಸ್ತುವನ್ನೆ ಉಗ್ರಮುದ್ರೆಯಿಂದ ದಿಟ್ಟಿಸುತ್ತಲೆ ಹೇಳಿದ. ಅದು ಅವನ ಚಾಳಿ. ಏನಾದರೊಂದು ಮೋಜಿನ ಸಂಗತಿ ಹೇಳುವಾಗ ಆತ ಹಾಗೆ ಕೆಟ್ಟ ಗಾಂಭೀರ್ಯದಿಂದ ಏನನ್ನೋ ದಿಟ್ಟಿಸುತ್ತಿದ್ದ. ತಾನು ಕಂಡ ದೃಶ್ಯವನ್ನು ಆತ ಹೀಗೆ ಬಣ್ಣಿಸುತ್ತಿರುವಾಗಲೆ ಗ್ರೇಸಳು ಎದ್ದಳು, 'ಮಿಸ್ಟರ್, ವಿಂಟರಬೋರ್ನ, ನಾನೀಗ ನನ್ನ ತಾಯಿಗೆ ಕೆಲಸದಲ್ಲಿ ನೆರವಾಗಬೇಕು.' ಅಂದಳು.

'ಆಂ?' ಅಂದ ಜೈಲ್ಸ ಒಮ್ಮೆಲೆ ತನ್ನ ದೃಷ್ಟಿಯನ್ನು ಅವಳ ಕಡೆಗೆ ಹೊರಳಿಸಿ. ಅವಳು ಆಡಿದ ಮಾತನ್ನೆ ಮತ್ತೆ ಆಡಿದಳು — ಸಂಕೋಚದಿಂದ ನಾಚುತ್ತ. ಆಗ ಜೈಲ್ಸ ಒಮ್ಮೆಲೆ ಪ್ರಜ್ಞೆ ಮೂಡಿದಂತೆ, ವಿಪರೀತ ಎಚ್ಚರಗೊಂಡವನಂತೆ, ನೆನೆದೆದ್ದು 'ಅವಶ್ಯವಾಗಿ' ಎಂದು ಲಗುಬಗೆಯಿಂದ ಅವರಿಗೆ 'ಸುಪ್ರಭಾತ ಬಯಸಿ' ಬೀಳ್ಕೊಂಡನು.

ಏನೆ ಇರಲಿ ಒಟ್ಟಾರೆ ಅವನು ಅವಳೊಂದಿಗಾದರೂ ತನ್ನ ನಿಲುವೆಯನ್ನು ನೇರ್ಪಡಿಸಿಕೊಂಡಂತೆ ಆಯಿತು. ಕಾಲವೂ ಅವನಿಗೆ ಅನುಕೂಲವಾದಂತೆ ಇತ್ತು. ಏಕೆಂದರೆ, (ಅವಳ ತಂದೆ ದುಃಖದಿಂದ ಗಮನಿಸಿದಂತೆ!) ಅವಳ ಕಣ್ಣಿಗೆ ಹಿಂಟೋಕ್ ಹಳ್ಳಿಯ ಹಳೆಯ ಮನೆಬಳಕೆಯ ಗೊಡ್ಡುತನ ಈಗ ರೂಢಿಯಾಗಿತ್ತು. ಅದರ ವೈಚಿತ್ರ್ಯ ಮಾಸಿತ್ತು. ಬಹಳ ವರ್ಷ ದೂರವಿದ್ದುದರಿಂದ ಒಬ್ಬರ ಮುಖಚರ್ಯೆ ನಮಗೆ ಕ್ಷಣಕಾಲ ವಿಚಿತ್ರವೆನಿಸುತ್ತದೆ. ಆದರೆ ಮತ್ತೆ ಹೊಸ ಪರಿಚಯದೊಂದಿಗೆ ಬಳಕೆ ಸ್ಥಾಪಿತವಾದಂತೆ ಆ ವೈಚಿತ್ರ್ಯ ನಮಗೇ ಗೊತ್ತಿಲ್ಲದೆ ಮಾಯವಾಗುತ್ತದೆ. ಮತ್ತು ಹಿಂದಿನ ನಿತ್ಯ ಬಳಕೆಯ ಗೆರೆಬಣ್ಣಗಳೊಂದಿಗೆ ಅದು ಕೂಡಿ ಒಂದಾಗಿ ಬಿಡುತ್ತದೆ.

ಗ್ರೇಸಳ ನಡತೆಯೂ ಅದೇ ಮಾದರಿಯಲ್ಲಿ ಇತ್ತು. ಆದಾಗ್ಯೂ ಮೆಲಬರಿಗೆ ಸಮಾಧಾನವಿಲ್ಲ, ತಾನು ಅಷ್ಟೊಂದು ತೆತ್ತು ಕಷ್ಟಪಟ್ಟು ಕೆತ್ತಿ ಕಡೆದ ರತ್ನವನ್ನು ಕೈಬಿಡಲು ಆತ ಒಡಂಬಡಲಾರ. ಅವಳ ಭಾವನೆಗಳ ಪರಡಿ ವಿಂಟರಬೋರ್ನನತ್ತ ಒಲಿದು ತೂಗಿನಿಲ್ಲುವ ಮುಂಚೆಯೇ ಏನಾದರೊಂದು ಘಟಿಸಬೇಕು. ಅವಳು ನಿಂತ ಅಂತಸ್ತನ್ನು ಕಾಪಾಡಬೇಕು ಎಂದು ಮೆಲಬರಿ ತನ್ನ ಮನಸ್ಸಿನ ಅಂತರ್ತಮದ ತಳದಲ್ಲಿ ಒಂದು ವ್ಯರ್ಥ ಆಶೆಯನ್ನು ಗೌಪ್ಯವಾಗಿ ಇಟ್ಟುಕೊಂಡಿದ್ದನು.

೧೩

ಅದೊಂದು ಒಳ್ಳೆ ಬಿಸಿಲುಬಿದ್ದ ಹಗಲಾಗಿತ್ತು. ಆ ಋತುವಿನಲ್ಲಿ ಅಷ್ಟು ಬೆಳಕಿನ ಶುಭ್ರ ದಿನ ಅಪರೂಪವೆ. ಮೆಲಬರಿಯ ಮಗಳು ಮುಂಜಾನೆ ತಿರುಗಾಟಕ್ಕೆ ಹೋದಳು; ಮತ್ತು ಅವಳ ಬಗೆಗೆ ಯಾವಾಗಲೂ ಪರಿವೆ ವಹಿಸುವ ತಂದೆ ಒಂದು ಗಂಟೆ ಕಾಲ ಬಿಡುವು ಮಾಡಿಕೊಂಡು ಅವಳ ಸಂಗಡ ಹೋಗಲು ಅಣಿಯಾದನು.

ತಂಗಾಳಿ ಹೊಸತಾಗಿ ದೃಢವಾಗಿ ಬೀಸುತ್ತಿತ್ತು; ಟೊಂಗೆಟಿಸುಲುಗಳ ರಾಶಿಯೊಳಗಿಂದ ಅದು ಸೋಸಿ ಸೋಸಿ ಬರುತ್ತಿತ್ತು — ಅವುಗಳನ್ನು ಅಲುಗಾಡಿಸದೆ, ಈಷ್ಟು ಎಲೆಗಳನ್ನು ಮಾತ್ರ ಕೆಳಗಿನ ನೆರೆಯ ಎಲೆಗಳಿಗೆ ಚಂಚಲವಾಗಿ ತಟ್ಟುವಂತೆ

ಮಾಡುತ್ತಿತ್ತು. ಗ್ರೇಸಳ ತುಟಿಗಳು ಅವಳ ಹುಟ್ಟಿದೂರಿನ ಈ ಹವೆಯನ್ನು ಹಾಲಿನಂತೆ ಹೀರಿಕೊಂಡವು.

ಅವರು ಆ ಕಾನು ಒಂದು ಮೂಕೆಯಲ್ಲಿ ಸೇರಿಕೊಂಡ ತಾಣಕ್ಕೆ ತಲ್ಪಿದರು ; ಅದರ ಆಚೆಗೆ ಹೆಚ್ಚು ತೆರವಾದ ಬಯಲಲ್ಲಿ ಅವರು ಹೋದರು. ಸುತ್ತಲೂ ಒಮ್ಮೆ ಕಣ್ಣು ಹಾಯಿಸಿ ಅವರು ತಿರುಗಿ ಆ ಕಾನನ್ನೆ ಹೋಗುವವರಿದ್ದರು. ಅಷ್ಟರಲ್ಲಿ ಏದುತ್ತ ಬಾಲ ಎಳೆದುಕೊಂಡು ಒಂದು ನರಿಯು ಹೊರಬಿದ್ದು, ಸಾಕಿದ ಬೆಕ್ಕಿನಷ್ಟು ಸಾಧುವಾಗಿ ಅವರ ಮುಂದಿನಿಂದ ಓಡಿ ಹೋಯಿತು. ಮತ್ತು ಕೆಲವು ಸತ್ತ ಬಂದಳಿಕೆಯ ಪೊದೆಗಳಲ್ಲಿ ಮಾಯವಾಯಿತು. ಅವರಿಬ್ಬರೂ ಮುಂದೆ ನಡೆದರು. ಅವಳ ತಂದೆ ಆ ಪ್ರಾಣಿಯನ್ನು ನೋಡಿ ಅಂದನು, ‘ ಯಾರೋ ಹತ್ತಿರದಲ್ಲಿಯೇ ಬೇಟೆ ಹೊರಡಿಸಿದ್ದಾರೆ.’

ತುಸು ಮುಂದೆ ನಡು ದೂರದಲ್ಲಿ ಬೇಟೆಯ ನಾಯಿಗಳು ಅತ್ತಿತ್ತ ಓಡಾಡುವುದು ಕಂಡಿತು. ಆ ದಿನ ಬೇಟೆಯ ನಾತ ಆರಿರಬೇಕು. ಬೇಟೆಯ ಗೊತ್ತು ಪತ್ತೆ ಸರಿಯಾಗಿ ಸಿಗದೆ ಗೊಂದಲಗೆಟ್ಟು ಅಂದಿನ ಬೆನ್ನಟ್ಟುವಿಕೆ ಸಡಿಲುಬಿದ್ದಿರಬೇಕು. ಅದೇ ಒಂದು ಗಳಿಗೆಯಲ್ಲಿ ಈ ಇಬ್ಬರು ಪಾದಚಾರಿಗಳ ಕಡೆಗೆ ಕುದುರೆಯೇರಿ ಒಬ್ಬ ಸಭ್ಯ ಬೇಸಾಯಗಾರನು ಬಂದನು. ಆಗ ಗ್ರೇಸಳು ಕೆಲವು ಹೆಜ್ಜೆ ಮುಂದಿದ್ದರಿಂದ ಅವಳನ್ನೆ ಆತ ವಿಚಾರಿಸಿದ,—ಅವಳು ನರಿಯನ್ನು ಕಂಡಿದ್ದಳೋ ? ಎಂದು.

‘ ಹೌದು,’ ಅವಳೆಂದಳು, ‘ ನಾನು ಸ್ವಲ್ಪ ಮುಂಚೆ ಕಂಡೆ — ಅದೋ ಅಲ್ಲಿ, ಹೊರಬಿತ್ತು.’

‘ ನೀನು ಹೆಲ್ಲೊ ಎಂದು ಕೂಗಿದಿಯಾ ? ’

‘ ಇಲ್ಲ. ನಾನು ಏನೂ ಅನ್ನಲಿಲ್ಲ.’

‘ ಅರೆ ! ಯಾಕೆ ಇಲ್ಲ ? ನಿನ್ನ ಕರ್ಮ, ಯಾಕೆ ಕೂಗಲಿಲ್ಲ ! ಆ ಮುದಿ ಬೋರನಿಗಾದರೂ ಕೂಗಲಿಕ್ಕೆ ಯಾಕೆ ಹೇಳಲಿಲ್ಲ ?’ — ಹೀಗೆಂದು ಆ ಸವಾರ ಕುದುರೆಯೋಡಿಸುತ್ತ ನಡೆದುಬಿಟ್ಟನು.

ಅವಳಿಗೆ ಮುಖಭಂಗವಾದಂತೆ ಅನಿಸಿತು. ತಂದೆಯ ಮೋರೆಯನ್ನು ನೋಡಿದಳು. ಅದು ಪೂರಾ ಕೆಂಪಿಟ್ಟಿತ್ತು.

‘ ಆತ ನಿನ್ನೊಂದಿಗೆ ಹಾಗೆ ಮಾತಾಡತಕ್ಕದಿದ್ದಿಲ್ಲ,’ ಮುದುಕನ ದನಿಯಲ್ಲಿ ಎದೆಯ ನೋವು ಇಣುಕುತ್ತಿತ್ತು. ಆ ನೋವು ಆ ಸವಾರ ತನ್ನ ಕುರಿತು ಬಳಸಿದ ವಿಶೇಷಣಕ್ಕಾಗಿ ಇದ್ದಿಲ್ಲ. ‘ ಆತ ಸಭ್ಯ ಗೃಹಸ್ಥನಾಗಿದ್ದರೆ ಹಾಗೆ ಆಡುತ್ತಿದ್ದಿಲ್ಲ. ಒಳ್ಳೆಯ ಹೆಣ್ಣು ಮಕ್ಕಳೊಂದಿಗೆ ಆಡುವ ಭಾಷೆಯಲ್ಲ ಅದು. ನೀನು ಇಷ್ಟು ಚೆನ್ನಾಗಿ ಓದಿದವಳು, ಸುಸಂಸ್ಕೃತಳು — ನೀನು ಆ ನರಿಯನ್ನು ಕಂಡಾಕ್ಷಣ ಹೆಲ್ಲೊ ! ಎಂದು ಹೊಲದ ಪುಂಡ ಪೋರನಂತೆ ಕೂಗಬೇಕೆಂದು ಆತ ಅಪೇಕ್ಷಿಸುವುದಾದರೂ ಹೇಗೆ ? ನಿನಗೆ ಇಲ್ಲಿಯ ಈ ಇದೆಲ್ಲದರೊಳಗಿಂದ ಮೇಲಕ್ಕೆ ಎತ್ತಿ ನೆರೆಹೊರೆಯವರಿಗೆ ಹೆಣ್ಣೆಂದರೆ ಹೇಗಿರಬೇಕೆಂಬುದನ್ನು ಉದಾಹರಣೆಯಾಗಿ ಕಾಣಿಸಿಕೊಡಲಿಕ್ಕೆ ನನಗೆ ವರ್ಷಕ್ಕೆ

ಸುಮಾರು ನೂರು ಪೌಂಡುಗಳಾದರೂ ಬಿದ್ದಿಲ್ಲವೆ ? ಗ್ರೇಸ, ನಿನಗೆ ಇದರ ಗುಟ್ಟನ್ನು ಹೇಳಲೇ ? ನಾನು ನಿನ್ನ ಜತೆಯಲ್ಲಿ ಇದ್ದರಿಂದ ಹೀಗಾಯಿತು. ಒಬ್ಬ ಕರಿಕೋಟು ತೊಟ್ಟ ಜಮೀನ್ದಾರನೋ ಪಾದ್ರಿಯೋ ನಿನ್ನ ಸಂಗಡ ನನ್ನ ಬದಲಿಗೆ ಇದ್ದಿದ್ದರೆ ಆತ ಈ ರೀತಿ ಮಾತಾಡುತ್ತಿರಲಿಲ್ಲ.'

'ಇಲ್ಲ, ಇಲ್ಲ, ಅಪ್ಪಾ ; ನಿನ್ನಲ್ಲಿ ಅಂಥ ಏನೂ ಗೊಡ್ಡು, ಒರಟು, ಅಂದಗೇಡಿತನ ಏನೂ ಇಲ್ಲ.'

'ನಾನು ಹೇಳಿದ್ದೆ ನಿಜ. ಅದೇ ಸರಿ. ನಾನು ನೋಡಿದ್ದೇನೆ, ಅದೂ ಬಹಳ ಸಲ, ಹೆಣ್ಣಿಗೆ ಅವಳ ಜತೆಗೆ ನಡೆಯುವ ಗಂಡಿನಿಂದ ಒಳ್ಳೆ ಕಳೆ ಬರುತ್ತದೆ. ಒಬ್ಬ ಪ್ರತಿಷ್ಠಿತ ಪರಿಷ್ಕೃತ ಗೃಹಸ್ಥನೊಂದಿಗೆ ಇರುವಾಗ ನಿಸ್ಸಂಶಯವಾಗಿ ಕುಲೀನ ಮಹಿಳೆಯಾಗಿ ಕಾಣುವ ಹೆಣ್ಣು ಇನ್ನೊಬ್ಬ ಗಾಂಪ ಗಂಡಸಿನೊಂದಿಗೆ ಒಡನಾಡುವಾಗ ಬನಾವಟು ಸಾಮಾನಾಗಿ ತೋರುತ್ತಾಳೆ. ನಿನ್ನನ್ನು ಇನ್ನು ಮುಂದೆ ಹೀಗೆ ಯಾರೂ ಕಾಣಬಾರದು ನಡೆಯಿಸಿಕೊಳ್ಳಬಾರದು — ನಿನ್ನ ಮಕ್ಕಳನ್ನಾದರೂ ಹಾಗೆ ನಡೆಯಿಸಿಕೊಳ್ಳಬಾರದು, ನಿನ್ನೊಂದಿಗೆ ನಡೆಯುಲಿಕ್ಕೆ ನನಗಿಂತ ಷೋಕಿ ಕಾಣುವಂಥ ಹೊಂತಗಾರ ಸಿಗುತ್ತಾನೆ ನೋಡು — ದೇವರಾಣೆಯಾಗಿಯೂ ಸಿಗುತ್ತಾನೆ.'

'ಆದರೆ ಅಪ್ಪಾ' ಆಕೆ ಕಳವಳದಿಂದ ಅಂದಳು, 'ಅದೇನೂ ನನಗೆ ಬೇಕಿಲ್ಲ. ಅದೇನೂ ನಾನು ಹಚ್ಚಿಕೊಂಡವಳೇ ಅಲ್ಲ. ಈಗ ನನಗಿರುವುದಕ್ಕಿಂತ ಹೆಚ್ಚಿನ ಮನ್ನಣೆ ಮರ್ಯಾದೆ ನನಗೆ ಬೇಡವೇ ಬೇಡ.'

'ಮಗಳೆಂಬುದು ಒಂದು ಕಂಗೆಡಿಸುವ ತಲೆಗೆಡಿಸುವ ಸೊತ್ತು' ಅಂದಿದ್ದ ಯಾರೋ ಗ್ರೀಕರ ಕವಿ. ಅದು ಮೆಲಬರಿಯಷ್ಟು ಮತ್ತೆ ಯಾರಿಗೂ ನಿಜವೆನಿಸಲಾರದು. ಗ್ರೇಸಳಿಗಂತೂ ತುಂಬ ವ್ಯಥೆ ಆಗ ಹತ್ತಿತ್ತು. ಇನ್ನು ಆಗಲೇ ಅಲ್ಲಿಯೆ ಅವಳಿಗೆ ತನ್ನ ಬದುಕನ್ನು ಜೈಲ್ಸ ವಿಂಟರಬೋರ್ನನಿಗೆ ಯಾವ ಹಿರಿಯಾಸೆಯೂ ಇರದೆ ಮುಡಿಪಾಗಿ ಇಟ್ಟುಬಿಡಬೇಕೆಂದು ಅನಿಸಿರಲಿಕ್ಕಿಲ್ಲ. ಆದರೆ ತನ್ನ ಮನೆಯವರಿಗೆ ತಾನೊಂದು ಸಾಮಾಜಿಕ ಆಢ್ಯತೆಯ ಆಶಾಸ್ಥಾನವಾಗಿಬಿಟ್ಟೆ' ಎಂದು ಅವಳು ಹೆಚ್ಚು ಹೆಚ್ಚು ಅಸ್ವಸ್ಥಳಾಗ ಹತ್ತಿದಳು.

'ನನಗೆ ಮೆಚ್ಚಿಗೆ ಆಗುವುದಿದ್ದರೆ, ನೀನು ಇದಕ್ಕೂ ಹೆಚ್ಚಿನ ಮರ್ಯಾದೆ ಮನ್ನಣೆ ಹೊಂದುವುದಕ್ಕೆ ನಿನ್ನ ಒಪ್ಪಿಗೆಯಷ್ಟೆ ?' — ತಂದೆ ಪ್ರಸ್ತಾಪವನ್ನೆ ಮುಂದುವರಿಸುತ್ತ ಕೇಳಿದನು.

ತನ್ನ ಭಾವನೆ ಏನೇ ಇದ್ದರೂ ಆಕೆ ಅದನ್ನು ಒಪ್ಪಿದಳು. ಅವನ ಯುಕ್ತಿವಾದ ಅವಳ ಮೇಲೆ ಹಾಗೆ ಪ್ರಭಾವ ಬೀರದೆ ಹೋಗಲಿಲ್ಲ.

'ಗ್ರೇಸ', ಮನೆಯನ್ನು ಮುಟ್ಟುವ ಮುಂಚೆಯೆ ಮೆಲಬರಿ ಅಂದನು, 'ನನ್ನ ಬಾಳನ್ನೆ ತೆರುವ ಪ್ರಸಂಗ ಬಂದರೂ ಸರಿಯೆ, ನಿನ್ನ ಮದುವೆ ಒಳ್ಳೆಯ ಕಡೆಗೆ ಆಗಲಿಕ್ಕೆ ಬೇಕು. ಈ ಹೊತ್ತು ನಾನು ಕಂಡುಕೊಂಡೆ — ಹರೆಯದ ಹೆಣ್ಣಿನ ಸದ್ಗುಣ

ಸಂಸ್ಕಾರ ಏನೇ ಇರಲಿ, ಅವಳು ಏಕಾಕಿಯಾಗಿ ಏನೂ ಅಲ್ಲ — ಯಾವದಕ್ಕೂ ಅಲ್ಲ, ನಿನ್ನ ಮದುವೆ ಒಳ್ಳೆಯ ಸ್ಥಳದಲ್ಲಿ ಆಗತಕ್ಕದ್ದು.'

ಆತ ಜೋರುಜೋರಾಗಿ ಉಸಿರು ಬಿಡುತ್ತಿದ್ದ. ಅವನ ಉಸಿರನ್ನು ತಂಗಾಳಿ ಎತ್ತಿಕೊಳ್ಳುತಿತ್ತು. ಅದಕ್ಕೆ ತನ್ನದೇ ಆದ ನಿಷೇಧದ ನಿಟ್ಟುಸಿರನ್ನು ಪ್ರತಿಯಾಗಿ ಬಿಡುತಿತ್ತು.

ಗ್ರೇಸ ಅವನ ಕಡೆಗೆ ಶಾಂತಭಾವದಿಂದ ನೋಡಿದಳು. 'ಹಾಗಾದರೆ ವಿಂಟರ ಬೊರ್ನನ ಬಗೆಗೆ?' ಆಕೆ ಕೇಳಿದಳು, 'ನಾನು ಈ ಮಾತು ಎತ್ತಿದ್ದು ಭಾವನೆಯ ಪ್ರಶ್ನೆಯೆಂದಲ್ಲ, ಅಪ್ಪಾ; ಇದೊಂದು ವಿಶ್ವಾಸ ಕಾಯ್ದುಕೊಳ್ಳುವ, ವಚನ ಪಾಲನೆಯ ಪ್ರಶ್ನೆಯೆಂದು.'

ಮರದ ವ್ಯಾಪಾರಿಯ ದೃಷ್ಟಿ ಕ್ಷಣಕಾಲ ತಗ್ಗಿತು. 'ನಾನರಿಯೆ-ನಾನರಿಯೆ.' ಅವನೆಂದನು, 'ಇದೊಂದು ಪರೀಕ್ಷೆಯ ಪೇಚೇ! ಇರಲಿ ಇರಲಿ, ಸದ್ಯ ಅವಸರವೇನೂ ಇಲ್ಲ. ಅವನದು ಹೇಗೆ ಏನಾಗುತ್ತದೋ ಕಾದು ನೋಡೋಣ.'

ಆ ದಿನ ರಾತ್ರಿ ಅವಳನ್ನು ತನ್ನ ಕೋಣೆಯಲ್ಲಿ ಕರೆದನು. ಅದು ನಡುಮನೆಯ ಹಿಂದಿನ ಚಿಕ್ಕ ಚೊಕ್ಕ ಕೋಣೆ. ಹಿಂದೊಮ್ಮೆ ಅದು ಭಟ್ಟಿಯ ಕೋಣೆಯ ಭಾಗ ವಾಗಿತ್ತು. ಅದರ ಗೋಡೆಯಲ್ಲಿಯೇ ದೊಡ್ಡ ಒಲೆಯು ಇತ್ತು. ಆದರೆ ಮೆಲಬರಿಯು ಅದನ್ನು ಕಚೇರಿಯ ಕೋಣೆಯಾಗಿ ಮಾಡಿಕೊಂಡಾಗ ಆ ಒಲೆಯಿದ್ದ ಪೊಳ್ಳಿನಲ್ಲಿ ಕಬ್ಬಿಣದ ತಿಜೋರಿ ಪೆಟ್ಟಿಗೆಯನ್ನು ಕಟ್ಟಿ ಕೂಡ್ರಿಸಿದನು. ಪೆಟ್ಟಿಗೆಯಲ್ಲಿ ಅವನ ಖಾಸಗಿ ಕಾಗದ-ಪತ್ರಗಳು ದಸ್ತೇವಜುಗಳನ್ನು ಇಡುತ್ತಿದ್ದನು.

ಈಗ ಆ ತಿಜೋರಿಯ ಕದ ತೆರೆದಿತ್ತು. ಅವನ ಕೀಲಿಗಳ ಗೊಂಚಲು ಕದದಿಂದ ಜೋಲುತ್ತಿತ್ತು.

'ಕೂಡ್ರು ಗ್ರೇಸ, ನನ್ನ ಜತೆಗೆ ಇರು. ನಿನ್ನ ಬೇಸರ ಕಳೆಯಲಿಕ್ಕೆ ಇವುಗಳೊಳ ಗಿಂದ ಕಣ್ಣುಹಾಯಿಸು.' ಅವಳತ್ತ ಕೆಲವು ಕಾಗದಗಳ ಒಂದು ಕಡತವನ್ನು ಅವನು ಒಗೆದು ಅಂದನು.

'ಅದು ಏನು?' ಅವಳು ಕೇಳಿದಳು.

'ಬೇರೆ ಬೇರೆ ಶೇರುಗಳು, ಬಾಂಡುಗಳು, ಠೇವಣಾತಿಯ ದಸ್ತೇವಜುಗಳು.' ಅವನ್ನು ಒಂದೊಂದಾಗಿ ಬಿಡಿಸಿ ಹೇಳಿದನು. 'ಒಂದೊಂದು ಕಾಗದವೂ ಇಷ್ಟಿಷ್ಟು ಹಣ ಹಡೆಯುತ್ತದೆ. ಇವುಗಳಲ್ಲಿ ಒಂದೊಂದು ಇನ್ನೂರು ಪೌಂಡು ಬೆಲೆಯದೆಂದರೆ ನೀನು ನಂಬುವಿಯಾ?'

'ನಿಜವಾಗಿಯೂ ಇಲ್ಲ. ನೀನೇ ಹಾಗೆ ಹೇಳದಿದ್ದರೆ.'

'ಹಾಗಾದರೆ ಇದನ್ನು ನಂಬು. ಇನ್ನು ಈ ಇವು ಇನ್ನೊಂದು ಬಗೆಯ ಕಾಗದಗಳು. ಇವು ಶೇಕಡಾ ಮೂರರಂತೆ ಬಡ್ಡಿ ಬರುವ ಬೇರೆ ಬೇರೆ ರಕಮುಗಳು. ಈ ಇವು ಬ್ರಿಡಿ ಬಂದರದ ಬಾಂಡುಗಳು, ಆ ಬಂದರಿನಲ್ಲಿ ನಮ್ಮ ಭಾಗ್ಯ ತೊಡಗಿ

ಸಿದ್ಧಾಗಿದೆ. ನಿನಗೆ ಗೊತ್ತು ನಾನು ಕಟ್ಟಿಗೆಯನ್ನು ಆ ಬಂದರಕ್ಕೆ ಕಳುಹಿಸುತ್ತೇನೆ. ಉಳಿದವುಗಳನ್ನೂ ನಿನಗೆ ಮನಸ್ಸು ಬಂದಾಗ ತೆರೆದು ನೋಡು. ಅವು ಸ್ವಾರಸ್ಯವಾಗಿ ಕಾಣಬಹುದು.'

'ಸರಿ. ಇನ್ನೊಂದು ದಿವಸ ತೆರೆದು ನೋಡುತ್ತೇನೆ.' ಆಕೆ ಏಳುತ್ತ ಅಂದಳು.

'ಹುಚ್ಚು. ಈಗಲೇ ತೆರೆ. ಇನ್ನೊಂದು ದಿವಸವಂತೆ! ಲೇ ಇಂಥ ವಿಷಯ ನೀನು ಅಲ್ಪಸ್ವಲ್ಪ ಅರಿತಿರಬೇಕು. ಕಲಿತ ಎಳೆ ಹೆಣ್ಣು ಹಣಕಾಸಿನ ವಿಷಯವಾಗಿ ಏನೂ ಅರಿಯದವಳಾಗಿರಬಾರದು. ಒಂದೊಮ್ಮೆ ಎಂದಾದರೂ ನೀನು ವಿಧವೆ ಆದಿಯೆಂದು ತಿಳಿ, ಆಗ ನಿನ್ನ ಕೈತುಂಬ ಗಂಡನ ಹಕ್ಕು ಬಾಧ್ಯತೆಯ ದಸ್ತೇವಜುಗಳು, ಠೇವಣಾತಿಯ ಬಾಂಡುಗಳು ......'

'ಹಾಗೆಲ್ಲ ಅನ್ನಬೇಡ, ಅಪ್ಪಾ. ಹಕ್ಕು ಬಾಧ್ಯತೆಯ ದಸ್ತೇವಜುಗಳು! ಇದು ಹೇಗೋ ಕೇಳಿಸುತ್ತದೆ!'

'ಅಕೋ ಆ ಕಾಗದ ಶರ್ಟನ್ ಅಬ್ಬಾಸದಲ್ಲಿಯ ಕೆಲವು ಮನೆಗಳ ನನ್ನ ಮಾಲಕೀ ಹಕ್ಕಿನ ......'

'ಸರಿ, ಆದರೆ —', ಅವಳು ಅನುಮಾನಿಸಿದಳು, ನಿಧಾನಿಸಿದಳು. ಅಗ್ಗಿಷ್ಟಿಗೆ ಯಲ್ಲಿನ ಬೆಂಕಿಯನ್ನೆ ದಿಟ್ಟಿಸುತ್ತ ಮೆಲು ದನಿಯಲ್ಲಿ ಅಂದಳು 'ನನ್ನ ಬಗ್ಗೆ ಗೊತ್ತು ಮಾಡಿಟ್ಟ ಯೋಜನೆ ಏನಾದರೊಂದು ರೂಪಕ್ಕೆ ಬಂದದ್ದಾದರೆ, ನನ್ನ ಕ್ಷೇತ್ರ ತೀರಾ ಸರ್ವೇ ಸಾಧಾರಣವೇ ಆಗುವದಂ.'

'ನಿನ್ನ ಕ್ಷೇತ್ರ ಹಾಗೆ ಸಾಮಾನ್ಯವಾಗಬೇಕೆಂದಿಲ್ಲ. ಆಗತಕ್ಕದ್ದಲ್ಲ. ಆ ದಿನ ಆ ಚಾರ್ಮಂದಳು ನಿನಗೆ ತನ್ನ ಮನೆಯನ್ನೆಲ್ಲ ಅದರೊಳಗಿನ ವಸ್ತು-ಒಡವೆಗಳನ್ನೆಲ್ಲ ಸುತ್ತಾಡಿ ಕಾಣಿಸಿದಾಗ ನಿನಗೆ ಎಂದೂ ಎಲ್ಲೂ ಎನಿಸದಷ್ಟು ಸ್ವಾಭಾವಿಕ ಭಾವನೆ ಅನಿಸಿ ತೆಂದು ಅಂದಿದ್ದೆಯಲ್ಲವೇ? ಅವಳು ನಿನಗೆ ಅಷ್ಟು ಚೆನ್ನಾಗಿ ಬರಮಾಡಿಕೊಂಡು ಚಹಕ್ಕಾಗಿ ಉಳಿಸಿಕೊಂಡ ದಿನ ಅಂದಿದ್ದು ನಿಜವಲ್ಲವೇ?'

'ಹೌದುಂ. ಅಂದದ್ದು ನಿಜ.'

'ಅದು ನಿಜವೇ ತಾನೆ?'

'ಹೌದುಂ. ಆಗ ನನಗೆ ಹಾಗೆ ಅನಿಸಿದ್ದು ನಿಜವೇ ಸರಿ. ಆದರೆ ಬಹುಶಃ ಈಗ ಆ ಭಾವನೆ ಅಷ್ಟು ತೀವ್ರವಾಗಿಲ್ಲ.'

'ಓ. ಸರಿ. ಇದು ನೋಡು. ನಿನಗೆ ಹಾಗೆ ಕಂಡಿರಲಿಕ್ಕಿಲ್ಲ. ಆದರೂ, ಆಗ ನಿನಗೆ ಅನಿಸಿದ ಭಾವನೆಗಳೇ ನಿಜವಾದವು, ಪ್ರಾಮಾಣಿಕವಾದವು. ಏಕೆಂದರೆ ಆಗ ನಿನ್ನ ಮೈ, ಮನಸ್ಸು ಎಲ್ಲ ಸಂಸ್ಕಾರದಿಂದ ತುಂಬಿ ಹೊಸ ಕಳೆಯಿಂದ ತುಂಬಿ ಇದ್ದವು. ಆದ್ದರಿಂದ ಆಗ ಅವಳೊಂದಿಗೆ ಅಲ್ಲಿ ಹೋಗುವದೆಂದರೆ ನಿನಗೆ ಸರಿಕಳೊಂದಿಗೆ ಕೂಡಿದಂತೆ ಆಗಿತ್ತು. ಆದರೆ ಅಂದಿನಿಂದ ನೀನು ನಮ್ಮೊಂದಿಗೆ ಉಳಿದುಬಿಟ್ಟಿರುವಿ. ಮತ್ತು ಕೆಲವಮಟ್ಟಿಗೆ ಕೆಳಮಟ್ಟಕ್ಕೆ, ಹಿಂದಿನ ಹಳೆಯ ಮಟ್ಟಕ್ಕೆ ಇಳಿದುಬಿಟ್ಟಂತಿರುವಿ

ಆದ್ದರಿಂದಲೆ ಈಗ ನಿನ್ನ ಸ್ಥಾನದ ಬಗೆಗೆ ಅಷ್ಟೊಂದು ಬಲವಾಗಿ ನಿನಗೆ ಅನಿಸುವದಿಲ್ಲ. ಈಗ ನಾನಂದಂತೆ ಮಾಡು. ಈ ಕಾಗಡ ಪತ್ರಗಳನ್ನು ತೆರೆದು ಓದಿ ನೋಡು. ಮುಂದೆ ಒಂದು ದಿನ ನಿನ್ನ ನಿಜವಾದ ಬೆಲೆ ಏನು ಎಂಬುದನ್ನು ಒಮ್ಮೆ ನೋಡಿಕೋ. ಏಕೆಂದರೆ ಅವೆಲ್ಲ ಒಂದು ದಿನ ನಿನ್ನವೆ ಆಗುವವು. ನೀನಲ್ಲದೆ ನನಗೆ ಇನ್ನಾರು ಅವನ್ನು ಬಿಟ್ಟು ಹೋಗಲಿಕ್ಕೆ? ಒಂದು ವೇಳೆ ನೀನು ಪಡೆದ ಶಿಕ್ಷಣಕ್ಕೆ ಈ ಕಾಗದಪತ್ರಗಳು ಸೂಚಿಸುವ ಪತ್ತು ಬೆಂಬಲಕ್ಕೆ ನಿಂತರೆ, ಆಗ ಇಂದು ಮುಂಜಾನೆ ಸಿಕ್ಕಂಥ ಆ ಘಟಿಂಗ ಸಂಥವರು ನಿನ್ನನ್ನು ಒಬ್ಬ ಮುದಿಬೋರನ ಹುಡುಗಿಗಿಂತ ಹೆಚ್ಚಿನವಳೆಂದು ಭಾವಿಸಬಹುದು.'

ಆಗ ಗ್ರೇಸ ತಂದೆ ಹೇಳಿದಂತೆಯೆ ಮಾಡಿದಳು. ತಂದೆ ಮುಂದೆ ಇಡುತಿದ್ದ ಒಂದೊಂದೆ ಕಾಗದವನ್ನು ಮಡಿಕೆ ಬಿಚ್ಚಿ ತೆರೆದು ಓದಿದಳು. ಒಂದೊಂದು ಕಾಗದವೂ ರೋಖು ಹಣದ ದಾಖಲೆ ಆಗಿತ್ತು. ಅವನ ಬಲವಾದ ಇಚ್ಛೆ ಸ್ವಲ್ಪವೇ ಇತ್ತು — ಅವಳ ಎದೆಯಲ್ಲಿ ಸಾಮಾಜಿಕ ಸ್ಥಾನ-ಮಾನಗಳ ಬಗೆಗೆ ಆಶೆಯನ್ನು, ಮೋಹವನ್ನು ನೆಡುವದು. ಇದು ಈವರೆಗಿನ ಅವನ ಸದ್ವಿಚಾರಕ್ಕೆ ತೀರಾ ವಿರುದ್ಧವಾಗಿತ್ತು. ಆ ಸದ್ವಿಚಾರ ಈ ಮುಂಜಾವಿನ ತಿರುಗಾಟಕ್ಕೆ ಬಲಿಬಿದ್ದಿತ್ತು.

ಅವನ ಈ ಲೌಕಿಕ ಆಶೆಗಳಿಗೆ ತಾನು ನೆಲೆ ಆಗುವದೆ ಬೇಡವೆಂದು ಅವಳಿಗೆ ಅನಿಸಿತು. ಅಂಥ ಸ್ಥಾನ ಮಾನಗಳ ಹೊಣೆ ಬಹಳ ಮಿಗಿಲಾಗಿ ಕಂಡಿತು. ಅಂಥ ಆಶೆಗೆ ಕಾರಣ ಅವಳು ಮನೆಗೆ ಬಂದಾಗ ಕಾಣಿಸಿಕೊಂಡ, ನಡೆದುಕೊಂಡ ಆಕರ್ಷಕ ರೀತಿ. 'ನಾನು ಒರೆ ಅಸಡ್ಡಳ ಪೋಷಾಕಿನಲ್ಲಿ ಮನೆಗೆ ಬಂದಿದ್ದರೆ, ಒರಟು ಭಾಷೆಯಲ್ಲಿ ಮಾತನಾಡಲು ಯತ್ನಿಸಿದ್ದರೆ, ಈ ಬವಣೆ ಒದಗುತ್ತಿದ್ದಿಲ್ಲ', ಅವಳು ಚಿಂತಿಸಿದಳು. ಇಲ್ಲಿಯೂ ಅವಳ ಚಿಂತನ ಮೂಲ ಘಟನೆಯ ಬಗೆಗೆ ಇದ್ದಿಲ್ಲ. ಅದರ ಸಂದರ್ಭಗಳ ಬಗೆಗೆ ಇತ್ತು.

ಆ ಮೇಲೆ ಅವಳು ತನ್ನ ಚೆಕ್‌ಪುಸ್ತಕಗಳನ್ನು ನೋಡಬೇಕೆಂದು ತಂದೆಯು ಹಟ ಹಿಡಿದನು. ಅದನ್ನೂ ಅವಳು ವಿಧೇಯಳಾಗಿ ಮಾಡಿದಳು. ಅಲ್ಲಿ ಕೊನೆಗೆ ಒಂದೆರಡು ತೀರ ಇತ್ತೀಚೆಗೆ ಹರಿದ ಅವಳ ವಸತಿ ಮತ್ತು ಉಡಿಗೆ ತೊಡಿಗೆಗಳ ವೆಚ್ಚಕ್ಕೆ ತೆತ್ತ ಹಣದ ಬಾಬುಗಳಾಗಿದ್ದವು ಅವು.

'ಓ, ನನ್ನ ಬಗೆಗೂ—ಕುದುರೆ, ಗಾಡಿ, ಕಾಳುಕಡ್ಡಿಗಳಂತೆ—ಬಹಳ ರಕಮು ತೆರಬೇಕಾಗುತ್ತದೆ!' ಆಕೆ ವ್ಯಥೆಗೊಂಡು ಅಂದಳು.

'ನೀನು ಅದೆಲ್ಲ ನೋಡುವದು ನನಗೆ ಬೇಕಾಗಿಲ್ಲ. ನನ್ನ ಠೇವುಗಳ ವ್ಯವಹಾರದ ಕಲ್ಪನೆಯಷ್ಟೇ ನಿನಗೆ ಮಾಡಿಕೊಡುವುದು ನನ್ನ ಉದ್ದೇಶ. ಇನ್ನೂ ಅವುಗಳಷ್ಟೇ ಹೆಚ್ಚು ನಿನ್ನ ಬಗ್ಗೂ ತೆರಬೇಕಾಯಿತೆಂದು ಇದ್ದರೆ ಆ ಬಗ್ಗೆ ಪರಿವೆ ಮಾಡಬೇಡ. ನೀನು ಅವುಗಳಿಗಿಂತಲೂ ಹೆಚ್ಚಿನ ಚೆನ್ನಾದ ಪ್ರತಿಫಲ ಕೊಡಬಲ್ಲೆ!'

'ಅಯ್ಯೋ; ಹಾಗೆ ನನ್ನನ್ನು ಭಾವಿಸಬೇಡ—ಒಂದು ಚರಸೊತ್ತಿನಂತೆ!'— ಆಕೆ ದುಂಬಾಲ ಬಿದ್ದಳು.

'ಯಾತರಂತೆ? ಚರಸೊತ್ತು? ಓ ಇದೂ ಒಂದು ನಿಘಂಟುವಿನೊಳಗಿನ ಶಬ್ದ. ಅದು ನನ್ನ ವಿರುದ್ಧವೇ ಆಗಿರಲಿ, ನಿನಗೆ ಒಪ್ಪುವ ಮಾತೆ ಆದರೆ ಅದಕ್ಕೆ ನನ್ನ ಆಕ್ಷೇಪವಿಲ್ಲ!' ಆತ ವಿನೋದದಲ್ಲಿಯೇ ಅಂದನು, ಮತ್ತು ತನ್ನ ಮಗಳನ್ನು ಒಮ್ಮೆ ಅಡಿಯಿಂದ ಮುಡಿಯುವರೆಗೆ ಒಳ್ಳೆಯ ಹೆಮ್ಮೆಯಿಂದ ನೋಡಿದನು.

ಕೆಲವು ನಿಮಿಷಗಳ ನಂತರ ಅಲಿವರ ಅಜ್ಜಿ ಬಂದು ರಾತ್ರಿಯ ಊಟಕ್ಕೆ ಏಳಲು ಅವರನ್ನು ಕರೆದಳು. ಆ ಕರೆಯೊಂದಿಗೆ ಇನ್ನೊಂದು ಸುದ್ದಿಯನ್ನೂ ಆಕೆ ಹೇಳಿದಳು. 'ಅಂತೂ ನಾವು ಹಿಂಟೊಕ ದೊಡ್ಡ ಮನೆಯ ಯಜಮಾನಿಯನ್ನು ಇನ್ನು ಕೆಲವು ಕಾಲ ಕಾಣಲಾರೆವು. ಮೆಲಬರಿರಾಯರೇ, ಹೌದು. ನಾನು ಕೇಳಿದೆ, ಅವಳು ನಾಳೆಯೇ ಪರದೇಶಕ್ಕೆ ಹೊರಡುತ್ತಾಳಂತೆ.'

ಆ ಮುದುಕಿ ಕರೆದು ಹೋದ ಮೇಲೆ ಮೆಲಬರಿ ಮಗಳ ಕಡೆಗೆ ಹೊರಳಿ ಹೇಳಿದನು. 'ಅಂತೂ, ಗ್ರೇಸ, ನೀನು ನಿನ್ನ ಹೊಸ ಗೆಳತಿಯನ್ನು ಕಳೆದುಕೊಂಡಿ. ಅವಳ ಸಂಗಡ ಉಳಿದು ಅವಳ ಪ್ರವಾಸ ವೃತ್ತವನ್ನು ಬರೆದುಕೊಳ್ಳುವ ನಿನ್ನ ಯೋಗವೂ ಅವಳೊಂದಿಗೇ ತಪ್ಪಿಹೋಯಿತು!'

ಗ್ರೇಸಳು ಏನೂ ಅನ್ನಲಿಲ್ಲ. 'ಈವಾಗ' ತಂದೆ ಹಟದಿಂದಲೆ ಮುಂದುವರಿದ, 'ಇದೆಲ್ಲ ಆ ವಿಂಟರಬೋರ್ನನ ಪ್ರಕರಣದಿಂದಲೆ ಹೀಗೆ ಆದದ್ದು. ಓ, ಅದೇ ಸರಿ, ಆದ್ದರಿಂದ ನಾನೊಂದು ಮಾತು ಹೇಳಿಬಿಡುತ್ತೇನೆ. ನನಗೆ ವಚನ ಕೊಡು—ನನಗೆ ಗೊತ್ತಾಗದೆ, ನನಗೆ ತಿಳಿಸದೆ ನೀನು ಅವನನ್ನು ಭೆಟ್ಟಿ ಆಗುವದಿಲ್ಲವೆಂದು.

'ಅಪ್ಪಾ, ನಿನಗೆ ತಿಳಿದಿರಲಿ ತಿಳಿಯದಿರಲಿ, ನಾನು ಅವನನ್ನು ಎಂದೂ ಭೆಟ್ಟಿ ಆಗಿಯೇ ಇಲ್ಲ! ಆಗುವದೂ ಇಲ್ಲ!'

'ಹಾಗಾದರೆ ಮತ್ತಿಷ್ಟು ಚೆನ್ನಾಯಿತು ಬಿಡು. ಇದೆಲ್ಲದರ ಚರ್ಯೆ ನನಗೇನೂ ಸರಿ ತೋರುವದಿಲ್ಲ. ಮತ್ತೆ ನಾನು ಇದನ್ನೆಲ್ಲ ಹೇಳುವದು ಅವನ ಬಗ್ಗೆ ಬಿರುಸಾಗಿ ಅಲ್ಲ—ಪಾಪ, ಆತ ಬಡಪಾಯಿ—ನಿನ್ನ ಬಗ್ಗೆ ಎದೆ ಕರಗಿ. ಏಕೆಂದರೆ ನಿನ್ನಂಥ ಕೋಮಲವಾಗಿ ನಾಜೂಕಾಗಿ ಬೆಳೆಯಿಸಲ್ಪಟ್ಟ ಹೆಣ್ಣು ಅವನೊಂದಿಗೆ ಒರಟಾದ ಬಾಳುವೆಯನ್ನು ಸಹಿಸಬಹುದಾದರೂ ಹೇಗೆ?

ಗ್ರೇಸ ನಿಟ್ಟುಸಿರೊಂದು ಬಿಟ್ಟಳು. ಆ ನಿಟ್ಟುಸಿರು ಜೈಲ್ಸನ ಬಗೆಗೆ ಅನಿಸಿದ ಸಹಾನುಭೂತಿಯಿಂದ ಹೊಮ್ಮಿತ್ತು. ಅದರೊಂದಿಗೆ ಪ್ರಾಪ್ತ ಪರಿಸ್ಥಿತಿಯ ಅಗಮ್ಯ ಜಟಿಲತೆಯ ಬಗೆಗೆ ಅಸಹಾಯ ಭಾವನೆಯೂ ಕೂಡಿತ್ತು.

ಅದೇ ಹೊತ್ತಿಗೆ, ಬಹುಶಃ ಅದೇ ಗಳಿಗೆಗೆ ಮೆಲಬರಿಯ ಮನೆಯ ಹೊರಬಾಗಿಲ ಮುಂದೆ ಹಳ್ಳಿಯ ಓಣಿಯಲ್ಲಿ ಕರಗಸದ ಹಿರಿಯ ತಿಮೋಥಿ ಟ್ಯಾಂಗ್ಸ ಮತ್ತು ರೋಬರ್ಟ ಕ್ರೀಡಲ ವಿಂಟರಬೋರ್ನನ ವಿಷಯವಾಗಿಯೇ ಮಾತುಕತೆ ನಡೆಸಿದ್ದರು.

ಕರಗಸದವನು ಕ್ರೀಡಲ್‌ನನ್ನು ಕೇಳಿದ: 'ಊರೆಲ್ಲ ಈಗಾಗಲೆ ಸುದ್ದಿ ಹಬ್ಬಿದೆ ನೀನು ಕೇಳಿಲ್ಲವೇ? ಆ ಬಡ ಒಂಟಿ ಬಾಳಿನ ಮಾರ್ಟಿ ಸೌಥ ತಂದೆಯನ್ನು ಕಳೆದು

ಕೊಳ್ಳುವಂತಿದೆ. ನಡುವೆ ಒಮ್ಮೆ ಅವನು ಸುಧಾರಿಸಿದ್ದ. ಆದರೆ ಈಗ ಮತ್ತೆ ಅವನ ಸ್ಥಿತಿ ತೀರಾ ಕೆಟ್ಟಿದೆಯಂತೆ. ಬರೆ ಚರ್ಮ ಮತ್ತು ಚಿಂತೆಯ ಮೂಟೆ ಆಗಿದ್ದಾನೆ. ಆತ ಹಿಂಟೋಕ ಹಳ್ಳಿ ಬಿಟ್ಟು ದೇಶಾಂತರಕ್ಕೆ ಹೋಗಿದ್ದರೆ ಅವನಿಗೂ ಒಳಿತಿತ್ತು. ನಿನ್ನ ಒಡೆಯ ವಿಂಟರಬೋರ್ನನಿಗೂ ಲೇಸಾಗಿತ್ತು. ಅಲ್ಲವೋ ಕ್ರೀಡಲ್? '

'ನನಗೇನು ಕೇಳುತ್ತೀ? ನಾನೇನು ಹಿಂಟೋಕದ ಭೂತ ಭವಿಷ್ಯ ಬಲ್ಲವನೇ?' ಕ್ರೀಡಲ್ ಅಂದನು, 'ಆದರೆ ನಿನ್ನೇನೆ ನಾನು ಇದೇ ಸಂಗತಿ ನನ್ನ ಉದ್ದ ಬುದ್ಧಿಗೆ ಹೊಳೆದಂತೆ ಆಲೋಚಿಸಿದ್ದೆ. ಈ ಜಾನ್ ಸೌಥನ ಜೀವದ ಮೇಲೆಯೇ ವಿಂಟರ ಬೋರ್ನನ ಎಲ್ಲ ಮನೆಗಳೂ ತೂಗುಹಾಕಿದಂತಿವೆ. ಈ ಸೌಥ ಸತ್ತರೆ, ಕಾನೂನಿನಂತೆ ಈ ಮನೆಗಳೆಲ್ಲ ಆ ದೊಡ್ಡ ಮನೆಯ ದೊಡ್ಡಮ್ಮನ ಉಡಿಗೆ ಬೀಳುವದೊಂದೇ ಉಳಿಯಿತು. ಅದನ್ನು ಉಳಿಸಿಕೊಳ್ಳುವ ಉ ಸಾ ಬ ರಿ ಕೇಳಬೇಕೆಂದು ನಮ್ಮ ಯಜಮಾನನಿಗೆ ನಾನು ಹಾಗೆ ಹೇಳಿಯೂ ಬಿಟ್ಟೆ. ಆದರೆ ನಂಬಿಗೆಯ ಆಳ ಮಾತು ಬರೆ ಗಾಳಿಯಂತೆ!'

೧೪

ಆ ಸುದ್ದಿ ನಿಜವಿತ್ತು. ಆ ಜೀವ—ಅದೊಂದು ದುರ್ಬಲ ಜೀವ, ಕಾಲವನ್ನು ಅಳೆಯಲಿಕ್ಕೆ ಒಂದು ಟೇಪಿನಂತೆ ಕಾನೂನಿನಿಂದಲೇ ಇಳಿಸಲ್ಪಟ್ಟ ಆ ಜೀವ—ಈಗ ಸವೆದು ಸಣ್ಣಾಗಿ ಹುಸಿದು ಹೋಗುವ ಗಂಡಾಂತರದಲ್ಲಿ ಇತ್ತು. ಈ ಉದ್ದೇಶಕ್ಕೆ ಸಂದು ಹೋದ ಹಲವು ಜೀವಿಗಳ ಗುಂಪಿನಲ್ಲಿ ಅದೂ ಒಂದಾಗಿತ್ತು. ಅದರ ಕೊನೆಯ ಉಸಿರು ಎಳೆದು ಮುಗಿದೊಡನೆ ಈಗ ಸೌಥ ವಾಸಿಸುವ ಪುಟ್ಟ ಮನೆಯ ಸೂರು, ಜೈಲ್ಸ ವಿಂಟರಬೋರ್ನ ನೆಲಸಿದ ತುಸು ದೊಡ್ಡ ಮನೆ, ಇನ್ನೂ ಐದಾರು ಬೇರೆ ಮನೆಗಳು—ಹಿಂಟೋಕ ಹಳ್ಳಿಯ ಬೇರೆ ಬೇರೆ ಕುಟುಂಬಗಳು ಕಳೆದ ನೂರು ವರ್ಷ ಗಳಿಂದಲೂ ಉಳಿದು ಬಂದಂಥವು—ಎಲ್ಲವೂ ಆ ದೊಡ್ಡ ಮನೆಯ ಒಡತಿಯ ಆಸ್ತಿಯ ಪಾಲಾಗಿ ಬಿಡುತ್ತಿದ್ದುವು.

ಮರುದಿನ ವಿಂಟರಬೋರ್ನ ತನ್ನ ಹಿತ್ತಲಲ್ಲಿ ಅತ್ತಿಂದಿತ್ತ ಅಲೆಯುತಿದ್ದ — ಈ ಬಿಕ್ಕಟ್ಟಿನ ಪರಿಸ್ಥಿತಿಯ ಬಗೆಗೇ ಚಿಂತಿಸುತ್ತ. ತಾನು ಹೆಜ್ಜೆ ಹಾಕುತ್ತಿರುವ ಆ ದಾರಿ ಗಳೂ, ಕ್ಯಾಬೀಜಿನ ಆ ಅಗೆಗಳೂ, ಸೇಬಿನ ಮರಗಳೂ, ಅವನ ವಾಸ್ತವ್ಯದ ಆ ಮನೆಯೂ, ಸೇಬಿನ ಮದ್ಯ ಸಂಗ್ರಹಿಸಿ ಇಡುವ ಆ ನೆಲಮನೆ, ಕುದುರೆಯ ಲಾಯ, ಗಾಳಿಗಂಬ — ಎಲ್ಲವೂ ಅವನ ತಲೆಯ ಮೇಲೆ ಕಾಲ ಕೆಳಗೆ, ಮಾಯಾ ದೀಪದಲ್ಲಿ ಚಿತ್ರಿಸಿದ ಹಾಳೆಗಳು ಜಾರುವಂತೆ ಸರಿದು ಹೋಗುತ್ತಿರುವ ಭಾವನೆ ಅವನಿಗೆ ವಿಚಿತ್ರ

ವಾಗಿ ಅನಿಸತೊಡಗಿತು. ಜಾನ ಸೌಥನ ಇತ್ತೀಚೆಯ ಅಸ್ವಾಸ್ಥ್ಯವೇನೇ ಇದ್ದರೂ, ವಿಂಟರಬೋರ್ನ ನಿರೀಕ್ಷಿಸಿಯೇ ಇದ್ದಿಲ್ಲ ಈ ಗಂಡಾಂತರವನ್ನು.

ಇಲ್ಲಿ ಹಿತ್ತಲಲ್ಲಿ ಇದ್ದಾಗಲೆ ಯಾರೋ ಅವನನ್ನು ಕರೆಯಲಿಕ್ಕೆ ಬಂದರು. ಬಂದವಳು ಮಾರ್ಟಿಯೇ ಆಗಿದ್ದಳು. ಅವಳ ಕಳವಳ ಸ್ಪಷ್ಟವಾಗಿತ್ತು. ತನ್ನ ಕೂದಲು ಕತ್ತರಿಸಿ ದುಂಡದಾಗಿ ಮಾಡಿದ ತಲೆಯನ್ನು ಮುಚ್ಚಿಕೊಳ್ಳುವ ಪ್ರಜ್ಞೆ ಅವಳಿಗೆ ಇದ್ದಿಲ್ಲ.

'ಅಪ್ಪ ಆ ಮರದ ಬಗ್ಗೆ ಇನ್ನೂ ಎಷ್ಟೆಲ್ಲ ಹಚ್ಚಿಕೊಂಡಿದ್ದಾನೆ ಮನಸ್ಸಿಗೆ' ಆಕೆ ಅಂದಳು, 'ನಿನಗೆ ಗೊತ್ತು ಯಾವ ಮರವೆಂದು? ಮನೆಯ ಮುಂದಿನ ಆ ಎತ್ತರದ ಮರ. ಅದು ಗಾಳಿಗೆ ಕಿತ್ತು ಬಿದ್ದು ನಮ್ಮನ್ನು ಕೊಲ್ಲುವದೆಂದೇ ಅವನ ಚಿಂತೆ. ವಿಂಟರಬೋರ್ನ, ನೀನೊಮ್ಮೆ ಬಂದು ಈ ಚಿಂತೆಯನ್ನು ಬಿಡಲು ಅವನ ಮನ ವೊಲಿಸುವಿಯಾ? ನಾನು ಆ ಬಗ್ಗೆ ಏನೂ ಮಾಡಲಾರೆ.'

ಆತ ಅವಳೊಂದಿಗೆ ಅವಳ ಗುಡಿಸಲಿಗೆ ಹೋದನು. ಅವಳು ಅವನನ್ನು ಅಟ್ಟದ ಮೇಲೆ ಕರೆದುಕೊಂಡು ಹೋದಳು. ಜಾನ ಸೌಥ ಒಂದು ಕುರ್ಚಿಯಲ್ಲಿ ದಿಂಬುಗಳಿಗೆ ಆನಿಸಿ ಕೂತಿದ್ದ — ಮಂಚ ಮತ್ತು ಕಿಟಕಿಯ ನಡುವೆ, ಕಿಟಕಿಯ ತೀರ ಇದುರಿನಲ್ಲಿ, ಅವನ ಮೋರೆ ಕಿಡಕಿಯ ಕಡೆಗೇ ತಿರುಗಿತ್ತು.

'ಓ ವಿಂಟರಬೋರ್ನನೇ? ನೆರಮನೆಯವನೇ ಬಾ. ನನ್ನ ಜೀವ ನನ್ನ ದೊಬ್ಬನದೆ ಆಗಿದ್ದರೆ ಅದನ್ನು ಕಳೆದುಕೊಳ್ಳಲು ನಾ ಪರಿವೆ ಮಾಡುತಿದ್ದಿಲ್ಲ. ಅದನ್ನು ನಾನೇನು ಭಾರಿ ಬೆಲೆಯದೆಂದು ತಿಳಿಯುವುದಿಲ್ಲ. ಬೇಕಾದರೆ ಅದನ್ನು ನಾನು ಬಿಡಲೂ ಬಲ್ಲೆ. ಆದರೆ ನಿನ್ನಂಥವನಿಗೆ ಅದು ಬೆಲೆಯುಳ್ಳದ್ದು. ನೀನು ಬಾಳಿನಲ್ಲಿ ಇನ್ನೂ ಏರಿಕೆಯಲ್ಲಿ ಇರುವಿ. ಅದೇ ನನಗೆ ಕಾಡುವ ಚಿಂತೆ! ಐವತ್ತೈದರ ಪ್ರಾಯಕ್ಕೆ ಎದ್ದು ಹೋಗುವದು ನಿನಗೆ ಕೆಟ್ಟ ಮೋಸ ಮಾಡಿದಂತೆ. ನಾನು ತಾಳಬಲ್ಲೆ. ಆದರೆ ಈ ಮರ ಒಂದಿದೆ ಅಲ್ಲ. ಈ ಮರವೇ ನನ್ನನ್ನು ಕೊಲ್ಲುತ್ತ ಇದೆ. ಅಕೋ ಇಲ್ಲಿ ಅದು ನಿಂತಿದೆ, ಯಮದೂತನಂತೆ, ಗಾಳಿ ಬೀಸುವಾಗೆಲ್ಲ ಪ್ರತಿ ಕ್ಷಣಕ್ಕೂ ನನ್ನ ಬಾಳಿಗೆ ಬೆದರಿಕೆ ಹಾಕುತ್ತ. ಅದು ಒಮ್ಮೆ ನಮ್ಮ ಮೇಲೆ ಬಿದ್ದೇ ಬೀಳುತ್ತದೆ. ನಮ್ಮನ್ನು ಸಪಾಟಾಗಿ ಕೊಲ್ಲುತ್ತದೆ. ಆಗ ನೀನೇನು ಮಾಡುವಿ? ನಿನ್ನ ಆಸ್ತಿಯ ಮೇಲಿನ ಈ ಜೀವವನ್ನು ಎಳೆದೊಯ್ದ ಮೇಲೆ?'

'ನನ್ನ ವಿಚಾರ ಮಾಡಲೇಬೇಡ — ಅದೇನು ದೊಡ್ಡ ಮಾತಲ್ಲ.' ಜೈಲ್ಸ ಅಂದನು, 'ನಿನ್ನನ್ನು ಕುರಿತೇ ವಿಚಾರ ಮಾಡು.'

ಆತ ಆ ಮರ ಕೊಯ್ಯುವ ಮುದುಕನ ನೋಟದ ನಿಟ್ಟಿನಲ್ಲಿಯೇ ಕಿಟಕಿಯ ಹೊರಗೆ ಕಣ್ಣು ಹಾಯಿಸಿದನು. ಅದೊಂದು ನೀಳವಾಗಿ ನಿಂತ ಎಲ್ಮ ಮರವಾಗಿತ್ತು. ಚಿಕ್ಕಂದಿನಿಂದಲೂ ಅವನಿಗೆ ಪರಿಚಿತ. ಮರದ ಎತ್ತರದ ಮೂರರಲ್ಲಿ ಎರಡು ಪಾಲಿ ನಷ್ಟು ದೂರ ಇದುರಿಗೇ ನಿಂತಿತ್ತು; ಗಾಳಿ ಬೀಸಿದಾಗೆಲ್ಲ, ಈಗ ಆದಂತೆಯೇ

ಸ್ವಾಭಾವಿಕವಾಗಿಯೇ ಆ ಮರವೂ ತೂಗಾಡುತಿತ್ತು. ಅದರ ಚಲನವಲನ, ಅದರೊಂದಿಗೆ ಕೇಳಿಬರುವ ನಿಟ್ಟುಸಿರಿನಂಥ ಮರ್ಮರ ಸದ್ದು ಇವು ಆ ಮರ ಕೊಯ್ಯುವ ಮುದುಕನ ಮನಸ್ಸಿನಲ್ಲಿ ಕ್ರಮೇಣ ಭಯಾನಕ ಭ್ರಾಂತಿಯನ್ನು ಉಂಟುಮಾಡಿದ್ದವು. ಆತ ಹಾಗೆಯೇ ಅಲ್ಲಿ ಕುಳಿತುಬಿಡುತಿದ್ದ ಇಡಿಯ ದಿವಸ. ಬೇಡವೆಂದು ಎಷ್ಟು ಪುಸಲಾಯಿಸಿದರೂ ಅದರ ಪ್ರತಿ ತೂಗಾಟವನ್ನು ನೋಡುತ್ತ, ಹವೆಯು ಅದರಲ್ಲಿ ತೀಡುತ್ತ ಮಿಡಿಯುವಂಥ ಮಂದಾಕ್ರಾಂತ ಗೀತಗಳನ್ನು ಕಿವಿಗೊಟ್ಟು ಕೇಳುತ್ತ ಕುಳಿತುಬಿಡುತಿದ್ದ. ಜಾನನ ಆರೋಗ್ಯವನ್ನು ಕೆಡಿಸಿ ಕುಗ್ಗಿಸುತ್ತಿದ್ದದ್ದು ಇದೇ ಭೀತಿ, ಇದೇ ಭ್ರಾಂತಿ ಅಲ್ಲದೆ ಯಾವದೆ ಶಾರೀರಿಕ ರೋಗವಲ್ಲ.

ಮರವು ತೂಗಾಡಿದಂತೆ ಜಾನಸೌಥನೂ ತಲೆಯನ್ನು ತೂಗಾಡಿಸಿದನು—ಅದಕ್ಕೆ ವಿಧೇಯನೋ ಎಂಬಂತೆ, 'ಓ, ಅದು ಸಣ್ಣ ಗಿಡವಿದ್ದಾಗ, ನಾನೂ ಚಿಕ್ಕ ಹುಡುಗನಿದ್ದಾಗ, ಅದನ್ನು ನನ್ನ ಕತ್ತಿಯಿಂದ ಕಡಿದುಹಾಕಿ, ಬಟ್ಟೆ ಒಣಗಿಸುವ ಬಳ್ಳಿ ಬಿಗಿದಿಡಲಿಕ್ಕೆ ಕಂಬವಾಗಿ ಬಳಸಬೇಕೆಂಬ ವಿಚಾರ ನನಗೆ ಹೊಳೆದಿತ್ತು. ಆದರೆ ಹಾಗೆ ಮಾಡದೆ ಆ ವಿಚಾರವನ್ನು ಮುಂದೆ ಹಾಕಿದೆ. ಆದರೆ ಮತ್ತೆ ಹಾಗೆ ಮಾಡಬೇಕೆಂಬ ವಿಚಾರ ನನ್ನನ್ನು ಕಾಡಿತು. ಆದರೆ ಹೇಗೋ ನಾನು ಅದನ್ನು ಮರೆತೆ. ಮರವನ್ನು ಕಡಿಯದೆ ಇಟ್ಟೆ. ಕೊನೆಗೆ ಅದು ಬೆಳೆದು ತೀರ ದೊಡ್ಡದಾಯಿತು. ಮತ್ತು ಈಗ ಅದು ನನ್ನ ಹಗೆಯಾಗಿದೆ. ನನಗೆ ಸಾವೂ ಆಗುವದು, ಆ ಗಿಡವನ್ನು ಹಾಗೆಯೇ ಉಳಿಯಗೊಟ್ಟಾಗ ನನಗೆ ಏನೂ ಕಲ್ಪನೆ ಇದ್ದಿಲ್ಲ — ಅದು ನನ್ನನ್ನೇ ಕಾಡುವಂಥ ಒಂದು ಸಮಯವೂ ಬಂದೀತು ಮತ್ತು ಅದು ನನ್ನನ್ನು ಮಣ್ಣುಪಾಲು ಮಾಡೀತು ಎಂದು.'

'ಇಲ್ಲ, ಇಲ್ಲ' ವಿಂಟರಬೋರ್ನ ಮತ್ತು ಮಾರ್ಟಿ ಇಬ್ಬರೂ ಅವನನ್ನು ಸಾಂತ್ವನೆಗೊಳಿಸುತ್ತ ಅಂದರು. ಆದರೆ ಅವರಿಗೂ ಅನಿಸಿತು, ಆ ಮರವು ಪ್ರತ್ಯಕ್ಷ ಕಿತ್ತುಬೀಳದೆ ಬೇರೆ ಬಗೆಯಿಂದ ಅವನನ್ನು ಬೇಗನೇ ಮಣ್ಣಿಗೆ, ಮಸಣಕ್ಕೆ ಒಯ್ಯಬಹುದು.

'ನಾನು ಹೇಳುತ್ತೇನೆ,' ವಿಂಟರಬೋರ್ನ ಮುಂದುವರಿದ, 'ಇದೇ ಸಂಜೆಗೆ ನಾನು ಆ ಮರವನ್ನು ಹತ್ತಿ ಅದರ ಕಳಗಿನ ಟೊಂಗೆಗಳನ್ನೆಲ್ಲ ಸವರಿಬಿಡುತ್ತೇನೆ. ಅಂದರೆ, ಆಗ ಮರದ ತುದಿ ಅಷ್ಟು ಭಾರವಾಗಲಿಕ್ಕಿಲ್ಲ, ಅದಕ್ಕೆ ಗಾಳಿಯೂ ಅಷ್ಟೊಂದು ಪೀಡಿಸಲಿಕ್ಕಿಲ್ಲ.'

'ಅವಳು ಬಿಡಲಿಕ್ಕಿಲ್ಲ—ಆ ವಿಚಿತ್ರ ಹೆಂಗಸು, ಎಲ್ಲಿಂದೋ ಬಂದ ಆ ಹೆಂಗಸು—ಹಾಗೆ ಮಾಡಲು ಬಿಡಲಿಕ್ಕಿಲ್ಲ.'

'ಅಂದರೆ ಶ್ರೀಮತೀ ಚಾರ್ಮಂದಳೇ? ಛೇ, ಅವಳಿಗೆ ಗೊತ್ತೇ ಇಲ್ಲ ಅವಳ ಆಸ್ತಿಯಲ್ಲಿ ಇಂಥ ಮರವೊಂದು ಉಂಟೆಂದು. ಅಲ್ಲದೆ ಸವರುವುದೆಂದರೆ ಮರಕಡಿಯುವುದಲ್ಲ. ಅದಕ್ಕೂ ತೊಂದರೆ ಏನಾದರೂ ಆದರೆ ನಾನು ನೋಡಿಕೊಳ್ಳುತ್ತೇನೆ.'

ವಿಂಟರಬೋರ್ನ ಎದ್ದು ಹೊರಗೆ ಹೋದನು. ಹೊತ್ತು ಇಳಿಯುತ್ತಲೇ ಅವನು ತಿರುಗಿ ಬಂದನು. ಕೆಲಸದ ಮಾಳದಿಂದ ಒಂದು ಕತ್ತಿಯನ್ನು ಎತ್ತಿಕೊಂಡು, ಒಂದು ಏಣಿ ಹಚ್ಚಿ ಆ ಮರದ ಕೆಳ ಭಾಗಕ್ಕೆ ಏರಿದನು ಮತ್ತು ಅಲ್ಲಿಯ ತೀರ ಕೆಳಗಿನ ಟೊಂಗೆ, ಅವನು ಹೊಯ್ದು ಪೆಟ್ಟಿಗೆ, ಬಗ್ಗಿ ಮುರಿದು ಕೆಳಗೆ ಬೇಲಿಯಲ್ಲಿ ಬಿದ್ದಿತು. ಟೊಂಗೆಗಳ ತೀರ ಕೆಳಗಿನ ಸ್ತರವನ್ನು ಸವರಿ ಆದನಂತರ, ಇನ್ನೂ ಕೆಲವು ಮೆಟ್ಟಲು ಏರಿಹೋಗಿ ಇನ್ನೂ ಮೇಲಿನ ಟೊಂಗೆಗಳನ್ನು ಕಡಿದು ಹಾಕತೊಡಗಿದನು. ಹೀಗೆ ಕೆಲಸ ಮುಂದೆ ಸಾಗಿದಂತೆ ಅವನೂ ಮೇಲೆ ಸಾಗುತ್ತ ಏಣಿಯ ತುದಿಗೂ ಮೇಲೆ ಮುಟ್ಟಿದನು. ಏರುತ್ತಿದ್ದಂತೆ ತನಗೆ ಆತನಿಗೆ ಇತ್ತ ಟೊಂಗೆಗಳನ್ನೆ ಕಡಿದು ಚೆಲ್ಲುತ್ತ ತನ್ನ ಹಿಂದೆ ಕೆಳಗಡೆ ಬರೆ ಬೋಳು ಬೊಡ್ಡೆಯನ್ನಷ್ಟೇ ಬಿಟ್ಟನು.

ಈ ಕೆಲಸ ತುಂಬ ಕಷ್ಟದ್ದು. ಏಕೆಂದರೆ ಆ ಮರ ಬಹಳ ದೊಡ್ಡದಾಗಿತ್ತು. ಸಂಜೆ ಸರಿಯುಹತ್ತಿತ್ತು. ಕತ್ತಲು ಕವಿಯುಹತ್ತಿತ್ತು. ನಾಲ್ಕು ಗಂಟೆಗೇ ಮಂಜುಹಬ್ಬಿ ಮಬ್ಬು ಮಬ್ಬಾಯಿತು. ಕಾಲಕಾಲಕ್ಕೆ ಜೈಲ್ಸ ಸೌಥನು ಮಲಗುವ ಕೋಣೆಯ ಕಿಟಕಿ ಯತ್ತ ಕಣ್ಣು ಹಾಯಿಸುತ್ತಿದ್ದನು. ಅಲ್ಲಿ ಕೋಣೆಯೊಳಗಿನ ಬೆಂಕಿಯು ಆದರುವ ಬೆಳಕಿನಲ್ಲಿ ಆ ಮುದುಕ ತನ್ನನ್ನೇ ನೋಡುತ್ತಿರುವುದು ಕಾಣಿಸುತ್ತಿತ್ತು. ಕುರ್ಚಿಯ ಎರಡೂ ಕೈಗಳ ಮೇಲೆ ತನ್ನ ತೋಳುಗಳನ್ನು ಇಟ್ಟು ಆತ ಅಲುಗಾಡದೆ ಕುಳಿತಿದ್ದನು. ಅವನ ಬದಿಯಲ್ಲಿಯೇ ಮಾರ್ಟಿ ಕುಳಿತಿದ್ದಳು. ಅವಳು ವಿಂಟರಬೋರ್ನನ ಚಟು ವಟಿಕೆಗಳ ಆಕಾಶ ವಲಯದ ಕಡೆಗೇ ದಿಟ್ಟಿಸುತ್ತಿದ್ದಳು.

ಒಂದು ವಿಚಿತ್ರ ಪ್ರಶ್ನೆ ಒಮ್ಮೆಲೆ ವಿಂಟರಬೋರ್ನನ ತಲೆಯಲ್ಲಿ ಹೆಡೆ ಎತ್ತಿತು. ಅವನು ಟೊಂಗೆ ಸವರುವುದನ್ನು ತಡೆದನು. ತಾನು ಮಾಡುತ್ತಿದ್ದುದ್ದೇನು? ಮತ್ತೊಬ್ಬರ ಆಸ್ತಿಯಲ್ಲಿ ಚಟುವಟಿಕೆ ಕೈಗೊಂಡಿದ್ದೇನೆ. ಅದೂ ಅಲ್ಲಿಯ ಒಬ್ಬನ ಭೋಗವಟೆಯನ್ನು ಜೀವಮಾನದ ಕಚ್ಚಾಹಕ್ಕನ್ನು ಮುಂದುವರಿಸಲಿಕ್ಕೆ. ಆ ಹಕ್ಕು ಆ ಭೋಗವಟೆ ಮುಗಿದಪ್ಪು ಲಗು ಆಸ್ತಿಯ ಮೂಲ ಒಡೆಯನಿಗೆ ತುಂಬ ಲಾಭ. ಅಂದಾಗ ಈ ದೃಷ್ಟಿಯಲ್ಲಿ ತಾನು ಹಿಡಿದ ಕೆಲಸ ಮುಂದುವರಿಸುವುದು ಸರಿಯೇ? ಎಂಬ ಅನುಮಾನ ಉಂಟಾಯಿತು ಅವನಿಗೆ. ಆದರೆ ಇನ್ನೊಂದು ಅಂಗದಲ್ಲಿ ನೋಡಿ ದರೆ, ಆತ ಒಬ್ಬ ಮನುಷ್ಯನ ಬದುಕನ್ನು ಮುಂದರಿಸಲು ದುಡಿಯುತ್ತಿದ್ದನು. ಅಂದಾಗ ಈ ವಿಚಾರ, ಈ ಅಕ್ರಮ ಆಗಂತುಕ ಚಟುವಟಿಕೆಗಳನ್ನು ಕೈಗೊಳ್ಳಲು ಅವನಿಗೆ ಸಾಮರ್ಥ್ಯ ಬಂದಂತೆಯೇ ಎಂದೂ ಅನಿಸಿತು.

ಗಾಳಿ ಶಾಂತವಾಗಿತ್ತು. ತನ್ನ ಪರಿಸ್ಥಿತಿಯನ್ನು ತೂಗಿನೋಡುತ್ತಿರುವಾಗ ಅವನು ಹಾದಿಗುಂಟ, ದಟ್ಟೈಸುತ್ತಿರುವ ಮಂಜಿನ ಮಬ್ಬಿನಲ್ಲಿಯೂ ಒಂದು ಆಕೃತಿ ಬರುತ್ತಿರುವುದನ್ನು ಕಂಡನು. ಅದು ಯಾರೆಂದು ಆತ, ಕತ್ತಲಾಗುತ್ತ ಅಸ್ಪಷ್ಟ ವಾಗಿದ್ದರೂ ಚೆನ್ನಾಗಿ ಬಲ್ಲನು. ಗ್ರೇಸ ಮೆಲಬರಿ ಮನೆಯಿಂದ ಹೊರಟಿದ್ದಳು, ಕತ್ತಲಾಗುವ ಮುಂಚೆ ಒಂದು ಚಿಕ್ಕ ತಿರುಗಾಟಕ್ಕಾಗಿರಬೇಕು. ಅವಳು ಮಾತನಾಡಿಸ

ಬಹುದೆಂದು ಆತ ಸಾವರಿಸಿಕೊಂಡನು. ಏಕೆಂದರೆ ಅವಳು ಆ ಮರದ ಕೆಳಗಿಂದ ಹಾಯದೆ ಇರಲು ಸಾಧ್ಯವೆ ಇದ್ದಿಲ್ಲ. ಆದರೆ ಗ್ರೇಸ ಆ ಸಮಯಕ್ಕೆ ಮೇಲೆ ನೋಡಿದಳು. ಅವನನ್ನು ಕಂಡಳು. ಆದಾಗ್ಯೂ ಅವಳ ತಲೆ ಆಗಷ್ಟೇ ತಂದೆ ಹೇಳಿದ ಮಾತುಗಳಿಂದ ತುಂಬಿತ್ತು. ಅದರಿಂದ ಅವಳು ಅವನಿಗೆ ಉತ್ತೇಜನ ಕೊಡಲಿಲ್ಲ. ಅವಳಿಗೆ ಅವನ ಬಗೆಗೆ ವರ್ಷಗಟ್ಟಲೆ ಒಂದು ಬಗೆಯ ಆದರ ಭಾವವಿತ್ತು. ಆದರೆ ಈಗ ತಿರುಗಿ ಬಂದೊಡನೆ ಅದು ಸಾಕಷ್ಟು ಉರಿದೇಳುವಂತೆ ಆಗಿದ್ದಿಲ್ಲ. ಅದರ ಕಿಡಿ ಬಿದ್ದು ಕಿಚ್ಚಾಗಿ ಅವಳು ಬಂಡುಗಾರ್ತಿಯಾಗುವಂತೆ ಮಾಡಿದ್ದಿಲ್ಲ. ತನ್ನನ್ನು ಆಕೆ ಕಾಣಲಿಕ್ಕಿಲ್ಲವೆಂದು ಭಾವಿಸಿ ವಿಂಟರಬೋರ್ನ ಕೂಗಿದ, 'ಮೆಲಬರಿ, ಇಲ್ಲಿ ಇದ್ದೇನೆ ನಾನು!'

ಅವಳು ಮತ್ತೊಮ್ಮೆ ತಲೆ ಎತ್ತಿದಳು. ಅವನ ಮುಖದ ಚರ್ಯೆ ನೋಡುವಷ್ಟು ಅವಳು ಹತ್ತಿರವೇ ಇದ್ದಳು. ಅವನ ಬೂಟುಗಳ ಅಂಗಾಲಿನ ಮೊಳೆಗಳು ಸತತ ಸಂಚಾರದಿಂದ ಸವೆದು ಬೆಳ್ಳಿಯಂತೆ ಬೆಳಗುವದು ಅವಳಿಗೆ ಕಂಡಿತು. ಆದರೆ ಅವಳು ಮರು ಮಾತನ್ನೇ ಆಡಲಿಲ್ಲ. ದೃಷ್ಟಿಯನ್ನು ತಿರುಗಿ ತಗ್ಗಿಸಿ ಮುಂದೆ ನಡೆದಳು.

ವಿಂಟರಬೋರ್ನನ ಮೋರೆ ವಿಚಿತ್ರವಾಯಿತು. ಆತ ವಿಚಾರಕ್ಕೆ ಬಿದ್ದ. ಆದರೂ ತನ್ನ ಕೆಲಸವನ್ನು ತನ್ನಾರೆ ಮುಂದುವರಿಸಿದ. ಅಷ್ಟರಲ್ಲಿ ಗ್ರೇಸ ಬಹಳ ದೂರ ಹೋಗಿದ್ದಿಲ್ಲ. ದಣಪೆಯನ್ನು ಮುಟ್ಟಿ ಅದರ ಮೇಲೆ ಖಿನ್ನಳಾಗಿ ಆನಿಸಿ ನಿಂತು ತನ್ನಲ್ಲಿಯೇ ಪಿಸುಗುಟ್ಟಿದಳು, 'ನಾನೇನು ಮಾಡಲಿ?'

ಒಮ್ಮೆಲೆ ದಟ್ಟ ಮಂಜು ಕವಿದುಬಂತು. ಅವಳು ತನ್ನ ತಿರುಗಾಟ ಮೊಟಕು ಮಾಡಿದಳು. ಮತ್ತೆ ಆ ಮರದ ಕೆಳಗಿನಿಂದ ಹಾದು ಬಂದಳು. ಮತ್ತೆ ಆತ ಅವಳನ್ನು ಕರೆದನು. 'ಗ್ರೇಸ,' ಆಕೆ ಮರದ ಕಾಂಡದ ಹತ್ತಿರ ಬಂದೊಡನೆ ಅವನು ಅಂದನು, 'ನನ್ನ ಕೂಡ ಮಾತಾಡು'. ಅವಳು ನೇರವಾಗಿ ಮೇಲಕ್ಕೆ ದಿಟ್ಟಿಸಿ ನೋಡಿದಳು. ತಲೆಯನ್ನು ತಡೆಯದೆ ಅಲ್ಲಾಡಿಸಿದಳು, ಕೆಲವು ಅಂತರ ಮುಂದೆ ನಡೆದಳು ಮತ್ತು ಅಲ್ಲಿ ಬೇಲಿಯ ಹಿಂದಿನಿಂದ ಅವನ ಕಡೆಗೆ ನೋಡುತ್ತ ನಿಂತಳು.

ಅವಳ ಅನಿಷ್ಠುರದ ಹಿಂದಿನ ಹೇತು ದಯೆಯೇ ಆಗಿತ್ತು. ನಿಷ್ಠುರ ನಡೆಯುವುದೇ ಆದಲ್ಲಿ, ಆಕೆ ತನ್ನಲ್ಲಿಯೇ ಅಂದುಕೊಂಡಿದ್ದಳು, ಅದನ್ನು ಆದಷ್ಟು ಲಗು ಆರಂಭಿಸುವುದು ಲೇಸು. ಅವಳು ಹಾಗೆ ಕಣ್ಣತೆಕ್ಕೆಯ ಆಚೆಗೆ ನಿಂತಾಗ ಜೈಲ್ಸನಿಗೆ ಅವಳ ಇಂಗಿತ ಗೊತ್ತಾಗಿರಬೇಕು; ಒಮ್ಮೆಲೇ ರಭಸದಿಂದ ಆತ ಕೆಲಸ ಮುಂದರಿಸಿದನು, ಆಕಾಶದಲ್ಲಿ ಇನ್ನೂ ಹೆಚ್ಚು ಹೆಚ್ಚು ಎತ್ತರಕ್ಕೆ ಏರಿಹೋದನು. ಕೆಳಗಿನ ಪಾರ್ಥಿವ ಪ್ರಪಂಚದೊಂದಿಗೆ ಎಲ್ಲ ಸಂಪರ್ಕ ಕಡಿದುಕೊಂಡಂತೆ. ಕೊನೆಗೂ ಆತ ಆ ಎಲ್ಮ ಮರದಲ್ಲಿ ಇಷ್ಟು ಎತ್ತರಕ್ಕೆ ಏರಿದ್ದ, ಸುತ್ತಲೂ ಮಂಜು ಇಷ್ಟು ದಟ್ಟ ಕವಿದಿತ್ತು. ಕೆಳಗಿನಿಂದ ಕಂಡರೆ ಆತ ಆಕಾಶದ ನೆತ್ತಿಯಲ್ಲಿ ಒಂದು ಚಿಕ್ಕ ನರೆಗಪ್ಪು

ಕಲೆಯಂತೆ ತೋರುತ್ತಿದ್ದ. ಕಾಲಕಾಲಕ್ಕೆ ಅವನ ಕೈಗೊಡಲಿಯ ಪೆಟ್ಟು ಕೆಳಗೆ ಉರುಳುವ ಟೊಂಗೆಯ ಗತಿ, ಅದು ಬೇಲಿಯಲ್ಲಿ ಕುಸಿಯುವ ಜೋರಿನ ಸದ್ದು ಅಲ್ಲವಾದರೆ ಅವನು ಯಾರ ಗಮನಕ್ಕೂ ಬರುವಂತೆ ಇದ್ದಿಲ್ಲ.

ಆದರೂ ಹೀಗೆ ಮಾಡಲೇಬೇಕೆಂದಿಲ್ಲ. ಸರಳತನ, ಬಿಚ್ಚು ಮನಸಿನ ಮಾತು ಎಲ್ಲಕಕ್ಕೂ ಯಾವುದಕ್ಕೂ ಲೇಸು. ಅವಳು ಮತ್ತೆ ಮೂರನೆಯ ಸಲ ತಿರುಗಿಹೋದಳು. ಈ ಸಲ ಅವನು ಅವಳನ್ನು ಕಾಣಲಿಲ್ಲ. ಅವಳು ನಿಧಾನವಾಗಿ ತನ್ನ ಅರಿವು-ಪರಿವೆ ಇಲ್ಲದ ಅವನ ಆಕೃತಿಯತ್ತ ಕಣ್ಣಿಟ್ಟು ನೋಡಿದಳು—ಅವನಲ್ಲಿ ಇನ್ನೂ ಜೀವ ಹಿಡಿದು ಉಳಿದಿರಬಹುದಾದ ಯಾವುದೇ ಬಗೆಯ ಆಸೆಯನ್ನೂ ಕೊನೆಗಾಣಿಸಲಿಕ್ಕೆ ಮನಸ್ಸಿಲ್ಲದೆ.

'ಜೈಲ್ಸ ವಿಂಟರಬೋರ್ನ !' ಅವಳು ಕರೆದಳು.

ಅವನ ಕೆಲಸ ಎಲೆಗಳ ಸಳಸಳ ಸದ್ದು ಗದ್ದಲವೆಬ್ಬಿಸಿತ್ತು. ಅದರಲ್ಲಿ ಅವನಿಗೆ ಅದು ಕೇಳಿಸಲಿಲ್ಲ.

'ವಿಂಟರಬೋರ್ನ !' ಅವಳು ಮತ್ತೆ ಕೂಗಿದಳು. ಈ ಸಲ ಆತ ಕೆಳಗಡೆ ನೋಡಿದನು ಮತ್ತು ಉತ್ತರ ನೀಡಿದನು.

'ಇದೀಗಿನ ನನ್ನ ಮೌನ ಆಕಸ್ಮಿಕವಲ್ಲ.' ಅವಳು ಅಸ್ವಸ್ಥ ಹದಗೆಟ್ಟ ದನಿಯಲ್ಲಿ ಅಂದಳು. 'ನನ್ನ ತಂದೆ ಅಂದಿದ್ದಾರೆ—ನಮ್ಮಿಬ್ಬರ ನಡುವಿನ ಆ ವಾಙ್ನಿಶ್ಚಯ, ನಿನಗೆ ಗೊತ್ತಿರುವ ಆ ಒಡಂಬಡಿಕೆ ಅದರ ಬಗೆಗೆ ವಿಶೇಷ ವಿಚಾರ ಮಾಡಬೇಕಾಗಿಲ್ಲ ನಾವು. ನನಗೂ ಅನಿಸುತ್ತದೆ — ಅಪ್ಪನು ಅಂದದ್ದು ಒಟ್ಟಾರೆ ಸರಿ. ಆದರೂ ನಾವಿಬ್ಬರೂ ಗೆಳೆಯರೇ ; ಜೈಲ್ಸ. ನಿನಗೆ ಗೊತ್ತು ನಾವಿಬ್ಬರೂ ಆಪ್ತರು.'

'ಸರಿ. ಅಡ್ಡಿ ಇಲ್ಲ.' ಆತ ತೀರ ದುರ್ಬಲ ದನಿಯಲ್ಲಿ ಅಂದನು. ಆ ದನಿ ಮರದ ಕೆಳಗೆ ಪೂರ್ತಿ ಮುಟ್ಟಲಿಲ್ಲ. 'ನಾನೇನು ಮತ್ತೆ ಹೇಳುವಂತಿಲ್ಲ, ಗ್ರೇಸ— ನಾನು ಏನೂ ಹೇಳಲಾರೆ, ಈ ಬಗ್ಗೆ ಸ್ವಲ್ಪ ವಿಚಾರ ಮಾಡಿದನಕ.'

ಅವಳು ಮುಂದರಿದಳು. ದನಿಯಲ್ಲಿ ಭಾವನೆದುಂಬಿ, 'ನನ್ನ ಮಟ್ಟಿಗೆ ಹೇಳುವದಾದರೆ, ನಾನು ನಿನ್ನನ್ನು ಮದುವೆ ಆಗುತಿದ್ದೆ— ಒಂದಾನೊಂದು ದಿನ ಎಂದು ಕಾಣುತ್ತದೆ. ಆದರೆ ನಾನು ತಂದೆಯ ಮಾತಿಗೆ ಹೂಂ ಅಂದೆ. ಏಕೆಂದರೆ, ನನ್ನಂತೆ ನಡೆದರೆ ಅದು ಅವಿವೇಕವಾದೀತು ಎಂದು ನನಗೆ ಮನವರಿಕೆ ಮಾಡಿದ್ದಾಗಿದೆ.'

ಅವನು ಉತ್ತರ ಕೊಡಲಿಲ್ಲ. ಟೊಂಗೆಯ ಮೇಲೆ ಅದರ ಕವಲ ಮೂಕೆಯಲ್ಲಿ ಮೊಣಕೈ ಇಟ್ಟು ಅಂಗೈಗೆ ತಲೆ ಆನಿಸಿ ಕೂತನು. ಅಲ್ಲಿ ಅವನು ಹಾಗೆ ಕೂತೇ ಉಳಿದನು. ಮಂಜು ಮತ್ತು ರಾತ್ರೆಯ ಕತ್ತಲೆ ಅವನನ್ನು ಅವಳ ಕಣ್ಣಿಗೆ ಪೂರ್ತಿ ಮರೆಮಾಡುವಷ್ಟು ಸುತ್ತಲೂ ಕವಿಯುವತನಕ.

ಗ್ರೇಸ ಒಂದು ನಿಟ್ಟುಸಿರು ಸುಯ್ದಳು—ತಡೆದು ಎರಡು ಭಾಗವಾಗಿ. ಅವಳು ಮುಂದೆ ನಡೆದಳು. ಅವಳಿಗೆ ತನ್ನ ಹೃದಯ ಒಮ್ಮೆಲೇ ಅಸಹ್ಯ ದೊಡ್ಡ ಭಾರದ್ದೆನಿಸಿತು. ಅವಳ ಕಣ್ಣು ತೇವುಗೊಂಡವು. ಜೈಲ್ಸ ಹಾಗೆ ಮರದಲ್ಲಿ

ಮೂಲೆಯಲ್ಲಿ ಮೂಕನಾಗಿ ಕೂಡ್ರುವ ಬದಲು ಕೂಡಲೆ ಕೆಳಗಿಳಿದು ಅವಳ ಹತ್ತಿರ ಬಂದಿದ್ದರೆ ಅವಳು ಈಗ ಕೊನೆಯದೆಂದು ಅವನಿಗೆ ತಿಳಿಪಡಿಸಿದ ಪಿತೃವಾಕ್ಯ ಪರಿಪಾಲನೆಯ ಆ ಮನೋಭಾವದಲ್ಲಿ, ಆ ಮನೋವೃತ್ತಿಯಲ್ಲಿ ಅವಳು ಮುಂದರಿಯ ಬಹುದಾಗಿತ್ತೆ? ಹೆಂಗಸರೇ ಹೇಳುವಂತೆ, ಒಬ್ಬಳು ಪುರುಷನೊಬ್ಬನಿಗೆ ತಮ್ಮ ಸರ್ವಸ್ವ ವನ್ನು ಅರ್ಪಿಸಲು ಸಿದ್ಧಳಾಗುವ ಹೊತ್ತೆಂದರೆ ಅವನಿಗೆ ಒಲ್ಲೆನೆಂದು ತಿಳಿಸಿದ ಐದು ನಿಮಿಷಗಳಲ್ಲಿಯೇ! ಈ ಹೇಳಿಕೆ ನಿಜವಾಗಿದ್ದರೆ, ವಿಂಟರಬೋರ್ನ ನೆಲಕ್ಕೆ ಬಂದು ಗ್ರೇಸಳ ಬಳಿಗೆ ಕಾಣಿಸಿಕೊಂಡಿದ್ದರೆ ಏನಾದರೊಂದು ಸಾಧ್ಯವಾಗುತ್ತಿತ್ತು. ಆದರೆ ಆತ ತನ್ನನ್ನು ಸುತ್ತುವರಿದು ಕಟ್ಟಿನಿಂತ ಆ ಮಂಜಿನ ನಾಡಿನಲ್ಲಿಯೇ ಮೂಕನಾಗಿ ಸ್ತಬ್ಧನಾಗಿ ಉಳಿದುಬಿಟ್ಟ. ಮತ್ತು ಆಕೆ ತನ್ನ ದಾರಿ ಹಿಡಿದು ಹೋದಳು.

ಈಗ ಆ ಸ್ಥಳವು ನಿರ್ಜನವಾದಂತೆ ಕಂಡಿತು. ಸೌಥರ ಮನೆಯಿಂದ ತೂರಿ ಬರುವ ಬೆಳಕು ಮಂಜನ್ನು ಬೆಳಗಿತ್ತು. ಆದರೆ ಮರವನ್ನು ನಿಲುಕುತಿದ್ದಿಲ್ಲ. ಕಾಲ ತುಸು ಕಳೆಯಿತು. ಮೇಲೆಲ್ಲ ಕಗ್ಗತ್ತಲೆ. ಜೈಲ್ಸ ಇನ್ನೂ ಕೆಳಗೆ ಇಳಿದಿರಲಿಲ್ಲ.

ಆಗ ಆ ಮರವೇ ಕಂಪಿಸಿದಂತೆ ಅನಿಸಿತು. ಸಿಡಿದಾಗ ಸುಯ್ದಂತೆ ಅನಿಸಿತು. ವಿಂಟರಬೋರ್ನ ಸದ್ದಿಲ್ಲದೆ ನೆಲಕ್ಕೆ ಇಳಿದನು. ಆತ ವಿದ್ಯಮಾನವನ್ನೆಲ್ಲ ಪೂರ್ತಿ ವಿಚಾರ ಮಾಡಿದ್ದನು. ಏಣಿಯನ್ನು, ಕೈಗೊಡಲಿಯನ್ನು ಅವುಗಳ ಸ್ಥಾನಕ್ಕೆ ಒಯ್ದಿಟ್ಟು ಆತ ತನ್ನ ಮನೆಯ ಹಾದಿ ಹಿಡಿದನು. ಇಂದಿನ ಈ ಘಟನೆ ಆತ ತನ್ನ ಬಾಹ್ಯ ವರ್ತನೆಯ ಮೇಲೆ ಪ್ರಭಾವ ಬೀರಲು ಬಿಡಲಿಲ್ಲ. ಎಂದಿನಂತೆ ನಿದ್ದೆ ಹೋದನು.

ಎರಡು ಕಷ್ಟಗಳು ಒಮ್ಮೆಲೆ ಬಂದಮಾತ್ರಕ್ಕೆ ಅವು ಇಮ್ಮಡಿ ಕಷ್ಟವೆನಿಸ ಬೇಕೆಂದಿಲ್ಲ. ತನ್ನ ಮನೆಮಾರಿನ ಸ್ವಾಮ್ಯಕ್ಕೆ ಬಂದ ಗಂಡಾಂತರದ ವ್ಯಾವಹಾರಿಕ ಚಿಂತೆ ಅವನನ್ನು ಅರ್ಧರಾತ್ರೆ ನಿದ್ದೆಗೆಡಿಸುವಂತಿದ್ದೂ, ಈ ಹೊಸ ಚಿಂತೆ, ಗ್ರೇಸ ಮೆಲಬರಿಯ ಕುರಿತ ಭಾವನಾತ್ಮಕ ತೊಡಕು ಅದರ ಸ್ಥಾನವನ್ನು ಆಶ್ರಯಿಸಿತೇ ಹೊರತು ಅದನ್ನು ಇಮ್ಮಡಿಗೊಳಿಸಲಿಲ್ಲ. ಅವಳೊಂದಿಗೆ ಈ ವಿಚ್ಛೇದ ಅವಳನ್ನೇ ಹುಗಿದಂತೆ ಅನಿಸಿತೆ ಹೊರತು ಅವಳಿಂದ ವಿಯೋಗದಂತೆ ಅಲ್ಲ. ಆದರೆ ಈ ಅನಿಸಿಕೆಯೂ ಅವನಿಗೆ ಸದ್ಯ ಅಷ್ಟೊಂದು ಅರಿವಾಗಲಿಲ್ಲ. ಮುಂಜಾನೆ ಎದ್ದಾಗಲೂ ಆತ ಮಬ್ಬಿನಲ್ಲಿ ಇದ್ದಂತೆ, ನಿಷ್ಠುರನಾಗಿಯೇ ಕಂಡ ; ತಾನು ಕಳೆದುಕೊಂಡುದಕ್ಕಾಗಿ ಕಳವಳ, ಅವನ ಎದೆಯ ಹಾಡಿನ ಎರಡನೆಯ ಅಪಶ್ರುತಿ, ಅವನಿಗೆ ಇನ್ನೂ ವ್ಯಗ್ರ ಮಾಡಲಿಲ್ಲ, ಕೇಳಿಬರಲಿಲ್ಲ.

ನಸುಕು ಬೆಳಗಾಗುವದರೊಳಗೆ ಓಕ ಕಟ್ಟಿಗೆಯ ಹೊರೆಯೊಂದು, ಕೆಲವು ಮೈಲು ದೂರದ ಪಟ್ಟಣಕ್ಕೆ ಕಟ್ಟೋಣದ ಕೆಲಸದವನೊಬ್ಬನಿಗೆ ಕಳುಹಿಸುವದಿತ್ತು. ದೊಡ್ಡ ಕೆಂಪು ಗಾಲಿಯ ಭಾರವಾದ ಗಾಡಿಗೆ ಆ ನಾಟುಗಳನ್ನು ಸರಪಳಿಯಿಂದ ಬಿಗಿದು ಹೇರಿ ಕಟ್ಟಲಾಗಿತ್ತು. ಮೆಲಬರಿಯ ನಾಲ್ಕು ಬಲಿಷ್ಠ ಕುದುರೆಗಳನ್ನು ಗಾಡಿಯನ್ನು ಎಳೆದೊಯ್ಯಲು ಹೂಡಿತ್ತು.

ಕುದುರೆಗಳಿಗೆ ಗಂಟೆಗಳನ್ನು ತೊಡಿಸಿದ್ದರು. ಕುದುರೆಯ ಹೆಗಲ ಮೇಲೆ ಒಂದು ಚೌಕಟ್ಟಿಗೆ ಎರಡರಂತೆ ಒಟ್ಟು ಹದಿನಾರು ಗಂಟೆಗಳು. ಅವೂ ಬಾರಿಸುವಾಗ ಸರಿಯಾಗಿ ಎರಡು ಸ್ವರಸಪ್ತಕಗಳಾಗುವಂತೆ ದನಿಗೂಡಿಸಿತ್ತು. ಆ ನೆರಹೊರೆಯಲ್ಲಿ ಹೀಗೆ ಕುದುರೆಗಳಿಗೆ ಗಂಟೆ ಕಟ್ಟುವದನ್ನು ಇನ್ನೂ ನಡೆಯಿಸಿಕೊಂಡು ಬಂದವನು ಮೆಲಬರಿ ಒಬ್ಬನೆ. ಏಕೆಂದರೆ ಸಣ್ಣ ಹಿಂಟಾಕಿನ ಕಿರಿಯಗಲದ ಕೇರಿಗಳಲ್ಲಿ ಈ ಗಂಟೆ ಸದ್ದಿನ ಸೂಚನೆಗಳು ಅವನಿಗೂ ನೆರಹೊರೆಯವರಿಗೂ ಹಿಂದಿನಂತೆ ಇಂದಿಗೂ ಪ್ರಯೋಜಕ ವಾಗಿದ್ದವು. ಆ ಪ್ರಾಂತದ ಗಾಡಿಕಾರರಿಗೆಲ್ಲ ಬೇರೆ ಬೇರೆ ಕುದುರೆ ತಂಡಗಳ ಗಂಟೆ ದನಿ ಗೊತ್ತು. ಕತ್ತಲೆಯ ರಾತ್ರಿಯಲ್ಲಿ ದೂರದಿಂದಲೇ ಬರುವ ಗಾಡಿ ಊರವರದೋ ಹೊರಗಿನವರದೋ ಎಂಬುದು ಅವರು ಹೇಳುತಿದ್ದರು.

ಮುಂಚಿನ ಸಂಜೆಯ ದಟ್ಟ ಮಂಜು ಮರುದಿನ ಮುಂಜಾವಿನಲ್ಲಿಯೂ ಭಾರವಾಗಿ ಬಿಟ್ಟಿತ್ತು. ಮುಂಬೆಳಕು ಮರಗಳಡಿಗೆ ಭೇದಿಸಿ ಬರುವಂತೆಯೇ ಇದ್ದಿಲ್ಲ. ನಾಟುಗಳ ಹೊರೆ ಬಲು ಭಾರ, ಹಾದಿ ಅಂಕುಡೊಂಕು. ಹವೆ ಮಂಜಿನಿಂದ ದಟ್ಟ. ವಿಂಟರ ಬೋರ್ನ ಹಾದಿಯ ತುದಿಯ ತಿರುವಿನ ತನಕವೂ ತಂಡದ ಜತೆಗೆ ಬಂದನು. ಅಲ್ಲಿ ಊರಿನ ಹಾದಿ ಹೆದ್ದಾರಿಗೆ ಕೂಡುತಿತ್ತು.

ಗಡಗಡಿಸುತ್ತ ಗಾಡಿ ಮುಂದರಿಯಿತು. ಆ ಗದ್ದಲಕ್ಕೆ ಗುಡಿಸಲುಗಳ ಬುನಾದಿಗಳೇ ಅದುರುವಂತಿತ್ತು. ಎಲ್ಲಕ್ಕೂ ಮೇಲೆ ಹದಿನಾರು ಘಂಟೆಗಳು ಮೇಳವಿಸಿ ಇಂಪಾಗಿ ಬಾರಿಸುತ್ತಿದ್ದವು. ಗಾಲಿಗಳ ಕೀಲಗಳಿಂದ ಕಿಡಿಗಳು ಹಾರುತ್ತಿದ್ದವು — ತರಗೆಲೆಗಳಿಗೆ ಬೆಂಕಿಕೊಡಲೋ ಎಂಬಂತೆ. ಗಾಡಿ ಕೊಳ್ಳದಿಂದ ಏರಿ ಬಂದು ಬಯಲ ಹೆದ್ದಾರಿಗೆ ಇಳಿಯ ಹತ್ತಿತು.

ಆಗಲೆ ಒಂದು ಆಗಬಾರದ ಘಟನೆ ಆಯಿತು. ಯಾವುದು ಒದಗಬಾರದೆಂದು ಕಾಯಲು ಆ ಘಂಟೆಗಳಿದ್ದವೋ ಅದೇ ಘಟಿಸಿತು. ಫಕ್ಕನೆ ಎರಡು ಸಾರೋಟಿನ ದೀಪಗಳು ಮಂಜಿನಲ್ಲಿ ಬೆಳಕಿನ ವಲಯಗಳನ್ನು ತೂರುತ್ತ ತೀರ ಬಳಿಯಲ್ಲಿಯೇ ಕುದುರೆಗಳ ಕಣ್ಣಿನಲ್ಲಿ ಕುಕ್ಕಿದವು. ತಮ್ಮ ಗಾಲಿಗಳ ಸದ್ದಿನಲ್ಲಿಯೇ ಮುಳುಗಿದ್ದರಿಂದ ಅದರ ಬರವು ಅದಕ್ಕೆ ಕೇಳಿಸಲಿಲ್ಲ. ಸಾರೋಟು ಮುಚ್ಚಿದ್ದಿತ್ತು. ಅದರ ಹಿಂದೆ ಇನ್ನೊಂದು ಗಾಡಿ ಸಾಮಾನು ಹೇರಿಕೊಂಡು ಬರುವುದು ಮಸುಮಸುಕಾಗಿ ಕಾಣಿಸಿತು.

ವಿಂಟರಬೋರ್ನ ತನ್ನ ಕುದುರೆ ತಂಡದ ಮುಂದುಗಡೆ ಹೋಗಿ ನಿಂತನು; ಸಾರೋಟಿನವನು ಗಾಡಿಯವನಿಗೆ ಹಿಂದಿರುಗಿ ಹೋಗಲು ಹೇಳುವುದನ್ನು ಕೇಳಿದನು. ಅದು ಸಾಧ್ಯವಿಲ್ಲವೆಂದು ಗಾಡಿಯವನು ಒದರಿದನು.

'ಕುದುರೆಗಳನ್ನು ನೊಗದಿಂದ ಕಳಚಿದರೆ ಗಾಡಿಯನ್ನು ತಿರುಗಿಸಬಹುದು' — ಸಾರೋಟಿನವನ ವಾದ.

'ನನಗಿಂತ ನಿಮಗೇ ಹೊರಳಲು ಹೆಚ್ಚು ಅನುಕೂಲ' ವಿಂಟರಬೋರ್ನ ಅಂದನು. 'ಈ ಗಾಲಿಗಳ ಮೇಲೆ ಐದು ಟನ್ನು ಕಟ್ಟಿಗೆ ಹೇರಿದೆ.'

‘ಆದರೆ ನನ್ನ ಹಿಂದೆ ಇನ್ನೊಂದು ಗಾಡಿಯಿದೆ — ಸಾಮಾನು ಹೇರಿದ್ದು.’

ವಿಂಟರಬೋರ್ನನಿಗೆ ಅವನ ವಾದ ಅರ್ಥವಾಯಿತು. ‘ಆದರೂ ನೀವು ನಮಗಿಂತ ಸುಲಭವಾಗಿ ಗಾಡಿ ಹಿಂದೆ ತೆಗೆದುಕೊಳ್ಳಬಹುದು. ಅಲ್ಲದೆ ನೀವೇ ಹಿಂದೆಗೆಯುವುದೇ ಯೋಗ್ಯ. ಏಕೆಂದರೆ ನಮ್ಮ ಗಂಟೆಗಳ ಸದ್ದು ಒಂದು ಮೈಲಿನ ವರೆಗೂ ಕೇಳಿಸುತ್ತದೆ.’

‘ಮತ್ತೆ ನಿಮಗೆ ನಮ್ಮ ದೀಪ ಕಾಣಿಸಲಿಲ್ಲವೇ ?’

‘ಕಾಣಿಸಲಿಲ್ಲ. ಮಂಜು ಕವಿದಂತಿತ್ತು.’

‘ಅದೇನೇ ಇರಲಿ, ನಮ್ಮ ವೇಳೆಗೆ ಬೆಲೆ ಇದೆ.’

ಸಾರೋಟಿನವನು ದರ್ಪದಿಂದ ಅಂದ, ‘ನೀವು ಇಲ್ಲಿಯೋ ಎಲ್ಲೋ ಹಾಳು ಹಳ್ಳಿಗೋ ನೆರೆಊರಿಗೋ ಹೊರಟವರು. ನಾವು ನೇರವಾಗಿ ಇಟಲಿಗೆ ಹೊರಟಿದ್ದೆವು.’

‘ಓಹೋ ಸಾರೋಟು ಅಟ್ಟಿಕೊಂಡೇ ಹೋಗುತ್ತೀರಾ ಅಲ್ಲಿಯವರೆಗೆ ?’ — ವಿಂಟರಬೋರ್ನ ವ್ಯಂಗ್ಯವಾಗಿ ನುಡಿದನು.

ಇದೇ ಧಾಟಿಯಲ್ಲಿ ವ್ಯಾಜ್ಯ ನಡೆಯಿತು. ಕೊನೆಗೆ ಸಾರೋಟಿನೊಳಗಿಂದ ಒಂದು ದನಿ ಕೇಳಿತು — ಏನು ನಡೆದಿದೆಯೆಂದು. ಅದು ಹೆಂಗಸಿನ ದನಿ ಆಗಿತ್ತು.

ಮರದ ಮಂದಿಯ ಹಟಮಾರಿತನದ ಬಗೆಗೇ ಅವಳಿಗೆ ತಿಳಿಸಲಾಯಿತು. ಆಗ ಅವಳು ತನ್ನ ಪ್ಯಾದೆಗೆ ಹೇಳಿದಳು, ಮರದ ಮಂದಿ ಕುದುರೆಗಳನ್ನು ಹಿಂದೂಡಬೇಕೆಂದು ತಿಳಿಸಲಿಕ್ಕೆ. ಜೈಲ್ಸ ಅದನ್ನು ಕೇಳಿದನು. ಆ ಸಂದೇಶ ವಿಂಟರಬೋರ್ನನಿಗೆ, ತಲ್ಪಿಸಿದಾಗ ಆತ ಆ ಮಹಿಳೆಯ ಕ್ಷಮೆ ಕೋರಿ ಪರಿಸ್ಥಿತಿಯನ್ನು ತಿಳಿಸಹೇಳಿದನು. ಅವಳ ವಿನಂತಿ ಮಾನ್ಯ ಮಾಡುವುದು ಶಕ್ಯವಿದ್ದಿಲ್ಲ. ಸಾರೋಟಿನ ಮಾನದಲ್ಲಿ ಮರಹೇರಿದ ಬಂಡಿ ತಿರುಗಿಸುವುದು ಅಶಕ್ಯವಿತ್ತು ಇತ್ಯಾದಿ ಇತ್ಯಾದಿ. ಮುಂಚಿನ ದಿನ ಗ್ರೇಸ ಮೆಲಬರಿ ಯೊಂದಿಗೆ ಒದಗಿಬಂದ ಘಟನೆಯಿಂದ ಜೈಲ್ಸ ಎಂದಿನಷ್ಟು ದಾಕ್ಷಿಣ್ಯದ ಸಭ್ಯ ಗೃಹಸ್ಥ ನಾಗಿ ಇಂದು ಉಳಿದಿದ್ದಿಲ್ಲ. ಅವನಿಗೆ ಹೆಣ್ಣಿನಲ್ಲಿಯ ಶ್ರದ್ಧೆಯೇ ತತ್ತರಿಸಿತ್ತು.

ಯಾವ ಮಾತನ್ನೂ ಆತ ಕೇಳಲಿಲ್ಲ. ಸಾರೋಟು ಮತ್ತು ಅದರ ಬೆನ್ನಿನ ಗಾಡಿಗಳೇ ಹೆದ್ದಾರಿಯಲ್ಲಿ ಹಿಂದೆ ಸರಿದು ತುಸು ಅಂತರಕ್ಕೆ ಬದಿಯ ಹೊರಳು ತಾಣದ ತನಕ ಹೋಗಬೇಕಾಯಿತು. ಆಗ ಕುದುರೆಗಳ ತಂಡ ಗಂಟೆಗಳನ್ನು ಘಣಘಣಿಸುತ್ತ ಒಂದು ರೀತಿ ವಿಜಯ ಯಾತ್ರೆಯಲ್ಲಿ ಭಾರವಾಗಿ ಗಾಡಿಯನ್ನೆಳೆದುಕೊಂಡು ಮುಂದೆ ಸಾಗಿತು. ಆದರೆ ಈ ವಿಜಯದ ಠೀವಿ ಮಾರ್ಗದರ್ಶಕನಿಗೆ ಇದ್ದಿಲ್ಲ.

ಜೈಲ್ಸ ಹೇರಿದ ಬಂಡಿಯ ಬೆನ್ನಿಗೆ ಸಾಗಿದ್ದನು. ಬದಿಗೆ ನಿಂತ ಸಾರೋಟನ್ನು ಹಾಯುವಾಗ ಎತ್ತರದ ದನಿಯೊಂದು ಪ್ರಶ್ನೆ ಮಾಡಿದ್ದು ಆತ ಕೇಳಿದನು. ‘ಈ ಉದ್ಧಟ ಜನ ಯಾರು ? ಮೆಲಬರಿ ಅಲ್ಲವಷ್ಟೇ ?’ ದನಿಯಲ್ಲಿ ನುಡಿದವರ ಲಿಂಗಭೇದ ಒಡೆದದ್ದು ಕಾಣಿಸುತ್ತಿತ್ತು. ಅದಕ್ಕೆ ವಿಂಟರಬೋರ್ನನಿಗೆ ತುಸು ಪಶ್ಚಾತ್ತಾಪದ ವೇದನೆ ಆಗದಿರಲಿಲ್ಲ.

'ಇಲ್ಲ ಒಡತಿ, ಈತ ಇನ್ನೂ ಎಳೆಯುವನು. ಕಿರಿಯ ಹಿಂಟಾಕ್‌ನಲ್ಲಿ ಒಬ್ಬ ಕಿರಿಯ ವ್ಯವಹಾರಸ್ಥ. ವಿಂಟರಬೋರ್ನ್ ಎಂದು ಇವನ ಹೆಸರು.'

ಹೀಗೆ ಅವರು ಒಬ್ಬರಿಂದೊಬ್ಬರು ದೂರ ಹೋದರು. ಗಾಡಿಯವ ಅಂದ, 'ಅದು ಯಾರು ಗೊತ್ತೇ, ವಿಂಟರಬೋರ್ನ್? ಅದು ಶ್ರೀಮತಿ ಚಾರ್ಮಂದ! ಈ ಹೆಂಗಸಿಗೆ ಹಗಲಿನ ಈ ಹೊತ್ತಿಗೆ ಇಲ್ಲಿ ಏನು ಕೆಲಸವಪ್ಪಾ! ಓ, ಇಟಲಿಗೆ ಹೊರಟಳೆಂದು ಹೇಳಿದನಲ್ಲ? ಸರಿ ಇವಳಿಗೆ ಇಲ್ಲಿಯ ಚಳಿಗಾಲ ಹಿಡಿಸುವುದಿಲ್ಲ.'

ವಿಂಟರಬೋರ್ನ್ ಈ ಘಟನೆಯಿಂದ ಕೆರಳಿದಂತೆ ಆದನು. ಅವನಿಗೆ ಗೊತ್ತು. ಮೆಲಬರಿ ಹಿಂಟಾಕ್ ಮನೆಯ ಆರಾಧಕ. ಈ ಸಂಗತಿ ಗೊತ್ತಾದರೆ ತನ್ನನ್ನು ಅವನೇ ಮೊದಲಿಗೆ ಬಯ್ಯಬಹುದು. ಹಾದಿಯ ತುದಿಯ ತನಕ ಗಾಡಿಯ ಜತೆಗೆ ಹೋಗಿ ಆತ ಅಲ್ಲಿಂದ ಹಿಂದಿರುಗಿದ; ಬರುವಾಗ ಸೌಥರಲ್ಲಿ ಹೋಗಿ ನಿನ್ನೆಯ ಸಂಜೆ ತಾನು ಮಾಡಿದ ಪ್ರಯೋಗದ ಫಲಿತಾಂಶವನ್ನು ತಿಳಿದುಕೊಳ್ಳಬೇಕೆಂದು ಮನಸ್ಸಿನಲ್ಲಿ ಮಾಡಿಕೊಂಡ.

ಇತ್ತ ಇನ್ನೊಂದು ಘಟನೆ ಒದಗಿತು. ಇದಕ್ಕೂ ಕೆಲವು ನಿಮಿಷ ಮೊದಲು ಗ್ರೇಸಳನ್ನು ತಂದೆ ಅದನ್ನೆ ವಿಚಾರಿಸಿ ಬರಲು ಸೌಥರಲ್ಲಿಗೆ ಅಟ್ಟಿದ್ದನು. ಅವಳು ತಂದೆಯೊಂದಿಗೇ ಫಲಾಹಾರ ಮುಗಿಸಲಿಕ್ಕೆ ಅಂದು ಲಗು ಎದ್ದಿದ್ದಳು. ಮೆಲಬರಿಯ ಮಗಳು ಬಂದಾಗ ಮಾರ್ಟಿ ಮನೆಯ ಬಾಗಿಲಲ್ಲಿ ನಿಂತಿದ್ದಳು. ಗ್ರೇಸಳು ಮಾತಾಡುವ ಮೊದಲೇ ನಾಟಿನ ಗಾಡಿಯ ಅಡ್ಡೆಯಿಂದ ಪಾರಾಗಿ ಶ್ರೀಮತಿ ಚಾರ್ಮಂದಳ ಸಾರೋಟು ಗಾಡಿ ಎರಡೂ ಓಣಿಯ ಗುಂಟ ಭರದಿಂದ ಓಡಿಬಂದವು. ಈ ಇಬ್ಬರು ಹುಡುಗಿಯರು ಆ ದೃಶ್ಯವನ್ನು ನೋಡಲು ಹೊರಳಿದರು.

ಚಾರ್ಮಂದ ಅವರನ್ನು ನೋಡಲಿಲ್ಲ. ಆದರೆ ಸಾರೋಟಿನ ಕಿಟಕಿಗಳೊಳಗಿಂದ ಅವಳನ್ನು ನೋಡಿಕೊಳ್ಳುವಷ್ಟು ಬೆಳಕು ಇತ್ತು. ಅವಳ ಸಿಂಗಾರ ಸಜ್ಜಿಕೆಯಲ್ಲಿಯ ಗಮನ ಸೆಳೆಯುವ ಲಕ್ಷಣವೆಂದರೆ ಜಡೆ ಹಾಕಿ ಹೆಳಲು ಬಿಟ್ಟ ಸಡಗರದ ಕೇಶರಾಶಿ.

'ಈ ಹೊತ್ತು ಎಷ್ಟು ಚೆಂದ ಕಾಣುತ್ತಾಳೆ ಆಕೆ!' ಗ್ರೇಸ ಅಂದಳು. ಪ್ರಶಂಸೆಯ ಔದಾರ್ಯದಲ್ಲಿ ಅವಳು ಶ್ರೀಮತಿ ಚಾರ್ಮಂದಳು ಹಿಂದೆ ಮಾಡಿದ ಭಂಗವನ್ನು ಮರೆತಿದ್ದಳು. 'ಹೀಗೆ ಧರಿಸಿದಾಗ ಅವಳ ಹೆಳಲು ಎಷ್ಟು ಒಪ್ಪುತ್ತದೆ ಅವಳಿಗೆ! ಇದಕ್ಕೂ ಚೆಂದ ಹೆಳಲು ನಾನು ನೋಡಿಯೇ ಇಲ್ಲ!'

'ನಾನೂ ನೋಡಿಲ್ಲ!' ಮಾರ್ಟಿ ಸುಕ್ಕು ದನಿಯಲ್ಲಿ ಅಂದಳು. ಅವಳಿಗೆ ಗೊತ್ತಿಲ್ಲದೆ ಅವಳ ಕೈ ಅವಳ ತಲೆಯ ಮೇಲೆ ಆಡಿತು.

ಸಾರೋಟು, ಗಾಡಿ ಕಣ್ಮರೆ ಆಗುವ ತನಕವೂ ಗ್ರೇಸ ಅವನ್ನು ತುಸು ಹಳಹಳಿಸಿದಂತೆಯೇ ನೋಡುತಿದ್ದಳು. ಆ ಮೇಲೆ ಮಾರ್ಟಿಯಿಂದ ತಿಳಿದುಕೊಂಡಳು— ಅವಳ ತಂದೆ ಸೌಥ ಏನೂ ಸುಧಾರಿಸಿಲ್ಲವೆಂದು. ಅಲ್ಲಿಂದ ಹೊರಟು ಬರುವಷ್ಟರಲ್ಲಿಯೆ ವಿಂಟರಬೋರ್ನ್ ಆ ಮನೆಯನ್ನು ಸಮೀಪಿಸಿದನು. ಆದರೆ ಹೊಸ್ತಿಲಲ್ಲಿ ನಿಂತ ಇಬ್ಬರು

ಹುಡುಗಿಯರಲ್ಲಿ ಒಬ್ಬಳು ಗ್ರೇಸ ಎಂಬುದನ್ನು ಕಂಡು ಅವನು ತಿರುಗಿದನು; ಮತ್ತು ಅವಳು ಹೊರಟು ಹೋಗುವತನಕವೂ ತನ್ನ ಮನೆಯಲ್ಲಿಯೇ ಉಳಿದನು.

೧೫

ಸಾರೋಟು, ಗಾಡಿಗಳ ಪ್ರಸಂಗದಿಂದ ವಿಂಟರಬೋರ್ನನ ಮನಸ್ಸು ತಿರುಗಿ ತನ್ನ ಮನೆ ಆಸ್ತಿಯ ಗಂಡಾಂತರದತ್ತ ಸೆಳೆದಂತೆ ಆಯಿತು. ಮುದುಕ ಸೌಥ ಸತ್ತನೆಂದರೆ ಅವೆಲ್ಲ ಮನೆಗಳು ಶ್ರೀಮತಿ ಚಾರ್ಮಂದಳ ಸೊತ್ತಾಗವಿದ್ದವು. ಅವನಿಗೆ ಅದೊಂದು ಸೋಜಿಗ. ಅವನಂತೆಯೇ ಅನೇಕರಿಗೂ ಹಾಗೆಯೇ. ಈ ಕಿರಿಯ ಹಿಂಟೋಕದ ಹಾಗೂ ಇತರ ಹಳ್ಳಿಗಳ ಜನರ ಪೂರ್ವಜರು ಹೀಗೆ ತಮ್ಮ ವರ್ಗದಾರಿಯ ಹಕ್ಕನ್ನು ಜೀವಾವಧಿಯ ಕಚ್ಚಾ ಹಕ್ಕಿಗೆ ಬದಲಿಸಿಕೊಂಡಿದ್ದಾದರೂ ಹೇಗೆ? ಇದೂ ಅಲ್ಲದೆ ತನ್ನ ತಂದೆ ಮುದಿ ಸೌಥನ ಜೀವವಿಮೆ ಇಳಿಸಲಿಲ್ಲವೇಕೆ? ಆ ಕುರಿತು ಅಲಕ್ಷ್ಯ ಮಾಡಿದ್ದೇಕೆ?

ಮುಂಜಾವಿನ ಫಲಾಹಾರ ಮುಗಿಸಿ ಅವನು ಅಟ್ಟವೇರಿ ತನ್ನ ಹಾಸುಗೆಯನ್ನು ಹೊರಳಿಸಿ ಕೆಳಗಿದ್ದ ಒಂದು ಸಪಾಟಾದ ಕ್ಯಾನವಾಸ ಬ್ಯಾಗನ್ನು ಹೊರತೆಗೆದನು. ಅದು ಹಾಸುಗೆ ಮತ್ತು ಅದರಡಿಯ ಗೋಣಪಾಟಿನ ನಡುವೆ ಇತ್ತು. ಈ ಬ್ಯಾಗಿನಲ್ಲಿ ಆತನು ಆಸ್ತಿ ಹಕ್ಕಿನ ದಸ್ತಾವೇಜುಗಳನ್ನು ಇಟ್ಟಿದ್ದನು. ಅವನ ತಂದೆಯ ಮರಣದಂದಿನಿಂದಲೂ ಅವು ತೆರೆಯದೆ ಅಲ್ಲಿ ಬಿದ್ದಿದ್ದವು. ಹಳ್ಳಿಯ ವರ್ಗದಾರ ಗೇಣಿದಾರರಿಗೆಲ್ಲ ತಮ್ಮ ಕರಾರು ಕಾಗದ ಪತ್ರಗಳನ್ನು ಬಚ್ಚಿಡಲಿಕ್ಕೆ ಅದೊಂದೆ ಭದ್ರ ಸ್ಥಾನ. ಹಾಸುಗೆಯಲ್ಲಿ ಕುಳಿತುಕೊಂಡು ವಿಂಟರಬೋರ್ನ ಆ ಕಾಗದಗಳನ್ನು ತಿರುವಿ ಹಾಕಿದನು. ಐವತ್ತು ವರ್ಷ ಹಿಂದೆ ಹಿಂಟೋಕ ದೊಡ್ಡ ಮನೆಯ ಒಡೆಯನು ಸೌಥ ಕುಟುಂಬದ ಅಂದಿನ ಒಬ್ಬ ಯಜಮಾನನಿಗೆ ಮೂರು ತಲೆಮಾರುಗಳ ಅವಧಿಗೆ ಬರೆದು ಕೊಟ್ಟ ಭೋಗವಟೆಯ ಕರಾರು ಪತ್ರವದು. ಅಂದು ಈ ಹಳೆಯ ಮನೆಗಳನ್ನು ಒಡೆಯ ತಿರುಗಿ ಕಟ್ಟಿಸಿಕೊಟ್ಟುದರ ಬದಲಾಗಿ ಈ ಯಜಮಾನ ತನ್ನ ವರ್ಗದಾರಿಕೆಯ ಸ್ವಾಮ್ಯ ಹಕ್ಕುಗಳನ್ನೆಲ್ಲ ಆ ಸಿರಿವಂತನಿಗೆ ಒಪ್ಪಿಸಿ ಪ್ರತಿಯಾಗಿ ಈ ವಾಸ್ತವ್ಯದ ಹಕ್ಕನ್ನು ಮಾತ್ರ ಪಡೆದಿದ್ದನು. ಜೈಲ್ಸನ ತಾಯಿ ಇದೇ ಸೌಥ ಕುಟುಂಬದವಳು. ಅವಳ ಮೂಲಕ ಈ ಕಾಗದ ಪತ್ರ ಇವನ ತಂದೆಯ ವಶಕ್ಕೆ ಬಂದಿದ್ದವು.

ಆ ಹಾಳೆಗಳಲ್ಲಿ ಒಂದಕ್ಕೆ ಗುಂಡುಸೂಜಿಯಿಂದ ಚುಚ್ಚಿದ್ದ ಒಂದು ಪತ್ರವನ್ನು ವಿಂಟರಬೋರ್ನ ನೋಡಿದನು. ಈ ಮೊದಲು ಆತ ಈ ಪತ್ರ ಕಂಡಿದ್ದಿಲ್ಲ. ಅದರ ತಾರೀಖು ತೀರಾ ಹಳೆಯದಿತ್ತು. ಕೈಬರಹ ಯಾವದೋ ಸಾಲಿಸಿಟರನದೋ ಜಮೀನುದಾರನ ಮುಕ್ತಾರನದೋ ಇತ್ತು. ಅದರ ಸಹಿ ಅಂದಿನ ಜಮೀನುದಾರನದು.

ಆ ಪತ್ರದ ಮೇರೆಗೆ ಕರಾರುನಾಮೆಯಂತೆ ಕೊನೆಯುವರ ಜೀವಾವಧಿ ಮುಗಿಯುವ ಮುಂಚೆ ಜಾನ ವಿಂಟರಬೋರ್ನನಾಗಲಿ ಅವನ ಪ್ರತಿನಿಧಿಯಾಗಲಿ ತನ್ನ ಅಥವಾ ತನ್ನ ಮಗನ ಜೀವಾವಧಿಯನ್ನು ಇದೇ ಕರಾರು ಪತ್ರಕ್ಕೆ ಸೇರಿಸಬಹುದೆಂದಿತ್ತು. ಆದರೆ ಅದಕ್ಕಾಗಿ ಕೆಲವೊಂದು ನಾಮಮಾತ್ರ ಶುಲ್ಕ ತೆರಬೇಕಾಗಿತ್ತು. ಈ ಸವಲತ್ತಿಗೆ ಕಾರಣ ಹಿರಿಯ ವಿಂಟರಬೋರ್ನ, ಹಾದಿಯ ಮುಃರುವಿನಲ್ಲಿ ನಿಂತು ಸಾರಿಗೆಗೆ ಅಡ್ಡಿ ಮಾಡುವ ಒಂದು ಮನೆಯನ್ನು ಕೆಡುಹಿ ನೆಲಸಮ ಮಾಡಲು ಒಪ್ಪಿ ಆ ಮನೆಯ ಹಕ್ಕನ್ನು ಬಿಟ್ಟು ಕೊಟ್ಟಿದ್ದನು.

ಆ ಮನೆ ಕೆಡುಹಿ ಬಹಳ ವರ್ಷಗಳಾಗಿದ್ದವು. ಜೈಲ್ಸನ ತಂದೆ ಏಕೆ ಈ ಸವಲತ್ತಿನ ವಿಶೇಷ ಅಧಿಕಾರದ ಲಾಭ ಪಡೆದು ತನ್ನ ಅಥವಾ ತನ್ನ ಮಗನ ಜೀವಾವಧಿಯನ್ನು ಕರಾರಿಗೇ ಸೇರಿಸಲಿಲ್ಲ? ಹಾಗೆ ಮಾಡದಿದ್ದದು ಅಶಕ್ಯವೆನಿಸಿತು. ಬಹುಶಃ ಸಾವು ಒಂದೇ ಹಾಗೆ ಮಾಡಲು ಅಡ್ಡ ಬಂದಿರಬೇಕು. ಇಲ್ಲವಾದರೆ ಹಿರಿಯ ವಿಂಟರಬೋರ್ನ ಇಂಥ ಮನೆ ಆಸ್ತಿಗಳ ವ್ಯವಹರಣೆಯಲ್ಲಿ ತುಂಬ ರುಚಿಯುಳ್ಳವನಾಗಿದ್ದನು.

ಆದರೆ ಈಗ ಸೌಥ ಕುಟುಂಬದ ಒಬ್ಬ ಇನ್ನೂ ಬದುಕಿದ್ದನು. ಆದ್ದರಿಂದ ತನ್ನ ತಂದೆ ಮಾಡಲು ತಪ್ಪಿದ್ದನ್ನು ಜೈಲ್ಸ ತಾನೆ ಮಾಡಬಹುದಿತ್ತು—ತನ್ನ ಜೀವಾವಧಿಯನ್ನಾದರೂ ಆಸ್ತಿಯ ಭೋಗವಟೆಗೆ ಒಳಪಡಿಸಬಹುದಿತ್ತು. ಈ ಶಕ್ಯತೆ ಅವನನ್ನು ಹಿಗ್ಗಿಸಿತ್ತು. ಏಕೆಂದರೆ ಈ ಮನೆಗಳ ಸೊತ್ತಿಗೆ ಅವನ ಅನೇಕ ಆಸೆಗಳು ಜೋತು ಬಿದ್ದಿದ್ದವು. ಗ್ರೇಸಳ ಗಂಡನಾಗಲು ಈ ತರುಣನ ಅರ್ಹತೆಯ ಬಗೆಗೆ ಮೆಲಬರಿಯ ಸಂದೇಹವು ಅವಲಂಬಿಸಿದ್ದು, ಹಿರಿಯ ಹಿಂಟೋಕು ಗಲ್ಲಿಯ ಅವನ ಆಸ್ತಿಗಳ ಮೇಲಿನ ಹಕ್ಕಿನ ಸಂದಿಗ್ಧತೆಯನ್ನೇ. ಆದ್ದರಿಂದ ಕೂಡಲೇ ಈ ವಿಷಯ ಸರಿಪಡಿಸಿಕೊಳ್ಳಲು ಆತ ನಿರ್ಧರಿಸಿದನು. ಕರಾರುನಾಮೆ ಊರ್ಜಿತ ಮಾಡಿಕೊಳ್ಳುವ ಅವಧಿ ತಪ್ಪಿದಕ್ಕೆ ದಂಡ ಆತ ಸುಲಭವಾಗಿ ಕೂಡಿಸಬಹುದಿತ್ತು.

ಆದರೆ ಅವನ ಈ ಯೋಜನೆ ದಿನ ಒಪ್ಪತ್ತಿನಲ್ಲಿ ಆಗುವ ಕೆಲಸವಲ್ಲ. ಈ ನಡುವೆ ಸೌಥನ ಮನೆಗೆ ಓಡಿ ನಿನ್ನೆಯ ಮರ ಸವರಿದ ಪ್ರಯೋಗದ ಪರಿಣಾಮ ಅರಿತುಕೊಳ್ಳ ಬಹುದಲ್ಲ?

ಮಾರ್ಟಿ ಅವನಿಗೆ ಬಾಗಿಲಲ್ಲಿಯೇ ಭೆಟ್ಟಿ ಆದಳು. 'ಒಳ್ಳೇದು, ಮಾರ್ಟಿ!' ಅವನು ಅಂದನು; ಮತ್ತು ಅವಳ ಮುಖದ ಭಾವವನ್ನು ಅರಿತು ದಿಗಿಲುಗೊಂಡನು. ಆತ ತಿಳಿದಷ್ಟು ಆಶಾದಾಯಕವಾಗಿದ್ದಿಲ್ಲ, ಒಳಗಿನ ಪರಿಸ್ಥಿತಿ ಎಂದು ಆತ ಊಹಿಸಿದನು.

'ನಿನ್ನ ಶ್ರಮಕ್ಕಾಗಿ ನನಗೆ ದುಃಖವಾಗುತ್ತದೆ.' ಆಕೆ ಅಂದಳು, 'ಅದೆಲ್ಲ ನಷ್ಟವಾದಂತೆ. ಆ ಮರ ಎಂದಿಗಿಂತ ಉದ್ದ ಕಾಣುತ್ತದೆ ಅನ್ನುತ್ತಾನೆ ಅಪ್ಪ.'

ವಿಂಟರಬೋರ್ನ ತಿರುಗಿ ಅದರತ್ತ ನೋಡಿದನು. ಮರ ಹಿಂದಿಗಿಂತ ಎತ್ತರ ಕಾಣುವುದು ನಿಜವೇ ಸರಿ. ಈಗ ಅದರ ಬತ್ತಲೆ ಬೊಡ್ಡೆ ಎದ್ದು ನಿಂತು ಕಾಣುತ್ತಿತ್ತು.

'ಇಂದು ಮುಂಜಾನೆ, ಹೊತ್ತು ಮೊದಲು ನಿನ್ನ ಕೆಲಸ ನೋಡಿದಾಗ ಅವನು

ಪೂರ್ತಿ ಗಾಬರಿಗೆಟ್ಟನು.' ಅವಳು ಅಂದಳು, 'ಅವನು ಸಾರಿ ಹೇಳುತ್ತಿದ್ದಾನೆ. ಆ ಮರ ಈಗ ನಮ್ಮ ಮೇಲೆ ಕಿತ್ತು ಬಿದ್ದು ನಮ್ಮನ್ನು ಸೀಳಿಬಿಡುವುದಂತೆ — ದೇವರ ವಜ್ರಾಯುಧವೇ ಕುಸಿಯುವಂತೆ.

'ಸರಿ. ಆದರೆ ನಾನು ಇನ್ನೇನು ಮಾಡಬಲ್ಲೆ?' ಆತ ಕೇಳಿದನು.

'ಡಾಕ್ಟರರು ಹೇಳುತ್ತಾರೆ — ಆ ಮರವನ್ನೆ ಕಡಿದು ಹಾಕಬೇಕಂತೆ.'

'ಓ, ಹೀಗೋ ನಿಮ್ಮಲ್ಲಿ ಡಾಕ್ಟರರು ಬಂದು ಹೋದರೇ?'

'ನಾನು ಕರೆಕಳುಹಿಸಿದ್ದಿಲ್ಲ. ಶ್ರೀಮತಿ ಚಾರ್ಮಂದ ಊರುಬಿಟ್ಟು ಹೋಗುವ ಮುಂಚೆ, ಅಪ್ಪ ಕಾಯಿಲೆಯೆಂದು ಕೇಳಿ ಡಾಕ್ಟರರಿಗೆ ಹೇಳಿ ಹೋಗಿದ್ದರಂತೆ — ತನ್ನ ಖರ್ಚಿನಿಂದಲೇ ಅಪ್ಪನ ಉಪಚಾರ ನೋಡಿಕೊಳ್ಳಬೇಕೆಂದು.'

'ಅವಳು ಮಾಡಿದ್ದು ಒಳ್ಳೆಯದೇ ಆಯಿತು. ಆ ಡಾಕ್ಟರ್ ಹೇಳಿದ್ದಾರೆ, ಆ ಮರ ಕಡಿದು ಹಾಕಬೇಕೆಂದು. ಆದರೆ ಅವಳಿಗೆ ಗೊತ್ತಿಲ್ಲದೆ ನಾವು ಹಾಗೆ ಮರ ಕಡಿಯು ತಕ್ಕದ್ದಲ್ಲ — ಇದು ನನಗೆ ಅನಿಸೋದು.'

ಅವನು ಅಟ್ಟವೇರಿ ಹೋದನು. ಅಲ್ಲಿ ಮುದುಕ ಕೂತಿದ್ದ — ಆ ಬೋಳು ಬರಲು ಮರವನ್ನೆ ದಿಟ್ಟಿಸುತ್ತ. ಅದೇ ಸಮಯ, ದುರ್ದೈವಕ್ಕೆ ಗಾಳಿ ಎದ್ದು ಮಂಜು ಹಾರಿಸಿಕೊಂಡು ಹೋಗುತ್ತ ಆ ಮರವನ್ನು ತೂಗಾಡಿಸಿತು. ಮರದ ಅಲ್ಲಾಟ ದೊಂದಿಗೆ ಮುದುಕನ ಕಣ್ಣು ಹೊರಳಿತು.

ಅವರು ಹೆಜ್ಜೆಯ ಸದ್ದು ಕೇಳಿದರು — ಒಬ್ಬ ಗಂಡಸಿನದು. ಆದರೆ ವಾಡಿಕೆಗಿಂತ ಹಗುರ. 'ಅದೋ ಡಾ. ಫಿಟ್ಸ್‌ಪಿಯರ್ಸ್ ಮತ್ತೆ ಬಂದರು.' ಅವಳು ಅಂದಳು ಮತ್ತೆ ಕೆಳಗೆ ಇಳಿದು ಹೋದಳು. ಮರುಕ್ಷಣಕ್ಕೆ ಡಾಕ್ಟರರ ಹೆಜ್ಜೆ ಮಾಳಿಗೆಯ ಬರಿದಾದ ಪಾವಟಿಗೆಗಳ ಮೇಲೆ ಕೇಳಿ ಬಂದಿತು.

ಫಿಟ್ಸ್‌ಪಿಯರ್ಸ್ ರೋಗಿಯ ಕೋಣೆಯನ್ನು ಹೊಕ್ಕಿ ಒಳಬಂದರು — ಸಾಮಾನ್ಯ ಅಂಥ ಪ್ರಸಂಗದಲ್ಲಿ ಡಾಕ್ಟರನು ಮಾಡುವ ರೀತಿಯಲ್ಲಿ — ಅದೂ ಅಂಥ ಕೋಣೆ ಮುಖ್ಯವಾಗಿ ಒಬ್ಬ ಬಡಗುಡಿಸಲಿನವನದಿರುವಾಗ. ಮನಸ್ಸು ಇನ್ನೆಲ್ಲೋ ನೆಟ್ಟ ಕಣ್ಣುಗಳಿಂದ ಅವನು ಒಮ್ಮೆ ಸುತ್ತು ನೋಡಿದನು. ಆ ನೋಟದಲ್ಲಿಯ ಭಾವ ಸ್ಪಷ್ಟವಿತ್ತು. ಕಳೆದ ಸಲ ಆ ಕೋಣೆಯಿಂದ ಹೊರಬಿದ್ದೊಡನೆ ಅವನು ಆ 'ಕೇಸು' ಮತ್ತು ಅದರ ಪರಿಸ್ಥಿತಿಯನ್ನೆಲ್ಲ ಪೂರ್ತಿ ಮನಸ್ಸಿನಿಂದ ತಳ್ಳಿಹಾಕಿ ಅದನ್ನೆಲ್ಲ ಮರೆತಿದ್ದನು.

ಅವನು ವಿಂಟರಬೋರ್ನನತ್ತ ಗುರುತು ಹಿಡಿದು ತುಸು ತಲೆದೂಗಿದನು. ಅಂದು ಗ್ರೇಸಳ ಕಡೆಗೆ ಬೇಲಿಯ ಆಚೆಯಿಂದ ಇಣಿಕಿನೋಡಿದಂದಿನಿಂದ ಅವನನ್ನು ಫಿಟ್ಸ್‌ಪಿಯರ್ಸ್ ನೋಡಿದ್ದಿಲ್ಲ. ನಿಧಾನವಾಗಿ ರೋಗಿಯ ವಿದ್ಯಮಾನಗಳನ್ನು ನೆನಪಿಗೆ ತಂದುಕೊಳ್ಳುತ್ತ ಆತ ಸೌಥನು ಕೂತಲ್ಲಿಗೆ ಮುಂದರಿದನು.

ಎಡ್ರೆಡ್ ಫಿಟ್ಸ್‌ಪಿಯರ್ಸ್ ಒಟ್ಟಾರೆ ಮಾಟವಾಗಿ ರೂಪಗೊಂಡ ಮೈಕಟ್ಟಿನ

ಸುಂದರ ಪುರುಷನಾಗಿದ್ದನು. ಅವನ ಕಣ್ಣುಗಳು ಕಪ್ಪಗಿದ್ದವು. ಪ್ರಭಾವಿಯಾಗಿದ್ದವು. ಅವು ಕಾಂತಿಯನ್ನು ಸೂಸುತ್ತಿದ್ದವು. ಆ ಕಾಂತಿ ಚೈತನ್ಯದ್ದೋ ಸೂಕ್ಷ್ಮ ಅರಿವಿನದೋ ನಿರ್ಣಯಿಸುವುದು ಬಿಗಿಯಾಗಿತ್ತು. ಅದು ಅರಿವಿನ ಸಂವೇದನೆಯದೇ ಆಗಿರಬಹುದು. ಆ ನೋಟ ಅದರ ಹೊಳಪು ಆಳದ ಕಾಣ್ಕೆಯೋ ಅಥವಾ ಅವನ ಮೈಕಟ್ಟಿನ ಮಾಟದೊಂದಿಗೇ ರೂಪುಗೊಂಡ ಒಂದು ಕಲಾತ್ಮಕ ಯೋಗಾಯೋಗವೋ ಅವನ ಆಚರಣೆಯಲ್ಲಿಯೇ ಗೊತ್ತಾಗಬೇಕಿತ್ತು.

ಅವನ ಮೋರೆ ಕಠೋರಕ್ಕಿಂತ ಮೃದುವೇ ಆಗಿತ್ತು. ಭವ್ಯವೆನಿಸುವುದಕ್ಕಿಂತ ಮೋಹಕವೇ ಅನ್ನಬಹುದು ; ಕೆಂಪೇರಿದ್ದಲ್ಲ, ತುಸು ಬಿಳಿ ಛಾಯೆಯುಳ್ಳದ್ದೇ. ಅವನ ಮೂಗು — ಅಂಥ ಆವಿರ್ಭಾವದ ವ್ಯಕ್ತಿಯ ಚರ್ಯೆ — ಚಿತ್ರಣಕ್ಕೆ ಅದರ ವರ್ಣನೆಯ ಅಗತ್ಯವಿದ್ದರೆ — ಬಹಳ ಕೆಲಸವಿಲ್ಲದ ಶಿಲ್ಪಿಯೊಬ್ಬ ನೋಡಿ ರೂಪಿಸಬೇಕೆಂಬಂತೆ ಅನಿಸುವಷ್ಟು ಕಲಾತ್ಮಕವಾಗಿ ಸುಂದರವಿತ್ತು. ಆದರೆ ಆ ಮೂಲಕವೆ ಅದರಲ್ಲಿ ಸಾಮರ್ಥ್ಯ ಸೂಚಕ ಗಂಟು ಗೆರೆಗಳೇನೂ ಇದ್ದಿಲ್ಲ. ಅವನ ಬಾಯಿಯ ಪುಟ್ಟ ಕಮಾನು ಮಹಾಕವಿಯ ಬಣ್ಣನೆಗೆ ಒಪ್ಪುವಂತಿದ್ದರೂ ಅದರಲ್ಲಿ ಬಿಗುವು ಇದ್ದಿಲ್ಲ. ಸಡಿಲು ಬಿದ್ದಂತೆ ಅದು ಮುಗಿದಿತ್ತು. ಅವನ ರಸಿಕ ಗುಣಗ್ರಾಹಕ ಅಥವಾ ಚಿಂತನಶೀಲ ರೀತಿಯಿಂದಲೋ ಅವನು ಒಬ್ಬ ಷೋಕಿ ಅಥವಾ ವಿಲಾಸಿ ವಿಟನಿಗಿಂತ ಜ್ಞಾನಿಯಂತೆ ಒಪ್ಪುತ್ತಿದ್ದನು. ಪರಿಣಾಮಕ್ಕೆ ಕಾರಣ, ಅವನ ಉಡಿಗೆ ತೊಡಿಗೆಯಲ್ಲಿ ಯಾವುದೇ ಚಿಕ್ಕಪುಟ್ಟ ಅಲಂಕರಣಗಳಿದ್ದಿಲ್ಲ. ಆದರೂ ಉಡಿಗೆ ತೊಡಿಗೆ ಹಳ್ಳಿಯ ಮದ್ದುಗಾರರ ವಾಡಿಕೆಯ ವೇಷಕ್ಕೆ ಹೊರತಾದ ಹೊಚ್ಚ ಹೊಸ ವೈಖರಿಯದೂ ಅಚ್ಚುಕಟ್ಟಿನದೂ ಆಗಿತ್ತು.

ಅತಿ ಗೌರವಸ್ಥ ಕುಟುಂಬಗಳ ಕಟ್ಟುನಿಟ್ಟಿನ ಜನ ಅವನ ಬಗೆಗೆ ವರದಿಗಳನ್ನು ಕೇಳಿ ತಿಳಿದವರು, ಅನ್ನುವುದುಂಟು—ಅವನಲ್ಲಿ ದೋಷ ಅತಿ ವಿಚಾರಗಳದೇ ಹೊರತು ವಿಚಾರಗೇಡಿತನದ್ದಲ್ಲ. ಯಾವುದೋ ಕನಸು ಕಾಣುವ 'ವಾದಿ' ಯಾವುದೋ 'ವಾದ'ದಲ್ಲಿ ಆಳವಾಗಿ ಮುಳುಗಿ ಎದ್ದವನು. ಏನೇ ಆದರೂ ಕಿರಿಯ ಹಿಂಟೋಕ್ ಹಳ್ಳಿಯಲ್ಲಿ ಮುಗಿಲಿನಿಂದಲೇ ಇಳಿದು ಬಂದಂತೆ ಕಾಣುವ ಅವನೊಬ್ಬ ಅಸಾಮಾನ್ಯ ಗೃಹಸ್ಥನೂ ಡಾಕ್ಟರನೂ ಆಗಿದ್ದನು.

ಮುದಿ ಸೌಥನನ್ನು ಮಾತಾಡಿಸಿ ಮೈಮುಟ್ಟಿ ನೋಡಿ ಪರೀಕ್ಷಿಸಿ ಆತನು ವಿಂಟರಬೋರ್ನನಿಗೆ ಅಂದನು 'ಇದೊಂದು ವಿಲಕ್ಷಣ ಕೇಸು, ನೋಡಿ' ಸೌಥನ ಆ ಮರದ ಹುಚ್ಚು ಎಂದಿಗಿಂತ ಬಲವಾಗಿತ್ತು ; 'ಕೆಳಗೆ ಹೋಗೋಣ ಬನ್ನಿ. ಅಲ್ಲಿಯೆ ಹೇಳುತ್ತೇನೆ, ನನಗೆ ಏನು ತೋರುವುದೋ ಅದನ್ನು.

ಆ ಮೇರೆಗೆ ಅವರು ಮಾಳಿಗೆ ಇಳಿದು ಬಂದರು. ಡಾಕ್ಟರ್ ಮುಂದರಿದನು, 'ಆ ಮರವನ್ನು ಕಡಿಯಿಸಲಿಕ್ಕೇಬೇಕು ; ಇಲ್ಲವಾದರೆ ನಾನು ಅವನ ಜೀವದ ಭರವಸೆ ಕೊಡಲಾರೆ.'

'ಅದು ಶ್ರೀಮತಿ ಚಾರ್ಮುಂದರ ಮರ. ಅಂದಾಗ ನಾವು ಅವರ ಪರವಾನಗಿ ಪಡೆಯಬೇಕಾಗಿಲ್ಲವೆ?' ಜೈಲ್ಸ ಅಂದನು.

'ಓ ಆ ಯೋಜನೆ ಬಿಡಿ. ಯಾರ ಮರವಾದರೇನು? ಜೀವದ ಮುಂದೆ ಮರವೇನು ದೊಡ್ಡದು? ಅದನ್ನು ಕಡಿಯಿಸಿಬಿಡಿ. ಶ್ರೀಮತಿ ಚಾರ್ಮುಂದ ಪರಿಚಯದ ಭಾಗ್ಯ ಇನ್ನೂ ನನಗೆ ಕೂಡಿ ಬರಲಿಲ್ಲ. ಆದಾಗ್ಯೂ ಇಷ್ಟರ ಮಟ್ಟಿಗೆ ನಾನು ಅವರೊಂದಿಗೆ ಈ ನಷ್ಟದ ಹೊರೆ ಹೊರಬಲ್ಲೆ.'

'ಅದರ ಕಟ್ಟಿಗೆ,' ಜೈಲ್ಸ ಮತ್ತೆ ಅಂದನು. 'ಇಲ್ಲಿ ಈ ಸುತ್ತಿನಲ್ಲಿ ಒಂದು ಕೋಲು ಕಡಿಯುವುದಾದರೂ ಅದನ್ನು ಅವಳಾಗಲಿ ಅವಳ ಹಸ್ತಕರಾಗಲಿ ಬಂದು ಗುರುತು ಹಾಕದೆ ಕಡಿಯುವ ಮಾತೇ ಇಲ್ಲ.'

'ಹಾಗಾದರೆ ನಾವು ಈಗ ಹೊಸದೊಂದು ಯುಗವನ್ನೆ ಆರಂಭಿಸೋಣ. ಈ ಮರದ ಬಗ್ಗೆ ಆತ ಎಷ್ಟು ಕಾಲದಿಂದ ಹೀಗೆ ದೂರುತ್ತಿದ್ದಾನೆ?' ಡಾಕ್ಟರನು ಮಾರ್ಟಿಗೆ ಕೇಳಿದನು.

'ವಾರಗಟ್ಟಲೆ ಆಯಿತು. ಸ್ವಾಮಿ, ವಾರಗಟ್ಟಲೆ. ಅದರ ಆಕಾರ ಅವನಿಗೆ ಪಿಶಾಚಿಯಂತೆ ಪೀಡಿಸುತ್ತಿದೆ. ಅದಕ್ಕೆ ಅವನಷ್ಟೇ ಪ್ರಾಯವಂತೆ. ಆತ ಹೇಳುತ್ತಿರುತ್ತಾನೆ. ಅದಕ್ಕೆ ಮನುಷ್ಯನಂತೆ ತಿಳುವಳಿಕೆ ಇದೆಯಂತೆ. ಅವನು ಹುಟ್ಟುವಾಗಲೆ ಅದು ಹುಟ್ಟಿಬಂತಂತೆ ಅವನನ್ನು ಆಳಲಿಕ್ಕೆ ಅವನನ್ನು ತನ್ನ ಆಳಿನಂತೆ ಮಾಡಿಡಲಿಕ್ಕೆ! ಇವನೊಬ್ಬನೆ ಅಲ್ಲ. ಹಿಂದೆ ಹಿಂಟೋಕದಲ್ಲಿ ಇದೇ ಹೀಗೆಯೇ ಬೇರೆ ಮಂದಿ ಆಗಿ ಹೋದವರಿದ್ದಾರೆ.'

ಅವರಿಗೆ ಸೌಥನ ದನಿ ಮಾಳಿಗೆಯಿಂದ ಕೇಳಿ ಬಂದಿತು. 'ಓ, ಅವನು ತೂಗಾಡುತ್ತಾನೆ. ಇತ್ತ ಕಡೆಗೇ ಜೋಲಿ ಹೊಡೆಯುತ್ತಾನೆ. ಅವನು ಬರಲೇಬೇಕು. ಈಗ ನನ್ನ ಜೀವ, ಈ ಜೀವದ ಮೇಲೆ ಎಷ್ಟೆಷ್ಟೋ ಮನೆಗಳ ಭೋಗವಟೆ ಇದೆ — ನನ್ನಿಂದ ಹೊರಟು ಹೋಗುವುದು ಓ! ಓ! ಓ!'

'ಹೀಗೆಯೇ ಹಗಲಿಡಿ ಹಲುಬುತ್ತಲೇ ಇರುತ್ತಾನೆ. ದಿನವೆಲ್ಲ ಇದೇ ಹಾಡು. ಆ ಕಿಟಕಿ ಅಲ್ಲದೆ ಇನ್ನೆಲ್ಲೂ ಆತ ನೋಡುವುದೇ ಇಲ್ಲ. ಅದರ ಪರದೆ ಎಳೆದು ಬಿಡಲಿಕ್ಕೂ ಕೊಡುವುದಿಲ್ಲ.'

'ಹಾಗಾದರೆ ಕಡಿದು ಚೆಲ್ಲಿ ಆ ಮರವನ್ನು. ಚಾರ್ಮುಂದ ಬಾಯಿ ಹಾಳಾಗಲಿ' ಫಿಟ್ಝಪಿಯರ್ಸ ಅಂದನು, 'ಉತ್ತಮ ಹಂಚಿಕೆ ಎಂದರೆ, ಸಂಜೆ ತನಕ ಕಾಯುವುದು. ಕತ್ತಲೆ ಆದೊಡನೆ, ಇಲ್ಲವೇ ತೀರ ನಸುಕಿನಲ್ಲಿ, ಆತ ಎಚ್ಚರಾಗುವ ಮುಂಚೆಯೇ ಅದನ್ನು ಕಡಿದು ಮುಗಿಸಿಬಿಡಿ. ಅಂದರೆ ನೋಡಿದರೆ ಮತ್ತಷ್ಟು ಕಂಗೆಟ್ಟು ಅವನ ಪ್ರಕೃತಿಯು ಎಂದಿಗಿಂತ ಕೆಟ್ಟು ಹೋಗಲಿಕ್ಕಿಲ್ಲ. ಆ ಕದ ಹಾಕಿಟ್ಟು ಬಿಡಿ. ಆ ಮೇಲೆ ನಾನೇ ಅವನಿಗೆ ಖಾತ್ರಿಮಾಡಿಸುತ್ತೇನೆ, ಅವನ ಕಷ್ಟವೆಲ್ಲ ಮುಗಿಯಿತೆಂದು ತೋರಿಸಿ.'

ಹೀಗೆಂದು ಡಾಕ್ಟರ ಹೊರಟು ಹೋದನು. ಅವರು ಸಂಜೆ ಆದ ಮೇಲೆ ಕಿಟಕಿಯ

ಪರದೆಗಳನ್ನೆಲ್ಲ ಎಳೆದುಕೊಂಡ ಮೇಲೆ, ವಿಂಟರಬೋರ್ನ ಅಡ್ಡಕರಗಸದೊಂದಿಗೆ ಇಬ್ಬರು ಮರಕಡಿಯುವವರನ್ನು ಕರೆದುಕೊಂಡುಬಂದನು. ಮತ್ತು ಆ ಗಾಬರಿಗೆಡಿಸುವ ಎತ್ತರದ ಮರವನ್ನು ಬೇಗ ಬುಡದಿಂದ ಬಹುತೇಕ ಬೇರೆ ಮಾಡಲಾಯಿತು. ಮರುದಿನ ಗುಡಿಸಲಿನಿಂದ ದೂರದ ದಿಕ್ಕಿನಲ್ಲಿ ಅದನ್ನು ಜಾಗ್ರತೆಯಾಗಿ ಕೆಳಗೆ ತಂದರು. ಈ ಕೆಲಸ ಸದ್ದಿಲ್ಲದೆ ಮಾಡುವುದು ತುಂಬ ಬಿಗಿಯಾಗಿತ್ತು. ಆದರೆ ಕೊನೆಗೂ ಅದನ್ನು ಮಾಡಿ ಮುಗಿಸಿದರು. ಮುದಿ ಸೌಥನು ಹುಟ್ಟಿದ ವರ್ಷವೇ ಹುಟ್ಟಿದ ಎಲ್ಮ ಮರವು ನೆಲದಲ್ಲಿ ಅಡ್ಡ ಒರಗಿತು. ಹಿಂದೆ ಸಾಹಸಿಗರು ಮರವೇರಲು ಅವರ ಕಾಂಡದಲ್ಲಿ ಮೂಡಿದ ಬೂಟಿನ ಕಚ್ಚುಗಳಲ್ಲಿ ಈಗ ಯಾವ ದುರ್ಬಲ ಹಾದಿಹೋಕ ಮೈಗಳ್ಳನೂ ಹೆಜ್ಜೆ ಇಟ್ಟು ಅದರ ಮೇಲೆ ನಡೆಯಬಹುದು. ಹಿಂದೆ ಕಣ್ಣಿಗೆ ಎಟಕದ ಹಕ್ಕಿ ಗೂಡುಗಳನ್ನು ಈಗ ಸೂಕ್ಷ್ಮ ದರ್ಶಕದಂತೆ ಸೂಕ್ಷ್ಮವಾಗಿ ಪರಾಂಬರಿಸಬಹುದು. ಮತ್ತು ಹಕ್ಕಿಗಳೇ ಹಾರಿ ಬಂದು ಕಾಲೂರುವಂಥ ಅದರ ತುದಿಯ ಟೊಂಗೆಗಳ ಮೇಲೆ ಈಗ ಆಚೆ-ಈಚೆ ನಿಂತವರೂ ಕುಳಿತು ಕೊಳ್ಳುತ್ತಿದ್ದರು.

ದೊಡ್ಡ ಹಗಲು ಆದೊಡನೆ ಡಾಕ್ಟರನು ಬಂದನು. ವಿಂಟರಬೋರ್ನ ಅವನೊಂದಿಗೆ ಮನೆಯನ್ನು ಹೊಕ್ಕನು. ತಂದೆಗೆ ಬಟ್ಟೆ ತೊಡಿಸಿ ಕಂಬಳಿ ಸುತ್ತಿ, ಕಿಟಕಿಯ ಇದಿರು ಕುರ್ಚಿಯಲ್ಲಿ ಕೂಡ್ರಿಸಲಿಕ್ಕೆ ಸಿದ್ಧಮಾಡಿದ್ದೇನೆಂದು ಮಾರ್ಟಿ ಹೇಳಿದಳು. ಅವರು ಮಾಳಿಗೆ ಏರಿ ಹೋಗಿ ಅವನನ್ನು ಕುರ್ಚಿಯಲ್ಲಿ ಕೂಡ್ರಿಸಿದರು. ಆತ ಕೂಡಲೆ ಮರದ ಕುರಿತು ಗೊಣಗುಡಲು ಸುರುಮಾಡಿದನು. ತನ್ನ ಜೀವಕ್ಕೆ ಅದರ ಜತೆಗೆ ವಿಂಟರಬೋರ್ನನ ಆಸ್ತಿಗೆ ಅಪಾಯವೆಂದು ಹಲುಬಿ ಹತ್ತಿದನು.

ಡಾಕ್ಟರ ಜೈಲ್ಸನಿಗೆ ಸನ್ನೆ ಮಾಡಿದನು. ಜೈಲ್ಸ ಹೋಗಿ ಇಬ್ಭಾಗವಾಗಿ ಸರಿಯುವ ಕಿಟಕಿ — ಪರದೆಗಳನ್ನು ಸರಿಸಿದನು. 'ನೋಡಿ, ಆ ಮರ ಹೋಯಿತು' ಎಂದನು ಫಿಟ್ಝಪಿಯರ್ಸ.

ಅಲ್ಲಿ ಯಾವಾಗಲೂ ಟೊಂಗೆಗಳೊಂದಿಗೆ ತೂಗಾಡುವ ಮರದ ಕಾಂಡವನ್ನೇ ಕಾಣುವ ರೂಢಿಯ ಸ್ಥಳದಲ್ಲಿ ಬರೆ ಆಕಾಶದ ಬಯಲ ತುಣು ಕಂಡೊಡನೆ, ಕಂಗೆಟ್ಟು ಆ ಮುದುಕನು ದಿಗ್ಗನೆ ಎದ್ದು ನಿಂತನು, ಅವಕ್ಕಾಗಿ. ಅವನ ಕಣ್ಣು ಅವುಗಳ ಗುಡ್ಡೆಗಳಿಂದಲೆ ಹೊರಬಂದಂತೆ ಅನಿಸಿತು. ಹೊರಹರಳಿಸಿ ನೋಡುವಾಗ ಆಲಿಗಳ ಬದಲು ಕಣ್ಣಿನ ಬಿಳಿಯ ಭಾಗಗಳೇ ಸುತ್ತಲು ಹೊಳೆದುವು. ನಿಂತಂತೆಯೇ ಆತ ಹಿಂದಕ್ಕೆ ಕುಸಿದನು ಮತ್ತು ಮೈಮೋರೆಯನ್ನೆಲ್ಲ ನೀಲಿ ಛಾಯೆ ಆವರಿಸಿತು.

ಅವರೆಲ್ಲ ತುಂಬ ಗಾಬರಿಯಾಗಿ ಅವನನ್ನು ಎತ್ತಿ ಹಾಸಿಗೆಯಲ್ಲಿ ಮಲಗಿಸಿದರು. ಆ ಮೂರ್ಛೆಯಿಂದ ತುಸು ಹೊರಬಂದೊಡನೆ ಆತ ಉಸಿರು ಕಟ್ಟಿ ಕೇಳಿದ, 'ಓ, ಅದು ಹೋಯಿತು. ಎಲ್ಲಿ? ಎಲ್ಲಿಗೆ?'

ಆಶ್ಚರ್ಯದಿಂದ ಅವನ ಇಡಿಯ ಶರೀರವೇ ಮರವಟ್ಟಿದಂತೆ ಅನಿಸಿತು. ಆ ಪ್ರಯೋಗದ ಈ ಫಲಿತಾಂಶದಿಂದ ಅವರು ಸಿಡಿಲು ಬಡಿದಂತೆ ಆದರು. ಶಕ್ಯವಿದ್ದುದೆಲ್ಲ

ಮಾಡಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಜೈಲ್ಸ, ಫಿಟ್ಝಪಿಯರ್ಸ ಮತ್ತೆ ಮತ್ತೆ ಬಂದು ಹೋದರು — ಆದರೆ ಅದೆಲ್ಲ ವ್ಯರ್ಥವಾಯಿತು. ಆ ದಿನವಿಡಿ ಆತನ ಜೀವ ತಡವರಿಸಿತು. ಆ ಸಂಜೆ ಸೂರ್ಯಾಸ್ತಮದೊಂದಿಗೆ ಅವನೂ ಮಡಿದನು.

'ಹಾಳಾಗಲಿ, ನನ್ನ ಉಪಾಯವೇ ಅವನನ್ನು ಕೊಂದಂತೆ ಆಯಿತಲ್ಲ!' ಡಾಕ್ಟರನು ಗೊಣಗಿದನು. ಆ ಮಾತು ಮುಗಿಸಿ ಆತ ಕೆಳಗೆ ಇಳಿದು ಬಂದನು. ಮನೆಯಿಂದ ಹೊರಬೀಳುವಾಗ ಅವನು ಒಮ್ಮೆಲೆ ತಿರುಗಿ ಜೈಲ್ಸನಿಗೆ ಅಂದನು,

'ಆ ದಿನ ಆ ಬೇಲಿಯಾಚೆಯಿಂದ ನಾವು ನೋಡಿದ ಆ ಪ್ರಾಯದ ಹೆಣ್ಣು ಯಾರು?' ಜೈಲ್ಸ ತಲೆ ಅಲ್ಲಾಡಿಸಿದ — ತನಗೆ ಏನೂ ನೆನಪಿಲ್ಲವೆಂಬಂತೆ.

೧೬

ನಡೆದ ಘಟನೆಯನ್ನು ಕೇಳಿದಾಗ ಮೆಲಬರಿಗೆ ಬಹಳ ಕೆಡುಕೆನಿಸಿತು. ಅವನ ಮನಸ್ಸು ತಳಮಳಗೊಂಡಿತು. ಅವನು ತನ್ನ ಮನೆಯಲ್ಲಿ ವಿಚಾರಮಗ್ನನಾಗಿ ಅತ್ತಿತ್ತ ಅಡ್ಡಾಡಿದನು. ಸೌಥನಿಗಾಗಿಯೇ ಮೊದಲು ಅವನಿಗೆ ವ್ಯಸನವಾಯಿತು. ಅನಂತರ ವಿಂಟರಬೋರ್ನನಿಗಾಗಿ ತನ್ನ ಮಗಳ ಮದುವೆಯ ಪ್ರಸ್ತಾಪದಿಂದ ಹಿಂದೆಗೆದುಕೊಳ್ಳಲು ಕರ್ಕಶವಾಗಿ ಕೇಳಿಕೊಂಡ ಬೆನ್ನಿಗೆ ಈ ವಿಪತ್ತು ಒದಗಿ ಬಂದಿದ್ದರಿಂದ ಅವನಿಗೆ ಇನ್ನಷ್ಟು ಕಳವಳ.

ಅವನಿಗೆ ಪರಿಸ್ಥಿತಿಯ ಮೇಲೆಯೆ ಸಿಟ್ಟು ಬಂದಿತು. ತಾನು ಜೈಲ್ಸನ ಮೇಲೆ ತಂದೊಡ್ಡಿದ ದುಃಖ ಅವಶ್ಯವಾಗಿತ್ತು. ಪರಿಸ್ಥಿತಿಯು ಪರಿಪಾಕವಾಗಿತ್ತು. ಆದರೆ ಅದರ ಬೆನ್ನಿಗೇ ಈ ಎರಡನೆಯ ದುಃಖ ಹೀಗೆ ಹಿಂದುಮುಂದಿನ ಪರಿವೆಯಿಲ್ಲದೆ ಒದಗಿ ಬರುವುದೆಂದರೇನು? 'ನಾನು ಜೈಲ್ಸನ ತಂದೆಗೆ ಹಿಂದೆಯೇ ಹೇಳಿದ್ದೆ— ಈ ಆಸ್ತಿಗಳು ಅವನ ವಶಕ್ಕೆ ಬಂದಾಗಲೇ. ಜೀವಾವಧಿಯ ಭೋಗವಟೆಯ ಈ ಮನೆಗಳ ಮೇಲೆ ಅಷ್ಟೊಂದು ಹಣ ಹಾಕಬೇಡವೆಂದು. ಆತ ಉದ್ಗರಿಸಿದ, ಆದರೆ ಅವನು ನನ್ನ ಮಾತು ಕೇಳಲಿಲ್ಲ. ಈಗ ಜೈಲ್ಸ ಭೋಗಿಸಬೇಕಾಗಿ ಬಂತು ಕಷ್ಟ.'

'ಪಾಪ, ಬಡ ಜೈಲ್ಸ', ಗ್ರೇಸಳು ಪಿಸುಗುಟ್ಟಿದಳು.

'ಗ್ರೇಸ, ಇಕೋ, ನಮ್ಮಿಬ್ಬರಲ್ಲಿಯೇ ಇರಲಿ. ಇದು ತೀರ ತೀರ ಸೋಜಿಗ. ಇದು ನಾನು ಮುಂಚೆಯೇ ಊಹಿಸಿಕೊಂಡಂತೆಯೇ ಆಗಬೇಕೆ? ನಿಜವಾಗಿಯೂ, ನೀನು ಪಾರಾದೆ. ಅದಕ್ಕೆ ನಾನು ದೇವರಿಗೆ ಆಭಾರಿ. ಆದರೂ ಜೈಲ್ಸನ ಬಗ್ಗೆ ದುಃಖವೆನಿಸುತ್ತದೆ. ಈ ಮೊದಲೇ ಅವನನ್ನು ನಾನು ತಳ್ಳಿದ್ದು ಲೇಸಾಯಿತು, ನೋಡು. ಇಲ್ಲವಾದರೆ ಈಗ ಅವನನ್ನು ತಳ್ಳುವದಕ್ಕೆ ನಮ್ಮ ಮನಸ್ಸೇ ಬರುತಿದ್ದಿಲ್ಲ.

ಆದ್ದರಿಂದ ಅಂದೆ, ದೇವರಿಗೆ ಆಭಾರಪಡು. ಅವನಿಗಾಗಿ ಗೆಳೆಯನೆಂದು ನನ್ನಿಂದ ಶಕ್ಯವಿದ್ದಷ್ಟು ನಾನು ಮಾಡುತ್ತೇನೆ, ಆದರೆ ನನ್ನ ಅಳಿಯನ ಪದವಿಗೆ ಹಕ್ಕು ಹೇಳುವ ಸೋಗುಮಾಡಿದರೆ—ಆ ಕುರಿತು ಇನ್ನೂ ಯಾವ ವಿಚಾರವೂ ಶಕ್ಯವಿಲ್ಲ.'

ಮತ್ತೆ ಇದೇ ಕ್ಷಣಕ್ಕೆ ಜೈಲ್ಸನ ಪ್ರೇಮಯಾಚನೆಯು ಕುಗ್ಗಿ ಇಳಿದು ಮುಟ್ಟಿದ ಅವ್ಯವಹಾರ್ಯತೆಯೇ ಗ್ರೇಸಳ ಹೃದಯದಲ್ಲಿ ಅವನ ಬಗೆಗೆ ಹೆಚ್ಚಿನ ಕಾವಿನ ಭಾವವನ್ನು ಪ್ರೇರಿಸುವಂತಿತ್ತು. ಈ ಭಾವನೆ ಅವಳಲ್ಲಿ ಈ ಹಿಂದೆ ವರ್ಷಗಟ್ಟಲೆ ಕಾಲ ಮೂಡಿದ್ದಿಲ್ಲ.

ಇದೇ ಸಮಯ ಅವನು ತನ್ನ ಪ್ರಿಯ ಪರಿಚಿತ ಮನೆಯಲ್ಲಿ ಒಬ್ಬನೇ ಕೂತಿದ್ದನು. ಆ ಮನೆ ಇನ್ನು ಅವನದಾಗಿ ಉಳಿದಿದ್ದಿಲ್ಲ. ಕೂತಲ್ಲಿ ಆತ ಎಲ್ಲ ವಿದ್ಯಮಾನಗಳ ಶಾಂತವಾದರೂ ಕಟುವಾದ ಪರಾಮರ್ಶೆ ಮಾಡುತಿದ್ದನು. ಗೋಡೆಯ ಮೇಲಿನ ಗಡಿಯಾರದ ಲಂಬಕವು ತನ್ನ ತೂಗಾಟದಲ್ಲಿ ಮತ್ತೆ ಮತ್ತೆ ಆದರ ಪೆಟ್ಟಿಗೆಯ ಒಂದು ಮಗ್ಗಲಿಗೆ ಬಂದು ಜಪ್ಪಿ ಅವನ ಐಹಿಕ ಯಾತ್ರೆಗೆ ಮುಸುಕು ಸದ್ದಿನ ಹರೆಯನ್ನು ಬಡಿಯುವಂತೆ ತೋರುತಿತ್ತು. ಕಿಟಕಿಯಿಂದ ಹೊರಗೆ ನೋಡಿದಾಗ, ಹಿತ್ತಲಿಗೆ ಗೊಬ್ಬರ ಹಾಕುವ ಕ್ರೀಡಲ್‌ನ ಕೆಲಸಕ್ಕೆ ವಾತ ಬಡಿದದ್ದನ್ನು ಅವನು ಕಂಡನು. ಆಗ ಅವನಲ್ಲಿ ಭಾವನೆಯೊಂದು ದೃಢವಾಯಿತು. ಮುಂದಿನ ಹಂಗಾಮಿನ ಬೆಲೆ ಉಣ್ಣುವಷ್ಟು ಕಾಲ ತಾವು ಅಲ್ಲಿ ಉಳಿಯುವಂತಿಲ್ಲ.

ಅವನು ಕಾಗದ ಪತ್ರಗಳ ಆ ಹಳೆಯ ಕಡ್ತವನ್ನು ಮತ್ತೆ ತೆಗೆದು ನೋಡಿದನು. ಅಲ್ಲಿ ಅಂಟಿಸಿಟ್ಟ ಪತ್ರವನ್ನು ನೋಡಿದನು. ಆಕಸ್ಮಿಕ ಯೋಗಾಯೋಗದಿಂದ ಅವನು ಆ ಮನೆಗಳನ್ನು ಕಳೆದುಕೊಂಡು ಪೂರ್ತಿ ಆಕಿಂಚನನಾಗಿದ್ದನೆಂಬುದಕ್ಕೆ ಸಂಶಯವೇ ಇದ್ದಿಲ್ಲ. ಆ ಯೋಗಾಯೋಗವನ್ನೂ, ಅವನ ಹಿಡುವಳಿಗಳ ಸರಿಯಾದ ಮನವರಿಕೆ ಆಗಿದ್ದರೆ ಅವನು ತಪ್ಪಿಸಿಕೊಳ್ಳಬಹುದಾದಂಥದು. ಈಗ ಈ ಶರ್ತುಗಳನ್ನು ಊರ್ಜಿತ ಗೊಳಿಸುವ ಕಾಲಾವಧಿ ಕಳೆದು ಹೋಗಿತ್ತು. ಆದಾಗ್ಯೂ ಈ ಆಸ್ತಿ-ಸೊತ್ತುಗಳ ಒಡತಿಯು ಈ ಕರಾರುಪತ್ರದ ಉದ್ದೇಶವನ್ನು ಗಮನಿಸಿ, ಅವನ ಜೀವಮಾನದನಕ ಈ ಹಿಡುವಳಿಯ ಮೇಲಿನ ಅವನ ನೈತಿಕ ಹಕ್ಕನ್ನು ಮನ್ನಿಸಬಹುದಿತ್ತು, ವಿದ್ಯಮಾನ ಪರಿಸ್ಥಿತಿಯನ್ನೆಲ್ಲ ಅರಿತುಕೊಂಡಾಗ.

ಹೀಗೆ ವಿಚಾರಮಾಡಿದಂತೆಲ್ಲ ಅವನ ಮನಸ್ಸೂ ಒಳಒಳಗೆ ಕುಗ್ಗಿ ಹೋಯಿತು. ಕಾಯಿದೆಯ ಆಶೋತ್ತರಗಳೂ ಭದ್ರತೆಗಳೂ ಏನೇ ಬರೆದಿದ್ದರೂ, ಒಟ್ಟಿನ ಸಾರಾಂಶವೇನು? ತನ್ನ ಮನೆಗಳು ಜೀವಮಾನವೆಲ್ಲ ತನ್ನವಾಗಿ ಉಳಿಯುವದು ಬಿಡುವದು ಒಬ್ಬ ಹೆಂಗಸಿನ ಚಂಚಲ ಲಹರಿಯನ್ನು ಅವಲಂಬಿಸಿ ಇತ್ತು. ಅದೂ ಮುಂಚಿನ ದಿನ, ಅಂಥ ದುರ್ದೈವಿಯಾದ ರೀತಿಯಲ್ಲಿ ಆತ ಭೇಟಿಯಾದ ಹೆಂಗಸು.

ಆತ ಹೀಗೆ ವಿಚಾರಮಾಡುತ್ತ ಕುಳಿತಾಗ, ಹೆಜ್ಜೆಯ ಸದ್ದು ಬಾಗಿಲತನಕ ಬಂದದ್ದು ಕೇಳಿಸಿತು; ಮತ್ತು ಮೆಲಬರಿ ಕಾಣಿಸಿಕೊಂಡನು. ಅವನ ಅವಸ್ಥೆಯ

ಬಗೆಗೆ ತುಂಬ ವ್ಯಸನಪಟ್ಟವನಾಗಿ, ವಿಂಟರಬೋರ್ನ ಒಂದು ಶಬ್ದದಿಂದ ತಲೆ ಅಲ್ಲಾಡಿಸಿ ಅವನನ್ನು ಸ್ವಾಗತಿಸಿ ಮತ್ತೆ ಕಾಗದ ಪತ್ರಗಳ ಪರಿಶೀಲನೆ ಮುಂದು ವರಿಸಿದನು. ಅವನ ಅಭ್ಯಾಗತನು ಕುಳಿತುಕೊಂಡನು.

'ಜೈಲ್ಸ' ಅವನು ಅಂದನು, 'ಇದು ಬಹಳ ಅಂದಗೇಡು ಆಯಿತು. ನನಗೆ ಭಾರಿ ದುಃಖವೆನಿಸುತ್ತದೆ. ಈಗ ನೀನು ಏನು ಮಾಡುತ್ತಿರುವಿ ?'

ಜೈಲ್ಸ ಅವನಿಗೆ ವಸ್ತುಸ್ಥಿತಿಯನ್ನೆಲ್ಲ ಅರುಹಿದನು. ತನ್ನ ಕರಾರು ತಿರುಗಿ ಊರ್ಜಿತ ಮಾಡುವ ಒಂದು ಸಂಧಿಯನ್ನು ಹೇಗೆ ಕಳೆದುಕೊಂಡನೆಂಬುದನ್ನು ತಿಳಿಸಿದನು.

'ಅಯ್ಯೋ ಎಂಥ ದುರ್ದೈವ! ಅದೇಕೆ ಹಾಗೆ ಅಲಕ್ಷ್ಯವಾಯಿತು? ಇರಲಿ. ಇನ್ನು ಮಾಡುವ ಉತ್ತಮ ಉಪಾಯ ಒಂದೆ. ಅವಳಿಗೆ ನೀನು ಇದೆಲ್ಲವನ್ನು ಬರೆದು ತಿಳಿಸುವದು. ಮತ್ತು ಅವಳ ಔದಾರ್ಯದ ಮೇಲೆಯೆ ಎಲ್ಲ ಭಾರ ಹಾಕುವದು.

'ಹಾಗೆ ಮಾಡದಿರುವದೇ ಲೇಸೆನಿಸುತ್ತದೆ.' ಜೈಲ್ಸ ಅಂದನು.

'ಇಲ್ಲ. ಹಾಗೆಯೇ ಮಾಡತಕ್ಕದ್ದು' ಮೆಲಬರಿ ಹೇಳಿದ. 'ಎಲ್ಲವೂ ಅದನ್ನೇ ಹೊಂದಿಕೊಂಡಿದೆ.'

ಸ್ವಲ್ಪದರಲ್ಲಿ ಹೇಳುವುದಾದರೆ, ಮೆಲಬರಿ ಈ ಕುರಿತು ತುಂಬ ಮನವರಿಕೆ ಆಗುವಂತೆ ಯುಕ್ತಿಯಿಂದ ವಾದಿಸಿದನು. ಅದರ ಫಲವೆಂದರೆ ಜೈಲ್ಸನ ಮನಸ್ಸು ಒಲಿಯಿತು. ಇದು ತಾನು ಗ್ರೇಸಳಿಗೋಸ್ಕರ ಮಾಡುವ ಕೊನೆಯ ಯತ್ನವೆಂದು ಆತ ಭಾವಿಸಿದನು. ಶ್ರೀಮತಿ ಚಾರ್ಮಂದಳಿಗೆ ಅಲ್ಲಿ ಕೂತ ಪಟ್ಟಿಗೇ ಪತ್ರ ಬರೆದು ಸಿದ್ಧವಾಯಿತು. ಅದನ್ನು ಹಿಂಟೋಕ್ ದೊಡ್ಡ ಮನೆಗೆ ಕಳುಹಿಸಿದ್ದೂ ಆಯಿತು. ಅಲ್ಲಿಂದ ಅದನ್ನು ಅವಳಿದ್ದೆಡೆಗೆ ಕೂಡಲೆ ರವಾನಿಸುವರೆಂದು ಆತನಿಗೆ ಗೊತ್ತಿತ್ತು.

ಮೆಲಬರಿಗೆ ಒಂದು ಬಗೆ ಧನ್ಯತೆ. ತಾನು ಮೊದಲು ನಡೆದುಕೊಂಡ ಮನಸ್ವೀ ರೀತಿಗೆ ಪರಿಹಾರವೆಂಬಂತೆ ಹೀಗೆ ಬಂದು ಚೆನ್ನಾದ ಕೆಲಸ ಮಾಡಿದೆನೆಂದು. ಈ ಧನ್ಯತೆಯಲ್ಲಿಯೇ ಅವನು ಮನೆಗೆ ಹಿಂದಿರುಗಿದನು. ಜೈಲ್ಸ ಒಬ್ಬಂಟಿಗನಾಗಿ ಉಳಿದನು, ತಾನು ಇಟ್ಟ ಹೆಜ್ಜೆಗೆ ಹಿಂಟೋಕ್ ಹಳ್ಳಿಯ ಜನರ ಭಾಗ್ಯವನ್ನು ರೂಪಿಸುವ ದೇವರು ಯಾವ ಉತ್ತರವನ್ನು ದಯಪಾಲಿಸುವನೋ ಎಂದು ಹಾರೈಸುತ್ತ. ಈ ತನಕ ಎಲ್ಲ ಹಳ್ಳಿಗರಿಗೂ ಗೊತ್ತಾಗಿತ್ತು, ಜೈಲ್ಸನ ಪರಿಸ್ಥಿತಿ. ಹಳ್ಳಿಗೆ ಹಳ್ಳಿಯೇ ಒಂದು ಕುಟುಂಬದಂತೆ ಇದ್ದರಿಂದ ಅವನ ಬದುಕಿನ ಬಗೆಗೆ ಒಂದು ತೀವ್ರ ಆಸಕ್ತಿ ಸಾರ್ವತ್ರಿಕವಾಗಿ ಹಬ್ಬಿತು.

ಪ್ರತಿಯೊಬ್ಬರೂ ಜೈಲ್ಸನ ಕುರಿತೇ ವಿಚಾರ ಮಾಡುವವರು. ಮಾರ್ಟಿಯ ಬಗೆಗೆ ಯಾರೂ ವಿಚಾರಿಸಿದವರಿಲ್ಲ. ತಂದೆಯ ಆ ಸ್ಮಶಾನ ಯಾತ್ರೆಗೆ ಮುಂಚೆ ಬೆಳದಿಂಗಳ ರಾತ್ರಿಗಳಲ್ಲಿ ಅವಳನ್ನು ಯಾರಾದರೂ ಹೋಗಿ ಕಂಡಿದ್ದರೆ, ಆ ಹುಡುಗಿ ತಂದೆಯ ಶವದೊಂದಿಗೆ ಆ ಮನೆಯಲ್ಲಿ ಕೇವಲ ಒಬ್ಬಳೇ ಇರುತ್ತಿದ್ದುದು ನೋಡಬಹುದು

ದಿತ್ತು. ಅವಳ ಕೋಣೆಯೇ ಮಾಳಿಗೆಯ ತುದಿಯ ಮೆಟ್ಟಲಿಗೆ ಹತ್ತಿರವಿದ್ದರಿಂದ ಶವದ ಪೆಟ್ಟಿಗೆಯನ್ನು ಅಲ್ಲಿಯೇ ಬಿಟ್ಟಿದ್ದರು — ಕೆಳಗೆ ತರುವ ಅನುಕೂಲಕ್ಕಾಗಿ. ಮತ್ತು ರಾತ್ರಿಗೆ ಒಂದು ವಿವಕ್ಷಿತ ಗಂಟೆಗೆ, ಕಿಟಕಿಯ ಇದುರಿಗೆ ಚಂದ್ರ ಬಂದಾಗ ಅವನ ಕಿರಣ ಶಲಾಕೆ ಒಳಗೆ ತೂರಿ ಬಂದು ಮುದಿ ಸೌಥನ ನಿಶ್ಚಲವಾಗಿ, ಸಾವಿನಲ್ಲಿ ಗಂಭೀರ ವಾಗಿ ಕಾಣುವ ಮುಖ ರೇಖೆಯನ್ನು ಮಗ್ಗಲಿನಿಂದ ಬೆಳಗುತಿತ್ತು. ಹಾಗೆಯೇ ಅದು ಮುಂದೆ ಚಾಚಿ ಕೆಲವು ಅಡಿ ಆಚೆಗೆ ಅವನ ಮಗಳ ಮೋರೆಯ ಮೇಲೆಯೂ ಬೀಳು ತಿತ್ತು. ಅವಳೂ ಅವಳ ಜತೆಗಾರನಷ್ಟೇ ನಿಶ್ಚಲ ನಿಃಸ್ತಬ್ಧ ವಿಶ್ರಾಂತಿಯಲ್ಲಿ ತನ್ನ ಚಿಕ್ಕ ಮಂಚದಲ್ಲಿ ನಿದ್ದೆ ಮಾಡುತಿದ್ದಳು. ಈ ಭೂಮಿಯಲ್ಲಿ ಕಳೆದುಕೊಳ್ಳಲು ತನ್ನದೆಂಬುದು ಇನ್ನೂ ಉಳಿದದ್ದು ಬಾಳಿನ ಹೊರತು ಇನ್ನೇನೂ ಇಲ್ಲವೆಂಬ ಮುಗ್ಧ ಜೀವದ ವಿಶ್ರಾಂತಿಯದು. ಆ ಬಾಳನ್ನು ಆಕೆ ಹೆಚ್ಚು ಬೆಲೆಯದಾಗಿ ಭಾವಿಸಿದ್ದಿಲ್ಲ.

ಸೌಥನನ್ನು ಮಣ್ಣು ಮರೆಮಾಡಿ ಆಯಿತು. ಒಂದು ವಾರ ಕಳೆಯಿತು. ಶ್ರೀಮತಿ ಚಾರ್ಮಂದಳಿಂದ ಪ್ರತ್ಯುತ್ತರವನ್ನೇ ಹಾರೈಸುತಿದ್ದ ವಿಂಟರಬೋರ್ನ. ಮೆಲಬರಿ ಆ ಬರಲಿರುವ ಪತ್ರದ ಧಾಟಿಯ ಬಗೆಗೆ ಬಹಳ ಆಶಾವಾದಿಯಾಗಿದ್ದ. ಆದರೆ ವಿಂಟರಬೋರ್ನ ಅವನಿಗೆ ಆ ಸಾರೋಟ — ಗಾಡಿಗಳ 'ಮುಕಾಬಿಲೆ' ಯ ಕಥೆ ಯನ್ನು ಹೇಳಿದ್ದಿಲ್ಲ. ಭಂಗಪಟ್ಟ ಹೆಣ್ಣಿನ ತುಟಿಯಿಂದ ಹೊರಬಿದ್ದ ಕೆರಳಿಕೆಯ ದನಿ ಆತ ಕೇಳಿದ್ದರೆ ಅದು ಆಗಲೇ ಅವಳ ಬಾಯಿಂದ.

ಮೆಲಬರಿಯ ಮಂದಿ ಗೂಟದ ಮಾಳದಲ್ಲಿ ಕೂಡುವಾಗಲೆ ಅಂಚೆಯ ಜವಾನ ಹಾದುಹೋಗುವ ವೇಳೆ. ವಿಂಟರಬೋರ್ನ ತನ್ನ ಕೆಲಸದಲ್ಲಿ ತೊಡಗಿರದಿದ್ದಾಗೆಲ್ಲ, ಅಲ್ಲಿ ನೆರವಾಗುತಿದ್ದವನು ಆ ವೇಳೆಗೆ ಪ್ರತಿದಿನ ಮುಂಜಾನೆ ಓಣಿಯಲ್ಲಿ ಹೋಗಿ ಹೆರ್ಝುಲ ಕಾನಿನೊಳಗಿಂದ ಹಾಯ್ದು ಒಂದು ಹಸಿರು ಹಾದಿಯ ತುದಿಯಲ್ಲಿ ಅಂಚೆಯವ ನನ್ನು ಭೆಟ್ಟಿಯಾಗುತಿದ್ದ. ನೇರವಾದ ಹಾದಿಯಲ್ಲಿ ಅವನ ಅಂಚೆಯಾಳಿನ ಒಜ್ಜೆ ಹೊತ್ತ ಆಕೃತಿ ದೂರದಿಂದಲೆ ಬರುವದು ಕಾಣುತಿತ್ತು. ಗ್ರೇಸಳಿಗೂ ತುಂಬ ಚಿಂತೆ. ತಂದೆಗಿಂತಲೂ ಹೆಚ್ಚು, ಬಹುಶಃ ವಿಂಟರಬೋರ್ನನಿಗಿಂತಲೂ ಹೆಚ್ಚು. ಈ ಚಿಂತೆಯು ಅವಳನ್ನು ಪದೇ ಪದೇ ಏನಾದರೊಂದು ನೆವಮಾಡಿ ಗೂಟದ ಮಾಳಕ್ಕೆ ಹೋಗುವಂತೆ ಮಾಡುತಿತ್ತು — ಅಲ್ಲಿ ಅವರಿಬ್ಬರೂ ಉತ್ತರಕ್ಕಾಗಿ ಹಾದಿ ಕಾಯುತ್ತಿರುವಾಗ.

ಹನ್ನೊಂದು ಸಲ ವಿಂಟರಬೋರ್ನ ಆ ಹಾದಿಯ ಮೂಕೆಗೆ ಹೋಗಿ ಬಂದಿದ್ದ. ಅಲ್ಲಿ ನಿಂತು ಚಳಿಯ ಮುಂಜಾವಿನ ಒದ್ದೆಮಬ್ಬಿನಲ್ಲಿ ಇಳುಕಲು ಗುಂಟ ದೂರದವರೆಗೆ ಕಣ್ಣು ಹಾಯಿಸಿದ್ದ. ಅಂಚೆ ಆಳಿನ ಬಾಗಿದ ಬೆನ್ನಿನ ಆಕೃತಿ ಕಣ್ಣೆದುರು ನಿಯಮಿತ ವಾಗಿ ಬಂದಿದ್ದರೂ ಅವನು ಜೈಲ್ಸನಿಗೋಸ್ಕರ ಏನನ್ನೂ ತಂದಿದ್ದಿಲ್ಲ. ಹನ್ನೆರಡನೆಯ ದಿನ ಆ ಪತ್ರವಾಹಕ ಪೇದೆ ತೀರ ದೂರವಿರುವಾಗಲೆ ಕೈ ಎತ್ತಿದನು. ವಿಂಟರಬೋರ್ನ ಅದರಲ್ಲಿ ಒಂದು ಪತ್ರವನ್ನು ಕಂಡನು. ಅದರ ಸೀಲು ಒಡೆಯುವ ಮುಂಚೆಯೇ

ಅದನ್ನು ಆತ ಗೂಟದ ಮನೆಗೆ ಒಯ್ದನು. ಅಲ್ಲಿ ಅದನ್ನು ಓದುತ್ತಿರುವಾಗ ಅವನನ್ನು ಸುತ್ತುಗಟ್ಟಿದರು. ಗ್ರೇಸಳು ಬಾಗಿಲಲ್ಲಿಯೇ ನಿಂತು ನೋಡುತಿದ್ದಳು.

ಪತ್ರವು ಚಾರ್ಮಂದಳಿಂದಲೇ ಅಲ್ಲ ಶರ್ಟಸದಲ್ಲಿಯ ಅವಳ ಏಜಂಟನಿಂದ ಬಂದಿತ್ತು. ವಿಂಟರಬೋರ್ನ ಅದರ, ಮೇಲಿಂದ ಕಣ್ಣು ಹಾಯಿಸಿ, ಮೇಲೆ ನೋಡಿದನು.

'ಎಲ್ಲ ಮುಗಿಯಿತು.' ಅವನೆಂದನು.

'ಆ!' ಎಲ್ಲರೂ ಕೂಡಿಯೇ ಉಸಿರೆಳೆದರು.

'ಅವಳ ವಕೀಲನಿಗೆ ಹೀಗೆ ಸೂಚನೆ ಬಂದಿದೆ. ಹೇಗೂ ಆ ಮನೆಗಳನ್ನೆಲ್ಲ ಕೆಡುಹುವದೇ ಉಂಟು. ಆದ್ದರಿಂದ ಸದ್ಯದ ಸ್ವಾಭಾವಿಕವಾದ ಸ್ಥಿತಿಯನ್ನು ಬದಲಾಯಿಸುವದಕ್ಕೆ ಶ್ರೀಮತಿ ಚಾರ್ಮಂದಳಿಗೆ ಯಾವ ಯೋಗ್ಯ ಕಾರಣವೂ ಕಾಣುವದಿಲ್ಲ.'

'ನೋಡಿ ಮತ್ತೆ!' ಹಲವರು ಅಂದರು, 'ಮನೆ ಕೆಡುಹುವದೊಂದೆ ಯಾವಾಗಿನ ಆಟ!'

ವಿಂಟರಬೋರ್ನ ಆಚೆಗೆ ಹೊರಳಿ ಆವೇಶದಿಂದ ಅಂದನು, ಹಾಗಾದರೆ ಕೆಡುಹಿ ಹಾಕಿ ಆಕೆ ಹಾಳಾಗಿ ಹೋಗಲಿ!'

ಕ್ರೀಡಲ್ ಏಳು ದುಃಖಗಳು ಉಮ್ಮಳಿಸಿ ಬಂದ ಮೋರೆ ಮಾಡಿಕೊಂಡು ಹೇಳಿದ, 'ಆ! ಒಡೆಯ, ಮರದ ಭೂತ ಮನೆ ಕಳೆದುಕೊಳ್ಳುವಂತೆ ಮಾಡಿತು. ಬಿಡಿ!'

ವಿಂಟರಬೋರ್ನ ತನ್ನ ಭಾವನೆಗಳನ್ನು ಹಿಡಿತಕ್ಕೆ ತಂದುಕೊಂಡನು. ಮತ್ತು ಅವು ಏನೇ ಇದ್ದರೂ ಆ ಹೊತ್ತಿನಿಂದ ಅವನ್ನು ತನ್ನಲ್ಲಿಯೇ ಹತ್ತಿಕ್ಕಿಕೊಂಡನು. ಆದರೂ, ಅಪರಿಚಿತರ ನಡುವೆ ಮೌನದ ಮೂಲ್ಯಪೇನೇ ಇದ್ದರೂ, ಮಿತ್ರರ ಮಧ್ಯದಲ್ಲಿ ಉಳಿಯುವವನ ಮಟ್ಟಿಗೆ ಅದು ಮಾತುಗೂಳಿತನಕ್ಕಿಂತ ಹೆಚ್ಚು ಭಾವವನ್ನೆ ವ್ಯಕ್ತ ಮಾಡುವದುಂಟು. ಹಳ್ಳಿಯ ಹೈದ ನಿಸರ್ಗದ ಬದಲಾವಣೆಗಳಿಂದಲೆ ದಿವಸದ ಹೊತ್ತನ್ನು ತಿಳಿದುಕೊಳ್ಳುವ ಒತ್ತಾಯದಿಂದ ಬಯಲಿನಲ್ಲಿಯ ಬಣ್ಣ, ಬಗೆಗಳ ಸಾವಿರ ಬದಲಾವಣೆಗಳ ಕ್ರಮವನ್ನು ನೋಡುತ್ತಾನೆ. ಆದರೆ ಗಡಿಯಾರದ ಗಂಟೆಯನ್ನು ನಿಯಮಿತವಾಗಿ ಕೇಳುವವನಿಗೆ ಅವು ಯಾವವೂ ಗಮನಕ್ಕೆ ಬೀಳುವದೇ ಇಲ್ಲ. ಏಕೆಂದರೆ ಅವುಗಳ ಬೇಡಿಕೆಯೇ ಅವನಿಗೆ ಇರುವದಿಲ್ಲ. ಅದೇ ರೀತಿ ನಾವು ನಮ್ಮ ಮಾತಾಡದೆ ಕೂತ ಗೆಳೆಯನ ಬಗೆಗೆ ನಮ್ಮ ಕಣ್ಣನ್ನು ಬಳಸುತ್ತೇವೆ. ಸ್ನಾಯು, ಮುರುವು, ಕೂದಲು, ನಿರಿಗೆ ಮುಂತಾದುವುಗಳ ಅಲೆ ಸೂಕ್ಷ್ಮ ಚಲನವಲನವೂ ಅದರೊಂದಿಗೆ ಧ್ವನಿಯೂ ಕೂಡಿರುವಲ್ಲಿ ಗಮನಿಸದೆ ಹೋಗುತ್ತವೆ. ಆದರೆ ಅದು ಇಲ್ಲದಿದ್ದಲ್ಲಿ ಮಾತ್ರ ಪ್ರತಿಯೊಂದನ್ನು ನಿರೀಕ್ಷಿಸಿ, ಪರೀಕ್ಷಿಸಿ, ಅನುವಾದಿಸಿ ಅರ್ಥ ಕಟ್ಟಲಾಗುತ್ತದೆ— ಕೊನೆಗೂ ಪರಿಚಿತವಲಯವೆಲ್ಲವೂ ಮೌನದಲ್ಲಿ ಕುಳಿತವನ ಮನೋವೃತ್ತಿ, ಮನೋಗತಿಗಳಿಂದ ತುಂಬಿ ತುಳುಕುತ್ತದೆ.

ಅದೇ ಸ್ಥಿತಿ ವಿಂಟರಬೋರ್ನನ ದೈವಾಘಾತದ ನಂತರ ಅವನದೂ ಅವನ ನೆರೆಹೊರೆಯವರದೂ ಆಯಿತು. ಅವನು ನಾಲಿಗೆ ಬಿಗಿಹಿಡಿದಿದ್ದ. ಅವರು ಅದನ್ನು ನೋಡಿದರು. ಅವನಿಗೆ ಅಸ್ವಸ್ಥತೆ ಉಂಟಾಗಿದೆಯೆಂಬುದನ್ನು ತಿಳಿದು ಕೊಂಡರು.

ಒಂದು ದಿನ ಮೆಲಬರಿಗೆ ಭೆಟ್ಟಿಯಾದಾಗ ವಿಂಟರಬೋರ್ನನ ರೀತಿ ಎಲ್ಲ ಹಕ್ಕು-ಬಾಧ್ಯಸ್ತಿಕೆಗಳನ್ನು ಕಳೆದುಕೊಂಡವನಂತೆಯೇ ಇತ್ತು. 'ನಿಮ್ಮ ಭೆಟ್ಟಿ ಆಯಿತು. ನನಗೆ ಸಂತೋಷವೆನಿಸುತ್ತದೆ,' ಆತ ಸಣ್ಣ ದನಿಯಲ್ಲಿ ಮಾತಾಡಿದನು. ಆ ದನಿಯನ್ನು ಅದೆಷ್ಟು ವ್ಯಾವಹಾರಿಕತೆಯನ್ನೇ ತೋರ್ಪಡಿಸುವಂತೆ ಶಾಂತವಾಗಿ ಇಡಲು ಯತ್ನಿಸುತ್ತ ಅಂದನು, 'ಈ ನಂತರ ನಾನು ಅಂದು ಕೊಂಡ ಕುದುರೆಯನ್ನು ಇಟ್ಟುಕೊಳ್ಳಲು ನನಗೆ ಸಾಧ್ಯವಿಲ್ಲ. ಹೆಂಡತಿ ಬಂದರೆ ಅವಳಿಗೆಂದು ಅದನ್ನು ಕೊಂಡಿದ್ದೆ. ಅದನ್ನು ಈಗ ಮಾರುವ ಮನಸ್ಸು ನನಗೆ ಇಲ್ಲ. ಆದ್ದರಿಂದ ನಿಮ್ಮ ಆಕ್ಷೇಪವಿಲ್ಲದಿದ್ದರೆ ಆ ಕುದುರೆ ನಿಮ್ಮ ಮಗಳಿಗೆ ಕೊಡಬೇಕೆಂದು ನನ್ನ ಇಚ್ಛೆ. ಅದು ಬಹಳ ಸೌಮ್ಯ ಸಾಧು ಪ್ರಾಣಿ. ಅವಳಿಗೆ ಅದು ತುಂಬ ಸುರಕ್ಷಿತ ಸವಾರಿ.'

ಈ ಮಾತಿನಿಂದ ಮೆಲಬರಿಯ ಮೇಲೆ ತುಸು ಪ್ರಭಾವವಾಯಿತು. 'ಇಲ್ಲ ಜೈಲ್ಸ. ನಮಗೋಸ್ಕರ ನೀನು ನಿನ್ನ ಜೇಬಿಗೆ ಪೆಟ್ಟು ಮಾಡಿಕೊಳ್ಳಬಾರದು. ಆ ಕುದುರೆ ಗ್ರೇಸಳಿಗೆ ಸಿಗಲಿ. ಆದರೆ ನೀನು ಅದಕ್ಕಾಗಿ ತೆತ್ತ ಹಣ ನಾನು ಕೊಡುತ್ತೇನೆ. ಅಲ್ಲದೆ ಈ ವರೆಗೆ ಅದನ್ನು ಸಾಕಿದ ವೆಚ್ಚವನ್ನು ತೆರುತ್ತೇನೆ.'

ಇದಲ್ಲದೆ ಬೇರೆ ಯಾವ ಶರ್ತನ್ನು ಆತ ಒಪ್ಪಲು ಸಿದ್ಧನಿದ್ದಿಲ್ಲ. ಆದ್ದರಿಂದ ಹಾಗೆಯೇ ತೀರ್ಮಾನವಾಯಿತು. ಅವರು ಈವಾಗ ಮೆಲಬರಿಯ ಮನೆಯ ಇದುರು ಬಂದಿದ್ದರು. ಆ ಮರದ ವ್ಯಾಪಾರಿ ವಿಂಟರಬೋರ್ನನಿಗೆ ಒಳಗೆ ಬರುವಂತೆ ಬಿನ್ನಹ ಮಾಡಿದನು. ಆಗ ಗ್ರೇಸ ಸಮೀಪವೆಲ್ಲೂ ಇದ್ದಿಲ್ಲ.

'ಆ ಬೆಂಚನ್ನು ಎಳೆದುಕೊ ಇತ್ತ.' ಒಳಗೆ ಬಂದೊಡನೆ ಮೆಲಬರಿ ಜೈಲ್ಸನಿಗೆ ಹೇಳಿದನು. ನಿನ್ನೊಡನೆ ಸ್ವಲ್ಪ ಮಹತ್ವದ ಮಾತಾಡಲುಂಟು.'

ಆ ನಂತರ ಆತ ವಿಂಟರಬೋರ್ನನ ಮುಂದೆ ತನ್ನ ವಿಷಯವನ್ನು ಒಳ್ಳೆ ಗೆಳೆತನದ ಮಾತಿನಲ್ಲಿಯೇ ಎದೆ ಬಿಚ್ಚಿ ಇಟ್ಟನು. ಒಬ್ಬನು ತುಂಬ ತೊಂದರೆಯಲ್ಲಿ ಇದ್ದಾಗಲೆ ಅವನಿಗೆ ಮತ್ತೆ ನೋಯಿಸುವದು ತನಗೆ ಸೇರುವದಿಲ್ಲ. ಅದಾಗ್ಯೂ ಮದುವೆ ಆದ ಮೇಲೆ ಹೆಂಡತಿಯನ್ನು ಒಯ್ದು ಉಳಿಯಲಿಕ್ಕೆ ಒಂದು ಮನೆಯೂ ಇಲ್ಲದೆ ವಿಂಟರ ಬೋರ್ನ ತನ್ನ ಮಗಳನ್ನು ಮದುವೆಯಾಗುವದಾದರೂ ಹೇಗೆ?

ಜೈಲ್ಸ ತನ್ನ ಪರಿಸ್ಥಿತಿಯ ಅಂದಗೇಡನ್ನು ಪೂರ್ತಿ ಒಪ್ಪಿಕೊಂಡನು. ಅದಾಗ್ಯೂ ಒಂದು ಕ್ಷಣಿಕ ಆಸೆಯು ಉಸಿರು ಕಟ್ಟಿತು—ಗ್ರೇಸಳ ಮನೋಗತವನ್ನು ಅವಳ ತುಟಿ ಗಳಿಂದಲೇ ಒಮ್ಮೆ ಕೇಳಿಕೊಳ್ಳಬೇಕು ಎಂಬ ಭಾವನೆ. ಅದರಿಂದ ಆತ ಖಂಡಿತವಾಗಿ ಏನನ್ನೂ ಆಡಿ ತೋರಿಸಲಿಲ್ಲ. ಆದ್ದರಿಂದ ಆತ ಕೊಂಚ ತ್ವರೆಯಲ್ಲಿಯೇ ಅಲ್ಲಿಂದ

ಥಕ್ಕನೆ ಎದ್ದು ಹೋದನು. ಮತ್ತು ಮನೆಗೆ ಹೋಗಿ, ಅವಳೊಂದಿಗೆ ಭೆಟ್ಟಿ ಕೂಡಿ ಬರುವಂತೆ ಹೇಗೆ ಮಾಡಬೇಕೆನ್ನುವುದನ್ನೇ ಆಲೋಚಿಸುತ್ತ ಕುಳಿತ.

ಸಂಜೆಗೆ ಹೀಗೆ ಆಲೋಚನೆಯಲ್ಲಿ ತೊಡಗಿ ಕುಳಿತಾಗಲೆ ಅವನಿಗೆ ಮನೆಯ ಹೊರಗೆ ಗೋಡೆಯ ಮೇಲೆ ಯಾರೋ ಕೆದರಿದ ಸದ್ದು ಕೇಳಿಸಿದಂತೆ ಬೋಧವಾಯಿತು. ಅಲ್ಲಿ ಬೆಳೆದ ಗುಲಾಬಿ ಗಿಡದ ಟೊಂಗೆಗಳು ಕೆಲವೊಮ್ಮೆ ಹಾಗೆ ಸದ್ದು ಮಾಡುವದುಂಟು. ಆದರೆ ಈಗ ಗಾಳಿಯ ಸುಳಿವೆ ಇದ್ದಿಲ್ಲ. ಆದ್ದರಿಂದ ಇದು ಗುಲಾಬಿ ಗಿಡದ ಸದ್ದಲ್ಲ. ಮೇಣಬತ್ತಿಯನ್ನು ಎತ್ತಿಕೊಂಡು ಅವನು ಹೊರಗೆ ಹೋದನು. ಅಲ್ಲಿ ಹತ್ತಿರ ಯಾರೂ ಇದ್ದಿಲ್ಲ. ಅವನು ಒಳಗೆ ಹೋಗಲು ತಿರುಗಿದಾಗ ಅವನ ಕೈಬತ್ತಿಯ ಬೆಳಕು ಮನೆಯ ಮುಂಭಾಗದ ಸುಣ್ಣ ಬಳಿದ ಹುರುಬುರುಕು ಮಗ್ಗಲಿನ ಮೇಲೆ ಬಿತ್ತು. ಅಲ್ಲಿ ಇದ್ದಲಿಯಿಂದ ಬರೆದ ಈ ಶಬ್ದಗಳನ್ನು ಅವನು ಕಂಡನು.

'ಓ ಜೈಲ್ಸ, ನಿನಗಿಲ್ಲ ವಾಸಸ್ಥಳವಿನ್ನು
ಆದ್ದರಿಂದ ಕಳಕೊಳ್ಳುವಿ ಗ್ರೇಸಳನ್ನು'

ಜೈಲ್ಸ ಒಳಗೆ ಹೋದನು. ಈ ಸಾಲುಗಳನ್ನು ಗೀಚಿದವರು ಯಾರೆಂಬ ಬಗೆಗೆ ಅವನಿಗೆ ಏನೇನೋ ಸಂಶಯ ಬಂದಿತು. ಆದರೆ ಆ ಬಗೆಗೆ ಏನೂ ಖಂಡಿತವಿದ್ದಿಲ್ಲ. ಅವನ ಹೃದಯುವನ್ನು ತುಂಬಿದ್ದು, ಅದರ ಲೇಖಕನ ಕುರಿತ ಕುತೂಹಲಕ್ಕಿಂತ ಹೆಚ್ಚು, ಅದು ಯಥಾರ್ಥವಾಗಲಿದೆಯೆಂಬ ಭಯಂಕರ ನಂಬಿಗೆ. ಆತ ಗ್ರೇಸಳನ್ನು ತಿರುಗಿ ಪಡೆಯಲು ಎಷ್ಟೇ ಪ್ರಯತ್ನ ಪಟ್ಟರೂ ಅದು ಅಸಾಧ್ಯವೆಂಬ ಮನವರಿಕೆ. ಆ ಪಂಙ್ತಿಗಳು ಆ ಪ್ರಶ್ನೆಯನ್ನು ಅವನಿಗಾಗಿ ಇತ್ಯರ್ಥ ಮಾಡಿದಂತೆ ಆಯಿತು. ಆತ ಕೂತ ಮೆಟ್ಟಿಗೆ ಮೆಲಬರಿಗೆ ಒಂದು ಪತ್ರವನ್ನು ಬರೆದನು. ಕೆಲವು ವರ್ಷ ಹಿಂದೆ ಮಾಡಿದ್ದ ತನ್ನ ಹಾಗೂ ಅವನ ಮಗಳ ವಿಷಯದ ಆ ವಚನದ ಬಗೆಗೆ ಮೆಲಬರಿ ತಾಳಿದ ಅಭಿಪ್ರಾಯಗಳನ್ನು ಆತ ಪೂರ್ತಿ ಒಪ್ಪಿಕೊಂಡನು. ಆ ವಚನವನ್ನು ಇನ್ನು ರದ್ದೆಂದು ಭಾವಿಸಬೇಕೆಂದು ಅವನು ಅಪೇಕ್ಷಿಸಿದನು. ಆ ವಚನದ ಮೂಲಕ ಉಂಟಾದ ಯಾವದೆ ಹಂಗು ಹೊಣೆಗಳ ಋಣಾನುಬಂಧದಿಂದ ಇಬ್ಬರು ಇನ್ನು ಮುಂದೆ ಮುಕ್ತರೆಂದು ಅವನು ನಿರ್ಧರಿಸಿದನು.

ಈ ನಿರಪವಾದವಾದ ಅಂತಿಮ ನಿರ್ಧಾರವನ್ನು ಕೈಗೊಂಡ ಮೇಲೆ ಅದನ್ನು ಕೈಯಿಂದ ಆಗಲೆ ಬೇರೆ ಮಾಡಬೇಕೆಂಬ ನಿಶ್ಚಯ ಮಾಡಿ ಅವನು ಮೆಲಬರಿಯ ಮನೆಯ ಕಡೆಗೆ ಆಗಲೆ ಎದ್ದು ಹೊರಟನು. ಆಗ ತೀರ ವೇಳೆ ಆಗಿತ್ತು. ಮನೆಯುವರೆಲ್ಲ ಮಲಗಿದ್ದರು. ಆತ ಮನೆಯ ಹತ್ತಿರಕ್ಕೆ ಸದ್ದಿಲ್ಲದೆ ಸರಿದನು. ತನ್ನ ಪತ್ರವನ್ನು ಬಾಗಿಲ ಕಂಡಿಯಿಂದ ಒಳಗೆ ತುರುಕಿದನು. ಮತ್ತು ಹೇಗೆ ಬಂದಿದ್ದನೋ ಹಾಗೆಯೇ ಸದ್ದಿಲ್ಲದೆ ಹಿಂದಿರುಗಿ ಹೋದನು.

ಮರುದಿನ ಎಲ್ಲರಿಗೂ ಮುಂಚೆ ಎದ್ದವನೇ ಮೆಲಬರಿ. ಅವನು ಆ ಪತ್ರವನ್ನು ಓದಿದೊಡನೆ ತುಂಬ ಸಮಾಧಾನ ಪಟ್ಟನು. ಅವನಿಗೆ ದೊಡ್ಡ ಪರಿಹಾರ ದೊರೆತಂತೆ

ಅನಿಸಿತು. ಏಕೆಂದರೆ ಜೈಲ್ಸ ಗ್ರೇಸಳ ಮನಸ್ಸಿನ ಮೇಲೆ ಪ್ರಭಾವ ಬೀರುವ ಕೆಲಸಕ್ಕೆ ಹತ್ತಿದರೆ ಈ ಪ್ರಕರಣವನ್ನು ಆತ ತುಂಬ ವಿತುಷ್ಟಿಗೆ ಒಯ್ಯಬಹುದಿತ್ತು. 'ಭಾರಿ ಗೌರವಸ್ಥ, ಜೈಲ್ಸ ಭಾರಿ ಗೌರವಸ್ಥ!' ಆತ ತನ್ನಷ್ಟಕ್ಕೆ ಹೇಳುತ್ತ ಉಳಿದನು. 'ನಾನು ಅವನನ್ನು ಮರೆಯಲಾರೆ. ಇನ್ನು ಅವಳನ್ನು ಅವಳ ನಿಜವಾದ ಅಂತಸ್ತಿನಲ್ಲಿಯೇ ಕಾಪಾಡಿಕೊಳ್ಳುವದೊಂದು ಉಳಿಯಿತು.

ಆ ದಿನ ಮುಂಜಾನೆ ಗ್ರೇಸಳು ನಸುಕಿಗೇ ತಿರುಗಾಟಕ್ಕಾಗಿ ಹೋದಳು. ನಿತ್ಯದ ಪರಿಪಾಠದಂತೆ ಹೋಗುವಾಗ ಅವಳು ವಿಂಟರಬೋರ್ನನ ಮನೆಯನ್ನು ಹಾಯುವುದು ತಪ್ಪಿದ್ದಲ್ಲ. ಮುಂಜಾವಿನ ಬಿಸಿಲು ಅವನ ಮನೆಯ ಬಿಳಿಯ ಗೋಡೆಯ ಮೇಲೆ ಸಪಾಟಾಗಿ ಬಿದ್ದಿತ್ತು. ಅಲ್ಲಿ ಬರೆದಿದ್ದ ಶಬ್ದಗಳು ಕೂಡಲೆ ಅವಳ ಕಣ್ಣಿಗೆ ಬಿದ್ದವು. ಅವಳು ಅವನ್ನು ಓದಿದಳು. ಅವಳ ಮೋರೆ ಒಮ್ಮೆಲೆ ಕೆಂಪೇರಿ ಕೆಂಡವಾಯಿತು. ಜೈಲ್ಸ ಮತ್ತು ಕ್ರೀಡಲ್ ಮನೆಯ ಹಿಂದುಗಡೆ ಮಾತಾಡುತ್ತಿದ್ದುದನ್ನು ಅವಳು ನೋಡಿದಳು. ಆ ಶಬ್ದಗಳನ್ನು ಬರೆದ ಇದ್ದಲಿಯ ಚೆಕ್ಕೆಯು ಅಲ್ಲಿಯೇ ಗೋಡೆಯ ಕೆಳಗೆ ಬಿದ್ದಿತ್ತು. ತನ್ನ ಕೃತ್ಯವನ್ನು ವಿಂಟರಬೋರ್ನ ನೊಡದೆ ಇರಲಾರನೆಂಬ ಭಾವನೆ ದೃಢವಾಗಿ ಅವಳು ಲಗುಬಗೆಯಲ್ಲಿ ಆ ಗೋಡೆಯ ಬಳಿಗೆ ಬಂದು, ಅಲ್ಲಿಯ 'ಕಳಕೊಳ್ಳುವಿ' ಶಬ್ದವನ್ನು ಉಜ್ಜಿ ಅದರ ಸ್ಥಳದಲ್ಲಿ 'ಕಾದುಕೊಳ್ಳು' ಎಂದು ಬರೆದಳು. ಆ ಮೇಲೆ ಆದಷ್ಟು ಜಾಗ್ರತೆಯಿಂದ ಹಿಂದೆ ಹೊರಳಿ ನೋಡದೆ, ಅವಳು ಮನೆಯ ಹಾದಿ ಹಿಡಿದಳು. ಇನ್ನು ಇಷ್ಟವಿದ್ದರೆ ಜೈಲ್ಸ ಅದರಿಂದ ತಕ್ಕ ಬೋಧವನ್ನು ಪಡೆಯಲಿ.

ಈಗ ಒಂದು ಸಂಗತಿಯ ಬಗೆಗೆ ಸ್ವಲ್ಪವೂ ಸಂಶಯ ಉಳಿದಿದ್ದಿಲ್ಲ. ಶಾಂತ ಸೌಮ್ಯ ಗ್ರೇಸಳು ವಿಂಟರಬೋರ್ನನಲ್ಲಿ ಆಸಕ್ತಿ, ಅವನ ಬಗೆಗೆ ಸಹಾನುಭೂತಿಗಳಿಂದ ಕಮ್ಮನೆ ಕಾಯತೊಡಗಿದ್ದಳು. ಹಿಂದೆ ಆತ ಅವಳ ವಾಗ್ದತ್ತ ವಲ್ಲಭನಾಗಿರುವಾಗ್ಗೂ ಹೀಗೆ ಆದದ್ದಿಲ್ಲ. ಆದರೆ ಅವನ ಮೇಲಿನ ದುರ್ದೈವದ ಆಘಾತಗಳಿಂದಾಗಿ, ಅವನ ಸಾಮಾಜಿಕ ಕುಂದುಕೊರತೆಗಳು ಅವಳ ಇತ್ತೀಚೆಯ ಜೀವಾನುಭವಕ್ಕೆ ತೀರ ಅಂದಗೇಡಿ ಎನಿಸುವಂತೆ ವೈಷಮ್ಯ ತೋರುತ್ತಿದ್ದಾಗ್ಯೂ ಅದಕ್ಕೂ ಹಳೆಯ ಕಲ್ಪನಾ ರಮ್ಯವಾದ ಸ್ನೇಹದ ಒಂದು ಉದಾರ ಉಲ್ಬಣವು ಅದನ್ನೆಲ್ಲ ಮುಚ್ಚಿ ಮಸುಕು ಮಾಡಿತ್ತು. ಅವಳ ಎಳೆ ವಯಸ್ಸಿನೊಡನೆ ಹೋಲಿಸಿದರೆ ಈಗ ಅವಳಲ್ಲಿ ಒಂದು ಬಗೆಯ ವಿದೇಶೀಯ ಮಾನಸಿಕ ತರಬೇತಿ ಪಳಗಿತ್ತು. ಆದರೂ ಗ್ರೇಸಳು ಮಹತ್ವಾಕಾಂಕ್ಷೆ ಕಟ್ಟಿಕೊಂಡ ಹುಡುಗಿಯಾಗಿದ್ದಿಲ್ಲ; ಮತ್ತು ಹಾಗೆಯೇ ಉಳಿಯಗೊಟ್ಟರೆ ವಿಂಟರಬೋರ್ನನಿಗೂ ಒಲಿದು ವಿಶೇಷ ವಿತುಷ್ಟ ಇಲ್ಲದೆ ಅವನೊಡನೆ ಕೂಡಿ ಬಾಳಬಹುದಿತ್ತು. ಅವಳ ಭಾವನೆಗಳು ಇದೀಗ ಸುಪ್ತಾವಸ್ಥೆಯಲ್ಲಿ ಇದ್ದೇ ಇಲ್ಲ. ಆ ಗೋಡೆಯ ಮೇಲಿನ ಬರಹವು ಅವಳನ್ನು ಈ ರೀತಿ ವಾಡಿಕೆಗೂ ಹೊರಗಿನ ದುಡಕಿಗೂ ಒತ್ತಾಯಪಡಿಸಿತು.

ತಿರುಗಾಟದಿಂದ ತಿರುಗಿ ಬಂದು ಅವಳು ಮಾತಿಲ್ಲದೆ ಮುಂಜಾವಿನ ಫಲಾಹಾರಕ್ಕೆ

ಕುಳಿತಳು. ಮಲತಾಯಿ ಕೋಣೆಯನ್ನು ಬಿಟ್ಟು ಹೊರ ಬಿದ್ದೊಡನೆ, ಅವಳು ತಂದೆಗೆ ಅಂದಳು,

'ನಾನು ಮನಸ್ಸಿನಲ್ಲಿ ನಿರ್ಧರಿಸಿಬಿಟ್ಟಿದ್ದೇನೆ — ಜೈಲ್ಸನೊಂದಿಗೆ ನನ್ನ ವಾಙ್ನಿಶ್ಚಯವೂ ಮುಂದುವರಿಯಲಿ.'

ಮೆಲಬರಿ ಬಹಳ ಚಕಿತನಾದಂತೆ ಕಂಡನು.

'ಹುಚ್ಚು ಬರೇ ಹುಚ್ಚು' ಅವನು ಕಟುವಾಗಿಯೇ ಅಂದನು, 'ನೀನು ಏನು ಮಾತಾಡುತ್ತೀ ನಿನಗೇ ಗೊತ್ತಿಲ್ಲ. ಇಲ್ಲಿ ನೋಡು,' ಅವನು ಜೈಲ್ಸನಿಂದ ಅವನ ಕೈಗೆ ಬಂದ ಪತ್ರವನ್ನು ಅವಳ ಕೈಗೆ ಕೊಟ್ಟನು. ಅವಳು ಅದನ್ನು ಓದಿ ಮತ್ತೇನೂ ಆಡಲಿಲ್ಲ. ಆತ ಗೋಡೆಯ ಮೇಲಿನ ಅವಳ ಬರೆಹ ನೋಡಿರಬಹುದೇ? ಗೊತ್ತಿಲ್ಲ. ದೈವವು ಈ ರೀತಿಯೇ ಒದಗಿ ಬರಬೇಕೆಂದು ಸಂಕಲ್ಪಿಸಿರಬೇಕು. ಇನ್ನು ಇದನ್ನು ಒಪ್ಪಿಕೊಳ್ಳುವದೇ ಹೊರತು ಬೇರೆ ಏನೂ ಮಾಡುವಂತಿಲ್ಲ.

ಇದರ ನಂತರವೆ ಕೆಲವು ತಾಸಿನ ಮೇಲೆ ವಿಂಟರಬೋರ್ನ ಸೌಥನ ಮನೆಯ ಮುಂದಿನ ಮರವನ್ನು ಹೊತ್ತು ಹಾಕಿ ಸ್ಥಳವನ್ನು ಬರಿದು ಮಾಡುತ್ತಿದ್ದನು. ಸೋಜಿಗವೆಂದರೆ, ಆತ ಗ್ರೇಸಳು ಬರೆಯುವಾಗ ನೋಡಿದ್ದಿಲ್ಲ. ಆಗ ಬಾಗಿಲಲ್ಲಿ ಮಾರ್ಟಿ ನಿಂತದ್ದನ್ನು ಆತ ಕಂಡನು. ಅವಳು ಕಪ್ಪು ಬಣ್ಣದ ಬಡಬಟ್ಟೆಯಲ್ಲಿ ಬಡಕಲಾಗಿ ಕಾಣುತ್ತಿದ್ದಳು — ಇನ್ನೂ ಹೆಂಗಸಿನ ಮೈಮಾಟ ಅವಳಲ್ಲಿ ತುಂಬಿದ್ದಂತೆ ಇದ್ದಿಲ್ಲ. ಅವಳ ಬಳಿಗೆ ಹೋಗಿ ಆತ ಅಂದನು?

'ಮಾರ್ಟಿ, ನಿನ್ನೆ ರಾತ್ರೆ ಆ ಗೋಡೆಯ ಮೇಲೆ ನೀನೇಕೆ ಹಾಗೆ ಬರೆದೆ? ಬರೆದದ್ದು ನೀನೇ, ನನಗೆ ಗೊತ್ತು.'

'ಏಕೆಂದರೆ ಅದು ನಿಜವಾಗಿತ್ತು.'

'ಒಂದು ಸಂಗತಿಯ ಭವಿಷ್ಯವನ್ನು ಬರೆದಿಟ್ಟು ಅದನ್ನು ಇನ್ನೊಂದಕ್ಕೆ ಏಕೆ ಮತ್ತೆ ಬದಲಿಸಿದಿ? ನಿನ್ನ ಇಂಥ ಕಣಿ ಹೇಳಿಕೆಗೆ ವಿಶೇಷ ಬೆಲೆ ಉಳಿಯಲಿಕ್ಕಿಲ್ಲ.'

'ನಾನು ಅದನ್ನು ಬದಲಿಸಿಲ್ಲ.'

'ಇಲ್ಲ. ನೀನೇ ಸರಿ.'

'ಇಲ್ಲವೇ ಇಲ್ಲ.'

'ಹಾಗಾದರೆ ಅದು ಬದಲಾಗಿದೆ. ಹೋಗಿ ನೋಡು.'

ಅವಳು ಹೋದಳು, ಮತ್ತು ಓದಿದಳು — ವಾಸಸ್ಥಾನ ಕಳೆದುಕೊಂಡರೂ ಆತ ಗ್ರೇಸಳನ್ನು ಕಾಯ್ದು ಕೊಳ್ಳುವನೆಂದು. ಮಾರ್ಟಿ ಚಕಿತಳಾಗಿ ಮರಳಿದಳು.

'ಒಳ್ಳೇದು,' ಅವಳೆಂದಳು, 'ಅದನ್ನು ಇಂಥ ಹುಚ್ಚಾಪಟ್ಟೆಗೆ ಯಾರು ತಿದ್ದಿದರೋ!'

'ಅಹುದು ಯಾರು?' ಅವನೆಂದನು.

'ನಾನು ಈಗ ಅದನ್ನೆಲ್ಲ ಉಜ್ಜಿ ಹಾಕಿಬಿಟ್ಟೆ. ಈಗ ಅದರ ಮರ್ಮ ಉಳಿದಿಲ್ಲ.

‘ಅದನ್ನು ಉಜ್ಜಿ ಹಾಕುವ ಉಸಾಬರಿ ನಿನಗೆ ಬೇಕಾಗಿದ್ದಿಲ್ಲ. ಇನ್ನು ಸ್ವಲ್ಪ ಹೊತ್ತು ಅದು ಉಳಿಯಲೆಂದು ಮಾಡಿದ್ದೆ.’

‘ಸೋಮಾರಿ ಪೋರನ್ಯಾರೋ ಅದನ್ನು ಬದಲಿಸಿರಬೇಕು.’ ಆಕೆ ಗೊಣಗುಟ್ಟಿದಳು.

ಅದೂ ಆಗಿರಬಹುದೆಂದು ತೋರಿ ವಿಂಟರಬೋರ್ನ, ಮತ್ತೇನೂ ಮಾತಾಡಲಿಲ್ಲ; ಆ ವಿಷಯವನ್ನೇ ಮನಸ್ಸಿನಿಂದ ತಳ್ಳಿದನು.

ಆ ದಿವಸದಿಂದ ಬಹಳ ಕಾಲದ ತನಕ ವಿಂಟರಬೋರ್ನ ಮನೆಯಿಂದ ಪೂರ್ತಿ ಹೊರಗೆ ಬೀಳದಿದ್ದರೂ, ಬದುಕಿನ ರಂಗದಲ್ಲಿ ಮತ್ತು ಯಾವುದೇ ಚಟುವಟಿಕೆಯಲ್ಲಿ ಹಿನ್ನೆಲೆಯಲ್ಲಿಯೇ ಉಳಿಯಲಾರಂಭಿಸಿದನು. ಹಾಗೆ ಮಾಡುವವನಿಗೆ ನಷ್ಟ ಪ್ರತಿಷ್ಠೆಯ ನೆರವೂ ದೊರೆತಾಗ ಅದೇನು ಮಾಡಲು ವಿಶೇಷ ಕಠಿಣವಾದ ಸಂಗತಿ ಅಲ್ಲ. ಗ್ರೇಸಳೂ ತಾನು ಬರೆಯುವಾಗ ವಿಂಟರಬೋರ್ನ ನೋಡಿರಬೇಕೆಂದೇ ಭಾವಿಸಿ ಮುಂದೇನೂ ಸನ್ನೆ ಸೂಚನೆ ತೋರಲಿಲ್ಲ. ಮತ್ತು ಅವಳು ಅಂಜುತ್ತ ಅಳುಕುತ್ತ ತೇಲಿಬಿಟ್ಟ ನಿಷ್ಠೆಯ ದುರ್ಬಲ ದೋಣಿಯು ಹುದುಲಲ್ಲಿ ಸಿಲುಕಿ ಬಿದ್ದು ನಷ್ಟವಾಯಿತು.

೧೭

ಡಾಕ್ಟರ್ ಫಿಟ್ಝಪಿಯರ್ಸ್ ಗುಡ್ಡದ ಇಳುಕಲಿನಲ್ಲಿ ಮನೆ ಮಾಡಿಕೊಂಡಿದ್ದನು. ಅವನ ಮನೆ, ಕಟ್ಟಿಗೆ ವ್ಯಾಪಾರಿ (ಶ್ರೀ ಮೆಲಬರಿ)ಯ ಮನೆಗಿಂತ ಆಯ ಆಕಾರದಲ್ಲಿಯೂ ಶಿಲ್ಪ ರಚನೆಯಲ್ಲಿಯೂ ಕಡಮೆ ಆಢ್ಯತೆಯದು. ಮೆಲಬರಿಯ ಮನೆ ಹಿಂದೊಮ್ಮೆ ಕಿರಿಯ ಹಿಂಟಾಕ ಹಳ್ಳಿಯ ಹಿರಿಯ ಜಾಗೀರದಾರರ ನಿವಾಸವಾಗಿದ್ದಿರಬೇಕೆಂಬುದಕ್ಕೆ ಸಂಶಯವಿದ್ದಿಲ್ಲ. ಆಗ ಆ ನಿವಾಸದ ಗಡಿಗೆರೆಗಳೆಲ್ಲ ಶ್ರೀಮತೀ ಚಾರ್ಮಂದಳ ಆಸ್ತಿಯ ವಿಸ್ತಾರದಲ್ಲಿ ವಿಲೀನವಾಗಿದ್ದವು. ಮೆಲಬರಿಯ ಕುಟುಂಬದವರಿಗೆ ಈ ವಿಷಯ ಗೊತ್ತಿದ್ದಿಲ್ಲ. ಆದರೂ ಹಾಗೆ ನಂಬಲಿಕ್ಕೆ ಕಾರಣಗಳಿದ್ದವು — ಆ ಊರ ಪಾದ್ರಿಯಂತೂ ಅದನ್ನು ಹೇಳುತ್ತಿದ್ದನು. ಆ ಹಳೆಯ ಜಾಗೀರದಾರ ವಾಡೆಯ ನಿವಾಸಿಗಳು ಮೆಲಬರಿಯ ಪೂರ್ವಜರೆ ಆಗಿದ್ದರು. ಹಿಂದೆ ಇಂಗ್ಲೆಂಡಿನಲ್ಲಿ ಯಾದವೀ ಕಲಹದ ಯುದ್ಧಗಳು ಒದಗಿದಾಗಿನ ಕಾಲದಲ್ಲಿ ಆಸ್ತಿಯ ಹಸ್ತಾಂತರದ ಹಲವು ದಸ್ತಾವೇಜುಗಳಲ್ಲಿ ಈ ಮನೆತನದ ಹೆಸರು ಬಂದದ್ದು ಇತ್ತು.

ಆದರೆ ಫಿಟ್ಝಪಿಯರ್ಸ್‌ನ ನಿವಾಸವು ಒಂದು ಸಣ್ಣ ಪೆಟ್ಟಿಗೆಯಂದದ ಹೆಚ್ಚು ಆಧುನಿಕ ಮನೆಯಾಗಿತ್ತು. ಅದರಲ್ಲಿ ಹಿಂದಿನಿಂದಲೂ, ಈಗಲೂ, ಒಬ್ಬ ನಿವೃತ್ತ

ಮುದಿ ರೈತನೂ ಅವನ ಹೆಂಡತಿಯೂ ವಾಸಿಸುತ್ತಿದ್ದರು. ಅವರು ಈ ಸರ್ಜನನು ಮನೆ ಹುಡುಕಿಕೊಂಡು ಬಂದಾಗ ಅವನಿಗಾಗಿ ಮನೆಯ ಮುಂಭಾಗದ ಕೋಣೆಗಳನ್ನು ಬಿಟ್ಟುಕೊಟ್ಟು ತಾವು ಅಡುಗೆಯ ಕೋಣೆಯನ್ನು, ಆಶ್ರಯಿಸಿದ್ದರು. ಅಲ್ಲಿಂದಲೇ ಅವರು ಡಾಕ್ಟರನ ಬೇಕು-ಬೇಡಗಳನ್ನು ಪೂರೈಸುತ್ತಿದ್ದರು. ಮತ್ತು ನಿಯತ ಕಾಲಕ್ಕೆ ಅವನ ಕೈಯಿಂದ ತಮ್ಮ ವರಮಾನ ಹೆಚ್ಚಿಸುವ ಪಾಲನ್ನು ಪಡೆಯಲಿಕ್ಕೆ ಮಾತ್ರ ಹೋಗಿ ಬರುತ್ತಿದ್ದರು.

ಆ ಗುಡಿಸಲು ಮತ್ತು ಅದರ ತೋಟ ತೀರ ಅಚ್ಚುಕಟ್ಟಿನ ಆಕಾರದವಿದ್ದು, ಹಿಂದೆ ವಿಲಿಯಂ ಮತ್ತು ಮೇರಿ ಇಂಗ್ಲೆಂಡನ್ನು ಆಳುವಾಗಿನ ಕಾಲದ ಒಬ್ಬ ಡಚ್ಚ ವಾಸ್ತುಶಿಲ್ಪಿಯು ಅವೆರಡನ್ನು ರಚಿಸಿದಂತೆ ಕಾಣುತ್ತಿತ್ತು. ತಗ್ಗಾದ, ದಟ್ಟವಾದ ಬೇಲಿಯಲ್ಲಿ ಒಂದು ಬಾಗಿಲು ಇತ್ತು. ಆ ಬಾಗಿಲಿನ ಮೇಲೆ ಆ ಬೇಲಿಯ ಒಂದು ಕಮಾನು ಕಟ್ಟಿತ್ತು. ಬಾಗಿಲ ಒಳಗಡೆಯಿಂದ ತೋಟದ ಇಳುಕಲಗುಂಟ, ಕತ್ತರಿಸಿ ತಿದ್ದಿಟ್ಟ ಪುಟ್ಟ ಹಸಿರು ಪೊದೆಗಳ ಅಂಚುಳ್ಳ ಒಂದು ನೇರವಾದ ಕಾಲುದಾರಿಯು ಮನೆಯ ಮೊಗಸಾಲೆಗೆ ಹೋಗಿತ್ತು. ಆ ಮೊಗಸಾಲೆಯೂ ಮನೆಯ ಮುಂಭಾಗಕ್ಕೆ ನಟ್ಟನಡುವೆ ಇತ್ತು. ಅದರ ಆಚೆ ಈಚೆ ಎರಡು ಕಿಟಕಿಗಳು ಇದ್ದವು. ಈ ಹಾದಿಯ ಎಡಬಲಕ್ಕೆ ಗೂಜಬೆರಿ, ಕರಂಟ, ಸ್ಟ್ರಾಬೆರಿ ಹಣ್ಣುಗಳ ಗಿಡಗಳನ್ನು ಅನುಕ್ರಮವಾಗಿ ಹಚ್ಚಲಾಗಿತ್ತು. ಅವುಗಳ ಆಗೆಗಳ ನಂತರ ಹಳೆಯ ಹೂವಿನ ಗಿಡಗಳು. ಕೊನೆಗೆ ಮೊಗಸಾಲೆಯ ಇದುರಿಗೆ ಎರಡೂ ಮೂಲೆಗಳಿಗೆ ಶಾಲೆಯ ಭೂಮಿಗೋಲಗಳನ್ನು ಹೋಲುವಂತೆ ಹಸಿರು ಪೊದೆಗಳನ್ನು ಗೋಲಾಕಾರವಾಗಿ ಕತ್ತರಿಸಿ ಬೆಳೆಯಿಸಿದ್ದರು. ಆ ಮನೆಯ ಮಾಡಿನ ಆಚೆಗೆ ಹಿಂದುಗಡೆಯ ಇನ್ನೂ ಏರಿದ ನೆಲದ ಮೇಲಿನ ಹಣ್ಣು ತೋಟದ ತುದಿಗಳನ್ನು ಕಾಣಬಹುದಿತ್ತು. ಆ ತೋಟದ ಹಿಂದೆ ಮತ್ತೆ ಬೆಟ್ಟದ ಮರಗಳು ಹಾಗೆಯೇ ಗುಡ್ಡದ ನೆತ್ತಿಯವರೆಗೂ ಚಾಚಿ ನಿಂತಿದ್ದವು.

ಬೇಲಿಯ ಬಾಗಿಲಿಗೆ ಇದಿರಾಗಿ, ನಡುಮನೆಯ ಕಿಟಕಿಯಿಂದ ಕಾಣುವಂತೆ ಒಂದು ತೂಗುವ ಗೇಟು ಇತ್ತು — ಅದು ಆಚೆಗೆ ಹೊಲಕ್ಕೆ ಒಯ್ಯುತ್ತಿತ್ತು. ಅಲ್ಲಿ ಹೊಲದಲ್ಲಿ ಒಂದು ಕಾಲುದಾರಿ, ಅಡ್ಡ ಹಾದಿಯಿತ್ತು. ಆ ಗೇಟಿಗೆ ಹೊಸತಾಗಿ ಬಣ್ಣ ಹಚ್ಚಲಾಗಿತ್ತು. ಒಂದು ಚೆಂದದ ಇಳಿ ಹೊತ್ತಿಗೆ, ಆ ಬಣ್ಣವು ಪೂರ್ತಿ ಒಣಗುವ ಮೊದಲೇ, ಅದರಲ್ಲಿ ನೊಣಗಳು ಅಂಟಿಬಿದ್ದು ಸಾಯುತ್ತಿರುವಾಗ ಸರ್ಜನನು ತನ್ನ ಕೋಣೆಯಲ್ಲಿ, ದೂರ ಹಾದಿಗುಂಟ ಹೋಗುವ ಪಾದಚಾರಿಗಳನ್ನು ವಿಮನಸ್ಕತೆಯಿಂದ ನೋಡುತ್ತ ನಿಂತಿದ್ದನು. ತುಸು ತಾತ್ವಿಕ ವಿಚಾರಮುದ್ರೆಯವನಾಗಿದ್ದರಿಂದ, ಅವನು ಆ ದಾರಿಗಾರರಲ್ಲಿ ಒಬ್ಬೊಬ್ಬರೂ ಆ ಗೇಟನ್ನು ಹಿಡಿದು ದಾಟುವ ತುಸು ಕೌತುಕದ ಪರಿಯಲ್ಲಿ ವ್ಯಕ್ತವಾಗುವ ಅವನ ಅವಳ ಸ್ವಭಾವ ಭೇದವನ್ನು ಅವಲೋಕಿಸುತ್ತಿದ್ದನು.

ಗಂಡಸರಲ್ಲಿ ವಿಶೇಷ ವೈವಿಧ್ಯವಿದ್ದಿಲ್ಲ. ಅವರು ಗೇಟಿಗೊಂದು ಒದೆತಗೊಟ್ಟು ದಾಟಿಹೋಗುತ್ತಿದ್ದರು. ಆದರೆ ಹೆಂಗಸರಲ್ಲಿ ಹೆಚ್ಚು ವ್ಯತ್ಯಾಸ ಕಂಡು ಬರುತ್ತಿತ್ತು.

ಅವರಿಗೆ ಆ ಅಂಟುವ ಕಟ್ಟಿಗೆ ಚೌಕವು ತೊಡಕೊ ಅಸಹ್ಯವೋ, ಭಯವೋ, ಮೋಸವೊ — ಅವರವರ ವೃತ್ತಿಯಂತೆ ಅನಿಸುತ್ತಿತ್ತು.

ಅವನು ಮೊದಲಿಗೆ ಗಮನಿಸಿದ್ದು ಒಬ್ಬ ಪುಟಿಗೆಯ ನಡಿಗೆಯ ತರುಣಿಯನ್ನು. ಅವಳು ತನ್ನ ಲಂಗವನ್ನು ಮೇಲಕ್ಕೆ ಸಿಕ್ಕಿಸಿಕೊಂಡಿದ್ದಳು. ಅವಳ ಹೆಳಲೆಲ್ಲ ಕೆದರಿ ಹಾರಾಡುತ್ತಿತ್ತು. ಫಿಟ್ಝ್‌ಪಿಯರ್ಸ್‌ನಿಗೆ ಅವಳು ಗೊತ್ತು — ಅವಳು ಸೂಕ ಡಾಮುಸನ್. ಅವಳು ನೋಡದೆ ಗೇಟನ್ನು ಕೈಚಾಚಿ ಹಿಡಿದಳು. ತನ್ನ ಹೆಗಲಿನಿಂದಲೂ ಒಂದು ಹೆಚ್ಚಿನ ಜೋರಿನ ನೂಕು ಕೊಟ್ಟಳು. ಆಗ ಹಸಿ ಬಣ್ಣದ, ಬಿಳಿಯ ಬಣ್ಣದ ಮುದ್ರೆ, ಅವಳ ಬಾಯಿಂದ ಅಷ್ಟೇನು ಸಭ್ಯವಲ್ಲದ ಭಾಷೆಯಲ್ಲಿ ಉದ್ಗಾರ ಹೊರಡಿಸಿತು. ಅವಳು ಹಸಿರು ದರೆಯ ಮೇಲೆ ಹೋಗಿ ಕೂತು ಹುಲ್ಲಲ್ಲಿ ತನ್ನನ್ನು ಉಜ್ಜಿಕೊಳ್ಳುತ್ತ ಶಾಪ ಹಾಕುತ್ತಿದ್ದಳು.

'ಹ! ಹ! ಹ!' ಡಾಕ್ಟರನು ಖೊಳ್ಳನೆ ನಕ್ಕನು. ಅನಂತರ ಬಂದವಳು ತಲೆಕೂದಲೆಲ್ಲ ಗಿಡ್ಡವಾಗಿ ಕತ್ತರಿಸಿಕೊಂಡ ಹುಡುಗಿ. ಅವಳು ತನ್ನ ಸತ್ತ ರೋಗಿ ಮರಕೊಯ್ಯುವ ಮುದಿ ಸೌಥನ ಮಗಳೆಂಬುದನ್ನು ಡಾಕ್ಟರನು ಗುರುತಿಸಿದನು. ಅಲ್ಲದೆ ಅವಳು ತೊಟ್ಟ ಕರಿ ಗೌನು ಅವನಿಗೆ ತುಸು ಕಹಿಯಾದ ನೆನಪು ತಂದುಕೊಟ್ಟಿತು. ಅವನು ಅಪ್ಪಣೆ ವಿಧಿಸಿ ಕಡಿದ ಮರವೆ ಅವಳ ತಂದೆಯ ಸಾವಿಗೆ ಕಾರಣವಾಗಿತ್ತು. ಅವಳು ವಿಚಾರಮಗ್ನಳಾಗಿಯೆ ನಡೆದಿದ್ದಳು. ಆದರೆ ಅಜಾಗರೂಕಳಾಗಿ ಅಲ್ಲ. ಆದರೂ ಅವಳ ಅನ್ಯಮನಸ್ಕತೆಯು ಅವಳು ಗೇಟಿನ ಕಂಬಿಯನ್ನು ಯಾವ ಸಂಶಯವೂ ಇಲ್ಲದೆ ಹಿಡಿದು ಅದಕ್ಕೆ ಭುಜವನ್ನು ಆನಿಸುವಂತೆ ಮಾಡಿತು. ಫಿಟ್ಝ್‌ಪಿಯರ್ಸ್‌ನಿಗೆ ದುಃಖವೆನಿಸಿತು. ಅವಳು ಮೊದಲೆ ಬಡವಿ· ಆ ಹೊಸ ಕಪ್ಪು ನಿಲುವಂಗಿಯನ್ನು ಹೊಲಸುಮಾಡಿಕೊಳ್ಳುವಂತಾಯಿತು. ಅವಳಿಗೆ ಇದೊಂದೇ ಅಂಥ ಅಂಗಿ ಇರಬೇಕು. ಅವಳು ತನ್ನ ಕೈ ಮತ್ತು ಭುಜದತ್ತ ನೋಡಿದಳು. ಆದರೆ ವಿಶೇಷ ಚಕಿತಳಾದಂತೆ ತೋರಲಿಲ್ಲ. ನಿರ್ವಿಕಾರ ಮೋರೆಯಿಂದ ಆ ವಿದ್ರೂಪದ ಕಲೆಗಳನ್ನು ಉಜ್ಜಿ ತೆಗೆದು ತನ್ನ ಮೂಲದ ವಿಚಾರತಂದ್ರಿಯನ್ನು ಬಿಟ್ಟುಕೊಡದೆ ಅವಳು ತನ್ನ ಹಾದಿ ಹಿಡಿದು ನಡೆದಳು.

ಆ ಮೇಲೆ ಆ ಹಸಿರು ಬಯಲಿನೊಳಗಿಂದ ತೀರ ಬೇರೆ ಮಾದರಿಯ ವ್ಯಕ್ತಿಯೊಂದು ಬಂದಿತು. ಅವಳು ಹಳ್ಳಿಯಲ್ಲಿ ಬೆಳೆದವಳಷ್ಟು ದೃಢವಾಗಿಯೂ ಪಟ್ಟಣದಲ್ಲಿ ಬೆಳೆದವಳಂತೆ ಹಗುರಾಗಿಯೂ ಹೆಜ್ಜೆ ಇಟ್ಟು ನಡೆಯುತ್ತಿದ್ದಳು. ತನ್ನ ರೂಪವು ಮೋಹಕವೆಂಬುದನ್ನು ಮಸುಕಾಗಿ ಅರಿತಿದ್ದರೂ, ಸುತ್ತಲಿನ ಸಾಮಾನ್ಯ ಗಾಂಭೀರ್ಯದಲ್ಲಿ ತನ್ನನ್ನು ಮರೆಯುವ ಮುಗ್ಧತೆಯನ್ನೂ ಕಾಪಾಡಿಕೊಂಡು ಬಂದವಳಂತೆ ಅವಳು ಕಾಣುತ್ತಿದ್ದಳು. ಅವಳು ಆ ಗೇಟನ್ನು ಸಮೀಪಿಸಿದಳು.

ಅಂಥ ಒಂದು ಪ್ರಾಣಿ ತನ್ನ ಕೈಚೀಲದ ತುದಿಯಿಂದಲೇ ಆಗಿರಲಿ, ಆ ಗೇಟನ್ನು ಮುಟ್ಟುವುದು ಅವಳನ್ನು ಒಂದು ದುರಂತ ಆತ್ಮಘಾತಕ್ಕೆ ದುಡುಕಲು ಬಿಟ್ಟಂತೆಯೇ—

ಅನಿಸಿತು ಫಿಟ್ಝ್‌ಪಿಯರ್ಸ್‌ನಿಗೆ. ಆತ ಟಣ್ಣನೆ ಜಿಗಿದೆದ್ದು ತನ್ನ ಹ್ಯಾಟಿಗಾಗಿ ಹುಡುಕಾಡಿದನು. ಆದರೆ ಆ ಪ್ರಸಂಗಕ್ಕೆ ತಕ್ಕ ಹ್ಯಾಟು ಅವನಿಗೆ ಸಿಗಲೊಲ್ಲದು. ಮತ್ತೊಮ್ಮೆ ಕಿಟಕಿಯೊಳಗಿಂದ ಹೊರಗೆ ಕಣ್ಣು ಹಾಯಿಸಿದಾಗ, ತನ್ನ ಸಹಾಯ ಅವಳಿಗೆ ಅನಾವಶ್ಯಕವೆಂದು ಅವನು ಕಂಡುಕೊಂಡನು. ಅವಳು ಗೇಟಿನವರೆಗೆ ಬಂದೊಡನೆ, ಅದನ್ನು ಕಣ್ಣೆತ್ತಿನೋಡಿ ಒಂದು ಚಿಕ್ಕ ಕೋಲನ್ನು ಹೆಕ್ಕಿಕೊಂಡಳು. ಮತ್ತು ಅದನ್ನೆ ಬಾಚಿಯಂತೆ ಬಳಸಿ ಆ ಕಟ್ಟಿಗೆಯ ಚೌಕನ್ನು ನೂಕಿ ದಾಟಿ ಬಂದಳು. ಅದನ್ನು ಎಲ್ಲೂ ಮುಟ್ಟಲೇ ಇಲ್ಲ.

ಅವಳು ದೃಷ್ಟಿಪಥದಿಂದ ಮರೆಯಾಗುವನಕವೂ ಅವಳನ್ನೆ ದೃಢವಾಗಿ ನೋಡುತ್ತ ನಿಂತು, ಫಿಟ್ಝ್‌ಪಿಯರ್ಸ್ ಅವಳನ್ನು ತಾನು ಹಿಂದೊಮ್ಮೆ ಕಂಡಿದ್ದು, ಯಾರೆಂದು ಗೊತ್ತು ಮಾಡಲಾಗದೇ ಹೋದ ಹರಯದ ಹುಡುಗಿಯೇ ಎಂದು ಗುರುತಿಸಿದನು. ಆ ಭಾವನಾಮಯ ಮುಖವು ಯಾರದಿರಬಹುದು? ಹಿಂಟಾಕದಲ್ಲಿ ಅವನು ಕಂಡ ಬೇರೆ ಎಲ್ಲ ಮೋರೆಗಳೂ ಅವನಿಗೆ ಗೊಡ್ಡ ಗಮ್ಮಾರತನದಿಂದಾಗಿ ದುರ್ಭರವೆನಿಸಿದ್ದವು. ಆದರೆ ಹರ್ಷನಿರ್ಭರಗೊಳಿಸಿದ ಈ ಮುಖವು ಅವುಗಳಿಂದ ತೀರ ಭಿನ್ನವಾಗಿತ್ತು. ಇವಳು ಬೇರೆಡೆಯಿಂದ ಬಂದವಳೋ ಎಂಬ ಭಾವವನ್ನು ಸೂಚಿಸುವಂತಿತ್ತು.

ಮೊದಲು ಕಂಡಾಗಲೂ ಅವನಿಗೆ ಇವೇ ವಿಚಾರಗಳು ತೋಚಿದ್ದವು. ಈಗ ಅವುಗಳಲ್ಲಿ ಅವನು ಇನ್ನಷ್ಟು ಮುಂದರಿದನು. ಅಲ್ಲದೆ ಆ ಸ್ಥಳಕ್ಕೆ ಇತ್ತೀಚೆಗೆ ಯಾವದೇ ಕುದುರೆ ಸಾರೋಟು ಬಂದಿಲ್ಲವಾದ್ದರಿಂದ ಅವಳು ಬಹಳ ದೂರದಿಂದ ಅಲ್ಲಿಗೆ ಬಂದವಳಲ್ಲವೆಂದು ಭಾವಿಸಿದನು. ಹಿಂಟಾಕ ದೊಡ್ಡ ಮನೆಯಲ್ಲಿಯೇ ವಾಸಿಸುವವಳು ಯಾರೋ ಆಗಿರಬೇಕು — ಶ್ರೀಮತಿ ಚಾರ್ಮ್ಂದಳೇ ಇರಬೇಕು. ಅವಳ ಬಗೆಗೆ ಆತ ಬಹಳಷ್ಟು ಕೇಳಿದ್ದನು ಮತ್ತು ಈ ಶಕ್ಯತೆ ಆ ಸರ್ಜನನ ಕೆಲಮಟ್ಟಿಗಿನ ಮಬ್ಬು ಕವಿದ ಆಕಾಶದಲ್ಲಿ ಒಂದು ಮಂದವಾದ ಪ್ರಭೆಯನ್ನು ಬೆಳಗಲು ಸಾಕಾಯಿತು.

ಫಿಟ್ಝ್‌ಪಿಯರ್ಸ್ ತಾನು ಓದುತ್ತಿರುವ ಪುಸ್ತಕವನ್ನು ಎತ್ತಿಕೊಂಡು ಮತ್ತೆ ಕೂತನು. ಅದು ಒಬ್ಬ ಜರ್ಮನ್ ತತ್ವಜ್ಞಾನಿಯದಾಗಿತ್ತು. ಈ ಡಾಕ್ಟರನು ವ್ಯವಹಾರಿಕ ಮನುಷ್ಯನಾಗಿದ್ದಿಲ್ಲ. ಲಹರಿ ಬಂದಾಗಷ್ಟೇ ವ್ಯವಹಾರ. ಮಿಕ್ಕಾಗೆಲ್ಲ ಅವನಿಗೆ ವಾಸ್ತವಕ್ಕಿಂತ ವೈಚಾರಿಕ ಪ್ರಪಂಚವೇ ಹೆಚ್ಚು ಸೊಗಯಿಸುತ್ತಿತ್ತು. ತತ್ವಗಳ ಪ್ರಯೋಗ — ಪ್ರಯೋಜನಗಳಿಗಿಂತ ಅವುಗಳ ಶೋಧ ಚಿಂತನೆಗಳೆ ಹೆಚ್ಚು ಇಷ್ಟವಾಗಿದ್ದವು. ಆ ತರುಣಿ ಅವನ ಮನಸ್ಸಿನಲ್ಲಿಯೇ ಉಳಿದಳು. ಅವನು ಅವಳನ್ನು ಹಿಂಬಾಲಿಸಬಹುದಿತ್ತು. ಆದರೆ ಪ್ರಕೃತಿಯಿಂದಲೂ ಆತ ಕ್ರಿಯಾಶೀಲನಲ್ಲ. ಆತನಿಗೆ ಊಹಾನುಸಾರವೇ ಹೆಚ್ಚು ಸೇರುತ್ತಿತ್ತು. ಅದಾಗ್ಯೂ ಸಂಜೆಗಪ್ಪಿಗೆ ಆತ ತಿರುಗಾಟಕ್ಕಾಗಿ ಹೋದಾಗ ತನಗೇ ಗೊತ್ತಾಗದಂತೆ ಹಿಂಟಾಕ ದೊಡ್ಡ ಮನೆಯ ದಾರಿ ಹಿಡಿದನು. ಗ್ರೇಸಳು ಅದೇ ದಾರಿಯಲ್ಲಿ ನಡೆದಿದ್ದಳು. ಆ ದಿನ ಅವಳ ಮನಸ್ಸೂ ಶ್ರೀಮತಿ ಚಾರ್ಮ್ಂದಳ ಕುರಿತೆ ಓಡಿತ್ತು. ಆದರೆ ಗ್ರೇಸ ಬೇರೊಂದು ದಾರಿಯಿಂದ ಯಾವಾಗಲೋ ಹಿಂದಿರುಗಿ ಬಂದಿದ್ದಳು.

ಆ ವಾಡೆಯು ಕಣ್ಣಿಗೆ ಬೀಳುವಂಥ ಕೊಳ್ಳದ ಅಂಚಿಗೆ ಫಿಟ್ಝ್‌ಪಿಯರ್ಸ್ ಮುಟ್ಟಿದನು. ವಾಡೆಯು ಕದಗಳೆಲ್ಲವೂ ಮುಚ್ಚಿದ್ದವು. ಒಂದೇ ಹೊಗೆಕಿಂಡಿಯೊಳಗಿಂದ ಹೊಗೆಯಾಡುತ್ತಿತ್ತು. ಆ ಸ್ಥಳದ ಹೊರನೋಟವೇ ತಿಳಿಸಲು ಸಾಕಾಗಿತ್ತು — ವಾಡೆಯ ಯಜಮಾನಿ ಚಾರ್ಮೊಂದಮ್ಮ ಅಲ್ಲಿಂದ ಹೋಗಿದ್ದು, ಅಲ್ಲಿ ಬೇರೆ ಯಾರೂ ಉಳಿದಿಲ್ಲವೆಂಬುದು. ಪ್ರಾಣಹಾರಿ ಹೋದ ಕಳೇಬರವನ್ನು ಹೆಚ್ಚು ಹೊತ್ತು ದಿಟ್ಟಿಸುತ್ತ ನಿಲ್ಲದೆ ಫಿಟ್ಝ್‌ಪಿಯರ್ಸ್ ಮನೆಯ ಕಡೆಗೆ ಹೋದನು.

ಆ ಸಂಜೆಗೆ ಇನ್ನೂ ತಡವಾಗಿ, ಐದು ಮೈಲು ದೂರದಲ್ಲಿ ಒಬ್ಬ ರೋಗಿಯ ಗುಡಿಸಲಿಗೆ ಫಿಟ್ಝ್‌ಪಿಯರ್ಸನಿಗೆ ಕರೆಬಂದಿತು. ಥಳಲಕ ಹೊಳೆಯುವ, ನಾಲ್ಕು ಚಕ್ರಗಳ ಕುದುರೆಗಾಡಿಯಲ್ಲಿ ಒಬ್ಬ ಸೇವಕನಿಂದ ಸಾರಥ್ಯ ನಡೆಯಿಸಿಕೊಂಡು ತನ್ನ ವೈದ್ಯಕೀಯ ತಿರುಗಾಟಗಳಿಗೆಲ್ಲ ಹೋಗಿಬರುವ ಇತರ ತರುಣ ಡಾಕ್ಟರೀ ವ್ಯವಸಾಯಿಗಳ ಆದ್ಯತೆ ಇವನದಿದ್ದಿಲ್ಲ. ಅವನು ಸುತ್ತಾಡುವುದು, ತಾನೇ ಕುದುರೆಯನ್ನು ಓಡಿಸುವ ಎರಡು ಗಾಲಿಯ ಚಿಕ್ಕ ಟಾಂಗಾದಲ್ಲಿ. ಅವನು ಹೋದಲ್ಲಿ ಹೊರಗಡೆ ಗೇಟಿನ ಕಂಬಕ್ಕೆ ಅಥವಾ ತೋಟದ ಬೇಲಿಯ ಗೂಟಕ್ಕೆ ಲಗಾಮಿನ ಪಟ್ಟಿಗಳನ್ನು ಸಿಕ್ಕಿಸಿಟ್ಟು ಅಲ್ಲಿ ಹಾದಿಯಲ್ಲಿ ಕಾಣುವ ಚಿಕ್ಕ ಹುಡುಗರಿಗೆ ನಾಲ್ಕು ದುಡ್ಡು ಕೊಟ್ಟು ತಾನು ಒಳಗೆ ಹೋಗಿ ಬರುವನಕ ಕುದುರೆಯನ್ನು ನೋಡಿಕೊಂಡು ಇರಲಿಕ್ಕೆ ಹೇಳುವುದೇ ಅವನ ವಾಡಿಕೆ. ಒಳಗೆ ಹೋದಲ್ಲಿ 'ಕೇಸು' ತುಸು ಹರ್ಷದ್ದೇ ಆಗಿದ್ದರೆ, ಹೊರಗೆ ನಿಂತ ಹುಡುಗರ ತಾಳ್ಮೆಯು ತಳ ಸವೆದು ಹೋಗುತ್ತಿತ್ತು. ಅವರು ಗಳಿಸಿದ ನಾಲ್ಕು ದುಡ್ಡು ತುಸು ತುಟ್ಟಿಯೇ ಬೀಳುತ್ತಿತ್ತು.

ಹೀಗೆ ಒಂಟಿ ಸಂಚಾರದ ಮೂಲಕ ಫಿಟ್ಝ್‌ಪಿಯರ್ಸನಿಗೆ ಈ ರಾತ್ರೆಯ ಕರೆಗಳು ಕಡುಬೇಸರದ್ದೆನಿಸುತ್ತಿದ್ದವು. ಮತ್ತು ಪ್ರಕೃತಿಯ ಒಂದು ವಿಕಟ ವ್ಯಂಗ್ಯವೋ ಏನೋ, ವಿಶೇಷ ದುರ್ಗಮವೂ, ನಿರ್ಜನವೂ ಆದ ಸ್ಥಳದಲ್ಲಿಯ ಪ್ರಸೂತಿಯ ಕೇಸು ತಪ್ಪದೆ ರಾತ್ರೆಯಲ್ಲಿಯೇ ಒದಗಿಬರುತ್ತಿತ್ತು. ಈ ಡಾಕ್ಟರನು ಇತ್ತಿಚಿನ ಹಲವು ವರ್ಷ ಪಟ್ಟಣಿಗನಾಗಿ ಕಳೆದಿದ್ದುದರಿಂದ, ಮಲೆನಾಡಿನ ಕಾಡುಹಾದಿಯು, ಈ ನಡುರಾತ್ರಿಯ ಸಂಚಾರವೆಂದರೆ ಹಗೆಯಾಗಿ ಕಾಣುತ್ತಿದ್ದನು. ಅಲ್ಲದೆ, ಅವನು ಲಗಾಮುಗಳ ಮಟ್ಟಿಗೆ ಅಷ್ಟೇನು ಕುಶಲ ಹಸ್ತನಿದ್ದಿಲ್ಲ. ಯಾವುದಾದರೊಂದು ಬೆಟ್ಟದ ಆಳದಲ್ಲಿ ಅವನಿಗೆ ಒಂದು ಅಪಘಾತವೇ ಆದಲ್ಲಿ ಒಂಟಿಯಾಗಿದ್ದ ಕಾರಣ ಅದು ಅವನಿಗೆ ಮೃತ್ಯುವಾಗಿಯೆ ಪರಿಣಮಿಸಬಹುದು —ಎಂಬ ವಿಚಾರ ಅವನಿಗೆ ಆಗಾಗ್ಗೆ ಮನಸ್ಸಿನಲ್ಲಿ ಸುಳಿದುಹೋಗುತ್ತಿತ್ತು. ಆದ್ದರಿಂದ ಅವನು ಹಾದಿಯಲ್ಲಿ ಸಿಕ್ಕ ಒಬ್ಬ ಹಳ್ಳಿಗನನ್ನೋ, ಹುಡುಗನನ್ನೊ ಸಾರೋಟು ಸವಾರಿಯ ಸೊಗಸಿನ ಆಮಿಷ ಒಡ್ಡಿ ಜತೆಯಲ್ಲಿ ಒಯ್ಯುತ್ತಿದ್ದನು — ಪ್ರವಾಸದಲ್ಲಿ ಸಂಗಾತಿಯಾಗಲು, ಮತ್ತು ತಲುಪಿದ ತಾಣದಲ್ಲಿ ಗೇಟುಗಳನ್ನು ತೆರೆದು ಕೊಡಲು.

ಮೇಲೆ ಹೇಳಿದ ರಾತ್ರೆಗೆ ಡಾಕ್ಟರನು ತನ್ನ ದಾರಿಯಲ್ಲಿ ಹೊರಟಿದ್ದನು. ಆಗ

ಅವನ ಗಾಡಿಯ ದೀಪಗಳ ಬೆಳಕು ವಿಂಟರಬೋರ್ನನ ಚಿಂತಾಕ್ರಾಂತ ಆಕೃತಿಯ ಮೇಲೆ ಬಿದ್ದಿತು. ಆತ ಬಾಳಿನಲ್ಲಿ ಬೇರೆ ಗುರಿಯೇ ಇಲ್ಲವೆಂಬಂತೆ, ನಿಧಾನವಾಗಿ ನಡೆದುಹೋಗುತ್ತಿದ್ದ. ಸಾಮಾನ್ಯವಾಗಿ ಸಿಗುವದಕ್ಕಿಂತ ವಿಂಟರಬೋರ್ನ ಮೆಲ್ಲಗತಿಯ ಸಂಗಾತಿಯಾಗಿದ್ದ. ಆದ್ದರಿಂದ ಕೂಡಲೇ ಗಾಡಿಯನ್ನು ತಡೆದು ಡಾಕ್ಟರನು ಕೇಳಿದ, — ಆ ಸೊಗಸಾದ ರಾತ್ರಿಯಲ್ಲಿ ಅಡವಿಯೊಳಗಿಂದ ಗಾಡಿಯಲ್ಲಿ ಸವಾರಿ ಮಾಡಲು ವಿಂಟರಬೋರ್ನ ಬಯಸಬಹುದೇ ?

ಡಾಕ್ಟರನ ಗೆಳೆತನದಿಂದ ಜೈಲ್ಸನಿಗೆ ಆಶ್ಚರ್ಯವೆನಿಸಿತು. ತನ್ನದೇನೂ ಅಡ್ಡಿ ಇಲ್ಲವೆಂದನು. ಮತ್ತು ಫಿಟ್ಜಪಿಯರ್ಸನ ಪಕ್ಕದಲ್ಲಿ, ಟಾಂಗಾದಲ್ಲಿ ಹತ್ತಿ, ಕುಳಿತನು.

ಅವರು ಕಪ್ಪಗಿನ ಟೊಂಗೆಗಳ ಅಡಿಯಲ್ಲಿ ಮುಂದರಿದನು. ಆ ಟೊಂಗೆಗಳು ತಾರೆಗಳ ಪಟಕ್ಕೆ ಜಾಲರಿ ಹಚ್ಚಿದಂತೆ ಇತ್ತು. ಅಡ್ಡ ಹಾಯ್ದ ಟೊಂಗೆಯತ್ತ ಕಣ್ಣೆತ್ತಿ ನೋಡಿದಾಗ ಅದರ ಮೇಲೆ ದೊಡ್ಡ ಕಪ್ಪೆಗಳಂತೆ ಕಾಣುವ ವಸ್ತುಗಳು ಅಲ್ಲಲ್ಲಿ ಅಡ್ಡ ಬಿದ್ದುಕೊಂಡಿದ್ದು ಕಾಣುತ್ತಿತ್ತು. ಅವು ಫೀಸಂಟ ಹಕ್ಕಿಗಳು. ರಾತ್ರಿಗೆ ನಿದ್ದೆಗಾಗಿ ಮರವನ್ನು ಸೇರಿವೆ ಎಂದು ಜೈಲ್ಸ ವಿವರಿಸಿದನು. ಆಗಾಗ್ಗೆ ತುಪಾಕಿ ಸುಟ್ಟ ಸದ್ದು ಕೇಳಿ ಬರುತ್ತಿತ್ತು. ಆಗ ತನ್ನಂತೆ ಇತರರಿಗೂ ಈ ಕಪ್ಪೆ ಆಕಾರಗಳು ನಿಜವಾಗಿಯೂ ಏನೆಂಬುದು ಗೊತ್ತಿದೆಯೆಂಬುವದನ್ನು ಗುಂಡಿನ ಗದ್ದಲ ನೆನಪಿಗೆ ತಂದುಕೊಡುತ್ತಿತ್ತು.

ಈ ನಡುವೆ ಡಾಕ್ಟರನು ಎಂದಿನಿಂದಲೋ ಹೇಳಬೇಕೆಂದು ಮಾಡಿಕೊಂಡ ಮಾತನ್ನು ಹೇಳಿದನು.

‘ ಆ ನೆರೆಹೊರೆಯಲ್ಲಿ ಒಬ್ಬ ಎಳೆ ಹರಯದ ಹೆಣ್ಣುಮಗಳಿದ್ದಾಳೆಯೇ—ಬಹಳ ಆಕರ್ಷಕ ಹುಡುಗಿ—ಕೊರಳಿಗೆ ಸಣ್ಣ ಬಿಳಿಯ ಪಟ್ಟಿ ಸುತ್ತಿಕೊಳ್ಳುವ, ಕೈಚೀಲಗಳಂಚಿಗೆ ಬಿಳಿಯ ತುಪ್ಪಳವಿರುವ ಹುಡುಗಿ ?’

ಜೈಲ್ಸನಿಗೆ ಆ ಕ್ಷಣವೇ ಗೊತ್ತಾಯಿತು. ಇದೆಲ್ಲ ವಿವರಗಳಲ್ಲಿ ಒಡಮೂಡಿದ ವ್ಯಕ್ತಿ ಗ್ರೇಸಳೆಂದು. ಡಾಕ್ಟರನು ಅವಳ ಕಡೆಗೆ ಕಣ್ಣು ಪಿಳುಕಿಸಿ ನೋಡುತ್ತಿದ್ದುದನ್ನು ಆತನು ಕಂಡು ಹಿಡಿದಿದ್ದನು. ಪರಿಸ್ಥಿತಿಯಿಂದ ಹುಟ್ಟಿದ ಮುಂಜಾಗ್ರತೆಯ ಗಾಂಭೀರ್ಯದಲ್ಲಿ ಆತ ನೇರವಾದ ಉತ್ತರವನ್ನು ತಪ್ಪಿಸಿಕೊಳ್ಳುತ್ತ ಅಂದನು, ‘ ಆ ದಿನ ಒಬ್ಬ ತರುಣಿ ಶ್ರೀಮತಿ ಚಾರ್ಮಂದಳೊಡನೆ ಮಾತನಾಡುತ್ತಿದ್ದಾಗ ಕಂಡಿದ್ದೆ. ಇದು ಅವಳೆ ಇರಬಹುದು.’

‘ ಆಗಿರಬಹುದು ’ ಫಿಟ್ಜಪಿಯರ್ಸ ಅಂದ, ‘ ಅವಳು ಒಳ್ಳೆ ಶಿಷ್ಟಳಾಗಿ ಕಾಣುತ್ತಾಳೆ — ಅವಳೆಂದರೆ ನಾನು ಈಗ ಹೇಳಿದವಳು. ಅವಳು ಹಿಂಟಾಕಿನ ಕಾಯಂ ನಿವಾಸಿ ಆಗಿರಲಿಲ್ಲ. ಹಾಗೆ ಅವಳು ಕಾಣೋದು ಇಲ್ಲ.’

‘ ಅವಳು ಹಿಂಟಾಕ್ ವಾಡೆಯಲ್ಲಿ ವಾಸಿಸುವುದಿಲ್ಲವೆ ’

‘ ಇಲ್ಲ. ಅದು ಮುಚ್ಚಿದೆ.’

'ಹಾಗಿದ್ದರೆ ಆಕೆ ಯಾರದಾದರೂ ಗುಡಿಸಲಿನಲ್ಲಿ ಉಳಿದಿರಬೇಕು — ಯಾವದೇ ಹೊಲ ಮನೆಯಲ್ಲಿ.'

'ಛೇ ಇಲ್ಲ, ನೀನು ತಪ್ಪಿದಿ. ಅವಳು ತೀರಬೇರೆ ಮಾದರಿಯ ಹೆಣ್ಣು.' ಎಂದು ಕವನ ಒಂದನ್ನು ಹಾಡಲಾರಂಭಿಸಿದ. (ಅದು ಶೆಲ್ಲಿ ಕವಿಯ 'ಇಸ್ಲಾಮಿನ ಬಂಡು' ಎಂಬ ಕಾವ್ಯದ ಎರಡನೆಯ ಅಧ್ಯಾಯದ ೨೭ನೆಯ ನುಡಿ).

ಬುವಿಯೊಳಾಡಿದವಳು ದಿವ್ಯದೀಪ್ತಿಯ ಮೂರ್ತಿ
ಶಕ್ತಿ, — ತನ್ಮಯ ಸುತ್ತ ವಸ್ತು ವಿಷಯಗಳಿಂದ
ತನ್ನ ಲಘು ಲಲಿತತೆಗೆ ಪಡೆಯದಾವುದು ಸ್ಫೂರ್ತಿ
ಉಷೆಯ ದವಬಿಂದುಮಯ ಉಜ್ವಲದ ಮುಗಿಲಿಂದ
ದೂರದ ಮರುಸ್ಥಲವ ಪೋಷಿಸಲು, ಬಾಂಬಯಲ
ಬಟ್ಟೆಗೆಟ್ಟದ ಶೂನ್ಯ ನೀಲಿಮೆಯಲಲೆದಲೆವ
ತೆರದಿ ತೋರಿದಳಿನ್ನ ಸನಿಯ ಬೆಳೆಯುತ ಬಹುಲ
ಚಲುವಿನೊಂದಿಗೆ, ಅಮರಸ್ವಪ್ನದ ಪ್ರಭಾ — ಛಾಯೆ
ಯಂದ ನಡೆವಳು, ಮಲಗೆ ಚಂಡಮಾರುತ, ಮಾಯೆ
ಚಲಿಸುವಳು ಬಾಳಕಾರ್ಪೊನಲ ಉಕ್ಕುವ ತೆರೆಯೆ

ಈ ಸಾಲುಗಳ ಮೋಹಿನಿಯು, ಫಿಟ್ಝಪಿಯರ್ಸನ ಮೇಲೆ ತಾನು ಕಳೆದುಕೊಂಡ ಕೆಳದಿಯು ಬೀರಿದ ಸಂಮೋಹಿನಿಯ ಫಲವೆಂದು ವಿಂಟರಬೋರ್ನನಿಗೆ ತೋರಿತು.

'ರಾಯರೆ, ನೀವು ಅವಳ ಪ್ರೇಮಪಾಶದಲ್ಲಿ ಆಳವಾಗಿ ಸಿಲುಕಿ ಬಿದ್ದಂತೆ ಕಾಣುತ್ತದೆ.' ಎದೆಬೇನೆಯ ವಿಕಾರವಾದಂತೆ ನೋವನ್ನು ಅನಭವಿಸುತ್ತ ಅವನೆಂದನು. ಈ ಬಗ್ಗೆ ಮಾತಾಡುವಾಗ ಗ್ರೇಸಳ ಹೆಸರನ್ನು ಎತ್ತಲೇ ಬಾರದೆಂದು ಆತ ನಿರ್ಧರಿಸಿದಂತಿತ್ತು.

'ಛೇ ಇಲ್ಲ. ವಿಂಟರಬೋರ್ನ, ನಾನು ಹಾಗೇನಾಗಿಲ್ಲ. ಒಂದು ಸ್ಥಳದ ಏಕಾಂತದಿಂದಾಗಿ ಯಾರ ಸಂಪರ್ಕವೂ ಇಲ್ಲದೆ ನಡುಗಡ್ಡೆಯಂತೆ ಏಕಾಕಿಯಾಗಿ ಬಾಳುವ ನನ್ನಂಥ ಜನ ವಿದ್ಯುತ್ ಪ್ರೇರಣೆಯಿಂದ ತುಂಬಿ ಕಟ್ಟಿ ನಿಂತ ಲಿಡನಕೋಶದಂತೆ ಆಗಿ ಬಿಡುತ್ತೇವೆ. ನಮ್ಮ ಭಾವರಸ ತುಳುಕಿ ಹರಿಯಲಿಕ್ಕೆ ಯೋಗ್ಯವಾಹಕದ ಕೊರತೆ ಇರುತ್ತದೆ. ಮಾನವನ ಪ್ರೇಮವೆಂಬುದು ಆಂತರಿಕ ಆತ್ಮನಿಷ್ಠ ಸಂಗತಿ — ಅದು ಮಾನವನ ಸತ್ಯಸಾರ — ವಿಚಾರವೇತ್ತ ಸ್ಪಿನೋಝಾ ಅಂದಂತೆ, 'ಇಪ್ಸಾಹೊಮಿನಿಸ್ ಎಸೆನ್ಸಿಯಾ' ಅದು ಒಂದು ವಿಚಾರವನ್ನೊಳಗೊಂಡ ಆನಂದ. ಅದನ್ನು ನಾವು ನಮ್ಮ ದೃಷ್ಟಿಪಥದಲ್ಲಿ ಬರುವ ಯಾವದೊಂದು ಯೋಗ್ಯ ವಸ್ತು ವಿಷಯದ ಮೇಲೆ ಆರೋಪಿಸುತ್ತೇವೆ. ಮಳೆಬಿಲ್ಲಿನ ಬಿಂಬ ಆರೋಪಿತವಾಗುವದಿಲ್ಲವೆ, ಓಕ್, ಎಶ್ ಅಥವಾ ಎಲ್ಮ ಮರದ ಮೇಲೆ!, ಹಾಗೆ. ಆದ್ದರಿಂದ ನನಗೆ ಅಂದು ಕಂಡು ಬಂದ ತರುಣಿಯು

ಬದಲು ಬೇರೆ ಯಾವದೇ ಎಳೆಯ ಹೆಣ್ಣು ಕಣ್ಣಿಗೆ ಬಿದ್ದಿದ್ದರೂ, ನನಗೆ ಅವಳಲ್ಲಿಯೂ ಇವಳಲ್ಲಿಯಷ್ಟೇ ಆಸಕ್ತಿ ತೋರುತ್ತಿತ್ತು ಮತ್ತು ಇವಳ ಕುರಿತು ಹೇಗೋ ಅವಳ ಕುರಿತೂ ಶೆಲ್ಲಿಯ ಇವೆ ಕಾವ್ಯಪಂಕ್ತಿಗಳನ್ನು ಉದಹರಿಸುತ್ತಿದ್ದೆನು. ಅಂಥ ದೆಸೆಗೆಟ್ಟ ಪರಿಸ್ಥಿತಿಯ ದಾಸ್ಯ ನಮ್ಮದು.'

'ಇರಲಿ ಬಿಡಿ, ನಮ್ಮ ಇತ್ತಕಡೆಯ ಈ ಭಾಗದಲ್ಲಿ ಇದಕ್ಕೇ ಪ್ರೀತಿಯಲ್ಲಿ ಬೀಳುವುದು ಎಂದು ಹೇಳುತ್ತಾರೆ', ವಿಂಟರಬೋರ್ನ ಅಂದನು.

'ನೀನು ಅನ್ನುವದು ಸರಿ. ನಾನು ಪ್ರೀತಿಯಲ್ಲಿ ಬಿದ್ದದ್ದು ನನ್ನ ತಲೆಯೊಳಗಿನದೆ ಆದ ಯಾವದೋ ಒಂದು ಸಂಗತಿಯೊಂದಿಗೆ ಹೊರತು ಹೊರಗಿನ ಒಂದು ಸಂಗತಿಗಾಗಿ ಅಲ್ಲ, ಎಂಬುದನ್ನು ನೀನು ಒಪ್ಪಿದರೆ ... '

'ಹಳ್ಳಿಯ ಡಾಕ್ಟರನ ಕರ್ತವ್ಯಗಳಲ್ಲಿ, ಹೀಗೆ ಸಂಗತಿಗಳ ಕುರಿತು ಅಭಿಪ್ರಾಯ ಅರಿತುಕೊಳ್ಳುವುದೂ ಒಂದು ಭಾಗವೋ?' ವಿಂಟರಬೋರ್ನನು ಸಾಕ್ರೆಟೀಸನ ತರ್ಕಪದ್ಧತಿಯನ್ನು ಸ್ವೀಕರಿಸಿ ತೀರ ಸರಳತನವನ್ನು ಚೆನ್ನಾಗಿಯೇ ವಹಿಸಿ ಕೇಳಿದಾಗ ಫಿಟ್ಝಪಿಯರ್ಸ ಕೂಡಲೆ ಉತ್ತರವಿತ್ತನು.

'ಛೇ ಇಲ್ಲ. ವಿಂಟರಬೋರ್ನ, ಸತ್ಯಸಂಗತಿಯೆಂದರೆ, ಇಂಥ ಸ್ಥಳಗಳಲ್ಲಿ ವೈದ್ಯಕೀಯ ವ್ಯವಸಾಯವು ಹೆಬ್ಬೆರಳ ಗೆರೆ ಎಳೆದಷ್ಟು ಸುಲಭ! ಕಹಿಯಾದ ಒಂದು ಮದ್ದು ಈ ಮುದುಕಿಗೂ ಆ ಮುದುಕಿಗೂ ಸೀಸೆ ತುಂಬಿಕೊಡುವುದು; ಎಷ್ಟೆಷ್ಟು ಕಹಿ ಹೆಚ್ಚೋ ಅಷ್ಟಷ್ಟು ಗುಣ ಹೆಚ್ಚು! ಇಂಥ ಮದ್ದು ಕೆಲವು ರೂಢಿಬಿದ್ದ ಮಿಶ್ರಣ ವಿವರಣೆಗಳಿಂದ ತಯಾರಿಸುವುದು. ಎಂದಾದರೊಮ್ಮೆ ಪ್ರಸೂತಿಯ ಸಮಯ ಹಾಜರು ಇರುವುದು. ಮಂದಿ ಇಷ್ಟು ಗಟ್ಟಿಮುಟ್ಟಾಗಿ ಆರೋಗ್ಯವುಳ್ಳವರಿರುತ್ತಾರೆ. ಡಾಕ್ಟರನು ಬರೆ ಹತ್ತಿರ ಹಾಜರು ಇದ್ದರೆ ತೀರಿತು. ಹಾಗೆಯೇ ಆಗೊಮ್ಮೆ ಈಗೊಮ್ಮೆ ಬಾವುಕೊಯ್ಯಲಿಕ್ಕೆ ಒಂದು ಚಾನ್ಸು. ಇಷ್ಟೇ ಇಲ್ಲಿಯ ವ್ಯವಸಾಯದ ವಾಡಿಕೆ. ಇಲ್ಲಿ ಇರುವುದಕ್ಕಿಂತ ಹೆಚ್ಚಿನ ಉಪಕರಣ ಸಾಧನಗಳಿಲ್ಲದೆ ಪ್ರಯೋಗ, ಸಂಶೋಧನೆಗಳನ್ನು ಸಾಗಿಸುವುದು ಶಕ್ಯವಿಲ್ಲ. ಆದರೂ ನಾನು ಕೆಲವೊಂದನ್ನು ಯತ್ನಿಸಿದ್ದುಂಟು.'

ಜೈಲ್ಸನು ವಿಷಯದ ಈ ಹೊಳಹನ್ನು ಹೊಗಲಿಲ್ಲ. ಅವನಿಗೆ ಒಡೆದೆದ್ದು ಕಂಡದ್ದು ಗ್ರೇಸಳ ಹಾಗೂ ಫಿಟ್ಝಪಿಯರ್ಸ್‌ನ ರೀತಿಗಳಲ್ಲಿಯ ಸಾಮ್ಯ. ಇಬ್ಬರೂ ತಮಗೆ ಇಷ್ಟವಾದ, ತನ್ಮಯಗೊಳಿಸುವ ವಿಷಯ ಪ್ರತಿಪಾದನೆಯಲ್ಲಿ ಒಮ್ಮೆ ಹಾದಿ ತಪ್ಪಿ ಹೊಕ್ಕರೆ ತೀರಿತು. ಅದು ತನ್ನಂಥವನಿಗೆ ತೀರ ಹೊರಗಿನದೆಂಬ ಸಂಗತಿಯನ್ನು ಪೂರ್ತಿ ಮರೆಯುತ್ತಾರೆ, — ಎಂಬುದು ಇಂಥ ಘಟನೆಗಳಿಂದ ಕಂಡು ಬರುತ್ತಿತ್ತು.

ಹಿಂದಿರುಗಿ ಬರುವತನಕವೂ, ಮುಂದೆ ಆ ಡಾಕ್ಟರ್ ಮತ್ತು ಜೈಲ್ಸನ ನಡುವೆ ಗ್ರೇಸಳಿಗೆ ಸಂಬಂಧಪಟ್ಟು ಮತ್ತೇನೂ ಮಾತುಕತೆ ಬೆಳೆಯಲಿಲ್ಲ. ಅವರು ಹಾದಿಯ ಪಕ್ಕದ ಒಂದು ಖಾನಾವಳಿಯಲ್ಲಿ ಬ್ರಾಂದಿ — ಸಿಡರಿನ ಒಂದು ಗ್ಲಾಸು ಬಗ್ಗಿಸಲಿಕ್ಕೆಂದು ನಿಂತಿದ್ದರು. ಅಲ್ಲಿಂದ ಮತ್ತೆ ಮುಂದೆ ಹೊರಟಾಗ, ಈಗ ಆ ಸರಾಯಿಯಿಂದ ಕೊಂಚ

ಕಾವೇರಿದ ಮೂಲಕವೋ ಏನೋ, ಆ ವಿಷಯವನ್ನು ಮತ್ತೆ ಎತ್ತಿಕೊಂಡು ಫಿಟ್ಜಿಪಿಯರ್ಸ್ ಅಂದನು, 'ಆ ತರುಣ ಹೆಣ್ಣು ಯಾರೆಂಬುದನ್ನು ತಿಳಿಯಲು ನನಗೆ ಬಲವಾದ ಇಚ್ಛೆ.'

'ಅವಳು ಮಳೆ ಬಿಲ್ಲು ಮೂಡುವ ಬರೆ ಮರವಾಗಿದ್ದರೆ ನಿಮಗೇನು ಅಭ್ಯಂತರ ? ಅವಳ ಗೊಡವೆ ಏಕೆ ?'

'ಓಹೋ, ಅದೂ ಸರಿ.'

'ರಾಯರೆ, ನಿಮಗೆ ಹೆಂಡತಿ ಇಲ್ಲವೇ ?'

'ನನಗೆ ಹೆಂಡತಿಯಿಲ್ಲ. ಅಂಥ ಒಂದು ವಿಚಾರವೂ ಇಲ್ಲ. ಮದುವೆಯಾಗಿ ಹಿಂಟಾಕದಲ್ಲಿ ಬೀಡು ಬಿಡುವುದಕ್ಕಿಂತ ಹೆಚ್ಚಿನ ಹಂಬಲ ನನ್ನದು. ಅಂದರೆ ವೈದ್ಯನು ಮದುವೆ ಆಗುವುದು ವಿಹಿತವೇ ಸರಿ. ಮತ್ತು ಗಾಳಿ, ಮನೆಯನ್ನು ರುಂಯ್ ಎಂದು ಸುತ್ತುವಾಗ, ಮಳೆ ಮತ್ತು ಮರದ ಟೊಂಗೆಗಳು ಅದಕ್ಕೆ ಬಡಿಯುವಾಗ ಮದುವೆ ಆಗಿರುವುದೂ ಒಂದು ಸೊಗಸಿನ ಸಂಗತಿಯೇ. ಆದರೆ ಆ ಸೌಥನು ಸತ್ತ ಮೂಲಕ ನಿನ್ನ ಜೀವಾವಧಿಯ ಆಸ್ತಿಯ ಹಕ್ಕುಗಳನ್ನು ನೀನು ಕಳೆದುಕೊಂಡಿಯೆಂದು ಕೇಳಿದೆ. ನಿಜವೇ ?

'ಹೌದು ಕಳೆದುಕೊಂಡೆ. ಆ ಮೂಲಕ ನಾನು ಒಂದಕ್ಕಿಂತ ಹೆಚ್ಚು ಬಗೆಯಾಗಿ ನಷ್ಟ ಮಾಡಿಕೊಂಡೆ.'

ಈಗ ಅವರು ಹಿಂಟಾಕ ಓಣಿಯ ಅಥವಾ ಕೇರಿಯ (ಹಾದಿಯ ಮುಕ್ಕಾಲು ಪಾಲು ಬದಿಗಳು ಕಾನುಗಳಿಂದ ತೋಟಗಳಿಂದ ತುಂಬಿದ್ದು ಕೇರಿಯೋ ಓಣಿಯೋ ಆಗುವಂತಿದ್ದರೆ !) ಮೇಲ್ತುದಿಯನ್ನು ತಲುಪಿದ್ದರು. ಅಲ್ಲಿ ಮೊದಲು ಹಾಯು ಬೇಕಾದ ಮನೆಯೆ ಮೆಲಬರಿಯದು. ಹಾದಿಯ ಉದ್ದವನ್ನೂ ಇದುರಿಸುವ ಒಂದು ಮಲಗುವ ಕೋಣೆಯ ಕಿಟಕಿಯಲ್ಲಿ ಒಂದು ದೀಪವು ಉರಿಯುತ್ತಿತ್ತು. ವಿಂಟರಬೋರ್ನ್ ಅತ್ತ ಕಣ್ಣು ಹಾಯಿಸಿದನು. ಇನ್ನು ಏನೋ ಬರಲಿದೆಯೆಂಬುದನ್ನು ತಿಳಿದನು. ಗ್ರೇಸಳ ಕುರಿತು ತಿಳುವಳಿಕೆ ಕೊಡಬಾರದೆಂದು ಆತ ಡಾಕ್ಟರನ ವಿಚಾರಣೆಗೆ ಉತ್ತರ ಕೊಡದೆ ತಡೆದಿದ್ದನು. ಆದರೆ ಗಾಳಿಯನ್ನು ಮುಷ್ಟಿಯಲ್ಲಿ ಯಾರು ಕಟ್ಟಿದ್ದುಂಟು ? ನೀರನ್ನು ಬಟ್ಟೆಯಲ್ಲಿ ಯಾರು ಹಿಡಿದಿಟ್ಟಿದ್ದುಂಟು ? ಆಗಲಿರುವುದನ್ನು ಆತ ಹೋಗಲಾಡಿಸ ಲಾರನು. ಅಂದಾಗ ಆತ ಹಿಂದೆಯೆ ಬಾಯಿಬಿಚ್ಚಿ ಮಾತಾಡಬಹುದಿತ್ತು. ಅವರು ಆ ಮನೆಯ ಹತ್ತಿರ ಬಂದೊಡನೆ ಕಿಟಕಿಯ ಎರಡು ಪರದೆಗಳನ್ನು ಜಗ್ಗಿ ಒಟ್ಟಿಗೆ ಜೋಡಿಸು ತ್ತಿರುವ ಗ್ರೇಸಳ ಆಕೃತಿ ಸ್ಪಷ್ಟವಾಗಿ ಕಾಣಿಸಿತು.

'ಇದೇನು ? ಅಲ್ಲಿದ್ದಾಳೆ ಆಕೆ.' ಫಿಟ್ಜಿಪಿಯರ್ಸ್ ಅಂದನು. 'ಅಲ್ಲಿ ಇವಳು ಬಂದಿದ್ದಾದರೂ ಹೇಗೆ ?'

'ತೀರಾ ಸ್ವಾಭಾವಿಕ ರೀತಿಯಲ್ಲಿ. ಅದು ಅವಳ ಮನೆ, ಶ್ರೀ ಮೆಲಬರಿ ಅವಳ ತಂದೆ.'

'ನಿಜವೋ, ನಿಜವೋ, ನಿಜವೋ? ಇಂಥ ಮಗಳನ್ನು ಅವನು ಪಡೆದದ್ದಾದರೂ ಹೇಗೆ?'

'ಹಣವು ಏನೂ ಮಾಡಲಾರದೇ?' ವಿಂಟರಬೋರ್ನ ನಿರ್ಭಾವವಾಗಿ ನಕ್ಕು ಹೇಳಿದ, 'ನಿಮ್ಮಲ್ಲಿ ಅದರ ಪ್ರಯೋಗ ಮಾಡಿನೋಡಲು ಯೋಗ್ಯ ಕಚ್ಚಾ ಸರಕು ಬಿದ್ದಿದ್ದಾದರೆ? ಹಿಂಟಾಕ್ ಹಳ್ಳಿಯ ಒಬ್ಬ ಹುಡುಗಿಯನ್ನು ಮನೆಯಿಂದ ಹೊರಡಿಸಿ, ಯೋಗ್ಯ ಶಿಕ್ಷಣದಲ್ಲಿ ಇರಿಸಿದರೆ, ಅವಳಿಗೆ ಆರಂಭದಿಂದಲೇ ಒಳ್ಳೆಯ ಮಿದುಳು ಒಳ್ಳೆಯ ರೂಪು ಇದ್ದರೆ, ಯಾವುದೇ ನವ ಯುವತಿಯಂತೆಯೇ ಸುಸಂಸ್ಕೃತಗಳಾಗ ಬಾರದೇಕೆ?'

'ಏಕೆ ಆಗಬಾರದು?' ತುಸು ಸಚಿಂತ ನಿರಾಶೆಯ ಭಾವದಿಂದಲೆ ಡಾಕ್ಟರನು ಪುಟುಗುಟ್ಟಿದನು. 'ಇಷ್ಟೇ, ನಾನು ಅವಳಿಗೆ ಇಂಥ ಮೂಲವಿದೆಯೆಂದು ಕಲ್ಪಿಸಿದ್ದಿಲ್ಲ.'

'ಅಂದರೆ ಈಗ ಅದು ಗೊತ್ತಾದ ಮೇಲೆ, ಅವಳ ಕುರಿತು ನಿಮ್ಮ ಭಾವನೆ ಇಂಚು ಎರಡಿಂಚು ತಗ್ಗಿತು, ಅಲ್ಲವೇ?' ಹೀಗೆ ಕೇಳುವಾಗ ವಿಂಟರಬೋರ್ನ ದನಿಯಲ್ಲಿ ಒಂದು ಸಣ್ಣ ನಡುಕವಿತ್ತು.

'ಹಾಗೇ ನನ್ನ ಭಾವನೆ ಈ ಮೂಲಕ ಕಡಮೆ ಆಗಿದೆಯೆಂದು ನನಗೇನೂ ಅನಿಸು ವುದಿಲ್ಲ, ಇಷ್ಟೇ. ಆರಂಭಕ್ಕೆ ಅದು ಒಮ್ಮೆಲೆ ಮೋರೆಗೆ ಹೊಡೆದಂತೆ ಆನಿಸಿತು. ನಾನು ಅವಳ ಪಕ್ಷಕ್ಕೆ ಅಂಟಿಕೊಳ್ಳುವವನೇ. ಅವಳು ಮೋಹಕಳಿದ್ದಾಳೆ — ಇಂಚು ಇಂಚಿಗೂ ಮೋಹಕತೆ ತುಂಬಿದೆ.'

'ಹೌದು, ಸರಿ. ಹಾಗೆಯೇ ಆಕೆ ಇದ್ದಾಳೆ...ಆದರೆ ನನಗೆ ಮಾತ್ರ ಅಲ್ಲ.'

ಆ ಮಿತಭಾಷಿಯಾದ, ಒಮ್ಮೆಲೆ ಮೌನ ತಳೆದ ಮರಗೆಲಸದವನ ಆ ಸಂದಿಗ್ಧ ಅಂಬೋಣದಿಂದ ಡಾ. ಫಿಟ್ಝಪಿಯರ್ಸ್ ಇಷ್ಟೇ ಅನುಮಾನ ತೆಗೆದನು. ಜೈಲ್ಸ ಮೆಲಬರಿಯ ಮಗಳನ್ನು ತಿರಸ್ಕರಿಸುತ್ತಾನೆ. ಆಕೆ ಅವನೊಂದಿಗೆ ನಡೆದುಕೊಳ್ಳು ವುದರಲ್ಲಿ ಏನೋ ದರ್ಪ ತೋರಿಸಿದ್ದಿರಬೇಕು. ಆದ್ದರಿಂದಲೇ ಆತ ಅವಳ ಹೆಸರನ್ನು ತನ್ನಿಂದ ಬಚ್ಚಿಟ್ಟದ್ದು. ಆದರೆ ಈ ಅನುಮಾನ ಅವಳ ಬಗೆಗೆ ಅವನ ಮೆಚ್ಚಿಗೆಯನ್ನು ಏನೂ ಕುಗ್ಗಿಸಲಿಲ್ಲ.

೧೮

ಕಿಟಕಿಯ ಪರದೆಗಳನ್ನು ಜಗ್ಗುವಾಗ ಗ್ರೇಸ ತನ್ನನ್ನು ಕಾಣಿಸಿಕೊಂಡಿದ್ದು ಆ ಮನೆ ಯಲ್ಲಿ ಆ ದಿನ ಒದಗಿದ ಒಂದು ದುರ್ಘಟನೆಯಿಂದ. ಅದು ಬೇರೆ ಏನೂ ಅಲ್ಲ, ಆಲಿವರ ಅಜ್ಜಿ ಬೇನೆಬಿದ್ದಿದ್ದಳು. ಆ ಹೆಂಗಸು ತನ್ನ ಜೀವಮಾನದಲ್ಲಿಯೇ ಹಾಗೆ ಹಾಸುಗೆ ಹಿಡಿದು

ಬಿದ್ದಿದ್ದಿಲ್ಲ. ನಿರಂತರವಾದ ಆರೋಗ್ಯದ ದೀರ್ಘಾವಧಿಯ ಬದುಕಿನವರೆಗೆ ಹಾಸಿಗೆಯಲ್ಲಿ ಬಿದ್ದಿರುವುದೆಂದರೆ, ಸಾವಿನಷ್ಟೇ ಹೇಯವೆನಿಸುತ್ತದೆ. ಆಲಿವರಳಿಗೂ ಹಾಗೆಯೇ ಅನಿಸುತ್ತಿತ್ತು. ಆದ್ದರಿಂದ ನೆಲಕ್ಕೆ ಕುಸಿದು ಬೀಳುವತನಕವೂ ಆಕೆ ನಡೆದಾಡುತ್ತಲೆ ಇದ್ದಳು. ಆವರೆಗೆ ಅವಳು ಒಂದು ದಿನವೂ ಕೆಲಸದಿಂದ ಸೂಟಿ ಪಡೆದಿದ್ದಿಲ್ಲ. ಮನೆಯಂಗಳದಲ್ಲಿ ಗೂಟದ ಮಾಳದಲ್ಲಿ ಸ್ವತಂತ್ರವಾಗಿ ನಡೆದಾಡುವ ಅಜ್ಜಿ ಇಂದು ಕಾಯಿಲೆಯಿಂದ ಪೂರ್ತಿ ಬೇರೆ ರೂಪತಾಳಿದ್ದಳು. ಎಷ್ಟೇ ಕಾಯಿಲೆ ಬಿದ್ದಿದ್ದರೂ ಅವಳು ಒಂದು ವಿಷಯಕ್ಕೆ ದೃಢವಾಗಿದ್ದಳು. ಏನೇ ಬರಲಿ ಆಕೆ ಡಾಕ್ಟರನನ್ನು ಮತ್ತೆ ಕಾಣಲು ಸಿದ್ಧಳಿದ್ದಿಲ್ಲ—ಡಾಕ್ಟರನೆಂದರೆ ಫಿಟ್ಝ್ ಪಿಯರ್ಸನನ್ನು.

ಗ್ರೇಸಳು ಕಾಣಿಸಿಕೊಂಡ ಕೋಣೆ ಅವಳದಾಗಿದ್ದಿಲ್ಲ. ಅದು ಈ ಮುದುಕಿಯದಾಗಿತ್ತು. ಅವಳು ತನ್ನ ಕೋಣೆಗೆ ಮಲಗಲು ಹೋಗುತ್ತಿದ್ದಾಗ ಅಜ್ಜಿಯಿಂದ ಕರೆ ಬಂತು. ಅದೇ ರಾತ್ರಿ ಮುದುಕಿಗೆ ಅವಳೊಂದಿಗೆ ಏನೋ ಮಾತಾಡುವದಿತ್ತು.

ಗ್ರೇಸಳು ಕೋಣೆಯನ್ನು ಪ್ರವೇಶಿಸಿ, ಕೈಯೊಳಗಿನ ಮೇಣಬತ್ತಿಯನ್ನು ತಗ್ಗಾದ ಒಂದು ಕುರ್ಚಿಯ ಮೇಲೆ ಇಟ್ಟಳು. ಆಲಿವರ ಮಂಚದ ಹತ್ತಿರ ಅಲ್ಲಿ ಮಲಗಿದ್ದಲ್ಲಿ, ಅವಳ ಮುಖ ಮಗ್ಗಲಿನಿಂದ ಬಿಳಿಯ ಗೋಡೆಯ ಮೇಲೆ ಇದ್ದಲಿಗಪ್ಪಾದ ನೆಳಲನ್ನು ಚೆಲ್ಲಿತ್ತು. ಅವಳ ದೊಡ್ಡ ತಲೆಯು, ಬಿಳಿಅಂಗಿಯನ್ನೆ ರುಮಾಲಿನಂತೆ ಸುತ್ತಿಕೊಂಡದ್ದರಿಂದ ಇನ್ನಿಷ್ಟು ದೊಡ್ಡದಾಗಿ ಕಾಣಿಸುತ್ತಿತ್ತು ನೆಳಲಲ್ಲಿ. ಗ್ರೇಸಳು ಕೋಣೆಯನ್ನು ಸ್ವಲ್ಪ ಅಚ್ಚುಕಟ್ಟಾಗಿ ಮಾಡಿದಳು ಮತ್ತು ಕಾಯಿಲೆ ಬಿದ್ದವಳನ್ನು ಸಮೀಪಿಸಿ ಅಂದಳು,

'ನಾನು ಬಂದಿದ್ದೇನೆ, ಅಜ್ಜಿ. ನಿನ್ನ ಇಚ್ಛೆಯಂತೆ ನಾವು ಡಾಕ್ಟರರನ್ನು ಕೂಡಲೆ ಕರೆಕಳುಹಿಸೋಣ—ಮುಂದೆ ತಡವಾದೀತು.'

'ಛೇ, ನನಗೆ ಅವನು ಬೇಡವೇಬೇಡ' ಆಲಿವರಳು ಖಂಡಿತವಾಗಿ ಹೇಳಿಬಿಟ್ಟಳು.

'ಹಾಗಾದರೆ ನಿನ್ನ ಹತ್ತಿರ ಕೂಡ್ರಲಿಕ್ಕೆ ಯಾರಾದರೂ ?'

'ಅದೂ ಬೇಡ. ನನಗೆ ಯಾರೂ ಬೇಡ. ಯಾರನ್ನೂ ಒಲ್ಲೆ, ನಿನ್ನನ್ನು ಕರೆಕಳಿಸಿದ್ದು—ನಿನ್ನನ್ನು ಕಾಣಬೇಕಾಗಿತ್ತು. ಒಂದು ಮಾತು ನನ್ನ ಮನಸ್ಸು ಕೊರೆಯುತ್ತಾ ಇದೆ. ಗ್ರೇಸ, ಮಗೂ, ಹೇಗೂ ನಾನು ಆ ಡಾಕ್ಟರನ ಹಣ ತಕ್ಕೊಂಡು ಬಿಟ್ಟೆನಲ್ಲ.'

'ಯಾವ ಹಣ?'

'ಹತ್ತು ಪೌಂಡು.'

ಗ್ರೇಸಳಿಗೆ ಏನೂ ಸರಿಯಾಗಿ ಅರ್ಥವಾಗಲಿಲ್ಲ. 'ಹತ್ತು ಪೌಂಡು ಆತ ನನಗೆ ಕೊಡಮಾಡಿದ್ದ—ನನ್ನ ತಲೆಗಾಗಿ; ನನಗೆ ಬಲು ದೊಡ್ಡ ಮಿದುಳು ಇದೆಯಂತೆ. ಆಗ ನಾನು ಒಂದು ಕಾಗದದ ಮೇಲೆ ಸಹಿಮಾಡಿ ಆ ಹಣ ತೆಗೆದುಕೊಂಡೆ. ಆಗ ಆ ಬಗ್ಗೆ ನನಗೆ ಏನೂ ಅನಿಸಲಿಲ್ಲ. ಈ ವ್ಯವಹಾರ ಆಗಲೆ ಪೂರ್ತಿ ಮುಗಿದು ಪಕ್ಕಾ

ಆಗಿತ್ತು. ಆದರೆ ನಿನಗೆ ಹಾಗೆ ಹೇಳಲು ನನಗೆ ಸೇರಲಿಲ್ಲ. ಅಂಥ ವಿಚಾರವೇ ನಿನಗೆ ಹೇಸಿಗೆ ಎಂದುಕೊಂಡೆ. ಈಗ ಆ ಬಗ್ಗೆ ಉದ್ದಕ್ಕೂ ವಿಚಾರ ಮಾಡಿದಷ್ಟು ನಾನು ಹಾಗೆ ಮಾಡಬಾರದಾಗಿತ್ತು—ಎಂದು ಅನಿಸಹತ್ತಿದೆ. ಅದೀಗ ನನ್ನ ಮನಸ್ಸಿನ ಮೇಲೆ ದೊಡ್ಡ ಭಾರ ಕೂತಂತೆ ಆಗಿದೆ. ಜಾಸ ಸೌಥ ಮರದ ಭಯಕ್ಕೆ ಸತ್ತದ್ದು ಕಂಡು ನನಗೂ ಸಾವಿನ ಹಂಬಲ. ಈ ವಿಚಾರವಾಗಿ...ನಾನೇ ಅವನಲ್ಲಿ ಹೋಗಿ ಕೇಳಬೇಕೆಂದಿದ್ದೆ ನನ್ನ ಬಿಡುಗಡೆ ಮಾಡೆಂದು. ಆದರೆ ಅದಕ್ಕೆ ಧೈರ್ಯ ಸಾಲದೆ ಹೋಯಿತು.'

'ಏಕೆ?'

'ಆ ಹಣದಲ್ಲಿ ಕೆಲವನ್ನು ನಾನು ಬಳಸಿಬಿಟ್ಟಿದ್ದೇನೆ. ಎರಡು ಪೌಂಡುಗಳಿಗಿಂತಲೂ ಹೆಚ್ಚು. ಅದೇ ನನಗೆ ಬಹಳ ಚಿಂತೆಗೆ ಕಾರಣವಾಗಿವೆ. ಇನ್ನೂ ಆ ಸೌಥ ತನ್ನ ಪೀಡೆಯಿಂದ ಸತ್ತಂತೆ, ನಾನೂ, ನನ್ನ ದೇವರ ಕಾಸಿನ ಆಣೆ ಹೊತ್ತು ರುಜು ಹಾಕಿದ ಆ ಕಾಗದದ ವಿಚಾರದಿಂದ ಸಾಯುವೆ.'

'ನೀನು ಆ ಕಾಗದವನ್ನು ಸುಟ್ಟು ಹಾಕಲು ಆತನಿಗೆ ಕೇಳಿಕೊಂಡರೆ, ಅವನು ಹಾಗೆ ಮಾಡಿಯೇ ಮಾಡುತ್ತಾನೆ, ನನಗೆ ಭರವಸೆ ಇದೆ. ಆತ ಆ ಮೇಲೆ ಆ ಕುರಿತು ಮತ್ತೆ ವಿಚಾರವನ್ನು ಮಾಡಲಿಕ್ಕಿಲ್ಲ.'

'ಒಮ್ಮೆ ಕೇಳಿಕೊಂಡಿದ್ದೆ ; ತಂಗಿ. ಆದರೆ ಆತ ನಕ್ಕುಬಿಟ್ಟ, ಕಣ್ಣಲ್ಲಿ ನೀರು ಇಲ್ಲದೆ. 'ನಿನ್ನ ಮಿದುಳು ಎಷ್ಟು ಚೆಂದ!' ಆತ ಅಂದ, 'ಅಜ್ಜೀ, ವಿಜ್ಞಾನವು ಅದನ್ನು ಕಳೆದುಕೊಳ್ಳಲು ಸಿದ್ಧವಿಲ್ಲ. ಅಲ್ಲದೆ, ನೀನು ನನ್ನ ಹಣ ಬೇರೆ ತೆಗೆದು ಕೊಂಡಿದ್ದಿಯೇ!' ತಂಗೀ, ನಿನ್ನ ತಂದೆಗೆ ಈ ಸುದ್ದಿ ತಿಳಿಸಬೇಡ. ನಿನ್ನ ದಮ್ಮಯ್ಯ. ಏನೇ ಆದರೂ ತಿಳಿಯಲು ಕೊಡಬೇಡ.'

'ಇಲ್ಲ, ಇಲ್ಲ, ಅವನಿಗೆ ತಿರುಗಿ ಕೊಡಲಿಕ್ಕೆ ನಾನು ನಿನಗೆ ಹಣ ಕೊಡುತ್ತೇನೆ.'

ಆಲಿವರ ಅಜ್ಜಿ ದಿಂಬಿನ ಮೇಲೆಯೇ ನಕಾರ ಸೂಚಿಸುತ್ತ ತಲೆ ಅಲ್ಲಾಡಿಸಿದಳು, 'ನಾನು ಗುಣ ಹೊಂದಿದ್ದರೂ, ನೆಟ್ಟಗಿದ್ದರೂ, ಅವನಲ್ಲಿ ಒಯ್ದು ಮುಟ್ಟಿಸುವಂತೆ ಇದ್ದರೂ, ಅದು ಅವನಿಗೆ ಸೇರಲಿಕ್ಕಿಲ್ಲ. ಆದಾಗ್ಯೂ, ಊರಲ್ಲಿ ಇಷ್ಟೆಲ್ಲ ಮಂದಿ ಇರುವಾಗ, ನನ್ನ ತಲೆ ಬರುಡೆಯೊಳಗೇ ಇಣುಕಿ ನೋಡುವದು ಅವನಿಗೆ ಏಕೆ ಬೇಕಾಯಿತೋ ನಾ ಕಾಣೆ. ಅವನು ಏನೆಂದು ಉತ್ತರ ಕೊಡುವನೋ ನನಗೆ ಗೊತ್ತು, 'ಅಜ್ಜೀ, ನೀನು ಒಂಟಿ ಜೀವ ; ಕೊನೆಯ ಉಸಿರು ನಿನ್ನ ದೇಹದಿಂದ ಹೊರಬಿದ್ದು ಹೋದ ಮೇಲೆ ನಿನಗೆ ಏನಾದರೇನಂತೆ? ನಿನಗೇನು ಅದರ ಗೊಡವೆ?' ಓ. ಇದೇ ನನ್ನ ಕಾಡುತಾ ಇದೆ. ನನ್ನ ಕನಸಿನಲ್ಲಿ ಆತ ಬಂದು ಹೇಗೆ ಪೀಡಿಸುತ್ತಾ ಇದ್ದಾನೆಂಬುದು ನಿನಗೆ ಗೊತ್ತಾದರೆ, ನೀನೇ ನನ್ನ ಬಗ್ಗೆ ಅಯ್ಯೋ ಅನ್ನುತ್ತಿದ್ದೆ. ನಾನು ಹಾಗೆ ಹೇಗೆ ಮಾಡಿಬಿಟ್ಟೆನೋ, ನಾನೇ ಅರಿಯೆ. ಆದರೆ ಆತ ಯಾವಾಗಲೂ ಹೀಗೆ—ತೀರ ಗಡಿಬಿಡಿ, ತೀರ ತ್ವರೆ. ನನ್ನ ಪರವಾಗಿ ಮಾತಾಡಲು ಯಾರಾದರೂ ಇದ್ದರೆ'

'ನನ್ನ ತಾಯಿ ಇದ್ದಾಳೆ. ಅವಳು ಮಾತಾಡುತ್ತಾಳೆ—ನನಗೆ ಖಾತ್ರಿ ಇದೆ.'

'ಆದರೆ ಆತ ಅವಳ ಮಾತಿಗೆ ಕಿವಿ ಗೊಡುವವನೇ ಅಲ್ಲ. ಅವನ ಮೇಲೆ ಪರಿಣಾಮ ಮಾಡಲು ಅವಳಿಗಿಂತ ಎಳೆಯ ಮೋರೆಯೇ ಬೇಕು.'

ಮುದುಕಿಯ ಮನೋಗತ ತಿಳಿದು ಗ್ರೇಸಳು ತುಸು ಬೆಚ್ಚಿಬಿದ್ದಳು. 'ನನ ಗೋಸ್ಕರ ಆತ ಒಪ್ಪಬಹುದು ಎಂದು ನೀನು ತಿಳಿಯುವುದಿಲ್ಲವಷ್ಟೇ?' ಅವಳೆಂದಳು.

'ಓ ಒಪ್ಪಬಾರದೇಕೆ?'

'ಛೇ, ನಾ ಒಲ್ಲೆ. ಯಾರಗೋಸ್ಕರವೂ ಇರಲಿ, ಯಾವದಕ್ಕೂ ಆಗಲಿ, ನಾನು ಅವನಲ್ಲಿಗೆ ಹೋಗುವವಳಲ್ಲ. ನನಗೆ ಅವನ ಪರಿಚಯವೆ ಇಲ್ಲ.'

'ಅಯ್ಯೋ! ನಾನು ಒಬ್ಬ ಹರಯದ ಹುಡುಗಿ ಆಗಿದ್ದರೆ, ಮತ್ತು ಒಬ್ಬ ಪಾಖಂಡಿಯ ಕತ್ತಿಯಿಂದ ಒಬ್ಬ ಬಡ ಹೆಂಗಸಿನ ಎಲುಬಿನ ಹಂದರವನ್ನು ಉಳಿಸಿ ಅದನ್ನು ಕ್ರೈಸ್ತರ ಸ್ಮಶಾನದಲ್ಲಿಯೇ ವಿಶ್ರಾಂತಿ ಕೊಡಲು ಸಾಧ್ಯವಾಗಿದ್ದರೆ, ನಾನು ಹಾಗೆಯೇ ಮಾಡಿ—ಮಾಡಿದ್ದಕ್ಕೆ ಸಂತೋಷವನ್ನು ಪಡೆಯುತ್ತಿದ್ದೆ. ಆದರೆ ಬಡ ಮುದುಕಿಗಾಗಿ ಯಾರೂ ಏನೂ ಮಾಡುವದಿಲ್ಲ. ಎಲ್ಲರೂ ಅವಳನ್ನು ತಳ್ಳುವವರೇ' ಅಂದಳು ಚಾಣಾಕ್ಷ ಆಲಿವರ ಅಜ್ಜಿ.

'ಗ್ರಾಮರ, ಹಾಗೆಲ್ಲ ಹೇಳುವ ನೀನು ಬಹಳ ಕೃತಘ್ನಳು. ಆದರೆ ನೀನೀಗ ಬೇನೆ ಬಿದ್ದಿರುವಿ. ಅದಕ್ಕೆ ಹೀಗೆಲ್ಲ ಆಡುತ್ತಿರಬೇಕು. ಆದರೆ ನನ್ನ ಮಾತು ನಂಬು. ನೀನೇನು ಸಾಯುವದಿಲ್ಲ. ನೀನೇ ನನಗೆ ಹೇಳಿದ್ದುಂಟು, ನೆನಪಿಗೆ ತಂದುಕೋ, ಆ ಡಾಕ್ಟರನಿಗೆ ವರ್ಷಗಟ್ಟಲೆ ಕಾಯಲಿಕ್ಕೆ ಹಚ್ಚುವೆನೆಂದು.'

'ಸರಿ. ಮೈಯಲ್ಲಿ ನೆಟ್ಟಗಿದ್ದಾಗ ಯಾರೂ ಹೇಗೂ ಹಾಸ್ಯ ಮಾಡುತ್ತಾರೆ. ಮುದಿಪ್ರಾಯದಲ್ಲಿಯೂ ವಿನೋದ ಮಾಡುವದಿಲ್ಲವೆ? ಆದರೆ ಬೇನೆ ಬಿದ್ದಾಗ ನಗೆ ಚಾಟಿಕೆ ಎಲ್ಲ ನುಗ್ಗುನುಗ್ಗಾಗುತ್ತದೆ. ಹಿಂದೆ ಸಣ್ಣದಾಗಿ ಕಂಡದ್ದೆಲ್ಲ ಆಗ ದೊಡ್ಡದಾಗಿ ತೋರುತ್ತದೆ. ದೂರದ್ದು ತೀರ ಹತ್ತಿರ ಕಾಣುತ್ತದೆ.'

ಗ್ರೇಸಳ ಕಣ್ಣುಗಳಲ್ಲಿ ನೀರೂರಿತು. 'ಅಜ್ಜಿ, ಇಂಥ ಒಂದು ಮಾತು ಎತ್ತಿಕೊಂಡು ಅವನಲ್ಲಿ ಹೋಗಲು ನಾನು ಇಷ್ಟಪಡುವದಿಲ್ಲ,' ಅವಳೆಂದಳು, 'ಆದರೂ ನಿನ್ನ ಮನಸ್ಸಿನ ಸಮಾಧಾನಕ್ಕಾಗಿ ನಾನು ಹಾಗೆ ಮಾಡಲೇ ಬೇಕಾಗಿದ್ದರೆ, ಹೋಗುವೆನು.'

ಹೀಗೆ ಮರುದಿನ ಮುಂಜಾನೆ, ತೀರ ಮನಸ್ಸಿಲ್ಲದ ಮನಸ್ಸಿನಿಂದ, ಗ್ರೇಸಳು ಆ ಸ್ವೀಕೃತ ಕಾರ್ಯಕ್ಕಾಗಿ ಶಾಲು ಹೊದ್ದುಕೊಂಡು ಹೊರಟಳು. ಹೋಗಲು ಇನ್ನಿಷ್ಟು ಪ್ರತಿಕೂಲವೇಕೆಂದರೆ ಡಾ. ಫಿಟ್ಝಪಿಯರ್ಸನ ಮೇಲೆ ಚೆಲುವಿನ ಮುಖದ ಪರಿಣಾಮದ ಬಗೆಗೆ ಗ್ರಾಮರಳು ಮಾಡಿದ ಉಲ್ಲೇಖ. ಆದ್ದರಿಂದ ಅವಳು ತೀರ ಅಯುಕ್ತಿಕವಾಗಿ ನಡೆದುಕೊಂಡಳು. ಉಣ್ಣೆಯ ಶಾಲೊಂದು ಮೈ ಮುಡಿಯನ್ನು ಸುತ್ತಿ ಹೊದ್ದುಕೊಂಡಳು. ಅದು ಅವಳ ಕಣ್ಣಿನ ಹೊಳಪನ್ನು ಬಿಟ್ಟು ಮೋರೆಯನ್ನೆಲ್ಲ ಮುಚ್ಚಿತು. ಡಾಕ್ಟರನು ಹಿಂದೆ ಎಂದೂ ಅವಳನ್ನು ನೋಡಿದ್ದೇ ಇಲ್ಲವಾದರೆ ಈ ವೇಷ ಅವಳ ಪಯಣದ ಉದ್ದೇಶವನ್ನೇ ಪೂರ್ತಿ ಕೆಡಿಸುವಂತಿತ್ತು.

ಆಲಿವರ ಅಜ್ಜಿಯ ಅಪೇಕ್ಷೆಯಂತೆ ಅವಳ ಇಚ್ಛೆಯೂ ಇತ್ತು. ಈ ವಿಚಿತ್ರವಾದ ಭೆಟ್ಟಿಯ ಬಗೆಗೆ ಯಾರಿಗೂ ಏನೂ ಗೊತ್ತಾಗಬಾರದೆಂದು. ಆದ್ದರಿಂದ ತನ್ನನ್ನು ಯಾರೂ ಗೊತ್ತು ಹಿಡಿಯಬಾರದೆಂದು ಗ್ರೇಸಳು ಪ್ರತಿಯೊಂದು ಮುಂಜಾಗ್ರತೆ ವಹಿಸಿದಳು. ಅತ್ಯಂತ ಸುರಕ್ಷಿತ ದಾರಿಯೆಂದು ಆಕೆ ತನ್ನ ಮನೆಯ ಹಿತ್ತಲ ಬಾಗಿಲಿನಿಂದ ಹೊರಬಿದ್ದಳು — ಆಗ ಮನೆಯವರೆಲ್ಲರೂ ಮನೆಯ ಆಚೆಯ ಭಾಗದಲ್ಲಿ ಇದ್ದರು. ಅವಳು ಕಳ್ಳ ಹೆಜ್ಜೆಯಲ್ಲಿ ಹಾದಿಯ ಬದಿಯಿಂದಲೇ ಮುಂದರಿದಾಗ ಮುಂಜಾವೂ ಪ್ರತಿಕೂಲವಾಗಿ ಕಂಡಿತು. ಹಿಮ ಮತ್ತು ಹಿಮಾಂತಗಳ ನಡುವೆ ಕದನವು ನಡೆದೇ ಇತ್ತು — ಹವೆಯ ಅಂತರಾಳದಲ್ಲಿ. ಮರಗಳು ಕೆಳಗೆ, ಹುಲ್ಲು ನೆಲದ ಮೇಲೆ ತಪತಪನೆ ಹನಿ ತೊಟಕಿಸುತಿದ್ದವು. ಹರಳುಮಣ್ಣು ಹಾಸಿದ ಅಗಲವಾದ ಹಾದಿಯನ್ನು ಮುಚ್ಚಿದ ಹಾವಸೆಯು ಒದ್ದೆಮುದ್ದೆ ಆಗಿತ್ತು. ಗ್ರೇಸಳು ಅನಿಶ್ಚಿತ ಚಂಚಲಚಿತ್ತದಿಂದ ನಿಂತಳು. ಆಗ ಅವಳಿಗೆ ಬಡ ಆಲಿವರಳ ನೆನಪು ಬಂದಿತು. ಡಾಕ್ಟರನು ಶಸ್ತ್ರಕ್ರಿಯೆಯ ಕೂರಲಗನ್ನೆತ್ತಿ ಅಟ್ಟಿಕೊಂಡು ಬಂದಂತೆ ಆಕೆಯ ಕನಸುಗಳು, ಸೌಥನನ್ನೆ ವಿಚಿತ್ರವಾಗಿ ಹೋಲುವ, ಅವನದೇ ರೀತಿಯಲ್ಲಿ ಕೊನೆಗೊಳ್ಳಬಹುದಾದ ಆಕೆಯ ಪ್ರಕರಣ — ಇವೆಲ್ಲವನ್ನು ಕುರಿತು ವಿಚಾರಮಾಡಿದಳು. ಆ ನಂತರ ಆ ತುಂತುರುಮಳೆಯಲ್ಲಿ ಹೊರಗೆ ಹೆಜ್ಜೆ ಇಟ್ಟಳು.

ಅವಳು ಒಪ್ಪಿಕೊಂಡ ಕೆಲಸದ ಸ್ವರೂಪವೂ, ಆಲಿವರ ಅಜ್ಜಿಯು ಮಾಡಿಕೊಂಡ ಅವಳ ಶವಚ್ಛೇದದ ಬಗೆಯ ಕರಾರುನಾಮೆಯೂ ಗ್ರೇಸಳಲ್ಲಿ ಫಿಟ್ಝಪಿಯರ್ಸನ ಬಗೆಗೆ ಒಂದು ಮೋಹಕ ಭೀಷಣತೆಯನ್ನು ಉಂಟುಮಾಡಿದವು. ಆತ ಯುವಕನೆಂದು ಆಕೆ ಬಲ್ಲಳು. ಅವಳು ಅವನೊಂದಿಗೆ ಸಂದರ್ಶನ ಪಡೆಯಲೇಬೇಕೆಂಬ ಒಂದೇ ಒಂದು ವಿಚಾರವು, ಅವನ ಪ್ರಾಯ, ಸಾಮಾಜಿಕ ಪ್ರತಿಷ್ಠೆ—ಮುಂತಾದ ಎಲ್ಲ ಆಲೋಚನೆಗಳನ್ನು ಅವಳ ಚಿತ್ತದಿಂದ ಹೊರತಳ್ಳಿತ್ತು. ಆಲಿವರಳ ಸ್ಥಾನದಲ್ಲಿ ನಿಂತು ನೋಡುವಾಗ, ಆತ ವಿಜ್ಞಾನದ ನಿರ್ದಯ ದೇವೇಂದ್ರನಾಗಿ ಕಂಡನು — ತನ್ನ ಬಲಿಯನ್ನೆ ಬೇಡುವ, ಅಲ್ಲಿ ಯಾವ ಕನಿಕರವನ್ನು ತೋರದ ಉಗ್ರದೇವತೆ. ಇದೊಂದು ವಿಷಯವಲ್ಲದಿದ್ದರೆ ಆಕೆ ಈ ಮನುಷ್ಯನನ್ನು ಅರಿತುಕೊಳ್ಳಲು ಹವಣಿಸುತ್ತಲೇ ಇರಲಿಲ್ಲ. ಆದರೆ ಅಂಥ ಸಣ್ಣ ಹಳ್ಳಿಯಲ್ಲಿ ಅವರಿಬ್ಬರೂ ಒಬ್ಬರನ್ನೊಬ್ಬರು ಭೆಟ್ಟಿ ಆಗದೆ ಕಳೆಯುವದು ಅಶಕ್ಯವೇ ಆಗಿತ್ತು. ಅಂದಾಗ ಈಗ ಭೆಟ್ಟಿ ಆಗಬೇಕಾಯಿತೆಂಬುದಕ್ಕೆ ಮರುಗುವಂಥ ಅಂಶವೇನೂ ಇದ್ದಿಲ್ಲ.

ಆದರೆ ಒತ್ತಿ ಹೇಳುವ ಅಗತ್ಯವೇ ಇಲ್ಲ. ಗ್ರೇಸಳು ಕಲ್ಪಿಸಿಕೊಂಡಂತೆ ನಿರ್ದಯ ನಿಶ್ಚಲ ಮತ್ತು ದುರ್ದಮ್ಯ ವಿಜ್ಞಾನಿಯೆಂಬ ರೂಪವು ಡಾಕ್ಟರ ಫಿಟ್ಝಪಿಯರ್ಸನಿಗೆ ವಸ್ತುತಃ ಹೋಲುತ್ತಲೇ ಇದ್ದಿಲ್ಲ. ವಸ್ತುತಃ ಡಾಕ್ಟರ ಫಿಟ್ಝಪಿಯರ್ಸನು ತಾನು ಕೈಕೊಂಡ ವೃತ್ತಿಯಲ್ಲಿ ಉತ್ಕರ್ಷವನ್ನು ಗಳಿಸಲಾರದಷ್ಟು ಅವಾಂತರ ಹವ್ಯಾಸಗಳನ್ನೂ ವ್ಯಾಮೋಹಗಳನ್ನೂ ಅಂಟಿಸಿಕೊಂಡವನು. ತನ್ನ ಕಾರ್ಯ ಕಕ್ಷೆಯೆಂದು ಸದ್ಯ

ಇಟ್ಟುಕೊಂಡ ಗ್ರಾಮಾಂತರ ಪ್ರದೇಶದಲ್ಲಿಯೂ ವಿಶಾಲವಾದ ‘ಪ್ರಾಕ್ಟೀಸು’ ಕಟ್ಟಿಕೊಳ್ಳಲಾರದವನು. ಅವನ ಮನಸ್ಸು ಒಂದು ವರ್ಷದಲ್ಲಿ ತನ್ನ ಬೌದ್ಧಿಕ ಆಕಾಶ ಮಂಡಳದಲ್ಲಿ ತುದಿಯಿಂದ ತುದಿಯವರೆಗೆ ಸೌರಗತಿಯಿಂದ ಸಾಗುವ ರೂಢಿಯುಳ್ಳದ್ದು. ಒಮ್ಮೆ ಅದು ಮೇಷದಲ್ಲಿ ಒಮ್ಮೆ ವೃಷಭದಲ್ಲಿ. ಒಂದು ತಿಂಗಳು ಆತ ಕೇವಲ ರಸವಿದ್ಯೆಯಲ್ಲಿಯೆ ಮುಳುಗಿದ್ದರೆ, ಇನ್ನೊಂದು ತಿಂಗಳು ಕಾವ್ಯರಸದಲ್ಲಿ; ಒಂದು ತಿಂಗಳು ಜ್ಯೋತಿಃಶಾಸ್ತ್ರ ಫಲಜ್ಯೋತಿಷ್ಯಗಳ ಅಶ್ವಿನಿಗಳಲ್ಲಿ ಇದ್ದರೆ ಮತ್ತೊಂದು ತಿಂಗಳು ಜರ್ಮನ ಸಾಹಿತ್ಯ ಮತ್ತು ದರ್ಶನ ಶಾಸ್ತ್ರಗಳ ಕರ್ಕರಾಶಿಯಲ್ಲಿ; ಇನ್ನೂ ನ್ಯಾಯವಾಗಿಯೇ ಹೇಳುವುದಾದರೆ, ಆತ ತನ್ನ ವೃತ್ತಿಗೇ ನಿಕಟವಾಗಿ ಸಂಬಂಧಪಟ್ಟ ಅಭ್ಯಾಸ ವ್ಯಾಸಂಗವನ್ನು ಇತರ ಆಸಕ್ತಿಗಳೊಂದಿಗೆ ಎತ್ತಿಕೊಳ್ಳುತ್ತಿದ್ದನು. ಅಂಥ ಒಂದು ತಿಂಗಳಲ್ಲಿ ಅವನ ಶರೀರ ರಚನಾಶಾಸ್ತ್ರದ ಆಸಕ್ತಿಯು ಉಲ್ಬಣಗೊಂಡಾಗ ಬೇರೆ ವಿಷಯ ಕಾಣಸಿಗದೆ, ಆತ ಅಜ್ಜಿ ಆಲಿವರಳೊಂದಿಗೆ ಆಕೆ ತನ್ನ ಒಡತಿಯಲ್ಲಿ ತೋಡಿಕೊಂಡ ಕರಾರಿನ ಪ್ರಸ್ತಾಪ ಮಾಡಿದ್ದನು.

ಇತ್ತೀಚೆಗೆ ಆತ ತತ್ವಜ್ಞಾನದ ನಿರಾಕಾರ ವಿಷಯಗಳಲ್ಲಿ ತುಂಬ ಲವಲವಿಕೆಯಿಂದ ತೊಡಗಿದ್ದನು. ಇದು ವಿಂಟರಬೋರ್ನನೊಂದಿಗೆ ಆದ ಅವನ ಸಂಭಾಷಣೆಯ ದನಿಯಿಂದ ಊಹಿಸಬಹುದಿತ್ತು. ಅವನ ಹರಿತವಾದ ಗುಣಗ್ರಾಹಕವೂ, ಆಧುನಿಕವೂ ಮತ್ತು ಅವ್ಯವಹಾರಿಕವೂ ಆದ ಚಿತ್ತವು ಮಿಕ್ಕ ಯಾವುದೇ ಎಡೆಗಿಂತ ಹೆಚ್ಚಾಗಿ ತನ್ನ ಈ ತತ್ವಜ್ಞಾನದ ಕ್ಷೇತ್ರವನ್ನು ತನ್ನ ರುಚಿಗೆ ತಕ್ಕದ್ದಾಗಿ ಕಂಡುಕೊಂಡಿರಬೇಕು. ಫಿಟ್ಜಪಿಯರ್ಸನ ಗುರಿಯು ಚಂಚಲ, ಎಡೆಬಿಟ್ಟ ಬಗೆಯದಾಗಿದ್ದರೂ, ಅವನ ಮನಸ್ಸಿನ ರಚನೆಗೆ ಒಂದು ಪ್ರಶಸ್ತ ಅಂಗವಿಲ್ಲದಿಲ್ಲ. ಕೆಲಸಲ ಆತ ನಿಜವಾದ ಪ್ರಾಮಾಣಿಕ ವಿಚಿತ್ರಿಕನಾಗಿದ್ದ. ಅವನ ಮಧ್ಯರಾತ್ರಿಯ ದೀಪದ ಕಿರಣಗಳು ಹಿಂಟಾಕ ಹಳ್ಳಿಯ ಮರಗಳ ಸಂದಿಗಳೊಳಗಿಂದ ಬಹುದೂರದವರೆಗೂ ಮಿನುಗುತ್ತ, ಅವನ ವೈದ್ಯಕೀಯ ಶಾಸ್ತ್ರದ ಗ್ರಂಥಗಳನ್ನು ಹೇಗೋ ಅಷ್ಟೇ ಅಥವಾ ಅದಕ್ಕೂ ಹೆಚ್ಚುಸಲ ಕೇವಲ ಭಾವಾವೇಶ ಮತ್ತು ವಿಕಾರಾವೇಶಗಳ ಸಾಹಿತ್ಯವನ್ನು ಬೆಳಗುತ್ತಿದ್ದವು.

ಆದರೆ ಆತ ಕಲಾದೇವಿಯ ಧ್ಯಾನದಲ್ಲಿರಲಿ, ತತ್ವದರ್ಶನದ ಚಿಂತನೆಯಲ್ಲಿರಲಿ, ಹಿಂಟಾಕ್ ಹಳ್ಳಿಯ ಬಾಳಿನ ಒಂಟಿಗತನವು ಅವನ ಸಂಸ್ಕಾರ ಸುಲಭ ಸ್ವಭಾವದ ಮೇಲೆ ಪರಿಣಾಮ ಮಾಡಹತ್ತಿತ್ತು. ಹಳ್ಳಿಗಾಡಿನಲ್ಲಿ ಒಂಟಿಯಾದ ಮನೆಯಲ್ಲಿ ಚಳಿಗಾಲವು ಕೆಲವೊಂದು ಪರಿಸ್ಥಿತಿಯಲ್ಲಿ ಸಹ್ಯ ಮಾತ್ರವಲ್ಲ ಸುಖಾವಹವೂ ಆಗುವದುಂಟು—ಸಾಮಾಜಿಕ ಸಹವಾಸವೇನೂ ಇಲ್ಲದಿದ್ದರೂ. ಆದರೆ ಅಂಥ ಸ್ಥಾನದಲ್ಲಿ ಆಕಸ್ಮಿಕವಾಗಿ ಬಂದು ಬಿದ್ದ ಒಬ್ಬ ವ್ಯಾವಸಾಯಿಕ ಮನುಷ್ಯನ ಜೀವನಕ್ಕೆ ಅಂಥ ಪರಿಸ್ಥಿತಿಯು ಅನ್ವಯಿಸುವುದಿಲ್ಲ. ಗ್ರೇಸ, ಮೆಲಬರಿ, ವಿಂಟರಬೋರ್ನರಿಗೆ ಆದು ಸಲ್ಲುವಂತಿತ್ತು. ಆದರೆ ಈ ಡಾಕ್ಟರನಿಗೆ ಅಲ್ಲ. ಈ ಪರಿಸ್ಥಿತಿಯೆಂದರೆ, ಹಳೆಯ ಸಾಹಚರ್ಯ,—ಅಲ್ಲಿ ನಿರೀಕ್ಷಕನ ಕಣ್ಣು ತೆಕ್ಕೆಗೆ ಒಳಪಡುವ ಪ್ರತಿಯೊಂದು ಸಜೀವ

ನಿರ್ಜೀವ ವಸ್ತುವಿನೊಂದಿಗೆ ಎಂದೂ ತೀರದಂಥ ಚಾರಿತ್ರಿಕ ಅಥವಾ ಐತಿಹಾಸಿಕ ಪರಿಚಯು, ಕಳೆದು ಹೋದ ದಿನಗಳ ಅದೃಶ್ಯವಾದ ಸಂಗತಿಗಳನ್ನೆಲ್ಲ ಆ ನಿರೀಕ್ಷಕನು ಅಥವಾ ನಿವಾಸಿಯು ತಿಳಿದಿರಬೇಕು. ಕಿಟಕಿಯಿಂದ ಆಚೆಗೆ ಅಷ್ಟು ಧೂಸರವಾಗಿ ಕಾಣುವ ಆ ಗದ್ದೆಗಳಲ್ಲಿ ನಡೆದಾಡಿದ ಹೆಜ್ಜೆಗಳು ; ಆ ಮಣ್ಣು ಹೆಂಟೆಗಳನ್ನು ಕಾಲ ಕಾಲಕ್ಕೆ ಕಿತ್ತೆತ್ತಿ ತಿರುವಿ ಹಾಕಿದ ನೇಗಿಲಿನ ಕರಕರ ಶಬ್ದ ; ಇದುರಿನ ಗುಡ್ಡಕ್ಕೆ ಮುಕುಟವಿಟ್ಟಂತೆ ಕಾಣುವ ಆ ಮರಗಳನ್ನು ಮೊದಲು ನಟ್ಟಂಥ ಕೈಗಳು ; ಅಲ್ಲಿ ಬೆಟ್ಟದ ತಳದಡವಿಯೊಳಗಿಂದ ಬೇಟೆಗಾಗಿ ಓಡಿದ ನಾಯಿ—ಕುದುರೆಗಳು ; ಆ ವಿಶಿಷ್ಟ ಬಂದಳಿಕೆಯ ಪೊದೆಗಳನ್ನು ಬಾಧಿಸುವ ಹಕ್ಕಿಗಳು ; ಆ ಗುಡಿಸಲು, ವಾಡೆ, ಕೇರಿ ಅಥವಾ ಹಸಿರು ಬಯಲಲ್ಲಿ ನಟಿಸಿಹೋದ, ನಿರಾಶೆ, ಸೇಡು, ಈರ್ಷೆ ಅಥವಾ ಪ್ರೀತಿಗಳ ಗತಿಸಿಹೋದ ಕೌಟಂಬಿಕ ನಾಟಕಗಳು — ಇಂದು ಅದೃಶ್ಯವಾದ ಇವೆಲ್ಲ ಸಂಗತಿಗಳನ್ನು ತಿಳಿದಿರಬೇಕು. ಆ ಸ್ಥಳಕ್ಕೆ ಸೊಬಗು, ಬೆಡಗು ಉತ್ತಮ ಹವಾಮಾನ, ಅನುಕೂಲತೆ ಎಲ್ಲವೂ ಇರಬಹುದು. ಆದರೆ ಅದಕ್ಕೆ ಹಳೆಯ ನೆನಹುಗಳು ಅಂಟಿಕೊಂಡಿರದಿದ್ದರೆ ಅವೆಲ್ಲವೂ ಅಲ್ಲಿ ಬಂದು ನೆಲಸಿದ ಸಂಪರ್ಕ ಸಂವಾದವಿಟ್ಟುಕೊಳ್ಳಲು ಸ್ವಜನರೆಂಬವರೇ ಇಲ್ಲದ ಆಗುಂತಕನಿಗೆ ಕೊನೆಗೂ ಬೇಸರವನ್ನೆ ತರಬಲ್ಲವು.

ಅಂಥ ಪರಿಸ್ಥಿತಿಯಲ್ಲಿ ಮುದುಕನೊಬ್ಬನು ಮಾದರಿಯ ಮಿತ್ರನನ್ನು ಹಂಬಲಿಸುತ್ತ ಇದ್ದು, ಕಡೆಗೆ ಅಂಥ ಮುಖಮುದ್ರೆಯನ್ನು ಕಾಣಿಸಿಕೊಳ್ಳುವ ಯಾವದೇ ಮೋಸಗಾರನ ತೋಳತೆಕ್ಕೆಯಲ್ಲಿ ಬೀಳಬಹುದು. ಅದೇ ರೀತಿ ಯುವಕನೊಬ್ಬನು ಗೆಳೆತನದ ಆದರ್ಶವನ್ನು ಕುರಿತು ಕನಸು ಕಾಣುತ್ತ, ರಕ್ತದ ಯಾವದೋ ಲಹರಿಯಿಂದ ಆದರ್ಶ ವಲ್ಲಭೆಯ ಬಗೆಗೆ ಚಿಂತಿಸಹತ್ತಿ, ಕಡೆಗೆ ಹೆಣ್ಣಿನ ಬಟ್ಟೆಯ ಸದ್ದು, ಅವಳ ಕಂಠದ ದನಿ, ಅವನ ಕಣ್ಣು ತಕ್ಕೆಯಲ್ಲಿ ಗದ್ದೆಯೊಳಗಿಂದ ಹಾಯ್ದು ಅವಳ ನಡಿಗೆ, ಇವೇ ಸಾಕು, ಅವನ ಕಣ್ಣನ್ನೆ ಕುಕ್ಕುವಂಥ ಜ್ವಾಲೆಯನ್ನು ಅವನ ಜೀವನದಲ್ಲಿ ಹೊತ್ತಿಸಲಿಕ್ಕೆ.

ಆಕರ್ಷಕಳಾದ ಗ್ರೇಸಳ ಹೆಸರು ಮತ್ತು ಕುಟುಂಬ ಇವಿಷ್ಟೇ ಸಾಕಿತ್ತು, ಇತರ ಪರಿಸ್ಥಿತಿಯಲ್ಲಿ, ಡಾಕ್ಟರನಿಗೆ ಅವಳ ಮೂರ್ತಿಯನ್ನೇ ತಲೆಯೊಳಗಿಂದ ತಳ್ಳಲಿಕ್ಕೆ ಅಲ್ಲದಿದ್ದರೂ ಅವಳಲ್ಲಿಯ ಅವನ ಆಸಕ್ತಿಯನ್ನು ಬದಲಿಸಲಿಕ್ಕೆ. ಅವಳ ಬಿಂಬವನ್ನು ಏನೋ ಅಪರೂಪದ ನಿಧಿಯೆಂದು ಚಿತ್ತದಲ್ಲಿಟ್ಟುಕೊಳ್ಳದೆ, ಹೆಚ್ಚೆಂದರೆ ಅದೊಂದು ಆಟಿಗೆ ಎಂಬಂತೆ ಆತ ಬಹಳ ಹಂಬಲದೊಂದಿಗೆ ಚಿನ್ನಾಟವಾಡಬಹುದಿತ್ತು. ಅವನು ಅದೇ ಮಾದರಿಯವನೇ ಆಗಿದ್ದನು. ಆದರೆ ಅಲ್ಲಿ ನೆಲಸಿದ ಸ್ಥಿತಿಯಲ್ಲಿ ಆತ ಅಂಥ ಕಾಮುಕ ಚಿನ್ನಾಟಕ್ಕೆ ದುಡುಕಿದರೆ ಅದು ಕ್ರೂರತನವಾಗುತ್ತಿತ್ತು. ಆದ್ದರಿಂದ ಅವಳ ಕುರಿತು ಎಲ್ಲ ಆದರದ ಭಾವನೆಗಳನ್ನು ಆತ ಮನಸ್ಸಿನಿಂದ ತಳ್ಳಿದರೂ ಅವಳನ್ನು ತುಸು ಗಂಭೀರವಾಗಿ ಅಲ್ಲದೆ ಬೇರೆ ಬಗೆಯಾಗಿ ಆತ ಭಾವಿಸಲಾರದಾದನು.

ಆತನು ಅಶಕ್ಯವನ್ನೆ ಭಾವಿಸಲು ಮುಂದಾದನು. ಇಂಥ ವ್ಯರ್ಥ ವ್ಯವಹಾರದ ದಿಶೆಯಲ್ಲಿ ಆತ ಇಷ್ಟು ಮುಂದರಿದನು, ಗ್ರೇಸಳನ್ನೆ ಹಿಂಟಾಕ ದೊಡ್ಡ ವಾಡೆಯ ಒಡತಿ

ಯಾದ ಆ ರಹಸ್ಯಮಯ ಚಾರ್ಮ್‌ದಿಂದಳೆಂದೆ ಕಲ್ಪಿಸಿಕೊಂಡು,ತಾನಲ್ಲದೆ ಇನ್ನಾರೂ ಅವಳ ಪ್ರಣಯವನ್ನು ಒಲಿಸಿಕೊಳ್ಳಲು ಸಾಧ್ಯವಿಲ್ಲವೆಂಬಂತೆ ಆತ ಮನಸ್ಸಿನಲ್ಲಿಯೇ ಅಂಥ ಸನ್ನಿವೇಶಗಳನ್ನು ಸಂಭಾಷಣೆಗಳನ್ನು ರೂಪಿಸಹತ್ತಿದನು.

‘ ಇರಲಿ. ಆವಳೇನೂ ‘ ಆಕೆ ’ ಅಲ್ಲ, ಕೊನೆಗೊಮ್ಮೆ ಆತ ತನ್ನಷ್ಟಕ್ಕೆ ಅಂದನು, ‘ ಆದರೂ ಅವಳು ಬಲು ಮುದ್ದಾದ, ತೀರ ಅಪರೂಪದ ಚೆಂದ ಹುಡುಗಿ !’

ಮರುದಿನ ವಾಡಿಕೆಯಂತೆ ಆತ ಒಬ್ಬನೆ ಕೂತು ಮುಂಜಾವಿನ ಫಲಹಾರ ಮುಗಿಸಿದನು. ಅರೆಮರವಿನಲ್ಲಿಯೋ ಎಂಬಂತೆ ಹಿಮವೃಷ್ಟಿ ಆಗುತ್ತಲೇ ಇತ್ತು. ಅದರಿಂದ ಆ ಬೆಟ್ಟದ ಸೀಮೆ ಬೆಳ್ಳಗಾಗದೆ ಬೂದಿಬಣ್ಣ ತಳೆದಿತ್ತು. ಅಂದು ಫಿಟ್ಝಪಿಯರ್ಸನಿಗಾಗಿ ಒಂದೂ ಪತ್ರ ಬಂದಿದ್ದಿಲ್ಲ — ಇಲ್ಲವೆನ್ನದಂತೆ ಒಂದು ವೈದ್ಯಕೀಯ ಪರಿಪತ್ರ ಮತ್ತು ವಾರಪತ್ರಿಕೆ ಬಂದಿದ್ದುವು.

ಅಂಥ ಮುಂಜಾವುಗಳಲ್ಲಿ, ದೊಡ್ಡ ಬೆಂಕಿಯ ಇದಿರು ಓದುತ್ತ ಕೂಡ್ರುವುದೂ ಹಾಗೆಯೇ ಸಂಜೆ ಇಳಿಯುವನಕ ಕ್ರಮೇಣ ಚೈತನ್ಯವನ್ನು ಪಡೆದು, ದೀಪ ಹೊತ್ತಿಸಿ ತುಂಬ ಗೆಲುವೆನಿಸಿ, ಅಪರ ರಾತ್ರೆ ಕಳೆಯುವತನಕವೂ ಸ್ವಾರಸ್ಯದ ಯಾವುದೇ ವಿಷಯದ ವ್ಯಾಸಂಗದಲ್ಲಿ ತೊಡಗುವುದು, ಅಲ್ಲಿಗೆ ಬಂದಂದಿನಿಂದಲೂ ಆತನ ಕ್ರಮವಾಗಿತ್ತು. ಆದರೆ ಇಂದು ಆತ ಕುರ್ಚಿಯಲ್ಲಿ ಕೂತಿರಲೇ ಆರ. ಇತ್ತೀಚಿನವರೆಗೆ ಆತ ಸ್ವಯಂಪರಿಪೂರ್ಣತೆಯ ಒಂದು ಪದವನ್ನು ಪಡೆದಿದ್ದ. ಅವನ ಎಲ್ಲ ಲಕ್ಷ್ಯವೂ ಒಳಗಣ್ಣಿಗೆ ವಿಷಯವಾದ ಸಂಗತಿಗಳಿಗೇ ಹೊರಳಿಸಲಾಗುತ್ತಿತ್ತು. ಆದರೆ ಇಂದು ಏನೋ ಗುಪ್ತಗಾಮಿಯಾದ ತಂತ್ರಗಾರಿಕೆಯಿಂದ ಅದು ಸೆಳೆಯಲ್ಪಟ್ಟಿತ್ತು. ಹೊರಗಿನ ಸಂಗತಿಗಳನ್ನೆಲ್ಲ ತಿರಸ್ಕಾರವೃತ್ತಿಯಿಂದ ನೋಡುವ ಆತನಿಗೆ ಬಾಳಿನಲ್ಲಿಯೆ ಮೊತ್ತ ಮೊದಲ ಬಾರಿ, ಇಂದು ಮನೆಯ ಹೊರಗೆ ಒಂದು ಆಸಕ್ತಿ ಉಂಟಾಗಿತ್ತು. ಅವನು ಒಂದು ಕಿಟಕಿಯಿಂದ ಇನ್ನೊಂದಕ್ಕೆ ಅತ್ತಿಂದಿತ್ತ ನಡೆದಾಡಿದನು. ಮತ್ತು ಒಂದು ತತ್ವವನ್ನು ಮನಗಂಡನು : ‘ ಅತ್ಯಂತ ಉಪದ್ರವ ಕೊಡುವ ಏಕಾಂತವು ದೂರದ ಸ್ಥಿತಿಯದಲ್ಲ, ಅಪೇಕ್ಷಣೀಯವಾದ ಸಹವಾಸಕ್ಕೆ ಹೊರಗೆ ಹತ್ತಿರವೇ ಇದ್ದದ್ದು. ಲಾಭದ ಶಕ್ಯತೆ ಇಲ್ಲದಿರುವಾಗ ಲೋಭವೂ ಇರುವುದು ಶಕ್ಯವಿಲ್ಲ. ಅದೇ ಹೊಸ್ತಿಲಾಚೆಗೆ ಬಯಸಬಹುದಾದಂಥ ಸಹವಾಸ ಸುಖವಿದ್ದರೆ ಒಳಗಿನ ಒಂಟಿತನ ಭುಗಿಲುಗುಡುವ ದಾಹ.’

ಮುಂಜಾವಿನ ಫಲಾಹಾರದ ಒಂದು ತಾಸು ಸಾಕಷ್ಟು ಭಾರವಾಗಿ ಕಳೆಯಿತು. ಮುಂದಿನ ತಾಸೂ ಅದನ್ನೆ ಹಾಗೆಯೇ ಹಿಂಬಾಲಿಸಿತು — ಅರೆಹಿಮಪಾತ ಅರೆ ಮಳೆಸೆಳಕಿನಲ್ಲಿ, ಹಿಂಟೋಕ್‌ನಲ್ಲಿ ಚಳಿಗಾಲದ ನಡುವೆಯೂ ಅವರು ತುಂಬ ಪ್ರಸನ್ನವಾದ ಋತುವನ್ನು ಭೋಗಿಸಿದ್ದರು. ಹಾಗೆ ಭೋಗಿಸಿದಾಗ ತುಸು ಹಿಂದು ಮುಂದಾಗಿ ಇಂಥ ಹಿಮವೃಷ್ಟಿಯ ಹಂಗಾಮು ಅನಿವಾರ್ಯವಾಗಿಯೇ ಮರಗಳಚುವದುಂಟು. ಅಲ್ಲಿಯೇ ಮನೆ ಮಾಡಿಕೊಂಡಿದ್ದ ಮಂದಿಗೆ ಈ ವ್ಯತ್ಯಾಸಗಳಿಗೂ ಹಲವು ಸ್ವಾರಸ್ಯದ ಅಂಶ

ಗಳಿರುವುದುಂಟು. ಋತು ತಪ್ಪಿ ಹೂ ಬಿಟ್ಟ ಮರಗಳ ಚಳಿಕೋಡು, ಋತು ತಪ್ಪಿ ವೋಸ ಹೋಗಿ ಹಕ್ಕಿಗಳು ಕಟ್ಟುತ್ತಿರುವ ಗೂಡುಗಳು ಹಿಮಹನಿ ಮಳೆಗೆ ಹಿಸಿದು ಹೋಗುವುದು — ಇಂಥ ಅನೇಕ ವಿವರಗಳು ಅಲ್ಲಿಯ ನಿವಾಸಿಗಳಿಗೆ ಬೇಸರ ಕಳೆಯಲು ಸಾಕು. ಆದರೆ ಇವೆಲ್ಲ, ಫಿಟ್ಝಪಿಯರ್ಸನಿಗೆ ಅಪರಿಚಿತವಾದ ಪ್ರಪಂಚದ ಲಕ್ಷಣಗಳು, ಈ ವರೆಗೆ ಅವನನ್ನು ತಲ್ಲೀನಗೊಳಿಸುತ್ತಿದ್ದ ಆಂತರಿಕ ಕಣಸುಗಳು ಅವನನ್ನು ತಮ್ಮಲ್ಲಿ ತೊಡಗಿಸಲು ಒಮ್ಮೆಲೇ ತಪ್ಪಿದ್ದರಿಂದ ಅವನಿಗೆ ಹೇಳಲಾರದಷ್ಟು ಅಲವರಿಕೆ ಅನಿಸ ಹತ್ತಿತು.

ಮೆಲಬರಿಯ ಮಗಳು ಹಿಂಟೋಕ ಹಳ್ಳಿಯಲ್ಲಿ ಇನ್ನೆಷ್ಟು ಕಾಲ ಉಳಿಯುವಳು? — ಆತ ಸೋಜಿಗಪಟ್ಟನು. ಅವಳನ್ನು ಆಕಸ್ಮಿಕವಾಗಿ ಮನೆ ಹೊರಗೆ ಭೆಟ್ಟಿ ಆಗಲಿಕ್ಕೆ ಹವಾಮಾನದ ಹಂಗಾಮು ಅನುಕೂಲವಾಗಿದ್ದಿಲ್ಲ — ದುರ್ಭಾಗ್ಯದ್ದೇ ಆಗಿತ್ತು. ಮತ್ತು ಆಕಸ್ಮಿಕವಲ್ಲದೆ ಆಕೆಯ ಪರಿಚಯ ಕೂಡಿಬರುವದು ಶಕ್ಯವೇ ಇದ್ದಿಲ್ಲ ಎಂಬುದೂ ಅವನಿಗೆ ಕಂಡು ಬಂದಿತು. ಒಂದು ಸಂಗತಿ ಸ್ಪಷ್ಟವಾಗಿತ್ತು — ಅವಳೊಂದಿಗೆ ಯಾವದೇ ಪರಿಚಯ ಕೂಡಿಬಂದರೂ ಅದು ಅವನ ಭವಿಷ್ಯದ ದೃಷ್ಟಿಯಿಂದ, ಹೀಗೇ ಸಹಜ ರೀತಿಯದು. ಹೆಚ್ಚೆಂದರೆ ಸೌಮ್ಯ ಸ್ವರೂಪದ ಚಿನ್ನಾಟದ್ದು ಆಗಬಹುದು. ಏಕೆಂದರೆ ಅವನ ಆಶೋತ್ತರಗಳು ಉನ್ನತವಾಗಿದ್ದವು. ಅವು ಇಲ್ಲಿಂದ, ಇದರಿಂದ ಬೇರೆ ಯಾವ ವಲಯಗಳಿಗೆ ಅವನನ್ನು ಒಂದಾನೊಂದು ದಿನ ಒಯ್ಯಲಿದ್ದವು.

ಈ ಬಗೆಯ ಅವ್ಯವಸ್ಥಿತ ವಿಚಾರಲಹರಿಯೊಂದಿಗೆ ಆತ ಕೋಚಿನಲ್ಲಿ ಅಡ್ಡಾದನು. ಅಲ್ಲಿ ಒರಗಿದಲ್ಲಿಯೇ ಆತ ಓದಲು ಪ್ರಯತ್ನ ಮಾಡಿದನು. ಆದರೆ ಹಿಂದಿನ ರಾತ್ರೆ ಮುಂಜಾವಿನ ಮೂರು ಗಂಟೆಯ ವರೆಗೆ ಆತ ಜಾಗರಣೆ ಮಾಡಿದ್ದನು. ಆದಕಾರಣ ಪುಸ್ತಕವು ಅವನ ಕೈಯಿಂದ ಜಾರಿತು. ಆತನಿಗೂ ನಿದ್ದೆ ಬಿದ್ದಿತ್ತು.

೧೯

ಗ್ರೇಸಳು ಮನೆಯನ್ನು ಸಮೀಪಿಸಿದಳು. ಅವಳು ಕದ ತಟ್ಟಿದಳು. ಆ ತಟ್ಟುವಿಕೆ ಅವಳ ಸ್ವಭಾವಕ್ಕೆ ಸಹಜವಾಗಿಯೇ ಮೃದುವಾಗಿದ್ದುದು. ಇಂದು ಅವಳ ವಿಚಿತ್ರ ಕಾರ್ಯಭಾರದಿಂದಾಗಿ ಇನ್ನಷ್ಟು ಮೃದುವಾಯಿತು. ಆದಾಗ್ಯೂ ಆ ಮನೆಯ ವ್ಯವಸ್ಥೆ ಇಡುವ ರೈತ ಯಜಮಾನಿಯು ಅದನ್ನು ಕೇಳಿದಳು. ಮತ್ತು ಗ್ರೇಸಳನ್ನು ಒಳಗೆ ಬರಗೊಟ್ಟಳು. ಡಾಕ್ಟರನ ಕೋಣೆಯ ಬಾಗಿಲನ್ನು ತೆರೆದು, ಯಜಮಾನಿ ಒಳಗೆ ಇಣಿಕಿ ನೋಡಿದಳು. ಮತ್ತು ಫಿಟ್ಝಪಿಯರ್ಸ ಒಳಗೆ ಇಲ್ಲವೆಂದು ಬಗೆದು ಕುಮಾರಿ ಮೆಲಬರಿಗೆ ಒಳಗೆ ಹೋಗಿ ಕೆಲನಿಮಿಷ ಕಾಯಲಿಕ್ಕೆ ಹೇಳಿದಳು. ತಾನು ಹೋಗಿ

ಅವನನ್ನು ಹುಡುಕಿಕೊಂಡು ಬರುವೆನೆಂದಳು. ಆತ ಮನೆಯಲ್ಲಿಯೇ ಇನ್ನೆಲ್ಲಿಯೋ ಇರಬಹುದೆಂದಳು. ಗ್ರೇಸಳು ಒಪ್ಪಿದಳು, ಒಳಗೆ ಹೊಕ್ಕಿ ಬಾಗಿಲ ಹತ್ತಿರವೆ ಕೂತುಕೊಂಡಳು.

ಅವಳ ಬೆನ್ನಿಗೆ ಬಾಗಿಲು ಮುಚ್ಚಿದೊಡನೆಯೆ ಅವಳು ಸುತ್ತಲು ಒಮ್ಮೆ ನೋಡಿದಳು. ಮತ್ತು ಒಬ್ಬ ಸುರೂಪಿಯಾದ ಮನುಷ್ಯ ಕೋಚಿನ ಮೇಲೆ ಮೈ ಮುದುಡಿಕೊಂಡು ಹಾಯಾಗಿ ಕೂತದ್ದು ಕಂಡು ಹಾರಿಬಿಟ್ಟಳು. ಹದಿನೈದನೆ ಶತಮಾನದ ಗೋಡೆಯೊಳಗೆ ಮಾಡು ಕೊರೆದು ಜೋಡಿಸಿದ ಗೋರಿಯಲ್ಲಿ ಒರಗಿದ ಆಕೃತಿಯಂತೆ ಆತ ಕಾಣುತಿದ್ದ. ಆದರೆ ಅಂಥ ಶವದಂತೆ ಅವನ ಕೈಗಳು ಪ್ರಾರ್ಥನೆಯಲ್ಲಿ ಜೋಡಿಸಿದವು ಇದ್ದಿಲ್ಲ. ಅವಳಿಗೆ ಅನುಮಾನವೆ ಉಳಿಯಲಿಲ್ಲ — ಆತನೇ ಸರ್ಜನ್ನನಾಗಿದ್ದನು.

ಅವನನ್ನು ತಾನೇ ಎಚ್ಚರಿಸುವದು ಅವಳಿಗೆ ಸಾಧ್ಯವೆ ಇದ್ದಿಲ್ಲ. ಅವಳ ಮೊದಲ ಪ್ರವೃತ್ತಿ, ದಿಗ್ಗನೆ ಎದ್ದು ಹೋಗಿ ಗೋಡೆಯಲ್ಲಿ ಬೆಂಕಿಕಟ್ಟೆಯ ಬದಿಗೆ ತೂಗುತಿದ್ದ ಕಂಚಿನ ಪುಷ್ಪಾಕೃತಿಯ ಅಗಲವಾದ ರಿಬ್ಬನ್ ಜಗ್ಗಬೇಕೆಂದಾಯಿತು. ಆದರೆ ಅದರಿಂದ ಆದ ಸದ್ದಿಗೆ ಮನೆಯ ಯಜಮಾನಿಯೂ ತಿರುಗಿ ಬರುವಂತಿದ್ದಳು ಎಂಬುದನ್ನು ನೆನೆದು ಆಕೆ ಆ ಉದ್ದೇಶವನ್ನು ಬಿಟ್ಟು ಕೊಟ್ಟಳು ಮತ್ತು ವಿಪರೀತ ಭಂಗಪಟ್ಟು ಕೊಳ್ಳುತ್ತ ದಿಟ್ಟಿಸುತ್ತ ನಿಂತುಬಿಟ್ಟಳು, ಆ ಒರಗಿದ ವೇದಾಂತಿಯನ್ನು.

ಫಿಟ್ಝ್ ಪಿಯರ್ಸನ ಆತ್ಮದ ಕಿಂಡಿಗಳು ಈಗ ಮುಚ್ಚಿದ್ದವು. ಆದ್ದರಿಂದ ಚೇತರಿಸಿ ಕೊಂಡಾಗಿನಗಿಂತ ಈಗ ಆತ ಕಡಮೆ ಪ್ರಭಾವಿಯಾಗಿ ಕಾಣುತಿದ್ದನು. ಆದರೆ ಅವನ ಪಾರ್ಥಿವ ಚರ್ಯೆಯ ಮೇಲಿಂದ ಮಾಯುವಾದ ಬೆಳಕಿಗೆ ಪ್ರತಿಯಾಗಿ ಅಂಥ ನಿದ್ರಾವಸ್ಥೆಯಲ್ಲಿಯೂ ಅವಳಷ್ಟು ಸೂಕ್ಷ್ಮ ಸಂವೇದನೆಯ ಆಗಂತುಕನ ಮೇಲೆ ಬೀಳುವ ಗೂಢವಾದ ಪ್ರಭಾವವು ಸರಿತೂಗುವಂತಿತ್ತು. ಅವಳು ವಿಮರ್ಶೆ ಮಾಡುವಂತೆ ಇದ್ದ ಮಟ್ಟಿಗೆ, ಅವಳಿಗೆ ಅನಿಸಿದ್ದೇನೆಂದರೆ, ಆ ಪರಿಸರದಲ್ಲಿಯೇ ಅಪೂರ್ವವಾದ ಸೃಷ್ಟಿಯ ಒಂದು ಮಾದರಿಯನ್ನು ಅವಳು ಇದುರಿಸಿದ್ದಳು. ಈ ಮುದ್ರೆಯ ಪುರುಷರನ್ನು ಗ್ರೇಸಳು ನೋಡಿದ್ದು ಹಿಂಟೋಕ್ ಹಳ್ಳಿಯಿಂದ ದೂರವಿದ್ದಾಗ. ಆಗಲೂ ಅವಳಿಗೆ ಭೇಟಿಯಾದ ಮಾದರಿಗಳು ದೂರದಿಂದಲೇ ಹಾಗೆ ಮಾಡಿದ್ದು ; ಅದೂ ಈಗ ಅವಳ ಇದುರಿಗಿದ್ದ ವ್ಯಕ್ತಿಗಿಂತ ಕನಿಷ್ಠ ತರಗತಿಯ ಸತ್ವಗಳು.

ಅವಳಿಗೆ ಸೋಜಿಗವೆನಿಸಿತು — ಆ ಹೆಂಗಸು ತನ್ನ ತಪ್ಪನ್ನು ಕಂಡುಕೊಂಡು ತಿರುಗಿ ಬಂದಿಲ್ಲವೇಕೆ? ಆಕೆ ಮತ್ತೆ ಗಂಟೆಯ ನೇಣಿನ ಕಡೆಗೆ ಹೋದಳು. ಹೊಗೆಗಿಂಡಿಯ ಕಡೆಗೆ ಹೋಗುವಾಗ ಅವಳ ಬೆನ್ನು ಫಿಟ್ಝ್ ಪಿಯರ್ಸನ ಕಡೆಗೆ ಇತ್ತು. ಆದರೆ ಅವಳು ಅವನನ್ನು ಕನ್ನಡಿಯಲ್ಲಿ ನೋಡುವಂತೆ ಇತ್ತು. ಅವಳು ನೋಡುತಿದ್ದಂತೆ ಒಂದು ಅವರ್ಣನೀಯವಾದ ಜುಮ್ಮು ಅವಳ ಮೈಯೊಳಗಿಂದ ಮಿಂಚಿತು. — ಕನ್ನಡಿಯೊಳಗಿನ ಪ್ರತಿಬಿಂಬದ ಕಣ್ಣುಗಳು ತೆರೆಬಿದ್ದು ಅವಳ ಕಡೆಗೇ ಚಕಿತವಾಗಿ

ದಿಟ್ಟಿಸುತಿದ್ದವು. ಆ ದೃಷ್ಟಿಯ ಅನಪೇಕ್ಷಿತ ವೈಚಿತ್ರ್ಯಕ್ಕೆ ಅವಳು ಮಂತ್ರ ಮುಗ್ಧಳಂತೆ ಆದಳು. ಅವಳಿಗೆ ತಲೆಯನ್ನು ಹೊರಳಿಸಿ ಬಿಂಬವನ್ನು ನೋಡುವುದಕ್ಕೂ ಸಾಮರ್ಥ್ಯ ಉಳಿಯಲಿಲ್ಲ. ಅದಾಗ್ಯೂ ಅವಳು ಪ್ರಯತ್ನಪೂರ್ವಕವಾಗಿ ಹೊರಳಿದಳು. ಆದರೆ ಆಗ ಮುಂಚಿನಂತೆಯೇ ಮತ್ತೆ ಅವನಿಗೆ ನಿದ್ದೆ ಬಿದ್ದಿತ್ತು.

ಅವಳಿಗೆ ಈಗ ಚಕಿತವಾದ ದಿಗ್ಭ್ರಮೆ. ಅವನ ಇಂಗಿತವೇನು ? ಇದರ ಅರ್ಥವೇನು ? ಈ ಸಂದಿಗ್ಧತೆಯು ಅವಳನ್ನು ಕೈಗೊಂಡ ಕೆಲಸದಿಂದ ಬಿಡುಗಡೆ ಮಾಡಲು ಸಾಕಾಯಿತು. ಅವಳು ಲಗುಬಗೆಯಿಂದ ಬಾಗಿಲಿಗೆ ಹಾಯ್ದಳು. ಅದನ್ನು ತೆರೆದು ಸದ್ದಿಲ್ಲದೆ ಮುಚ್ಚಿದಳು, ಮತ್ತು ಯಾರಿಗೂ ಕಾಣಿಸಿಕೊಳ್ಳದೆ ಮನೆಯಿಂದ ಹೊರಬಿದ್ದಳು. ನಡುದಾರಿಗುಂಟ, ತೋಟದ ಬಾಗಿಲಿನೊಳಗೆ ಹೋಗುವಷ್ಟರಲ್ಲಿ ಅವಳು ಸ್ಥಿಮಿತವನ್ನು ತಿರುಗಿ ಪಡೆದಿದ್ದಳು. ಅಲ್ಲಿ ಹಸಿರು ಬೇಲಿಯ ತೆರೆಯ ಮರೆಯಲ್ಲಿ ನಿಂತು ಅವಳು ಕೆಲಹೊತ್ತು ಆಲೋಚಿಸಿದಳು.

ತಪ, ತಪ, ತಪ ಮಳೆ ಬೀಳುತಿತ್ತು — ಅವಳ ಕೊಡೆಯ ಮೇಲೆ ಮತ್ತು ಸುತ್ತು ಮುತ್ತು. ಅಂಥ ಮುಂಜಾವಿನಲ್ಲಿಯೂ ಆಕೆ ಹೊರಬಿದ್ದು ಬಂದದ್ದು ಏಕೆ? ಅವಳು ಕೈಗೊಂಡ ಕೆಲಸ ಅಷ್ಟು ಗಂಭೀರವಾಗಿತ್ತು. ಆದರೆ ಈಗ ಅವಳು ತನ್ನ ಸ್ವೀಕೃತ ಸಕಾರ್ಯವನ್ನೆ ಒಂದು ಘಟನೆಯ ಕ್ಷಣಿಕ ಕಂಪನದ ಮೂಲಕ ಕುಗ್ಗಲು ಬಿಟ್ಟಿದ್ದಳು. ಕೊನೆಗೂ ಆ ಘಟನೆಗೆ ಯಾವ ಅರ್ಥವೂ ಇದ್ದಿರಲಾರದು.

ಈ ನಡುವೆ ಕಳ್ಳ ಹೆಜ್ಜೆಯಲ್ಲಿ ಆದರೂ ಘಟಿಸಿದ ಅವಳ ನಿರ್ಗಮನವು ಫಿಟ್ಜ್‌ಪಿಯರ್ಸ್‌ನನ್ನು ಎಚ್ಚರಿಸಿತು. ಆತ ಎದ್ದು ಕೂತನು. ಗ್ರೇಸಳು ಕನ್ನಡಿಯಲ್ಲಿ ಕಂಡ ಪ್ರತಿಬಿಂಬದಲ್ಲಿ ರಹಸ್ಯವೇನೂ ಇದ್ದಿಲ್ಲ. ಆತ ಕ್ಷಣಕಾಲ ಕಣ್ಣು ತೆರೆದಾಗಲೂ ಆತ ನಿಜವಾಗಿ ಎಚ್ಚರಗೊಂಡಿದ್ದಿದ್ದರೆ ಕೂಡಲೆ ಮರಳಿ ಮರವಿನಲ್ಲಿ ಮುಳುಗಿದ್ದನು. ಯಾರೋ ಇದೀಗ ಕೋಣೆ ಬಿಟ್ಟು ಹೊರಬಿದ್ದರೆಂಬುದು ಅವನಿಗೆ ಖಚಿತವಾಯಿತು. ಅಲ್ಲದೆ ಅವನಿಗೆ ಕನಸಿನಲ್ಲಿ ಭೆಟ್ಟಿ ಕೊಟ್ಟಂತೆ ಕಂಡ ಆ ಸುಂದರಾಕೃತಿಯು ಇದೀಗ ಹೊರಟುಹೋದ ವ್ಯಕ್ತಿಯಲ್ಲದೆ ಬೇರೆ ಯಾವುದೂ ಅಲ್ಲವೆಂಬುದಕ್ಕೆ ಅವನಿಗೆ ಅನುಮಾನವೇ ಉಳಿಯಲಿಲ್ಲ.

ಕೆಲವು ನಿಮಿಷದ ನಂತರ ಕಿಟಕಿಯೊಳಗಿಂದ ಹೊರಗೆ ನೋಡಿದಾಗ. ಪೊದೆಗಳ ಅಂಚಿನ ಆ ದಾರಿಯ ತುದಿಗೆ ಆತನು ತೋಟದ ಬಾಗಿಲು ತೆರೆದಿದ್ದನ್ನು ಕಂಡನು. ಮತ್ತು ಅವನ ವಿಚಾರಗಳಲ್ಲಿ ಸುಳಿದ ಗ್ರೇಸಳೆ ಬಾಗಿಲನ್ನು ಹೊಕ್ಕುವುದನ್ನು ನೋಡಿದನು. ಏಕೆಂದರೆ ಇದೇ ಹೊತ್ತಿಗೆ ಅವಳು ತಿರುಗಿ ಬಂದು ಅವನನ್ನು ಇನ್ನೊಮ್ಮೆ ಸಂದರ್ಶಿಸ ಬೇಕೆಂದು ನಿರ್ಧರಿಸಿದ್ದಳು. ಹೋಗುವುದರ ಬದಲಾಗಿ ಬರುತ್ತಿರುವುದನ್ನು ನೋಡಿದಾಗ ಅವನಿಗೆ ಅವಳ ಪ್ರಥಮ ದರ್ಶನವು ನಿಜವಾಗಿಯೂ ಒಂದು ಸ್ವಪ್ನವಾಗಿ ಭಾಸವಾಗಿದ್ದಿರ ಬಹುದೇ ಎಂದು ಅನಿಸಿತು. ಅವಳು ಅನುಮಾನಿಸುತ್ತ ಬರುತ್ತಿದ್ದಳು. ಅವಳ ಮೋರೆಯು ಕಾಣುತ್ತಿದ್ದಿಲ್ಲ — ಅಷ್ಟು ತಗ್ಗಾಗಿ ಅವಳು ಕೊಡೆಯನ್ನು ಹಿಡಿದಿದ್ದಳು.

ರಾಸ್ಬರಿ ಪೊದೆಗಳು ಮುಗಿದು ಸ್ಟ್ರಾಬರಿಯ ಅಗೆಗಳು ಆರಂಭವಾದಲ್ಲಿ ಆಕೆ ತಡೆದಳು.

ಫಿಟ್ಜ್‌ಪಿಯರ್ಸನಿಗೆ ಅಳುಕಾಯಿತು — ಆಕೆ ಈಗಲೂ ಬರದಿದ್ದರೆ ? ಆದ್ದರಿಂದ ಲಗುಬಗೆಯಿಂದ ಕೋಣೆಯಿಂದ ಹೊರಬಿದ್ದು ಆತ ಅವಳನ್ನು ಭೆಟ್ಟಿ ಆಗಲು ಮುಂದೆ ಬಂದನು. ಅವಳ ಭೆಟ್ಟಿಯ ಉದ್ದೇಶವನ್ನು ಆತ ಊಹಿಸುವಂತೆ ಇದ್ದಿಲ್ಲ. ಆದರೆ ಅವಳಿಗೆ ಬೇಕಷ್ಟು ಪ್ರೋತ್ಸಾಹ ನೀಡಲು ಆತ ಸಿದ್ಧನಿದ್ದ.

'ಕ್ಷಮಿಸಿ, ಕು. ಮೆಲಬರಿ,' ಅವನು ಅಂದನು, 'ನಿಮ್ಮನ್ನು ಕಿಟಕಿಯೊಳಗಿಂದ ಕಂಡೆನು. ಮತ್ತು ನಾನು ಮನೆಯಲ್ಲಿ ಇಲ್ಲವೆಂದು ನೀವು ತಿಳಿಯಬಹುದೆಂದು ಭಾವಿಸಿದೆನು. ಅಂದರೆ, ನೀವು ಬಂದದ್ದು ನನಗೋಸ್ಕರವೇ ಆಗಿದ್ದರೆ.'

'ನಾನು ನಿಮ್ಮೊಂದಿಗೆ ಒಂದೇ ಒಂದು ಮಾತಾಡಲಿಕ್ಕೆಂದು ಬಂದವಳು, ಇನ್ನೇನಿಲ್ಲ.' ಆಕೆ ಅಂದಳು, 'ಅದನ್ನು ನಾನು ಇಲ್ಲಿಯೇ ಆಡಬಹುದು.'

'ಬೇಡ, ಬೇಡ. ನೀವು ಒಳಗೇ ಬನ್ನಿ. ಸರಿ. ಒಳಗೆ ಬರಲು ನೀವು ಒಪ್ಪುವುದಿಲ್ಲವಾದರೆ, ಮೊಗಸಾಲೆಯವರೆಗಾದರೂ ಬನ್ನಿ.'

ಹೀಗೆ ಆಗ್ರಹ ಮಾಡಿದಾಗ ಅವಳು ಮೊಗಸಾಲೆಗೆ ಹೋದಳು. ಅದರೊಳಗೆ ಅವರಿಬ್ಬರೂ ನಿಂತುಕೊಂಡರು. ಫಿಟ್ಜ್‌ಪಿಯರ್ಸ ಅವಳ ಕೊಡೆಯನ್ನು ಅವಳಿಗಾಗಿ ಮಡಚಿಕೊಟ್ಟನು.

'ನಾನು ನಿಮ್ಮಲ್ಲಿ ಒಂದು ವಿನಂತಿ ಅಥವಾ ಪ್ರಾರ್ಥನೆ ಮಾಡುವುದಿದೆ,' ಆಕೆ ಅಂದಳು, 'ನನ್ನ ತಂದೆಯ ಆಳು ಬೇನೆ ಬಿದ್ದಿದ್ದಾಳೆ — ನೀವು ಆ ಹೆಂಗಸನ್ನು ಬಲ್ಲಿರಿ. ಮತ್ತು ಅವಳ ಬೇನೆ ಸಕ್ತಾಗಿದೆ, ಹೆಚ್ಚಾಗಿದೆ.'

'ಅಯ್ಯೋ ಪಾಪ, ನಾನು ಈಗಲೆ ಬಂದು ಅವಳನ್ನು ನೋಡುವೆನು.'

'ಆದರೆ ನೀವು ಬರಬಾರದೆಂದೇ ನನ್ನ ಆಗ್ರಹದ ಅಪೇಕ್ಷೆ.'

'ಓ, ನಿಜವೇ ?'

'ಹೌದು. ಅವಳ ಇಚ್ಛೆಯೂ ಅದೇ. ನೀವು ಬಂದರೆ ಅವಳ ಬೇನೆ ಮತ್ತಿಷ್ಟು ಹೆಚ್ಚುವಂತಿದೆ. ಅದು ಅವಳನ್ನು ಕೊಂದಿಯೇ ಬಿಟ್ಟೀತು ... ನಾನು ಬಂದ ಕೆಲಸ ಒಂದು ವಿಚಿತ್ರ ವಿಶೇಷ ಮಾದರಿಯದು. ಅದು ಆಕೆಯ ಮನಸ್ಸಿಗೆ ಭಾರಭೂತವಾದ ಸಂಗತಿ ... ಅದು ನೀವು ಅವಳೊಂದಿಗೆ ಮಾಡಿಕೊಂಡ ಆ ದುರ್ದೈವಿಯಾದ ಒಡಂಬಡಿಕೆ — ಅವಳು ಸತ್ತಮೇಲೆ ಅವಳ ತಲೆಬುರುಡೆಯನ್ನು ಪಡೆಯುವುದರ ಬಗೆಗೆ.

'ಓ, ಆ ಅಜ್ಜಿಯೇ, ಆಲಿವರ — ಆ ಚೆಂದ ತಲೆಬುರುಡೆಯ ಮುದುಕಿ. ಸಕತ್ ಕಾಯಿಲೆಯೇ, ಆಕೆಗೆ ?'

'ಮತ್ತು ಆ ದುಡುಕಿನ ಕರಾರಿನಿಂದ ಇನ್ನಿಷ್ಟು ಅಸ್ವಸ್ಥಳು. ನಾನು ಆಕೆಯ ಹಣವನ್ನು ಹಿಂದೆ ತಂದಿದ್ದೇನೆ. ಅವಳು ಸಹಿ ಹಾಕಿದ ಕರಾರುಪತ್ರವನ್ನು ದಯಮಾಡಿ ತಿರುಗಿ ಕೊಡುವಿರಾ ?', ಗ್ರೇಸಳು ಐದು ಪೌಂಡಿನ ಎರಡು ನೋಟುಗಳನ್ನು ಅವನ

ಕಡೆಗೆ ಚಾಚಿದಳು. ಅವಳು ಅವನ್ನು ಕೊಡುವುದಕ್ಕಾಗಿ ಕೈಚೀಲದಲ್ಲಿಯೆ ತುರುಕಿಟ್ಟು ತಂದಿದ್ದಳು.

ಉತ್ತರ ಕೊಡದೆ, ಆ ನೋಟುಗಳನ್ನು ಗಮನಿಸದೆ, ಫಿಟ್ಝಪಿಯರ್ಸ್ ತನ್ನ ವಿಚಾರಗಳನ್ನು ತನ್ನ ಕಣ್ಣನ್ನು ಹಿಂಬಾಲಿಸಿ ಗ್ರೇಸಳ ವ್ಯಕ್ತಿತ್ವದ ಮೇಲೆ ನೆಲಸಲು ಬಿಟ್ಟನು. ಒಮ್ಮೆಲೆ ಅವಳು ಅವನೊಂದಿಗೆ ನಿಕಟ ಸಾನ್ನಿಧ್ಯದಲ್ಲಿ ನಿಂತಿದ್ದಳು. ಮೊಗಸಾಲೆ ಕಿರಿಯುಗಲಾಗಿತ್ತು; ಮಳೆಯು ನಿಂತಿತ್ತು. ಅದು ಮೊಗಸಾಲೆಯಿಂದ ಜಾರಿಬಿದ್ದು ಬಳ್ಳಿಗಳ ಮೇಲೆ ತೊಟಕುತಿತ್ತು. ಬಳ್ಳಿಗಳಿಂದ ಗ್ರೇಸಳ ಶಾಲು ಮತ್ತು ಲಂಗದ ಮೇಲೆ.

'ಮಳೆ ನಿಮ್ಮ ಬಟ್ಟೆಯನ್ನು ಒದ್ದೆ ಮಾಡುತ್ತಿದೆ. ದಯಮಾಡಿ ಒಳಗಡೆ ಬನ್ನಿ.' ಆತ ಅಂದನು. 'ನಿಜವಾಗಿಯೂ, ನಿಮ್ಮನ್ನು ಹೀಗೆ ಇಲ್ಲಿ ನಿಲ್ಲಿಸುವುದೆಂದರೆ ನನ್ನ ಎದೆಗೆ ನೋವು.'

ತಲೆಬಾಗಿಲ ಒಳಗಡೆಗೇ ಅವನು ಕೂಡ್ರುವ ಕೋಣೆಯ ಬಾಗಿಲು ಇತ್ತು. ಅದನ್ನು ಅವನು ತೆರೆದಿಟ್ಟನು. ಮತ್ತು ಮನಒಲಿಸುವ ಭಂಗಿಯಲ್ಲಿ ನಿಂತನು. ಅವಳು ಎಷ್ಟೇ ಯತ್ನಿಸಿದರೂ ಅವನ ಮುಖದಲ್ಲಿ ಮೂಡಿದ ಆ ದೈನ್ಯಭಾವವನ್ನು, ಈ ಪುರುಷೀ ಶಿಷ್ಟಾಚಾರದ ರೀತಿಯನ್ನು ನಿರಾಕರಿಸುವುದು ಅವಳಿಗೆ ಸಾಧ್ಯವಾಗಲಿಲ್ಲ. ಅವನನ್ನು ಹಾದು ಆ ಕೋಣೆಯೊಳಗೆ ಹೊಕ್ಕುವಾಗ ಅವಳನ್ನು ಖಿನ್ನವಾದ ಉದಾಸೀನತೆಯು ಆವರಿಸಿತು — ದಾರಿ ಇಕ್ಕಟ್ಟಾಗಿದ್ದರಿಂದ ಅವಳ ಮೊಣಕೈ ಅವನ ಕೋಟನ್ನು ಉಜ್ಜಿ ಹೋಯಿತು.

ಅವನು ಅವಳನ್ನು ಹಿಂಬಾಲಿಸಿದನು. ಬಾಗಿಲನ್ನು ಮುಚ್ಚಿದನು. ಹೇಗೋ ಅವಳು ಭಾವಿಸಿದಳು, ಆತ ಆ ಕದಗಳನ್ನು ತೆರೆದೇ ಇಡುವನೆಂದು. ಅವಳಿಗೋಸ್ಕರ ಒಂದು ಕುರ್ಚಿಯನ್ನು ಮುಂದೆ ಮಾಡಿ ತಾನೂ ಕುಳಿತುಕೊಂಡನು.

ಈ ಸರ್ವಸಾಮಾನ್ಯ ಘಟನೆಗಳ ಬಗೆಗೂ ಗ್ರೇಸಳಿಗೆ ಅನಿಸಿದ ಕಸವಿಸಿಗೆ ಕಾರಣ ಕನ್ನಡಿಯೊಳಗಿಂದ ಅವಳು ಪಡೆದ ಅವನ ದರ್ಶನದಿಂದ ಅವಳ ನರ ಮಂಡಳದ ಮೇಲೆ ಆದ ವಿಚಿತ್ರ ಪ್ರಭಾವ. ಅವನು ನಿದ್ದೆ ಹೋಗಿರಬೇಕೆಂದು ಆಕೆ ಭಾವಿಸಿದ್ದಾಗಲೆ ಆತ ಅವಳನ್ನೆ ದಿಟ್ಟಿಸುತಿದ್ದನು. ಅಂದಾಗ ಅವನ ನಿದ್ರೆ ಯಾವದೋ ಅತರ್ಕ್ಯ ಕಾರಣಗಳಿಗಾಗಿ ಆತ ಮಾಡಿದ ನಟನೆ ಆಗಿರಬಹುದೆಂದು ಆಕೆ ಊಹಿಸುವಂತೆ ಆಯಿತು.

ಅವಳು ಮತ್ತೆ ನೋಟುಗಳನ್ನು ಕೊಡಮಾಡಿದಳು; ಆತ ಅವಳನ್ನು ಸಜೀವ ವಿಗ್ರಹವೋ ಎಂಬಂತೆ ನೋಡುತ್ತಿದ್ದವನು ಎಚ್ಚೆತ್ತನು, ಮತ್ತು ಅವಳ ಮಾತಿಗೆ ಆದರದಿಂದ ಕಿವಿಗೊಟ್ಟನು, 'ಹಾಗಾದರೆ ನೀವು ಪುನರಾಲೋಚಿಸಿ. ಬಡ ಅಜ್ಜಿ ಆಲಿವರಳು ತಿಳಿಗೇಡಿತನದಿಂದ ಬರೆದು ಕೊಟ್ಟ ಕರಾರು ಪತ್ರವನ್ನು ರದ್ದು ಮಾಡಿಕೊಡುವಿರಾ?'

'ಪುನರಾಲೋಚನೆ ಇಲ್ಲದೆ ಅದನ್ನು ರದ್ದು ಮಾಡುತ್ತೇನೆ. ಆದರೂ ಅವಳ

ತಿಳಿಗೇಡಿತನದ ಕುರಿತು ನನ್ನದೆ ಬೇರೆ ಅಭಿಪ್ರಾಯವಿಟ್ಟುಕೊಳ್ಳಲಿಕ್ಕೆ ನೀವು ಬಿಡುವಿರಾಗಿ ನಂಬಿದ್ದೇನೆ. ಆಲಿವರ ಅಜ್ಜಿ ಒಳ್ಳೆ ಜಾಣ ಹೆಂಗಸು. ಇತರ ಸಂಗತಿಗಳಲ್ಲಿ ಹೇಗೋ ಈ ವಿಷಯುದಲ್ಲಿಯೂ ಜಾಣಳೇ ಸರಿ. ಅವಳ ಆ ಕರಾರಿನಲ್ಲಿ ಏನೋ ಪಿಶಾಚಿತನ ಇರಬೇಕೆಂದು ನೀವು ಭಾವಿಸುವಿರಿ, ಅಲ್ಲವೇ ಕು. ಮೆಲಬರಿ? ಆದರೆ ನೆನಪು ಮಾಡಿರಿ, ನಮ್ಮಲ್ಲಿಯ ಅತಿ ಶ್ರೇಷ್ಠ ಸರ್ಜನ್ನರು ಹಿಂದೆಲ್ಲ ಇಂಥ ಕರಾರು ಪತ್ರಗಳನ್ನು ಬರೆಯಿಸಿ ಕೊಂಡಿದ್ದಾರೆ.'

'ಪಿಶಾಚಿತನ ಅಲ್ಲ. ವಿಚಿತ್ರ'

'ಇರಬಹುದು. ಹಾಗೆ ಅನಿಸಬಹುದು. ಏಕೆಂದರೆ ವಿಚಿತ್ರವೆಂಬುವದು ವಸ್ತುವಿನ ಸ್ವಭಾವದಲ್ಲಿ ಇರುವದಿಲ್ಲ. ಅದು ಹೊರಗಿನ ಏನಾದರೊಂದು ಸಂಗತಿ ಯೊಂದಿಗೆ ಇರುವ ಆಗಂತುಕ ಸಂಬಂಧ—ಈ ಉದಾಹರಣೆಯಲ್ಲಿ ಆ ಸಂಗತಿ ಅಪ್ರಸ್ತುತ ಪ್ರೇಕ್ಷಕ.

ಅವನು ತನ್ನ ಮೇಜಿನ ಹತ್ತಿರ ಹೋದನು. ತುಸು ಹುಡುಕಾಡಿದ ಮೇಲೆ ಆ ಕಾಗದವನ್ನು ಕಂಡನು. ಅದನ್ನು ಅವನ ಬಳಿಗೆ ತಂದನು. ಕಾಗದದ ತಳಕ್ಕೆ ದಪ್ಪ ಕ್ರಾಸ್ (ಕಾಟು) ಚಿಹ್ನೆ ಕಾಣಿಸಿತು—ಅದು ಆಲಿವರಳ ಕೈಯಿಂದ ಎಳೆದದ್ದು. ಗ್ರೇಸಳು ಆ ಹಾಳೆಯನ್ನು ತನ್ನ ಜೇಬಿನಲ್ಲಿ ಇಟ್ಟುಕೊಂಡಳು—ಒಳ್ಳೆಯ ನಿಶ್ಚಿಂತೆಯ ನೋಟದಿಂದ.

ಫಿಟ್ಜಪಿಯರ್ಸ ಹಣವನ್ನು ತೆಗೆದುಕೊಂಡಿದ್ದಿಲ್ಲ. (ಅದರಲ್ಲಿ ಅರ್ಧಪಾಲು ಗ್ರೇಸಳದೇ ಹಣವಾಗಿತ್ತು.) ಅವಳು ಆ ನೋಟುಗಳನ್ನು ಇನ್ನಿಷ್ಟು ಅವನ ಕಡೆಗೆ ನೂಕಿದಳು. 'ಇಲ್ಲ, ಇಲ್ಲ, ನಾನು ಆ ಮುದುಕಿಯಿಂದ ಹಣ ತೆಗೆದುಕೊಳ್ಳಲಾರೆ.' ಆತ ಅಂದನು, 'ಸರ್ಜನ್ನನು ಒಬ್ಬರಿಂದ ಶವಛೇದ ಪರೀಕ್ಷೆಗಾಗಿ ಒಂದು ವಸ್ತುವನ್ನು ಪಡೆಯಲು ಕರಾರು ಮಾಡಿಕೊಳ್ಳುವದಕ್ಕಿಂತ ವಿಚಿತ್ರ ಸಂಗತಿ, ಆ ಮೂಲಕವಾಗಿ ನಮ್ಮ ಈ ಪರಿಚಯ ಒದಗಿಬಂದಿತು.'

'ನಿಮ್ಮ ಆ ವಿಚಾರಕ್ಕೆ ನನ್ನ ತಿರಸ್ಕಾರ ತೋರಿಸಿದ್ದರಿಂದ ನಾನು ಅಸಭ್ಯಳೆಂದು ನೀವು ಬಗೆದಿರಬಹುದು. ಆದರೆ ನನಗೆ ಹಾಗೆ ಕಾಣುವ ಉದ್ದೇಶವಿದ್ದಿಲ್ಲ.'

'ಛೇ—ಇಲ್ಲವೇ ಇಲ್ಲ.' ಆತ ಅವಳ ಕಡೆಗೆ ನೋಡಿದನು, ಈ ಮೊದಲು ನೋಡಿದಂತೆಯೇ ಕೌತುಕದ ಆಸಕ್ತಿಯಿಂದ. 'ನಾನು ಹಾಗೆ ಬಗೆಯಲಾರೆ, ಹಾಗೆ ಬಗೆಯಲಾರೆ.' ಆತ ಪಿಸುಗುಟ್ಟಿದನು. 'ಏನೋ ನನ್ನನ್ನು ಸಂಭ್ರಮಗೊಳಿಸಿದೆ.' ಆತ ಇನ್ನೂ ವಿಚಾರಮಗ್ನನಾಗಿಯೇ ಅನುಮಾನಿಸುತಿದ್ದ. 'ನಿನ್ನೆ ರಾತ್ರೆ ನಾನು ಬಹಳ ಹೊತ್ತು ಎಚ್ಚರಾಗಿಯೇ ಕುಳಿತೆ.' ಕೊನೆಗೆ ಆತ ಮಾತು ಮುಂದುವರಿಸಿದ, 'ಆದ್ದರಿಂದ ನಾನು ಆ ಕೋಚಿನ ಮೇಲೆ ಒಂದು ಅರ್ಧತಾಸು ನಿದ್ದೆ ಹೋಗಿರಬೇಕು. ಮತ್ತು ನನ್ನ ಆ ನಿದ್ದೆಯ ಕೆಲವು ಮಿನಿಟುಗಳಲ್ಲಿ ನಾನು ಕನಸು ಕಂಡೆ—ಯಾವದೆಂದು ನೀವು ತಿಳಿಯುವಿರಿ?—ನೀವೇ ಈ ಕೋಣೆಯಲ್ಲಿ ನಿಂತಂತೆ.'

ಅವಳು ಆದದ್ದನ್ನು ಹೇಳಬೇಕೇ ? ಅವಳಿಗೆ ನಾಚಿಕೆಯಿಂದ ಕೆನ್ನೆ ಕೆಂಪಾಯಿತು.

'ನಿಮಗೆ ಅನಿಸಬಹುದು' ಫಿಟ್ಝಪಿಯರ್ಸ ಮುಂದುವರಿದ. ತನಗೆ ಬಿದ್ದದ್ದು ಕನಸೇ ಎಂದು ಖಚಿತ ಮಾಡಿಕೊಂಡು, 'ಮೊದಲು ನಿಮ್ಮ ಕುರಿತು ತುಂಬ ವಿಚಾರ ಮಾಡಿದ ಹೊರತು ನಿಮ್ಮ ಕನಸು ಬೀಳಲಾರದು ಎಂದು.'

ಆತ ನಟನೆ ಮಾಡುತ್ತಿಲ್ಲ. ಆ ಮಟ್ಟಿಗೆ ಅವಳಿಗೆ ಖಚಿತವಾಯಿತು.

'ಕನಸಿನಲ್ಲಿ ನಾನು ಭಾವಿಸಿದ್ದೇನೆಂದರೆ, ನೀವು ಅಲ್ಲಿ ನಿಂತಿದ್ದಿರಿ. ಆಕೆ ಆಗ ನಿಂತಿದ್ದ ಸ್ಥಳವನ್ನು ಬೆಟ್ಟಿಟ್ಟು ಕಾಣಿಸುತ್ತ ಅವನು ಅಂದನು, 'ನಾನು ನಿಮ್ಮನ್ನು ನೇರವಾಗಿ ಕಾಣಲಿಲ್ಲ. ಕನ್ನಡಿಯಲ್ಲಿ ಪ್ರತಿಬಿಂಬವಾಗಿ ಕಂಡೆ. ನಾನೆಂದುಕೊಂಡೆ, ಎಂಥ ಸುಂದರ ಪ್ರಾಣಿ ! ದೈವ ಸಂಕೇತ ಕೊನೆಗೊಮ್ಮೆ ಕೈಗೂಡಿತು ! ಪ್ರಕೃತಿಯು ತನ್ನ ಆದರ್ಶ ಕಲ್ಪನೆಯೊಂದಿಗೆ ಕೊನೆಗೊಮ್ಮೆ ಪೂರ್ತಿ ಸೌರೂಪ್ಯ ಹೊಂದಿತು ! ನನ್ನ ವಿಚಾರಗಳು ಆ ನಿಟ್ಟಿನಲ್ಲಿಯೇ ಓಡಿದವು. ಏಕೆಂದರೆ ಹಿಂದಿನ ರಾತ್ರೆ ನಾನು ಒಬ್ಬ ಅತಿಭೌತಿಕ ದಾರ್ಶನಿಕನ ಗ್ರಂಥವನ್ನು ಓದುತ್ತಿದ್ದೆ. ಮತ್ತು ಆಗ ಕುಡಿದ ಆ ಆದರ್ಶ ವಾದದ 'ಡೋಜು' ನನ್ನನ್ನು ವಾಸ್ತವ ಮತ್ತು ಕಲ್ಪನೆ ಇವೆರಡನ್ನು ವಿಂಗಡಿಸಿ ನೋಡದಿರುವಂತೆ ಮಾಡಿರಬೇಕು. ನಾನು ಎಚ್ಚರಾದಾಗ ಅಳು ಬಂದಂತಾಯಿತು— ನೀವು ಕಾಣಿಸಿಕೊಂಡದ್ದು ಕಾಲದಲ್ಲಿಯೇ ಹೊರತು ದೇಶದಲ್ಲಿ ಅಲ್ಲವಲ್ಲ ಎಂದು !'

ಕೆಲವೊಂದು ಕ್ಷಣ, ಫಿಟ್ಝಪಿಯರ್ಸನ ಈ ವ್ಯಕ್ತನೆಗಳಲ್ಲಿ ನಾಟಕೀಯತೆಯ ಕೆಲವೊಂದು ಅಂಶಗಳು ಇದ್ದಂತೆ ಕಂಡರೂ, ಅವನ ಮಾತೆಲ್ಲವೂ ಮೂಲತಃ ನಾಟಕೀಯ ವಾಗಿತ್ತೆಂದು ಹೇಳುವದು ಸಮರ್ಪಕವಾಗಲಿಕ್ಕಿಲ್ಲ. ಕೆಲ ಸಲ ಹೀಗೆ ಆಗುವದುಂಟು. ಸಂಯಮವೇ ಉಳಿಯದ ಸಂದರ್ಭದಲ್ಲಿ ನಿಜವಾದ ಭಾವಾವೇಶವು ಹೊರಹೊಮ್ಮುವ ಆವಿಷ್ಕಾರದ ರೀತಿಯು ವರ್ಣನೆ—ವಾಗಾಡಂಬರಗಳಿಂದ ಬೇರೆಯಾಗಿ ಕಾಣುವದು ಸುಲಭವಾಗುವದಿಲ್ಲ. ಸತ್ಯದ ದೊಡ್ಡ ಮೊತ್ತವನ್ನು ಕೃತಕತೆಯ ಅಭಿನಿವೇಶನವು ಆವರಿಸಿ ಬಿಡುತ್ತದೆ. ಮತ್ತು ಅದರ ದುಷ್ಪರಿಣಾಮವೆಂದರೆ ; ಹಾಗೆಂದು ಗೊತ್ತಾದಾಗ, ಹೊರಗಾಣಿಕೆಯ ಧಾರಣೆಗೆ ಒಳಹುರುಳಿನ ಬೆಲೆ ಕಟ್ಟುವಂತಾಗಿ ಇಡಿಯದೆಲ್ಲವೂ ತಿರಸ್ಕರಿಸಲ್ಪಡುತ್ತದೆ.

ಆದರೆ ಗ್ರೇಸಳು ಪುರುಷರ ರೀತಿನೀತಿಗಳಲ್ಲಿ ವಿಶೇಷಜ್ಞಳಿದ್ದಿಲ್ಲ. ಅವಳು ಪ್ರಕಟಣೆಯ ರೂಪವನ್ನು ಯೋಚಿಸದೆ ಅದರ ಭಾವವನ್ನೆ ಪ್ರಶಂಸಿಸಿದಳು ಮತ್ತು ಅವಳಿಗೆ ತುಂಬ ಸಂಕೋಚವೆನಿಸಿತು. 'ಸುಂದರ ಪ್ರಾಣಿ' ಎಂಬ ಮಾತು ಅವಳ ಸೌಮ್ಯ ನಾಚುಬುರುಕ ಸ್ವಭಾವಕ್ಕೆ ಸ್ಪಷ್ಟೀಕರಣವನ್ನೇ ಬಿಗಿಯಾಗಿ ಮಾಡಿತು.

'ಆದರೆ, ಇದು ನಿಜವಿರಬಹುದೇ ?' ಆತ ಫಕ್ಕನೆ ಕೇಳಿದ, 'ನೀವು ನಿಜ ವಾಗಿಯೂ ಇಲ್ಲಿ ಬಂದಿದ್ದೀರಾ ?'

'ನಾನು ಒಪ್ಪಿಕೊಳ್ಳಲೇ ಬೇಕು. ಈ ಕೋಣೆಯಲ್ಲಿ ನಾನು ಈ ಮೊದಲು ಒಮ್ಮೆ ಬಂದಿದ್ದೆ.' ಆಕೆ ತಡವರಿಸುತ್ತ ಅಂದಳು, 'ಆ ಹೆಂಗಸು ನನಗೆ ಇಲ್ಲಿ ಒಳಗೆ ಬಿಟ್ಟಳು

ಮತ್ತು ನಿಮ್ಮನ್ನು ಕರೆ ತರಲು ಹೋದಳು. ಆದರೆ ಅವಳು ತಿರುಗಿ ಬರಲೇ ಇಲ್ಲ. ನಾನೂ ಹೊರಟೆದ್ದು ಹೋದೆ.'

'ಮತ್ತೆ ನಾನು ನಿದ್ದೆ ಹೋದದ್ದನ್ನು ನೀವು ನೋಡಿದಿರಿ', ಆತ ಗೊಣಗುಟ್ಟಿದ ಕೊಂಚ ಅಪಮಾನದ ಭಾವವನ್ನು ತೋರ್ಪಡಿಸುತ್ತ.

'ಅಹುದು — ಅಂದರೆ ನೀವು ನಿದ್ದೆಯಲ್ಲಿ ಇದ್ದದ್ದೇ ಆದರೆ ನನಗೆ ಮೋಸ ಮಾಡುತ್ತಿದ್ದಿಲ್ಲವಾದರೆ'

'ಈ 'ರೇ' ಎಳೆದು ಮಾತಾಡುವಿರೇಕೆ?'

'ನಿಮ್ಮ ಕಣ್ಣು ತೆರೆದದ್ದು ನಾನು ಕನ್ನಡಿಯಲ್ಲಿ ಕಂಡೆನು. ಆದರೆ ನಾನು ಹೊರಳಿ ನಿಮ್ಮ ಕಡೆಗೆ ನೋಡಿದಾಗ ಅವು ಮುಚ್ಚಿದವು. ಆದ್ದರಿಂದ ನನ್ನನ್ನು ಮೋಸಗೊಳಿಸು ತ್ತಿರಬೇಕೆಂದು ನಾನು ಅಂದುಕೊಂಡೆ.'

'ಎಂದೂ ಇಲ್ಲ' — ಫಿಟ್ಝಪಿಯರ್ಸ್ ಆವೇಶದಿಂದ ಆಡಿದನು, 'ನಾನೆಂದೂ ನಿಮ್ಮನ್ನು ಮೋಸಮಾಡುವುದು ಶಕ್ಯವಿಲ್ಲ.'

ಒಂದು ವರ್ಷದಷ್ಟು ಮಟ್ಟಿಗೆ ಭವಿಷ್ಯ ಜ್ಞಾನವು ಅವರಿಬ್ಬರಿಗೂ ಇದ್ದಿದ್ದರೆ ಈ ಚೆಂದವಾದ ಭಾಷಣದ ಪರಿಣಾಮವೆ ಕೆಟ್ಟು ಹೋಗುತ್ತಿತ್ತು. ಅವಳನ್ನೆಂದೂ ಮೋಸ ಮಾಡುವಂತಿಲ್ಲ! ಆದರೆ ಅವರಿಗೇ ಗೊತ್ತಿದ್ದಿಲ್ಲ. ಮತ್ತು ಆ ಮಾತು ಆ ದಿನ ಗೆದ್ದಿತು.

ಈಗ ಈ ಸಂದರ್ಶನವನ್ನು ಮುಗಿಸುವ ತ್ವರೆ ಗ್ರೇಸಳನ್ನು ಕಾಡಿತು. ಆದಾಗ್ಯೂ ಫಿಟ್ಝಪಿಯರ್ಸನ ವಾತಾವರಣದ ಒತ್ತಾಯದ ಪ್ರಭಾವ ಅವಳನ್ನು ಅಲ್ಲಿ ಹಿಡಿದಿಟ್ಟಿತು. ಅವಳು ಅನುಭವ ಸಾಲದ ನಟಿಯಂತೆ ನಿಂತಳು, ರಂಗವನ್ನು ಪ್ರವೇಶಿಸಿ ತನ್ನ ಮಾತುಗಳನ್ನು ಆಡಿ ಮುಗಿಸಿದ ಮೇಲೆ ಅಲ್ಲಿಂದ ಹೋಗುವದು ಹೇಗೆಂದು ಅರಿಯದಿರು ವವಳಂತೆ! ಆಲಿವರ ಅಜ್ಜಿಯ ವಿಚಾರ ಅವಳಿಗೆ ಹೊಳೆಯಿತು. 'ಕೂಡಲೇ ಹೋಗಿ ನಿಮ್ಮ ಔದಾರ್ಯವನ್ನು ಬಡ ಆಲಿವರಳಿಗೆ ಹೇಳುತ್ತೇನೆ' ಅವಳೆಂದಳು. 'ಅದರಿಂದ ಅವಳಿಗೆ ಒಮ್ಮೆಲೆ ಹಾಯೆನಿಸಬಹುದು.'

'ಆಲಿವರ ಅಜ್ಜಿಯದೂ ನರಗಳ ವ್ಯಾಧಿಯೇ, ಎಂಥ ವಿಚಿತ್ರ ನೋಡಿ!' ಆತ ಉತ್ತರಿಸಿದನು. ಬಾಗಿಲವರೆಗೆ ಅವಳ ಸಂಗಡ ಹೋಗುತ್ತ, 'ಒಂದು ಕ್ಷಣ ತಡೆ ಯಿರಿ; ಇವನ್ನು ನೋಡಿರಿ. ಇದು ನಿಮಗೆ ಕುತೂಹಲದ್ದೆನಿಸಬಹುದು.' ಅವನು ಆ ಕೋಣೆಯ ಆಚೆಯ ಬದಿಯ ಬಾಗಿಲನ್ನು ತೆರೆದಿದ್ದನು. ಇದುರಿನ ಕೋಣೆಯಲ್ಲಿ ಅವಳು ಒಂದು ಸೂಕ್ಷ್ಮದರ್ಶಕ ಯಂತ್ರವನ್ನು ಕಂಡಳು. 'ಅದರೊಳಗಿಂದ ನೋಡಿರಿ.' 'ದಯಮಾಡಿ, ನಿಮಗೆ ಸ್ವಾರಸ್ಯವೆನಿಸುವುದು ನೋಡಿ' ಮತ್ತೆ ಮತ್ತೆ ಅಂದನು.

ಅವಳು ಕಣ್ಣನ್ನು ಯಂತ್ರದ ಕೊಳವೆಗೆ ಹಚ್ಚಿ ನೋಡಿದಳು — ವಾಡಿಕೆಯಂತೆ ಬೆಳಕಿನ ಒಂದು ವರ್ತುಲ, ಏನೋ ವರ್ಣಿಸಲಿಕ್ಕೆ ಬಾರದ ರೀತಿಯ ಅಣುಕೋಶಗಳಿಂದ ಹರಡಿಕೊಂಡಿದ್ದು. 'ಅದು ಏನೆಂದು ತಿಳಿದಿರಿ?' ಆತ ಕೇಳಿದನು.

ಅವಳಿಗೇನು ಗೊತ್ತು ?

‘ಅದು ಮುದಿ ಜಾನ ಸೌಥನ ಮಿದುಳಿನ ಒಂದು ಚೂರು. ಅದನ್ನೆ ನಾನು ಸಂಶೋಧಿಸುತ್ತಿದ್ದೇನೆ.’

ಅವಳು ಒಮ್ಮೆಲೆ ಬೆಚ್ಚಿಬಿದ್ದು ಹಿಂದೆಗೆದಳು — ಅಸಹ್ಯದಿಂದ ಅಲ್ಲ, ಅದು ಅಲ್ಲಿ ಹೇಗೆ ಬಂದಿತೆಂಬ ಆಶ್ಚರ್ಯದಿಂದ ! ಫಿಟ್ಝಪಿಯರ್ಸ ನಕ್ಕನು.

‘ಇಲ್ಲಿ ನಾನು ಹೀಗೆ ಶರೀರ ಶಾಸ್ತ್ರದ ಹಾಗೂ ಅತಿ ಭೌತಿಕ ತತ್ವಶಾಸ್ತ್ರದ ವ್ಯಾಸಂಗವನ್ನು ನಡೆಯಿಸುವುದರಲ್ಲಿ ತೊಡಗಿದ್ದೇನೆ — ವಾಸ್ತವ ಜಡ ಜಗತ್ತು ಮತ್ತು ತಾತ್ವಿಕ ಆದರ್ಶ ಜಗತ್ತು ಇವೆರಡರ ಸಂಪರ್ಕ ರೇಖೆ ಎಲ್ಲಿರಬಹುದೆಂಬುದನ್ನು ಶೋಧಿಸಲು ಹೋಗುತ್ತಿದ್ದೇನೆ — ಮತ್ತೆ ನಿಮ್ಮ ಸೂಕ್ಷ್ಮಭಾವ ಅ ದ ರಿಂ ದ ನೊಂದು ಕೊಳ್ಳುತ್ತದೆ !’

‘ಛೇ ಇಲ್ಲ. ಫಿಟ್ಝಪಿಯರ್ಸ !’ ಗ್ರೇಸಳು ಕಳಕಳಿಯಿಂದ ಅಂದಳು, ‘ ಹಾಗೆ ಅಲ್ಲವೆ ಅಲ್ಲ. ನಿಮ್ಮಲ್ಲಿಯ ದೀಪವನ್ನು ರಾತ್ರೆಯೆಲ್ಲ ನೋಡಿದಾಗ ನನಗೆ ಗೊತ್ತು — ನೀವು ಎಷ್ಟು ಗಾಢವಾಗಿ ಕೆಲಸದಲ್ಲಿಯೂ, ಚಿಂತನೆಯಲ್ಲಿಯೂ ತೊಡಗಿರುವಿರೆಂದು. ನಿಮ್ಮ ವ್ಯಾಸಂಗಕ್ಕಾಗಿ ಧಿಕ್ಕರಿಸುವುದರ ಬದಲು ನಾನು ನಿಮ್ಮನ್ನು ಅತ್ಯಂತ ಪ್ರಶಂಸಿಸುತ್ತೇನೆ.’

ಸೂಕ್ಷ್ಮದರ್ಶಕದಿಂದ ಮೇಲೆ ಎತ್ತಿದ ಅವಳ ಮೋರೆ ಇಷ್ಟು ಮುದ್ದಾಗಿ, ಕಳಕಳಿಯುದಾಗಿ ತನ್ನನ್ನೆ ತಾನು ಮರೆತಂತೆ ತೋರಿತು ; ವಿಕಾರವಶವಾಗುವ ವೃತ್ತಿಯ ಫಿಟ್ಝಪಿಯರ್ಸನಿಗೆ, ತನ್ನ ಮೋರೆಯಿಂದ ಅದಕ್ಕೆ ಇರುವ ಸರಳ ಅಂತರವನ್ನು ಒಮ್ಮೆಲೆ ತೊಡೆದು ಹಾಕಬೇಕೆಂಬ ಬಯಕೆ ಮಿಕ್ಕಿತು. ಅವನ ಕಣ್ಣಿನಲ್ಲಿ ಅಂಥದೇನೊ ಭಾವ ಕಂಡಿತೋ ಇಲ್ಲವೋ, ಗ್ರೇಸಳು ಸೂಕ್ಷ್ಮದರ್ಶಕ ಯಂತ್ರದ ಹತ್ತಿರ ಮತ್ತೆ ಹೊತ್ತು ಕಳೆಯಲಿಲ್ಲ. ಲಗುಬಗೆಯಿಂದ ಹೊರಹಾದಿ ಹಿಡಿದಳು—ಹಿಮಮಳೆಗಳ ಕಲಬೆರಕೆಯ ಸುರಿಮಳೆಯಲ್ಲಿ.

೨೦

ಸೌಥನ ಮಿದುಳಿನ ಕುರಿತು ಸಂಶೋಧನೆ ಮುಂದುವರಿಸುವ ಬದಲು ಫಿಟ್ಝಪಿಯರ್ಸ ಕೋಚಿನಲ್ಲಿ ಒರಗಿ ನಡೆದ ಸಂದರ್ಶನವನ್ನೇ ಮೆಲುಕು ಹಾಕತೊಡಗಿದನು. ತನ್ನ ಸಾನ್ನಿಧ್ಯಕ್ಕೆ ಗ್ರೇಸಳು ತೋರ್ಪಡಿಸಿದ ಸೂಕ್ಷ್ಮ ಸಂವೇದನೆಯ ಪ್ರತಿಕ್ರಿಯೆ ಕುತೂಹಲ ಕಾರಿ ಆಗಿತ್ತು. ಅವಳ ಬಾಳಿನ ಹೊನಲು ಅವನಿಂದ ಆಕರ್ಷಿತವಾಗುವುದರ ಬದಲು ಚಲವಿಚಲವಾದಂತಿತ್ತು. ಮತ್ತು ಇದುವೆ ಅವಳ ಸಾಮಾನ್ಯ ಮೋಹಕತೆಗೆ ಒಂದು ವಿಶೇಷ ಸ್ವಾರಸ್ಯವನ್ನು ಸೇರಿಸುವಂತೆ ಆಯಿತು.

ಫಿಟ್ಝ್‌ಪಿಯರ್ಸ್ ಒಂದು ಸುಸ್ಪಷ್ಟ ರೀತಿಯಲ್ಲಿ ವಿಜ್ಞಾನಿಯಾಗಿದ್ದನು. ಎಲ್ಲ ಭೌತಿಕ ಘಟನೆಗಳನ್ನು ಪ್ರಶ್ನಿಸಿ ವಿಶ್ಲೇಷಿಸಲಿಕ್ಕೆ ಆತ ಆತುರದಿಂದ ಸಿದ್ಧ. ಆದಾಗ್ಯೂ ಆತ ಮೂಲತಃ ಆದರ್ಶವಾದಿಯಾಗಿದ್ದನು. ಅಪೂರ್ಣದ ಹಿಂದೆ ಪೂರ್ಣವಿರುವುದೆಂದು ಆತ ನಂಬಿದ್ದನು. ತೀರ ಸರ್ವಸಾಧಾರಣತೆಯ ರಾಶಿಯಲ್ಲಿಯೂ ಅಸಾಧಾರಣವಾದ ಸಂಗತಿಗಳನ್ನು ಕಂಡು ಹಿಡಿಯಬಹುದೆಂದು ಆತ ನಂಬಿದ್ದನು. ಭೌತಿಕ ಪರಿಸ್ಥಿತಿಗಳೆಲ್ಲ ಸರಿಸಮಾನವಿದ್ದರೂ, ಪರೀಕ್ಷಿಸಿದ ಉದಾಹರಣೆಗಳಿಗಿಂತ ಪರೀಕ್ಷಿಸದೆ ಉಳಿದ ಉದಾಹರಣೆ ಏನೋ ಬೇರೆ ಬಗೆಯದಾಗಬಹುದೆಂದು ಆತ ಭಾವಿಸುತ್ತಿದ್ದನು. ತನ್ನ ಸ್ವಂತ ವ್ಯಕ್ತಿತ್ವ ಅಪಾರ ಶಕ್ಯತೆಗಳಿಂದ ಕೂಡಿರುವದೆಂದು ತಿಳಿದ ಆತನು ನಿಜವಾಗಿಯೂ, ಅವನ ಬದುಕನ್ನು ರೂಪಿಸಿದ ಘಟಕಗಳೇ ಇನ್ನೂ ಸಾವಿರಾರು ವ್ಯಕ್ತಿಗಳಲ್ಲಿ ದುರ್ದಶೆಯ ಫಲಿತಾಂಶವನ್ನೇ ಉಂಟುಮಾಡಿದ್ದುಂಟು ! ಈ ಹಿಂಟೋಕ ಹಳ್ಳಿಯಲ್ಲಿ ವಿರುದ್ಧ ಲಿಂಗದ ಒಮ್ಮೆಲೆ ಅಲೌಕಿಕವಾದ, ಅಪವಾದಾತ್ಮಕವಾದ ವ್ಯಕ್ತಿಯನ್ನು ಶೋಧಿಸಿದ್ದು ಒಂದು ಭವ್ಯವಾದ ವಿಶೇಷವೆಂದು ಭಾವಿಸಿದನು.

ಫಿಟ್ಝ್‌ಪಿಯರ್ಸನ ಒಂದು ಚಟವು ತನ್ನಷ್ಟಕ್ಕೇ ಮಾತನಾಡುವದು. ಇದು ಅವನ ವಯಸ್ಸಿಗಿಂತ ಹೆಚ್ಚಿನ ಪ್ರಾಯದ ಕನಸುಗಾರರಲ್ಲಿ ಸಾಮಾನ್ಯವಾಗಿ ಕಂಡು ಬರುವ ಚಟ. ಆತ ನೆಲಕ್ಕೆ ಹಾಸಿದ ಜಮಖಾನೆಯಲ್ಲಿ ಹೆಚ್ಚು ಎದ್ದು ಕಾಣುವ ಹೂವುಗಳನ್ನೇ ಹೆಕ್ಕಿಮೆಟ್ಟುತ್ತ ಕೋಣೆಯಲ್ಲಿ ಶತಪಥ ಹಾಕುತ್ತ ಗೊಣಗುಡಹತ್ತಿದನು, 'ನಾನು ಹಿಂಟೋಕ ಹಳ್ಳಿಯಲ್ಲಿ ಇರುವತನಕವೂ ಈ ಅಲೌಕಿಕ ಹುಡುಗಿ ನನ್ನ ಕಣ್ಣಿನ ಬೆಳಕಾಗುವಳು, ಮತ್ತು ಈ ಸನ್ನಿವೇಶದ ವಿಶಿಷ್ಟ ಸೊಗಸೇನೆಂದರೆ ನಮ್ಮಿಬ್ಬರ ಅನ್ಯೋನ್ಯ ಸಂಬಂಧವೂ ವೃತ್ತಿಯೂ ಶುದ್ಧ ಸ್ವಾಭಾವಿಕ ಸಹಜತೆಯದಾಗುವದು. ಸಾಮಾಜಿಕವಾಗಿ ನಾವು ಎಂದಿಗೂ ಸಲಿಗೆಯ ಮಟ್ಟಕ್ಕೆ ಬರುವಂತಿಲ್ಲ. ಅವಳು ಎಷ್ಟೇ ಮೋಹಕಳಾಗಿದ್ದರೂ, ಮದುವೆಯ ಧೋರಣೆ ಇಲ್ಲಿ ಹಾಸ್ಯಾಸ್ಪದವು. ಅಂಥ ಧೋರಣೆ ಇಂಥ ಪರಿಚಯದ ರಂಜಕ ಸ್ವರೂಪವನ್ನೇ ಕೆಡಿಸಬಹುದು. ಅಲ್ಲದೆ ನನ್ನ ಬಾಳಿನ ವ್ಯಾವಹಾರಿಕ ಅಂಗಕ್ಕೆ ಇತರ ಧೋರಣೆಗಳು ಇರುತ್ತವೆ.'

ತನ್ನ ಅಂತಸ್ತಿಗೆ ಸರಿಹೋಗುವ ಕುಲದ ಹಾಗೂ ತನಗಿಂತಲೂ ಹೆಚ್ಚಿನ ಹಣವಂತಿಕೆಯ ಹೆಣ್ಣನ್ನೆ ಮದುವೆಯಾಗುವದರ ಲಾಭಗಳ ಬಗೆಗೆ ಒಂದು ವಿಚಾರದ ನೇಮವನ್ನು ಆತ ನೆನಪಿಸಿಕೊಂಡನು. ಆದರೆ ಸದ್ಯದ ಧ್ಯಾನದ ಒಂದು ಲಕ್ಷ್ಯವೆಂದು ಗ್ರೇಸ ಮೆಲಬರಿಯೂ ತನ್ನ ಜೀವಕ್ಕೆ ಕಳೆ ತುಂಬಲು, ತನ್ನ ದಿನಗಳ ಬೇಸರವನ್ನು ಕಳೆಯಲು ಸಾಕೆಂದೂ ಹಂಬಲಿಸಿದನು.

ಅವಳ ಪ್ರಥಮ ದರ್ಶನದಲ್ಲಿ ಸಂಭಾಷಣೆ ಇದ್ದಿಲ್ಲ. ಆಗ ಊರಿನ ಮರದ ವ್ಯಾಪಾರಿಯ ಚೆಲುವೆಯಾದ ಮಗಳೊಂದಿಗೆ ಒಂದು ಗ್ರಾಮ್ಯ ಸಲಿಗೆ ಕಟ್ಟಿಕೊಳ್ಳಬೇಕೆಂಬ ಸ್ವೈರ ವಿಚಾರ ಅವನಲ್ಲಿ ಮೂಡಿತ್ತು, ಅದೀಗ. ಗ್ರೇಸಳು ಸ್ವತಃ ಹೇಗಿರವಳೆಂಬುದನ್ನು ಕಂಡುಕೊಂಡಾಗ ಅವನಿಗೆ ನೋವನ್ನೇ ಉಂಟುಮಾಡಿತು.

ಅವಳಂಥವಳೊಂದಿಗೆ ವೈಯಕ್ತಿಕ ಸಮಾಗಮವು ಒಂದು ಸಭ್ಯ ಸಂವಾದ, ಪರಸ್ಪರರ ಕಲ್ಪನಾ ಪ್ರಪಂಚದ ಶೋಧನೆ—ಇವುಗಳಿಗಿಂತ ಕೆಳಮಟ್ಟದ ರೂಪವನ್ನು ತಾಳಲಾರದು. ಆತನು ಅವಳ ತಂದೆಯ ಮನೆಗೆ ಭೆಟ್ಟಿ ಕೊಡುವಂತೆ ಇದ್ದಿಲ್ಲ. ಅಂದಾಗ ಓಣಿಯಲ್ಲಿ, ಕಾನಿನಲ್ಲಿ, ಚರ್ಚಿಗೆ ಬರಹೋಗುವಾಗ, ಅಥವಾ ಅವಳ ಮುಂದಿನಿಂದ ಹಾಯುವಾಗ ಆಗಬಹುದಾದ ಅಪಸರದ ಭೇಟಿಗಳೇ ಅವರೀರ್ವರ ಪರಿಚಯವನ್ನು ಪೋಷಿಸುವ ಖಾದ್ಯವಾಗಬೇಕು.

ಅಂಥ ಪೂರ್ವಾಪೇಕ್ಷಿತ ಇಣಕು ನೋಟಗಳು ಘಟನೆಯಾಗಿ ಒದಗಿ ಬಂದವು. ಒಂದರಗಳಿಗೆಗಿಂತ ಹೆಚ್ಚಲ್ಲದ ಭೆಟ್ಟಿಗಳು, ಆಗಾಗ್ಗೆ ಕೂಡಿಬಂದವು, ಅನ್ಯೋನ್ಯ ಆಸಕ್ತಿಯನ್ನು ಬೆಳೆಯಿಸಿ, ಅಂಥ ಹಳ್ಳಿಯ ಏಕಾಂತದ ಸ್ಥಳದಲ್ಲಿ ವಿಶ್ವಾಸದ ಕಾವನ್ನು ಹೊತ್ತಿಸುವಂತಿತ್ತು. ರೆಂಬೆಕೊಂಬೆಗಳಲ್ಲಿ ಮರ ಮೊಗ್ಗೆ ಬಿಡುವಂತೆ ಆಯಿತು ಅವರ ಸಮಾಗಮ. ಇಂಥ ಒಂದು ಕ್ಷಣದಿಂದಲೆ ಅವರು ಗೆಳೆಯರಾದರೆಂದು ಬೆಟ್ಟಿಟ್ಟು ಹೇಳುವಂತೆ ಇದ್ದಿಲ್ಲ. ಆದರೆ ಚಳಿಗಾಲದಲ್ಲಿ ಒಬ್ಬರಿಗೊಬ್ಬರು ಅಪರಿಚಿತ ಆಗಂತುಕರಾಗಿದ್ದ ಅವರಿಬ್ಬರಲ್ಲಿ ಈಗ ಒಂದು ಸೂಕ್ಷ್ಮವಾದ ಸುಕುಮಾರವಾದ ತಿಳುವಳಿಕೆ ಸ್ಥಾಪಿತವಾಗಿತ್ತು.

ಸುಗ್ಗಿಯ ಹಂಗಾಮು ಒಮ್ಮೆಲೆ ಬಂದಂತೆ ಇತ್ತು. ಒಂದು ರಾತ್ರೆ ಬೆಳಗಾಗುವ ಅಷ್ಟರಲ್ಲಿಯೆ ಉಬ್ಬಿ ನಿಂತ ಮೊಗ್ಗೆಗಳ ಮುದ್ರೆ ಒಡೆಯಿತು. ಮರಗಳ ಸೆರೆಗಳಲ್ಲಿ ಸೊನೆಯು ಚಿಮ್ಮಿದ್ದು ಕೇಳಿಬರುವಂತೆ ಇತ್ತು. ಏಪ್ರಿಲ್ ಕೊನೆಯ ಹೂಗಳು ಕಣ್ಮರೆಯಲ್ಲಿ ಅರಳಿ ನಿಂತವು—ಎಂದಿನಿಂದಲೋ ಅರಳುತ್ತಿದ್ದಂತೆ. ಆದರೆ ಹಿಂದಿನ ದಿನ ಅವುಗಳ ಸುಳಿವೇ ಇದ್ದಿಲ್ಲ. ಹಕ್ಕಿಗಳು ಮೈತೊಳೆಯಿಸಿಕೊಳ್ಳಲಿಕ್ಕೆ ಪರಿವೆ ಮಾಡಲಿಲ್ಲ. ಮನೆ ಒಳಗಿನವರೆಂದರು, 'ನಾವು ನೈಟಿಂಗೇಲ ಪಕ್ಷಿಯ ದನಿ ಕೇಳಿದೆವು!' ಹೊರಬಯಲಿನವರು ತುಸು ತಿರಸ್ಕಾರದಿಂದಲೆ ಉತ್ತರವಿತ್ತರು, 'ಎರಡು ವಾರ ಹಿಂದೆಯೇ ನಾವು ಅದರ ದನಿ ಕೇಳಿದ್ದೇವೆ!'

ನಮ್ಮ ತರುಣ ಡಾಕ್ಟರನ 'ಪ್ರಾಕ್ಟೀಸು' ಲಂಡನ್ನಿನ ಸರ್ಜನ್ನನಷ್ಟು ವಿಶಾಲವಾದದ್ದು ಇದ್ದಿಲ್ಲ. ಆದ್ದರಿಂದ ಆತ ಕಾನಿನಲ್ಲಿ ಆಗಾಗ್ಗೆ ತಿರುಗಾಟಕ್ಕೆ ಹೋಗುತ್ತಿದ್ದನು. ನಿಜವಾಗಿಯೂ ಅವನಿಗೆ ಇದ್ದ ಪ್ರಾಕ್ಟೀಸನ್ನು ಅವನು ಮನಸ್ಸುಗೊಟ್ಟು ಬೆಳೆಯಿಸಿ ಅಸಾಮಾನ್ಯವಾಗಿ ವೃದ್ಧಿಗೊಳಿಸುವ ಕೆಲಸಕ್ಕೆ ಬಿದ್ದಿದ್ದಿಲ್ಲ.

ಒಂದು ದಿನ ಕೈಯಲ್ಲಿ ಒಂದು ಪುಸ್ತಕ ಎತ್ತಿಕೊಂಡು ಆತನು ಕಾನಿನಲ್ಲಿ ಓಕ್ ಮರಗಳೇ ಹೆಚ್ಚಾಗಿ ಬೆಳೆದ ತಾಣಕ್ಕೆ ಹೋದನು. ಅದೊಂದು ಪ್ರಶಾಂತವಾದ ಸಂಜೆಯಾಗಿತ್ತು. ವನಸ್ಪತಿ ಲೋಕವು ಎಲ್ಲೆಡೆಯಲ್ಲಿಯೂ ಮಹತ್ಸಾಧನೆಯಲ್ಲಿ ತೊಡಗಿದಂತೆ ಇತ್ತು. ಆಗ ಆತ ದೂರದಲ್ಲಿ ಒಂದು ವಿಚಿತ್ರ ಸದ್ದನ್ನು ಕೇಳಿದನು—ಬಾತುಕೋಳಿಗಳ ಕೂಗಿನಂತೆ. ಆ ಸದ್ದು ಆ ಸಮಯಕ್ಕೆ ಅಲ್ಲಿ ಸಾಮಾನ್ಯವಾಗಿದ್ದರೂ ಅವನಿಗೆ ಅದು ಸಾಮಾನ್ಯವಿದ್ದಿಲ್ಲ.

ಮರಗಳ ನಡುವಿನಿಂದ ಅತ್ತಕಡೆಗೆ ನೋಡಿದಾಗ ಫಿಟ್ಝ್ ಪಿಯರ್ಸನಿಗೆ ಆ ಸದ್ದಿನ ಉಗಮ ಗೊತ್ತಾಯಿತು. ಮರಗಳ ತೊಗಟೆ ತೆಗೆಯುವ ಹಂಗಾಮು ಆರಂಭ ವಾಗಿತ್ತು. ಮತ್ತು ಆತ ಕೇಳಿದ ಸದ್ದು ಮರದಕಾಂಡ ಮತ್ತು ತೊಗಟೆಯನ್ನು ಸೀಳಿ ಹರಿಯುವ ಕತ್ತಿಯ ಸಪ್ಪಳವಾಗಿತ್ತು. ಮೆಲಬರಿ ತೊಗಟೆಯ ವ್ಯಾಪಾರವನ್ನು ಹೇರಳವಾಗಿ ಮಾಡುತ್ತಿದ್ದನು. ಆತ ಗ್ರೇಸಳ ತಂದೆ. ಅವಳೂ ಆ ಸ್ಥಳದಲ್ಲಿ ಬಂದಿರ ಬಹುದು. ಆದ್ದರಿಂದ ಫಿಟ್ಝ್ ಪಿಯರ್ಸ ಆ ಕಡೆಗೆ ಸೆಳೆಯಲ್ಪಟ್ಟನು. ಅಲ್ಲಿ ಹತ್ತಿರಕ್ಕೆ ಹೋದಾಗ ಆತ ಜಾನ್ ಅಪ್ಜಾನ್, ತಿಮೋತಿ ತಂದೆ-ಮಗ, ವಿಂಟರಬೋರ್ನನ ಆಳು ರಾಬರ್ಟ ಕ್ರೀಡಲ್ ಮುಂತಾದವರನ್ನು ಗುರುತಿಸಿದನು. ಮಾರ್ಟಿ ಸೌಥಳು ಸಹಾಯಕ್ಕೆ ಬಂದಿದ್ದಳು. ಹತ್ತಿರದಲ್ಲಿಯೇ ಹಾಲು ಹಿಂಡುವ ದೊಡ್ಡ ಬೊಡ್ಡೆಯಲ್ಲಿ ಸಿಡರ ಮದ್ಯವು ತುಂಬಿತ್ತು. ಅದರಲ್ಲಿ ಅರ್ಧ ಪಾಂಯ್ಟಿನ ಪೇಲಿಯೊಂದು ತೇಲುತ್ತಿತ್ತು. ಮಂದಿ ಆ ಬೊಡ್ಡೆಯನ್ನು ಹಾಯ್ದು ಹೋಗುವಾಗೆಲ್ಲ ಆ ಪೇಲೆಯನ್ನು ಅದ್ದಿಸಿ ತುಂಬಿ ಸಿಡರ ಕುಡಿದು ಮುಂದೆ ಸಾಗುತ್ತಿದ್ದರು.

ಚರ್ಮ ಸುಲಿಯುವ ಕರ್ಮಕ್ಕೆ ಬಲಿಯಾದ ಪ್ರತಿಯೊಂದು ಮರ ಮೊದಲಿಗೆ ಅಪ್ಜಾನನ ಲಗ್ಗೆಗೆ ಗುರಿ ಆಗುತ್ತಿತ್ತು. ಸಣ್ಣ ಕತ್ತಿಯಿಂದ ಆತ ಮರದ ಕೊರಳನ್ನು ಒಂದೆರಡು ಅಡಿ ಅಗಲಕ್ಕೆ, ರೆಂಬೆ, ಕೊಂಬೆ ಪಾಚಿ ಬಂದಳಿಕೆಗಳನ್ನು ಸವರಿ ಹಸನ ಮಾಡುತ್ತಿದ್ದನು—ನೆಲದಿಂದ ಮೇಲಕ್ಕೆ. ಇದು ಕಟಕನು ಪ್ರಾಣಿಗಳಿಗೆ ಮಾಡುವ ಕಿರಿಯ ಕ್ಷೌರದಂತಿತ್ತು. ಅದಾದ ನಂತರ ಆ ಮರವನ್ನು ಒಂದು ಆಳು ನಿಲುಕುವಷ್ಟು ಎತ್ತರದವರೆಗೂ ತೊಗಟೆ ಕೀಳಲು ಅಣಿ ಮಾಡುತ್ತಿದ್ದರು. ವನಸ್ಪತಿ ಸೃಷ್ಟಿಯ ಸುಂದರಾಕೃತಿಯೊಂದು ಅಂದಗೆಟ್ಟು ಹಾಸ್ಯಾಸ್ಪದವಾಗಿ ಕಾಣುವಂತಿದ್ದರೆ ಅದು ಇಂಥ ಸಮಯಕ್ಕೆ. ಈಗ ಓಕ ಮರವು ಬತ್ತಲೆಗಾಲಿನಿಂದ ನಿಂತಂತೆ ತೋರುತ್ತಿತ್ತು. ಆ ಮೇಲೆ ಕೊಡಲಿಯ 'ರಾಮ'ನು ಒಂದು ಕಾಂಡದ ಸುತ್ತಲು ಗುರುತಿನ ಬಳೆಯನ್ನು ಕೊಯ್ದು ಕೂಡಲೆ ತಿಮೊತಿ ಪಿತಾ ಪುತ್ರರು ತಮ್ಮ ಅಡ್ಡ ಕರಗಸದಿಂದ ಮರವನ್ನು ಕೊಯ್ಯುವ ಕೆಲಸವನ್ನು ಮುಗಿಸಿ ಬಿಡುತ್ತಿದ್ದರು.

ಮರ ಅಡ್ಡ ಬಿದ್ದೊಡನೆ ತೊಗಟೆ ಸುಲಿಯುವರು ಅದನ್ನು ಮಿಡತೆಗಳಂತೆ ಮುತ್ತುತ್ತಿದ್ದರು. ಚೆಲ್ಲಿಯ ಒಂದು ಚೂರು ಉಳಿಯುತ್ತಿದ್ದಿಲ್ಲ. ಮಾರ್ಟಿ ಸೌಥಳು ಕಾಂಡದ ಮೇಲ್ಭಾಗಗಳನ್ನು ಸುಲಿಯುವುದರಲ್ಲಿ ಒಳ್ಳೆಯ ಪಳಗಿದವಳು. ಟೊಂಗೆಗಳ ಮತ್ತು ಮೊಗ್ಗೆಗಳ ರಾಶಿಯಲ್ಲಿ ಅವಳು ಪಂಜರದಲ್ಲಿ ಬಿದ್ದ ದೊಡ್ಡ ಹಕ್ಕಿಯಂತೆ ನಿಂತಿದ್ದಳು. ಕತ್ತಿಯನ್ನು ತೀರ ಚಿಕ್ಕ, ತೀರ ದೂರದ ಟೊಂಗೆಗಳ ತುತ್ತ ತುದಿಯ ವರೆಗೂ ಅವಳು ಓಡಿಸುತ್ತಿದ್ದಳು. ಅಲ್ಲಿಯ ತನಕ ಗಂಡಸರ ತಾಳ್ಮೆ ತರಬೇತಿಗಳು ಮುಟ್ಟುತ್ತಿದ್ದಿಲ್ಲ — ಈ ಟೊಂಗೆಗಳು ತಮ್ಮ ಜೀವಮಾನದಲ್ಲಿ ಸೂರ್ಯ ಚಂದ್ರರ ತೀರ ಮುಂಚಿನ ಕಿರಣಗಳನ್ನು ಹಿಡಿದು, ಕೆಳಗಡೆಗೆ ಬೆಟ್ಟವೆಲ್ಲ ಇನ್ನೂ ಕತ್ತಲೆಯಲ್ಲಿ ಇರುವಾಗಲೂ, ಬೆಳಗುತ್ತಿದ್ದವು.

'ಮಾರ್ಟಿ, ನಿನ್ನ ಆಯುಧ ಅವರೆಲ್ಲರದಕ್ಕಿಂತ ಚೆನ್ನಾಗಿರುವಂತೆ ಕಾಣುತ್ತದೆ.' ಫಿಟ್ಜ್‌ಪಿಯರ್ಸ್ ಅಂದನು.

'ಇಲ್ಲ, ರಾಯರೆ', ಆಕೆ ಅಂದಳು ತನ್ನ ಕತ್ತಿಯನ್ನು ಎತ್ತಿ ಹಿಡಿದು. ಅದರ ಅಲಗಿಗೆ ಕುದುರೆಯ ಕಾಲೆಲುಬಿನದೊಂದು ಹಿಡಿಕೆ ಜೋಡಿಸಿತ್ತು. 'ಇಷ್ಟೇ, ಅವರಿಗೆಲ್ಲ ತಾಳ್ಮೆ ಕಡಿಮೆ. ಅವರು ಟೊಂಗೆಟಿಸಿಲುಗಳಿಗೆ ಹೊತ್ತು ಹಾಳು ಮಾಡುವವರಲ್ಲ. ನನ್ನದಕ್ಕಿಂತ ಅವರ ವೇಳೆಗೆ ಬೆಲೆ ಹೆಚ್ಚು ನೋಡಿ.'

ಆ ಸ್ಥಳದಲ್ಲಿ ಒಂದು ಚಿಕ್ಕ ಚಪ್ಪರ ಹಾಕಿದ್ದರು. ಅದರ ಇದುರಿಗೆ ಒಂದು ಬೆಂಕಿ ಉರಿಯುತ್ತಿತ್ತು. ಅದರ ಮೇಲೆ ಒಂದು ಕಿಟ್ಲಿ ಸಿಳ್ಳು ಹಾಕುತ್ತಿತ್ತು. ಫಿಟ್ಜ್‌ಪಿಯರ್ಸ್ ಚಪ್ಪರದ ಒಳಗಡೆಗೆ ಕೂತು ತನ್ನ ಓದನ್ನು ಮುಂದುವರಿಸಿದನು. ಆದರೆ ನಡುನಡುವೆ ಮುಂದೆ ನಡೆಯುತ್ತಿದ್ದ ದೃಶ್ಯವನ್ನು ಅದರ ನಟರನ್ನೂ ನೋಡಲು ತಡೆಯುತ್ತಿದ್ದನು.

ತಾನು ಇಲ್ಲಿಯೇ ನೆಲೆಸಿ ಗ್ರೇಸ ಮೆಲಬರಿಯನ್ನು ಮದುವೆಯಾಗಿ ಈ ವನವಾಸಿ ಜೀವನದೊಂದಿಗೆ ಸಮರಸವಾಗಬಹುದೇ — ಎಂಬ ವಿಚಾರವು ಒಂದು ಕ್ಷಣ ಅವನ ಮನಸ್ಸಿನ ಅಡ್ಡ ಹಾಯ್ದು ಹೋಯಿತು. ಇಲ್ಲಿಗಿಂತ ಇನ್ನು ಮುಂದರಿದು ಪ್ರಪಂಚ ದಲ್ಲಿ ದೂರ ಹೋಗುವುದಾದರೂ ಏಕೆ? ಸುಖದ ರಹಸ್ಯ ಇರುವುದೇ ಆಕಾಂಕ್ಷೆಗಳನ್ನು ಪರಿಮಿತಗೊಳಿಸುವುದರಲ್ಲಿ; ಈ ಮಂದಿಯ ವಿಚಾರಗಳೆಲ್ಲ ಹಿಂಟೋಕ ಹಳ್ಳಿಯ ಈ ಮಲೆನಾಡಿನ ಅಂಚಿನೊಂದಿಗೆ ಮುಗಿಯುವಂಥವು; ತನ್ನದೂ ಹಾಗೆ ಏಕೆ ಆಗಬಾರದು? ಆ ಸುತ್ತಲಿನ ಜನರಲ್ಲಿಯೆ ತನ್ನ ಅಪೇಕ್ಷೆ ಆಕಾಂಕ್ಷೆಗಳನ್ನು ಸೀಮಿತ ಮಾಡಿಡುವಷ್ಟು ವೈದ್ಯಕೀಯ 'ಪ್ರಾಕ್ಟೀಸು' ತನ್ನದೇಕೆ ಇರಬಾರದು?

ಈ ನಡುವೆ ಮಾರ್ಟಿ ಸೌಥಳು ಆ ಅದರ್ರುವ ಟೊಂಗೆಗಳ ಮೇಲಿನ ತನ್ನ ಚಟುವಟಿಕೆಗಳನ್ನು ನಿಲ್ಲಿಸಿ, ಆ ಅಡ್ಡಬಿದ್ದ ಓಕನ್ನು ಬಿಟ್ಟು ಚಪ್ಪರದೊಳಗೆ ಬಂದಳು, ಮತ್ತು ಚಹವನ್ನು ತಯಾರಿಸಿದಳು. ಅದು ಸಿದ್ಧವಾದೊಡನೆ ಗಂಡಸರನ್ನೆಲ್ಲ ಒಳಗೆ ಕರೆಯಲಾಯಿತು. ಫಿಟ್ಜ್‌ಪಿಯರ್ಸನೂ ಅದೇ ವೃತ್ತಿಯಲ್ಲಿ ಇದ್ದರಿಂದ ಅವರೊಂದಿಗೆ ತಾನೂ ಕೂತನು. ಅವನು ಇಲ್ಲಿ ಹೊತ್ತು ಕಳೆಯುತ್ತಿದ್ದುದರ ಗುಪ್ತ ಉದ್ದೇಶವು ಕಾಣಿಸಿಕೊಂಡಿತು. ದೂರದಲ್ಲಿ ವಾಹನದ ಸಂದುಗಳ ಮಂದವಾದ ಸದ್ದು ಕೇಳಿ ಬಂದಿತು. ಒಬ್ಬ ಏನೆಂದನು, 'ಇದೋ ಅವರು ಬಂದರು', ಅವರೆಲ್ಲ ತಲೆ ಹೊರಳಿಸಿ ಮೆಲಬರಿಯ ಕುದುರೆ ಟಾಂಗಾ ಬರುತ್ತಿರುವುದನ್ನು ಕಂಡರು. ಅದರ ಗಾಲಿಗಳ ಸದ್ದು ಹಾವಸೆಯಲ್ಲಿ ಅಡಗಿ ಹೋಗಿತ್ತು.

ಆ ಮರದ ವ್ಯಾಪಾರಿಯು ಅಡ್ಡಬಿದ್ದ ಮರಗಳ ಕಾಂಡಗಳ ನಡುವಿನಿಂದ ಕುದುರೆ ಯನ್ನು ಹಾಯಿಸುತ್ತಿರುವಾಗ ಹೆಜ್ಜೆ ಹೆಜ್ಜೆಗೆ ಹೊರಳಿ ಹಿಂದೆ ಕೂತ ಮಗಳಿಗೆ ಎಲ್ಲಿ ಹೇಗೆ ತಲೆ ತಗ್ಗಿಸಿ, ಅಡ್ಡ ತೂಗುವ ಟೊಂಗೆಗಳನ್ನು ತಪ್ಪಿಸಿಕೊಳ್ಳಬೇಕೆಂದು ತಿಳಿಸು ತ್ತಿದ್ದನು. ತೊಗಟೆ ಸುಲಿಯುವುದನ್ನು ಅದೇ ಹೊತ್ತಿಗೆ ತಡೆದ ಸ್ಥಳದಲ್ಲಿ ಅವರು ನಿಂತರು. ಮೆಲಬರಿ ಕುತೂಹಲದಿಂದ ತೊಗಟೆಗಳ ರಾಶಿಯನ್ನು ನೋಡಿದನು.

ಕೆಲಸಗಾರರು ಕೂತೆಡೆಗೆ ಸಮೀಪಿಸಿ ಅವರು ಚಹದ ಒಂದು ಬಟ್ಟಲು ಕುಡಿಯೆಂದು ಕೂಗಿ ಮಾಡಿದ ಸ್ವಾಗತವನ್ನು ಸ್ವೀಕರಿಸಿದನು. ಅದಕ್ಕಾಗಿ ಕುದುರೆಯನ್ನು ಒಂದು ಟೊಂಗೆಗೆ ಕಟ್ಟಿದನು.

ಗ್ರೇಸಳು ಅವರ ಯಾವುದೇ ಪೇಯವನ್ನು ಕೊಳ್ಳಲು ಒಪ್ಪಲಿಲ್ಲ. ಗಿಗ್‌ಗಾಡಿಯಲ್ಲಿಯೆ ಉಳಿದಳು. ಓಕಮರಗಳ ನಡುನಡುವೆ ಹಬ್ಬಿದ ಹೊಲ್ಲಿ ಪೊದೆಗಳೊಳಗಿಂದ ಜಿನುಗು ದಾರಗಳಂತೆ ತೂರಿ ಬರುವ ಬಿಸಿಲನ್ನು ಕನಸುಗಣ್ಣಿನಿಂದ ನೋಡುತ್ತ ಕುಳಿತಳು.

ಮೆಲಬರಿಯು ಚಪ್ಪರದ ತೀರ ಹತ್ತಿರ ಬಂದಾಗ ಮೊತ್ತ ಮೊದಲು ಡಾಕ್ಟರನು ಅಲ್ಲಿ ಕುಳಿತದ್ದನ್ನು ನೋಡಿದನು. ಮತ್ತು ಅವನ ಪಕ್ಕದಲ್ಲಿಯೆ ಮರದ ತುಂಡಿನ ಮೇಲೆ ಕೂಡ್ರಲು ಅವನು ಮಾಡಿದ ವಿನಂತಿಯನ್ನು ಹರ್ಷದಿಂದ ಒಪ್ಪಿಕೊಂಡನು.

'ಅರೇ ! ನಿಮ್ಮನ್ನು ಇಲ್ಲಿ ಕಾಣಬಹುದೆಂದು ಯಾರು ಬಗೆದಿದ್ದರು ?' ಆತ ಅಂದನು. ಈ ಭೆಟ್ಟಿಯಿಂದ ಅವನಿಗೆ ಸ್ಪಷ್ಟವಾಗಿಯೇ ಬಹಳ ಹರ್ಷವಾದಂತಿತ್ತು. 'ನನ್ನ ಮಗಳಿಗೆ ಗೊತ್ತಿರಲಿಕ್ಕಿಲ್ಲ. ನೀವು ಇಷ್ಟು ಹತ್ತಿರವೇ ಇದ್ದದ್ದು. ಅವಳಿಗೆ ಗೊತ್ತಿರುವ ನಿರೀಕ್ಷೆ ನನಗೆ ಇಲ್ಲ.'

ಅವನು ಹೊರಗೆ ಟಾಂಗಾದ ಕಡೆಗೆ ನೋಡಿದ. ಅಲ್ಲಿ ಕುಳಿತ ಗ್ರೇಸಳ ಮೋರೆ ವಿರುದ್ಧ ನಿಟ್ಟಿನಲ್ಲಿ ಬಿಸಿಲಿನ ಕಡೆಗೆ ಹೊರಳಿತ್ತು. 'ಅವಳು ನಮ್ಮತ್ತ ನೋಡುವುದಿಲ್ಲ.' ಮೆಲಬರಿ ಅಂದನು, 'ಇರಲಿ. ಪರವಾ ಇಲ್ಲ. ಅವಳು ಹಾಗೆಯೇ ಇದ್ದಿರಲಿ.'

ಗ್ರೇಸಳಿಗೆ ಫಿಟ್ಜ್‌ಪಿಯರ್ಸನ ಸಾನ್ನಿಧ್ಯದ ಅರಿವೆ ಇದ್ದಿಲ್ಲ. ಅವಳು ಚಿಂತಿಸುತ್ತಿದ್ದ ಸಂಗತಿಗೂ ಅಲ್ಲಿಯ ದೃಶ್ಯಕ್ಕೂ ಯಾವ ಹೊಂದಿಕೆಯೂ ಇದ್ದಿಲ್ಲ. ಅವಳು ತನ್ನ ಗೆಳತಿ, ಸಿಕ್ಕ ಕೂಡಲೆ ಕಳೆದುಕೊಂಡ ಗೆಳತಿ, ಶ್ರೀಮತಿ ಚಾರ್ಮಂದಳ ಬಗೆಗೆ ಚಿಂತಿಸುತ್ತಿದ್ದಳು. ಅವಳ ವಿಚಿತ್ರ ಲಹರಿಯ ನಡತೆ, ಇದೇ ಹೊತ್ತಿಗೆ ಬೇರೆ ದೇಶಗಳ ಪರಿಚಯ, ಆ ಗೆಳತಿಯ ಸಂಪತ್ತಿನಿಂದಾಗಿ ತನಗೂ ಆಗಬಹುದಿತ್ತೆಂಬ ಶಕ್ಯತೆ — ಇವೆಲ್ಲ ವಿಚಾರ ಆಕೆ ಮೆಲುಕು ಹಾಕುತ್ತಿದ್ದಳು. ಈ ಮಹಾ ಉದಾರಾಶ್ರಯದ ಯಜಮಾನಿ ಈ ಬೇಸಿಗೆಯಲ್ಲಿ ಹಿಂಟೋಕ್ ಹಳ್ಳಿಗೆ ತಿರುಗಿ ಬರಬಹುದೇ ? ಅವಳ ವಾಸ್ತವ್ಯದ ಹಿಂದಿನ ಪ್ರಸಂಗದಲ್ಲಿ ಫಕ್ಕನೆ ಕಡಿದಂತಾದ ತನ್ನ ಗುರುತು, ಗೆಳೆತನ ಮುಂದಿನ ಭೆಟ್ಟಿಯಲ್ಲಿ ಮತ್ತು ಬೆಳೆಯಬಹುದೇ — ಇದೆಲ್ಲ ಊಹಾಪೋಹದಲ್ಲಿ ಆಕೆ ತೊಡಗಿದ್ದಳು.

ಮೆಲಬರಿ ಹಳೆಯ ಮರಗೊಯ್ಯುಗಳ ಕತೆಗಳನ್ನು ಹೇಳುತ್ತ ಕುಳಿತ. ಅವನು ಫಿಟ್ಜ್‌ಪಿಯರ್ಸನಿಗೆ ನೇರವಾಗಿ, ಕೆಲಸದ ಗಂಡಾಳುಗಳಿಗೆ ಪರ್ಯಾಯವಾಗಿ ಹೇಳುತಿದ್ದ. ಆ ಆಳುಗಳು ಆ ಕಥೆಗಳನ್ನು ಆ ಹಿಂದೆ ಕೇಳಿದ್ದರು. ಚಹವನ್ನು ಕಪ್ಪುಗಳಿಗೆ ಸುರಿಯುತ್ತಿದ್ದ ಮಾರ್ಟಿ ಅಂದಳು, 'ಗ್ರೇಸಬಾಯಿಗೆ ಒಂದು ಕಪ್ಪು ಅಲ್ಲಿಯೆ ಒಯ್ದು ಕೊಡುತ್ತೇನೆ. ಆಗಲೇ ಆ ಗಿಗ್ ಗಾಡಿಯ ಕುದುರೆಯ ಥಡಿಯು ಅಪ್ಪಳಿಸಿದ ಸಪ್ಪಳ

ಕೇಳಿಸಿತು. ಮೆಲಬರಿಯು ಹೊರಳಿ ನೋಡಿದಾಗ ಕುದುರೆಯು ಕೆರಳಿ ಚಂಚಲವಾದಂತೆ ಕಂಡಿತು. ಅದು ಗಾಡಿಯನ್ನು ಹಿಗ್ಗಾಮುಗ್ಗಾ ಎಳೆದಾಡುತ್ತಿತ್ತು. ಒಳಗೆ ಕೂತ ಗ್ರೇಸ ಕೂಗಿಕೊಳ್ಳದೆ ಇದ್ದರೂ ತುಂಬ ಗಾಬರಿಗೊಂಡಿದ್ದಳು. ಮೆಲಬರಿ ಕೂಡಲೆ ಜಿಗಿದೆದ್ದನು. ಆದರೆ ಫಿಟ್ಝಪಿಯರ್ಸನಷ್ಟು ಬೇಗ ಅಲ್ಲ. ತಂದೆಯು ಕುದುರೆಯ ತಲೆಯ ಕಡೆಗೆ ಧಾವಿಸಿ ಅದನ್ನು ಅಂಕೆಯಲ್ಲಿ ತರುತ್ತಿರುವಾಗ, ಫಿಟ್ಝಪಿಯರ್ಸನು ಟಾಂಗಾದ ಬದಿಗೆ ಓಡಿಬಂದು ಗ್ರೇಸಳನ್ನು ಕೆಳಗೆ ಇಳಿಸಿಕೊಂಡನು.

ಅವನನ್ನು ಕಂಡು ಆದ ಆಶ್ಚರ್ಯದ ಅತಿರೇಕಕ್ಕೆ ಅವಳು ತಾನಾಗಿ ಶಾಂತವಾಗಿ ಇಳಿಯುವದೇ ಅಸಾಧ್ಯವಾಯಿತು. ಆತನ ಭುಜಗಳಲ್ಲಿಯೇ ಎತ್ತಿ ಆಕೆ ಕೆಳಗೆ ಇಳಿಯು ವಂತಾಯಿತು. ಆಕೆ ನೆಲವನ್ನು ಮುಟ್ಟಿದ ಕ್ಷಣವೇ ಅವನು ಅವಳನ್ನು ಬಿಟ್ಟನು. ಗಾಬರಿಯಾಗಿರಲಿಕ್ಕಿಲ್ಲವೆಂದು ಭಾವಿಸಿದನು.

'ಛೇ ಇಲ್ಲ. ಅಷ್ಟೇನೂ ಇಲ್ಲ' ಅವಳು ಹೇಗೋ ಅನ್ನಲು ಸಮರ್ಥಳಾದಳು, ಅಂಥ ಗಂಡಾಂತರವೇನೂ ಇದ್ದಿಲ್ಲ — ಆ ಕುದುರೆ, ಟೊಂಗೆಗಳು ತಗ್ಗಾಗಿ ಇರುವ ಮರಗಳ ನಡುವೆ ಓಡಿ, ಅವು ನನ್ನ ತಲೆಗೆ ಬಡಿಯುವಂತೆ ಆಗದಿದ್ದರೆ.'

'ಅದೇನು ಅಶಕ್ಯವಿದ್ದಿಲ್ಲ. ಮತ್ತು ಅದಕ್ಕೆ ಎಷ್ಟೂ ಗಾಬರಿಗೆಡಬಹುದು.'

ಅವಳ ಮುಖದಲ್ಲಿ ಕಂಡಂತೆ ಅನಿಸಿದ ಭಾವವನ್ನೆ ಕುರಿತು ಅವನು ಆಡಿದ್ದು. ಅವಳೂ ಅವನಿಗೆ ಹೇಳಲಾರಳು — ಈ ಭಾವಕ್ಕೆ ಕಾರಣ ಕುದುರೆ ಅಲ್ಲ, ಅವನೇ ಸ್ವಂತವೆಂದು. ಅವನ ನಿಕಟ ಸಾಮಿಪ್ಯವು ಅವಳ ಮೇಲೆ, ಹಿಂದೆಲ್ಲ ಹತ್ತಿರ ಬಂದಾಗ ಬೀರಿದ ಪ್ರಭಾವವನ್ನೆ ಮಾಡಿತು — ವಿನಾಕಾರಣವಾಗಿ ಕಣ್ಣಿಗೆ ನೀರು ತುಂಬುವಂತೆ ಮಾಡಿತು. ಮೆಲಬರಿ ಬೇಗನೆ ಕುದುರೆಯನ್ನು ಸ್ವಸ್ಥಗೊಳಿಸಿದನು. ಗ್ರೇಸಳು ಕುಶಲ ವಾಗಿದ್ದುದನ್ನು ಕಂಡು ತಿರುಗಿ ಕೆಲಸದ ಆಳುಗಳತ್ತ ಹೊರಳಿದನು.

ಗ್ರೇಸಳ ಗಾಬರಿಯ ಗೋಳು ಕೆಲ ನಿಮಿಷಗಳಲ್ಲಿಯೆ ದೂರವಾಯಿತು. ಆಕೆ ಫಿಟ್ಝಪಿಯರ್ಸನೊಂದಿಗೆ ಆ ಮಂದಿಯ ಗುಂಪಿನ ಕಡೆಗೆ ನಡೆಯುತ್ತಿರುವಾಗ ಒಳ್ಳೆಯ ಹಿಗ್ಗಿನಲ್ಲಿಯೆ ಅಂದಳು, 'ನೋಡಿ. ಇದರಲ್ಲಿ ಏನೋ ದೈವದ ಕೈವಾಡವಿದೆ. ನನಗೆ ಅಂಥ ಇಚ್ಛೆ ಏನೂ ಇದ್ದಿಲ್ಲ. ಆದರೂ ನಿಮ್ಮ ಈ 'ವನಭೋಜನ'ದಲ್ಲಿ ನಾನು ಭಾಗವಹಿಸಲೇಬೇಕೆಂದು ವಿಧಿ ಇರಬೇಕು.'

ಮಾರ್ಟಿ ಅವಳಿಗಾಗಿ ಒಂದು ಸುಖಕರ ಸ್ಥಾನವನ್ನು ಸಜ್ಜುಗೊಳಿಸಿದಳು. ಅವಳು ಆ ಮಂಡಳಿಯ ನಡುವೆ ಕೂತುಕೊಂಡಳು. ಫಿಟ್ಝಪಿಯರ್ಸನು ತೊಗಟೆ ಸುಲಿಯುವ ಆಳುಗಳಿಂದಲೂ ಅವಳ ತಂದೆಯಿಂದಲೂ, ಅವರವರ ಅಜ್ಜಮುತ್ತಜ್ಜಂದಿರ ವೃತ್ತಾಂತ ವನ್ನು, ಅಡವಿಯೊಳಗಿನ ಅವರದೆ ಸ್ವಂತ ಸಾಹಸದ ಕತೆಗಳನ್ನು, ಅವರು ಕಂಡ ಕೇವಲ ಅತಿ ಮಾನುಷ ಕೈಚಳಕದ ರಹಸ್ಯಮಯ ನೋಟಗಳನ್ನು, ಶುಕ್ಲ-ಕೃಷ್ಣ, ಶಾಕಿನಿ-ಡಾಕಿನಿಗಳನ್ನು, ಅಲ್ಲಿ ಹೋರಾಡಿ ಬಿದ್ದು ಸತ್ತು, ಅಲ್ಲಿಂದ ಕೆಲವೇ ಮೈಲಿಗಿದ್ದ ದೊರೆಯ ಹಿಂಟೋಕ ಓಲಗ ಸಾಲೆಯನ್ನು ಪೀಡಿಸಿ ಕೊನೆಗೂ ಒಬ್ಬ ಪಾದ್ರಿಯಿಂದ ಆ

ಭೂತಶಾಂತಿ ಪಡೆದ ಇಬ್ಬರು ಸಹೋದರರು, ಅಲ್ಲಿಂದ ತಮ್ಮ ಮೂಲ ಸ್ಥಾನಕ್ಕೆ ತೆರಳಿದರೂ ಮತ್ತೆ ಓಲಗಸಾಲೆಗೆ ಹೊಸ ವರ್ಷಾರಂಭದ ದಿನ ಹುಂಜದ ಹೆಜ್ಜೆ ಹಾಕಿ ಹೇಗೆ ತಿರುಗಿ ಬರುತ್ತಿರುವರೆಂಬುದನ್ನು ಆ ಮೂಲಕ 'ಹೊಸ ವರ್ಷದ ಭರತವ ಸೇರಿ, ಹುಂಜದ ಹೆಜ್ಜೆ ಸವಾರಿ' ಎಂಬ ಸ್ಥಾನಿಕ ಗಾದೆಯ ನುಡಿ ಹೇಗೆ ರೂಢವಾಯಿತೆಂಬುದನ್ನು ಹೇಳಲು ಹಚ್ಚಿ ತಿಳಿದುಕೊಳ್ಳುತ್ತಿದ್ದನು. ಅದಕ್ಕೆ ಗ್ರೇಸಳು ಕಿವಿಗೊಟ್ಟಳು.

ಅದೊಂದು ರಮಣೀಯ ಕಾಲವಾಗಿತ್ತು. ಅಲ್ಲಿ ಕುಳಿತವರ ಹಾಗೂ ಹೊರ ಬಿಸಿಲಿನ ನಡುವೆ, ಸವರಿ ಒಗೆದ ದಂಟುಗಳ ಚಕ್ಕೆ ಬೆಂಕಿಯಿಂದ ಹೊಗೆ ಏಳುತ್ತಲಿತ್ತು. ಅದರ ನೀಲ ಪಟಲಗಳ ಆಚೆಗೆ ಅಡ್ಡಬಿದ್ದ ಮರಗಳ ನೀಳ ತೋಳುಗಳು ಚಾಚಿದ್ದವು. ತೆರೆದಿದ್ದ ಸೊನೆಯ ವಾಸನೆಗೆ ಹೊತ್ತಿದ ಸೌದೆಯ ವಾಸನೆಯು ಕೂಡಿಕೊಂಡಿತ್ತು. ಅಲ್ಲಲ್ಲಿ ಹರಡಿದ ತೊಗಟೆಗಳ ಜಿಗುಟು ಜಿಗುಟಾದ ಒಳಮೈಯು ಅದರ ಕೆಂಪು ಬಣ್ಣದ ಛಾಯೆಗಳನ್ನು ಕಣ್ಣಿಗೆ ಹೊಳೆಯುವಂತೆ ಮಾಡಿತ್ತು. ಫಿಟ್ಝಪಿಯರ್ಸನನ್ನು ಅತಿಥಿಯಾಗಿ ಪಡೆದು ಮೆಲಬರಿ ಮಿಗಿಲಾಗಿ ಹಿಗ್ಗಿದ್ದನು. ಹಾಗೆಯೇ ಎಷ್ಟೇ ಹೊತ್ತಿನ ತನಕವೂ ಆತ ಅಲ್ಲಿ ಕೂತಿರಲು ಸಿದ್ಧನಿದ್ದ. ಆದರೆ ಫಿಟ್ಝಪಿಯರ್ಸನ ಕಣ್ಣು ಮತ್ತೆ ಮತ್ತೆ ತನ್ನ ಮೇಲೆ ಆಡುವದನ್ನು ಮನಗಂಡು ಗ್ರೇಸಳು ಅಲ್ಲಿಂದ ಹೊರಡುವ ಅವಿರ್ಭಾವನ್ನು ತೋರುವದು ಅಗತ್ಯವೆಂದು ಭಾವಿಸಿದಳು. ಆಗ ಅವಳ ತಂದೆಯೂ ಅವಳಿಗೆ ಟಾಂಗಾದ ತನಕ ಜತೆಕೊಟ್ಟನು.

ಅವಳಿಗೆ ಗಾಡಿಯಿಂದ ಇಳಿಯಲು ನೆರವಾದ ಡಾಕ್ಟರನಿಗೆ, ಈಗ ಗಾಡಿಯಲ್ಲಿ ಏರುವಾಗ ನೆರವು ನೀಡಲು ಉತ್ತಮ ಕಾರಣಗಳು ಇರುವಂತೆ ಕಂಡವು. ಮತ್ತು ಕೈಂಕರ್ಯವನ್ನು ಆತ ಸಾಕಷ್ಟು ನಿಧಾನವಾಗಿಯೆ ನಡೆಯಿಸಿದನು.

'ಇದೀಗ ನೀವೇಕೆ ಕಣ್ಣೀರು ಬಿಟ್ಟಂತೆ ಕಂಡಿತು?' ಆತ ಮೆಲುದನಿಯಲ್ಲಿಯೇ ಕೇಳಿದನು.

'ನನಗೆ ಗೊತ್ತಿಲ್ಲ,' ಅವಳೆಂದಳು. ಮತ್ತು ಈ ಮಾತು ನಿಷ್ಠುರ ಸತ್ಯವೇ ಆಗಿತ್ತು.

ಮೆಲಬರಿ ಆಚೆಯ ಬದಿಯಿಂದ ಏರಿ ಕೂತನು. ಅವರು ಆ ತೋಪಿನೊಳಗಿಂದ ಹೊರಗೆ ಬಿದ್ದು ಮುಂದೆ ಸಾಗಿದರು. ಅವರ ಗಾಲಿಗಳು ಹಾವಸೆ ಕಾಡು ಹೂವು, ವಿವಿಧ ವಿಚಿತ್ರ ಸಾಧಾರಣ ಗಿಡಗಂಟೆ, ಚಿಕ್ಕಪುಟ್ಟ ಕಡ್ಡಿ ಕೋಲುಗಳನ್ನೆಲ್ಲ ಸದ್ದಿಲ್ಲದೆ ಹಿಚುಕಿ ಹಾದಿ ಮಾಡಿಕೊಂಡು ಉರುಳಿದವು. ಅವರು ಮನೆಯತ್ತ ಹೋಗುವ ಹಾದಿ ಆ ಕೊಳದ ಪಶ್ಚಿಮ ಬದಿಯ ಗುಂಟವಿತ್ತು. ಅಲ್ಲಿಂದ ಆ ಸೀಮೆ ಹಿಂಟೋಕ ಹಳ್ಳಿಯ ಪರಿಸರದಿಂದ ಕೆಲಮಟ್ಟಿಗೆ ಬೇರೆ ಆಗಿತ್ತು. ಅದು ಸಿಡರಸೀಮೆ — ಸೇಬಿನ ತೋಟಗಳ ಸೀಮೆ. ಈ ಮಲೆನಾಡ ಸೆರಗನ್ನು ಅದು ತುಸು ದೂರ ಸೋಂಕುತಿತ್ತು. ಅಲ್ಲಿಯ ಹವೆ — ವಾತಾವರಣ — ನೀಲರತ್ನದಂತೆ! ಅಷ್ಟು ನೀಲಿಮೆ ಸೇಬಿನ ತೋಟಗಳಿಂದ ಇನ್ನೆಲ್ಲಿಯೂ ಕಾಣಸಿಗುತಿದ್ದಿಲ್ಲ. ನಭದ ನೀಲಿಮೆಯಡಿಗೆ ಆ ಹಣ್ಣಿನ ತೋಟಗಳೆಲ್ಲ

ನಸುಗೆಂಪು ಅರಳುಗಳಿಂದ ಉರಿಯುವಂತೆ ತೋರುತಿತ್ತು. ಅವುಗಳಲ್ಲಿ ಕೆಲವಂತೂ ಗೆಲ್ಲೆಗೆಲ್ಲೆಗಳಲ್ಲಿ ಹೂವಿನ ಹೊರೆ ಹೊತ್ತು ಇವರ ಗಾಡಿ ಸಾಗುವ ಹಾದಿಯ ತನಕವೂ ಅರಳಿ ನಿಂತಿದ್ದವು.'

ಇಳುಕಲು ಗುಂಟ ಒಂದು ದಣಪೆಯಲ್ಲಿ ಒಬ್ಬ ವ್ಯಕ್ತಿ ತನ್ನ ತೋಳುಗಳ ಮೇಲೆ ಅನಿಸಿಕೊಂಡು ನಿಂತಿದ್ದನು. ಈ ಪುಷ್ಪಭಾರದ ಆಶ್ವಾಸನವನ್ನೆ ಆತ ತನ್ಮಯನಾಗಿ ಧ್ಯಾನಿಸುವಂತಿತ್ತು. ಆದ್ದರಿಂದ ಆತ ಇವರ ಗಾಡಿ ಹಾದು ಹೋಗುತಿದ್ದುದನ್ನು ಗಮನಿಸಿರಲಿಲ್ಲ.

'ಆತ ಜೈಲ್ಸ್,' ಮೆಲಬರಿ ಅಂದನು, ಹಾದು ಹೋದ ಮೇಲೆ.

'ಅಹುದೇ? ಪಾಪ, ಬಡಜೈಲ್ಸ್.'

—ಅವಳೆಂದಳು.

'ಇದೆಲ್ಲ ಸೇಬಿನ ಹೂವಿನ ರಾಶಿ. ಅಂದರೆ ಅವನಿಗೆ ಈ ಮಾಗಿಯಲ್ಲಿ ಮೈತುಂಬ ಕೆಲಸದ ಹಂಗಾಮು. ಕೈಗಳಿಗೆ ತೆರಪೆ ಇಲ್ಲ. ಹಣ್ಣಾಗುವ ಮೊದಲೆ ಏನಾದರೂ ಕೊಳೆ ರೋಗ ಬಡಿಯದಿದ್ದರೆ, ಹಿಂದೆ ವರ್ಷಗಟ್ಟಲೆ ನೋಡದಿದ್ದಂಥ ಸೇಬಿನ ಬೆಳೆ ಈ ಸಲ ನಾವು ಕಾಣುತ್ತೇವೆ.'

ಈ ನಡುವೆ, ಅವರು ಬಿಟ್ಟು ಬಂದ ಕಾನಿನಲ್ಲಿ ಕೆಲಸದಾಳುಗಳು ಇಷ್ಟು ಹೊತ್ತು ಕೂತೇ ಉಳಿದರು. ಅವರಿಗೆ ಮತ್ತೆ ಆ ಸಂಜೆಗೆ ಕೆಲಸಕ್ಕೆ ಕೈ ಹಚ್ಚಲು ಮನಸ್ಸೆ ಆಗಲಿಲ್ಲ. ಅವರಿಗೆ ಟನ್ನಿಗೆ ಇಂತಿಷ್ಟೆಂದು ಕೂಲಿ. ಅವರ ಕೆಲಸದ ವೇಳೆ ವೇಗವೆಲ್ಲ ಅವರದೇ ಮೆಚ್ಚಿಗೆ. ಅವರು ಕೊನೆಯ ತೊಗಟೆಯ ರಾಶಿಯನ್ನು ಅದನ್ನು ಹದ ಮಾಡುವವರಿಗಾಗಿ ಸರಿಯಾಗಿ ಸಾಲಾಗಿ ಇರಿಸಿದರು. ಸೂರ್ಯಾಸ್ತಕ್ಕೆ ಅವರು ಮನೆಯ ಕಡೆಗೆ ತೆರಳಿದರು.

ಫಿಟ್ಸಪಿಯರ್ಸ ಅಲ್ಲಿಯೇ ಹೊತ್ತುಗಳೆದನು, ಹಿಂದುಳಿದನು. ತಂದ ಪುಸ್ತಕ ವನ್ನು ಅವನು ಮತ್ತೆ ತೆರೆದಿದ್ದನು. ಆದರೆ ಅದರಲ್ಲಿ ಒಂದಕ್ಷರವೂ ಅವನ ಕಣ್ಣಿಗೆ ಕಾಣದು. ಅಲ್ಲಿಯೆ ಆರುತ್ತಿರುವ ಬೆಂಕಿಯ ಬದಿಗೆ ಆತ ಕೂತೇ ಉಳಿದನು. ಮಂದಿ ಎಲ್ಲ ಎದ್ದು ಹೋದದ್ದು ಅವನಿಗೆ ತಿಳಿದೇ ಬಂದಂತೆ ಇದ್ದಿಲ್ಲ. ಆತ ಕನವರಿಸಿದ್ದೇ ಕನವರಿಸಿದ್ದು. ಅವನ ಪ್ರಜ್ಞೆಯು ಆ ಕಾಡಿನ ಸೀಮೆಯ ಅವಕಾಶವನ್ನೆಲ್ಲ ವ್ಯಾಪಿಸಿತು. ಅದಕ್ಕೆ ಯಾವ ನೋಟವೂ ಯಾವ ಸದ್ದೂ ಭಂಗ ತರಲಿಲ್ಲ. ಆ ಸ್ಥಾನದ ಸ್ಥಾಯೀ ಭಾವದೊಂದಿಗೆ ಅವನ ಮಾನಸಿಕ ಐಕ್ಯ ಸಾಧಿಸಲಿಕ್ಕೆ ಯಾವ ಆತಂಕವೂ ಇದ್ದಿಲ್ಲ. ಬದುಕಿನ ಎಲ್ಲ ವ್ಯಾವಹಾರಿಕ ಗುರಿಗಳನ್ನು ಬಿಟ್ಟುಕೊಟ್ಟು ಇಲ್ಲಿಯೇ ಶಾಂತ ಸಮಾಧಾನ ದಲ್ಲಿ ಇದ್ದುಬಿಡಬೇಕೆಂಬ ವಿಚಾರ ಅವನಲ್ಲಿ ತಿರುಗಿ ತಲೆದೋರಿತು. ಅನಂತ ಪರಿಶ್ರಮ ದಿಂದ ಹೊಸ ಹೊಸ ಕಲ್ಪನೆಗಳನ್ನು ರೂಪಿಸಿಕೊಳ್ಳುವುದರ ಬದಲು, ಹಳೆಯ ಮನೆ ಬಳಕೆಯ ವಿಚಾರಗಳನ್ನೆ ಅನುಸರಿಸಿ ನೆಮ್ಮದಿಯ ಕೌಟುಂಬಿಕತೆಯನ್ನು ಸ್ವೀಕರಿಸ ಬಾರದೇಕೆ? ಎಂದು ಅನಿಸುತ್ತಿತ್ತು.

ಕವಿಯುವ ರಾತ್ರಿಯು ಆ ಕಾಡನ್ನು ಮಬ್ಬುಗೊಳಿಸುವನಕವೂ ಈ ವಿಚಾರಗಳು ಅವನನ್ನು ಅಲ್ಲಿಯೆ ತಡೆದು ನಿಲ್ಲಿಸಿದವು. ಆಗ ಹತ್ತಿರದಲ್ಲಿಯೆ ಒಂದು ಪೊದೆಯಿಂದ ಮುಚ್ಚಂಜೆಯ ನಾಚಬುರುಕ ಪುಟ್ಟ ಹಕ್ಕಿಯೊಂದು ತನ್ನ ಎಲ್ಲ ವಾಗ್ಮಿತೆಯನ್ನು ಉತ್ಕಟವಾಗಿ ಹೊರ ಹೊಮ್ಮಿಸಹತ್ತಿತು.

ಫಿಟ್ಝಪಿಯರ್ಸನಿಗೆ ಕಣ್ಣ ಮುಂದೆ ಬಯಲಾದಷ್ಟೆ ನೆಲವು ಕಾಣುತಿತ್ತು. ಅವನು ಒಂದು ಆಕೃತಿಯು ಅಲ್ಲಿ ಪ್ರವೇಶಿಸುವುದನ್ನು ಕಂಡನು. ಅದರ ನಡಿಗೆಯು ನಿಟ್ಟು ಆತ ಕುಳಿತ ಸ್ಥಳದ ಕಡೆಗೇ ಆಗಿತ್ತು. ಟೊಂಗೆಗಳ ರಾಶಿಯು ನೆರಳಿನ ತೆರೆಯಿಂದ ಡಾಕ್ಟರನು ಕಣ್ಣಿಗೆ ಮರೆ ಆಗಿದ್ದನು. ಅಲ್ಲದೆ ಆ ಆಗಂತುಕನು ಹಾದುಹೋಗುವವರೆಗೆ ಅವನು ಅಲ್ಲಿಂದ ಚಲಿಸಬೇಕೆಂದೂ ಇದ್ದಿಲ್ಲ.

ಆಕೃತಿಯು ಹೆಣ್ಣಿನ ರೂಪವನ್ನು ತಾಳಿತು. ಅವಳು ನೆಲವನ್ನೆ ನೋಡುತ್ತ ನಿಧಾನವಾಗಿ ನಡೆಯುತಿದ್ದಳು—ಏನೋ ಕಳೆದುಕೊಂಡ ವಸ್ತುವನ್ನು ಹುಡುಕುತಿದ್ದಂತೆ. ಅವಳ ಚಲನದ ಮಾರ್ಗವು ಮೆಲಬರಿಯ ಗಿಗ್ ಗಾಡಿ ಹೋದ ಮಾರ್ಗವೇ ಆಗಿತ್ತು. ಫಿಟ್ಝಪಿಯರ್ಸನಿಗೆ ದಿವ್ಯ ಜ್ಞಾನವಾದಂತೆ ಒಮ್ಮೆಲೆ ಹೊಳೆಯಿತು. ಆ ಆಕೃತಿ ಗ್ರೇಸಳದೆ ಎಂದು. ಅವಳು ಹತ್ತಿರಕ್ಕೆ ಬಂದಂತೆ ಅದು ಖಚಿತವಾಯಿತು.

ಅಹುದು. ಅವಳು ಏನನ್ನೋ ಅರಸುತಿದ್ದಳು. ಅವಳು ಅಡ್ಡಬಿದ್ದ ಮರಗಳನ್ನು ಸುತ್ತು ಹಾಕಿ ಬಂದಳು. ಆ ಮರಗಳು ಬೆಳ್ಳಬತ್ತಲೆ ಆಗಿದ್ದವು. ಆದ್ದರಿಂದ ಕತ್ತಲೆಯಲ್ಲಿ ಅವನ್ನು ತಪ್ಪಿಸಿಕೊಂಡು ಬರುವದು ಸುಲಭವಿತ್ತು. ಇಲ್ಲವಾದರೆ ಅವು ಕಾಣುವಂತೆ ಇದ್ದಿಲ್ಲ. ಹೀಗೆ ಅವಳು ಆ ಬೂದಿಯ ರಾಶಿಯನ್ನು ಸಮಿಾಪಿಸಿದಳು. ಅಲ್ಲಿ ಒಂದೆರಡು ಕೆಂಡಗಳು ಇನ್ನೂ ಉರಿಯುತ್ತಲೇ ಇದ್ದವು. ಅವುಗಳಿಂದ ಏನೊ ಸೂಚನೆ ಪಡೆದಂತೆ ಆಕೆ ಒಂದು ಕೋಲು ಎತ್ತಿಕೊಂಡು ಅವುಗಳನ್ನು ಕೆದರಿದಾಗ ಆ ರಾಶಿಯಿಂದ ಜ್ವಾಲೆ ಎದ್ದಿತು. ಹೀಗೆ ಪಡೆದುಕೊಂಡ ಬೆಳಕಿನಲ್ಲಿ ಆಕೆ ಸುತ್ತಲು ನೋಡುವಾಗ ಅವಳು ಪ್ರಥಮ ಬಾರಿ ಫಿಟ್ಝಪಿಯರ್ಸನ ಬೆಳಗಿದ ಮುಖವನ್ನು ಕಂಡಳು ಆಕೆ ಬಿಟ್ಟು ಹೋದ ಸ್ಥಳದಲ್ಲಿಯೇ ಆತ ಇದ್ದನು.

ಗ್ರೇಸಳು ದಿಗಿಲುಬಿದ್ದು ಕೂಗಿದಳು; ಆತ ಇನ್ನೂ ಅಲ್ಲಿ ಇರಬಹುದೆಂದು ಆಕೆ ಎಳ್ಳಷ್ಟು ಭಾವಿಸಿರಲಿಲ್ಲ. ಫಿಟ್ಝಪಿಯರ್ಸ ಎದ್ದು ಅವಳ ಹತ್ತಿರಕ್ಕೆ ಹೋಗಲು ಒಂದು ಕ್ಷಣವೂ ವಿಲಂಬ ಮಾಡಲಿಲ್ಲ.

'ನಿನಗೆ ನಾ ಭಯಂಕರ ಹೆದರಿಸಿಬಿಟ್ಟೆನಲ್ವೇ? ನನಗೆ ಗೊತ್ತು' ಆತ ಅಂದನು, 'ನಾನು ಮಾತಾಡಬೇಕಿತ್ತು; ಆದರೆ ನೀನೇ ಇದು ಎಂದು ನಾ ಮೊದಲು ನಿರೀಕ್ಷಿಸಿರಲಿಲ್ಲ. ಆಗಿನಿಂದಲೂ ನಾನು ಇಲ್ಲಿ ಕೂತೇ ಇದ್ದೇನೆ.'

ಇದೆಲ್ಲ ಆಡುವಾಗ ಅವನು ಅವಳನ್ನು ತನ್ನ ಭುಜದ ಮೇಲೆ ಆನಿಕೆಯಿತ್ತು ಸಾವರಿಸಿ ಹಿಡಿದಿದ್ದನು. ಇಲ್ಲವಾದರೆ, ಅವಳು ಕುಸಿದು ಬೀಳುವಳೋ ಎಂಬ ಭೀತಿ ಇದ್ದಂತೆ. ಅವಳು ತನ್ನ ವಿಚಾರಗಳನ್ನೆಲ್ಲ ಸ್ಥಿಮಿತಗೊಳಿಸಿಕೊಂಡೊಡನೆ, ಅವನ

ಹಿಡಿತದಿಂದ ಸೌಮ್ಯವಾಗಿ ಬಿಡಿಸಿಕೊಂಡು ಹಿಂಬಾಲಿಸಿದಳು. ಗಾಡಿಯಿಂದ ಇಳಿಯು ವಾಗಲೊ ಅದರಲ್ಲಿ ಹತ್ತುವಾಗಲೊ ಅಥವಾ ಚಪ್ಪರದಲ್ಲಿ ಬೆಂಕಿಯ ಬಳಿಗೆ ಕುಳಿತಾಗಲೋ ಹಣದ ಚೀಲವು ಅಲ್ಲೆಲ್ಲೋ ಕೆಳಗೆ ಬಿದ್ದಿತು.

' ಇದೀಗ ನಾವು ಹುಡುಕಿ ನೋಡೋಣ ' ಅಂದನು ಫಿಟ್ಜ್‌ಪಿಯರ್ಸ್.

ಆತ ಬೆಂಕಿಯಲ್ಲಿ ಕಳೆದ ವರ್ಷದ ತರಗೆಲೆಗಳನ್ನು ಒಂದು ಹಿಡಿ ಚೆಲ್ಲಿದನು. ಈಗ ಜ್ವಾಲೆಗಳು ಎತ್ತರಕ್ಕೆ ನೆಗೆದೆದ್ದವು. ಸುತ್ತಲಿನ ನೆರಳುಗಳು ಇನ್ನೂ ಕತ್ತಲಾಗಿ ದಟ್ಟೈಸಿದವು. ಆ ಬೆಳಕಿಗೆ ಸಂಜೆ ಒಂದು ಕ್ಷಣದಲ್ಲಿ ರಾತ್ರೆಯಾಯಿತು. ಆ ಉರಿ ಬೆಳಕಿನಲ್ಲಿ ಇಬ್ಬರೂ ಮೊಣಕಾಲೂರಿ ಎರಡೂ ಕೈಗಳಿಂದ ಹುಡುಕಾಡಿದ್ದೇ ಹುಡು ಕಾಡಿದ್ದು. ಕೊನೆಗೂ ಫಿಟ್ಜ್‌ಪಿಯರ್ಸ್ ಮೊಣಕೈಯನ್ನೂರಿ ಮೊಗವೆತ್ತಿ ಗ್ರೇಸಳ ಕಡೆಗೆ ನೋಡಿದನು.

' ನಾವು ಬಹುಶಃ ಯಾವಾಗಲೂ ವಿಚಿತ್ರ ಸನ್ನಿವೇಶಗಳಲ್ಲಿಯೆ ಭೆಟ್ಟಿ ಆಗುತ್ತೇವೆ.' ಆತ ಅಂದನು, ' ಮತ್ತು ಇದು ಅತ್ಯಂತ ವಿಚಿತ್ರ. ಇದರ ಅರ್ಥವೇನಿರಬಹುದೋ— ನನಗೇ ಸೋಜಿಗ.'

' ಓ ಇಲ್ಲ. ನನಗೆ ಖಂಡಿತ ಗೊತ್ತು. ಅರ್ಥವೇನೂ ಇರಲಿಕ್ಕಿಲ್ಲ.' ಗ್ರೇಸ ಲಗುಬಗೆಯಿಂದ ಹೇಳಿದಳು—ಎದ್ದು ನಿಲ್ಲುವ ಭಂಗಿಗೆ ಬೇಗೆ ಬರುತ್ತ, ' ದಯವಾಡಿ ಅಂತಹದೇನೂ ಅನ್ನಬೇಡಿರಿ.'

' ಚೀಲದಲ್ಲಿ ಅಷ್ಟೇನು ಹಣವಿದ್ದಿರಲಿಕ್ಕಿಲ್ಲವೆಂದು ನಾನು ಭಾವಿಸುತ್ತೇನೆ.'— ಹೆಚ್ಚು ನಿಧಾನವಾಗಿ ಎದ್ದು ನಿಂತು ತನ್ನ ಚಣ್ಣದ ಮೇಲಿನ ತರಗನ್ನೆಲ್ಲ ಝಾಡಿಸಿ ಕೊಳ್ಳುತ್ತ ಫಿಟ್ಜ್‌ಪಿಯರ್ಸ್ ಅಂದನು.

' ಛೇ ಏನೂ ಇದ್ದಿಲ್ಲ. ನನಗೆ ಆ ಚೀಲದ ಚಿಂತೆ ಹೆಚ್ಚು. ಅದು ಯಾರೋ ನನಗೆ ಕಾಣಿಕೆಯಾಗಿ ಕೊಟ್ಟಿದ್ದು. ನಿಜವಾಗಿಯೂ, ನಮ್ಮ ಈ ಹಿಂಟೋಕ ಹಳ್ಳಿ ಯಲ್ಲಿ ಹಣಕ್ಕೆ ಉಪಯೋಗ ಕ್ರೂಸೋನ ದ್ವೀಪದಲ್ಲಿಯಷ್ಟೇ! ಅದನ್ನು ವೆಚ್ಚ ಮಾಡಲಿಕ್ಕೆ ಇಲ್ಲಿ ಅವಕಾಶ ಸ್ವಲ್ಪವೇ ಇದೆ!

ಅವರು ಹುಡುಕಾಟವನ್ನು ಬಿಟ್ಟುಕೊಟ್ಟಿದ್ದರು, ಅಷ್ಟರಲ್ಲಿ ಫಿಟ್ಜ್‌ಪಿಯರ್ಸ್ ತನ್ನ ಪಾದದ ಹತ್ತಿರವೆ ಏನೋ ಬಿದ್ದಿದ್ದು ಕಂಡನು. ' ಇಕೋ ಇಲ್ಲಿದೆ ', ಆತ ಅಂದನು, 'ಅಂದಹಾಗೆ, ಇನ್ನು ನಿಮ್ಮ ತಂದೆಯೋ, ತಾಯಿಯೋ, ಮಿತ್ರನೋ, ಪ್ರಶಂಸಕನೋ— ಆ ಕಾಣಿಕೆ ಕೊಟ್ಟ ಯಾರೂ ನಿಮ್ಮ ನಿರ್ಲಕ್ಷ್ಯಕ್ಕಾಗಿ ನೊಂದುಕೊಳ್ಳಬೇಕಾಗಿಲ್ಲ.'

' ಓ ಅವನಿಗೆ ಗೊತ್ತೇ ಇಲ್ಲ — ನಾನು ಈಗ ಏನು ಮಾಡುತ್ತಿದ್ದೇನೆಂದು.'

' ಅಂದರೆ ಆ ಪ್ರಶಂಸಕನಿಗೋ ? '

' ಅವನನ್ನು ಹಾಗೆಂದು ಕರೆಯುವದೋ, ನಾನರಿಯೆ ', ಗ್ರೇಸಳು ತೀರ ಸರಳ ತನದಲ್ಲಿ ಅಂದಳು, ' ಪ್ರಶಂಸಕನೆಂಬುವವನು ಒಬ್ಬ ಮೇಲುಪಚಾರದ, ತಾತ್ಕಾಲಿಕ ಪ್ರಾಣಿ. ಆದರೆ ಈ ಮನುಷ್ಯ ತೀರ ಬೇರೆ ರೀತಿ.'

‘ ಅಂದರೆ ಅವನಿಗೆ ಎಲ್ಲ ಮುಖ್ಯ ಸದ್ಗುಣಗಳೂ ಇರಬೇಕು?’

‘— ಬಹುದು, ಆದರೆ ಅವು ಏನೆಂದು ನನಗೆ ಖಚಿತವಾಗಿ ಗೊತ್ತಿಲ್ಲ.’

‘ ಅವನ್ನು ನೀವು ಗೊತ್ತಿಲ್ಲದೆ ತನ್ನಾರೆ ಆಚರಿಸುತ್ತಿರುವಿರಿ. ಇದು ಲೇಸು. ಶ್ಲೀಲಮತರ ತತ್ತ್ವವೇತ್ತನ ಅಂಬೋಣದಂತೆ ಅವು ಆತ್ಮಸಂಯಮ, ಅಧ್ಯವಸಾಯ, ವಿವೇಕ ಮತ್ತು ಪ್ರೇಮ. ಅವನು ಮಾಡಿದ ಈ ಸೂಚಿಯೆ ಅತ್ಯುತ್ತಮವೆಂದು ನನ್ನ ತಿಳುವಳಿಕೆ.

‘ ನನಗೆ ಅನಿಸುತ್ತದೆ, ಬಡ...’, ಅವಳು ಅನ್ನುವವಳಿದ್ದಳು, ಹಲವು ವರ್ಷಗಳ ಹಿಂದೆ ಅವಳಿಗೆ ಹಣದ ಚೀಲ ಕಾಣಿಕೆಯಾಗಿ ಕೊಟ್ಟ ಬಡ ವಿಂಟರಬೋರ್ನನಲ್ಲಿ ಅಷ್ಟೇನು ಅಧ್ಯವಸಾಯ, ಹಿಡಿದಪಟ್ಟು ಎಡೆಬಿಡದೆ ಸಾಧಿಸುವ ಛಲ ಇಲ್ಲವೆಂದು ; ಆದರೆ ಅವನಲ್ಲಿ ಉಳಿದ ಮೂರು ಸದ್ಗುಣಗಳು ಇದ್ದವು. ಆದರೆ ಅವಳು ಈ ವಿಷಯ ಮುಂದರಿಸಲಿಲ್ಲ ; ಸುಮ್ಮನಾದಳು.

ಈ ಅರೆಮರೆ ಸ್ಪಷ್ಟನೆಗಳು ಫಿಟ್ಝಪಿಯರ್ಸನಲ್ಲಿ ಸ್ಪಷ್ಟ ಕಾಣುವಂತೆ ಕೆಲವು ಬದಲಾವಣೆ ಮಾಡಿದವು. ಅವನಲ್ಲಿಯ ವೈಯಕ್ತಿಕ ಶ್ರೇಷ್ಠತೆಯ ಭಾವನೆಯು ಅಳಿದು ಹೋಯಿತು. ಮತ್ತು ಅವನ ದೃಷ್ಟಿಯಲ್ಲಿ ಗ್ರೇಸಳು ಪ್ರೇಮಿಕನ ಕಣ್ಣು ತುಂಬುವ, ಪ್ರೇಯಸಿಯ ನಿಜವಾದ ಸ್ವರೂಪವನ್ನು ತಾಳಿದಳು.

‘ ಮಿಸ್ ಮೆಲಬರಿ ’, ಆತ ಥಕ್ಕನೆ ಅಂದನು, ‘ ನೀವು ಹೇಳುವ ಈ ಸದ್ಗುಣೆಯನ್ನು ನೀವು ನಿರಾಕರಿಸಿರುವಿರಿ.’

ಆಕೆ ಇದನ್ನು ಒಪ್ಪಿಕೊಳ್ಳದೆ ಇರಲು ಸಾಧ್ಯವಾಗಲಿಲ್ಲ.

‘ ಒಳ್ಳೆಯ ಕಾರಣವಿಲ್ಲದೆ ನಾನು ವಿಚಾರಿಸಲಿಲ್ಲ. ದೇವರೇ ಬೇಡ ; ಯಾವದೆ ಗುಡಿಯ ಮುಂದೆ ಇನ್ನೊಬ್ಬ ಭಕ್ತನ ಸ್ಥಳದಲ್ಲಿ ನಾನು ಮೊಣಕಾಲೂರುವುದು ಬೇಡ. ಅದು ನ್ಯಾಯವಲ್ಲ. ಆದರೆ ಮಿಸ್ ಮೆಲಬರಿ, ಈಗ ಆತ ಗುಡಿಯಿಂದ ಹೊರಟು ಹೋಗಿದ್ದಾನೆ. ನಾನು ಒಳಗೆ ಬರಲೇ? ಬಳಿಗೆ ಸಾರಲೆ ? ’

‘ ಆ ಬಗ್ಗೆ ನಾ...ನಾನೇನೂ ಹೇಳಲಾರೆ ’, ಆಕೆ ಅಂದಳು, ಲಗುಬಗೆಯಲ್ಲಿ, ‘ ಏಕೆಂದರೆ ಒಬ್ಬನನ್ನು ಒಲ್ಲೆನೆಂದಾಗ, ನಿರಾಕರಿಸಿದಾಗ, ಅವನಿಗಾಗಿ ಮರುಕ ತೋರುತ್ತದೆ. ಆಗ ಹಿಂದಿಗಿಂತ ಅವನ ಬಗೆಗೆ ಮೆಚ್ಚುಗೆ ಹೆಚ್ಚಾಗುತ್ತದೆ.’

ಈ ಜಟಿಲ ಪರಿಸ್ಥಿತಿ ಆ ಸರ್ಜನ್ನನ ಕಣ್ಣಿನಲ್ಲಿ ಗ್ರೇಸಳ ಬೆಲೆಯನ್ನು ಇನ್ನಷ್ಟು ಹೆಚ್ಚಿಸಿತು. ಅವಳನ್ನು ಇನ್ನೂ ಆರಾಧ್ಯಳನ್ನಾಗಿ ಮಾಡಿತು. ‘ ಆದರೆ ನೀನು ಏನೂ ಹೇಳಲಾರೆಯಾ ?’ ಆತ ಉದ್ವಿಗ್ನನಾಗಿ ಕೇಳಿದನು.

‘ ಇಲ್ಲ, ಹೇಳಲೊಲ್ಲೆ ; ಅದೇ ವಾಸಿ. ನಾನು ಈಗ ಕೂಡಲೇ ಮನೆಗೆ ಹೋಗಬೇಕೆನಿಸುತ್ತದೆ.

‘ ಸರಿ, ಅಡ್ಡಿಯಿಲ್ಲ ’ ಫಿಟ್ಝಪಿಯರ್ಸ ನುಡಿದನು. ಆದರೆ ಆತ ಅಲ್ಲಿಂದ ಸರಿಯಲಿಲ್ಲ. ಆಗ ತಾನೇ ಅವನಿಂದ ದೂರಾಗಿ ದಿಗ್ಗನೆ ನಡೆದು ಹೋಗುವದು ಅವಳಿಗೆ

ಅಂದಗೇಡೆನಿಸಿತು. ಆದ್ದರಿಂದ ಇಬ್ಬರೂ ಸುಮ್ಮನೆ ನಿಂತು ಉಳಿದರು. ಆಗಲೆ ಎರಡು ದೊಡ್ಡ ಹಕ್ಕಿಗಳು ಅವರ ಆ ಅವಘಡದಲ್ಲಿ ವ್ಯವಧಾನವನ್ನು ಕಲ್ಪಿಸಿಕೊಟ್ಟವು. ಅವೆರಡೂ ಅವರ ನೆತ್ತಿಯ ಮೇಲೆ ಗೂಡಿನಲ್ಲಿ ಚಕ್ಕಂದವಾಡುತ್ತಿದ್ದವೋ, ಗೂಡನ್ನೇ ಕಟ್ಟುತ್ತಿದ್ದವೋ, ಆದರೆ ಹೇಗೋ ಒಂದರ ಮೇಲೊಂದು ಹೊರಳಿ ಉರುಳಿ ಕೆಳಗೆ ಬಿಸಿ ಬೂದಿಯಲ್ಲಿ ಅವರ ಕಾಲ ಬಳಿಗೆ ಬಿದ್ದವು! ಎರಡೂ ಜೀವದ ಹಂಗು ತೊರೆದು ಕಾದಾಡುತ್ತಿರುವಂತೆ ಇತ್ತು. ಆದ್ದರಿಂದ ಅವು ತಮ್ಮ ರೆಕ್ಕೆಗಳನ್ನೂ ಬಳಸಿದ್ದಿಲ್ಲ. ಆದರೆ ಅವು ಕೂಡಲೆ ದೂರಾದವು, ಮತ್ತೆ ರೆಕ್ಕೆ ಬಿಚ್ಚಿ ಮೇಲಕ್ಕೆ ಹಾರಿದವು. ಅದರ ಗರಿಸುಟ್ಟ ಕಮರು ಎದ್ದಿತು. ಅವು ಮತ್ತೆ ಕಾಣಿಸಲಿಲ್ಲ.

'ಅದೇ ಅದೇ ಕೊನೆ — ಪ್ರೀತಿ ಎಂಬುದಕ್ಕೆ!' — ಒಂದು ದನಿ ಆಡಿತು. ಆಡಿದ್ದು ಗ್ರೇಸಳೂ ಅಲ್ಲ, ಫಿಟ್ಝಪಿಯರ್ಸನೂ ಅಲ್ಲ. ಅದು ಮಾರ್ಟಿ ಸೌಥ — ಗೆಣೆ ಹಕ್ಕಿಗಳನ್ನು ಗುರುತಿಸಿ ನೋಡಲು ಮೊಗವನ್ನು ಆಕಾಶದತ್ತ ಎತ್ತಿ ಸಮೀಪ ಬಂದಳು. 'ಓ, ಮಿಸ್ ಮೆಲಬರಿ. ಆ ಪಾರಿವಾಳಗಳನ್ನೇ ನೋಡುತ್ತ ಬಂದೆ, ನಿಮ್ಮನ್ನು ಕಾಣಲೇ ಇಲ್ಲ. ಮತ್ತೆ ಅದೋ — ಇಲ್ಲಿ ವಿಂಟರಬೋರ್ನನೂ ಇದ್ದಾರೆ!' ಆಕೆ ತುಸು ನಾಚಿಯೇ ನುಡಿದಳು, ಹಿಂದೆ ಸರಿದು ನಿಂತಿದ್ದ ಫಿಟ್ಝಪಿಯರ್ಸನ ಕಡೆಗೆ ನೋಡುತ್ತ.

'ಮಾರ್ಟೀ' ಗ್ರೇಸ ನಡುವೆ ಆಡಿದಳು, 'ನೀನು ನನ್ನ ಜತೆ ಮನೆಯವರೆಗೆ ನಡೆಯಬೇಕು, ನಡೆಯುವಿಯಾ? ಬಾ ಹಾಗಾದರೆ.' ಮತ್ತು ಅಲ್ಲಿ ಇನ್ನೂ ಹೊತ್ತು ಗಳೆಯದೆ, ಅವಳು ಮಾರ್ಟಿಯ ಭುಜವನ್ನು ಹಿಡಿದು ಅವಳನ್ನು ಹೊರಗೆ ಒಯ್ದಳು.

ಚೆಲ್ಲಿ ಸುಲಿದು, ಪಿಶಾಚ ತೋಳುಗಳನ್ನು ಚಾಚಿ ಅಡ್ಡಬಿದ್ದ ಮರಗಳ ನಡುವಿನಿಂದ ಹಾದಿ ಮಾಡಿಕೊಂಡು ಹಾಯ್ದರು. ಮುಂದೆ ಬೆಳೆಯುತ್ತಿರುವ ಮರಗಳ ನಡುವೆ ಆ ದಾರಿಯಲ್ಲಿ ಮುಂದೆ ಓಕ ಮರಗಳೂ ಇದ್ದಿಲ್ಲ, ಚೆಲ್ಲಿ ಸುಲಿಯುವದೂ ಇದ್ದಿಲ್ಲ, ಫಿಟ್ಝಪಿಯರ್ಸನೂ ಇದ್ದಿಲ್ಲ. ಅಲ್ಲಿ ಬರೆ ಪೊದೆ ತುಂಬಿದ ಹಾಡಿ, ಅವುಗಳ ನಡುವೆ ಪ್ರಿಂರೋಜ ಹೂವುಗಳೂ ಗೊಂಚಲು ಗೊಂಚಲಾಗಿ, ಮಸುಮಸುಕಾಗಿ ಕಂಗೊಳಿಸುತ್ತಿದ್ದವು.

'ನನಗೆ ಗೊತ್ತಾಗಲಿಲ್ಲ — ವಿಂಟರಬೋರ್ನ ಅಲ್ಲಿ ಇದ್ದದ್ದು.' ಮಾರ್ಟಿ ಅಂದಳು, ಗ್ರೇಸಳ ಮನೆ ಬಾಗಿಲ ಹತ್ತಿರ ಬಂದರೆಂದಾಗ, ಅವರ ಮೌನವನ್ನು ಮುರಿದು.

'ಆತ ಇದ್ದದ್ದೇ ಇಲ್ಲ' ಅಂದಳು ಗ್ರೇಸ.

'ಆದರೆ, ಅಮ್ಮ ನಾನವನನ್ನು ಕಂಡೆ.'

'ಇಲ್ಲ' ಗ್ರೇಸ ಅಂದಳು, 'ಅವರು ಬೇರೆ. ಜೈಲ್ಸ ವಿಂಟರಬೋರ್ನ ನನಗೆ ಏನೂ ಅಲ್ಲ.'

೨೧

ಹಿಂಟೋಕದ ಮೇಲೆ ನೆರಳು ಚೆಲ್ಲುವ ಎಲೆಗಳು ತಮ್ಮ ನಿರಿಗೆಗಳನ್ನು ಬಿಚ್ಚಿ ಹರವಾಗ ಹತ್ತಿದವು. ಆ ಮಲೆನಾಡು ಬೆಟ್ಟದ ನಾಡು ತೆರೆದಿಟ್ಟ ಕಸೂತಿಗೆಲಸದ ಆಕಾರ ಬಿಟ್ಟು ವಿಪರೀತ ದೊಡ್ಡದಾದ ಮಹತ್ವದ ಘನರೂಪವನ್ನು ತಾಳುತ್ತ ಪಲ್ಲಟಣೆ ಹೊಂದುವಂತೆ ಕಂಡು ಬಂದಿತು. ಟೊಂಗೆಗಳು ಹಸಿರು ನೆರಳನ್ನು ಚೆಲ್ಲತೊಡಗಿದವು. ಆ ನೆರಳು ಅದರಲ್ಲಿ ನಡೆದಾಡುವ ಹುಡುಗೆಯರ ಅಂಗಕಾಂತಿಯೊಂದಿಗೆ ಸರಿಹೊಂದದಾಯಿತು. ಅದೇ ಟೊಂಗೆಗಳ ಅಂಚುಗಳು ಮೆಲಬರಿಯ ತೋಟದ ಮೇಲೆ ತೂಗುತಿದ್ದು ಅಲ್ಲಿಯ ಬಿತ್ತನೆಯ ಅಗೆಗಳ ಮೇಲೆ ಹನಿಹನಿ ತೊಟಕ ತೊಡಗಿದವು, ಮಳೆಯಾಗುವಾಗೆಲ್ಲ. ಅದರಿಂದ ಆ ನೆಲಕ್ಕೆಲ್ಲ ಮೈಮೇಲೆ ಮೈಲಿಯ ಕಲೆಗಳಾದಂತೆ ಚಿಕ್ಕಚಿಕ್ಕ ಕುಳಿಬಿದ್ದವು. ಆಗ ಅಂಥ ಸ್ಥಳಗಳಲ್ಲಿ ತೋಟವೇನೂ ಸರಿ ಅಲ್ಲ ಎಂದು ಮೆಲಬರಿ ಹೇಳಹತ್ತಿದನು. ಚಳಿಗಾಲವಿಡೀ ಕರಕರ ಸಪ್ಪಳ ಮಾಡುತ್ತಿದ್ದ ಎರಡು ಮರಗಳು ತಮ್ಮ ಕರಕರೆಯನ್ನು ಮರೆತವು. ಆದರೂ ಆ ನಿಟ್ಟಿನಿಂದ ಬರುವ ಆ ವಿಚಿತ್ರ ಸಂಗೀತವನ್ನು ಇರುಳ ಗಿಡಗವು ತನ್ನ ಗರ್ರ್ ಎಂಬ ಸದ್ದಿನಿಂದ ಮುಂದುವರಿಸಿತು. ನಡುಹಗಲಿಗಲ್ಲದೆ, ಹಿಂಟೋಕಿನ ಜನಕ್ಕೆ ಸೂರ್ಯ ಪೂರ್ತಿ ಕಾಣಿಸದಾದನು. ಉಳಿದ ಹೊತ್ತೆಲ್ಲ ಅವರ ಪಾಲಿಗೆ ಸೂರ್ಯನೆಂದರೆ, ಎಲೆಗಳೊಳಗಿಂದ ದಿಟ್ಟಿಸುವ ಅನೇಕಾನೇಕ ಚಿಕ್ಕ ನಕ್ಷತ್ರಗಳೇ ಸರಿ.

ಈ ವರ್ಷದ ನಡುವಸಂತದ ಆರಂಭದಲ್ಲಿ ಇಂಥ ನೋಟವಿತ್ತು. ಹೊತ್ತು ಮೀರುತಿದ್ದಂತೆ, ಒಂಭತ್ತು ಗಂಟೆ ಆಗುತಿದ್ದಂತೆ, ಹಗಲಿನ ಹೆಬ್ಬೆಳಕು ದೆವ್ವಗಳಂಥ ಮೂಲೆ ಮೂಲೆಗಳ ಮಬ್ಬಿನಿಂದ ಮತ್ತು ವಿಚಿತ್ರ ಛಾಯೆಗಳಿಂದ ಒಡೆದು ಚೂರಾಗುತ್ತಿತ್ತು. ಮರಗಳ ಕಾಂಡಗಳಲ್ಲಿಯೂ ಕಲ್ಪನಾ ವಿಲಾಸವು ಅಜಾಂಡ ಮೋರೆಗಳನ್ನು ಪ್ರೇತಾಕೃತಿಗಳನ್ನು ಗುರುತಿಸುವಂತಾಯಿತು. ಇದೆಲ್ಲ ಚಂದ್ರ ಮೂಡಿ ಬರುವದಕ್ಕೂ ಮುಂಚೆ. ಆ ಮೇಲೆ ಆ ಬಿಂಬವು ಮೇಲ್ಬಾನಿನ ಆದಿಪತ್ಯವನ್ನು ಪಡೆಯುತಿದ್ದಾಗ, ಆ ಹಳ್ಳಿಯ ನೆರೆಹೊರೆಯ ಕಣಿವೆಗಳಲ್ಲಿ ತೆರವಿದ್ದ ತಾಣಗಳಲ್ಲೆಲ್ಲ ಅಖಂಡ ಮುಖದಿಂದ ಬೆಳಗುತಿದ್ದಾಗ, ಮರಗಳ ವ್ಯಾಪಾರಿ ಮೆಲಬರಿಯ ಮನೆಯ ಪರಿಸರವನ್ನು ಸಮೀಪಿಸುವ ಬೆಟ್ಟದಂಚುಗಳು, ಆ ಪ್ರಶಾಂತ ಸಮಯದ ವಾಡಿಕೆಯ ನೀರವ ಶೂನ್ಯತೆಗೆ ಬಿಟ್ಟುಕೊಟ್ಟಂತೆ ಉಳಿಯುವಂತಿದ್ದಿಲ್ಲ.

ಫಿಟ್ಝಪಿಯರ್ಸನು ಏನೋ ದನಿಯನ್ನೋ ದನಿಗಳನ್ನೋ ಕೇಳಿ ತನ್ನ ತೋಟದ ಗೇಟಿನಾಚೆಗೆ ಇಣುಕಿ ನೋಡಹತ್ತಿದನು. (ಇತ್ತೀಚೆಗೆ ಆತ ಪುಸ್ತಕಗಳಲ್ಲಿಗಿಂತ ಹೀಗೆ ಅಲ್ಲಿ ಇಣಕಿ ನೋಡುವದೇ ಹೆಚ್ಚಾಗಿತ್ತು!) ಗ್ರೇಸಳೇ ತನ್ನ ಗೆಳತಿಯ ಕೊಠಡಿಗೆ ಹೊರಬಿದ್ದಿರಬೇಕೆಂದು ಆತ ಕಲ್ಪಿಸಿದ್ದನು. ಆತ ಹೃದಯದಿಂದಲೂ ಗ್ರೇಸ ಮೆಲಬರಿಗೆ ಬದ್ಧನಾಗಿ ಬಿಟ್ಟಿದ್ದ. ಆದರೆ ಆಕೆ ತನಗೆ ಹಾಗೆ ಬದ್ಧಳಾಗಿರುವಳೋ? — ಎಂಬ ಕುರಿತು ಅವನಿಗೆ ಅಷ್ಟೇನು ಖಚಿತವಿದ್ದಿಲ್ಲ. ಕಲ್ಪನೆಯು ವಾಸ್ತವ ವಸ್ತುವನ್ನು ಇಷ್ಟು

ಪೂರ್ತಿಯಾಗಿ ವ್ಯಾಪಿಸಿಕೊಂಡ ಮೇಲೆ — ಅದು ಹಾಗೆ ಮಾಡೀತೆಂಬುದೇ ಅವನಿಗೆ ಆ ತನಕ ಅಶಕ್ಯವೆನಿಸಿತ್ತು — ಈಗ ತನ್ನ ಕಲ್ಪನೆಯೇ ವಾಸ್ತವವೆಂದು ವ್ಯಾಮೋಹ ಗೊಂಡಿದ್ದನು.

ಆದರೆ ಅಲ್ಲಿಂದ ಹಾದು ಹೋದದ್ದು ಗ್ರೇಸಳಲ್ಲ, ಹಲವಾರು ಹಳ್ಳಿಯ ಹುಡುಗೆಯರು — ಒಂದು ಗುಂಪಾಗಿ. ಕೆಲವರು ನಿಧಾನವಾಗಿ ನಡೆದು ಹೋಗುತ್ತಿದ್ದರು, ಕೆಲವರು ತೀರ ನಿರ್ಭರವಾದ ಹರ್ಷದಲ್ಲಿ ಹಾರಾಡುತಿದ್ದರು, ಫಿಟ್ಜ್‌ಪಿಯರ್ಸನ ಮನೆಯೊಡತಿಯೂ ತೋಟದಲ್ಲಿ ಇದ್ದಳು. ಆತ ಅವಳನ್ನು ಕೇಳಿದ — ಈ ಹೆಣ್ಣು ಮಕ್ಕಳು ಹೀಗೇಕೆ ಎಂದು. ಆಕೆ ತಿಳಿಸಿ ಹೇಳಿದಳು — ಅದು ವಸಂತಾಗಮನದ ಪ್ರಾರಂಭ (ಮಿಡ್ ಸಮರ ಈವ). ಈ ಹೆಣ್ಣುಮಕ್ಕಳು ತಮ್ಮ ಭಾವೀ ಜೀವನದ ಜತೆಗಾರನಾರೆಂಬುದರ ಬಗೆಗೆ ಅರಿತುಕೊಳ್ಳುವ ಒಂದು ಮಂತ್ರವನ್ನೋ ಮಾಟವನ್ನೋ ಸಾಧಿಸಲು ಹೊರಟಿದ್ದರು. ಈ ಸಾಧನೆ ದೇವರು ಮೆಚ್ಚುವ ಕೃತಿಯಲ್ಲ. ಅಧಾರ್ಮಿಕ. ಆಕೆಯೋ ಅಂಥವನ್ನು ಎಂದೂ ಪ್ರೋತ್ಸಾಹಿಸಲಾರಳು — ಎಂದು ಹೇಳಿ ಆ ಯಜಮಾನಿ ಮನೆಯೊಳಗೆ ಹೊಕ್ಕು ಮಲಗಲು ಹೋದಳು.

ತರುಣ ಫಿಟ್ಜ್‌ಪಿಯರ್ಸ್ ಒಂದು ಸಿಗಾರು ಹೊತ್ತಿಸಿದನು ಮತ್ತು ಆ ಹೆಂಗೆಳೆಯರ ಗುಂಪನ್ನೆ ಹಾದಿಗುಂಟ ನಿಧಾನವಾಗಿ ಹಿಂಬಾಲಿಸಿದನು. ಅವರು ಮೆಲಬರಿ ಮತ್ತು ಮಾರ್ಟಿ ಸೌಥರ ಮನೆಗಳ ನಡುವಿನ ಒಂದು ತೆರವಿನೊಳಗಿಂದ ಬೆಟ್ಟವನ್ನು ಸೇರಿದರು. ಆದರೆ ಅವರ ದನಿಗಳ ಮೂಲಕ ಅವರ ದಾರಿ ಫಿಟ್ಜ್‌ಪಿಯರ್ಸನಿಗೆ ಸುಲಭವಾಗಿ ಗುರುತಿಸಲು ಬರುತ್ತಿತ್ತು, ಅವರು ತಮ್ಮ ದನಿ ಎಷ್ಟೇ ತಗ್ಗಿಸಿ ಹರಟುತಿದ್ದರೂ.

ಆ ನಡುವೆ ಹಿಂಟೋಕಿನ ಇತರ ನಿವಾಸಿಗಳಿಗೂ ಈ ರಾತ್ರಿಯ ಪ್ರಯೋಗದ ಅರಿವಾಗಿತ್ತು. ಅವರೂ ಈ ಚಕ್ಕಂದದ ತರಳೆಯರ ಬೆನ್ನಿಗೆ ಕಳ್ಳ ಹೆಜ್ಜೆಯಿಂದ ನಡೆದು ಬಂದರು. ಆ ದಿನ ಹಗಲಲ್ಲಿಯೆ ಮಾರ್ಟಿ ಸೌಥ ಮೆಲಬರಿಯ ಮಗಳಿಗೆ ಈ ಭವಿಷ್ಯದ ಇಣಕು ನೋಟದ ಬಗೆಗೆ ಹೇಳಿದ್ದಳು. ಆಕೆಯೂ ಇತರ ಹುಡುಗೆಯರಂತೆಯೇ ಒಬ್ಬಳು; ಈ ವಿಷಯವೇನೆಂದು ನೋಡಿಯೇ ಬಿಡಬೇಕೆಂಬ ಸ್ವಾರಸ್ಯ ಅವಳಿಗೂ ಸಾಕಷ್ಟು ಉಂಟಾಯಿತು. ಚಂದ್ರನ ಬಟ್ಟಂಬೆಳಕು, ರಾತ್ರೆಯ ಆ ನಿಃಶಬ್ದ ಸ್ತಬ್ಧತೆ, ಇವೆರಡೂ ಇಷ್ಟು ಬಲವಾಗಿದ್ದವೆಂದರೆ, ಶ್ರೀಮತಿ ಮೆಲಬರಿಯನ್ನು ತನ್ನ ಸಂಗಡ ಬಾ ಎಂದು ಮನಒಲಿಸಲು ಆಕೆಗೆ ಕಷ್ಟವಾಗಲಿಲ್ಲ. ಆದ್ದರಿಂದ ಮಾರ್ಟಿಯನ್ನು ಜತೆಗೂಡಿ ಕೊಂಡು ಇವರೆಲ್ಲ ಅದೇ ನಿಟ್ಟಿನಲ್ಲಿ ಮುಂದುವರಿದರು.

ವಿಂಟರಬೋರ್ನನ ಮನೆಯನ್ನು ಹಾದು ಹೋಗುವಾಗ ಅವರು ಸುತ್ತಿಗೆಯ ಏಟಿನ ಸದ್ದನ್ನು ಕೇಳಿದರು ಮಾರ್ಟಿ ಅದೇನೆಂದು ವಿವರಿಸಿದಳು. ಇದು ಅವನ ಪಾಲಿನ ಕೊನೆಯ ರಾತ್ರೆ — ತಂದೆ ತಾತಂದಿರ ಮನೆಯ ಆಶ್ರಯದ್ದು. ಅವನಿಗೆ ಅಲ್ಲಿ ಇರಲು ಕೊಟ್ಟ ರಿಯಾಯತಿಯ ದಿನಗಳ ಅವಧಿಯೂ ಅಂದು ಮುಗಿದಿತ್ತು. ಆದ್ದರಿಂದ ರಾತ್ರೆ ಕಳೆದರೂ, ಜೈಲ್ಸ ಮನೆಯೊಳಗಿಂದ ಕಪಾಟುಗಳನ್ನು ಮಂಚಗಳನ್ನು

ಕಳಚುತಿದ್ದ — ಮರುದಿನ ಮುಂಜಾವಿಗೇ ಅಲ್ಲಿಂದ ಕಂಬಿಕೀಳಲಿಕ್ಕೆ, ಶ್ರೀಮತಿ ಚಾರ್ಮಂದಳೊಂದಿಗೆ ಅವನಿಗೆ ಒದಗಿದ ಆ 'ಮೊಕಾಬಿಲೆ' ಭಾರಿ ತುಟ್ಟಿಬಿದ್ದಿತ್ತು.

ತುಸು ದೂರಕ್ಕೆ ಹೋಗುವಷ್ಟರಲ್ಲಿ ಮಾರ್ಟಿಗೆ ಆ ಆಲಿವರ ಅಜ್ಜಿ ಬಂದು ಕೂಡಿದಳು (ಆ ಮುದುಕಿ ಇಂಥ ಸಂಗತಿಗಳಲ್ಲಿ ಹಚ್ಚಹರೆಯದವರಿಗಿಂತಲೂ ಎಳೆಯಳು!) ಗ್ರೇಸಳೂ ಅವಳ ತಾಯಿಯೂ ಮುಂದಾದರು. ಆ ಹಳ್ಳಿಯ ಹುಡುಗೆಯರು ಆಯ್ದುಕೊಂಡ ಸ್ಥಳಕ್ಕೆ ತಲುಪಿದರು. ಅವರು ತಮ್ಮ ಈ ಯಾತ್ರೆಯನ್ನು ಗೌಪ್ಯವಾಗಿ ಇಟ್ಟುಕೊಳ್ಳಬೇಕೆಂದ ಮೂಲದ ಉದ್ದೇಶವೇ ವಿಫಲವಾಯಿತು. ಗ್ರೇಸಳೂ ಅವಳ ತಾಯಿಯೂ ಒಂದು ಹಾಲ್ಲಿ ಮರದ ಬದಿಗೆ ತಡೆದರು. ಅಲ್ಲಿಂದ ತುಸು ಅಂತರಕ್ಕೆ ಒಂದು ಎಳೆಯ ಓಕ ಮರದ ಛಾಯೆಯಲ್ಲಿ ಫಿಟ್ಝಪಿಯರ್ಸ ನಿಂತನು. ಆತ ಗ್ರೇಸಳನ್ನೆ ದಿಟ್ಟಿಸಿ ನೋಡುತಿದ್ದನು. ಆಕೆ ಪೂರ್ತ ಬೆಳದಿಂಗಳಲ್ಲಿ ನಿಂತಿದ್ದಳು. ಮಾತಿಲ್ಲದೆ ಆತ ಅವಳನ್ನು ಎವೆಯಿಕ್ಕದೆ ನೋಡುತಿದ್ದನು. ಮಾರ್ಟಿ ಮತ್ತು ಆಲಿವರ ಇಬ್ಬರಲ್ಲದೆ ಇನ್ನೊಬ್ಬರು ಯಾರೂ ಅವನನ್ನು ನೋಡಲಿಲ್ಲ. ಇವರಿಬ್ಬರು ಹಾಲ್ಲಿ ಮರದ ನೆರಳಿನ ಬದಿಯಲ್ಲಿ ನಿಂತಿದ್ದರು. ಅದರ ಬೆಳದಿಂಗಳ ಬದಿಯಲ್ಲಿ ಮೆಲಬರಿಯ ಹೆಂಡತಿ ಮತ್ತು ಮಗಳು ಇದ್ದರು.

'ಈ ಇಬ್ಬರು ಮುಂದಿನ ಮಧ್ಯವಸಂತ ರಾತ್ರೆ ಈ ಕಾನಿನಲ್ಲಿ ಬಂದರೆ ನಿಜವಾಗಿಯೂ ಒಂದುಗೂಡುವರು.' ಆಲಿವರಂದಳು, ಫಿಟ್ಝಪಿಯರ್ಸ ಮತ್ತು ಗ್ರೇಸಳನ್ನು ಉದ್ದೇಶಿಸಿ. 'ನನ್ನ ಎಲುಬಿನ ಗೂಡಿನ ಬದಲು ಇವಳ ಜೀವಂತ ಮೈಯನ್ನೆ ಆತ ಮನೆಗೆ ಒಯ್ಯುವನು. ಅದೂ ಬೇಗನೆ. ಇವಳೂ ಕುಲೀನ ಹೆಣ್ಣು. ಅವನಂಥವರಿಗೇ ಯೋಗ್ಯಳು. ಆದರೂ ಆತ ಚಾರ್ಮಂದಳಂಥವರನ್ನು ಮದುವೆ ಆಗಬೇಕು. ಗ್ರೇಸಳು ವಿಂಟರಬೋರ್ನನ ಬಾಳು ಬೆಳಗಬೇಕು.' ಇದಕ್ಕೆ ಮಾರ್ಟಿ ಮರು ಮಾತಾಡಲಿಲ್ಲ. ಅಲ್ಲಿ ಮಾಡಬೇಕಾದ ಮಾಟ 'ಹೆಂಪ' ಬೀಜ ನೆಡುವದಕ್ಕೆ ಸಂಬಂಧಿಸಿದ್ದು. ಒಬ್ಬೊಬ್ಬ ಹುಡುಗಿಯೂ ಒಂದೊಂದು ಹಿಡಿ ಹೆಂಪ ಬೀಜ ತಂದಿದ್ದರು.

ಅವರು ಮುಂದೆ ಸಾಗುವ ಮುನ್ನ ಹಿಂದೆ ನೋಡಿದರು. ಅವರಿಗೆ ಕುಮಾರಿ ಮೆಲಬರಿಯ ಆಕೃತಿ ಕಂಡಿತು. ಎಲ್ಲ ನಿರೀಕ್ಷಕರಲ್ಲಿ ಅವಳೊಬ್ಬಳೆ ಅಚ್ಚಬೆಳದಿಂಗಳಿನಲ್ಲಿ ನಿಂತಿದ್ದಳು. ನಡೆಯುವ ಘಟನೆಗಳಲ್ಲಿ ತುಂಬ ತನ್ಮಯಳಾಗಿ ನಿಂತಿದ್ದಳು. ಇತ್ತೀಚೆಯ ವರ್ಷಗಳ ಅವಳ ಜೀವನವೇನೇ ಇದ್ದರೂ ಆ ಹೆಂಗೆಳೆಯರು ಅವಳಿಗೆ ಪ್ರಪಂಚದ ಇತಿಹಾಸದಲ್ಲಿ ಕೆಲವು ಶತಮಾನ ಹಿಂದಕ್ಕೆ ಒಯ್ದಂತೆ ಅನಿಸುವಂತೆ ಮಾಡಿದ್ದರು. ಅವಳುಟ್ಟ ಬಟ್ಟೆಗಳೂ ತಿಳಿಬಣ್ಣದವಾಗಿದ್ದವು. ಆದ್ದರಿಂದ ಅವಳು ಇನ್ನಷ್ಟು ಒಡೆದೆದ್ದು ಕಾಣುವಂತಾಯಿತು. ಆಗ ಅವರು ಕೆಲವು ಪಿಸುಮಾತಾಡಿಕೊಂಡರು. ಅವರಲ್ಲಿ ಒಬ್ಬಳು (ಪ್ರಾಯದ ಟಿಮೋಥಿ ಟಾಂಗನನ್ನು ಮದುವೆಯಾಗಲಿದ್ದ ಪುಟಿವ ಪುಟಾಣಿ ಸೂಕೆ ಎಂಬವಳು) ತಮ್ಮೊಡನೆ ಸೇರಿ ಬರಲು ಗ್ರೇಸಳನ್ನು ಕೇಳಿಕೊಂಡಳು.

ಗ್ರೇಸಳು ತುಸು ಸಂಭ್ರಮಗೊಂಡು ಒಪ್ಪಿಕೊಂಡಳು ಮತ್ತು ಉಳಿದವರ ಹಿಂಬದಿಯಲ್ಲಿ ತಾನೂ ಹೊರಟಳು.

ಬೇಗನೆ, ಕೇಳಲು ಬಂದವರಿಗೆ ಎಲೆಗಳ ಮರ್ಮರವಲ್ಲದೆ ಇನ್ನೇನೂ ಕೇಳದಾಯಿತು. ಆಲಿವರ ಮಾರ್ಟಿಯನ್ನು ಪಿಸುದನಿಯಲ್ಲಿ ಕೇಳಿದಳು, 'ನೀನೂ ಏಕೆ ಹೋಗಲಿಲ್ಲ? ಆ ಉಳಿದ ಹುಡುಗೆಯರಂತೆ ನಿನ್ನ ಅದೃಷ್ಟದ ಪರೀಕ್ಷೆಯನ್ನು ಏಕೆ ಮಾಡಿಕೊಳ್ಳೋದಿಲ್ಲ?'

'ನನಗೆ ಅದರಲ್ಲಿ ನಂಬಿಗೆ ಇಲ್ಲ.' ಮಾರ್ಟಿ ಮಾತು ಮುರಿದು ಅಂದಳು, 'ಅಲ್ಲದೆ ಅವರು ಮಂದಿಗೆ ಗೊತ್ತಾಗುವಂತೆ ಮಾಡಿ ಇದನ್ನು ಕೆಡಿಸಿಬಿಟ್ಟಿದ್ದಾರೆ.'

'ಹೌದೇ ಸೈ. ಅರ್ಧ ಊರೇ ಇಲ್ಲಿ ಬಂದಿದೆ. ಈ ಮಳ್ಳು ಹೆಣ್ಣುಗಳು ಇದನ್ನು ಸುಮ್ಮನೆ ಇಡಬೇಕಿತ್ತು. ಅಕೋ, ಎಲೆಗಳ ಮರೆಯಲ್ಲಿ ನಾನು ವಿಂಟರಬೋರ್ನನನ್ನು ಕಂಡೆ. ರಾಬರ್ಟ ಕ್ರೀಡಲ್ ಸಂಗಡ ಬಂದಿದ್ದಾನೆ. ಮಾರ್ಟಿ, ನಾವೂ ಕೆಲವೊಮ್ಮೆ ದೈವದ ಪಾತ್ರ ವಹಿಸಬೇಕು. ಸ್ವಲ್ಪ ಹೋಗಿ ಅವನಿಗೆ ಹೇಳು—ಆ ಇಳುಕಲಿನ ತುದಿಗೆ ಆ ಪೊದೆಗಳ ಹಿಂದೆ ಆತ ನಿಂತಿದ್ದರೆ ಸಾಕು, ಗ್ರೇಸಳು ತಿರುಗಿ ಬರುವಾಗ ಅದರ ಗುಂಟ ಹಾಯ್ದು ಬರಲೇಬೇಕು. ಆಗ ಆಕೆ ನುಗ್ಗಿ ಅವನ ತೋಳ ತೆಕ್ಕೆಯಲ್ಲಿ ಬಿದ್ದೇಬೀಳುವಳು. ಏಕೆಂದರೆ ಮಧ್ಯರಾತ್ರಿಯು ಬಡಿಯುವದೇ ತಡ, ಅವರೆಲ್ಲ ಮೊಲಗಳಂತೆ ಮನೆಯ ಕಡೆ ಒಟ್ಟಾಗಿ ಓಡುತ್ತ ಬರುವರು. ನಾನು ಇಂಥ ಗೊಂದಲ ಹಿಂದೆಲ್ಲ ನೋಡಿದವಳೇ.'

'ನಾನು ಹೋಗಲೇಬೇಕೋ?' ಮಾರ್ಟಿ ಮನಸಿಲ್ಲದೆ ಕೇಳಿದಳು.

'ಹೌದು ಆತ ನಿನ್ನ ಹರಸುವನು ಕಣೆ, ಹಾಗೆ ಹೋಗಿ ಹೇಳಿದರೆ.'

'ನನಗೆ ಅಂಥ ಹರಕೆ ಬೇಡ.'

ಆದರೆ ಒಂದು ಕ್ಷಣ ವಿಚಾರ ಮಾಡಿ ಆಕೆ ಹೋಗಿ, ಆಲಿವರ ಹೇಳಿದ ಸಮಾಚಾರ ಅವನಿಗೆ ತಿಳಿಸಿದಳು. ಆತ ಮೆಲ್ಲಗೆ ದಟ್ಟ ಎಲೆ ಮುಚ್ಚಿದ ತಗ್ಗಿನಲ್ಲಿಯ ಮುದುಕಿಯ ಕಡೆಗೆ ನಡೆದದ್ದು ಕಂಡು ಆಲಿವರಳಿಗೆ ಸಮಾಧಾನವಾಯಿತು. ಗ್ರೇಸಳು ಅದರ ಗುಂಟವೆ ತಿರುಗಿ ಬರುವವಳಿದ್ದಳು.

ಈ ನಡುವೆ ಗ್ರೇಸಳಿಂದ ಅಗಲಿ, ಅವಳ ತಾಯಿಯು, ಫಿಟ್ಝಪಿಯರ್ಸ ಮತ್ತು ವಿಂಟರಬೋರ್ನರನ್ನು ಕಂಡಳು. ಅವರ ಚಲನವಲನದ ಹೊಲಬನ್ನು ಮನಗಂಡಳು. ಅಜ್ಜಿ ಆಲಿವರಳ ವಿಚಾರದ ಸುಧಾರಿಸಿದ ಆವೃತ್ತಿ ಇವಳ ಮನಸ್ಸಿಗೆ ತೋಚಿತು. ಏಕೆಂದರೆ, ಗಂಡನು ಗುರುತಿಸದಿದ್ದ ಒಂದು ಸಂಗತಿಯನ್ನು ಅವಳು ಇತ್ತೀಚೆಗೆ ಗಮನಿಸಿದ್ದಳು—ಆ ಸಂಗತಿಯೆಂದರೆ, ತನ್ನ ಗ್ರೇಸಳು ಆ ಸರ್ಜನ್ನನನ್ನು ಭರದಿಂದ ಮೋಹಿಸತೊಡಗಿದ್ದು. ಆದ್ದರಿಂದ ಫಿಟ್ಝಪಿಯರ್ಸನ ಹತ್ತಿರ ಹೋದಳು.

'ವಿಂಟರಬೋರ್ನ ಇರುವಲ್ಲಿ ನೀವು ಈಗ ಇರಬೇಕಿತ್ತು.' ಆಕೆ ಅರ್ಥಪೂರ್ಣವಾಗಿ

ಅಂದಳು. ಆಕೆ ಆ ದಾರಿಯಲ್ಲಿ ಹೋದುದಕ್ಕಿಂತ ಹೆಚ್ಚು ವೇಗದಿಂದ ಓಡಿ ಬರುವಳು ಉಳಿದ ಹುಡುಗೆಯರಂತೆಯೆ ಅವಳೂ ಇದ್ದರೆ!'

ಫಿಟ್ಜ್‌ಪಿಯರ್ಸನಿಗೆ ಇನ್ನೊಮ್ಮೆ ಹೇಳಬೇಕಾಗಿಲ್ಲ. ಆತ ವಿಂಟರಬೋರ್ನನಿದ್ದಲ್ಲಿಗೆ ಹೋದನು. ಮತ್ತು ಅವನ ಪಕ್ಕದಲ್ಲಿಯೇ ನಿಂತನು. ಅಲ್ಲಿ ನಿಲ್ಲುವದರ ಒಬ್ಬನ ಇಂಗಿತವು ಏನಿರಬಹುದೆಂಬುದನ್ನು ಇನ್ನೊಬ್ಬನು ಅರಿತಿದ್ದನು. ಇಬ್ಬರೂ ಮಾತಾಡ ಲಿಲ್ಲ. ವಿಂಟರಬೋರ್ನನನ್ನು ತನ್ನ ಇದುರಾಳಿ ಪ್ರತಿಸ್ಪರ್ಧಿ ಎಂದು ಭಾವಿಸುವದೂ ಫಿಟ್ಜ್‌ಪಿಯರ್ಸನಿಗೆ ತಿರಸ್ಕಾರದ್ದೆನಿಸಿತು. ಮತ್ತು ವಿಂಟರಬೋರ್ನನು ಗ್ರೇಸಳು ನಿರಾಕರಿಸಿದ ನಂತರ ಬೆಳೆಯಿಸಿಕೊಂಡ ಉದಾಸೀನತೆಯ ಭಾವವನ್ನೆ ಅಂಟಿಕೊಂಡು ಉಳಿದನು.

ಆಲಿವರಳಾಗಲಿ ಮಾರ್ಟಿ ಸೌಥಳಾಗಲಿ, ಸರ್ಜನನ ಚಲನವಲನವನ್ನು ಕಂಡಿದ್ದಿಲ್ಲ. ಆ ಮುದುಕಿಯು ವಿಂಟರಬೋರ್ನನಿಗೆ ನೆರವಾಗಲು ಯೋಚಿಸಿ ಆ ಕಾನನ-ಬಾಲೆಗೆ ಮುಂದೆ ಹೋಗಿ ಗ್ರೇಸಳು ಇನ್ನೊಂದು ನಿಟ್ಟಿನಲ್ಲಿ ಇತ್ತ ಕಡೆಗೆ ಎಳೆದುಕೊಂಡು ಬರುವಂತೆ ಮಾಡಲು ಸೂಚಿಸಿದಳು. ಬಡ ಮಾರ್ಟಿ, ಯಾವಾಗಲೂ ಹಂಗಿಗಾಗಿ ಹಂಬಲವನ್ನು, ಬಯಕೆಯನ್ನು ಬಲಿ ಕೊಡಲು ಹಣೆಯಲ್ಲಿ ಬರೆದು ಬಂದವಳು, ಅದರಂತೆ ಮುಂದೆ ನಡೆದು, ಶಾಂತ–ಮೂಕಳಾಗಿ, ಗ್ರೇಸಳು ಹಿಗ್ಗಿನ ಮೇಲೇರಿದ ಸಂಗಾಡಿಗಳೊಂದಿಗೆ ಮರಳಿ ಬರುವದನ್ನೆ ಹಾರೈಸುತ್ತ, ದಿಕ್ಕು ತೋರಿಸಲು ಹೊತ್ತಿಸಿದ ದಿಬ್ಬದ ಮೇಲಿನ ಬೆಂಕಿಯಂತೆ ನಿಂತಳು—ಬರುವವರ ಮಾತು-ಕತೆಯ ದನಿ ಕಿವಿಯಾಚೆಗೆ ಬೀಳದಷ್ಟು ಅಂತರಕ್ಕೆ.

ಸುತ್ತಲಿನ ಮೌನವನ್ನು ಭೇದಿಸುವ ಮೊದಲಿನ ಸದ್ದೆಂದರೆ ದೂರದ ಹಿರಿಯ ಹಿಂಟೋಕಿನ ದೊಡ್ಡ ಗಡಿಯಾರವು ಹೊಡೆದ ನಿರ್ದಿಷ್ಟ ಹೊತ್ತಿನ ಗಂಟೆ. ಒಂದು ಮಿನಿಟು ನಂತರ, ಹುಡುಗೆಯರು ಅಲೆದಾಡುತ್ತ ಹೋದ ಕಾನಿನ ಭಾಗವು ಕಂಗೆಡಿಸಿದ ಹಕ್ಕಿಗಳ ಚಿಲಿಪಿಲಿ ಚೀರಾಟದಿಂದ ಮೊಳಗಿತು. ಆ ಮೇಲೆ ಎರಡೋ ಮೂರೋ ಮೊಲಗಳು ಅದೆ ನಿಟ್ಟಿನಿಂದ ಕೊಳ್ಳದಗುಂಟ ಪುಟಿದು ಬಂದವು. ಅನಂತರ ಸಳಪಳ ಸಪ್ಪಳವೂ ತರಗೆಲೆ ಟಿಸಿಲು ರೆಂಬೆಗಳೂ ಮುರಿದ ಸದ್ದೂ ಆ ಪೂಟಗಾರ್ತಿಯರ ಬರುವಿಕೆಯನ್ನು ಸೂಚಿಸಿದವು—ಅವರ ಚೆಲ್ಲಾಡುವ ನಿಲುವಂಗಿಗಳೂ ಕಾಣಹತ್ತಿದವು.

ಮೆಲಬರಿಯ ಮಗಳು ಹಿಂದುಳಿದವರ ಹಿಂಬದಿಯಲ್ಲಿ ಹೋದವಳು. ಹಿಂದಿರುಗು ವವರಲ್ಲಿ ಅವಳೆ ಮೊದಲಾದಳು. ಸಂಭ್ರಮವು ಸಾಂಸರ್ಗಿಕವಾದ್ದರಿಂದ ಅವಳು ಮಾರ್ಟಿಯ ಕಡೆಗೆ ಕಿಲಿಕಿಲಿ ನಗುತ್ತ ಓಡಿ ಬಂದಳು. ಮಾರ್ಟಿ ಇನ್ನೂ ಕೈಗಂಬದಂತೆ ಅವಳಿಗೆ ದಾರಿಗೆ ಹಚ್ಚಲು ನಿಂತೇ ಇದ್ದಳು; ಆಗ ಹಾಗೆಯೇ ಮುಂದೆ ಧಾವಿಸುತ್ತ ಗ್ರೇಸಳು ಆ ಅದೃಷ್ಟದ ಪೊದೆಯನ್ನು ಸುತ್ತುಹಾಕಿದಳು; ಅಲ್ಲಿಯೆ ಕೆಳಗಂಟಿಗಳು ತಗ್ಗಾಗಿ ಇಕ್ಕಟ್ಟಿಗೆ ಇಳಿದಿದ್ದವು. ಮಾರ್ಟಿ ಅವಳ ಬೆನ್ನಿಗೆ ಬಂದಳು. ಆ ಓಟದ ಫಲವೇನೆಂಬುದನ್ನು ಕಣ್ಣಾರೆ ನೋಡಲು ತಕ್ಕ ಹೊತ್ತಿಗೆ ಫಿಟ್ಜ್‌ಪಿಯರ್ಸನು ವಿಂಟರ

ಬೋರ್ನನ ಇದುರಿಗೆ ಸರ್ರನೆ ಹೆಜ್ಜೆ ಇಟ್ಟು ಮುಂದಾದನು. ವಿಂಟರಬೋರ್ನ ನಿಂತಲ್ಲಿಂದ ಕದಲಲಿಲ್ಲ. ತಾತ್ಸಾರಗೊಂಡು ಅಲ್ಲಿಂದ ಹಿಂದಿರುಗಿದನು. ಆಗ ಶ್ರೀಮತಿ ಮೆಲಬರಿಯ ಉತ್ತೇಜನ, ಮತ್ತು ಆಚಾರ–ಉಪಚಾರಗಳನ್ನು ಅಳಿಸಿಬಿಡುವ ಆ ರಾತ್ರೆಯ ಭಾವೋದ್ದೀಪನೆ ಇವೆರಡೂ ಇಲ್ಲದಿದ್ದರೆ ಮಾಡದಂಥ ಆ ಕೃತ್ಯವನ್ನು ಆ ಸರ್ಜನ ಮಾಡಿದನು. ಆ ಬಿಳಿಯಾಕೃತಿ ಅವನ ಮುಂದೆ ನುಗ್ಗಿ ಬಂದೊಡನೆ ಆತ ಎರಡೂ ತೋಳುಗಳನ್ನು ಚಾಚಿ ಅವಳನ್ನು ಒಂದು ಕ್ಷಣ ಹಕ್ಕಿಯನ್ನು ಹಿಡಿದುಕೊಳ್ಳು ವಂತೆ ಸೆರೆ ಹಿಡಿದನು.

'ಓ!' ಗ್ರೇಸ ಕೂಗಿದಳು ಹೌಹಾರಿ.

'ಪ್ರಿಯೆ, ನೀನು ನನ್ನ ತೋಳುಗಳಲ್ಲಿರುವಿ.' — ಫಿಟ್ಝಪಿಯರ್ಸ ಅಂದನು. 'ಮತ್ತು ನಾನು ನಿನ್ನನ್ನು ಹಕ್ಕಿನಿಂದ ಹಿಡಿದಿಟ್ಟುಕೊಳ್ಳುವೆನು — ಇಡೀ ನಮ್ಮಿಬ್ಬರ ಜೀವಮಾನದಲ್ಲಿ.'

ಆಕೆ ಅವನ ಮೇಲೆ ವಿಶ್ರಮಿಸಿದಳು — ಪೂರ್ತಿ ಗೆದ್ದು ಆಳಲ್ಪಟ್ಟವಳಂತೆ. ಅವಳು ಚೇತರಿಸಿಕೊಂಡು ಏಳುವತನಕ ಹಲವಾರು ನಿಮಿಷಗಳು ಕಳೆದವು. ಹತ್ತಿಕ್ಕಿದ ಚೀತ್ಕಾರ, ಹೆಣಗಾಟಗಳು ನೆರೆಯ ಪೊದೆಗಳಿಂದ ಕೇಳಿಸಿದವು. ಅಲ್ಲಿ ಇತರರೂ ಇಂತಹದೆ ಉದ್ದೇಶಕ್ಕಾಗಿ ಸುಳಿದಿದ್ದರೆಂಬುದೂ ಸ್ಪಷ್ಟವಾಯಿತು. ಗ್ರೇಸಳು ಆ ಇತರ ಗೆಳತಿಯ ರಂತೆ ಕಿಲಿಕಿಲಿ ನಗುತ್ತ ಬಳಿಕ ನುಸುಳಿ ಹರಿದಾಡುವ ಬದಲು ನಡುಗುವ ದನಿಯಲ್ಲಿ ಅಂದಳು, 'ಫಿಟ್ಝಪಿಯರ್ಸರೆ, ನನ್ನ ಹೋಗಗೊಡುವಿರಾ ?'

'ಅಗತ್ಯವಾಗಿ', ಆತ ಗಹಗಹಿಸಿ ನಗುತ್ತ ಅಂದನು. 'ನೀನು ಸಾವರಿಸಿಕೊಂಡ ಕೂಡಲೆ —'

ಅವಳು ಇನ್ನೂ ಕೆಲವು ನಿಮಿಷ ಸಿಧಾನಿಸಿದಳು. ಆ ಮೇಲೆ ಅವನನ್ನು ಶಾಂತವಾಗಿ ಆದರೆ ಅಷ್ಟೇ ದೃಢವಾಗಿ ಬದಿಗೆ ನೂಕಿ ತನ್ನ ಹಾದಿಯಲ್ಲಿ ನುಣ್ಣನೆ ನಡೆದು ಹೋದಳು. ಅವಳ ಲಜ್ಜೆಯಿಂದ ಉರಿವ ಕೆಂಪನ್ನು ಬೆಳದಿಂಗಳು ತೊಳೆದು ಹಾಕಿತು. ಆದರೆ ಅಷ್ಟೇ ಸಾಕಾಯಿತು. ಅವರಿಬ್ಬರ ನಡುವೆ ಹೊಸ ಸಂಬಂಧಗಳು ಸುರುವಾದವು.

ಇತರ ಹುಡುಗಿಯರ ವಿಷಯವೇ ಬೇರೆ. ಅದನ್ನು ಹಿಂದೆಯೇ ಹೇಳಲಾಗಿದೆ. ಅವರು ಗುದುಮುರಿಗೆ ಆಡಿದರು, ಚಿಲಿಪಿಲಿ ಚೆಲ್ಲಾಡಿದರು, ಪ್ರಚಂಡ ಹೆಣಗಾಟದ ನಂತರವೆ ಪಾರಾದರು. ಗ್ರೇಸಳು ಹೊರಟು ಹೋದ ಮೇಲೂ ಫಿಟ್ಝಪಿಯರ್ಸ ಈ ಅಭಿನಯಗಳನ್ನು ಕೇಳುತ್ತಲೆ ನಿಂತನು. ವಿಂಟರಬೋರ್ನ ಹೋಗಿಬಿಟ್ಟರೂ ಇವನು ಗ್ರೇಸಳನ್ನು ಹಿಡಿದು ಇಟ್ಟುಕೊಂಡ ಸ್ಥಳದಲ್ಲಿಯೆ ನಿಂತಿದ್ದನು. ಒಮ್ಮೆಲೆ ಗ್ರೇಸಳು ಹಾಯ್ದು ಬಂದ ಇಳುಕಲಿನಲ್ಲಿಯೇ ಇನ್ನೊಬ್ಬ ಹುಡುಗಿ ಪುಟಿಯುತ್ತ ಬಂದಳು — ಬರಿತೋಳುಗಳ, ಮಾಟವಾದ ಮೈಕಟ್ಟಿನ ಪ್ರಾಯದ ಹೆಣ್ಣುಮಗಳು. ಫಿಟ್ಝಪಿಯರ್ಸ ಅಲ್ಲಿ ನಿಂತಿದ್ದನ್ನು ಕಂಡು ಆಕೆ ದಿಟ್ಟ ನಗೆ ಚಾಟಿಕೆಯಲ್ಲಿ ಅಂದಳು, 'ನನ್ನ ಹಿಡಿಯೊ ದಿಲ್ಲಾದರೆ, ಮುತ್ತು ಕೊಡಬೊಹುದಲ್ಲ ತಿಮ್ಮಾ !'

ಫಿಟ್ಸ್‌ಪಿಯರ್ಸ್ ಅವಳನ್ನು ಗುರುತಿಸಿದನು — ಅವಳು ಸೂಕೆ ಡ್ಯಾಮಸನ್, ಹಳ್ಳಿಯ ಪುಂಡಿ — ಆ ದಿನ ಗೇಟಿನ ಹೊಸ ಹಸಿಬಣ್ಣದಿಂದ ಕೈ ಹೊಲಸಾದಾಗ ತನ್ನಷ್ಟಕ್ಕೆ ಬಯ್ದಾಡಿದ ಬೀರಿ. ಅವಳು ತನ್ನ ಪ್ರಿಯಕರನೆ ತಾನೆಂದು ತಪ್ಪು ಭಾವಿಸಿರುವಳೆಂದು ಸ್ಪಷ್ಟವಾಗಿಯೇ ಆತ ಊಹಿಸಿಕೊಂಡ. ಅವಳ ತಪ್ಪಿನ ಲಾಭ ಪಡೆಯಬೇಕೆಂಬ ಒತ್ತರದ ಬಯಕೆ ಅವನಲ್ಲಿ ಒಮ್ಮೆಲೆ ಎದ್ದಿತು. ಆಕೆ ಓಡಲು ಹತ್ತಿದೊಡನೆ ಅವನೂ ಬೆನ್ನಟ್ಟಿ ಹೋದನು.

ಆಕೆ ಮುಂದೆ – ಮುಂದೆ ಓಡಿದಳು — ಮರಗಳ ಟೊಂಗೆಗಳ ಕೆಳಗಿಂದ — ಒಮ್ಮೆ ಬೆಳಕಿನಲ್ಲಿ ಒಮ್ಮೆ ನೆಳಲಿನಲ್ಲಿ,...ಕೆಲ ನಿಮಿಷ ಆದೊಡನೆ ಆಕೆ ಹೆಗಲ ಮೇಲಿಂದ ಹಿಂದೆ ಹೊರಳಿ ಅವನ ಕಡೆಗೆ ನೋಡಿ ತನ್ನ ಕೈಯನ್ನು ಮುತ್ತಿಡುತ್ತಿದ್ದಳು. ಆದರೆ ಆಕೆ ಆ ಮರಗಳಲ್ಲಿ ಬೆಳದಿಂಗಳ ನೆಳಲುಗಳಲ್ಲಿ ಇಷ್ಟು ಸುಟಿಯಾಗಿ ಜಾರಿ ಹೋಗು ತ್ತಿದ್ದಳು, ಅವನನ್ನು ಅಪಾಯಕರವಾಗುವಷ್ಟು ಹತ್ತಿರಕ್ಕೆ ಎಂದೂ ಬರಗೊಡಲಿಲ್ಲ. ಹೀಗೆ ಅವರು ಓಡಿದರು. ಹೋದ ಹಾದಿಯಲ್ಲೆ ಹಿಂದಿರುಗಿ ಓಡಿದರು. ಫಿಟ್ಸ್‌ಪಿಯರ್ಸ ನಿಗೆ ಬೇಟೆಯ ಕಾವೇರಿತು. ಕೊನೆಗೂ ಅವರ ಸಂಗಡಿಗರ ಸದ್ದು ಪೂರ್ತಿ ಅಡಗಿ ಹೋಯಿತು.

ಅವಳನ್ನು ಹಿಡಿಯುವ ಆಸೆಯೆಲ್ಲ ಕೈಬಿಟ್ಟಂತೆ ಆಯಿತು. ಅಷ್ಟರಲ್ಲಿ ಅವನಿಗೆ ಉತ್ತೇಜನ ಕೊಡುವಂತೆ ಅವಳು ಬಂದು ಬೇಲಿಯ ಕಡೆಗೆ ಹೊರಳಿ ಅದರಲ್ಲಿಯ ಏರುದಣಪೆಯ ಮೇಲಿಂದ ಆಚೆಗೆ ಬಿಗಿದಳು. ಆಚೆಗೆ, ಹೊರಗಡೆಗೆ ದೃಶ್ಯವು ಬದಲಾಗಿತ್ತು. ಅದೊಂದು ಹುಲ್ಲುಗಾವಲು. ಅಲ್ಲಲ್ಲಿ ಒಣಹುಲ್ಲು ಅರೆಬರೆ ರಾಶಿಯಾಗಿ ಬಿಟ್ಟಿತ್ತು — ಈಗ ನೆತ್ತಿಗೇರಿದ ತಿಂಗಳ ಬೆಳಕಿನ ತಡೆಯಿಲ್ಲದ ಥಳಕಿನಲ್ಲಿ.

ಹೀಗೆ ಬಯಲು ನೆಲಕ್ಕೆ ಬಂದು ಆಕೆ (ಸೂಕೆ) ಕೇವಲ ತನ್ನ ಕೈವಶಕ್ಕೆ ಬಂದಂತೆ ಎಂದು ಫಿಟ್ಸ್‌ಪಿಯರ್ಸನಿಗೆ ಅನಿಸಿತು. ಕೂಡಲೆ ಆತ ಅವಳತ್ತ ನುಗ್ಗಿದನು. ಅವಳು ಆ ಹೊಲದಲ್ಲಿ ಕೆಲದೂರಕ್ಕೆ ಸುಳಿದಾಡಿ ಹೋದಳು. ಒಮ್ಮೆಲೆ ನುಸುಳಿಕೊಂಡು ಅವಳ ಆಕೃತಿ ನೆಲವೆ ನುಂಗಿದಂತೆ ಮಾಯವಾಯಿತು. ಹುಲ್ಲು ರಾಶಿಗಳ ಒಂದರಲ್ಲಿ ಆಕೆ ತನ್ನನ್ನು ಹುಗಿದುಕೊಂಡಿದ್ದಳು.

ಈಗ ಪೂರ್ತಿ ಉದ್ರೇಕಗೊಂಡ ಫಿಟ್ಸ್‌ಪಿಯರ್ಸ ಅವಳನ್ನು ಹೀಗೆ ಪಾರಾಗಗೊಡು ವಂತೆ ಇದ್ದಿಲ್ಲ. ಆತ ಹತ್ತಿರಕ್ಕೆ ಬಂದನು. ಒಂದೊಂದಾಗಿ ಹುಲ್ಲು ರಾಶಿಗಳನ್ನು ಸುತ್ತಿ ಎತ್ತಿ ನೋಡ ಹತ್ತಿದನು. ಆಸೆಗೊಂಡು ಭ್ರಮೆಗೊಂಡು ತಡೆದೊಡನೆ, ಹುಲ್ಲಿನಡಿಯಿಂದ ಚುಂಬನದ ಅನುಕರಣದ ಸದ್ದು, ಮೆಲುದನಿಯಲ್ಲಿ ಹಾಡಿದ ಸ್ಥಾನಿಕ ಲಾವಣಿಯ ಸೊಲ್ಲಿನ ಒಂದು ಚೂರೂ ಅವನಿಗೆ ಅವಳಿದ್ದ ನಿಟ್ಟನ್ನು ಸೂಚಿಸುತ್ತಿದ್ದವು.

'ಓ ಮಬ್ಬು ಮಬ್ಬಿನ ಇಬ್ಬನಿಯೊಳಗಿಂದ ಒಳಗೆ ಬಾ.'

ಒಂದೆರಡು ಗಳಿಗೆಯಲ್ಲಿಯೆ ಅವನು ಅವಳನ್ನು ಹುಲ್ಲ ಹೊದಿಗೆ ತೆರೆದು ಕಂಡನು.

‘ಓ, — ಇದು ತಿಮ್ಮನಲ್ಲ !’ ಆಕೆ ಕಿಲಿಕ್ಕನೆ ನಕ್ಕು ಮೋರೆ ಮುಚ್ಚಿಕೊಂಡು ಅಂದಳು. ಆದರೆ ಅವಳ ಈ ಪ್ರತಿಭಟನೆ ಸೌಮ್ಯವಾಗಿತ್ತು. ಅದನ್ನು ಫಿಟ್ಝಪಿಯರ್ಸ ಉಪೇಕ್ಷಿಸಿದನು. ಅವಳ ಮೇಲೆ ವಾಲಿಕೊಂಡು ಅಪೇಕ್ಷಿತವಾದ ಮುತ್ತನ್ನು ಅವಳ ತುಟಿಗಳ ಮೇಲೆ ಭದ್ರವಾಗಿ ಒತ್ತಿಟ್ಟನು. ಮತ್ತು ಅದೇ ಹುಲ್ಲ ಹಾಸಿನ ಮೇಲೆ ಓಡಿದ ದಣುವಿಗೆ ಏದುತ್ತ ಕುಸಿದು ಬಿದ್ದನು.

‘ತಿಮ್ಮನೆಂದರೆ ಯಾರು ?’ ಆತ ಮರುಕ್ಷಣಕ್ಕೆ ಕೇಳಿದನು.

‘ನನ್ನ ಗೆಳೆಯ ಟಿಮ್ ಟಾಂಗ್ಸ’ ಆಕೆ ಅಂದಳು.

‘ಇದೀಗ ನನ್ನ ಮರ್ಯಾದೆಯ ಮಾತು. ನಿಜವಾಗಿಯೂ ನಾನೆ ಅವನೆಂದು ತಿಳಿದಿಯಾ ?’

‘ಹೌದು ಮೊದಲಿಗೆ.’

‘ಆದರೆ ಕೊನೆಗೆ ಅಲ್ಲವಷ್ಟೇ ?’

‘ಅಲ್ಲ ಕೊನೆಗೆ ಅಲ್ಲ.’

‘ಅಲ್ಲವೆಂದು ನಿನ್ನದೇನು ಅಡ್ಡಿ ಇಲ್ಲವಷ್ಟೇ ?’

‘ಇಲ್ಲ’ ಆಕೆ ಕಳ್ಳದನಿಯಲ್ಲಿ ಅಂದಳು.

ಫಿಟ್ಝಪಿಯರ್ಸ ಅವಳನ್ನು ಮತ್ತೆ ಮುತ್ತಿಟ್ಟನು. ತನ್ನೆದೆಗೆ ಜೋರಾಗಿ ಅಪ್ಪಿಕೊಂಡನು.

ಆತ ವಿಚಾರಣೆಯನ್ನು ಮುಂದುವರಿಸಲಿಲ್ಲ. ಆ ಬೆಳದಿಂಗಳಲ್ಲಿ ಸೂಕೆ ಬಹಳ ಚೆಂದ ಕಂಡಳು—ಆ ಮಂದ ಕಿರಣಗಳಲ್ಲಿ ಅವಳ ಹೊರಗೆಲಸ ಹೊಲಗೆಲಸದ ಗೆರೆ-ಗೀಚು ಕಲೆಗಳು ಕಾಣದಂತಾದವು. ಅವರು ಹುಲ್ಲಲ್ಲಿ ಮೌನವಾಗಿ ಬಿದ್ದಿರುವಾಗ, ಆ ಬೆಟ್ಟದ ಹತ್ತಿರದ ಮೂಲೆಯಲ್ಲಿ ಒಂದು ಮರ ತುದಿಯಿಂದ ರಾತ್ರೆ ಗಿಡುಗದ ಎಡೆಬಿಡದ ಕಿರಚಾಟ ವ್ಯಂಗ್ಯವಾಗಿ ಹೊಮ್ಮಿತು. ಅದರ ಹೊರತು ಬೇರೆ ಯಾವ ಸದ್ದೂ ಅವರ ಕಿವಿಗೆ ಬರಲಿಲ್ಲ. ನೈಟಿಂಗೇಲ ಹಕ್ಕಿಯ ಕಾಲ ಕಳೆದುಹೋಗಿತ್ತು, ಹಿಂಟೋಕ ಹಳ್ಳಿಯು ಎರಡು ಮೈಲು ದೂರವಿತ್ತು. ಇದುರಿಗೆ ಹುಲ್ಲುಗಾವಲು ಕಣ್ಣೆನುದ್ದಕ್ಕೂ ಚಾಚಿ, ದೂರದ ಮಿದುಮಂಜಿನಲ್ಲಿ ಕರಗಿ ಮರೆಯಾಗಿತ್ತು.

ಫಿಟ್ಝಪಿಯರ್ಸ ಮತ್ತು ಸೂಕೆ ಡಾಮಸನ್ ಕಿರಿ ಹಿಂಟೋಕಿಗೆ ಮರಳುವತನಕ ನಸುಕು ಹರಿದು ಹಗಲಾಗಿತ್ತು.

೨೨

ಆ ಸಾರ್ವತ್ರಿಕ ನೂಕು ನುಗ್ಗಲು ನಡೆದಾಗ ವಿಂಟರಬೋರ್ನನೂ ನೋಡುತ್ತ ನಿಂತಿದ್ದನು. ಆಗ ಆ ಹುಡುಗೆಯರಲ್ಲಿ ಒಬ್ಬಳನ್ನು ತಡೆದು, ಅವರೆಲ್ಲ ಹೀಗೆ ದಿಕ್ಕಾಪಾಲಾಗಿ ಓಡಲು ಏನು ಕಾರಣವೆಂದು ಆತ ಕೇಳಿದನು.

ಆಕೆ ತೇಕುತ್ತಲೇ ಗಂಭೀರವಾಗಿ ಹೇಳಿದಳು — ನಿರೀಕ್ಷಿಸಿದ್ದಕ್ಕಿಂತ ತೀರ ಬೇರೆಯದನ್ನೆ ಅವರು ಕಂಡಿದ್ದರು. ಇನ್ನು ತನ್ನ ಮಟ್ಟಿಗೆ ಹೇಳುವುದಾದರೆ ಅಂಥ ಅಪವಿತ್ರ ವಿಧಿಗಳಿಗೆ ಅವಳು ಮತ್ತೆಂದಿಗೂ ದುಡುಕಲಾರಳು. 'ಸೈತಾನನೆ ತನ್ನ ಗಳಿಗೆ ಬಟ್ಟಲಿನೊಂದಿಗೆ ನಮ್ಮನ್ನು ಬೆನ್ನಟ್ಟುವದನ್ನು ಕಂಡೆವು! ಅದು ಭಯಂಕರವೇ ಸರಿ!'

ಈ ವೃತ್ತಾಂತವು ತುಸು ಕಲಬೆರಕೆಯಾದಂತೆ ಇದ್ದುದರಿಂದ ಜೈಲ್ಸ ತಾನೆ ಆ ಹುಡುಗೆಯರು ಹಿಂದೋಟ ಹೂಡಿದ ಆ ಸ್ಥಳದ ಕಡೆಗೆ ಸಾಗಿದನು. ಅಲ್ಲಿ ಕೆಲ ನಿಮಿಷ ಕಿವಿಗೊಡಲಾಗಿ, ಎಲೆಗಳ ಮೆಲ್ಲಮೆಲ್ಲಗೆ ಹೆಜ್ಜೆಗಳ ಸಳಸಳ ಸಪ್ಪಳ ಆತನು ಕೇಳಿದನು. ಟೊಂಗೆಗಳ ಮೇಲಿಂದ ತೂಗುವ ಹಳದಿ ಹೂಗೊಂಚಲುಗಳ ಹನಿಸಕಲ್ ಬಳ್ಳಿಯ ಹಿಳಿಲುಗಟ್ಟಿದ ತಟ್ಟೆಯೊಳಗಿಂದ ನೋಡಿದಾಗ, ಸಂಜೆ ಬಟ್ಟೆಗಳಲ್ಲಿದ್ದ ಒಬ್ಬ ಗಿಡ್ಡ ದಪ್ಪ ಗೃಹಸ್ಥನು, ಒಂದು ತೋಳಿನ ಮೇಲೆ ಹಗುರಾದ ಓವರಕೋಟನ್ನು ಹ್ಯಾಟನ್ನೂ ಹೊತ್ತಿದ್ದನ್ನು ಕಂಡನು. ಈ ಕೋಟು ಹ್ಯಾಟುಗಳನ್ನು ಆತ ಹೊತ್ತ ಪರಿ ಇಷ್ಟು ಅಸಡ್ಡಾಳವಾಗಿತ್ತು. ಅಂಜುಬುರುಕ ಪ್ರೇಕ್ಷಕರಿಗೂ ಅದೇ 'ಗಳಿಗೆ ಬಟ್ಟಲಿ'ನ ಸೂಚನೆ ಕೊಟ್ಟಿರಬೇಕು — ಆ ಹುಡುಗೆಯರು ನೋಡಿದ್ದು ಇದೆ ವ್ಯಕ್ತಿಯನ್ನೆ ಆಗಿದ್ದರೆ. ಇನ್ನೊಂದು ಕೈಯಿಂದ ಆತ ಮಾತಿಲ್ಲದೆ ಸನ್ನೆ ಮಾಡುತಿದ್ದನು. ಬೆಳದಿಂಗಳು ಅವನ ಬರಿದಾದ ಮುಂದಲೆಯ ಮೇಲೆ ಬಿದ್ದು ಅವನ ಕಪ್ಪು ಕೂದಲನ್ನು ಎತ್ತರವಾದ ಹಣೆಯನ್ನು ಎದ್ದು ಕಾಣಿಸಿತು. ಆ ಹಣೆಯ ಆಕಾರ ಹಳೆಯ ಪಟಗಳಲ್ಲಿಯೆ ಚಿತ್ರಿತವಾದಂತೆ ಇತ್ತಲ್ಲದೆ ವಾಸ್ತವ ಬದುಕಿನಲ್ಲಿ ಕಾಣಸಿಗುವಂತಿದ್ದಿಲ್ಲ. ಅವನ ಅಪರೂಪದ ಕೈಸನ್ನೆಗಳು—ತನ್ನಷ್ಟಕ್ಕೆ ಅಭಿನಯದ ತಾಲೀಮು ಮಾಡಿಕೊಳ್ಳುವವನಂತೆ—ಆ ಅವಾಂತರದ ಸ್ಥಳ ಮತ್ತು ಕಾಲ. ಇವೆಲ್ಲವೂ ಆ ಹಿಂಟೋಕ್ ಹುಡುಗೆಯರಿಗೆ ಅವನನ್ನು ಥಕ್ಕನೆ ಕಂಡಾಗ ಎದೆ ಬಡಿತ ಜೋರಾಗುವಂತೆ ಮಾಡಲು ಸಾಕಾಗಿದ್ದವು.

ಆತ ತಡೆದು ಸುತ್ತಲೂ ನೋಡಿದನು — ತಾನು ಎಲ್ಲಿದ್ದೇನೆಂಬುದೆ ಮರೆತು ಬಿಟ್ಟಂತೆ; ಆತ ಜೈಲ್ಸನನ್ನು ಕಾಣಲಿಲ್ಲ. ಏಕೆಂದರೆ ಪರಿಸರದ ಬಣ್ಣ ಅವನದಾಗಿತ್ತು. ಅವನು ಮುಂದೆ ಬೆಳಕಿನಲ್ಲಿ ಬಂದನು. ಆಗ ಆ ಗೃಹಸ್ಥ ಕೈಯೆತ್ತಿ ಹಿಡಿದು ಜೈಲ್ಸನ ಕಡೆಗೆ ಬಂದನು. ಇಬ್ಬರೂ ನಡುವೆ ಭೆಟ್ಟಿಯಾದರು.

'ನಾನು ಹಾದಿ ತಪ್ಪಿದಂತಿದೆ,' ಆ ಅಪರಿಚಿತ ಅಂದನು. 'ನೀವು ನನ್ನನ್ನು ತಿರುಗಿ ಸರಿದಾರಿಗೆ ಹಚ್ಚಬಹುದೇನೋ' ಬರೆ ದಣುವಿಗಿಂತ ಹೆಚ್ಚು ಏನೋ ಮನಃಕ್ಷೋಭೆಯಿಂದ ಬಳಲುವವನಂತೆ ಆತ ಹಣೆಯನ್ನು ಉಜ್ಜಿಕೊಳ್ಳುತಿದ್ದನು.

'ಸುಂಕದ ಕಟ್ಟೆಯು ದಿಡ್ಡಿದಣಪೆಯು ರಸ್ತೆ ಅಲ್ಲಿ ಆಚೆಗೆ ಇದೆ.' ಜೈಲ್ಸ ಅಂದನು.

'ನನಗೆ ಆ ರಸ್ತೆ ಬೇಡ' ಆ ಗೃಹಸ್ಥ ತುಸು ತಾಳ್ಮೆಗೆಟ್ಟು ಅಂದನು. 'ನಾನು

ಅಲ್ಲಿಂದಲೆ ಬಂದೆನು. ನನಗೆ ಹಿಂಟೋಕ್ ಹಿರಿಮನೆ ಬೇಕು. ಇಲ್ಲಿಂದ ಅದಕ್ಕೆ ಕಾಲುದಾರಿಯೊಂದು ಇಲ್ಲವೆ?'

'ಸರಿ ಇದೆ. ಒಂದು ರೀತಿಯ ಕಾಲುದಾರಿ. ಆದರೆ ಅದನ್ನು ಈ ಸ್ಥಳದಿಂದ ಕಂಡುಕೊಳ್ಳುವುದು ಕಠಿಣ. ಬನ್ನಿ ಸ್ವಾಮಿ. ನಾನೇ ದಾರಿ ಕಾಣಿಸುತ್ತೇನೆ. ತುಂಬ ಸಂತೋಷ.'

'ಥ್ಯಾಂಕ್ಸ್. ನನ್ನ ಒಳ್ಳೆಯ ಗೆಳೆಯ ನೀವು. ನಿಜಾಂಶವೆಂದರೆ, ಶರ್ಟನ್ನದ ಹೋಟೆಲಿನಿಂದ ಊಟ ಮುಗಿಸಿ ನಾನು ಬಯಲು ದಾಟಿ ನಡೆದು ಬರಲು ಆಲೋಚಿಸಿದೆ. ಶರ್ಟನದಲ್ಲಿ ಒಂದೆರಡು ದಿನ ಇದ್ದೆ. ಆದರೆ ಇದು ಇಷ್ಟು ದೂರವೆಂದು ನನಗೆ ಗೊತ್ತಿದ್ದಿಲ್ಲ.'

'ಇಲ್ಲಿಂದ ಆ ಮನೆಗೆ ಒಂದು ಮೈಲಿದೆ.'

ಅವರು ಒಟ್ಟಾಗಿಯೇ ನಡೆದರು. ದಾರಿಯೆ ಸಾಕಷ್ಟು ಇದ್ದಿಲ್ಲ. ಆದ್ದರಿಂದ ಜೈಲ್ಸ ನಡುನಡುವೆ ಮುಂದೆ ಹೆಜ್ಜೆ ಹಾಕಿ ಸಾಗಿ ಮರಗಳ ಕೆಳಟೊಂಗೆಗಳನ್ನು ಬದಿಗೆ ಸರಿಸಿ ತನ್ನ ಸಂಗಾತಿಗೆ ಬರಲು ಅವಕಾಶ ಮಾಡಿಕೊಡುತಿದ್ದ. ಆಗಾಗ್ಗೆ ಟಿಸಿಲುಗಳು ಕೈಬಿಟ್ಟ ಕೂಡಲೆ ಚಾಟಿಯಂತೆ ತಿರುಗಿ ಬಂದು ಬಡಿಯುವಾಗ, 'ಸ್ವಾಮಿ, ನಿಮ್ಮ ಕಣ್ಣು ಜೋಕೆ!' ಎನ್ನುತಿದ್ದನು. ಅದಕ್ಕೆ ಆ ಆಗುಂತಕ 'ಸರಿ. ಸರಿ.' ಎನ್ನುತಿದ್ದ; ಅನ್ಯಮನಸ್ಕ ದನಿಯಲ್ಲಿ.

ಹೀಗೆಯೇ ಅವರು ಮುಂದರಿದರು. ಎಲೆಗಳ ನೆಳಲುಗಳು ತ್ವರಿತಗತಿಯಲ್ಲಿ ಈ ಪಾದಚಾರಿಗಳ ಆಕೃತಿಗಳ ಮೇಲಿಂದ ಓಡುತಿದ್ದವು. ಆಗಂತುಕನು ಅಂದನು—

'ಬಹಳ ದೂರವೆ?'

'ಇನ್ನು ಹೆಚ್ಚು ದೂರವಿಲ್ಲ,' ವಿಂಟರಬೋರ್ನ ಅಂದನು. 'ಈ ಹೆಮ್ಮರಗಳ ಕಾನು ಇಲ್ಲಿ ಒಂದು ಮೂಲೆಯಲ್ಲಿ ಮುಗಿಯುತ್ತದೆ. ಅದು ಆ ಮನೆಯ ಹಿಂದೆಯೇ ಹತ್ತಿರದಲ್ಲಿದೆ' ಆತ ಅನುಮಾನಿಸುತ್ತಲೆ ಮಾತು ಮುಂದರಿಸಿದ, 'ಸ್ವಾಮಿ ನಿಮಗೆ ಗೊತ್ತಿರಬೇಕು, ಶ್ರೀಮತಿ ಚಾರ್ಮಂದ ಮನೆಯಲ್ಲಿ ಇಲ್ಲ.'

'ನೀವು ತಪ್ಪಿದ್ದೀರಿ,' ಆತ ಇದಿರಾಡಿದ, 'ಶ್ರೀಮತಿ ಚಾರ್ಮಂದ ಕೆಲಕಾಲ ಹೊರಗೆ ದೂರ ಹೋಗಿದ್ದರು. ಆದರೆ ಈಗ ಅವರು ಮನೆಯಲ್ಲಿ ಇದ್ದಾರೆ.'

ಜೈಲ್ಸ ಅವನನ್ನು ಅಲ್ಲಗಳೆಯಲಿಲ್ಲ. ಆದರೆ ಈ ಗೃಹಸ್ಥನೆ ತಪ್ಪಿದ್ದಾನೆಂದು ಅವನಿಗೆ ಖಚಿತವಾಗಿಯೂ ಅನಿಸಿತು.

'ನೀವು ಇದೆ ಊರಿನವರೋ?' ಆಗಂತುಕ ಕೇಳಿದ.

'ಹೌದು'

'ನಿಮ್ಮದೆ ಮನೆ ಇದೆ. ನೀವು ಸುಖಿಗಳು.'

'ನಿಮಗೂ ಹಾಗೆಯೆ ಏನೋ, ಸ್ವಾಮಿ.'

'ನನಗೆ ಇಲ್ಲದ್ದೇ ಅದು — ಸ್ವಂತದ ಮನೆ.'

' ನಾನೀಗ ದಕ್ಷಿಣ ಯುರೋಪದಿಂದ ಬಂದೆ.'

' ಓ ಹಾಗೋ ಸರಿ, ಸ್ವಾಮಿ. ನೀವು ಇಟಲಿಯವರೇ, ಸ್ಪೇನದವರೇ ಅಥವಾ ಫ್ರೆಂಚ್ ಮಹಾಶಯರೇ ? '

' ನಾನು ಅವರಾರೂ ಅಲ್ಲ.'

ಮುಂದೆ ಉಂಟಾದ ಮಾತಿನ ವಿರಾಮವನ್ನು ಜೈಲ್ಸ ತುಂಬಲಿಲ್ಲ. ಆ ಸದ್ಗೃಹಸ್ಥನೇ, ಭಾವನಾಮಯ ಸ್ವಭಾವದವನಂತೆ ತೋರಿದ್ದರಿಂದ, ಗೆಳೆತನದ ಒಂದು ಇಂಬನ್ನು ತಡೆಯಲಾರದೆ, ಕೊನೆಗೆ ತಾನೇ ಈ ಪ್ರಶ್ನೆಗೆ ಉತ್ತರವಿತ್ತನು.

' ನಾನು ಇಟಲಿಯ ನಾಗರಿಕನಾಗಿ ಬೆಳೆದ ಅಮೆರಿಕನ್ನನು. ಹುಟ್ಟಿನಿಂದ ದಕ್ಷಿಣ ಕೆರೊಲಿನಿಯನ್ ' ಆತ ಅಂದನು, ' ದಕ್ಷಿಣದವರ ಪಕ್ಷ ಸೋತ ಮೇಲೆ ನಾನು ನನ್ನ ದೇಶವನ್ನು ಬಿಟ್ಟೆನು. ಆ ಮೇಲೆ ಮತ್ತೆ ಈವರೆಗೂ ಅಲ್ಲಿಗೆ ಹೋಗಲಿಲ್ಲ.'

ಆತ ತನ್ನ ಕುರಿತು ಇದಕ್ಕೂ ಹೆಚ್ಚೇನೂ ಹೇಳಲಿಲ್ಲ. ಅವರು ಆ ಕಾನಿನ ಅಂಚಿಗೆ ಬಂದರು. ಅಲ್ಲಿ ಬೇಲಿಯನ್ನು ದಾಟಿ ಆಚೆಗೆ ಬೇಣದ ಏರಿಯ ಮೇಲೆ ಒಂದು ತಗ್ಗಿನಲ್ಲಿ ಒಂದು ಮನೆಯ ಹೊಗೆ ಗಿಂಡಿಗಳು ಒಮ್ಮೆಲೆ ಕಾಣಿಸಿದವು — ಮಂದಸ್ತಬ್ಧವಾಗಿ ಕಾಣಿಸಿದವು.

' ವೇಳೆ ಎಷ್ಟು ? ಹೇಳಬಲ್ಲಿರಾ ? ' ಆ ಗೃಹಸ್ಥ ಕೇಳಿದನು. ' ನನ್ನ ವಾಚು ನಿಂತುಬಿಟ್ಟಿದೆ.'

' ಇದೀಗ ೧೨–೧ ರ ನಡುವಿರಬೇಕು ' ಜೈಲ್ಸ ಅಂದನು.

ಅವನ ಸಂಗಾತಿಯು ಆಶ್ಚರ್ಯ ವ್ಯಕ್ತ ಮಾಡಿದನು, ' ಅರೇ, ನಾನು ಈಗ ೯–೧೦ ರ ಒಳಹೊರಗೆ ಆಗಿರಬೇಕು ಅಂದುಕೊಂಡಿದ್ದೆ. ಎಲಾ ನನ್ನ ! '

ಆತ ಈಗ ಜೈಲ್ಸನಿಗೆ ಹಿಂದಿರುಗಿ ಹೋಗೆಂದು ಬೇಡಿಕೊಂಡ, ಮತ್ತು ಅವನಿಗೆ ಒಂದು ಚಿನ್ನದ ನಾಣ್ಯ ಕೊಡಮಾಡಿದನು ; ಒಂದು ಸವರನ್ ಇದ್ದಂತೆ ಕಂಡಿತು. ಜೈಲ್ಸ ಏನನ್ನೂ ತೆಗೆದುಕೊಳ್ಳಲು ಒಪ್ಪಲಿಲ್ಲ. ಇದು ಆಗಂತುಕನಿಗೆ ಆಶ್ಚರ್ಯವೆನಿಸಿತು. ಆತ ಆ ಹಣವನ್ನು ತಿರುಗಿ ಜೇಬಿಗೆ ಸೇರಿಸಿಕೊಳ್ಳುವಾಗ, ಹಳ್ಳುಳ್ಳಗಾಗಿಯೇ ಅಂದನು, ' ಈ ಕಡೆಯ ಮಾಮೂಲು ಎಂದು ಮಾಡಿಕೊಂಡಿದ್ದೆ. ನಾನು ಅದನ್ನು ಕೊಡಲು ಮಾಡಿದ್ದಕ್ಕೆ ಇನ್ನೊಂದು ಕಾರಣವೆಂದರೆ — ನನ್ನೊಂದಿಗೆ ನಿಮ್ಮ ಆ ಭೆಟ್ಟಿಯ ಬಗೆಗೆ ನೀವು ಒಂದಕ್ಷರವನ್ನು ಯಾರೊಂದಿಗೂ ಆಡಬಾರದು. ಮಾತುಕೊಡುವಿರಾ ?'

ವಿಂಟರಬೋರ್ನ ಕೂಡಲೆ ಮಾತು ಕೊಟ್ಟನು. ಆತ ಇಳಿಜಾರಿನಲ್ಲಿ ಇಳಿದು ಹೋಗುವನಕ ಅವನು ಸ್ತಬ್ಧವಾಗಿ ನಿಂತನು. ತಳಕ್ಕೆ ಹೋಗಿ, ಆಗಂತುಕನು ಹೊರಳಿ ನೋಡಿದನು—ಅಪನಂಬಿಕೆಯಿಂದ. ಜೈಲ್ಸ ಇನ್ನೂ ಅಲ್ಲಿ ಉಳಿಯಲಾರ — ತಾನು ಅಲ್ಲಿಂದ ಬಿಟ್ಟು ಹೋಗಬೇಕೆಂದು ಅಷ್ಟು ಸ್ಪಷ್ಟ ಅಪೇಕ್ಷೆ ಆತನದು ಇದ್ದಾಗ. ಆದ್ದರಿಂದ ಆತ ಜೋಲುವ ಟೊಂಗೆಗಳೊಳಗಿಂದ ಹಿಂಟೋಕಿಗೆ ಹಿಂದಿರುಗಿದನು.

ಅವನಿಗೆ ಸಂದೇಹವೆನಿಸಿತು — ಇಷ್ಟು ಖಿನ್ನ ಮತ್ತು ಉದ್ವಿಗ್ನನಾಗಿ ಕಾಣುವ

ಈ ಮನುಷ್ಯ ಆ ಚಾರ್ಮಂದ ಅಮ್ಮನ ಪ್ರೇಮಿಕನಾಗಿರಬಹುದು. ಆತ ಎಡೆಬಿಡದೆ ಮೋಹಕ್ಕೆ ವಶವಾದವನು ಆದರೆ ಅವಳು ಅವನನ್ನು ಮನಮಾನೆ ನಡೆಯಿಸಿಕೊಳ್ಳುವಳು, — ಎಂದೆಲ್ಲ ಆತ ಆಗಾಗ್ಗೆ ಹೇಳಿದ್ದು ಕೇಳಿದ್ದನು. ಆದರೆ ಸಂಶಯ ಯಥಾರ್ಥವೆಂಬ ಪ್ರಮಾಣ ಅವನಿಗೆ ದೊರೆಯಲಿಲ್ಲ. ಆದರೆ ಇಷ್ಟೊಂದು ಸಮಾಚಾರ ಕೆಲವು ದಿನಗಳ ನಂತರ ವಿಂಟರಬೋರ್ನ ಕೇಳಿದನು : ಹಿಂಟೋಕ ಮನೆಯ ಜೋಪಾಸನೆ ಮಾಡುತ್ತಿದ್ದ ಆಳುಗಳನ್ನು ಮಧ್ಯರಾತ್ರೆಯು ಮೀರಿದ ಹೊತ್ತಿಗೆ ಒಬ್ಬ ಗೃಹಸ್ಥ ಬಂದು ಕರೆದು ಎಚ್ಚರಿಸಿದನು. ಆದರೆ ಶ್ರೀಮತಿ ಚಾರ್ಮಂದ ಹೊರನಾಡಿನಿಂದ ಹಿಂದಿರುಗಿ ಬಂದರೂ ಇನ್ನೂ ಲಂಡನ್ನಿನಲ್ಲಿಯೇ ಉಳಿದಿರುವಳೆಂಬುದನ್ನು ತಿಳಿದು ಆತ ಕಟುವಾಗಿ ಬಯ್ದು ಕೊಂಡನು ಮತ್ತು ತನ್ನ ಹೆಸರ ಕಾರ್ಡನ್ನಾಗಲಿ ಇನ್ನಾವ ಗುರುತನ್ನಾಗಲಿ ಇಡದೆ ಹೊರಟೆದ್ದು ಹೋದನು.

ಆ ಕಥೆಯನ್ನು ಹೇಳಿದ ಹುಡುಗೆಯರು ಇನ್ನಿಷ್ಟು ವಿವರ ಸೇರಿಸಿದರು : ಶಪಿಸಿ ಕೊಳ್ಳುವ ಮುಂಚೆ ಆತ ಮೂರು ಸಲ ನಿಟ್ಟುಸಿರು ಎಳೆದನಂತೆ ; ಮತ್ತು ಅವನ ಚಿತ್ತ ವೆಲ್ಲೋ ಹುಚ್ಚು ಹರಿದಂತೆ ಇತ್ತಂತೆ. ಆದರೆ ಈ ಕಥಾ ಭಾಗವು ನಿಜವೆಂಬುದಕ್ಕೆ ಪುರಾವೆ ಸಿಗಲಿಲ್ಲ. ಏನೇ ಇರಲಿ ಅಂಥ ಒಬ್ಬ ಸದ್ಗೃಹಸ್ಥನು ಹೋಟೆಲಿನಿಂದ ಬಾಡಿ ಗೆಗೆ ಪಡೆದ ಒಂದು ಸಾರೋಟಿನಲ್ಲಿ ಮರುದಿನ ಶರ್ಟನ್ನಿನಿಂದಲೇ ಪ್ರಯಾಣ ಬೆಳೆಸಿದನು.

೨೩

' ಮಿಡ್‌ಸಮರ ಈವಿ 'ನ ನರ್ಮಲೀಲೆಗಳ ಹಿಂದೆ ಬಂದ ಬಿಸಿಲು-ನೆಳಲು ಎಲೆವಾಡದ ವಾರವು ಫಿಟ್ಝ್‌ಪಿಯರ್ಸನ ಬಾಗಿಲಿಗೆ ಒಬ್ಬ ಅತಿಥಿಯನ್ನು ತಂದಿತು. ಅವನಿಗೆ ಪರಿಚಿತ ವಿದ್ದ ಒಂದು ದನಿಯು ಓಣಿಯಲ್ಲಿ ಕೇಳಿಸಿತು. ಮೆಲಬರಿಯು ಭೆಟ್ಟಿಗೆ ಬಂದಿದ್ದನು.

ಮೊದಲಿಗೆ ನಡುಮನೆಯನ್ನು ಪ್ರವೇಶಿಸಲಿಕ್ಕೆ ಆತ ವಿಶೇಷವಾಗಿ ಆಕ್ಷೇಪವೆತ್ತಿದ. ಅವನ ಬೂಟುಗಳು ಧೂಳಿಯಿಂದ ಕೊಳಕಾಗಿದ್ದವು. ಆದರೆ ಸರ್ಜನನು ಆಗ್ರಹಹಿಡಿ ದಿದ್ದರಿಂದ ಆತ ಆ ಅಂಶವನ್ನು ಬದಿಗೊತ್ತಿ ಒಳಗೆ ಬಂದನು.

ಎಡಕ್ಕಾಗಲಿ ಬಲಕ್ಕಾಗಲಿ ನೋಡದೆ, ಫಿಟ್ಝ್‌ಪಿಯರ್ಸನ ಕಡೆಗೂ ಕಣ್ಣುಹಾಯಿ ಸದೆ, ಆತ ಹ್ಯಾಟನ್ನು ಕುರ್ಚಿಯ ಕೆಳಗಡೆ ಇಟ್ಟು ಏನೋ ವಿಚಾರದಲ್ಲಿ ಮೊದಲಿಂದಲೂ ವ್ಯಗ್ರನಾದವನಂತೆ ನೆಲವನ್ನೆ ದಿಟ್ಟಿಸುತ್ತ ಅಂದನು, ' ಡಾಕ್ಟರರೆ, ಒಂದು ಪ್ರಶ್ನೆಯನ್ನು ನಿಮಗೆ ತೀರ ಖಾಸಗಿಯಾಗಿ ಕೇಳಲು ಬಂದಿದ್ದೇನೆ. ಆ ಪ್ರಶ್ನೆ ನಿಮಗೆ ತುಂಬ ತೊಂದರೆ ಕೊಡುತ್ತದೆ. ನನಗೊಬ್ಬ ಮಗಳಿದ್ದಾಳೆ, ಕೇಳಿರಬಹುದು. ಸರಿ. ಅವಳು ಹೊರಗೆ ಇಬ್ಬನಿಯಲ್ಲಿ ಹೋದಳು. ಮಿಡ್‌ಸಮರ ಈವದ ರಾತ್ರೆ ವಿಶೇಷವಾಗಿ ಅವಳು

ಹಿಂಟಾಕ ಹುಡುಗೆಯರ ಏನೋ ಹುಚ್ಚಾಟ ನೋಡಲೆಂದು ತೆಳ್ಳಗಿನ ಜೋಡು ಮೆಟ್ಟಿಕೊಂಡು ಹೋದಳು. ಮತ್ತು ಕೆಮ್ಮು ದಮ್ಮು ಹಿಡಿಸಿಕೊಂಡಳು. ಒಂದು ಬಗೆಯ ಅದರ ಹೆದಸು, ದಮ್ಮು ನನ್ನನ್ನು ಗಾಬರಿಗೊಳಿಸಿದೆ. ಈಗ ನಾನು ಅವಳನ್ನು ಎಲ್ಲಿಯಾದರೂ ಕಡಲ ತೀರದ ಸ್ಥಳಕ್ಕೆ ಕಳುಹಿಸಿಬಿಡೋಣವೆಂದು ಮಾಡಿದ್ದೇನೆ.'

'ಕಳುಹಿಸಿಬಿಡುವದೇ ?' ಫಿಟ್ಝಪಿಯರ್ಸನ ಮುಖದ ಕಳೆ ಇಳಿದುಹೋಯಿತು.

'ಹೌದು. ಈಗ ಪ್ರಶ್ನೆಯೆಂದರೆ, ಅವಳನ್ನು ಎಲ್ಲಿಗೆ ಕಳುಹಿಸಲು ನೀವು ಸಲಹೆ ಕೊಡಬಲ್ಲಿರಿ ?'

ಈ ಮರದ ವ್ಯಾಪಾರಿ ಭೆಟ್ಟಿಗೆ ಬಂದ ಕ್ಷಣ ಫಿಟ್ಝಪಿಯರ್ಸನು ಭಾವೋದ್ರೇಕದ ಹುಣ್ಣಿಮೆ ಭರತದ ಏರಿಕೆಯ ತುದಿಗೆ ಇದ್ದನು. ಈ ಕ್ಷಣವೇ ಅವನ ಅಸ್ತಿತ್ವಕ್ಕೆ ಗ್ರೇಸಳು ಅವಶ್ಯವಾಗಿದ್ದಳು. ಆ ಪೊದೆಗಳನ್ನು ಸುತ್ತುಹಾಕಿ ನೇರವಾಗಿ ಧಾವಿಸಿ ಬಂದು ಅವನ ಎದೆಗೆ ಒತ್ತಿಕೊಂಡಿದ್ದ ಅವಳ ಆಕೃತಿಯ ಒತ್ತಡವು ಎಂದಿಗೂ ಅವನನ್ನು ಬಿಟ್ಟಿದ್ದಿಲ್ಲ. ಏಕೆಂದರೆ ಆ ಹೂಟವನ್ನು ಅವನೆ ಹೂಡಿದ್ದನು. ಆ ವೇಳೆ, ಬೆಳುದಿಂಗಳು, ಆ ಪ್ರಸಂಗ ಬರೆ ಒಂದು ನೆವವಾಗಿತ್ತು. ಈಗ ಅವಳನ್ನು ದೂರ ಕಳಹಿಸುವುದಂತೆ !

ಮಹತ್ವಾಕಾಂಕ್ಷೆ ? — ಅದನ್ನು ಮುಂದೂಡಬಹುದು. ಕುಲ-ಮನೆತನ ? ಇಂದಿನ ದಿನಮಾನದಲ್ಲಿ ಸಮಾನ ಸಂಸ್ಕೃತಿ ಮತ್ತು ಅಭಿರುಚಿಗಳ ಅನ್ಯೋನ್ಯ ಕೊಡುಕೊಳುಗೆ ಕುಲದ ಮನೆತನದ ವಿಚಾರಗಳ ಸ್ಥಾನವನ್ನು ಆಕ್ರಮಿಸಿರುತ್ತವೆ. ಆತ ಅಭಿಲಾಷೆಯ ತೆರೆಯ ಮೇಲೆ ತನ್ನನ್ನು ತೇಲಿ ಮುಂದೆ ಹಾಯಲು ಬಿಟ್ಟನು.

'ಮಹಾ ವಿಚಿತ್ರ ? ಎಷ್ಟು ಮಹಾ ವಿಚಿತ್ರ' ಆತ ಅಂದನು, 'ಅವಳ ಬಗೆಗೆ ನೀವು ಈಗಲೆ ನನ್ನ ಹತ್ತಿರ ಬಂದದ್ದು. ನಾನು ದಿನಾಲು ಯೋಚಿಸುತ್ತಾ ಇದ್ದೇನೆ. ಇದೇ ಪ್ರಸ್ತಾಪಕ್ಕಾಗಿ ನಿಮ್ಮಲ್ಲಿ ಬರಬೇಕೆಂದು.'

'ಆಂ ? ನೀವೂ ಗಮನಿಸಿರುವಿರಾ, ಅವಳ ಆರೋಗ್ಯ...'

'ಅವಳ ಆರೋಗ್ಯದ ಬಗೆಗೆ ಅಂಥದೇನೂ ನಾನು ಗಮನಿಸಿಲ್ಲ. ಏಕೆಂದರೆ ಅಂಥದೇನೂ ಆಗಿಯೇ ಇಲ್ಲ. ಆದರೆ ಮಿಸ್ಟರ್ ಮೆಲಬರಿ, ನಿಮ್ಮ ಮಗಳನ್ನು ನಾನು ಆಕಸ್ಮಿಕವಾಗಿ ಹಲವಾರು ಸಲ ಕಂಡಿದ್ದೇನೆ. ಅವಳನ್ನು ಮೆಚ್ಚಿಕೊಂಡಿದ್ದೇನೆ. ಮತ್ತು ನಾನೇ ನಿಮ್ಮನ್ನು ಕೇಳಲು ಬರಬೇಕೆಂದಿದ್ದೆ — ಅವಳಿಗೆ ನನ್ನ ಪ್ರಶಂಸೆ — ಗಮನಗಳನ್ನು ನೀಡಿ ಅವಳ ಪರಿಚಯ ಇನ್ನೂ ಹೆಚ್ಚಿಸಿಕೊಳ್ಳಬಹುದೇ ಎಂದು.'

ಮೆಲಬರಿ ಡಾಕ್ಟರನ ಮಾತಿಗೆ ಕಿವಿಗೊಡುವಾಗ ಕೆಳಗೆ ನೋಡುತ್ತಿದ್ದನು. ಆದ್ದರಿಂದ ಈ ನಿವೇದನೆಯನ್ನು ಮಾಡಿಕೊಳ್ಳುವಾಗ ತನ್ನ ದುಡುಕಿಗಾಗಿ ತಾನೇ ಪಟ್ಟುಕೊಂಡ ಬೇರೆ ಬೇರೆ ಸಂಶಯದ ಛಾಯೆ ಫಿಟ್ಝಪಿಯರ್ಸನ ಮೋರೆಯನ್ನು ಕವಿದದ್ದು ಆತ ನೋಡಲಿಲ್ಲ.

'ನಿಮಗೆ ಅವಳ ಪರಿಚಯ ಬೇಕೆ ?' ಮೆಲಬರಿ ಕೇಳಿದನು. ಈ ಮಾತು

ಹೊರಡುವ ಮುಂಚೆ ಅಲ್ಪ ವೇಳೆ ಜಡವಾದ ಮೌನ ನೆಲೆಸಿತ್ತು. ಆ ಅವಧಿಯಲ್ಲಿ ಅವನಲ್ಲಿ ಭಾವನೆಯು ತೀವ್ರವಾಗಿ ಏರುತ್ತಿರುವುದು ತೋರಿಬರುವಂತೆ ಇತ್ತು.

'ಹೌದು' ಫಿಟ್ಸ್‌ಪಿಯರ್ಸ್ ಅಂದನು.

'ಮತ್ತು ಅವಳ ಪರಿಚಯ ಹೆಚ್ಚಿಸಿಕೊಳ್ಳಬೇಕಾಗಿದೆಯೆ? ಅವಳನ್ನು ಮುಂದೆ ಮದುವೆಯಾಗಬೇಕೆಂಬ ಅರ್ಥದಲ್ಲಿ ಅಲ್ಲವೆ? ನಿಮ್ಮ ಅಂಬೋಣದ ಅರ್ಥ ಅದೇ ಅಲ್ಲವೆ?'

'ಹೌದು' ಆ ತರುಣನು ಅಂದನು. 'ನನ್ನ ಅಭಿಪ್ರಾಯವಿದು. ಅವಳ ಪರಿಚಯ ಬೆಳೆಯಿಸಿಕೊಂಡು, ಅವಳ ಪ್ರಿಯಕರನೆಂದು ಸ್ವೀಕೃತನಾಗಿ ನಾವಿಬ್ಬರೂ ಒಬ್ಬರಿಗೊಬ್ಬರು ಸರಿಹೋದರೆ — ಮುಂದಿನದು ಸ್ವಾಭಾವಿಕವಾಗಿಯೇ ಒದಗಿಬರುವುದಷ್ಟೇ?'

ಮರದ ವ್ಯಾಪಾರಿಗೆ ವಿಪರೀತ ಆಶ್ಚರ್ಯವಾಯಿತು. ಆತ ಸಾಕಷ್ಟು ಚಲವಿಚಲನಾದ. ಕೈಗೋಲನ್ನು ಬದಿಗೆ ಇಡುವಾಗ ಅವನ ಕೈಯು ತತ್ತರಿಸುತ್ತಿತ್ತು.

'ಇದು ನನಗೆ ಗೊತ್ತಿಲ್ಲದೆ ಫಕ್ಕನೆ ಬಂದು ಬಡಿದಂತೆ!' ಆತ ಅಂದನು. ಅವನ ದನಿಯು ಬಿಕ್ಕಿನಿಂದ ಕುಗ್ಗುವಂತೆ ತೋರಿತು. 'ಅವಳಿಂದ ಒಬ್ಬ ಸಭ್ಯಗೃಹಸ್ಥ ಆಕರ್ಷಿತನಾಗುವುದರಲ್ಲಿ ಅನಪೇಕ್ಷಿತವೇನೋ ಘಟಿಸಿತೆಂದು ನನ್ನ ಅಭಿಪ್ರಾಯವಲ್ಲ. ನಾನು ಯಾವಾಗಲೂ ಅನ್ನುತ್ತಿದ್ದೆ' — ಆತ ಮುಂದುವರಿದ ಕೊರಳಲ್ಲಿ ಗಂಟು ಸಿಕ್ಕಿಕೊಂಡಂತೆ ಗದ್ಗನಾಗಿ — 'ನನ್ನ ಗ್ರೇಸ ತನ್ನ ಅಂತಸ್ತಿಗೆ ಸರಿಯಾಗುವಂತೆಯೇ ಒಂದಿಲ್ಲ ಒಂದು ದಿನ ಪ್ರಭಾವ ಬೀರುವಳೆಂದು. ಅದಕ್ಕೆಂತಲೆ ನಾನು ಅವಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿದ್ದು. ನಾನು ಅಂದುಕೊಳ್ಳುತ್ತಿದ್ದೆ—ಏನೇ ವೆಚ್ಚ ಬೀಳಲಿ, ಇದನ್ನು ನಾನು ಮಾಡುವವನೆ. ಅವಳ ಮಲ ತಾಯಿಗೆ ತುಂಬ ದಿಗಿಲು — ನಾನು ವರ್ಷಾನುವರ್ಷ ಅಷ್ಟೊಂದು ಹಣ ಚೆಲ್ಲುತ್ತಿದ್ದೆನೆಂದು. ಅದರೆ ಅದು ಕೊನೆಗೂ ಪರಿಣಾಮಕಾರಿ ಆಗುವುದೆಂದು ನನಗೆ ಗೊತ್ತಿತ್ತು. ನಾನನ್ನುತ್ತಿದ್ದೆ—ಮೂಲದಲ್ಲಿ ವಸ್ತುವು ಚೆನ್ನಾಗಿಲ್ಲದಿದ್ದಲ್ಲಿ ಅಂಥ ಹವ್ಯಾಸ ವ್ಯರ್ಥವಾದೀತು. ಆದರೆ ವಸ್ತು ಚೆನ್ನಾಗಿದ್ದಲ್ಲಿ ಅದು ಎಂದಿಗೂ ವ್ಯರ್ಥವಲ್ಲ. ಸಾರ್ಥಕವಾಗತಕ್ಕದ್ದೇ, ಎಂದು.'

'ನೀವು ಆಕ್ಷೇಪಿಸಲಿಲ್ಲ. ನನಗೆ ಸಂತೋಷ' ಫಿಟ್ಸ್‌ಪಿಯರ್ಸ್ ಅಂದನು. ಅವನಿಗೆ ಅನಿಸಿಯೂ ಅನಿಸಿತು, ಗ್ರೇಸ ಇಷ್ಟು ಅಗ್ಗದಲ್ಲಿ ಸಿಗಬಾರದಾಗಿತ್ತು.

'ಅವಳು ಒಪ್ಪಿದ್ದರೆ, ನಾನು, ನಿಜವಾಗಿಯೂ ಆಕ್ಷೇಪಿಸಲಾರೆ.' ಆ ಪ್ರಾಮಾಣಿಕ ಗೃಹಸ್ಥನು ಮಾತು ಮುಂದರಿಸಿದನು. 'ನಿಮ್ಮ ಅಪೇಕ್ಷೆಯಿಂದ ನನಗೆ ಹೆಚ್ಚಿನ ಗೌರವವಲ್ಲದೆ ಬೇರೆ ಏನೂ ಅನಿಸಿದೆಯೆಂದು ನಾನು ಸೋಗುಮಾಡಿದರೆ ಅದು ಮೋಸವಾದೀತು. ಇಂಥ ಒಳ್ಳೆಯ ವ್ಯಾವಸಾಯಿಕ ಸ್ಥಾನಮಾನದ, ಹಳೆಯ ಮಾನ್ಯ ಮನೆತನದ ಗೃಹಸ್ಥನನ್ನು ಆಕರ್ಷಿಸಿದ್ದು ಅವಳಿಗೂ ಮಿಗಿಲಾದ ಶ್ರೇಯಸ್ಸು.' ಅವಳ

ಕುರಿತು ಆ ಬೇಟೆಗಾರ ಎಷ್ಟು ತಪ್ಪಿದನೆಂಬುವು ಅವನಿಗೆ ತಿಳಿಯಲಿಲ್ಲ. 'ಅವಳನ್ನು ಪರಿಗ್ರಹಿಸಿರಿ ಸ್ವಾಮಿ. ನಿಮಗೆ ಸ್ವಾಗತ.'

'ಅವಳ ಮನಸ್ಸನ್ನು ಅರಿತುಕೊಳ್ಳಲಿಕ್ಕೆ ನಾನು ಯತ್ನಿಸುತ್ತೇನೆ.'

'ಸರಿ, ಸರಿ, ಆದರೆ ಅವಳು ಒಪ್ಪುವಳು. ನನಗೆ ಹಾಗೆ ಅನಿಸುತ್ತದೆ. ಅವಳು ಒಪ್ಪಲಿಕ್ಕೆ ಬೇಕು.'

'ನಾನೂ ಹಾಗೆಯೆ ಆಶಿಸುತ್ತೇನೆ. ಒಳ್ಳೇದು, ಇನ್ನು ನೀವು ನನ್ನನ್ನು ಆಗಾಗ್ಗೆ ಕಾಣಬಹುದು.'

'ಓ ಹೌದು. ಆದರೆ, ಅವಳ ಕೆಮ್ಮು? ಅವಳನ್ನು ದೂರ ಕಳುಹಿಸೋದು? ಅದಕ್ಕಾಗಿ ನಾನು ಇಲ್ಲಿ ಬಂದದ್ದು. ಅದನ್ನೆ ಪೂರ್ತಿ ಮರೆತೆ ನಾನು!'

'ನನ್ನ ಮಾತು ನಂಬಿರಿ,' ಆ ಸರ್ಜನ ಅಂದನು, 'ಅವಳ ಕೆಮ್ಮು ಸ್ವಲ್ಪ ಚಳಿಯದೇ ಕೇವಲ ಪರಿಣಾಮ. ಅದಕ್ಕಾಗಿ ಅವಳನ್ನು ಕಡಲತೀರಕ್ಕೆ ಗಡೀಪಾರು ಮಾಡಬೇಕಾದ ಅವಶ್ಯಕತೆ ಏನೂ ಇಲ್ಲ.'

ಮೆಲಬರಿ ಮನಗಂಡವನಂತೆ ಕಾಣಲಿಲ್ಲ. ಅವಳನ್ನು ತನ್ನ ಹತ್ತಿರವೆ ಇಡ ಬಯಸುವಂಥ ಸಂದರ್ಭದಲ್ಲಿ ಫಿಟ್ಝಪಿಯರ್ಸನ ವ್ಯಾವಸಾಯಿಕ ಅಭಿಪ್ರಾಯವನ್ನು ಗ್ರಾಹ್ಯವೆಂದು ತಿಳಿಯಬೇಕೋ ಬೇಡವೋ ಎಂಬುದೆ ಅವನಿಗೆ ಸಂಶಯ ದ್ದಾಯಿತು. ಆ ಡಾಕ್ಟರನೂ ಇದನ್ನು ಕಂಡುಕೊಂಡನು, ಮತ್ತು ಅವಳನ್ನು ಕಳೆದು ಕೊಳ್ಳಬೇಕಾಗಬಹುದೆಂಬ ಪ್ರಾಮಾಣಿಕ ಗಾಬರಿಯಿಂದ ಆತುರದಿಂದ ಅಂದನು, 'ನಮ್ಮಿಬ್ಬರಲ್ಲೇ ಈ ಮಾತು ಇರಲಿ, ನಾನು ಅವಳೊಂದಿಗೆ ಯಶಸ್ವಿಯಾದರೆ, ನಾನೇ ಅವಳನ್ನು ಒಂದೆರಡು ತಿಂಗಳ ಮಟ್ಟಿಗೆ, ಮದುವೆ ಆದೊಡನೆಯೆ, ಕರೆದುಕೊಂಡು ಹೋಗುತ್ತೇನೆ. ಮದುವೆ ಚಳಿಯ ಹಂಗಾಮು ಸುರುವಾಗುವ ಮುಂಚೆಯೆ ಆಗಲೆಂದು ನನ್ನ ಹಾರೈಕೆ. ಅವಳೊಬ್ಬಳನ್ನೆ ಹೋಗಲು ಬಿಡುವುದಕ್ಕಿಂತ ಆ ಯೋಜನೆ ಬಹಳ ಹೆಚ್ಚು ಪ್ರಶಸ್ತ.'

ಈ ಪ್ರಸ್ತಾಪ ಮೆಲಬರಿಗೆ ಬಹಳ ಮೆಚ್ಚಿಗೆ ಆಯಿತು. ಸೆಕೆಯ ಹವಾಮಾನ ಇರುವತನಕ ತಾನು ಬಯಸಿದ ಹವಾಪಲ್ಲಟವನ್ನು ಮುಂದೆ ದೂಡುವುದರಲ್ಲಿ ಏನೂ ಅಪಾಯವಿದ್ದಿಲ್ಲ — ಅದೂ ಇಂಥ ಒಂದು ಕಾರಣಕ್ಕಾಗಿ.

ಒಮ್ಮೆಲೆ ಎಚ್ಚರ ಪಡೆದವನಂತೆ, ಆತ ಅಂದನು, 'ಡಾಕ್ಟರ, ನಿಮ್ಮ ವೇಳೆ ಬೆಲೆಯುಳ್ಳದ್ದು. ನಾನು ಮನೆಗೆ ಹೋಗುತ್ತೇನೆ. ನಿಮಗೆ ನಾನು ಬಹಳ ಋಣಿ. ಇನ್ನು ನೀವು ಅವಳನ್ನು ಆಗಾಗ್ಗೆ ನೋಡುವಿರಿ ಅಂದಾಗ ಅವಳಲ್ಲಿ ಏನಾದರೂ ಗಂಭೀರವಿದ್ದರೆ ನೀವೇ ಕಂಡು ಹಿಡಿಯುವಿರಂತೆ.'

'ನಿಮಗೆ ಭರವಸೆ ಕೊಡುತ್ತೇನೆ; ಅದೇನೂ ಅಲ್ಲ.' ಫಿಟ್ಝಪಿಯರ್ಸ ಅಂದನು. ಆತ ಅವಳ ತಂದೆಗೆ ಗೊತ್ತಿದ್ದಕ್ಕಿಂತ ಹೆಚ್ಚು ಸಲ ಗ್ರೇಸಳನ್ನು ಈಗಾಗಲೆ ಕಂಡಿದ್ದನು.

ಆತ ಹೊರಟುಹೋದ ಮೇಲೆ ಫಿಟ್ಝಪಿಯರ್ಸ್ ಮೌನವಾಗಿ ನಿಂತನು — ತನಗೆ ಅನಿಸಿದ್ದನ್ನೆಲ್ಲ ಪರಿಕಿಸಿಕೊಳ್ಳುತ್ತ. ಮುತ್ತಿಗಾಗಿ ಮುಳುಕುಹಾಕಬೇಕು. ಆದರೆ ತಾನು ಒಳಹೊಕ್ಕಿದ್ದ ನೀರಿನ ಆಳದ ಸಾಂದ್ರತೆ ಮತ್ತು ಉಷ್ಣತೆ ಏನೂ ಗೊತ್ತಿರ ಬಾರದು — ಅಂಥ ಮನುಷ್ಯನಂತೆ ಅವನ ಸ್ಥಿತಿಯಾಗಿತ್ತು. ಆದರೂ ಅವನು ಅದನ್ನು ಮಾಡಿ ಆಯಿತು. ಮತ್ತು ಗ್ರೇಸಳು ಬದುಕಿನ ಎಲ್ಲ ಹುಡುಗಿಯರಲ್ಲಿಯೆ ಅತಿ ಮಧುರಳು.

ಹೊರಟು ಹೋದ ಭೆಟ್ಟಿಗಾರನ ಮಟ್ಟಿಗೋ? ಮೆಲಬರಿಯ ಕಿವಿಯಲ್ಲಿ, ಮನೆಯ ಕಡೆಗೆ ನಡೆಯುತ್ತಿದ್ದಾಗ, ತಾನೇ ಆಡಿದ ಕೊನೆಯ ಮಾತುಗಳು ತಡವರಿಸು ತ್ತಿದ್ದವು. ಅವನಿಗೆ ಅನಿಸಿತು, ತತ್‌ಕ್ಷಣದ ಆವೇಗದಲ್ಲಿ ತಾನು ಆಡಿದ್ದು ಬಹಳ ಹೆಡ್ಡತನದ್ದು, ಅಶಿಷ್ಟ ಮತ್ತು ಒಬ್ಬ ಸುಶಿಕ್ಷಿತ ಸದ್ಗೃಹಸ್ಥನೊಂದಿಗೆ ಸಂಭಾಷಣದಲ್ಲಿ ಆಡಲು ಅಯೋಗ್ಯವಾದದ್ದು. ಆ ಗೃಹಸ್ಥನ ವೈದ್ಯಕೀಯ ವ್ಯವಸಾಯದ ವ್ಯಾಪ್ತಿ ಚಿಕ್ಕದ್ದಿರಬಹುದು. ಆದರೆ ಅವನ ಕುಲದ ಹಳೆಯ ಹಿರಿಮೆ ಅದರ ಕೊರತೆಯನ್ನು ತುಂಬಿಕೊಡುವಂತಿತ್ತು. ತೂಗಿನೋಡುವ ಮೊದಲೆ ಆತ ವಿಚಾರಗಳನ್ನು ತೋಚಿದಂತೆ ಆಡಿಬಿಟ್ಟಿದ್ದನು — ಅವು ಪೂರ್ತಿ ಆಕಾರ ತಾಳುವುದಕ್ಕೂ ಮೊದಲು! ಒಂದು ಅರ್ಥದಲ್ಲಿ ಅವು ಫಿಟ್ಝಪಿಯರ್ಸ್‌ನ ಸಮಾಚಾರ ಕೇಳಿ ಅವನಲ್ಲಿ ಮೂಡಿದ ಭಾವನೆ ಗಳನ್ನು ವ್ಯಕ್ತಪಡಿಸಿದ್ದವು. ಆದರೆ ಅವು ಸರಿಯಾಗಿದ್ದಿಲ್ಲ. ನೆಲವನ್ನೆ ನೋಡುತ್ತ ಕೈಗೋಲನ್ನು ಧ್ವಜಸ್ತಂಭದಂತೆ ಹೆಜ್ಜೆ ಹೆಜ್ಜೆಗೂ ಊರುತ್ತ ಆತ ತನ್ನ ಮನೆಯ ಪರಿಸರದ ಬಳಿ ಸೇರಿದನು. ಆವಾರದೊಳಗಿಂದ ಹಾಯುವಾಗ, ಅಲ್ಲಿ ಮಾಳದಲ್ಲಿಯೂ ಸುತ್ತಲೂ ಕೆಲಸ ಮಾಡುತ್ತಿದ್ದ ಮಂದಿಯ ಕಡೆಗೆ ನೋಡಲು ಆತ ತನ್ನಾರೆ ತಡೆದನು. ಅವರಲ್ಲಿ ಒಬ್ಬನು ಗಾಡಿಯ ಗಾಲಿಗಳ ಕಡ್ಡಿಗಳ ಬಗೆಗೆ ಅವನನ್ನು ಕೇಳಿದನು.

'ಹೇ?' ಅಂದ ಮೆಲಬರಿ, ಅವನನ್ನೆ ದುರುದುರು ನೋಡುತ್ತ. ಆಳು ತನ್ನ ಮಾತು ಮತ್ತೆ ಆಡಿದನು.

ಮೆಲಬರಿ ನಿಂತನು ; ಆ ಮೇಲೆ ಉತ್ತರ ಕೊಡದೆ ಫಕ್ಕನೆ ಹೊರಳಿ ಅಂಗಳ ದಾಟಿ ಹೋಗಿ ಮನೆಯನ್ನು ಹೊಕ್ಕನು.

ಮರ ಕಡಿಯುವ ಆಳುಗಳಿಗೆ ಕಾಲದ ಪರಿವೆಯೆ ಇರುವುದಿಲ್ಲ. ಅದೊಂದು ಕಳೆಯಬೇಕಾದ ವಸ್ತುವೆಂದಷ್ಟೇ ಅವರಿಗೆ ಗೊತ್ತು. ಅವರು ಆರಾಮಾಗಿ, ಮೆಲಬರಿ ಪ್ರವೇಶಿಸಿದ ಬಾಗಿಲನ್ನೆ ನಿರೀಕ್ಷಿಸುತ್ತ ಉಳಿದರು.

'ಅಲ್ಲ ಈ ಖದೀಮನ ತಲೆಬುರುಡೆಯಲ್ಲಿ ಯಾವ ಹುಳ ಹೊಕ್ಕೊಂಡಿದೆ ಅಂದೆ.' ಹಿರಿಯ ಟಾಂಗ ಅಂದನು. 'ಅವನ ಮಗಳದೇ ಏನಾದರೂ ಭಾನಗಡಿ ಇರಬೇಕು. ಏ ಜಾನ್ ಅಪಜಾನ್, ನಿನ್ನ ಒಬ್ಬ ಬೆಳೆದ ಮಗಳು ಇದ್ದರೆ, ಅವಳಿಗಾಗಿ ಈತ ತನ್ನ ಮಗಳಿಗೆ ಚೆಲ್ಲಿದಷ್ಟೇ ಹಣ ನೀನು ತೆತ್ತಿದ್ದರೆ, ಜಾನ್, ನಿನ್ನ ರವಿವಾರದ ಹಬ್ಬದ ಬೂಟುಗಳ ಸದ್ದೆ ಅಡಗಿಹೋಗುತ್ತಿತ್ತು, ನೋಡು! ಆದರೆ ಅವಳಿಗಾಗಿ ಏನಾದರೂ

ಮಾಡುವಂಥ ಮನುಷ್ಯನೇ ಆಗಲಾರೆ ನೀನು. ಅದೂ ನಿನ್ನ ಒಳ್ಳೆ ನಸೀಬೇ ಅನ್ನು. ಜಾನ್, ಅವನಿಗೆ ಒಂದು ಡಜನ್ ಹುಡುಗಿಯರು ಇರಬೇಕಿತ್ತು. ಆಗ ಅದು ಅವನಿಗೆ ಬುದ್ಧಿ ಕಲಿಸುತ್ತಿತ್ತು. ಕಳೆದ ರವಿವಾರ ನಾನು ಅವರಿಬ್ಬರನ್ನು ನೋಡಿದೆ — ಜತೆಜತೆ ತಿರುಗಾಡ್ತಾ ಇದ್ರು. ನಡುವೆ ಒಂದು ಹೊಂಡಕ್ಕೆ ಬಂದರು. ಆಗ ಆತ ಅವಳನ್ನು ಮೇಣದ ಬೊಂಬೆಯಂತೆ ಎತ್ತಿಹಿಡಿದ! ಅವನಿಗೂ ಒಂದು ಡಜನ್ ಸಿಗಬೇಕು. ಅಂದಾಗ, ಅವರನ್ನು ಹೊಂಡದೊಳಗಿಂದಲೆ ನಡೆದು ಹೋಗಲು ಅವ ಬಿಡಬಹುದು.

ಈ ನಡುವೆ ಮೆಲಬರಿ ಕಣ್ಣೆದುರಿಗೆ ಏನೋ ದೃಷ್ಟಾಂತ ಕಾಣುವವನಂತೆ ಕಣ್ಣು ಬಿಡುತ್ತ ಮನೆಯನ್ನು ಪ್ರವೇಶಿಸಿದನು. ಅವನ ಹೆಂಡತಿ ಕೋಣೆಯೊಳಗೆ ಇದ್ದಳು. ತಲೆಯ ಹ್ಯಾಟು ತೆಗೆದಿಡದೆ ಆತ ಅಲ್ಲಿಯೇ ಎಲ್ಲೋ ಕೂತು ಬಿಟ್ಟನು.

'ಲೂಸಿ — ನಾವು ಕಾರ್ಯ ಮಾಡಿದಿವಿ' ಆತ ಅಂದನು, 'ನಾನು ನಿರೀಕ್ಷಿಸಿದಂತೆಯೇ ಆ ಸಂಗತಿ ಆಯಿತು. ನಾನು ಶಕುನಕಟ್ಟಿ ಹೇಳಿದ ಆ ಮೋಹಿನೀಮಾಟ ಕೆಲಸ ಮಾಡಿದೆ. ಅವಳು ಅದನ್ನು ಮಾಡಿಬಿಟ್ಟಿದ್ದಾಳೆ. ಅದು ಭೇಷಾಗಿಯೇ ಮಾಡಿದ್ದಾಳೆ. ಅವಳೆಲ್ಲಿ? ಗ್ರೇಸಳೆಲ್ಲಿ, ಎಂದೆ.'

'ಮೇಲೆ ಅವಳ ಕೋಣೆಯಲ್ಲಿದ್ದಾಳೆ. ಏನಾಯಿತು?'

ಮೆಲಬರಿ ಸಾಧ್ಯವಿದ್ದಷ್ಟು ಸುಸಂಗತವಾಗಿ ವಿದ್ಯಮಾನಗಳನ್ನೆಲ್ಲ ವಿವರಿಸಿದನು. 'ನಾ ನಿನಗೆ ಹೇಳಿದ್ದೆ' ಆತ ಅಂದ, 'ಅವಳಂಥ ಹುಡುಗಿ ಬಹಳ ಕಾಲ ಅಡಗಿ ಉಳಿಯುವುದು ಸಾಧ್ಯವಿಲ್ಲ — ಇಂಥ ಊರಲ್ಲೂ ಕೂಡ. ಆದರೆ ಗ್ರೇಸಳೆಲ್ಲಿ? ಅವಳು ಕೆಳಗೆ ಬರಲಿ. ಇಲ್ಲಿ — ಗ್ರೇಸ.'

ಅವಳು ಸಾಕಷ್ಟು ವೇಳೆ ಕಳೆದು ಕಾಣಿಸಿಕೊಂಡಳು. ಅವಳನ್ನು ಈ ತಂದೆ ಅಷ್ಟು ಮುದ್ದುಗೆಡಿಸಿಬಿಟ್ಟಿದ್ದನು. ಅವನ ದನಿ ಎಷ್ಟೇ ತಾಳ್ಮೆಗೆಟ್ಟಿದ್ದಾಗಿರಲಿ, ಅವಳು ಎಂದೂ ತ್ವರೆ ಮಾಡಿಕೊಂಡವಳಲ್ಲ. 'ಏನದು ಅಪ್ಪ?' ಆಕೆ ನಗೆಯನ್ನು ಬೀರುತ್ತ ಕೇಳಿದಳು.

'ಏಕೆ? ಏ ಉಡಾಳ ಹುಡುಗಿ, ಇದೇನು ನೀನು ಮಾಡುತ್ತಿರುವಿ? ಮನೆಗೆ ಬಂದು ಆರು ತಿಂಗಳು ಆಗಿಲ್ಲ. ಆದರೂ ಅಪ್ಪನ ಮಟ್ಟಕ್ಕೇ ಕಟ್ಟಬೀಳದೆ, ಮೇಲಿನ ಅಂತಸ್ತಿನ ಜನಗಳಲ್ಲಿ ಗಲಾಟೆ ಎಬ್ಬಿಸುತ್ತಿರುವಿಯಲ್ಲ!'

ತಂದೆಯ ಇಂಗಿತವನ್ನು ಕೂಡಲೆ ಅರಿತುಕೊಳ್ಳಬಲ್ಲೆನೆಂದು ಕಾಣಿಸಿಕೊಳ್ಳುವ ರೂಢಿ ಇದ್ದವಳಾದರೂ, ಈಗ ಗ್ರೇಸಳಿಗೆ ಏನೂ ಬಗೆಹರಿಯದ ಭಾವವನ್ನು ಪ್ರಕಟಿಸದೆ ಇರಲು ಆಗಲೇ ಇಲ್ಲ.

'ಇಲ್ಲ, ಇಲ್ಲ. ನಾನು ಏನೆಂಬೆನೆಂಬುದು ನಿನಗೆ ಗೊತ್ತಾಗಲಿಲ್ಲ ಎಂಬುದು ನಿಜ. ಹೆಂಗಸರು ಈ ಸಂಗತಿಗಳನ್ನು ಎರಡು ಬೇಲಿಗಳಾಚೆಯಿಂದಲೂ ನೋಡಿ ಅರ್ಥಮಾಡಿಕೊಳ್ಳಬಲ್ಲರೆಂದು ನನ್ನ ನಂಬಿಕೆ. ಆದಾಗ್ಯೂ ನಾನೆ ನಿನಗೆ ಹೇಳುತ್ತೇನೆ. ನೀನು

ನಿನ್ನ ಗರುಡಪಾತಾಳವನ್ನು ಆ ಡಾಕ್ಟರನ ಮೇಲೆ ಬೀಸಿ ಒಗೆದಿದ್ದು. ಆತ ಕೂಡಲೇ ಬರುವವನಿದ್ದಾನೆ ನಿನ್ನ ಪ್ರೇಮಾರಾಧನೆಗೆ.'

'ಅಯ್ಯೋ ನನ್ನ ಚಿನ್ನ, ನೋಡಿಯಾದರೂ ನೋಡು. ಇದು ನಿನ್ನ ಗೆಲುವೆಂದು ನಿನಗೆ ಅನಿಸುವದಿಲ್ಲವೆ?' ಮೆಲಬರಿಯ ಹೆಂಡತಿ ಅಂದಳು.

'ಪ್ರೇಮಾರಾಧನೆಗೆ ಬರುತ್ತಾರೆಯೇ? ಅಪ್ಪಯ್ಯ. ಅಂಥದೇನೂ ಮಾಡಲು ಹಚ್ಚುವಂತೆ ನಾನೇನೂ ಅವನಿಗೆ ಮಾಡಲಿಲ್ಲವಲ್ಲ!' ಗ್ರೇಸ ಉದ್ಗಾರ ತೆಗೆದಳು.

'ನೀನೇ ಏನಾದರೂ ಮಾಡಬೇಕೆಂಬ ಆಗತ್ಯವಿದ್ದಿಲ್ಲ. ಇಂಥ ಸಂಗತಿಗಳಲ್ಲಿ ಸ್ವೇಚ್ಛೆಯೊಂದೆ ಕೆಲಸಮಾಡುತ್ತದೆ. ಒಳ್ಳೇದು. ಅವನು ಬಹಳ ಮರ್ಯಾದೆಯಿಂದ ನಡೆದುಕೊಂಡಿದ್ದಾನೆ. ಮತ್ತು ನನ್ನ ಅನುಮತಿ ಕೇಳಿದ್ದಾನೆ. ನಿನಗೆ ಗೊತ್ತು ಆತ ಇಲ್ಲಿ ಬಂದಾಗ ಏನು ಮಾಡಬೇಕೆಂಬುದು. ಅವನಿಗೆ ಎಲ್ಲ ಸುಸೂತ್ರ ಮಾಡಿಕೊಡು ಎಂತ ನಾನೇನೂ ನಿನಗೆ ಬೇರೆ ಹೇಳಬೇಕಾಗಿಲ್ಲ.'

'ಅಂದರೆ ಅವರನ್ನು ಮದುವೆ ಆಗುವಂತೆ ಉತ್ತೇಜನ ಕೊಡಬೇಕೆಂದು ನಿನ್ನ ಅಂಬೋಣವೆ?'

'ಹೌದು ನಿನಗೆ ನಾನು ಶಿಕ್ಷಣ ಕೊಟ್ಟಿದ್ದೇ ಅದಕ್ಕಾಗಿ ಅಲ್ಲವೆ?'

ಗ್ರೇಸಳು ಕಿಟಕಿಯೊಳಗಿಂದ ಹೊರಗೆ ನೋಡಿದಳು. ಅಗ್ಗಿಷ್ಟಿಕೆಯ ಕಡೆಗೆ ನೋಡಿದಳು. ಅವಳ ಮೊಗದಲ್ಲಿ ಉದ್ದೀಪನೆ ಇದ್ದಿಲ್ಲ. 'ಇದೇಕೆ ಹೀಗೆ ಪರಭಾರೆ ತೀರ್ಮಾನಿಸಿಬಿಟ್ಟೆ?' ಆಕೆ ಸಿಡುಕಿನಿಂದ ಕೇಳಿದಳು. 'ನಾನು ಅವರ ಬಗೆಗೆ ಏನು ಭಾವಿಸಿರುವೆನೆಂಬುದನ್ನು ಕೇಳಿಕೊಳ್ಳುವಸಕ ನೀನು ಕಾಯುವಿಯೆಂದು ತಿಳಿಯುತ್ತೇನೆ.'

'ಸರಿ, ಸರಿ, ಅನುಮಾನವೇ ಇಲ್ಲ. ಆದರೆ ನೀನೆ ನೋಡು. ಇದು ಎಷ್ಟು ಚೆನ್ನಾದೀತು.'

ಆಕೆ ಆ ಮಾತನ್ನು ಮರುಮಾತಾಡದೆ ತೂಗಿ ನೋಡಿದಳು.

'ನೀನು ಬಿಟ್ಟುಬಂದ, ನಿನ್ನಿಂದ ದೂರವಾದ ಸಮಾಜಕ್ಕೆ ನೀನು ತಿರುಗಿ ಸೇರಿ ಕೊಳ್ಳುವಿ.' ಅವಳ ತಂದೆ ಮುಂದುವರಿಸಿದ, 'ಏಕೆಂದರೆ, ಆತ ಇಲ್ಲಿಯೆ ಬಹಳಕಾಲ ಉಳಿಯುವವನಲ್ಲವೆಂದು ನನ್ನ ಭಾವನೆ.'

ಅವಳು ನಾಚುತ್ತಲೆ ಈ ಲಾಭವನ್ನು ಒಪ್ಪಿಕೊಂಡಳು. ಆದರೆ ಒಂದು ಸಂಗತಿ ಸ್ಪಷ್ಟವಾಗಿತ್ತು. ಫಿಟ್ಝಪಿಯರ್ಸನು ಹತ್ತಿರವಿರುವಾಗ ಅವಳ ಮೇಲೆ ಒಂದು ಮೋಹ ಜಾಲವನ್ನು ಬೀಸುತ್ತಿದ್ದರೂ, ಅದಕ್ಕೂ ಹೆಚ್ಚಾದ ಒಂದು ಬಗೆಯ ಮಾನಸಿಕ ಮಾಯಾ ಪ್ರಭಾವವನ್ನೇ ಬೀರುತ್ತಿದ್ದರೂ, ಅಂದು ಕಾನಿನಲ್ಲಿಯ ಅವನ ದುಡುಕಿನ ಮೈಸಲಿಗೆಯ ಕೃತ್ಯವು ಅವಳಲ್ಲಿ ಅವರ್ಣನೀಯವಾದ ಭಾವಗಳನ್ನು ಕೆರಳಿಸಿದ್ದರೂ, ಅವನನ್ನು ಅವಳು ಭಾವೀ 'ವಿಧಿತಂದ' ಗಂಡನೆಂಬ ದೃಷ್ಟಿಯಲ್ಲಿ ಎಂದೂ ಕಂಡಿದ್ದಿಲ್ಲ. 'ಏನು ಉತ್ತರ ಕೊಡಬೇಕೋ ನನಗೆ ತಿಳಿಯದಾಗಿದೆ.' ಅವಳೆಂದಳು, 'ಅವನು ಬಹಳ ಜಾಣನೆಂದು ನಾನು ತಿಳಿದುಕೊಂಡಿದ್ದೇನೆ.'

'ಅವನು ಏನೂ ಪರವಾಗಿಲ್ಲ. ಅವನೇ ನಿನ್ನನ್ನು ನೋಡಲು ಇಲ್ಲಿ ಬರುತ್ತಾನೆ.'

ಅವನು ಬಂದರೆ ತಾನು ಅವನನ್ನು ಪ್ರತಿರೋಧಿಸಲಾರೆನೆಂಬ ಪೂರ್ವಬೋಧನೆ ಅನಿಸಿ ಅವಳು ವಿಚಿತ್ರವಾಗಿ ಸಂಭ್ರಮಗೊಂಡಳು. 'ನಿಜವಾಗಿಯೂ, ಅಪ್ಪಾ, ನಿನಗೆ ನೆನಪಿಲ್ಲವೆ? ಇತ್ತೀಚೆಗೆ ಜೈಲ್ಸನು—'

'ನಿನಗೇ ಗೊತ್ತು, ಅವನ ವಿಚಾರ ನಿನಗೆ ಸಾಧ್ಯವಿಲ್ಲ. ನಿನ್ನ ಮೇಲಿನ ಎಲ್ಲ ಹಕ್ಕು ಅವನು ಬಿಟ್ಟುಕೊಟ್ಟಿದ್ದಾನೆ.'

ಆತ ತನ್ನ ಅಭಿಪ್ರಾಯ ಮಂಡಿಸಿದಷ್ಟು ನಿಚ್ಚಳವಾಗಿ ಆಕೆ ತನ್ನ ಭಾವಸೂಕ್ಷ್ಮಗಳನ್ನು ವಿವರಿಸಲಾರದೆ ಹೋದಳು. ಅವಳಲ್ಲಿ ಮಾತಿನ ಚಾತುರ್ಯವಿದ್ದು ಅವಳ ತಂದೆಯಲ್ಲಿ ಅದು ಇಲ್ಲದಿದ್ದೂ ಆಕೆ ವಿಶದವಾಗಿ ಮಾತಾಡಲು ಅಸಮರ್ಥಳಾದಳು. ಫಿಟ್ಝಪಿಯರ್ಸನು ಒಂದು ಮಧ್ಯದ ಗುಟುಕಿನಂತೆ ಅವಳ ಮೇಲೆ ಪರಿಣಾಮ ಮಾಡುತ್ತಿದ್ದನು. ಅವಳನ್ನು ಉದ್ರೇಕಗೊಳಿಸಿ ಹೊಸದೊಂದು ವಾತಾವರಣದಲ್ಲಿ ಒಯ್ದಿಟ್ಟು, ತನ್ನ ಪ್ರಭಾವವಿರುವನಕವೂ ಅವಳ ಕೃತಿಗಳನ್ನು ವಿಕಾರಗೊಳಿಸುವ ಮಾದಕದಂತೆ ಆಗುತ್ತಿದ್ದನು. ಅನಂತರ ಅವಳು ಅನುಭವಿಸಿದ ಈ ವೃತ್ತಿಗಾಗಿ ಅವಳಿಗೆ ಅನುತಾಪದಂತೆ ಏನೋ ಖೇದವೆನಿಸುತ್ತಿತ್ತು — ಆದರೆ ಇದನ್ನೆಲ್ಲ ಆ ಸಾಧು ದಂಪತಿಗೆ ಮಾತಿನಲ್ಲಿ ಆಡಿ ತೋರಿಸುವುದು ಸಾಧ್ಯವಿದ್ದಿಲ್ಲ.

ಅದೇ ದಿನ ಫಿಟ್ಝಪಿಯರ್ಸನು ಯಾವುದೋ ವೈದ್ಯಕೀಯ ಸಭೆಗಳಲ್ಲಿ ಹಾಜರಿರಲು ಹಿಂಟಾಕ್‌ದಿಂದಲೇ ಹೊರಟು ಹೋಗಬೇಕಾಗಿಬಂದಿತು. ಆದ್ದರಿಂದ ಮೆಲಬರಿಯ ಮನೆಗೆ ಅವನ ಚೀಟಿ ಬಂದಿತು— ಬಾರದಿರುವ ಒತ್ತಾಯದ ಪರಿಸ್ಥಿತಿಯ ಬಗೆಗೆ ವಿಷಾದ ವ್ಯಕ್ತಮಾಡುತ್ತ. ವಸ್ತುತಃ ಈ ಚೀಟಿಯು ಚೆಂದವಿತ್ತು. ಉತ್ಕೃಷ್ಟವಾಗಿತ್ತು. ಹಿಂಟಾಕಿಗೆ ಬಂದಂದಿನಿಂದ ಇಂಥ ಚೀಟಿ ನೋಡುವ ವಾಡಿಕೆಯೆ ಅವಳಿಗೆ ತಪ್ಪಿಹೋಗಿತ್ತು. ಎಂದೋ ಒಮ್ಮೆ ಅವಳ ಶಾಲೆಯ ಗೆಳತಿಯೊಬ್ಬಳು ಹೀಗೆಯೆ ಬರೆದಿದ್ದಳು. ಅದೂ ಒಂದು ಅಪರೂಪದ ಸಂಗತಿಯೇ. ಏಕೆಂದರೆ ಆ ಹುಡುಗೆಯರು ವ್ಯಕ್ತಿಗೌರವ ಕಾಪಾಡುವಂಥವರು. ಈ ಕಟ್ಟಿಗೆ ವ್ಯಾಪಾರಿಯ ಮಗಳು ಕಣ್ಣುಮರೆ ಆದೊಡನೆ ಅವರಲ್ಲಿ ಹಲವರು ಅವಳ ಬಗೆಗೆ ತಣ್ಣಗಾಗಿಬಿಡುತ್ತಿದ್ದರು. ಆದ್ದರಿಂದ ಈ ಚೀಟಿ ಬಂದದ್ದು ಅವಳಿಗೆ ಸಂತೋಷವುಂಟು ಮಾಡಿತು. ಆ ಮೇಲೆ ಅವಳು ವಿಚಾರವ್ಯಗ್ರವಾದ ಮುದ್ರೆಯಿಂದ ನಡೆದಾಡಿದಳು.

ಸಂಜೆಗೆ ಅವಳ ತಂದೆ—ಅವನಿಗೆ ಆ ಚೀಟಿ ಬಂದದ್ದು ಗೊತ್ತಾಗಿತ್ತು— ಅಂದನು, 'ನಿನಗೆ ಬಂದ ಪತ್ರಕ್ಕೆ ಉತ್ತರ ಬರೆಯಲು ನೀನೇಕೆ ಕೂಡ್ರುವುದಿಲ್ಲ? ನನ್ನ ಪ್ರಾಯದಲ್ಲಿ ಹರಯದವರೆಲ್ಲ ಹಾಗೆಯೆ ಮಾಡುತ್ತಿದ್ದರು.'

ಅದಕ್ಕೆ ಉತ್ತರ ಅವಶ್ಯವಿಲ್ಲವೆಂದು ಆಕೆ ಅಂದಳು.

'ಓ ನಿನಗೇ ಗೊತ್ತು ಯಾವುದು ಸರಿಯೆಂದು,' ಆತ ಅಂದನು. ಆದಾಗ್ಯೂ ಆಕೆ ಉತ್ತರ ಬರೆಯದೇ ಇದ್ದದ್ದು ಯೋಗ್ಯವಾಯಿತೆ—ಎಂದು ಸಂದೇಹಪಡುತ್ತಲೆ

ಆತ ತನ್ನ ವ್ಯವಹಾರದಲ್ಲಿ ತೊಡಗಿದನು. ಯಾರಿಗೆ ಗೊತ್ತು? ಅವಳು ತನ್ನ ವ್ಯವಹಾರ ಸರಿಯಾಗಿ ನಡೆಯಿಸಿಕೊಂಡು ಹೋಗುವುದಿಲ್ಲ. ಇದರಿಂದ ಈ ನೆಂಟಸ್ತಿಕೆ ತಪ್ಪಿಹೋದರೆ? ಇದು ಅವಳಿಗೆ ತುಂಬ ಸುಖವನ್ನು ತರುವಂತಿತ್ತು. ಅದಕ್ಕೆ ಗಂಡಾಂತರ ಬಂದರೆ?

ಫಿಟ್ಝಪಿಯರ್ಸನ ಬಗೆಗೆ ಮೆಲಬರಿಯ ಆದರಕ್ಕೆ ನೆಲೆ ಆತನ ವ್ಯಾವಸಾಯಿಕ ಪ್ರತಿಷ್ಠೆ ಅಷ್ಟೊಂದು ಅಲ್ಲ. ಆ ಪ್ರತಿಷ್ಠೆಯೂ ಅಷ್ಟೇನು ಇದ್ದಿಲ್ಲ. ಅದಕ್ಕಿಂತ ಮಿಗಿಲಾಗಿ, ಹಿಂದಿನ್ನ ದಿನಮಾನಗಳಲ್ಲಿ ಅವನ ಮನೆತನಕ್ಕೆ ಅವರ ಸೀಮೆಯಲ್ಲಿ ಇದ್ದ ಮನ್ನಣೆಯೇ ಮುಖ್ಯವಾಗಿತ್ತು, ಹಳೆಯ ಪ್ರತಿಷ್ಠಿತ ಮನೆತನದವರಲ್ಲಿ, ಅವರ ವೈಯಕ್ತಿಕ ಸ್ಥಿತಿಗತಿ ಚಾರಿತ್ರ್ಯ ಏನೇ ಇರಲಿ, ಇಂದಿಗೂ ಗ್ರಾಮಾಂತರ ಪ್ರದೇಶಗಳ ಹಳೆ ಮಾದರಿಯ ಮಂದಿಯಲ್ಲಿ ಕಂಡು ಬರುವ ಕರುಳು ಮಿಡಿಯುವ ಶ್ರದ್ಧೆ ಮೆಲಬರಿಯಲ್ಲಿ ಪೂರ್ಣತ್ವಕ್ಕೆ ಮುಟ್ಟಿತ್ತು. ಅವನ ಮಗಳ ಅಭ್ಯರ್ಥಿಯು, ಅವನು ಅಜ್ಜನ ಕಾಲದಲ್ಲಿಯ ಅತಿ ಹಿರಿಯ ಕುಲಗಳಲ್ಲಿ ಒಂದರಿಂದ ಇಳಿದು ಬಂದವನೆಂದು ಅವನು ಕೇಳಿದ್ದನು. ಆ ಕುಲವು ಪಕ್ಕದ ಹಳ್ಳಿಯೊಂದಕ್ಕೆ ತನ್ನ ಹೆಸರನ್ನು ಕೊಟ್ಟಿತ್ತು. ಅಂದಾಗ ಈ ನೆಂಟಸ್ಥಿಕೆಯ ನಿಶ್ಚಿತಾರ್ಥದಲ್ಲಿ ತಪ್ಪೇನು?

ಆತ ಹೆಂಡತಿಗೆ ಹೇಳಿದನು, 'ಅವಳನ್ನು ಇದಕ್ಕೆ ತೊಡಗಿಸಿಡಬೇಕು ನಾನು. ಇದು ತನ್ನ ಸುಖಕ್ಕಾಗಿಯೆಂದು ಅವಳಿಗೆ ಕಾಣುತ್ತದೆ. ಆದರೂ ಅವಳು ಇನ್ನೂ ತರಳೆ. ಅವಳಿಗೆ ಹಿರಿಯರ ನಾಲಿಗೆಯಿಂದ ಸ್ವಲ್ಪ ಪ್ರಚೋದನೆಯೂ ಬೇಕಾಗಬಹುದು.'

೨೪

ಇದನ್ನೇ ಗಮನದಲ್ಲಿಟ್ಟು ಮೆಲಬರಿ ಅವಳನ್ನು ಅಡ್ಡಾಡಲು ಸಂಗಡ ಕರೆದುಕೊಂಡು ಹೋದನು—ಏನಾದರೊಂದು ಗಂಭೀರ ಪ್ರಭಾವ ಬೀರುವ ವಿಷಯವನ್ನು ಹೇಳಲು ಬಯಸಿದಾಗ ಹೀಗೆ ಮಾಡುವುದು ಅವನ ವಾಡಿಕೆ. ಅವರ ದಾರಿ ಅವರ ಬೆಟ್ಟದ ಭೂಮಿಯ ಹಾಗೂ ಬ್ಲಾಕ್‌ಮೂರ ಕೊಳ್ಳದ ಪಶ್ಚಿಮದ ತುದಿಯ ಗಡಿಯಾದ ಎತ್ತರದ ಗುಡ್ಡದ ಗೋಣಕಡೆಗೆ ಇತ್ತು. ಆ ಗೋಣು ಹಾಗೆಯೇ ಮುಂದೆ ಹೈಸ್ಟಾಕ ಗುಡ್ಡದ ಏರಿಯಲ್ಲಿ ಮುಗಿಯುತ್ತದೆ. ಅಲ್ಲಿಂದ ಅವರು ಹಿಂದಿರುಗಿ ಸೇಬಿನ ತೋಟಗಳ ಸೀಮೆಯ ಅಂಚಿನಾಚೆಗೆ ನೋಡಬಹುದು. ಅಲ್ಲಿ ವಸಂತಕಾಲದಲ್ಲಿ ಸೇಬಿನ ಮರಗಳು ಮೈಲುಗಟ್ಟಲೆ ಹೂತು ನಿಂತಿರುತ್ತವೆ. ಈಗ ಎಲ್ಲವೂ ಹಚ್ಚ ಹಸಿರಾಗಿತ್ತು.

ಆ ಸ್ಥಳವು ಗ್ರೇಸಳಿಗೆ ತಾನು ಹಿಂದೆ ಕೊನೆಯ ಸಲ ಅದನ್ನು ನೋಡಿದ್ದು ನೆನಪಿಗೆ ತಂದಿತು. ಅವಳೆಂದಳು, 'ಸೇಬಿನ ಬೆಳೆಯು ಬಲುದೊಡ್ಡ ಸುಗ್ಗಿಯ

ಭರವಸೆ ಪೂರೈಸಲಿದೆ, ಅಲ್ಲವೆ? ಜೈಲ್ಸ ತನ್ನ ಗಾಣಗಳನ್ನು ಚಕ್ಕಿಗಳನ್ನೂ ಸಜ್ಜುಗೊಳಿಸುತ್ತಿರಬಹುದು.'

ಆದರೆ ಇದನ್ನೆ ಚರ್ಚಿಸಲು ಅವಳ ತಂದೆ ಅಲ್ಲಿಗೆ ಬಂದಿದ್ದಲ್ಲ. ಉತ್ತರ ಕೊಡದೆ ಆತ ತೋಳನ್ನೆತ್ತಿ ತನ್ನ ಬೆರಳನ್ನು ಓಡಿಸಿ ಬಲಗಡೆಗೆ ಒಂದು ನಿಟ್ಟಿನಲ್ಲಿ ಹೊರಳಿಸಿ ಕಾಣಿಸಿದನು.

'ಅಕೋ, ಅಲ್ಲಿ,' ಅವನೆಂದನು, 'ಆ ಸಮನೆಲದಿಂದ ದೊಡ್ಡ ತಿಮಿಂಗಿಲನಂತೆ ಆ ಗುಡ್ಡ ಎದ್ದಿದೆ—ಕಾಣುವಿಯಲ್ಲ? ಆ ಗುಡ್ಡದ ಆಚೆಗೆ ಒಂದು ಸುರಕ್ಷಿತವಾದ ಬುಡದ ಬದಿಯಿದೆ. ಫಿಟ್ಝಪಿಯರ್ಸನ ಮನೆತನದವರು ಒಡೆಯರಾಗಿ ಮೆರೆದ ದೇಸಗತಿ ಇತ್ತು. ಎಷ್ಟು ನೂರು ವರ್ಷ ಅವರು, ಅಲ್ಲಿಯ ದೇಸಾಯಿಯರಾಗಿದ್ದರೋ ನಾನರಿಯೆ. ಅಲ್ಲಿಯೆ ಇದೆ. ಓಕಬರಿ ಫಿಟ್ಝಪಿಯರ್ಸ ಹಳ್ಳಿ. ಅದು ಅದ್ಭುತ ಆಸ್ತಿ...ಅದ್ಭುತ!'

'ಆದರೆ ಅವರು ಈಗ ಅಲ್ಲಿಯ ದೇಸಗತಿಯ ಒಡೆಯರಿಲ್ಲ.'

'ಇಲ್ಲ, ನಿಜ. ಆದರೆ ದೀನದಡ್ಡ ಮಂದಿಯಂತೆ ಒಳ್ಳೆಯ ದೊಡ್ಡ ಜನರಿಗೂ ಅಳಿಗಾಲವುಂಟು. ಆ ಮನೆತನದ ಪ್ರತಿನಿಧಿಯಾಗಿ ಇಂದಿಗೆ ಬದುಕಿ ಉಳಿದವರು, ನನಗನಿಸುತ್ತದೆ, ಇಬ್ಬರೆ. ಒಬ್ಬ ನಮ್ಮ ಈ ಡಾಕ್ಟರ್, ಇನ್ನೊಬ್ಬರು ಒಬ್ಬ ಅವಿವಾಹಿತ ಹೆಂಗಸು. ಆಕೆ ಎಲ್ಲಿರುವಳೋ ಗೊತ್ತಿಲ್ಲ. ಗ್ರೇಸ, ಇಂಥ ಒಂದು ಇತಿಹಾಸರಮ್ಯ ಮನೆತನದೊಂದಿಗೆ ನಿನ್ನ ಸಂಬಂಧ ಕೂಡಿಬಂದುದಕ್ಕೆ, ನೀನು ಸುಖಿಯಾಗದಿರಲಾರೆ. ತಾಯಿಯ ಕಡೆಯಿಂದ ಇವನು ಶರ್ಟನ್ನಿನ ಬಾಕ್ಸ್‌ಬೇಲಾಡ್ಸ್‌ರ ದೀರ್ಘವಂಶಾವಳಿಯೊಂದಿಗೆ ಸಂಬಂಧಿಸಿದ್ದಾನೆ. ಇತಿಹಾಸದಲ್ಲಿಯೆ ಹೆಜ್ಜೆ ಇಟ್ಟಂತೆ ನಿನಗೆ ಅನಿಸಬೇಕು.'

'ಅವರು ಓಕಬರಿಯಲ್ಲಿ ಇದ್ದಷ್ಟು ಕಾಲವೂ ನಾವು ಹಿಂಟಾಕಿನಲ್ಲಿ ಇರುತ್ತಿದ್ದೇವೆ. ಅಲ್ಲವೇ? ನೀನೇ ಅನ್ನುತ್ತಿದ್ದಿ—ನಮ್ಮ ಹೆಸರು ಹಳೆಯ ದಸ್ತೇವಜು ದಾಖಲೆಗಳಲ್ಲಿ ಸತತವಾಗಿ ಬರುತ್ತವೆಂದು.'

'ಹೌದೇ ಸರಿ. ರೈತ, ವರ್ಗದಾರ ಎಂದು ಮುಂತಾದಾಗಿ ಹೆಸರು ಬರುತ್ತವೆ. ಆದರೆ ಇದು ಎಷ್ಟು ಒಳಿತೆಂಬುದನ್ನು ನೀನು ವಿಚಾರಿಸಿ ನೋಡು. ನೀನು ಉನ್ನತವಾದ ಐಷಾರಾಮಿನ ಬದುಕನ್ನು ಬಾಳುವಿಯಂತೆ. ಅಂಥ ಬದುಕು ನಿನಗೆ ಈಗ ರೂಢಿಯಾಗಿದೆ. ಡಾಕ್ಟರನ ಪ್ರಾಕ್ಟೀಸು ಇಲ್ಲಿ ಚಿಕ್ಕದಾದರೂ, ಅವನು ಅದ್ಧೂರಿಯ ಒಂದು ಶಹರಕ್ಕೆ ಹೋಗುವುದರಲ್ಲಿ ಸಂದೇಹವಿಲ್ಲ. ಒಮ್ಮೆ ಕೈಕೂತ ಮೇಲೆ ಅಲ್ಲಿ ಅವನು ಒಂದು ಮಾಟದ ಸಾರೋಟು ಇಡಬಹುದು. ಮತ್ತು ಉತ್ತಮ ಶಿಷ್ಯ ಸಮಾಜದ ಬಹಳಷ್ಟು ಮಹಿಳೆಯರ ಪರಿಚಯ ನಿನಗೆ ಆಗಬಹುದು. ಗ್ರೇಸ, ಆಗ ನೀನು ನನ್ನನ್ನು ಭೆಟ್ಟಿಯಾಗುವಂತೆ ಆದರೆ, ನನ್ನ ಕಡೆಗೆ ನೋಡದೆ ಅತ್ತ ಕಡೆ ಮುಖ ಹೊರಳಿಸಿ ನನ್ನನ್ನು ಹಾಯ್ದು ಸಾರೋಟಿನಲ್ಲಿ ಸಾಗಬಹುದು. ನೀನು ನನ್ನನ್ನು

ಮಾತನಾಡಿಸುವುದಾಗಲಿ, ನಮಸ್ಕರಿಸುವುದಾಗಲಿ ನಾನು ನಿರೀಕ್ಷಿಸುವುದಿಲ್ಲ. ಹಾಗೆ ಮಾಡದೆ ಇದ್ದರೆ ಅದು ಯಾವುದಾದರೊಂದು ಏಕಾಂತ ಖಾಸಗೀ ಸ್ಥಳದಲ್ಲಿ, ಅದು ನಿನ್ನ ಅಂತಸ್ತು ಇಳಿಸದಂತಿರಬೇಕು. ನಮ್ಮ ನೆರೆಹೊರೆಯ ಜೈಲ್ಸನಂಥ ಮಂದಿ ನಿನ್ನ ಸರಿಕರೆಂದು ತಿಳಿಯಬೇಡ. ನಾನೂ ಅವನೂ ಒಳ್ಳೆಯ ಗೆಳೆಯರಾಗಿರುವುದೆ ಸಾಕು. ನಿನ್ನಂಥವಳಿಗಾಗಿ ಅವನು ಅಲ್ಲ. ಅವನು ಇಲ್ಲಿಯ ನಮ್ಮ ಅಸಡ್ಡಾಳ ಮನೆ ಬಳಕೆಯ ಬದುಕು ಬಾಳಿದವನು. ಅವನ ಹೆಂಡತಿಯ ಬಾಳೂ ಅದೇ ರೀತಿ ಅಸಡ್ಡಾಳವೂ ಮನೆ ಬಳಕೆಯದೂ ಆಗಬೇಕು.'

ಇಷ್ಟೊಂದು ಒತ್ತಡ ಸ್ವಲ್ಪವಾದರೂ ಸ್ಥಿತ್ಯಂತರ ಮಾಡದೆ ಉಂಟೇ ? ಗ್ರೇಸಳು ತನ್ನೊಟ್ಟಿಗೆ ತಾನು ಇರುವುದು ಬಹಳ. ಆದ್ದರಿಂದ ಒಂದು ಸೊಗಸಾದ ದಿನ ತನ್ನ ಒಂಟಿತನದ ಲಾಭ ಪಡೆದು, ಫಿಟ್ಜ್‌ಪಿಯರ್ಸ್ ಹಳ್ಳಿ ನೆಲಸಿದ ಕೊಳ್ಳಕ್ಕೆ ಗಾಡಿಯಲ್ಲಿ ಕೂತು ಹೋದಳು. ಇನ್ನೊಂದು ದಿನ ಶರ್ಟನ ಕೋಟೆಯ ಅವಶೇಷಗಳಿದ್ದಲ್ಲಿಗೆ ಸವಾರಿ ಮಾಡಿದಳು. ಅದು ಬಕ್ಸಬೇಲಾರ್ಡ ಕುಲದವರ ಮೂಲದ ಸ್ಥಾನವಾಗಿತ್ತು. ಅವರು ಫಿಟ್ಜ್‌ಪಿಯರ್ಸನ ತಾಯಿಯ ಕಡೆಯ ಪೂರ್ವಜರು.

ಅವಶೇಷಗಳು ಕೆಲವೇ ಇದ್ದವು — ಕೆಳಮಹಡಿಯ ಕಟ್ಟೋಣದ ಭಾಗಗಳು, ಗಿಡ್ಡ ದೊಡ್ಡ ಗಾತ್ರದ ಕಲ್ಲುಗಂಬಗಳ ಮೇಲೆ ಆನಿಸಿದಂಥವು. ಅವುಗಳ ಮೇಲೆ ಜಾಳಿಗೆಯ ಕೆತ್ತನೆ ಗೆಲಸದ ಅಂದಿನ ಕಾಲಮಾನದ ತಲೆಜೋಡುಗೆಗಳಿದ್ದವು. ಆ ಮಹಲುಗಳ ಊರ್ಜಿತವಿದ್ದ ಎರಡು ಮೂರು ಕಮಾನುಗಳು ಪಕ್ಕದ ರೈತರ ತಮ್ಮ ಕರುಗಳಿಗೆ ಕೊಟ್ಟಿಗೆಗಳಾಗಿ ಬಳಕೆಗೆ ತಂದಂತೆ ಇತ್ತು. ನೆಲವು ಒಣಹುಲ್ಲಿಂದ ಹಾಸಿತ್ತು. ಆ ಹುಲ್ಲಿನಲ್ಲಿ ಆ ಎಳೆಯ ಜೀವಗಳು ಮಲಗಿದ್ದವು. ಕಂಬಗಳ ಮೇಲಿನ ನಾರ್ಮನ ಕಾಲದ ಕೆತ್ತನೆ ಗೆಲಸವನ್ನು ನೆಕ್ಕುತ್ತ ಆ ಹಸುಗಳು ತಮ್ಮ ನಾಲಿಗೆ ತಂಪು ಮಾಡಿಕೊಳ್ಳುತ್ತಿದ್ದವು. ಆ ಕೆತ್ತನೆಗೆಲಸವೂ ಅವುಗಳ ತೇವಿಗೆ ಲಕಲಕ ಮಿರುಗುತ್ತಿತ್ತು. ಆ ಕಲಾಕೃತಿಯು ಇಂಥ ಹುರಬುರುಕು ಮಾದರಿಯದಾಗಿದ್ದರೂ, ಈ ರೀತಿಯಲ್ಲಿ ಬಳಿಸಲ್ಪಡುವುದು ಆ ಕಲೆಯ ಅಧಃಪತ, ಅವಹೇಳನೆ ಎಂಬ ವಿಚಾರ ಅವಳಿಗೆ ಹೊಳೆಯಿತು. ಮತ್ತು ಮೊತ್ತ ಮೊದಲಿಗೆ ಫಿಟ್ಜ್‌ಪಿಯರ್ಸನ ಈ ಮಗ್ಗಲು ಅವಳ ಕಲ್ಪನೆಯಲ್ಲಿ ಖೇದರಮ್ಯ ಬಣ್ಣಗಳಿಂದ ಸಂಚಿತವಾಯಿತು.

ಅದೇ ಮನೋವ್ಯಗ್ರತೆಯಲ್ಲಿ ಮನೆಯ ಹಾದಿ ನಡೆದಳು. ವಿಜ್ಞಾನ ಮತ್ತು ರಸಶಾಸ್ತ್ರದಲ್ಲಿ ಅಷ್ಟು ಆಧುನಿಕವಾದ ಯುವಕ ಸರ್ಜನನು, ಇಷ್ಟು ಪ್ರಾಚೀನ ಅವಶೇಷಗಳೊಳಗಿಂದ ಹುಟ್ಟಿ ಬಂದದು ಅವಳು ಹಿಂದೆಂದೂ ಅನುಭವಿಸದ ಅಪೂರ್ವ ಸಂಗತಿಯಾಗಿತ್ತು. ಈ ಸಮನ್ವಯವು ಅವನಿಗೆ ಒಂದು ಸಾಮಾಜಿಕ ಮತ್ತು ಬೌದ್ಧಿಕ ಸ್ವಾರಸ್ಯವನ್ನು ಕೊಟ್ಟಿತು. ಈ ಸ್ವಾರಸ್ಯಕ್ಕೇ ಆಕೆ ಹೆದರಿದಳು. ಅವಳ ಹತ್ತಿರ ಬಂದಾಗೆಲ್ಲ ಅವನು ಬೀರುವ ವಿಚಿತ್ರ ಪ್ರಭಾವಕ್ಕೆ ಇದು ಹೊಸದೊಂದು ಬಿತ್ತರವನ್ನು ತರುವಂತಿತ್ತು.

ಹೀಗೆ, ಪ್ರೀತಿಯೂ ಅಲ್ಲದ, ಮಹದಾಕಾಂಕ್ಷೆಯೂ ಅಲ್ಲದ, ಏನೋ ಅನಾಹುತ ಗಾಳಿಯಲ್ಲಿದೆ ಎಂಬ ಭಯಾಕುಲ ಪ್ರಜ್ಞೆಯ ಒಂದು ಸಂಭ್ರಮದಲ್ಲಿ ಅವಳು ಫಿಟ್ಝಪಿಯರ್ಸನ ಬರವನ್ನು ಕಾಯುಹತ್ತಿದಳು.

ಅವಳ ತಂದೆಯೂ ಅವನ ಬಗ್ಗೆ ಕಾಯುತ್ತಿದ್ದನು. ಅವನ ಮನೆಯಲ್ಲಿ ವೈದ್ಯರ ಕುರಿತು ಒಂದು ಹಳೆಯ ಗ್ರಂಥವಿತ್ತು — ಹದಿನೆಂಟನೆ ಶತಮಾನದ ಕೊನೆಗೆ ಪ್ರಕಟಿಸಿದ್ದು. ಒದಗಿದ ವಿದ್ಯಮಾನಗಳೊಂದಿಗೆ ಸಾಮರಸ್ಯವನ್ನು ಹೊಂದಿಕೊಳ್ಳುವ ಹವ್ಯಾಸಕ್ಕೆ ಬಿದ್ದು, ಮೆಲಬರಿ, ದಿನದ ವ್ಯವಹಾರವೆಲ್ಲ ಮುಗಿದ ಮೇಲೆ, ಆ ಗ್ರಂಥವನ್ನು ಮಂಡಿಯ ಮೇಲೆ ತೆರೆದಿಟ್ಟು ಗೆಲನ್, ಹಿಪ್ಪೊಕ್ರೆಟಸ್, ಹೆರೊಫಿಲಸ್‌ರ ಕುರಿತು, ಚರಿತ್ರೆಯಲ್ಲಿ ತಲೆದೋರಿದ ಮದ್ದುಗಾರಿಕೆಯ ವಿವಿಧ ಪಂಥ ಪದ್ಧತಿಗಳ ಕುರಿತು ಓದಿಕೊಂಡನು. ಅಲ್ಲಿಂದ ಮುಂದೆ ರೋಗಗಳ ವರ್ಗೀಕರಣ. ವಿಪುಲ ರಕ್ತಸ್ರಾವದಿಂದ ಅವುಗಳ ಉಪಚಾರ, ಆ ಅಮೂಲ್ಯ ಗ್ರಂಥದಲ್ಲಿ ಅತ್ಯಂತ ಅಚ್ಚುಕಟ್ಟಿನಿಂದ ಬರೆದಿಟ್ಟದ್ದನ್ನೆಲ್ಲ ಆತ ಅಭ್ಯಸಿಸಿದನು. ಮೆಲಬರಿಗೆ ದುಃಖವೆಂದರೆ, ಆ ಗ್ರಂಥ ಬಹಳ ಹಳೆಯದು. ಆದರ ಫಲವಾಗಿ, ಫಿಟ್ಝಪಿಯರ್ಸನೊಂದಿಗೆ ತನ್ನ ಅಪೇಕ್ಷೆಗನುಸಾರವಾಗಿ ಆತ ಪರಿಪೂರ್ಣವಾಗಿ ಸಂಭಾಷಣ ನಡೆಯಿಸಲು ಸಮರ್ಥನಾಗ ಲಿಕ್ಕಿಲ್ಲವೆಂದು ಅವನಿಗೆ ಭಯ. ಫಿಟ್ಝಪಿಯರ್ಸ ಹೆಚ್ಚು ಆಧುನಿಕ ಶೋಧಗಳ ಪರಿಜ್ಞಾನದಿಂದ ಪ್ರಶ್ನೋತ್ತರಗಳಿಗೆ ಸಜ್ಜಾಗಿರಬಹುದು. ಅನುಮಾನವೇ ಇಲ್ಲ.

ಫಿಟ್ಝಪಿಯರ್ಸ ಮರಳುವ ದಿನ ಬಂದಿತು. ತಾನು ಕೂಡಲೆ ಭೆಟ್ಟಿಗೆ ಬರುವೆನೆಂದು ಆತ ಹೇಳಿಯೂ ಕಳುಹಿಸಿದನು. ಅವನು ಬರುವ ತನಕ ಮನೆಯನ್ನು ಅಚ್ಚುಕಟ್ಟು ಗೊಳಿಸಲಿಕ್ಕೆ ಸಿಕ್ಕ ಅಲ್ಪ ವೇಳೆಯಲ್ಲಿ ಮೆಲಬರಿಯ ನಡುಮನೆಯ ಉಡುಗುವಿಕೆ ಉಸಿರು ಕಟ್ಟುವ ಉಸಾಬರಿ ಆಯಿತು. ಸೂರ್ಯನ ಕಿರಣಗಳಲ್ಲಿ ಕಸದ ಕಣ ತೂರ್ಾಡಿದವು — ಕೋಣೆಯಲ್ಲಿ ಅಡ್ಡ ಚಾಚಿದ ಕಂಬಿಗಳಂತೆ ಕಾಣುತ್ತ. ಅದು ಮುಗಿದ ಮೇಲೆ ಮೆಲಬರಿಯ ಹೆಂಡತಿ ಕೂತುಬಿಟ್ಟಳು — ಕೈಗಳನ್ನೂ ತುಟಿಗಳನ್ನು ಮಡಚಿಕೊಂಡು. ಅವಳ ಗಂಡ ನಾಟು ಹೇರಿಟ್ಟ ಆವಾರದಿಂದ ಒಳಗೆ ಹೊರಗೆ ಅಸ್ವಸ್ಥತೆಯಿಂದ ತಿರುಗಾಡಿದನು — ಕೋಣೆಯ ಒಳಗೆ ದಿಟ್ಟಿಸಿ ನೋಡಿದನು. 'ಏ! ಏ!' ಎಂದು ಕೂಗಿದನು. ಮತ್ತೆ ಹಿಂದೆ ಅಂಗಳಕ್ಕೆ ಹೋದನು.

ನಾಲ್ಕು ಐದರ ನಡುವೆ ಫಿಟ್ಝಪಿಯರ್ಸ ಬಂದನು. ಬಾಗಿಲ ಹೊರಗೆ ನಿಲ್ಲಿಸಿದ ಕಂಬದ ಕೊಂಡಿಗೆ ಕುದುರೆಯನ್ನು ಕಟ್ಟಿಟ್ಟು ಒಳಗೆ ಬಂದನು. ಒಳಗೆ ಕಾಲಿಟ್ಟ ಕೂಡಲೆ ಅವನಿಗೆ ಹೊಳೆಯಿತು, — ಗ್ರೇಸಳು ನಡುಮನೆಯಲ್ಲಿ ಇದ್ದಿಲ್ಲ. ಅವನಿಗೆ ಅನುಮಾನ ಉಂಟಾಯಿತು, — ಆವೇಶದ ಹವ್ಯಾಸದಲ್ಲಿ ಅವನನ್ನು ಹಿಡಿದಿಡಲು ಅವಳ ಪ್ರತ್ಯಕ್ಷ ಸಾನ್ನಿಧ್ಯವಲ್ಲದೆ ಬೇರೆ ಏನೂ ಸಾಧ್ಯವಿಲ್ಲ. ಅದರದೆ ಕೊರತೆ ಇದ್ದಾಗ, ಆತ ತನ್ನ ಹೆಜ್ಜೆ ಹಿಂದೆಗೆದುಕೊಳ್ಳುವವನಂತೆ ಕಂಡನು.

ಮಲೆನಾಡಿನ ಮನೆಯೊಡತಿಯು ವಿಚಾರದ ಪಾತಳಿಗೆ ಸರಿಹೋಗುವಂತೆ ಎಂದು

ಕೊಂಡು ಆತ ಯಾಂತ್ರಿಕವಾಗಿ ಮಾತುಕತೆ ನಡೆಯಿಸಿದನು — ಮಹಡಿಯ ಮೆಟ್ಟಲುಗಳ ಮೇಲೆ ಸಳಸಳ ಸದ್ದಾಗುವ ತನಕ, ಗ್ರೇಸಳು ಒಳಗೆ ಬಂದಳು. ಒಮ್ಮೆ ಫಿಟ್ಜ್‌ಪಿಯರ್ಸ್ ಅವಳಷ್ಟೇ ಉದ್ರಿಕ್ತನಾದನು. ಅವನ ಎದೆಯಲ್ಲಿ ಅವಳು ಎಬ್ಬಿಸಿದ ನಿಜವಾದ ಭಾವನೆಯನ್ನು ಮಿಕ್ಕಿ ಮೀರಿ, ತಾನೊಂದು ಜೂಜಿನ ಡಾಳವನ್ನು ಆಕಸ್ಮಿಕ ಪ್ರೇರಣೆಯಿಂದಲೆ ಬಗೆಯುತ್ತಿದ್ದೇನೆ, ಹೊರತು ವಿವೇಕದ ನಿರ್ಣಯದಿಂದ ಅಲ್ಲ ಎಂಬ ಭಾವ ತೂಗುತ್ತಿತ್ತು.

ಆ ಕ್ಷಣಕ್ಕೆ ಮೆಲಬರಿ ಕೋಣೆಯಲ್ಲಿ ಇದ್ದಿಲ್ಲ. ಅಂಗಳದಲ್ಲಿ ಏನೋ ಕೆಲಸಕ್ಕೆ ಗಮನ ಕೊಡುವದಿದ್ದುದರಿಂದ, ಸಾಜೆಯ ಕೋಟನ್ನು ತೊಟ್ಟುಕೊಳ್ಳಲು ಡಾಕ್ಟರನು ಬರುವನಕ ವಿಲಂಬ ಮಾಡಿದನು. ಅವನನ್ನು ಸ್ವಾಗತಿಸಲು ಹಿಂದೆ ಬೀಳಬಾರದೆಂದು ಬಯಸಿ ಮೆಲಬರಿ ಕೋಟಿನ ಗುಂಡಿಗಳನ್ನು ಲಗುಬಗೆಯಿಂದ ಇಕ್ಕಿಕೊಳ್ಳುತ್ತ ಪ್ರವೇಶಿಸಿದನು. ತನ್ನ ಆಗಮನದಿಂದ ತಂದೆಯು ಒಳಪಡಬೇಕಾದ ಕ್ಲೇಶವು ಈ ಕೃತ್ಯದಿಂದ ಫಿಟ್ಜ್‌ಪಿಯರ್ಸನು ನೋಡಬೇಕಾಯಿತಲ್ಲ — ಎಂದು ಗ್ರೇಸಳ ನಾಜೂಕಿನ ಔಚಿತ್ಯಭಾವನೆ ತುಸು ಕುಗ್ಗಿದಂತೆ ಆಯಿತು; ಮತ್ತು ಅವಳ ಭಾವನೆ ಇನ್ನಿಷ್ಟು ಕೆಡಿಸಲಿಕ್ಕೆ, ಮುದಿ ಆಲಿವರಳಿಗೆ ಅದೇ ಹೊತ್ತಿಗೆ ಅಡುಗೆಯ ಮನೆಯಲ್ಲಿ ಜೋರು ಝೋರಾಗಿ ಪಂಪು ಒತ್ತುವ ಆವೇಶವೇರಿದಂತೆ ತೋರಿತು. ಕೋಣೆಯ ಬಾಗಿಲು ತೆರೆದಿದ್ದರಿಂದ, ನಡುಮನೆಯೊಳಗಿನ ಮಾತುಕತೆಯ ಮೇಲಿನಿಂದಲೂ ಅಲ್ಲಿಯ ಧಡ್‌ಧಡ್ ಸಪ್ಪಳ ಮತ್ತು ನೀರಿನ ಚೆಲ್ಲಾಟ ಸ್ಪಷ್ಟವಾಗಿಯೆ ಕೇಳಿಬರುತಿದ್ದವು.

ಚಹದ ಸಮಯ ಹರಟೆಯು ಒಂದು ಸುಖಕರವಾದ ಸ್ವೈರಮಟ್ಟಕ್ಕೆ ಇಳಿದಾಗೆಲ್ಲ ಮೆಲಬರಿ ತೀರದೂರದ ವಿಷಯಗಳ ಮೇಲೆ ಪರಿಶ್ರಮಪೂರ್ವಕವಾಗಿ ಖಚಿತಗೊಳಿಸಿದ ಭಾಷಣಗಳನ್ನು ಒಂದೊಂದಾಗಿ ಒಮ್ಮೆಲೆ ಬಿಗಿಯುತಿದ್ದನು. ಎಲ್ಲರ ಹೃದಯಕ್ಕೂ ತೀರ ಹತ್ತಿರದ ವಿಷಯದ ಮೇಲೆಯೆ ಫಿಟ್ಜ್‌ಪಿಯರ್ಸ ಸಮಾಲೋಚನೆ ಮಾಡುತ್ತ ಉಳಿಯಬಹುದೆಂದು ಆತ ಅಂಜಿದಂತೆ ಅನಿಸುತಿತ್ತು. ಮೆಲಬರಿಯ ಜೀವನದ ಅತ್ಯಂತ ಮಿಗಿಲಾದ ಹಿತಾಸಕ್ತಿಯು ಇಂದು ಸಾಫಲ್ಯದ ಶಿಖರಕ್ಕೆ ಮುಟ್ಟುತಿತ್ತು. ಆದ್ದರಿಂದ ನಿಜವಾಗಿಯೂ ಒಂದು ಒತ್ತಾಯದ ಹತ್ತಿಕ್ಕದಂಥ ರೀತಿಯು ಅವನಲ್ಲಿ ಕಂಡು ಬರುವುದು ಸ್ವಾಭಾವಿಕವಾಗಿತ್ತು. ಜಡಕ್ಕಿಂತ ಚೈತನ್ಯವೇ ಕಂಡು ಬರುವಂತಿದ್ದರೆ ಅವನು ಕೂತಿದ್ದ ಮೂಲೆ ತುಂಬಿ ಒಂದು ಚಿಂತಾಕ್ರಾಂತವಾದ ಅನಿಶ್ಚಿತತೆ ಕಣ್ಣು ಕೆಕ್ಕರಿಸಿ ಅವಡುಗಚ್ಚಿ ತುಟಿಪಿಟಿಕೆನ್ನದೆ ಪರಿಣಾಮವನ್ನು ಕಾಯುತ್ತ ಕುಳಿತ ಮಾದರಿಯ ಒಂದು ಆಕೃತಿ ಆಗಿರಬಹುದಾಗಿತ್ತು. ತಂದೆಯ ಅಷ್ಟೊಂದು ಉತ್ಕಟವಾದ ಆಶೆ ಆಕಾಂಕ್ಷೆಗಳು ಒಂದು ದೊಡ್ಡ ಕುಟುಂಬದಲ್ಲಿ ಹಂಚಿಹೋಗದೆ ಒಬ್ಬಳೆ ಮಗಳೊಂದಿಗೆ ಅಂಥ ವಿಶಿಷ್ಟ ಸನ್ನಿವೇಶದಲ್ಲಿ ಬದ್ಧವಾದ್ದುದು ಅವನ ಭವಿಷ್ಯದ ಸೌಖ್ಯಕ್ಕೆ ಗಂಡಾಂತರ ತಂದೊಡ್ಡುವಂತೆ ಇತ್ತು.

ಫಿಟ್ಜ್‌ಪಿಯರ್ಸ ಒಂದು ಗಂಟೆಗೂ ಹೆಚ್ಚು ಕಾಲ ಅಲ್ಲಿ ಉಳಿಯಲಿಲ್ಲ. ಆದರೆ,

ಆ ಕಾಲವು ಗ್ರೇಸಳ ಕುರಿತು ಅವನ ಭಾವನೆಗಳನ್ನು, ಕೊನೆಯದಾಗಿ ಅಸ್ಪಷ್ಟ ಹರಿದಾಟ ಒಂದು ಮೂರ್ತ ರೂಪಕ್ಕೆ ಬರುವಂತೆ, ಮುಂದುವರಿಸಿತ್ತು. ಆತ 'ಬಾ' ಎಂದಾಗ ಅವಳು ಅವನ ಜತೆಗೆ ಬಾಗಿಲ ತನಕವೂ ಹೋಗುತ್ತಿದ್ದಿಲ್ಲ. ಆದರೆ ಅವಳ ತಾಯಿಯು, 'ಹೌದು, ಗ್ರೇಸ್, ಫಿಟ್ಝಪಿಯರ್ಸರೊಂದಿಗೆ ಬಾಗಿಲತನಕ ಹೋಗು' ಎಂದು ವ್ಯಾವಹಾರಿಕ ರೀತಿಯಲ್ಲಿ ಹೇಳಿದಳು. ಅದಕ್ಕನುಸಾರವಾಗಿ ಗ್ರೇಸಳು ಹೋದಳು. ತಂದೆತಾಯಿಗಳಿಬ್ಬರೂ ಕೋಣೆಯಲ್ಲಿಯೆ ಉಳಿದರು.

ಆ ತರುಣಯುಗ್ಮವು ಹೊರಗೆ ಇಟ್ಟಿಗೆ ಹಾಸಿದ ದೊಡ್ಡ ಹಾಲಿನಲ್ಲಿ ಇದ್ದಾಗ ಆ ಪ್ರೇಮಿಕನು ಪ್ರೇಯಸಿಯ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಕಂಕುಳಿಗೆ ಎಳೆದು ಕೊಂಡನು. ಮತ್ತು ಅವಳನ್ನು ಮುಂಬಾಗಿಲಿನ ತನಕ ಒಯ್ದು ಅಲ್ಲಿ ಕಳ್ಳ ನಡೆಯಲ್ಲಿ ತನ್ನ ತುಟಿಗಳನ್ನು ಅವಳ ತುಟಿಗಳಿಗೆ ಇಟ್ಟನು.

ಅವಳು ನಡುಗುತ್ತ ನಾಚಿಕೆಂಪಾಗುತ್ತ ಅವನಿಂದ ಕೊಸರಿಕೊಂಡು ಬದಿಗೆ ತಿರುಗಿದಳು. ಪರಿಸ್ಥಿತಿ ಈ ಮಟ್ಟಕ್ಕೆ ಹೇಗೆ ಮುಂದುವರಿಯಿತೆಂಬುದೆ ಅವಳಿಗೆ ತಿಳಿಯಲಿಲ್ಲ. ಫಿಟ್ಝಪಿಯರ್ಸ ತನ್ನ ಕೈಯನ್ನು ಅವಳಿಗಾಗಿ ಮುತ್ತಿಡುವಂತೆ ತುಟಿಗೆ ಎತ್ತಿ, ಮೆಲಬರಿಯ ಕಡೆಗೆ ಕೈಬೀಸಿ,— ಆತ ಕಿಟಕಿಯೊಳಗಿಂದ ಕಣ್ಣಿಗೆ ಬಿದ್ದ — ಹೊರಟುಹೋದನು. ಅವಳ ತಂದೆಯು ಆ ಡಾಕ್ಟರನ ಕೃತಿಗೆ ತನ್ನ ಕೈಯನ್ನು ಲೋಕಾಭಿರಾಮವಾಗಿ ಬೀಸಾಡಿ ಸಂತುಷ್ಟ ನಗೆಯಿಂದ ಪ್ರತಿನಮಸ್ಕಾರ ಮಾಡಿದನು.

ವಾಡಿಕೆಯಂತೆ ತನ್ನ ಭೆಟ್ಟಿಯ ಸಮಯದಲ್ಲಿ ಫಿಟ್ಝಪಿಯರ್ಸ ಗ್ರೇಸಳ ಮಿದುಳಿನಲ್ಲಿ ಉಂಟುಮಾಡಿದ ಉನ್ಮಾದವು ಆತ ಹಿಂದಿರುಗಿ ಹೋದೊಡನೆ ಕೆಲಮಟ್ಟಿಗೆ ಇಳಿದು ಹೋಯಿತು. ಕಳೆದ ಒಂದು ಗಂಟೆ ಕಾಲ ತಾನು ಏನುಮಾಡಿದೆನೆಂಬುದು ಅರಿಯದ ಹೆಂಗಸಿನಂತೆ ಅವಳಿಗೆ ಅನಿಸಿತು. ಆದರೂ ಆ ಅಪರಾಹ್ನದ ಘಟನೆಗಳು ಅಸ್ಪಷ್ಟ ವಾಗಿದ್ದರೂ, ತನ್ನ ಮತ್ತು ಆ ಸುರೂಪಿ, ಬಲಾತ್ಕಾರಿ ಮತ್ತು ಅಪ್ರತಿಕಾರ್ಯ ಫಿಟ್ಝಪಿಯರ್ಸನ ನಡುವೆ ವಾಙ್ನಿಶ್ಚಯದ ಸ್ವರೂಪವನ್ನು ತಾಳಿದಂತಾಯಿತು — ಎಂದು ಅವಳು ಕಲ್ಪನೆ ಮಾಡಿಕೊಂಡಳು.

ಈ ಭೆಟ್ಟಿಯ ಮಾದರಿಯಲ್ಲಿಯೆ ಆ ವರ್ಷದ ಸುದೀರ್ಘ ಬೇಸಿಗೆಯಲ್ಲಿ ಇಂಥ ಅನೇಕ ಭೆಟ್ಟಿಗಳು ನಡೆದವು. ತರ್ಕ, ವಾದ, ಅನುನಯ ಮುಂತಾದವುಗಳ ಬಲಕ್ಕೆ ಕೆಲಸಲ ಅವಳದೇ ಒಲವುಗಳ ಒಂದು ಹಿರಿ ಹೊನಲಿನಲ್ಲಿ ಗ್ರೇಸ ತೇಲಿಹೋದಳು. ಯಾವ ಹೆಣ್ಣೂ ಆಶೋತ್ತರಗಳಿಲ್ಲದವಳಲ್ಲ. ಇನ್ನೂ ಆ ಆಶೋತ್ತರಗಳು ತಮ್ಮದೆ ಪರಿಮಿತಿಯೊಳಗೆ ಸಾಕಷ್ಟು ಮುಗ್ಧವಾಗಿ ಇರಬಹುದು. ಗ್ರೇಸಳಂತೂ ಸಾಮಾಜಿಕ ಸಂಸ್ಕಾರ, ಬೌದ್ಧಿಕ ಶಿಕ್ಷಣದಿಂದ ಇಷ್ಟು ಪಳಗಿದ್ದಳು. ಫಿಟ್ಝಪಿಯರ್ಸನಂಥ ಯುವಕನ ಹೆಂಡತಿಯ ಸ್ಥಾನದಲ್ಲಿ ಅವಳು ಸ್ಪಷ್ಟವಾಗಿ ಒಂದು ಸುಖವನ್ನು ಕಾಣುತಿದ್ದಳು. ಅವನ ಬೌದ್ಧಿಕ ಬದುಕಿನ ಮಟ್ಟವು ಅಂದಿನದಿರಲಿ, ಮುಂದಿನದಿರಲಿ; ಅವಳ ಆಶೋತ್ತರ ಗಳನ್ನು ಪೋಷಿಸುವಂತಹದೇನನ್ನೂ ಪಡೆದುಕೊಂಡಿದ್ದಲ್ಲ. ಆದರೆ ಒಂದು ಪರಿಷ್ಕೃತ

ಸುಸಂಸ್ಕೃತ ಆಂತರಂಗಿಕ ಜೀವನದ ಮತ್ತು ಸೂಕ್ಷ್ಮ ಮಾನಸಿಕ ಸಮಾಗಮದ ಶಕ್ಯತೆಯು ಮೋಹಕವಾಗಿತ್ತು. ಒಳ್ಳೆ ಮದುವೆ ಮಾಡಿಕೊಳ್ಳುವದಕ್ಕಿಂತ ಹೆಚ್ಚಾಗಿ ಈ ವಿಚಾರವೆ ಅವಳನ್ನು ಆ ಹೊನಲಿನಲ್ಲಿ ತೇಲಿಹೋಗುವಂತೆ ಮಾಡಿತು. ಫಿಟ್ಜಪಿಯರ್ಸ್ ಅವಳ ಸಹವಾಸದಲ್ಲಿ ಇದ್ದಾಗೆಲ್ಲ ಅವಳ ಮೇಲೆ ಬೀರುತಿದ್ದ ಮಿಗಿಲಾದ ಪ್ರಭಾವಕ್ಕೆ ಸೋಲುವಂತೆ ಮಾಡಿತು.

ಯಾವ ನಿರೀಕ್ಷಕನೂ ಚಾಣಾಕ್ಷತನದಿಂದ ಭವಿಷ್ಯವನ್ನು ಊಹಿಸಿ ಹೇಳಬಹುದಿತ್ತು — ಇದುವರೆಗೆ ಸಾಮಾನ್ಯ ಅರ್ಥದಲ್ಲಿ ಅವಳು ಅವನನ್ನು ಪ್ರೀತಿಸುತ್ತಿರಲಿ ಬಿಡಲಿ, ಕಾಲ ಹೋದಂತೆ ಅವಳು ಹಾಗೆ ಮಾಡುವದು ಖಂಡಿತ. ಒಂದು ಸಂಜೆ, ಮಬ್ಬುಗಪ್ಪಿಗಿಂತ ತುಸು ಮುಂಚೆ, ಅವರಿಬ್ಬರೂ ಉದ್ದ ತಿರುಗಾಟಕ್ಕೆ ಹೋಗಿದ್ದರು. ಮತ್ತು ಮನೆಗೆ ಹತ್ತಿರದ ಹಾದಿಯೆಂದು ಹಿಂಟಾಕ ದೊಡ್ಡಮನೆಯ ಸುತ್ತಲಿನ ಪೊದೆಗಳೊಳಗಿಂದ ಅಡ್ಡ ಹಾಯ್ದು ಸಾಗಹತ್ತಿದರು — ಆ ಮನೆ ಇನ್ನೂ ಖಾಲಿ ಇತ್ತು. ಸುತ್ತಲಿನ ಪರ್ಣರಾಜಿಯನ್ನು ಗುಡ್ಡದಿಳುಕಲುಗಳನ್ನು, ಕದವಿಕ್ಕಿದ ಕಿಟಕಿಗಳ ಕುರುಡು ಕಣ್ಣುಗಳು ಶೂನ್ಯವಾಗಿ ನೋಡುತಿದ್ದವು.

ಗ್ರೇಸಳು ದಣಿದಿದ್ದಳು. ಅವರು ಒಂದು ಗೋಡೆಯನ್ನು ಸಮೀಪಿಸಿದರು. ಮತ್ತು ಅದರ ಶಿಲೆಯ ಅಂಚುಪಟ್ಟಿಯ ಮೇಲೆ ಒಟ್ಟಾಗಿ ಕೂತರು — ಆ ಶಿಲೆ ಅಪರಾಹ್ನವೆಲ್ಲ ಬಿಸಿಲು ಹೊಯ್ದುಹೊಯ್ದು ಇನ್ನೂ ಬೆಚ್ಚಗಾಗಿತ್ತು.

'ಈ ಸ್ಥಳ ನಮಗೆ ಒಳ್ಳೆ ಸರಿಯಾಗಿದೆ ಅಲ್ವೆ ಚಿನ್ನಾ ?' ಅವಳ ವಾಗ್ದತ್ತ ವರ ನೆಂದನು — ಅಲ್ಲಿ ಕೂತು ಆಲಸಿಕೆಯಲ್ಲಿ ಹೊರಳಿ ಆ ಮನೆಯ ಹೊರಮುಖವನ್ನು ನೋಡುತ್ತ.

'ಓ ಸರಿ' ಅಂದಳು ಗ್ರೇಸ. ಅಂಥ ಒಂದು ಕಲ್ಪನೆ ತನಗೆ ಹೊಳೆಯಲೇ ಇಲ್ಲ ವೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತ. 'ಆಕೆ ಇನ್ನೂ ಮನೆಗೆ ಬಂದಿಲ್ಲ. ದೂರವೆ ಇದ್ದಾಳೆ' — ಒಂದು ನಿಮಿಷ ತಡೆದು ಗ್ರೇಸ ಮಾತು ಮುಂದರಿಸಿದಳು. ಆ ಮಾತಿ ನಲ್ಲಿ ತುಸು ಖಿನ್ನತೆ ಇತ್ತು. ಏಕೆಂದರೆ, ಈ ಕಂಜವನದ ಆ ಸಿರಿವಂತ ಮಹಿಳೆಯ ಬೆಲೆಯುಳ್ಳ ಗೆಳೆತನವನ್ನು ಅವಳು ಹೇಗೋ ಕಳೆದುಕೊಂಡಿದ್ದಳು.

'ಯಾರು ಇದಾ...?, ಓ ಮಿಸೆಸ್ ಚಾರ್ಮಂದ, ನೀನನ್ನೋದು. ನಿಂಗೆ ಗೊತ್ತೆ ಡಾರ್ಲಿಂಗ್, ಒಂದಾನೊಮ್ಮೆ ನೀನು ಇಲ್ಲಿ ವಾಸಿಸುತ್ತಿ ಎಂದು ನಾ ತಿಳಿದಿದ್ದೆ !'

'ನಿಜವೇ ?' ಗ್ರೇಸ ಅಂದಳು, 'ಅದು ಹೇಗೆ ?'

ಆತ ವಿವರಿಸಿದ. ಅವಳು ಅಲ್ಲಿ ವಾಸಿಸುತ್ತಿಲ್ಲ ಎಂಬುದನ್ನು ಕಂಡು ತನಗೆ ಅನಿಸಿದ ನಿರಾಶೆಯನ್ನು ಮಾತ್ರ ಆತ ಉಲ್ಲೇಖಿಸಲಿಲ್ಲ. ಮತ್ತು ಮುಂದರಿದನು, 'ಇರಲಿ, ಪರವಾಯಿಲ್ಲ. ಈಗ ನಿನಗೊಂದು ಪ್ರಶ್ನೆ ಕೇಳಬೇಕೆಂದಿದ್ದೇನೆ. ನಮ್ಮ ಮದುವೆಯ ಒಂದು ವಿವರ ಉಳಿದಿದೆ. ಅದನ್ನು ನೀನು ನನಗೇ ಬಿಟ್ಟುಕೊಡುವಿ ಎಂದು ನನಗೆ ಖಾತ್ರಿಯಿದೆ. ನನ್ನ ಒಲವೆಂದರೆ ಇಲ್ಲಿಯ ಆ ದರಿದ್ರ ಚರ್ಚಿನಲ್ಲಿ ನಾವು

ಮದುವೆ ಆಗುವುದೂ ಬೇಡ. ಆ ಹಳ್ಳಿಯ ಹೈದರೆಲ್ಲ ನಮ್ಮ ಸುತ್ತು ದುರು ದುರು ನೋಡುತ್ತ ನಿಲ್ಲೋದು, ಆ ಗೊಣಗುಡುವ ಪಾದ್ರಿ ಪಾಠ ಒಪ್ಪಿಸೋದು — ನನಗೆ ಇಷ್ಟವಿಲ್ಲ.'

'ಹಾಗಾದರೆ ಇನ್ನೆಲ್ಲಿ ಆಗಬೇಕು? ಪಟ್ಟಣದ ಒಂದು ಇಗರ್ಜಿಯಲ್ಲಿಯೇ?'

'ಇಲ್ಲ, ಚರ್ಚಿನಲ್ಲಿ ಅಲ್ಲವೇ ಅಲ್ಲ. ರಿಜಿಸ್ಟ್ರಿ ಆಫೀಸಿನಲ್ಲಿ. ಅದು ಹೆಚ್ಚು ಶಾಂತ, ಸುಟಿ ಮತ್ತು ಎಲ್ಲ ರೀತಿಯಿಂದಲೂ ಹೆಚ್ಚು ಅನುಕೂಲ.'

'ಓ', ಆಕೆ ನಿಜವಾದ ಉದ್ವಿಗ್ನತೆಯಲ್ಲಿ ಉದ್ಗರಿಸಿದಳು, 'ನನ್ನ ಎಲ್ಲ ಪ್ರಿಯ ಆಪ್ತೇಷ್ಟರು ಸುತ್ತಲಿದ್ದು ಈ ಚರ್ಚಿನಲ್ಲಿ ಅಲ್ಲದೆ ಇನ್ನು ಹೇಗೆ ನಾನು ಮದುವೆ ಆಗ ಬಲ್ಲೆ?'

'ಗೌಡ ವಿಂಟರಬೋರ್ನನೂ ಆ ಪ್ರಿಯಜನರಲ್ಲಿ ಬರುವನು!'

'ಹೌದು, ಯಾಕೆ ಬರಬಾರದು? ನಿಮಗೆ ಗೊತ್ತು ನಮ್ಮಿಬ್ಬರಲ್ಲಿ ಅಂಥ ಗಂಭೀರವಾದ ಯಾವ ಸಂಗತಿಯೂ ಇದ್ದಿಲ್ಲ.'

'ಇದನೋಡು, ಡಿಯರ್, ತುಂಬ ಗದ್ದಲದ ಗಂಟೆ ಮೊಳಗುವ ಚರ್ಚಿನ ಮದುವೆಗೆ ನಮ್ಮ ಮಟ್ಟಿಗೆ ಒಂದು ಆಕ್ಷೇಪವಿದೆ. ಅದು ಸುತ್ತಲೆಲ್ಲ ದೂರದವರೆಗೂ ಒಂದು ವರದಿಯ ಗಲಾಟೆಯ ವಿಷಯವಾಗುತ್ತದೆ. ಆದರೆ ನಾವು ಹಿಂಟಾಕ ಹಳ್ಳಿ ಯನ್ನು ಬಿಟ್ಟು ಇಲ್ಲಿಂದ ೨೦ ಮೈಲಿ ದೂರ ಬಡಮೌಥದಲ್ಲಿ ಪ್ರಾಕ್ಟೀಸ ಕೊಂಡು ಕೊಂಡರೆ ಅಂಥ ಪ್ರಸಿದ್ಧಿ ಹೇಗೆ ಪ್ರಶಸ್ತವಲ್ಲವೆಂಬುದನ್ನು ನಾನು ನಿನಗೆ ಸೌಮ್ಯವಾಗಿ ತಿಳಿಹೇಳುತ್ತೇನೆ. ನಾನು ಹಾಗೆಂದದ್ದಕ್ಕೆ ಕ್ಷಮಿಸು, ಆದರೆ ನೀನು ಎಲ್ಲಿಂದ ಬಂದವಳು ಎಂಬುದು ಅಥವಾ ನಿನ್ನ ತಂದೆ ತಾಯಿ ಯಾರೆಂಬುದು ಯಾರಿಗೂ ಗೊತ್ತಾಗದಿದ್ದರೆ ಅದು ಬಹಳ ಲೇಸು. ಅಂಥ ಹಿನ್ನೋಟದ ಟೀಕೆಯ ತೊಡಕು ನಿನ್ನನ್ನು ಕಾಡದಿದ್ದರೆ, ನಿನ್ನ ಸೌಂದರ್ಯ, ಜ್ಞಾನ ಮತ್ತು ಶಿಷ್ಟಾಚಾರ ಇವುಗಳು ನಿನ್ನನ್ನೂ ಎಲ್ಲಿಯೂ ಮುಂದೊಯ್ಯುವಂತಿವೆ.'

'ಆದರೆ ಈ ಚರ್ಚಿನಲ್ಲಾದರೂ ಒಂದು ಸದ್ದಿಲ್ಲದ ಶಾಂತ ಸಮಾರಂಭವು ಶಕ್ಯ ವಿಲ್ಲವೇ?' ಆಕೆ ಕಕುಲಾತಿಯಿಂದ ವಾದಿಸಿದಳು.

'ಅಲ್ಲಿ ಹೋಗುವ ಆಗತ್ಯವೇ ನನಗೆ ಕಾಣುವದಿಲ್ಲ', ಆತ ತುಸು ತಾಳ್ಮೆಗೆಟ್ಟೆ ಎಂದನು. 'ಮದುವೆ ಒಂದು ನಾಗರಿಕ ಕಾಯಿದೆಯ ಕರಾರುನಾಮೆ. ಅದನ್ನು ಸರಳಮಾಡಿದಷ್ಟು, ಸಂಕ್ಷೇಪ ಮಾಡಿದಷ್ಟು ಲೇಸು. ಮನೆ ಖರೀದಿ ಮಾಡುವಾಗ ಅಥವಾ ಮೃತ್ಯುಪತ್ರ ಬರೆದಿಡುವಾಗ ಮಂದಿ ಚರ್ಚಿಗೆ ಹೋಗುವದಿಲ್ಲ.'

'ಓ ಎಡ್ರೆಡ್, ನೀನು ಹೀಗೆ ಆಡುವದು ನನಗೇಕೊ ಸೇರುವದಿಲ್ಲ. ಹೇಗೋ ಹೇಗೋ ಎನಿಸುತ್ತದೆ!'

'ಸರಿ ಸರಿ. ನನ್ನ ಉದ್ದೇಶ ಅದರಲ್ಲಿಲ್ಲ. ಇದನ್ನು ನಿನ್ನ ತಂದೆಗೂ ತಿಳಿಸಿ ದ್ದೇನೆ. ಅವರು ಯಾವ ಆಕ್ಷೇಪವನ್ನೂ ಎತ್ತಲಿಲ್ಲ. ನೀನಾದರೂ ಏಕೆ ಎತ್ತಬೇಕು?

ಭಾವನೆ ಧೋರಣೆಗೆ ಈಡಾಗಬೇಕಾಗಿ ಬಂದ ಒಂದು ಅಂಶವನ್ನು ಅವಳು ಮನಗಂಡಳು, ಅಂದರೆ ಅವನ ಈ ಯೋಚನೆಯಲ್ಲಿ ಧೋರಣೆ ಎಂಬುದು ನಿಜ ವಾಗಿಯೂ ಇದ್ದರೆ. ಆದರೆ ಅವರು ಮನೆಯ ಕಡೆಗೆ ನಡೆದಾಗ ಅವಳು ಏನೆಂದು ಹೇಳಲಾಗದಷ್ಟು ಕುಗ್ಗಿ ಹೋಗಿದ್ದಳು.

೨೫

ಆತ ಅವಳನ್ನು ಅವಳ ತಂದೆಯ ಮನೆಯ ಬಾಗಿಲಲ್ಲಿ ಬಿಟ್ಟನು. ಅವನು ದೂರಸರಿ ದಂತೆ ನೆಳಲ ಪದರಗಳು ಅವನನ್ನು ಅವಚಿಕೊಂಡಂತೆ, ಗ್ರೇಸಳಿಗೆ ಮನದಟ್ಟಾಯಿತು — ಈ ಮನುಷ್ಯ ತನ್ನ ಅಸ್ತಿತ್ವಕ್ಕೆ ಸಂಬಂಧಪಟ್ಟವನೇ ಅಲ್ಲ. ತನಗಿಂತ ಚತುರ, ಮಿಗಿಲಾದವ, ಆತ ಅವಳ ಸರಿಕ, ರಕ್ಷಕ, ಸಲಿಗೆಯ ಪ್ರಿಯಸಖನೆಂಬುವದಕ್ಕಿಂತ ಅವಳನ್ನು ಆಳುವ ಶಾಸಕನಂತೆ ಅವಳಿಗೆ ಅನಿಸಿತು.

ಆ ಇಡೀ ರಾತ್ರೆ ಅವಳಿಗೆ ಏನೂ ನಿದ್ದೆ ಇದ್ದಿಲ್ಲ. ಅವನ ಅಪೇಕ್ಷೆಯಿಂದ ಆಕೆ ಅನುಭವಿಸಿದ ನಿರಾಶೆ, ಮದುವೆಯ ಕುರಿತು ಏನೂ ಆದರ ಭಾವವಿಲ್ಲದ ಅವನ ಅಭಿ ಪ್ರಾಯಗಳಿಂದ ಅವಳ ಕನ್ನೆ ಮನಸ್ಸಿನ ಸಂವೇದನೆಗಳಿಗೆ ಆದ ಆಘಾತ, ಜತೆಗೆ ತನ್ನ ಭವಿತವ್ಯವನ್ನು ಅವನ ವಶಕ್ಕೆ ಒಪ್ಪಿಸಲು ಬದ್ಧವಾದ ದಿವಸದ ನಿರ್ಧಾರವಾದ ನಿಕಟತೆ — ಇವೆಲ್ಲ ಅವಳನ್ನು ತೀರ ಅಸ್ವಸ್ಥಳಾಗಿ ಮಾಡಿದವು. ಮಾಡಿನ ಕನ್ನುಗಳೊಳಗಿಂದ ಗುಬ್ಬಿಗಳು ಹೊರಗೆ ಸರಿಯುತ್ತಿರುವಾಗಲೆ ಅವಳು ಎದ್ದಳು. ಆ ಮಬ್ಬು ಬೆಳಕಿನಲ್ಲಿ ಕೋಣೆಯ ನೆಲದ ಮೇಲೆಯೆ ಕುಳಿತಳು ಮತ್ತು ಕಿಟಕಿಯ ಪರದೆಗಳೊಳಗಿಂದ ಹೊರಗೆ ಇಣುಕಿದಳು.

ಆಗಲೂ ಹೊರಗೆ ಹಗಲಾಗಿತ್ತು. ಮುಂಜಾವಿನ ಛಾಯೆಗಳು ಇನ್ನೂ ದುರ್ಬಲ ಮಂದವಾಗಿದ್ದವು ನಿಜ. ಈ ನೆಳಲು ಕವಿದ ಕೊಳ್ಳದಲ್ಲಿ ಸೂರ್ಯನು ಕಾಣಿಸಿ ಕೊಳ್ಳುವನಕ ದೀರ್ಘ ವಿಲಂಬವಿತ್ತು. ಹೊರಮನೆಗಳಿಂದ ಇನ್ನೂ ಯಾವ ಸದ್ದು ಗಳೂ ಬರುತ್ತಿದ್ದಿಲ್ಲ. ಮರ ಕಾಂಡಗಳು, ರಸ್ತೆ, ಹೊರಗಿನ ಕಟ್ಟಡಗಳೂ, ಹೂದೋಟ, ಪ್ರತಿಯೊಂದು ವಸ್ತುವೂ ನಸುಕು ಹರಿಯುವ ಹೊತ್ತಿನ ಶಾಂತಿಯು ಕೊಡುವ ಮೋಹಮಾಟದ ಸ್ತಬ್ಧತೆಯನ್ನು ಕೊಟ್ಟಿತ್ತು. ಉತ್ಕಟ ಪ್ರಜ್ಞೆಯೊಂದಿಗೆ ಅಸಹಾಯ ನಿಶ್ಚಲತೆಯು ಬೆರೆತುಕೊಂಡಿತ್ತು ; ಚಿಂತನಶೀಲ ಜಡತೆಯು ಎಲ್ಲ ವಸ್ತು ಗಳನ್ನು ವ್ಯಾಪಿಸಿತು. ಅದು ಅವಳ ಸ್ವಂತದ ಸಕ್ರಿಯ ಭಾವನೆಗಳಿಗೆ ವಿಷಯ ವ್ಯತ್ಯಾಸದಲ್ಲಿ ತೋರಿ ಆಕೆಗೆ ಉಸಿರು ಕಟ್ಟಿಸುವಂತೆ ಮಾಡಿತು. ರಸ್ತೆಯ ಆಚೆಗೆ ಕೆಲವು ಗುಡಿಸಲ ಚಪ್ಪರಗಳೂ ಹಣ್ಣುತೋಟಗಳೂ ಇದ್ದವು. ಈ ಚಪ್ಪರಗಳ

ಆಚೆಗೆ, ಅವುಗಳ ಹಿಂದಿನ ಸೇಬಿನ ಮರಗಳ ಆಚೆಗೆ ಇಳುಕಲ ಏರಿಯುಗುಂಟ ಗುಡ್ಡದ ತುದಿಯ ತೋಪಿನ ಬೆನ್ನೆಲೆಯಲ್ಲಿ ಅವಳ ಭಾವೀ ಗಂಡನು ಇನ್ನೂ ವಾಸಿಸಿರುವ ಮನೆಯಿತ್ತು. ಅದರ ದೂರದೂರಗಾದ ಮುಂಭಾಗವು ಬಳ್ಳಿಗಳ ನಡುವಿನಿಂದ ಬೆಳ್ಳಗೆ ಕಾಣುತ್ತಿತ್ತು. ಅದರ ಕಿಟಕಿಯ ಕದಗಳು ಮುಚ್ಚಿದ್ದವು. ಮಲಗುವ ಕೋಣೆಯ ಪರದೆಗಳು ಹತ್ತಾಗಿ ಇಳಿಬಿಟ್ಟಿದ್ದವು. ಅದರ ಹೊಗೆಕಿಂಡಿಗಳೊಳಗಿಂದ ತೀರ ತೆಳುವಾದ ಹೊಗೆ ಸುರುಳಿಯೂ ಏಳುತ್ತಿರಲಿಲ್ಲ.

ಈ ಸ್ತಬ್ಧತೆಯನ್ನು ಏನೋ ಮುರಿಯಿತು. ಅವಳು ದಿಟ್ಟಿಸಿ ನೋಡುತ್ತಿರುವ ಮನೆಯ ಮುಂಬಾಗಿಲು ಮೆಲ್ಲನೆ ತೆರೆಯಿತು. ಮತ್ತು ಅದರ ಮೊಗಸಾಲೆಯಲ್ಲಿ ಒಂದು ಹೆಣ್ಣು ಆಕೃತಿ ಹೊರಬಂದಿತು. ಆಕೆ ದೊಡ್ಡ ನಿಲುವಂಗಿಯಲ್ಲಿ ಸುತ್ತಿದ್ದಳು, ಅದರ ಕೆಳಗಿಂದ ರಾತ್ರಿಯ ಅಂಗಿಯಂಥ ಒಂದು ಉದ್ದನ ಅಂಗಿಯ ಬಿಳಿಯ ಅಂಚು ಕಾಣಿಸುತ್ತಿತ್ತು. ಮೊಗಸಾಲೆಯ ಒಳಗಡೆಯಿಂದ ಹೊರಚಾಚಿದ ಒಂದು ನರೆಯ ತೋಳು ಅವಳ ಹೆಗಲ ಮೇಲೆ ನಿಲುವಂಗಿಯನ್ನು ಸರಿಪಡಿಸಿ ಹಿಂದೆಗೆದುಕೊಂಡು ಕಾಣದಾಯಿತು. ಬಾಗಿಲು ಅವಳ ಬೆನ್ನಿಗೆ ಇಕ್ಕಲಾಯಿತು.

ಆ ಹೆಣ್ಣು ಲಗುಬಗೆಯಿಂದ, ಪೊದೆಗಳ ಅಂಚಿನ ದಾರಿಯುಗುಂಟ ರೋಜಬರಿ ಮತ್ತು ಕರಂಟ ಹಣ್ಣಿನ ಗಿಡಗಳ ನಡುವಿನಿಂದ ನಡೆದಳು. ನಡೆಯುವಾಗ ಅವಳ ಒಳ್ಳೆ ಬೆಳೆದು ಪುಷ್ಟವಾದ ಮೈ ಮತ್ತು ನಡಿಗೆಯ ಮೋಡಿ ಅವಳು ಯಾರೆಂಬುದನ್ನು ಸೂಚಿಸದೆ ಇರಲಿಲ್ಲ. ಆಕೆ ಸೂಕೆ ದಾಮಸನ್‌ಸ, ರಳ ಸಾಧು ತಿಮತಾಂಗ್ಸನನ್ನು ವರಿಸಲಿರುವ ಪ್ರೇಯಸಿ. ತೋಟದ ತುದಿಗೆ ಅವಳು ಎತ್ತರದ ಬೇಲಿಯ ಆಶ್ರಯವನ್ನು ಸೇರಿದಳು. ಮತ್ತು ತನ್ನ ಮನೆಯ ಕಡೆಗೆ ಹೋಗುವಾಗ ಅವಳ ತಲೆ—ನೆತ್ತಿಯೊಂದೆ ಕಾಣಿಸುವಂತೆ ಇತ್ತು.

ಗ್ರೇಸಳು ಗುರುತು ಹಿಡಿದಳು, ಅಥವಾ ಹಿಡಿದೆನೆಂದು ತಿಳಿದಳು. ಮೊಗಸಾಲೆಯಿಂದ ಹೊರಚಾಚಿದ ನರೆತೋಳು ಫಿಟ್ಜ್‌ಪಿಯರ್ಸನ ಡ್ರೆಸಿಂಗ್‌ಗೌನಿನ ತೋಳಾಗಿತ್ತು. ಈ ಗೌನನ್ನೆ ಆತ, ಅವಳ ಸಂಸ್ಮರಣೀಯ ಭೆಟ್ಟಿಯ ಸಮಯ, ಧರಿಸಿದ್ದನು. ಅವಳ ಮೋರೆ ಕೆಂಪೇರಿ ಉರಿಯಿತು. ತುಸು ಮುಂಚೆ ಆಕೆ ಬಟ್ಟೆತೊಟ್ಟು ಮರಗಳ ನಡುವೆ ಒಂಟಿಯಾಗಿ ಅಡ್ಡಾಡಿ ಬರಬೇಕೆಂದು ಯೋಚಿಸಿದ್ದಳು. ಆ ನಸುಕಿನಲ್ಲಿ ಮರಗಳು ತಂಪು ತಂಪು ಹಚ್ಚಗಾಗಿದ್ದವು. ಆದರೆ ಈಗ ಅವಳು ಹಾಸಿಗೆಯಲ್ಲಿ ಕೂತು ವಿಚಾರ ತಂದ್ರೆಯಲ್ಲಿ ಬಿದ್ದಳು.

ಮನೆಮಂದಿ ಎಲ್ಲ ಎದ್ದು ಚುರುಕಾಗಿ ಸುಳಿದಾಡ ತೊಡಗಿದಾಗ ಅವಳಿಗೆ ಎಷ್ಟು ಹೊತ್ತು ಕಳೆಯಿತೆಂಬುದೂ ತೋಚಲಿಲ್ಲ. ಕೆಳಮನೆಯಲ್ಲಿ ಮುಂಜಾವಿನ ಉಪಾಹಾರ ಸಿದ್ಧವಾಗುತ್ತಿತ್ತು. ತನ್ನನ್ನು ಚೇತರಿಸಿಕೊಂಡು ಬಟ್ಟೆ ತೊಟ್ಟು ಕೆಳಗಿಳಿದು ಬರುವಾಗ, ಜಗತ್ತಿನ ದೈನಿಕ ಪ್ರಗತಿಯು, ಅವಳು ಕಿಟಕಿಯಿಂದ ಹೊರಗೆ ನೋಡಿದಾಗಿನಿಂದ ಮೂರುಗಂಟೆ ಕಳೆದಿದ್ದವೆಂಬುದನ್ನು ಸೂಚಿಸುತ್ತಿತ್ತು.

ಬಟ್ಟೆ ತೊಟ್ಟಾದ ಮೇಲೆ ಅವಳು ಮನೆಯಲ್ಲಿ ತಂದೆಗಾಗಿ ಹುಡುಕಾಡಿದಳು; ಕೊನೆಗೆ ಅವನನ್ನು ತೋಟದಲ್ಲಿ ಕಂಡಳು—ಬಟಾಟೆಯ ಸಸಿಗಳನ್ನು, ರೋಗದ ಕುರುಹುಗಳಿವೆಯೊ, ಎಂದು ಪರೀಕ್ಷಿಸುತ್ತಿದ್ದನು. ಅವಳ ಬಟ್ಟೆಯ ಸಪ್ಪಳ ಕೇಳಿ ಆತ ನಿಂತು ಬೆನ್ನು ತೋಳೂ ಚಾಚಿ ಅಂದನು, 'ಮಾರ್ನಿಂಗ್, ಗ್ರೇಸಿ, ನಿನಗೆ ಅಭಿನಂದನೆ. ಆ ಸಮಯಕ್ಕೆ ಇನ್ನು ಇಂದಿಗೆ ಒಂದೆ ತಿಂಗಳು.'

ಅವಳು ಉತ್ತರಕೊಡಲಿಲ್ಲ. ಆದರೆ ಬಟ್ಟೆಯನ್ನು ಎತ್ತಿಕೊಳ್ಳದೆ, ಇಬ್ಬನಿ ಮುದ್ದೆಯಾದ ಉದ್ದನ್ನ ಬಟಾಟೆಯ ಹಸಿರು ಗಿಡಗಳ ನಡುವಿನಿಂದ, ತಂದೆಯು ನಿಂತಲ್ಲಿ, ಆ ಅಗೆಗಳ ಮಧ್ಯದಲ್ಲಿ ನಡೆದು ಹೋದಳು.

'ಅಪ್ಪಾ, ಇಂದು ಮುಂಜಾನೆ, ನಸುಕು ಹರಿಯುವಾಗಿಂದ, ನನ್ನ ಸ್ಥಿತಿಯ ಕುರಿತು ಆಲೋಚಿಸುತ್ತಿದ್ದೇನೆ.' ಅವಳು ಉದ್ರಿಕ್ತಳಾಗಿಯೇ ಆರಂಭಿಸಿದಳು. ಅವಳ ಮೈಯೆಲ್ಲ ನಡುಗುತ್ತಿತ್ತು. ನಿಲ್ಲಲು ಆಗುತ್ತಿರಲಿಲ್ಲ. 'ಮತ್ತು ನನಗೆ ಅದು ಸುಳ್ಳು ಅವಸ್ಥೆಯೆಂದು ಅನಿಸುತ್ತದೆ. ಫಿಟ್ಜಪಿಯರ್ಸನನ್ನು ಮದುವೆಯಾಗಬಾರದೆಂದು ನನ್ನ ಇಚ್ಛೆ. ಆದರೂ ಮದುವೆ ಆಗಲೇಬೇಕೆಂದು ನೀನು ಅನ್ನುತ್ತಿದ್ದರೆ ಜೈಲ್ಸ ವಿಂಟರಬೋರ್ನನನ್ನೆ ಮದುವೆಯಾಗುವೆನು.'

ಅವಳ ತಂದೆಯ ಮೋರೆಯು ಮರಗಟ್ಟಿದಂತಾಯಿತು. ಆತ ಒಮ್ಮೆಲೆ ಕಳೆಗುಂದಿದನು. ಅವಳಿಗೆ ಉತ್ತರಕೊಡುವ ಮುಂಚೆ ಬುದ್ಧ್ಯಾ ಅಗೆಗಳ ನಡುವಿನಿಂದ ಹೊರಕ್ಕೆ ಬಂದನು. ಆತ ಇಷ್ಟು ಕೆರಳಿದ್ದು ಅವಳು ಎಂದೂ ಕಂಡಿದ್ದಿಲ್ಲ.

'ಇಕೋ ನನ್ನ ಮಾತುಗಳು ಕೇಳು,' ಆತ ಅಂದನು, 'ಹೆಣ್ಣಿಗೆ ತನ್ನ ಮನಸ್ಸನ್ನು ಬದಲಿಸಲು ಒಂದು ಸಮಯವಿದೆ. ಹಾಗೆಯೇ ಇನ್ನು ಬದಲಿಸ ಲಾರದಂಥ ಒಂದು ಸಮಯವೂ ಇದೆ—ಅವಳಿಗೆ ತನ್ನ ತಾಯ್ತಂದೆಗಳ ಮರ್ಯಾದೆ ಹಾಗೂ ತೋರಿಕೆಯ ರೀತಿನೀತಿಗಳ ಬಗ್ಗೆ ಸರಿಯಾದ ದೃಷ್ಟಿಯೆಂಬುದು ಏನಾದರೂ ಇದ್ದರೆ ಆ ಸಮಯ ಈಗ ಬಂದಿದೆ. ಅವನನ್ನು ನೀನು ಮದುವೆಯಾಗು ಎಂದೇನೂ ಹೇಳಲಾರೆ. ಆದರೆ ಇಷ್ಟೊಂದು ಹೇಳಬಲ್ಲೆ. ನೀನು ಈಗ ಒಲ್ಲೆಯೆಂದರೆ, ಮಗಳೆಂದು ನಿನ್ನ ಬಗೆಗೆ ನಾನು ಮುಂದೆ ಯಾವಾಗಲೂ ನಾಚಿಕೆಪಟ್ಟುಕೊಳ್ಳ ಬೇಕಾದೀತು, ಬೇಸರಪಟ್ಟುಕೊಳ್ಳಬೇಕಾದೀತು. ನನ್ನ ಬದುಕಿನ ಆಶೆಯೆಂದು ನಿನ್ನನ್ನು ಇನ್ನೆಂದಿಗೂ ನಾನು ಕಾಣುವಂತೆ ಇಲ್ಲ. ಬಾಳಿನ ಬಗೆಗೆ ನೀನೇನು ಬಲ್ಲೆ? ಅದು ಏನನ್ನು ತರಲಿದೆ, ಉತ್ತಮ ಗುರಿಗೆ ಮುಟ್ಟುವಂತೆ ನೀನು ಏನು ಮಾಡಬೇಕು—ನೀನೇನು ಬಲ್ಲೆ? ಓ, ನೀನೊಬ್ಬ ಕೃತಘ್ನ ಮಗಳು, ಗ್ರೇಸ, ನೀನು ಆ ಜೈಲ್ಸನನ್ನು ನೋಡಿರಬೇಕು. ಆತ ನಿನ್ನ ಮೇಲೆ ಪ್ರಭಾವ ಬೀರಿರಬೇಕು. ಅದೇ,—ಗುಟ್ಟು ಅಲ್ಲೇ ಇದೆ. ನಾನು ಆಣೆಹೊತ್ತು ಹೇಳಬಲ್ಲೆ!'

'ಇಲ್ಲ, ಅಪ್ಪಾ, ಇಲ್ಲ! ಜೈಲ್ಸ ಅಲ್ಲ—ಇದು ಬೇರೆಯೇ ಒಂದು—ನಿನಗೆ ಹೇಳಲಾರೆ ಅದನ್ನು—'

‘ ಸರಿ` ಸರಿ. ನಮ್ಮನ್ನೆಲ್ಲ ಪೆದ್ದರನ್ನಾಗಿ ಮಾಡಿಬಿಡು ; ನಗೆಗೀಡುಮಾಡು ; ಮಾತು ಮುರಿದೊಗೆದುಬಿಡು ; ನಿನಗೆ ಮನಬಂದಂತೆ ನಡೆ ! ’

‘ ಆದರೆ ನಮ್ಮ ಮದುವೆಯ ಮಾತು ಯಾರಿಗೆ ಗೊತ್ತಾಗಿದೆ? ಈ ವಾಗ್ದಾನ ಮುರಿದರೆ ನಿನಗೆ ಅವಮರ್ಯಾದೆ ಹೇಗೆ? ’

ಆಗ ಮೆಲಬರಿ ಮೆಲ್ಲಮೆಲ್ಲಗೆ ಒಪ್ಪಿಕೊಂಡನು. ಆತ ಈ ವಾಙ್ನಿಶ್ಚಯವನ್ನು ತನ್ನ ಪರಿಚಿತರಿಗೆಲ್ಲ ಆಡಿತೋರಿಸಿದ್ದನು ; ತನ್ನ ಆತುರ ಮತ್ತು ಹೆಮ್ಮೆಯಲ್ಲಿ ಆತ ಅದನ್ನು ಎಲ್ಲೆಡೆಯಲ್ಲಿ ಪ್ರಸಿದ್ಧಪಡಿಸಿದ್ದನು—ಎಂದು ಅವಳಿಗೆ ತಿಳಿದುಬಂದಿತು. ಅವಳು ತಬ್ಬಿಬ್ಬಾಗಿ ಕಂಗೆಟ್ಟು, ತೋಟದ ಮೇಲ್ತುದಿಯಲ್ಲಿ ಒಂದು ಲಾರೆಲ್ ಪೊದೆಗಳ ಕುಂಜದ ಕಡೆಗೆ ಹೋದಳು. ತಂದೆಯೂ ಅಲ್ಲಿ ಅವಳನ್ನು ಹಿಂಬಾಲಿಸಿದನು.

‘ ಇದು ಆ ಜೈಲ್ಸ ವಿಂಟರಬೋರ್ನನ ಆಟ ! ’ ಛೀ ಹಾಕುವ ಕಣ್ಣಿನಿಂದ ಆಕೆಯನ್ನು ದುರುದುರು ನೋಡುತ್ತ ಅವನು ಅಂದನು.

‘ ಇಲ್ಲ, ಅದಲ್ಲ. ಹಾಗೆ ನೋಡಿದರೆ, ನೀನೇ ಅವನನ್ನು ಒಮ್ಮೆ ಪ್ರೋತ್ಸಾಹಿಸಿದ್ದಿ !’ ಆಕೆ ಅಂದಳು. ಆಕೆ ಹತಾಶಳಾಗುವಷ್ಟು ಕ್ಲೇಶಗೊಂಡಿದ್ದಳು. ‘ ಇದು ಜೈಲ್ಸ ಅಲ್ಲ ಫಿಟ್ಝಪಿಯರ್ಸನ—’

‘ ಓ, ನಿಮ್ಮಿಬ್ಬರಲ್ಲಿ ಜಗಳವಾಗಿರಬೇಕು—ಏನೋ ಪ್ರೇಮಕಲಹ ; ಅಷ್ಟೇ ತಾನೆ ?’

‘ ಇದು ಒಬ್ಬ ಹೆಣ್ಣಿನ—’

‘ ಸರಿ, ಸರಿ. ನಿನಗೆ ಅಸೂಯೆ. ಇದೂ ಹಳೆಯ ಕಥೆ. ನನಗೆ ಹೇಳಲೇ ಬೇಡ. ನೀನು ಇಲ್ಲಿಯೆ ಕಾಯು. ನಾನು ಫಿಟ್ಝಪಿಯರ್ಸನನ್ನೆ ನಿನ್ನಲ್ಲಿಗೆ ಕಳುಹಿಸುತ್ತೇನೆ. ಆತ ತನ್ನ ಮನೆಯ ಮುಂದೆ ಚುಟ್ಟ ಸೇದುತಿದ್ದದ್ದು ಇದೀಗ ಒಂದು ಮಿನಿಟ್ ಹಿಂದೆ ಕಂಡೆ.’

ಅವನು ಹೊರಟೆ ಬಿಟ್ಟನು — ಲಗುಬಗೆಯಿಂದ ತೋಟದ ಗೇಟು ದಾಟಿ ಓಣಿಯ ಗುಂಟ. ಆದರೆ ಅವಳು ಅಲ್ಲಿ ನಿಂತೆಡೆಯಲ್ಲಿ ನಿಲ್ಲಲು ಒಪ್ಪಲಿಲ್ಲ. ತೋಟದ ಬೇಲಿಯೊಳಗಿನ ಒಂದು ಸೀಳಿನೊಳಗಿಂದ ನುಸುಳಿ ಅವಳು ಆಚೆಗೆ ಕಾನಿನಲ್ಲಿ ನಡೆದಳು.

ಆ ಕಡೆಗೆ ಮರಗಳು ದೊಡ್ಡವೂ ದೂರದೂರವೂ ಇದ್ದವು. ಕೆಳಗೆ ಕಂಟಿ ಬೆಳೆದಿದ್ದಿಲ್ಲ. ಆದ್ದರಿಂದ ದೂರದಿಂದಲೂ ಆಕೆಯನ್ನು ಕಾಣುವಂತಿತ್ತು — ವನದೇವಿಯಂತೆ ಬಿಳಿಹಸಿರಾಗಿ ಬನಸಿರಿಗೂ ಬಣ್ಣಗೂಡಿದ ಆಕೃತಿ. ಬೆನ್ನಿಗೇ ಒಣ ತರಗೆಲೆಗಳನ್ನು ಮೆಟ್ಟಿತುಳಿದ ಒಂದು ಹೆಜ್ಜೆಯ ಸದ್ದನ್ನು ಅವಳು ಕೇಳಿದಳು. ಕೂಡಲೆ ಹೊರಳಿದಾಗ ಫಿಟ್ಝಪಿಯರ್ಸನೆ ಅವಳನ್ನು ಪತ್ತೆ ಹಿಡಿಯಲು ಬಂದಂತೆ ಸುಳಿಯುವದನ್ನು ಕಂಡಳು. ಆತ ಸುತ್ತಲಿನ ಬೆಳಗಿನಂತೆಯೇ ಉಲ್ಲಾಸದಿಂದ ಹೊಸತಿನಿಂದ ಕಳಕಳಿಸುತಿದ್ದನು.

ದೂರದ ಅವನ ದೃಷ್ಟಿಯು ಹಿರಿಹಿಗ್ಗಿಗಿಂತ ಸೌಮ್ಯ ಆಸಕ್ತಿಯದಾಗಿ ತೋರಿತು.

ಆದರೆ ಆ ಸುತ್ತಲಿನ ಹಸಿರು ಲೋಕದಲ್ಲಿ ಅವಳು ಎಷ್ಟು ಕಮನೀಯವಾಗಿ ಕಂಡಳು. ಅವಳ ಗುಲಾಬಿ ಕೆನ್ನೆಗಳು, ಸಾದಾ ಬಿಳಿಯ ಬಟ್ಟೆ, ಚಲನವಲನದ ನವಿರಾದ ಭಂಗಿ ಇವೆಲ್ಲ ಆ ಕಾಡು ಬೆಡಗಿನ ಸನ್ನಿವೇಶದಲ್ಲಿ ಎಂಥ ಅಪೂರ್ವತೆಯನ್ನು ತಾಳಿದ್ದವು. ಹತ್ತಿರಕ್ಕೆ ಬರುತಿದಂತೆ ಅವನ ಕಣ್ಣುಗಳಲ್ಲಿ ಬೆಳಕು ಚಿಮ್ಮಿತು.

'ನನ್ನ ಮುದ್ದೇ, ಇದೇನು? ನೀನು ಗಲ್ಲ ಉಬ್ಬಿಸಿಕೊಂಡಿದ್ದಿ. ಅಸೂಯೆ ಪಟ್ಟಿದ್ದಿ ಎಂದೆಲ್ಲ ನಿನ್ನ ತಂದೆ ಅಂದರು. ಆದರೆ ನನಗೇನೂ ಗೊತ್ತಿಲ್ಲ. ಹ ಹ ಹ ನಿನಗೆ ಯಾರಾದರೂ ಇದಿರಾಳಿ ಇರುವದುಂಟೇ? ಇದ್ದರೆ ಈ ಸಸ್ಯ ಶ್ಯಾಮಲೆಯೇ— ಬನಸಿರಿಯೇ, ಈ ಏಕಾಂತಜೀವಿಗಳ ಆಸರದಲ್ಲಿ, ನಮಗೆ ಚೆನ್ನಾಗಿ ಗೊತ್ತು.'

'ಅಸೂಯೆ? ಓ ಇಲ್ಲ. ಹಾಗಿಲ್ಲವೇ ಇಲ್ಲ' ಅವಳು ಗಂಭೀರವಾಗಿಯೆ ನುಡಿದಳು, 'ಇದು ನಿಮ್ಮ ಮತ್ತು ಅವನ (ಅಪ್ಪನ) ತಪ್ಪು ತಿಳಿವಳಿಕೆ, ಸ್ವಾಮಿ. ನಿಮ್ಮೊಂದಿಗೆ ಮದುವೆಯಾಗುವ ಪ್ರಶ್ನೆಯು ಕುರಿತು ಅವನೊಂದಿಗೆ — ನಾನು ಮನಸ್ಥಿತಿಯನ್ನು ಸರಿಯಾಗಿ ಅರಿತುಕೊಳ್ಳಲಿಲ್ಲ.'

'ಆದರೆ ಅಂಥ ತಪ್ಪೇನೂ ಆಗಿಲ್ಲವಷ್ಟೇ?' ಅವಳನ್ನು ಕಿರಿಗಣ್ಣಿನಿಂದ ನೋಡುತ್ತ ಆತ ಕೇಳಿದನು. ಅವಳನ್ನು ಮುದ್ದಿಡಲು ಆತ ಬಾಗಿದನು.

ಅವಳು ಮುದುಡಿಕೊಂಡು ದೂರಸರಿದಳು. ಅವನು ಯೋಚಿಸಿದ ಮುತ್ತು ಗೊತ್ತುಗೆಟ್ಟಿತು.

'ಏನಿದು?' ಈ ಚಿಕ್ಕ ಸೋಲಿಗೆ ಆತ ಹೆಚ್ಚು ಗಂಭೀರನಾಗಿಯೆ ಅಂದನು.

ಅವಳು ಈ ಮಾತಿಗೂ ಹೆಚ್ಚು ಇನ್ನೇನೂ ಆಡಲಿಲ್ಲ. 'ಫಿಟ್ಜ್‌ಪಿಯರ್ಸ್, ನನ್ನ ಮುಂಜಾವಿನ ಉಪಾಹಾರ ಆಗಿಲ್ಲ. ನಾನು ಮನೆಯೊಳಗೆ ಹೋಗಬೇಕು.'

'ಬಾ' ಆತ ಆಗ್ರಹ ತೊಟ್ಟನು — ಅವಳ ಮೇಲೆ ನೆಟ್ಟ ದೃಷ್ಟಿಯಿಂದ ಮುಂದರಿದನು, 'ನೋಡು, ಒಮ್ಮೆಲೆ ಹೇಳಿಬಿಡು.'

ಅಲ್ಪಶಕ್ತಿಯ ವಿರುದ್ಧ ಮಹತ್‌ಶಕ್ತಿ ಹೂಡಿದಂತಿತ್ತು. ಆದರೆ ಅವಳ ಮೇಲೆ ಶಂಕೆ ಮಾಡಿದ್ದು ಅವನ ರೀತಿಯಲ್ಲ, ಸುಮ್ಮನಿರುವದರಿಂದ ಅನ್ಯಾಯವಾಗುವದೆಂಬ ಅವಳ ಸ್ವಂತದ ಅನಿಸಿಕೆಯೇ ಆಗಿತ್ತು.

'ನಾನು ಕಿಟಕಿಯಿಂದ ಹೊರಗೆ ನೋಡಿದೆನು,' ಅವಳು ಅನುಮಾನಿಸುತ್ತ ಅಂದಳು, 'ನಾನು ಆ ಮೇಲೆ ಹೇಳುತ್ತೇನೆ. ಈಗ ನಾನು ಒಳಗೆ ಹೋಗಬೇಕು. ನನ್ನ ಉಪಾಹಾರವಿನ್ನೂ ಆಗಿಲ್ಲ.'

ಒಂದು ಬಗೆಯ ಇಂಗಿತಜ್ಞತೆಯಿಂದ ಆತ ನೇರವಾಗಿ ಆ ಘಟನೆಗೇ ಮುಟ್ಟಿದನು. 'ನನ್ನದೂ ಆಗಿಲ್ಲ.' ಆತ ಲಘುವಾಗಿಯೇ ಅಂದನು, 'ನಿಜವಾಗಿಯೂ ನಾನಿಂದು ತಡಮಾಡಿ ಎದ್ದೆನು. ರಾತ್ರೆಗೆ, ಇಂದು ನಸುಕಿಗೇ ಎನ್ನಬಹುದು, ನನ್ನ ನಿದ್ದೆ ಹಾಳಾಯಿತು. ಹಳ್ಳಿಯ ಒಬ್ಬ ಹುಡುಗಿ, —ಅವಳ ಹೆಸರೇನೋ ಗೊತ್ತಿಲ್ಲ

ನನಗೆ — ನಸುಕಾಗುವಷ್ಟರಲ್ಲಿ ನಾಲ್ಕು ಐದರ ನಡುವೆ ಇರಬೇಕು, ನನ್ನ ಬಾಗಿಲಿಗೆ ಬಂದು ಗಂಟೆ ಬಾರಿಸಿದ್ದು ಯಾರೂ ಕೇಳಲಿಲ್ಲ. ಆಗ ಆಕೆ ನನ್ನ ಕಿಟಕಿಗೆ ಒಂದು ಹಿಡಿಮಳಲು ಒಗೆದಳು ; ಕೊನೆಗೂ ನಾನು ಕೇಳಿ, ಡ್ರೆಸಿಂಗ್‌ಗೌನು ಹಾಕಿಕೊಂಡು ಎದ್ದು ಕೆಳಗೆ ಬಂದೆ. ಆ ಬಡಪ್ರಾಣಿ ಪೂರ್ತಿ ಬಟ್ಟೆಯನ್ನು ತೊಡದೆ ಬಂದಿದ್ದಳು. ಕಂಬನಿಗೆರೆಯುತ—ಪೀಡೆಯನ್ನು ಕಿತ್ತಿಸಿಕೊಳ್ಳಲಿಕ್ಕೆ. ನಾನು ಅವಳ ತಲೆಯನ್ನೇ ಕಿತ್ತರೂ ಆಕೆ ಅದಕ್ಕೆ ಸಿದ್ಧ ! ಅವಳು ಕೆಳಗೆ ಕೂತಳು. ನಾನು ಎಳೆದೊಡನೆ ಆ ಹಲ್ಲು ಹೊರಗೆ ಬಂತು — ಅದು ಅಂದವಾದ ದವಡೆಯ ಹಲ್ಲಾಗಿತ್ತು. ಅದಕ್ಕೆ ಯಾವ ಕುಂದು ಕೊರತೆಯೂ ಇದ್ದಿಲ್ಲ. ಅದನ್ನು ಕರವಸ್ತ್ರದಲ್ಲಿ ಕಟ್ಟಿಕೊಂಡೇ ಅವಳು ಹೋಗಿಬಿಟ್ಟಳು. ತುಂಬ ತೃಪ್ತಿಪಟ್ಟು. ಆ ಹಲ್ಲು ಇನ್ನೂ ಅವಳಿಗೆ ಐವತ್ತು ವರ್ಷ ಚೆನ್ನಾಗಿ ಕೆಲಸ ಮಾಡುವಂತಿತ್ತು.'

ಇದೆಲ್ಲ ತೀರ ಸಂಭವನೀಯವಿತ್ತು ; ತೀರ ಪೂರ್ತಿ ವಿವರಿಸಿದ್ದಾಯಿತು. ಮಿಡಸಮರ ಯಾತ್ರೆಯಲ್ಲಿ ಹುಲ್ಲುಗಾವುಲಿನಲ್ಲಿ ಸ್ಥಾಪಿತವಾದ ಆ ಮೈಸಲಿಗೆಯ ಯಾವುದೇ ವಿದ್ಯಮಾನ ಗೊತ್ತಿಲ್ಲದ ಗ್ರೇಸಳಿಗೆ ತನ್ನ ಸಂಶಯಗಳೆಲ್ಲ ಅಯೋಗ್ಯ ಮತ್ತು ಅಸಮಂಜಸವೆನಿಸಿದವು. ಪ್ರಾಮಾಣಿಕ ಹೃದಯದ ಸರಲ ಸಿದ್ಧತೆಯಿಂದ ಆಕೆ ಅವನ ಮಾತನ್ನು ಮನ್ನಿಸಲು ದುಡುಕಿದಳು. ಅವಳ ಈ ಮಾನಸಿಕ ವಿಮೋಚನೆಯ ಕ್ಷಣಕ್ಕೆ ತೋಟದ ಸುತ್ತಲಿನ ಪೊದೆಗಳು ಅಲುಗಾಡಿದವು. ಮತ್ತು ಆ ನೆಳಲಿನ ಓರೆಯಲ್ಲಿ ಅವಳ ತಂದೆ ಕಾಣಿಸಿಕೊಂಡನು.

'ಏನು? ಒಡಂಬಡಿಕೆ ಆಯಿತೇ ?' ಆತ ಹರ್ಷದಿಂದ ಕೇಳಿದನು.

'ಓ, ಆಗದೇ ಮತ್ತೆ.' ಫಿಟ್ಝಪಿಯರ್ಸ ಅಂದನು, ಗ್ರೇಸಳ ಮೇಲೆಯೇ ನಟ್ಟ ದೃಷ್ಟಿಯಿಂದ. ಅವಳ ದೃಷ್ಟಿಯು ನಾಚಿ ಕೆಳಗಡೆ ಹೊರಳಿತು.

ಈಗ, ಅವಳ ತಂದೆ ಅಂದನು, 'ನೀವಿಬ್ಬರೂ ಜೋಡಿಯಾಗಿ ಹೇಳಿರಿ, ಕೊನೆಯದಾಗಿ ನಿರ್ಧಾರವಾಗಿ ನೀವು ಒಬ್ಬರನ್ನು ಒಬ್ಬರು ಸ್ವೀಕರಿಸುವಿರಾ ? ಈ ಮಾತಿನ ಆಧಾರದ ಮೇಲೆ ನಾನು ಇನ್ನೂ ಒಂದುನೂರು ಹೊನ್ನು ಚೆಲ್ಲುವೆನು. ದೇವರ ಆಣೆಯಾಗಿಯೂ.'

ಫಿಟ್ಝಪಿಯರ್ಸ ಅವಳ ಕೈಯನ್ನು ಹಿಡಿದುಕೊಂಡನು, 'ನಾವು ಅದೇ ನಿರ್ಧಾರವನ್ನು ಸಾರುತ್ತೇವೆ. ಅಲ್ವೆ ಗ್ರೇಸ ?', ಆತ ಅಂದನು.

ತನ್ನ ಸಂಶಯದ ಪರಿಹಾರವಾಗಿ, ತುಸು ದಮಿತಳೇ ಆಗಿ, ಸಂತೋಷಪಡಿಸಲು ಯಾವಾಗಲೂ ಸಿದ್ಧಳಿದ್ದ ಅವಳು ಈ ನಿರ್ಧಾರದ ಇತ್ಯರ್ಥಕ್ಕೆ ಅನುಕೂಲವಾದಳು. ಆದರೂ ಹೆಣ್ಣಿಗೆ ಒಪ್ಪುವಂತೆ ಅವಳು ಒಂದು ಬಗೆಯ ಸವಲತ್ತನ್ನು ಕೇಳಿಕೊಳ್ಳುವ ಸಂಧಿಯನ್ನು ಬಿಟ್ಟುಕೊಡಲಿಲ್ಲ. 'ನಮ್ಮ ಮದುವೆ ಚರ್ಚಿನಲ್ಲಿಯೆ ಆಗುವುದಾದರೆ ಒಪ್ಪುತ್ತೇನೆ.' ಅವಳು ದನಿಯನ್ನು ಹಿಡಿತದಲ್ಲಿಟ್ಟುಕೊಂಡು ನಿಧಾನವಾಗಿಯೆ ಹೇಳಿದಳು, 'ಇಲ್ಲವಾದರೆ, ಒಲ್ಲೆ.'

ಫಿಟ್ಜ್‌ಪಿಯರ್ಸ್‌ನ ಸರದಿಯಾಗಿತ್ತು, ಇನ್ನೂ ಉದಾರನಾಗುವುದು. 'ಹಾಗೆಯೇ ಆಗಲಿ.' ಆತ ಚೆಂದಗಾಣುವಂತೆ ನುಡಿದನು. 'ಪವಿತ್ರ ಚರ್ಚಿಗೆ ನಾವು ಹೋಗೋಣ —ಅದು ನಮಗೆ ಬಹಳ ಮಂಗಲ ಮಾಡಲಿ.'

ಅವರು ಪೊದೆಗಳೊಳಗಿಂದ ಮನೆಗೆ ಬಂದರು. ಅವರಿಬ್ಬರ ನಡುವೆ ಗ್ರೇಸ ತುಂಬ ವಿಚಾರವ್ಯಗ್ರಳಾಗಿ ನಡೆದಳು. ಅವಳು ಕೆಲಮಟ್ಟಿಗೆ ಸಂತುಷ್ಟಳಾಗಿದ್ದಳು — ಒಂದು, ಫಿಟ್ಜ್‌ಪಿಯರ್ಸ್‌ನ ಚತುರ ಸ್ಪಷ್ಟೀಕರಣದಿಂದ. ಇನ್ನೊಂದು, ತಾನು ಧಾರ್ಮಿಕ ವಿವಾಹವಿಧಿಯಿಂದ ವಂಚಿತಳಾಗಬೇಕಾಗಿಲ್ಲವೆಂಬ ಭಾವನೆಯಿಂದ. 'ಹಾಗೆಯೇ ಆಗಲಿ.' ಅವಳೂ ತನ್ನಷ್ಟಕ್ಕೆ ಅಂದುಕೊಂಡಳು, 'ದೇವರು ದಯೆ ಮಾಡಲಿ, ಆಗುವುದೆಲ್ಲ ಒಳಿತೆಗೇ ಆಗಲಿ.'

ಆ ಗಳಿಗೆಯಿಂದ ಅವಳ ಕಡೆಯಿಂದ ಇನ್ನು ಯಾವ ಗಂಭೀರ ವಿರೋಧವೂ ಒದಗಲಿಲ್ಲ. ಫಿಟ್ಜ್‌ಪಿಯರ್ಸ್ ಸತತವಾಗಿ ಅವಳ ಬಳಿಯಲ್ಲಿಯೆ ಉಳಿಯುತ್ತಿದ್ದನು. ಯಾವುದೆ ಬಂಡುಗಾರ ಪ್ರವೃತ್ತಿ ತಲೆದೋರಿದರೆ ಅದನ್ನು ಅಂಕೆಯಲ್ಲಿಡುತ್ತಿದ್ದನು. ತನ್ನ ಎಲ್ಲ ಅಪೇಕ್ಷೆ ಅಭಿಲಾಷೆಗಳಿಗೆ ಅವಳ ಇಚ್ಛೆಯನ್ನು ತೆಪ್ಪಗೆ ಒಗ್ಗುವಂತೆ ಮಣಿಸಿ ರೂಪುಗೊಳಿಸುತ್ತಿದ್ದನು. ಅವಳನ್ನು ವಶಪಡಿಸಿಟ್ಟುಕೊಳ್ಳುವ ಪ್ರಣಯಿಗೆ ಸಹಜವಾದ ಚಿಂತೆಯ ಹೊರತು, ಆ ಕಟ್ಟಿಗೆ ವ್ಯಾಪಾರಿಯ, ಕೈಗೆ ಸಿಗುವಂಥ, ಕೆಲ ನೂರು ಹೊನ್ನುಗಳು ಗ್ರೇಸಳ ಸುಂದರ ಮುಖಕ್ಕೆ ಬಣ್ಣದ ಹಿನ್ನೆಲೆಯಾಗಿದ್ದವು. ಅಲ್ಲವೆ ಮೆಲಬರಿಯಂಥ ಸರ್ವಸಾಮಾನ್ಯ ಗ್ರಾಮೀಣ ಮನೆತನನೊಂದಿಗೆ ಶರೀರಸಂಬಂಧ ಬೆಳೆಯಿಸುವುದರಿಂದ ಅವನ ವ್ಯಾವಸಾಯಿಕ ಮತ್ತು ಸಾಮಾಜಿಕ ಭವಿಷ್ಯಕ್ಕೆ ಸಂಭವಿಸ ಬಹುದಾದ ಸಂಕಟದ ಕಲ್ಪನೆಯಿಂದ ಹುಟ್ಟುವ ಅಸ್ವಸ್ಥತೆಯನ್ನು ಹೋಗಲಾಡಿಸಲೂ, ಆ ಹೊನ್ನು ತಕ್ಕ ಮಟ್ಟಿಗೆ ನೆರವಾಗಿತ್ತು.

ಈ ನಡುಗಾಲದ ಅಂತರಾಯವು ಅದರಿಂದ ಕಾಣಬಹುದಾದ ಬಾಳಿನ ಮುನ್ನೋಟವನ್ನು ಸದ್ದಿಲ್ಲದೆ ಗಟ್ಟಿಯಾಗಿ ಮುಚ್ಚಿತ್ತು. ಗ್ರೇಸಳಿಗೆ ಸಂಶಯ ವೇನಾದರೂ ಸುಳಿದಾಗ ಕಾಲಸಂಕೋಚದ ಭಾವನೆಯು ಕಿರಿಯಗಲಾಗುವ ಕೋಣೆ ಯಂತೆ ಅದಕ್ಕೆ ಸಂಕ್ಷೇಪ ಉಂಟುಮಾಡುತ್ತಿತ್ತು. ಮಿಕ್ಕ ಸಮಯವೆಲ್ಲ ಅವಳು ಹೆಚ್ಚು ಹುರುಪಿನಲ್ಲಿ ಇರುತ್ತಿದ್ದಳು.

ದಿನದ ಹಿಂದೆ ದಿನ ಬಂದವು ಹೋದವು. ವರ್ಷದ ಈ ನಿಷ್ಕ್ರಿಯ ಹಂಗಾಮಿನಲ್ಲಿ ಒಬ್ಬಿಬ್ಬರು ಮರಕಡಿಯುವ ಕೆಲಸಗಾರರು, ಕರಗಸ ಹಾಕಲಿಕ್ಕೆ, ಕೆತ್ತಿ ಸವರಿ ಆಕಾರ ಕೊಡಲಿಕ್ಕೆ, ಗೂಟಗಳನ್ನು ತಯಾರಿಸಲಿಕ್ಕೆ ಅವಳ ತಂದೆಯ ಮರಸಾಲೆಯಲ್ಲಿ ನಿಯಮ ದಂತೆ ಬಂದು ಮುಂಜಾನೆ ಬಾಗಿಲ ಬೀಗ ತೆಗೆಯುತ್ತಿದ್ದರು, ಸಂಜೆಗೆ ಹಾಕುತ್ತಿದ್ದರು. ಊಟ ಮುಗಿಸಿ ತೋಟದ ಗೇಟಿಗೆ ಆನಿಸಿ ಸಂಜೆಯ ತಂಗಾಳಿ ಸವಿಯಲಿಕ್ಕೆ ನಿಲ್ಲುತ್ತಿದ್ದರು. ಗಾಳಿಯೊಂದಿಗೆ ಬರಬಹುದಾದ ಹೊರ ಜಗತ್ತಿನ ಏನಾದರೊಂದು ದೂರದ ಸುದ್ದಿಯ ಕೊನೆಯುಸಿರಿನ ಸ್ಪಂದನಕ್ಕಾಗಿ ಕಾಯುತ್ತಿದ್ದರು. ಕೊಲ್ಲಿಯಲ್ಲಿ ಕಟ್ಟೆನಿಂತ ಕಡಲಿನ

ಅಂತರಾಳದ ಹಳ್ಳದಿಂದ ಅಥವಾ ಪೊಳ್ಳಿನಿಂದ ಎದ್ದು ತೆರೆಯು ತೇಲಿ ಬಂದು ಹಾಯ್ದು ಮೈಗರೆಯುವಂತೆ, ಹೊರಪ್ರಪಂಚದ ಯಾವುದಾದರೊಂದು ವಾರ್ತೆ — ವದಂತಿ ಕಿರಿ ಹಿಂಟಾಕಿನವರೆಗೆ ಬಂದು ಒಳಹೊಕ್ಕು ಉಸಿರುಗೆರೆಯುತ್ತಿತ್ತು. ಆದರೂ ಈ ಮರಗೆಲಸಗಾರರು ನೆರಮನೆಯ (ಮೆಲಬರಿಯ ಮನೆಯ) ಲಗ್ನಕಾರ್ಯಕ್ಕೆ ಆತಂಕ ಒಡ್ಡುವಂಥ ಯಾವ ಸುದ್ದಿಯೂ ಬರಲಿಲ್ಲ.

ಅವಳು ವಧುವಾಗುವ ಸಮಯ ತೀರ ಸಮೀಪಿಸಿತು. ಆ ಅವಧಿಯಲ್ಲಿ ಸೊನೆಯೇರುವ ಗಿಡಗಳ ಟಿಸಿಲತುದಿಗಳು ಸಾಕಷ್ಟು ತೊಗಟೆ ಮೈ ತುಂಬಿಕೊಳ್ಳಲಿಕ್ಕಿಲ್ಲ. ಅದರ ಹಂಗಾಮು ಅಷ್ಟು ಬೆಳೆಯಲಿಕ್ಕಿಲ್ಲ. ಚಿಗುರೆಲೆಗಳ ತಿಳಿಬಣ್ಣಗಳು ಬದಲಾಗಲಿಕ್ಕೂ ಇಲ್ಲ. ಪ್ರತಿಯೊಂದೂ ಎಂದಿನಂತೆ ದಿನನಿತ್ಯದಂತೆಯೇ ಇರುತ್ತಿದ್ದು, ಆಗಂತುಕನ್ಯಾರಾದರೂ ಭಾವಿಸುವಂತಿದ್ದಿಲ್ಲ — ಬೇಸಿಗೆಯ ಇಳಿಗಾಲದಲ್ಲಿ ಒಬ್ಬ ಹೆಣ್ಣಿನ ದೈವ ತಕ್ಕಡಿಯಲ್ಲಿ ಜೀಕಾಡುತ್ತಿದೆಯೆಂದು.

ಆದರೂ ಸಿದ್ಧತೆಗಳು ನಡೆದೇ ಇದ್ದವು. ವಿಶೇಷ ಗೊತ್ತಿದ್ದವರು ಅದನ್ನು ಊಹಿಸುವಂತೆ ಇತ್ತು. ದೂರದ ಎಕ್ಸಂಬರಿಯ ಹೊಸ ' ಫ್ಯಾಶನ್ 'ಗಳ ಪಟ್ಟಣದಲ್ಲಿ ಗ್ರೇಸಳನ್ನು ಎಂದೂ ನೋಡಿರದಿದ್ದ, ಮುಂದೆಯೂ ನೋಡಲಾರದ, ಅವಳ ಪರಿವೆಯೇ ಇಲ್ಲದ, ಹಲವು ಮಂದಿಯ ಕೈಗಳಲ್ಲಿ ರೂಪುಗೊಳ್ಳುತ್ತಿರುವ ವಿಶೇಷ ವೇಷವು ಅವಳ ಬಾಳಿನೊಂದಿಗೆ ಅತ್ಯಂತ ಸ್ವಾರಸ್ಯದ ಸಂಬಂಧವನ್ನು ಇಟ್ಟುಕೊಂಡಿತ್ತು. ಅವಳ ಹೃದಯವು ಹಿಂದೆಂದಿಗೂ ಅನುಭವಿಸದಂಥ ಭಾವನೆಯ ಆವೇಶದಿಂದಲ್ಲವಾದರೂ ಉದ್ರೇಕದ ಕಲ್ಲೋಲದಿಂದ ಮಿಡಿಯುವ ಕ್ಷಣಕ್ಕೇ ಆ ವಸ್ತುವು ಅದನ್ನು ಸುತ್ತಿ ಬಳಸಿಕೊಳ್ಳಲಿತ್ತು.

ಡಾಲರಿ ಅಮ್ಮನ ಗಾಡಿಯು ಶರ್ಟನ್ನಿನಿಂದ ಮರಳಿ ಬರುವಾಗ, ಹೆದ್ದಾರಿ ಹಿಡಿದು ನೇರವಾಗಿ ಅಬ್ಬಟ್ಸಸರ್ನಲ್ಲಿಗೆ ಹೋಗುವ ಬದಲು, ಆ ಒಂದು ಶನಿವಾರ ರಾತ್ರಿಗೆ, ಕಿರಿ ಹಿಂಟೋಕ್ ಓಣಿಯಲ್ಲಿ ಹೊಕ್ಕು ನಡುವೆ ಎಲ್ಲೂ ತಡೆಯದೆ, ಮೆಲಬರಿಯ ಅಗಸೆಯ ಮುಂದೇ ಏಕೆ ನಿಲ್ಲಬೇಕು ? ವಾಲಿದ ಗಾಡಿಯಿಂದ ತುಂಬ ಜಾಗ್ರತೆಯಿಂದ ಕೆಳಗಿಳಿಸುವಾಗ ಒಂದು ಗಜಕ್ಕೂ ಕಿರಿದಾದ ಅಗಲದ ಪೆಟ್ಟಿಗೆಯ ಮೇಲೆ ಸಂಜೆ ಬೆಳಕಿನ ಹೊಳಪು ಬಿದ್ದಿತು. ಆ ಪೆಟ್ಟಿಗೆ ಗಾತ್ರದಷ್ಟು ಭಾರವಾಗಿದ್ದಿಲ್ಲ. ಡಾಲರಿಯಮ್ಮನೆ ಅದನ್ನು ಹೊತ್ತು ಮನೆಯೊಳಗೆ ಒಯ್ದಳು. ತಿಮ್ಮತಾಂಗ್ಸ, ಕಾಟ್ರಿ, ಸೂಕೆ ಡಾಮಸಸ್ ಮತ್ತು ಉಳಿದವರೆಲ್ಲ ನೋಡುತ್ತ ನಿಂತರು. ಅವರಿಗೆಲ್ಲ ಗೊತ್ತು, ಆ ಪೆಟ್ಟಿಗೆ ಒಳಪ್ರವೇಶಮಾಡುತ್ತಿದ್ದಾಗ ಅವರು ತಮ್ಮ ತಮ್ಮೊಳಗೆ ಟೀಕೆ ಟಿಪ್ಪಣಿ ನಡೆಯಿಸಿದ್ದರು. ಮೆಲಬರಿ ಮರಸಾಲೆಯ ಬಾಗಿಲಲ್ಲಿ ನಿರ್ಲಕ್ಷ್ಯದ ಠೀವಿಯಲ್ಲಿ ನಿಂತಿದ್ದನು ; ಮನೆವಾರ್ತೆಯ ಇಂಥ ಒಂದು ಕ್ಷುದ್ರ ಸಂಗತಿಯು ಬರೋಣಕ್ಕೆಲ್ಲ ಆತ ಗಮನಕೊಡುವಂಥ ಮನುಷ್ಯನೇ ಅಲ್ಲ ಎಂಬಂತೆ. ಆದಾಗ್ಯೂ ಅವನಿಗೂ ಚೆನ್ನಾಗಿ ಗೊತ್ತು ಆ ಪೆಟ್ಟಿಗೆಯ ಇಂಗಿತ. ಮತ್ತು ಸತ್ಯಸಂಗತಿಯೆಂದರೆ, ಇದುವರೆಗಂತೂ

ಹೇಗೂ, ಯಾವುದೆ ಬಗೆಯ ನಿರಾಶೆಯ ಪ್ರಸಂಗ ನಡುವೆ ಬಂದಿಲ್ಲವೆಂಬುದಕ್ಕೆ ಆ ಪೆಟ್ಟಿಗೆಯೆ ಪ್ರಮಾಣವೆಂಬ ಸಂತೋಷದ ಉಬ್ಬರದಲ್ಲಿ ಆತ ಇದ್ದನು.

ಡಾಲರಿಯಮ್ಮ ಒಳಗೆ ಇರುವತನಕವೂ ಆತ ಹೊರಮನೆಯಲ್ಲಿಯೆ ಹೋಗಿ ಉಳಿದನು. ಆಕೆಯೂ ತನ್ನ ದೌತ್ಯದ ಮಹತ್ವಕ್ಕೆ ಅನುಗುಣವಾಗುವಷ್ಟು ದೀರ್ಘಕಾಲ ಅಲ್ಲಿ ಉಳಿದಳು. ಆದರೆ ಆಕೆ ಮಾತು ಮುಗಿಸಿ, ಹಣ ಪಡೆದು, ಗಾಡಿಯಟ್ಟಿಕೊಂಡು ಹೋದೊಡನೆ, ಅವನು ಮನೆಯನ್ನು ಪ್ರವೇಶಿಸಿದನು. ಮತ್ತು ನೋಡುವೆನೆಂದು ಭಾವಿಸಿದ್ದನ್ನೆ ನೋಡಿದನು — ಅವನ ಹೆಂಡತಿ ಮತ್ತು ಮಗಳು ವಧೂ ವೇಷದ ಬಗೆಗೆ ತುಂಬ ಹರ್ಷ ಸಂಭ್ರಮಗೊಂಡಿದ್ದರು. ಅದು ಹಿಂದೆ ಹೇಳಿದ ಎಕ್ಸಂಬರಿ ನಗರದ ಬಟ್ಟೆ ಹೊಲಿಗೆಗಾರರ ಕಡೆಯಿಂದ ಆಗ ತಾನೇ ಬಂದು ಇಳಿದಿತ್ತು.

ಈ ವಾರಗಳಲ್ಲಿ ಜೈಲ್ಸ ವಿಂಟರಬೋರ್ನ ಎಲ್ಲೆಲ್ಲೂ ಕಂಡುಬರಲಿಲ್ಲ, ಕೇಳಿ ಬರಲಿಲ್ಲ. ಹಿಂಟಾಕಿನಲ್ಲಿಯ ಅವನ ಬಾಡಿಗೆ ಕರಾರಿನ ಅವಧಿ ಮುಗಿದಾಗಲೆ ತನ್ನ ಕೆಲವು ಮನೆಯ ಸಾಮಾನು ಮಾರಿ, ಉಳಿದದ್ದನ್ನು ತನ್ನ ವೃತ್ತಿಗೆ ಅವಶ್ಯವಾದ ಅಥವಾ ಒಡನಾಟದಿಂದ ಪ್ರಿಯವಾದ ಕೆಲವು ಸಾಮಾನುಗಳನ್ನು ಕಟ್ಟಿ ನೆರೆಹೊರೆಯ ಗೆಳೆಯನೊಬ್ಬನಲ್ಲಿ ಇಟ್ಟು ಹೊರಟು ಹೋಗಿದ್ದನು. ಅವನ ಬದುಕಿನಲ್ಲಿಯೇ ಏನೋ ಸಡಿಲುಬಿದ್ದಂತೆ ಶೈಥಿಲ್ಯ ಉಂಟಾಗಿತ್ತೆಂದು ಮಂದಿ ಹೇಳುತ್ತಿದ್ದರು — ಇತ್ತೀಚೆಗೆ ಆತ ಚರ್ಚಿನ ಬಳಿಗೆಲ್ಲೂ ಹಾಯ್ದುದ್ದಿಲ್ಲ. ಮತ್ತು ರವಿವಾರದ ದಿನಗಳಲ್ಲಿ ಮರದಡಿಯಲ್ಲಿ ಪಾಲಿಶ್ ಮಾಡದ ಬೂಟುತೊಟ್ಟು ಮೊಣಕೈ ಆನಿಸಿ ಅಡ್ಡಬಿದ್ದು ಸುತ್ತಲಿನ ವಸ್ತುಗಳನ್ನು ಕಟುವಾದ ಖಿನ್ನದೃಷ್ಟಿಯಿಂದ ಅವಲೋಕಿಸುತ್ತಿದ್ದನು. ಸಿಡರ ಮದ್ಯದ ತಯಾರಿಕೆಯ ಹಂಗಾಮು ಸುರುವಾದಾಗ ಆತ ಹಿಂಟಾಕಿಗೆ ಹಿಂದಿರುಗಿ ಬರುವ ಸಂಭವವಿತ್ತು. ಆತ ಗಾಣ ಮತ್ತು ಚಕ್ಕಿಗಳನ್ನು ಹೊತ್ತುಕೊಂಡು ಹಳ್ಳಿಯಿಂದ ಹಳ್ಳಿಗೆ ಅಲೆದಾಡುವವನಿದ್ದನು.

ಮದುವೆಯ ದಿನಕ್ಕೆ ಮುಂಚೆ ಇರುವ ಅವಧಿಯು ಇನ್ನಷ್ಟು ಕಿರಿದಾಯಿತು. ಕೆಲಸಲ ಗ್ರೇಸಳ ಮನಸ್ಸಿನಲ್ಲಿ ಒಂದು ಮುಂಬಯಕೆಯ ಸಮಾಧಾನವಿರುತ್ತಿತ್ತು — ತಾನು ಒಂದು ತಾಸಿನ ವಂಟ್ಟಿಗಾದರೂ ನಾಯಿಕೆ ಆಗಲಿರುವೆನೆಂಬುದೆ ಆ ಸಮಾಧಾನ. ಅಲ್ಲದೆ ಸುಸಂಸ್ಕೃತ ಹೆಣ್ಣಾದ ತಾನು ಒಬ್ಬ ಸುಸಂಸ್ಕೃತ ಗಂಡನ ಹೆಂಡತಿ ಆಗಲಿರುವೆನೆಂಬ ಹೆಮ್ಮೆಯೂ ಅವಳಿಗಿತ್ತು. ಇಂಥ ಒಂದು ಸಂಧಿಯು ಅವಳ ಸ್ಥಾನದಲ್ಲಿ ಇರುವ ತರುಣಿಯರ—ಇತ್ತೀಚೆಗೆ ಅವರ ಸಂಖ್ಯೆ ಏನು ಕಡಿಮೆ ಇದ್ದಿಲ್ಲ— ಪಾಲಿಗೆ ಬಹುಶಃ ಬರುತ್ತಿದ್ದಿಲ್ಲ. ಇಂಥ ತರುಣಿಯರಲ್ಲಿ ಶಿಕ್ಷಣದ ಬೆಲೆಯರಿತ ತಾಯ್ತಂದೆಗಳು ಅಭಿರುಚಿಗಳನ್ನೇನೋ ನಟ್ಟಿದ್ದರೂ ಅವುಗಳನ್ನು ತೃಪ್ತಿ ಪಡಿಸಲು ಆ ಪಾಲಕವರ್ಗಗಳು ತಪ್ಪುತ್ತಿದ್ದವು. ಆದರೆ ಅವಳ ನವಯೌವನದ ಕನಸಿನ ಎಂಥ ಕೀಳ್ದೆಸೆಯಾಗಿತ್ತು ಅವಳ ಈ ಒಣ ಹೆಮ್ಮೆ! ಆ ಕನಸಿನಲ್ಲಿ ಅವಳು ತನ್ನದೇ ಭಾವಾವೇಶದ ರಾಜ ರೀವಿಯಲ್ಲಿ ನಡೆಯುವೆನೆಂದು ತನ್ನನ್ನು ಚಿತ್ರಿಸಿಕೊಂಡಿದ್ದಳು. ಆ

ವಿವಾಹ ಬಂಧನದ ಮುದ್ರಾಂಕಿತದಲ್ಲಿ ಅವಳಿಗೆ ಸಂಶಯ ಲವಲೇಶವೂ ಇದ್ದಿಲ್ಲ. ಮತ್ತು ತನಗೆ ಸಲ್ಲತಕ್ಕ ಕಾಣಿಕೆಯೆಂದು —

'ಸಾವಿರ ಎದೆಗಳ ವಂದನೆ'

'ಒಲುಮೆಯ ಆಳದ ಎದೆ ವಂದನೆ' ಕವಿ ಥಾಮಸ್ ಚಾಟರ್‌ಟನ್ ಅಂದಂತೆ ಸ್ವೀಕರಿಸುವೆನು, ಎಂದೆಲ್ಲ ಆವಳು ಕನಸು ಕಂಡಿದ್ದಳು.

ಆಗ ಕಲ್ಪನಾಲೋಕದಲ್ಲಿ ಎಲ್ಲವೂ ನಿಚ್ಚಳವಾಗಿದ್ದು ಸುಸ್ಪಷ್ಟವಾಗಿತ್ತು. ಆದರೆ ಈಗ ಏನೋ ಒಂದು ಅನಿರ್ದಿಷ್ಟವಾಗಿ ಉಳಿದಿವೆ. ಅವಳಿಗೆ ಎದೆ ಕೊರೆಯುವಂಥ ಚಿಂತೆಗಳು ಏನೂ ಇದ್ದಿಲ್ಲ; ಯಾವದೋ ವಿಚಿತ್ರ ದೈವಸಂಕೇತ ಅವಳನ್ನು ಆಳುವಂತೆ ತೋರಿತು. ಮತ್ತು ವಿಶ್ವಾಸದಿಂದ ಅಂತರಂಗವನ್ನು ತೋಡಿಕೊಳ್ಳಲು ಯಾರಾದರೂ ಒಬ್ಬರು ಬೇಕೆಂಬ ಕೊರಗಿನ ಕೊರತೆಯನ್ನು ಅವಳು ಅನುಭವಿಸಿದಳು.

ಮದುವೆಯ ದಿನವು ತೀರ ಸನಿಯ, ತೀರ ದೊಡ್ಡದಾಗಿ ಕಂಡಿತು. ಅವಳ ಶಕುನ ಕೇಳುವ ಕಿವಿಗಳು ಕಲ್ಪನೆಯಲ್ಲಿ ಅದರ ಗದ್ದಲವನ್ನು ಕೇಳುವಂತಿತ್ತು. ಅವಳು ಚರ್ಚಿನಿಂದ ಹೊರಗೆ ಬರುವಾಗ ಹಳ್ಳಿಯ ಜನರ ಪಿಸುಪಿಸು ಸದ್ದು ಆಲಿಸುವಂತೆ ಅನಿಸಿತು. ಹಿಂಟಾಕಿನ ಸೂಕ್ಷ್ಮ ಶ್ರುತಿಯ ಮೂರು ಗಂಟೆಗಳು ಕಿಂಕಿಣಿಸಿದಂತೆ ಭಾಸವಾಯಿತು. ಸಂವಾದಗಳ ದನಿಗಳು ದೊಡ್ಡದಾಗಹತ್ತಿದವು. ಮತ್ತು ಆ ಹುಚ್ಚಾಪಟ್ಟೆ ಬಾರಿಸುವ ಗಂಟೆಗಳ ಡಿಂಗ-ಡಿಂಗ-ಡಿಂಗ ನಾದವು ಇನ್ನೂ ಎಡೆಬಿಡದೆ ಬಡಿಯ ತೊಡಗಿತು.

ಅವಳು ಎಚ್ಚೆತ್ತಳು. ಹಗಲು ಮೂಡಿತ್ತು.

ಐದು ಗಂಟೆಗಳ ನಂತರ ಅವಳು ಫಿಟ್ಝಪಿಯರ್ಸನ ಮಡದಿ ಆದಳು.

೨೬

ಶೆರ್ಟನ ಅಬ್ಬಾಸದಲ್ಲಿಯ ಮುಖ್ಯ ಹೋಟೆಲು 'ಅರ್ಲಆಫವೆಸೆಕ್ಸ'. ಹ್ಯಾಮ ಹಿಲ್ ಕಲ್ಲಿನ ಭದ್ರ ಕಟ್ಟಡ, ಅದರ ಹಿಂಬದಿಗೆ ಒಂದು ತೆರೆದ ಆವಾರವಿದ್ದ ಅಂಗಳವಿತ್ತು. ಅದರಲ್ಲಿ ಸಾರೋಟು ಗಾಡಿಗಳನ್ನು ಪ್ರಶಸ್ತವಾದ ಆಶ್ರಯಕ್ಕಾಗಿ ಗಾಡಿಯವರು ತಂದಿಡುತ್ತಿದ್ದರು. ಬೀದಿಯ ಕಡೆಯ ಕಿಟಕಿಗಳಿಗೆ ಉದ್ದನ್ನ ಸರಳುಗಳಿದ್ದವು. ಅವುಗಳೊಳಗಿಂದ ಬೆಳಕು ಕಿರಿಯಗಲಾದ ಪಟ್ಟಿಗಳಲ್ಲಿ ತೂರಿಬರುತ್ತಿತ್ತು. ಆದ್ದರಿಂದಲೇ ಇರಬಹುದು, ಆ ಹೋಟೆಲಿನ ಉತ್ತಮ ಮತ್ತು ಸುಖಸೌಕರ್ಯದ ಖಾಸಗೀ ಕೋಣೆಗಳು ಪಕ್ಕದ ಭಾಗಗಳಲ್ಲಿ ಇದ್ದವು. ಅಲ್ಲಿಂದ ಹೊರಗೆ ಪಟಾಂಗಣದ ಆಚೆಗೆ ಹೂದೋಟಗಳೂ ಹಣ್ಣುಗಳ ನೇರಲ ಮತ್ತು ಹೊಂಬಣ್ಣದ ಮುಕುಟಗಳನ್ನು ಹೊತ್ತು ಬಾಗಾಯತ

ಗಳೂ ಲ್ಯಾವೆಂಡರ (ತಿಳಿನೀಲಿ ನಸುಗೆಂಪು) ಬಣ್ಣದ ಮಂಜಿನ ಮಬ್ಬಿನಲ್ಲಿ ತಡೆ ಇಲ್ಲದ ದೂರದಿಗಂತದವರೆಗೂ ಚಾಚಿದ್ದನ್ನು ನೋಡಬಹುದಿತ್ತು. ಸಮಯವು ಶರತ್‌ಕಾಲದ ಆರಂಭ

ಸಂಜೆಗೆಂಪಿನ ಬಾನ ಬಣ್ಣ ತಳೆದಿಹ ಚೆನ್ನ
ಸೇಬು ಹಣ್ಣೆರಗಿಸಿದೆ ಮರವ ಧರೆಗೆ
ಪಿಯರ ಹಣ್ಣು ರಸಾಳ, ಕಪ್ಪುಕಂಟೆಯ ಕವಳ
ಕುಣಿದಾಡೆ ಹವೆಯಲ್ಲಿ ಕಣ್ಣಕರೆಗೆ

ಈ ಪಂಕ್ತಿಗಳನ್ನು ಬರೆದ 'ಸೋಜಿಗದ ಹುಡುಗ' ಆ ಕವಿ ಚಾಟರ್‌ಟನ್ ಇದೇ ಸೀಮೆ ಯನ್ನು ನೆನೆಯುತ್ತಿದ್ದಿರಬೇಕು. ಕಿಟಕಿಯನ್ನು ಇದುರಿಸಿದ ನೆಲ — ನೋಟವು ಅದರ ಭಾಗವಾಗಿತ್ತು.

ಈ ಕೋಣೆಯಲ್ಲಿ ಮೆಲಬರಿಯ ಗ್ರೇಸಳು ಕುಳಿತಿದ್ದಳು. ಅವಳನ್ನು ದೈವದ ಕೈಯುಮುಟ್ಟಿ ಹೆಂಡತಿಯಾಗಿ ಮಾರ್ಪಡಿಸುವನಕವೂ ಅವಳು ಮೆಲಬರಿಯ ಕನ್ಯೆ ಗ್ರೇಸ ಆಗಿದ್ದಳು. ಈಗ ಮದುವೆ ಮುಗಿದು ಎರಡು ತಿಂಗಳಾಗಿತ್ತು. ಕೋಣೆಯಲ್ಲಿ ಗ್ರೇಸಳು ಒಂಟಿಯಾಗಿದ್ದಳು. ಅಲ್ಲಿಯ ಕ್ರೈಸ್ತ ಸನ್ಯಾಸಿಗಳ ಮಠವನ್ನು ಸೂರ್ಯಾಸ್ತದ ಬೆಳಕಿನಲ್ಲಿ ನೋಡಲಿಕ್ಕೆಂದು ಫಿಟ್ಜಪಿಯರ್ಸ ಹೊರಗೆ ಹೋಗಿದ್ದನು. ಆಕೆ ಅವನ ಜತೆಗೆ ಹೋಗಲಾರದಷ್ಟು ದಣಿದಿದ್ದಳು. ಸುದೀರ್ಘವಾದ ಎಂಟು ವಾರಗಳ ಸಂಚಾರದ ಕೊನೆಯ ಹಂತವನ್ನು ಅವರು ತಲುಪಿದ್ದರು. ಅದೇ ರಾತ್ರೆ ಅವರು ಕಿರಿಯ ಹಿಂಟಾಕಿಗೆ ತೆರಳುವವರಿದ್ದರು.

ಹೋಟೆಲಿನ ಆವಾರದಲ್ಲಿ ಹಣ್ಣುತೋಪುಗಳ ಮತ್ತು ಗ್ರೇಸಳ ನಡುವಿನ ಆ ಪಟಾಂಗಣದಲ್ಲಿ, ವರ್ಷದ ಆ ಹಂಗಾಮಿಗೆ ಸ್ವಾಭಾವಿಕವಾದಂಥ ಒಂದು ದೃಶ್ಯವೇ ನಡೆಯುತ್ತಿತ್ತು. ಅಲ್ಲಿ ಒಂದು ಸ್ಥಳದಲ್ಲಿ ಸೇಬಿನ ಗಾಣಯಂತ್ರವನ್ನು ನಿಲ್ಲಿಸಲಾಗಿತ್ತು. ಅಲ್ಲಿಗೆ ಬೇರೆ ಬೇರೆ ನಿಟ್ಟಿನಿಂದ ಮಂದಿ ಬುಟ್ಟಿಗಳಲ್ಲಿ ತುಂಬಿ ಸೇಬುಹಣ್ಣುಗಳನ್ನು ತರುತ್ತಿದ್ದರು. ಇತರರು ಅವನ್ನು ಬೀಸುತ್ತಿದ್ದರು. ಇನ್ನಿತರರು ಅವನ್ನು ಹಿಂಡಿ ಒಗೆಯುತ್ತಿದ್ದರು. ಅದರ ಸವಿಯಾದ ರಸವು ಮರದ ಮರಿಗೆಗಳಲ್ಲಿ ಬಕೇಟುಗಳಲ್ಲಿ ನುಗ್ಗುತಿತ್ತು. ಇವೆಲ್ಲ ಚಟುವಟಿಕೆಗಳ ಮೇಲ್ವಿಚಾರಕನು — ಇತರರು ಅವನನ್ನು 'ಧನಿ' ಯೆಂದು ಕರೆಯುತ್ತಿದ್ದರು — ಲಕ್ಷಣವಾಗಿ ಕಾಣುವ ರೂಪರೀತಿಗಳ ಒಬ್ಬ ತರುಣ ರೈತನಾಗಿದ್ದನು. ಅವನ ಆಕೃತಿಯನ್ನು ಆಕೆ ಕ್ಷಣದಲ್ಲಿ ಗುರುತಿಸಿದಳು. ಅವನು ತನ್ನ ಶರ್ಟಿನ ತೋಳುಗಳನ್ನು ಮೊಣಕೈಗಳ ಮೇಲಕ್ಕೆ ಸುರುಳಿಮಾಡಿ ಸಿಕ್ಕಿಸಿಕೊಂಡಿದ್ದನು— ಸೇಬಿನ ಹಿಂಡಿಯನ್ನು ಕುದುರೆ ಕೂದಲ ಚೀಲಗಳಲ್ಲಿ ಜಡಿದು ತುಂಬುವಾಗ ಅವಕ್ಕೆ ಕಲೆ ಆಗಬಾರದೆಂದು. ಸೇಬಿನ ಸಿಪ್ಪೆಯ ಚೂರುಗಳು ಅವನ ಹ್ಯಾಟಿನ ಅಂಚಿನ ಮೇಲೆಲ್ಲ ಬೀಳುತ್ತಿದ್ದವು. ಅದರ ಕಂದು ಬೀಜಗಳು ಅವನ ದುಂಡ ತೋಳುಗಳ ರೊಣೆಯಲ್ಲಿ ಮತ್ತು ಗಡ್ಡದಲ್ಲಿ ಅಂಟಿಕೊಳ್ಳುತ್ತಿದ್ದವು.

ಒಂದು ಕ್ಷಣದಲ್ಲಿ ಅವಳಿಗೆ ಗೊತ್ತಾಯಿತು — ಆತ ಅಲ್ಲಿಗೆ ಹೇಗೆ ಬಂದನೆಂದು. ಸೇಬಿನ ಹಣ್ಣಿನ ಸೀಮೆಯ ಒಡಲಲ್ಲಿ ಪ್ರತಿಯೊಬ್ಬ ರೈತನೂ ಹಣ್ಣು ಹಿಂಡಲು ಮನೆಯನ್ನೂ ಸಿಡರ ಮದ್ಯ ತಯಾರಿಸುವ ಯಂತ್ರವನ್ನೂ ಮಾಡಿಕೊಂಡಿರುತ್ತಿದ್ದನು. ಅದೂ ತನ್ನ ಉಪಯೋಗಕ್ಕಾಗಿ; ಸೇಬಿನ ಹಿಂಡಿಯನ್ನು ಹುಲ್ಲಿನ ದೊಡ್ಡ ದೊಡ್ಡ ಮುಡಿಗಳಲ್ಲಿ ಕಟ್ಟಿಡುತ್ತಿದ್ದನು. ಆದರೆ ಆ ಸೀಮೆಯ ಸೆರಗಿನ ಈ ಭಾಗದಲ್ಲಿ ಪೊಮೆನಾ ಬಯಲಿನಲ್ಲಿ ಭೂಮಿ ಪೂರ್ತಿ ಹಣ್ಣಿನ ತೋಟವೋ ಹಸಿರು ಕಾಡೋ ತೀರ್ಮಾನಿಸುವುದೆ ಚರ್ಚಾಸ್ಪದವಿದ್ದಲ್ಲಿ, ಪ್ರತಿಯೊಬ್ಬ ಒಡೆಯನೂ ತನ್ನದೆ ಗಾಣಯಂತ್ರವನ್ನು ಇಟ್ಟುಕೊಳ್ಳಲಿಕ್ಕೆ ಸಾಲುವಷ್ಟು ಸೇಬಿನ ಬೆಳೆ ಬರುತ್ತಿದ್ದಿಲ್ಲ. ಇದು ಅಲೆದಾಡುವ ಗಾಣಿಗರ ನಾಡು. ಸಿಡರ ತಯಾರಿಕೆಯ ಗಾಣಿಗ ಈ ಕ್ಷೇತ್ರದಲ್ಲಿ ತನ್ನ ಗಾಣಕ್ಕೆ ಗಾಲಿಗಳನ್ನು ಜೋಡಿಸುತ್ತಿದ್ದ, ಹೊರತು ಸಿಡರ ಮನೆಯಲ್ಲಿ ಅದನ್ನು ಕೂಡ್ರಿಸಿಡುತ್ತಿದ್ದಿಲ್ಲ. ಒಂದೆರಡು ಜತೆ ಕುದುರೆ, ಬಕೇಟುಗಳು, ಮರದ ಮರಿಗೆ-ಮಂಕರಿಗಳು ಹಿಂಡುವ ಸಾಧನ ಮತ್ತು ಒಬ್ಬಿಬ್ಬ ಹಸ್ತಕರು — ಇಷ್ಟೆಲ್ಲ ಸರಂಜಾಮುದೊಂದಿಗೆ ಸಿಡರ-ಗಾಣಿಗನು ಸ್ಥಳದಿಂದ ಸ್ಥಳಕ್ಕೆ ಅಲೆದಾಡುತ್ತಿದ್ದನು. ಇಂದಿಗಿಂತ ಒಳ್ಳೆಯ ಸುಗ್ಗಿಯ ಕಾಲದಲ್ಲಿ ಅವನ ಪರಿಶ್ರಮಕ್ಕೆ ತುಂಬ ತೃಪ್ತಿಕರವಾದ ಪ್ರತಿಫಲ ಸಿಗುತ್ತಿತ್ತು.

ಆ ಊರಿನ ಹೊರಸುತ್ತುಗಳಲ್ಲಿ ಆಗ ತಾನೆ ಸೇಬಿನ ಸಂಗ್ರಹ ವಿಫುಲವಾಗಿತ್ತು. ಅಲ್ಲಲ್ಲಿ ಅಂಗಳದಲ್ಲಿ ಈ ಸಂಗ್ರಹ ಗಾಡಿಗಳಲ್ಲಿ, ಬುಟ್ಟಿಗಳಲ್ಲಿ, ರಾಶಿಗಳಲ್ಲಿ ಹೇರಿ ನಿಂತಿತ್ತು. ಶರತ್ಕಾಲದ ಮಲೆತು ನಿಂತ ನೀಲವಾದ ವಾತಾವರಣವು ಎಲ್ಲವನ್ನೂ ಕವಿದು ಚಾಚಿದ್ದು, ಸವಿಯಾದ ಸೇಬಿನ ರಸದ ವಾಸನೆಯಿಂದ ಭಾರವಾಗಿತ್ತು. ಹೊಂಬಿಸಿಲಿನಲ್ಲಿ ಅಲ್ಲಲ್ಲಿ ಗೋಡೆಗಳಿಗೆ ಆನಿಸಿ ಸೇಬಿನ ಹಿಂಡಿಯ 'ಬೆರಣಿ'ಗಳು ಬಿದ್ದಿದ್ದವು; ಅಲ್ಲಿ ಅವು ಉರುವಲಕ್ಕಾಗಿ ಒದಗುತ್ತಿದ್ದವು. ಆದಾಗ್ಯೂ ಇನ್ನೂ ವರ್ಷದ ಹಿರಿಯ ಹಂಗಾಮು ಸುರುವಾಗಿದ್ದಿಲ್ಲ. ರೂಢಿಯ ದೊಡ್ಡ ಮೊತ್ತದ ಬೆಳೆ ಸಂಗ್ರಹಕ್ಕಾಗಿ ಬರುವುದಕ್ಕೂ ಮುಂಚೆ, ಇಂಥ ವಿಫುಲ ಹಂಗಾಮಿನ ದಿನಗಳಲ್ಲಿ, ಮುಂಚೆಯೆ ಪಾಡಿಗೆ ಬಂದ ಸೇಬುಹಣ್ಣು ಹಿಂದಿನ ಹಂಗಾಮಿನಲ್ಲಿ ತಡವಾಗಿ ಬಿದ್ದಹಣ್ಣು ಇವು ರಾಶಿಗೂಡುತ್ತಿದ್ದವು. ಇವನ್ನು ಹಾಗೆಯೇ ಬಹುಕಾಲ ಇಡುವಂತೆ ಇದ್ದಿಲ್ಲ. ಹೀಗೆ ಬುಟ್ಟಿಗಳಲ್ಲಿಯೂ ಗಾಣದ ಬಾಯಿಯಲ್ಲಿಯೂ, ಗ್ರೇಸಳು ಬೇರೆ ಬೇರೆ ಕಾಲಕ್ಕೆ ಪಾಡಿಗೆ ಬಂದ ಹಣ್ಣುಗಳ ಕಲಬೆರಕೆ ನೋಡಿದಳು. ತನ್ನ ಎಳೆವರೆಯದ ಘೋರ ಹಸಿವೆಗೆ ಚೆನ್ನಾಗಿ ಗೊತ್ತಿದ್ದ ಎಲ್ಲ ಬಗೆಬಗೆಯ ಸೇಬಿನ ಜಾತಿಗಳು ಅಲ್ಲಿದ್ದವು.

ಗ್ರೇಸಳು ಆ ಮುಖ್ಯಸ್ಥನನ್ನು ಆಸಕ್ತಿಯಿಂದ ವೀಕ್ಷಿಸಿದಳು. ಆಗ ಕಿರಿದಾದ ಒಂದು ನಿಟ್ಟುಸಿರು ಅವಳಿಂದ ಹೊರಟಿತು. ಬಹುಶಃ ಅವಳು ಆ ದಿವಸವನ್ನು — ಅಷ್ಟೇನು ದೂರದ ಹಿಂದಿನ ದಿವಸವೂ ಅಲ್ಲ ಅದು—ಹಂಬಲಿಸಿರಬೇಕು. ಆ ದಿನ ಅವಳ ಬಾಲ್ಯದ ಸಂಗಾತಿಯು ಅವಳ ತಂದೆಯ ಪೂರ್ವಯೋಜನೆಯಿಂದಲೇ ಇದೇ ಪಟ್ಟಣದಲ್ಲಿ ಅವಳನ್ನು ಭೆಟ್ಟಿಯಾಗಿದ್ದನು. ಆಶೆಯಿಂದ ಕಾವೇರಿ, ಆದರೂ ಅಳುಕುತ್ತ ನೇರವಾಗಿ

ಕೊಟ್ಟಿದ್ದಕ್ಕಿಂತ ನವಿರಾಗಿ ಸೂಚಿಸಿದ ಒಂದು ಆಶ್ವಾಸನವನ್ನು ನಂಬಿ ಆತ ಭೆಟ್ಟಿಯಾಗಿದ್ದನು. ಅಥವಾ ಅದಕ್ಕೂ ಹಿಂದಿನ, ಮುಂಚಿನ ಅವಳ ಬಾಲ್ಯದ್ದೇ ದಿನಗಳ ಕುರಿತು ವಿಚಾರಮಾಡುತ್ತಿರಬೇಕು. ಅಂದು ಅವಳ ಬಾಯಿಯು ಅವನು ಕೊಡುವುದಕ್ಕಿಂತ ಹೆಚ್ಚು ಆತುರದಿಂದ ಮುತ್ತನ್ನು ಪಡೆಯಲು ಸಿದ್ಧವಾಗಿರುತ್ತಿತ್ತು. ಆಗ ತಾನು ಅವನಿಗಿಂತ ಶ್ರೇಷ್ಠಳೆಂದು ಅವಳಿಗೆ ಅನಿಸಿತ್ತು. ಈಗಲೂ ತಾನು ಅವನಿಗಿಂತ ಶ್ರೇಷ್ಠಳೆಂದು ಅವಳಿಗೆ ಅನಿಸಿತು.

ತನ್ನ ತೆರೆದ ಕಿಟಕಿಯ ಕಡೆಗೆ ಆತ ಏಕೆ ನೋಡುವುದಿಲ್ಲ? ಅವಳಿಗೆ ಸೋಜಿಗ. ಅವರು ಆ ಹೋಟೆಲಿಗೆ ಬಂದ ನಿಮಿತ್ತ ಉಂಟಾದ ಚಿಕ್ಕ ಕೋಲಾಹಲದಲ್ಲಿ ಆ ಸಂಜೆಗೆ ವಿಂಟರಬೋರ್ನ ಆವಾರದ ಕಮಾನಿನೊಳಗಿಂದ ಅವಳ ಇಣುಕು ನೋಟವನ್ನು ಪಡೆದಿದ್ದನು. ಆ ನೋಟಕ್ಕೆ ಆತ ಕೆಂಪೇರಿ ಕಂಪಗೊಂಡು ಆ ಶೋಧದ ಮೂಲಕವೆ ತನ್ನ ಕೆಲಸವನ್ನು ಇನ್ನು ಹೆಚ್ಚು ಏಕಾಗ್ರತೆಯಿಂದ ಮುಂದುವರಿಸಿದನು. ಆದರೆ ಇದೆಲ್ಲ ಅವಳಿಗೇನು ಗೊತ್ತು? ಜೈಲ್ಸನೊಂದಿಗೇ ಅಲೆದಾಡುತ್ತಿದ್ದ ರಾಬರ್ಟ ಕ್ರೀಡ್ಸನಿಗೂ ಆ ಖಾನಾವಳಿಯ ಕುದುರೆಗೆಲಸಗಾರನು, ಡಾ. ಫಿಟ್ಝಪಿಯರ್ಸ ಮತ್ತು ಅವನ ಎಳೆಯ ಹೆಂಡತಿ ಅಲ್ಲಿಗೆ ಬಂದಿದ್ದಾರೆಂದು ತಿಳಿಸಿದ್ದನು. ಆ ಸುದ್ದಿ ಕೇಳಿದೊಡನೆ ಕ್ರೀಡ್ಸ ತಲೆ ತೂಗುತ್ತ ತನ್ನಷ್ಟಕ್ಕೆ 'ಹಾ !' ಎಂದು ಮಂದಿಗೆ ಕೇಳಿಸುವಂತೆಯೇ ಅಂದುಕೊಂಡನು — ಸಿಡರಗಾಣದ ತಿರುಗಣೆಯನ್ನು ನೂಕುವ ನಡುವೆ.

'ಹಾಗೇಕೆ ದೊಡ್ಡ ಶ್ವಾಸ ಬಿಟ್ಟೆ ಕ್ರೀ-ರಾಬರ್ಟ್?' ವಿಂಟರಬೋರ್ನ ಕೇಳಿದನು.

'ಓ ನನ್ನೊಡೆಯ, ಅದು ನನ್ನ ವಿಚಾರ, ನನ್ನ ವಿಚಾರ. ಹೌದು ಒಳ್ಳೆ ಹದಕ್ಕೆ ಬಂದ ನೂರು ಹೊರೆ ಕಟ್ಟಿಗೆ ನೀವು ಕಳಕೊಂಡಿರಿ; ಹನ್ನೆರಡು ಕುಟುಂಬಗಳನ್ನು ಹಿಡಿಸುವಂಥ ಕಲ್ಲಕಟ್ಟೋಣದ ಮನೆಯನ್ನು ಕಳಕೊಂಡಿರಿ; ಆರೇಳು ಒಳ್ಳೆಯ ಗಾಡಿಗಳನ್ನೂ ಅವುಗಳ ಕುದುರೆಗಳನ್ನೂ ಕಳೆದುಕೊಂಡಿರಿ; ಎಲ್ಲಾ ಕಳಕೋಡುಬಿಟ್ರೆ ಹೇಗೆ? ಹಿಂದೊಮ್ಮೆ ನಿಮ್ಮವಳಾದ ಆ ಅವಳನ್ನು ನಿಮ್ಮಿಂದ ಜಾರಲು ಬಿಟ್ಟು!'

'ಅಯ್ಯೋ ದೇವರೆ, ಕ್ರೀಡ್ಸ, ನೀ ನನಗೆ ಹುಚ್ಚು ಹಿಡಿಸುತ್ತಿ?' ಜೈಲ್ಸ ಕಠೋರ ನುಡಿದನು. 'ಆ ಮಾತು ಮತ್ತೆ ಎತ್ತಬೇಡ.'

ಹೀಗೆ ಆ ವಿಷಯ ಆ ಪಟಾಂಗಣದಲ್ಲಿ ಮುಗಿದಿತ್ತು. ನಡುವೆ ಇದೆಲ್ಲದರ ಸ್ತಬ್ಧ ನಿಷ್ಕ್ರಿಯವಾದ ಕಾರಣವು ಆ ದೃಶ್ಯವನ್ನು ನೋಡುತ್ತಲೇ ಇತ್ತು. ಅವಳು ಚೆಂದವಾಗಿ ಉಡಿಗೆ ತೊಟ್ಟಿದ್ದಳು. ಆ ಹೋಟೆಲು ಒದಗಿಸಬಹುದಾದ ಅತ್ಯಂತ ಸುಖ ಸೌಕರ್ಯದ ಕೋಣೆಯಲ್ಲಿ ಅವಳು ಕುಳಿತಿದ್ದಳು. ಅವಳ ದೀರ್ಘ ಪ್ರವಾಸವು ವೈವಿಧ್ಯಪೂರ್ಣವಾಗಿತ್ತು. ಬಹುತೇಕ ಸುಖದ ಸುಪ್ಪತ್ತಿಗೆಯಲ್ಲಿ ನಡೆದಿತ್ತು. ಏಕೆಂದರೆ ಭೋಗದ ಪ್ರಶ್ನೆ ಎದ್ದಾಗ ಫಿಟ್ಝಪಿಯರ್ಸ ಮಿತವ್ಯಯದ ಅಭ್ಯಾಸ ಮಾಡಿದವನಿದ್ದಿಲ್ಲ. ಆದ್ದರಿಂದ ಆ ಕ್ಷಣಕ್ಕೆ ಜೈಲ್ಸ ಮತ್ತು ಅವನಿಗೆ ಸಂಬಂಧಪಟ್ಟ ಎಲ್ಲ ಸೊತ್ತು ಸಾಮಾನು

ಅವಳಿಗೆ ತೀರ ಸದುರು ಮತ್ತು ದೆಸೆಗೆಟ್ಟದ್ದೆನಿಸಿರಬೇಕು. ಇತ್ತೀಚೆಗೆ ಅವಳಿಂದ ತೀರ ದೂರವಾದ ಕಕ್ಷೆಯಲ್ಲಿ ನಡೆಯುವ ಅವನೊಂದಿಗೆ ಎಂದಾದರೊಮ್ಮೆ ತನ್ನ ಹೊಂದಿಕೆ ಇದ್ದಿರಬಹುದೇ ಎಂಬುದು ಅವಳಿಗೆ ನಂಬುವದೆ ಕಷ್ಟವಾಯಿತು.

'ಛೇ ಇಲ್ಲ. ನಾನು ಅವನನ್ನು ಎಂದೂ ಮದುವೆ ಆಗುವದು ಶಕ್ಯವಿದ್ದಿಲ್ಲ' ಅವಳು ಮಂದವಾಗಿ ತಲೆ ಅಲ್ಲಾಡಿಸುತ್ತ ಅಂದಳು. 'ನಮ್ಮಪ್ಪನ ಮಾತೇ ಸರಿ. ಅದು ನನಗೆ ತೀರ ಕಠಿಣ, ತೀರ ಕಗ್ಗದ ಬದುಕಾಗುತ್ತಿತ್ತು!' ಮತ್ತು ಅವಳು ತನ್ನ ತೆಳ್ಳಗಿನ ಬೆಳ್ಳಗಿನ ಬೆರಳುಗಳ ಮೇಲೆ ಒಪ್ಪುವ ನೀಲ ಹಾಗೂ ಓಪಲಿನ ಉಂಗುರಗಳ ಕಡೆಗೆ ನೋಡಿದಳು. ಅವು ಫಿಟ್ಝಪಿಯರ್ಸ ಕೊಟ್ಟ ಉಡುಗೊರೆಗಳಾಗಿದ್ದವು.

ಜೈಲ್ಸನು ಇನ್ನೂ ಬೆನ್ನು ತಿರುಗಿಸಿಯೆ ಇದ್ದುದನ್ನು ನೋಡಿ – ಮೇಲೆ ಹೇಳಿದ ಬಾಳಿನ ಬಿಂಕವೂ ತುಸು ಸೇರಿಕೊಂಡು,–ಆ ಬಿಂಕ ನಮಗೆ ಸುಲಭವಾಗಿ ಗಮ್ಯ ; ಅವಳಿಗೆ ಬಹುಮಟ್ಟಿಗೆ ಕ್ಷಮ್ಯ ; ಏಕೆಂದರೆ ಅನುಭವವಿಲ್ಲದ ಹೆಣ್ಣು ತಾನು ಚೆನ್ನಾಗಿಯೇ ಮದುವೆ ಆಗಿರುವೆನೆಂದು ಭಾವಿಸಿದವಳು—ಅವಳು ಕಿಟಕಿಯನ್ನು ಅಗಲವಾಗಿ ತೆಗೆದಳು ಮತ್ತು ತಂಟಿಯಲ್ಲಿ ನಗೆ ಅರಳಿಸಿ ಕರೆದಳು, 'ವಿಂಟರಬೋರ್ನ!'

ಆತ ಅತ್ತ ಗಮನವನ್ನೆ ಕೊಟ್ಟಂತೆ ಕಾಣಲಿಲ್ಲ. ಆಕೆ ಮತ್ತೊಮ್ಮೆ ಕರೆದಳು. 'ಮಿಸ್ಟರ್ ವಿಂಟರಬೋರ್ನ!'

ಈಗಲೂ ಆತ ಕೇಳದಿರುವಂತೆ ಕಂಡಿತು. ಆದರೆ ಹಾಗೆಂದರೆ ಅವನ ಹತ್ತಿರವೆ ಇದ್ದ ಯಾರೊಬ್ಬನೂ ಅವನ ಮುಖಚರ್ಯೆಯಿಂದ ಈ ಮಾತನ್ನು ನಂಬುತ್ತಿರಲಿಲ್ಲ. ಅವಳು ಮತ್ತೆ ಮೂರನೆಯ ಸಲ ಅಂಜುಬುರುಕ ದನಿಯೆತ್ತಿ ಕೂಗಿದಳು, 'ವಿಂಟರ ಬೋರ್ನ...ಇದೇನು? ನನ್ನ ದನಿ ನೀನು ಮರತೇ ಬಿಟ್ಟೆಯಾ?' ಅವಳು ತುಟಿಗಳನ್ನು ಬಿಚ್ಚಿಯೆ ಸ್ವಾಗತದ ಸ್ಮಿತದೊಂದಿಗೆ ತಡೆದಳು.

ಆತ ಚಕಿತನಾಗದೆ ಹೊರಳಿದನು. ಮತ್ತು ವಿಚಾರಮಾಡಿ ಕಿಟಕಿಯ ಕಡೆಗೆ ಬಂದನು.

'ನನಗೇಕೆ ಕರೆಯುತ್ತೀ?' ಆತ ಅಂದನು. ಅವನ ದನಿಯ ನಿಷ್ಠುರತೆ ಅವಳಿಗೆ ತೀರ ಅಕಲ್ಪಿತವಿತ್ತು. ತಬ್ಬಿಬ್ಬಾಗಿಸಿತು. ಅವನ ಮುಖವು ಈಗ ನಿಸ್ತೇಜವಾಗಿತ್ತು. 'ನೀನು ಅಲ್ಲಿ ನಿನ್ನ ಗೆಲುವಿನಲ್ಲಿ ಆರಾಮಾಗಿ ಕುಳಿತಿರುವಾಗ, ನಾನು ಇಲ್ಲಿ ನನ್ನ ದಿನದ ಕೂಳಿಗಾಗಿ ಹೆಣಗಿ ಹೆಣವಾಗುತ್ತಿರುವದನ್ನು ನೋಡಿದರೆ ನಿನಗೆ ಸಾಕಾಗದೇ? ನನ್ನ ಹೆಸರೆತ್ತಿ ಕರೆದು ಹಳೆಯ ಗಾಯಗಳನ್ನೂ ಮತ್ತೆ ತೆರೆಯದೆ ಇರಲಾರೆಯಾ?'

ಅವಳ ಕೆನ್ನೆ ಕೆಂಪಾಯಿತು. ಕೆಲನಿಮಿಷ ಗರಬಡಿದವಳಂತೆ ಮೂಕಳಾದಳು. ಆದರೆ ಅವನ ಈ ಅವಿವೇಕದ ಸಿಟ್ಟನ್ನು ಆಕೆ ಕ್ಷಮಿಸಿದಳು. ಅದರ ಮೂಲ ಎಲ್ಲಿ ಎಂಬುದು ಆಕೆ ಅರಿತಿದ್ದಳು.

'ಕ್ಷಮಿಸು ಜೈಲ್ಸ, ಮಾತಾಡಿ ನಾನು ನಿನ್ನನ್ನು ನೋಯಿಸಿದೆ. ನನಗೆ ಖೇದ ವಾಗುತ್ತದೆ' ಆಕೆ ಉತ್ತರವಿತ್ತಳು. 'ನನ್ನನ್ನು ನಂಬು, ಹಾಗೆ ಮಾಡುವದು ನನ್ನ

ಉದ್ದೇಶವಿದ್ದಿಲ್ಲ. ಗುರುತು ಪರಿಚಯದ ಒಂದೂ ಮಾತೂ ಆಡದೆ ನಾನು ಇಲ್ಲಿ ನಿನಗೆ ಇಷ್ಟು ಸಮೀಪ ಕೂತಿರುವದು ನನಗೆ ಶಕ್ಯವಾಗಿಲಿಲ್ಲ.'

ಈ ತನಕ, ವೀಟರಬೋರ್ನನ ಎದೆ ಉಬ್ಬಿ ಉಕ್ಕಿ ಬಂದು ದೊಡ್ಡದಾಯಿತು. ಅವನ ಕಣ್ಣು ತೇವಗೊಂಡವು. ಆ ಪರಿಚಿತ ಕಂಠದ ಆ ಸೌಮ್ಯವಾದ ಉತ್ತರವು ಅವನನ್ನು ಅಷ್ಟೊಂದು ಚಲವಿಚಲಗೊಳಿಸಿಬಿಟ್ಟಿತು. ಅವಳ ಕಡೆಗೆ ನೋಡದೆ, ಅವನು ಭರವಸೆ ಇತ್ತನು — ತಾನು ಸಿಟ್ಟಿಗೆದ್ದಿಲ್ಲವೆಂದು. ಆ ಮೇಲೆ ಮನಸ್ಸಿಲ್ಲದ ಸಂಕೋಚದ ಅಸಡ್ಡಾಳ ಬಗೆಯಲ್ಲಿ ಆತ ಹೇಗೋ ಕೇಳಿದನು — ಅವಳ ಪ್ರವಾಸ ಸುಖವಾಯಿತೇ? ಬಹಳಷ್ಟು ಸ್ವಾರಸ್ಯದ ದೃಶ್ಯಗಳನ್ನು ಅವಳು ನೋಡಿದಳೇ? ತಾನು ಸಂದರ್ಶಿಸಿದ ಕೆಲವು ಸ್ಥಳಗಳ ಬಗೆಗೆ ಅವಳು ಮಾತಾಡಿದಳು. ಹಾಗೆಯೇ ಹೊತ್ತು ಕಳೆಯಿತು — ಆತ ಮತ್ತೆ ತನ್ನ ಗಾಣದ ತಿರುಗಣೆಯನ್ನು ಎಳೆಯುವ ಸೊನ್ನೆಗಳ ಬದಿಗೆ ತನ್ನ ಸ್ಥಾನವನ್ನು ತಿರುಗಿ ಹೋಗಿ ಸೇರುವತನಕ.

ಅವಳ ಕಂಠ ಮರೆಯುವುದುಂಟೆ! ನಿಜವಾಗಿಯೂ ಆತ ಆ ಕಂಠವನ್ನು ಮರೆತಿದ್ದಿಲ್ಲ. ಅವನ ಕಟುತನವೆ ಅದನ್ನು ಕಾಣಿಸಿತಂ. ಆ ಕ್ಷಣದ ಕಾವಿಗೆ ಆತ ಅವಳನ್ನು ತೀಕ್ಷ್ಣವಾಗಿ ತೆಗಳಿದ್ದನು. ಆದರೂ ಅವನ ಮರುಕ್ಷಣದ ಮನೋಭಾವವು ಹೆಚ್ಚು ಮೃದುವಾಗಿತ್ತು. ತನ್ನ ನಿಷ್ಠೆ ಏನೇ ಇದ್ದರೂ, ತನ್ನಂಥವನನ್ನು ತ್ಯಜಿಸಿದ್ದು ಅವಳ ಸಡಗರ ವೈಭವದ ವೀಶೆಷ ಗೌರವವೆಂದು ಭಾವಿಸುವಷ್ಟು ಕೋಮಲವಾಗಿತ್ತು.

ನಾ ಮರೆತರೆ
ಸವಳು ಹಳ್ಳ ಕಡಲನ್ನೆ ಮರೆಯಬಹುದು
ನಾ ಮರೆತರೆ
ನನ್ನ ಹೃದಯದುಜ್ವಲ ಉದ್ದೀಪನೆ —
ಉಕ್ಕಿದೆದೆಯನೆ
ಅಥಮಾಥಮತೆಗೆ ಇಳಿಯಲಿ; ನಾನೆ
ನಿಷ್ಕಾಸಿತ, ನಿರ್ವಾಸಿತ,—
    ದಲಿತ ದುಃಶಪಿತನೆನೆ
    ನಾ ಮರೆತರೆ
    ನೀ ಮರೆತರು
ನನ್ನ ಯಾವ ಮಾತು ನಿನ್ನ ಸುಖವ ಕೆಡಿಸದು
ನೀ ಮರೆತರು....
ನನ್ನ ಬಂಜೆ ಬದುಕನ್ನೆ ತುಂಬಿದ ನಿಧಿಯದು
ನೀನಿತ್ತ ಕಾಣಿಕೆಯನು ಕೋ ಹಿಂದೆಗೆದು
ಆದರೂ ನೀ ರಾಣಿ, ನಾ ಗುಲಾಮ, ನಂಬಿದು.
ನೀ ಮರೆತರು

ಎಂಡ್ಮಡ ಗೂಸ್ ಎಂಬ ಕವಿಯ ಈ ಪದ್ಯಗಳಲ್ಲಿ ಅವನೂ ಸಾರಬಹುದಿತ್ತು.

ಅವಳ ಕಣ್ಣಲ್ಲಿ ನೀರೂರಿತು. ಆತ ನೆನೆಯಬೇಕಾದುದನ್ನು ತಾನು ಅವನ ನೆನಪಿಗೆ

ತಂದುಕೊಡಲಾರದೆ ಹೋದೆನೆಂದು ಆಕೆ ಹಳಹಳಿಸಿದಳು. ತಮ್ಮಿಬ್ಬರ ಎಳೆವರಯದ ಕನಸುಗಳನ್ನು ಕಂಗೆಡಿಸಿದ್ದು ತಾನಲ್ಲ, ಘಟನೆಗಳ ಒತ್ತಡವೆಂದು ಪರಿತಪಿಸಿದಳು.

ಹೀಗೆ ತನ್ನ ಹಳೆಯ ಗೆಳೆಯನೊಂದಿಗೆ ಭೆಟ್ಟಿಯಲ್ಲಿ ಗ್ರೇಸಳಿಗೆ ಅನಪೇಕ್ಷಿತವಾಗಿ ಸೋಲಾಯಿತು. ಗೆಲುವಿನ ನಸುಹಿಗ್ಗಿನಿಂದಲೆ, ಅವಳು ಕಿಟಕಿಯ ಕದ ತೆರೆದಿದ್ದಳು. ಆದರೆ ಅವನು ಅದನ್ನು ದುಃಖವಾಗಿ ಮಾರ್ಪಡಿಸಿದ್ದನು. ಇದರ ಕಾರಣವೇನೆಂದು ಅವಳಿಗೆ ಬೋಧವಾಗಲಿಲ್ಲ. ನಿಜವೆಂದರೆ ಅವಳು ತನ್ನ ಕ್ರೂರತೆಯಲ್ಲಿಯೂ ಸಾಕಷ್ಟು ಕ್ರೂರಳಾಗಿದ್ದಿಲ್ಲ. 'ಚೂರಿಯನ್ನು ಪ್ರಯೋಗಿಸುವುದೆ ಆದರೆ, ಚೆನ್ನಾಗಿಯೇ ಪ್ರಯೋಗಿಸು' ಅಂದಿದ್ದಾರೆ ಹಿರಿಯ ಸರ್ಜನ್ನರರು. ಮತ್ತು ತನ್ನ ಮನಃಶಾಂತಿಗಾಗಿಯಾದರೂ ಗ್ರೇಸಳು ವಿಂಟರಬೋರ್ನನನ್ನು ಪೂರ್ತಿಯಾಗಿಯೆ ನೋಡಿಕೊಳ್ಳಬೇಕಾಗಿತ್ತು, ಅಥವಾ ಅವನ ಗೊಡವೆಗೇ ಹೋಗಬಾರದಿತ್ತು. ಈಗ ಆದದ್ದೇನು? ಆ ಕಿಟಕಿಯನ್ನು ಮುಚ್ಚಿಕೊಂಡಾಗದ ಅವಳ ಎದೆಯಲ್ಲಿ ಅವನ ಬಗೆಗೆ ಒಂದು ಅವರ್ಣನೀಯವಾದ ಮರುಕ,— ಕೆಲವರು ಇದನ್ನು ಘಾತಕವೆಂದೂ ಅನ್ನಬಹುದು, — ತುಂಬಿ ತುಳುಕಾಡಿತು.

ಅಷ್ಟರಲ್ಲಿ ಅವಳ ಗಂಡನು ಕೋಣೆಯೊಳಗೆ ಬಂದನು. ಎಂಥ ಅದ್ಭುತ ಸೂರ್ಯಾಸ್ತವಿತ್ತೆಂಬುದನ್ನು ಅವಳಿಗೆ ಹೇಳಿದನು.

'ನಾನು ಅದನ್ನೇನು ನೋಡಲಿಲ್ಲ. ಆದರೆ, ಅಲ್ಲಿ ಅಂಗಳದಲ್ಲಿ ನಮ್ಮ ಪರಿಚಯದ ಒಬ್ಬರನ್ನು ಮಾತ್ರ ಕಂಡೆನು.' ಅವಳು ಪಟಾಂಗಣದತ್ತ ನೋಡುತ್ತ ಅಂದಳು.

ಫಿಟ್ಝಪಿಯರ್ಸ ಅವಳ ಕಣ್ಣು ನಿಟ್ಟಿನಲ್ಲಿಯೆ ದೃಷ್ಟಿ ಹಾಯಿಸಿದನು. ಅವನಿಗೆ ಅಲ್ಲಿ ಯಾರ ಗುರುತೂ ಹತ್ತಲಿಲ್ಲ.

'ಏಕೆ? ಆತ ವಿಂಟರಬೋರ್ನ — ಅಲ್ಲಿ ಸಿಡರ ಮದ್ಯ ತಯಾರಿಸುತ್ತಿದ್ದಾನೆ. ಅವನು ಇತರ ಧಂದೆಗಳೊಂದಿಗೆ ಇದನ್ನು ಇಟ್ಟುಕೊಂಡಿದ್ದಾನೆ. ನಿನಗೆ ಗೊತ್ತಿಲ್ವೇ?'

'ಓ — ಆ ಅವನೇ?' ಅಂದನು ಫಿಟ್ಝಪಿಯರ್ಸ, ಅವನ ಕುತೂಹಲ ಅಲ್ಲಿಗೆ ನಷ್ಟವಾಗಿ.

ಅವಳು ದೂರುವ ದನಿಯಲ್ಲಿ ಅಂದಳು, 'ಏನು? ವಿಂಟರಬೋರ್ನನನ್ನು ಆ ಅವನೆಂದು ಕರೆಯುವುದೇ, ಎಡ್ರೆಡ್? ಅವನನ್ನು ನಾನು ಎಂದೂ ಮದುವೆ ಆಗುವಂತಿದ್ದಿಲ್ಲ. ಇದನ್ನೂ ನಾನೇ ನನ್ನಷ್ಟಕ್ಕೆ ಇದೀಗ ಅಂದುಕೊಳ್ಳುತ್ತಿದ್ದೆ. ಆದರೂ ನನಗೆ ಅವನಲ್ಲಿ ತುಂಬ ಆದರವಿದೆ ಮತ್ತು ಮುಂದೆ ಯಾವಾಗಲೂ ಇರುವುದು.'

'ಇರಲಿ. ಅಗತ್ಯವಾಗಿ ಇರಲಿ, ಚೆನ್ನಾ, ನನ್ನದೇನೂ ಪರಿವೆಯಿಲ್ಲ. ನಾನು ನಿರ್ದಯ, ಅಮಾನುಷ ದುರಹಂಕಾರಿ, ಒಪ್ಪಿದೆ. ಆದರೂ ನನ್ನ ಹಳೆಯ ಜೀರ್ಣ ಮನೆತನದ ಬಗೆಗೆ ನನಗೆ ತುಂಬ ಅಭಿಮಾನ — ನಿಂದಾಸ್ಪದವಾಗುವಷ್ಟು ಹೆಚ್ಚಿದೆ ಆ ಅಭಿಮಾನ; ಆದರೆ ನಾ ಪ್ರಾಮಾಣಿಕವಾಗಿಯೆ ಒಪ್ಪಿಕೊಳ್ಳುವೆ, ಅಲ್ಲಿ ಪಟಾಂಗಣದಲ್ಲಿ

ಕೆಲಸಮಾಡುತ್ತಿರುವ ಜನರಿಗಿಂತ ನಾನು ತೀರ ಬೇರೆ ಜಾತಿಗೆ ಸೇರಿದವನೆಂದೇ ನನಗೆ ಅನಿಸುತ್ತದೆ.'

'ಮತ್ತು ಹಾಗಾದರೆ ನನಗಿಂತಲೂ ಅನ್ನು. ಏಕೆಂದರೆ ನನ್ನ ರಕ್ತ ಅವರದಕ್ಕಿಂತ ಹೆಚ್ಚೇನಲ್ಲ.'

ಅವನು ಅವಳ ಕಡೆಗೆ ನಗೆಚಾಟಿಕೆಯಲ್ಲಿ ಎಚ್ಚರಿಕೆ ಬಂದಂತೆ ನಟಿಸಿ ನೋಡಿದನು. ನಿಜವಾಗಿಯೂ ಇದೊಂದು ಅದ್ಭುತ ವಿಸಂಗತಿಯಾಗಿತ್ತು.—ಹೊರಗಿನ ಆ ಬಣಕ್ಕೆ ಸೇರಿದ ಈ ಹೆಂಗಸು ಅವನ ಬಳಿಗೆ ಅವನ ಹೆಂಡತಿಯಾಗಿ ನಿಂತಿದ್ದಳು. ಅವನ ಭಾವನೆಗಳು ಅವನು ಅಂದಂತೆಯೇ ನಿಜವಾಗಿಯೂ ಇದ್ದಿದ್ದರೆ, ಇದು ದೊಡ್ಡ ಸೋಜಿಗದ ಅಸಂಬದ್ಧತೆ. ಅವರ ಪ್ರವಾಸದಲ್ಲಿ ಆಕೆ ವಿಚಾರ, ಕಲ್ಪನೆ, ಅಭಿರುಚಿ, ಚಟ ರೀತಿ ನೀತಿಗಳಲ್ಲಿ ಅವನ ಅಂತಸ್ತಿಗೇ ತಪ್ಪದೆ ಸರಿಯಾಗಿ ಸಲ್ಲುತ್ತಿದ್ದಳು. ಇದರಿಂದ ಅವಳನ್ನು ಪರಿಗ್ರಹಿಸುವುದರಲ್ಲಿ ತನ್ನ ಹೃದಯವು ತನ್ನ ಮಹತ್ವಾಕಾಂಕ್ಷೆಯೊಂದಿಗೆ ಎಂಥ ಉತ್ಪಾತ ನಡೆಯಿಸಿತೆಂಬುದನ್ನು ಆತ ಪೂರ್ತಿ ಮರೆಯುವುದರಲ್ಲಿ ಇದ್ದನು.

'ಓ ನೀನೇ? ನೀನು ಶಿಕ್ಷಣ, ಸಂಸ್ಕಾರಗಳಿಂದ ತೀರ ಬೇರೆಯಾಗಿ ರೂಪಗೊಂಡಿರುತ್ತಿ!' ಆತ ತನ್ನನ್ನೆ ಒಡಂಬಡಿಸುವಂತೆ ನುಡಿದನು.

'ಹಾಗೆ ವಿಚಾರಮಾಡುವದು ನನಗೆ ಮೆಚ್ಚುಗೆ ಅಲ್ಲ,' ಅವಳು ಪಶ್ಚಾತ್ತಾಪದಿಂದ ಪಿಸುಗುಟ್ಟಿದಳು. 'ಅಲ್ಲದೆ ನನಗನಿಸುತ್ತದೆ, ನೀನು ಜೈಲ್ಸ ವಿಂಟರಬೋರ್ನನನ್ನು ತಪ್ಪಾಗಿ ತಿಳಿದಿರುವಿ. ಅವನ ಬೆಲೆ ಕಡಿಮೆ ಕಟ್ಟಿರುವಿ. ಒಂದು ಮಾತು ನೀನು ನೆನಪಿಡಬೇಕು, ಶಾಲೆಗೆ ಕಳುಹಿಸುವವರೆಗೂ ನಾನು ಅವನೊಂದಿಗೇ ಬೆಳೆದೆ. ಆದ್ದರಿಂದ ನಾನು ಮೂಲತಃ ಅವನಿಂದ ಬೇರೆ ಆಗಲಾರೆ. ಏನೇ ಆದರೂ ನನಗೆ ಹಾಗೆ ಅನಿಸುವುದಿಲ್ಲ. ಇದು ನನ್ನದೆ ದೋಷವಿರಬಹುದು. ಇದಕ್ಕೆ ಸಂಶಯವಿಲ್ಲ. ಇದೊಂದು ನನ್ನಲ್ಲಿ ದೊಡ್ಡ ಕುಂದು. ಆದರೆ, ಎಡ್ರೆಡ್, ಇದನ್ನು ನೀನು ಸಹಿಸುವಿಯೆಂದು ಆಶಿಸುತ್ತೇನೆ.'

ತಾನೂ ಹಾಗೆ ಮಾಡಲು ಯತ್ನಿಸುತ್ತೇನೆಂದು ಫಿಟ್ಝಪಿಯರ್ಸ ಅಂದನು. ಆದಾಗಲೆ ಸಂಜೆ ಕವಿಯುತ್ತಿತ್ತು. ಆದ್ದರಿಂದ ಅವರು ತಮ್ಮ ಪ್ರವಾಸದ ಕೊನೆಯ ಹಂತವನ್ನು ಮುಗಿಸಲಿಕ್ಕೆ ಸಜ್ಜಾದರು. ತೀರ ವಿಲಂಬವಾಗುವ ಮುಂಚೆಯೇ ಅವರು ಕಿರಿಯ ಹಿಂಟಾಕ ತಲುಪಬೇಕಾಗಿತ್ತು. ಅರ್ಧತಾಸಿನೊಳಗೇ ಅವರು ಹೊರಟರು ಪಟಾಂಗಣದಲ್ಲಿಯ ಸೇಬಿನ ಸರಾಯಿಗಾರರು ತಮ್ಮ ದುಡಿಮೆ ಮುಗಿಸಿ ಹೊರಟು ಹೋಗಿದ್ದರು. ಈಗ ಅಲ್ಲಿ ಕೇಳಿ ಬರುವ ಸದ್ದುಗಳೆಂದರೆ, ಬಿಗಿಯಾಗಿ ತಿರುಪಿಟ್ಟ ತಿರುಗಣೆಯ ಗಾಣಗಳಿಂದ ತೊಟಕುವ ರಸದ ಸದ್ದು ಮತ್ತು ಆ ರಸವನ್ನು ಹೀರಿ ತೀರ ಮದವೇರಿದ ಒಂದೇ ಒಂದು ಗುಂಗಾಡು, ಕತ್ತಲೆ ಆದ ಅರಿವೇ ಇಲ್ಲದೆ ಮೈಮರೆತು ಗುಂಯಿಗುಡುವ ಸದ್ದು.

ಗ್ರೇಸಳಿಗೆ ಪರಮ ಹರ್ಷ, ಬೇಗನೆ ತನ್ನ ಹಸಿರು ದೊಡ್ಡ ಮನೆಗೆ ಬರುವೆನೆಂದು.

ಆದರೆ ಫಿಟ್ಝ್‌ಪಿಯರ್ಸ್ ಅವಳ ಬೆನ್ನಿಗೆ ಮೌನದಲ್ಲಿಯೇ ಕುಳಿತಿದ್ದನು. ಪ್ರವಾಸದ ಕೊನೆಯು ಹತ್ತಿರ ಹತ್ತಿರ ಬರುತ್ತಿರುವಂತೆ ಅವನನ್ನು ಏನೋ ಬಣ್ಣಿಸಲಾಗದ ಗುದು ಮುರಿಕೆ, ಅಲ್ಲಿಯ ಬದುಕಿನ ವಾಸ್ತವ ಸತ್ಯಗಳು ಒತ್ತಡ ಉಸಿರು ಕಟ್ಟುವಂತೆ ಅನಿಸಿತು, ಅವಳನ್ನು ಅವನು ಮದುವೆಯಾಗಿ ಎರಡು ತಿಂಗಳಾಗಿತ್ತು.

‘ಒಂದೂ ಮಾತನ್ನು ನೀನು ಆಡುವದಿಲ್ಲ. ಎಡ್ರೆಡ್! ’ ಅವಳು ಅಂದಳು. ‘ತಿರುಗಿ ಬಂದಿದ್ದಕ್ಕೆ ನಿನಗೆ ಆನಂದವಾಗಿಲ್ಲವೇ? ನನಗೆ ಆಗಿದೆ.’

‘ನಿನಗೆ ಇಲ್ಲಿ ಗೆಳೆಯರಿದ್ದಾರೆ. ನನಗಿಲ್ಲ.’

‘ಆದರೆ ನನ್ನ ಗೆಳೆಯರೆಲ್ಲ ನಿನ್ನವರೇ’

‘ಓ ಹೌದು — ಹಾಗೆ ನೋಡಿದರೆ’

ಮಾತುಕತೆ ಮತ್ತೆ ಕ್ಷೀಣವಾಯಿತು. ಅವಳು ಹಿಂಟಾಕ ಬೀದಿಯ ತುದಿಗೆ ಮುಟ್ಟಿದರು. ಕೆಲವು ಕಾಲದವರೆಗಾದರೂ, ಅವರು ಅವಳ ತಂದೆಯ ವಿಶಾಲವಾದ ಮನೆಯಲ್ಲಿಯೇ ವಾಸ್ತವ್ಯ ಮಾಡಬೇಕೆಂದು ನಿರ್ಧಾರವಾಗಿತ್ತು. ಆ ಮನೆಯ ಒಂದು ಮಗ್ಗುಲನ್ನು ಅವರ ಪಾಲಿಗೇ ಕೊಟ್ಟಿತ್ತು. ಅದನ್ನು ಮೆಲಬರಿಗಳು ಬಹುತೇಕ ಬಳಸಿದ್ದೆ ಇದ್ದಿಲ್ಲ. ನವದಂಪತಿಗಳು ಊರಲ್ಲಿ ಇಲ್ಲದಿರುವಾಗಲೇ ಕೆಲಸಗಾರರು ಈ ಕೋಣೆಗಳ ಗುಂಪನ್ನು ಬಣ್ಣಬಳಿದು, ಗೋಡೆಗೆ ಕಾಗದ ಅಂಟಿಸಿ, ಸುಣ್ಣ ಹಚ್ಚಿ ಸಜ್ಜುಗೊಳಿಸಲು ಆ ಕಟ್ಟಿಗೆ ವರ್ತಕನು (ಮೆಲಬರಿಯ) ಈ ಬಗ್ಗೆ ವಿಪರೀತ ದಕ್ಷತೆ ವಹಿಸಿದ್ದನು. ಒಂದು ಕುಂದೂ ಇರಕೂಡದೆಂದು ಅವನ ಹಟ. ಮನೆಯ ಆ ನೆಲದ ಅಂತಸ್ತನ್ನು ದವಾಖಾನೆಯಾಗಿ ಸಜ್ಜುಮಾಡಲಾಗಿತ್ತು. ಅದಕ್ಕೆ ಒಂದು ಪ್ರತ್ಯೇಕ ಹೊರಬಾಗಿಲು ಇಟ್ಟು, ಆ ಬಾಗಿಲಿಗೆ ಫಿಟ್ಝ್‌ಪಿಯರ್ಸನ ಹೆಸರಿನ ಹಿತ್ತಾಳೆಯ ತಗಡು ಜೋಡಿಸಲಾಗಿತ್ತು. ಅದೊಂದು ಅಲಂಕಾರಕ್ಕೆ ಮಾಡಿದ ಮಾಟ. ಏಕೆಂದರೆ, ಎಲ್ಲಿ ಪ್ರತಿಯೊಬ್ಬನಿಗೂ ಮೈಲುಗಟ್ಟಲೆ ಸುತ್ತಿನಲ್ಲಿ ಪ್ರತಿಯೊಬ್ಬನ ಮನೆಯ ಅಕ್ಷಾಂಶ ರೇಖಾಂಶಗಳು ಗೊತ್ತಿದ್ದವೋ, ಅಂಥಲ್ಲಿ ಇಂಥ ಹೆಸರಿನ ಒಂದು ಹಲಗೆ ಅನಗತ್ಯದ ಅತಿರೇಕವೇ ಆಗಿತ್ತು.

ದಂಪತಿಗಳನ್ನು ಮೆಲಬರಿ ಮತ್ತು ಅವನ ಮಡದಿ ಪ್ರೀತಿಯಿಂದ ಬರಮಾಡಿಕೊಂಡರು. ಮನೆಯವರೆಲ್ಲರೂ ಅವರಿಗೆ ಆದರವನ್ನು ತೋರಿದರು. ತಮ್ಮ ಕೋಣೆಗಳನ್ನು ನೋಡಿಕೊಳ್ಳಲಿಕ್ಕೆ ಅವರು ಉಪ್ಪರಿಗೆಯನ್ನೇರಿದರು. ಅವರ ಕೋಣೆಗಳು ಮಾಳಿಗೆಯ ನಿಚ್ಚಣಿಕೆಯ ಎಡಬದಿಗೆ ಒಂದು ಜಗುಲಿಯಲ್ಲಿ ತೆರೆಯುತ್ತಿದ್ದವು. ಅವುಗಳ ದ್ವಾರವನ್ನು ನಿಚ್ಚಣಿಕೆಯ ಮೇಲ್ತುದಿಯ ನೆಲದಿಂದ ಪ್ರವೇಶವಿರದಂತೆ ಮುಚ್ಚುವ ಏರ್ಪಾಡು ಮೆಲಬರಿ ಮಾಡಿಸಿದ್ದನು. ಅಂದು ಚಳಿ ಇದ್ದಿಲ್ಲ. ಆದರೂ ಬೆಚ್ಚನ್ನ ಬೆಂಕಿಯು ಸರಳಿನ ಅಗ್ಗಿಷ್ಟಿಕೆಯಲ್ಲಿ ಉರಿಯುತ್ತಿತ್ತು. ಯಾವದೇ ಊಟ ತಿಂಡಿಗೆ ಆ ವೇಳೆ ಬಹಳ ಬೇಗಾಯಿತು ಎಂದನು ಫಿಟ್ಝ್‌ಪಿಯರ್ಸ್. ಶರ್ಟನ್ ಅಬ್ಬಾಸವನ್ನು ಬಿಡುವುದಕ್ಕೆ ತುಸುವೆ ಮುಂಚೆ ಅವರು ಊಟಮಾಡಿದ್ದರು. ಆದ್ದರಿಂದ ಅವನು ತನ್ನ ಹಳೆಯ ವಸತಿಯ ಮನೆಗೆ ನಡೆದು ಹೋಗಿ ಬರೋಣವೆಂದು

ಯೋಚಿಸಿದನು. ತಾನು ಇಲ್ಲದಿದ್ದಾಗ ತನ್ನ ಪ್ರತಿನಿಧಿಯದು ಹೇಗೆ ನಡೆದಿದೆ ಎಂಬುದನ್ನು ತಿಳಿದುಕೊಳ್ಳಲು ಅವನು ಬಯಸಿದ.

ಮೆಲಬರಿಯ ಬಾಗಿಲನ್ನು ಬಿಡುವಾಗ ಆತ ಆ ಮನೆಯ ಕಡೆಗೆ ಹೊರಳಿ ನೋಡಿದನು. ಆ ಮನೆಯಲ್ಲಿ ಉಳಿಯುವುದರಲ್ಲಿ ಮಿತವ್ಯಯವಿತ್ತು; ಮತ್ತು ಮಿತವ್ಯಯವು ಯಾವಾಗಲೂ ಅಪೇಕ್ಷಣೀಯ. ಆದರೂ ಅದೇಕೋ ಅವನಿಗೆ ಅಲ್ಲಿಯ ವ್ಯವಸ್ಥೆಯಿಂದ ಅಸಮಾಧಾನವೆನಿಸಿತು. ಅದು ಅವನನ್ನು ಮೆಲಬರಿಯ ಅಳಿಯತನದ ಸುಮ್ಮಾನದಲ್ಲಿ ತೀರ ಆಳಕ್ಕೆ ಹೂಳಿದಂತೆ ಅನಿಸಿತು. ಆತ ಹಾಗೆಯೆ ಮುಂದೆ ತನ್ನ ಹಳೆಯ ವಾಸಸ್ಥಳಕ್ಕೆ ಸಾಗಿದನು. ಅವನ 'ಬದಲಿ ಇಸಮು' ಹೊರಗೆ ಹೋಗಿದ್ದನು. ಆಗ ಫಿಟ್ಝ್‌ಪಿಯರ್ಸ್ ತನ್ನ ಹಳೆಯ ಮನೆಯೊಡತಿ ಯೊಂದಿಗೆ ಹರಟೆಯಲ್ಲಿ ತೊಡಗಿದನು.

'ಸರಿ, ಮಿಸೆಸ್ ಕಾಕ್ಸ, ಏನು ಒಳ್ಳೆಯ ಸಮಾಚಾರ?' ಹಿಗ್ಗಿನ ಆದರೆ ದಣಿವಿನ ದನಿಯಲ್ಲಿ ಆತ ಕೇಳಿದನು. ಅವಳಿಗೆ ತುಸು ಕಹಿಯಾದ ಭಾವನೆ. ಆ ಸರ್ಜನ್ನನಂಥ ಒಳ್ಳೆಯ ಬಾಡಿಗೆಗಾರ 'ಕುಳ'ವನ್ನು ಮದುವೆಯ ಮೂಲಕ ತಾನು ಕಳೆದುಕೊಳ್ಳಬೇಕಾಗಿಬಂತಲ್ಲ. ಅವಳ ಮನೆಯಲ್ಲಿ ಇರುವನಕ ಆತ ಒಳ್ಳೆ ಲಾಭಕಾರಿಯೆ ಆಗಿದ್ದ. ಇನ್ನೂ ಇಂಥ ಇನ್ನೊಬ್ಬ ಬಾಡಿಗೆಗಾರ ಆ ಹಿಂಟಾಕ ಹಳ್ಳಿಯ ನಿರ್ಜನ ಪ್ರದೇಶದಲ್ಲಿ ಸಿಗುವ ಸಂಭವ ತೀರ ಕಡಮೆ ಎಂದಾಗ ಈ ಹಾನಿ ಇನ್ನಿಷ್ಟು ಕೊರಗು ಎನಿಸಿತು. 'ಅದು ನಾನು ಹೇಳಿ ತೋರಿಸಲೊಲ್ಲೆ, ಸ್ವಾಮೀ, ಅದೂ ನಿಮಗೆ ತೀರ ಒಲ್ಲೆ',

'ನನ್ನ ಪರಿವೆ ಬೇಡ. ಮಿಸೆಸ್ ಕಾಕ್ಸ, ಹೂಂ. ಮುಂದುವರಿಯಿರಿ.'

ನಿಮ್ಮ ಗಡಿಬಿಡಿಯ ಮದುವೆಯ ಬಗ್ಗೆ ಜನ ಆಡಿಕೊಳ್ಳೋದು, ಡಾಕ್ಟರ ಸಾಹೇಬ; ಅವರು ಅಂದು ಕೊಂಡಿದ್ದರು: ಈ ಡಾಕ್ಟರರು ಶಾಸ್ತ್ರ—ವಿದ್ಯೆಯಲ್ಲಿ ಮಹಾಬುದ್ಧಿವಂತರು. ಇಂಥವರು ಆ ಮೆಲಬರಿ ಕುಟುಂಬದಲ್ಲಿ ಹೇಗೆ ಮದುವೆಯಾಗಿ ಹೋದರು? ಇದನ್ನೆ ಈ ಮಂದಿ ನಂಬಲಾರರು. ಏಕೆಂದರೆ ಮೆಲಬರಿ ಮನೆತನ ಇದೆ ಹಿಂಟಾಕದಲ್ಲಿ ಹುಟ್ಟಿ ಬೆಳೆದದ್ದು—ನಾನು ಹೇಗೋ ಹಾಗೆಯೇ.'

ಈ ಮಾತಿಗೆ ಫಿಟ್ಝ್‌ಪಿಯರ್ಸ್ ಕಸಿವಿಸಿ ಆದನು. ಆದರೆ ಅದನ್ನು ತಾನೇ ಲೆಕ್ಕಿಸಲು ಒಪ್ಪದೆ ಆತ ಅಂದನು, 'ಅವರು ತಮ್ಮ ಅಭಿಪ್ರಾಯಗಳನ್ನು ತಮಗಾಗಿಯೇ ದಯಮಾಡಿ ಇಟ್ಟುಕೊಳ್ಳಲಿ. ಇನ್ನೇನಾದರೂ ಇದೆಯೇ?'

'ಹೌದು. ಆಕೆ ಕೊನೆಗೂ ತಿರುಗಿ ಮನೆಗೆ ಬಂದಳು.'

'ಯಾರು ಆಕೆ?'

'ಶ್ರೀಮತಿ ಚಾರ್ಮಂದ'

'ಓ ಹೌದೇ?' ಫಿಟ್ಝ್‌ಪಿಯರ್ಸ್ ತೀರ ಸ್ವಲ್ಪ ಆಸಕ್ತಿ ಕಾಣಿಸುತ್ತ ಅಂದನು. 'ನಾನು ಅವಳನ್ನು ಕಾಣಲೇ ಇಲ್ಲ.'

‘ ಆದರೆ ಸ್ವಾಮೀ, ಅವಳು ನಿಮ್ಮನ್ನು ಕಂಡಿದ್ದಾಳೆ.

‘ ಎಂದಿಗೂ ಇಲ್ಲ.’

‘ ಹೌದು. ಅವಳು ನಿಮ್ಮನ್ನು ಒಂದೆರಡು ಗಳಿಗೆ ಯಾವದೋ ಹಾಟೆಲಿನಲ್ಲಿ ಕಂಡಳಂತೆ. ಆಗ ನೀವು ಪ್ರವಾಸದಲ್ಲಿ ಇದ್ದಿರಿ. ಅಲ್ಲಿ ಅವಳು ಆಕಸ್ಮಿಕವಾಗಿ ನಿಮ್ಮ ಹೆಸರನ್ನು ಕೇಳಿದಳು. ಆಗ ಅವಳು ನಿಮ್ಮ ಬಗೆಗೆ ಏನೋ ಅಭಿಪ್ರಾಯ ಆಡಿದಾಗ ಮಿಸ್ ಎಲ್ಲಿಸ್—ಅವಳ ಪರಿಚಾರಿಕೆ—ನೀವು ಮಲಬರಿಯ ಮಗಳೊಂದಿಗೆ ಮದುವೆಯಾಗಿ ಈಗ ಮಧುಚಂದ್ರದ ಸಂಚಾರದಲ್ಲಿ ತೊಡಗಿದ್ದೀರೆಂದು ಅವಳಿಗೆ ಹೇಳಿದಳಂತೆ. ಆಗ ಮಿಸೆಸ್ ಚಾರ್ಮ್‌ಂದ ಆಡಿದಳಂತೆ, ‘ ಆತ ಇದಕ್ಕಿಂತ ಹೆಚ್ಚಿನದೇನಾದರೂ ಮಾಡಬಹುದಿತ್ತು. ಇದರಿಂದ ಆತ ತನ್ನ ಭವಿಷ್ಯವನ್ನೆ ಹಾಳುಮಾಡಿಕೊಂಡ !’ ಆಕೆ ಹೀಗೆನ್ನಬೇಕೇ ?’

ಆ ಹುರುಪಿನ ಮನೆಯೊಡತಿಯೊಂದಿಗೆ ಫಿಟ್ಝಪಿಯರ್ಸ ಇನ್ನೂ ಹೆಚ್ಚು ಮಾತಾಡಲಿಲ್ಲ. ಯಾವ ಲಗುಬಗೆಯೂ ಇಲ್ಲದ ಹೆಜ್ಜೆ ಹಾಕುತ್ತ ಆತ ಮನೆಗೆ ನಡೆದನು. ಸದ್ದಿಲ್ಲದೆ ಬಾಗಿಲನ್ನು ಹೊಕ್ಕು, ನೇರವಾಗಿ ಮಾಳಿಗೆ ಏರಿ ತನ್ನ ದಿವಾಣಖಾನೆಗೆ ಹೋದನು. ಅಲ್ಲಿ ತನ್ನ ಹೆಂಡತಿಯನ್ನು ಕಾಣುವ ನಿರೀಕ್ಷೆಯಿಂದ ಆತ ಒಳಗೆ ಕಾಲಿಟ್ಟನು.

ಬೆಂಕಿ ಇನ್ನೂ ಉರಿಯುತ್ತಲೇ ಇತ್ತು. ಆದರೆ ದೀಪಗಳು ಇದ್ದಿಲ್ಲ. ಊಟದ ಕೋಣೆಯೆಂದು ಸಜ್ಜುಗೊಳಿಸಿದ ಆಚೆಯ ಕೊಠಡಿಯಲ್ಲಿ ಹೋಗಿ ನೋಡಿದನು. ಆದರೆ ಅಲ್ಲಿ ರಾತ್ರಿಯ ಊಟಕ್ಕಾಗಿ ಇನ್ನೂ ಮೇಜು ಸಿದ್ಧವಾಗಿದ್ದಿಲ್ಲ. ಆತ ನಿಚ್ಚಣಿಕೆಯ ಮೇಲ್ತುದಿಗೆ ಬಂದನು. ಅಲ್ಲಿಂದ ಕೆಳಗೆ ಮಲಬರಿಯ ನಡುಮನೆಯೊಳಗಿಂದ ಎದ್ದ ದನಿಗಳ ಕಲಕಲವನ್ನು ಕೇಳಿದನು. ಆ ಸ್ವರಮೇಳದಲ್ಲಿ ಗ್ರೇಸಳ ದನಿಯೂ ಆಗಾಗ್ಗೆ ಸೇರಿಬರುತಿತ್ತು.

ಕೆಳಗೆ ಇಳಿದು ಬಂದು ಆ ಕೋಣೆಯಲ್ಲಿ ಬಾಗಿಲಿನಲ್ಲಿಯೆ ಇಣಕಿ ನೋಡಿದಾಗ, ಅಲ್ಲಿ ನೆರಹೊರೆಯವರ ಹಾಗೂ ಇತರ ಪರಿಚಿತರ ಒಂದು ದೊಡ್ಡ ನೆರವಿಯೆ ಕೂಡಿದ್ದು ಕಂಡು ಬಂತು. ಅವರು ಶ್ರೀಮತೀ ಫಿಟ್ಝಪಿಯರ್ಸಳ ಗೃಹಾಗಮನಕ್ಕಾಗಿ ಅವಳನ್ನು ಅಭಿನಂದಿಸುತಿದ್ದರು ; ಪ್ರಶಂಸಿಸುತಿದ್ದರು. ಅವರಲ್ಲಿ ಹಾಲು ಹೈನಿನ ಕ್ವಾಟ್ರಿಗೌಡನೂ ಇದ್ದನು. ಹಿರಿಯ ಹಿಂಟಾಕದಿಂದ ರಿಲೀವಿಂಗ್ ಆಫೀಸರನೂ ಸೇರಿದ್ದನು. ರಸ್ತೆ ಕಂಟ್ರಾಕ್ಟರನೂ, ಮಾದಿಗರ ಮುಖ್ಯನೂ, ಅಬಕಾರಿ ಸುಂಕದವನೂ, ಇತರ ಕೆಲವರೂ ಅವರ ಹೆಂಡಂದಿರೊಂದಿಗೆ ಕೂಡಿದ್ದರು. ಗ್ರೇಸಳು—ಇನ್ನೂ ತರಳೆ ಆದ್ದರಿಂದ—ತನ್ನ ಹೊಸ ಪ್ರೌಢಿಮೆಯನ್ನು ಗಂಡನ ಘನಸ್ಥಿತಿಯನ್ನೂ ಮರೆತು ಅವರ ನಡುವೆ ನಾಚುತ್ತ ನಗುತ್ತ ಅವರ ಕೊಂಡಾಟವನ್ನು ಸ್ವೀಕರಿಸುತ್ತ, ಹಳೆಯ ಸಂಗಾಡಿತನದ ಸಕಲ ಸೌಖ್ಯದಲ್ಲಿ ಮೈಮರೆತಿದ್ದಳು.

ಫಿಟ್ಝಪಿರ್ಯಸನಿಗೆ ಆ ಪ್ರಸಂಗದ ಕುರಿತೇ ಆಳವಾದ ಅರುಚಿ ಉಂಟಾಯಿತು.

ಮೆಲಬರಿಯು ಆ ಕೋಣೆಯಲ್ಲಿ ಎಲ್ಲೂ ಇದ್ದಿಲ್ಲ. ಆದರೆ ಮೆಲಬರಿಯ ಹೆಂಡತಿ ಡಾಕ್ಟರನನ್ನು ಕಂಡೊಡನೆ ಎದ್ದು ಅವನೆಡೆಗೆ ಬಂದಳು.

'ಗ್ರೇಸ ಮತ್ತು ನಾನು ಅಂದುಕೊಂಡೆವು : ನೀವು ಬಂದದ್ದು ಕೇಳಿ ಅವರೆಲ್ಲ ಬಂದರು ಅಂದಾಗ ಅವರಿಗೆಲ್ಲ ರಾತ್ರಿ ಊಟಕ್ಕೆ ಆದರೂ ಇಟ್ಟುಕೊಳ್ಳೋಣ. ಆಗ ಗ್ರೇಸಳೂ ಸೂಚಿಸಿದಳು : ನಾವೆಲ್ಲರೂ ಒಟ್ಟಾಗಿಯೆ ಊಟಮಾಡೋಣ. ಏಕೆಂದರೆ ಇದು ನಿಮ್ಮ ಗೃಹ ಪ್ರವೇಶದ ಮೊದಲು ರಾತ್ರಿ.'

ಈ ಮಾತು ಮುಗಿಯುವನಕ ಗ್ರೇಸಳೂ ಎದ್ದು ಬಂದಿದ್ದಳು. 'ಅವರು ನನ್ನನ್ನು ಇಷ್ಟು ಕಳಕಳಿಯಿಂದ ಸ್ವಾಗತಿಸಲು ಬಂದದ್ದು ಅವರ ಒಳ್ಳೇತನವಲ್ಲವೇ?' ಹೀಗೆನ್ನುವಾಗ ಅವಳ ಕಣ್ಣಲ್ಲಿ ಮೈತ್ರಿಯ ಹನಿಗಳು ಮೂಡಿ ಬಂದವು. ಇಷ್ಟೆಲ್ಲ ಸದ್ಭಾವನೆಯ ನಂತರ ನಾವಿಬ್ಬರೆ ಮೇಲೆ ಊಟದ ಕೋಣೆಯಲ್ಲಿ ಕದ ಹಾಕಿಕೊಂಡು ಕೂಡ್ರುವ ವಿಚಾರವೆ ನನಗೆ ಏಕೋ ಬರಲಿಲ್ಲ' ಆಕೆ ಉದ್ಗರಿಸಿದಳು.

'ಖಂಡಿತವಾಗಿಯೂ ಇಲ್ಲ, ಖಂಡಿತವಾಗಿಯೂ.' ಫಿಟ್ಝಪಿಯರ್ಸ ಅಂದನು, ಮತ್ತು ಅವನು ಹುತಾತ್ಮನಾಗಲು ಹೊರಟ ವೀರನ ನಗೆಮೊಗದೊಂದಿಗೆ ಕೋಣೆಯನ್ನು ಪ್ರವೇಶಿಸಿದನು.

ಅವರೆಲ್ಲರೂ ಊಟದ ಮೇಜಿನ ಬಳಿಗೆ ಕೂತ ಕೂಡಲೆ ಮೆಲಬರಿ ಒಳಗೆ ಬಂದನು. ಅವನಿಗೆ ಕೂಡಲೆ ಹೊಳೆಯಿತು—ಫಿಟ್ಝಪಿಯರ್ಸನಿಗೆ ಇಷ್ಟೆಲ್ಲ ಪ್ರದರ್ಶನದ ಸ್ವಾಗತ ಬೇಕೆನಿಸಿದ್ದಿಲ್ಲ. ಆದ್ದರಿಂದ ಅವನು ಗುಟ್ಟಾಗಿ ಹೆಂಡತಿಗೆ ಈ ದಾಷ್ಟ್ರ್ಯಕ್ಕಾಗಿ ಛೀ ಹಾಕಿದನು. ಆದಕ್ಕೆ ಇದು ತನ್ನಷ್ಟೆ ಗ್ರೇಸಳದೂ ಕಾರ್ಯಭಾರವೆಂದು ಅವನ ಹೆಂಡತಿಯು ಅಂದಳು. ಆ ಮೇಲೆ ಆ ತರಳೆಯ ವಾತ್ಸಲ್ಯಮಯ ತಂದೆ ಇನ್ನೇನು ಅನ್ನುವಂತೆ ಇದ್ದಿಲ್ಲ.

ಈ ನಡುವೆ ಆ ಅಗಲ ಮೊಣಕೈಗಳ ಉಲ್ಲಾಸಮಯ ಮಂಡಳಿಯಲ್ಲಿ ಫಿಟ್ಝಪಿಯರ್ಸ ಸಾಧ್ಯವಿದ್ದಷ್ಟು ಚೆನ್ನಾಗಿ ನಡೆದಾಡುತಿದ್ದನು. ಅವರೆಲ್ಲ ಅವನ ಸುತ್ತಲು ತಿನ್ನುತ್ತ ಕುಡಿಯುತ್ತ ಗಹಗಹಿಸುತ್ತ, ನಗೆಚಾಟಿಕೆಯ ಚಟಾಕಿ ಹಾರಿಸುತ್ತ, ಕೂತಿದ್ದರು. ಮತ್ತು ಅವರ ಆ ಸುಮ್ಮಾನದ ಸುಪ್ರಸನ್ನತೆಯ ಕಾವಿಗೆ ತಾನೂ ಕರಗಿ ಆತನೂ ಒಪ್ಪಲೇ ಬೇಕಾಯಿತು—ಅವನು ಅನುಭವಿಸಿದ ಮೇಜವಾನಿಗಳಲ್ಲಿ ಇದು ಹಿಗ್ಗಿನಲ್ಲಿ ಏನೇನೂ ಕಡಮೆ ಇದ್ದಿಲ್ಲ.

ಆದಾಗ್ಯೂ ಆಗಾಗ್ಗೆ ಚಾರ್ಮಂಡಳು ಹೇಳಿದಳೆಂಬ ಆ ಮಾತುಗಳು— ತಾನು ತನ್ನ ಭವಿಷ್ಯವೆಲ್ಲ ಹಾಳುಮಾಡಿಕೊಂಡೆನೆಂಬ ಮಾತುಗಳು — ಅವನ ತಲೆಯಲ್ಲಿ ದೆವ್ವದಂತೆ ಸುಳಿದಾಡುತಿದ್ದವು. ಗೋಡೆಯಲ್ಲಿ ಬರೆದಿಟ್ಟಂತೆ ಮತ್ತೆ ಮತ್ತೆ ನೆನಪಾಗುತಿದ್ದವು. ಹಾಗೆ ಆದಾಗೆಲ್ಲ ಅವನು ಒಮ್ಮೆಲೆ ಗಂಭೀರನಾಗುತಿದ್ದನು, ಅನ್ಯಮನಸ್ಕನಾಗುತಿದ್ದನು. ಒಂದು ಗಳಿಗೆಗೆ ಆತನೆ, ಪ್ರಶ್ನೆ ಹಾಕಿಕೊಳ್ಳುತಿದ್ದನು, ಮಿಸೆಸ್ ಚಾರ್ಮಂಡ ಆಗಲಿ ಇನ್ನಾರೆ ಮಹಿಳೆಯಾಗಲಿ, ತನ್ನ ಭವಿತವ್ಯದ ಅವಕಾಶಗಳ

ಬಗೆಗೆ ಅಭಿಪ್ರಾಯ ತಾಳುವ ಉಪದ್ವ್ಯಾಪವನ್ನೇಕೆ ಮಾಡಬೇಕು ? ಇನ್ನೊಂದು ಗಳಿಗೆಗೆ ಅವನಿಗೆ ತಾನೇ ಅನಿಸುತ್ತಿತ್ತು. ಊರಿನ, ಆ ಸೀಮೆಯ ಡಾಕ್ಟರನು ತಾನು ಏನೂ ಸಿಟ್ಟಾಗುವಂತೆ ಇಲ್ಲ. ಆಗ ಆತ ಒಂದು ಗ್ಲಾಸು ಮದ್ಯ ಬಗ್ಗಿಸಿ ಅದರಲ್ಲಿ ತನ್ನ ವಿಕಲ್ಪಗಳನೆಲ್ಲ ತೊಳೆದು ಬಿಡುತಿದ್ದನು.

ಆ ತೊಡಕು—ತೊಳೆದಾಟಗಳನ್ನು ತಂದೆಯಂತೆ ಗ್ರೇಸಳೂ ಗಮನಿಸಿದಳು. ಆದ್ದರಿಂದ ಬಂದವರಲ್ಲಿ ಮೊದಲನೆಯ ಅಭ್ಯಾಗತನೆದ್ದು 'ಹೊತ್ತು ಬಹಳವಾಯಿತು ಇನ್ನು ಮನೆಗೆ ಹೋಗುವ ವಿಚಾರ ಮಾಡಬೇಕು.'—ಎಂದಾಗ ಅವರಿಬ್ಬರಿಗೂ ಒಂದು ಭಾರ ಇಳಿದಂತೆ ಅನಿಸಿತು. ಆ ಮಾತಿಗೆ ಮೆಲಬರಿಯೂ ದಿಗ್ಗನೆ ಸ್ಪ್ರಿಂಗ್ ಒತ್ತಿದಂತೆ ಎದ್ದನು. ಹತ್ತು ನಿಮಿಷಗಳಲ್ಲಿ ಅವರೆಲ್ಲರೂ ಹೊರಟೆದ್ದು ಹೋದರು.

'ಈವಾಗ, ಗ್ರೇಸ', ಅವಳ ಗಂಡನೆಂದನು, ತಮ್ಮ ಏಕಾಂತದ ಕೋಣೆಯಲ್ಲಿ ಅವರಿಬ್ಬರೇ ಉಳಿದಾಗ, 'ಸಂಜೆಯೆಲ್ಲ ಸೊಗಸಾಗಿಯೆ ಕಳೆಯಿತು. ಪ್ರತಿಯೊಬ್ಬರೂ ಪ್ರೀತಿಯಿಂದ ನಡೆದರು. ಆದರೆ ನಮ್ಮ ಇಲ್ಲಿಯ ವಸತಿಯ ಬಗೆಗೆ ನಾವು ಒಂದು ತೀರ್ಮಾನಕ್ಕೆ ಬರುವುದು ಲೇಸು. ಈ ಕೋಣೆಗಳಲ್ಲಿ ನಾವು ಮುಂದುವರಿಯುವುದೇ ಆದರೆ ಇನ್ನು ಮುಂದೆ ಕೆಳಗೆ ನಿಮ್ಮ ಮಂದಿಯೊಂದಿಗೆ ಸೇರಿಕೊಳ್ಳುವುದು ಬೇಡ. ನನಗೆ ಅದು ಅಸಹ್ಯ, ಇದು ಸತ್ಯ.'

ಅವಳು ಖೇದಚಕಿತಳಾದಳು. ಅವನು ಪ್ರಣಯಾರಾಧನೆಯ ಕಾಲದಲ್ಲಿ ಮಲೆನಾಡಿಗರ ಈ ಹಳೆಯ ಮಾದರಿಯ ಬದುಕಿನ ರೀತಿಗಳಲ್ಲಿ ಅಷ್ಟೊಂದು ಆಸಕ್ತಿ ಉಂಟೆಂದು ಅಂದುಕೊಂಡಿದ್ದವನು ಈಗ ಒಮ್ಮೆಲೆ ಅವುಗಳಲ್ಲಿ ಇಷ್ಟೊಂದು ಅರುಚಿ ಅಸಹನೆ ಆತ ಪ್ರಕಟಿಸಿದ್ದನು. ಆದರೆ ಆಕೆ ಇದನ್ನು ಕ್ಷಣದಲ್ಲಿ ಸಮ್ಮತಿಸಿದಳು.

'ನಾವು ಬರೆ ನಿನ್ನ ತಂದೆಯ ಮನೆಯ ನಿವಾಸಿಗಳಾಗಿರಬೇಕು.' ಆತ ಮುಂದುವರಿದ, 'ಮತ್ತು ನಾವು ಬರುವುದು ಹೋಗುವುದು, ಬೇರೆ ಕಡೆಗೆ ಇದ್ದರೆ ಹೇಗೋ ಅಷ್ಟೇ ಸ್ವತಂತ್ರವಾಗಿರಬೇಕು.'

'ಖಂಡಿತವಾಗಿ ಎಡ್ರೆಡ್—ಅದು ಹಾಗೆಯೆ ಆಗಬೇಕೆಂದು ನನಗೂ ತೋರುತ್ತದೆ.'

'ಆದರೆ ನಾನು ಇಲ್ಲದಾಗ ನೀನು ಆ ಎಲ್ಲ ಮಂದಿಯೊಂದಿಗೆ ಸೇರಿಕೊಂಡೆ. ನಾನು ಅದನ್ನು ಒಪ್ಪುವೆನೋ ಅಲ್ಲವೋ, ಎಂಬುದನ್ನು ತಿಳಿದುಕೊಳ್ಳಲು ನೀನು ತಡೆಯಲಿಲ್ಲ. ನಾನು ಬಂದಾಗ ನನಗೂ ತಡೆಯಲಾಗಲಿಲ್ಲ.'

ಆಕೆ ನಿಟ್ಟುಸಿರು ಎಳೆಯುತ್ತ, 'ಹೌದು—ನನಗೀಗ ತೋರುತ್ತದೆ, ನಾನು ಆಗ ನಿನಗಾಗಿ ಕಾಯಬೇಕಾಗಿತ್ತು. ಅವರು ಅನಿರೀಕ್ಷಿತವಾಗಿಯೇ ಬಂದರು. ಆದರೂ ನಾನು ಮಾಡಿದ್ದು ಒಳಿತಿಗಾಗಿಯೇ ಎಂದು ಭಾವಿಸಿದೆನು.'

ಈ ರೀತಿ ಆ ವಿವಾದವು ಮುಕ್ತಾಯಗೊಂಡಿತು. ಮರುದಿನ ಫಿಟ್ಝಪಿಯರ್ಸ ತನ್ನ ಹಳೆಯ ಸುತ್ತಾಟದ ಭೇಟಿಗಳಿಗೆ ತೊಡಗಿದನು. ಆದರೆ ಅವನ ಅತಿಸೂಕ್ಷ್ಮ

ಕಣ್ಣಿಗೆ ಸುಲಭವಾಗಿ ಕಂಡು ಬಂದಿತು — ಅಥವಾ ಕಂಡು ಬಂದಂತೆ ಅನಿಸಿತು — ಏನೆಂದರೆ, ಏನೋ ಅಪರಿಮಿತ ಶಕ್ತಿಯ, ವೈಜ್ಞಾನಿಕ ಹಾಗೂ ಸಾಮಾಜಿಕ ಭಾಗ್ಯದ ಒಬ್ಬ ಪರಕೀಯನೂ ಅಗಮ್ಯನೂ ಆದ ಸದ್ಗೃಹಸ್ಥನೆಂದು ಅವನನ್ನು ಇನ್ನು ಯಾರೂ ಭಾವಿಸದಾದರು. ಅದರ ಬದಲು ಮೆಲಬರಿಯ ಸಮಾನಸ್ಕಂದನೆಂದೂ ಒಂದಂಶದಲ್ಲಿ ತಮ್ಮೆಲ್ಲರೊಳಗಿನವನೇ ಒಬ್ಬನೆಂದೂ ಆತನನ್ನು ತಿಳಿದರು. ಹಿಂಟಾಕ ಮಲೆನಾಡಿಗರು ತಮ್ಮ ವಂಶಪಾರಂಪರಾಗತ ನಿರ್ಧಾರದಿಂದ ಕುಲೀನ ಶ್ರೇಷ್ಠತೆಯ ತತ್ವವನ್ನು ಎತ್ತಿ ಹಿಡಿದವರು. ಫಿಟ್ಜ್‌ಪಿಯರ್ಸನು ಹಳೆಯ ಒಕಬರಿ ಫಿಟ್ಜ್‌ಪಿಯರ್ಸರೊಳಗೆ ಒಬ್ಬನೆಂದು ಗೊತ್ತಾದ ಕೂಡಲೆ, ತಾವು ಇದುವರೆಗೆ ಹ್ಯಾಟಿಗೆ ಕೈ ಹಚ್ಚಿ ಸೇವೆಯಲ್ಲಿ ಅದ್ಯತೆ ತತ್ಪರತೆ ಕಾಣಿಸಿ ಮತ್ತು ಆದರದಿಂದ ಅವನನ್ನು ಸಂಬೋಧಿಸಿ, ಇಲ್ಲವೆ ಸಮಿಪಿಸಿ ಆತನಿಗೆ ತೋರಿಸಿದ ಮನ್ನಣೆಯು ವ್ಯರ್ಥವಾಯಿತೆಂದು ತಿಳಿದರು. ಏಕೆಂದರೆ ಮೆಲಬರಿ ಇಂಥ ಮನ್ನಣೆಗಾಗಿ ಮತ್ತೆ ಮತ್ತೆ ಹಣ ತೆತ್ತರೂ ಅವನಿಗೆ ಅದು ಸಿಗದೆ ಹೋಯಿತು. ಆದರೆ ಈಗ ಮದುವೆಯಿಂದಾಗಿ ತನ್ನ ಉದ್ದೇಶಕ್ಕೆ ತಾನೇ ದ್ರೋಹಬಗೆದನೆಂದು ಸಿದ್ಧವಾದ ಫಿಟ್ಜ್‌ಪಿಯರ್ಸನನ್ನು ಪ್ರಭಾವಲಯವುಳ್ಳಂಥವನೆಂದು ಜನ ನಂಬದಾದರು. ಅದೇ ಸಮಯ ಡಾಕ್ಟರನೆಂದೂ ಅವನನ್ನು ಹಳೆಯ ಜೊನ್ಸನಿಗಿಂತ ಹೆಚ್ಚಿನವನೆಂದೂ ಅವನ ಬೆಲೆ ಕಟ್ಟದಾದರು. (ಈವರೆಗೆ ಈ ಜನರು ಜೊನ್ಸನ ತಾತ್ಸಾರವನ್ನೆ ಮಾಡುತ್ತ ಬಂದಿದ್ದರು.)

ಅವನ ಕೆಲವೇ ರೋಗಿಗಳೂ ಕಳೆದ ಎರಡು ತಿಂಗಳ ಅನುಪಸ್ಥಿತಿಯಲ್ಲಿ ಇನ್ನೂ ಕಡಮೆ ಆಗಿದ್ದರು. ಮತ್ತು ಈಗ ಮರಳಿ ಬಂದೊಡನೆ ಊರಿನ ಹಿರಿಯರ ಮಂಡಳದಿಂದ ಅವನಲ್ಲಿ ಒಂದು ದೂರು ಬಂದಿತು — ಅವನ ಬದಲಿಯ ಡಾಕ್ಟರನು ಕಾಸಿಗೂ ಗತಿ ಇಲ್ಲದ ಒಬ್ಬ ರೋಗಿಯನ್ನು ಅಲಕ್ಷ್ಯ ಮಾಡಿದ್ದನು. ಆಗ ಅಭಿಮಾನದ ಒಂದು ಹುಚ್ಚು ಆವೇಶದಲ್ಲಿ ಫಿಟ್ಜ್‌ಪಿಯರ್ಸ ಈ ಮಂಡಳದ ಸರ್ಜನ್ ಪದವಿಗೆ ರಾಜಿನಾಮೆ ಕೊಟ್ಟು ಬಿಟ್ಟನು. ಈ ಪದವಿಯೆ ಅವನ ವ್ಯವಸಾಯ ಆ ಊರಲ್ಲಿ ಬೆಳೆಯಲು ಮೂಲಾಧಾರವಾಗಿತ್ತು.

ಹದಿನೈದು ದಿನಗಳ ನಂತರ ಆತನು ಒಂದು ಸಂಜೆಗೆ, ಎಂದಿಗಿಂತ ಹೆಚ್ಚು ಲಗು ಬಗೆಯಿಂದ ಮನೆಗೆ, ಗ್ರೇಸಳಿದ್ದಲ್ಲಿಗೆ ಬಂದನು. 'ನಾನು ಹಿಂದೆ ಬರೆದು ಕೇಳಿದ ಬಡವೌಷಧದ ವೈದ್ಯಕೀಯ ವ್ಯವಸಾಯ ಕ್ಷೇತ್ರದ ಕುರಿತು ಅವರು ನನಗೆ ಮತ್ತೆ ಬರೆದಿದ್ದಾರೆ.' ಆತ ಅಂದನು, 'ಅದಕ್ಕಾಗಿ ತುಂಬ ಬೇಕಾದ ಹಣ ಎಂಟು ನೂರು ಪೌಂಡು, ಮತ್ತು ಅದನ್ನು ನಿನ್ನ ತಂದೆ ಮತ್ತು ನಾನು ಇಬ್ಬರೂ ಒಟ್ಟಾಗಿ ಒದಗಿಸ ಬೇಕು. ಅಂದರೇನೇ ಈ ದರಿದ್ರ ಸ್ಥಳದಿಂದ ನಾವು ದೂರ ಹೋಗಬಹುದು.'

ಈ ಪ್ರಶ್ನೆಯನ್ನು ಈ ಮೊದಲು ಚರ್ಚಿಸಿತ್ತು. ಅದ್ದರಿಂದ ಅದನ್ನು ಮತ್ತೆ ಪರ್ಯಾಲೋಚಿಸಲು ಆಕೆ ಸಿದ್ಧಳಿದ್ದಿಲ್ಲವೆಂದಲ್ಲ. ಈ ಕುರಿತು ಮತ್ತೆ ಚರ್ಚೆ ಬಹಳ ಮುಂದುವರಿಯಲಿಲ್ಲ; ಅಷ್ಟರಲ್ಲಿ ಬಾಗಿಲನ್ನು ಯಾರೋ ಬಡಿದರು ಮತ್ತು

ಆಲಿವರಮ್ಮ ಮರುಕ್ಷಣಕ್ಕೆ ಒಳಗೆ ಓಡಿಬಂದು ಹೇಳಿದಳು — ಹಿಂಟಾಕ್ ದೊಡ್ಡ ಮನೆಯಿಂದ ಕರೆ ಬಂದಿದೆ ; ಅಲ್ಲಿ ಯಾರಿಗೊ ಉಪಚರಿಸಲು ಡಾ. ಫಿಟ್ಜ್‌ಪಿಯರ್ಸ್ ಕೂಡಲೆ ಹೊರಟು ಬರಬೇಕು. ಶ್ರೀಮತಿ ಚಾರ್ಮೆಂದಳ ಸಾರೋಟು ಗಾಡಿ ಬೋರಲು ಬಿದ್ದು ಅವಳಿಗೆ ಆ ಅಪಘಾತದಲ್ಲಿ ತುಸು ಅಪಾಯವಾಗಿತ್ತು.

'ಏನೇ ಇರಲಿ, ಇದು ಒಂದು ಅನುಕೂಲ', ಫಿಟ್ಜ್‌ಪಿಯರ್ಸ್ ಏಳುತ್ತ ಅಂದನು. ಅವನಿಗೇ ವಾಖ್ಯೆ ಮಾಡಲು ಶಕ್ಯವಾಗದಂಥ ಸ್ವಾರಸ್ಯವನ್ನು ಈ ಕರೆಯಲ್ಲಿ ಆತ ಕಂಡಂತೆ ಇತ್ತು. 'ನನಗೆ ಏನೋ ಒಂದು ದೈವ ಸಂಕೇತದ ಭಾವನೆ — ಈ ಗೂಢ ಹೆಂಗಸು ಮತ್ತು ನಾನು ಹೆಚ್ಚು ಪರಿಚಯ ಮಾಡಿಕೊಳ್ಳಲಿದ್ದೇವೆ.'

ಮಾತುಗಳನ್ನು ಆತ ತನ್ನೊಳಗೆ ಪಿಸುಗುಟ್ಟಿದನು.

ಆತ ಸಜ್ಜಾದೊಡನೆ ಗ್ರೇಸಳು 'ಗುಡ್‌ನೈಟ್' ಅಂದಳು, 'ಬಹುಶಃ ನೀನು ತಿರುಗಿ ಬರುವ ತನಕ ನಾನು ನಿದ್ದೆ ಹೋಗಬಹುದು.'

'ಗುಡ್‌ನೈಟ್' ಎಂದನು ಫಿಟ್ಜ್‌ಪಿಯರ್ಸ್ ಲಕ್ಷವೇ ಇಲ್ಲದೆ, ಮತ್ತು ಮಹಡಿಯಿಂದ ಇಳಿದು ಹೋದನು. ಇದೇ ಮೊದಲು — ಅವರ ಮದುವೆಯಾದಂದಿನಿಂದ ಅಂದಿನ ತನಕ — ಆತ ಅವಳನ್ನು ಚುಂಬಿಸದೆ ಬೀಳ್ಕೊಟ್ಟಿದ್ದು !

೨೭

ವಿಂಟರಬೋರ್ನ್ ತನ್ನ ಮನೆಯನ್ನು ಬಿಟ್ಟುಕೊಟ್ಟಿದ್ದನು. ಆ ಮೂಲಕ ಹಿಂಟಾಕದಲ್ಲಿ ಅವನ ಮೋರೆ ಅಪರೂಪಕ್ಕೆ ಕಾಣಸಿಗುತ್ತಿತ್ತು. ಅವನು ಆ ಸ್ಥಳದಿಂದ ಪೂರ್ತಿ ಅದೃಶ್ಯನಾಗಿಯೆ ಬಿಡುತ್ತಿದ್ದನೇನೋ. ಆದರೆ ಮೆಲಬರಿಯೊಂದಿಗೆ ಅವನಿಗೆ ಏನೋ ವ್ಯವಹಾರದ ಸಂಬಂಧವಿತ್ತು. ಮೆಲಬರಿಯ ಆವಾರದಲ್ಲಿಯೆ ಜೈಲ್ಸ ತನ್ನ ಸೇಬಿನ ಸರಾಯಿ ಮಾಡುವ ಗಾಣ, ಯಂತ್ರೋಪಕರಣಗಳನ್ನು ಇಡುತ್ತಿದ್ದನು. ಏಕೆಂದರೆ ಅದನ್ನು ದಾಸ್ತಾನು ಮಾಡಿ ಇಡಲಿಕ್ಕೆ ಅವನಿಗೆ ಇನ್ನೂ ತನ್ನದೆಂಬ ಒಂದು ನೆಲೆ ಇದ್ದಿಲ್ಲ.

ಒಂದು ಅಪರಾಹ್ನ, ಕಾನಿನ ಆಚೆಗೆ ಅವನು ಮಲಗಲು ಬಳಸುವ ಒಂದು ಗುಡಿಸಲಿಗೆ ಆತ ಬಂದಾಗ ಪ್ರಿಯ ಪರಿಚಿತವಾದ ತನ್ನ ತಂದೆಯ ಕಾಲದ ಮನೆಯ ಚಪ್ಪರದ ಒಂದು ಭಾಗವೆ ಮಾಯವಾಗಿತ್ತು. ಆ ಜಮೀನಿನ ಒಡೆಯರ ಅಪ್ಪಣೆಯಂತೆ ಅದರ ಗೋಡೆಗಳೂ ನೆಲಸಮ ಮಾಡಿದ್ದನ್ನು ಜೈಲ್ಸ ಗಮನಿಸಿದನು. ಈ ದಿನಕ್ಕೆ ಸಾಧ್ಯವಾದಲೆಲ್ಲ ಇಂಥ ಗುಡಿಸಲುಗಳನ್ನು ಕಿತ್ತು ಹಾಕುವುದೆ ಆ ಒಡೆಯರ ತತ್ತ್ವವಾಗಿತ್ತು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಅವನಿಗೆ ಆ ಸ್ಥಳದ ಬಗೆಗೆ ಹುಚ್ಚು

ವಿಕಾರವೆನಿಸುವಷ್ಟು ಒಂದು ಭಾವಾನುರಾಗ ಅಂಟಿತ್ತು. ಮತ್ತು ತನ್ನ ಗುಡಿಸಿಲಿನಲ್ಲಿ ರಾತ್ರೆಯ ಊಟ ಮುಗಿದ ನಂತರ, ಮಲಗುವ ಮುಂಚಿನ ಬಿಡುವಿನ ತಾಸನ್ನು ಆತನು ಕಿರಿಯ ಹಿಂಟಾಕಿನಲ್ಲಿ ಸಂಜೆಯ ಮಬ್ಬು ಬೆಳಕಿನಲ್ಲಿ, ತಾನು ಮೊತ್ತಮೊದಲು ಹಗಲ ಬೆಳಕನ್ನು ಕಂಡ ಆ ಹಳೆಮನೆಯಿದ್ದ ನೆಲದ ತುಂಡಿನಲ್ಲಿ ಅಲೆದಾಡಿ ಬರುತ್ತಿದ್ದನು.

ಅನೇಕ ಸಲ ಈ ಸಂಜೆಯ ಸಂಚಾರವನ್ನು ಆತ ಕೈಗೊಂಡಿದ್ದನು. ಆ ಮಬ್ಬುಗತ್ತಲೆಯಲ್ಲಿಯೂ ಆತ ಗುರುತಿಸಬಲ್ಲ—ಹಳೆ ಮನೆಯ ಬೇರೆ ಬೇರೆ ಕೋಣೆಗಳು ಎಲ್ಲೆಲ್ಲಿ ನಿಂತಿದ್ದವೆಂಬುದು. ಆತ ಚಿಕ್ಕಂದಿನಲ್ಲಿ ತನ್ನ ಅಥವಾ ಇತರರ ವಸ್ತ್ರ ಒಡವೆಗಳ ಮೇಲೆ ತನ್ನದೇ ಹೆಸರಿನ ಅಕ್ಷರಗಳನ್ನು ಸುಟ್ಟು ಕೊರೆದ, ಸೇಬು ಮತ್ತು ಬಟಾಟೆಗಳನ್ನು ಸುಟ್ಟು ತಿಂದ, ಅಥವಾ ಕೋವಿಯ ಗುಂಡುಗಳನ್ನು ಒಗೆದಿಟ್ಟ, ಅಡುಗೆಯ ಕೋಣೆಯ ಹೊಗೆಕಿಂಡಿಯ ಆ ಮೂಲೆಯ ಆಕಾರವನ್ನು ಆತ ಗುರುತಿಸಿ ಕಾಣಿಸಬಲ್ಲ. ಹಿಂದೆ ತೋಟವೆಲ್ಲಿತ್ತೆಂದು ತೋರಿಸಲಿಕ್ಕೆ ಸೇಬಿನ ಮರಗಳು ಇನ್ನೂ ಉಳಿದಿದ್ದವು. ಅವುಗಳಲ್ಲಿ ಅತಿ ಹಳೆಯ ಮರ ಒಂದು ಇಂದಿಗೂ ಈಶಾನ್ಯ ದಿಕ್ಕಿಗೆ ಮುರಿದು ಬಾಗಿ ನಿಂತಿತ್ತು. ೧೮೨೪ರ ನವೆಂಬರದ ದೊಡ್ಡ ಬಿರುಗಾಳಿಯು ಆ ಮರಕ್ಕೆ ಈ ಬಾಗನ್ನು ಕೊಟ್ಟಿತ್ತು. ಆ ಗಾಳಿ ಅಂದು ಒಂದು ನಾವೆಯನ್ನೆ ಎತ್ತಿ ಜೆಸಿಲ್ ಹೊಳೆಯ ದಡಕ್ಕೆ ಹಾಕಿತ್ತಂತೆ. ಈಗ ತಮ್ಮ ಬೆಳೆಯ ಭಾರದಡಿಗೆ ಈ ಮರಗಳು ಇನ್ನೂ ಅಡ್ಡಕ್ಕೆ ಬಾಗಿದ್ದವು. ಸೇಬುಗಳು ಅವನ ತಲೆಗೆ ಜಪ್ಪುತ್ತಿದ್ದವು. ನಡೆಯುವಾಗ ಹುಲ್ಲಿನಲ್ಲಿ ಇಪ್ಪತ್ತು ಗಟ್ಟಲೆ ಹಣ್ಣುಗಳನ್ನು ಆತ ತುಳಿಯುತ್ತಿದ್ದನು. ಅವನ್ನು ಹೆಕ್ಕಿ ಕೊಯ್ದು ಸಂಗ್ರಹಿಸಲು ಈಗ ಯಾರೂ ಇದ್ದಿಲ್ಲ.

ಮೇಲೆ ಹೇಳಿದ ಆ ಸಂಜೆಗೆ ವಿಂಟರಬೋರ್ನ್ ಈ ಮರದ ವಾಲಿದ ಬೊಡ್ಡೆಗೆ ಆನಿಸಿ ಅರ್ಧ ಒರಗಿ ಅರ್ಧ ಕೂತು ತನ್ನದೇ ವಿಚಾರಗಳ ತಂದ್ರಿಯಲ್ಲಿ ವಾಡಿಕೆಯಂತೆ ಮುಳುಗಿದ್ದನು. ಕ್ರಮೇಣ ಒಂದೊಂದಾಗಿ ಪುಟ್ಟ ತಾರೆಗಳು, ಅವನ ಕಣ್ಣಿಗೆ ಇದುರಾದ ಆಕಾಶದ ಚೂರಿನಲ್ಲಿ ತಮ್ಮ ತಮ್ಮ ಸ್ಥಾನಗಳನ್ನು ಪಡೆದು ನಿಂತವು. ಆ ಆಕಾಶ ಕಾಣುವಲ್ಲಿ ಹಿಂದೆ ಅವನ ಮನೆಯ ಗೋಡೆಗಳೂ ಹೊಗೆಗಿಂಡಿಯ ಕಂಬಗಳೂ ತಮ್ಮ ರೇಖಾಕೃತಿಗಳನ್ನು ಎದ್ದು ನಿಲ್ಲಿಸಿದ್ದವು. ಆ ಮನೆಯು ಅಸಡ್ಡಾಳವಾಗಿ ರಸ್ತೆಯಲ್ಲಿಯೇ ಮುನ್ನುಗ್ಗಿತ್ತು. ಈಗ ಅದಿಲ್ಲದೆ ತೆರವು ಬಿದ್ದ ಅವಕಾಶ ಒಡೆದೆದ್ದು ಕಾಣುತ್ತಿತ್ತು.

ನೆಲೆಸಿದ ಮೌನದಲ್ಲಿ ಕುದುರೆಗಳ ಗುದುಕಿನ ಮತ್ತು ಸಾರೋಟಿನ ಗಾಲಿಗಳ ಸದ್ದು ಸ್ಪಷ್ಟವಾಯಿತು. ತೆರೆದ ಬಾನಿನ ಇದುರಿಗೆ ಆ ವಾಹನ ಆಕಾರಗೊಂಡಿತು. ಅಲ್ಲಿಯೆ ರಸ್ತೆಯ ಮುರುವು. ಅಲ್ಲಿಂದ ಆ ಗಾಡಿ ಅವನನ್ನು ಸಮೀಪಿಸುವಂತೆ ತೋರಿತು. ಆ ಮುರುಕಿಗೆ ಅವನ ಮನೆಯೆ ಕಾರಣವಾಗಿತ್ತು. ಆ ಫೀಟನ್ ಗಾಡಿಯ ಮುಂದುಗಡೆಯ ಗಾಡಿಕಾರನ ಎತ್ತರದ ಪೀಠದಲ್ಲಿ ಒಂದು ಹೆಣ್ಣಿನ ಆಕೃತಿ ಅವನು ಗುರುತಿಸಿದನು. ಅವಳ ಬೆನ್ನಿಗೆ ಕುದುರೆಯ ಕಾಸದಾರನು ಕಂಡುಬಂದನು.

ಕೂಡಲೇ ಏನೋ ಸಣ್ಣ ಅವಘಡವಾಯಿತು. ಅದರ ಬೆನ್ನಿಗೇ ಕೂಗು, ವಿಂಟರಬೋರ್ನ್ ಆ ಸ್ಥಳಕ್ಕೆ, ಆಚೆಗೆ ಹಾಯ್ದನು. ಫೀಟನ ಗಾಡಿ ಬುಡಮೇಲಾಗಿತ್ತು. ಗಾಡಿಯುವನು, ಹಿಂದೊಮ್ಮೆ ಅವನ ಮನೆಯಾಗಿದ್ದ ಮಣ್ಣು ರಾಶಿಯ ಮೇಲೆ ಕೂತಿದ್ದನು. ಕಾಸದಾರ ಆಳು ಕುದುರೆಗಳ ತಲೆಗಳನ್ನು ಹಿಡಿದುಕೊಂಡಿದ್ದನು. ಈ ಸರಂಜಾಮುವೆಲ್ಲ ಶ್ರೀಮತಿ ಚಾರ್ಮಂದಳದಿತ್ತು. ಮತ್ತು ರಥದಿಂದ ಪದಚ್ಯುತ ರಥಿಕೆ ಆ ಮಹಿಳೆಯೆ ಆಗಿದ್ದಳು.

ಅವನು ವಿಚಾರಣೆ ನಡೆಯಿಸಿದ. ಏನಾದರೂ ನೋವುಗೀವು ಆಯಿತೇ ? ಅವಳೇನೋ ಅಸ್ಪಷ್ಟ ಉತ್ತರಕೊಟ್ಟಳು — ಅವಳಿಗೇ ಗೊತ್ತಾಗಲಿಲ್ಲ. ಮಿಕ್ಕದೃಷ್ಟಿಯಲ್ಲಿ ಆದ ಅಪಾಯ ತೀರ ಕಡಮೆ ಇತ್ತು. ಏನೂ ಇದ್ದಿಲ್ಲವೆಂದರೂ ಅಡ್ಡಿ ಇಲ್ಲ. ಫೀಟನ್ ಗಾಡಿಯನ್ನು ಸರಿಮಾಡಿ ನಿಲ್ಲಿಸಲಾಯಿತು. ಶ್ರೀಮತಿ ಚಾರ್ಮಂದಳನ್ನು ಅದರಲ್ಲಿ ಇಡಲಾಯಿತು. ಆಳಿನ ಕೈಗೆ ಲಗಾಮಿನ ಬಾರುಗಳನ್ನು ಒಪ್ಪಿಸಲಾಯಿತು. ಅಲ್ಲಿಯ ಮನೆಯು ಇಲ್ಲದಿದ್ದುದು ಅವಳನ್ನು ಮೋಸಗೊಳಿಸಿತೆಂದು ಕಂಡು ಬಂತು. ಮನೆ ಕೆಡುಹಿ ತೆರವಾದ ಅವಕಾಶವನ್ನು ರಸ್ತೆಯ ಬಾಯಿಯೆಂದು ಭಾವಿಸಿ ಅವಳು ಗಾಡಿಯನ್ನು ಆ ಬೀಳುಗಲ್ಲ ರಾಶಿಯ ಮೇಲೆ ಹೊರಳಿಸಿದ್ದಳು. ನಿಜವಾದ ರಸ್ತೆಯು ಮುರಿಕಿ ಕೆಲವು ಗಜ ದೂರಕ್ಕೆ ಇತ್ತು.

'ಮನೆಗೆ ಗಾಡಿ ಹೊಡೆ ; ಮನೆಕಡೆಗೆ ಹೊಡೆ' ಅವಳು ತಾಳ್ಮೆಗೆಟ್ಟು ಹೇಳಿದಳು. ಅವರು ಹಾದಿ ಹಿಡಿದು ನಡೆದರು.

ಅವರು ಹಲವು ದಾಪು ದೂರ ಹೋಗಿದ್ದಿಲ್ಲ. ಗಾಳಿ ಸ್ತಬ್ಧವಾಗಿದ್ದರಿಂದ ವಿಂಟರಬೋರ್ನ್ ಅವಳ ಕೂಗನ್ನು ಕೇಳಿದನು. 'ನಿಲ್ಲಿಸು ; ಆ ಮನುಷ್ಯನಿಗೆ, ಆ ಡಾಕ್ಟರನ್ನು — ಫಿಟ್ಝಪಿಯರ್ಸರನ್ನು ಕರೆಯಲು ಹೇಳು. ಡಾಕ್ಟರರನ್ನು ನಮ್ಮ ಮನೆಗೆ ಕಳುಹಿಸಲು ಹೇಳು. ನಾನು ತಿಳಿದಕ್ಕಿಂತ ನನಗೆ ಹೆಚ್ಚು ನೋವಾಗಿದೆ — ಹೆಚ್ಚು ಗಂಭೀರ ಸ್ಥಿತಿ ಇದೆ.'

ಆದರೆ ಈ ಗಂಭೀರ ಸ್ಥಿತಿಯೆಂಬುದು ವಿಂಟರಬೋರ್ನನಿಗೆ ಹಾಸ್ಯಾಸ್ಪದವಾಗಿ ಕಂಡಿತು. ಆತ ಕಾಸದಾರನಿಂದ ಈ ಸಂದೇಶವನ್ನು ಪಡೆದು ಕೂಡಲೆ, ಡಾಕ್ಟರನ ಮನೆಯತ್ತ ನಡೆದನು. ಅದನ್ನು ಅವನಿಗೆ ನಿವೇದಿಸಿ ಆತ ಕತ್ತಲೆಯಲ್ಲಿ ಹಿಂದಕ್ಕೆ ಸರಿದನು, ಮತ್ತು ಫಿಟ್ಝಪಿಯರ್ಸ ಬಾಗಿಲನ್ನು ಬಿಟ್ಟದ್ದು ನೋಡುವನಕವೂ ಅಲ್ಲಿ ಕಾಯುತ್ತ ಉಳಿದನು. ಕಿಟಿಕಿಯ ಕಡೆಗೆ ನೋಡುತ್ತ ಆತ ಕೆಲ ನಿಮಿಷ ನಿಂತನು. ಒಳಗಿನ ಬೆಳಕಿನಿಂದ ಆ ಕಿಟಿಕಿ ಗ್ರೇಸಳು ಕೂತಿರುವ ಕೋಣೆಯದೆಂದು ಕಂಡು ಬಂದಿತು. ಅನಂತರ ಆತ ಮಬ್ಬು ಕವಿದ ಮರಗಳಲ್ಲಿ ನಡೆದು ಹೋದನು.

ಫಿಟ್ಝಪಿಯರ್ಸ ಸರಿಯಾಗಿ ಹಿಂಟಾಕ ದೊಡ್ಡ ಮನೆಗೆ ಬಂದು ಮುಟ್ಟಿದನು. ಅದರ ಬಾಗಿಲು ಇದೇ ಮೊದಲು ತೆರೆದಿದ್ದನ್ನು ಆತ ಕಂಡನು. ಅವನ ನಿರೀಕ್ಷೆಗೆ ವಿರುದ್ಧವಾಗಿ ಅಲ್ಲಿ ಮನೆಯೊಡತಿಗೆ ಒದಗಿದ ಅಪಘಾತದಿಂದ ಉಂಟಾಗಬಹುದಾದ

ಯಾವುದೆ ದಿಗಿಲು ದಿಗ್ಭ್ರಮೆಗಳ ಗೊಂದಲದ ಯಾವ ಚಿಹ್ನವೂ ಕಂಡು ಬರಲಿಲ್ಲ. ಮಾಳಿಗೆಯ ಮೇಲೆ ನಿಚ್ಚಣಿಕೆ ಏರಿಹೋದೊಡನೆ ಒಂದು ಕೋಣೆಯನ್ನು ಅವನಿಗೆ ಕಾಣಿಸಲಾಯಿತು. ಅದು ಸೊಂಪಾಗಿ ಹೆಣ್ಣಿನ ಶೈಲಿಯಲ್ಲಿ ಸಿಂಗರಿಸಿತ್ತು. ಅಲ್ಲಿ ಛಾಯೆ ಚೆಲ್ಲುವ ದೀಪದ ಬೆಳಕಿನಲ್ಲಿ ಒಂದು ಕೋಚಿನ ಮೇಲೆ ಸುಕುಮಾರ ಮಾಟದ ಮೈಕಟ್ಟಿನ ಒಬ್ಬ ಹೆಂಗಸು ಒರಗಿ ಕೂತದ್ದು ಆತ ನೋಡಿದನು. ಆಕೆ ಒರಗಿ ಕೂತಾಗಲೂ ತನ್ನ ತಲೆಯ ವೈಭವಶಾಲಿಯಾದ ನೀಳ ಕೇಶರಾಶಿಯು ಕೆದರದಂತೆ ಜಾಗ್ರತೆ ವಹಿಸಿದ್ದಳು. ಅವಳ ದಟ್ಟ ಕಂದಿ ಬಣ್ಣದ ಕೇಶಪಾಶಗಳಿಗೆ ಅವಳ ದಟ್ಟ ನೇರಳ ಬಣ್ಣದ ನಿಲುವಂಗಿಯೂ ಒಪ್ಪಾದ ಹಿನ್ನೆಲೆಯಾಗಿತ್ತು, ಅವಳ ಎಡ ತೋಳು ಹೆಗಲವರೆಗೂ ಬತ್ತಲೆ ಇದ್ದು ಮೇಲಕ್ಕೆ ಚೆಲ್ಲಿತ್ತು. ಬಲಗೈಯ ಬೆರಳ ನಡುವೆ ಅವಳು ಒಂದು ಸಿಗರೇಟು ಹಿಡಿದಿದ್ದಳು. ನಾಜೂಕಾದ ಕೊಂಕಾದ ತುಟಿಗಳಿಂದ ಅವಳು ಮಹಡಿಯ ಮೇಲ್ಮೈತ್ತಿನತ್ತ ಆಲಸಿಕೆಯಲ್ಲಿ ತೆಳ್ಳನ್ನ ಹೊಗೆಯ ಸೆಲೆಯನ್ನು ಸುಯ್ಯುತ್ತಿದ್ದಳು.

ಡಾಕ್ಟರನ ಮೊದಲನೆ ಭಾವನೆ, ಗಂಭೀರ 'ಕೇಸು' ಎಂದು ತಾನು ಜತೆಗೆ ತಂದ ಉಪಚಾರ ಸಾಮಗ್ರಿಯ ಅತಿರೇಕದ ಬಗೆಗೆ ಅನಿಸಿತು. ಅವನ ಮರುಭಾವನೆ, ಏನೋ ಹೆಚ್ಚಿನ ಕುತೂಹಲದ್ದಾಯಿತು. ಆ ಕ್ಷಣ ಆ ದೃಶ್ಯ ಅವನಿಗೆ ಹೊಸತು, ಅನಿರೀಕ್ಷಿತ ವಿತ್ತು. ಆದರೂ ಅದರ ಭಾವವೂ ಸಾರವೂ ಅವರ್ಣನೀಯವಾಗಿ ಪರಿಚಯದ್ದೆನಿಸಿತು. ಇದಕ್ಕೆ ಏನು ಕಾರಣವಿರಬಹುದು? ಬಹುಶಃ ಒಂದು ಕನಸು.

ಶ್ರೀಮತಿ ಚಾರ್ಮಿಂದ ಅವನ ಕಡೆಗೆ ಕಣ್ಣೆತ್ತುವುದರ ಆಚೆಗೆ ಏನೂ ಚಲಿಸಲಿಲ್ಲ. ಅವನೇ ಬಂದು ಅವಳ ಬಳಿಗೆ ನಿಂತನು. ಅವಳು ತನ್ನ ಹುಬ್ಬು ಹಣೆಗಳ ಆಚೆಗೆ ಅವನತ್ತ ಕಡೆಗಣ್ಣು ಹಾಯಿಸಿದಳು. ಆಗ ಅವಳ ಕೆನ್ನೆಗಳನ್ನು ಲಜ್ಜೆಯ ಕೆಂಪು ಮೆಲ್ಲಗೆ ಆವರಿಸಿದ್ದು ಅವನು ನೋಡಿದನು; ಜಿಜ್ಞಾಸೆ ಮತ್ತು ಆತ್ಮ ಪ್ರಜ್ಞೆಯನ್ನು ಸೂಸುವ ಅವನ ಮೇಲೆ ವಿಲಂಬಿತವಾಗಿ ಹಾಯುತ್ತಿದ್ದ ತನ್ನ ದೃಷ್ಟಿಯನ್ನು ಲಗುಬಗೆಯಿಂದ ಹಿಂದೆಗೆದುಕೊಂಡು, ಯಾಂತ್ರಿಕವಾಗಿ ಎಂಬಂತೆ ಅವಳು ಸಿಗರೇಟನ್ನು ತಿರುಗಿ ತುಟಿಗೆ ಇಟ್ಟುಕೊಂಡಳು.

ಒಂದು ಕ್ಷಣ ಡಾಕ್ಟರನು ತಾನು ಬಂದದ್ದೇಕೆಂಬುದನ್ನು ಮರೆತನು. ಆದರೆ ಕೊನೆಗೆ ಥಕ್ಕನೆ ಚೇತರಿಸಿಕೊಂಡು ಅವಳನ್ನು ಸಂಭೋಧಿಸಿ, ಉಪಚಾರದ ಮಾತಿನಲ್ಲಿ ತನ್ನ ಖೇದವನ್ನು ವ್ಯಕ್ತಪಡಿಸಿ, ಅವಳಿಗೆ ಏನಾಗಿತ್ತು, ಎಲ್ಲಿ ಅಪಾಯ ಒದಗಿತು ಎಂಬ ಬಗೆಗೆ ತನ್ನ ವ್ಯಾವಸಾಯಿಕ ವಿಚಾರಣೆಯನ್ನು ಮಾಡಿದನು.

'ಅದನ್ನೆ ನೀವು ನನಗೆ ಹೇಳಬೇಕಾಗಿದೆ.' ಅವಳು ಅನಿಶ್ಚಿತವಾದ ಗಾಂಭೀರ್ಯ ದಲ್ಲಿ ಪಿಸುಗುಟ್ಟಿದಳು 'ನನಗೆ ನಿಮ್ಮಲ್ಲಿ ಪೂರ್ತಿ ವಿಶ್ವಾಸವಿದೆ. ನೀವು ತುಂಬ ಸಮರ್ಥರು ಏಕೆಂದರೆ ಅಷ್ಟೊಂದು ಪರಿಶ್ರಮದಿಂದ ವ್ಯಾಸಂಗ ಮಾಡುತ್ತಿರುವಿರಿ.'

'ನಿಮ್ಮ ಸದಭಿಪ್ರಾಯಕ್ಕೆ ಸುಳ್ಳು ಬಗೆಯದಂತೆ ನಡೆದುಕೊಳ್ಳಲು ನಾನು ಆದಷ್ಟು

ಯತ್ನಿಸುತ್ತೇನೆ.'— ಆ ತರುಣನು ಅಂದನು. 'ಅದಿರಲಿ, ನಿಮಗೆ ಆದ ಅಪಘಾತ ಅಂಥದೇನೂ ಗಂಭೀರವಾಗಿಲ್ಲವೆಂಬುವುದೇ ನನಗೆ ಸಂತೋಷ.'

'ಆದರೆ ನಾನು ಬಹಳೇ ಕಂಗೆಟ್ಟು ಹೋಗಿದ್ದೇನೆ.'

'ಅದು ಸರಿ', ಆತ ಅಂದನು. ಮತ್ತು ಅವಳ ಪರೀಕ್ಷೆಯನ್ನು ಪೂರೈಸಿದನು. ಅವಳಿಗೆ ಏನೇನೂ ಆಗಿದ್ದಿಲ್ಲವೆಂಬುದು ಅವನಿಗೆ ಖಾತ್ರಿ ಆಯಿತು. ಆದ್ದರಿಂದ ತನ್ನನ್ನು ಅವಳೇಕೆ ಕರೆಯಿಸಿಕೊಂಡಳೆಂಬ ಬಗೆಗೆ ಇನ್ನೂ ಹೆಚ್ಚು ಅವನಿಗೆ ಒಗಟು ಬಿತ್ತು. ಏಕೆಂದರೆ ಅವಳು ಅಷ್ಟೇನು ಹೇಡಿ ಅಥವಾ ಭೀರು ಹೆಂಗಸಿದ್ದಿಲ್ಲ. 'ನೀವು ತುಸು ವಿಶ್ರಾಂತಿ ತೆಗೆದುಕೊಳ್ಳಬೇಕು. ನಾನು ಮದ್ದು ಕಳುಹಿಸಿಕೊಡುತ್ತೇನೆ.' ಆತ ಅಂದನು.

'ಓ. ಮರೆತೇ ಹೋದೆ'—ಆಕೆ ನುಡಿದಳು, 'ಇಲ್ಲಿ ನೋಡಿ', ಅವಳು ತನ್ನ ತೋಳ ಮೇಲಿನ ಕೆದರಿದಂಥ ಒಂದು ಗಾಯುವನ್ನು, ತೆರೆದು ತೋರಿಸಿದಳು.— ತುಂಬಿದ ದುಂಡಗಿನ ತೋಳನ್ನು ತೆರೆದು, 'ದಯುಮಾಡಿ ಇದಕ್ಕೆ ಏನಾದರೂ ಘ್ಲಾಸ್ಟರ್ ಹಾಕಿರಿ.' ಆತ ಅವಳ ಅಪ್ಪಣೆಯನ್ನು ಪಾಲಿಸಿದನು. 'ಇನ್ನು ಡಾಕ್ಟರರೆ, ನೀವು ಹೊರಡುವ ಮುಂಚೆ ನಿಮಗೊಂದು ಪ್ರಶ್ನೆ ಹಾಕಬೇಕೆಂದಿದ್ದೇನೆ. ಅಲ್ಲಿ ನನಗೆ ಇದುರಾಗಿ ಹೀಗೆ ಕುಳಿತುಕೊಳ್ಳಿ — ಆ ಕಿರಿ ಕುರ್ಚಿಯ ಮೇಲೆ. ಆ ಮೇಣ ಬತ್ತಿಗಳನ್ನು — ಒಂದೇ ಸಾಕು — ಈ ಕಿರಿ ಮೇಜಿನ ಮೇಲೆ ತಂದಿಡಿರಿ. ನೀವು ಸಿಗರೇಟು ಸೇದುವಿರಾ ? ಹೌದೇ ? ಸರಿ. ನಾನೂ ಅದನ್ನು ಅಭ್ಯಾಸ ಮಾಡಿಕೊಳ್ಳು ತ್ತಿದ್ದೇನೆ. ಇಕೋ. ಈ ಒಂದನ್ನು ತೆಗೆದುಕೊಳ್ಳಿರಿ ಇದೇ ಇಲ್ಲದೆ ಮ್ಯಾಚಿಸ್ಸು.' ಅವಳು ಕಡ್ಡಿ ಪೆಟ್ಟಿಗೆಯನ್ನು ಅವನ ಕಡೆಗೆ ಎಸೆದಳು.

ಫಿಟ್ಜ್‌ಪಿಯರ್ಸ ಅದನ್ನು ಎತ್ತಿ ಹಿಡಿದು ಸಿಗಾರು ಹೊತ್ತಿಸಿ ಅವಳನ್ನು ತನ್ನ ಹೊಸ ಸ್ಥಾನದಿಂದ ದಿಟ್ಟಿಸಿದನು. ಅದು, ಮೇಣಬತ್ತಿಯ ದೀಪ ಸರಿಸಿಟ್ಟದ್ದರಿಂದ ಪ್ರಥಮತಃ ಅವಳ ಮುಖದ ಪೂರ್ಣ ದರ್ಶನ ಮಾಡಿಸಿತು.

'ನಾವು ಮೊದಲು ಭೆಟ್ಟಿಯಾದಂದಿನಿಂದ ಎಷ್ಟು ವರ್ಷ ಕಳೆದಿವೆ ?'— ಅವಳು ಮಾತು ಮುಂದುವರಿಸಿದಳು. ತನ್ನ ದನಿಯನ್ನು ಮೊದಲಿನ ಮಂದ ಸಮಾಧಾನದ ಮಟ್ಟದಲ್ಲಿಯೆ ಇಟ್ಟು, ಅವನ ಕಡೆಗೆ ತುಸು ಸಾಹಸ ಸೇರಿದ ಲಜ್ಜೆಯ ಭಾವದಿಂದ ನೋಡಿದಳು.

'ನಾವು ಭೆಟ್ಟಿಯಾದೆವು, ಅಂದಿರಾ ?'

ಆಕೆ ತಲೆದೂಗಿದಳು. 'ಇತ್ತೀಚೆಗೆ ನಾನು ನಿಮ್ಮನ್ನು ಲಂಡನ್ನಿನಲ್ಲಿ ಒಂದು ಹೊಟೆಲಿನಲ್ಲಿ ನೋಡಿದೆ. ಆಗ ನೀವು ಮದುವಣಗಿತ್ತಿಯೊಂದಿಗೆ ಬಾಗಿಲೊಳಗಿಂದ ಹಾದು ಹೋಗುತ್ತಿದ್ದಿರಿ. ಆಗಲೆ ನಾನು ನಿಮ್ಮನ್ನು ಗುರುತಿಸಿದೆ — ನನ್ನ ಎಳೆ ವಯಸ್ಸಿನಲ್ಲಿ ನಾನು ಹುಡುಗಿಯಾಗಿದ್ದಾಗ ನಿಮ್ಮನ್ನೆ ಭೆಟ್ಟಿಯಾಗಿದ್ದು ನಿಮಗೆ ನೆನಪಿದೆಯೇ — ನೀವು ಹಿಡೆಲ್ ಬರ್ಗದಲ್ಲಿ ಓದುತ್ತಿದ್ದಾಗ, ಅಲ್ಲಿ ಒಂದು ಇಂಗ್ಲಿಷ್ ಕುಟುಂಬ ವಾಸಿಸುತ್ತಿತ್ತು — ಅವರು ತಿರುಗಾಡಲು ಹೋಗುತ್ತಿದ್ದರು ?'

'ಮತ್ತು ಅವರಲ್ಲಿ ಒಬ್ಬ ಪ್ರಾಯದ ಹೆಣ್ಣು ಮಗಳಿದ್ದಳು — ಅಪರೂಪದ ಬಣ್ಣದ ಉದ್ದನ್ನ ಜಡೆಯುವಳು.—ಓ ಅದೀಗ ನನ್ನ ಕಣ್ಣೆದುರಿಗೆ ಕಟ್ಟಿದಂತಿದೆ— ಗ್ರೇಟ ಟೆರೇಸದ ಮೇಲೆ ಅವಳು ಒಮ್ಮೆ ತನ್ನ ಕರವಸ್ತ್ರ ಕಳೆದುಕೊಂಡಳು. ಅದನ್ನು ಹುಡುಕಲಿಕ್ಕೆ ಅವಳು ಸಂಜೆಗತ್ತಲಲ್ಲಿ ಅಲ್ಲಿಗೆ ತಿರುಗಿ ಹೋಗುತ್ತಿದ್ದಳು. ಅವಳಿಗೆ ನಾನು ಅಂದೆನು, 'ನಾನೇ ಹೋಗಿ ಹುಡುಕಿಕೊಂಡೆ ಬರುತ್ತೇನೆ.' ಆಗ ಅವಳು ಅಂದಳು 'ಓ ಇದೇನು ನೀವು ಉದ್ದ ನಡೆದೇರಿ ಬರುವಷ್ಟು ಭಾರಿ ಬೆಲೆಯ ವಸ್ತುವಲ್ಲ. ನನಗೆ ಚೆನ್ನಾಗಿಯೇ ನೆನಪಿದೆ — ನಾವಿಬ್ಬರೂ ಅಲ್ಲಿ ಅದೆಷ್ಟು ವೇಳೆ ಮಾತಾಡುತ್ತ ನಿಂತೆವು. ಮರುದಿನ ನಸುಕಿಗೆ, ಹುಲ್ಲಿನ ಮೇಲಿನ ಹನಿ ಆರುವ ಮುಂಚೆಯೇ ಅಲ್ಲಿಗೆ ಹೋದೆ. ಕರವಸ್ತ್ರ ಅಲ್ಲೇ ಇತ್ತು — ಒದ್ದೆ 'ಲೇಸಿ'ನ ಒಂದು ಪುಟ್ಟ ಮುದ್ದೆಯಾಗಿ. ಅದರ ತುದಿಗೆ 'ಫೆಲಿಸ್', ಎಂದು ಗುರುತು ಹಾಕಿತ್ತು. ಈಗೂ ನನಗೆ ಅದು ಕಾಣುತ್ತದೆ. ನಾನು ಆ ಕರವಸ್ತ್ರವನ್ನು ಎತ್ತಿಕೊಂಡೆ, ಮತ್ತು '—

'ಸರಿ. ಮುಂದೆ ?'

'ಅದನ್ನು ನಾನು ಮುತ್ತಿಟ್ಟೆ' ಆತ ಅಂದ, ತುಸು ನಾಚಿಕೆಯಿಂದಲೇ.

'ಆದರೆ ನೀವು ನನಗೆ ನೋಡಿದ್ದು — ಬರೆಮಬ್ಬುಗತ್ತಲಲ್ಲಿಯೇ. ನನ್ನನ್ನು ಪೂರ್ತಿ ನೋಡಿದ್ದೇ ಇಲ್ಲ.'

'ಅದೇನೇ ಇರಲಿ, ಆಗ ನಾನು ತರುಣ — ಏರುವ ಪ್ರಾಯ. ಅದನ್ನು ನಾನು ಮುತ್ತಿಟ್ಟೆ ನನ್ನ ಕೈಗೆ ಸಿಕ್ಕ ಆ 'ನಿಧಿ'ಯ ಆದಷ್ಟು ಉಪಯೋಗ ಹೇಗೆ ಮಾಡಿಕೊಳ್ಳಲಿ — ಎಂದು ನಾನು ಯೋಚಿಸಿದೆ. ನಿಮ್ಮ ಹೋಟೆಲಿಗೆ ಆ ಸಂಜೆಗೇ ಭೆಟ್ಟಿ ಕೊಡುವದೆಂದು ತೀರ್ಮಾನಿಸಿದೆ. ಆದರೆ ಆ ರಾತ್ರಿ ಎಲ್ಲ ಮಳೆ ಬಿತ್ತು. ನಾನು ಮರುದಿನದನಕ ತಡೆದೆ. ಮರುದಿನ ಹೋಟೆಲಿಗೆ ಹೋದೆ. ಆದರೆ ನೀವು ಅಲ್ಲಿಂದ ಹೋಗಿ ಬಿಟ್ಟಿದ್ದೀರಿ.'

'ಹೌದು.' — ನಿರ್ಭಾವ ಖಿನ್ನತೆಯಿಂದ ಆಕೆ ಅಂದಳು. 'ನನ್ನ ತಾಯಿ, ನನ್ನ ಮುಖವೆ ನನ್ನ ಭಾಗ್ಯವೆಂದು ನಂಬಿದವಳು, ನಿಷ್ಕಾಂಚನ ದರಿದ್ರ ವಿದ್ಯಾರ್ಥಿಯ ಪ್ರೀತಿಯಲ್ಲಿ ತೊಡಕಿ ಬೀಳುವುದು ನನ್ನಂಥ ಅರಿಯದ ತರಳೆಗೆ ಯುಕ್ತವಲ್ಲವೆಂದು ಹೇಳಿ ಆ ದಿನವೆ ನನ್ನನ್ನು ಬಾದೆನಿಗೆ ಒಯ್ದಳು. ಈಗ ಅದೆಲ್ಲ ಆಗಿ ಮುಗಿದು ಹೋದ ಗತಗೋಷ್ಠಿ. ಆದ್ದರಿಂದ ಒಂದು ಸಂಗತಿ ಹೇಳಬಲ್ಲೆ. ನಿಮ್ಮ ಹೆಸರು ಆಗ ನನಗೆ ಗೊತ್ತಾಗಿದ್ದರೆ ನಾನು ಒಂದು ಸಾಲು ಬರೆದು ಕಳುಹಿಸಬಹುದಾಗಿತ್ತು. ಆದರೆ ಒಂದು ತಿಂಗಳ ಹಿಂದಿನ ವರೆಗೂ ಆ ಹೆಸರು ನನಗೆ ಗೊತ್ತೇ ಇದ್ದಿಲ್ಲ. ಆಗಲೇ ಲಂಡನ್ನಿನಲ್ಲಿ ಹೋಟೆಲ ಮಾಳಿಗೆಯ ಪಾವಟಿಗೆಗಳನ್ನು ನೀವು ಏರುತ್ತಿರುವಾಗ ನನ್ನ ಪರಿಚಾರಿಕೆ ಹೇಳಿದಳು 'ಅದೋ — ಡಾಕ್ಟರ ಫಿಟ್ಝಪಿಯರ್ಸ.'

'ಹೇ ದೇವರೆ,' ಫಿಟ್ಝಪಿಯರ್ಸ ಸೋಜಿಗ ಪಡುತ್ತ ಅಂದನು. 'ಆ ಹಳೆಯ ದಿನಗಳು ಈಗ ನನಗೆ ಮರಕಳಚಿ ಬರುತ್ತಿವೆ. — ಆ ಸಂಜೆ, ಆ ಹಗಲು, ಆ ಇಬ್ಬನಿ,

ಆ ಸ್ಥಳ. ನೀವು ನಿಜವಾಗಿಯೂ ಹೊರಟು ಹೋದಿರೆಂದು ಗೊತ್ತಾದೊಡನೆ, ಒಂದು ತಂಪಾದ ಕಬ್ಬಿಣದ ಸಲಾಕಿ ನನ್ನ ಬೆನ್ನಗುಂಟ ಹೆಟ್ಟಿದಂತೆ ನನಗನಿಸಿತು. ನಿಮ್ಮನ್ನು ಆ ಹಿಂದೆ ಕಂಡಾಗ ನೀವು ನಿಂತ ಸ್ಥಾನಕ್ಕೆ ನಾನು ಹೋದೆ — ಅಲ್ಲಿ ಹುಲ್ಲಿನ ಮೇಲೆ ಅಡ್ಡ ಬಿದ್ದೆ, — ಆಗ ನಾನು ಇನ್ನೂ ಹುಚ್ಚು ಹುಡುಗ — ನನ್ನ ಕಣ್ಣುಗಳು ಕಂಬನಿಯಿಂದ ಉಕ್ಕಿ ಕುರುಡಾದವು. ಹೆಸರು, ಗೊತ್ತು ಪರಿಚಯು ಏನೂ ಇಲ್ಲದಿದ್ದರೂ, ನಿಮ್ಮ ದನಿಯನ್ನು ನಾನು ಮರೆಯದಾದೆ.

'ಎಷ್ಟು ಕಾಲದ ವರೆಗೆ?'

'ಓ — ಬಲು ದೀರ್ಘಕಾಲ. ದಿನಗಟ್ಟಲೆ, ವಾರಗಟ್ಟಲೆ.'

'ದಿನಗಟ್ಟಲೆ. ಬರೆ ದಿನಗಟ್ಟಲೆ? ಓ ಗಂಡಸರ ಹೃದಯವೇ. ಬರೆ ದಿನಗಟ್ಟಲೆ ವಾರಗಟ್ಟಲೆ.'

'ಆದರೆ, ಡಿಯರ್ ಮ್ಯಾಡಂ, ಆಗ ನನಗೆ ನಿಮ್ಮ ಪರಿಚಯವಾಗಿ ಒಂದೆರಡು ದಿನವೂ ಆಗಿದ್ದಿಲ್ಲ, ಅದು ತುಂಬಿ ಅರಳಿದ ಪ್ರೇಮವಿದ್ದಿಲ್ಲ — ಅದೊಂದು ಪುಟ್ಟ ಮೊಗ್ಗು — ಕೆಂಪು, ತಾಜಾ, ಕಣ್ಣು ತುಂಬುವಂಥದ್ದು, ಆದರೂ ಪುಟ್ಟದು. ಒಂದು ಪ್ರಚಂಡ ವಿಕಾರ ಗರ್ಭಾವಸ್ಥೆಯಲ್ಲಿ ಇತ್ತು. ಅದು ಮುಂದೆ ಬೆಳೆಯಲೇ ಇಲ್ಲ.'

'ಹಾಗೆ ಆದದ್ದೇ ಚೆನ್ನಾಯಿತೇನೋ.'

'ಆಯಿತೇನೋ. ಆದರೆ ನೋಡಿ — ನಿಯತಿ ನಿಯಮದ ವಿರುದ್ಧ, ವಿಧಿಸಂಕೇತದ ವಿರುದ್ಧ ಮಾನವ ಸಂಕಲ್ಪ ಎಷ್ಟು ದುರ್ಬಲ. ನಮ್ಮ ಭೆಟ್ಟಿಗೆ ಆತಂಕ ಉಂಟಾಗಿತ್ತು. ಆದರೆ ನಾವು ಈಗ ಭೆಟ್ಟಿ ಆಗಿದ್ದೇವೆ. ಅನೇಕ ಬದಲಾವಣೆಗಳಲ್ಲಿಯೂ ಪ್ರಕರಣದ ಒಂದು ಲಕ್ಷಣ ಎಂದಿನಂತೆಯೇ ಉಳಿದಿದೆ. ನೀವು ಸಿರಿವಂತರಾದಿರಿ; ಆದರೆ ನಾನು ಅಂದಿನ ದರಿದ್ರನೇ ಆಗಿ ಉಳಿದಿದ್ದೇನೆ. ಇದಕ್ಕೂ ಹೆಚ್ಚಿನ ಮಾತೆಂದರೆ, ನಿಮ್ಮ ಈ ಹಿಂದಿನ ಮಾತಿನಿಂದ ತೀರ್ಮಾನಿಸುವದಾದರೆ, ನೀವು ಅಂದಿನ ಕನ್ನೆತನದ ಹುಚ್ಚಾಪಟ್ಟೆ ಭಾವಾವೇಶದ ಒತ್ತಡಗಳನ್ನು ಮೀರಿ ಬೆಳೆದಿರುವಿರಿ. ಆದರೆ ನಾನೇನು ಅವನ್ನು ಮೀರಿ ಬೆಳೆದಿಲ್ಲ.'

'ಕ್ಷಮಿಸಿರಿ,' — ಭಾವನಿರ್ಭರತೆಯ ಕಂಪನ ಮಾತಿನಲ್ಲಿ ತುಂಬಿ ಆಕೆ ಅಂದಳು. 'ಹಾಗೆ ಅವಸ್ಥೆ ಮೀರಿ ಬೆಳೆಯದಂತೆ ತಡೆಗಟ್ಟುವ ಸ್ಥಿತಿಯಲ್ಲಿ ನಾನು ಇಡಲ್ಪಟ್ಟಿದ್ದೇನೆ, ಇದೂ ಅಲ್ಲದೆ ಪ್ರಾಮಾಣಿಕವಾದ ಭಾವನಾ ವಿಶೇಷಗಳೂ ವಿಷಯಗಳೂ ಹೀಗೆ ಒಂದು ಸ್ಥಿತಿಮೀರಿ ಬೆಳೆಯಬಹುದೆಂದೂ ನಾನು ನಂಬುವದಿಲ್ಲ. ಇಂಥ ಜನ ವಯಸ್ಸಿನಲ್ಲಿ ಬೆಳೆದಂತೆ ಇನ್ನೂ ಕೆಡುತ್ತಲೆ ಹೋಗುವರೆಂದು ನನ್ನ ನಂಬಿಕೆ. ಬಹುಶಃ ತೊಂಬತ್ತು ಇಲ್ಲವೆ ನೂರು ವರ್ಷದ ಪ್ರಾಯಕ್ಕೆ ಅವರು 'ಗುಣ' ಹೊಂದಿದರೆಂದು ಭಾವಿಸಬಹುದು. ಆದರೆ ಬರೆ ಅರವತ್ತು ಮೂರು ವರ್ಷ ಪ್ರಾಯ ಹಾಗೆ ಮಾಡಲಾರದು — ನನ್ನ ಮಟ್ಟಿಗಂತೂ ಮಾಡಲಾರದು. ಅಂದರೆ, ನಾನು ಅಷ್ಟು ಕಾಲವಾದರೂ ಬದುಕಿ ಉಳಿದರೆ.'

ಅವನು ಅವಳನ್ನು ಮುಚ್ಚುಮರೆ ಇಲ್ಲದೆ ಪ್ರಶಂಸೆಯ ಕಣ್ಣಿನಿಂದ ದಿಟ್ಟಿಸಿದನು. ಇಲ್ಲಿದೆ ಜೀವದ ಜೀವ.

'ನೀವು ಸತ್ಯವನ್ನೇ ಆಡುತಿದ್ದಿರಿ,' ಆತ ಉದ್ಗರಿಸಿದನು, 'ಆದರೆ ನೀವು ದುಃಖದಿಂದಲೂ ನುಡಿಯುತಿದ್ದೀರಿ. ಇದೇಕೆ ಹೀಗೆ?'

'ನಾನು ಇಲ್ಲಿಗೆ ಬಂದಾಗಲೆಲ್ಲ ದುಃಖಿಯಾಗಿಯೇ ಇರುತ್ತೇನೆ,' ಅವಳೆಂದಳು. ತಾನು ತೀರ ಬಾಯ್ಬಿಚ್ಚಿ ಮಾತನಾಡಿದೆನೋ ಎಂಬ ಭಾವ ಮನಗಂಡು ದನಿಯನ್ನು ತೀರ ತಗ್ಗಿಸಿದಳು.

'ಹಾಗಾದರೆ ನೀವು ಇಲ್ಲಿಗೆ ಏಕೆ ಬಂದಿರಿ ಎಂದು ಕೇಳಬಹುದೇ?'

'ಒಬ್ಬ ಗಂಡಸು ನನ್ನನ್ನು ಇಲ್ಲಿಗೆ ತಂದನು. ಹೆಂಗಸರೆಲ್ಲ ಹೀಗೆಯೇ ಬೆಂಡಿನಂತೆ ಗಂಡಸರ ಕಾಮನೆಗಳ ಅಲೆಗಳ ಮೇಲೆ ತೇಲಿ ಸೆಳೆದೊಯ್ಯಲ್ಪಡುತ್ತಾರೆ... ನಿಮಗೇನು ನಾನು ಗಾಬರಿಗೊಳಿಸಿಲ್ಲವಷ್ಟೇ. ಆದರೆ ಈ ಹಿಂಟಾಕ್ ಹಳ್ಳಿಯದೊಂದು ವಿಚಿತ್ರ ಪ್ರಭಾವ. ಅದು ಒಬ್ಬರಿಗೆ ತಾಳಲು ಅಸಾಧ್ಯವಾಗುವವರೆಗೂ ಅವರ ಭಾವನೆಗಳನ್ನು ಸೀಸೆಯಲ್ಲಿ ಜಡಿದಿಟ್ಟಂತೆ ಹತ್ತಿಕ್ಕಿಬಿಡುತ್ತದೆ. ನಾನಂತೂ ಆಗಾಗ್ಗೆ ಇಲ್ಲಿಂದ ಹಾರಿ ಹೋಗುವಂತೆ ಆಗಿ ಬಿಡುತ್ತದೆ — ಹೊರಗೆ ಬೇರೆ ಎಲ್ಲಾದರೂ ನನ್ನ ಭಾವನೆಗಳನ್ನು ತೋಡಿಕೊಳ್ಳಲಿಕ್ಕೆ ಇಲ್ಲವಾದರೆ ಒಮ್ಮೆಲೆ ಸಾಯುವದೇ ಸರಿ.'

'ಈ ಊರಿನ ಪರಿಸರದಲ್ಲಿ ಒಳ್ಳೆಯ ಸಮಾಜವಿದೆಯೆಂದು ನನ್ನ ಭಾವನೆ. ಇಷ್ಟೇ — ಅದರಲ್ಲಿ ಪ್ರವೇಶ ಪಡೆಯಲು ವಿಶೇಷ ಭಾಗ್ಯ ಪಡೆದಿರಬೇಕು.'

'ಅದೂ ಇರಬಹುದು. ಆದರೆ ಇಂಥ ದೂರದ ಏಕಾಂತದ ಹಳ್ಳಿಯ ಬದುಕಿನ ಒಂದು ದುಃಖವೆಂದರೆ, ನಿಮ್ಮ ನೆರೆಹೊರೆಯವರಿಗೆ ಅಭಿಪ್ರಾಯ ಅಥವಾ ರೀತಿರೂಢಿ ಬೇರೆ ಆದರೆ ಆ ಬಗೆಗೆ ಏನೂ ಸಹನೆ ಇರುವದಿಲ್ಲ. ನನ್ನ ನೆರೆಹೊರೆಯವರು ನನ್ನನ್ನು ನಾಸ್ತಿಕಳೆಂದು ಎಣಿಸುವರು. ಹಾಗೆ ಎಣಿಸದವರು ನಾನು ರೋಮನ್ ಕ್ಯಾಥೊಲಿಕಳೆಂದು ಭಾವಿಸುವರು; ಮತ್ತು ನಾನು ಹವಾಮಾನದ ಬಗೆಗೆ ಬೆಳೆಗಳ ಬಗೆಗೆ ಅನಾದರದಿಂದ ಏನಾದರೂ ಅಂದರೆ ನನ್ನನ್ನು ಪಾಷಂಡಿಯೆಂದು ತಿಳಿಯುವರು.'

'ನಾನು ಇನ್ನೂ ಇಲ್ಲಿ ಹೊತ್ತುಗಳೆಯಬೇಕೆಂದು ನೀವು ಬಯಸುವದಿಲ್ಲವಷ್ಟೇ?' ಆತ ಕೇಳಿದನು, ಅವಳು ಅನ್ಯಮನಸ್ಕಳಾಗಿ ಸುಮ್ಮನಾದಾಗ.

'ಇಲ್ಲ. ಬಯಸುವೆನೆಂದು ಅನಿಸುವದಿಲ್ಲ.'

'ಹಾಗಾದರೆ ಅಪ್ಪಣೆ ಕೊಡಿ — ಇಲ್ಲಿಂದ ನಾನು ಹೊರಟು ಹೋಗಲಿಕ್ಕೆ.'

'ಅದೇಕೆ? ಅಪ್ಪಣೆ ಇಲ್ಲದೆ ನೀವು ಹೋಗಲಾರಿರಾ?'

'ನನಗೇ ಬಿಟ್ಟರೆ, ನಾನು ನನ್ನದೆ ಭಾವನೆಗಳನ್ನು ವಿಚಾರಿಸಬಹುದು.'

'ಸರಿ. ವಿಚಾರಿಸಿದರೆ ಮುಂದೇನು? ಅದರಿಂದ ನೀವು ನನ್ನ ಹಾದಿಯ ತೊಡಕಾಗುವಿರೆಂದು ತಿಳಿಯುವಿರಾ?'

'ಅದೇ ನನಗೆ ಅಂಜಿಕೆ.'

‘ ಹಾಗಾದರೆ ಇನ್ನು ಅಂಜಿಕೆ ಬೇಡ. ನಮಸ್ಕಾರ. ಗುಡ್‌ನೈಟ್. ನಾಳೆ ಬನ್ನಿ — ನಾನು ನೆಟ್ಟಗಿರುವೆನೋ, ಬಂದು ನೋಡಿಕೊಳ್ಳಿ. ನಮ್ಮ ಪರಿಚಯದ ಈ ಪುನರಾವೃತ್ತಿ ನನ್ನ ಎದೆಯಲ್ಲಿ ಚಲವಿಚಲ ಉಂಟು ಮಾಡಿದೆ. ಈ ಮೊದಲೆ ನನ್ನಲ್ಲಿ ನಿಮ್ಮ ಕುರಿತು ಮೈತ್ರಿಯು ಇದ್ದೇ ಇದೆ. ’

‘ ನನ್ನನ್ನೇ ಅವಲಂಬಿಸಿರುವುದಾದರೆ, ಅದು ಎಂದೆಂದಿಗೂ ಉಳಿಯುವುದು. ’

‘ ಹಾಗೆ ಉಳಿಯಲೆಂದೇ ನನ್ನ ಉತ್ಕಟ ಹಾರೈಕೆ. ’

ಫಿಟ್ಜ್‌ಪಿಯರ್ಸ್ ಪಾವಟಿಗೆ ಇಳಿದು ಹೋಗುವಾಗ ಪೂರ್ತಿ ಅನಿಶ್ಚಿತತೆಯಲ್ಲಿ, ನಿರ್ಣಯಿಸಲಾರದ ಅಸಮರ್ಥತೆಯಲ್ಲಿ ತೊಳಲಾಡುತ್ತಿದ್ದನು — ಅವನನ್ನು ಆಕೆ ಕರೆಯಿಸಿಕೊಂಡಿದ್ದು ಏಕೆ ? ಅಪಘಾತದಿಂದ ಸಂಭವಿಸಿರಬಹುದಾದ ಸ್ವಾಭಾವಿಕ ಆತಂಕದಿಂದಲೊ, ಅಥವಾ ತಾನು ಯಾರೆಂಬುದರ ಪರಿಚಯ ಅವನಿಗೆ ಮಾಡಿ ಕೊಡಬೇಕೆಂಬ ಒಂದೇ ಉದ್ದೇಶದಿಂದಲೋ ಆ ಉದ್ದೇಶಕ್ಕೆ ಸಾರೋಟು ಮುಗ್ಗರಿಸಿ ಬಿದ್ದದ್ದು ಅತ್ಯುತ್ತಮ ಅವಕಾಶವನ್ನು ಒದಗಿಸಿಕೊಟ್ಟಂತೆ ಆಯಿತು.

ಮನೆಯ ಹೊರಗೆ ತಾರೆಗಳ ಬೆಳಕಿನಲ್ಲಿ ಆ ಸ್ಥಳವನ್ನು ಕುರಿತು ಆತ ಚಿಂತನಾ ಪರನಾದನು. ಆ ಸ್ಥಾನಕ್ಕೆ ಅದರ ಈ ನಿವಾಸಿನಿಯು ಇಲ್ಲದಿರುವಾಗಲೆ ತಾನು ಅನೇಕ ಸಲ ಬಂದು ಹೋದದ್ದು, ಆ ಮನೆಯನ್ನು ಒಂದು ಅನಾಮಿಕ ಆಸಕ್ತಿಯಿಂದ ಅವಲೋಕಿಸಿದ್ದು ಅವನಿಗೆ ಈಗ ಸೋಜಿಗವೆನಿಸಿತು ; ಅದೇ ರೀತಿ ಗ್ರೇಸಳನ್ನು ಅರಿತು ಕೊಳ್ಳುವ ಮುಂದೆಯೆ ಆಕೆ ಇದೇ ಸ್ಥಳದಲ್ಲಿ ಉಳಿಯುತ್ತಿರಬೇಕೆಂದು ಆತ ಹೇಗೋ ಕಲ್ಪಿಸಿಕೊಂಡಿದ್ದನು. ಅಂದರೆ ಸ್ವಲ್ಪದರಲ್ಲಿ ಅನ್ನುವದಾದರೆ, ಅನೇಕ ಕಿರುಕುಳ ಪ್ರಸಂಗಗಳಲ್ಲಿ ಋತುಮಾನಗಳಲ್ಲಿ ಈ ಹಿಂಟಾಕ್ ಮನೆಯ ವ್ಯಕ್ತಿತ್ವವು ಅವನೊಂದಿಗೆ ಸಂಬಂಧಪಟ್ಟಿರುವ ಯಾವುದೋ ಒಂದು ಅಸ್ತಿತ್ವಕ್ಕೆ ಹೊಂದಿಕೊಂಡದ್ದಾಗಿರಬೇಕು— ಎಂಬ ಭಾವ ಅವನಲ್ಲಿ ತನ್ನ ಅಚ್ಚು ಒತ್ತಿತ್ತು.

ಹಿಂದೆ, ಒಂದೆರಡು ದಿನ ತನ್ನ ಹಾಗೂ ಶ್ರೀಮತೀ ಚಾರ್ಮಂದಳ ಜೀವನ ಕಕ್ಷೆಗಳು ಪರಸ್ಪರ ಹಾಯ್ದು ಹೋದದ್ದು ಅವನಲ್ಲಿ ಅವಳ ಕುರಿತು ಆ ಸಮಯ ಭಾವನಾಮಯ ಆಸಕ್ತಿಯೊಂದನ್ನು ಉಂಟು ಮಾಡಿತು. ಆದರೆ ಈಗ ಅದು ತೀರ ಕ್ಷಣಿಕವಾಗಿತ್ತು ಭಂಗುರವಾಗಿತ್ತು, ಸಾಮಾನ್ಯವಾದ ಘಟನಾಚಕ್ರದ ಮುನ್ನುರುಳುವಿಕೆ ಯಲ್ಲಿ ಆ ಕಳೆದು ಹೋದ ಸಂಪರ್ಕಗಳನ್ನು ಆತ ಮತ್ತೆ ಜ್ಞಾಪಿಸಿಕೊಳ್ಳದೇ ಹೋಗಬಹುದಿತ್ತು. ಆದರೆ ಅವಳನ್ನು ಮತ್ತೆ ಇಲ್ಲಿ ಕೆಲಮಟ್ಟಿಗೆ ಇಂಥ ರಸಿಕ ರಮಣೀಯ ಸನ್ನಿವೇಶದಲ್ಲಿ ಕಂಡುಕೊಂಡದ್ದು ಆ ಹಿಂದಿನ, ಗತಿಸಿಹೋದ, ಕ್ಷಣ ಭಂಗುರವೆನಿಸಿದ ಕೋಮಲಭಾವವು ಅವರ್ಣನೀಯ ಪ್ರಮಾಣದಲ್ಲಿ ಹಿಗ್ಗಿಸಿ ಉಬ್ಬಿಸಿ ದೊಡ್ಡದಾಗಿ ಮಾಡಿತು.

ಕಿರಿಯ ಹಿಂಟಾಕವನ್ನು ಸೇರಿದಾಗ ಈ ಹಳ್ಳಿಯನ್ನು ಹೊಸದೇ ಒಂದು ರೀತಿ ಯಲ್ಲಿ ಪರಿಭಾವಿಸುತ್ತಿರುವೆನೆಂದು ಆತ ಕಂಡುಕೊಂಡನು. ಈ ರೀತಿಯು ಅವನ

ಸ್ವಂತದ್ದು ಇಲ್ಲವೆ ಮೆಲಬರಿ ಮನೆಯವರದು ಆಗಿರಲಿಲ್ಲ. ಅದು ಹಿಂಟಾಕ್ ದೊಡ್ಡ ಮನೆಯ ದೃಷ್ಟಿಯಾಗಿತ್ತು. ಮನೆಯವರೆಲ್ಲ ನಿದ್ದೆ ಹೋಗಿದ್ದರು. ಆತ ಮಹಡಿ ಹತ್ತಿ ಹೋಗುತ್ತಿರುವಾಗ ಆ ಮರದ ವ್ಯಾಪಾರಿ ಮನೆಯ ಅವನಿರುವ ಅಂಕಣದಿಂದ ಗೊರಕೆ ಹೊಡೆಯುವ ಸದ್ದು ಕೇಳಿಸಿತು. ಆತ ತನ್ನ ಕೋಣೆಗಳಿಗೆ ಹಾಯುವ ಪಡಸಾಲೆಯಲ್ಲಿ ಹೊರಳಿದನು—ಭಿನ್ನತೆಯ ವಿಚಿತ್ರ ಉಬ್ಬರದಲ್ಲಿ.

ಅವನ ಕೋಣೆಯಲ್ಲಿ ಅವನಿಗಾಗಿ ದೀಪ ಉರಿಯುತ್ತಲೇ ಇತ್ತು. ಆದರೆ ಗ್ರೇಸಳು ಮಂಚದಲ್ಲಿ ಬಿದ್ದುಕೊಂಡಿದ್ದರೂ ನಿದ್ದೆ ಹೋಗಿರಲಿಲ್ಲ; ಸೊಳ್ಳೆ ಪರದೆಯ ಆಚೆಯಿಂದ ಅವಳ ಮರುಕದ ದನಿಯು ಆಕ್ಷಣ ಕೇಳಿಬಂದಿತು.

‘ ಎಡ್ರೆಡ್, ಅವಳಿಗೆ ಭಾರಿ ಆಗಿದೆಯೆ ಗಾಯ—ಅಪಾಯ ? ’

ಶ್ರೀಮತಿ ಚಾರ್ಮಂದಳು ರೋಗಿಯೆಂಬುದನ್ನು ಫಿಟ್ಜ್‌ಪಿಯರ್ಸ್ ಪೂರ್ತಿ ಮರೆತೇ ಬಿಟ್ಟಿದ್ದನು. ಆದ್ದರಿಂದ ಗ್ರೇಸಳ ಪ್ರಶ್ನೆಗೆ ಅದೇ ಕ್ಷಣಕ್ಕೆ ಕೊಡಲು ಅವನ ಉತ್ತರ ಸಿದ್ಧವಿದ್ದಿಲ್ಲ.

‘ ಛೇ ಇಲ್ಲ. ’ ಆತ ಅಂದ, ‘ ಯಾವ ಎಲುಬೂ ಮುರಿದಿಲ್ಲ. ಆದರೆ ಅವಳು ಕಳವಳಗೊಂಡಿದ್ದಾಳೆ. ನಾಳೆ ಮತ್ತೆ ನಾನು ಅಲ್ಲಿ ಹೋಗಬೇಕು. ’

ಇನ್ನು ಒಂದೆರಡು ಪ್ರಶ್ನೆಗಳ ನಂತರ ಗ್ರೇಸಳು ಅಂದಳು, ‘ ಅವಳಂ ನನ್ನ ಕುರಿತು ಕೇಳಿದಳೇ ? ’

‘ ಅಹುದು. ಕೇಳಿದಳು—ಆದರೆ ನನಗೆ ಅದು ಪೂರ್ತಿ ನೆನಪಿಲ್ಲ. ಆದರೆ ನಿನ್ನ ಬಗೆಗೆ ಅವಳು ಏನೋ ಅಂದಳೆಂದು ನನ್ನ ಗ್ರಹಿಕೆ. ’

‘ ಅವಳು ಏನೆಂದಳೆಂದು ನೀನು ಸ್ವಲ್ಪವೂ ಜ್ಞಾಪಿಸಿಕೊಳ್ಳಲಾರೆಯಾ ? ’

‘ ಇಲ್ಲ. ಈ ಕ್ಷಣಕ್ಕೆ ಇಲ್ಲ. ’

‘ ಏನೇ ಇರಲಿ, ಆಕೆ ನನ್ನ ಬಗೆಗೆ ಬಹಳೇನು ಮಾತಾಡಿರಲಿಕ್ಕಿಲ್ಲ ? ’ ಗ್ರೇಸಳು ನಿಶಾಶೆಯಿಂದ ನುಡಿದಳು.

‘ ಛೇ ಇಲ್ಲ. ’

‘ ಆದರೆ ನೀನು ಆಡಿರಬೇಕು—ನನ್ನ ಅನುಮಾನ. ’ ಅವಳು ಇನ್ನೂ ಅಂದಳು, ಪ್ರಶಂಸೆಯ ಬಗ್ಗೆ ಗಾಳ ಹಾಕುವಂತೆ.

‘ ಹೌದು ಮತ್ತೆ, ಖಂಡಿತ ಆಡಿದೆನೆಂದು ನಂಬು. ’ ಆತ ತುಂಬ ಕಾವೇರಿದಂತೆ ಅಂದನು. ಆದರೆ ತಾನು ಏನೆನ್ನುವೆನೆಂಬುದೇ ಆತ ವಿಚಾರಿಸಲಿಲ್ಲ. ಶ್ರೀಮತಿ ಚಾರ್ಮಂದಳ ವ್ಯಕ್ತಿತ್ವ ಅವನ ಚಿತ್ತಭಿತ್ತಿಯಲ್ಲಿ ಎಷ್ಟು ನಿಚ್ಚಳವಾಗಿ ನಿಖರವಾಗಿ ಮೂಡಿ ನಿಂತಿತ್ತು.

೨೮

ಹಿರಿಟಾಕ್ ದೊಡ್ಡ ಮನೆಗೆ ಡಾಕ್ಟರರ ವ್ಯಾವಸಾಯಿಕ ಭೇಟಿ ಮರುದಿನವೂ, ಅದರ ಮರುದಿನವೂ ಅದರ ಮರುದಿನವೂ ಒದಗಿಬಂದಿತು. ಹೋದಾಗೆಲ್ಲ ಶ್ರೀಮತಿ ಚಾರ್ವುಂದ ಒಂದು ಸೋಫಾದಲ್ಲಿ ಒರಗಿ ಕೂತಿರುತ್ತಿದ್ದಳು. ತಾನು ಬೇನಿಗಳೆಂಬ ಬಿರುದನ್ನು ಕಳೆದುಕೊಳ್ಳಬೇಕೆಂಬ ತ್ವರೆಯೇನೂ ಇಲ್ಲದ ಬೇನಿಗಳಿಗೆ ಒಪ್ಪುವಂತೆ ನಡೆಯುತ್ತಿದ್ದಳು. ಪ್ರತಿಸಲವು ಆ ಡಾಕ್ಟರನು ಅವಳ ಭುಜದ ಮೇಲಿನ ಆ ಗೀರಿದ ಗಾಯವನ್ನು ಏನೋ ಗಂಭೀರವಾದ ವ್ರಣವೆಂಬಂತೆ ತುಂಬ ಚಿಂತೆಯಿಂದ ನೋಡುತ್ತಿದ್ದನು.

ಅವನ ಸಮಾಧಾನಕ್ಕೆ ಇನ್ನೂ ಒಂದು ಸಣ್ಣ ಕಲೆಯನ್ನು ಆತ ಅವಳ ಕೆನ್ನೆಯ ಮೇಲೆ ಕಂಡು ಹಿಡಿದು ಅದರ ಮೇಲೆ ಕಪ್ಪು ಪ್ಲಾಸ್ಟರಿನ ಚೂರನ್ನು, ಅವಳ ಸೇವಕ ವರ್ಗದ ಕಣ್ಣನ್ನು ಸೆಳೆಯುವಂತೆ ಅಂಟಿಸುವುದು ಹೆಚ್ಚು ಅನುಕೂಲವಾಗಿತ್ತು. (ಸಾಮಾನ್ಯವಾಗಿ ಅಂದಿನ ಚಿಕಿತ್ಸೆಯ ಕ್ರಮದಲ್ಲಿ ಅಕ್ಕಸಾಲಿಗರು ಚಿನ್ನದ ತೆಳ್ಳನ್ನ ತಗಡು ಬಳಿಯಲು ಉಪಯೋಗಿಸುವ ವಿಶಿಷ್ಟ ಚರ್ಮದ ಪರೆಯನ್ನು ಇಂಥ ಗಾಯಗಳಿಗೆ ಅಂಟಿಸುವುದು ವಾಡಿಕೆ ಆಗಿತ್ತು). ಈ ಮೂಲಕ ಅಲ್ಲಿ ಡಾಕ್ಟರನ ಉಪಸ್ಥಿತಿಯು ನಿಶ್ಚಯವಾಗಿಯೂ ಅಗತ್ಯವೆಂದು ಕಾಣುವಂತಿತ್ತು—ಆ ಕುರಿತು ಯಾವದೇ ಸಂದೇಹ ಬರುತ್ತಿದ್ದಿಲ್ಲ.

'ಓ, ನೀವು ನನ್ನನ್ನು ನೋಯಿಸುತ್ತಿರುವಿರಿ' ಅವಳು ಒಂದು ದಿನ ಉದ್ಗಾರ ತೆಗೆದಳು.

ಆತ ಅವಳ ಭುಜದ ಮೇಲಿನ ಪ್ಲಾಸ್ಟರಿನ ಚೂರನ್ನು ಕೀಳುತ್ತಿದ್ದನು. ಅದರಡಿಗೆ ಗಾಯದ ಗೀರು ಪೂರ್ತಿ ಮಾಯವಾಗುವ ಮುನ್ನ ಇನ್ನೂ ಹಣ್ಣಾಗದ ಬ್ಲಾಕಬರಿ ಕಂಟಿ ಹಣ್ಣಿನ ಬಣ್ಣಕ್ಕೆ ತಿರುಗಿತ್ತು.

'ತಡೆಯಿರಿ ಒಂದು ಕ್ಷಣ. ನಾನು ಇದನ್ನು ಒದ್ದೆ ಮಾಡುವೆನು', ಫಿಟ್ಝಪಿಯರ್ಸ ಅಂದನು. ಆತ ತನ್ನ ತುಟಿಗಳನ್ನು ಆ ಸ್ಥಳದಲ್ಲಿ ಒತ್ತಿಹಾಗೆಯೇ ಇಟ್ಟನು. ಅವಳೂ ಅದಕ್ಕೆ ಯಾವ ಆಕ್ಷೇಪಣೆಯನ್ನು ಎತ್ತಲಿಲ್ಲ. ಪ್ಲಾಸ್ಟರ ಚೂರು ಒದ್ದೆಯಾಗಿ ಸುಲಭ ವಾಗಿಕಿತ್ತು ಬರುವನಕ ಆತ ಹಾಗೆಯೇ ಉಳಿದನು. 'ನಾನು ಇದನ್ನು ಹಾಕಿದ್ದು ನಿಮ್ಮ ಹೇಳಿಕೆಯ ಮೇರೆಗೇ.'

'ಹೌದು' ಆಕೆ ಉತ್ತರಿಸಿದಳು, 'ನನಗೆ ಗೊತ್ತು. ನನ್ನ ಕೆನ್ನೆಯ ಮೇಲೆ (ಕಪಾಳದಲ್ಲಿ) ಆ ನೀಲನಾಡಿ ಇನ್ನೂ ಕಾಣಿಸುತ್ತದೆಯೇ? ಆ ಕಲೆ ಅದರ ಮೇಲೆಯೆ ಇದ್ದದ್ದು. ಆ ಗಾಯ ಇನ್ನಷ್ಟು ಆಳವಾಗಿದ್ದರೆ, ಅದು ಆ ನಾಡಿಯನ್ನು ಕೊರೆದು ನನ್ನ ಬಿಸಿ ನೆತ್ತರ ಚೆಲ್ಲುತ್ತಿತ್ತು. ಖಂಡಿತವಾಗಿ.'

ಫಿಟ್ಝಪಿಯರ್ಸ ಅದನ್ನು ಇಷ್ಟು ಹತ್ತಿರದಿಂದ ಪರೀಕ್ಷಿಸಿದನು — ಅವನ ಉಸಿರು

ಅವಳನ್ನು ಮೃದುವಾಗಿ ಸೋಂಕಿತು. ಆಗ ಅವರಿಬ್ಬರ ಕಣ್ಣುಗಳು ಏರಿ ಸಂಧಿಸಿದುವು. ಅವಳ ಕಣ್ಣು ನಕ್ಷತ್ರಗಳ ನಡುವಿನ ಅಂತರಿಕ್ಷದಷ್ಟು ಗೂಢವೂ ನಿಬಿಡವೂ ಆಗಿ ಕಂಡವು. ಅವಳು ಮೋರೆಯನ್ನು ಆಚೆಗೆ ಹೊರಳಿಸಿದಳು.

'ಆ ! ಬೇಡ, ಬೇಡ. ನಿಮ್ಮೊಡನೆ ನಾನು ಒಯ್ಯಾರ (ಮುರುಕ) ಮಾಡಲಾರೆ' ಆಕೆ ಉದ್ಗಾರ ತೆಗೆದಳು. 'ಇದಕ್ಕೆ ಒಂದು ಕ್ಷಣವೂ ನಾನು ಒಪ್ಪುವೆನೆಂದು ಭಾವಿಸ ಬೇಡಿ. ನಮ್ಮ ಆ ಬಡ ಅಲ್ಪ ಪ್ರಣಯಾರಾಧನೆಯ ತರುಣ ಗಳಿಗೆ ಎಂದೋ ಬಹಳ ಹಿಂದೆಯೇ ಕಳೆದು ಹೋಯಿತು — ಅದು ಈಗ ಮುಂದುವರಿಯುವಂತಿಲ್ಲ ಈ ಕೊನೆಯ ಕುರಿತು ನಾವು, ಇನ್ನೂ ಮುಂದುವರಿಯುವ ಮುಂಚೆಯೇ ಪರಸ್ಪರರನ್ನು ಅರಿತುಕೊಳ್ಳುವುದು ಲೇಸು.'

'ಒಯ್ಯಾರ. ನಾನು ಮಾಡುತ್ತಿಲ್ಲ, ನಿಮ್ಮೊಡನೆ. ಆ ಐತಿಹಾಸಿಕ ಕರವಸ್ತ್ರ ಕಂಡಾಗ ಹೇಗೋ ಹಾಗೆಯೇ ಇಂದಿಗೂ ಅದೇ ರೀತಿ. ಆಗ ನಾನು ಬಹಳ ಹುಚ್ಚಾಟ ಮಾಡಿರಬಹುದು ; ಇನ್ನೂ ಮಾಡಬಹುದು. ಆದರೆ ನಾನೇನು ಪೋಲಿಯಲ್ಲ, ಕ್ಷುಲ್ಲಕ ಹುಸಿಯಾಟವಾಡುವವನಲ್ಲ. ಆ ಭೂತಕಾಲದಲ್ಲಿ ನಿಮ್ಮ ಕಣ್ಣ ಸುತ್ತಿನಲ್ಲಿ ಸುಳಿದು ಹೋದ ಆ ಚಿಕ್ಕ ಅವಕಾಶವನ್ನು ಸಹಜವಾಗಿಯೆ ನಾನು ಎಂದಿಗೂ ಮರೆಯಲಾರೆ. ಮತ್ತು ಆ ನೆನಪು ಇಂದು ಎಲ್ಲ ಬಗೆಯ ಕಲ್ಪನಾ ವಿಲಾಸಕ್ಕೆ ಕದ ತೆರೆದು ಕೊಡುತ್ತದೆ.

'ಅಲ್ಲ. ಅಂದು ನನ್ನ ಅಮ್ಮ ನನ್ನನ್ನು ಅಲ್ಲಿಂದ ಒಯ್ಯದೆ ಇದ್ದಿದ್ದರೆ ?' ಆಕೆ ಪಿಸುಗುಟ್ಟಿದಳು — ತನ್ನ ಕನಸು ಕಾಣುವ ಕಣ್ಣು ದೂರದ ತೂಗಾಡುವ ತುದಿಯ ಮೇಲೆ ನಟ್ಟು.

'ನಾನು ನಿಮ್ಮನ್ನು ಇನ್ನೊಮ್ಮೆ ಕಾಣುತ್ತಿದ್ದೆ.'

'ಮತ್ತು ಆ ಮೇಲೆ ?'

'ಆ ಮೇಲೆ ಕಿಚ್ಚು ಹೆಚ್ಚು ಹೆಚ್ಚು ಎತ್ತರಕ್ಕೆ ಭುಗಿಲೇಳುತ್ತಿತ್ತು. ಆ ಮೇಲೆ ಕೂಡಲೇ ಏನು ಒದಗಿಬರುತ್ತಿತ್ತೋ ನಾನು ಹೇಳಲಾರೆ. ಆದರೆ ಹೃದಯದ ಬೇಗುದಿ ಮತ್ತು ದುಃಖವಂತೂ ಕೊನೆಗೆ ಉಳಿಯುತ್ತಿತ್ತು.'

'ಏಕೆ ?'

'ಅದುವೆ ಎಲ್ಲ ಪ್ರೇಮದ ಕೊನೆ, ನಿಸರ್ಗದ ನಿಯಮದಂತೆ. ಅದಕ್ಕೆ ನಾನು ಬೇರೆ ಏನೂ ಕಾರಣ ಕೊಡಲಾರೆ.'

'ಓ, ಹಾಗೆ ಆಡಬೇಡಿರಿ', ಆಕೆ ಉದ್ಗರಿಸಿದಳು. 'ನಾವು ಅಂದಿನ ಕಾಲದ ಸಾಧ್ಯತೆಗಳನ್ನಷ್ಟೇ ಚಿತ್ರಿಸುತ್ತಿದ್ದೇವೆ. ನಿಮಗೆ ದಮ್ಮಯ್ಯ, ಆ ಚಿತ್ರವನ್ನು ಹಾಳು ಮಾಡಬೇಡಿ.' ಅವಳ ದನಿ ಪಿಸುಗುಡುವ ಮಟ್ಟಕ್ಕೆ ತಗ್ಗಿತು — ತುಟಿಗಳನ್ನು ಮುದ್ದಾಗಿ ಮುಂದೊತ್ತಲು ಮೊದಲು ಮಾಡುತ್ತ ಅಂದಳು, 'ನನಗೆ ಹೀಗಾದರೂ ಭಾವಿಸಲಿಕ್ಕೆ ಬಿಡಿ, ನೀವು ಅಂದು ನನ್ನನ್ನು ನಿಜವಾಗಿಯೂ, ಗಂಭೀರವಾಗಿಯೂ ಪ್ರೀತಿಸಿದ್ದರೆ, ಎಂದೆಂದಿಗೂ ಪ್ರೀತಿಸುತ್ತಿದ್ದಿರಿ.'

‘ ನೀವನ್ನುವದು ಸರಿ, ಅದನ್ನು ನಿಮ್ಮ ಹೃದಯದಾಳದಿಂದಲೂ ಆಲೋಚಿಸಿರಿ ’ ಆತ ಅಂದನು. ‘ ಅದು ಸೊಗಸಾದ ವಿಚಾರ. ಅದಕ್ಕೆ ಬೆಲೆಯನ್ನೇನೂ ತೆರ ಬೇಕಾಗಿಲ್ಲ.’

ಅವಳು ಈ ಅಭಿಪ್ರಾಯವನ್ನು ಮೌನದಲ್ಲಿ ತೂಗಿ ನೋಡಿದಳು. ‘ ಅಂದಿನಿಂದ ಮುಂದೆ ಎಂದಾದರೂ ನೀವು ನನ್ನ ಬಗೆಗೆ ಏನಾದರೂ ಕೇಳಿದಿರಾ ? ’

‘ ಒಂದು ಶಬ್ದವೂ ಇಲ್ಲ.’

‘ ಅದೇ ಲೇಸಾಯಿತು. ನಾನು ನಿಮ್ಮಂತೆಯೇ ಬಾಳಿನ ಹೋರಾಟದಲ್ಲಿ ಹೋರ ಬೇಕಾಯಿತು. ಆ ವಿಷಯ ಇನ್ನೂ ಎಂದಾದರೊಂದು ದಿನ ಹೇಳುವೆನು. ಆದರೆ ಹಾಗೆ ಹೇಳೆಂದು ನನಗೆ ಆಗ್ರಹ ಮಾಡಬೇಡಿರಿ. ಅದೂ ಈಗಲೇ ಹೇಳೆಂದು ಒತ್ತಾಯ ಮಾಡಬೇಡಿರಿ.’

ಹೀಗೆ ನೆಕ್ಕಾರದ ರಮಣೀಯ ಶೈಲಸಾನುಗಳಲ್ಲಿ ಅವರಿಬ್ಬರೂ ಕೋಮಲವಾದ ಆತ್ಮೀಯತೆಯ ಪರಿಚಯದಲ್ಲಿ ಕಳೆದ ಎರಡು–ಮೂರು ದಿನಗಳು, ಈ ಸಿಂಹಾವಲೋಕ ಯಲ್ಲಿ ಎಳೆದು ಜಗ್ಗಿ ವರ್ಷಗಳ ದೀರ್ಘವನ್ನೂ ಮಹತ್ವವನ್ನೂ ಹೊಂದಿದವು ; ಅನಂತ ಉತ್ಪ್ರೇಕ್ಷೆ, ಆಲಸ ಸ್ವಪ್ನ, ಸುಖಾವಹವಾದ ಖಿನ್ನತೆ, ಚೆಲುವ ಮೋಹಕ ಸಂಕಲ್ಪ, ಸಾಧಿಸಲು ಶಕ್ಯವೂ ಇಲ್ಲದ ಅಶಕ್ಯವೂ ಅಲ್ಲದ ಇವೆಲ್ಲವುಗಳ ಚಿತ್ರಣಕ್ಕೆ ಪಟವಾಗಿ, ಭಿತ್ತಿ ಯಾಗಿ ಮಾಡಲ್ಪಟ್ಟವು.

ಅವರಿಬ್ಬರ ನಡುವೆ ಗ್ರೇಸಳ ಹೆಸರೆ ಎತ್ತಲಾಗುತ್ತಿದ್ದಿಲ್ಲ. ಆದರೂ ಆ ನೆರೆಹೊರೆ ಯಿಂದ ಆ ಡಾಕ್ಟರು ಸ್ಥಳಾಂತರಿಸುವ ಆಲೋಚನೆಯಿದೆಯೆಂಬ ವದಂತಿ ಹೇಗೋ ಶ್ರೀಮತಿ ಚಾರ್ಮುಂದಳ ಕಿವಿಗೆ ತಲ್ಪಿತು.

‘ ಡಾಕ್ಟರ, ನೀವು ಹೊರಟು ಹೋಗುವಿರಾ ? ’ ಅವಳು ಉದ್ಗರಿಸಿದಳು. ಅವಳ ವಿಶಾಲ ಕರಿಯಾಲಿಗಳಲ್ಲಿ ತುಂಬುವಷ್ಟೇ ಆಪಾದನೆಯ ಆಕ್ಷೇಪ ಭಾವವನ್ನು ಕೋಕಿಲಕಂಠದಲ್ಲಿಯೂ ಸೂಸುತ್ತ ಅವನನ್ನು ಆಕೆ ಇದುರಿಸಿದಳು. ‘ ಹೌದು, ನೀವು ಹೋಗುವಿರಿ ’. ಅವಳು ಭಾವಾವೇಶವೆಂದೇ ಕರೆಯಬಹುದಾದ ವೃತ್ತಿಯಲ್ಲಿ ದಿಗ್ಗನೆ ಎದ್ದು ನಿಂತು ಮಾತು ಮುಂದರಿಸಿದಳು. ‘ ಅಲ್ಲಗಳೆದು ಪ್ರಯೋಜನವಿಲ್ಲ.’ ‘ ನೀವು ಬಡಮೌಥದಲ್ಲಿ ಪ್ರ್ಯಾಕ್ಟೀಸ ಕೊಂಡುಕೊಂಡಿರುವಿರಿ. ನಿಮ್ಮನ್ನು ನಾನು ದೂಷಿಸುವುದಿಲ್ಲ. ಈ ಹಿಂಟಾಕಿನಲ್ಲಿ ಯಾರೂ ಉಳಿಯಲಾರರು — ಅದರಲ್ಲಿಯೂ ಅತ್ಯಾಧುನಿಕ ಶೋಧಗಳಿಗೆ ಹೆಗಲಣೆಯಾಗಿ ನಿಲ್ಲಬಯಸುವ ವ್ಯಾವಸಾಯಿಕ ಮನುಷ್ಯ ನಂತೂ ಇಲ್ಲವೇ ಇಲ್ಲ. ಅಲ್ಲದೆ ಅಂಥವರನ್ನು ಬೇರೆ ಕಾರಣಗಳಿಗಾಗಿ ಉಳಿಯು ವಂತೆ ಮನವೊಲಿಸಬಲ್ಲವರೂ ಇಲ್ಲಿ ಯಾರೂ ಇಲ್ಲ. ಸರಿ. ಅದೇ ಸರಿ — ನೀವು ಹೋಗಿರಿ.’

‘ ಆದರೆ ಇಲ್ಲ,— ಇನ್ನೂ ನಾನು ಆ ಪ್ರ್ಯಾಕ್ಟೀಸು ಖರೀದಿ ಮಾಡಿಲ್ಲ. ಆದರೆ ಅದಕ್ಕಾಗಿ ಒಡಂಬಡಿಕೆ ಮಾಡಿಕೊಂಡಂತಿದೆ. ಮತ್ತು ಡಿಯರ್ ಫ್ರೆಂಡ್, ಈ

ವ್ಯವಸಾಯದ ಕುರಿತು ಈ ಕ್ಷಣಕ್ಕೆ ನನಗೆ ಅನಿಸುವಂತೆಯೇ ಇನ್ನೂ ಮುಂದೂ ಅನಿಸುವುದಾದರೆ, ಬಹುಶಃ ನಾನು ಹೊರಟು ಹೋಗುವುದೇ ಬೇಡವೆಂಬ ನಿರ್ಧಾರಕ್ಕೆ ಬರಬಹುದು.'

'ಆದರೆ ನೀವು ಹಿಂಟಾಕ್ ಹಳ್ಳಿಯನ್ನು ತಿರಸ್ಕರಿಸುತ್ತೀರಿ — ಇಲ್ಲಿಯ ಪ್ರತಿಯೊಂದನ್ನು ಪ್ರತಿಯೊಬ್ಬರನ್ನು, ಅದಕ್ಕಾಗಿ ಇಲ್ಲಿಯ ಯಾವುದನ್ನು ನೀವು ಒಯ್ಯ ತಕ್ಕವರಲ್ಲ.'

ಫಿಟ್ಸ್‌ಪಿಯರ್ಸ್ ಈ ವಿಚಾರವನ್ನು ಅತ್ಯಂತ ಕಂಪಿಸುವ ದನಿಯಲ್ಲಿ ನಿರಾಕರಿಸಿ ದನು ಮತ್ತು ಅವಳು ತನ್ನ ಹಗುರಾದ ತರಳ ವಿಭ್ರಮದ ವೃತ್ತಿಗೆ ಮರಳಿ ಸೇರಿದಳು. ಈ ವೃತ್ತಿಯಡಿಗೆ ಅವಳು ತನ್ನ ಮನೋವಿಕಾರಗಳನ್ನು ಭಾವಾವೇಶಗಳನ್ನು ಹುದುಗಿಸುತ್ತಿದ್ದಳು. ಈ ವಿಕಾರಭಾವಗಳು ಬಲುಮೆಯಲ್ಲಿ ಕಡಮೆ ಇದ್ದಿಲ್ಲ. ವಿಚಿತ್ರ, ಹೊಗೆಯಾಡುವ, ವಿಕ್ಷಿಪ್ತ, ಉಚ್ಛೃಂಖಲ ವಿಕಾರಭಾವಗಳು, ಕುಗ್ಗಿಸಿದ ದಳ್ಳುರಿಯಂತೆ ಹತ್ತಿಕ್ಕಿದಂಥವು, ಆದರೆ ಆಗ ಈಗ, ಅಲ್ಲಿ ಇಲ್ಲಿ ಸಿಡಿದೊಡೆದು ಏಳುವಂಥವು — ಅವುಗಳ ಕುರಿತು ನಿಶ್ಚಿತವಾದ ಸಂಗತಿಯೆಂದರೆ ಅವುಗಳ ಅನಿಶ್ಚಿತತೆ, ಅನಪೇಕ್ಷಿತತೆ ಅಥವಾ ಆಕಸ್ಮಿಕತೆ.

ಫೆಲಿಸ್ ಚಾರ್ಮಂದಳನ್ನು ಒಂದು ಶಬ್ದವು ವ್ಯಕ್ತಮಾಡುವಂತಿದ್ದರೆ ಆ ಶಬ್ದವು ಗೌಣತೆ. ಅವಳು ವಿಕೃತಿ ಆಗ್ರಹಗಳ ಹೆಂಗಸಾಗಿದ್ದಳು. ತೀವ್ರ ವಿರೋಧ ಗಳಲ್ಲಿ ವೈಷಮ್ಯಗಳಲ್ಲಿ ಅವಳಿಗೆ ಹಿಗ್ಗು. ಅವಳಿಗೆ ತನ್ನ ಬಾಳಿನಲ್ಲಿ, ಪ್ರಣಯದಲ್ಲಿ, ಚರಿತ್ರದಲ್ಲಿ ರಹಸ್ಯಮಯತೆಯೆಂದರೆ ಮೆಚ್ಚಿಗೆ. ಅವಳ ಕುರಿತು ನ್ಯಾಯವಾಗಿಯೇ ಹೇಳುವುದಾದರೆ, ಈ ಮೂರರಲ್ಲಿಯೂ ನಾಚಿಕೆಪಟ್ಟುಕೊಳ್ಳುವಂಥದೇನೂ ವಿಶೇಷ ಕಾರಣವಿದ್ದಿಲ್ಲ; ಅಲ್ಲದೆ ಅವಳು ಹೆಮ್ಮೆಪಟ್ಟುಕೊಳ್ಳಬಹುದಾದ ಸಂಗತಿಗಳೂ ಹಲವು ಇದ್ದವು. ಆದರೆ ಅವಳ ಗತಜೀವನದ ಆಳ ಅಗಲವನ್ನು ಹಿಂಟಾಕಿನ ಪ್ರಾಮಾಣಿಕ ಮಿದುಳುಗಳು ತಿಳಿದುಕೊಂಡಿದ್ದಿಲ್ಲ. ಮತ್ತು ಅವಳು ತನ್ನ ಅನುಭವಗಳ ಬಗೆಗೆ ತಾನಾಗಿ ಹೇಳುವುದೇ ಕಡಮೆಯಾಗಿತ್ತು. ಅವಳ ವಿಕ್ಷಿಪ್ತ ಲಹರಿಯ ವೃತ್ತಿಯು ಮಟ್ಟಿಗೆ ಹೇಳುವುದಾದರೆ, ಅವಳ ಭೂಮಿಗಳಲ್ಲಿ ದುಡಿಯುವ ಮಂದಿಗೆ ಅದರ ರೂಢಿಯಾಗಿಬಿಟ್ಟಿತ್ತು. ಮಣ್ಣಿನ ಮಕ್ಕಳಲ್ಲಿ, ಪರಾವಲಂಬಿಗಳಲ್ಲಿ, ವಿಚಿತ್ರ ವೃತ್ತಿಗಳನ್ನು ಕೆರಳಿಸದೆ ಅವನ್ನು ಸುತ್ತು ಬಳಸಿ ಸಾಗುವ ಅದ್ಭುತ ಸೂಕ್ಷ್ಮ ಕೌಶಲ್ಯ ಸಾಮಾನ್ಯವಾಗಿ ಇರುವುದುಂಟು. ಆದ್ದರಿಂದ ಈ ಮಂದಿ ಸಮಮನೋವೃತ್ತಿಯ ಬೇರೊಬ್ಬರ ಆಳಿಕೆ ಗಿಂತ ಅವಳ ಆಳಿಕೆಯಡಿಗೆ ಹೆಚ್ಚು ಚೆನ್ನಾಗಿಯೆ ಬದುಕು ಸಾಗಿಸುತ್ತಿದ್ದರು.

ಇನ್ನು, ಡಾಕ್ಟರನು ಹಿಂಟಾಕ ಬಿಟ್ಟು ಹೋಗುವ ವಿಚಾರ. ಬಡವೌಷಧದ ಸರ್ಜನ್ನನ ಪ್ರಾಕ್ಟೀಸನ್ನು ಕೊಂಡುಕೊಳ್ಳುವ ವ್ಯವಹಾರವನ್ನು ಪೂರ್ಣ ಮಾಡುವ ದಿಶೆಯಲ್ಲಿ ಶ್ರೀಮತಿ ಚಾರ್ಮಂದಳೊಂದಿಗೆ ಒಪ್ಪಿಕೊಂಡಿದ್ದಕ್ಕಿಂತ ಆತ ಹೆಚ್ಚು ಮುಂದರಿದಿದ್ದನು. ಮುಂದಿನ ಇಪ್ಪತ್ತುನಾಲ್ಕು ತಾಸುಗಳಲ್ಲಿ ಆತ ಏನು ಮಾಡುವ

ನೆಂಬುದನ್ನೆ ಅವಲಂಬಿಸಿತ್ತು, ಅದೆಲ್ಲ ವ್ಯವಹಾರ. ಅವಳನ್ನು ಬಿಟ್ಟು ಹೊರಟ ಮರುದಿನದ ಸಂಜೆ ಆತ ಓಣಿಯಲ್ಲಿ ಹೋದನು. ಅಲ್ಲಿ ಎತ್ತರ ಬೆಳೆದು ನಿಂತ ಬೇಲಿಗಳ ನಡುವೆ ತಿರುಗಾಡುತ್ತ ವಿಚಾರಮಾಡಹತ್ತಿದನು. (ಬೇಲಿಗಳು ಇಲ್ಲಿ 'ಅಜ್ಜನಗಡ್ಡ' ಎಂದು ಕರೆಯಲಾಗುವ ಕಾಡು 'ಕ್ಲೆಮೆಟಿಸ್' ಹೂವುಗಳಿಂದ ಬಿಳಿ ಹಸಿರಾಗಿದ್ದವು. ಮುಂದೆ ವರ್ಷ ಸರಿದಂತೆ ಆ ಹೂವು ಹಾಗೆ ಗಡ್ಡದಂತೆ ಕಾಣುವುದರಿಂದ ಆ ಹೆಸರು ಬಂದಿತ್ತು.)

ಬಡವೌಷಧದ ಸರ್ಜನ್ನನಿಗೆ ಒಪ್ಪಿಗೆಯ ಪತ್ರವನ್ನು ಆ ರಾತ್ರೆಗೆ ಬರೆಯುವುದಿತ್ತು. ಅದನ್ನು ಬರೆದ ಮೇಲೆ ಹಿಂಟಾಕದಿಂದ ಅವನ ನಿರ್ಗಮನ ಅನಿವಾರ್ಯವಾಗುವುದು. ಆದರೆ, ಇದೀಗ ನಡೆದ ಸಂಗತಿಗಳ ನಂತರ ಆತ ಹೀಗೆ ಹೊರಟು ಹೋಗಬಲ್ಲನೆ? ಮರ, ಗುಡ್ಡ, ಎಲೆ, ಹುಲ್ಲು ಪ್ರತಿಯೊಂದೂ ಒಂದು ಸೂಕ್ಷ್ಮ ಬೆಳಕನ್ನು ತಾಳಿ ಉದ್ದೀಪಿತವಾದಂತಿತ್ತು — ಅವುಗಳ ಒಡತಿಯನ್ನು ಅವಳ ಇತಿಹಾಸವನ್ನು ಎಲ್ಲಕ್ಕೂ ಮಿಗಿಲಾಗಿ ಅವಳ ಮನೋಭಾವವನ್ನು ಕಂಡುಕೊಂಡಂದಿನಿಂದ. ಹಿಂಟಾಕ ಬಿಟ್ಟು ಹೋಗಲಿಕ್ಕೆ ಎಲ್ಲ ಬಗೆಯ ಐಹಿಕ ಕಾರಣಗಳಿದ್ದವು. ಆತ ಏಕಾಂತ ಜೀವನದ ಒಂದು ಆವೇಶದಲ್ಲಿ ಬಿಟ್ಟುಬಂದ ಪ್ರಪಂಚವನ್ನು ತಿರುಗಿ ಪ್ರವೇಶಿಸುವುದಾಗಿತ್ತು, ಅವನ ನಿರ್ಗಮನ. ಏನೋ ಕಲ್ಪಿತ ತಾತ್ಸಾರದ ಮೂಲಕ ಉಂಟಾದ ಮುನಿಸಿನಿಂದಾಗಿ ಎಚಿಲಿಸ್ ತನ್ನ ಡೇರೆಯಲ್ಲಿ ಸಿಡುಕಿನಿಂದ ಮೂಲೆ ಹಿಡಿದು ಕೂತಂತೆ ಅವನಿಗೆ ಆ ಭಾವಾವೇಶ ಉಂಟಾಗಿತ್ತು. ಅಲ್ಲಿಯ ಅಪರ ಸ್ಥಾನಮಾನಗಳ ಅಸಡ್ಡಾಳತನ ಅವನ ಹೆಂಡತಿಯೇ ಕಂಡಿದ್ದಳು ; ಮತ್ತು ಈ ಪ್ರಸ್ತಾಪಿತ ಬದಲಾವಣೆಯನ್ನು ಹರ್ಷದಿಂದ ಸ್ವಾಗತಿಸಿದಳು. ಈ ಬದಲಾವಣೆಯ ನಿಟ್ಟಿನಲ್ಲಿ ಈವರೆಗೆ ಕೊನೆಯದೊಂದು ಬಿಟ್ಟು ಪ್ರತಿಯೊಂದು ಹೆಜ್ಜೆಯನ್ನು ಇಟ್ಟದ್ದಾಯಿತು. ಆದರೆ ಈಗ ತನ್ನ ಮನಃ ಸಾಕ್ಷಿಯ ಇದಿರು ಕಂಡುಕೊಂಡಷ್ಟು ನಿಚ್ಚಳವಾಗಿ ತನ್ನ ಹೃದಯದಲ್ಲಿ ಆತ ಹೊರಟು ಹೋಗುವುದನ್ನು ಒಪ್ಪಿಕೊಳ್ಳಬಹುದೇ? — ಇಲ್ಲ.

ಆತ ಕಷ್ಟದಿಂದ ನಿಟ್ಟುಸಿರು ಬಿಟ್ಟು ಒಳಗಡೆಗೆ ಹೋದನು. ಅಲ್ಲಿ ಲಗುಬಗೆ ಯಿಂದ ಒಂದು ಪತ್ರವನ್ನು ಬರೆದನು. ಆ ಪತ್ರದಲ್ಲಿ ಆತ ಬಡವೌಷಧ ಪ್ರಾಕ್ಟೀಸಿನ ಕುರಿತು ಮಾಡಿಕೊಂಡ ಒಡಂಬಡಿಕೆಯಿಂದ ಒಮ್ಮೆಲೆ ಹಿಂದೆಗೆದುಕೊಂಡನು. ಆ ರಾತ್ರೆಯ ಮಟ್ಟಿಗೆ ಅಂಚೆಯಾಳು ಕಿರಿಯ ಹಿಂಟಾಕನ್ನು ಆಗಲೆ ಬಿಟ್ಟು ಹೊರಬಿದ್ದನು. ಆದ್ದರಿಂದ ಅವನು ಮೆಲಬರಿಯ ಆಳುಗಳಲ್ಲಿ ಒಬ್ಬನನ್ನು, ಟಪಾಲು — ಗಾಡಿಯನ್ನು ಹಾದಿಯಲ್ಲಿ ಸಂಧಿಸಲಿಕ್ಕೆ ಅಟ್ಟಿ ಆ ಪತ್ರವನ್ನು ಕಳುಹಿಸಿದನು.

ಆ ಆಳು ಹಿಂದಿರುಗಿ ಬಂದು ಫಿಟ್ಝಪಿಯರ್ಸನನ್ನು ಓಣಿಯಲ್ಲಿ ಸಂಧಿಸಿ ತಾನು ಮಾಡಿ ಬಂದ ಕೆಲಸವನ್ನು ಅರುಹಿದನು. ಫಿಟ್ಝಪಿಯರ್ಸ ವಿಚಾರಮಗ್ನನಾಗಿ ಮನೆಗೆ ಮರಳಿದನು. ತಾನೇಕೆ ಈ ತಾತ್ಕಾಲಿಕ ಪ್ರೇರಣೆಯಿಂದ ವರ್ತಿಸಿದೆ? ತನ್ನ ಹಾಗೂ ತನ್ನ ತರುಣ ಹೆಂಡತಿಯ ಆಶೋತ್ತರಗಳಿಗೆ ಅಪಾಯ ತರಬಹುದಾದ ಇಂಥ

ಸ್ವೈರ ದುಸ್ಸಾಹಸವನ್ನು ಏಕೆ ಮಾಡಿದೆ ? ಅವನ ಉದ್ದೇಶವು ಉದ್ಭ್ರಾಂತ, ಉಜ್ವಲ ಮತ್ತು ನಿರಾಕಾರವಾಗಿತ್ತು — ಪಡುವಣ ಬಾನಿನ ಉರಿದೆದ್ದ ದೃಶ್ಯದಂತೆ, ಶ್ರೀಮತಿ ಚಾರ್ಮರ್ಫಂದ ಅವನಿಗೆ ಪ್ರಕಟವಾಗಿ ಒಬ್ಬ ರೋಗಿ — ಪೇಶಂಟು, ಹೆಚ್ಚೇನಲ್ಲ ; ಅವನ ಹೆಂಡತಿಗೆ ಆಕೆ ಒಬ್ಬ ಆಗಂತುಕಳು — ಆಶ್ರಯದಾಳು. ಆದರೆ ಅವನು ಇಲ್ಲಿ ತಂಗಿದ ಮೊದಲಿನ ಅಂಟು ನಂಟು ಇಲ್ಲದ ಅವಿವಾಹಿತ ಅವಸ್ಥೆಯ ದಿನಗಳಲ್ಲಿ ಇಂಥ ಒಂದು ಭಾವನಾಮಯ ಕಾರಣವು, ಇಲ್ಲಿಯೆ ಮುಂದರಿಯುವ ದೃಷ್ಟಿಯಿಂದ, ಉಪದ್ರವಕಾರಿ ಯಾದ ಸಂಶಯ ಪ್ರವೃತ್ತಿಗೆ ಅದೆಷ್ಟು ಮೇಲಾದ ಔಚಿತ್ಯವುಳ್ಳದ್ದೆಂದು ಅನಿಸಬಹು ದಿತ್ತು ? ವೈವಾಹಿಕ ಆಶೋತ್ತರಗಳೇ ಅಷ್ಟು ಗೌರವಾಸ್ಪದವಾದವು.

'ನನ್ನ ಅಪ್ಪ ಹೇಳಿದ,—ನಮ್ಮ ಆಳುಗಳಲ್ಲಿ ಒಬ್ಬನನ್ನು ನೀನು ಬಡವಮೌಥಿಗೆ ಅಟ್ಟಿರುವಿಯಂತೆ,' ಗ್ರೇಸಳು ಅಂದಳು. ಕುಂದುತ್ತಿರುವ ಸಂಜೆ ಬೆಳಕಿನ ಬಾನಿನಡಿಗೆ ಏಕಾಕಿಯಾದ ಬೆಳ್ಳಿ ಚಿಕ್ಕೆಯು ತೂಗುತ್ತಿರುವಾಗ, ಅವಳು ಒಳ್ಳೆಯ ಸುಟಿಯಾದ ಚಕ್ಕಂದದ ನಡಿಗೆಯಲ್ಲಿ ಅವನನ್ನು ಇದಿರಾಗಲು ಹೊರಗೆ ಬಂದಳು. 'ಆಗಲೇ ನಾನೆಂದೆ, ಅವರು ಕೇಳುವ ಕಂತಿನ ಹಣವನ್ನು ತೆರಲು ನೀನು ಒಪ್ಪಿರಬೇಕು. ಮತ್ತು ಬೇಸರದ ಪ್ರಶ್ನೆ ಕೊನೆಗೂ ಬಗೆಹರಿದಿರಬೇಕು. ನಾವು ಎಂದು ಹೊರಡುವುದು, ಎಡ್ರೆಡ್ ?'

'ನಾನು ನನ್ನ ಮನಸ್ಸು ಬದಲಿಸಿದೆ,' ಆತ ಅಂದನು, 'ಅವರಿಗೆ ಬಹಳ ಭಾರಿ ಹಣ ಬೇಕಾಗಿದೆ—ಏಳನೂರು ಐವತ್ತು ; ಎರಡು, ದೊಡ್ಡ ಕಂತುಗಳಲ್ಲಿ. ಆದ್ದರಿಂದ ನಾನು ಅಲ್ಲಿ ಹೋಗುವುದನ್ನೆ ಒಪ್ಪಲಿಲ್ಲ. ನಾವು ಬೇರೊಂದು ಸಂಧಿಗಾಗಿ ಕಾಯಬೇಕು. ನಾನು ಅಷ್ಟೇನು ಒಳ್ಳೆಯ ವ್ಯವಹಾರ ತಜ್ಞನಲ್ಲವೆಂದೇ ನನ್ನ ಭಾವನೆ, ಅಲ್ಲ ಭೀತಿ.'

ಕೊನೆಯ ಶಬ್ದಗಳನ್ನು ಆತ ಕ್ಷಣಕಾಲ ತಡವಾರಿಸುತ್ತ ನುಡಿದನು. ತನ್ನ ಕೃತ್ಯದ ಮಹಾಮೂರ್ಖತನವನ್ನು ನೆನೆದೆ ಈ ತಡವರಿಕೆ ಉಂಟಾಗಿತ್ತು. ಅವಳ ಚೆಲುವಿನ ಗೌರವದ ಮುಖ ದಿಟ್ಟಿಸಿದಾಗ ಅವನು ತನ್ನ ಕೃತ್ಯಕ್ಕಾಗಿ ತನ್ನನ್ನೇ ಹಳಿದುಕೊಂಡನು.

ಆ ಸಂಜೆಗೆ ಅವಳ ರೀತಿಯು ಅವಳ ನಿರಾಶೆಯನ್ನು ಕಾಣಿಸಿತು. ವ್ಯಕ್ತಿಶಃ ಅವಳಿಗೆ ತನ್ನ ಬಾಲ್ಯದ ಈ ಮನೆಯೆ ಮೆಚ್ಚಿಗೆ ಆಗಿತ್ತು. ಅವಳು ಮಹತ್ವಾಕಾಂಕ್ಷಿ ಯೇನೂ ಇದ್ದಿಲ್ಲ. ಆದರೆ ಇಲ್ಲಿಯ ಪರಿಸ್ಥಿತಿಯಿಂದ ಅವಳ ಗಂಡನೆ ಅವರ ಮದುವೆ ಯಾದಂದಿನಿಂದಲೂ ಇಷ್ಟು ಅಸಂತುಷ್ಟನಾಗಿದ್ದ. ಅವಳು ಅವನಿಗೋಸ್ಕರವೆ ಅಲ್ಲಿಂದ ಹೋಗಲು ಮನವಾರೆ ಆಶಿಸಿದ್ದಳು.

ಮತ್ತೆ ಶ್ರೀಮತಿ ಚಾರ್ಮರ್ಫಂದಳಿಗೆ ಭೆಟ್ಟಿಕೊಟ್ಟದ್ದು ಎರಡು ಮೂರು ದಿನಗಳ ನಂತರ. ಹಗಲೆಲ್ಲ ಗಾಳಿ ಬೀಸಿತ್ತು. ಚಿಕ್ಕ ಮಳೆಸೆಳಕುಗಳು ಹಿಂಟಾಕ ಹಳ್ಳಿಯ ಗುಡಿಸಲುಗಳ ಗೋಡೆಗಳಿಗೂ ಕಿಟಕಿಯ ಗಾಜುಗಳಿಗೂ ಸೇಸೆಯಂತೆ ತೂರಿ ಚೆಲ್ಲಿ

ಕೋಡಿದ್ದವು. ಆತ ಪಾರ್ಕಿನ ಕಾಡು ಕಂಟಿ ಬೆಳೆದ ಕಣಿವೆಗಳೊಳಗಿಂದ ಕಾಲ್ನಡಿಗೆ ಯಿಂದಲೆ ಹೋದನು. ಅಲ್ಲಿ ಹೊಸ ತೇವಿನ ಜವಳು ನೀರು ಹಳ್ಳಗಳಲ್ಲಿ ಓಕ, ಎಲ್ಮ ಮರಗಳಿಂದ ಇಳಿದು ಹರಿಯುತ್ತಿತ್ತು. ಮರಗಳ ಹಳೆಯ ಕಡಿತದ ಕೊಳೆತ ಕಣ್ಣುಗಳೊಳಗಿಂದ ಹೊಲಸುರಾಡಿಯಾದ ನೀರು ಚಿಮ್ಮುತ್ತಿತ್ತು. ಅದರ ಕೆಳಗಡೆಯ ಕಾಂಡದ ಕವಚವೆಲ್ಲ ಪಾಚಿಯ ಬಣ್ಣವೆರಚಿ ಪಚ್ಚೆಹಸಿರಾಗಿತ್ತು. ಅವು ದೊಡ್ಡ ಗಾತ್ರದ ಕಾಂಡವುಳ್ಳ ಮರಗಳು. ಅವುಗಳ ನೀಳಕಂಬಿಗಳು ಎಂಥ ಬಿರುಗಾಳಿಯಲ್ಲಿಯೂ ತೂರಾಡುತ್ತಿದ್ದಿಲ್ಲ. ಅಂಥ ಗಾಳಿಗೆ ಅವು ತಮ್ಮ ಅಂಗಾಗಗಳನ್ನು ವಾಲಿಸಿಯೆ ಮೈಕೊಡುತ್ತಿದ್ದವು. ಹಳೆಯ ಮುದುಕಿಯ ಮೋರೆಯಂತೆ ಮುದುಡಿ ನೆರಿಗೆಗಟ್ಟಿ, ದಟ್ಟವಾದ ಹಸಿರೆಲೆಗಳ ರಾಶಿಯ ಮೇಲೆ ಚಾಚಿದ ಸಾರಂಗದ ಕೋಡುಗಳಂತೆ ಶಾಖೋಪಶಾಖಿಯಾಗಿ ಎದ್ದ ಸತ್ತಟೊಂಗೆಟಿಸಲುಗಳುಳ್ಳ ಆ ಮರಗಳು ಇನ್ನೂ ಹಚ್ಚಗಿದ್ದವು—ಇತರ ಮರಗಳ ಎಲೆಗಳ ಮೇಲೆ ಹಳದಿಯ ದಾಳಿ ಆಗಿದ್ದರೂ.

ಅವಳು ಮೊದಲ ಮಹಡಿಯ ಮೇಲೆ ಒಂದು ಬದಿ ಇರುವ ಕೋಣೆಯಲ್ಲಿ ಅಥವಾ ಹೆಂಗಸರ ಒಳಕೋಣೆಯಲ್ಲಿ ಇದ್ದಳು. ಅವಳ ಕಿಟಕಿಯ ಪರದೆಗಳು ಮುಚ್ಚಿದ್ದು ಹೊರಗಡೆ ಹಗಲ ಬೆಳಕಿದ್ದರೂ ಒಳಗೆ ಕೆಂಪುಶೇಡಿನ ಲ್ಯಾಂಪು ಮತ್ತು ಮೇಣಬತ್ತಿಗಳು ಉರಿಯುತ್ತಿದ್ದುದು ಕಂಡು ಫಿಟ್ಜಪಿಯರ್ಸನಿಗೆ ಆಶ್ಚರ್ಯವಾಯಿತು. ಅಲ್ಲದೆ ಚಳಿ ಇಲ್ಲದಿದ್ದರೂ, ಲೋಹದ ಚೌಕಟ್ಟಿನ ಅಗ್ಗಿಷ್ಟಿಗೆಯಲ್ಲಿ ದೊಡ್ಡ ಬೆಂಕಿ ಉರಿಯುತ್ತಿತ್ತು.

‘ ಇದೆಲ್ಲದರ ಅರ್ಥವೇನು ? ’ ಆತ ಕೇಳಿದನು.

‘ ಅವಳು ಒಂದು ಆರಾಮ ಕುರ್ಚಿಯಲ್ಲಿ ಒರಗಿದ್ದಳು. ಅವಳ ಮೋರೆ ಆಚೆಗೆ ಹೊರಳಿತ್ತು.

‘ ಓ ’ ಆಕೆ ಪಿಸುಗುಟ್ಟಿದಳು, ‘ ಇದೇಕೆಂದರೆ ಹೊರಗೆ ಪ್ರಪಂಚ ಬಹಳೇ ಶೂನ್ಯ ಸಪ್ಪೆಯಾಗಿದೆ. ದುಃಖ ಮತ್ತು ಕಟುತೆಗಳು ಆಕಾಶದಲ್ಲಿ ತುಂಬಿವೆ. ಕಿಟಕಿಯ ಗಾಜುಗಳಿಗೆ ಕಸಿವಿಸಿಯ ಕಂಬನಿಗಳ ಪೂರವೆ ಬಂದು ಬಡಿಯುತ್ತಿದೆ. ನಿನ್ನೆ ರಾತ್ರೆಯೆಲ್ಲ ನಾನು ಎಚ್ಚರವಾಗಿ ಕಳೆದೆ, ಕಿಟಕಿಯ ಗಾಜಿನ ಮೇಲೆ ಹೊರಗಡೆ ಬಸವನಹುಳಗಳು ಹರಿದಾಡುವುದನ್ನು ನಾನು ನೋಡುತ್ತಿದ್ದೆ. ಓ, ಅದೆಷ್ಟು ಬೇಸರ ವಾಯಿತು. ನನ್ನ ಕಣ್ಣು ಇಂದು ಮುಂಜಾನೆ ಇಷ್ಟು ಭಾರವಾದವು. ನಾನು ಇಡಿಯ ಜೀವಮಾನ ಅತ್ತು ಕರೆದು ಕಳೆಯುವೆನೆಂದೆನಿಸಿತು. ನೀವು ನನ್ನ ಮೋರೆ ನೋಡಿದರೆ ನನಗೆ ಸಹನವಾಗದು. ಆದ್ದರಿಂದ ಬೇಕೆಂದೇ ನಾನು ಅದನ್ನು ಈಚೆಗೆ ಹೊರಳಿಸಿ ದ್ದೇನೆ. ಓ, ನಮಗೇಕೆ ಹಸಿದ ಹೃದಯಗಳನ್ನು, ಕಾಡು ಬಯಕೆಗಳನ್ನು ದೇವರು ಕೊಟ್ಟಿದ್ದಾನೆ, — ಈ ಪ್ರಪಂಚದಲ್ಲಿ ನಾವು ಹೀಗೆಯೇ ಬಾಳಬೇಕೆಂದಿದ್ದರೆ ? ಬಾಳು ಕಡವಾಗಿ ಬೇಡುವುದನ್ನು ಸಾವೊಂದೇ ಕೊಡಬೇಕೇಕೆ ? — ವಿಶ್ರಾಂತಿಯನ್ನು ! ಇದಕ್ಕೆ ಉತ್ತರಕೊಡಿ, ಡಾ. ಫಿಟ್ಜಪಿಯರ್ಸ. ’

'ಹಾಗೆ ಮಾಡುವ ಮುಂಚೆ, ನೀವು ಇನ್ನೊಂದು ಜ್ಞಾನವೃಕ್ಷದ ಫಲವನ್ನೇ ತಿನ್ನಬೇಕಾದೀತು, ಫೆಲಿಸ್ ಚಾರ್ಮಂದ.'

'ಆ ಮೇಲೆ ನನ್ನ ಭಾವಾವೇಗಗಳೆಲ್ಲ ತಾವೇ ತೋಡಿಹೋಗಿ ತಣ್ಣಗಾದ ಮೇಲೆ, ನಾನು ಪೂರಾ ಭಯಭೀತಳಾಗುತ್ತೇನೆ. ಭಯದಿಂದ ಸಾಯುವೆನೆಂದೇ ಅನಿಸುತ್ತದೆ. ಸಮಾಜದ ಭಯಂಕರ ಒತ್ತಾಯಗಳು, ಆಗ್ರಹಗಳು, ಅವೆಷ್ಟು ನಿಷ್ಠುರ, ನಿರ್ಭಾವ ಮತ್ತು ಅಪರಿಹಾರ್ಯವಾಗಿವೆ. ಕಲ್ಲಿನ ಬದಲು ಮೇಣದಿಂದ ಮಾಡಿದ ಮಂದಿಯ ಕುರಿತಂ ಅವು ಅದೆಂಥ ಅಘೋರ, ಉಗ್ರ. ಓ, ನನಗೆ ಅವುಗಳ ಅಂಜಿಕೆ ಬಹಳ. ಈ ತಪ್ಪಿಗೊಂದು ತಿವಿತ, ಆ ತಪ್ಪಿಗೊಂದು ಇರಿತ. ಸಮಾಜವು ಪೂರ್ಣತ್ವಕ್ಕೆ ಸಾಗಲೆಂದು ನೆವ ಒಡ್ಡಿ ರೂಪಿಸಿದ ತಿದ್ದುಪಡಿಗಳು, ನಿಯಮ ನಿರ್ಬಂಧಗಳು. ಆದರೆ ಆ ಗುರಿಯ ಬಗ್ಗೆ ನನಗೆ ಸ್ವಲ್ಪವಾದರೂ ಪರಿವೆ ಇದ್ದರೆ ಅಲ್ಲವೇ ? ಆದರೆ ಈ ಬಗ್ಗೆ, ನಾನು ಪರಿವೆ ಮಾಡುವ ಎಲ್ಲಕ್ಕೂ ಕುಗ್ಗು, ಹಸಿವು ಕಾಡಿದೆ.'

ಫಿಟ್ಸ್ಪಿಯರ್ಸ್ ಅವಳ ಹತ್ತಿರವೆ ಕುಳಿತುಕೊಂಡಿದ್ದನು. 'ನಿನಗೆ ಇಂಥ ಖಿನ್ನವೃತ್ತಿಯನ್ನು ತರುವದಾದರೂ ಏನು ?' ಆತ ಮೃದುವಾಗಿ ಕೇಳಿದನು. ನಿಜ ವಾಗಿಯೂ ಅವನಿಗೆ ಅನಿಸಿತು — ಬಹು ಕಾಲ ಮನೆಯೊಳಗೇ ಉಳಿದದ್ದರಿಂದ ಅವಳ ಮನಃಸ್ಥಿತಿ ಕೆಟ್ಟಿದೆ. ಆದರೆ ಅವನು ಹಾಗೆ ಆಡಿ ತೋರಿಸಲಿಲ್ಲ.

'ನನ್ನ ಮನೋಲಹರಿಗಳು, ಡಾಕ್ಟರ್, ನೀವಿಲ್ಲಿ ಮತ್ತೆ ಬರಕೂಡದು, ಅವರು ಇದೊಂದು ಹಗರಣವೆಂದು ಈಗಾಗಲೆ ತಿಳಿಯಹತ್ತಿದ್ದರೆ. ನಾ ಹೇಳುತ್ತೇನೆ, ನೀವು ಇನ್ನು ಮುಂದೆ ಬರಬಾರದು. ಅದೋ—ನನ್ನ ಮೇಲೆ ಸಿಟ್ಟಾಗಬೇಡಿರಿ.' ಹೀಗೆಂದು ಅವಳು ಜಿಗಿದೆದ್ದು ಅವನ ಕೈಯನ್ನೊತ್ತಿ ಹಿಡಿದು ಕಳವಳದಿಂದ ಅವನನ್ನು ನೋಡಿದಳು. 'ಅದೇ ಅವಶ್ಯ. ನಿಮಗೂ ನನಗೂ ಕೂಡಿಯೆ ಅದು ಉತ್ತಮ.'

'ಆದರೆ,' ಫಿಟ್ಸ್ಪಿಯರ್ಸ್ ಮಬ್ಬು ಗವಿದಂತೆ ಆಗಿ ಅಂದನು, 'ನಾವೇನು ಮಾಡಿದ್ದೇವೆ ?'

'ಮಾಡಿದ್ದು ? ನಾವೇನೂ ಮಾಡಿಲ್ಲ. ಅದಕ್ಕೂ ಹೆಚ್ಚು ನಾವು ವಿಚಾರ ಮಾಡಿದ್ದೇವೇನೋ. ಆದಾಗ್ಯೂ ಇದೆಲ್ಲ ಮನಸ್ತಾಪ. ನಾನು ಶಾಟ್ಸ್‌ಫರ್ಡದ ಹತ್ತಿರ ಮಿಡಲ್‌ಟನ್ ಅಬ್ಬೆಗೆ ಹೋಗುತ್ತೇನೆ. ಅಲ್ಲಿ ನನ್ನ ದಿವಂಗತ ಯಜಮಾನರ ಆಪ್ತಳೊಬ್ಬಳು ವಾಸಿಸುತ್ತಾಳೆ. ಅವಳು ಹಾಸಿಗೆ ಹಿಡಿದು ಬಿದ್ದವಳು. ಲಂಡನ್ನಿನಲ್ಲಿಯೇ ನಾನು ಈ ಮಾತು ಕೊಟ್ಟಿದ್ದೆ. ಅದರಿಂದ ನಾನು ಜಾರಿ ಕೊಳ್ಳುವಂತಿಲ್ಲ. ಇಲ್ಲಿ ಇದೆಲ್ಲ ಕಳೆದು ಹೋಗುವತನಕ ನಾನು ಅಲ್ಲಿ ಹೋಗಿ ಉಳಿಯುವುದು ಎಲ್ಲದಕ್ಕೂ ಉತ್ತಮ. ನೀವು ನಿಮ್ಮ ಹೊಸ ಪ್ರ್ಯಾಕ್ಟೀಸು ಆರಂಭಮಾಡುವುದು ಯಾವಾಗ? ನಿಮ್ಮ ಚೆಲುವೆ ಹೆಂಡತಿಯು ಕೈ ಭುಜದ ಮೇಲಿಟ್ಟುಕೊಂಡು ಈ ಹಿಂಟಾಕ ಹಳ್ಳಿಯನ್ನು ಕೊನೆಯದಾಗಿ ಬಿಟ್ಟುಹೋಗುವುದು ಯಾವಾಗ?'

'ಆ ಅವಕಾಶವನ್ನು ನಾನು ನಿರಾಕರಿಸಿದ್ದೇನೆ. ಈ ಸ್ಥಳವನ್ನು ಬಿಟ್ಟು ಹೋಗಲಾರದಷ್ಟು ನಾನು ಪ್ರೀತಿಸುತ್ತೇನೆ.'

'ನೀವು ನಿರಾಕರಿಸಿದ್ದೀರಿ?' ಅವನನ್ನು ಸ್ವೈರ ಸಂದಿಗ್ಧತೆಯಲ್ಲಿ ಧ್ಯಾನಿಸುತ್ತ ಅವಳು ಅಂದಳು, 'ನೀವೇ ನಿಮ್ಮನ್ನು ಹೀಗೆ ಹಾಳು ಮಾಡಿಕೊಳ್ಳುವಿರಾ ಅಯ್ಯೋ ದೇವರೇ, ಇದನ್ನೇನು ನಾನು ಮಾಡಿದೆ?'

'ಏನಿಲ್ಲ. ಅಲ್ಲದೆ, ನೀವೂ ಹೋಗುತ್ತೀರಿ.'

'ಓ, ಹೌದು. ಆದರೆ ಬರೆ ಮಿಡಲ್‌ಟನ್ ಅಬ್ಬೆಗೆ ಅದೂ ಒಂದೋ ಎರಡೋ ತಿಂಗಳ ಮಟ್ಟಿಗೆ. ಆದಾಗ್ಯೂ ಅಲ್ಲಿ ನಾನು ಶಕ್ತಿಯನ್ನು, ವಿಶೇಷವಾಗಿ ಮನಃಶಕ್ತಿಯನ್ನು ಪಡೆದೇನು. ಅದು ನನಗೆ ಅಗತ್ಯವಿದೆ. ನಾನು ಅಲ್ಲಿಂದ ತಿರುಗಿ ಬಂದಾಗ ಹೊಸ ಹೆಂಗಸೇ ಆಗೇನು. ಆಗ ನೀವು ನನ್ನನ್ನು ಬಂದು ಭೆಟ್ಟಿಯಾಗಬಹುದು — ಸುರಕ್ಷಿತವಾಗಿ. ನಿಮ್ಮ ಹೆಂಡತಿಯನ್ನು ಸಂಗಡ ತರಬಹುದು ಮತ್ತು ನಾವಿಬ್ಬರೂ ಗೆಳೆಯರಾಗಬಹುದು — ಅವಳು ಮತ್ತು ನಾನು. ಓ, ಹೀಗೆ ಮನೆಯೊಳಗೇ ಕದಪಿಕ್ಕಿ ಬಿದ್ದುಕೊಂಡಿರುವುದು ಇಂಥ ಕೆಲಸಕ್ಕೆ ಬಾರದ ಕಲ್ಪನೆ ಭಾವನೆಗಳಲ್ಲಿ ಓಲಾಡುವಂತೆ ಮಾಡುತ್ತವೆ. ಇಂದಿನ ನಂತರ ನೀವು ನನಗಾಗಿ ಇಲ್ಲಿ ಹಾಜರಿರುವುದನ್ನು ನಾನು ಬಯಸುವುದಿಲ್ಲ. ಆದಾಗ್ಯೂ, ನೀವು ಇಲ್ಲಿಂದ ಹೋಗುವುದಿಲ್ಲವೆಂದು ಕೇಳಿ ನನಗೆ ಸಂತೋಷ —ಇಲ್ಲಿಯೇ ಉಳಿಯುವುದರಿಂದ ನಿಮ್ಮ ಭವಿಷ್ಯಕ್ಕೆ ಏನಾದರೂ ಅಪಾಯವಾಗುವಂತೆ ಇಲ್ಲವಾದರೆ.'

ಆತನು ಕೋಣೆಯಿಂದ ಹೊರಬಿದ್ದೊಡನೆ, ಅಗಲಿಕೆಯಲ್ಲಿ ಆಕೆ ಕಾದುಕೊಂಡ ದನಿಯಲ್ಲಿಯ ಸಾಮ್ಯ ಸ್ನೇಹಭಾವವು, ಅವನೊಂದಿಗೆ ಮಾತುಕತೆಯಲ್ಲಿ ಇಟ್ಟುಕೊಂಡ ಖಿನ್ನತೆಯ ಒಂದು ಲೀಲಾಭಾವವು ಅವಳಿಂದ ತೊಲಗಿದವು. ಅವಳು ಸೀಸದಷ್ಟು ಜಡವಾದಳು — ಆತ ಬರುವ ಮುಂಚೆ ಇದ್ದಂತೆಯೇ. ಏನೂ ಮಾಡಲಾರದಂಥ ಒಂದು ಖಿನ್ನ ದೌರ್ಬಲ್ಯದಲ್ಲಿ ಅವಳ ಇಡಿಯ ವ್ಯಕ್ತಿತ್ವ ಕರಗಿ ಹೋದಂತೆ ತೋರಿತು — ಅದರ ಅರಿವು, ಅವಳ ತುಟಿಗಳು ಅದರುವಂತೆ, ಕಣ್ಣು ಒದ್ದೆಯಾಗುವಂತೆ ಮಾಡಿತು.

ಅವನ ಹೆಜ್ಜೆಯ ಸದ್ದು ಮತ್ತೆ ಅವಳನ್ನು ದಿಗಿಲುಗೊಳಿಸಿತು. ಅವಳು ಅತ್ತ ಹೊರಳಿದಳು.

'ಈ ಸಂಜೆ ತುಂಬ ಚೆಂದವಾಗಲಿದೆ. ಇದನ್ನು ನಿಮಗೆ ಹೇಳಲು ತಿರುಗಿ ಬಂದೆ. ಸೂರ್ಯ ಬೆಳಗುತ್ತಿದ್ದಾನೆ. ಆದ್ದರಿಂದ ನಿಮ್ಮ ಕಿಟಕಿಯ ಪರದೆಗಳನ್ನು ತೆಗೆಯಿರಿ, ಈ ದೀಪಗಳನ್ನು ಆರಿಸಿಬಿಡಿರಿ. ನಿಮಗಾಗಿ ನಾನೇ ಇದನ್ನು ಮಾಡಲೋ?'

'ಮಾಡಿ, ದಯಮಾಡಿ. ನಿಮ್ಮ ಆಕ್ಷೇಪವಿಲ್ಲದಿದ್ದರೆ.'

ಆತ ಕಿಟಕಿಯ ಪರದೆಗಳನ್ನು ಹಿಂದೆ ಸರಿಸಿದನು. ಆಗ ಆ ಶರತ್‌ಕಾಲದ ಕೊನೆಯ ಭಾಗದ ಬಿಸಿಲು ಒಳಗೆ ತೂರಿ ಬಂದು ದೀಪದ ಕೆಂಪು ಪ್ರಭೆಯು ಎರಡೂ ಮೇಣಬತ್ತಿಗಳ ಶಿಖೆಗಳೂ ಅದರಡಿಗೆ ಮಾಯವೇ ಆದಂತೆ ಅನಿಸಿತು.

'ನಾನು ನಿಮ್ಮ ಕಡೆಗೆ ಬರಲೇ?' ಆತ ಕೇಳಿದನು. ಅವಳ ಬೆನ್ನು ಅವನ ಕಡೆಗಿತ್ತು.'

'ಊಹೂಂ.'

'ಏಕೆ ಊಹೂಂ?'

'ಏಕೆಂದರೆ ನಾನು ಅಳುತ್ತಿದ್ದೇನೆ. ನೀವು ನನ್ನ ಮೋರೆಯನ್ನು ಸೂರ್ಯನ ತುಂಬ ಬೆಳಕಿನಲ್ಲಿ ನೋಡಬಾರದು.'

ಅವನು ಒಂದು ಕ್ಷಣ ಅನಿಶ್ಚಯದಲ್ಲಿ ತಡೆದನು. ಮತ್ತು ಆ ಗುಲಾಬಿ ಬಣ್ಣದ ಭಾವೋದ್ದೀಪಕ ದೀಪ ಪ್ರಭೆಯನ್ನು, ಪರದೆ ಸರಿಸಿ ಆ ತಾಪದಾಯಕ ಹಗಲನ್ನು ಒಳಗೆ ಬಿಟ್ಟು ಕೊಂದುದಕ್ಕೆ ಪಶ್ಚಾತ್ತಾಪಪಟ್ಟನು.

'ಹಾಗಾದರೆ ನಾನು ಹೋಗುವೆನು.'

'ಒಳ್ಳೆಯದು', ಒಂದು ಕೈಯನ್ನು ಸುತ್ತಾಗಿ ಆತನ ಕಡೆಗೆ ಚಾಚುತ್ತ ಇನ್ನೊಂದರಲ್ಲಿ ಹಿಡಿದ ಕರವಸ್ತ್ರದಿಂದ ಕಣ್ಣು ಒತ್ತಿಕೊಳ್ಳುತ್ತ ಆಕೆ ಅಂದಳು.

'ನಾನು ನಿನಗೊಂದು ಸಾಲು ಪತ್ರ ಬರೆಯಲೇ...?'

'ಬೇಡ ಬೇಡ', ಅವಳ ದನಿಯಲ್ಲಿ ಒಂದು ಸೌಮ್ಯ ಸಮಂಜಸತನ ಸೇರಿಕೊಂಡಿತು. 'ಹಾಗೆ ಆಗ ಕೂಡದು, ನಿಮಗೆ ಗೊತ್ತು. ಅದಾಗದು.'

ಒಳ್ಳೆಯದು. 'ಗುಡ್‌ಬಾಯ್', ಮರುಕ್ಷಣಕ್ಕೆ ಆತ ಹೋಗಿಬಿಟ್ಟಿದ್ದನು.

ಆ ಸಂಜೆಗೆ ಅವಳು ಅಸ್ವಸ್ಥ ಕೌಶಲ್ಯದಿಂದ, ತನ್ನನ್ನು ಊಟಕ್ಕಾಗಿ ಬೇರೆ ಬಟ್ಟೆ ತೊಡಿಸಲು ಬಂದ ಹರಯದ ಹೆಣ್ಣುಗಳಿಗೆ ಡಾ. ಫಿಟ್ಝಪಿಯರ್ಸನ ಮದುವೆಯ ಕುರಿತು ಮಾತಾಡಲು ಉತ್ತೇಜನ ಕೊಟ್ಟಳು.

'ಫಿಟ್ಝಪಿಯರ್ಸರ ಹೆಂಡತಿ ಹಿಂದೊಮ್ಮೆ ವಿಂಟರಬೋರ್ನನನ್ನು ಮೆಚ್ಚಿಕೊಂಡಿದ್ದಳೆಂದು ಜನ ತಿಳಿದಿದ್ದರು.' ಆ ತರಳೆ ಹೇಳಿದಳು.

'ಆದರೆ ಅವನನ್ನೇಕೆ ಆಕೆ ಮದುವೆ ಆಗಲಿಲ್ಲ?' ಶ್ರೀಮತಿ ಚಾರ್ಮಂದ ಕೇಳಿದಳು.

'ಏಕೆಂದರೆ, ಅಮ್ಮ, ಅವನು ಮನೆಮಾರು ಕಳಕೊಂಡ.'

'ಮನೆಮಾರು ಕಳಕೊಂಡ? ಅದು ಹೇಗೆ ಕೂಡಿ ಬಂತು?'

'ಮನೆಗಳನ್ನು ಜೀವಾವಧಿಯ ಕರಾರಿಗೆ ಹಿಡಿದದ್ದು ಜೀವಮಾನ ಮುಗಿದವು. ನಿಮ್ಮ ಏಜೆಂಟ್ ಅವನ್ನು ತಿರುಗಿ ಊರ್ಜಿತ ಮಾಡಲು ಒಪ್ಪಲಿಲ್ಲ. ವಿಂಟರಬೋರ್ನನ ಹಕ್ಕು ಬಲವಾಗಿಯೇ ಇತ್ತು. ಇದು ನಾನು ಕೇಳಿದ ಮಟ್ಟಿಗೆ ನಡೆದ ಹಕೀಕತು, ಅಮ್ಮಾವರೆ. ಈ ಮೂಲಕವೆ ಆ ಸಂಬಂಧ ಮುರಿದು ಹೋಯಿತಂತೆ.'

ಹತ್ತು ಹನ್ನೆರಡು ವಿವಿಧ ವಿಕಾರಗಳಿಂದ ಉದ್ರಿಕ್ತಳಾಗಿದ್ದ ಶ್ರೀಮತಿ ಚಾರ್ಮಂದ ಆತ್ಮನಿಂದೆಯ ವಿಷಾದಮಯ ವೃತ್ತಿಯಲ್ಲಿ ಮುಳುಗಿ ಹೋದಳು — 'ಆ ಬಡವನಿಗೆ ಅವನ ಸಮಂಜಸವಾದ ಬೇಡಿಕೆಯನ್ನು ಅಲ್ಲಗಳೆದುದರಿಂದ.' ಆಕೆ ತನ್ನಷ್ಟಕ್ಕೆ ಅಂದುಕೊಂಡಳು, 'ನನ್ನ ಏಜಂಟನು ನನ್ನ ಎಳೆಪ್ರಾಯದ ಚೇತರಿಸಿದ ಪ್ರಣಯಪ್ರಸಂಗಕ್ಕೆ

ಇತಿಶ್ರೀ ತಂದನು. ಅಂಥ ಒಂದು ವ್ಯಾವಹಾರಿಕ ವಿಷಯ ನನ್ನ ಹೃದಯವನ್ನು ಹೀಗೆ ಚುಚ್ಚಿ ಕೆರಳಿಸಬಹುದೆಂದು ಯಾರು ಭಾವಿಸಿದ್ದರು ? ಇನ್ನು ಚಳಿಗಾಲದ ತುಂಬ ಪಶ್ಚಾತ್ತಾಪ ಮತ್ತು ವೇದನೆ ಹಾಗೂ ವ್ಯರ್ಥ ಅಭಿಲಾಷೆಗಳು,—ಮುಂಬರುವ ವಸಂತ ಕಾಲದಲ್ಲಿ ಅವನನ್ನು ನಾನು ಮರೆಯುವವರೆಗೆ. ಓ ನಾನು ಹೋಗಲಿದ್ದೇನೆ—ಒಳಿತೇ ಆಯಿತು ನನಗೆ ಅದೇ ಸಂತೋಷ.'

ಅವಳು ತನ್ನ ಕೋಣೆಯನ್ನು ಬಿಟ್ಟು, ಊಟಕ್ಕೆ ಕೆಳಗೆ ಹೋದಳು, ನಿಟ್ಟುಸಿರು ಎಳೆಯುತ್ತ. ನಿಚ್ಚಣಿಕೆಯ ಪಾವಟಿಗೆಗಳ ಮೇಲೆ ಅವಳು ದೊಡ್ಡ ಕಿಟಕಿಯ ಇದುರಿಗೆ ನಿಂತಳು. ಹೊರಗೆ ಹುಲ್ಲು ಹಾಸನ್ನು ಒಮ್ಮೆ ನೋಡಿದಳು. ಇನ್ನೂ ಕತ್ತಲು ಕವಿದಿದ್ದಿಲ್ಲ. ಅವಳ ಕಣ್ಣೆದುರು ಮೇಲೆ ಚಾಚಿದ ಹಸಿರು ಇಳುಕಲಿನ ನಡುಮಟ್ಟಕ್ಕೆ ಮುದಿ ತಿಮೊಥಿ ತಾಂಗ ನಿಂತಿದ್ದನು. ಆತ ಹಾದಿ ಇಲ್ಲದ ಈ ತಾಣದಲ್ಲಿ ಇಳುಕಲನ್ನೇರಿ ಹಾಯ್ದು ಮನೆಯ ದಾರಿಯನ್ನು ಕಿರಿದು ಮಾಡಿಕೊಳ್ಳುತ್ತಿದ್ದನು — ಇಲ್ಲಿ ಹೀಗೆ ಹಾದುಹೋಗಕೂಡದೆಂದು ಕಟ್ಟಪ್ಪಣೆ ಇದ್ದರೂ ಅದನ್ನು ಮುರಿದು. ಒಂದು ಕ್ಷಣ, ನಶ್ಯ ವೇರಿಸಿಕೊಳ್ಳಲೆಂದು ತಿಮೊಥಿ ಅಲ್ಲಿ ನಿಂತಿದ್ದನು. ಆದರೆ ಶ್ರೀಮತಿ ಚಾರ್ಮಂದ ತನ್ನನ್ನು ದಿಟ್ಟಿಸುವುದನ್ನು ಕಂಡು ಆತ ದಿಬ್ಬವೇರಿ ಕೂಗಳತೆಯಿಂದ ಆಚೆಗೆ ಜಾರಲಿಕ್ಕೆ ತ್ವರೆ ಮಾಡಿದನು. ಈ ಗಡಿಬಿಡಿಯಲ್ಲಿ ಆತನ ಹೆಜ್ಜೆ ತಪ್ಪಿತು. ಮತ್ತು ಪೀಪಾಯಿಯಂತೆ ಆತ ಕೆಳಗೆ ತಳಕ್ಕೆ ಉರುಳಿದನು. ಅವನ ನಶ್ಯ ಡಬ್ಬಿಯು ಮುಂದೆ ಉರುಳಿ ಹೋಯಿತು.

ಫಿಟ್ಝಪಿಯರ್ಸನ ಬಗೆಗೆ ಅವಳ ಅಶಕ್ಯ ಆಲಸ ಅನಿಯಮಿತ ಭಾವ ವಿಕಾರ, ಸ್ವಭಾವಸಿದ್ಧವಾದ ಅವಳ ಖಿನ್ನತೆ, ಅವಳ ಕಣ್ಣೆವೆಗಳಲ್ಲಿ ಇನ್ನೂ ತೂಗುತ್ತಿರುವ ದುಃಖದ ಹನಿಗಳು — ಇವೆಲ್ಲವೂ ಈ ನೋಟ ಹುಟ್ಟಿಸಿದ ಪ್ರೇರಣೆಗೆ ಹಾದಿಮಾಡಿ ಕೊಟ್ಟವು. ಅವಳು ಮಿತಿ ಇಲ್ಲದ ಹರ್ಷವಾಯು ವಿಕಾರಕ್ಕೆ ತುತ್ತಾಗಿ ಬಿದ್ದು ಬಿದ್ದು ನಗಲು ತೊಡಗಿದಳು. ಹಿಂದಿನ ಗಳಿಗೆಯ ಅವಳ ಮಬ್ಬೇ ಅದನ್ನು ಇನ್ನೂ ಅನಿಯಂತ್ರಿತವಾಗಿ ಉಕ್ಕಿಸಿತು. ಅವಳು ಊಟದ ಕೋಣೆಯನ್ನು ಹೊಕ್ಕಾಗಲೂ ಆ ನಗೆ ಹೋಗಿದ್ದಿಲ್ಲ. ಅಲ್ಲಿಯೂ ಆಳುಗಳ ಇದುರಿಗೆ, ಆ ದೃಶ್ಯ ನೆನಪಿನಲ್ಲಿ ಮರುಕಳಿಸಿದಾಗೆಲ್ಲ ಅವಳ ಹೆಗಲುಗಳು ಒಮ್ಮೆಲೆ ಕಂಪಿಸುತ್ತಿದ್ದವು — ನಗೆ ತಡೆಯಲಾಗದೆ. ಹಿಂದೆ ದುಃಖದಿಂದ ಉಂಟಾದ ಕಂಬನಿಗಳೊಂದಿಗೆ ಅವಳ ಆ ನಗೆಬರುಕತನ ಹುಟ್ಟಿಸಿದ ಕಣ್ಣೀರು ಸೇರಿಕೊಂಡಿತು.

ಇನ್ನು ಅಳುಬುರುಕಿ ಆಗಿರಬಾರದೆಂದು ಆಕೆ ನಿಶ್ಚಯಿಸಿದಳು. ಶಾಂಪೇನ್ ಮದ್ಯದ ಎರಡು ಗ್ಲಾಸು ಅವಳು ಬರಿದು ಮಾಡಿದಳು. ಅವುಗಳ ಮೇಲೆ ಇನ್ನೂ ಹೆಚ್ಚು ಕುಡಿದಳು. ಮತ್ತು ಆ ಸಂಜೆಯನ್ನೆಲ್ಲ ಚೆಂದದ ಶೃಂಗಾರಿಕ ಹಾಡುಗಳನ್ನು ಹಾಡಿ ತನ್ನ ಮನೋರಂಜನೆ ಮಾಡಿಕೊಳ್ಳುವುದರಲ್ಲಿ ಕಳೆದಳು.

'ಆದರೆ ಆ ಬಡ ವಿಂಟರಬೋರ್ನನ ಬಗೆಗೆ ನಾನು ಏನಾದರೂ ಮಾಡಲಿಕ್ಕೇ ಬೇಕು' ಆಕೆ ಅಂದುಕೊಂಡಳು.

೨೯

ಒಂದು ವಾರ ಕಳೆದಿತ್ತು, ಶ್ರೀಮತಿ ಜೊರ್ವುಂದ ಹಿಂಟಾಕ ದೊಡ್ಡಮನೆಯನ್ನು ಬಿಟ್ಟಿದ್ದಳು. ಮಿಡಲ್‌ಟನ್ ಅಬ್ಬೆ ಅವಳ ತಾತ್ಕಾಲಿಕ ತಂಗುದಾಣ. ಅಲ್ಲಿಂದ ಹೆದ್ದಾರಿಯಿಂದ ಸುಮಾರು ಹನ್ನೆರಡು ಮೈಲಿಗೆ, ಕಾಲುದಾರಿ ಕುದುರೆ-ದಾರಿಗಳಿಂದ ತುಸು ಕಡಿಮೆದೂರವಿತ್ತು, ಅದು.

ತನ್ನ ಗಂಡ ಅಸ್ವಸ್ಥನಾಗಿರುವದನ್ನು ಗ್ರೇಸಳು ಕಂಡುಕೊಂಡಿದ್ದು ಇದೇ ಮೊದಲು, — ಕೆಲವು ಕ್ಷಣ ಆತ ಅವಳಿಂದ ದೂರವಿರುವ ಒಲವನ್ನೆ ಕಾಣಿಸುವಂತಿತ್ತು. ಕೇವಲ ಪರಿಚಯದ ನೀತಿಬದ್ಧ ಸಭ್ಯತೆ ಶಿಷ್ಟತೆ ಅವನ ನಡುವಳಿಗಳಲ್ಲಿ ತೋರಿಕೊಂಡಿತು. ಆದಾಗ್ಯೂ ಊಟಕ್ಕೆ ಕೂತಾಗ ಅವಳ ಮಾತಿಗೆ ಆತ ಕಿವಿಗೊಡುವಂತೆಯೇ ಕಾಣು ತ್ತಿದ್ದಿಲ್ಲ. ಅವಳ ಚಿಕ್ಕ-ಪುಟ್ಟ ಕೃತಿಗಳು ಅವನ ಆಸಕ್ತಿ ಕೆರಳಿಸುತ್ತಿದ್ದಿಲ್ಲ. ಅವಳ ತಂದೆಯ ಕುರಿತಂತೂ ಅವನ ಠೀವಿ ದರ್ಪದ ಉದಾಸೀನತೆಯಿಂದ ದೂರ ವಿರಲಿಲ್ಲ. ಅವನ ಮನಸ್ಸು ಅವಳ ಬಾಳಿನಿಂದ ತೀರ ಹೊರಗಿತ್ತೆಂಬುದು ಸ್ಪಷ್ಟ ವಾಗಿತ್ತು. ಅದು ಹೊರಗೆ ಎಲ್ಲಿ ಎಂಬುದು ಅವಳು ಹೇಳಲಾರಳು — ವಿಜ್ಞಾನದ ಯಾವದೋ ಕ್ಷೇತ್ರದಲ್ಲಿ ಅಥವಾ ಮನೋವೈಜ್ಞಾನಿಕ ಸಾಹಿತ್ಯದಲ್ಲಿ ಎಲ್ಲಿಯೋ ಇರ ಬಹುದು. ಅವಳ ಮದುವೆಗೆ ಮುಂಚೆ ಅವನ ದೀಪವನ್ನು ಹಿಂಟಾಕ ಹಳ್ಳಿಯ ಒಂದು ಹೆಗ್ಗುರುತಾಗಿ ಮಾಡಿದ ರಾತ್ರೆಯ ವ್ಯಾಸಂಗದಲ್ಲಿ ಆತ ತಿರುಗಿ ತೊಡಗಿಕೊಳ್ಳುತ್ತಿದ್ದಾ ನೆಂದು ಅವಳು ಮಾಡಿಕೊಂಡ ಆಶೆಗೆ ಆಧಾರವೆಂದರೆ ಆತ ರಾತ್ರೆ ಬಹಳ ತಡವಾದರೂ ನಿದ್ದೆಹೋಗದೆ ಕುಳಿತಿದ್ದನೆಂಬ ಒಂದೇ ಕ್ಷೀಣವಾದ ಸಂಗತಿ.

ಒಂದು ದಿನ ಕಿರಿಯ ಹಿಂಟಾಕದಿಂದ ತುಸು ದೂರ ಹಾಯ್‌-ಸ್ಟಾಯ್ ದಿಬ್ಬದ ಮೇಲೆ ಒಂದು ದಣಪೆಗೆ ಆತ ಆನಿಸಿಕೊಂಡು ನಿಂತದ್ದು ಆಕೆ ಕಂಡಳು. ಆ ದಣಪೆ ದಾಟಿದರೆ ಕೆಳಗೆ ಒಂದು ಕಣಿವೆಯ ಅಂಚು. ಅದು ನೇರವಾಗಿ ವೈಟ್‌ಹಾರ್ಟ್ ಅಥವಾ ಬ್ಲಾಕ್‌ಮೂರ ಕೊಳ್ಳದತ್ತ ಇಳುಕಲಾಗಿತ್ತು — ಕಣ್ಣಕೆಳಗೆ, ಆ ಸ್ಥಳದಿಂದ, ಹಲವು ಮೈಲು ದೂರಕ್ಕೆ ಅದು ಬಿತ್ತರಿಸಿತ್ತು. ಅವನ ಕಣ್ಣು ಮೂಡಣ ನಿಟ್ಟಿನಲ್ಲಿ ದೂರದ ಭೂವಲಯದ ಮೇಲೆ ನಟ್ಟಿತ್ತು. ಗ್ರೇಸಳ ಬರುವಿಕೆ ತೀರಸದ್ದಿಲ್ಲದೆ ಆಯಿತು, ಆತ ಅವಳು ಬರುವುದನ್ನು ಕೇಳಲಿಲ್ಲ. ಅವಳು ಹತ್ತಿರಕ್ಕೆ ಬಂದಾಗ ಅವನ ತುಟಿಗಳು ತನ್ನ ಪರಿವೆ ಇಲ್ಲದೆ ಪಿಸುಗುಡುವುದನ್ನು ಕಂಡಳು—ಯಾವದೋ ಆವೇಶದ ಸ್ವಪ್ನ ದರ್ಶನದ ವಸ್ತುವಿನಲ್ಲಿ ತೊಡಗಿರುವಂತೆ.

ಆಕೆ ಮಾತಾಡಿದಳು. ಫಿಟ್ಜಪಿಯರ್ಸ ದಿಗಿಲುಬಿದ್ದ. 'ನೀನು ಅದೇನಂ ದಿಟ್ಟಿಸುತ್ತಿದ್ದಿ ?'

'ಓ, ನಾನು ನನ್ನ ತಾಯಿಯ ಪೂರ್ವಜರ ಹಳೆಯ ಸ್ಥಳ ಶರ್ಟನ್ ಅಬ್ಬಾಸನ್ನೇ ಚಿಂತಿಸುತಿದ್ದೆ.' ಏನೋ ಆಲಸಿಕೆಯಲ್ಲಿ ಆತ ನುಡಿದನು.

ಆತ ಅವನ ಪೂರ್ವಜರ ಅಭಿಮಾನದ ಆ ತೊಟ್ಟಿಲು ಹಾಗೂ ಗೋರಿಯಿಂದ ತುಸು ಬಲಕ್ಕೇ ನೋಡುತ್ತಿದ್ದಂತೆ ಕಂಡಿತ್ತು. ಆದರೆ ಆಕೆ ಮತ್ತೇನೂ ಟೀಕೆ ಟಿಪ್ಪಣಿ ಮಾಡಲಿಲ್ಲ. ಅವನ ತೋಳನ್ನು ಹಿಡಿದುಕೊಂಡು ಅವನ ಪಕ್ಕದಲ್ಲಿ ಮನೆಗೆ ನಡೆ ತಂದಳು — ಪೂರ್ತಿ ಮೌನದಲ್ಲಿ. ಮಿಡಲ್‌ಟನ್ ಅಬ್ಬೆ ಆ ದಿಕ್ಕಿನಲ್ಲಿದೆಯೆಂದು ಅವಳಿಗೆ ಗೊತ್ತಿದ್ದಿಲ್ಲ.

'ಈ ಸಂಜೆಗೆ ಡಾರ್ಲಿಂಗನ್ನು ಹೊರತೆಗೆಯಲಿರುವಿಯಾ?' ಆಕೆ ತುಸು ಹೊತ್ತಿನಲ್ಲಿ ಕೇಳಿದಳು.

ಡಾರ್ಲಿಂಗ, ವಯಸ್ಸಾದ ತಿಳಿ ನರೆಬಣ್ಣದ ಹೆಣ್ಣು ಕುದುರೆ, ವಿಂಟರಬೋರ್ನ ಗ್ರೇಸಳ ಬಗ್ಗೆಂದು ಕೊಂಡುಕೊಟ್ಟದ್ದು. ಅದನ್ನೆ ಫಿಟ್ಝಪಿಯರ್ಸ ನಿರಂತರ ಬಳಸುತ್ತಿದ್ದನು. ಪೂರ್ಣ ಸೌಮ್ಯತೆ ಮತ್ತು ಅಷ್ಟೇ ಪೂರ್ತಿ ಮಾನವೀಯ ಬುದ್ಧಿಮತ್ತೆ ಇವುಗಳ ಸಂಯೋಗದಿಂದಾಗಿ ಆ ಕುದುರೆ ಒಳ್ಳೆಯ ಅದ್ಭುತ ಆದಾಯವೆನಿಸಿತ್ತು, ಕೊಂಡು ತಂದುದಕ್ಕೆ. ಅಲ್ಲದೆ ಅದು ತೀರ ಎಳೆಯದೂ ಇದ್ದಿಲ್ಲ. ಫಿಟ್ಝಪಿಯರ್ಸನಿಗೆ ಕುದುರೆಗಳ ಸಲಿಗೆ ಪರಿಚಯು ಕಡಮೆ ಇತ್ತು. ಇವೆಲ್ಲ ಗುಣಗಳಿಗೆ ಆತ ಬೆಲೆಕೊಡುತ್ತಿದ್ದುದು ಡಾರ್ಲಿಂಗನಿಗೇ.

'ಹೌದು', ಆತ ಉತ್ತರವಿತ್ತ, 'ಆದರೆ ಗಾಡಿಗೆ ಕಟ್ಟಿ ಅಲ್ಲ. ಅದನ್ನು ನಾನು ಸವಾರಿ ಮಾಡುತ್ತೇನೆ. ಈಗ ನಾನು ಆದಷ್ಟು ಸವಾರಿ ಮಾಡುತ್ತೇನೆ. ಈಗ ನಾನು ಆದಷ್ಟು ಸಲ ಕುದುರೆ ಸವಾರಿಯ ಅಭ್ಯಾಸ ಮಾಡಿಕೊಳ್ಳಬೇಕು. ಏಕೆಂದರೆ ಕುದುರೆ ಏರಿಹೋದರೆ ನಾನು ಬಹಳಷ್ಟು ಹತ್ತಿರದ ಹಾದಿಗಳನ್ನು ಬಳಸಬಹುದು.

ಈ ಸವಾರಿಯ ಅಭ್ಯಾಸ ಆತ ಶ್ರೀಮತಿ ಚಾರ್ಮಂದ ಹೋದಂದಿನಿಂದ ಒಂದು ವಾರ ಮಾಡಿದ್ದನು. ಆ ತನಕ ಅವನ ಸರ್ವ ಸಾಮಾನ್ಯ ವಾಡಿಕೆ ಸಾರೋಟಿನಲ್ಲಿಯೇ ಸಂಚಾರ ಮಾಡುವದಿತ್ತು.

ಕೆಲವು ದಿನ ನಂತರ ಹಿಂದೆ ಹೇಳಿದ ಆ ಕೊಳ್ಳದಲ್ಲಿ ಒಬ್ಬ ರೋಗಿಯನ್ನು ಕಂಡು ಬರಲೆಂದು ಫಿಟ್ಝಪಿಯರ್ಸ ಆ ಕುದುರೆಯನ್ನೇರಿ ಹೊರಟನು. ಆಗ ಸಂಜೆ ಐದು ಘಂಟೆಯ ಸುಮಾರು. ರಾತ್ರೆ ಮಲಗುವ ಹೊತ್ತಿಗೂ ಆತ ಮನೆಗೆ ಮರಳಿದ್ದಿಲ್ಲ. ಇದರಲ್ಲಿ ಸೋಜಿಗವೇನೂ ಇದ್ದಿಲ್ಲ. ಆದರೆ ಅವನಿಗೆ ಆ ದಿಕ್ಕಿನಲ್ಲಿ ಐದು ಆರು ಮೈಲಿನಾಚೆಗೆ ಒಬ್ಬ ರೋಗಿ ಇರಬಹುದೆಂದು ಅವಳಿಗೆ ಅನಿಸಿದ್ದಿಲ್ಲ. ಫಿಟ್ಝಪಿಯರ್ಸ ಮನೆಯನ್ನು ಹೊಕ್ಕಾಗ ಒಂದು ಬಡಿದು ಹೋಗಿತ್ತು. ಆತ ತನ್ನ ಕೋಣೆಯಲ್ಲಿ ಹಗುರಾಗಿ ಹೆಜ್ಜೆ ಇಡುತ್ತ ಬಂದನು—ಅವಳಿಗೆ ತೊಂದರೆ ಕೊಡಬಾರದೆಂಬಂತೆ.

ಮರುದಿನ ಮುಂಜಾನೆ ಆಕೆ ಅವನಿಗಿಂತ ಬಹಳ ಮುಂಚಿತವಾಗಿ ಎದ್ದು ಚಟುವಟಿಕೆಗಳಲ್ಲಿ ತೊಡಗಿದ್ದಳು. ಹೊರಗೆ ಅಂಗಳದಲ್ಲಿ ಆ ಕುದುರೆಯ ಕುರಿತು ಮಾತುಕತೆ ನಡೆದಿತ್ತು. ಡಾರ್ಲಿಂಗನ್ನು ಒಳಗೊಂಡು ಎಲ್ಲ ಕುದುರೆಗಳ ನಿಗಾ ನೋಡಿಕೊಳ್ಳುವ ಆಳು ಆಗ್ರಹದಿಂದ ಅನ್ನುತ್ತಿದ್ದ — ಆ ಕುದುರೆ ದೆವ್ವ ಕಂಡಿರಬೇಕು.

ಏಕೆಂದರೆ ಆತ ಲಾಯಕ್ಕೆ ಬಂದಾಗ ಆ ಕುದುರೆ ಇದ್ದ ಅವಸ್ಥೆ, ಯಾವ ಪ್ರಾಮಾಣಿಕ ಸವಾರಿಯಿಂದಲೂ ಉಂಟಾದದ್ದಲ್ಲ. ಮನೆಗೆ ಬಂದ ಮೇಲೆ ಡಾಕ್ಟರರು ಸ್ವತಃ ಅದನ್ನು ಲಾಯದಲ್ಲಿ ಕಟ್ಟಿದ್ದರು, ನಿಜ. ಆದ್ದರಿಂದ ಆ ಕಾಸ್ತಾರ ಕಟ್ಟಿದರೆ ಮೇವು ಹಾಕಿ ಮೈತಿಕ್ಕಿ ನೋಡಿಕೊಳ್ಳುವಂತೆ ಅದರ ಆರೈಕೆ ಆಗಿದ್ದಿಲ್ಲ. ಆದರೆ ಈಗ ಕಂಡು ಬಂದ ಕುದುರೆಯ 'ಅವತಾರ' ಆ ಮೂಲಕವಿದ್ದಿಲ್ಲ, ಫಿಟ್ಜ್‌ಪಿಯರ್ಸ ಸವಾರಿ ಅವನು ಹೇಳಿದ ಸ್ಥಳಕ್ಕೆ ಮಾತ್ರ ಸಾಗಿದ್ದರೆ. ಡಾರ್ಲಿಂಗಳ ಎಂದಿಲ್ಲದ ದಣಿವು ಬಳಲಿಕೆ ಕುದುರೆಗಳನ್ನು ಕಾಡುವ ದೆವ್ವ ಭೂತ ಪಿಶಾಚಿ ಡಾಕಿಣಿಯರ ಇಡಿಯ ಕಥಾವಲಿಗಳನ್ನೆ ಬೆಳೆಯಿಸಲು ಸಾಕಾಗುವಷ್ಟು ಇತ್ತು. ಅವುಗಳ ಕಥನವು ಬಹಳ ಹೊತ್ತು ತೆಗೆದುಕೊಂಡಿತು.

ಗ್ರೇಸಳು ತಿರುಗಿ ಮನೆಯೊಳಗೆ ಬಂದಳು. ಹೊರಬಾಗಿಲಿನೊಳಗಿಂದ ಹಾಯುವಾಗ ಅವಳು ತನ್ನ ಗಂಡನ ಓವರ್‌ಕೋಟನ್ನು ಎತ್ತಿದಳು. ಆತ ಅದನ್ನು ಕಾಳಜಿ ಇಲ್ಲದೆ ಒಂದು ಕುರ್ಚಿಯ ಮೇಲೆ ಒಗೆದಿದ್ದನು. ಒಂದು ಸುಂಕದ ಕಟ್ಟೆಯ ತಿಕೀಟು ಅದರ ಎಡಗಿಸೆಯೊಳಗಿಂದ ಕೆಳಗೆ ಬಿದ್ದಿತು. ಅದು ಮಿಡಲ್‌ಟನ್ ಗೇಟಿನಲ್ಲಿ ಕೊಟ್ಟದ್ದು ಎಂದು ಗೊತ್ತಾಯಿತು. ಅಂದರೆ ಆತ ರಾತ್ರೆ ಮಿಡಲ್‌ಟನ್ನಿಗೆ ಭೆಟ್ಟಿ ಕೊಟ್ಟಿರಬೇಕು — ಅಲ್ಲಿಗೆ ಕುದುರೆಯೇರಿ ಹೋಗಿ ಬರಲು ಇಪ್ಪತ್ತುನಾಲ್ಕು ಮೈಲು ಅಂತರ.

ಆ ದಿನ ಅವಳು ಕೆಲವು ಚೌಕಾಶಿ ಮಾಡಿದಳು. ಮತ್ತು ಪ್ರಥಮತಃ ಕೇಳಿಕೊಂಡಳು : ಶ್ರೀಮತಿ ಚಾರ್ಮಂದ ಮಿಡಲ್‌ಟನ್ ಅಬ್ಬೆಯಲ್ಲಿ ಇರುವಳೆಂಬುದು. ಇದರಿಂದ ಒಂದು ಅನುಮಾನಕ್ಕೆ ಬರದೆ ಇರಲು ಅವಳಿಂದ ಆಗಲಿಲ್ಲ — ಆ ಅನುಮಾನವು ಎಷ್ಟೇ ವಿಚಿತ್ರವೆನಿಸಿದ್ದಾಗ್ಯೂ.

ಕೆಲವು ದಿನ ನಂತರ ಅವನು ಮತ್ತೆ ಹೊರಡಲು ಸಿದ್ಧನಾದನು, ಅದೇ ಹೊತ್ತಿಗೆ ಅದೇ ನಿಟ್ಟಿನಲ್ಲಿ. ಅವಳಿಗೆ ಗೊತ್ತು — ಆ ದಾರಿಯಲ್ಲಿ ಇರುವ ಬಡ ಗುಡಿಸಲುಗಾರ 'ಕುಳ'ದ ಪರಿಸ್ಥಿತಿ ಬರೆ ಸೋಗಾಗಿತ್ತು. (ನೆವವಾಗಿತ್ತು.) ಅವಳಿಗೆ ಮನದಟ್ಟು, ಆತ ಶ್ರೀಮತಿ ಚಾರ್ಮಂದಳ ಬಳಿಗೇ ಹೋಗುವನೆಂದು.

ಈ ಸಂದೇಹ ತನ್ನಲ್ಲಿ ಹುಟ್ಟಿಸಿದ ಸಂತಾಪವು ಇಷ್ಟು ಮಂದವೆಂಬುದಕ್ಕೆ ಗ್ರೇಸಳಿಗೆ ಆಶ್ಚರ್ಯ ಅವಳಿಗೆ ಸ್ವಲ್ಪವೆ ಉದ್ರೇಕವಾಯಿತು. ಅವಳ ಅಸೂಯೆಯೂ ಸಾಯಲು ಬಿದ್ದಷ್ಟು ಜಡವಿತ್ತು. ಅದು ಅವನಲ್ಲಿ ಅವಳಿಗಿರುವ ಪ್ರೀತಿಯ ಸ್ವರೂಪದ ಕುರಿತು ಏನೆಲ್ಲ ಕಥೆ ಹೇಳುವಂತೆ ಇತ್ತು. ನಿಜವಾಗಿಯೂ ವಿವಾಹೋತ್ತರ ಫಿಟ್ಜ್‌ಪಿಯರ್ಸನ ಬಗೆಗೆ ಅವಳ ಆದರವು, ಪ್ರಿಯಂಕರನ ಬಗೆಗೆ ಕೋಮಲ ಭಾವನೆಯು ಆತ್ಮೀಯ ಶುಶ್ರೂಷೆಗಿಂತ ಹೆಚ್ಚಾಗಿ ತನಗಿಂತ ಶ್ರೇಷ್ಠವೆನಿಸುವ ವ್ಯಕ್ತಿಯ ಬಗೆಗೆ ಪೂಜ್ಯಭಾವದ ಗುಣವನ್ನೆ ಪಡೆದಂತೆ ಇತ್ತು. ಅದು ರಹಸ್ಯ ಮತ್ತು ವೈಚಿತ್ರಗಳ ಮೇಲೆ ನೆಲೆಸಿತ್ತು — ಅವನ ಗತಜೀವನ, ಜ್ಞಾನ, ವ್ಯಾವಸಾಯಿಕ ನೈಪುಣ್ಯ ಮತ್ತು ನಂಬಿಕೆಗಳ ಬಗೆಗೆ ಆ

ರಹಸ್ಯಮಯತೆ. ಆದರ್ಶಗಳ ಈ ಕಟ್ಟಡವು ಅನ್ಯೋನ್ಯ ಜೀವನದ ಸಲಿಗೆಯಿಂದ ಮುರಿದು ಬಿದ್ದಾಗ ಆತ ಹಿಂಟಾಕ್ ಹಳ್ಳಿಯ ಜನರಷ್ಟೇ ಮಾನವತೆಯುವನೆಂದು ಆಕೆ ಕಂಡುಕೊಂಡಳು. ಹೆಚ್ಚು ಭದ್ರವಾದ ಶಾಶ್ವತವಾದ ಪ್ರೀತಿಗಾಗಿ ಇನ್ನೊಂದು ನೆಲೆ (ತಳಹದಿ) ಅಗತ್ಯವೆನಿಸಿತು, ಸಹಾನುಭೂತಿ ಪೂರ್ಣವಾದ ಪರಸ್ಪರಾವಲಂಬನ, ಅನ್ಯೋನ್ಯರ ದೌರ್ಬಲ್ಯಗಳನ್ನು ಒಬ್ಬರ ಸಂರಕ್ಷಣಕ್ಕೂ ಒಡಂಬಟ್ಟು ಮೈತ್ರಿಗೆ ನೆಲೆಮಾಡಿ ಕೊಳ್ಳುವಂತೆ. ಫಿಟ್ಜ್‌ಪಿಯರ್ಸ್ ಅಂಥ ಏಕೀಭಾವದ ವಿಶ್ವಾಸವನ್ನು ಏನೂ ಒದಗಿಸಿದ್ದಿಲ್ಲ. ಅಂಥ ವಿಶ್ವಾಸ ಮತ್ತು ಸತ್ಯಗಳೊಳಗಿಂದಲೆ ಈ ಎರಡನೆಯ ಬಗೆಯ ಒಕ್ಕಟ್ಟು ಉದ್ಭವಿಸಬೇಕಾಗಿತ್ತು. ಆದ್ದರಿಂದ ಈ ಸಲ ಕುದುರೆ ಹೊರಗೆ ತಂದಾಗ ಆಕೆ ಭಾವನೆಗಳನ್ನು ಹಿಡಿತದಲ್ಲಿ ಇಟ್ಟುಕೊಂಡೆ ಅದನ್ನು ನಿರೀಕ್ಷಿಸಿದಳು.

'ನಿನಗೆ ಅಷ್ಟೇನು ಅವಸರವಿಲ್ಲದಿದ್ದರೆ, ನಾನು ಗುಡ್ಡದವರೆಗೂ ನಿನ್ನ ಜತೆ ನಡೆಯುತ್ತೇನೆ' ಆಕೆ ಅಂದಳು. ಏನೇ ಆದರೂ ಅವನನ್ನು ಹೋಗಬಿಡಲು ಅವಳ ಮನಸ್ಸು ಒಲ್ಲದು.

'ಸರಿ. ಬಾ. ತುಂಬ ವೇಳೆ ಇದೆ.' ಗಂಡನು ಉತ್ತರವಿತ್ತನು.

ಆ ಮೇರೆಗೆ ಆತ ಕುದುರೆಯನ್ನು ಕಡಿವಾಣ ಹಿಡಿದು ಮುಂದೆ ಒಯ್ದನು. ಒಳ ಒಳಗೆ ತಾಳ್ಮೆಗೆಡುತ್ತಿದ್ದರೂ ಅವಳ ಸಂಗಡ ನಡೆಯ ಹತ್ತಿದನು. ಹೀಗೆ ಅವರು ಸುಂಕದ ಗೇಟು ಇರುವ ರಸ್ತೆಯ ತನಕ ಮುಂದರಿದರು, ಮತ್ತು ಹಾಯ್‌ಸ್ಟಾಯ — ಡಾಗಬರಿಹಿಲ್ಲಗಳ ಬುಡದನಕ ಏರಿ ಹೋಗಿ ಹತ್ತು ದಿನ ಹಿಂದೆ ಆಕೆ ಅವನನ್ನು ಕಂಡು ಚಕಿತಗೊಳಿಸಿದ್ದಾಗ ಆತ ಆನಿಸಿ ನಿಂತ ಆ ಗೇಟಿನ ತಳಕ್ಕೆ ಅವರು ಬಂದರು. ಅವಳ ಸಂಚಾರಕ್ಕೆ ಇದೇ ಕೊನೆಯಾಗಿತ್ತು. ಫಿಟ್ಜ್‌ಪಿಯರ್ಸ್ ಮಮತೆಯಿಂದಲೆ ಅವಳಿಗೆ ಬೀಳ್ಕೊಂಡನು. ಆ ಮಮತೆಯಲ್ಲಿ ಕೋಮಲ ಮಾರ್ದವವೂ ಇತ್ತು. ಅವನ ಕಣ್ಣು ದಣುವುಗೊಂಡಂತೆ ಆಕೆಗೆ ಕಂಡವು.

'ನೀನೇಕೆ ಈ ರಾತ್ರೆಗೆ ಹೋಗುವಿ?' ಆಕೆ ಅಂದಳು. 'ಈಗಾಗಲೆ ಎರಡು ರಾತ್ರಿ ಕರೆ ಬಂದು ನೀನು ಹೋಗಿರುವಿ.'

'ನಾನು ಹೋಗಲೇಬೇಕು.' ಆತ ಮಬ್ಬಿನಲ್ಲಿಯೇ ಉತ್ತರವಿತ್ತನು, 'ನನಗಾಗಿ ಕಾದು ಕುಳಿತುಕೊಳ್ಳಬೇಡ.' ಈ ಮಾತಿನೊಂದಿಗೆ ಆತ ಕುದುರೆಯೇರಿ ಆ ಗೇಟಿನಿಂದ ಅಡ್ಡ ಕವಲೊಡೆದ ಒಂದು ರಸ್ತೆಯಲ್ಲಿ ಹೊರಳಿ ಇಳುಕಲಲ್ಲಿ ಕೊಳ್ಳಕ್ಕೆ ಇಳಿದನು, ಕುದುರೆಯ ಪುಟಗಾಲು ನಡಿಗೆಯಲ್ಲಿ.

ಅವಳು ಹಾಯ್‌ಸ್ಟಾಯ್‌ದ ಏರನ್ನೇರಿ ಅವನ ಇಳಿಯುವಿಕೆಯನ್ನು, ಮುಂದೆ ಅವನ ಪಯಣವನ್ನು ನಿರೀಕ್ಷಿಸಿದಳು. ಅವನ ದಾರಿ ಮೂಡಣಕ್ಕೆ ಇತ್ತು. ಗುಡ್ಡದ ನೆಳಲಿನಿಂದ ಹೊರಬಿದ್ದೊಡನೆ ಅವನ ಮೇಲೆ, ಸಂಜೆಯ ಬಿಸಿಲು ಅವಳ ಬೆನ್ನುಗಡೆಯಿಂದ ಪೂರ್ತಿ ಚೆಲ್ಲುತ್ತಿತ್ತು. ಈ ಅನಿಷ್ಟ ಘಟನೆ ಏನೇ ಆದರೂ ಆತ ತನ್ನೊಡನೆ ಪ್ರಾಮಾಣಿಕವಾಗಿ ಉಳಿದರೆ ತಾನೂ ಅವನಿಗೆ ನಿಷ್ಠಾವತಿಯಾಗಿ ಉಳಿಯಲು

ನಿರ್ಧರಿಸಿದಳು. ಮತ್ತು, ತನ್ನಿಂದಾದಷ್ಟು ಉತ್ತಮವಾಗಿ ಪ್ರೀತಿಸಬೇಕೆಂಬ ದೃಢ ನಿರ್ಧಾರವು, ಈ ಉತ್ತಮ ಪ್ರೀತಿಯನ್ನು ಎಂದೆಂದೂ, ಇನ್ನೂ ಹೆಚ್ಚು ಪ್ರವರ್ಧಮಾನಗೊಳಿಸುವಂತೆ ಹೃದಯವನ್ನು ಶಕ್ಯವಿದ್ದಷ್ಟು ಮುಂದೆ ಒಯ್ಯುವದು.

ಕುದುರೆಯು ಸುಟಿಯಾದ ಆದರೆ ಕಳೆಗುಂದಿ ಬಿಳುಪೇರಿದ ಮೈಯು ಅದನ್ನೂ ಅದರ ಸವಾರಿ ಮಾಡಿದವನನ್ನೂ ಕಣ್ಣಿಗೆ ಸುಲಭವಾದ ವಸ್ತುವಾಗಿ ಮಾಡಿತ್ತು. ವಿಂಟರಬೋರ್ನ ಡಾರ್ಲಿಂಗ ಕುದುರೆಯನ್ನು ಗ್ರೇಸಳಿಗಾಗಿ ಅಷ್ಟೊಂದು ಕಷ್ಟಪಟ್ಟು ಆರಿಸಿಕೊಟ್ಟಿದ್ದರೂ, ಆಕೆ ಆದನ್ನು ಎಂದೂ ಸವಾರಿ ಮಾಡಿದ್ದಿಲ್ಲ; ಆದರೆ ಅವಳ ಗಂಡನಿಗೆ ಆ ಪ್ರಾಣಿ ಅತ್ಯಂತ ಅನುಕೂಲವೆನಿಸಿತು — ಈಗಂತೂ ಆತ ವಿಶೇಷವಾಗಿ ಸವಾರಿ ಮಾಡುವುದನ್ನೆ ಆರಂಭಿಸಿದ್ದರಿಂದ. ಡಾರ್ಲಿಂಗದಲ್ಲಿಯೂ ಮಧ್ಯಮ ದೂರದ ಪಯಣಗಳಿಗೆ ಸಾಕಷ್ಟು ಸಾಮರ್ಥ್ಯ ವಿಪುಲವಾಗಿ ಇತ್ತು. ಫಿಟ್ಝಪಿಯರ್ಸನು ಅವನ ಸ್ವಭಾವದ ಇನ್ನಿತರರಂತೆ, ಮೆಲಬರಿಯನ್ನು ಅವನ ಅಂತಸ್ತನ್ನು ಮನಸಾ ತಿರಸ್ಕರಿಸುತ್ತಿದ್ದರೂ, ಅವನ ಹಣವನ್ನು ಮನಸ್ವಿಯಾಗಿ ವೆಚ್ಚ ಮಾಡಲು, ಅವನ ಮಗಳ ಕುದುರೆಯನ್ನು ತನ್ನ ಉಪಯೋಗಕ್ಕೆ ಉಳಿಸಿಕೊಳ್ಳಲು ಏನೂ ಹಿಂದೆ ಮುಂದೆ ನೋಡುತ್ತಿದ್ದಿಲ್ಲ.

ಆದ್ದರಿಂದ ಆ ಬಣ್ಣದ ಬೆಡಗಿನ ಶರತ್ — ಸಂಜೆಯ ನೆಲವಲಯದೊಳಗಿಂದ, ಸೇಬಿನ ಬೆಳೆಯ ಕವಳಿಕಂಟಿಯ ಹಸಿರು ತೊಪ್ಪಲಿನ ಕೆಂಪು ನೀಲಿಪ್ರಭೆಯಿಂದ ಉಜ್ವಲಗೊಂಡ ಹಣ್ಣುದೋಟಗಳಿಂದ, ಸುತ್ತುವರಿಯಲ್ಪಟ್ಟ ವ್ಹಾಯಿಟ ಹಾರ್ಟ ಕೊಳ್ಳದೊಳಗಿಂದ, ಅದೆಲ್ಲವನ್ನು ಅಸ್ತಮಿಸುವ ಸೂರ್ಯನ ಕಾಂತಿ ಒಪ್ಪೆ ಹಾಕಿ ಇನ್ನೂ ದೀಪ್ತಿಗೊಳಿಸುತಿರುವಾಗ, ಆ ಮೋಹ - ಮರುಳ ಸರ್ಜನ್ನನು ಆ ಅಡ್ಡ ಹಾದಿಗುಂಟ ಸಾಗಿದನು.

ಈ ವರ್ಷ ಭೂಮಿಯು ವಿಪುಲ ಬೆಳೆ-ಪೈರಿನ ದುರದುಕಾಣಿಸಿತ್ತು. ಇದೀಗ ಅವಳ ಆ ವೈಪುಲ್ಯ ಸಮೃದ್ಧಿಯ ಶ್ರೇಷ್ಠ ಕ್ಷಣವಾಗಿತು. ಹ್ಹಾ ಮತ್ತು ಬ್ಲಾಕ್‌ಬೆರಿಗಳ ಭಾರದಿಂದ ಬೇಲಿಗಳು ತೀರ ಬಲಭಾಗಗಳಲ್ಲಿ ಬಗ್ಗಿದ್ದವು; ಕಾಲಡಿಗೆ. ಓಕಮರದ ಕಾಯಿಗಳು ಒಡೆಯುತಿದ್ದವು. ಚೆಸ್ಟನಟ್‌ಗೋಟುಗಳ ಒಡೆದ ಓಡುಗಳ ಒಳಗಿನ ಹೊನ್ನಗಂದಿಬಣ್ಣದ ಬೀಜ ಕಾಣಿಸುತಿದ್ದವು — ಹಣ್ಣಿನ ಪೇಟೆಯಲ್ಲಿ ಮಾರಾಟಗಾರನೊಬ್ಬ ಅಸ್ಥೆಯಿಂದ ರಚಿಸಿ ಇಟ್ಟಂತೆ.

ಇದೆಲ್ಲ ಬಿಂಕದ ಬೆಡಗಿನ ಪ್ರದರ್ಶನದಲ್ಲಿ ಹಲಕೆಲವು ಕಾಯಿಗಳ ಒಳಗೊಬ್ಬರಿಗಳು ಚೆನ್ನಾಗಿದ್ದಿಲ್ಲ — ಗ್ರೇಸಳದೇ ಪರಿಸ್ಥಿತಿಯಂತೆ. ಅದರಿಂದ ಗ್ರೇಸಳಿಗೆ ಸೋಜಿಗ — ದಿಗ್ಭ್ರಮೆ — ಹುಳವಿಲ್ಲದ ಹಣ್ಣು, ದುಃಖವಿಲ್ಲದ ದಾಂಪತ್ಯವಿರುವಂಥ ಒಂದು ಲೋಕ ಈ ವಿಶ್ವದಲ್ಲಿ ಎಲ್ಲಿಯಾದರೂ ಇರಬಹುದೆ?

ಅವಳ 'ಸವಾರ' ಹಾಗೆಯೇ ಮುಂದರಿದ. ಭಾರದ ಹೆಜ್ಜೆ ಇಡುತ್ತ ಸಾಗಿದ ಅವನ ಕುದುರೆಯಿಂದಾಗಿ ಆತ ಇನ್ನೂ ಕಣ್ಣಿಗೆ ಬೀಳುತ್ತಿದ್ದನು. ಆ ಕ್ಷಣಕ್ಕೆ

ಫಿಟ್ಝ್‌ಪಿಯರ್ಸ್‌ನ ದನಿಯನ್ನು ಆಕೆ ಕೇಳುವಂತಿದ್ದರೆ, ಆತ ಗುಣುಗುಡುತ್ತಿದ್ದನು, ವರಕವಿ ಶೆಲ್ಲಿಯ ಈ ಪಂಕ್ತಿಗಳನ್ನು —

"ನನ್ನೊಂದು ಬಯಕೆಯ ಧ್ರುವತಾರೆಯೆಡೆಗೆ
ಹಗುರಾಗಿ ಹಾರಿದೆನು, ಉನ್ಮತ್ತ ಭೃಂಗಿ
ಗೂಗೆ ಮಬ್ಬಿನ ಬೆಳಕಿನಲ್ಲಿ ಒಣ ತರಗೆ
ಹಾರುವಂದದಿ ಇತ್ತು ಆ ನನ್ನ ನಡೆಭಂಗಿ"

ಆದರೆ ಗ್ರೇಸಳಿಗೆ ಆತ ಮೂಕ ಚಿತ್ರ. ಶೀಘ್ರ ಆತ ಕೊಳ್ಳದೊಳಗಿಂದ ಹೊರ ಗೇರಿ ಬಂದನು. ಬಲಬದಿಯ ಎತ್ತರದ ಸುಣ್ಣದ ತಪ್ಪಲು ಗುಡ್ಡವನ್ನು ಆತ ಸುತ್ತು ಹಾಕಿ ಸಾಗಿದನು. ಕೆಳಗಿನ ಆಳವಾದ ಹುಡಿಮಣ್ಣಿನ ಆ ಹಣ್ಣು ಹೊಲಗಳ ಪ್ರಾಂತದ ಮೇಲೆ ಆಗ ತಪ್ಪಲು ತಂಗಿದಂತೆ ಇತ್ತು. ಅವೆರಡೂ ರಚನೆಗಳ ಸ್ವರೂಪ ಮತ್ತು ಸಸ್ಯರಾಶಿ ತೀರ ಸ್ಪಷ್ಟವಾಗಿ ಬೇರೆಯಾಗಿತ್ತು. ಆ ಖಡುಗುಡ್ಡಗಳ ಮೇಲಸ್ಥಳವು ಸಮತಳ ಕೊಳ್ಳದಲ್ಲಿ ಕೆಲವು ವರ್ಷ ಹಿಂದೆ ಹೇರಿ ಇಟ್ಟಂತೆ ಕಾಣುತ್ತಿತ್ತು.

ಫಿಟ್ಝ್‌ಪಿಯರ್ಸ್ ಈ ಎತ್ತರವಾದ ಯಾವ ಹೊರ ರಕ್ಷಣೆಯು ಆವಾರಕ್ಕೂ ಒಳ ಪಡದ ಪ್ರದೇಶದ ಅಂಚಿನಲ್ಲಿಯೇ ನಡೆದನು. ಅವನ ಬೆನ್ನಿಗೆ ಆಕಾಶವು ಆಳವಾದ ಪಾಟಲ ಬಣ್ಣವನ್ನು ಹೊಂದಿತು. ಅದರ ಬೆನ್ನಿಗೆ ಬಿಳಿಯ ಡಾರ್ಲಿಂಗ ಇನ್ನೂ ಒಡೆದೆದ್ದು ಕಾಣುತ್ತಿತ್ತು ಗ್ರೇಸಳಿಗೆ — ಪಶುಚಿತ್ರಕಾರ ವೊವರಮನ್‌ನ ಒಂದು ಕೃತಿಯನ್ನು ಪರಮಾಣು ಪ್ರಮಾಣಕ್ಕೆ ಇಳಿಸಿದಂತೆ. ಆ ಎತ್ತರದ ಭೂಮಿಯಲ್ಲಿ ಆತ ಕ್ರಮೇಣ ಕಣ್ಮರೆಯಾದನು.

ತನಗಾಗಿ, ಪರಿಶುದ್ಧ ಪ್ರೀತಿಯಲ್ಲಿ ಅವಳಿಗೆ ಅತ್ಯಂತ ನಿಷ್ಠನಾದ ಒಬ್ಬನು ಕೊಂಡುಕೊಂಡ ಈ ಮುದ್ದು ಪ್ರಾಣಿಯು ತನ್ನ ಗಂಡನನ್ನು ತನ್ನಿಂದ ದೂರ ಹೊಸ ತಾಗಿ ಸಿಕ್ಕ ಗೊಂಬೆಯ ಪಕ್ಕಕ್ಕೆ ಒಯ್ಯುವದನ್ನು ಆಕೆ ನೋಡಿದಳು. ಹೀಗೆ ಕುದುರೆಗಳ ಹಾಗೂ ಹೆಂಡಂದಿರ ಬಾಳಿನ ಬದಲಾವಣೆಗಳ ಬಗೆಗೆ ಚಿಂತಿಸುತ್ತಿರುವಾಗ, ಕೆಲವು ಆಕೃತಿ ಗಳನ್ನು ಆಕೆ ಕಂಡಳು. ಅವು ಆತನಕ ಬೇಲಿಗಳಿಂದ ಮರೆಯಾಗಿದ್ದವು. ನಿಜ ವಾಗಿಯೂ ಅವು ಜೈಲ್ಸ ವಿಂಟರಬೋರ್ನ್ ಮತ್ತು ರಾಬರ್ಟ್ ಕ್ರೀಡ್ಸ ಅಟ್ಟಿಕೊಂಡು ಬರುತ್ತಿದ್ದ ಎರಡು ಕುದುರೆಗಳೂ ಮತ್ತು ಸಿಡರ ಮದ್ಯ ತಯಾರಿಕೆಯ ಯಂತ್ರೋಪ ಕರಣಗಳೂ ಆಗಿದ್ದವು.

ಮೇಲೆ ಮೇಲಕ್ಕೆ ಅವರು ಸರಿದು ಬಂದರು. ಅಲ್ಲಲ್ಲಿ ನಕ್ಷತ್ರದಂತೆ ಸೂರ್ಯನ ಒಂದು ಕಿರಣ ಮತ್ತೆ ಮತ್ತೆ ಸೇಬಿನ ಹಿಂಡಿಯನ್ನು ಎತ್ತಿ ಹಾಕುವ ಕುಠಾರಿಗಳ ಅಲಗಿನ ಮೇಲೆ ಬೀಳುತ್ತಿತ್ತು. ಅವು ಹುಳಿಯ ಕ್ರಿಯೆಯಿಂದಾಗಿ ಉಕ್ಕಿನ ಕನ್ನಡಿಗಳ ರೂಪ ತಾಳಿದ್ದವು.

ಆತನು ರಸ್ತೆಗೆ ಹತ್ತಿರ ಬರುವಷ್ಟರಲ್ಲಿ ಆಕೆ ದಿಬ್ಬದಿಂದ ಇಳಿದು ಬಂದಳು. ಏಗುವ ಕುದುರೆಗಳೂ ಏರಿಯನ್ನು ಮುಗಿಸಿ ಒಂದು ತುಸು ವಿರಾಮ ಪಡೆದವು.

‘ ಹೇಗೆ ನಡೆದಿದೆ ಜೈಲ್ಸ ? ’ ಆಕೆ ಕೇಳಿದಳು. ಒಮ್ಮೆಲೆ ಅವನೊಂದಿಗೆ ಸಲಿಗೆಯಿಂದ ನಡೆಯ ಬೇಕೆಂದು ಅವಳಿಗೆ ಅನಿಸಿತು.

ಆತ ಇನ್ನೂ ಹೆಚ್ಚಿನ ಗಾಂಭೀರ್ಯದಿಂದಲೆ ಉತ್ತರವಿತ್ತನು, ‘ ತಿರುಗಾಡಲು ಹೊರಟಿರಾ, ಮಿಸೆಸ್ ಫಿಟ್ಜಪಿಯರ್ಸ ? ಈಗ ತುಂಬ ಸೊಗಸ್ಸಾಗಿದೆ.’

‘ ಇಲ್ಲ, ನಾನು ತಿರುಗಿ ಹೋಗುತ್ತಿದ್ದೇನೆ ’ ಆಕೆ ಅಂದಳು.

ಕುದುರೆ, ಸಿಡರಗಾಣದ ವಾಹನವೆಲ್ಲ ಮುಂದೆ ಸಾಗಿದವು ಕ್ರೀಡ್ಸನಿನೊಂದಿಗೆ. ವಿಂಟರಬೋರ್ನ ಅವಳ ಬದಿಯಲ್ಲಿ ನಡೆಯಹತ್ತಿದನು, ಹಿಂದಿನಿಂದ.

ಆತ ಕೇವಲ ಶರದೃತುವಿನ ಸೋದರನಂತೆ ತೋರುತ್ತಿದ್ದನು, ಸಾರುತ್ತಿದ್ದನು. ಅವನ ಮೋರೆ ಬಿಸಿಲು ಕಾಯ್ದು ಗೋದಿಯ ಬಣ್ಣ ತಾಳಿತ್ತು. ಅವನ ಕಣ್ಣು ಧಾನ್ಯದ ಹೂವಿನಂತೆ ನೀಲವಾಗಿದ್ದವು. ಅವನ ಅಂಗಿಯ ತೋಳೂ ಕಾಲ ಸುತ್ತಿದ ತೊಗಲ ಪಟ್ಟಿಗಳೂ ಸೇಬಿನ ರಸದಿಂದ ಕಲೆಗೊಂಡಿದ್ದವು. ಕೈಗಳು ಆ ರಸದಿಂದ ಸವಿಯಿಂದ ಅಂಟುಅಂಟಾಗಿದ್ದವು. ಅವನ ಹ್ಯಾಟಿನಲ್ಲಿ ಸೇಬಿನ ಬೀಜಗಳನ್ನು ಸಿಂಪಡಿಸಿದಂತೆ ಇತ್ತು. ಅವನ ಸುತ್ತಲೆಲ್ಲ ಪ್ರತಿಯೊಂದು ಎಡೆಗೂ ಸೇಬಿನ ಮದ್ಯದ ವಾತಾವರಣ ಸೂಸುತ್ತಿತ್ತು — ಅಂಥ ಪ್ರತಿ ಹಂಗಾಮಿಂಗೆ, ಅಂಥ ಹಣ್ಣಿದೋಟಗಳ ನಡುವೆ ಹುಟ್ಟಿ ಬೆಳೆದ ಮಂದಿಗೆ ಒಂದು ಅವರ್ಣನೀಯವಾದ ಮೋಹಾಕರ್ಷಣೆ ಅಂಥ ವಾತಾವರಣದ ಬಗೆಗೆ ಇರುವದುಂಟು.

ಗ್ರೇಸಳ ಹೃದಯವು ಅದೇ ತಾನೇ ಕಳೆದ ಖಿನ್ನತೆಯಿಂದ ನೆಗೆದೆದ್ದಿತು — ಬಿಡುಗಡೆಯಾದ ಟೊಂಗೆಯಂತೆ ; ಅನಲಂಕೃತ ಪ್ರಕೃತಿಗೆ ಒಮ್ಮೆಲೆ ಮರಗಳಚಿದಂತಾಗಿ ಅವಳ ಸಂವೇದನೆಗಳೆಲ್ಲ ಹಿರಿಹಿಗ್ಗಿದವು. ಗಂಡನ ವ್ಯವಸಾಯದ ನಿಮಿತ್ತವಾಗಿ ಶಿಷ್ಟತೆಯ ಶೈಲಿಯನ್ನು ಸ್ವೀಕರಿಸಬೇಕೆಂಬ ಪ್ರಜ್ಞೆ, ಫ್ರಾನ್ಸಿನಲ್ಲಿಯ ಹೊಸ ಬೆಡಗು ಬಿನ್ನಾಣಗಳನ್ನು ಕಲಿಸುವ ಶಾಲೆಗಳಲ್ಲಿ ಆಕೆ ಗಳಿಸಿದ ಕೃತ್ರಿಮತೆಯ ಹೊರಲೇಪ, ಇವೆರಡೂ ಕಳಚಿ ಒಗೆಯಲ್ಪಟ್ಟು ಅವಳು ತನ್ನ ಆರಂಭಕಾಲದ ಸುಪ್ತ ಪ್ರವೃತ್ತಿಗಳ ಒರಟು ಹಳ್ಳಿಯ ಹುಡುಗೆಯಾಗಿದ್ದಳು.

ಪ್ರಕೃತಿಯು ವೈಪುಲ್ಯಶಾಲಿ, ಸಮೃದ್ಧ ಎಂದು ಆಕೆಗೆ ಅನಿಸಿತು. ಎಡ್ರೆಡ್ ಫಿಟ್ಜಪಿಯರ್ಸನು ತನ್ನನ್ನು ಬದಿಗೊಗೆದದ್ದೇ ತಡ, ಇನ್ನೊಬ್ಬ ವ್ಯಕ್ತಿ, ದಾಕ್ಷಿಣ್ಯ ಮತ್ತು ಕಲಬೆರಕೆ ಅಲ್ಲದ ಪೌರುಷಗಳನ್ನೇ ಸಾಕಾರಗೊಳಿಸಿದಂತೆ, ಅವಳ ಕೈಗೆ ನೆಲದಿಂದಲೆ ಎದ್ದು ಬಂದನು. ಆದರೆ ಇದೊಂದು ಕಲ್ಪನೆಯ ಸ್ವೈರ ಸಂಚಾರ. ಅದನ್ನು ಉತ್ತೇಜಿಸಲು ಆಕೆ ಬಿಡಲಿಲ್ಲ. ತನ್ನ ವಿಚಾರಗಳನ್ನು ಹಿಂಬಾಲಿಸಿ ಗೊಂದಲದ ಆದರ ಭಾವವನ್ನು ಮರೆಯಿಸಲು ಆಕೆ ಫಕ್ಕನೆ ಅಂದಳು — ‘ ನನ್ನ ಯಜಮಾನರನ್ನು ಭೆಟ್ಟಿಯಾಗಿದ್ದಿಯಾ ? ’

ವಿಂಟರಬೋರ್ನ ತುಸು ಅನುಮಾನದಿಂದಲೇ ಅಂದನು, ‘ ಹೌದು.’

‘ ಎಲ್ಲಿ ಭೆಟ್ಟಿಯಾದಿ ? ’

'ರೆವೆಲ್ಲರ ಖಾನಾವಳಿಯ ಬಳಿಗೆ. ನಾನು ಮಿಡಲ್‌ಟನ್ ಅಬ್ಬೆಯಿಂದ ಬಂದೆ. ಕಳೆದ ಒಂದು ವಾರದಿಂದ ನಾನು ಅಲ್ಲಿಯೆ ಸಿಡರ ಮಾಡುತ್ತಿದ್ದೆ.'

'ಅವರದೇ ಸ್ವಂತ ಗಾಣ ಒಂದು ಇಲ್ಲವೇ ?'

'ಆದರೆ ಅದು ನಾದುರಸ್ತಿ ಇದೆ.'

'ಶ್ರೀಮತಿ ಚಾರ್ಮಂದ ಅಲ್ಲಿ ಉಳಿಯಲು ಹೋಗಿರುವಳೆಂದು ಕೇಳಿದಂತೆ ಅನಿಸುತ್ತದೆ.'

'ಹೌದು. ನಾನು ಅವಳನ್ನು ಒಂದೆರಡು ಸಲ ಕಿಟಕಿಯಲ್ಲಿ ಕಂಡಿದ್ದೆ.'

ಮಾತು ಮುಂದರಿಸುವ ಮುಂಚೆ ಗ್ರೇಸ ಕೆಲಕಾಲ ತಡೆದಳು. 'ಫಿಟ್ಜಪಿಯರ್ಸ ಮಿಡಲ್‌ಟನ್ ಹಾದಿ ಹಿಡಿದರೇ ?'

'ಹೌದು. ಅವರನ್ನು ಡಾರ್ಲಿಂಗಳ ಸವಾರಿ ಮಾಡಿಕೊಂಡು ಹೋಗುವಾಗ ಭೆಟ್ಟಿಯಾದೆ.'

ಅವಳು ಉತ್ತರ ಕೊಡಲಿಲ್ಲವೆಂಬುದನ್ನು ಕಂಡು ಆತ ಇನ್ನೂ ಸೌಮ್ಯ ದನಿಯಲ್ಲಿ 'ಆ ಕುದುರೆಯನ್ನು ಹಾಗೆ ಕರೆದದ್ದೇಕೆಂದು ನಿನಗೆ ಗೊತ್ತು ಅಲ್ವೆ ?'

'ಓ, ಹೌದು. ನಿಜವಾಗಿ' ಅವಳು ಲಗುಬಗೆಯಿಂದ ಉತ್ತರವಿತ್ತಳು.

ಈ ವಿಷಯಗಳಲ್ಲಿ ಮನಸ್ಸಿಟ್ಟು ಅವರಿಬ್ಬರೂ ಆ ಗುಡ್ಡವನ್ನು ಸುತ್ತು ಹಾಕಿ ಇಷ್ಟು ದೂರ ಹೋದರು, ಅಲ್ಲಿಂದ ಇಡಿಯ ಪಡುವಣದ ನೋಟ ಬಯಲಾಗಿ ಕಂಡಿತು. ಭಿನ್ನವಿಚ್ಛಿನ್ನ ಮೋಡಗಳ ನಡುವಿನಿಂದ ಆಕಾಶದ ಅಂತರಾಳದಲ್ಲಿ ದೂರ ದನಕ ಅವರು ನೋಡುವಂತಾಯಿತು. ಅವರು ಮಾತಾಡುತ್ತ ಆಲೋಚಿಸುತ್ತ ಇರುವಾಗ, ಕಣ್ಣು ಬಂಗಾರದ ಕಮಾನುಗಳೊಳಗಿಂದ ಸಂಚರಿಸುತ್ತ ಉರಿಯುವ ಅಡೆತಡೆಗಳ ಕಾಲ್ಪನಿಕ ಕಲ್ಲು ರಾಶಿಗಳನ್ನೂ — ಟಾಪೆಝು ಹರಳಿನ ಸ್ಕಾಲೆಕ್ಟಾಯಿಟ್ ಸ್ಟಾಲೆಗ್ಮಾಯಿಟ್‌ಗಳನ್ನೂ ಹಾದು ಹೋದವು. ಅದಕ್ಕೂ ಆಳವಾಗಿ ಅವರ ದೃಷ್ಟಿಯು ಬೆಳ್ಳುರಿಯ ಕಿಡಿಗಳನ್ನು ಹಾಯ್ದು ಕೊನೆಗೆ ಮೃದುವಾದ ಹಸಿರುಕಿಚ್ಚಿನ ತಳವಿಲ್ಲದ ಆಳದಲ್ಲಿ ಮುಳುಗಿತು.

ಗಂಡ ಅನ್ಯಾಯವಾಗಿ ನಡೆದುಕೊಂಡನೆಂಬ ಭಾವನೆಯ ನಂತರ, ಆ ಮೋಹಕ ಹೊತ್ತಿಗೆ ಮತ್ತು ನೋಟಕ್ಕೆ ತನ್ನನ್ನು ಅರ್ಪಿಸಿಕೊಳ್ಳುವ ವೃತ್ತಿ, ಸಾಮಾಜಿಕ ಕಾನೂನಿನ ವಿರುದ್ಧ ಆ ಕ್ಷಣದ ಅವಳ ಬಂಡಾಯ, ಪ್ರಾಕೃತಿಕ ಜೀವನದ ಬಗೆಗೆ ಅವಳ ಆವೇಶದ ಅಭಿಲಾಷೆ, — ಇವೆಲ್ಲ ಅವಳ ಮೋರೆಯಲ್ಲಿ ಕಾಣಿಸಿಕೊಂಡಿರಬಹುದು. ವಿಂಟರಬೋರ್ನ ಅವಳ ಕಡೆಗೇ ನೋಡುತ್ತಿದ್ದನು. ಅವಳು ತನ್ನ ಎದೆಯಲ್ಲಿ ತೊಟ್ಟ ಒಂದು ಹೂವಿನ ಮೇಲೆ ಅವನ ಕಣ್ಣು ತಂಗಿತು. ನಿದ್ದೆಯಲ್ಲಿ ನಡೆಯುವವನ ಅನ್ಯಮನಸ್ಕತೆಯಿಂದಲೇ ಎಂಬಂತೆ ಆತ ಕೈಯನ್ನು ಚಾಚಿ ಮೃದುವಾಗಿ ಆ ಹೂವನ್ನು ಮುದ್ದಾಡಿದನು.

ಅವಳು ಹಿಂಜರಿದಳು. 'ನೀನೇನು ಮಾಡುತ್ತಿರುವಿ, ಜೈಲ್ಸ ವಿಂಟರ ಬೋರ್ನ ?' ಆಕೆ ಉದ್ಗರಿಸಿದಳು, ಉಗ್ರ ಆಶ್ಚರ್ಯದಿಂದ.

ಆ ಕೃತ್ಯದಲ್ಲಿ ಯಾವ ಪೂರ್ವ ಯೋಜನೆಯೂ ಇಲ್ಲವೆಂದು ಸ್ಪಷ್ಟವಾಗಿ ಬಗೆದು, ತಾನು ಆ ಕುರಿತು ಆಗ ಅಲ್ಲಿ ಮರ್ಯಾದೆಗೆ ಸೆಟೆದುಕೊಂಡು ನಿಲ್ಲುವ ಅಗತ್ಯವಿಲ್ಲವೆಂದು ಆಕೆ ಶೀಘ್ರ ಮನಗಂಡಳು. 'ನೀನು ನೆನಪಿಡಬೇಕು, ಜೈಲ್ಸ, ಆಕೆ ಮರುಕದಿಂದ ಅಂದಳು, 'ನಾವು ಹಿಂದೆ ಇದ್ದಂತೆ ಇನ್ನು ಇಲ್ಲ. ನೀನು ಈಗ ಮಾಡಿದ್ದು ಅತಿಪ್ರಸಂಗವೆಂದು ಬೇರೆ ಕೆಲವರು ಹೇಳಬಹುದು.'

ಅವಳು ಅವನಿಗೆ ಹೇಳಬೇಕಾದುದಕ್ಕಿಂತ ಅದು ಹೆಚ್ಚೇ ಆಯಿತು; ತನ್ನ ಮರವಿನ ಆ ಕೃತ್ಯ ಅವನನ್ನು ತನ್ನ ಮೇಲೆಯೇ ವಿಪರೀತ ಸಿಟ್ಟಿಗೆಬ್ಬಿಸಿತು. ಆತ ಬಿಸಿಲಿಗೆ ಕಂದಿದ ಮೈಬಣ್ಣದಡಿಗೂ ಕೆಂಪಾದನು.

'ನಾನು ಯಾವ ಅವಸ್ಥೆಗೆ ಬರುತಿದ್ದೇನೋ — ನನಗೆ ತಿಳಿಯದಾಗಿದೆ.' ಆತ ಉಮ್ಮಳಿಸಿ ಉದ್ಗಾರ ತೆಗೆದ. ಅವನ ಕಣ್ಣಿನಲ್ಲಿ ನೀರು ಊರಿದ್ದವು, 'ನಾನು ಹಿಂದೆ ಹೀಗೆ ಇದ್ದಿಲ್ಲ !'

'ಛೇ ಛೇ ಇಲ್ಲ — ಅದೇನೂ ಇಲ್ಲ. ನಾನೇ ವಿಪರೀತ ಛೀಮಾರಿ ಹಾಕಿದಂತಾಯಿತು.'

'ಇನ್ನೊಂದೆಡೆಗೆ — ಮಿಡಲ್‌ಟನ್ನಿನಲ್ಲಿ ಇಂತಹದೇ ಸಂಗತಿಯೊಂದು ಒದಗಿದ್ದು ನಾನು ನೋಡಿರದಿದ್ದರೆ ಇದು ನನ್ನಿಂದ ಒದಗಿ ಬರುತ್ತಿದ್ದಿಲ್ಲ.'

'ಅಲ್ಲಿ — ಯಾರಿಂದ ?'

'ಅದನ್ನು ಕೇಳಬೇಡ'

ಅವಳು ಅವನನ್ನು ಸೂಕ್ಷ್ಮವಾಗಿ ದಿಟ್ಟಿಸಿದಳು. 'ನನಗೆ ಚೆನ್ನಾಗಿ ಗೊತ್ತು' ಆಕೆ ಉದಾಸೀನವಾಗಿಯೆ ಅಂದಳು, 'ಅದು ನನ್ನ ಯಜಮಾನರಿಂದ, ಆ ಹೆಂಗಸು ಶ್ರೀಮತಿ ಚಾರ್ಮಂದ. ವಿಚಾರ ಸಾಹಚರ್ಯವು, ನನ್ನನ್ನು ನೋಡಿದಾಗ ನಿನಗೆ ಆ ನೆನಪನ್ನು ತಂದಿತು, ಜೈಲ್ಸ ಹೇಳು. ನಿನಗೆ ಆ ಕುರಿತು ಗೊತ್ತಿರುವದನ್ನೆಲ್ಲ ಹೇಳು, — ದಯಮಾಡಿ ಹೇಳು, ಜೈಲ್ಸ. ಅದರೆ ಬೇಡ. ನಾನು ಅದನ್ನು ಕೇಳಲಾರೆ. ಆ ವಿಷಯ ಇಲ್ಲಿಗೆ ಮುಗಿಯಲಿ. ಮತ್ತು ನೀನು ನನ್ನ ಗೆಳೆಯ, ಆದ್ದರಿಂದ ಅದನ್ನೇನೂ ನನ್ನ ತಂದೆಗೆ ಹೇಳಬೇಡ.'

ಅವರಿಬ್ಬರೂ ಕೊಳ್ಳದಲ್ಲಿ ಇಳಿದು ಅವರ ಹಾದಿಗಳು ಕವಲೊಡೆದ ಸ್ಥಳಕ್ಕೆ ಬಂದಿದ್ದರೂ ವಿಂಟರಬೋರ್ನ ಹೆದ್ದಾರಿಗುಂಟ ಮುಂದರಿದನು. ಅದು ಕಾನಿನ ಹೊರಗಡೆಯಿಂದ ಹೋಗಿ ಇತ್ತು. ಗ್ರೇಸಳು ಆ ಕಾನನ್ನೆ ಹೊಕ್ಕುವ ಒಂದು ಗೇಟನ್ನು ತೆರೆದಳು.

೩೦

ಅವಳು ಹುಲ್ಲು ಹಾಸಿನ ಹಸಿರು ಹಾದಿಯಲ್ಲಿ ನಡೆದಳು. ಅದನ್ನು ಎರಡೂ ಬದಿಗಳಲ್ಲಿ ಎರಡು, ಮೂರು, ನಾಲ್ಕು ಕಾಯಿಗಳ ಗೊಂಚಲುಗಳಿಂದ ಕಿಕ್ಕಿರಿದ ಕಂಟಿಗಳು ತೆರೆಯಂತೆ ಮರೆಮಾಡಿದ್ದವು. ತುಸು ದೂರಕ್ಕೆ ಅವಳ ದಾರಿಯನ್ನು ಇಂತಹದೇ ಇನ್ನೊಂದು ಕಾಲುದಾರಿಯು ಕಾಟಕೋನವಾಗಿ ಇದನ್ನು ಸಂಧಿಸಿತ್ತು. ಅಲ್ಲಿ ಗ್ರೇಸಳು ತಡೆದಳು; ಆ ಅಡ್ಡ ಹಾಯ್ದ ದಾರಿಯಲ್ಲಿ ಕೆಲವು ಗಜ ದೂರ ಪುಷ್ಪವೃಯ ಸೂಕೆ ದಾವಂಸನ್ ಕಂಡುಬಂದಳು — ಗೌನನ್ನು ಮೇಲೆತ್ತಿ ಜೇಬಿನ ಕನ್ನಿನಲ್ಲಿ ತುರುಕಿಕೊಂಡಿದ್ದಳು, ತಲೆಗೆ ಬಾನೆಟ್ಟು ಹಾಕಿದ್ದಿಲ್ಲ. ಕಂಟಿಯ ಟೊಂಗೆಗಳನ್ನು ಎಳೆದೆಳೆದು ಅವುಗಳ ಕಾಯಿಗಳನ್ನು ಕಲೆ ಹಾಕಿ ಭರಭರನೆ ತಿನ್ನುತ್ತಿದ್ದಳು. ಅವಳ ಗೆಣೆಯ (ಇನಿಯ) ತಿಮತ್ಸಾಂಗ್ಸ ಅವಳ ಹತ್ತಿರವೆ ನಿಂತು ತಾನೂ ಅದೇ ಸೊಗಸಾದ ತಿಂಡಿಯಲ್ಲಿ ತೊಡಗಿದ್ದನು.

ಕಟಿಲ್ — ಕಟಿಲ್ — ಕಟಿಲ್ — ಪ್ರತಿ ಒಂದೆರಡು ನಿಮಿಷಕ್ಕೆ ಸೂಕೆಯ ದವಡೆಗಳು ಸದ್ದು ಮಾಡುತಿದ್ದವು. ಬಗೆಯು ತಣ್ಣನೆ ಜಿಗಿದು, ಗ್ರೇಸಳ ಮನಸ್ಸು ಹಿಂದೆ ಅವಳ ಗಂಡ ಅಂದು ಬಣ್ಣಿಸಿದ ಹಲ್ಲು ಕೀಳುವ ಕ್ರಿಯೆಯ ದೃಶ್ಯಕ್ಕೆ ಹಿಂದಕ್ಕೆ ಹಾರಿತು; ಇದೇ ಮೊದಲ ಸಲ ಅವಳಿಗೆ ಸಂಶಯವೆನಿಸಿತು, ಆ ಕಥೆ ನಿಜವೇ? ಸೂಕೆಯ ದವಡೆ ಅಷ್ಟು ಬಲಿಷ್ಠವಾಗಿತ್ತು. ಗ್ರೇಸಳು ಆ ಕಾಯಿ ಕಲೆಹಾಕುವವರ ಕಡೆಗೆ ಹೊರಳಿ ಹತ್ತಿರಹೋದಳು. ಆ ಹುಡುಗೆಯನ್ನು ಮಾತನಾಡಿಸಬಾರದೆಂಬ ಉದಾಸೀನವನ್ನು ಹತ್ತಿಕ್ಕಿಕೊಂಡಳು. ಆಕೆ ತಿಮ್ಮನಿಂದ ತುಸು ಮುಂದೆಯೇ ಇದ್ದಳು. 'ಗುಡ್ ಈವನಿಂಗ್, ಸುಸಾನ.' ಅಂದಳು ಗ್ರೇಸ.

'ಗುಡ್ ಈವನಿಂಗ್, ಮಿಸ್ ಮೆಲಬರಿ' (ಕಟಿಲ್)

'ಅಲ್ಲ ಮಿಸೆಸ್. ಫಿಟ್ಝಪಿಯರ್ಸ'

'ಓ ಸರಿ, ಮಿಸೆಸ್, ಫಿಟ್ಝಪಿಯರ್ಸ,' — ಸೂಕೆ ವಿಶಿಷ್ಟವಾಗಿ ಮೂಗು ಮುರಿದಂತೆ ಮಾಡಿ, ನಮಸ್ಕಾರದೊಂದಿಗೆ ಅಂದಳು.

ಅಂಜಿ ಹಿಂಜರಿಯಬಾರದೆಂಬ ಹಟದಿಂದ ಗ್ರೇಸಳು ಮುಂದರಿದಳು, 'ಸೂಕೆ, ನಿನ್ನ ಹಲ್ಲಿನ ಕಾಳಜಿ ತೆಗೆದುಕೊ. ಅದರಿಂದಲೆ ನಿನಗೆ ಹಲ್ಲುಶೂಲೆ.'

'ಅಯ್ಯೋ ಅಮ್ಮ ನನಗೆ ಶೂಲೆ ಏನೆಂಬುದೆ ಗೊತ್ತಿಲ್ಲ, — ಹಲ್ಲಿಗಿರಲಿ, ತಲೆಗಿರಲಿ, ದೇವರ ದಯೆಯಿಂದ' (ಕಟಿಲ್)

'ಒಂದು ಹಲ್ಲೂ ಕಳೆದುಕೊಂಡಿಲ್ಲವೆ?'

'ಅಮ್ಮ ನೀವೆ ನೋಡಿ,' ಅವಳು ತನ್ನ ಕೆಂಪನ್ನ ತುಟಿಗಳನ್ನು ತೆರೆದು. ಹಲ್ಲಿನ ಎರಡು ಸಾಲುಗಳನ್ನೂ ಆಯೆಂದು ಕಳೆದು ತೋರಿಸಿದಳು — ಅವು ತುಂಬ ಬೆಳೆದವು ಒಂದೂ ಮುರಿದಿದ್ದಿಲ್ಲ, ಹಾಳಾಗಿದ್ದಿಲ್ಲ.

'ನಿನಗೆ ಒಂದೂ ಹಲ್ಲನ್ನೂ ಕಿತ್ತಿಲ್ಲವೇ ?'

'ಎಂದೂ ಇಲ್ಲ'

'ನಿನ್ನ ಹೊಟ್ಟೆಗೆ ಇದು ಒಳಿತೇ ಆಯಿತು.' ಮಿಸೆಸ್ ಫಿಟ್ಜ್‌ಪಿಯರ್ಸ್, ಬೇರೆ ದನಿಯಲ್ಲಿ ಅಂದಳು. ಮತ್ತು ಅಲ್ಲಿಂದ ಲಗುಬಗೆಯಿಂದ ತಿರುಗಿ ದೂರ ಸರಿದಳು. ಇದೀಗ ತಾನು ಮನಸ್ಸು ಮಾಡಿದರೆ ತಿಮತ್ಸಾಂಗನ ಜೇನಿನಲ್ಲಿ ಎಂಥ ನಂಜನ್ನು ಸೇರಿಸಬಲ್ಲೆ ಎಂದು ಆಕೆ ಆಲೋಚಿಸಿದಳು.

ಕಾಲನ ಕರಸ್ಪರ್ಶದಡಿಗೆ ಸಿಕ್ಕಿದ ಗಂಡನ ಚಾರಿತ್ರ್ಯವು ಈ ರೀತಿ ರೂಪಗೊಳ್ಳುತ್ತಿರುವಾಗ, ಗ್ರೇಸಳಿಗೆ ಒಂದು ಆಶ್ಚರ್ಯವೆನಿಸಿತು — ಅಂಥ ಪರಿಸ್ಥಿತಿಯಲ್ಲಿ ಇರುವ ಎಲ್ಲ ಹೆಂಡಂದಿರಿಗೆ ರೂಢಿಯಂತೆ ಅನ್ವಯಿಸುವ ಅಸೂಯೆಯ ಉದ್ರೇಕ ತನಗೆ ಏನೂ ಪೀಡಿಸಲಿಲ್ಲವೇಕೆಂದು. ಅಂಥ ಕಾಡು ಬೆಕ್ಕಿನ ರೊಚ್ಚು ಅನುಭವಿಸುವುದು ಅವಳ ನೈತಿಕ ಕರ್ತವ್ಯವಾಗಿತ್ತು. ಆದರೆ ಅದೇನೂ ಇಲ್ಲದಿದ್ದರೂ, ಅವಳು ಒಂದು ಸಂಗತಿಯನ್ನು ನಿಧಾನಿಸಲು ತಪ್ಪಲಿಲ್ಲ — ಏನೆಂದರೆ, ಈ ಮದುವೆ ಆಗುವುದರಲ್ಲಿ ಅವಳು ಭಯಂಕರ ತಪ್ಪು ಮಾಡಿದ್ದಳು. ತಂದೆಯ ಇಚ್ಛೆಗೆ ತಲೆದೂಗಿದ್ದು ಆತ್ಮಗ್ಲಾನಿಗೆ ಕಾರಣವಾಯಿತು. ಮುಂದಿಗೆ ಕೆಲಸಲ ಶಕುನದಂಥ ಮುನ್ಸೂಚನೆಗಳು ಅನಿಸುವದು ಸುಮ್ಮನೆ ಅಲ್ಲ. ಅಂದು ಮುಂಜಾವಿನ ನಸುಕಿನಲ್ಲಿ ಫಿಟ್ಜ್‌ಪಿಯರ್ಸನ ಬಾಗಿಲಿಂದ ಆ ಆಕೃತಿ ಹೊರಬಂದದ್ದು ಇಣುಕಿ ನೋಡಿದಾಗ ಅನಿಸಿದ ಪ್ರೇರಣೆಯನ್ನೆ ಅವಳು ಪಾಲಿಸಬೇಕಿತ್ತು. ಅವನ ಕೈಯಲ್ಲಿ ಕೈ ಇಡಲು ದೃಢವಾಗಿಯೆ ಅಲ್ಲಗಳೆಯಬೇಕಿತ್ತು.

ಆಗ ಆ ವಾಗ್ದತ್ತ ವರನು ಸೂಕೆಯ ಬಗೆಗೆ ಹೇಳಿದ ಆ ನಂಬಬಹುದಾದ ಕತೆ. ಶೂಲೆಯಿಂದ ಗಾಸಿಗೊಳಿಸುವ ಆ ಹಗೆಹಲ್ಲನ್ನು ಕೀಳೆಂದು ಆಕೆ ಅಂಗಲಾಚಿದಳೆಂಬ ಆ ನಾಟಕೀಯ ಬಣ್ಣನೆ ! ಅದಕ್ಕೆ ಆತ ಕೊಟ್ಟ ಆ ಕಲಾತ್ಮಕವಾದ ಕೊನೆಯ ತಿದ್ದಿಟ್ಟ ಸ್ಪರ್ಶ — ಅದೊಂದು ನಿರ್ದೋಷವಾದ ದವಡೆಯ ಹಲ್ಲಾಗಿತ್ತೆಂದು. ಓ !

ತನ್ನ ಪರಿಸ್ಥಿತಿಯ ಕಾಲ್ತೊಡಕುಗಳಿಂದ ಮುಕುಕವಿದಂತೆ ಆಕೆ ಆ ಕಾನಿನ ಹಾದಿಯ ಉಳಿದ ಭಾಗವನ್ನು ಕ್ರಮಿಸಿದಳು. ಮದುವೆಯ ಮುಂಚಿನ ಅವನ ಆ ನಿರಾಕರಣೆಗಳನ್ನು ನಂಬುವುದಾದರೆ, ತನ್ನ ಗಂಡ ತನ್ನ ಬಗೆಗೂ ಈ ಹೆಂಗಸಿನ ಬಗೆಗೂ ಕೂಡಿಯೇ ಒಂದೇ ವೇಳೆಗೆ ಪ್ರೀತಿಯನ್ನು ತಾಳಿದ್ದಿರಬೇಕು ; ಮತ್ತು ಇದೀಗ ಅದೇ ಸಂಯುಕ್ತ ರತಿಯನ್ನು ತನ್ನ ಹಾಗೂ ಶ್ರೀಮತಿ ಚಾರ್ಮಂದಳ ಮೇಲೆ ಹಬ್ಬಿಸುತ್ತಿರಬೇಕು — ಏಕೆಂದರೆ ಈಗಲೂ ಅವನ ರೀತಿಯು ಅನೇಕ ಸಲ ತನ್ನ ಕುರಿತು ಮಮತೆಯದು, ಮರುಕವುಳ್ಳದ್ದು ಇರುವುದುಂಟು. ಆದರೂ, ನಿಜವಾಗಿಯೂ ಆತ ತನ್ನೊಡನೆ ವಂಚಕನ ಪಾತ್ರವನ್ನು, ಪ್ರತಿಯೊಂದು ಪ್ರಕರಣದಲ್ಲಿಯೂ ತುಂಬ ಸಾವಧಾನದಿಂದ ಸವಿವರವಾಗಿ ಪೂರ್ಣತೆಯಿಂದಲೆ ಅಭಿನಯಿಸಿರಬೇಕು ; ಮತ್ತು ಈ ವಿಚಾರವು ಅವಳಿಗೆ ಹೇಸಿಗೆ ಉಂಟುಮಾಡಿತು. ಏಕೆಂದರೆ ವಿಚಾರದಲ್ಲಿ ಅಡಕವಾದ ಊಹೆಯೆಂದರೆ, ಆತ ತನ್ನನ್ನು ನಿಜವಾಗಿಯೂ ಪ್ರೀತಿಸಿದ್ದಿಲ್ಲವಾದರೆ, ತನ್ನನ್ನು

ಮಡದಿಯಾಗಿ ಮಾಡಿಕೊಂಡುದರ ಒಂದೇ ಉದ್ದೇಶ ತನ್ನ ಅಲ್ಪ ಸಂಪತ್ತೇ, ಆಗಿರಬೇಕು.

ಆದರೆ ಗ್ರೇಸ ಇಲ್ಲಿ ಒಂದು ತಪ್ಪು ಮಾಡಿದಳು. ಏಕೆಂದರೆ ಫಿಟ್ಝಪಿಯರ್ಸನಂಥ ಪುರುಷರ ಪ್ರೇಮದ ಜಾತಿಗುಣವೆ ಬೇರೆ. ಅದು ವಿಭಜನೆ ಮತ್ತು ವರ್ಗಾಂತರಗಳನ್ನು ಸಹಿಸಬಲ್ಲದು. ಅವನೇ ಒಮ್ಮೆ ಸಾರಿದ್ದುಂಟು — ಆದರೆ ಅವಳಿಗೆ ಅಲ್ಲ. ಏನೆಂದರೆ ಒಂದು ಪ್ರಸಂಗದಲ್ಲಿ ಒಂದೇ ಸಮಯ ಐದು ಮೋಹಗಳಿಗೆ ತಾನು ಒಳಗಾಗಿದ್ದೆನೆಂದು ಅವನು ಕಂಡುಕೊಂಡಿದ್ದನು. ಇದು ನಿಜವಿದ್ದರೆ ಅವನ ಪ್ರೇಮವು ಆತ್ಯುನ್ನತ ಪ್ರೀತಿಯಿಂದ ಭಿನ್ನ ಮಟ್ಟದ್ದೆನ್ನಬಹುದು — ಕೆಳಮಟ್ಟದ ಪ್ರಾಣಿಗಳು ಮೇಲ್ಮಟ್ಟದವು ಗಳಿಂದ ಭಿನ್ನವಿರುವುದಿಲ್ಲವೆ? ಹಾಗೆಯೇ. ಈ ಭೇದವು ಸಾವನ್ನಲ್ಲ, ಬಹುಗುಣಿತ ಬದುಕನ್ನು ಉಂಟುಮಾಡುತ್ತಿತ್ತು. ಆತ ಅವಳನ್ನು ತನ್ನ ಸ್ವಾರ್ಥಪರಾಯಣ ರೀತಿಯಲ್ಲಿ ಕಳಕಳಿಯಿಂದಲೆ ಪ್ರೀತಿಸಿದ್ದನು. ಈಗಲೂ ಆತ ಹಾಗೆ ಪ್ರೀತಿಸುವುದನ್ನು ನಿಲ್ಲಿಸಿದ್ದೂ ಇಲ್ಲ. ಆದರೆ ಇಂಥ ಜೋಡು ನಳಿಗೆಯ, ಮುಮ್ಮಡಿ ನಳಿಗೆಯ ಹೃದಯ ಗಳೂ ಇರಬಲ್ಲವೆಂಬುದು ಅವಳ ಕಲ್ಪನೆಯನ್ನು ಮೀರಿದ್ದು.

ಬಡ ಸೂಕೆ ದಾಮಸನ್‌ಗಳ ಬಗೆಗೆ ಗ್ರೇಸಳು ಮತ್ತೆ ವಿಚಾರಮಾಡಲಿಲ್ಲ. ಅವಳ ವಿಷಯ ಮುಗಿಯಿತು. 'ಆತ ನನ್ನನ್ನು ಪ್ರೀತಿಸುತ್ತಿಲ್ಲವಾದರೆ ನಾನೂ ಅವನನ್ನು ಪ್ರೀತಿಸುವುದಿಲ್ಲ.' ಗ್ರೇಸಳು ಬಿಂಕದಿಂದಲೆ ಅಂದಳು.

ಮತ್ತೆ ಇವು ಬರೆ ಮಾತುಗಳಾಗಿದ್ದರೂ, ಅವಳ ಹೃದಯವು ಈ ಮಾತನ್ನು ಕೃತಿಗೆ ಇಳಿಸಬಲ್ಲ ಸ್ಥಿತಿಯನ್ನು ಸಮೀಪಿಸುತ್ತಿತ್ತು ಎಂಬ ಸಂಗತಿ ಫಿಟ್ಝಪಿಯರ್ಸನಿಗೆ ನಿಜವಾಗಿಯೂ ಭಯಾವಹವಾಗಿತ್ತು. ಅವನ ಆ ಕ್ರಮವನ್ನು ಅಷ್ಟೊಂದು ಸುಗಮ ಮಾಡುವಂಥ, ಮತ್ತು ನಿಜವಾಗಿಯೂ, ಆ ಮೂಲಕ ಅವನು ತನ್ನ ಅಭಿನಂದಿಸುವಂಥ ಅವಳಲ್ಲಿಯ ತೀವ್ರ ಅಸೂಯೆಯ ಅಭಾವವೆ, ಆ ಗಂಡ-ಹೆಂಡತಿ ಇಬ್ಬರಿಗೂ ಅರಿವಾಗದಂತೆ, ಕಾಮಾಲಿಗಣ್ಣಿನ ಕಾವುಲಿಡುವ ಕಾಲ್ತೊಡಕಿಗಿಂತ ಹೆಚ್ಚು ಅರ್ಥ (ಅನರ್ಥ ?) ಪೂರ್ಣವಾಗಿತ್ತು.

ಆ ರಾತ್ರೆ, ಅವಳ ನಿದ್ದೆ ನರಗೆಟ್ಟಂತೆ, ಅಸ್ವಸ್ಥವಾಗಿತ್ತು. ಅವಳಿಗೂ ಅವಳ ಗಂಡನಿಗೂ ಮೀಸಲಾಗಿ ಕೊಟ್ಟ ಆ ಮನೆಯಂಕಣವು ಹಿಂದೆಂದೂ ಅಷ್ಟು ಏಕಾಕಿ ಯಾಗಿ ಅನಿಸಿದ್ದಿಲ್ಲ. ಕೊನೆಗೂ ಆಕೆ ಎದ್ದಳು. ಡ್ರೆಸಿಂಗ್ ಗೌನು ತೊಟ್ಟಳು. ಮತ್ತು ಕೆಳಗಿಳಿದು ಹೋದಳು. ಹಗುರಾಗಿ ನಿದ್ದೆ ಮಾಡುತ್ತಿದ್ದ ಅವಳ ತಂದೆಯು ಅವಳ ಸದ್ದನ್ನು ಕೇಳಿದನು. ಮತ್ತು ಮಾಳಿಗೆಯ ತುದಿಗೆ ಕಾಣಿಸಿಕೊಂಡನು.

'ನೀನೇ? ಗ್ರೇಸ? ಏನಾಯಿತು?' ಆತ ಅಂದನು.

'ಇನ್ನೇನೂ ಇಲ್ಲ. ನನಗೆ ನಿದ್ದೆ ಹತ್ತದೆ ಅಸ್ವಸ್ಥಳಾಗಿದ್ದೇನೆ. ವ್ಹಾಯಿಟ್ ಹಾರ್ಟ ಕೊಳ್ಳದಲ್ಲಿ ಒಂದು ರೋಗಿಗಾಗಿ ಎಡ್ರೆಡ್ ತಡೆದು ನಿಂತಿದ್ದಾನೆ.'

'ಆದರೆ ಅದು ಹೇಗೆ? ಇದೀಗ ಮಲಗಲು ಹೋಗುವ ವೇಳೆಗಿಂತ ತುಸು

ಮುಂಚೆ ಆ ಹೆಂಗಸಿನ ಗಂಡನನ್ನು ನಾನು ಕಂಡೆ. ಹಿರಿಯ ಹಿಂಟಾಕಿಗೆ ನಡೆದಿದ್ದ. ಅವಳು ಚೆನ್ನಾಗಿ ಸುಧಾರಿಸಿದ್ದಳು ಮತ್ತು ಡಾಕ್ಟರರೂ ಅಲ್ಲಿಂದ ಹೋಗಿ ಬಿಟ್ಟರಂತೆ.'

'ಹಾಗಾದರೆ ಆತ ಇನ್ನೆಲ್ಲಿಯೋ ತಡೆಹಿಡಿಯಲ್ಪಟ್ಟಿರಬೇಕು. ನನ್ನ ಕಾಳಜಿ ಬೇಡ. ಅವನು ಬೇಗ ಮನೆಗೆ ಬರಬಹುದು. ಒಂದು ಗಂಟೆಯ ಸುಮಾರಿಗೆ ಅವನು ಬರುವನೆಂದು ನನ್ನ ನಿರೀಕ್ಷೆ.'

ಅವಳು ತಿರುಗಿ ತನ್ನ ಕೋಣೆಗೆ ಹೋದಳು. ಅಲ್ಲಿ ತೂಕಡಿಸುತ್ತ ಹಲವು ಸಲ ಎಚ್ಚೆತ್ತಳು. ಅವನು ಹಿಂದಿನ ಸಲ ತಿರುಗಿ ಬಂದ ವೇಳೆ ಒಂದು ಗಂಟೆ. ಅದೀಗ ಸರಿದು ಬಲುದೂರ ಹೋಗಿತ್ತು. ಫಿಟ್ಜ್‌ಪಿಯರ್ಸ್ ಬರಲಿಲ್ಲ. ನಸುಕು ಹರಿಯುವ ತುಸು ಮುಂಚೆ ಮಂದಿ ಹೊರಗೆ ಪಟಾಂಗಣದಲ್ಲಿ ಸುಳಿದಾಡುವ ಸದ್ದು ಅವಳು ಕೇಳಿದಳು. ಅವರ ಕಂದೀಲುಗಳು ಚೆಲ್ಲಿದ ಬೆಳಕು ಅವಳ ಕಿಟಕಿಯ ಕದಗಳ ಸಂದುಗಳೊಳಗಿಂದ ಆಗಾಗ್ಗೆ ತೂರಿ ಬರುತ್ತಿತ್ತು. ಅವಳಿಗೆ ನೆನಪಾಯಿತು, ತಂದೆ ಹೇಳಿದ್ದನು, ಆ ಬೆಳಕು ಹಾಗೆ ಕಂಡರೆ ತೊಂದರೆ ಪಟ್ಟುಕೊಳ್ಳಬೇಡವೆಂದು. ಆ ದಿನ ದೂರದ ಒಂದು ಕುರಿಗಳ ಸಂತೆಗೆ ನಾಲ್ಕು ಹೊರೆ ಗೂಟಗಳನ್ನು ಕಳಿಸಲು ಅವರು ತುಸು ಲಗು ಏಳಲಿದ್ದರು. ಇಣಕಿ ನೋಡಿದಾಗ ಆಳುಗಳು ಅತ್ತಿತ್ತ ಗಡಿಬಿಡಿಯಲ್ಲಿ ಓಡಾಡುವುದನ್ನು ಅವಳು ಕಂಡಳು. ಅವರ ನಡುವೆಯೆ ಗಾಣದ ಕೆಲಸಗಾರನೂ ಇದ್ದನು. ಆತ ತನ್ನ ಸಾಮಾನು ಅವಳ ತಂದೆಯ ಒಂದು ಗಾಡಿಯಲ್ಲಿ ಹೇರತೊಡಗಿದ್ದನು — ಮರದ ಮರಿಗೆ, ಬಟ್ಟಲು, ಬಿರಿಡೆ, ಚಮಚೆ, ಚೀಜಮಾಡುವ ತಾಟು, ಫನೇಲು ಮುಂತಾದವೆಲ್ಲ ಹೇರುತ್ತಿದ್ದನು. ಪ್ರತಿ ವರ್ಷ ಅವಳ ತಂದೆ ನೆರಹೊರಕೆಯ ಉಪಕಾರವೆಂದು ಅವನ್ನೆಲ್ಲ ಆ ಜಾತ್ರೆಗೆ ಹೊತ್ತು ಒಯ್ದು ಕೊಡಿಸುತ್ತಿದ್ದನು ತನ್ನ ಗಾಡಿಯಲ್ಲಿ.

ಆ ನೋಟ, ಆ ಪ್ರಸಂಗ ಅವಳಲ್ಲಿ ಸ್ವಾರಸ್ಯ ಉಂಟುಮಾಡಬಹುದಿತ್ತು. ಆದರೆ ಆಗಲೆ ಐದು ಗಂಟೆ ಆಗಿದ್ದರೂ ಅವಳ ಗಂಡ ಬಂದಿದ್ದಿಲ್ಲ. ಮಿಡಲ್‌ಟನ್ನಿನಲ್ಲಿ ಶ್ರೀಮತಿ ಚಾರ್ಮಂದಳಿಗೆ ವ್ಯಾವಸಾಯಿಕವಾಗಿಯೇ ಭೆಟ್ಟಿ ಕೊಟ್ಟರೂ, ಅವನ ವ್ಯಾಮೋಹವೇನೇ ಇದ್ದರೂ, ಹತ್ತು ಗಂಟೆಗೂ ಮೀರಿ ಮುಂದುವರಿಯಬಹುದೆಂದು ಆಕೆ ಹೇಗೂ ಕಲ್ಪನೆಮಾಡುವಂತೆ ಇದ್ದಿಲ್ಲ. ಮತ್ತು ಅಲ್ಲಿಂದ ಎರಡು ಗಂಟೆಗಳಲ್ಲಿ ಆತ ಕುದುರೆಯೇರಿ ಮನೆಗೆ ಮರಳಬಹುದಿತ್ತು. ಅಂದಾಗ ಅವನಿಗೆ ಆದದ್ದಾದರೂ ಏನು? ಕಳೆದ ಎರಡು ರಾತ್ರೆಗಳ ಬಲು ದೊಡ್ಡ ಪಾಲು ಆತ ಹೀಗೆ ಹೊರಗೆಯೆ ಕಳೆದಿದ್ದನೆಂಬ ಸಂಗತಿ ಅವಳ ಅಸ್ವಸ್ಥತೆಯನ್ನು ಇನ್ನೂ ಹೆಚ್ಚಿಸಿತು.

ಅವಳು ಬಟ್ಟೆತೊಟ್ಟುಕೊಂಡು ಕೆಳಗಿಳಿದು ಹೋದಳು. ಏರಿಬರುತ್ತಿರುವ ಹಗಲ ವಿಚಿತ್ರ ಸಂಧಿಪ್ರಕಾಶವು ಕಂದೀಲಂಗಳ ಕಿರಣಗಳನ್ನು ತಂಪುಗೊಳಿಸುತ್ತಿತ್ತು. ಮಂದಿಯ ಮೋರೆಗಳನ್ನೂ ಪೆಚ್ಚುಗೊಳಿಸುತ್ತಿತ್ತು. ಆಕೆಯನ್ನು ಕಂಡೊಡನೆಯೆ ಮೆಲಬರಿ ಗಾಬರಿ ಕಾಣಿಸಿಕೊಳ್ಳುತ್ತ ಮುಂದೆ ಬಂದನು.

'ಎಡ್ರೆಡ್ ಇನ್ನೂ ಬಂದಿಯೇ ಇಲ್ಲ.' ಆಕೆ ಅಂದಳು. 'ಮತ್ತು ಅತ ಯಾರ ಉಪಕಾರಕ್ಕಾಗಿಯೂ ಹೋಗಿಲ್ಲ ಹಾಗೆ ನಾನು ತಿಳಿಯಲು ಕಾರಣಗಳೂ ಉಂಟು. ಈ ಮೊದಲು ಅವನಿಗೆ ಎರಡು ರಾತ್ರೆ ನಿದ್ದೆಯೇ ಇದ್ದಿಲ್ಲ. ಅವನ ಬಗ್ಗೆ ಹುಡುಕಲು ನಾನು ಗುಡ್ಡದ ತುದಿಗೆ ಹೋಗಲಿದ್ದೆ.'

'ನಾನೂ ನಿನ್ನ ಜತೆ ಬರುತ್ತೇನೆ' ಮೆಲಬರಿ ಅಂದನು.

ಹಾಗೆ ಬರದೆ ತೊಂದರೆ ಪಟ್ಟುಕೊಳ್ಳಬೇಡವೆಂದು ಆಕೆ ಅವನಿಗೆ ಬೇಡಿಕೊಂಡಳು. ಆದರೆ ಆತ ಹಟ ಹಿಡಿದನು, ಏಕೆಂದರೆ ಅಸ್ವಸ್ಥತೆಯನ್ನೂ ಮೀರಿ ಅವಳ ಮೋರೆಯಲ್ಲಿ ಒಂದು ವಿಶೇಷವಾದ ಕಠಿಣವಾದ ಖಿನ್ನತೆಯನ್ನು ಆತ ಕಂಡನು. ಆ ನೋಟ ಅವನಿಗೆ ಸೇರಲಿಲ್ಲ. ಬೇಗನೆ ತಿರುಗಿ ಬಂದು ಅವರೊಂದಿಗೆ ಸೇರುವೆನೆಂದು ತನ್ನ ಮಂದಿಗೆ ಹೇಳಿ ಅವನು ಅವಳ ಪಕ್ಕದಲ್ಲಿ ನಡೆದನು. ಆ ಸುಂಕದ ಗೇಟು ತೆರೆದಿದ್ದ ರಸ್ತೆಯಲ್ಲಿ, ಹಾಗೆಯೇ ಕೆಲವು ಅಂತರ ಮುಂದೆ, ಮುಂಚಿನ ರಾತ್ರೆ ಫಿಟ್ಜ್‌ಪಿಯರ್ಸ ಗ್ರೇಟ್‌ಬ್ಲಾಕ್ ಮೂರ ಮತ್ತು ವ್ಹಾಯಿಟ್ ಹಾರ್ಟ್ — ಕೊಳ್ಳದ ಅಂಚಿಗೆ ಹಾಯುವಾಗ ಅವನನ್ನು ಅವಳು ನಿಂತು ದಿಟ್ಟಿಸಿದ ಕಡೆಗೆ.

ಅರ್ಧ ಸತ್ತ ಒಂದು ಓಕ ಮರದ ಕೆಳಗೆ ಅವರು ನಿಂತರು. ಆ ಮರ ಪೊಳ್ಳಾಗಿತ್ತು. ಅಲ್ಲಲ್ಲಿ ಕಾಂಡವು ಗಂಟುಗಳು ಬೆಳೆದು ಅಕಾರಗೆಟ್ಟಿತ್ತು. ಅದರ ಬೇರುಗಳು ಹಿಂಸ್ರಹಕ್ಕಿಯ ಉಗುರುಗಳಂತೆ ಹಬ್ಬಿ ನೆಲವನ್ನು ಹಿಡಿದುಕೊಂಡಿದ್ದವು. ಚಳಿಗಾಳಿಯು ಅವರ ಸುತ್ತು ಸುಳಿಯುತ್ತಿತ್ತು. ಅದರ ಮೇಲೆ ನೆರೆಯ ಲೈಮಮರದ ಬೀಜಗಳು ತಮ್ಮ ಟೊಂಗೆಗಳಿಂದ ಕೊಡೆ ವಿಮಾನಗಳಂತೆ ರೆಕ್ಕೆಯಂಥ ಎಸಳುಗಳ ಬಲದಿಂದ ಹಾರಿ ಬರುತ್ತಿದ್ದವು — ಗೂಡುಗಳಿಂದ ಹೊಸ ರೆಕ್ಕೆ ಬಲಿತ ಮರಿಹಕ್ಕಿಗಳಂತೆ. ಕೆಳಗೆ ಕೊಳ್ಳವು ಒಂದು ಅನೈಸರ್ಗಿಕ ಮಬ್ಬಿನ ವಾತಾವರಣದಲ್ಲಿ ಸುತ್ತಿಕೊಂಡಂತೆ ಇತ್ತು. ಮತ್ತು ಮೂಡಣ ದಿಕ್ಕು ನಸುಗೆಂಪಿನ ಅಂಚು ಹೊಳೆಯುವ ತೆರೆಯಂತೆ ಆಗಿತ್ತು. ಫಿಟ್ಜ್‌ಪಿಯರ್ಸನ ಯಾವ ಸದ್ದು ಸುಳಿವೂ ಇರಲಿಲ್ಲ.

'ಇಲ್ಲಿ ನಿಂತು ಪ್ರಯೋಜನವಿಲ್ಲ', ತಂದೆ ಮಗಳಿಗೆ ಅಂದನು, 'ಆತ ಮನೆಗೆ ಬರಲು ಐವತ್ತು ದಾರಿಗಳಿವೆ — ಏಕೆ, ಅಲ್ಲಿ ನೋಡು, ಇಲ್ಲವೆ ಡಾರ್ಲಿಂಗದ ಹೆಜ್ಜೆ ಗುರುತು. ಮನೆಯ ಕಡೆಗೆ ಹೊರಳಿದವು, ಪೂರ್ತಿ ಒಣಗಿ ಬಿರುಸಾದವು. ಆತ ನಿನಗೂ ಗೊತ್ತಾಗದಂತೆ ಬಂದು ಮುಟ್ಟಿ ಒಂದು ಗಂಟೆಗಟ್ಟಲೆ ಕಳೆದಿರಬಹುದು.'

'ಅವನು ಹಾಗೆ ಮಾಡಿಲ್ಲ' ಆಕೆ ಅಂದಳು.

ಅವರು ತ್ವರೆಯಿಂದ ತಿರುಗಿ ಹೋದರು, ತಮ್ಮ ಆವಾರದ ಗೇಟನ್ನು ಪ್ರವೇಶಿಸಿದಾಗ ತಮ್ಮ ಮಂದಿ ಗಾಡಿಗಳನ್ನು ಬಿಟ್ಟುಕೊಟ್ಟು, ಕುದುರೆಲಾಯದ ಬಾಗಿಲ ಸುತ್ತಲು ನಿಂತಿದ್ದನ್ನು ನೋಡಿದರು. ಆ ಲಾಯವನ್ನು ಡಾಕ್ಟರನ ಉಪಯೋಗಕ್ಕೆ ಬಿಡಲಾಗಿತ್ತು.

'ಇದೇನು? ಏನಾದರೂ ಆಗಿದೆಯೇ?' ಗ್ರೇಸಳು ಕೂಗಿ ಕೇಳಿದಳು.

'ಓ ಇಲ್ಲ ಅಮ್ಮಾವರೆ, ಆದದ್ದೆಲ್ಲ ಒಳ್ಳೇದೆ' ಮುದಿ ತಿಮೊಥಿ ತಾಂಗ್ಸ ಅಂದನು. 'ಇಂಥ ಸಂಗತಿ ಹಿಂದೆ ನಾ ಕೇಳಿದೇನೆ — ಕೂಲಿ ಕಂಬಳ ಮಾಡುವವರಲ್ಲಿ; ಆದರೆ ನಿಮ್ಮ ಸಂಭಾವಿತರಲ್ಲಿ ಮಾತ್ರ ಅಲ್ಲ. ಖರೇ ಹೇಳ್ತೇನೆ.'

ಅವರು ಲಾಯವನ್ನು ಹೊಕ್ಕರು. ಅಲ್ಲಿ ತನ್ನ ದಾವಣಿಯು ನಡುವೆ ಡಾರ್ಲಿಂಗಳ ಕಳೆಗುಂದಿದ ಆಕೃತಿಯನ್ನು ನೋಡಿದರು. ಫಿಟ್ಝ್‌ಪಿಯರ್ಸ್ ಅದರ ಬೆನ್ನ ಮೇಲೆ ಇದ್ದ —ಆಳವಾದ ನಿದ್ದೆಯಲ್ಲಿ. ಡಾರ್ಲಿಂಗ ಬಾಯಲ್ಲಿ ಕಡಿವಾಣವಿರುವಾಗಲೆ ಆದಷ್ಟು ಮಾಡಿ ಒಣಹುಲ್ಲು ತಿನ್ನುತ್ತಿತ್ತು. ಮತ್ತು ಫಿಟ್ಝ್‌ಪಿಯರ್ಸನ ಕೈಯಿಂದ ಜಾರಿಬಿದ್ದ ಲಗಾಮಿನ ಪಟ್ಟಿಗಳು ಅದರ ಕುತ್ತಿಗೆಯ ಮೇಲೆ ಜೋಲುತಿದ್ದವು.

ಗ್ರೇಸಳು ಹೋಗಿ ಅವನ ಕೈಯನ್ನು ಮುಟ್ಟಿದಳು. ಅದನ್ನು ಕುಲುಕಿದಳು. ಅವನನ್ನು ಎಬ್ಬಿಸುವ ಮುಂಚೆ ಆತ ಚಲಿಸಿದನು. ಬೆಚ್ಚಿಬಿದ್ದು ಕಣ್ಣು ತೆರೆದನು. ಮತ್ತು ಉದ್ಗರಿಸಿದನು. 'ಆ ಫೆಲಿಸ್... ಓ ಇದು ಗ್ರೇಸ್. ಮಬ್ಬುಗತ್ತಲೆಯಲ್ಲಿ ನಾನು ಸರಿಯಾಗಿ ಕಾಣಲಿಲ್ಲ, ಇದೇನು? — ನಾನು ಜೀನಿನ ಮೇಲೆಯೇ ಇದ್ದೇನೆ.'

'ಹೌದು' ಅವಳೆಂದಳು, 'ನೀವು ಇಲ್ಲಿ ಹೇಗೆ ಬಂದಿರಿ?'

ಆತ ತನ್ನ ವಿಚಾರಗಳನ್ನೆಲ್ಲ ಕಲೆಹಾಕಹತ್ತಿದ. ಕೆಲವೇ ನಿಮಿಷಗಳಲ್ಲಿ ಕುದುರೆಯ ಬೆನ್ನಿಂದ ಇಳಿಯುತ್ತ ತಡವರಿಸುತ್ತ ಅನ್ನಹತ್ತಿದ, 'ಕೊಳ್ಳದೊಳಗಿಂದ ನಾನು ಮನೆಯ ಕಡೆಗೆ ಕುದುರೆಯೇರಿ ಬರುತ್ತಿದ್ದೆ — ಬಹಳ, ಬಹಳೇ ತೂಕಡಿಸುತ್ತಿದ್ದೆ. ಇಷ್ಟು ತಡಮಾಡಿ ಎಚ್ಚರ ಉಳಿದಿದ್ದರಿಂದ. ಲಿಡ್ಡನ್‌ಸ್ಪ್ರಿಂಗ್ ಕಛೇರಿಯ ಇದಿರು ಬಂದೊಡನೆ ಈ ಕುದುರೆ ಆ ಕಡೆಗೆ ತಲೆ ತಿರುಗಿಸಿತು. ನೀರು ಕುಡಿಯಬೇಕೆಂಬಂತೆ. ನಾನು ಹೋಗಲು ಸಡಿಲಬಿಟ್ಟೆ. ಅದು ನೀರು ಕುಡಿಯಿತು. ಕುಡಿದು ಮುಗಿಯುವದೇ ಇಲ್ಲ ವೆಂದು ಅನಿಸಿತು. ಅದು ನೀರು ಕುಡಿಯುತ್ತಿರುವಾಗ ನ್ಯೂಲಂಡ್ ಬರ್ಟ್ನಿನ ಚರ್ಚಿ ನಲ್ಲಿ ಹನ್ನೆರಡು ಬಡಿಯಿತು. ಅದನ್ನು ನಾನು ಎಣಿಸಿದ್ದು ಸ್ಪಷ್ಟವಾಗಿ ನೆನಪಿದೆ. ಆ ಕ್ಷಣದಿಂದ ಮುಂದೆ ನನಗೆ ಖಂಡಿತವಾಗಿ ಏನೂ ನೆನಪಾಗುವದಿಲ್ಲ — ನಿನ್ನನ್ನು ಇಲ್ಲೇ ನನ್ನ ಪಕ್ಕದಲ್ಲಿ ನೋಡುವ ತನಕ.

'ಆದರೆ ಬೇರೆಯಾವದೆ ಕುದುರೆಯಾಗಿದ್ದರೆ; ನಿಮ್ಮ ಕುತ್ತಿಗೆ ಮುರಿದು ಹೋಗುತ್ತಿತ್ತು.' ಈವಾಗ, ಮೆಲಬರಿ ಗೊಣಗಿದನು.

'ಇದು ಅದ್ಭುತ, ಖಂಡಿತ. ಸಾದು ಕುದುರೆ ಬೆನ್ನೇರಿದ ಆಸಾಮಿಯನ್ನು ಹೀಗೆ ಮನೆಗೆ ತರುವುದು', ಜಾನ್ ಅಪ್‌ಜಾನ್ ಅಂದನು, 'ಅದಕ್ಕೂ ದೊಡ್ಡ ಅದ್ಭುತ, ಅಂಥ ನಿದ್ದೆಯಲ್ಲಿಯೂ ನೀವು ನಿಮ್ಮ ಸೀಟು ಬಿಡದೆ ಕಾಪಾಡಿಕೊಂಡದ್ದು. ಬೀರು ಸರಾಯಿ ಚೆನ್ನಾಗಿ ಬಗ್ಗಿಸಿ ಮನೆಗೆ ನಡೆದು ಬರುವಾಗ ಮಂದಿ ತೂಕಡಿಸುತ್ತ ಮೈಲು ಮೈಲು ಹಾಗೆಯೇ ಎಚ್ಚರಾಗದೆ ನಡೆಯುತ್ತಾ ಹೋಗುವುದನ್ನು ನಾ ಬಲ್ಲೆ. ಆದರೂ ಶಾಭಾಸ, ಡಾಕ್ಟರೇ, ನೀವು ಎಲ್ಲೂ ಕುಸಿದು ಬೀಳಲಿಲ್ಲ, ಮೂಳೆ ಮುರಿದು ಕೊಳ್ಳಲಿಲ್ಲ. ಅಥವಾ ನಮ್ಮ ಬೈಬಲಿನಲ್ಲಿಯ ಸಂತರು ಹೇಳಿದಂತೆ ಅಬಸಲಾಂತನಂತೆ,

ಎಲ್ಲೂ ಮರಕ್ಕೆ ಜೋತುಬಿದ್ದು ಘಾಶಿಯಾಗಲಿಲ್ಲ. ಆತ ನಿಮ್ಮಂತೆಯೇ ಒಬ್ಬ ಚಂದ ಜವಾನನಾಗಿದ್ದ.

'ವಾಜಿಮಿ', ಮುದಿ ತಿಮೊಥಿ ಭಾವಿಕತನದಲ್ಲಿ ಅಂದ, 'ಇವರ ಬೂಟಿನ ಅಡಿಯಿಂದ ಹ್ಯಾಟಿನ ತುದಿಯವರೆಗೂ ಯಾವ ಕುಂದು ಕಲೆಯೂ ಇಲ್ಲ ನೋಡಿರಿ.'

'ಅಥವಾ ಇನ್ನೇನೂ ಇಲ್ಲದಿದ್ದರೂ ನೀವು ಗಾಯಗೊಂಡು ನೂರು ಚೂರಾಗುತಿದ್ದಿರಿ ; ಮತ್ತೆ ಈ ಸುತ್ತಿನಲ್ಲಿ ಏಳು ಮೈಲು ಹೋದರೂ ನಿಮ್ಮ ಕೈಕಾಲು ಮತ್ತೆ ಜೋಡಿಸಿ ಸರಿಪಡಿಸಲಿಕ್ಕೆ ಬೇರೆ ಯಾರೂ ನಿಮ್ಮ ಕಸಬಿನವ ಸಿಗುತಿದ್ದಿಲ್ಲ.'

ಇದೆಲ್ಲಾ ಪ್ರಭಾವಿಯಾದ ಭಾಷಣ ನಡೆಯುತ್ತಿರುವಾಗ ಫಿಟ್ಝಪಿಯರ್ಸ ಕುದುರೆಯಿಂದ ಇಳಿದನು. ಮತ್ತು ಗ್ರೇಸಳ ಭುಜವನ್ನು ಹಿಡಿದೇ ಅವಳೊಂದಿಗೆ ಸೆಟೆದುಕೊಂಡು ಒಳಗೆ ಹೋದನು. ಮೆಲಬರಿ ಕುದುರೆಯ ಕಡೆಗೆ ದಿಟ್ಟಿಸಿ ನೋಡುತ್ತಾ ನಿಂತನು. ಅದು ತೀರದಣಿದು ಹೋದುದರ ಜತೆಗೆ ಕೆಸರಿನಿಂದ ಮೈಯೆಲ್ಲ ರಾಡಿಮಾಡಿಕೊಂಡಿತ್ತು. ಆಳುಗಳು ಅದರ ಮೈಯನ್ನು ಉಜ್ಜುತ್ತಿರುವಾಗ, ಮೆಲಬರಿಯ ಮನಸ್ಸು, ಸ್ಥಾನಿಕವಲ್ಲದ ಆ ಕೆಸರಿನೊಂದಿಗೆ ಆ ಸರ್ಜನನು, ಗ್ರೇಸಳು ಕೈಹಿಡಿದಾಗ ಅರಿವು ಇಲ್ಲದೆ ಉಚ್ಚರಿಸಿದ ಆ ಹೆಸರು ಜೋಡಿಸಿತು. — 'ಫೆಲಿಸ್' ಈ ಫೆಲಿಸ್ ಯಾರು? ಅರೇ ಇದೇನು? ಆಕೆ ಶ್ರೀಮತಿ ಚಾರ್ಮಂದ! ಮತ್ತು ಅವನಿಗೆ ಗೊತ್ತಿದ್ದಂತೆ ಮಿಡಲ್‌ಟನ್ನಿನಲ್ಲಿ ವಾಸಿಸುತ್ತಿದ್ದವಳೂ ಅವಳೇ.

ಫಿಟ್ಝಪಿಯರ್ಸನ ಅರೆಎಚ್ಚತ್ತ ಆತ್ಮವನ್ನು ತುಂಬಿದ ಆ ಪ್ರತಿಮೆಯ ಮೇಲೆ ಮೆಲಬರಿ ಹಾರಿಬಿದ್ದಂತೆ ಇತ್ತು — ಈ ಪ್ರತಿಮೆಯಲ್ಲಿ ಆ ಮನಸ್ವಿನಿಯಾದ ಮಾನಿನಿಯ ಜತೆಗೆ ತಾರೆಗಳ ಬೆಳಕಿನಲ್ಲಿ ಹುಲ್ಲು ಹಾಸಿನಲ್ಲಿ ಆಗ ತಾನೆ ನಡೆದ ಸಂದರ್ಶನದ ಹೊರಳು ನೋಟವಿತ್ತು. ಆಕೆ ಅವನಿಗೆ ಅಲ್ಲಿ ಮತ್ತೆ ಬರಬೇಡವೆಂದು ಬೇಡಿಕೊಂಡಿದ್ದಳು. ಆದರೆ ಆ ಬೇಡಿಕೆಯ ದನಿಯ ಏರಿಳಿತಗಳು ಅವನಿಗೆ ಅದನ್ನು ಮುರಿಯುವಂತೆ ಉತ್ತೇಜನವನ್ನು ನೀಡಿದವು. 'ನೀನು ಇಲ್ಲಿ ಏನು ಮಾಡುವಿ? ನನ್ನನ್ನೇಕೆ ಅನುಸರಿಸಿ ಬರುವಿ? ಇನ್ನೊಬ್ಬಳು ನಿನ್ನವಳಾಗಿದ್ದಾಳೆ. ನೀನು ಬೇಲಿ ಏರಿ ದಾಟಿ ಬರುವದನ್ನು ಕಂಡರೆ ಅವರು ನಿನ್ನನ್ನು ಕಳ್ಳನೆಂದು ಹಿಡಿದು ಹಾಕಬಹುದು. ಅವನು ಒತ್ತಿಒತ್ತಿ ಕೇಳಿದ ಪ್ರಶ್ನೆಗಳಿಗೆ ಅವಳು ಕ್ಷುಬ್ಧವಾಗಿ ಒಪ್ಪಿಕೊಂಡಿದ್ದಳು. ಮಿಡಲ್‌ಟನ್ನಿಗೆ ಅವಳ ಭೆಟ್ಟಿ ಆ ರೋಗಿಯಾದ ಆಪ್ತಳಿಗಾಗಿ ಎಂಬುದಕ್ಕಿಂತ, ಅವನ ಮನೆಯ ಹತ್ತಿರವೆ ಉಳಿದರೆ ತಮ್ಮ ದೌರ್ಬಲ್ಯ ವ್ಯಕ್ತವಾಗಬಹುದೆಂಬ ನಾಚಿಕೆಗೆಟ್ಟ ಭಯಕ್ಕಾಗಿಯೇ ಎಂದೆನ್ನಬಹುದಿತ್ತು. ಅಂದಾಗ ಇದೊಂದು ಫಿಟ್ಝಪಿಯರ್ಸನಿಗೆ ದಿಗ್ವಿಜಯ ; ಬಡವನಾಗಿದ್ದರೂ ತೊಡಕಿನಲ್ಲಿದ್ದರೂ ಆ ಚೆಲುವೆಯನ್ನು ಇಷ್ಟೆಲ್ಲ ವರ್ಷ ವಿಲಂಬದಿಂದಾದರೂ ಗೆದ್ದೆನೆಂಬುವ ಅರಿವು. ಇತರ ಹೃದಯಗಳು ಯಾವದಕ್ಕಾಗಿ ನೆತ್ತರ ಬಸಿಯುವಂತಿತ್ತೋ ಆ ಹೃದಯ ತನಗಾಗಿ ಬಸಿಯುವದೆಂಬ ಆ ಭಾವನೆ ತುಂಬಾ ಉತ್ತೇಜಕವಾಗಿತ್ತು.

ಕುದುರೆಯ ಆರೈಕೆಯ ಕೆಲಸ ಮುಗಿದ ನಂತರ ಮೆಲಬರಿ ತನ್ನ ಅಂಗಳದಲ್ಲಿ ಅಲ್ಲಲ್ಲಿ ಅಸ್ವಸ್ಥನಾಗಿ ನಿಂತನು. ಆತ ಇತ್ತೀಚೆಗೆ ತನ್ನ ಕೌಟುಂಬಿಕ ಚಿಂತೆಗಳ ಬಗೆಗೆ ಕೆಲವೊಂದು ಸುಖಕರವಾದ ಅಭಿಪ್ರಾಯಗಳನ್ನು ತಳೆದಿದ್ದನು. ಆದರೆ ಅವುಗಳ ಮಟ್ಟಿಗೆ ಇಂದು ನಿಷ್ಠುರವಾಗಿ ಚಲವಿಚಲ ಹೊಂದಿದನು. ಈಗ ಕೆಲವು ದಿನಗಳಿಂದ ಗ್ರೇಸಳು ಅವನ ಸಹವಾಸವನ್ನೆ ಹೆಚ್ಚು ಹೆಚ್ಚಾಗಿ ಅರಸುತ್ತಿದ್ದಳು. ಅವನ ಅಡುಗೆಯ ಮನೆ ಮತ್ತು ಹಿತ್ತಲು ಮನೆಗಳ ಮೇಲ್ವಿಚಾರಣೆಯಲ್ಲಿ ಮಲತಾಯಿಯೊಂದಿಗೆ ಗಮನವೀಯುವುದರಲ್ಲಿಯೇ ಹೆಚ್ಚಿನ ಮೆಚ್ಚುಗೆ ಕಾಣಿಸುತ್ತಿದ್ದಳು. ತನ್ನ ಕೋಣೆಗಳ ಚಿಕ್ಕಪುಟ್ಟ ಕೆಲಸಬೊಗಸೆಗಳಲ್ಲಿಯೇ ತೊಡಗಿರುತ್ತಿದ್ದಳು. ತನ್ನದೆ ಸ್ವಂತ ಹೂಡಿದ ಬಲೆಯಲ್ಲಿ ಅವಳು ತನ್ನ ಬದುಕಿನ ಸಮರ್ಪಕವಾದ ಕೇಂದ್ರಬಿಂದುವನ್ನು ಕಂಡುಕೊಳ್ಳಲಾರದೆ, ಸ್ವತಂತ್ರ ಹುಟ್ಟೊಂದನ್ನು ಕಟ್ಟಲು ಹಾರಿ ಹೊರಟುಹೋದ ದುರ್ಬಲರಾಣಿ ದುಂಬಿಯಂತೆ, ತಿರುಗಿ ತನ್ನ ಮೂಲದ ಹುಟ್ಟಿನಲ್ಲಿಯೆ ಬಂದು ಸುಳಿದಾಡುತ್ತಿದ್ದಳು. ಆದರೆ ಇದನ್ನೂ ಇಂಥ ಇತರ ಘಟನೆಗಳನ್ನೂ ಈಗಿನ ತನಕವೂ ಆತ ಅನ್ವಯಹಚ್ಚಿ ಅರ್ಥವಿಸಿಕೊಂಡಿದ್ದಿಲ್ಲ.

ಒಟ್ಟಾರೆ ಮನೆಯಲ್ಲಿ ಏನೋ ತಪ್ಪಾಗಿದೆ ಎಂಬ ಒಂದು ಭಯಾನಕ ಭಾವ ಅವನನ್ನು ಕವಿಯಿತು ; ಅವಳಿಗಾಗಿಯೆ ಅವನು ಬದುಕಿದ್ದು. ಈಗ ಅವಳಿಗೆ ಏನೇ ಅಸುಖ ಒದಗಿದರೆ ತಾನೊಬ್ಬನೆ ಅದಕ್ಕೆ ಹೊಣೆಗಾರನೆಂದು ಅನಿಸುವ ಭಾವವದು. ಅವಳನ್ನು ತನ್ನ ಬಳಿಯಲ್ಲಿಯೆ ತನ್ನ ಮನೆಯೊಳಗೆ ಇಟ್ಟುಕೊಳ್ಳಬೇಕೆಂದು, ಅದರ ಉತ್ತಮ ಭಾಗವನ್ನೆ ಫಿಟ್ಝಿಪಿಯರ್ಸನಿಗೆ ಬಿಟ್ಟುಕೊಟ್ಟು ಅವನು ಸ್ವತಃ ಅನೇಕಾನೇಕ ಅನಾನುಕೂಲತೆಗಳನ್ನು ಇದುರಿಸಿದ್ದನು. ಒಂದು ಮಾತಿಗೆ ಯಾವ ಅನುಮಾನವೂ ಇದ್ದಿಲ್ಲ. ಘಟನೆಗಳನ್ನು ಅವುಗಳ ಸಹಜಗತಿಯನ್ನು ಹಿಡಿಯಲು ಆತ ಬಿಟ್ಟಿದ್ದಾದರೆ, ಅವಳು ವಿಂಟರಬೋರ್ನನನ್ನೆ ಒಪ್ಪಿಕೊಳ್ಳುತ್ತಿದ್ದಳು. ಮತ್ತು ಆ ತರುಣನ ಕುಟುಂಬದ ಪುನರ್ನಿವೇಶನವಾಗಬೇಕೆಂಬ ಅವನ ಹಳೆಯ ಕನಸು ಈಡೇರುತ್ತಿತ್ತು.

ಫಿಟ್ಝಿಪಿಯರ್ಸನು ಗ್ರೇಸಳ ಹೊರತಾಗಿ ಬೇರೆ ಯಾವ ಪ್ರಾಣಿಯ ಮೇಲೂ ಒಂದು ಕ್ಷಣವಾದರೂ ಕಣ್ಣು ಹಾಯಿಸಬಹುದೆಂಬ ಸಂಗತಿಯೇ ಮೆಲಬರಿಗೆ ತುಂಬ ಶೋಕವನ್ನು ವಿಸ್ಮಯವನ್ನು ಉಂಟುಮಾಡಿತು. ಅವನು ಬಾಳಿಬಂದ ಸರಳ ಜೀವನದಲ್ಲಿ, ಮದುವೆಯ ನಂತರ ಮನುಷ್ಯನು ದಾಂಪತ್ಯಕ್ಕೆ ದ್ರೋಹವೆಸಗಬಹುದೆಂಬ ಕಲ್ಪನೆಯೆ ಅವನಿಗೆ ತೋಚಿದ್ದಿಲ್ಲ. ಫಿಟ್ಝಿಪಿಯರ್ಸ ಶ್ರೀಮತಿ ಚಾರ್ಮಂದಳ ಉನ್ನತ ಪ್ರತಿಷ್ಠೆಯ ಆ ಎತ್ತರಕ್ಕೆ ಲಗ್ಗೆ ಹತ್ತುವುದು ಅಲ್ಲಾವುದ್ದೀನ ಪದ್ಮಿನಿಯನ್ನು ಪ್ರತ್ಯಕ್ಷ ನೋಡಲು ದುಡುಕಿದಂತೆ. ಇದು ಮೆಲಬರಿಗೆ ಆಶ್ಚರ್ಯ ಉಂಟುಮಾಡಬಹುದಿತ್ತು. ಆದರೆ ಆ ನಿಟ್ಟಿನಿಂದಲೂ ಪ್ರೋತ್ಸಾಹ ಬಂದಿರಬೇಕೆಂದು ಆತ ಅಂದಾಜು ಮಾಡಿದ್ದನು. ಆ ಇಬ್ಬರು ಅತಿಚತುರ ವ್ಯಕ್ತಿಗಳ ವಿಕಾರವಶತೆಯ ಪ್ರತಿಕಾರಕ್ಕಾಗಿ ಅವನೂ ಅವನ ಸರಳಜೀವಿ ಗ್ರೇಸಳೂ ಏನು ಮಾಡಬಹುದಿತ್ತು? ಅವರಿಬ್ಬರೂ ವಿಶ್ವದ ವ್ಯಾವಹಾರ

ದಲ್ಲಿ ಪಳಗಿದ ಪಟುಗಳು. ವಿಜಯದ ಎಲ್ಲ ಉಪಾಯ — ಉಪಕರಣಗಳಿಂದ ಸಜ್ಜಾದವರು. ಇಂಥ ಈ ಇದಿರಾಟದಲ್ಲಿ ಈ ಮನೆವಾಳ್ತೆಯ ಮರದ ವ್ಯಾಪಾರಿಗೆ ತಾನು ತೀರ ನಿಕೃಷ್ಟನೆಂಬ ಭಾವನೆ ಆಯಿತು. ಆಧುನಿಕ ಯುದ್ಧತಂತ್ರದ ಖಚಿತ ಶಸ್ತ್ರಾಸ್ತ್ರಗಳ ಇದುರು ಬಿಲ್ಲು ಬಾಣ ಹಿಡಿದ ಒಬ್ಬ ವನಚರನಂತೆ.

ಹಗಲು ಮುಂದರಿಯುತಿದ್ದಂತೆ ಗ್ರೇಸಳು ಮನೆಯೊಳಗಿಂದ ಹೊರಗೆ ಬಂದಳು. ಹಳ್ಳಿಯು ಮೌನವಾಗಿತ್ತು. ಬಹಳಷ್ಟು ಹಳ್ಳಿಗರು ಜಾತ್ರೆಗೆ ಹೋಗಿದ್ದರು. ಫಿಟ್ಜಪಿಯರ್ಸ ಹಾಸಿಗೆ ಹಿಡಿದಿದ್ದನು — ನಿದ್ದೆಯಲ್ಲಿ. ತನ್ನ ದಣಿವನ್ನೆಲ್ಲ ಮಲಗಿಯೇ ಕಳೆದುಕೊಳ್ಳುತಿದ್ದನು. ಅವಳು ಲಾಯಕ್ಕೆ ಹೋಗಿ ಬಡಡಾರ್ಲಿಂಗ ಕುದುರೆಯನ್ನು ನೋಡಿದಳು. ಬಹುಶಃ ಜೈಲ್ಸ ವಿಂಟರಬೋರ್ನನೆ ಅವಳಿಗಾಗಿ ಇಂಥ ಬುದ್ಧಿವಂತಿಗೆ ಮತ್ತು ಸಾಧುತನದ ಕುದುರೆಯನ್ನು ಪಡೆದುಕೊಟ್ಟು, ಅವಳ ಗಂಡನ ಬಾಳನ್ನು ಉಳಿಸಲು ಕಾರಣನಾದನು. ಈ ವಿಚಿತ್ರ ವಿಚಾರದ ಮೇಲೆಯೇ ಅವಳು ತಡೆದಳು ಮತ್ತು ಆಗಲೆ ಅವಳ ಬೆನ್ನಿಗೆ ಅವಳ ತಂದೆ ಕಾಣಿಸಿಕೊಂಡನು.

ಅವನ ವ್ಯಥೆಗೊಂಡ ಕಣ್ಣಿನ ಮಬ್ಬಿನಿಂದ, ಅವನಿಗೆ ಗೊತ್ತಾಗಿದೆ ಎಂದು, ಅನೈಚ್ಛಿಕವಾಗಿಯೇ ಅವನ ಮುಖದ ಬೇರೆ ಬೇರೆ ಎಡೆಯಲ್ಲಿ ನಡೆದ ಚಲನ, ಸ್ಪಂದನ, ಕಂಪನಗಳೇ ಮೊದಲಾದ ಚರ್ಯೆಗಳಿಂದ ಅವನು ಕಂಡುಕೊಂಡಳು. ವಸ್ತುಸ್ಥಿತಿ ಹೇಗೆ ಇರಬೇಕಿತ್ತೋ ಹಾಗೆ ಇಲ್ಲವೆಂಬುದು ಅವನಿಗೆ ತಿಳಿದುಬಂದಿದೆ.

'ಅವನು ಎಲ್ಲೋ ತಡೆಹಿಡಿಯಲಾದನು. ಕಳೆದ ರಾತ್ರೆ, ನನಗನಿಸುತ್ತದೆ,' ಮೆಲಬರಿ ಅಂದನು.

'ಓ ಹೌದು. ಕೊಳ್ಳದಲ್ಲಿ ಒಂದು ಕೆಟ್ಟ ಕೇಸಂತೆ' ಆಕೆ ಶಾಂತವಾಗಿಯೇ ಉತ್ತರಕೊಟ್ಟಳು.

'ಆದಾಗ್ಯೂ ಆತ ಮನೆಯೊಳಗೆ ಉಳಿಯಬೇಕಿತ್ತು.'

'ಆದರೆ, ಅವರು ಹಾಗೆ ಮಾಡುವಂತೆ ಇದ್ದಿಲ್ಲವಪ್ಪಾ'

ಅವಳ ತಂದೆ ಆಚೆಗೆ ಹೊರಳಿದನು. ತನ್ನ ಸತ್ಯವಂತ ಮಗಳು ಹೀಗೆ ಮಾತಾಡ ಬೇಕಾಗಿ ಬಂದ ಈ ನಾಚಿಗೆಗೇಡನ್ನು ಆತ ಸಹಿಸದಾದನು.

ಆ ರಾತ್ರೆ ಭಾರಭೂತವಾದ ಚಿಂತೆ ಮೆಲಬರಿಯ ದಿಂಬಿನ ಬದಿಗೆ ಕೂತಿತ್ತು. ಮತ್ತು ಅವನ ಸೆಟೆದು ಕೊರಡಾದ ಕೈಕಾಲು ಅದರ ಉಪಸ್ಥಿತಿಯಿಂದ ಅಸ್ವಸ್ಥ ವಾಗಿದ್ದವು.

'ನಾನಿಲ್ಲಿ ಇನ್ನೂ ಬಿದ್ದಿರಲಾರೆ', ಆತ ಗೊಣಗಿದನು. ಒಂದು ದೀಪವನ್ನು ಹಚ್ಚಿಕೊಂಡು ಆತ ಕೋಣೆಯಲ್ಲೆಲ್ಲ ಅಡ್ಡಾಡಿದನು. 'ನಾನೇನು ಮಾಡಿದೆ? ಅವಳಿ ಗಾಗಿ ನಾನೇನು ಮಾಡಿದೆ? ಆತ ತನ್ನ ಹಂಚಿಕೆ ಹಾಕಿದ್ದ. ನಾನು ಋಣಮುಕ್ತ ಮಾಡಿಕೊಳ್ಳಬೇಕಾದ ಮನುಷ್ಯನ ಮಗನನ್ನೇ ಅವಳು ಮದುವೆಯಾಗಬೇಕೆಂದು. ನಿನಗೆ ನೆನಪಿದೆಯೇ ಲೂಸೀ, ನಿನಗೆ ನಾನು ಅದನ್ನೆಲ್ಲ ಆ ರಾತ್ರೆ ಅವಳು ಮನೆಗೆ ಬರುವ

ಮುಂಚೆ ಹೇಳಿದ್ದು? ಓ, ನಾನು ಬರೆ ಯೋಗ್ಯವಾದದ್ದನ್ನೆ ಮಾಡುವುದರಲ್ಲಿ ಸಮಾಧಾನ ತಾಳಲಿಲ್ಲ. ಅದಕ್ಕೂ ಹೆಚ್ಚನ್ನು ಮಾಡಲು ಹೋದೆ.' 'ಜಾರ್ಜ, ಅಗತ್ಯವಿಲ್ಲದೆ ಸುಮ್ಮನೆ ನಿನ್ನನ್ನು ಕರಗಸಕ್ಕೆ ಹಾಕಿಕೊಳ್ಳಬೇಡ' ಅವಳೆಂದಳು. 'ಸಂಗತಿ ಇಷ್ಟು ಕೆಟ್ಟು ವಿಕೋಪಕ್ಕೆ ಹೋಗಿದೆಯೆಂದು ನಾನು ನಂಬುವದಿಲ್ಲ. ಶ್ರೀಮತಿ ಚಾರ್ಮಂದಳೆ ಅವನಿಗೆ ಪ್ರೋತ್ಸಾಹ ಕೊಟ್ಟಿರಬೇಕೆಂದು ನಾನು ನಂಬಲಾರೆ. ಅವಳು ಹೀಗೆ ಬಹಳಷ್ಟು ಮಂದಿಗೆ ಪ್ರೋತ್ಸಾಹಿಸಿರಬಹುದೆಂದು ಭಾವಿಸಿದರೂ ಈಗ ಮತ್ತೆ ಹಾಗೆ ಮಾಡಲು ಅವಳಿಗೆ ಉದ್ದೇಶವೇನೂ ಇರುವದಿಲ್ಲ. ಅವಳು ಇನ್ನು ಪೂರ್ತಿ ಗುಣವಾಗಿರಲಿಕ್ಕಿಲ್ಲ. ಮತ್ತು ಇನ್ನೊಬ್ಬ ಡಾಕ್ಟರನಿಗೆ ಹತ್ತಿರ ಬರಲು ಬಿಡುತ್ತಿರಲಿಕ್ಕಿಲ್ಲ. ಇದಕ್ಕಿಂತ ಹೆಚ್ಚು ಸಂಭವ ಇನ್ನೇನಿದೆ?'

ಆದರೆ ಆತ ಗಮನ ಕೊಡಲಿಲ್ಲ. 'ಗ್ರೇಸ ದಿನನಿತ್ಯವೂ ಅದೆಷ್ಟು ಕೆಲಸವಾಸಿಯಾಗಿರುತ್ತಿದ್ದಳು. ಇಲ್ಲೊಂದು ಪರದೆ ಹಚ್ಚು; ಅಲ್ಲೊಂದು ಮೊಳೆ ಹೊಡೆ. ಆದರೆ ಈಗ ಯಾವ ಕೆಲಸದಲ್ಲಿಯೂ ಅವಳಿಗೆ ಪರಿವೆ ಇಲ್ಲ.'

'ಶ್ರೀಮತಿ ಚಾರ್ಮಂದಳ ಬಗೆಗೆ ನಿಮಗೆ ಏನಾದರೂ ಗೊತ್ತೇ? ಅದೇನಾದರೂ ಈ ವಿಷಯಕ್ಕೆ ಹೆಚ್ಚು ಬೆಳಕು ಚೆಲ್ಲಬಹುದು. ಮುದಿ ಚಾರ್ಮಂದನ ಹೆಂಡತಿಯೆಂದ ಅವಳು ೪-೫ ವರ್ಷ ಹಿಂದೆ ಇಲ್ಲಿ ಬಂದಳು. ಆ ಮುಂಚೆ ಆಕೆಯ ಬಗೆಗೆ ಯಾರಿಗೂ ಏನೂ ಗೊತ್ತಿದ್ದಿಲ್ಲ. ಆ ಬಗ್ಗೆ ಚೌಕಾಶಿ ಮಾಡುವದಿಲ್ಲವೇಕೆ? ಆ ಮೇಲೆ ನೀವು ಕಾದು ನೋಡಿರಿ. ತುಂಬ ಅವಕಾಶ ಸಿಗಬಹುದು. ಆಕ್ರೋಶಕ್ಕೆ ಸಾಕಷ್ಟು ಸಮಯ ಇದ್ದೇ ಇದೆ — ಅಂಥ ಆಕ್ರೋಶದ ಪ್ರಸಂಗವೇ ಆಗಿದ್ದರೆ. ಸಂಕಟ ಬರುವ ಮುಂಚೆಯೇ ಅದನ್ನು ನಡುದಾರಿಗೆ ಹೋಗಿ ಇದಿರುಗೊಳ್ಳುವುದು ಹಾಳು.'

ಹೀಗೆ ಮುನ್ನೋಟದ ಬಗೆಗೆ ಆಕೆ ಹೇಳಿದ ವಿಚಾರದಲ್ಲಿ ಒಳ್ಳೆಯ ತಥ್ಯವಿತ್ತು. ಮೆಲಬರಿ ಚೌಕಾಶಿ ಮಾಡಿ ಕಾದು ನೋಡುವ ನಿರ್ಧಾರಕ್ಕೆ ಬಂದನು. ಇನ್ನು ಆಕೆ ಬಿಡಲಿಲ್ಲ. ಆದರೆ ನಡುನಡುವೆ ಭೀತಿಯಿಂದ ದಬ್ಬಾಳಿಕೆಗೆ ಬಲಿಯಾಗುತಿದ್ದನು.

೩೧

ಗ್ರೇಸಳನ್ನು ತಂದೆ ಎಲ್ಲ ರೀತಿಯಲ್ಲಿಯೂ ಪರೀಕ್ಷಿಸಿ ನೋಡಿದನು. ಆದರೆ ಆಕೆ ಏನನ್ನು ಒಪ್ಪಿಕೊಳ್ಳಲೊಲ್ಲಳು. ಆದ್ದರಿಂದ ಸದ್ಯಕ್ಕೆ ಅವನು ಬರೆ ಕಾಯ್ದು ನೋಡುವದೊಂದೇ ಆಯಿತು.

ತನ್ನ ಮುದ್ದು ಮಮತೆಯ ಮಗಳು ಹೀಗೆ ಧಿಕ್ಕರಿಸಲ್ಪಡುತಿದ್ದಾಳೆಂಬ

ಸಂಶಯವು ಮೆಲಬರಿಯ ಸ್ವಭಾವದಲ್ಲಿಯೇ ಒಂದು ಬದಲಾವಣೆಯುಂಟುಮಾಡಿತು. ಒಬ್ಬ ಚಾಣಾಕ್ಷ ಗ್ರಾಮಸ್ಥನಿಗೆ ತನ್ನ ಚಾಣಾಕ್ಷತನದ ದುರುಪಯೋಗವನ್ನು ಮಂದಿ ಮಾಡಿಕೊಳ್ಳುತಿದ್ದಾರೆಂದು ಗೊತ್ತಾದರೆ ಅವನಷ್ಟು ಸಂಶಯಾತ್ಮ ಇನ್ನಾರೂ ಆಗ ಲಾರರು. ಇದುವರೆಗೆ ಮೆಲಬರಿಗೆ ತನ್ನ ಸಂಭಾವಿತ ಅಳಿಯದೇವರ ಬಗೆಗೆ ಒಂದು ಆತ್ಮೀಯ ಭರವಸೆಯ ಬಿಚ್ಚು ಮನಸ್ಸು ಇತ್ತು. ಅದರ ಬದಲು ಈಗ ಮಾತು, ಕೃತಿ ಮನೋವೃತ್ತಿಯಲ್ಲಿ ಅವನಿಗೆ ಅಪಾಯವನ್ನೇ ಬಗೆಯುವ ಬೆಕ್ಕಿನಂಥ ಕಳ್ಳಹೊಂಚು ಮನೆಮಾಡಿಕೊಂಡಿತು.

ಅವನಿಗೆ ಗೊತ್ತು; ಒಬ್ಬ ಗಂಡಸಿಗೆ ಇಡಿಯ ಜೀವಮಾನಕ್ಕಾಗಿ ಒಪ್ಪಿಸಿಯಾದ ಒಂದು ಹೆಣ್ಣು, ತನ್ನ ಪಾಲಿಗೆ ಬಂದ ಬದುಕನ್ನು ಬಂದಂತೆ ಬರಮಾಡಿಕೊಂಡು, ಹೊರಗಿನ ಹಸ್ತಕ್ಷೇಪವಿಲ್ಲದೆ ಅದನ್ನು ಆದಷ್ಟು ಉತ್ತಮವಾಗಿ ಉಳಿಸಿಕೊಳ್ಳುವಳು. ಆದರೆ ಮೊದಲ ಸಲ ಅವನು ತನಗೇ ಈ ಪ್ರಶ್ನೆ ಹಾಕಿಕೊಂಡನು — ಈ ರೀತಿ ಸಾಮಾನ್ಯವಾಗಿ ಏಕೆ ಆಗಬೇಕು? ಹೆಣ್ಣು ಹೀಗೆ ಏಕೆ ನಡೆಯಬೇಕು? ಅಲ್ಲದೆ, ಇದು ಇತರ ಪ್ರಕರಣಗಳಂತೆ ಇದ್ದಿಲ್ಲ. ಗ್ರೇಸಳು ಇನ್ನೇನೇ ಇದ್ದರೂ ಸಾಮಾನ್ಯ ಹೆಂಗಸಲ್ಲ — ಎಂಬ ಮಾತನ್ನು ಬದಿಗಿಟ್ಟರೂ, ಅವಳ ವಿಶಿಷ್ಟವಾದ ಸನ್ನಿವೇಶವು— ಸಮಾಜದ ಎರಡು ಅಂತಸ್ತುಗಳ ನಡುವೆ, ನಡುಹವೆಯಲ್ಲಿ ನಿಂತಂತೆ, ಜತೆಗೆ ಹಿಂಟೋಕ ಹಳ್ಳಿಯ ಏಕಾಂತವಾಸವು, ಇವೆರಡೂ ಕೂಡಿ ಗಂಡನ ಉಪೇಕ್ಷೆಯನ್ನು ಹೆಚ್ಚಿನ ದುರಂತವನ್ನಾಗಿ ಮಾಡಿರುತ್ತವೆ. ಆಸರೆ ಪಡೆಯಲು, ಸಾಂತ್ವನೆ ಪಡೆಯಲು ಆಪ್ತಪರಿವಾರದ ವಲಯ ದೊಡ್ಡದಿದ್ದವರ ಮಾತು ಬೇರೆ. ಬೇರೆ ಹೆಂಡಂದಿರ ತಂದೆ ಯರು ಏನೇ ಮಾಡಲಿ ಬಿಡಲಿ, ಜಾಣ್ಮೆಯಿಂದಲೋ, ಇಲ್ಲದೆಯೋ, ಮೆಲಬರಿ ನಿರ್ಧರಿಸಿದನು — ಮಗಳ ಹೋರಾಟದ ಜೊತೆಗೆ ತಾನೂ ಹೋರಾಡಬೇಕೆಂದು.

ಶ್ರೀಮತಿ ಚಾರ್ಮಂದ ಮರಳಿ ಬಂದಿದ್ದಳು. ಆದರೆ ಹಿಂಟೋಕ ದೊಡ್ಡ ಮನೆಯಲ್ಲಿ ಅದರ ಯಾವ ಸುಳಿವನ್ನೂ ಕಾಣಿಸಲಿಲ್ಲ. ಅಷ್ಟು ಸದ್ದಿಲ್ಲದೆ ಅವಳು ಅದನ್ನು ಪ್ರವೇಶ ಮಾಡಿದ್ದಳು. ಮಾಗಿಯೂ ನಡುನಡುಗುತ್ತ ಕೊನೆಗೊಂಡಿತ್ತು. ಒಂದು ದಿನ ಹೂದೋಟಗಳಿಂದ ಏನೋ ಒಂದು ಮಾಯವಾಗಿ ಹೋದಂತೆ ಇತ್ತು. ಮೊದಲು ಮಂಜಿನ ಹರಿತವಾದ ಹೊಡೆತಕ್ಕೆ ಗಿಡ-ಬಳ್ಳಿಗಳ ಎಲೆಗಳು ಮುದುಡಿ ಕೊಂಡವು. ಹರಕು ಚಿಂದಿಗಳಂತೆ ಟೊಂಗೆಗಳ ಮೇಲೆ ತೂಗಹತ್ತಿದವು; ಬೆಟ್ಟದಲ್ಲಿ ಎಲೆಗಳು ಈವರೆಗೆ ನಿಧಾನವಾಗಿ, ವಿರಾಮವಾಗಿ ಉದುರುತಿದ್ದವು. ಈಗ ಭರಭರನೆ ರಾಶಿರಾಶಿಯಾಗಿ ಬೀಳಹತ್ತಿದವು, ಮತ್ತು ಹಿಂದೆ ತಲೆಯ ಮೇಲೆ ಕಿಕ್ಕಿರಿದ ಹೊಂಬಣ್ಣ ಗಳೆಲ್ಲ ಈಗ ಗತಿಗೆಟ್ಟ ಸೊಪ್ಪು-ಸದೆಯ ರಾಶಿಯಾಗಿ ಕಾಲಕೆಳಗೆ ರಾಶಿ ಒಟ್ಟಿದಂತೆ ಬಿದ್ದಿದ್ದವು. ಅಲ್ಲಿ ಅವು ಕೋಟಿಗಟ್ಟಲೆ ಕೆಂಪೇರಿ, ಉರುಟಾಗಿ, ಸುರುಳಿಸುರುಳಿಯಾಗಿ ಕೊಳೆಯಹತ್ತಿದವು.

ಶ್ರೀಮತಿ ಚಾರ್ಮಂದಳ ಅಸ್ತಿತ್ವದಲ್ಲಿ, ಈ ಹಂಗಾಮಿನಲ್ಲಿ, ಸಂಶಯಾಸ್ಪದ

ವಾದ ಲಕ್ಷಣಗಳು ಎರಡೇ ಇದ್ದುವು. ಒಂದು, ಆಕೆ ಯಾವದೆ ಸಂಗಾತಿ, ಸಂಬಂಧಿಕ ರೊಂದಿಗೆ ವಾಸಿಸುತಿದ್ದಿಲ್ಲ. ಇದು ಅವಳ ವಯಸ್ಸು, ಆಕರ್ಷಣೆಗಳನ್ನೆಲ್ಲ ಗಮನಿಸಿದಾಗ ಹಳ್ಳಿಗಾಡಿನ ಆ ಏಕಾಂತ ಮನೆಯಲ್ಲಿ ಅಂಥ ಹರಯದ ವಿಧವೆಗೆ ಕೆಲಮಟ್ಟಿಗೆ ಅಸಾಮಾನ್ಯ ವರ್ತನೆಯಾಗಿತ್ತು ; ಇನ್ನೊಂದು, ಹಿಂದಿನ ವರ್ಷಗಳಲ್ಲಿಯಂತೆ, ಆಕೆ ಚಳಿ ಗಾಲ ಕಳೆಯಲು ಯುರೋಪಕ್ಕೆ ಹೊರಡಲಿಲ್ಲ.

ಫಿಟ್ಜ಼ಪಿಯರ್ಸನ ಮಟ್ಟಿಗೆ, ಕಳೆದ ಮಾಗಿಯ ಕಾಲದ ಚಟಗಳಿಂದ ಬದಲಾದ ಮಾರ್ಪಾಟವೆಂದರೆ, ಅವನ ಹಳೆಯ ವಸತಿಯಿಂದ ಹೊಸಮನೆಗೆ ಬಂದಂದಿನಿಂದ ಅವನು ರಾತ್ರಿಯ ವ್ಯಾಸಂಗವನ್ನು ಬಿಟ್ಟು ಕೊಟ್ಟಿದ್ದನು. ಅವನ ಹೊಸಮನೆಯಿಂದ ನಡುರಾತ್ರಿಯಲ್ಲಿ ದೀಪ ಉರಿಯುತಿದ್ದಿಲ್ಲ.

ಈ ಸಂಶಯಿತರು ಒಬ್ಬರನ್ನೊಬ್ಬರು ಭೆಟ್ಟಿಯಾಗುತ್ತಲೆ ಇದ್ದಾರೆ. ಅದು ಅತ್ಯಂತ ಚಾತುರ್ಯದ ಉಪಾಯಗಾರಿಕೆಯಿಂದ. ಅದು ಮೆಲಬರಿಯ ಜಾಗ್ರತ ವೀಕ್ಷಣೆಗೂ ಮೀರಿ ನಡೆಯುತ್ತಿರಬೇಕು. ಅವಳ ಮನೆಗೆ ಡಾಕ್ಟರನು ಸಹಜ ಹೋಗಿ ಬರುವುದು, ಅಂಥದೇನೂ ಅಕ್ರಮವೆನಿಸುತ್ತಿದ್ದಿಲ್ಲ. ಮತ್ತು ಹಾಗೆ ಎರಡು ಮೂರು ಸಲ ಆತ ಭೆಟ್ಟಿ ಕೊಟ್ಟಿದ್ದೂ ಖಂಡಿತ. ಆ ಭೆಟ್ಟಿಗಳಲ್ಲಿ ಏನೇನು ನಡೆದಿರಬಹುದೆಂಬುದು ಅದರಲ್ಲಿ ಭಾಗವಹಿಸಿದ ಇಬ್ಬರಿಗೇ ಗೊತ್ತು ; ಆದರೆ ಫೆಲಿಸ್ ಚಾರ್ಮಂದಳು ಯಾರೋ ಒಬ್ಬರ ಪ್ರಭಾವಕ್ಕೆ ಒಳಗಾಗಿ ಇದ್ದಾಳೆ ಎಂಬುದು ಮೆಲಬರಿ ಕಂಡು ಕೊಳ್ಳುವಂಥ ಒಂದು ಸಂದರ್ಭ ಶೀಘ್ರವೆ ಒದಗಿಬಂದಿತು.

ಚಳಿಗಾಲ ಸಾಗಿ ಬಂದಿತ್ತು. ಮುಂಜಾನೆ ಸಂಜೆ ಗೂಗೆಗಳ ಗದ್ದಲ ಹೆಚ್ಚಾಗ ಹತ್ತಿತ್ತು. ಬೆಟ್ಟದ ಪಾರಿವಾಳಗಳ ಹಿಂಡು ಮತ್ತೆ ಮುಂದೆ ಮುಂದೆ ಕಾಣಿಸಿಕೊಳ್ಳ ತೊಡಗಿದ್ದವು. ಒಂದು ದಿನ, ಫೆಬ್ರುವರಿಯಲ್ಲಿ, ಫಿಟ್ಜ಼ಪಿಯರ್ಸ ದಂಪತಿಯ ಮದುವೆ ಯಾಗಿ ಆರು ತಿಂಗಳು ಕಳೆದ ಮೇಲೆ, ಮೆಲಬರಿ ಹಿರಿಯ ಹಿಂಟಾಕಿನಿಂದ ಕಿರಿಯ ಹಿಂಟಾಕಿಗೆ ನಡೆದು ಬರುತ್ತಿದ್ದನು. ಆಗ ಆತ ತನ್ನ ಮುಂದುಗಡೆ ಸರ್ಜನನು ನಡೆಯುತ್ತಿರುವುದನ್ನು ನೋಡಿದನು. ಮೆಲಬರಿ ಮುಂದಾಗಿ ಅವನ ಬೆನ್ನುಗಟ್ಟ ಬಹುದಿತ್ತು. ಆದರೆ ಅದೇ ಕ್ಷಣಕ್ಕೆ ಫಿಟ್ಜ಼ಪಿಯರ್ಸ ಅಲ್ಲಿಯೇ ಪಕ್ಕದ ಒಂದು ಗೇಟಿನಲ್ಲಿ ಹೊರಳಿದನು. ಆ ಗೇಟಿನಿಂದ ಒಂದು ಅಡ್ಡ ತಿಡ್ಡ ದಾರಿ ಆ ಬೆಟ್ಟದ ಇತ್ತ ಕಡೆಯ ಮರಗಳ ನಡುವಿನಿಂದ ಹಾಯುತ್ತಿತ್ತು. ಅದು ಎಲ್ಲಿಗೆಂಬುದು ನೇಮವಿದ್ದಿಲ್ಲ. ಇಂಥ ಅನೇಕ ದಾರಿಗಳು ಅಲ್ಲಲ್ಲಿ ಮರಗಳ ಕಾನುಗಳೊಳಗಿಂದ ಹೋಗಿದ್ದವು. ಅವುಗಳ ನಾಗಮೋಡಿಯ ಚೆಲುವೇ ಅವುಗಳ ಅಸ್ತಿತ್ವಕ್ಕೆ ಒಂದು ಆಧಾರವಾಗಿತ್ತು.

ಅದೇ ಸಮಯಕ್ಕೆ ಫೆಲಿಸ್‌ಳೂ ಈ ಮರದ ವ್ಯಾಪಾರಿಯನ್ನು ಹಿಂದೆ ಹಾಕಿ ಸಣ್ಣ 'ಬುಟ್ಟಿಯ ಗಾಡಿ'ಯಲ್ಲಿ ಪುಟಿದೋಡುತ್ತ ಬಂದಳು. ತನ್ನ ಆಸ್ತಿಯಲ್ಲಿ ಸುತ್ತಾಡಿ ಬರಲು ಅವಳು ಬಹಳ ಸಲ ಪುಟ್ಟ ಗಾಡಿಯನ್ನು, ಸಂಗಡ ಆಳನ್ನು ತರದೆ, ತಾನೇ ಅಟ್ಟಕೊಂಡು ಅಲೆದಾಡುತ್ತಿದ್ದದ್ದುಂಟು. ಅವಳೂ ಅದೇ ಗೇಟಿನೊಳಗಿಂದ

ನಾಗವೋಡಿಯ ದಾರಿಗೆ ಹೊರಳಿದಳು. ಆಕೆ ಮೆಲಬರಿಯನ್ನಾಗಲಿ, ತೋರಿಕೆಯ ಮಟ್ಟಿಗೆ ಫಿಟ್ಝಪಿಯರ್ಸನನ್ನಾಗಲಿ ಗಮನಿಸಿದಂತೆ ಇದ್ದಿಲ್ಲ.

ಮೆಲಬರಿ ಕೂಡಲೆ ಆ ಸ್ಥಳಕ್ಕೆ ಬಂದು ತಲ್ಪಿದನು. ಅವನ ಅರುವತ್ತು ವರ್ಷದ ಪ್ರಾಯ, ಸಂದಿ ಮೂಳೆಗಳ ನೋವು ನಪ್ಪು ಯಾವುದೂ ಅವನ ವೇಗವನ್ನು ತಡೆಯಲಿಲ್ಲ. ಶ್ರೀಮತಿ ಚಾರ್ಮಂಡಳು ಆ ಗೇಟಿನ ಒಳಗಡೆಗೆ ಡಾಕ್ಟರನನ್ನು ಸಂಧಿಸಿದ್ದಳು. ಆತ ಆ ಗಾಡಿಗೆ ತಾಗಿ ಹಿಂಬದಿಗೆ ನಿಂತಿದ್ದನು. ಅವಳು ಅವನ ಕಡೆಗೆ ಹೊರಳಿದ್ದಳು. ಅವಳ ತೋಳು ಹಿಂದಿನ ಪೀಠದ ಮೇಲೆ ಪರಿವೆಯಿಲ್ಲದ ಪರಿಯಲ್ಲಿ ಬಿಗಿದಂತೆ ಚಾಚಿತ್ತು.

ಅವರಿಬ್ಬರೂ ಪಿಟ್ಟೆನ್ನದೆ ಒಬ್ಬರನ್ನೊಬ್ಬರು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದರು. ಖಿನ್ನವಾದರೂ ಒಂದು ಠಕ್ಕತನದ ನಗೆಮುಗುಳು ಅವಳ ತುಟಿಯಲ್ಲಿ ಅರಳಿತ್ತು. ಫಿಟ್ಝಪಿಯರ್ಸನು ಚಾಚಿ ಜೋಲುಬಿದ್ದ ಅವಳ ಕೈಯನ್ನು ಹಿಡಿದಿದ್ದನು. ಮತ್ತು ಅವಳು ಅದೇ ಅಸ್ವಸ್ಥ ರೀವಿಯಲ್ಲಿ ಇರುವಾಗಲೆ, ಅವನ ಕಣ್ಣಲ್ಲಿ ನಟ್ಟ ನೋಟದಿಂದ ಏನೆಲ್ಲ ಲೋಕವನ್ನು ಕಾಣಿಸುತ್ತಿರುವಾಗಲೆ, ಅವನು ಆ ಕೈಯ ಚೀಲದ ಗುಂಡಿಗಳನ್ನು ಮೆಲ್ಲನೆ ಕಳ್ಳನಂತೆ ಬಿಡಿಸಿ, ಅದನ್ನು ಮೇಲೆ ಉರುಳಿಸಿ ಒಳ ಮೈ ಹೊರಬರುವಂತೆ ಕಳಚಿ ಕೈಯನ್ನು ಬತ್ತಲೆ ಮಾಡಿದನು. ಮತ್ತು ಅದನ್ನು ತನ್ನ ಬಾಯಿಗೆ ಎತ್ತಿ ಹಿಡಿದನು. ಅವಳು ಆಗಲೂ ನಿಷ್ಕ್ರಿಯಳಾಗಿ ತನ್ನ ಪೀಠದಲ್ಲಿ ಆನಿಸಿಕೊಂಡು ಒರಗಿ ಕುಳಿತಿದ್ದಳು. ಅವನ ಲೀಲೆಯನ್ನು ತನ್ನ ಬಟ್ಟೆಯ ಮೇಲೆ ಸುಳಿದಾಡುವ ಒಂದು ಸೊಳ್ಳೆಯನ್ನು ಹೇಗೋ ಹಾಗೆಯೆ ನಿರೀಕ್ಷಿಸುತ್ತಿದ್ದಳು. ಕಟ್ಟಕಡೆಗೆ ಅವಳೆಂದಳು, 'ಒಳ್ಳೆಯದು ಸ್ವಾಮೀ, ಈ ಅವಿಧೇಯತೆಗೆ ನೆಪವೇನು?'

'ನಾನೇನೂ ಹೇಳಲಾರೆ'

'ಹಾಗಾದರೆ ನಿಮ್ಮ ಹಾದಿ ನೀವು ಹಿಡಿಯಿರಿ. ನನ್ನದು ನಾನು ಹಿಡಿದು ಹೋಗುತ್ತೇನೆ.' ಅವಳು ತನ್ನ ಕೈಯನ್ನು ಹಿಸುಕಿ ಹಿಂದೆಗೆದುಕೊಂಡಳು. ಚಾಟಿಯಿಂದ ಕುದುರೆಯನ್ನು ಮುಟ್ಟಿದಳು, ಮತ್ತು ಅವನನ್ನು ಅಲ್ಲಿ ನಿಂತಲ್ಲಿಯೆ ಬಿಟ್ಟಳು— ಒಳಮೈ ಹೊರಗಾಗಿ ಸುರುಳಿಯಾದ ಅವಳ ಕೈಚೀಲದೊಂದಿಗೆ.

ಮೆಲಬರಿ ಕಣ್ಣಿಗೆ ಬಿದ್ದಿರಲಿಲ್ಲ. ಅವನ ಮೊದಲನೆಯ ಪ್ರೇರಣೆ ತನ್ನ ಅಲ್ಲಿಯ ಅಸ್ತಿತ್ವವನ್ನು ಫಿಟ್ಝಪಿಯರ್ಸನಿಗೆ ಕಾಣಿಸಿಕೊಡುವುದು ಮತ್ತು ಕಟುವಾಗಿ ಅವನಿಗೆ ಛೀ ಹಾಕುವುದು ಎಂದಿತ್ತು. ಆದರೆ ಒಂದು ಕ್ಷಣದ ಆಲೋಚನೆಯು ಅವನಿಗೆ ಮನಗಾಣಿಸಲು ಸಾಕಾಯಿತು— ಅಂಥ ಕ್ರಮವು ವ್ಯರ್ಥವೆಂದು. ಅವನು ಸಾಕ್ಷಿಯಾಗಿ ನೋಡಿದ ಈ ದೃಶ್ಯದಲ್ಲಿ ಕೊನೆಗೂ ಅಂತಹದೇನೂ ವಿಪರೀತವಿರಲಾರದು. ಇದ್ದರೆ ಅದು ಹೆಚ್ಚಾಗಿ, ಇನ್ನು ಆಳವಾದ ಒಂದು ಮನೋಅವಸ್ಥೆಯ ಮೆಲ್ಪಾತಳಿಯೂ ಹೊರಬುರುಗೂ ಆಗಿರಬಹುದು. ಇನ್ನು ಅಂಥ ಮಾನಸಿಕ ಅವಸ್ಥೆಯನ್ನು ನಿಂದೆಯು ಇನ್ನಿಷ್ಟು ಉಲ್ಬಣಗೊಳಿಸುವುದೇ ಹೊರತು ಗುಣಪಡಿಸುವಂತಿಲ್ಲ. ಇದೂ ಅಲ್ಲದೆ,

ಆತ ತನಗೇ ತಿಳಿಹೇಳಿದಂತೆ, ಆಘಾತದ ಬಿಂದು ಆ ಹೆಂಗಸು ಆಗಬೇಕು,— ಇಬ್ಬರಲ್ಲಿ ಯಾರೊಬ್ಬರಾದರೆ. ಆದ್ದರಿಂದ ಆತ ಕಣ್ಮರೆಯಾಗಿಯೇ ಉಳಿದನು. ಮತ್ತು ದುಃಖದಿಂದ, ಕಂಬನಿಗೂಡಿಯೂ ಚಿಂತಿಸುತ್ತ ಆತ ಹಿಂಬಾಕದತ್ತ ತನ್ನ ದಾರಿಹಿಡಿದು ಸಾಗಿದನು. ತನ್ನ ಮಗಳ ಕುರಿತು ಚಿಂತಿಸಬೇಕಾದ ವಿಷಯಗಳಲ್ಲಿ ಎಲ್ಲ ಆತ ಹೀಗೆಯೆ ಮಗುವಿನಂತೆ ಕಣ್ಣೀರು ಬಿಡುವಷ್ಟು ಕಳವಳಗೊಳ್ಳುತ್ತಿದ್ದನು.

ಆಳವಾದ ಸಹಾನುಭೂತಿಯಿಂದ ಒಂದು ಬಗೆಯ ಅಂತರ್ದೃಷ್ಟಿ — ಒಳ ನೋಟ ಉಂಟಾಗುತ್ತದೆ, ಎಂಬುದಕ್ಕೆ ಇದಕ್ಕಿಂತ ಚೆನ್ನಾದ ಉದಾಹರಣೆ ಬೇರೊಂದು ಇರಲಾರದು. ಗ್ರೇಸಳ ರೀತಿ ಜಾಗರೂಕವಾಗಿತ್ತು. ಮಾತು ಮರ್ಯಾದಸ್ಥ ವಾಗಿತ್ತು. ಮುಖಚರ್ಯೆ ಶಾಂತಸೌಮ್ಯವಾಗಿತ್ತು. ಆದಾಗ್ಯೂ ಇದೆಲ್ಲ ವೃತ್ತಿ ವರ್ತನೆಗಳೊಳಗಿಂದಲೂ, ಆತ ಅವಳ ಬಾಳಿನ ಅಂತರಂಗವನ್ನು ಕಂಡುಕೊಂಡನು — ಅದರ ವಿವರ ಸಂಗತಿಗಳ ಹೊರಗಣ್ಣಿನಿಂದ ಎಷ್ಟೇ ಅಡಗಿದ್ದರೂ.

ಈ ಸಂಗತಿಗಳು ಸ್ಪಷ್ಟವೇ ಇದ್ದವು. ಫಿಟ್ಝಪಿಯರ್ಸ ಈಗಿತ್ತಲಾಗಿ ತುಂಬ ಕೆರಳಿಕೆಯ ಅಸಂತೋಷವನ್ನು ಬೆಳೆಯಿಸಿಕೊಂಡಿದ್ದನು. ಅದು ಗ್ರೇಸಳು ಇದಿರಿಗಿರು ವಾಗೆಲ್ಲ ಒಂಟಿಭಾಷಣಗಳಲ್ಲಿ ತೋಡಿಕೊಳ್ಳುತ್ತಿತ್ತು. ಈ ದಿವಸದ ನಸುಕು ಮುಂಜಾವು, ರಾತ್ರೆಯೆಲ್ಲ ಗಾಳಿಬೀಸಿದ ಮೇಲೆ, ಮಂದಮಬ್ಬಿನದಾಗಿತ್ತು. ಮತ್ತು ಕಿಟಕಿಯಿಂದ ಹೊರಗೆ ನೋಡಿದಾಗ ಆ ಧೂಸರ ದುರ್ಭರ ನಸುಕಿನಲ್ಲಿ ಮೆಲಬರಿಯ ಮಂದಿ ಬೀಚ್ ಮರದ ಮುರಿದ ಶಾಖೆಯನ್ನೊಂದು ಜಗ್ಗಿ ಹೊತ್ತುಹಾಕುತ್ತಿದ್ದುದನ್ನು ಫಿಟ್ಝಪಿಯರ್ಸನು ಕಂಡನು. ಎಲ್ಲವೂ ಶೂನ್ಯವಾಗಿತ್ತು. ಶೀತವಾಗಿತ್ತು ವಿವರ್ಣ ವಾಗಿತ್ತು.

'ಓ ದೇವರೆ,' ಆತ ಅಂದನು, ಡ್ರೆಸಿಂಗ ಗೌನಿನಲ್ಲಿ ನಿಂತಾಗ, 'ಇದು ಜೀವನ'

ಗ್ರೇಸಳು ಎಚ್ಚರಾಗಿದ್ದಳೋ ಇಲ್ಲವೋ ಅವನಿಗೆ ಗೊತ್ತಿದ್ದಿಲ್ಲ. ಅದನ್ನು ತಿಳಿದುಕೊಳ್ಳಲು ಮೋರೆಯನ್ನು ಹೊರಳಿಸುವ ಒಲವೂ ಆತನಿಗೆ ಇದ್ದಿಲ್ಲ. 'ಓ ಎಡ್ರೆಡ್.' ಆತ ತನ್ನಷ್ಟಕ್ಕೇ ಅಂದು ಮುಂದರಿದನು, 'ನೀನು ಹಾರಾಡಲು ಸ್ವತಂತ್ರ ನಿದ್ದಾಗ ಹೀಗೆ ರೆಕ್ಕೆಗಳನ್ನು ಕತ್ತರಿಸಿಕೊಂಡಿ.— ಆದರೆ ಹಾಗೆ ಮಾಡಿದತನಕ ನನಗೆ ನೆಮ್ಮದಿ ಇದ್ದಿಲ್ಲ ; ವಿರಾಮವಿದ್ದಿಲ್ಲ. ಅಯ್ಯೋ ನಾನೇಕೆ ಒಂದು ಅವಕಾಶವನ್ನು, ಒಂದು ಸಂಧಿಯನ್ನು, ಅದು ಕಳೆದು ಹೋದತನಕವೂ, ಗುರುತಿಸಲಾರೆ, ತಪ್ಪಿ ಹೋದಾಗಲೇ ತಿಳಿಯಬಲ್ಲೆ ? ಹಾಗೆಯೇ ಇಟ್ಟ ಒಂದು ಹೆಜ್ಜೆಯ ಒಳಿತುಕೆಡುಕು ಅದನ್ನು ಹಿಂದೆಗೆಯಲಾರದಂತೆ ಇಟ್ಟ ಮೇಲೆಯೇ ಅರಿಯಬಲ್ಲೆ ?... ನಾನು ಪ್ರಣಯಾಸಕ್ತನಾದೆ.'

ಗ್ರೇಸಳು ಅಲುಗಾಡಿದಳು. ತನ್ನ ಸ್ವಗತ ಭಾಷಣದ ಕೆಲವಂಶವನ್ನು ಆಕೆ ಕೇಳಿದ ಳೆಂದು ಅವನಿಗೆ ಅನಿಸಿತು. ಅವನಿಗೆ ದುಃಖವಾಯಿತು — ಅದನ್ನು ಆಕೆ ಕೇಳದಂತೆ ಆತ ಯಾವ ಮುಂಜಾಗ್ರತೆಯನ್ನು ತಾಳಿದ್ದಿಲ್ಲವಾದರೂ.

ಮುಂಜಾವಿನ ಉಪಾಹಾರದ ಹೊತ್ತಿಗೆ ಒಂದು ಸಣ್ಣ ದೃಶ್ಯ ನಡೆಯಬಹುದೆಂದು ಅವನ ನಿರೀಕ್ಷೆ. ಆದರೆ ಅವಳು ವಿಪರೀತ ಸಂಯಮವನ್ನೇ ತೋರ್ಪಡಿಸಿದಳು. ಅದು ಅವನು ಪಶ್ಚಾತ್ತಾಪಪಡುವಂತೆ ಮಾಡಲು ಸಾಕಾಯಿತು — ಅವಳಲ್ಲಿ ಹೀಗೆ ಅಸ್ವಸ್ಥತೆಯನ್ನು ಹುಟ್ಟಿಸುವಂತೆ ತಾನೇನಾದರೂ ಮಾಡಿದ್ದಕ್ಕಾಗಿ ; ಏಕೆಂದರೆ ಅವಳ ಆಗಿನ ರೀತಿಯು ತಾನು ಆಡಿದ ಮಾತುಗಳ ಮೂಲಕವೇ ಎಂದು ಆತ ತಳುಕು ಹಾಕಿದನು.

ಆದರೆ ಗ್ರೇಸಳ ಗಂಭೀರತೆಯ ಮೂಲ ಅವನು ಆಡಿದ ಅಥವಾ ಮಾಡಿದ ಸಂಗತಿಗಳಲ್ಲಿ ಇದ್ದಿದ್ದೇ ಇಲ್ಲ. ಅವನ ಪಶ್ಚಾತ್ತಾಪದ ಒಂದೂ ಮಾತನ್ನು ಅವಳು ಕೇಳಿದ್ದಿಲ್ಲ ತನ್ನ ಗಂಡನ ಮಂಜುಬಡಿದ ಆಶೋತ್ತರಗಳಿಗಿಂತಲೂ ಅವಳ ಹೃದಯಕ್ಕೆ ಹೆಚ್ಚು ಹತ್ತಿರವಾದ ಒಂದು ಸಂಗತಿ — ನಿಜವಾಗಿಯೂ ಅವನ ಆಶೋತ್ತರಗಳು ಮಂಜು ಬಡಿದು ದೆಸೆಗೆಟ್ಟಿದ್ದಾದರೆ — ಅವಳ ಮನೋವೃತ್ತಿಗೆ ಮೂಲವಾಗಿತ್ತು.

ಅವಳು ಒಂದು ಶೋಧ ಮಾಡಿದಂತಿತ್ತು—ಅವಳ ಸ್ವಭಾವದ ಹುಡುಗೆಗೆ ಅದು ಅತ್ಯಂತ ಕಂಗೆಡಿಸುವಂತಿತ್ತು. ಅವಳು ತನ್ನ ಹೃದಯದಲ್ಲಿ ಇಣಕಿ ನೋಡಿದ್ದಳು. ಮತ್ತು ಅವಳು ಅಲ್ಲಿ ಕಂಡಿದ್ದೇನು ? ಜೈಲ್ಸ ವಿಂಟರಬೋರ್ನನಲ್ಲಿಯ ಅವಳ ಆರಂಭದ ಆಸಕ್ತಿಯು ಈಗ ಪುನರುಜ್ಜೀವನ ಹೊಂದಿತ್ತು ; ಹೊಸ ಜೀವಕಳೆಯನ್ನು ಪಡೆದಿತ್ತು. ಬಾಳಿನಲ್ಲಿ ಹಿರಿದೇನು, ಕಿರಿದೇನು ಎಂಬುದರ ಇಂದಿನ ಅವಳ ವಿಸ್ತಾರಗೊಳ್ಳುತ್ತಿರುವ ಸಂವೇದನೆಗಳಲ್ಲಿ, ಇಂದು ಅವಳು ಕಲಿತು ಪಡೆದ ಅಭಿರುಚಿಗಳಿಗೆ ಅವನ ಮನೆಬಳಕೆಯ ಸಾದಾತನ ಹಿಂದಿನಂತೆ ನೋಯಿಸುತಿದ್ದಿಲ್ಲ, ಅಸಹ್ಯಗೊಳಿಸುತಿದ್ದಿಲ್ಲ, ಸಂಸ್ಕೃತಿಯಲ್ಲಿ ಅವನ ಕೊರತೆಯು ಅವಳ ಬುದ್ಧಿಗೆ ಇಂದು ಕೀಸರವೆನಿಸುತಿದ್ದಿಲ್ಲ, ಅವನ ಹಳ್ಳಿಗಾಡು ಉಡಿಗೆತೊಡಿಗೆ ಅವಳ ಕಣ್ಣಿಗೆ ಸಂತೋಷವನ್ನೆ ಉಂಟುಮಾಡಹತ್ತಿದ್ದವು ; ಅವನ ಬಹಿರಂಗದ ದೊರಗುತನ, ಅಸಡ್ಡಾಳತನ ಅವಳಿಗೆ ಆಕರ್ಷಕವೇ ಅನಿಸುತ್ತಿತ್ತು ; ಮಾನವೀಯವಾಗಿ ಮಿಗಿಲಲ್ಲದ ಹಿರಿದಲ್ಲದ ಬಹಳಷ್ಟು ಅಂಶವು ತೀರ ಅಪವಾದಾತ್ಮಕ ಮೇಲ್ತರಗತಿಯ ರೀತಿ ನೀತಿಗಳೊಂದಿಗೆ ಕೂಡಿ ಉಳಿಯುವದು ಶಕ್ಯವೆಂದು ಅವಳು ಮದುವೆಯಿಂದ ಕಂಡು ಕೊಂಡಿದ್ದಳು. ಆದ್ದರಿಂದ ಹಿಂದೆ ಇಂಥ ರೀತಿಗಳನ್ನು ಅವಚಿಕೊಂಡ ಎಲ್ಲ ಭಾವನೆಗಳ ಬಗೆಗೆ ಇಂದು ಅವಳಿಗೆ ಜುಗುಪ್ಸೆಯ ಓಕರಿಕೆ ಉಂಟಾಗಿತ್ತು. ಪ್ರಾಮಾಣಿಕತೆ, ಸಜ್ಜನಿಕೆ, ಪೌರುಷ, ಕೋಮಲತೆ, ಭಕ್ತಿ, ಇವೆಲ್ಲ ಅವಳ ಮಟ್ಟಿಗೆ ತಮ್ಮ ಪರಿಶುದ್ಧರೂಪದಲ್ಲಿ ಉಳಿದಿರುವುದಾದರೆ ಅದು 'ಸುಣ್ಣ ಬಣ್ಣ' ಬಳಿಯದ ತಳೆಯದ ಸಾದಾ ಜನರಲ್ಲಿ, ಅಪರಿಷ್ಕೃತ ಮನುಷ್ಯರಲ್ಲಿ ಮತ್ತು ಇಲ್ಲಿ ಅಂಥವರಲ್ಲಿ ಒಬ್ಬ ನಿದ್ದನು. ಅವನು ತನ್ನ ಎಳೆವರಯದಿಂದಲೂ ಅಂಥವನಾಗಿ ಅವಳಿಗೆ ಕಾಣಿಸಿಕೊಂಡು ಬಂದಿದ್ದನು.

ಇದೂ ಅಲ್ಲದೆ ಜೈಲ್ಸನ ಕುರಿತು, ತಾನು ಅನ್ಯಾಯ ಬಗೆದ ಮನುಷ್ಯನೆಂದು ಅವನಲ್ಲಿ ಎಂದೂ ಅಳಿಯದಂಥ ಮರುಕ ಅವಳ ಆತ್ಮದಲ್ಲಿ ಒಡಮೂಡಿತ್ತು — ಆತ

ತನ್ನ ಲೌಕಿಕ ವ್ಯವಹಾರಗಳಲ್ಲಿ ದುರ್ದೈವಿಯಾಗಿದ್ದ. ಹಾಗೆ ಆಗಿದರೂ, ತನ್ನ ಉಗ್ರ ತಾಪವನ್ನೆಲ್ಲ ಹ್ಯಾಮ್ಲೆಟ್ಟನ ಮಿತ್ರನಂತೆ ತಾಳಿ ಬಾಳಿ ಬಂದಿದ್ದ.

'ಎಲ್ಲ ತಾಪ ಅನುಭವಿಸುವದರಲ್ಲಿ ಯಾವದನ್ನೂ ಅನುಭವಿಸಿದಂಥವನು.' ಈ ಮೂಲಕ ಅವನು ಒಂದು ಮಹೋನ್ನತಿಯ ನಿಜವಾದ ಸಂಸ್ಪರ್ಶದಿಂದ ಮಂಡಿತ ನಾದಂತಿತ್ತು. ಈ ಸಂವೇದನೆಗಳೇ ಹೊರತು, ಗಂಡ ಗೊಣಗುಟ್ಟಿದ ಮಾತುಗಳ ಸೂಕ್ಷ್ಮ ಅರಿವಲ್ಲ, ಅವಳಲ್ಲಿ ತೋರ್ಪಟ್ಟ ವಿಮನಸ್ಕತೆಯನ್ನು ಬೆಳೆಸಿದ್ದು.

ಫಿಟ್ಸ್‌ಪಿಯರ್ಸ ಮತ್ತು ಶ್ರೀಮತಿ ಚಾರ್ಮಂದರ ಸಂದರ್ಶನಕ್ಕೆ ಸಾಕ್ಷಿಯಾಗಿ ನಿಂತು ನೋಡಿ ಅವಳ ತಂದೆ ಮನೆಯನ್ನು ಸಮೀಪಿಸಿದನು. ಗ್ರೇಸಳು ತನ್ನ ನಡು ಮನೆಯ ಕಿಟಕಿಯಿಂದ ಹೊರಗೆ ನೋಡುತಿದ್ದಳು — ಅವಳಿಗೆ ಮಾಡಲು, ವಿಚಾರ ಮಾಡಲು ಅಥವಾ ಪರಿವೆಮಾಡಲು ಏನೇನೂ ಇದ್ದಿಲ್ಲವೆಂಬಂತೆ. ಆತ ನಿಶ್ಚಲನಾಗಿ ನಿಂತನು.

'ಓ, ಗ್ರೇಸ', ಆತ ಅಂದನು, ಅವಳನ್ನೆ ದಿಟ್ಟಿಸುತ್ತ.

'ಹೌದು, ಅಪ್ಪಾ', ಅವಳು ಪಿಸುಗುಟ್ಟಿದಳು.

'ನಿನ್ನ ಪ್ರಿಯ ಪತಿಗಾಗಿ ಕಾಯುತ್ತಿರುವೆಯಾ?' ಆತ ವಿಚಾರಿಸಿದನು — ಮರುಕಗೊಂಡ ಸ್ನೇಹದ ಒಂದು ಉಪರೋಧದ ದನಿಯಲ್ಲಿ.

'ಛೇ ಇಲ್ಲ. ವಿಶೇಷವೇನೂ ಇಲ್ಲ. ಅವನಿಗೆ ಈ ದಿನ ಸಂಜೆ ಬಹಳಷ್ಟು ರೋಗಿ ಗಳನ್ನು ನೋಡಿಕೊಂಡು ಬರುವದಿದೆ.'

ಮೆಲಬರಿ ಅವಳ ಹತ್ತಿರಕ್ಕೆ ಬಂದನು, 'ಗ್ರೇಸ್, ಹೀಗೆ ಮಾತಾಡುವದರಿಂದ ಏನು ಪ್ರಯೋಜನ, ನಿನಗೆ ಗೊತ್ತಿರುವಾಗ? ಬಾ, ಇಲ್ಲಿ ಬಾ, ಕೆಳಗೆ ಬಾ ಮಗು, ತೋಟದಲ್ಲಿ ನನ್ನ ಸಂಗಡ ತಿರುಗಾಡು, ಬಾ.'

ಅವನು ಈವೀ ಬಳ್ಳಿ ಹಬ್ಬಿಹೊದ್ದಿದ ಗೋಡೆಯೊಳಗಿನ ಕದದ ಚಿಲಕವನ್ನು ತೆಗೆದು ಪ್ರತೀಕ್ಷಿಸಿದನು. ಅವಳ ಈ ತೋರಿಕೆಯ ಉದಾಸೀನತೆ ಗಾಬರಿಗೊಳಿಸಿತು. ಅವಳು ಇದರ ಬದಲು ಅಸೂಯೆಯ ಎಲ್ಲ ಉರಿಕಿಚ್ಚಿನೊಂದಿಗೆ ಹಿಂಟೋಕ ದೊಡ್ಡ ಮನೆಗೆ ನುಗ್ಗಿದರೆ ಯಾವ ಶಿಷ್ಟಾಚಾರವನ್ನು ಲೆಕ್ಕಿಸದೆ ಫೆಲಿಸ್ ಚಾರ್ಮಂದಳನ್ನು ಇದುರಿಸಿ ಅವಳ ಮೇಲೆ ಹಲ್ಲುಗುರುಗಳನ್ನು ಮಸೆದುಕೊಂಡು ಏರಿಹೋಗಿದ್ದರೆ, ತನ್ನ ಗಂಡನನ್ನು ಅಪಹರಿಸಿದ ಆರೋಪವನ್ನು ಅವಳ ಮೇಲೆ ಹೊರಿಸಿ ಹೋರಾಡಿದ್ದರೆ ಹೆಚ್ಚು ಲೇಸಾಗುತಿತ್ತು — ಎಂದು ಅವನಿಗೆ ಅನಿಸಿತು. ಅಂಥ ಬಿರುಗಾಳಿ-ಜಡಿಮಳೆ ವಾತಾವರಣವನ್ನು ತಿಳಿಗೊಳಿಸುತಿತ್ತು.

ಅವಳು ಒಂದೆರಡು ಗಳಿಗೆಯಲ್ಲಿ ಹೊರಗೆ ಬಂದಳು. ಅವರು ಇಬ್ಬರೂ ಕೂಡಿ ತೋಟದಲ್ಲಿ ಹೋದರು. 'ನನಗೆ ಗೊತ್ತಿದ್ದಂತೆ ಅಷ್ಟೇ, ನಿನಗೂ ಗೊತ್ತು', ಆತ ಮಾತು ಎತ್ತಿಕೊಂಡು ಮುಂದುವರಿದನು, 'ನನ್ನ ಬಾಳಿಗೆ ಏನೋ ಅನಾಹುತ ಭಯ ವನ್ನು ತರುವಂತಿದೆ. ಆದಾಗ್ಯೂ ನೀನು ಅದು ಅಲ್ಲವೆಂಬಂತೆ ನಟನೆ ಮಾಡುತ್ತಿದ್ದಿಯೇ.

ನಿನ್ನ ಮೊಗದಲ್ಲಿ ದಿನಾಲು ಆ ಸಂಕಟವನ್ನು ನೋಡುವದಿಲ್ಲವೆಂದು ಭಾವಿಸಿದೆಯಾ? ನನಗೆ ಖಾತ್ರಿಯಾಗಿದೆ — ಈ ನಿನ್ನ ಶಾಂತ ಪ್ರವೃತ್ತಿ ಇದು ನಿನ್ನ ತಪ್ಪುವರ್ತನೆ. ನೀನು ಈ ವಿಷಯ ಹೆಚ್ಚು ಗಮನಕೊಡಬೇಕು — ಆಳವಾಗಿ ನೋಡಬೇಕು.'

'ನಾನು ಶಾಂತವೃತ್ತಿಯಲ್ಲಿದ್ದೇನೆ. ಏಕೆಂದರೆ ನನ್ನ ದುಃಖ ನನ್ನನ್ನು ಕೆಲಸಕ್ಕೆ ಪ್ರೇರಿಸುವಂಥ ಸ್ವರೂಪದ್ದಲ್ಲ.'

ಅವಳಿಗೆ ಹತ್ತುಹನ್ನೆರಡು ಪ್ರಶ್ನೆ ಕೇಳೋಣವೇ ಎಂದೆನಿಸಿತು ಮೆಲಬರಿಗೆ. ಅವಳಿಗೆ ಅಸೂಯೆ ಅನಿಸುವುದಿಲ್ಲವೆ? ಆದರೆ ಒಂದು ಸ್ವಾಭಾವಿಕ ಸಂಕೋಚ, ಕೋಮಲಭಾವನೆ ಅವನನ್ನು ತಡೆಯಿತು. 'ನೀನು ಬಹಳ ಸಾದು ಸಪ್ಪಗೆ ಇರುವಿ. ಇರುಗೊಡುವ — ಬಿಡುವ ವೃತ್ತಿಯವಳು ಎಂದೆನ್ನಲೇಬೇಕು ನಾನು', ಆತ ಒತ್ತಿ ಹೇಳಿದನು.

'ಹೇಗೆ ಅನಿಸುವದೋ ಹಾಗೆ ನಾನಿದ್ದೇನೆ, ಅಪ್ಪಾ' ಅವಳು ಮತ್ತೆ ಹೇಳಿದಳು.

ಅವನು ಆಕೆಯ ಕಡೆಗೆ ದೃಷ್ಟಿಹಾಯಿಸಿದನು. ಆಗ ಅವನ ಮನಸ್ಸಿನಲ್ಲಿ ಮರಳಿ ಮೂಡಿನಿಂತಿತು. ಮದುವೆಯ ಮುಂಚಿನ ಆ ಕೊನೆಯ ದಿನಗಳಲ್ಲಿ ಅವಳು ಫಿಟ್ಝಪಿಯರ್ಸನ ಬದಲು ವಿಂಟರಬೋರ್ನನನ್ನೇ ವರಿಸಲು ಅಣಿಯಾದ ದೃಶ್ಯ; ಮತ್ತು ಆತ ತನ್ನನ್ನೆ ಕೇಳಿಕೊಂಡನು: ಅವಳು ಅವರಿಬ್ಬರಲ್ಲಿ ಒಬ್ಬನನ್ನು ಆಯ್ದು ಕೊಳ್ಳಲು ಹೆಚ್ಚು ಸ್ವತಂತ್ರಳಿದ್ದಾಗಿನಿಗಿಂತ ಇಂದು, ಅವನನ್ನು ಎಂದಿಗಿಂತಲೂ ಹೆಚ್ಚಾಗಿ ಕಳೆದುಕೊಂಡುದಾದ ಮೇಲೆ, ಈಗ ವಿಂಟರಬೋರ್ನನನ್ನು ಆಕೆ ಪ್ರೀತಿಸ ತೊಡಗಿರಬಹುದೆ?

'ನಾನೀಗ ಏನು ಮಾಡಬೇಕೆಂದು ನಿನ್ನ ಇಚ್ಛೆ?' ಆಕೆ ಮಂದದನಿಯಲ್ಲಿ ಕೇಳಿದಳು.

ಆತ ತಾಪದಾಯಕ ಹಿನ್ನೋಟದಿಂದ ತನ್ನ ಚಿತ್ತವನ್ನು ಇದುರಿಗಿರುವ ವ್ಯಾವಹಾರಿಕ ವಿಷಯಕ್ಕೆ ತಿರುಗಿಸಿದನು. 'ನೀನು ಮಿಸೆಸ್ ಚಾರ್ಮಂದಳಿದ್ದಲ್ಲಿಗೆ ಹೋಗಬೇಕು' ಆತ ಅಂದನು.

'ಮಿಸೆಸ್ ಚಾರ್ಮಂದಳಿದ್ದಲ್ಲಿ ಹೋಗಬೇಕು — ಯಾತಕ್ಕೆ?' ಅವಳೆಂದಳು.

'ಸರಿ. ನಾನು ಸ್ಪಷ್ಟವಾಗಿಯೇ ಹೇಳಬೇಕಾದರೆ, ಡಿಯರ್ ಗ್ರೇಸ್, ಅವಳಿಗೆ ಪ್ರಾರ್ಥಿಸಿಕೊಳ್ಳಲಿಕ್ಕೆ, ನಿಮ್ಮಿಬ್ಬರಿಗೆ ಸಾಮಾನ್ಯವಾಗಿರುವ ಸ್ತ್ರೀಧರ್ಮದ ಹೆಸರಿನಲ್ಲಿ, ಇತರ ನಿಮ್ಮ ಭಾವನೆಗಳ ಹೆಸರಿನಲ್ಲಿ ನಿನ್ನ ಮತ್ತು ನಿನ್ನ ಗಂಡನ ನಡುವೆ ದುಃಖವನ್ನು ಉಂಟುಮಾಡಬೇಡವೆಂದು ಬೇಡಿಕೊಳ್ಳಲಿಕ್ಕೆ, ಹಾಗೆ ಮಾಡುವುದು ಬಿಡುವುದು ಕೇವಲ ಅವಳ ಕೈಯಲ್ಲಿ ಇರುತ್ತದೆ — ನಾನು ಅದನ್ನು ಕಾಣಬಲ್ಲೆ.'

ತಂದೆಯ ಮಾತಿಗೆ ಗ್ರೇಸಳ ಮುಖಕ್ಕೆ ಕಾವೇರಿತು. ಬೇಲಿಯ ಪೊದೆಗಳ ಮೇಲೆ ಅವಳ ಲಂಗದ ಸರಪರ ಸಪ್ಪಳವೂ ತಿರಸ್ಕಾರವನ್ನೆ ಸೂಸುತಿತ್ತು.

'ಅಪ್ಪಾ, ನಾನು ಅವಳ ಕಡೆಗೆ ಹೋಗುವ ವಿಚಾರವನ್ನು ಮಾಡಲಾರೆ, ಇಲ್ಲ ಮಾಡಲಾರೆ' ಆಕೆ ಉತ್ತರವಿತ್ತಳು.

'ಯಾಕೆ? ಈಗಿದ್ದುದಕ್ಕಿಂತ ನೀನು ಹೆಚ್ಚು ಸುಖಿಯಾಗಲು ಇಚ್ಛಿಸುವುದಲ್ಲವೆ?' ಮೆಲಬರಿ ಕೇಳಿದನು — ಅವಳ ಕುರಿತು ಅವಳಿಗಿಂತಲೂ ಹೆಚ್ಚು ಭಾವಾಕುಲನಾಗಿ.

'ನಾನು ಇನ್ನು ಅವಮಾನಿತಳಾಗಲು ಇಚ್ಛಿಸುವುದಿಲ್ಲ. ನಾನು ಸಹಿಸಬೇಕಾದದ್ದೇನಾದರೂ ಇದ್ದರೆ ಅದನ್ನು ಮೌನವಾಗಿಯೇ ಸಹಿಸಬಲ್ಲೆ.'

'ಆದರೆ, ಮಯ್ ಡಿಯರ್, ನೀನು ಇನ್ನೂ ತೀರ ಎಳೆಯವಳು — ಇಂದಿನ ವಿದ್ಯಮಾನಗಳು ಯಾವ ಮಟ್ಟಕ್ಕೆ ಒಯ್ಯುವವು, ನಿನಗೆ ಗೊತ್ತಾಗದು. ಈಗಾಗಲೇ ಆದ ಅಪಾಯವನ್ನು ನೋಡು. ನಿನ್ನ ಗಂಡ ಬಡ್‌ಮೌಥಿಗೆ, ಇದಕ್ಕೂ ದೊಡ್ಡ ಪ್ರಾಕ್ಟೀಸಿಗೆ ಹೋಗಬಹುದಿತ್ತು — ಇದೊಂದು ಇಲ್ಲವಾಗಿದ್ದರೆ. ಈಗ ಇಷ್ಟೇ ಅಲ್ಲ ದೂರಕ್ಕೆ ಹೋಗಿಯೂ ಇದು ನಿನ್ನ ಭವಿಷ್ಯದಲ್ಲಿ ಈಗಾಗಲೆ ನಂಜು ಬೆರೆಸಿದೆ. ಮಿಸಸ್ ಚಾರ್ಮಂಡ ತಿಳಿಗೇಡಿತನದಿಂದ ಕೆಟ್ಟವಳಾಗಿದ್ದಾಳೆ, ತಿಳಿದೂ ತಿಳಿದೂ ಎಣಿಕೆ ಹಾಕಿ ಅಲ್ಲ. ಇದೀಗ ಒಂದು ಮಾತು ನಿನ್ನಿಂದ ಅವಳು ಕೇಳಿದರೆ ಮುಂದೆ ದುಃಖದ ದೊಡ್ಡ ಮೊತ್ತದಿಂದ ನಿನ್ನನ್ನು ಕಾಪಾಡಿಕೊಂಡಂತೆ.'

'ಓ ಹಿಂದೊಮ್ಮೆ ನಾನು ಅವಳನ್ನು ಪ್ರೀತಿಸಿದ್ದೆ.' ಗ್ರೇಸಳು ಅಂದಳು. ದನಿ ತತ್ತರಿಸಿ, 'ಆಗ ಆಕೆ ನನ್ನ ಬಗ್ಗೆ ಪರಿವೆ ಮಾಡಲಿಲ್ಲ. ಈಗ ನಾನು ಅವಳನ್ನು ಪ್ರೀತಿಸುವುದೇ ಇಲ್ಲ. ಅವಳು ಬೇಕಷ್ಟು ಕೇಡು ಮಾಡಲಿ; ನಾನು ಪರಿವೆ ಮಾಡುವುದಿಲ್ಲ.'

'ಛೇ ಪರಿವೆ ಮಾಡಬೇಕು. ನಿನಗೆ ಆರಂಭದಲ್ಲಿಯೆ ಒಳ್ಳೆಯ ಪ್ರತಿಷ್ಠಿತ ಸ್ಥಾನ ಸಿಕ್ಕಿದೆ. ನಿನಗೆ ಒಳ್ಳೆಯ ಶಿಕ್ಷಣ ಒಳ್ಳೆ ಸಂಸ್ಕಾರ, ಸಿಕ್ಕಿವೆ. ಒಂದು ಅಸಾಮಾನ್ಯ ಘನವಂತಿಕೆಯ ಮನೆತನಸ್ಥ ವ್ಯಾವಸಾಯಿಕ ಗಂಡಸು ನಿನ್ನ ಗಂಡನಾಗಿದ್ದಾನೆ. ನಿನ್ನ ಈ ಸ್ಥಾನಮಾನದ ಆದಷ್ಟು ಸದುಪಯೋಗ ನೀನು ಮಾಡಿಕೊಳ್ಳಬೇಕು.

'ಮಾಡಿಕೊಳ್ಳಲೇಬೇಕೆಂದು ನನಗೆ ಕಾಣುವುದಿಲ್ಲ. ನನಗಂತೂ ಅನಿಸುತ್ತದೆ, — ನಾನು ಈ ಸ್ಥಾನಕ್ಕೆ ಸೇರಲೇಬಾರದಿತ್ತು. ನೀನು ನನಗೆ ಶಿಕ್ಷಣ ಕೊಡಿಸುವ ಗೋಜಿಗೆ ಎಂದೆಂದೂ ಹೋಗಬಾರದಿತ್ತು. ಆ ಮಾರ್ಟಿಸೌಥಳಂತೆಯೆ ನಾನೂ ಬೆಟ್ಟದಲ್ಲಿ ದುಡಿಯಬೇಕಿತ್ತು. ನಾನು ಈ ಸಭ್ಯ ಶಿಷ್ಟ ಜೀವನವನ್ನೆ ತಿರಸ್ಕರಿಸುತ್ತೇನೆ. ನನಗೆ ಅವಳಿಗಿಂತ ಹೆಚ್ಚಿನವಳಾಗಬೇಕಾಗಿಲ್ಲ.

'ಅದೇಕೆ?' ಚಕಿತನಾದ ತಂದೆ ಕೇಳಿದನು.

'ಏಕೆಂದರೆ ಈ ಸಂಸ್ಕಾರವೆಂಬುವದು ನನಗೆ ಕೇವಲ ಅನಾನುಕೂಲ — ಅಡೆತಡೆಗಳನ್ನು ತಂದಿದೆ. ನಾನು ಇನ್ನೊಮ್ಮೆ ಹೇಳುತ್ತೇನೆ. ನೀನು ನನ್ನನ್ನು ಆ ಫ್ಯಾಶನೇಬಲ್ ಶಾಲೆಗಳಿಗೆ ಅಷ್ಟೊಂದು ಮೆಚ್ಚಿಕೊಂಡು ಸೇರಿಸಬಾರದಿತ್ತು. ಇದೆಲ್ಲ

ಅದರಿಂದ ಸುರುವಾಯಿತು, ಅಪ್ಪಾ. ನಾನು ಮನೆಯಲ್ಲಿಯೆ ಉಳಿದಿದ್ದರೆ, ನನ್ನ ಮದುವೆ...'

ಅವಳು ಒಮ್ಮೆಲೆ ಬಾಯಿಮುಚ್ಚಿಕೊಂಡಳು. ತಂದೆ ನೋಡಿದ. ಅವಳು ಅಳಲಿಕ್ಕೆ ಬಹಳ ದೂರವಿದ್ದಿಲ್ಲ.

ಮೆಲಬರಿಗೆ ಬಹಳ ದುಃಖವೆನಿಸಿತು 'ಏನು? ಈ ಹಿಂಟೋಕ ಹಳ್ಳಿಯಲ್ಲಿ ನಮ್ಮಂತೆಯೇ ಬೆಳೆಯಬೇಕೆಂದು ನಿನಗೆ ಅನಿಸಿತೆ? — ನಮಗಿಂತ ಹೆಚ್ಚು ಏನನ್ನೂ ಕಲಿತುಕೊಳ್ಳದೆ, ಅರಿತುಕೊಳ್ಳದೆ, ಒಳ್ಳೆಯ ಬದುಕನ್ನು ನೋಡುವ ಯಾವ ಅವಕಾಶವೂ ಇಲ್ಲವೆ?'

'ಹೌದು. ನನಗೆ ಗೊತ್ತಿದ್ದಂತೆ, ಈ ಹಿಂಟೋಕ ಹಳ್ಳಿಯ ಹೊರಗೆ ನನಗೆ ಸುಖವೆಂಬುದು ಎಲ್ಲಿಯೂ ಸಿಕ್ಕಿಲ್ಲ. ಇಲ್ಲಿಂದ ದೂರ ಕಳುಹಿಸಿಕೊಟ್ಟಾಗೆಲ್ಲ ನನಗೆ ಎದೆಉರಿಯೆ ಆದದ್ದಿದೆ. ಓ, ಜನವರಿಯ ದಿನಗಳ ದುರ್ದಶೆಯನ್ನು ಏನು ಹೇಳಲಿ — ನಾನು ಶಾಲೆಗೆ ಮರಳಿ ಹೋದಾಗ ನಿಮ್ಮನೆಲ್ಲ ಈ ಮಲೆನಾಡಿನಲ್ಲಿ ಇಷ್ಟು ಸುಖದಲ್ಲಿ ಬಿಟ್ಟು ಹೋದಾಗ. ಅದನ್ನೆಲ್ಲ ಏಕೆ ಸಹಿಸಬೇಕು? — ಎಂದು ನನಗೆ ಆಗ ಸೋಜಿಗ. ಅಲ್ಲದೆ ಶಾಲೆಯಲ್ಲಿ ಇತರ ಹುಡುಗಿಯರು ನನ್ನನ್ನು ತುಸು ತಾತ್ಸಾರದಿಂದಲೆ ಕಾಣುತಿದ್ದರು, ನಾನು ಎಲ್ಲಿಂದ ಬಂದೆ ಎಂಬುದು ಅವರಿಗೆ ಗೊತ್ತು, ಮತ್ತು ನನ್ನ ತಂದೆ ತಾಯಿ ಅವರಷ್ಟು ಒಳ್ಳೆಯ ಅಂತಸ್ತಿನವರಿದ್ದಿಲ್ಲವೆಂದೂ ಅವರ ಗ್ರಹಿಕೆ.'

ಅವಳ ಬಡ ತಂದೆಗೆ ಇದರಿಂದ ಬಹಳ ನೋವಾಯಿತು. ಇದು ಅವಳ ಕೃತಘ್ನತೆ ಮತ್ತು ಮೊಂಡುತನವೆಂದು ಅವನಿಗೆ ಕಂಡಿತು. ಆತ ತನ್ನಷ್ಟಕ್ಕೆ — ಕಟುವಾಗಿಯೆ ಒಪ್ಪಿಕೊಂಡಿದ್ದನು, — ತರುಣ ಹೃದಯಗಳನ್ನು ತಮ್ಮಷ್ಟಕ್ಕೆ ಒಲಿಯಲು ಬಿಡಬೇಕಿತ್ತು. ಅಥವಾ ವಿಂಟರಬೋರ್ನನ ಬಗೆಗೆ ಅವಳ ಒಲವನ್ನು ಪ್ರೋತ್ಸಾಹಿಸಬೇಕಿತ್ತು ಮತ್ತು ತನ್ನ ಪೂರ್ವ ಯೋಜನೆಯಂತೆ ಅವಳನ್ನು ಅವನಿಗೇ ಕೊಟ್ಟು ಬಿಡಬೇಕಿತ್ತು. ಆದರೆ ಅವಳು ಹೀಗೆ ತನ್ನ ಶಿಕ್ಷಣ ಸಂಸ್ಕಾರಗಳ ಸಾಧನೆಯನ್ನೆ ಹೀಗಳೆಯುವುದನ್ನು ಕೇಳಲಿಕ್ಕೆ ಅವನು ಸಿದ್ಧನಾಗಿದ್ದಿಲ್ಲ, ಈ ಸಾಧನೆ ವರ್ಷಾಂತರಗಳ ಪರಿಶ್ರಮವಾಗಿತ್ತು. ಅವನ ಜೇಬಿಗೆ ಬಹಳ ಭಾರಿ ತೆರಿಗೆ ಆಗಿತ್ತು.

'ಒಳ್ಳೆಯದು,' ಆತ ಭಾರವಾದ ಮನಸ್ಸಿನಿಂದಲೆ ಅಂದನು 'ಅವಳ ಬಳಿಗೆ ಹೋಗಲು ನಿನಗೆ ಮೆಚ್ಚಿಗೆ ಇಲ್ಲವಾದರೆ ನಾನೇನು ನಿನಗೆ ಒತ್ತಾಯ ಮಾಡುವುದಿಲ್ಲ.'

ಮತ್ತು ಅವನ ಮಟ್ಟಿಗೆ ಪ್ರಶ್ನೆ ಹಾಗೆಯೆ ಉಳಿಯಿತು. ಈ ಸಂಕಟಮಯ ವಸ್ತು ಸ್ಥಿತಿಯನ್ನು ಸರಿಪಡಿಸುವದು ಹೇಗಾಯಿತು? ದಿವಸಗಟ್ಟಲೆ ಅಗ್ಗಿಷ್ಟಿಗೆಯ ಹತ್ತಿರ ವ್ಯಗ್ರವಾಗಿ ವ್ಯಾಕುಲವಾಗಿ ಆತ ಕೂತಿರುತಿದ್ದನು — ಪಕ್ಕದಲ್ಲಿ ಸಿಡರಮದ್ಯದ ಒಂದು ಸೀಸೆ, ಅದರ ಮೇಲೆ ತನ್ನ ಕುಡಿಯುವ ಕೋಡಿನ ಲೋಟ ಡಬ್ಬಾ ಇಟ್ಟುಕೊಂಡು.

ಒಂದು ವಾರ, ಅದಕ್ಕೂ ಹೆಚ್ಚು ಕಾಲ ಆತ ಹೀಗೆ ಕಳೆದನು, ಈ ಪ್ರಕರಣದ ಮುಖ್ಯ ಅಪರಾಧಿಗೆ ಒಂದು ಪತ್ರದ ಒಕ್ಕಣೆಯನ್ನು ರಚಿಸುತ್ತ, ಅದನ್ನು ಆಗಾಗ್ಗೆ ಪೂರ್ತಿ ಮಾಡಲು ಯತ್ನಿಸುತ್ತಿದ್ದನು. ಆದರೆ ಒಮ್ಮೆಲೆ ಕೈಯ್ಯಲ್ಲಿ ಹಿಸುಕಿ ಮುದ್ದೆ ಮಾಡಿ ಒಗೆಯುತ್ತಿದ್ದನು.

೩೨

ಫೆಬ್ರುವರಿಯು ಮಾರ್ಚಿನಲ್ಲಿ ಮರೆಯಾಯಿತು. ಮಲೆನಾಡಿಗರ ಮನೆಯ ದಾರಿಯಲ್ಲಿ ತಿಳಿಯಾದ ಬೈಗು ಸಂಜೆಮಬ್ಬು ಕಳೆಯುತೊಡಗಿದವು. ಹಿರಿಕಿರಿ ಹಿಂಟೋಕ್‌ಗಳಿಗೆ — ಕಿವಿ ಮೂಡಿನಿಂತವು — ಮರದ ವ್ಯಾಪಾರಿಯ ಸಂಕಷ್ಟಗಳು ಬೆಳೆಯಲು ಕಾರಣವಾದ ಘಟನೆಗಳ ಗಾಳಿವರ್ತಮಾನಗಳನ್ನು ಕೇಳಲಿಕ್ಕೆ.

ವಿಶಾಲವಾದ ಊಹೆಯ ಸಿಂಪಡಿಕೆಯಂತೆ ಇತ್ತು ಆ ಗಾಳಿವರ್ತಮಾನ. ಸತ್ಯ ಸ್ಥಿತಿಯು ಯಾರಿಗೂ ಗೊತ್ತಿದ್ದಿಲ್ಲ. ಸಂಬಂಧಪಟ್ಟ ವ್ಯಕ್ತಿಗಳ ಸಂಬಂಧಗಳನ್ನು ಒಮ್ಮೆಲೆ ತೆರೆದು ತೋರಿಸುತ್ತ, ಮರೆಗೆ ಅಡಗಿಸುತ್ತ ಈ ಮೋಹ ಕೆಣಕುವ ಘಟನೆಯು ಮುಂದಿಯಲ್ಲಿ ಸಂಭ್ರಮದ ಸೋಜಿಗವನ್ನು ಹರಡಿತು. ಮಲೆನಾಡಿಗರು ಪ್ರಾಮಾಣಿಕ ಜನವೇನೋ ಸರಿ, ಆದರೆ ಇಂಥ ಪರಿಸ್ಥಿತಿಯಲ್ಲಿಯೂ ಅವರು ತಮ್ಮ ಮರಮುಟ್ಟು ತೋಟಪಟ್ಟಿಗಳ ಹವ್ಯಾಸದಲ್ಲಿಯೇ ಮುಳುಗಿರುವರೆಂದು, ಅಥವಾ 'ಆ ಹೆಂಗಸು' ಹಾದು ಹೋಗುವಾಗ ಪರಮ ಸಂಭಾವಿತ ನಾಗರಿಕರಂತೆ ಪತಿವ್ರತೆಯತ್ತ ಕಣ್ಣು ಹಾಯಿಸಬಾರದೆಂದು, ಹಾದಿಯ ಕಡೆಗೆ ಬೆನ್ನು ಹೊರಳಿಸಿ ಕೂಡ್ರುವವರೆಂದು ಅಪೇಕ್ಷಿಸುವುದು ಹೆಚ್ಚಾದೀತು.

ಆಶ್ಚರ್ಯವೇನೆಂದರೆ ಕಿಂವದಂತಿಗಳು, ಅಥವಾ ಊರಸುದ್ದಿ — ಗಾಳಿಯ ವರ್ತಮಾನಗಳು ಸ್ವಲ್ಪವೂ ಅತಿಶಯೋಕ್ತಿ ಮಾಡಿದ್ದಿಲ್ಲ. ಬೇರೆ ಸಾವಿರಾರು ಪ್ರಕಟಣೆಗಳಲ್ಲಿ ಹೇಗೋ ಹಾಗೆಯೇ ಗ್ರೇಸಳ ವಿಷಯದಲ್ಲಿಯೂ ಕೌಟುಂಬಿಕ ದುರಂತವೇ ಭಯಾವಹವಾಗಿತ್ತು. ಇಂಥ ದುರಂತ ಗುಡ್ಡದಷ್ಟು ಹಳೆಯದು. ಅನೇಕ ಪುರಾಣ ಇತಿಹಾಸದ ಕಥೆಗಳಲ್ಲಿ ಅನೇಕ ನಾಯಕ-ನಾಯಿಕೆಯರ ವಿಯೋಗಕ್ಕೆ, ವಿಷಾದಕ್ಕೆ, ವಿಪತ್ತಿಗೆ, ಅಥವಾ ವಿನಾಶಕ್ಕೆ ಕಾರಣವಾದಂಥಾದ್ದು. ಆಕಸ್ಮಿಕ ಚಕಮಕಿಗಳು, ಬೇಕೆಂದು ಕೂಡಿಸಿ ತಂದ ಕಚ್ಚಾಟಗಳು, ಕದ್ದು ಮುಚ್ಚಾಲೆಯ ಪತ್ರವ್ಯವಹಾರ, ಆ ಕಡೆಯಿಂದ ಆಕಸ್ಮಿಕ ಸಂಶಯ ಈ ಕಡೆಯಿಂದ ಆತ್ಮಗ್ಲಾನಿ, ಇಂಥವೇ ಘಟನೆಗಳು, ಇತರ ಇಂಥ ಪ್ರಕರಣಗಳಲ್ಲಿಯಂತೆಯೇ, ಆದರೆ ಹೆಚ್ಚು ಕಡಮೆ ಬದಲಾವಣೆಗಳೊಂದಿಗೆ ಒದಗಿಬರಹತ್ತಿದವು.

ಅವರಿಬ್ಬರ ಆಂತರಂಗಿಕ ಅವಸ್ಥೆಯು ವಿಚಿತ್ರವಾಗಿತ್ತು — ಕೋಲಾಹಲದ ಸನ್ನಿವೇಶದಂತೆ. ಆ ಗದ್ದಲಗೊಂದಲದಲ್ಲಿ ವಿವೇಕದ ನೀತಿನಿಪುಣ ದನಿಯು ಕಿವಿಗೆ ಬಾರದು. ಈ ದಿಶೆಯಲ್ಲಿಯೇ ಹೋಗಬೇಕೆಂಬ ನಿರ್ಧಾರ; ಆ ದಿಕ್ಕಿನಲ್ಲಿ ತಲೆ ಮುಂದಾಗಿ ಒಂದೇ ಸಮನೆ ನುಗ್ಗುವುದು; ಆತ್ಮತೆಯ ರಕ್ಷಾ ವಿಧಾನ, ಅಂದಗೆಟ್ಟ ಮುಗ್ಗರಿಕೆ, ಒಂದು ಹೆಜ್ಜೆಯೂ ಬುದ್ಧಿಪೂರ್ವಕ ಉದ್ದೇಶದಿಂದ ದುಡುಕಿದ್ದಲ್ಲ; ಆದರೂ ಎಲ್ಲವೂ ನಿರ್ಧಾರಕ್ಕೆ ವಿರುದ್ಧವೇ.

ಮೆಲಬರಿ ನಿರೀಕ್ಷಿಸಿದ್ದು, ಹೆದರಿದ್ದು ಎಲ್ಲವೂ ಇದೇ. ಅಲ್ಲ ಅದಕ್ಕೂ ಹೆಚ್ಚು. ಏಕೆಂದರೆ, ಇದರಿಂದ ಈಗ ಒದಗಿ ಬಂದಂಥ ಜನಪ್ರಸಿದ್ಧಿ ಆತ ಲಕ್ಷಿಸಿದ್ದಿಲ್ಲ. ಈಗ ಅವನೇನು ಮಾಡಬೇಕು? ಗ್ರೇಸಳು ಒಪ್ಪುವುದಿಲ್ಲವೆಂದು ತಾನೇ ಹೋಗಿ ಶ್ರೀಮತಿ ಚಾರ್ಮಂದಳನ್ನು ಪ್ರಾರ್ಥಿಸಿಕೊಳ್ಳುವುದೇ? ಅವನಿಗೆ ಈಗ ವಿಂಟರಬೋರ್ನನ ವಿಚಾರ ಹೊಳೆಯಿತು. ಮತ್ತು, ಅವನ ಸಲಹೆ ಪಡೆಯಬೇಕು. ಅವನನ್ನು ಕೇಳಿ ತಿಳಿದುಕೊಳ್ಳಬೇಕು ಎಂದು ಅನಿಸಿತು. ತನ್ನಂತೆಯೇ ಒಬ್ಬ ಗಂಡಸು ಗೆಳೆಯನಾಗಿ ಇರಬೇಕು, ಅವನಲ್ಲಿ ತನ್ನ ಎಲ್ಲ ದುಗುಡವನ್ನು ತೋಡಿ ಜೀವ ಹಗುರು ಮಾಡಿಕೊಳ್ಳಬೇಕು ಎಂದು ಅವನಿಗೆ ಬಲವಾಗಿ ಅನಿಸಿತು.

ಅವನಿಗೆ ಈಗ ತನ್ನ ಸ್ವಂತ ನಿರ್ಣಯದಲ್ಲಿ ಏನೂ ನಂಬಿಕೆ ಉಳಿದಿದ್ದಿಲ್ಲ. ಇಷ್ಟೆಲ್ಲ ವರ್ಷ ಅವನು ನಂಬಿಕೊಂಡಿದ್ದ ಅವನ ನಿಶ್ಚಯಾತ್ಮಕ ಬುದ್ಧಿಯು, ಇತ್ತೀಚೆಗೆ, ಬಣ್ಣ ಬಯಲಾದ ಸುಳ್ಳು ಗೆಳೆಯನಂತೆ ಅನಪೇಕ್ಷಿತವಾದ ಡಾಂಭಿಕತೆ ಮತ್ತು ಮಾಯಾಭಾಸದ ಆಳವನ್ನು ಹೊರಗೆಡುಹಿತು, — ಅದೂ ಎಲ್ಲವೂ ಘನವಾಗಿದೆ, ದೃಢವಾಗಿದೆ ಎಂದು ಭಾವಿಸಿದ್ದಲ್ಲಿ. ಈಗ ಹವಾಮಾನದ ಕುರಿತು, ವೇಳೆಯ ಕುರಿತು, ಹಣ್ಣಿನ ಬೆಳೆಯ ಕುರಿತು ಒಂದು ಊಹೆ ಕಟ್ಟಲು ಕೂಡ ಆತ ಅಂಜ ಹತ್ತಿದನು. ಅಷ್ಟು ಅವನಿಗೆ ತನ್ನದೆ ಕುರಿತು ಅಪನಂಬಿಕೆ ಉಂಟಾಗಿತ್ತು.

ಮಂಜುಗಟ್ಟಿದ ಒಂದು ಸಂಜೆಗೆ ಬೆಟ್ಟವೆಲ್ಲ ತಣ್ಣಗೆ ಬೆವತಂತೆ ತೋರುತ್ತಿರುವಾಗ, ಒಂದೊಂದು ಬೋಳು ಬರಲು ಟೊಂಗೆಯಿಂದಲೂ ಬೆವರಹನಿ ತೂಗುತ್ತಿರುವಾಗ, ಬಾನಿಗೆ ಬಣ್ಣವೆ ಇಲ್ಲದಿರುವಾಗ, ಮರಗಳೆಲ್ಲ ಅವನ ಕಣ್ಣೆದುರಿಗೆ ಸ್ಥೂಲದೇಹದ ದಿನಮಾನವೆ ಕಳೆದುಹೋಗಿ ವಿಕರಾಳ ಭೂತಗಳಂತೆ ಎದ್ದು ನಿಂತಾಗ, ಮೆಲಬರಿಯು ಜೈಲ್ಸನನ್ನು ಕಾಣಲು ಹೊರಟನು. ಈಗ ಅವನು ವಿಂಟರಬೋರ್ನನನ್ನು ಕಾಣುವುದೆ ಅಪರೂಪವಾಗಿತ್ತು. ಆದರೆ ಆತ ಶ್ರೀಮತಿ ಚಾರ್ಮಂದಳ ಎಸ್ಟೇಟಿನ ಗಡಿಯಲ್ಲಿಯೆ ಒಂದು ಏಕಾಂತ ಗುಡಿಸಲಿನಲ್ಲಿ ವಾಸಿಸುತ್ತಿದ್ದನೆಂದು ಮೆಲಬರಿ ನಂಬಿದ್ದನು. ಅಲ್ಲಿದ್ದರೂ ಅದು ಈ ಮಲೆನಾಡಿನ ವಲಯದೊಳಗೇ ಆಗಿತ್ತು. ಆ ಆರ್ದ್ರವೆಂದ ಪ್ರಾಕೃತಿಕ ದೃಶ್ಯ ಶ್ರೇಣಿಯೊಳಗಿಂದ ಈ ಮರದ ವ್ಯಾಪಾರಿಯ ಕಡ್ಡಿ — ಕಾಲುಗಳು ಸದ್ದಿಲ್ಲದೆ ದಾಪು ಹಾಕುತ್ತ ಸಾಗಿದವು. ಅವನ ಕಣ್ಣುಗಳು ಕೆಳಗೆ ರಾಶಿ ಒಟ್ಟಿ ಹರಡಿದ ಕಳೆದ ವರ್ಷದ ತರಗೆಲೆಗಳ ಮೇಲೆ ಹಾಯುತ್ತಿದ್ದವು. ಆಗಾಗ್ಗೆ, ಏನೋ

ಕಟುವಾದ ಮಾನಸಿಕ ವಿಧಾನವೊಂದಕ್ಕೆ ಉತ್ತರಕೊಡುವಂತೆ 'ಏ' ಎಂದು ಅವಸರದ ಉದ್ಗಾರ ಅವನ ತುಟಿಯಿಂದ ಹೊರಡುತ್ತಿತ್ತು.

ಅವನ ನೋಟವನ್ನು ಹೊಗೆಯು ತೆಳ್ಳಗಿನ ನೀಲಿಯುಬ್ಬು ಸೆಳೆಯಿತು. ಅದರ ಹಿಂದೆ ದನಿಗಳ ಕಲಕಲವೂ ಮರಕಡಿಯುವ ಸದ್ದೂ ಏಳುತ್ತಿತ್ತು. ಆ ಕಡೆಗೆ ಹೆಜ್ಜೆ ಹೊರಳಿಸಿದಾಗ ಆತ ಎದುರಿಗೆ ವಿಂಟರಬೋರ್ನನನ್ನು ಕಂಡನು.

ಜೈಲ್ಸನಿಗೆ ಈ ಚಳಿಗಾಲದ ಸಕತ್‌ಕಾಯಿಲೆ ಆಗಿತ್ತು. ಆದರೆ ಅದು ಬಹಳ ಮಂದಿಗೆ ಗೊತ್ತಿದ್ದಿಲ್ಲ. ಆ ಮೂಲಕ ದೀರ್ಘಕಾಲದ ನಿರುದ್ಯೋಗಿಯೂ ಶೂನ್ಯ ಮನಸ್ಕನೂ ಆಗಿದ್ದರಿಂದ, ಈಗ ಆತ ಆ ನೆರೆಕರೆಯಲ್ಲಿಯೆ ಮೈತುಂಬ ಭಾರಿ ಕೆಲಸ ವುಳ್ಳ ಮಂದಿಯಲ್ಲಿ ಒಬ್ಬನಾಗಿದ್ದನು. ಇದು ಹೀಗೆ ಬಹಳೊಮ್ಮೆ ಆಗುವುದುಂಟು. ನಮ್ಮ ಅನುಗ್ರಹಕ್ಕೆ ಎರವಾದ, ಹೊರಬಿದ್ದ ಗೆಳೆಯರು ನಮ್ಮಿಂದ ಕಣ್ಮರೆಯಾಗಿ ದ್ದಾಗ, ಉಪವಾಸ ಸಾಯುತ್ತಿರಬಹುದೆಂದು ನಾವು ನಿರೀಕ್ಷಿಸಿದರೆ, ಅವರು ಒಳ್ಳೆ ಕ್ಷೇಮವಾಗಿಯೇ ಇದ್ದುದನ್ನು ನಾವು ಕಾಣುವುದುಂಟು. ಅವನು ತಾನೇ ಯಾವ ಲಾಭವನ್ನು ಬಯಸದಿದ್ದರೂ ಬೇಡಿಕೊಂಡು ಹೋಗದಿದ್ದರೂ, ಅವನಿಂದ ಮಂದಿ ಬಲುದೊಡ್ಡ ಮೊತ್ತದಲ್ಲಿ ಗೂಟ ತಟ್ಟಿಗಳನ್ನು ಇತರ ಬೆಟ್ಟದ ಸರಕನ್ನು ಪೂರೈಸಲು ಬೇಡಿಕೆ ಹಾಕಿದ್ದರಿಂದ ಅದಕ್ಕಾಗಿ ಆತ ಎಕರೆಗಟ್ಟಲೆ ಹೆಝಲ್ ಪೊದೆಗಳನ್ನು ಖರೀದಿ ಮಾಡಬೇಕಾಯಿತು. ಆಗ ಅವನ್ನೆ ಕಡಿದುಹಾಕಿ ಬೇಕಾದ ಸಾಮಾನು ತಯಾರಿಸಲು ಆತ ದಿನಾಲು ಯಂತ್ರದಂತೆ ದುಡಿಯುತ್ತಿದ್ದನು.

ಹೆಝಲಗಿಡವು ಇಂದು ತನ್ನ ಹೆಸರನ್ನು ಸುಳ್ಳು ಮಾಡುವಂತೆ ಇದ್ದಿಲ್ಲ. ಮಂಜು ಹಿಂಜಿ ಹಿಂಜರಿದ ಕಡೆಯಲ್ಲಿ ಇಡಿಯ ಕಾನು ಬೆಟ್ಟ ಆ ಬಣ್ಣದ ತಿಳಿಯಾದ ಛಾಯೆ ಗಳನ್ನು ತೂರುತ್ತಿತ್ತು. ಅವುಗಳ ನಡುವೆ ವಿಂಟರಬೋರ್ನ ಸ್ವತಃ ಒಂದು ತಡಿಕೆ ಯನ್ನು ತಯಾರಿಸುವದರಲ್ಲಿ ತೊಡಗಿದ್ದನು. ಗೂಟಗಳನ್ನು ನೆಲದಲ್ಲಿ ಭದ್ರವಾಗಿ ಸಾಲಾಗಿ ಹೂಳಿ ಅವುಗಳ ಮೇಲೆ ವಾಲಿಕೊಂಡು ಆತ ಟಿಸಿಲು ಬಳ್ಳಿಗಳನ್ನು ಹಣೆಯು ತ್ತಿದ್ದನು. ಅವನ ಪಕ್ಕದಲ್ಲಿಯೇ ಆತನಕ ಮಾಡಿ ಮುಗಿಸಿದ ತಡಿಕೆಗಳ ಒಂದು ರಾಶಿಯೇ ಇತ್ತು — ವನದೇವತೆಯ ವೇದಿಕೆಯಂತೆ. ದಟ್ಟವಾಗಿ ಒಟ್ಟಿ ಚಚ್ಚೌಕಾಗಿ. ಅವುಗಳ ನಾಲ್ಕು ನಿಟ್ಟಿನಲ್ಲಿ ಗೂಟಗಳ ಮೊನೆಗಳು ಹರಿತವಾಗಿ ಕಿಕ್ಕಿರಿದು ಚಾಚಿದ್ದವು. ಸ್ವಲ್ಪದೂರದಲ್ಲಿ ಅವನ ಜನರು ಅವನ ಈ ಕಂತ್ರಾಟನ್ನು ಪೂರೈಸಲು ಅವನಿಗೆ ನೆರ ವಾಗುತಿದ್ದರು. ಅವರ ಕೊಡಲಿಯ ಕೆಳಗೆ ಕಡಿದು ಬಿದ್ದ ಕಂಟಿಯ ಕಟ್ಟಿಗೆ ಸಾಲು ಚಾಚಿದ್ದವು. ಹತ್ತಿರವೆ ಒಂದು ಹಂದರವನ್ನು ನಿಲ್ಲಿಸಿದ್ದರು. ಅದರ ಮುಂದೆ ಬೆಂಕಿ ಉರಿಯುತಿದ್ದು ಅದರ ಹೊಗೆಯು ಮೆಲಬರಿಯ ಗಮನವನ್ನು ಸೆಳೆದಿತ್ತು. ಹವೆಯು ಇಷ್ಟು ಒದ್ದೆಯಾಗಿತ್ತು. ಹೊಗೆಯೂ ಭಾರವಾಗಿ ತೂಗಾಡುತಿತ್ತು. ನೆಲದಿಂದ ಎತ್ತರಕ್ಕೆ ಏರದೆ ಸುತ್ತಲಿನ ಪೊದೆಕಿಂಡಿಗಳಲ್ಲಿ ಸರಿದು ಹೋಗುತಿತ್ತು.

ಆ ದೃಶ್ಯವನ್ನು ಖಿನ್ನ ಮನಸ್ಕನಾಗಿ ಸ್ವಲ್ಪ ಹೊತ್ತು ಧೇನಿಸುತ್ತ ಮೆಲಬರಿ

ಹತ್ತಿರ ಹೋದನು ಮತ್ತು ಇಷ್ಟು ಕೆಲಸದ ಗಡಿಬಿಡಿಯಲ್ಲಿ ಆತ ಹೇಗೆಂದು ಜೈಲ್ಸನಿಗೆ ಸ್ವಲ್ಪದರಲ್ಲಿ ವಿಚಾರಿಸಿದನು. ಅಂದರೆ ಅವನ ವಿಚಾರಣೆಯ ಒಳದನಿಯಲ್ಲಿ, 'ನೀನು ಗ್ರೇಸಳನ್ನು ಕಳೆದುಕೊಂಡಿದ್ದರೂ, ಇಷ್ಟು ಮಟ್ಟಕ್ಕೆ ಊರ್ಜಿತ ಸ್ಥಿತಿಗೆ ಬಂದು ಮುಟ್ಟಿದ್ದಾದರೂ ಹೇಗೆ?' ಎಂಬ ಪ್ರಶ್ನೆ ಇತ್ತು. ಈ ಭೆಟ್ಟಿಯು ಬಗೆಗೆ ಮೆಲಬರಿ ಭಾವೋದ್ರೇಕಗೊಳ್ಳದೆ ಇಲ್ಲ. ಏಕೆಂದರೆ, ಗ್ರೇಸಳ ಪ್ರಕರಣ ಅವರನ್ನು ವಿಂಗಡಿಸಿತ್ತು. ಅವರ ಹಳೆಯ ಕಾಲದ ಸಲಿಗೆಯನ್ನು ಕೊನೆಗಾಣಿಸಿತ್ತು.

ವಿಂಟರಬೋರ್ನನೂ ಅಷ್ಟೇ ಸ್ವಲ್ಪದರಲ್ಲಿಯೇ ವಿವರಿಸಿದನು. ಕೈಯಲ್ಲಿ ಹಿಡಿದ ಒಂದು ಟೊಂಗೆಯ ಕೆಲಸದಿಂದ ಕಣ್ಣು ಮೇಲಕ್ಕೆ ಎತ್ತದೆ ಮಾತಾಡಿದನು.

'ಅದೆಲ್ಲ ಕಡಿದು ಮುಗಿಯುವನಕ ಏಪ್ರಿಲ್ ದಾಟಬಹುದು', ಮೆಲಬರಿ ಅಂದನು.

'ಹೌದು. ಅದೇ ಸುಮಾರು ಹಿಡಿಯಬಹುದು', ವಿಂಟರಬೋರ್ನ ಅಂದನು ಅವನ ಕೊನೆಯ ಶಬ್ದವನ್ನು ಅವನ ಕತ್ತಿಯು ಕಡಿತವು ಎರಡು ತುಂಡಾಗಿ ಮಾಡಿತು.

ನಂತರ ಇನ್ನೊಂದು ಮಧ್ಯಂತರದ ಮೌನ. ಮೆಲಬರಿ ಇನ್ನೂ ನೋಡುತ್ತಲೇ ನಿಂತಿದ್ದನು. ವಿಂಟರಬೋರ್ನನ ಕತ್ತಿಯಿಂದ ಸಿಡಿದ ಚೆಕ್ಕೆಯು ಅವನ ಈ ಅತಿಥಿಯ ಕೋಟಿಗೂ, ಕಾಲಿಗೂ ಬಡಿಯುತಿತ್ತು. ಆದರೆ ಇವನು ಅದನ್ನು ಗಮನಿಸುತಿದ್ದಿಲ್ಲ.

'ಆಹಾ! ಜೈಲ್ಸ, ನೀನು ನನ್ನ ಪಾಲುಗಾರನಾಗಬೇಕಿತ್ತು. ನೀನು ನನ್ನ ಅಳಿಯನಾಗಬೇಕಿತ್ತು' ಆ ಮುದುಕ ಕೊನೆಗೂ ಆಡಿಬಿಟ್ಟನು. 'ಹಾಗೆ ಆಗಿದ್ದರೆ, ಅವಳಿಗೂ ನನಗೂ ಎಷ್ಟೋ ಚೆನ್ನಾಗಿತ್ತು.'

ವಿಂಟರಬೋರ್ನನಿಗೆ ಅನಿಸಿತು — ತನ್ನ ಈ ಹಳೆಯ ಗೆಳೆಯನದು ಏನೋ ತಪ್ಪಿದೆ. ಹೆಣೆಯಲು ಎತ್ತಿಕೊಂಡ ಸೆಳೆಯನ್ನು ಕೆಳಗೆ ಒಗೆದು ಅವನು ಆ ಮರದ ವ್ಯಾಪಾರಿಯ ಚಿತ್ತವೃತ್ತಿಗೆ ಕೂಡಲೆ ಮರುದನಿಯನ್ನು ಕೊಟ್ಟನು. 'ಅವಳಿಗೆ ಕಾಯಿಲೆಯೋ?' ಆತ ಗಡಿಬಿಡಿಯಿಂದ ಕೇಳಿದನು.

'ಇಲ್ಲ. ಇಲ್ಲ' ಮೆಲಬರಿ ಕೆಲನಿಮಿಷ ಮಾತಾಡದೆ ನಿಂತನು. ಮತ್ತು ಆ ಮೇಲೆ ಮುಂದರಿಯಲು ಅಸಾಧ್ಯವೋ ಎಂಬಂತೆ ಆತ ಹೋಗಲು ಹೊರಳಿದನು.

ರಾತ್ರೆಗಾಗಿ ಎಲ್ಲ ಉಪಕರಣ ಸಾಮುಗ್ರಿಯನ್ನು ಕಟ್ಟಲು ತನ್ನ ಒಬ್ಬ ಆಳಿಗೆ ಹೇಳಿ ವಿಂಟರಬೋರ್ನ ಮೆಲಬರಿಯ ಸಂಗಡವೆ ನಡೆಯ ಹತ್ತಿದನು. 'ಅಲ್ಲ. ನಾನು ಫಾಜೀಲು ಕುತೂಹಲ ಕಾಣಿಸಿದಂತೆ ಕಂಡರೆ ದೇವರು ನನ್ನನ್ನು ದಂಡಿಸಲಿ, ಸರ್', ಆತ ಅಂದನು, 'ಏಕೆಂದರೆ ನಾವು ಇಬ್ಬರೂ ಹಿಂದೆ ಇದ್ದಂತೆ ಇಂದು ಅನ್ಯೋನ್ಯವಾಗಿ ಇಲ್ಲ; ಆದರೆ ನನ್ನ ಆಸೆ — ನಿಮ್ಮ ಕಡೆಗೆ. ಅವರೆಲ್ಲರಿಗೂ ಕ್ಷೇಮ ತಾನೆ?'

'ಇಲ್ಲ', ಅಂದ ಮೆಲಬರಿ, 'ಇಲ್ಲ'

ಆತ ತಡೆದನು. ಮತ್ತು ಒಂದು ಎಳೆಯ ಏಶ್‌ಮರದ ನುಣುಪಾದ ಮೈಯನ್ನು ಅಂಗೈಯಿಂದ ಬಡಿದನು. 'ಈ ಕಾಂಡದ ತೊಗಟೆ ಇದ್ದಲ್ಲಿ ಅವನ ಕಿವಿ ಇರಬೇಕಾಗಿತ್ತು

— ಎಂದೆನಿಸುತ್ತದೆ' ಆತ ಉದ್ಗಾರ ತೆಗೆದನು. 'ಅವನು ಯಾವದಕ್ಕೆ ಅರ್ಹನೋ ಅದಕ್ಕೂ ಕಡಿಮೆಯೇ ನಾನು ಅವನನ್ನು ನಡೆಯಿಸಿಕೊಳ್ಳುತಿದ್ದೆ.'

'ಈಗ' ವಿಂಟರಬೋರ್ನ ಅಂದನು, 'ಮನೆಗೆ ಹೋಗುವ ಅವಸರ ಬೇಡ. ನನ್ನ ಹಂದರದಲ್ಲಿ ತುಸು ಏಲ್‌ಮದ್ಯವನ್ನು ಬಿಸಿಮಾಡಲು ಇಟ್ಟಿದ್ದೇನೆ ಇಲ್ಲಿ. ನಾವು ಕೂತು ಅದನ್ನು ಕುಡಿಯುತ್ತ ತುಸು ಮಾತನಾಡುವಾ.'

ಜೈಲ್ಸ ಅವನ ಭುಜವನ್ನು ಹಿಡಿದೊಡನೆ ಮೆಲಬರಿ ಪ್ರತಿಭಟಿಸದೆ ಅತ್ತ ಕಡೆಗೆ ಹೊರಳಿದನು. ಅವರು ಚಪ್ಪರಕ್ಕೆ, ಬೆಂಕಿ ಇದ್ದಲ್ಲಿಗೆ ತಿರುಗಿ ಹೋದರು. ಆ ತನಕ ಉಳಿದ ಬೆಟ್ಟದಾಳುಗಳು ಹೊರಟು ಹೋಗಿದ್ದರು. ಇವರು ಚಪ್ಪರದಡಿಗೆ ಕೂತರು. ಅವನು ಬಿಸಿ ಬೂದಿಯೊಳಗಿಂದ ಏಲ್ ಬಟ್ಟಲುಗಳನ್ನು ಹೊರತೆಗೆದನು. ಅವರು ಇಬ್ಬರೂ ಕೂಡಿಯೆ ಕುಡಿದರು.

'ಜೈಲ್ಸ, ನೀನೇ ಅವಳನ್ನು ಪಡೆಯಬೇಕಿತ್ತು, ನೋಡು, ಇದೀಗಲೆ ನಾನು ಹೇಳಿದಂತೆ' ಮೆಲಬರಿ ಮತ್ತೆ ಅಂದನು, 'ಏಕೆಂಬುದನ್ನು ಈಗ ಮೊದಲ ಬಾರಿ ನಿನಗೆ ಹೇಳುತ್ತೇನೆ, ಕೇಳು.'

ಅನಂತರ ದೊಡ್ಡ ಪರಿಹಾರವೆಂಬಂತೆ ಆತ ವಿಂಟರಬೋರ್ನನಿಗೆ ಹೇಳತೊಡಗಿದನು. ಆ ಹಳೆಯ ಕಥೆಯನ್ನು — ಜೈಲ್ಸನ ತಂದೆಯ ಪ್ರಿಯತಮೆಯನ್ನು ತಾನು ಹೇಗೆ ಒಲಿಸಿಕೊಂಡು ಗೆದ್ದುಕೊಂಡನೆಂಬುದನ್ನು. ಆತ ಮಾಡಿದ ಉಪಾಯ ಯಾವದೆ ಪ್ರೇಮಿಕನು ಹೂಡುವ ವಿನೋದದ ನಲ್ಪಾಟವಾಗಿತ್ತು. ಅದಕ್ಕೂ ಕೆಟ್ಟದ್ದೇನೂ ಇದ್ದಿಲ್ಲ. ಆದರೆ ಪ್ರಣಯರಂಗವಲ್ಲದಿದ್ದರೆ ಅವನ ಆ ಗತ್ತುಗಾರಿಗೆ ಅನ್ಯಾಯವೂ ಕ್ರೂರವೂ ಎನಿಸಿಕೊಳ್ಳುವಂತಿತ್ತು. ತಂದೆಗೆ ಬಗೆದ ದ್ರೋಹದ ಪರಿಮಾರ್ಜನೆಯನ್ನು ಮಗನಿಗೆ ತನ್ನ ಗ್ರೇಸಳನ್ನು ಕೊಟ್ಟು ಹೇಗೆ ಪೂರ್ತಿಮಾಡಬೇಕೆಂದು ತಾನು ಯೋಚಿಸಿದ್ದೆನೆಂಬುದನ್ನು ಆತ ಕಥಿಸಿದನು. ಆದರೆ ಆ ತನಕ ಫಿಟ್ಝಪಿಯರ್ಸನ ರೂಪದಲ್ಲಿ ಸೈತಾನನೇ ಬಂದು ಅವನಿಗೆ ಮೋಹಗೊಳಿಸಿಬಿಟ್ಟನು. ಮತ್ತು ಆತ ತನ್ನ ಪುಣ್ಯಮಯ ಪಂಥವನ್ನೆ ಮುರಿಯುವಂತೆ ಆಯಿತು.

'ಅಯ್ಯೋ, ನಿಜವಾಗಿಯೂ ಅದೆಷ್ಟು ಮಿಗಿಲಾಗಿ ನಾನು ಆ ಮನುಷ್ಯನನ್ನು ಭಾವಿಸುತಿದ್ದೆ. ಆತ ಇಷ್ಟು ದುರ್ಬಲ, ಇಷ್ಟು ತಲೆಕೆಟ್ಟವನೆಂದು ಯಾರು ಊಹಿಸಬಹುದಿತ್ತು? ಜೈಲ್ಸ, ಆಕೆ ನಿನ್ನವಳಾಗಬೇಕಿತ್ತು. ಮತ್ತು ಆಗ ಇದಕ್ಕೆಲ್ಲ ಕೊನೆ ಆಗುತಿತ್ತು.'

ಅರಿಯದೆ ಮೆಲಬರಿ ಅವನ ಮಾಯವಾಗುತ್ತಿರುವ ಗಾಯವನ್ನು ಮತ್ತೆ ಮರುಕವಿಲ್ಲದೆ ಹರಿಯತೊಡಗಿದ್ದನು. ಆದಾಗ್ಯೂ ವಿಂಟರಬೋರ್ನ ಬಲ್ಲ. ಅದನ್ನು ಹೇಗೆ ಸಹಿಸಿ ಮೇಲಿಂದ ಶಾಂತಿಯನ್ನು ಕಾಪಾಡಿಕೊಳ್ಳಬೇಕೆಂದು. ಮೆಲಬರಿಗೆ ತನ್ನ ವಿಷಯ ಜೀವಾಳದ್ದು; ಅದರ ಮೇಲೆಯೇ ಆತ ಏಕಾಗ್ರ. ಆದ್ದರಿಂದ ತಾನು ಉಂಟುಮಾಡುತ್ತಿರುವ ನೋವಿನ ಬಗೆಗೆ ಆತ ಕುರುಡ. ಆದ್ದರಿಂದ ಆ ತರುಣನು ಗ್ರೇಸಳ

ಪರವಾಗಿ ಈ ಪ್ರಕರಣವನ್ನು ಶಕ್ಯವಿದ್ದಷ್ಟು ಸಾಧುವಾಗಿ ಕಾಣಲು, ಕಾಣಿಸಲು ಯತ್ನಿಸಿದನು.

'ಅವಳು ನನ್ನೊಂದಿಗೆ ಸುಖಿಯೇ ಆಗುತಿದ್ದಿಲ್ಲ', ಆತ ನಿರ್ವಿಕಾರ ಒಣದನಿಯಡಿಗೆ ತನ್ನ ಭಾವನೆಗಳನ್ನು ಅಡಗಿಸುತ್ತ ಅಂದನು, 'ನಾನು ಸಾಕಷ್ಟು ಸುಶಿಕ್ಷಿತನಲ್ಲ. ಸ್ವಲ್ಪದರಲ್ಲಿ ಹೇಳುವದಾದರೆ ತೀರ ಒರಟು. ಅವಳು ಹಾರೈಸುವ ಸುಖಸೌಕರ್ಯಗಳಿಂದ ಅವಳನ್ನು ನಾನು ಸುತ್ತುವರಿಸುವದು ಏನೇನೂ ಸಾಧ್ಯವಿದ್ದಿಲ್ಲ.'

'ಬರಿ ಮರುಳು,— ಇಲ್ಲಿಯೆ ನೀನು ಪೂರಾ ತಪ್ಪಿದ್ದಿ.' ಆ ಅಜ್ಞಾನಿ ಮುದುಕನು ಹಟಮಾರಿತನದಿಂದ ಹೇಳಿದನು, 'ಅವಳು ಈ ಹೊತ್ತೇ ನನಗೆ ಹೇಳಿದಳು,— ಅವಳಿಗೆ ಅಂಥ ಸುಖಸೌಕರ್ಯ ಭೋಗವಿಲಾಸಗಳು ಸೇರುವುದಿಲ್ಲವೆಂತ. ಆ ರೀತಿ ನನ್ನ ಎಲ್ಲ ಕಷ್ಟ, ಹಣ ಅವಳಿಗಾಗಿ ಕೊಂಡುಕೊಂಡದ್ದು ಬರೆ ತಿಪ್ಪೆಗೆ ಒಗೆದಂತೆಯೇ ಆಯಿತು. ಅವಳು ಮಾರ್ಟಿಸೌಥಳಂತೆ ಆಗುವದೇ ಲೇಸೆಂದು ಒಪ್ಪುತ್ತಾಳೆ,— ಇದಕ್ಕೇನಂತೆ? ಅದೆ ಅವಳ ಮಹತ್ವಾಕಾಂಕ್ಷೆಯ ಶಿಖರ. ಯಾರಿಗೆ ಗೊತ್ತು. ಅವಳ ಅನ್ನುವದೆ ನಿಜವಿರಬಹುದು. ಜೈಲ್ಸ, ಆಕೆ ಹೊರಕವಚದಡಿಗೆ ನಿನ್ನನ್ನೆ ಪ್ರೀತಿಸುತಿದ್ದಳು — ಇದಕ್ಕೂ ಹೆಚ್ಚಿನದೆಂದರೆ ಆಕೆ ಈಗಲೂ ನಿನ್ನನ್ನೆ ಪ್ರೀತಿಸುತಿದ್ದಾಳೆ — ಆ ಬಡ ಹುಡುಗೆಗೆ ಇದು ಇನ್ನು ದುರ್ದೈವದ ಸಂಗತಿ.' ತಾನು ಅದೆಂಥ ಜ್ವಾಲೆಗಳನ್ನು ಕೆದರಿಕೆದರಿ ಹೊತ್ತಿಸುತಿದ್ದೇನೆಂದು ಮೆಲಬರಿಗೆ ಬರೆ ಗೊತ್ತಾಗಿದ್ದರೆ ಆತ ಸುಮ್ಮನೆ ಇರುತಿದ್ದನೇನೋ. ವಿಂಟರಬೋರ್ನ ಬಹಳ ಹೊತ್ತು ಸುಮ್ಮನೆ ಉಳಿದನು. ಅವರ ಸುತ್ತಲೂ ಕತ್ತಲೆ ಮುತ್ತಿತ್ತು. ಟೊಂಗೆಗಳಿಂದ ಟಪಟಪ ಉದುರುತ್ತಿರುವ ಮಂಜು ಹನಿಗಳ ಏಕನಾದವು ಈಗ ಭರಗೊಂಡು ಜಿನುಗಾದ ಸುರಿಮಳೆಯಾಗಿತ್ತು.

'ಓ, ಅವಳು ನನಗಾಗಿ ಬಹಳೇನು ಪರಿವೆ ಮಾಡಿದ್ದೇ ಇಲ್ಲ.' ಜೈಲ್ಸ ಹೇಗೋ ಅಂದನು, ಒಂದು ಕೊಳ್ಳಿಯಿಂದ ಕೆಂಡಗಳನ್ನು ಕೆದರುತ್ತ.

'ಮಾಡಿದ್ದಳು, ಮಾಡುತಿದ್ದಾಳೆ. ನಾ ಹೇಳ್ತೇನೆ. ನಿನಗೆ,' ಮೆಲಬರಿ ಹಟಮಾರಿತನದಿಂದ ಅಂದನು. 'ಆದರೆ ಅದೆಲ್ಲ ಈಗ ವ್ಯರ್ಥ ಮಾತು. ಈಗ ನಾನು ನಿನ್ನಲ್ಲಿ ಕೇಳಲಿಕ್ಕೆ ಬಂದದ್ದು ಹೆಚ್ಚು ಪ್ರಾವಹಾರಿಕವಾದ ವಿಷಯ. ಈಗಿದ್ದ ವಸ್ತುಸ್ಥಿತಿಯನ್ನು ಆದಷ್ಟು ಉತ್ತಮಗೊಳಿಸುವದು ಹೇಗೆ ನಾನೀಗ ಜೀವದ ಹಂಗುದೊರೆದ ಹೆಜ್ಜೆಯನ್ನು ಆಲೋಚಿಸಿದ್ದೇನೆ — ಆ ಚಾರ್ಮಂದ ಹೆಂಗಸನ್ನು ಭೆಟ್ಟಿಯಾಗುವದು, ಗ್ರೇಸಳು ಒಪ್ಪುವದಿಲ್ಲ. ಅಂದಮೇಲೆ ನಾನೇ ಅವಳನ್ನು ಕಂಡು ಮನವಿ ಮಾಡಿಕೊಳ್ಳುತ್ತೇನೆ. ಈಗ ಬಾಳಿನ ತಕ್ಕಡಿಯನ್ನು ತನ್ನ ಕೈಯಲ್ಲಿ ತೂಗಿಸುತ್ತಿರುವವಳು ಆಕೆ — ಆತನಲ್ಲ. ಅವಳಿಗೆ ಅವನನ್ನು ಅಡ್ಡ ದಾರಿ ಹಿಡಿದಿರುವ ಇಚ್ಛೆ ಇರುವತನಕ ಅವನು ಅವಳ ಬೆನ್ನಿಗೆ ಹೋಗುವವನು. ಅದನ್ನು ಅವಳು ಎಲ್ಲಿಯು ತನಕ ಮಾಡುವಳೆಂಬುವದು ಅವಳ ಲಹರಿಯನ್ನೆ ಕೂಡಿದೆ. ಅವಳು

ಹಿಂಟೋಕಿಗೆ ಬರುವ ಮುಂಚಿನ ಅವಳ ಚಾರಿತ್ರ್ಯದ ಬಗೆಗೆ ನೀನೇನಾದರೂ ಕೇಳಿದ್ದಿಯಾ ? '

'ನನಗೆ ಅನಿಸುತ್ತದೆ, ಅವಳು ತನ್ನ ಪ್ರಾಯದಲ್ಲಿ ಮೋಹದ ಮಾಟಗಾರ್ತಿ ಆಗಿದ್ದಳು.' ಆತ ಅಂದನು. ಅವನ ಶಾಂತತೆ ಆ ಕೆಂಡಗಳನ್ನು ನೋಡುತಿದ್ದಂತೆ ಒಂದೇ ಪಾತಾಳಿಯಲ್ಲಿತ್ತು. ' ಪ್ರೀತಿಸದೆ ಇದ್ದಲ್ಲಿ ನಕ್ಕವಳು, ಮದುವೆ ಆಗದಿದ್ದಲ್ಲಿ ಪ್ರೀತಿಸಿದವಳು — ಆ ಪ್ರಾಣಿ. ಮಿಸ್ಟರ ಚಾರ್ಮಂದ ಅವಳನ್ನು ಮದುವೆ ಯಾಗುವದಕ್ಕೆ ಮುಂಚೆ ಆಕೆ ಸ್ವಲ್ಪ ಕಾಲ ನಟಿಯಾಗಿದ್ದಳು.'

'ಅರೇ ಅರೆ, ಇದೆಲ್ಲ ನೀನು ಎಷ್ಟು ಬಚ್ಚಿಟ್ಟುಕೊಂಡಿದ್ದಿಯೋ ಜೈಲ್ಸ. ಮತ್ತೇನು ಹೇಳು.'

'ಮಿಸ್ಟರ ಚಾರ್ಮಂದ ಧನಿಕನಿದ್ದ — ಉತ್ತರದಲ್ಲಿ ಕಬ್ಬಿಣದ ವ್ಯಾಪಾರದಲ್ಲಿ ತೊಡಗಿದ್ದ. ಅವಳಿಗಿಂತ ೨೦—೩೦ ವರ್ಷಕ್ಕೆ ಹಿರಿಯ. ಅವಳನ್ನು ಮದುವೆ ಯಾದ, ವ್ಯಾಪಾರದಿಂದ ನಿವೃತ್ತನಾದ, ಇಲ್ಲಿಗೆ ಬಂದು ಈ ಆಸ್ತಿಯನ್ನು ಕೊಂಡುಕೊಂಡ.

'ಸೈ ಸೈ ಅದೆಲ್ಲ ನನಗೆ ಗೊತ್ತು ಬಿಡು. ಆದರೆ ಆ ಇನ್ನೊಂದು ಕಥೆ ನನಗೆ ಗೊತ್ತಿದ್ದಿಲ್ಲ. ಒಟ್ಟಾರೆ ಇದರ ಲಕ್ಷಣವೇನೂ ಒಳಿತು ಕಾಣುವದಿಲ್ಲ. ಏಕೆಂದರೆ ಯಾರು ವರ್ಷಗಟ್ಟಲೆ ಅಡ್ಡ ಪ್ರೇಮ ಸೊಟ್ಟಕಾಮಗಳನ್ನೆ ತನ್ನ ವ್ಯಾಸಂಗವಾಗಿ ಮಾಡಿಕೊಂಡಿದ್ದಳೊ ಅಂಥ ಹೆಂಗಸಿನ ತಾಳ್ಮೆಯನ್ನು ಪ್ರಾರ್ಥಿಸಲು ನಾನು ಹೇಗೆ ಹೋಗಲಿ ? ನಿನಗೆ ತುಂಬ ಥ್ಯಾಂಕ್ಸ್ ಜೈಲ್ಸ, ಇದನ್ನು ಕಂಡು ಹಿಡಿದ ಬಗ್ಗೆ ; ಆದರೆ ಚಂಚಲ ಜಾತಿಗೆ ಸೇರಿದವಳೆಂಬುದು ನನ್ನ ಯೋಜನೆಯನ್ನು ಇನ್ನಷ್ಟು ಬಿಗಿಯಾಗಿ ಮಾಡುತ್ತದೆ.

ಇನ್ನೊಂದು ಮೌನದ ಅವಧಿ ಕಳೆಯಿತು. ಅವರಿಬ್ಬರೂ ಉದಾಸಭಾವದಿಂದ ಹೊಗೆಯನ್ನೆ ದಿಟ್ಟಿಸಿದರು. ಹೊಗೆಯು ತಟ್ಟಿಯ ಚಪ್ಪರಕ್ಕೆ ಬಡಿಯುತಿತ್ತು. ಅದರ ಹೆಣಿಗೆಯ ಕನ್ನುಗಳೊಳಗಿಂದ ದೊಡ್ಡ ಮಳೆಹನಿ ಆಗಾಗ್ಗೆ ಬೆಂಕಿಯಲ್ಲಿ ಸೂಟಿಯಾಗಿ ಉಗುಳಿದಂತೆ ಬೀಳುತಿತ್ತು. ಶ್ರೀಮತಿ ಚಾರ್ಮಂದಳು ವಿಂಟರಬೋರ್ನನಿಗೆ ಸ್ನೇಹಿತಳೇನೂ ಅಲ್ಲ. ಆದರೆ ಆತ ಪೌರುಷವಂತ. ದಾಕ್ಷಿಣ್ಯವಂತ. ಪರೀಕ್ಷೆಗೆ ಎಡೆಗೊಡದೆ ಅವಳನ್ನು ಹೀಗೆ ಧಿಕ್ಕಾರಕ್ಕೆ ಗುರಿಮಾಡುವದು ಅವನ ಎದೆ ಒಪ್ಪಲಿಲ್ಲ.

'ಆಕೆ ಉದಾರಿಯೆಂದು ಕೇಳಿದ್ದೇನೆ.' ಆತ ಉತ್ತರವಿತ್ತನು. 'ನೀವು ಪ್ರಾರ್ಥನೆ ಮಾಡಿದರೆ ವ್ಯರ್ಥವಾಗಲಾರದು.'

'ಹಾಗಾದರೆ ಮಾಡೇಬಿಡುತ್ತೇನೆ' ಅಂದನು ಮೆಲಬರಿ ಏಳುತ್ತ, 'ಒಳಿತಾಗಲಿ ಕೆಡುಕಾಗಲಿ, ಶ್ರೀಮತಿ ಚಾರ್ಮಂದಳಲ್ಲಿ ನಾನು ಹೋಗೇಬಿಡುತ್ತೇನೆ.'

೩೩

ಮರುದಿನ ಒಂಭತ್ತು ಗಂಟೆಗೆ ಮೆಲಬರಿ ಮಿರಿಮಿರಿ ಮಿಂಚುವ ಬನಾತಿನ ಸೂಟು ತೊಟ್ಟುಕೊಂಡನು. ಅದರ ಇಸ್ತ್ರಿಯು ನಿರಿಗೆ ನೀಟಾಗಿತ್ತು. ಕರ್ಪೂರದ ಘಮಘಮ ಸೂಸುತಿತ್ತು. ಬಟ್ಟೆತೊಟ್ಟು ಅಚ್ಚುಕಟ್ಟಾಗಿ ಆತ ಹಿಂಟೋಕ್ ದೊಡ್ಡ ಮನೆಯತ್ತ ಹೊರಟನು. ಆದರೆ ಹೋಗಲು ಅವನಿಗೆ ಹೆಚ್ಚಿನ ಒತ್ತಾಯ ಒದಗಿಬಂದಿತ್ತು. ಅವನ ಅಳಿಯ ಕೆಲವು ದಿನದ ಮಟ್ಟಿಗೆ ಲಂಡನ್ನಿಗೆ ಹೋಗಿದ್ದನು. ಅಲ್ಲಿ ಏನೋ ವ್ಯಾವಸಾಯಿಕ ಸಭೆಗಳಲ್ಲಿ ಭಾಗವಹಿಸುವದಿತ್ತಂತೆ ಅಥವಾ ಅದೊಂದು ತೋರಿಕೆಯ ನೆವವೂ ಆಗಿರಬಹುದು.

ತನ್ನ ಪಯಣದ ಗುರಿಯ ಕುರಿತು ಅವನು ಮೆಲಬರಿಯ ಹೆಂಡತಿಗಾಗಲಿ ಗ್ರೇಸಳಿಗಾಗಲಿ ಏನೂ ಹೇಳಲಿಲ್ಲ; ಅಂಥ ಒಂದು ಅಪಾಯಕರ ಯೋಜನೆಯನ್ನು ಬಿಟ್ಟುಕೊಡಲು ಅವರಿಬ್ಬರೂ ತನ್ನನ್ನು ಬಿನ್ನವಿಸಿಕೊಳ್ಳಬಹುದೆಂದು ಅವನಿಗೆ ಅಂಜಿಕೆ. ಅದ್ದರಿಂದ ಆತ ಗೊತ್ತುಪತ್ತೆ ಕೊಡದೆ ಮನೆಯಿಂದ ಹೊರಬಿದ್ದನು. ಅವನ ಕಲ್ಪನೆಯಂತೆ ಅನುಕೂಲವಾದ ಹೊತ್ತನ್ನೆ ಆತ ಆಯ್ದುಕೊಂಡಿದ್ದನು. ಶ್ರೀಮತಿ ಚಾರ್ಮಂಡಳು ಮುಂಜಾವಿನ ಉಪಾಹಾರ ಮುಗಿಸಿರಬೇಕು; ಬೇರೆ ಯಾವದೆ ಕೆಲಸ ಬೊಗಸೆಯ ಜನ ಬರುವದಿದ್ದರೂ ಬಂದಿರಬಾರದು — ಇಂಥದು ಅನುಕೂಲ ಸಮಯವೆಂದು ಆತ ಊಹಿಸಿದ್ದನು. ನಿಧಾನವಾಗಿ ದಾರಿ ಮೆಟ್ಟುತ್ತ ಆತನು ಕಿರಿಯ ಹಿಂಟೋಕದ ಕಾನು ಹಾಗೂ ಪಾರ್ಕಿನ ಮೇಲೆ ಇಳಿದು ಬಂದ ಹಣ್ಣಿನ ಬಾಗಾಯತುಗಳು ಇವುಗಳ ನಡುವಿನ ಬಯಲು ಕೊಳ್ಳವನ್ನು ದಾಟಿದನು. ಆ ಕೊಳ್ಳ ಕಾಡಿನ ನಡುವಿನ ಬಯಲಾದ್ದರಿಂದ ಆಚೆಯ ಗುಡ್ಡದ ಮೇಲೆ ಒಂದು ಕಾನಿನಿಂದ ವಿಂಟರಬೋರ್ನನು ಅವನನ್ನು ಕಂಡು ಗುರುತಿಸಿದನು. ಅವನ ಉದ್ದೇಶವನ್ನು ಅರಿತಿದ್ದರಿಂದ ಆ ತರುಣನು ಆ ಕಾನಿನಿಂದ ಲಗುಬಗೆಯಿಂದ ಇಳಿದು ಬಂದು ಆ ಮರದ ವ್ಯಾಪಾರಿಯನ್ನು ನಡುದಾರಿಯಲ್ಲಿ ಸಂಧಿಸಿದನು.

'ನಾನು ಈ ಬಗ್ಗೆ ವಿಚಾರಮಾಡುತಿದ್ದೆ, ಸರ್,' ಆತ ಅಂದನು. 'ಮತ್ತು ನನ್ನ ಅಭಿಪ್ರಾಯವೆಂದರೆ, ಸದ್ಯಕ್ಕೆ ನಿಮ್ಮ ಈ ಭೆಟ್ಟಿಯನ್ನು ಮುಂದೆ ಹಾಕಿದರೆ ಉತ್ತಮವಾದೀತು.'

ಆದರೆ ಮೆಲಬರಿ ಅವನ ಮಾತಿಗೆ ಕಿವಿಗೊಡಲಿಕ್ಕೂ ತಡೆಯಲೊಲ್ಲ. ಅವನ ಮನಸ್ಸು ನಿರ್ಧಾರಕ್ಕೆ ಬಂದು ಬಿಟ್ಟಿತ್ತು — ಆ ಮನವಿ ಮಾಡಿಕೊಳ್ಳಲೇಬೇಕು; ವಿಂಟರಬೋರ್ನ ಅಲ್ಲಿ ನಿಂತು, ಅವನನ್ನು ಮುಂದಿನ ಬಾಗಾಯತನ್ನು ಹೊಕ್ಕು ಕಣ್ಮರೆಯಾಗುವವರೆಗೂ ಹಳಹಳಿಸುತ್ತ ದಿಟ್ಟಿಸಿದನು.

ಮೆಲಬರಿಯು ಹಿಂಟೋಕ ದೊಡ್ಡ ಮನೆಗೆ ವ್ಯಾಪಾರಿಗಳು ಬರಹೋಗುವ ಬಾಗಿಲಿನ ಗಂಟೆ ಬಾರಿಸಿದನು. ಕೂಡಲೆ ಅವನಿಗೆ ತಿಳಿಸಲಾಯಿತು. ಬಾಯಿಯುವರನ್ನು

ಕಾಣುವಂತಿಲ್ಲ. ನಿಜವಾಗಿಯೂ ಇದನ್ನು ಆತ ಊಹಿಸಬಹುದಿತ್ತು — ಆದರೆ ಆತ ತಾನಲ್ಲದೆ ಬೇರೆ ಗಂಡಸಾಗಿದ್ದರೆ. ತಾನು ಕಾಯುವೆನೆಂದು ಮೆಲಬರಿ ಅಂದನು. ಆಗ ಆ ಹರಯದ ಜವಾನ ನೆರೆಹೊರೆಯ ಬಳಕೆಯಲ್ಲಿ ಎಂಬಂತೆ ಅಂತರಂಗದಲ್ಲಿ ತಿಳಿಸಿದನು — ಆಕೆ ಇನ್ನೂ ಹಾಸಿಗೆಯಲ್ಲಿಯೇ ಇದ್ದು ನಿದ್ದೆ ಮಾಡುತ್ತಲಿದ್ದಾಳೆ.

'ಅಡ್ಡಿ ಇಲ್ಲ.' ಮೆಲಬರಿ, ಹೊರಗೆ ಆವಾರದ ಅಂಗಳದಲ್ಲಿ ಹಿಂದಿರುಗಿ ಹೋಗಿ ನಿಲ್ಲುತ್ತ ಅಂದನು, 'ನಾನು ಇಲ್ಲಿ ಆ ಕಡೆ ನಿಲ್ಲುತ್ತೇನೆ.' ತನ್ನ ಉದ್ದೇಶದ ಏಕಮೇವ ಅಭಿನಿವೇಶದಲ್ಲಿ ಆತ ಪ್ರತಿಯೊಬ್ಬರ ಸಂಪರ್ಕದಿಂದಲೂ ಹಿಂಜರಿಯುತ್ತಿದ್ದನು.

ಆದರೆ ಅವನು ಕಲ್ಲು ಹಾಸಿದ ಅಂಗಳದಲ್ಲಿ ಅತ್ತಿತ್ತ ಅಲೆದಾಡಿದನು ಮತ್ತು ಯಾರೂ ಅವನ ಬಳಿಗೆ ಬರಲಿಲ್ಲ — ಅವನು ಮತ್ತೆ ಮನೆಯನ್ನು ಪ್ರವೇಶಿಸಿದನು ಮತ್ತು ಅಲ್ಲಿ ಒಂದು ಸಣ್ಣ ಕಾಯ್ದು ಕೂಡ್ರುವ ಕೋಣೆಯಲ್ಲಿ ಕೂತನು. ಅಲ್ಲಿಂದ ಅಡಿಗೆಯ ಮನೆಗೆ ಹಾಯುವ ಪಡಸಾಲೆಯಲ್ಲಿ ಇಣಕಿ ನೋಡುವಂತೆ ಇತ್ತು. ಅಲ್ಲಿ ಬಿಳಿ ಟೊಪ್ಪಿಗೆಯ ಹುಡುಗಿಯರು ಅತ್ತಿಂದಿತ್ತ ಚಕ್ಕಂದವಾಗಿ ಹಾರಾಡುವುದು ಕಾಣುತ್ತಿತ್ತು. ಅವನು ಬಂದಿರುವನೆಂದು ಅವರು ಕೇಳಿದ್ದರು. ಆದರೆ ಒಳಗೆ ಬಂದದ್ದು ಕಂಡಿದ್ದಿಲ್ಲ. ಮತ್ತು ಆತ ಇನ್ನೂ ಹೊರಗೆ ಅಂಗಳದಲ್ಲಿಯೇ ಇರುವನೆಂದು ಭಾವಿಸಿ, ಅವನ ಬರುವಿಕೆಯ ಸಂಭಾವ್ಯ ಕಾರಣಗಳನ್ನು ಅವರು ಮನಬಂದಂತೆ ಚರ್ಚಿಸುತ್ತಿದ್ದರು. ಅವನ ಧಾಷ್ಟ್ರ್ಯದ ಬಗೆಗೆ ಅವರು ಸೋಜಿಗಪಡುತ್ತಿದ್ದರು. ಊರಲ್ಲಿ ಸಡಿಲುಬಿಟ್ಟ ಬಹುತೇಕ ನಾಲಿಗೆಗಳು ಮುಖ್ಯ ದೂಷಣೆಯನ್ನು ಫಿಟ್ಜ್ಪಿಯರ್ಸನಿಗೆ ಹಚ್ಚುತ್ತಿದ್ದನು. ಇಲ್ಲಿ ಅವಳ ಮನೆಯ ಆಳುಕಾಳುಗಳು ತಮ್ಮ ಯಜಮಾನಿಯನ್ನೇ ಹೆಚ್ಚು ಆಳದ ಪಾಪಿಯೆಂದು ಭಾವಿಸಿದ್ದರು.

ಮೆಲಬರಿ ತನ್ನ ಕೈಗಳನ್ನು ಚಿರಪರಿಚಿತ ಮುಳ್ಳುಮುಳ್ಳಾದ ಕೈಗೋಲಿನ ಗಂಟುಗಂಟಾದ ಹಿಡಿಕೆಯ ಮೇಲೆ ಇಟ್ಟು ಕೂತಿದ್ದನು. ಆ ಕೋಲನ್ನು ಬಳಸುವ, ಆನಂದ ಪಡೆಯುವ ಮೊದಲು ಅದು ಬೆಳೆಯುವುದನ್ನು ಆತ ನೋಡಿದ್ದನು. ಸುತ್ತಲಿನ ಆ ದೃಶ್ಯ ಅವನ ವ್ಯಕ್ತಿತ್ವಕ್ಕೆ ದೊರೆತ ಭೌತಿಕ ಪರಿಸರವೆಂದು ಅವನಿಗೆ ಅನಿಸಲಿಲ್ಲ. ಅದೊಂದು ಹೊದಿಕೆಯಂತೆ, ಕವಚದಂತೆ ಅವನೊಂದಿಗೆ ಚಲಿಸುವ ದುರಂತ ದೃಶ್ಯವಾಗಿ ಕಂಡಿತು. ಆ ದೃಶ್ಯದೊಳಗಿಂದ ಆ ಕ್ಷಣದ ಘಟನೆಗಳು ಅಲ್ಲಲ್ಲಿ ಗೊಂದಲದಲ್ಲಿ ಮಿನುಗುತ್ತಿದ್ದವು — ಬಣ್ಣ ಬಳಿದ ಕಾಜಿನ ಅತಿ ವರ್ಣರಂಜಿತ ಕಿಟಕಿಯೊಳಗಿಂದ ಆಚೆಗೆ ಕಾಣಿಸುವ ಬಯಲ ನೋಟದಂತೆ.

ಹೀಗೆ ಆತ ದಾರಿ ಕಾಯ್ದನು,— ಒಂದು ತಾಸು, ಒಂದೂವರೆ ತಾಸು, ಎರಡು ತಾಸು ಕಾಯ್ದನು. ಆತ ನಿಸ್ತೇಜ ನಿರ್ವಿಣ್ಣನಾಗಿ ಕಾಣಹತ್ತಿದನು. ಆಗ ಒಳಗೆ ಬಂದ ಬಟ್ಲರನು ಅವನಿಗೆ ಒಂದು ಗ್ಲಾಸು ಮದ್ಯವನ್ನು ಕುಡಿಯಲು ಕೇಳಿಕೊಂಡನು.

ಮೆಲಬರಿ ತನ್ನನ್ನು ಎಚ್ಚರಿಸಿಕೊಂಡು 'ಬೇಡ, ಬೇಡ, ಬಾಯಿಯವರು ಸಜ್ಜಾಗಿರುವರೇ ?'

'ಅವರು ಇದೀಗ ಉಪಾಹಾರ ಮುಗಿಸುತ್ತಿದ್ದಾರೆ, ಮಿಸ್ಟರ ಮೆಲಬರಿ,' ಆ ಬಟ್ಲರ ಅಂದನು, 'ಅವರು ನಿಮ್ಮನ್ನು ಲಗು ನೋಡುವರು. ನೀವು ಇಲ್ಲಿ ಇರುವಿರೆಂದು ಅವರಿಗೆ ಹೇಳಲೆ, ನಾನು ಮೇಲಕ್ಕೆ ಹೋಗುತ್ತಿದ್ದೇನೆ?'

'ಅಂದರೆ? ನೀವು ಈ ಮುಂಚೆ ಅವರಿಗೆ ಹೇಳಿಯೆ ಇಲ್ಲವೆ?' ಮೆಲಬರಿ ಅಂದನು.

'ಓ ಇಲ್ಲ.' ಆತ ಅಂದ, 'ನೀವು ಬಹಳ ಮುಂಚೆ ಬಂದುಬಿಟ್ಟಿದ್ದೀರಿ, ನೋಡಿ.'

ಕೊನೆಗೆ ಗಂಟೆ ಬಾರಿಸಿತು. ಶ್ರೀಮತಿ ಚಾರ್ಮಂದ ಅವನನ್ನು ನೋಡಲು ಸಿದ್ಧಳಾಗಿದ್ದಳು. ಅವನು ಅಲ್ಲಿಗೆ ಮುಟ್ಟಿದಾಗ ಆಕೆ ತನ್ನ ಖಾಸಗೀ ಕೂಡ್ರುವ ಕೋಣೆಯಲ್ಲಿ ಇದ್ದಿಲ್ಲ. ಆದರೆ ಒಂದು ನಿಮಿಷದಲ್ಲಿಯೆ ಆಕೆ ಎದುರಿನ ಮಾಳಿಗೆಯ ಪಾವಟಿಗೆಗಳಿಂದ ಇಳಿದು ಬರುವುದನ್ನು ಆತ ನೋಡಿದನು. ಮತ್ತು ಅವಳು ಅವನು ನಿಂತಲ್ಲಿ ಬಂದಳು.

ಮುಂಜಾವಿನ ಈ ವೇಳೆಗೆ ಶ್ರೀಮತಿ ಚಾರ್ಮಂದಳು ಅವಳ ಪೂರ್ತಿ ಪ್ರಾಯದಲ್ಲಿ ಅಲ್ಲ, ಅದಕ್ಕೂ ಹೆಚ್ಚಾಗಿ ಕಾಣುತ್ತಿದ್ದಳು. ಮಾದರಿಯ ಮೂವತ್ತರ ಪ್ರಗಲ್ಭೆಯಾಗಿ ತೋರುತ್ತಿದ್ದಳು. ಆದರೆ ಅವಳ ಚೆಲುವು ಕೊನೆಯ ಆವೃತ್ತಿಯನ್ನು ಮುಟ್ಟಿತ್ತು. ಅದು ತುಸು ಸವೆದಂತೆಯೂ ಅನಿಸುತ್ತಿತ್ತು.

ಕೋಣೆಯಲ್ಲಿ ಅಗ್ಗಿಷ್ಟಿಕೆ ಉರಿಯುತ್ತಿದ್ದಿಲ್ಲ. ಆದ್ದರಿಂದ ಅವಳು ಹೆಗಲ ಸುತ್ತಲೂ ಒಂದು ಶಾಲನ್ನು ಸಡಿಲಾಗಿ ಹೊದ್ದುಕೊಂಡು ಒಳಗೆ ಬಂದಿದ್ದಳು. ಮತ್ತು ಮೆಲಬರಿಯು ಮರದ ವಿಷಯವಲ್ಲದೆ ಬೇರೆ ಯಾವುದೋ ಪ್ರಸ್ತಾಪ ತಂದಿರಬಹುದೆಂಬುದೂ ಸ್ಪಷ್ಟವಾಗಿತ್ತು. ಆ ಪರಗಣೆಯಲ್ಲಿ ತನ್ನ ದೌರ್ಬಲ್ಯದ ಬಗೆಗೆ ಅಪವಾರ್ತೆಗಳನ್ನು ಕೇಳದಿದ್ದ ಹೆಂಗಸು ಫೆಲಿಸ್ ಒಬ್ಬಳೇ ಆಗಿದ್ದಳು. ಆ ಅಪವಾರ್ತೆಯ ಬಗೆಗೆ ಆಕೆ ತನ್ನದೆ ಆದ ಮಂಕು ಭಾವಲೋಕದಲ್ಲಿ ವಿಹರಿಸುತ್ತಿದ್ದಳು. ಆದರೆ ತನ್ನ ದೌರ್ಬಲ್ಯದ ಬಗೆಗೆ ಮಾತ್ರ ಅಲ್ಲ. ಆ ಬಗೆಗೆ ಅವಳಿಗೆ ಗಂಭೀರವಾದ ಸಂಶಯಗಳು ಉಂಟಾಗಿದ್ದವು.

'ದಯಮಾಡಿ ಕೂತುಕೊಳ್ಳಿ. ಮಿಸ್ಟರ ಮೆಲಬರಿ. ಈ ಹಂಗಾಮಿನಲ್ಲಿ ನೀವು ಖರೀದಿ ಮಾಡಿದ ಎಲ್ಲ ಮರಗಳನ್ನು ಕಡಿದಿದ್ದೀರಿ — ಓಕಮರಗಳನ್ನೊಂದು ಬಿಟ್ಟು ಅಲ್ಲವೇ?'

'ಅಹುದಹುದು,' ಮೆಲಬರಿ ಕನವರಿಕೆಯಲ್ಲಿಯೆಂಬಂತೆ ಉತ್ತರವಿತ್ತನು.

ಅವನು ಕುರ್ಚಿಯಲ್ಲಿ ಕೂಡ್ರಲಿಲ್ಲ. ಅವಳೂ ನಿಂತಿಯೆ ಉಳಿದಳು. ತನ್ನ ಕೈಗೋಲಿನ ಮೇಲೆ ಆನಿಸಿಕೊಂಡು ಆತ ಆರಂಭಿಸಿದ, 'ಮಿಸೆಸ್ ಚಾರ್ಮಂದ, ನಾನು ಈಗ ಮರಗಳಿಗಿಂತ ಹೆಚ್ಚು ಗಂಭೀರ ವಿಷಯದ ಕುರಿತು,—ಅಂದರೆ, ಇದು ನನ್ನ ಮಟ್ಟಿಗೆ — ಬಂದಿದ್ದೇನೆ. ಮತ್ತು ನನ್ನ ಮಾತಾಡುವ ರೀತಿಯಲ್ಲಿ ನಾನು ಏನೇ

ತಪ್ಪುಗಳನ್ನು ಮಾಡಿದರೂ, ಅಮ್ಮಾ ಅದನ್ನು ನನ್ನ ಜಾಗ್ರತೆಯ ಕೊರತೆಯಿಂದಲ್ಲ, ಅಭ್ಯಾಸದ ಕೊರತೆಯಿಂದ ಎಂದು ಇಟ್ಟುಕೊಳ್ಳಿರಿ.'

ಚಾರ್ಮುಂದ ಅಸ್ವಸ್ಥಳಾದಂತೆ ಕಂಡಳು. ಅವನ ಇಂಗಿತವನ್ನು ಆಕೆ ಊಹಿಸ ಹತ್ತಿರಬೇಕು. ಅದೇನೇ ಇದ್ದರೂ ಅವಳಿಗೆ ತಾಪದಾಯಕ, ಕರ್ಕಶ ಅಥವಾ ಅತಿ ಗಂಭೀರವಾದ ಯಾವುದೇ ಸಂಗತಿಯ ಸಂಪರ್ಕದ ಬಗೆಗೆ ವಿಪರೀತ ಹೆದರಿಕೆ ಇತ್ತು. ಆದ್ದರಿಂದ ಅವನ ಈ ಪ್ರಾಮಾಣಿಕ ಮಾತುಗಳೇ ಸಾಕಾದವು, ಅವಳ ವ್ಯಥೆಗೆ.

'ಸರಿ. ಅದೇನು ?' ಆಕೆ ತ್ವರೆಯಿಂದಲೆ ಕೇಳಿದಳು.

'ನಾನು ಒಬ್ಬ ಮುದಿ ಮನುಷ್ಯ' ಮೆಲಬರಿ ಅಂದನು. 'ನನಗೆ ಬಾಳಿನಲ್ಲಿ ತುಸು ತಡವಾಗಿಯೇ ದೇವರು ಒಂದು ಕೂಸನ್ನು ಅನುಗ್ರಹಿಸುವಂತೆ ಆಯಿತು. ಅದೂ ಒಬ್ಬ ಮಗಳು. ಅವಳ ತಾಯಿ ನನ್ನ ಅಚ್ಚುಮೆಚ್ಚಿನ ಮಡದಿಯಾಗಿದ್ದಳು ; ಆದರೆ ಆ ಕೂಸು ಎಳೆಯದಿರುವಾಗಲೆ ಅವಳು ನಮ್ಮಿಂದ ಅಗಲುವಂತಾಯಿತು. ಮತ್ತು ಅಂದಿನಿಂದ ಈ ಮಗಳೆ ನನ್ನ ಕಣ್ಣಗೊಂಬೆಯಂತೆ ಅಮೂಲ್ಯವಾದಳು. ಅವಳೊಬ್ಬಳೇ ನನ್ನ ಪ್ರೇಮಕ್ಕೆ ಉಳಿದ ಸರ್ವಸ್ವವಾಗಿದ್ದಳು. ಕೇವಲ ಅವಳಿಗೋಸ್ಕರವೇ ನಾನು ಎರಡನೆಯ ಸಲ ಮದುವೆಯಾದೆ. ಈ ಹೆಂಡತಿಯು ಆ ಮಗಳನ್ನು ತಾಯಿಯಂತೆ ನೋಡಿಕೊಳ್ಳುವ ಒಬ್ಬ ಸರಳ ಸಾಧುಜೀವಿ. ಕಾಲಕ್ರಮದಲ್ಲಿ ನನ್ನ ಮಗಳ ಶಿಕ್ಷಣದ ಪ್ರಸ್ತಾಪವೆದ್ದಿತು. ಆಗ ನಾನೆಂದೆ 'ನನಗೆ ಒಣರೊಟ್ಟಿ ತಿಂದು ಬದುಕುವ ಪ್ರಸಂಗ ಬಂದರೂ ಅಡ್ಡಿ ಇಲ್ಲ. ನನ್ನ ಮಗಳನ್ನು ಸುಶಿಕ್ಷಿತಳನ್ನಾಗಿ ಮಾಡುವೆನು' ಅವಳ ವಿವಾಹದ ವಿಷಯ ನಾನಾಗ ವಿಚಾರಮಾಡಲಿಲ್ಲ. ಅದೊಂದು ಸಾವಿನಂತೆಯೇ ತೋರಿತು — ಆಕೆ ಇನ್ನೊಬ್ಬನನ್ನು ಅಂಟಿಕೊಂಡು, ನನ್ನ ಮನೆಗಿಂತ ಆ ಅವನ ಮನೆಯನ್ನೆ ತನ್ನ ಸ್ವಂತದ್ದೆಂದು ಭಾವಿಸುವಂತೆ ಆಗುವದು. ಆದರೆ ನಾನು ಕಂಡಂತೆ ಇದೊಂದು ನಿಸರ್ಗ ನಿಯಮ. ಇದು ಅವಶ್ಯ ನನ್ನ ನಂತರ ನನ್ನ ಕನ್ಯೆಗೊಂದು ಮನೆಬೇಕು. ಕಾದದ್ದು ಅವಳ ಸುಖಕ್ಕಾಗಿಯೇ. ಮತ್ತು ಅದಕ್ಕೆ ನೆರವಾಗುವಂತೆ ಅವಳಿಗಾಗಿಯೆ ನಾನು ಮರುಗದೆ ಮನಸ್ಸುಗಟ್ಟಿ ಮಾಡಿದೆ. ನನ್ನ ಪ್ರಾಯದಲ್ಲಿ ನಾನು ಒಬ್ಬ ಮಿತ್ರನಿಗೆ ದ್ರೋಹ ಮಾಡಿದ್ದೆ. ಆತ ಈಗ ತೀರಿಹೋಗಿದ್ದಾನೆ. ಆ ಅನ್ಯಾಯದ ಪರಿಮಾರ್ಜನೆಗಾಗಿ ನಾನು ಅತ್ಯಮೂಲ್ಯ ಪಾರಿತೋಷಕದಂತೆ ಇದ್ದ ನನ್ನ ಮಗಳನ್ನು ಆ ಮಿತ್ರನ ಮಗನಿಗೆ ಕೊಡಬೇಕೆಂದು ನಿರ್ಧರಿಸಿದೆ. ಏಕೆಂದರೆ ಅವರಿಬ್ಬರೂ ಒಬ್ಬರನ್ನೊಬ್ಬರು ಚೆನ್ನಾಗಿಯೇ ಮೆಚ್ಚಿದ್ದರು. ಮುಂದೆ ಘಟನೆಗಳು ಹೀಗೊದಗಿ ಬಂದವು — ನನಗೆ ಸಂಶಯ ಬರಹತ್ತಿತ್ತು. ಆ ತರುಣ ಬಡವನಾಗಿದ್ದ. ಈಕೆ ನಯನಾಜೂಕಿನಲ್ಲಿ ಬೆಳೆದವಳು. ಅಂದಾಗ ಹೀಗೆ ಅವರ ಮದುವೆ ಮಾಡುವುದು ನನ್ನ ಮಗಳ ಸುಖಕ್ಕಾಗಬಹುದೆ? ಇನ್ನೊಬ್ಬ ಬಂದು ಅವಳ ಪ್ರಿಯಾರಾಧನೆ ಆರಂಭಿಸಿದನು — ಆತನ ಶಿಕ್ಷಣ ಸಂಸ್ಕಾರ, ವಿಕಾಸಗಳಲ್ಲಿ ಅವಳಿಗೆ ಸರಿ ಸಮಾನನಾಗಿದ್ದನು ಎಲ್ಲ ರೀತಿಯಿಂದಲೂ. ಅವಳ ತರಬೇತಿಗೆ ತಕ್ಕುದಾದ ಗೃಹ

ಸೌಖ್ಯವನ್ನು ಅವಳಿಗೆ ಅವನೊಬ್ಬನೇ ಕೊಡಲು ಸಮರ್ಥನೆಂದು ನನಗೆ ತೋರಿತು. ನಾನು ಅವಳಿಗೆ ಉತ್ತೇಜನ ಕೊಟ್ಟೆ. ಅವಳು ಅವನನ್ನು ಮದುವೆಯಾದಳು. ಆದರೆ ಅಮ್ಮಾ, ನನ್ನ ಎಣಿಕೆಯ ಮೂಲದಲ್ಲಿಯೇ ಒಂದು ಮರಣಪ್ರಾಯ ತಪ್ಪು ಅಡಕವಾಗಿತ್ತು. ನಾನು ಎಣಿಸಿದಂಥ ಈ ಕುಲೀನ ಸದ್ಗೃಹಸ್ಥನು ನಿಜವಾಗಿಯೂ ಹೃದಯದಿಂದ ಅಷ್ಟು ದೃಢನಾಗಿದ್ದಿಲ್ಲವೆಂಬುದನ್ನು ನಾನು ಕಂಡುಕೊಂಡೆ. ಮತ್ತು ಇದರಲ್ಲಿಯೇ ನನ್ನ ಮಗಳಿಗೆ ಮಹಾ ದುಃಖದ ಸಂಕಟವು ಅವಿತಿದೆ, ಅಮ್ಮಾ. ಆತ ನಿಮ್ಮನ್ನು ನೋಡಿದ. ಮುಂದೆ ನಿಮಗೆ ಗೊತ್ತೇ ಇದೆ — ನಾನು ಏನೂ ಆಗ್ರಹದ ಬೇಡಿಕೆ ಇಡಲಿಕ್ಕೆ ಬಂದಿಲ್ಲ. ಬೆದರಿಕೆ ಹಾಕಲಿಕ್ಕೂ ಬಂದವನಲ್ಲ. ನಾನು ಕೇವಲ ನನ್ನ ಒಬ್ಬಳೇ ಮಗಳ ಕುರಿತು ಮಹಾ ಶೋಕದಲ್ಲಿ ಮುಳುಗಿದ ತಂದೆಯಾಗಿ ಬಂದಿದ್ದೇನೆ. ನಿಮಗೆ ಅಂಗಲಾಚಿ ಬೇಡಿಕೊಳ್ಳುತ್ತೇನೆ, ನನ್ನ ಮಗಳನ್ನು ಕನಿಕರದಿಂದ ಕಾಣಿರಿ. ಅವಳ ಗಂಡನ ಹೃದಯ ಅವಳಿಂದ ಹೊರಳುವಂತೆ ಏನೂ ಮಾಡಬೇಡಿರಿ. ಅಮ್ಮಾ, ಅವನಿಗೆ ನಿಮ್ಮಲ್ಲಿ ಬರದಂತೆ ಕಟ್ಟುಮಾಡಿರಿ. ಅವನ ಕರ್ತವ್ಯದ ಬಗೆಗೆ ಅವನಿಗೆ ತಿಳಿಸಿ ಹೇಳಿರಿ. ಅವನ ಮೇಲಿನ ನಿಮ್ಮ ಪ್ರಭಾವ ಹಾಗೆ ಮಾಡಬಲ್ಲದು. ನನಗೆ ಈ ಭರವಸೆ ಇದೆ. ಅವರಿಬ್ಬರ ನಡುವಿನ ಈ ಬಿರುಕು ಬಿಚ್ಚದೆ ತಿರುಗಿ ಜೋಡಿಸಬಹುದು. ಇದರಿಂದ ನಿಮಗೇನು ನಷ್ಟವಾಗುವದೆಂದು ಅಲ್ಲ. ವ್ಯಾವಸಾಯಿಕ ಮನುಷ್ಯನಿಗಿಂತ ನಿಮ್ಮ ಬದುಕಿನ ದಾರಿ ಹೆಚ್ಚು ಎತ್ತರವಾಗಿದೆ ಮತ್ತು ನನ್ನ ಮತ್ತು ನನ್ನವರಿಂದ ನಿಮ್ಮ ಕರುಣೆಗಾಗಿ ನೀವು ಪಡೆಯಬಹುದಾದ ಕೃತಜ್ಞತೆಗೆ ಕೊರತೆಯೇ ಇಲ್ಲ; ಅದು ನಾನು ಆಡಿತೋರಿಸುವುದಕ್ಕಿಂತ ಮಿಗಿಲಾದದ್ದು.'

ಶ್ರೀಮತಿ ಚಾಮರ್ಗಂದ ಮೊದಲು ಒಮ್ಮೆಲೆ ಕ್ರೋಧಾವಿಷ್ಟಳಾದಳು— ಮೆಲಬರಿಯ ಈ ಕರ್ಮಕಥೆಯನ್ನು ಅರ್ಥಮಾಡಿಕೊಳ್ಳುತ್ತ. ಒಮ್ಮೆ ಉರಿದೆದ್ದು, ಮತ್ತೆ ತಣ್ಣಗಾಗಿ ಆಕೆ ಗೊಣಗುಟ್ಟಿದಳು. 'ನನ್ನನ್ನು ಬಿಟ್ಟು ಹೋಗಿ, ಬಿಟ್ಟು ಹೋಗಿ.' ಆದರೆ ಆತ ಇದನ್ನು ಗಮನಿಸಿದಂತೆಯೇ ಕಾಣಲಿಲ್ಲ. ಆಗ ಅವನ ಮಾತುಗಳು ಅವಳ ಮೇಲೆ ಪ್ರಭಾವ ಬೀರತೊಡಗಿದವು. ಮತ್ತು ಆತ ಮಾತು ಮುಗಿಸಿದಾಗ, ಅವಳು ಏದುತ್ತ ಅಂದಳು, 'ನನ್ನ ಬಗೆಗೆ ಹೀಗೆ ಭಾವಿಸಲು ನಿಮಗೆ ಕಾರಣವೇನು? ನಿಮ್ಮ ಮಗಳ ಗಂಡನನ್ನು ನಾನು ಗೆದ್ದುಕೊಂಡಿರುವೆನೆಂದು ನಿಮಗೆ ಯಾರೆಂದರು? ಕೆಲವು ದೆವ್ವದಂಥ ಕೆಟ್ಟ ಅಪವಾರ್ತೆಗಳು ಹಬ್ಬಿವೆ — ಅವುಗಳ ಬಗೆಗೆ ಈ ತನಕ ಏನೂ ಗೊತ್ತಿದ್ದಿಲ್ಲ.'

ಮೆಲಬರಿ ದಿಗಿಲು ಬಿದ್ದನು. ಅವಳ ಕಡೆಗೆ ಬರೆ ನೋಡುತ್ತ ನಿಂತನು. 'ಆದರೆ ಅಮ್ಮಾ, ಸತ್ಯವು ನನಗಿಂತ ನಿಮಗೇ ಹೆಚ್ಚು ಚೆನ್ನಾಗಿ ಗೊತ್ತು; ನಿಜವಾಗಿಯೂ?' ಅವಳ ಮುಖಚರ್ಯೆ ತುಸು ಮುದುಡಿಕೊಂಡಿತು. ಅವಳ ಚೆಲುವಾದ ಮೋರೆಯ ಮೇಲಿನ ಪೌಡರಿನ ಲೇಪವು ಅಂಟಿಸಿದ ಹೊರಪೊರೆಯಂತೆ ತೋರಿತು — ಕಾಂತಿ ಒಮ್ಮೆಲೆ ಕುಗ್ಗಿದ್ದರಿಂದ. 'ನನ್ನನ್ನು ನನ್ನ ಪಾಡಿಗೆ ಬಿಟ್ಟು

ಕೊಡುವಿರಾ ?' ಅವಳು ಕ್ಷೀಣದನಿಯಲ್ಲಿ ಅಂದಳು. ಆ ಕ್ಷೀಣತೆ ಅವಳ ಅಪರಾಧಿಯಾದ ಆತ್ಮಸಾಕ್ಷಿಯನ್ನೆ ಸೂಚಿಸುವಂತಿತ್ತು. 'ಇದು ತೀರ ಅನಪೇಕ್ಷಿತ. ನೀವು ನಾನಿದ್ದಲ್ಲಿ ಬರಲು ಸುಳ್ಳು ನೆವ ಹೇಳಿ ಅನುಮತಿ ಪಡೆದಿರಿ.'

'ಅಯ್ಯೋ, ದೇವರು ಸಾಕ್ಷಿ ಇದ್ದಾನೆ. ಇದು ನಿಜವಲ್ಲ; ಅಮ್ಮಾ. ನಾನು ಯಾವ ನೆವವನ್ನೂ ಒಡ್ಡಲಿಲ್ಲ. ಮತ್ತು ನಾನು ಯಾಕೆ ಬಂದೆನೆಂಬ ಕಾರಣವನ್ನು ನೀವು ತಿಳಿದಿರಬಹುದೆಂದು ನಾನು ಪ್ರಾಮಾಣಿಕವಾಗಿ ಭಾವಿಸಿದೆ. ಈ ಊರ ಸುದ್ದಿ...'

'ನಾನು ಅದನ್ನೇನೂ ಕೇಳಿಲ್ಲ. ಅದರ ಸಾರಾಂಶವೇನು, ದಯವಾಡಿ ಹೇಳಿ'

'ನಿಮಗೆ ಹೇಳಲೇ — ನಾನೊಲ್ಲೆ. ಊರ ಸುದ್ದಿ ಏನೇ ಇರಲಿ. ಅದೇನು ದೊಡ್ಡ ಮಾತಲ್ಲ. ನಿಜವಾದ ಸಂಗತಿಯೇನೆಂದು ನಿಮಗೆ ಗೊತ್ತು. ವಸ್ತುಸ್ಥಿತಿಯನ್ನು ಸರಿಮಾಡಿಕೊಳ್ಳಿರಿ, ಯಾವ ಅಪವಾರ್ತೆ ಅಪವಾದಗಳೆಲ್ಲ ತಾನೇ ಸರಿಹೋಗುವುವು. ಆದರೆ ಕ್ಷಮಿಸಿ, ನಾನು ಒರಟಾಗಿ ಆಡುತಿದ್ದೇನೆ. ಮತ್ತೆ ನಾನು ಬಂದದ್ದು ಸೌಮ್ಯವಾಗಿ ಮಾತಾಡಲಿಕ್ಕೆ. ನಿಮ್ಮನ್ನು ಪುಸಲಾಯಿಸಲಿಕ್ಕೆ, ನನ್ನ ಮಗಳ ಗೆಳತಿಯಾಗಿರೆಂದು ನಿಮ್ಮನ್ನು ಬೇಡಿಕೊಳ್ಳಲಿಕ್ಕೆ. ಅಮ್ಮಾ, ಹಿಂದೊಮ್ಮೆ ಅವಳು ನಿಮ್ಮನ್ನು ಪ್ರೀತಿಸುತ್ತಿದ್ದಳು. ಅವಳ ಪ್ರೀತಿಯಿಂದಲೇ ನೀವು ಆರಂಭ ಮಾಡಿದಿರಿ. ಆದರೆ ಮುಂದೆ ಕಾರಣವಿಲ್ಲದೆ ನೀವು ಅವಳನ್ನು ಕೈಬಿಟ್ಟಿರಿ ಮತ್ತು ಅದು ಅವಳ ಪ್ರೇಮಲ ಹೃದಯವನ್ನು ಎಷ್ಟು ನೋಯಿಸಿತೆಂಬುದನ್ನು ನಾನು ಹೇಳಲಾರೆ. ಆದರೆ ನೀವು ನಿಮ್ಮ ಹಕ್ಕಿನೊಳಗೆ ಹಾಗೆ ನಡೆದಿರಿ — ನೀವು ಶ್ರೇಷ್ಠರು. ಸಂದೇಹವಿಲ್ಲ. ಆದರೆ ಈಗ ನೀವು ಅವಳ ಸ್ಥಾನವನ್ನು ಆಲೋಚಿಸಿದರೆ ನಿಜವಾಗಿಯೂ, ನಿಜವಾಗಿಯೂ ಅವಳಿಗೇನೂ ಅಪಾಯ ನೀವು ಮಾಡಲಾರಿರಿ ಅಲ್ಲವೆ ?'

'ನಿಜವಾಗಿಯೂ ನಾನು ಅವಳಿಗೆ ಯಾವ ಅಪಾಯವನ್ನೂ ಮಾಡಲಾರೆ. ನಾ–'

ಮೆಲಬರಿ ಅವಳ ಕಣ್ಣಿಗೆ ಕಣ್ಣು ಕೂಡಿಸಿದನು. ಇದು ವಿಚಿತ್ರವಿತ್ತು. ಅವನ ಮಿಕ್ಕ ಎಲ್ಲ ವಾದಗಳಿಗಿಂತ ಗ್ರೇಸಳು ಹಿಂದೆ ಅವಳನ್ನು ಪ್ರೀತಿಸುತ್ತಿದ್ದಳೆಂಬುದರ ಉಲ್ಲೇಖವು ಅವಳ ಮನಸ್ಸನ್ನು ಮುಟ್ಟಿತ್ತು. 'ಓ ಮೆಲಬರಿ', ಆಕೆಯ ಮಾತು ತೂರಿ ಬಂದಿತು. 'ನೀವು ನನಗೆ ಎಷ್ಟು ದುಃಖಿಯಾಗಿ ಮಾಡಿದಿರಿ. ಹೀಗೆ ಹೇಗೆ ನನ್ನೆಡೆಗೆ ಬಂದಿರಿ ? ಓ ಇದು ತೀರ ಭಯಂಕರ. ಈಗ ಹೋಗಿರಿ ಹೊರಟುಹೋಗಿರಿ ; ಹೋಗಿ, ಹೋಗಿ.'

'ಹೋಗುವೆ ಮತ್ತು ನಿಮ್ಮನ್ನು ಆಲೋಚನೆ ಮಾಡಲಿಕ್ಕೆ ಬಿಡುವೆನು' ಆತ ಒಡೆದ ಕಂಠದಿಂದ ಅಂದನು.

ಆತ ಕೋಣೆಯಿಂದ ಹೊರಬಿದ್ದೊಡನೆ ಅವಳು ಒಂದು ಮೂಲೆಗೆ ಹೋಗಿ ಕಣ್ಣೀರಕೋಡಿ ಒಡೆದು ಕುಸಿದು ಬಿದ್ದಳು. ವೇದನೆಯಿಂದ ಚಡಪಡಿಸಿದಳು. ಮೈ ಮುರಿದುಕೊಂಡಳು. ನೊಂದ ಬಿಂಕ, ಸಿಡುಕು ಮತ್ತು ಹೆಚ್ಚು ಒಳ್ಳೆಯ ಭಾವಗಳ ಸಮ್ಮಿಶ್ರ ಕ್ಷೋಭದಡಿಗೆ ಸಿಕ್ಕು ಕಸಿವಿಸಿಯಾದಳು.

ಶ್ರೀಮತಿ ಚಾರ್ಮಂದಳ ಚಂಚಲ ಸ್ವಭಾವವು ಇಂಥ ಪರಿಳಿತಗಳ ಭಯಂಕರ ಕ್ಷೋಭೆಗಳಿಗೆ ಬಲಿಯಾಗುತ್ತಿತ್ತು. ತನ್ನ ಆತ್ಮವು ಇದೆಲ್ಲ ಪಾಡನ್ನು ತಂದೊಡ್ಡಿದ ಒಂದು ಭ್ರಾಂತಿಯಿಂದ ಆಕ್ರಮಿಸಲ್ಪಟ್ಟಿದೆಯೆಂಬುದನ್ನು ಈಗಿನಷ್ಟು ನಿಚ್ಚಳವಾಗಿ ಆಕೆ ಹಿಂದೆಂದಿಗೂ ಕಂಡುಕೊಂಡಿದ್ದಿಲ್ಲ. ಈ ಭ್ರಾಂತಿಯಡಿಗೆ ವಿವೇಕವನ್ನೂ, ಮರ್ಯಾದೆ-ಗೌರವಗಳನ್ನೂ ಕಳೆದುಕೊಳ್ಳುತ್ತಿದ್ದು, ತಾನೊಂದು ಜೀವಂತ ಭಾವಾವೇಶದ, ವಿಚಾರ ಪರವಶತೆಯ ಅವತಾರಳಾಗುತ್ತಿದ್ದೇನೆಂಬುದನ್ನು ಕಂಡುಕೊಂಡಿದ್ದಿಲ್ಲ. ಒಂದು ಮೋಹವು ಅವಳನ್ನು ಮುನ್ನಡೆಯಿಸಿತ್ತು. ಮಕಮಲ್ಲಿನ ಕೈಯೊಂದು ಅವಳನ್ನು ಹಿಡಿದುಕೊಂಡಿತ್ತು ; ಮತ್ತು ಈಗ ಈ ಅವಸ್ಥೆಯಲ್ಲಿ ಅವಳು ತನ್ನನ್ನು ಕಂಡುಕೊಂಡಳು — ಒಮ್ಮೆಲೆ ಕಾಳರಾತ್ರಿಯು ಕವಿದು ಪ್ರಚಂಡ ಸುಂಟರಗಾಳಿ ಸುತ್ತೆಲ್ಲ ಹಾದು ಹೋದಂತಿತ್ತು.

ಅವಳು ಅಲ್ಲಿ ಹಾಗೆಯೇ ಕೀಲಕಳಚಿದಂತೆ ಕೂತಿದ್ದಾಗ, ಅಲ್ಲವೆ ಅವಿತುಕೊಂಡಿದ್ದಾಗ ಮಧ್ಯಾಹ್ನದ ಊಟದ ವೇಳೆ ಬಂದಿತು. ಆ ಮೇಲೆ ಅಪರಾಹ್ನ ಇಣಕಿತು. ಆದರೆ ಅವಳಿಗೆ ಅದರ ಪ್ರಜ್ಞೆಯೇ ಇದ್ದಿಲ್ಲ. ಆಗ 'ಒಬ್ಬ ಆಗಂತುಕ ಸದ್ಗೃಹಸ್ಥ. ತನ್ನ ಹೆಸರು ಹೇಳುವುದು ಅವಶ್ಯವಿಲ್ಲವೆಂದು ಅನ್ನುವವನು' ಭಿಕ್ಷೆಗೆ ಬಂದಿರುವೆನೆಂದು ಸಾರಲಾಯಿತು. ಫೆಲಿಸಳಿಗೆ ಗೊತ್ತು ಆ ಆಗಂತುಕ ಸದ್ಗೃಹಸ್ಥ ಯಾರೆಂದು — ಯುರೋಪದಲ್ಲಿ ಗಂಟುಬಿದ್ದಿದ್ದ ಆ ಅನುಯಾಯಿ. ಹೆಸರು ಹಂಬಲಿಸಲೂ ಕಠಿಣವಾಗುವಷ್ಟು ಅನೇಕ ಪುರುಷರಲ್ಲಿ ಇವನ ಮೇಲೂ ಆಕೆ ಪ್ರಸನ್ನಳಾಗಿ ಒಮ್ಮೆ ಚಾರುಹಾಸ ಬೀರಿದ್ದಳು. ಆದರೆ ಈ ವಲ್ಲಭನನ್ನು ಈಗ ಭೆಟ್ಟಿಯಾಗುವುದು — ಈ ವಿಚಾರವೇ ಅವಳಲ್ಲಿ ವಾಕರಿಕೆ ಹುಟ್ಟಿಸಿತು.

'ಆತ ಯಾರೇ ಇರಲಿ. ನಾನು ಅವನನ್ನು ಈಗ ನೋಡಲಾರೆ. ನಾನು ಯಾರ ಭೆಟ್ಟಿಗೂ ಮನೆಯಲ್ಲಿ ಇಲ್ಲ.'

ಆ ಭೆಟ್ಟಿಗಾರನ ಸುಳಿವು ಆ ಮೇಲೆ ಇರಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಜೋರಾದ ದೈಹಿಕ ವ್ಯಾಯಾಮದಿಂದ ಮಾನಸಿಕ ಸ್ಥಿಮಿತವನ್ನು ತಿರುಗಿ ಪಡೆಯಲಿಕ್ಕೆ ಒಂದು ಪ್ರಯತ್ನ ಮಾಡೋಣವೆಂದು, ಅವಳು ಎದ್ದು ಹ್ಯಾಟು, ಕ್ಲೋಕು ತೊಟ್ಟು ಬಾಗಿಲ ಹೊರಗೆ ಬಿದ್ದಳು—ಬೆಟ್ಟದ ಹತ್ತಿರದ ತೋಳೊಂದರ ಇಳುಕಲ ಏರಿನಗುಂಟ ಹೋಗುವ ಕಾಲುದಾರಿಯೊಂದನ್ನು ಆಕೆ ಹಿಡಿದಳು. ಅವಳಿಗೆ ಕಾಡು ಬೆಟ್ಟ ಸೇರುತ್ತಿದ್ದಿಲ್ಲ. ಆದರೆ ಅವುಗಳಿಂದಲೂ ಒಂದು ಪ್ರಯೋಜನವಿತ್ತು. ಮಂದಿಯ ಕಣ್ಣಿಗೆ ಬೀಳದೆ ಅಲ್ಲಿ ಹೆಚ್ಚು ಸ್ವಚ್ಛಂದವಾಗಿ ಅಲೆದಾಡಬಹುದು.

ಆ ದಿವಸ ಈ ವಿಷಯಕ್ಕೆ ಸಂಬಂಧಿಸಿದ ಎಲ್ಲರ ಬಾಳಿನಲ್ಲಿಯೂ ತುಮುಲ. ಹಿಂಟೋಕ ಹಳ್ಳಿಯು ಮಧ್ಯಾಹ್ನದ ಊಟದ ಹೊತ್ತಿನವರೆಗೂ—ಒಂದು ಗಂಟೆಯವರೆಗೂ ಗ್ರೇಸಳು ತನ್ನ ತಂದೆ ಮನೆಯಲ್ಲಿ ಇಲ್ಲದಿದ್ದುದನ್ನು ಗಮನಿಸಲಿಲ್ಲ — ಆತ ಮುಂಜಾವಿನ ದಿನದ ವಾಡಿಕೆಗಿಂತ ತೀರ ಬೇರೆ ರೀತಿಯಲ್ಲಿ ಹೊರಟು

ಹೋದಂದಿನಿಂದ, ತುಸು ವಿಚಾರದಿಂದ, ತುಸು ವಿಚಾರಣೆಯಿಂದ ಅವನ ನಿರ್ಗಮನದ ಉದ್ದೇಶವನ್ನು ಊಹಿಸಿಕೊಳ್ಳಲು ಅವಳಿಗೆ ಸಾಧ್ಯವಾಯಿತು.

ಅವಳ ಗಂಡನೂ ದೂರವಿದ್ದನು. ಮತ್ತು ಅವಳ ತಂದೆ ತಿರುಗಿ ಬಂದಿದ್ದಿಲ್ಲ. ಆತ ನಿಜವೆಂದರೆ ಆ ಸಂದರ್ಶನದ ನಂತರ ಶರ್ಟನ್ನಿಗೆ ಹೋಗಿದ್ದನು.—ಅಲ್ಲಿ, ವ್ಯವಹಾರದಲ್ಲಿ ಮನಸ್ಸನ್ನು ತೊಡಗಿಸಿ ಶಮನಮಾಡಿಕೊಳ್ಳಲು; ಆದರೆ ಇದು ಗ್ರೇಸಳಿಗೆ ಗೊತ್ತಿದ್ದಿಲ್ಲ. ಅವಳಿಗೆ ಏನೋ ಅವ್ಯಕ್ತ ಅನಿರ್ವಾಚ್ಯವಾದ ಭಯ. ಮೆಲಬರಿಯ ಆ ಭೆಟ್ಟಿಯಿಂದ ಏನಾದರೊಂದು ಗಂಭೀರ ಪ್ರಸಂಗ ಉಂಟಾಗಬಹುದು; ಏಕೆಂದರೆ ಅವನು ವೃತ್ತಿಯಲ್ಲಿ ವ್ಯತ್ಯಾಸ — ವೈಷಮ್ಯ ಹಾಗೂ ನರಗಳ ಕೆರಳಿಕೆಗಳಿಗೆ ಬಲಿಯಾಗುತ್ತಿದ್ದನು. ಆ ಮೂಲಕ ಸದ್ಯ ಅವಳ ಅಭಾವಾತ್ಮಕ ವೃತ್ತಿಯೊಂದಿಗೆ ಬಂದ ದುಃಖಕ್ಕಿಂತ ಹೆಚ್ಚಿನ ದುಃಖವು ಅವಳ ಪಾಲಿಗೆ ಬರಬಹುದು ಎಂದೆಲ್ಲ ಭಯಪಟ್ಟ ಆಕೆ ಮೂರು ಗಂಟೆಗೇ ಮನೆಯನ್ನು ಬಿಟ್ಟು ತನ್ನ ತಂದೆ ಮನೆಗೆ ಮರಳಬಹುದಾದ ಬೆಟ್ಟದ ದಾರಿಗುಂಟ ಅಲೆಯುತ್ತ ನಡೆದಳು. ಬೋಳು ಬರಲಾದ ಮರಗಳ ನಡುವೆ, ಸಟಿ ಸಟಿ ಮುರಿದು ಚೂರಾಗುವ ಒಣ ಟಿಸಿಲು ಕಡ್ಡಿಗಳ ಮೇಲಿಂದ ಹಾಯುತ್ತ, ಟೊಂಗೆಗಳ ಜಾಳಿಕೆಯಿಂದ ಹಂದರ ಹಾಕಿ ಹೊರಗಿನ ಗಾಳಿಯ ಪ್ರಪಂಚದಿಂದ—ಪ್ರಪಂಚದ ಗಾಳಿಯಿಂದಲೂ — ಬೇರೆ ಇಡುವಂಥ ಆ ದಾರಿಯು ಅವಳನ್ನು ಕೆಲವು ಹೊತ್ತು ಮುಂದೆ, ದೂರ ಒಯ್ಯಿತು. ಅಲ್ಲಿಗೆ ಅದು ಅವಳನ್ನು ಹೆಮ್ಮರಗಳನ್ನು ಹಿಂದೆ ಬಿಟ್ಟು, ವಿಂಟರಬೋರ್ನ ಮತ್ತು ಅವನ ಸಂಗಡಿಗರು ನೆಲಪೊದೆಗಳನ್ನು ಸವರುವ ಕಾನಿನಲ್ಲಿ ತಂದುಬಿಟ್ಟಿತು.

ಜೈಲ್ಸನ ಲಕ್ಷ್ಯವೆಲ್ಲ ತಡಿಕೆ ಹೆಣೆಯುವುದರಲ್ಲಿಯೆ ತೊಡಗಿದ್ದರೆ ಆತ ಅವಳನ್ನು ನೋಡುತ್ತಲೇ ಇದ್ದಿಲ್ಲ. ಆದರೆ ಆ ಎದುರಿನ ಬಯಲಾಚೆಗೆ ಆ ಮುಂಜಾನೆ ಮೆಲಬರಿ ಹಾದುಹೋದಂದಿನಿಂದ ಅವನು ಗ್ರೇಸಳಷ್ಟೇ ಅಸ್ವಸ್ಥನೂ ಉದ್ವಿಗ್ನನೂ ಆಗಿದ್ದನು; ಮತ್ತು ಈಗ ಮೆಲಬರಿಯು ಶ್ರೀಮತಿ ಚಾರ್ಮಂದಳ ವಾರ್ತೆಯೊಂದಿಗೆ ತಿರುಗಿ ಬರುವುದಕ್ಕಿಂತ ಹೆಚ್ಚಾಗಿ, ಅವನ ಆತ್ಮ ನಿವೇದನೆಯ ನಂತರ ಗ್ರೇಸಳ ದರ್ಶನವೇ ಒದಗಿ ಬಂದು ಅವನ ಗಮನವನ್ನು ಸೆಳದಿಡಲು ಶಕ್ಯವಾಯಿತು. ಏನೋ ಆಗಬಾರದ ಸಂಗತಿ ಆಗಿರಬೇಕೆಂದು ಅಳುಕಿ ಅವನು ಅವಳ ಬಳಿಗೆ ತ್ವರೆಯಿಂದ ನಡೆದನು.

ತನ್ನ ಹಳೆಯ ಪ್ರೇಮಿಕನನ್ನು ಅವಳು ನೋಡದೆ ಬಹಳ ಕಾಲವಾಗಿತ್ತು. ಅಲ್ಲದೆ ತನ್ನ ಹೃದಯದ ಇತ್ತೀಚೆಯ ತುಂಟಗಾರಿಕೆಯ ಅರಿವೂ ಅವಳಿಗೆ ವಿಪರೀತವಿತ್ತು. ಆದ್ದರಿಂದ ಅವನನ್ನು ಶಾಂತಚಿತ್ತದಿಂದ ಅವಳು ನೋಡದಾದಳು. 'ನಾನು ನನ್ನಪ್ಪನನ್ನು ಹುಡುಕುತ್ತ ಬಂದೆ' ಅವಳು ಅನಾವಶ್ಯಕ ಕ್ಷಮಾಯಾಚನೆಯ ದನಿಯಲ್ಲಿ ಅಂದಳು. 'ನಾನೂ ಅವರನ್ನು ಹುಡುಕುತ್ತಿದ್ದೆ' ಜೈಲ್ಸ ಅಂದನು, 'ನನಗೆನಿಸುತ್ತದೆ, ಅವನು ಅಲ್ಲಿಂದ ಇನ್ನೂ ಮುಂದಕ್ಕೆ ಹೋಗಿರಬಹುದು.'

'ಹಾಗಾದರೆ ನಿನಗೆ ಗೊತ್ತು ಅವನು ದೊಡ್ಡ ಮನೆಗೆ ಹೊರಟಿದ್ದನೆಂದು. ಅಲ್ಲವೆ, ಜೈಲ್ಸ?' ಅವಳು, ತನ್ನ ವಿಶಾಲವಾದ ಕೋಮಲ ಕಣ್ಣುಗಳನ್ನು ಕಳವಳದಿಂದ ಅವನತ್ತ ಹೊರಳಿಸಿ ಅಂದಳು, 'ಏಕೆಂದು ನಿನಗೆ ಹೇಳಿದೆನೆ?' ವಿಂಟರಬೋರ್ನ ಸಂದೇಹದಿಂದಲೆ ಅವಳ ಕಡೆಗೆ ನೋಡಿದನು ಮತ್ತು ಮೃದುವಾಗಿಯೆ ಸೂಚಿಸಿದನು, ಅವಳ ತಂದೆ ಮುಂಚಿನ ಸಂಜೆ ಅವನಲ್ಲಿಗೆ ಬಂದಿದ್ದನ್ನು. ಮತ್ತು ಅವರಿಬ್ಬರ ಹಳೆಯ ಗೆಳೆತನ ಪುನಃ ನೆಲೆಗೊಂಡಿತು. ಇದಿಷ್ಟರಿಂದ ಮುಂದಿನದನ್ನೆಲ್ಲ ಅವಳು ಊಹಿಸಿದಳು. 'ಓ ಚೆನ್ನಾಯಿತು. ನೀವಿಬ್ಬರು ತಿರುಗಿ ಗೆಳೆಯರಾದಿರೆಂದು ಕೇಳಿ ನನಗೆ ಸಂತೋಷ' ಆಕೆ ಉದ್ಗರಿಸಿದಳು.

ಆಮೇಲೆ ಅವರಿಬ್ಬರೂ ಒಬ್ಬರಿಗೊಬ್ಬರು ಇದಿರಾಗಿ ನಿಂತರು—ಒಬ್ಬರಿಗೊಬ್ಬರು ಅಂಜುತ್ತ ಒಬ್ಬರು ಇನ್ನೊಬ್ಬರ ಆತ್ಮಕ್ಕೆ ಪೀಡೆಕೊಡುತ್ತ. ಆ ಕಟ್ಟಿಗೆ ಕಡಿಯುವ, ಪೊದೆ ಸವರುವ ದೃಶ್ಯಗಳನ್ನು ಕಂಡೊಡನೆ ಅವಳು ತೀವ್ರ ಖೇದವನ್ನು ಅನುಭವಿಸಿದಳು. ಏಕೆಂದರೆ ಅವುಗಳಿಂದ ಇತ್ತೀಚೆಗೆ ಅವಳು ದೂರಳಾಗಿದ್ದಳು.— ಹೊರತಾಗಿದ್ದಳು. ಈಗ ಅವಳು ತಂದೆಯ ಆ ಬೆಟ್ಟದ ಬದುಕನ್ನು ಅದರ ಎಲ್ಲ ದೋಷ ಅನಾನುಕೂಲತೆಗಳೊಂದಿಗೂ ಲವಲವಿಕೆಯಿಂದ ಬಯಸಿದಳು. ಆದರೆ ಈ ಬದುಕು ಶೀಘ್ರದಲ್ಲಿಯೆ ಅವಳಿಗೆ ಇಲ್ಲವಾಗುವುದಿತ್ತು.

ತುಸು ಅಂತರಕ್ಕೆ ಆ ಬಯಲ ಅಂಚಿಗೆ, ಮಾರ್ಟಿಸೌಥ ಗೂಟಗಳನ್ನು ಆಕಾರಗೊಳಿಸುತ್ತಿದ್ದಳು, ಮನೆಗೆ ಒಯ್ದು ಸಂಜೆಗೆ ಇನ್ನೂ ತಯಾರಿಸಲಿಕ್ಕೆ. ವಿಂಟರಬೋರ್ನ ಮತ್ತು ಶ್ರೀಮತಿ ಫಿಟ್ಝಪಿಯರ್ಸ ಇಬ್ಬರೂ ಅವಳ ಕಡೆಗೇ ನೋಡುತ್ತ ನಿಂತರು — ಅವರಿಗೆ ತಮ್ಮಿಬ್ಬರ ಅನ್ಯೋನ್ಯ ಸನ್ನಿಧಿಯು ಪೇಚಾಟಕ್ಕೆ ಕಾರಣವಾಗಿತ್ತು. ಹಾಗೆ ನೋಡುತ್ತಿರುವಾಗ ಆ ಹುಡುಗಿಯನ್ನು ಸಮೀಪಿಸುವ ಒಬ್ಬ ಮಹಿಳೆಯನ್ನು ಅವರು ಕಂಡರು. ಆಕೆ ಕಿರಿಯುಣ್ಣೆ (ತುಪ್ಪಳ)ಯ ಒಂದು ಅಚ್ಚ ಬಣ್ಣದ ಮೇಲುದವನ್ನು ಹೊದ್ದುಕೊಂಡು, ಕಪ್ಪು ಹ್ಯಾಟನ್ನು ತೊಟ್ಟಿದ್ದಳು. ಅದರ ಸುತ್ತಲು ಒಂದು ಬಿಳಿಯ ಬುರಕಿಯನ್ನು ಚಿತ್ರಮಯವಾಗಿ ಕಟ್ಟಿಕೊಂಡಿದ್ದಳು. ಅವಳು ಮೇರಿಯನ್ನು ಮಾತನಾಡಿಸಿದಳು. ಅವಳು ಹೊರಳಿ ಆ ಮಹಿಳೆಗೆ ನಮಸ್ಕಾರಮಾಡಿದಳು. ಆಗ ಆಕೆ ಮೇರಿಯೊಂದಿಗೆ ಮಾತುಕತೆ ಆರಂಭಿಸಿದಳು. ಆಕೆ ಶ್ರೀಮತಿ ಚಾರ್ಮಂದಳಾಗಿದ್ದಳು.

ಮನೆಯಿಂದ ಹೊರಬಿದ್ದ ಮೇಲೆ ಶ್ರೀಮತಿ ಚಾರ್ಮಂದಳು ಹಾಗೆಯೆ ಮುಂದೆ ನಡೆದಳು. ಮನಸ್ಸಿನ ಚಿಂತೆ ಮತ್ತು ಜ್ವರದಡಿಗೆ ಎಂದಿಗಿಂತ ಹೆಚ್ಚು ರಭಸದಿಂದ ಮುಂದೆ ನಡೆದು ಬಂದಿದ್ದಳು. ಅವಳ ಸಾಮಾನ್ಯ ಭಾವವೃತ್ತಿಗಳಲ್ಲಿ ಆ ರಭಸವಿರುತ್ತಿದ್ದಿಲ್ಲ. ಒಂದು ಸಿಗರೇಟಿನ ಸಂತೈಕೆಯೂ ಆ ಜ್ವರವನ್ನು ಪೂರ್ತಿ ಉಪಶಮನಗೊಳಿಸಿರಲಿಲ್ಲ. ಆ ಕಾನನ್ನು ಹೊಕ್ಕಿ ಆಕೆ ಚಂಚಲಚಿತ್ತದಿಂದ, ಮಾರ್ಟಿಯು ಕೆಲಸದಲ್ಲಿ ತೊಡಗಿದ್ದನ್ನು ನೋಡಿದಳು. ಆಗ ಸಿಗರೇಟನ್ನು ಒಗೆದುಬಿಟ್ಟು ಅವಳ ಹತ್ತಿರಕ್ಕೆ

ಸರಿದಳು. ಚಾಪ್, ಚಾಪ್, ಚಾಪ್, ಮಾರ್ಟಿಯ ತಿರುಗತ್ತಿ ಕೆಲಸ ನಡೆಯಿಸುತ್ತಿತ್ತು. ಇದಕ್ಕೂ ಶ್ರದ್ಧೆಯಿಂದ ಆಸಕ್ತಿಯಿಂದ ಆ ಕೆಲಸ ಆಕೆ ಮಾಡಿದ್ದಿಲ್ಲ. ಕೊನೆಗೆ ಶ್ರೀಮತಿ ಚಾರ್ಮಂದಳೆ ಮಾತನಾಡಿದಳು.

'ಅಲ್ಲಿ ಆ ಮರಕಡಿಯುವ ಜವಾನನೊಂದಿಗೆ ಮಾತನಾಡುತ್ತ ನಿಂತ ಆ ತರುಣಿ ಯಾರು?' ಆಕೆ ಕೇಳಿದಳು.

'ಅಮ್ಮಾ, ಆಕೆ ಶ್ರೀಮತಿ ಫಿಟ್ಝಪಿಯರ್ಸ' ಅಂದಳು ಮಾರ್ಟಿ.

'ಮತ್ತೆ ಆ ಮಾತಾಡುವಾತ?'

'ಆತ ವಿಂಟರಬೋರ್ನ!' ಅವನ ಹೆಸರೆತ್ತುವಾಗ ಮಾರ್ಟಿಯ ಕೆನ್ನೆ ಕೆಂಪಗೆ ಕೆಂಪೇರಿತ್ತು.

ಅದನ್ನು ಶ್ರೀಮತಿ ಚಾರ್ಮಂದ ಗಮನಿಸಲು ತಪ್ಪಲಿಲ್ಲ. 'ನೀನು ಅವನಿಗೆ ವಾಗ್ದತ್ತಳೆ?' 'ಇಲ್ಲ. ಅಮ್ಮಾ, ಆಕೆ ಒಮ್ಮೆ ಹಾಗಿದ್ದಳು.' ಮತ್ತು ಅಂದಳು ಮಾರ್ಟಿ.

ಆದರೆ ಈ ವಿಷಯದ ಬಗೆಗೆ ತನ್ನ ವಿಚಾರಗಳ ಹಿಳಿಲ ಜಿಡುಕನ್ನು ಅವಳು ವಿವರಿಸಿ ಹೇಳಲು ಅಸಮರ್ಥಳು. ಅವಳ ಪ್ರಾಯದ, ಅನನುಭವದ, ಹರಯದ ಹುಡುಗಿಗೆ ಅಂಥ ವಿಚಾರ ಅಸಾಮಾನ್ಯ ಚುರುಕಿನದಾಗಿತ್ತು. ಆ ವಿಚಾರವೆಂದರೆ, ಗಂಡನು ಉಪೇಕ್ಷೆ ಮಾಡುತ್ತಿರುವಾಗ ಗ್ರೇಸಳು ವಿಂಟರಬೋರ್ನನ ಸಹವಾಸದಲ್ಲಿ ಬೀಳುವಂತಾಗುವುದು ಎರಡೂ ಹೃದಯಗಳಿಗೆ ಗಂಡಾಂತರದ್ದೆಂದು ಆಕೆ ಕಂಡಳು. ಶ್ರೀಮತಿ ಚಾರ್ಮಂದಳೂ ಅಂಥ ಪ್ರಸಂಗಗಳಲ್ಲಿ ಸ್ತ್ರೀಯರಿಗೆ ಹೊಳೆಯುವ ಇಂದ್ರಿಯಾತೀತವಾದ 'ಅಶಿಕ್ಷಿತ ಪಟುತ್ವ'ದಿಂದ ಮಾರ್ಟಿ ಏನು ಹೇಳಲಿದ್ದಳೆಂಬುದರ ಇಂಗಿತವನ್ನು ತಟ್ಟನೆ ಊಹಿಸಿದಳು, ಬಾಳುಗಳು ಹೀಗೆ ದೂರ ಸೆಳೆದು ಸರಿದಿದ್ದವು. ಅದರಲ್ಲಿ ಬಡ ಮಾರ್ಟಿಯ ಆಸೆಗಳು ಒಡೆದು ಚೂರಾಗಿದ್ದವು. ಈ ಚಿತ್ರವು ಒಡಮೂಡಿತ್ತು. ಅವಳಲ್ಲಿ ಮೆಲಬರಿಯ ಪ್ರತಿವಾದಗಳು ಪ್ರಚೋದಿಸಿದ ಆ ಉದಾರ ನಿರ್ಧಾರಗಳಲ್ಲಿ ಇದು ಇನ್ನೂ ಹೆಚ್ಚಿನ ಸಂಕಲ್ಪವನ್ನು ತುಂಬುವಂತೆ ಪ್ರೇರಿಸಿತು.

ಅಂಥ ಭಾವನೆಗಳಿಂದ ಭರಿತಳಾಗಿ ಅವಳು ಆ ಹುಡುಗಿಯನ್ನು ಬೀಳ್ಕೊಂಡು, ಹೆಝಲ ಬೊಡ್ಡೆಗಳ ಬುಡಗಳ ಮೇಲಿನಿಂದ ಹಾಯ್ದು ಗ್ರೇಸ ಮತ್ತು ವಿಂಟರ ಬೋರ್ನನ ನಿಂತಲ್ಲಿಗೆ ಹೋದಳು. ಅವಳು ಸಮೀಪಿಸುವದನ್ನು ಅವರು ಕಂಡರು. ಮತ್ತು ವಿಂಟರಬೋರ್ನ ಅಂದನು 'ಆಕೆ ನಿನ್ನ ಬಳಿಗೆ ಬರುತ್ತಿದ್ದಾಳೆ, ಇದೊಂದು ಶುಭ ಶಕುನ. ಅವಳು ನನ್ನನ್ನು ತಿರಸ್ಕರಿಸುತ್ತಾಳೆ. ಆದ್ದರಿಂದ ನಾನು ಹೋಗುತ್ತೇನೆ.' ಹಾಗೆಯೇ ಆತನು ಗ್ರೇಸಳು ಬರುವ ಮುಂಚೆ ಎಲ್ಲಿ ಕೆಲಸ ಮಾಡುತ್ತಿದ್ದನೋ ಅಲ್ಲಿಗೆ ಹಿಂಜರಿದು ಹೋದನು. ಮತ್ತು ಗ್ರೇಸಳ ಆ ಭಯಾನಕ ಪ್ರತಿಸ್ಪರ್ಧಿಯು ಸಮೀಪಿಸಿದಳು. ಇಬ್ಬರೂ ಒಬ್ಬರನ್ನೊಬ್ಬರು ಹತ್ತಿರಬಂದಂತೆ ಅಳೆದು ನೋಡಹತ್ತಿದರು.

'ಅಯ್ಯೋ, ಮಿಸೆಸ್ ಫಿಟ್ಝಪಿಯರ್ಸ,' ಫೆಲಿಸ್ ಚಾರ್ಮಂದ ಅಂದಳು. ಒಳಗುದಿಯು ಏನೋ ಕಲಮಲವು ಅವಳ ಮಾತನ್ನು ತಡೆಯಿತು. 'ನಿನ್ನನ್ನು ನಾನು

ಬಹುಕಾಲವಾಯಿತು ನೋಡದೆ', ಅವಳು ಪ್ರಾಯೋಗಿಕವಾಗಿಯೋ ಎಂಬಂತೆ ಕೈಯನ್ನು ಮುಂದೆ ಚಾಚಿದಳು. ಗ್ರೇಸಳು ಹಾಗೆಯೇ ನಿಂತಳು — ಕಾಡುಪ್ರಾಣಿಯೊಂದು ಕನ್ನಡಿಯನ್ನೊ, ಇನ್ನಾವದೆ ನಾಗರಿಕತೆಯ ಗೊಂದಲಗೆಡಿಸುವ ವಸ್ತುವನ್ನೋ ಇದಿರಿಸಿದಂತೆ. ಇದೇನು ಚಾರ್ಮುಂದಳೇ ಹೀಗೆ ಮಾತಾಡುತ್ತಿರಬಹುದೆ? ಹೀಗೆ ಮಾತಾಡುತ್ತಿರುವವಳು ಚಾರ್ಮುಂದಳೇ ಆಗಿರಬಹುದೇ? ಅವಳೇ ಆಗಿದ್ದರೆ ಬಾಳಿನ ಅರ್ಥವೇನೆಂಬುದನ್ನು ಇನ್ನು ತಾನು ತರ್ಕಿಸಲಾರೆ.

'ನಾನು ನಿನ್ನೊಂದಿಗೆ ಮಾತಾಡಬೇಕಾಗಿದೆ.' ಮಿಸೆಸ್ ಚಾರ್ಮುಂದಳು ಸೂಕ್ಷ್ಮಸಂವೇದಿಯಾಗಿ ನುಡಿದಳು. ಏಕೆಂದರೆ ಆ ಎಳೆಯುವಳ ದಿಟ್ಟನೋಟವು ಅವಳ ಮೇಲೆ ಪೂರ್ತಿ ತಣ್ಣೀರು ಎರಚಿದಂತೆ ಮಾಡಿತ್ತು. 'ನನ್ನೊಂದಿಗೆ ನಡೆಯುವಿಯಾ? ನಾವು ಒಳ್ಳೆ ಏಕಾಂತವನ್ನು ಸೇರುವತನಕ.'

ಅಂದು ಚಾರ್ಮುಂದಳಿಗೆ ಹೇಸಿ ವಾಕರಿಸಿದರೂ ಗ್ರೇಸಳು ಅವಳ ವಿನಂತಿಯನ್ನು ಮನ್ನಿಸಿದಳು, — ತೀರ ಯಾಂತ್ರಿಕವಾಗಿ. ಮತ್ತು ಅವರಿಬ್ಬರೂ ಅಕ್ಕಪಕ್ಕದಲ್ಲಿ ನಡೆದು ಬೆಟ್ಟದ ಇನ್ನೂ ಆಳವಾದ ಒಳಮೂಲೆಗಳನ್ನು ಸೇರಿದರು. ಚಾರ್ಮುಂಡಳು ಭಾವಿಸಿದಕ್ಕಿಂತಲೂ ದೂರದ ಆಳದ ಏಕಾಂತ ಸ್ಥಳಕ್ಕೆ ಅವರು ಹೋದರು ; ಆದರೆ ಮಾನಸಿಕ ಅಶಿಸ್ತು ಅಥವಾ ಕ್ಷೋಭವು ಅವಳಿಗೆ ಸಂಭಾಷಣೆ ಆರಂಭಿಸದಂತೆ ಆತಂಕ ಉಂಟು ಮಾಡಿತು. ಆ ಕೊರತೆ ತುಂಬಿಕೊಳ್ಳಲಿಕ್ಕೆ ಆಕೆ ನಡೆಯುತ್ತಲೇ ಉಳಿದಳು.

'ನಿನ್ನ ತಂದೆಯನ್ನು ಭೆಟ್ಟಿಯಾದೆ', ಆಕೆ ಕೊನೆಗೊಮ್ಮೆ ಉಲ್ಲೇಖಿಸಿದಳು, 'ಮತ್ತು ನನಗೆ ತುಂಬ ವ್ಯಥೆಯಾಯಿತು. ಅವನು ಅಂದದ್ದೆಲ್ಲ ಕೇಳಿ.'

'ಅವನು ನಿಮಗೆ ಏನು ಅಂದನು ? ಆತ ನಿಮಗೆ ಏನೇ ಅಂದರೂ ಅದರ ಬಗೆಗೆ ನನ್ನನ್ನು ಅವನು ತನ್ನ ವಿಶ್ವಾಸದಲ್ಲಿ ತೆಗೆದುಕೊಂಡಿರಲೇ ಇಲ್ಲ.'

'ಇರಲಿ. ಆದರೂ, ನೀನು ಸಹಜವಾಗಿ ಊಹಿಸಿರಬಹುದಾದುದನ್ನು ನಾನೇಕೆ ಮತ್ತೆ ಆಡಿತೋರಿಸಲಿ?'

'ನಿಜ, ನಿಜ', ಗ್ರೇಸಳು ಖಿನ್ನಳಾಗಿ ಉತ್ತರಿಸಿದಳು. 'ನಮ್ಮಿಬ್ಬರ ಮನಸ್ಸಿನಲ್ಲಿಯೂ ಇರುವ ಆ ಭಾವವನ್ನು ನಾವೇಕೆ ಆಡಿತೋರಿಸಬೇಕು ?'

'ಮಿಸೆಸ್ ಫಿಟ್ಝಪಿಯರ್ಸ ನಿನ್ನ ಯಜಮಾನರು...'

ಆ ಮಾತುಗಾರ್ತಿಯ ನಾಲಿಗೆ ಆ ಗಂಡಾಂತರದ ವಿಷಯವನ್ನು ಮುಟ್ಟಿದ ಕ್ಷಣಕ್ಕೆ ಆತ್ಮಪ್ರಜ್ಞೆಯ ಅಳುಕಿನ, ನಾಚಿಕೆಯ ಒಂದು ಸುಸ್ಪಷ್ಟವಾದ ಭಾವವು ಅವಳ ಚರ್ಯೆಯ ಮೇಲಿಂದ ಮಿಂಚಿತು. ಆ ಒಂದು ಚರ್ಯೆಯಲ್ಲಿ ಅವಳ ಹೃದಯವು ತನ್ನಲ್ಲಿ ತುಳುಕುವ ಭಾವವನ್ನು ಕೋಲ್ಮಿಂಚಿನಂತೆ ಬೆಳ್ಳನೆ ಬೆಳಗಿಸಿತು. ಈ ಮುಖಭಾವವು ಅಷ್ಟು ತೀವ್ರವೂ ಕ್ಷಣಿಕವೂ ಆಗಿತ್ತು. ಗ್ರೇಸಳ ಸ್ಥಾನದಲ್ಲಿ ಒಬ್ಬ ಪ್ರಜ್ಞೆಯ ಹೆಂಗಸಿಗೇ ಅದರ ಅರ್ಥದ ಮರ್ಮ ಹಿಡಿಸಬಹುದಿತ್ತು. ಗ್ರೇಸಳ ಅರಿವಿನ ಇದಿರು ಅದು ವ್ಯರ್ಥಹೋಗಲಿಲ್ಲ.

'ಹಾಗಾದರೆ ನೀನು ನಿಜವಾಗಿಯೂ ಅವರನ್ನು ಪ್ರೀತಿಸುತ್ತೀ?' ಆಕೆ ಬಹಳ ಆಶ್ಚರ್ಯದ ದನಿಯಲ್ಲಿ ಉದ್ಗರಿಸಿದಳು.

'ಗೆಳತೀ ಇದೇನೆನ್ನುವಿ? ನಿನ್ನ ಅರ್ಥವೇನು?'

'ಇನ್ನೇನು?', ಗ್ರೇಸ ಉದ್ಗರಿಸಿದಳು. 'ಈ ತನಕ ನಾನು ಭಾವಿಸಿದ್ದೆ — ನನ್ನ ಯಜಮಾನರೊಂದಿಗೆ ನೀನು ಕ್ರೂರವಾಗಿ ಚಿನ್ನಾಟವಾಡುತಿದ್ದೀ — ನಿನ್ನ ಆಲಸಿಕೆಯ ಹೊತ್ತು ಕಳೆಯಲು, ಮನೋರಂಜನೆಗಾಗಿ. ನೀನು ಸಿರಿವಂತ ಮಹಿಳೆ. ಆತ ಬಡ ವ್ಯಾವಸಾಯಿಕ ಮನುಷ್ಯ. ಅವನನ್ನು ನೀನು ಮನಸಾರೆ, ಮನಸ್ಸಿನಲ್ಲಿಯೇ ತಿರಸ್ಕರಿಸುತ್ತಿ. ಅವನ ಹೆಂಡತಿಯಾದವಳನ್ನು ಹೇಗೋ ಹಾಗೆಯೇ. ಆದರೆ ಈಗ ನಿನ್ನ ರೀತಿಯಿಂದ ನಾನು ಊಹಿಸುವುದೇನೆಂದರೆ, ನೀನು ಅವನನ್ನು ಅತ್ಯಂತ ನಿರ್ಭರವಾಗಿ, ಜೀವಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿ? ಮತ್ತು ಈಗ ನಾನು ನಿನಗೆ ಹಿಂದಿನಂತೆ ದ್ವೇಷಿಸುವುದಿಲ್ಲ. ಹೌದು, ಇದು ಸತ್ಯ', ನಡುಗುವ ನಾಲಿಗೆಯಿಂದ ಮಿಸೆಸ್ ಫಿಟ್ಜಪಿಯರ್ಸ ಅಂದಳು, 'ಏಕೆಂದರೆ ನಿನ್ನ ವಿಷಯದಲ್ಲಿ ಇದು ಒಂದು ಕ್ರೀಡೆ ಅಲ್ಲವೇ ಅಲ್ಲ, ಇದು ಸತ್ಯ. ಓ, ತಿರಸ್ಕಾರವಲ್ಲ. ನನಗೆ ನಿನ್ನ ಮೇಲೆ ಕರುಣೆ ಅನಿಸುತ್ತದೆ. ಏಕೆಂದರೆ ಇದರಿಂದ ನೀನೇ ದುಃಖ ಅನುಭವಿಸುವಿ.'

ಈಗ ಗ್ರೇಸಳಷ್ಟೇ ಚಾರ್ಮಂದಳೂ ಪ್ರಕ್ಷುಬ್ಧಳಾದಳು. 'ನಿನ್ನೊಂದಿಗೆ ನಾನು ವಾದಕ್ಕೆ ಬೀಳಬಾರದು', ಆಕೆ ಉದ್ಗಾರತಗೆದಳು. 'ಅದರಿಂದ ನನಗೇ ಮಾನಗೇಡು. ಆದರೆ ಒಮ್ಮೆ ನಾನು ನಿನ್ನನ್ನು ಮೆಚ್ಚಿಕೊಂಡಿದ್ದೆ. ಆ ಕಾಲದ ನೆನಪಿಗಾಗಿ ಹೇಳುತ್ತೇನೆ — ನೀನು ಬಹಳ ತಪ್ಪು ಭಾವಿಸಿರುವಿ.'

ಈ ಸರಳ ಸಾದಾ ಶಾಲಾ ವಿದ್ಯಾರ್ಥಿನಿಯು ಮಾನಸಿಕವಾಗಿಯೂ, ಭಾವನಾಮಯವಾಗಿಯೂ ತನ್ನ ಮೇಲೆ ಆಧಿಪತ್ಯ ನಡೆಯಿಸುತ್ತಿರುವಳೆಂಬ ಭಾವನೆಯೇ ಅವಳ ಮನಸ್ಸಿನ ಗೊಂದಲಕ್ಕೂ, ದಿಗಿಲಿಗೂ ಬಹಳಷ್ಟು ಕಾರಣವಾಯಿತು. 'ನಾನು ಅವನನ್ನು ಪ್ರೀತಿಸುವುದಿಲ್ಲ', ಆಕೆ ಹಟದಿಂದ ಸುಳ್ಳಾಡಹತ್ತಿದಳು, 'ಅದು ಬರೆ ದಯೆ—ಇತರ ಡಾಕ್ಟರರಿಗಿಂತ ಇವನನ್ನು ನಾನು ಹೆಚ್ಚು ಹಚ್ಚಿಕೊಂಡಿದ್ದುಂಟು. ನಾನು ಒಂಟಿಯಾಗಿದ್ದೇನೆ. ಅವನೊಂದಿಗೆ ಮಾತುಕತೆ ಬೆಳೆಸಿದೆ. ಸರಿ, ತುಸು ಚಿನ್ನಾಟವನ್ನೂ ಆಡಿದೆನೆನ್ನು, ಇನ್ನು ನನ್ನ ಆ ಬಾಲಿಶತನ. ಶುದ್ಧ ಮೈತ್ರೀಭಾವದಲ್ಲಿ ನಡೆದ ಆ ತರಳಾಟ ನಿನಗೆ ಹೀಗೆ ಗಂಭೀರ ವಿಷಯವಾಗಿ ತೋರುತಿದ್ದರೆ, ನನಗೆ ನಿಜವಾಗಿಯೂ ದುಃಖವಾಗುತ್ತಿದೆ. ಹೀಗೆ ಆಗುವದೆಂದು ಯಾರು ಕಲ್ಪಿಸಿದ್ದರು? ಆದರೆ ಇಲ್ಲಿಯ ಪ್ರಪಂಚ ಇಷ್ಟು ಸರಳ ಸಾದಾ ಆಗಿದೆ.'

'ಓ, ಇದು ಬರೆ ಸೋಗಲಾಡಿತನ', ಗ್ರೇಸ ತಲೆ ಅಲ್ಲಾಡಿಸುತ್ತ ಅಂದಳು. 'ಇದೇನೂ ಪ್ರಯೋಜನದ್ದಲ್ಲ. ನೀನು ಅವನನ್ನು ಪ್ರೀತಿಸುತ್ತಿ. ನಿನ್ನ ಮೋರೆಯಲ್ಲಿಯೇ ನಾನು ಕಂಡುಕೊಂಡ ನಿನ್ನ ಭಾವನೆಗಳನ್ನು ಸುಳ್ಳು ಮಾಡಲು ನೀನು ನಿನ್ನ ಕೃತಿಗಳನ್ನು ಬಿಡಲಿಲ್ಲ. ಈ ಕಳೆದ ನಾಲ್ಕಾರು ತಿಂಗಳು ನೀನು ವಿಪರೀತ

ಅವಿವೇಕದಿಂದ ನಡೆದಿರುವಿ; ಭಯಂಕರ ತಿಳಿಗೇಡಿತನದಿಂದ. ಆದರೆ ನೀನು ಅಪ್ರಮಾಣಿಕಳಾಗಿಲ್ಲ; ಮತ್ತು ಅದುವೆ ನನ್ನನ್ನು ನಿನ್ನ ಬಗೆಗೆ ನಿರುಪದ್ರವಿಯಾಗಿ ಮಾಡಿದೆ.'

'ಸರಿ, ನಾನು ಅಪ್ರಮಾಣಿಕಳೇ ಆಗಿದ್ದೇನೆ. ಆ ಮಾತು ನೀನು ಒಪ್ಪುವುದಾದರೆ ನಾನು ಅವನೊಂದಿಗೆ ಮರುಳಾಟ ಮಾಡಿದ್ದೇನೆ; ಆದರೆ ಅವನನ್ನು ನಾನು ಪ್ರೀತಿಸುವುದಿಲ್ಲ.'

ಆದರೆ ಗ್ರೇಸಳು ತನ್ನ ನಿಲುಮೆಗೆ ಉಡದಂತೆ ಅಂಟಿಕೊಂಡು ಉಳಿದಳು. 'ನೀನು ಇತರರೊಂದಿಗೆ ಚಿನ್ನಾಟ ಮಾಡಿರಬಹುದು. ಆದರೆ ಅವನನ್ನು ನೀನು ಪ್ರೀತಿಸುತ್ತೀ, ಇನ್ನಾವನನ್ನು ಪ್ರೀತಿಸದಷ್ಟು ಗಾಢವಾಗಿ ಪ್ರೀತಿಸುತ್ತೀ.'

'ಓ, ಹೋಗಲಿಬಿಡು,—ನಾನು ವಾದ ಮಾಡುವುದಿಲ್ಲ.' ಶ್ರೀಮತಿ ಚಾರ್ಮಂದಳು ಮಂದವಾಗಿ ನಗುತ್ತ ಅಂದಳು. 'ಮತ್ತು ಇದಕ್ಕಾಗಿ ನೀನು ನನ್ನನ್ನು ನಿಂದಿಸಲಿಕ್ಕೆ ಬಂದಿಯಾ, ಮಗು ?'

'ಇಲ್ಲ', ಗ್ರೇಸಳು ಉದಾರ ಮನಸ್ಸಿನಿಂದ ಅಂದಳು. 'ಅವನನ್ನು ನೀನು ಯಥೇಷ್ಟವಾಗಿ ಪ್ರೀತಿಸುತ್ತಿರು.— ನಾನು ಅದನ್ನು ಲೆಕ್ಕಿಸುವುದಿಲ್ಲ. ಕೊನೆಗೂ ಅದು ನನಗಿಂತ ನಿನಗೇ ಕಟುವಾದ ವ್ಯವಹಾರವೆಂದು ನೀನು ಕಂಡುಕೊಳ್ಳುವಿ. ನಾನು ಈಗಲೇ ಹೇಳಿಡುತ್ತೇನೆ. ಅವನು ನಿನ್ನಿಂದ ಲಗು ಬೇಸರಪಡುವನು,—ಶಕ್ಯವಿಲ್ಲದಷ್ಟು ಬೇಸರಪಡುವನು. ನನ್ನಷ್ಟು ನೀನು ಅವನನ್ನು ಅರಿತಿಲ್ಲ. ಮತ್ತು ಆಗ ನಿನಗೆ ಅನಿಸಬಹುದು, ಅವನನ್ನು ಎಂದೆಂದೂ ನೋಡಲೆಬಾರದಾಗಿತ್ತೆಂದು.'

ಅವಳ ಈ ಭವಿಷ್ಯವಾಣಿಗೆ ಶ್ರೀಮತಿ ಚಾರ್ಮಂದ ಒಮ್ಮೆಲೆ ಬಹಳ ನಿಃಶಕ್ತಳಾದಳು, ನಿಸ್ತೇಜಳಾದಳು; ಯಾರೂ ಒಬ್ಬ ಸೌಮ್ಯ ಹುಡುಗಿಯೆಂದು ಭಾವಿಸಬಹುದಾದ ಈ ಗ್ರೇಸಳು ಆವಳ ಸಂದರ್ಶಕಳಿಗಿಂತ (ತನಗಿಂತ) ಕೆಚ್ಚಿನಲ್ಲಿ ಬಿರುಸಾಗಿದ್ದಳು.

'ನೀನು ಅತಿಶಯೋಕ್ತಿ ಮಾಡುವಿ — ಕ್ರೂರ ಮೂರ್ಖ ತರಳೆ', ಆಕೆ ಚಿಕ್ಕ ವೇದನೆಗಳಿಂದ ವಿಲಿ ವಿಲಿ ಗೊಳ್ಳುತ್ತ ಮತ್ತೆ ಅಂದಳು, 'ಇದು ಬರೆ ಗೆಳೆತನದ ಮರುಳಾಟ — ತರಳಾಟ — ಇನ್ನೇನೂ ಅಲ್ಲ. ಇನ್ನು ನಾನು ಅವನನ್ನೂ ನೋಡಲೇ ಒಲ್ಲೆ. ಅದರಿಂದೇನು ನನ್ನ ಹೆಸರಿಗಾಗಲಿ ಹೃದಯಕ್ಕಾಗಲಿ ಯಾವ ಬಾಧೆಯೂ ಇಲ್ಲ.'

'ನೀನು ಅವನನ್ನು ತಿರುಗಿ ಕಾಣಲು ಒಲ್ಲೆಯೆಂಬುದೆ ನನಗೆ ಅನುಮಾನ.' ಒಂದು ಗಿಡವನ್ನು ಹಿಂದಕ್ಕೆ ಬಗ್ಗಿಸುತ್ತ ಗ್ರೇಸಳು ಅಂದಳು. 'ಆದರೆ ನೀನು ನನ್ನ ವಿರುದ್ಧ ಕೆರಳಿದಂತೆ ನಾನೇನು ನಿನ್ನ ವಿರುದ್ಧ ಕೆರಳಿಲ್ಲ,' ಆ ಗಿಡವನ್ನು ತನ್ನ ಸಹಜವಾದ ನೇರಕ್ಕೆ ನಿಲ್ಲಲು ಬಿಟ್ಟು, ಆಕೆ ಮುಂದರಿದಳು, 'ಇಲ್ಲಿ ಬರುವ ಮುಂಚೆ ನಿನ್ನ ಸೊಕ್ಕಿ ಬೆಳೆದ ಕ್ರೂರತೆಗೆ ನಾನು ನಿನ್ನನ್ನು ತಿರಸ್ಕರಿಸಿದ್ದೆ; ಆದರೆ ಈಗ ನಿನ್ನ ದೌರ್ಬಲ್ಯಕ್ಕಾಗಿ ನನಗೆ ಕೇವಲ ಕನಿಕರವೆನಿಸುತ್ತದೆ — ಆ ದೌರ್ಬಲ್ಯ ಆಸ್ಥಾನದಲ್ಲಿ ಪ್ರಕಟವಾದುದಕ್ಕಾಗಿ. ನಿನ್ನನ್ನು ಕಾಣುವ ಆಸೆಯಲ್ಲಿ ಎಡ್ರೆಡ್ ಸಮಯಾಸಮಯಗಳ

ಪರಿವೆ ಇಲ್ಲದೆ ಮನೆಯಿಂದ ಹೊರಬಿದ್ದು ಹೋದಾಗ, ನಡುರಾತ್ರಿಯಲ್ಲಿ ಮೈಲು ಗಟ್ಟಲೆ ಕುದುರೆಯೇರಿ ಹಳ್ಳಿಗಾಡಿನೊಳಗಿಂದ ಆತ ಸಾಗುವುದನ್ನು, ನಿನ್ನ ಒಂದು ಇಣಕುನೋಟಕ್ಕಾಗಿ ಮೈತುಂಬ ಕೆಸರು ಮಾಡಿಕೊಂಡು ಆತ ಜೀವವನ್ನು ಅಪಾಯಕ್ಕೆ ಒಡ್ಡುವುದನ್ನು ಕಂಡಾಗ ಅವನೊಬ್ಬ ಮೂರ್ಖ ಗಂಡಸು, — ಒಬ್ಬ ಪಕ್ಕಾ ಸೋಗ ಲಾಡಿಯ ಕೈಯ ಆಟಿಗೆ ಎಂದುಕೊಂಡಿದ್ದೇನೆ. ನನಗೆ ದುರಂತವಾಗಲಿರುವ ಆ ಚೇಷ್ಟೆ ನಿನಗೆ ಸುಖಾಂತವಾಗಲಿದೆಯೆಂದು ನಾನು ಭಾವಿಸಿದೆ. ಆದರೆ ಈಗ ನೋಡಿದರೆ ದುರಂತ ನಿನ್ನ ಬದಿಗೂ ಇದೆ, ಕೇವಲ ನನ್ನ ಬದಿಗೇ ಅಲ್ಲ. ಅದಕ್ಕೂ ಹೆಚ್ಚು ನನ್ನ ಸ್ಥಾನಕ್ಕಾಗಿ ನಾನು ತೊಂದರೆಪಟ್ಟುಕೊಳ್ಳುತ್ತಿದ್ದರೆ ನಿನ್ನವಕ್ಕಾಗಿ ನೀನು ಕಳವಳಪಡು ತ್ತಿರುವಿ. ನನಗೆ ನಿರಾಶೆಗಳೇ ಪಾಲಿಗೆ ಬಂದರೆ, ನಿನಗೆ ಹತಾಶೆ ಆಗಲಿದೆ. ತತ್ತ್ವ ವಿಚಾರ ನನಗೆ ಬಲ ಕೊಡಬಹುದು. ಆದರೆ ನಿನಗೋ — ದೇವರೆ ಗತಿ.'

'ನಿನ್ನ ಬಡಬಡಿಕೆಗೆ ನಾನು ಉತ್ತರ ಕೊಡಲು ಯತ್ನಿಸುವುದಿಲ್ಲ', ಚಾರ್ಮಂದ ಅಂದಳು, — ಪೂರ್ತಿ ಕುಸಿದುಬಿದ್ದ ತನ್ನ ಘನತೆ ಗಾಂಭೀರ್ಯವನ್ನು ತಿರುಗಿ ಸ್ಥಾಪಿಸಿ ಕೊಳ್ಳಲು ಹೆಣಗಾಡುತ್ತ, 'ನನ್ನ ಕೃತಿಗಳೇ ನನ್ನ ಪುರಾವೆ — ಪ್ರಮಾಣಗಳು. ನೀನು ಇನ್ನೂ ನೋಡದ ಈ ಪ್ರಪಂಚದಲ್ಲಿ ಸ್ತ್ರೀ ಪುರುಷರ ಸ್ನೇಹ ಹೊಸತೇನೂ ಅಲ್ಲ; ಯಾರಿಗೂ ಗೊತ್ತಿಲ್ಲದ ಗೋಪ್ಯಿಯೂ ಅಲ್ಲ. ಇಷ್ಟೇ, ನನ್ನ ಬಗೆಗೆ ಹೆಚ್ಚು ಮರ್ಯಾದೆ ಯಿಂದ ತೀರ್ಮಾನಿಸಿದ್ದರೆ, ನನ್ನ ಪಾಡಿಗೆ ನನ್ನನ್ನು ಬಿಟ್ಟಿದ್ದರೆ ನಿನಗೂ ನಿನ್ನ ತಂದೆಗೂ ಲೇಸಾಗುತ್ತಿತ್ತು. ಆದರೆ ಆಗಿದ್ದಂತೆ, ಅಮ್ಮಾ, ಇನ್ನೂ ಎಂದೆಂದಿಗೂ ನಿನ್ನನ್ನು ನೋಡಲು ಮಾತಾಡಿಸಲು ನಾನು ಬಯಸುವುದಿಲ್ಲ.'

ಗ್ರೇಸಳು ನಮಸ್ಕರಿಸಿದಳು. ಶ್ರೀಮತಿ ಚಾರ್ಮಂದ ದರ್ಪದಿಂದ ಹೊರಳಿ ನಡೆದಳು. ಅವರಿಬ್ಬರೂ ನೇರವಾಗಿ ವಿರುದ್ಧ ನಿಟ್ಟಿನಲ್ಲಿ ನಡೆದರು. ಮತ್ತು ಸುತ್ತಲಿನ ದಟ್ಟ ನೆರಳಿನ ಪರಿಸರದಲ್ಲಿ ಸಂಜೆಗತ್ತಲೆಯ ಮಬ್ಬಿನಲ್ಲಿ ಒಬ್ಬರಿಗೊಬ್ಬರು ಬೇಗ ಮರೆ ಯಾದರು.

ಆ ದೀರ್ಘವಾದ ವಿವಾದದ ಉದ್ರೇಕದ ವೃತ್ತಿಯಲ್ಲಿ ಅವರು ಹಾಗೆಯೇ ಮುಂದೆ ಸಾಗಿ ಅಡ್ಡಾತಿಡ್ಡ ಹೋಗುತ್ತ ಯಾವ ದಿಕ್ಕು ಎಷ್ಟು ದೂರವೆಂಬುದರ ಪರಿವೆಯನ್ನು ಕಳೆದುಕೊಂಡರು. ಮರ ಕಡಿಯುವವರ ಎಲ್ಲ ಸದ್ದುಗಳೂ ಎಲ್ಲೋ ದೂರದಲ್ಲಿಯೆ ಮಾಯವಾಗಿದ್ದವು. ಆಗೊಮ್ಮೆ ಈಗೊಮ್ಮೆ ದೀರ್ಘ ಅವಕಾಶ ಬಿಟ್ಟು ಕೇಳಿಸು ತ್ತಿದ್ದಿಲ್ಲವಾದರೆ, ಈ ಸಂಜೆ ಮಬ್ಬಿನಲ್ಲಿ ಅವರು ಎಲ್ಲ ಶಾಂತವಾಗಿ ಮನೆಯ ಹಾದಿ ಹಿಡಿದಿರಬಹುದಿತ್ತು.

ಆದರೆ ಗ್ರೇಸಳು ಯಾವ ಸಂಶಯವೂ ಇಲ್ಲದೆ ತನ್ನ ಗತಿಯಲ್ಲಿ ಮುಂದರಿದಳು. ಅಲ್ಲಿ ನಡೆಯಲು ತೀರ ಇಕ್ಕಟ್ಟಾದ ದಾರಿ. ತಳಪೊದೆಗಳು ಅಷ್ಟು ದಟ್ಟ. ಆ ದಾರಿ ಯಲ್ಲಿಯೂ ಮುಳ್ಳುಕಂಟಿಗಳು ಚಾಚಿದ್ದವು. ಆ ಬೆಟ್ಟದ ತೀರ ಕಾಡುಪಾಲಾದ ಭಾಗದಲ್ಲಿ ಚಿಕ್ಕಂದಿನಿಂದಲೂ ಕಾಲಿಟ್ಟಿದ್ದಿಲ್ಲ. ಅಲ್ಲಿಯ ಪ್ರದೇಶದ ರೂಪರೇಷೆಯು

ಬದಲಾವಣೆಯೇ ದೊಡ್ಡದಾಗಿತ್ತು. ಹಿಂದೊಮ್ಮೆ ಎಲ್ಲೆ ಗುರುತಾದ ಹಳೆಯ ಮರಗಳು ಗಾಳಿಗೆ ಅಥವಾ ಕಡಿದು ಬಿದ್ದಿದ್ದವು. ಮತ್ತು ಅಂದು ಚಿಕ್ಕವಿದ್ದ ಪೊದೆ ಕಂಟಿಗಳು ಈಗ ದೊಡ್ಡವಾಗಿ ಎದ್ದು ತೂಗುತ್ತ ನಿಂತಿದ್ದವು. ಬೇಗನೇ ಅವಳಿಗೆ ಅನಿಸಿತು — ದಿಕ್ಕಿನ ಕುರಿತು ತನ್ನ ಕಲ್ಪನೆ ಮಸುಮಸುಕಾಗಿದೆಯೆಂದು, — ಅವಳಿಗೆ ದಿಕ್ಕಿನ ಕಲ್ಪನೆಯೇ ಉಳಿದಿದ್ದಿಲ್ಲ. ಸಂಜೆಯು ಅಷ್ಟು ಕತ್ತಲಾಗಿದಿದ್ದರೆ, ಗಾಳಿಯೂ ತನ್ನ ಬೇಸರದ ಇರುಳ ದನಿ ಇಷ್ಟು ಸ್ಪಷ್ಟವಾಗಿ ಸುರುಮಾಡದಿದ್ದರೆ ಗ್ರೇಸಳು ಪರಿವೆ ಮಾಡುತ್ತಿದ್ದಿಲ್ಲ. ಆದರೆ ಈಗ ಆಕೆಗೆ ತುಸು ಹೆದರಿಕೆ ; ಮತ್ತು ಮನಬಂದಂತೆ ಅತ್ತಿತ್ತ ದಾರಿಮಾಡಿಕೊಂಡು ಗೊತ್ತು ಗುರಿ ಇಲ್ಲದೆ ಅವಳು ನಡೆಯುಹತ್ತಿದಳು.

ಕತ್ತಲೆ ಇನ್ನೂ ದಟ್ಟವಾಯಿತು. ಗಾಳಿಯ ಸದ್ದು ಇನ್ನೂ ಬೆಳೆಯಿತು. ಆದಾಗ್ಯೂ ಗುರುತಿಗೆ ಸಿಗಬಹುದಾದ ಯಾವ ಸ್ಥಳವೂ ದ್ವಾರವೂ ಕಾಣಿಸಲಿಲ್ಲ. ಹಿಂಟೋಕಹಳ್ಳಿಯ ಯಾವ ಸದ್ದೂ ಕೇಳಿಬರಲಿಲ್ಲ. ಅವಳು ಈಗಾಗಲೆ ಒಂದೆರಡು ತಾಸು ಸುತ್ತಾಡಿದ್ದಳು. ದಣಿವೂ ಅನಿಸತೊಡಗಿತ್ತು. ತನ್ನ ತಿಳಿಗೇಡಿತನಕ್ಕೆ ಅವಳಿಗೇ ಸಿಟ್ಟುಬಂದಿತು. ಅವಳು ಆಕ್ರಮಿಸಿದ ನೆಲ ನೇರವಾಗಿಯೇ ನಡೆದಿದ್ದರೆ, ಅವಳನ್ನು ಆ ಬೆಟ್ಟದಿಂದ ಹೊರಗೆ ಒಂದಲ್ಲ ಒಂದು ದೂರದ ಹಳ್ಳಿಗೆ ಒಯ್ಯಬೇಕಿತ್ತು. ಆದರೆ ಅವಳು ತನ್ನ ಶಕ್ತಿಯನ್ನೆಲ್ಲ ಹಿಂದೆ ಸರಿಯುವುದರಲ್ಲಿಯೇ ಹಾಳು ಮಾಡಿರಬೇಕು. ಈಗ ಅವಳಿಗೆ ಬಹಳ ದಿಗಿಲು — ರಾತ್ರೆಯೆಲ್ಲ ಅಲ್ಲಿಯೆ ನಡುಬೆಟ್ಟದಲ್ಲಿ ಕಳೆಯುಬೇಕೆ ?

ಕ್ಷಣಕಾಲ ಅವಳು ವಿಚಾರ ಮಾಡಲಿಕ್ಕೆ ಸ್ತಬ್ಧಳಾಗಿ ನಿಂತಳು. ಮತ್ತು ಅವಳಿಗೆ ಒಂದು ಭ್ರಮೆಯೋ ಭಾಸವೋ ಅನಿಸಿತು ; ಗಾಳಿಯ ಸದ್ದಿನ ನಡುವೆ ಎಲೆಗಳ ಮೇಲಿಂದ ಬರುವ ಹೆಜ್ಜೆಯ ಸದ್ದು. ಆ ಬೆಟ್ಟದಲ್ಲಿ ವಾಸಿಸುವ ಮೊಲಗಳ ಮೊದಲಾದ ದಳ್ಳಿದೆಯ ಪ್ರಾಣಿಗಳ ಹೆಜ್ಜೆಗಿಂತ ಭಾರವಾದ ದಟ್ಟಡಿಯ ಸದ್ದು. ಮಿತ್ರನೋ, ಶತ್ರುವೋ ಯಾರನ್ನಾದರೂ ಹೀಗೆ ಫಕ್ಕನೆ ಅಲ್ಲಿ ಭೆಟ್ಟಿ ಆಗುವ ಸಂಭವಕ್ಕೆ ಆಕೆ ಮೊದಲು ಅಂಜಿದಳು. ಆದರೂ ತನ್ನಂಥ ಒಬ್ಬ ನಿಶಾಚರನು, ಆತ ತೋಟದ ಹುಡುಗನೆ ಆಗಿರಲಿ, ಬೇಟೆಗಳ್ಳನೇ ಆಗಿರಲಿ, ತನಗೆ ಏನೂ ಅಪಾಯ ಮಾಡಲಾರ ಎಂದು ಅವಳು ನಿರ್ಧಾರಕ್ಕೆ ಬಂದಳು. ಅಲ್ಲದೆ ಅವಳನ್ನು ಹುಡುಕಿ ತರಲು ತಂದೆ ಕಳುಹಿಸಿದ ಯಾರೊಬ್ಬ ಆಳೂ ಆತ ಆಗಿರಬಹುದು. ಆದ್ದರಿಂದ ಆಕೆ ತುಸು ಅಳುಕಿನ ದನಿಯುಲ್ಲಿಯೇ ‘ ಹೇ ’ ಎಂದು ಕೂಗಿದಳು.

ಆ ಕೂಗಿಗೆ ತತ್‌ಕ್ಷಣವೇ ಮಾರುತ್ತರ ಬಂದಿತು — ಆ ಇನ್ನೊಬ್ಬ ವ್ಯಕ್ತಿಯಿಂದ. ಮತ್ತು ಗ್ರೇಸಳು ಆ ನಿಟ್ಟಿನಲ್ಲಿ ಕೂಡಲೇ ಓಡುತ್ತ ತನ್ನೆಡೆಗೆ ತ್ವರೆಯಿಂದ ಬರುವ ಒಂದು ಅಸ್ಪಷ್ಟ ಆಕೃತಿಯನ್ನು ಕಂಡಳು. ಅವರಿಬ್ಬರೂ ಒಬ್ಬರನ್ನೊಬ್ಬರು ಗುರುತಿಸುವ ಮೊದಲೆ ಚಾಚಿದ ತೋಳುಗಳಲ್ಲಿ ಆಕೆ ಬಿದ್ದಂತೆ ಆಯಿತು. ಆಗ ಆಕೆ ಗೊತ್ತು ಮಾಡಿದಳು, — ಇದುರಿಗೆ ಬಂದವಳ ರೂಪರೇಷೆ ಮತ್ತು ಬಿಳಿಯ ಮೇಲುದದಿಂದ ಆಕೆ ಕೆಲವು ತಾಸುಗಳ ಹಿಂದೆ ತಾನು ಅಗಲಿಬಂದ, ಶ್ರೀಮತಿ ಚಾರ್ಮಂದಳೇ ಆಗಿದ್ದಳು.

'ಅಯ್ಯೊ, ನಾನು ಹಾದಿ ತಪ್ಪಿದೆ. ನಾನು ಹಾದಿ ತಪ್ಪಿದೆ.', ಆಕೆ ಕೂಗಿದಳು. 'ಓ, ನೀನೆ? ನಿಜವಾಗಿಯೂ ನೀನೇ? ನೀನೇ ಇರಲಿ, ಇನ್ನೊಬ್ಬರೆ ಇರಲಿ ಸಿಕ್ಕಿದ್ದು ಬಹಳ ಸಂತೋಷವಾಯಿತು. ನಾವು ಒಬ್ಬರಿಗೊಬ್ಬರು ಅಗಲಿದಂದಿನಿಂದ, ನಾನು ಮೇಲೆ ಕೆಳಗೆ ಅಲೆದಾಡುತ್ತಲೆ ಇದ್ದೇನೆ ಮತ್ತು ಹೆದರಿಕೆ ಬಳಲಿಕೆ ಕಳವಳಗಳಿಂದ ಸತ್ತಂತೆ ಆಗಿಬಿಟ್ಟಿದ್ದೇನೆ.'

'ನಾನೂ ಹಾಗೆಯೇ', ಗ್ರೇಸ ಅಂದಳು. 'ನಾವು ಏನು ಮಾಡೋಣ — ಏನು ಮಾಡೋಣ?'

'ನೀನು ನನ್ನನ್ನು ಬಿಟ್ಟು ಹೋಗುವುದಿಲ್ಲವಷ್ಟೆ?' ಅವಳ ಜತೆಗಾರ್ತಿ ಕಳವಳದಿಂದ ಕೇಳಿದಳು.

'ಇಲ್ಲ, ನಿಜವಾಗಿಯೂ ನೀನು ದಣಿದೆಯಾ?'

'ಹೆಜ್ಜೆ ಇಡಲಿಕ್ಕೆ ಆಗುವುದಿಲ್ಲ. ಅಲ್ಲದೆ ಕಾಲೆಲ್ಲ ಪ ರ ಚಿ ಹೋ ಗಿ ದೆ, ಭಯಂಕರ.'

ಗ್ರೇಸ ಆಲೋಚಿಸಿದಳು, 'ಈಗ ಉತ್ತಮ ಮಾರ್ಗವೆಂದರೆ, ಅರ್ಧಗಂಟೆ ಇಲ್ಲಿ ಕೂತಿರುವುದು. ಆಮೇಲೆ ಪೂರ್ತಿ ದಣಿವಾರಿಸಿಕೊಂಡಮೇಲೆ ಹೊರಡುವುದು. ನೇರವಾಗಿ ಮುಂದೆ ನಡೆಯುತ್ತ ಹೋದರೆ ಎಲ್ಲಾದರೂ ಒಯ್ಯುವ ಒಂದು ಕಾಲುದಾರಿಗೆ ನಾವು ಮುಟ್ಟಬಹುದು, ಮುಂಜಾನಿನೊಳಗೆ.'

ಪೊದೆ ಪೊದೆಯಾಗಿ ಬೆಳೆದ ಹೊಲ್ಲಿಯ ಹಿಂಡು ಅವರಿಗೆ ಸಿಕ್ಕಿತು. ಅದು ಗಾಳಿಯಿಂದ ಮರೆ ಒದಗಿಸಿತು. ಅಲ್ಲಿ ಅದರಡಿಗೆ ಅವರು ಕೂತರು. ಒಣ ಬಂದಳಿಕೆಯ ಪಂಜುಗಳು, ಕಳೆದ ಹಂಗಾಮಿನಿಂದ ಹಿಂದೆ ಉಳಿದವು, ಅವರಿಗೆ ಒಂದು ಗೂಡನ್ನು ರಚಿಸಿದಂತಿತ್ತು. ಆದರೆ ಮಾರ್ಚ್ ತಿಂಗಳ ರಾತ್ರಿಯಾಗಿದ್ದರೂ ಚಳಿಯೆನಿಸುತಿತ್ತು; ವಿಶೇಷವಾಗಿ ಗ್ರೇಸಳಿಗೆ. ಏಕೆಂದರೆ ಅವಳು ಬಟ್ಟೆಬರೆಗಳ ಬಗೆಗೆ ಹರಯದ ಎಳೆಯ ಹುಮ್ಮಸದಲ್ಲಿ ಆಗಲೇ ವಸಂತಮಾಸ ಬಂತೆಂದು ಭಾವಿಸಿದ್ದಳು. ಆದ್ದರಿಂದ ಶ್ರೀಮತಿ ಚಾರ್ಮಂದಳಂತೆ ಬೆಚ್ಚನೆಯ ಬಟ್ಟೆ ತೊಟ್ಟುಕೊಂಡಿದ್ದಿಲ್ಲ. ಚಾರ್ಮಂದಳು ಇನ್ನು ಚಳಿಗಾಲದ ಉಣ್ಣೆ ಬಟ್ಟೆಗಳನ್ನು ಧರಿಸಿದ್ದಳು.

ಆದರೆ ಸ್ವಲ್ಪಕಾಲ ಅಲ್ಲಿ ಕುಳಿತ ಮೇಲೆ ಆ ಹೆಂಗಸೂ ಗ್ರೇಸಳಷ್ಟೇ ಚಳಿಯಿಂದ ನಡುಗಹತ್ತಿದಳು. ಆತನಕ ಅವಳು ತ್ವರೆಯಿಂದ ನಡೆದು ಬಂದ ಕಾವು ತಣ್ಣಗಾಗ ತೊಡಗಿತ್ತು. ಅವರ ಹೆಗಲು ಬೆನ್ನುಗಳನ್ನು ಪರಚುವ ಹೊಲ್ಲಿಯ ಎಲೆಗಳ ಸಂದುಗಳೊಳಗಿಂದ ತಂಪು ಹವೆ ಹೀರಿಬರುವಂತೆ ಅನಿಸುತಿತ್ತು. ಇದೂ ಅಲ್ಲದೆ ಕೆಲವು ಮಳೆ ಹನಿಗಳೂ ಮರಗಳ ಮೇಲೆ ಬೀಳುತ್ತಿದ್ದುದನ್ನು ಅವರು ಕೇಳಿದರು. ಆದರೆ ಅವರು ಅವಚಿ ಕೂತಲ್ಲಿಗೆ ಆ ಹನಿಗಳೇನೂ ಬಂದು ಮುಟ್ಟಿದ್ದಿಲ್ಲ.

'ನಾವು ಒಬ್ಬರನ್ನೊಬ್ಬರು ಒತ್ತಾಗಿ ಅವಚಿಕೊಂಡರೆ', ಶ್ರೀಮತಿ ಚಾರ್ಮಂದ ಅಂದಳು. 'ನಾವು ಒಬ್ಬರನ್ನೊಬ್ಬರು ಬೆಚ್ಚಗೆ ಇಡಬಹುದು. ಆದರೆ, ಅವಳು ದನಿ

ಸಮವಾಗಿರಿಸಿಕೊಂಡು ಮುಂದರಿದಳು, 'ಆದರೆ ನೀನು ಪ್ರಪಂಚವನ್ನೆ ತೆತ್ತರೂ ನನ್ನ ಹತ್ತಿರಕ್ಕೆ ಬರುವವಳಲ್ಲ.'

'ಯಾಕಿಲ್ಲ ?'

'ಯಾಕೆಂದರೆ ನಿನಗೆ ಗೊತ್ತೇ ಇದೆ.'

'ಸರಿ, ನಾನು ಬರುವವಳು — ನಾನೇನು ನಿನ್ನನ್ನು ದ್ವೇಷಿಸುವುದಿಲ್ಲ.'

ಇದರ ಪರಿಣಾಮವಾಗಿ ಅವರಿಬ್ಬರೂ ಒಬ್ಬರಿಗೊಬ್ಬರು ಹತ್ತಿರಕ್ಕೆ ಸರಿದರು. ಕತ್ತಲು, ಏಕಾಕಿ, ಮತ್ತು ದಣಿವು ಇದ್ದರಿಂದ, ಆ ವೊದಲು ಅವರು ಕನಸಿನಲ್ಲಿಯೂ ಊಹಿಸದಂಥ ರೀತಿಯಲ್ಲಿ ವರ್ತಿಸಿದರು — ಒಬ್ಬರನ್ನೊಬ್ಬರು ಬಲವಾಗಿ ಆಲಂಗಿಸಿದರು. ಶ್ರೀಮತಿ ಚಾರ್ಮ್‌ಂದಳ ಉಣ್ಣೆದುಪ್ಪಳ ಗ್ರೇಸಳ ತಣ್ಣಗಿನ ವೋರೆಗೆ ಸುಖವೆನಿಸಿತು. ಒಬ್ಬೊಬ್ಬಳ ದೇಹವೂ, ಆಕೆ ಉಸಿರೆಳೆಯುವಾಗ ಸಂಗಡಿಗಳಾದ ಮತ್ತೊಬ್ಬಳ ದೇಹದೊಂದಿಗೆ ಮೇಲೆ ಕೆಳಗೆ ತೂಗಿತು. ಸುತ್ತಲೂ ಸ್ಮಶಾನಶೂನ್ಯ ಮರಗಳು ತೂಗಾಡುತ್ತಿದ್ದವು. ಮತ್ತು ಎಡೆಬಿಡದೆ ಶೋಕ ಗೀತೆಗಳನ್ನು ಹಾಡುತ್ತಿದ್ದುವು.

ಹೀಗೆ ಕೆಲವು ನಿಮಿಷಗಳು ಕಳೆದ ಮೇಲೆ ಭಾರವಾದ ಭಾವನಾಮಯ ಪಿಸುದನಿಯಲ್ಲಿ ಚಾರ್ಮ್‌ಂದಳು ಅಂದಳು, 'ನಾನು ಬಹಳ ದುಃಖಿ.'

'ನೀನು ಹೆದರಿರುವಿ', ಗ್ರೇಸಳೆಂದಳು. 'ಆದರೆ ಹೆದರಬೇಕಾದುದೇನೂ ಇಲ್ಲ. ಈ ಬೆಟ್ಟಡವಿಗಳನ್ನೆಲ್ಲ ಚೆನ್ನಾಗಿ ಬಲ್ಲೆ, ನಾನು.'

'ಬೆಟ್ಟಕ್ಕೆ ನಾನು ಹೆದರಲೇ ಇಲ್ಲ. ಆದರೆ ಬೇರೆ ಸಂಗತಿಗಳಿಗೆ'—

ಶ್ರೀಮತಿ ಚಾರ್ಮ್‌ಂಡ ಗ್ರೇಸಳನ್ನು ಇನ್ನೂ ಹೆಚ್ಚು ಹೆಚ್ಚು ಬಿಗಿಯಾಗಿ ಅಪ್ಪಿಕೊಂಡಳು. ಮತ್ತು ಅವಳ ವೋರೆಗೆ ತನ್ನ ವೋರೆಯನ್ನು ಹಚ್ಚಿದ್ದಳು. ಎಳೆಯವಳಿಗೆ ತನ್ನ ನೆರೆಯವಳು ಉಸಿರು ಹೆಚ್ಚು ಹೆಚ್ಚು ಆಳವಾಗಿ ಆಕಸ್ಮಿಕವಾಗಿ ಎಳೆಯುವುದು ಅನಿಸುತ್ತಿತ್ತು. ಅವಳಲ್ಲಿ ಅಂಕೆ ಮೀರಿದ ಭಾವನೆಗಳ ಉದ್ರೇಕ ಉಕ್ಕುವಂತಿತ್ತು.

'ನಿನ್ನನ್ನು ಬಿಟ್ಟು ನಡೆದ ಮೇಲೆ, ನನಗೆ ಪಶ್ಚಾತ್ತಾಪವಾಯಿತು — ನಾನು ಅಂದ ಕೆಲವು ಮಾತುಗಳಿಗಾಗಿ. ನಾನು ಆತ್ಮನಿವೇದನೆ ಮಾಡಿಕೊಳ್ಳಬೇಕು — ಕೊಳ್ಳಲೇಬೇಕು', ಆಕೆ ಹರುಕುಮುರುಕಾಗಿ ಪಿಸುಗುಟ್ಟಿದಳು. ವೊದಲಿಗೆ ಭಾವ ಉದ್ರೇಕದ ಕಾವಿನಲ್ಲಿ ಮೈಕಾಯಿಸಿಕೊಳ್ಳಬೇಕೆಂಬ ಲವಲವಿಕೆಯಿಟ್ಟು ಫಿಟ್ಝಪಿಯರ್ಸನಿಗೆ ಒಲಿದ ಈ ವಿಕಾರವಶ ಹೆಣ್ಣು ಈಗ ಅವನ ಹೆಂಡತಿಯಲ್ಲಿ ತನ್ನ ಎದೆಬಿಚ್ಚಿ ಎಲ್ಲ ತೋಡಿಕೊಳ್ಳುವುದರ ಸುಖಕ್ಕೆ ಬಂದು ತಲ್ಪಿದಳು. 'ನಾನು ನಿನಗೆಂದೆ, — ನೋವಿಲ್ಲದೆ, ಕೊರಗಿಲ್ಲದೆ ನಾನು ಅವನನ್ನು ಬಿಟ್ಟುಕೊಡಬಲ್ಲೆನೆಂದು, — ಆತ ಬರೆ ನನ್ನ ಹೊತ್ತುಗಳೆಯುವ ಚಿನ್ನಾಟದ ಆಟಿಗೆ ಆಗಿದ್ದಾನೆಂದು, ಆದರೆ ಅದೆಲ್ಲ ಬರೆ ಸುಳ್ಳು ನಿನ್ನನ್ನು ವೋಸಗೊಳಿಸಲು ಹೇಳಿದ ಮಾತು. ಅದನ್ನು ನಾನು ಬಹಳ

ನೋವಾಗದೆ ಹೇಳಲಿಲ್ಲ. ಇದಕ್ಕೂ ಹೆಚ್ಚಿನ ಭಯಂಕರ ಸಂಗತಿಯೆಂದರೆ, ನಾನು ಅವನನ್ನು ಬಿಟ್ಟುಕೊಡಲಾರೆ — ನಾನು ಒಪ್ಪಿದರೂ, ನಾನೋರ್ವಳೆ ನನ್ನಷ್ಟಕ್ಕೆ ಬಿಡಲಾರೆ.'

'ಏಕೆ? ನೀನು ಅವನನ್ನು ಅಷ್ಟು ಪ್ರೀತಿಸುವಿಯೆಂದಲ್ಲವೆ?' ಫೆಲಿಸ್ ಚಾರ್ಮಂದ ಬರೆ ಚಲನೆಯಿಂದ ತನ್ನ ಒಪ್ಪಿಗೆ ಕಾಣಿಸಿದಳು. 'ನನಗೆ ಗೊತ್ತಿತ್ತು ನನ್ನ ಮಾತೆ ಸರಿ ಇತ್ತು', ಗ್ರೇಸಳು ಉಬ್ಬರದಲ್ಲಿ ಅಂದಳು. 'ಆದರೆ ಅದೊಂದು ನಿನ್ನನ್ನು ತಡೆಯಬಾರದು,' ಅವಳು ಮರುಕ್ಷಣವೇ ನೈತಿಕ ದನಿಯಲ್ಲಿ ಮುಂದರಿದಳು. 'ಓ, ಅದರೊಂದಿಗೆ ಹೋರಾಡು, ನೀನು ಗೆದ್ದೇ ಗೆಲ್ಲುವಿ.'

'ನೀನು ಎಷ್ಟು ಸರಳೆ, ಎಷ್ಟು ಬೋಳೆ!', ಫೆಲಿಸ್ ಅಂದಳು. 'ಅವನ ಕುರಿತು ನಾನು ವಹಿಸಿದ ಉದಾಸೀನದ ಠೀವಿ ಸುಳ್ಳೆಂದು ನೀನು ಊಹಿಸಿದಿ. ಅಷ್ಟು ಮಾತ್ರಕ್ಕೆ ನೀನು ಭಾವಿಸುವಿ,— ಮುಂದಿಗೆ ಯಾವ ಅತಿರೇಕಗಳೂ ಸಾಧ್ಯವೆಂದು. ಆದರೆ ನೀನು ನಿನ್ನ ಎಲ್ಲ ಒಳನೋಟದಿಂದ ಊಹಿಸಿರಬಹುದಾದ ಆಳವನ್ನು ಮೀರಿ ಬಹಳಷ್ಟು ಸಂಗತಿ ನಡೆದುಹೋಗಿರಬಹುದು. ಅವನು ನನ್ನನ್ನು ಬಿಟ್ಟುಕೊಡಲು ನಿರ್ಣಯಿಸುವ ತನಕವೂ ನಾನು ಅವನನ್ನು ಬಿಟ್ಟುಕೊಡಲಾರೆ.'

'ಆದರೆ ನಿಜವಾಗಿಯೂ ನೀನೇ ಸ್ಥಾನಮಾನ ಪ್ರತಿಷ್ಠೆ ಎಲ್ಲದರಲ್ಲಿಯೂ ಎಲ್ಲ ರೀತಿಯಿಂದಲೂ ಶ್ರೇಷ್ಠಳು. ಅಂದಾಗ ಅವನಿಗೆ ನಿನ್ನಿಂದಲೇ ಕಟ್ಟಾಗಬೇಕು.'

'ಥತ್, ನಾನು ನಿನಗೆ ಬಾಯಿ ಬಿಚ್ಚಿ ಹೇಳಬೇಕೆ, ಸರಳ ಸಾದಾ ಮಗುವೇ? ಓ ಅಹುದೇನೋ. ನಾನೇ ಹೇಳಬೇಕು. ಅದನ್ನೆಲ್ಲ ಬಿಚ್ಚಿ ಬಿಡಿಸಿ ಹೇಳದಿದ್ದರೆ ಅದು ನನ್ನ ಕರುಳನ್ನೆಲ್ಲ ಕೊರೆದು ತಿನ್ನುವುದು,—ನಿನ್ನನ್ನು ಹೀಗೆ ಭೆಟ್ಟಿಯಾಗಿ ನೀನು ಎಂಥ ನಿಷ್ಕಪಟಿಯೆಂಬುದನ್ನು ಈಗ ಕಂಡುಕೊಂಡ ಮೇಲೆ.'

ಆಮೇಲೆ ಆ ಹುಡುಗಿಯ ಕಿವಿಯಲ್ಲಿ ಅವಳು ಕೆಲವು ಮಾತುಗಳನ್ನು ಪಿಸುಗುಟ್ಟಿದಳು, ಮತ್ತು ಜೋರು ಜೋರಾಗಿ ಬಿಕ್ಕಿಬಿಕ್ಕಿ ಅಳಲು ಆರಂಭಿಸಿದಳು.

ಗ್ರೇಸಳು ಬೆಚ್ಚಿಬಿದ್ದಂತೆ ಅವಳ ಉಣ್ಣೆ ಬಟ್ಟೆಯ ಆಶ್ರಯದಿಂದ ಹೊರಗೆ ಜಿಗಿದು, ಗಕ್ಕನೆ ಎದ್ದು ನಿಂತಳು. 'ಅಯ್ಯೋ ನನ್ನ ದೇವರೆ.' ಆಕೆ ಉದ್ಗರಿಸಿದಳು. ಅವಳ ಸಂಶಯವನ್ನೂ ಮೀರಿದ ಈ ರಹಸ್ಯಕಥನದಿಂದ ಸಿಡಿಲೆರಗಿದಂತೆ ಆಗಿ, 'ಆತ ನಿನ್ನ ಹೀಗೆ ಮಾಡಿದನೆ ಹೀಗಾಯಿತೇ? ಹೀಗಾಯಿತೇ?'

ಅಲ್ಲಿಂದ ಓಡಿಹೋಗಲೋ ಎಂಬಂತೆ ಆಕೆ ಹೊರಳಿದಳು. . ಆದರೆ ಫೆಲಿಸ್ ಚಾರ್ಮಂದಳ ಅಳುವ ಬಿಕ್ಕು ಅವಳ ಕಿವಿಗೆ ಬಂದಿತು. ಆಳವಾದ ಕಗ್ಗತ್ತಲೆ ಅವಳನ್ನು ಸುತ್ತುವರೆದಿತ್ತು. ಗಾಳಿಯ ಚಳಿ ತುಟಿಗಳು ಅವಳನ್ನು ಮುತ್ತಿಡುತ್ತಿದ್ದವು — ಶ್ರೀಮತಿ ಚಾರ್ಮಂದಳ ಬೆಚ್ಚನ್ನ ಉಣ್ಣೆಯ ಶಾಲು ಹೊದ್ದಿದಲ್ಲಿ, ಮತ್ತು ಅವಳಿಗೆ ಎತ್ತಹೋಗುವದೆಂಬುದು ಗೊತ್ತಾಗಲಿಲ್ಲ. ಮತ್ತು ಅವಳ ಪಾದದ ಹತ್ತಿರ ಇದ್ದ ಆ ನಿಶ್ಚಲ ಹೆಂಗಸಿನ ಕಡೆಗೆ ಹೊರಳಿದಳು.

'ನಿನಗೆ ದಣಿವಾಯಿತೇ' ಆಕೆ ಕೇಳಿದಳು. ಅವಳ ದನಿಯೆ ಅವಳಿಗೆ ಹತ್ತು ವರ್ಷ ಪ್ರಾಯ ಕಳೆದಂತೆ ಕೇಳಿಸಿತು.

ಮರುಮಾತಿಲ್ಲದೆ ಶ್ರೀಮತಿ ಚಾರ್ಮಂದಳು ಮೆಲ್ಲಗೆ ಎದ್ದಳು. 'ನೀನು ನನಗೆ ದ್ರೋಹ ಬಗೆಯುವಿ. ನನ್ನ ಗುಟ್ಟು ಬಯಲಿಗೆಳೆಯಲಿರುವಿ. ಆತ್ಮದ ಕಟುತಮವಾದ ಆಳದಿಂದ ಆಕೆ ಕೇಳಿದಳು. ಓ ಮೂಢೆ, ಮೂಢೆ ನಾನು.'

'ಇಲ್ಲ', ಗ್ರೇಸಳು ಚಿಕ್ಕದಾಗಿ ಅಂದಳು. 'ನಾನು ಅಂಥದೇನೂ ಮಾಡುವವಳಲ್ಲ. ಆದರೆ ಈಗ ನಾವು ತ್ವರೆ ಮಾಡೋಣ. ನಮ್ಮ ಇದಿರು ಈಗ ಬಲು ಗಂಭೀರ ಕಾರ್ಯಭಾಗವಿದೆ. ಬೇರೆ ಏನೂ ವಿಚಾರಬೇಡ — ಬರೆ ನೇರವಾಗಿ ಹೋಗೋಣ.'

ಅವರು ಘನಗಂಭೀರ ಮೌನದಲ್ಲಿ ಮುಂದೆ ನಡೆದರು. ಈಗ ಒದ್ದೆಯಾದ ಟೊಂಗೆಗಳನ್ನು ಹಿಂದೆ ಜಗ್ಗಿಕೊಳ್ಳುತ್ತ, ಕಂಟಿಗಳನ್ನು ಮೆಟ್ಟಿ ಮಾರ್ಗಮಾಡಿಕೊಳ್ಳುತ್ತ, ಆದರೂ ಅದಷ್ಟು ನೇರವಾದ ನಿಟ್ಟು ಹಿಡಿದು ಅವರು ಮುಂದರಿದರು. ಗ್ರೇಸಳು ಪೂರ್ತಿ ದಣಿದು ಹೋಗಿದ್ದಳು. ಅವಳ ಜತೆಗಾರ್ತಿಯೂ ಹಾಗೆಯೆ, ಆಗ ಫಕ್ಕನೆ ಅವರು ನಿರ್ಜನವಾದ ಹೆದ್ದಾರಿಗೆ ನುಗ್ಗಿದರು. ಅಲ್ಲಿಯೆ ಹಿಂದೆ ಶರ್ಟನದ ಇಸಮು ಮಿಸೆಸ್ ಡಾಲರಿಯ ಗಾಡಿಗಾಗಿ ದಾರಿ ಕಾದಿದ್ದನು. ಸುತ್ತು ನೋಡಿದೊಡನೆ ಗ್ರೇಸಳಿಗೆ ಆ ಸ್ಥಳದ ಗುರುತು ಹತ್ತಿತು.

'ನಾವು ಇಲ್ಲಿಗೆ ಹೇಗೆ ಬಂದೆವೋ ನಾಕಾಣೆ.' ಅವಳು ನಿರ್ಭಾವ ಶಿಷ್ಟಾಚಾರದ ದನಿಯಲ್ಲಿ ನುಡಿದಳು. 'ನಾವು ಕಿರಿ ಹಿಂಟೋಕ ಪೂರ್ತಿ ಒಂದು ಪ್ರದಕ್ಷಿಣೆ ಮಾಡಿದಂತಾಯಿತು. ಹೆರ್ಷಿಲ್ ಕಾನು ಸರಿ ವಿರುದ್ಧ ದಿಕ್ಕಿನಲ್ಲಿ ಆಚೆಗೆ ಇದೆ. ನಾವೀಗ ಬರೆ ಈ ಮಾರ್ಗ ಹಿಡಿದುಹೋದರಾಯಿತು.'

ಅವರು ಹಾಗೆಯೆ ತಮ್ಮನ್ನು ಎಳೆದುಕೊಂಡು ಮುಂದೆ ಸಾಗಿದರು, ಓಣಿಯಲ್ಲಿ ತಿರುಗಿದರು. ಕಿರಿ ಹಿಂಟೋಕದ ದಾರಿಯನ್ನು ತುಳಿದರು, ಮತ್ತು ಹಾಗೆಯೇ ಪಾರ್ಕನ್ನು ತಲ್ಪಿದರು.

'ಇಲ್ಲಿ ನಾನು ತಿರುಗುತ್ತೇನೆ' ಗ್ರೇಸಳು ಅದೆ ನಿರ್ವಿಕಾರ ದನಿಯಲ್ಲಿ ಅಂದಳು. 'ನೀನೀಗ ನಿಮ್ಮ ಮನೆಗೆ ತೀರ ಸಮೀಪವೆ ಇರುವಿ.'

ಶ್ರೀಮತಿ ಚಾರ್ಮಂದ ನಿಶ್ಚಲವಾಗಿ, ಜಡಮೂಢಳಾಗಿ ನಿಂತಿದ್ದಳು — ತನ್ನ ಆತ್ಮ ನಿವೇದನೆಯಿಂದ ತಾನೇ ದಂಗುಬಡಿದಂತೆ.

'ನನ್ನ ಆತ್ಮವನ್ನೆ ತೋಡಿಕೊಂಡು ಹಗುರಮಾಡುವ ಅನಿವಾರ್ಯ ಇಚ್ಛೆಯ ಒಂದು ಕ್ಷಣದಲ್ಲಿ ನಾನು ಏನೇನೋ ನಿನಗೆ ಹೇಳಿಬಿಟ್ಟೆ. ಅದನ್ನು ಶುದ್ಧ ಹುಂಬನಲ್ಲದೆ ಬೇರೆ ಎಲ್ಲರೂ ಸಾಯುವತನಕವೂ ಮೌನವಾಗಿ ಇಟ್ಟುಕೊಳ್ಳುತ್ತಿದ್ದರು.' ಅವಳು ಅಂದಳು. 'ಆದರೆ ಈಗ ಉಪಾಯವಿಲ್ಲ. ಇನ್ನು ಇದು ಗೋಪ್ಯವಾಗಿರಬಹುದೋ ಅಥವಾ ನೀನು ಯುದ್ಧವನ್ನು ಕಾಯುವಿಯೊ?'

'ಖಂಡಿತ ಗೊತ್ತು', ಗ್ರೇಸಳು ಮರುಗುವ ದನಿಯಲ್ಲಿ ನುಡಿದಳು. 'ನನ್ನಂಥ ಅಸಹಾಯ ದಸೆಗೆಟ್ಟ ಜೀವಿಯಿಂದ ನೀನು ಯುದ್ಧವನ್ನು ಕಲ್ಪಿಸುವಿಯಾದರೂ ಹೇಗೆ?'

'ಮತ್ತು ನಾನೂ ಅವನನ್ನು ನೋಡದಂತೆ ನನ್ನಿಂದ ಆದಷ್ಟು ಪ್ರಯತ್ನ ಮಾಡುವೆ. ನಾನು ಅವನ ಗುಲಾಮಳು ; ಆದರೂ ಪ್ರಯತ್ನಿಸುವೆ.'

ಗ್ರೇಸಳು ಸ್ವಾಭಾವಿಕವಾಗಿಯೆ ದಯಾಳು. ಆದರೂ ಅವಳಿಗೆ ಈಗ ಒಂದು ಸಣ್ಣ ಇರಿತ ಕೊಡೋಣವೆಂದೆನಿಸಿತು. 'ಅಷ್ಟೇನು ಹಳಹಳಿಸಬೇಡ, ದಮ್ಮಯ್ಯ.' ಅವಳು ಸೂಕ್ಷ್ಮ ತಿರಸ್ಕಾರದಿಂದ ಅಂದಳು, 'ಮೆಚ್ಚಿದಷ್ಟು ಸಲ ನೀನು ಅವನನ್ನು ಭೆಟ್ಟಿಯಾಗು,— ನನ್ನ ಸಲುವಾಗಿ.' ಅವಳಿಗೆ ಭಂಗವಾಗುವ ಬದಲು, ಗಾಯವಾಗಿದ್ದರೆ ಅವಳು ಈ ಮಾತು ಬಳಸುತ್ತಿದ್ದಿಲ್ಲ. ಆದರೆ ಅವಳ ಎದೆಯ ಮೇಲೆ ಫಿಟ್ಝ್‌ಪಿಯರ್ಸನ ಹಿಡಿತ ಈಗ ತೀರ ಹಗುರಾಗಿತ್ತು.

ಹೀಗೆ ಅವರಿಬ್ಬರು ಒಬ್ಬರನ್ನೊಬ್ಬರು ಅಗಲಿದರು, ನಿರುದ್ದೇಶವಾಗಿ ಒಬ್ಬರನ್ನೊಬ್ಬರು ಮುತ್ತಿಟ್ಟು ; ಮತ್ತು ಗ್ರೇಸ ವ್ಯಗ್ರವೃತ್ತಿಯಲ್ಲಿಯೆ ಮನೆಯತ್ತ ನಡೆದಳು. ಮಾರ್ಟಿಯ ಗುಡಿಸಲನ್ನು ಹಾಯುವಾಗ ಅವಳು ಕಿಟಕಿಯಲ್ಲಿ ಇಣಕಿ ನೋಡಿದಳು ; ಆ ಹುಡುಗಿ ವಾಡಿಕೆಯಂತೆ ಕಟ್ಟಿಗೆ ಕಡಿಯುವ ಬದಲು ಬರೆಯುತ್ತಿದ್ದಳು. ಅವಳ ಪತ್ರ ವ್ಯವಹಾರವೇನಿರಬಹುದೆಂದು ಗ್ರೇಸ ಸೋಜಿಗಪಟ್ಟಳು. ಹಾಗೆಯೆ ಮುಂದೆ ನೇರವಾಗಿ ಅವಳನ್ನು ಹುಡುಕಲು ಹೊರಟ ಮಂದಿ ಭೆಟ್ಟಿಯಾದರು. ಮತ್ತು ಮನೆಯನ್ನು ಸೇರಿದಳು. ಅಲ್ಲಿ ಎಲ್ಲರೂ ಗಂಭೀರವಾಗಿ ಗಾಬರಿಗೊಂಡದ್ದನ್ನು ಅವಳು ಕಂಡಳು. ತಾನು ಬೆಟ್ಟದಲ್ಲಿ ದಾರಿತಪ್ಪಿದ್ದೆನೆಂದು ಆಕೆ ಅಂದಳು. ಅವಳ ಸಾಮಾನ್ಯ ನಿರುತ್ಸಾಹ ಆ ಅಲೆದಾಟದ ದಣಿವಿನದೆಂದು ಮನೆಯವರು ಭಾವಿಸಿದರು.

ಮಾರ್ಟಿ ಏನು ಬರೆಯುತಿದ್ದಳೆಂಬುದು ಗೊತ್ತಾಗಿದ್ದರೆ ಅವಳಿಗೆ ನಿಜವಾಗಿಯೂ ಆಶ್ಚರ್ಯವಾಗುತ್ತಿತ್ತು. ಹಿಂಟೋಕಿನ ಇತರ ಮಂದಿ ಚಳವಳ ಉಂಟುಮಾಡಿದ ಅಪವಾರ್ತೆ ಎಳೆಯ ಹುಡುಗಿಗೂ ಮುಟ್ಟಿತ್ತು. ಮತ್ತು ಅವಳು ಫಿಟ್ಝ್‌ಪಿಯರ್ಸನಿಗೆ ತಿಳಿಸಲು ಪತ್ರ ಬರೆಯುತ್ತಿದ್ದಳು — ಶ್ರೀಮತಿ ಚಾರ್ಮಂದಳ ಆ ವೈಭವಶಾಲಿಯಾದ ಕೇಶರಾಶಿಯು ಅವಳದಲ್ಲ. ಈ ಪತ್ರ ಲೇಖಿಯದು (ತನ್ನದು) ಎಂದು. ಬಡ ಮಾರ್ಟಿಯ ಕೈಗೆ ಇದ್ದ ತುರುಪಿನ ಎಲೆ ಅದೊಂದೆ. ಮತ್ತು ಅದನ್ನು ಅವಳು ಆಡಿದಳು. ಆ ಕಾಲಕ್ಕೆ ಅದೊಂದು ಬೆಡಗಿನ ಚಾಳಿ (ಫ್ಯಾಶನ್) ಆಗಿತ್ತೆಂದು ಅವಳಿಗೇನೂ ಗೊತ್ತಿದ್ದಿಲ್ಲ. ತನ್ನ ಈ ರಹಸ್ಯ ಪ್ರಕಟಣೆ ಆ ಪ್ರೇಮಿಕನಿಗೆ ಒಂದು ಮರ್ಮಾಂತಿಕ ಪೆಟ್ಟೆಂದು ಅವಳ ಭಾವನೆ.

೩೪

ಏಪ್ರಿಲ್ ತಿಂಗಳ ಆರಂಭ. ಕಾಡಿನಲ್ಲಿ ಗ್ರೇಸ, ಶ್ರೀಮತಿ ಚಾರ್ಮಂದರ ಭೆಟ್ಟಿಗೆ ಕೆಲವು ದಿನ ಸಂದಿದ್ದವು. ಫಿಟ್ಝಪಿಯರ್ಸ ಲಂಡನ್ನಿನಿಂದ ಆಗತಾನೇ ತಿರುಗಿ ಬಂದಿದ್ದನು ; ಶರ್ಟನ್ ಅಬ್ಬಾಸದಿಂದ ಹಿಂಟೋಕಿಗೆ ಬಂದು ಬಾಡಿಗೆಯ ಸಾರೋಟಿನಲ್ಲಿ ಪ್ರಯಾಣ ಮಾಡುತ್ತಿದ್ದನು. ಅವನ ಕಣ್ಣಿನಲ್ಲಿ ಏನೋ ಸಂದಿಗ್ಧ ಬೆಳಕು, ಅವನ ಅಚ್ಚುಕಟ್ಟಿನ ಮೋರೆಯಲ್ಲಿ ಏನೋ ಅಸ್ವಸ್ಥತೆಯ ಗೆರೆಗಳು. ಕೆಲವರ ಚರ್ಯೆ ನೋಡುವವರಿಗೆಲ್ಲ ಸಾರಿ ಹೇಳುವಂತೆ ಇರುತ್ತದೆ. ಜನ್ಮಕ್ಕೆ ಬಂದದ್ದೆ ಅವರಿಗೆ ಒಂದು ಅನ್ಯಾಯವಾದಂತೆ, ಅಂಥವರಲ್ಲಿ ತಾನೂ ಒಬ್ಬನೆಂಬಂತೆ ಇತ್ತು ಡಾಕ್ಟರನ ಮುಖಭಾವ.

ಅವನ ಸ್ಥಿತಿಯಂತೂ ನಿಜವಾಗಿಯೂ ಮಬ್ಬುಗವಿದಂತೆ ಇತ್ತು. ಅವನ ಸಂವೇದನಾಕ್ಷಮ ಮನಸ್ಸಿಗೆ ಅದು ಇನ್ನೂ ಮಬ್ಬುಗವಿದಂತೆ ಅನಿಸುತಿತ್ತು. ಅವನ ಪ್ರಾಕ್ಟೀಸು ಈಗಿತ್ತಲಾಗಿ ಕುಗ್ಗಿತ್ತು. ಈಗಂತೂ ಅದು ಪೂರ್ತಿ ನಾಶಹೊಂದುವುದರಲ್ಲಿ ಇತ್ತು. ಹಳೆಯ ಮುದುಕ ಎದೆಗಾರ ಡಾ. ಜೋನ್ಸ ಫಿಟ್ಝಪಿಯರ್ಸನ ಮನೆಬಾಗಿಲಿನ ವರೆಗೂ ಬಂದು ರೋಗಿಗಳನ್ನು ಎತ್ತಿಹಾಕುವಂತಿತ್ತು. ಜನರಲ್ಲಿ ತನ್ನ ಈ ಅಪ್ರಿಯತೆಯ ತೀರ ಇತ್ತೀಚೆಯ ಹಾಗೂ ತೀರ ಸದ್ಯದ ಕಾರಣವು ಯಾವುದೆಂದು ಫಿಟ್ಝಪಿಯರ್ಸ ನಿಗೆ ತೀರ ಚೆನ್ನಾಗಿಯೇ ಗೊತ್ತಿತ್ತು. ಆದರೂ ಮನುಷ್ಯನೇ ಇಷ್ಟು ತರ್ಕವಿಸಂಗತನಿರು ತ್ತಾನೆ. ಅವನ ಮಟ್ಟಿನ ದುಃಖದ ಉತ್ತರಾರ್ಧವು ಅದರ ಪೂರ್ವಾರ್ಧದ ಪರಿಹಾರಕ್ಕೆ ಸೂಚಿಸಿದ ಉಪಾಯದಿಂದಲೇ ಉಂಟಾಗಿತ್ತು. ಆ ಸೂಚನೆಯೆಂದರೆ, ಫೆಲಿಸ್ ಚಾರ್ಮಂದ ಅವನಿಗೆ ಬರೆದ ಪತ್ರ — ತನ್ನನ್ನು ಕಾಣಬಾರದೆಂದು ಪ್ರಾರ್ಥಿಸಿ. ತಮ್ಮ ಈ ಅಗಲಿಕೆ ಇನ್ನಿಷ್ಟು ಪರಿಣಾಮಕಾರಿಯಾಗಿರುವಂತೆ ಅವಳು ಕೂಡಲೇ ಯುರೋಪಕ್ಕೆ ಹೊರಟು ಹೋಗುವುದಾಗಿಯೂ ನಿರ್ಧಾರ ಮಾಡಿದ್ದಳು.

ಆ ಕಾಲವೆ ಮಲೆನಾಡಿಗರ ಬದುಕಿನಲ್ಲಿ, ಮರದ ಕೆಲಸ ಮಾಡುವವರ ಬಾಳಿನಲ್ಲಿ ತೀರ ಮಂದ ನಿಷ್ಕ್ರಿಯತೆಯ ಹಂಗಾಮು. ಇದೇ ಹಂಗಾಮಿಗೆ ಮಲೆನಾಡಿನಲ್ಲಿ ಮರ ಗಾಡುಗಳಲ್ಲಿ ತುಂಬ ಚಟುವಟಿಕೆಯ ಬದುಕಂ. ಚಳಿಗಾಲದಲ್ಲಿ ಮರ ಕಡಿದು, ಅವುಗಳ ತೊಗಟೆ ಸುಲಿದ, ಅಡವಿಯ ಎಲ್ಲ ಮರಗಳಲ್ಲಿ ಸೋನೆ-ತಿಳಿಲು ಪಂಪಿನಿಂದ ಎತ್ತಿದಷ್ಟೂ ಜೋರಿನಿಂದ ಉಕ್ಕುವ ಕಾಲವದು.

ವಿಂಟರಬೋರ್ನನ ಕಂಟ್ರಾಕ್ಟಿನ ಕೆಲಸ ಮುಗಿದಿತ್ತು. ಕಾನು, ತೋಪುಗಳೆಲ್ಲ ನಿರ್ಜನವಾಗಿದ್ದವು. ಇದೀಗ ಸಂಜೆಗತ್ತಲೆ ಕವಿಯುತಿತ್ತು. ಇನ್ನೂ ಮರಗಳಿಗೆ ಎಲೆಗಳು ತುಂಬಿದ್ದಿಲ್ಲ. ನೈಟಿಂಗೇಲ್ (ಬುಲ್‌ಬುಲ್) ಹಕ್ಕಿಗಳು ದನಿಗೈಯಲಿಕ್ಕೆ ಇನ್ನೂ ಒಂದು ಪಕ್ಷ ಕಳೆಯಬೇಕು ; ಮತ್ತು ತಿಂಗಳ ತಾಯಿಯು ತೀರ ಕೃಶ ಅವಸ್ಥೆ ಯಲ್ಲಿ ಇದ್ದಳು. ಬರಲಾಗಿ ನಿಂತ ಟೊಂಗೆಗಳ ಹಿಂದೆ, ಆಕಾಶದಲ್ಲಿ ಬಡಕಲಾಗಿ ಸರಿಯುತ್ತಿತ್ತು ಅವಳ ಬಿಂಬ.

ಮನೆಯನ್ನು ಮುಟ್ಟಿದೊಡನೆ ಅವನು ನೇರವಾಗಿ ಹೆಂಡತಿಯು ಕೂಡುವ ಕೋಣೆಗೆ ಹೋದನು. ಅಲ್ಲಿ ಅವಳಿರಲಿಲ್ಲ. ಅಗ್ಗಿಷ್ಟಿಕೆಯಲ್ಲಿ ಬೆಂಕಿಯು ಉರಿಯುತ್ತಿದ್ದಿಲ್ಲ. ಆತ ತಿರುಗಿ ಬರುವ ದಿನವನ್ನು ತಿಳಿಸಿರಲಿಲ್ಲ. ಆದಾಗ್ಯೂ ತನ್ನನ್ನು ಸ್ವಾಗತಿಸಲು ಅವಳು ಅಲ್ಲಿ ಆಗ ಏಕೆ ಕಾಯಲಿಲ್ಲ ಎಂದು ಅವನಿಗೆ ಆಶ್ಚರ್ಯ.

ಮನೆಯ ಆಚೆಯ ಭಾಗಕ್ಕೆ ಇಳಿದು ಶ್ರೀಮತಿ ಮೆಲಬರಿಯೊಂದಿಗೆ ವಿಚಾರಿಸಿದಾಗ, ಗ್ರೇಸಳು ರಾಟ್ಸ ಫೋರ್ಡ ಫೋರಂ ಹಳ್ಳಿಗೆ ಒಬ್ಬ ಪರಿಚಿತಳ ಮನೆಗೆ ಭೆಟ್ಟಿ ಕೊಡಲು ಮೂರು ದಿನ ಹಿಂದೆಯೆ ಹೋಗಿದ್ದಳೆಂದೂ, ಅಲ್ಲಿ ಅವಳು ಅಸ್ವಸ್ಥಳಾದಳೆಂದು ಇದೆ ಮುಂಜಾನೆ ಸುದ್ದಿ ಬಂದು ಅವಳ ತಂದೆಯು ಅವಳನ್ನು ಕಾಣಲಿಕ್ಕೆ ಕುದುರೆಯೇರಿ ಅಲ್ಲಿಗೆ ಹೋಗಿರುವನೆಂದು ತಿಳಿದಾಗ ಅವನ ಆಶ್ಚರ್ಯ ಇನ್ನೂ ಹೆಚ್ಚಾಯಿತು.

ಫಿಟ್ಝಪಿಯರ್ಸ ತಿರುಗಿ ಮೇಲ್ಮಹಡಿಗೆ ಹೋದನು. ಈಗ ನಡುಮನೆಯು ಒಂದೇ ಮೇಣಬತ್ತಿಯಿಂದ ಬೆಳಗಿತ್ತು. ಅದು ಅಜ್ಜಿ ಆಲಿವರಳ ಪ್ರವೇಶದಿಂದ ಹೆಚ್ಚೇನೂ ಪ್ರಸನ್ನವಾಗಲಿಲ್ಲ. ಆ ಮುದುಕಿ ಉಡಿ ತುಂಬ ಸೌದೆಯ ಚೂರು ತಂದು ಅಗ್ಗಿಷ್ಟಿಕೆಯಲ್ಲಿ ಚೆಲ್ಲಿದಳು. ಅದರ ಸರಳುಗಳನ್ನು ಕೆದರಿ ಬೂದಿ ತೆಗೆದಳು. ಚುಂಚ್ಚು ಗೋಲಿನ ಖಳಖಳ ಸದ್ದು ಮಾಡಿದಳು. ಒಟ್ಟಾರೆ ಕೋಣೆಯ ಸ್ಥಿತಿ ಹೆಚ್ಚು ಸುಖವಾಗುವಂತೆ ನೋಡಿಕೊಂಡಳು. ಫಿಟ್ಝಪಿಯರ್ಸನಿಗೆ ಬೆಟ್ಟದಲ್ಲಿ ನಡೆದ ಗುಟ್ಟುರಟ್ಟಿನ ಯಾವ ಸುಳಿವೂ ಇದ್ದಿಲ್ಲ. ಈ ರೀತಿ ಅಸಡ್ಡಾಳವಾಗಿ ಮನೆ ಬಿಟ್ಟುಹೋಗುವುದಕ್ಕೆ ಮುಂದೆ ಗ್ರೇಸಳು ತನ್ನ ಯೋಜನೆಗಳನ್ನು ಹೆಚ್ಚು ಖಚಿತವಾಗಿ ಅವನಿಗೆ ತಿಳಿಸಬೇಕಿತ್ತು,—ಎಂದು ಆತ ಆಲೋಚಿಸಿದನು. ಅನ್ಯಮನಸ್ಕನಾಗಿ ಆತ ಕಿಟಕಿಯ ಹತ್ತಿರಹೋದ. ಅದರ ಕದದ ಪಟ್ಟೆಗಳನ್ನು ಕೆಳಗೆ ಎಳೆದಿದ್ದಿಲ್ಲ. ಹೊರಗೆ ತ್ವರೆಯಿಂದ ಕಂದುತ್ತಿರುವ ಕ್ಷೀಣಚಂದ್ರನನ್ನು ನೋಡಿದ. ಸೂಕೆ ದಾಮುಸನ್‌ಳ ಹೊಗೆ ಕಿಂಡಿಯಿಂದ ಏಳುತ್ತಿರುವ ಹೊಗೆಯ ದೇಟನ್ನು ನೋಡಿದ. ಆ ತರುಣಿ ಆಗ ತಾನೆ ರಾತ್ರೆ ಊಟದ ಸಿದ್ಧತೆಗಾಗಿ ಬೆಂಕಿ ಹೊತ್ತಿಸಿರಬೇಕು.

ಕೆಳಗೆ ಪಟಾಂಗಣದ ಆಚೆಗೆ ಇದುರಿನ ಬದಿಯಲ್ಲಿ ಏನೋ ಚರ್ಚೆ ನಡೆಯುತ್ತಿದ್ದುದು ಅವನ ಗಮನಕ್ಕೆ ಬಂತು. ಯಾರೋ ಗೋಡೆಯ ಆಚೆಗೆ ತಲೆಹಾಕಿ ಅಲ್ಲಿ ಕೆಲಸಮಾಡುತ್ತಿದ್ದ ಗರಗಸದವನಿಗೆ ದೊಡ್ಡ ದನಿಯಲ್ಲಿ ಏನೋ ಸುದ್ದಿಯನ್ನು ಹೇಳುತ್ತಿದ್ದರು. ಅದರಲ್ಲಿ ಮಿಸೆಸ್ ಚಾರ್ಮಂದಳ ಹೆಸರು ಬಂದು ಡಾಕ್ಟರನ ಕಿವಿಯನ್ನು ಸೆಳೆಯಿತು.

'ಅಜ್ಜೀ ಅಗ್ಗಿಷ್ಟಿಕೆಯಲ್ಲಿ ಅಷ್ಟೊಂದು ಸಪ್ಪಳ ಮಾಡಬೇಡ', ಸರ್ಜನ ಅಂದನು. ಅದಕ್ಕೆ ಆಲಿವರ ಮಂಡಿಯೂರಿಯೇ ಎದ್ದು, ನಿಗುರಿ, ಸೌದೆಯ ತುಂಡುಗಳನ್ನು ಕೈಯಲ್ಲಿ ಎತ್ತಿ ನಡುವೆಯೆ ತೂಗಿಹಿಡಿದು ತಡೆದಳು. ಫಿಟ್ಝಪಿಯರ್ಸ ಕಿಟಕಿಯ ಕದಗಳನ್ನು ಅರ್ಧಕ್ಕೆ ತೆರೆದನು.

'ಅವಳು ವಿದೇಶಕ್ಕೆ ಮತ್ತೆ ಹೊರಟಳು. ಇದ್ದಕ್ಕಿಂದ್ದಂತೆ ಒಮ್ಮೆಗೆ ಹೋಗುವ ನಿರ್ಧಾರ ಮಾಡಿಬಿಟ್ಟಳು — ಇನ್ನೆರಡು ದಿನಗಳಲ್ಲಿ ಹೋಗುವಳು. ಈಗ ಕೆಲದಿನಗಳಿಂದ ಅವಳು ತಲೆಕೆಟ್ಟಂತೆ ವಿಚಿತ್ರವಾಗಿದ್ದಾಳೆ — ಮೋರೆಯಲ್ಲಿ ಯಾವಾಗಲೂ ಚಿಂತೆ. ತನ್ನ ಜೀವನಕ್ಕೆ ತಾನೇ ಭೀಮಾರಿ ಹಾಕಿಕೊಂಡ ಹಾಗೆ. ಹಿಂಟೋಕ ಹಳ್ಳಿಗೆ ಹೇಳಿದ ಹೆಂಗಸಲ್ಲ ಆಕೆ — ಅವಳಿಗೆ ಓಕಮರ ಯಾವುದು, ಬೀಚಮರ ಯಾವುದು ಗೊತ್ತಾಗುವುದಿಲ್ಲ. ಅವಳ ಆ ಗಂಡಸು ಯಾರೇ ಇರಲಿ, ನನಗೇನು? ನನಗೆ ಆಕೆ ತುಂಬ ದಯೆ ತೋರಿಸುತ್ತಾಳೆ.'

'ಸರಿ — ನಾಡಿದ್ದು ಸಬ್ಬಾತ ದಿನ. ಅಲ್ಲದೆ, ದಯೆಯೆಂಬುದಿಲ್ಲದಿದ್ದರೆ, ನಾವು ಬರೆ ಎಬಡರಂತೆ ಆಗೇವು. ಆದಾಗ್ಯೂ ಇಷ್ಟೊಂದು ಹೇಳಬಲ್ಲೆ, ಅವಳು ಊರುಬಿಟ್ಟು ಹೋಗುವದು, ಇಲ್ಲಿ ಉಳಿದ ಒಂದು ದಂಪತಿಗೆ ದೊಡ್ಡ ಉಪಕಾರವೇ.'

ಬೆಂಕಿ ಹೊತ್ತಿಸಿ ಆಯಿತು. ಫಿಟ್ಝಪಿಯರ್ಸ್ ಅದರ ಇದುರಿಗೆ ಕೂತನು. ಮರದ ಮೇಲಿನ ಕೊನೆಯ ಎಲೆಯಷ್ಟು ಚಂಚಲ ಅಸ್ವಸ್ಥನಾಗಿ, 'ಮೋರೆಯಲ್ಲಿ ಯಾವಾಗಲೂ ಚಿಂತೆ. ತನ್ನ ಜೀವಕ್ಕೆ ತಾನೆ ಭೀಮಾರಿ ಹಾಕಿಕೊಂಡ ಹಾಗೆ', ಅಯ್ಯೊ, ಪಾಪ, ಬಡ ಫೆಲಸ್!

ಇದೀಗ ತಾನು ಕೇಳಿದ ಅವಳ ಅವಸ್ಥೆಯ ವರ್ಣನೆ ಅದರ ಒಂದು ವ್ಯಂಗ್ಯಚಿತ್ರವೆಂದು ಆತ ಊಹಿಸಿದ. ಅವಳ ದೇಹ ಹೇಗೆ ಮಿಡುಕಿರಬೇಕು, ನಡುಗಿರಬೇಕು. ಅವಳ ಆ ನುಣ್ಣನ್ನ ಕೆನ್ನೆಗಳು ಹೇಗೆ ನೋಯುತ್ತಿರಬೇಕು. ಎಂಥ ದುರ್ದೆಸೆಯ ವೃತ್ತಿಯಲ್ಲಿ ಅವಳು ಮುಳುಗಿರಬೇಕು. ತನ್ನ ಮತ್ತು ಅವಳ ಹೆಸರು ಹೀಗೆ ಬೆರಕೆ ಆಗಿರದಿದ್ದರೆ, ಆ ಮೂಲಕವೆ ತಮ್ಮಿಬ್ಬರ ಪರಿಚಯವನ್ನು ಕಡಿದುಹಾಕುವ ನಿರ್ಧಾರ ಅವಳು ಮಾಡಿರದಿದ್ದರೆ, ಅವಳು ನನ್ನನ್ನು ಡಾಕ್ಟರನೆಂದು ಆದರೂ ಕರೆಯಿಸಿ ಕೊಳ್ಳುತ್ತಿದ್ದಳು. ಈಗ ಅವಳು ಬಳಲಿಕೆಯಲ್ಲಿ ಒಂಟಿಯಾಗಿ ಕುಳಿತಿರಬೇಕು. ತನ್ನನ್ನೂ ತಿರುಗಿ ಕಾಣಬೇಡವೆಂದು ನಿಷೇಧ ಮಾಡಬಾರದಾಗಿತ್ತೆಂದು ಅವಳು ಈಗ ಬಯಸುತ್ತಿರಬೇಕು.

ಆ ಏಕಾಂತ ಕೋಣೆಯಲ್ಲೆ ಇನ್ನು ಕುಳಿತಿರುವುದು ಅವನಿಗೆ ಅಸಾಧ್ಯವಾಯಿತು. ಅವನಿಗಾಗಿ ತಯಾರಾಗುತ್ತಿದ್ದ ಊಟಕ್ಕಾಗಿ ಕಾಯುವುದೂ ಅಸಾಧ್ಯವೆನಿಸಿತು. ತಿರುಗಿ ಕುದುರೆಯೇರಿ ಹೋಗಲು ಆತ ಸಜ್ಜಾಗಿ ಪಟಾಂಗಣಕ್ಕೆ ಇಳಿದು ಬಂದನು. ಡಾರ್ಲಿಂಗ ಜೀನು ಹಾಕಿ ಸಿದ್ಧವಾಗುವತನಕ ಲಾಯದ ಬಾಗಿಲಲ್ಲಿ ನಿಂತನು. ಮತ್ತು ಓಣಿಯ ಗುಂಟ ಕುದುರೆಯೇರಿ ಸಾಗಿದನು. ನಡೆದು ಹೋಗುವುದೇ ಅವನಿಗೆ ಇಷ್ಟವಿತ್ತು. ಆದರೆ ದಿನಹಗಲೆಲ್ಲ ಪ್ರವಾಸದಿಂದ ಆತ ಆಯಾಸಗೊಂಡಿದ್ದನು.

ಮಾರ್ಟಿ ಸೌಥಳ ಗುಡಿಸಲ ಹತ್ತಿರ ಬರುತ್ತಿದ್ದಂತೆ — ಅವನು ಹಾದಿಯಲ್ಲಿ ಅದನ್ನು ಹಾಯ್ದೇ ಹೋಗಬೇಕಾಗಿತ್ತು. ಅವಳು ಮನೆಯ ಮುಂಜಗಲಿಯಿಂದ

ಬಂದಳು. ಅವನಿಗಾಗಿಯೆ ಆಕೆ ಕಾಯುತಿದ್ದಂತೆ ಕಂಡಿತು. ಅವಳು ನಡುದಾರಿಯಲ್ಲಿ ಅವನನ್ನು ಸಂಧಿಸಿದಳು — ಕೈಯಲ್ಲಿ ಒಂದು ಪತ್ರವನ್ನು ಎತ್ತಿಹಿಡಿದು. ಫಿಟ್ಜ್‌ಪಿಯರ್ಸ್ ನಿಲ್ಲದೆ ಅದನ್ನು ತೆಗೆದುಕೊಂಡನು. ಹೆಗಲಿಂದಲೇ ಹೊರಳಿ ಅದು ಯಾರಿಂದ ಬಂತೆಂದು ಕೇಳಿದನು.

ಮಾರ್ಟಿ ತುಸು ಅನುಮಾನಿಸಿದಳು. 'ನನ್ನಿಂದಲೆ' ಆಕೆ ಅಂದಳು ಎದ್ದು ಕಾಣುವ ದೃಢತೆಯಿಂದ.

ಆ ಪತ್ರವು ಮಾರ್ಟಿಯ ಘೋಷಣಾ ಪತ್ರವಾಗಿತ್ತು: ಶ್ರೀಮತಿ ಚಾರ್ಮಂದಳ ಪೂರಕ ಕೇಶಕಲಾಪವನ್ನು ಪೂರೈಸಿದ ಅದರ ಮೂಲದ ಒಡತಿ ತಾನೇ ಎಂದು. ಅದರ ಜತೆಗೆ ಮಾದರಿಗೆ ಒಂದು ಜುಲ್ಪನ್ನು ಅವಳು ಇಟ್ಟಿದ್ದಳು. ಈ ಅವಧಿಯಲ್ಲಿ ಅವಳ ಕೂದಲು ಸಾಕಷ್ಟು ಬೆಳೆದಿದ್ದವು. ಅವರಿಬ್ಬರ ನಡುವೆ ಅವಳು ಬಹುಕಾಲದಿಂದಲೂ ನೆಡಬೇಕೆಂದಿದ್ದ ವ್ಯಾಜ್ಯ ಬೀಜವೆ ಅದಾಗಿತ್ತು. ಆ ಪತ್ರವನ್ನು ಅವನ ಕೈಗೆ ಕೊಡುವಾಗ ಅವಳ ಕೈ ಬಹಳ ನಡುಗಿತು.

ಆದರೆ ಮಬ್ಬುಗತ್ತಲೆಯಿಂದಾಗಿ ಫಿಟ್ಜ್‌ಪಿಯರ್ಸನಿಗೆ ಅದನ್ನು ಆಗಲೆ ಓದುವದು ಅಶಕ್ಯವಿತ್ತು. ಅವನಿಗೆ ಅದನ್ನು ಆಗಲೇ ಓದುವ ಲವಲವಿಕೆ ಏನೋ ಇತ್ತು. ಆದರೂ ಅದನ್ನು ಕಿಸೆಗೆ ಹಾಕಿದನು. ಅವನ ಕಲ್ಪನೆಯೆಲ್ಲ ಈಗ ಹಿಂಟೋಕ ದೊಡ್ಡ ಮನೆಯ ಮೇಲೆ ಏಕಾಗ್ರವಾಗಿತ್ತು. ಆದ್ದರಿಂದ ಆ ಪತ್ರವು ತೆರೆಯದೆ ಹಾಗೆಯೆ ಅವನ ಕಿಸೆಯಲ್ಲಿ ಬಿದ್ದುಳಿಯಿತು. ಇತ್ತ ಮಾರ್ಟಿ ಅದರ ಉತ್ಕೃಷ್ಟ ಪರಿಣಾಮ ಅವನ ವ್ಯಾಮೋಹದ ನಿರಸನದಲ್ಲಿ ಆಗುವುದೆಂದು ಆಶೆಯಿಂದ ಚಿಂತಿಸುತ್ತಲೇ ಉಳಿದಳು.

ದೊಡ್ಡಮನೆಯ ಪರಿಸರ ಸೇರಲು ಅವನಿಗೆ ವಿಲಂಬವಾಗಲಿಲ್ಲ. ಮನೆಯ ಮುಂಭಾಗದ ದೃಶ್ಯವನ್ನು ಇದುರಿಸಿ ನಿಂತ. ಓಕಮರಗಳ ಒಂದು ಗುಂಪಿನ ಕೆಳಗೆ ಆತ ತನ್ನ ಲಗಾಮನ್ನು ಎಳೆದನು. ಮತ್ತು ಕ್ಷಣಕಾಲ ಚಿಂತಿಸಿದನು. ಅವಳ ಅಸ್ವಾಸ್ಥ್ಯದ ಪರಿಸ್ಥಿತಿಯಲ್ಲಿ ಅವನ ಅಲ್ಲಿಯ ಪ್ರವೇಶವು ಅಷ್ಟೇನೂ ಅಸ್ವಾಭಾವಿಕವಾಗಲಾರದು; ಆದರೂ ಒಟ್ಟಾರೆ ಮನೆಯ ಬಾಗಿಲವರೆಗೂ ಕುದುರೆಯನ್ನೇರಿಯೆ ಸಾಗದಿರುವದೆ ಉತ್ತಮವೆಂದು ಆತ ಆಲೋಚಿಸಿದನು. ಅವನು ಕುದುರೆಯಿಂದ ಇಳಿದನು. ಡಾರ್ಲಿಂಗನ್ನು ಅಡ್ಡಹಾಯ್ದು ತಗ್ಗಾಗಿ ತೂಗುವ ಒಂದು ಟೊಂಗೆಗೆ ಕಟ್ಟಿಟ್ಟನು. ಅದು ಸಾಮಾನ್ಯವಾಗಿ ಮರಗಳ ಎಲೆ ಮೇಯುವ ಎತ್ತರಕ್ಕೂ ಕೆಳಗಾಗಿತ್ತು. ಮತ್ತು ಬಾಗಿಲತನಕ ನಡೆದೇ ಹೋದನು.

ಇದೇ ಸಮಯ ಶಾಟ್ಸ್‌ಫೋರ್ಡ್ ಘಾರಂದಿಂದ ಮೆಲಬರಿ ಮರಳಿದ್ದನು. ಆ ಮರದ ವ್ಯಾಪಾರಿಯ ವಿಶಾಲವಾದ ಪಟಾಂಗಣವನ್ನು ನೆರಳು ಚಾಚಿದ ಓಣಿಯಿಂದ ಸದಾ ಹಸಿರು ಇವ್ಹಿಬಳ್ಳಿ ಹಬ್ಬಿದ ಅವಾರದ ಗೋಡೆ ಪ್ರತ್ಯೇಕಿಸಿತ್ತು. ಆ ಗೋಡೆಯ ಆ ತುದಿಗೆ ಈ ತುದಿಗೆ ಒಂದೊಂದು ಬಿಳಿಯ ಅಗಸೆ ಬಾಗಿಲುಗಳಿದ್ದವು — ಅಂಗಳದಲ್ಲಿ

ಪ್ರವೇಶಿಸಲು. ಫಿಟ್ಜ್ ಪಿಯರ್ಸ್ ಆಚೆಯ ಅಗಸೆಯಿಂದ ಕುದುರೆಯೇರಿ ದೊಡ್ಡ ಮನೆಗೆಂದು ಹೊರಬೀಳುವಾಗಲೇ ಮೆಲಬರಿ ಈಚೆಯ ಅಗಸೆಯನ್ನು ಹೊಕ್ಕಲು ಸಮೀಪಿಸುತ್ತಿದ್ದನು. ಫಿಟ್ಜ್ ಪಿಯರ್ಸ್ ಇದುರಿಗಿದ್ದರಿಂದ ಮೆಲಬರಿ ಅವನನ್ನು ನೋಡಿದನು. ಆದರೆ ಆ ಸರ್ಜನನು ತಲೆಹೊರಳಿಸದಿದ್ದರಿಂದ ಮಾವನು ಮರಗಳ ಕೆಳಗೆ ಮೌನವಾಗಿ ಮಂದವಾಗಿ ತುರುತುರು ಹೆಜ್ಜೆ ಇಡುವ ಕುದುರೆಯನ್ನೇರಿ ಬರುವುದನ್ನು ನೋಡಲಿಲ್ಲ. ಕುದುರೆ ಬೂದಿಬಣ್ಣದಿದ್ದೂ ಅದನ್ನು ಅವನು ಗಮನಿಸಲಿಲ್ಲ.

'ಗ್ರೇಸ ಹೇಗಿದ್ದಾಳೆ?' ಒಳಗೆ ಬಂದೊಡನೆ ಹೆಂಡತಿಯು ಮೆಲಬರಿಯನ್ನು ಕೇಳಿದಳು.

ಮೆಲಬರಿ ಖಿನ್ನವಾಗಿ ಕಂಡನು. 'ಅವಳು ಏನೇನೂ ಚೆನ್ನಾಗಿಲ್ಲ.' ಆತ ನುಡಿದನು. ಅವಳ ನೋಟವೇ ನನಗೆ ನೆಟ್ಟಗೆನಿಸುವುದಿಲ್ಲ. ಆ ಅಪರಿಚಿತ ಸ್ಥಳದಲ್ಲಿ ಇನ್ನು ಹೆಚ್ಚು ಆಕೆ ಉಳಿಯುವ ವಿಚಾರವೇ ನನಗೆ ಸೇರಲಿಲ್ಲ. ಅವಳನ್ನು ಮನೆಗೆ ತರುವುದರ ಬಗೆಗೆ ನಾನು ಬೇಡಿಕೊಂಡೆ. ಕೊನೆಗೂ ಆಕೆ ಒಪ್ಪಿದಳು ; ಆದರೆ ಬಹಳಷ್ಟು ಮನವೊಲಿಸಿದ ನಂತರ. ನಾನು ಗಾಡಿ ಒಯ್ಯಬೇಕಿತ್ತು ; ಕುದುರೆಯೇರಿ ಹೋಗುವುದರ ಬದಲು. ನನಗೆ ಅದೆ ಬೇಸರ ; ಆದರೆ ನಾನು ಸೊಗಸಾದ ಚೆಂದ ಸಾರೋಟನ್ನೊಂದು ಬಾಡಿಗೆಗೆ ಹಿಡಿದೆ, ಸಿಕ್ಕವುಗಳಲ್ಲಿ ಬಹಳ ಸುಖವಾಗಿ ಹೋಗುವಂಥಾದ್ದು. ಅದರಲ್ಲಿ ಅವಳು ಇದೆ, ಒಂದೆರಡು ತಾಸುಗಳಲ್ಲಿ ಬಂದು ಮುಟ್ಟುವಳು. ನಾನು ಮುಂದೆ ಕುದುರೆ ಓಡಿಸಿಕೊಂಡು ಬಂದೆ, ಅವಳ ಕೋಣೆ ಸಜ್ಜು ಗೊಳಿಸಲು ನಿನಗೆ ಹೇಳಲಿಕ್ಕೆ. ಆದರೆ ನಾನು ಕಂಡೆ, ಅವಳ ಗಂಡ ತಿರುಗಿ ಬಂದಿದಾನೆ.

'ಹೌದು' ಮೆಲಬರಿ ಅಂದಳು, ಅವಳು ಚಿಂತೆ ವ್ಯಕ್ತಮಾಡಿದಳು — ಶಾಟ್ಸಫೋರ್ಡಿನಿಂದ ಇಲ್ಲಿಯವರೆಗೆ ಸಾರೋಟು ಬಾಡಿಗೆಗೆ ಹಿಡಿಯುವುದು ! ಅದರ ಬಾಡಿಗೆಯೆಷ್ಟು ಬಿದ್ದೀತು ?' ಆಕೆ ಹೇಳಿದಳು.

'ಎಷ್ಟೇ ಬೀಳಲಿ, ನಾನು ಪರಿವೆ ಮಾಡೋದಿಲ್ಲ.' ಆತ ಚುರುಕಾಗಿಯೇ ಉದ್ಗರಿಸಿದನು. 'ಅವಳನ್ನು ಮನೆಗೆ ತರಲು ನಾನು ನಿರ್ಧಾರವನ್ನೆ ಮಾಡಿದ್ದೆ. ಅವಳು ಯಾಕೆ ಹೋಗಿದ್ದಳೋ ನನಗೆ ಹೊಳೆಯದು. ನಾನು ನೋಡುವ ಮಟ್ಟಿಗೆ, ಅವಳು ನಡೆಯುವ ರೀತಿಯಿಂದ ಯಾವ ಸಂಗತಿಯೂ ತಿದ್ದುವಂತಿಲ್ಲ.'

ಗ್ರೇಸಳು ತಂದೆಗೆ ಶ್ರೀಮತಿ ಚಾರ್ಮಂದಳೊಂದಿಗೆ ನಡೆದ ತನ್ನ ಮಾತುಕತೆ ಯನ್ನು, ಆಕೆ ತನ್ನ ಕಿವಿಯಲ್ಲಿ ಅರುಹಿದ ತಬ್ಬಿಬ್ಬಾಗಿಸುವ ರಹಸ್ಯವನ್ನು ಹೇಳಿದ್ದಿಲ್ಲ.

'ಈಗ ಎಡ್ರಿಡ್ ಬಂದಿದಾನೆ.' ಆತ ಮುಂದರಿದನು. 'ನಾನು ತಿರುಗಿ ಬರುವನಕವಾದರೂ ಆತ ಕಾಯಬಹುದಾಗಿತ್ತು. ಅವಳು ಹೇಗಿದ್ದಾಳೆಂದು ಕೇಳಲಿಕ್ಕೆ, ಬರೇ ಉಪಚಾರಕ್ಕಾದರೂ ಅಡ್ಡಿ ಇದ್ದಿಲ್ಲ. ಆದರೆ ಆತ ಹೊರಬಿದ್ದು ಹೋಗು ವುದನ್ನು ನಾನು ಕಂಡೆ. ಎಲ್ಲಿಗೆ ಹೋದ ಆತ ?'

ಇಷ್ಟು ದೀರ್ಘಕಾಲ ದೂರವಿದ್ದು ಬಂದನಂತರ ಆತ ಭೆಟ್ಟಿಕೊಡಬಹುದಾದ ಮೊದಲನೆಯ ಸ್ಥಾನದ ಬಗೆಗೆ ಸಂಶಯವೇ ಇಲ್ಲ ಎಂದಳು ಹೆಂಡತಿ, ಮೆಲಬರಿಗೆ. ನಿಜ ವಾಗಿಯೂ ಅವಳು ಫಿಟ್ಝಪಿಯರ್ಸ ದೊಡ್ಡ ಮನೆಯ ದಿಕ್ಕಿನಲ್ಲಿ ಹೋದದ್ದು ಕಂಡಿದ್ದಳು.

ಮೆಲಬರಿಯು ಹೆಚ್ಚು ಮಾತಾಡಲಿಲ್ಲ. ಈ ಹೊತ್ತಿಗೆ ಫಿಟ್ಝಪಿಯರ್ಸ ಮನೆಯಲ್ಲಿಯೇ ಇರುವುದು, ಅತ್ಯಗತ್ಯವಿತ್ತು. ಅದಕ್ಕೆ ಸಬಲಕಾರಣವಿತ್ತು. ಅಥವಾ ಶಾಟ್ಸಫೋರ್ಡ ರಸ್ತೆಯಲ್ಲಿಯೇ ಹೋಗಿ ತನ್ನ ಕಾಯಿಲೆಬಿದ್ದ ಹೆಂಡತಿಯನ್ನು ಭೆಟ್ಟಿಯಾಗಬೇಕಿತ್ತು. ; ಆದರೆ ಅದರ ಬದಲು ಆತ ಬೇರೆಡೆಗೆ ಹೋಗಿ ಅವಳಿಗೆ ಧಿಕ್ಕಾರ ಮಾಡಿದನಲ್ಲ ! ಇದು ಮೆಬಲರಿಯನ್ನು ವಿಪರೀತ ಕೆರಳಿಸಿತು. ಆ ಮುದುಕ ಮತ್ತೆ ಬಾಗಿಲಿಂದ ಹೊರಬಿದ್ದು ಹೋದನು. ಅವನ ಕುದುರೆಯ ಜೀನು ಇನ್ನೂ ಕಳಚಿದ್ದಿಲ್ಲ. ಆದ್ದರಿಂದ ಅವನು ಅಪಜಾನನಿಗೆ ಅದನ್ನು ಗಟ್ಟಿಯಾಗಿ ಬಿಗಿಯಲು ಹೇಳಿ ಅದನ್ನೇರಿ ಸರ್ಜನ್ನನ ಬೆನ್ನಿಗೇ ಓಡಿಸಿದನು.

ಮೆಲಬರಿ ಪಾರ್ಕನ್ನು ಮುಟ್ಟುವಷ್ಟರಲ್ಲಿ, ಆತ ಒಂದು ಮನಃಸಂಕಲ್ಪಕ್ಕೆ ಬಂದಿದ್ದ ; ತನ್ನ ಮಗಳ ಈ ತಪ್ಪುಗಾರ ಕಾಳಗೆಟ್ಟ ತಿಳಿಗೇಡಿ ಗಂಡನನ್ನು ಪ್ರತಿ ಭಟಿಸಲು ಆತ ಯಾವ ದೂರಕ್ಕೂ ಹೋಗಲು ಸಿದ್ಧನಾದನು. ಒಳ್ಳೆ, ಕೆಟ್ಟ ಯಾವದೇ ಉಪಾಯದಿಂದ ಒಂದು ರಾತ್ರಿ ಎಡ್ರೆಡ್ ಫಿಟ್ಝಪಿಯರ್ಸನನ್ನು ಆತ ಮನೆಗೆ ತರತಕ್ಕವನೇ. ತಾನು ಹೀಗೆ ನಡುವೆ ಕೈವಾಡ ನಡೆಯಿಸಿದ್ದರಿಂದ ಈಗಿದ್ದ ಪರಿಸ್ಥಿತಿಗಿಂತ ಕೆಟ್ಟದ್ದು ಇನ್ನೇನೂ ಘಟಿಸಲಿಕ್ಕಿಲ್ಲ. ಆದಾಗ್ಯೂ ಪ್ರತಿಯೊಂದು ಕೇಡಿಗೂ ಅದಕ್ಕಿಂತ ಕೆಟ್ಟದೆಂಬುದೊಂದು ಇದ್ದೇ ಇದೆ.

ಈಚೆಯಿಂದ ಪಾರ್ಕನ್ನು ಸೇರುವ ಕುದುರೆಯ ಕಾಲ್ದಾರಿಯ ಗೇಟಿನಿಂದ ಆತ ಹೊಕ್ಕನು. ಮತ್ತು ಫಿಟ್ಝಪಿಯರ್ಸನ ಕುದುರೆ ಹೋದ ಮಿದು ಕರಿಕೆಯ ಹಾಸಿನ ಮೇಲಿಂದಲೇ ಮುಂಗಾಲು ಪುಟಿಗೆಯಲ್ಲಿ ಕುದುರೆ ನಡೆಯಿಸಿದನು. ಕೊನೆಗೆ ಆತ ತನ್ನ ಮುಂದೆ ಹೋದವನು ಹೋಗಿ ನಿಂತುಕೊಂಡ ಆ ಮರಗಳ ಗುಂಪಿನ ಕೆಳಗೆ ತಾನೂ ತಲುಪಿದನು. ಅಲ್ಲಿ ಟೊಂಗೆಗಳ ನೆರಳಿನಲ್ಲಿ ಅಸ್ಪಷ್ಟವಾಗಿ ಕಾಣುವ ಹಳೆಯ ಆಕೃತಿಯು ಡಾರ್ಲಿಂಗ ಎಂದು ತಿಳಿಯಿತು ; ಫಿಟ್ಝಪಿಯರ್ಸ ಕಟ್ಟುಬಿಟ್ಟ ಕುದುರೆ. 'ಇವನ ಮನೆ ಹಾಳಾಗ, ನೇರವಾಗಿ ಮನೆಯವರೆಗೆ ಕುದುರೆಯೇರಿ ಇಂದು ಏಕೆ ಹೋಗಲಿಲ್ಲ ?' ಮೆಲಬರಿ ಅಂದನು.

ಫಿಟ್ಝಪಿಯರ್ಸನ ಉದಾಹರಣೆಯಿಂದ ಇವನು ಲಾಭ ಪಡೆದನು. ಕುದುರೆಯಿಂದ ಇಳಿದು ಅದನ್ನು ಹತ್ತಿರದ ಇನ್ನೊಂದು ಮರಕ್ಕೆ ಕಟ್ಟಿ, ಅವನಂತೆಯೇ ತಾನೂ ನಡೆಯುತ್ತಲೇ ಆ ಮನೆಯ ಕಡೆಗೆ ಹೋದನು. ತನ್ನ ತನಿಖೆಯಲ್ಲಿ ಚಿಕ್ಕಪುಟ್ಟ ಸಂಗತಿಗಳು ಅವನನ್ನು ತಡೆಗಟ್ಟಲಾರವು — ಅಂಥ ಮನೋವೃತ್ತಿಯಲ್ಲಿ ಆತ ಇದ್ದನು. ಆದ್ದರಿಂದ ಕದಬಡಿಯದೆ, ಗಂಟೆ ಬಾರಿಸದೆ, ಆತ ಮನೆಯ ಮುಂಬಾಗಿಲನ್ನು ಮೆಲ್ಲಗೆ ತೆರೆಯಲೂ ಅನುಮಾನಿಸಲಿಲ್ಲ.

ಆ ವಿಶಾಲವಾದ ಚಚ್ಚೌಕದ ಹಾಲು ಮೇಲೆ ಜಂತೆಯಿಂದ ತೂಗುವ ಒಂದು ಮಂದದೀಪದಿಂದ ಬೆಳಗಿತ್ತು. ಅದರ ನೆಲಕ್ಕೆ ಓಕ ಹಲಗೆಗಳು ಹಾಸಿದ್ದು ಅಲ್ಲಿಂದ ಮೆತ್ತಿಗೆ ಹೋಗುವ ಮಾಳಿಗೆ (ಸೋಪಾನ) ಇತ್ತು. ಅದರ ಗೋಡೆಗಳಿಗೂ ಹಲಗೆ ಹಾಸಿದ್ದರು. ಇದೆಲ್ಲ ಆ ಮಂದಬೆಳಕಿನಲ್ಲಿ ಹೊಳೆಯುತ್ತಿತ್ತು. ಹಾಲಿನಲ್ಲಿ ಯಾವ ಪ್ರಾಣಿಯೂ ಕಾಣಲಿಲ್ಲ. ಅವನು ಹಾಗೆಯೆ ಪಡಸಾಲೆಯಲ್ಲಿ ನುಗ್ಗಿದನು. ನಡುಮನೆ ಯೆಂದು ಅವನಿಗೆ ಗೊತ್ತಿದ್ದ ಒಂದು ಬಾಗಿಲಿಗೆ ಆತ ಕಿವಿಗೊಟ್ಟು ಕೇಳಿದನು. ಒಳಗಿಂದ ಯಾವ ಸದ್ದೂ ಇದ್ದಿಲ್ಲ. ಕದದ ಹಿಡಿಕೆಯನ್ನು ತಿರುವಿ ತೆರೆದು ನೋಡಿದಾಗ ಒಳಗೆ ಕೋಣೆ ಖಾಲಿ. ಅಗ್ಗಿಷ್ಟಿಕೆಯ ಸರಳಪಂಜರದಲ್ಲಿ ಮಂದವಾಗಿ ಉರಿಯುವ ಬೆಂಕಿ ಯೊಂದೆ ಅಲ್ಲಿಯ ಬೆಳಕಾಗಿತ್ತು. ಅದರ ಕಿರಣಗಳು ಅಲ್ಲಿಯ ಹೊರಥಳಕಿನ ವರ್ಸಾಯ ಪೀಠೋಪಕರಣಗಳ ಮೇಲೂ, ಹೊಂಬಣ್ಣದ ಒಪ್ಪೆಯ ಮೇಲೂ ಚೆಲ್ಲಿ ಅಣಕಿಸುವಂತೆ ಇತ್ತು. ಈ ಕೋಣೆಯ ಸಾಮಾನು ಒಳಸಿಂಗಾರದ ಒಡವೆಗಳು ಆ ಕಟ್ಟಡದ ಇತರ ಶಿಲ್ಪ ಭಾಗಗಳಿಗೆ ತೀರ ವಿಸಂಗತವಾಗಿದ್ದವು. ಅವನ್ನು ಫೆಲಿಸ್ ಅಲ್ಲಿ ತಂದು ಇಟ್ಟಿದ್ದೂ ಆ ಸ್ಥಾನದ ಹಳೆಯ ಆಂಗ್ಲ ಮಬ್ಬಿನ ನವಿರಾದ ವಾತಾವರಣಕ್ಕೆ ಪ್ರತೀಕೂಲವೆಂದೇ ಇರಬೇಕು.

ತನ್ನ ಅಳಿಯನನ್ನು ಕೂಡಲೆ ಮುಖಾಮುಖಿ ಕಾಣುವ ಆಶೆಯು ಹುಸಿಯಾಗಿ, ಮೆಲಬರಿ ಊಟದ ಕೋಣೆಗೆ ಸಾಗಿದನು. ಅಲ್ಲಿ ಬೆಳಕು ಇದ್ದಿಲ್ಲ, ಬೆಂಕಿಯೂ ಇದ್ದಿಲ್ಲ. ಅಲ್ಲಿ ಚಳಿಯ ವಾತಾವರಣವೆ ಹಬ್ಬಿತ್ತು ಅಂದರೆ ಆ ದಿನದ ಮಟ್ಟಿಗೆ ಅವಳು ಅಲ್ಲಿ ಊಟವನ್ನೆ ಮಾಡಿದ್ದಿಲ್ಲವೆಂದು ಅರ್ಥವಾಗುತ್ತಿತ್ತು.

ಇಷ್ಟು ಹೊತ್ತಿನಲ್ಲಿ ಮೆಲಬರಿಯ ಮನೋವೃತ್ತಿಯ ಉಲ್ಬಣವು ಸ್ವಲ್ಪ ಶಾಂತ ವಾಗಿತ್ತು. ಇಲ್ಲಿ ಪ್ರತಿಯೊಂದು ಸಂಗತಿಯೂ ಶಾಂತವಾಗಿತ್ತು. ಇದರ ಪ್ರಭಾವದಿಂದ ಆತ ಫಿಟ್ಝಪಿಯರ್ಸನ್ನಾಗಲಿ ಇನ್ನಾರನ್ನೇ ಆಗಲಿ ಇದುರುಹಾಕಿಕೊಂಡು ಸೆಣಸಾಡಬೇಕೆಂಬ ಉದ್ರೇಕವನ್ನು ಕಳೆದುಕೊಂಡಿದ್ದನು. ಆ ಕೋಣೆಗಳ ಸಿರಿವಂತಿಕೆಯ ಹಿರಿಮೆಯ ರೀವಿಯ ಪ್ರಭಾವ ಅವನಲ್ಲಿ ಹೊಸದೊಂದು ಭಾವವನ್ನು ಹುಟ್ಟಿಸಿತು. ಆ ಭಾವ ವೆಂದರೆ ಹೊರದೋರಿಕೆಗೆ ಇಷ್ಟೆಲ್ಲ ಒಪ್ಪ ಒಳಿತು ಔಚಿತ್ಯ-ಔದಾರ್ಯಗಳು ಇರುವಲ್ಲಿ ತಾನು ಸಂಶಯಪಟ್ಟಂಥ ಆ ಒಂದು ತಪ್ಪುಗಾರಿಕೆ ಇರಲಾರದು. ಇನ್ನು ಒಂದು ವಿಚಾರ ಅವನಿಗೆ ತೋಚಿತು; ತನ್ನ ಸಂಶಯಗಳು ಯಥಾಯೋಗ್ಯವೆಂದಾದರೂ, ತಾನು ಹೀಗೆ ಅನುಚಿತವಾಗಿ ಧುಡುಂ ಪ್ರವೇಶ ಮಾಡುವುದು ಮನೆಯವರನ್ನೆಲ್ಲ ಗೊಂದಲಗೆಡಿಸಬಹುದು; ಅದು ತನ್ನ ಮಗಳ ಹಾಗೂ ತನ್ನ ಮರ್ಯಾದೆ ಗೌರವಗಳಿಗೂ ನಷ್ಟ ತರಬಹುದು. ಇಂಥ ಯಾವುದೆ ದುಷ್ಪರಿಣಾಮವು ಕೊನೆಗೂ ಗ್ರೇಸಳಿಗೆ ಕಠಿಣವಾಗಿ ಪೆಟ್ಟುಕೊಡಬಹುದು, ಆದ್ದರಿಂದ ತಾನು ಹೆಚ್ಚು ಸಮಂಜಸವಾದ ಕ್ರಮಕ್ಕೈಗೊಳ್ಳಬೇಕು—ಫಿಟ್ಝಪಿಯರ್ಸನನ್ನು ಖಾಸಗಿಯಾಗಿ ಬಿನ್ನವಿಸಿಕೊಳ್ಳಬೇಕು—ಹಿಂದೆ ಶ್ರೀಮತಿ ಚಾರ್ಮಂದಳನ್ನು ಕಂಡು ಮಾಡಿದಂತೆ.

ಆದ್ದರಿಂದ ಆತ ಹೇಗೆ ಬಂದಿದ್ದನೋ ಹಾಗೆಯೆ ಸದ್ದಿಲ್ಲದೆ ಹಿಂಜರಿದು ಹೋದನು. ನಡುಮನೆಯ ಬಾಗಿಲನ್ನು ಹಾಯ್ದು ಹೋಗುವಾಗ ಒಳಗೆ ಒಂದು ಸದ್ದನ್ನು ಕೇಳಿದಂತೆ ಅವನಿಗೆ ಭಾಸವಾಯಿತು ; ಅದು ಬೆಂಕಿಯಲ್ಲಿ ಉರುವಲ ಮುಗಿಯುವ ಸಪ್ಪಳವಿದ್ದಿಲ್ಲ. ಮೆಲಬರಿ ನಿಧಾನವಾಗಿ ಬಾಗಿಲನ್ನು ಕೆಲವು ಅಂಗುಲ ತೆರೆದನು ಮತ್ತು ಆಚೆಯ ಕಿಟಕಿಯ ಹತ್ತಿರ ಎರಡು ಆಕೃತಿಗಳು — ಒಂದು ಗಂಡು, ಒಂದು ಹೆಣ್ಣು — ಅಲ್ಲಿಂದ ಹೊರಬಿದ್ದು ಹೋಗಲು ಅಣಿಯಾಗಿರುವುದನ್ನು ನೋಡಿದನು. ಅವೆರಡು ಆ ಮನೆಯ ಒಡತಿ ಮತ್ತು ತನ್ನ ಅಳಿಯನೆಂದು ಆತ ಗುರುತಿಸಿದನು. ಮರುಕ್ಷಣಕ್ಕೆ ಅವರಿಬ್ಬರೂ ಹೊರಗಿನ ಹುಲ್ಲುಹಾಸಿನ ಹಸಿರು ಮಬ್ಬಿನಲ್ಲಿ ಮಾಯವಾಗಿದ್ದರು.

ಆತ ತಿರುಗಿ ಹಾಲಿಗೆ ಹಿಂಜರಿದನು. ಅಲ್ಲಿಂದ ಸಾರೋಟು ಒಳಬರುವ ಬಾಗಿಲಿನಿಂದ ಹೊರಬಿದ್ದನು. ಅಲ್ಲಿಂದ ಸುತ್ತುಹಾಕಿ ಹುಲ್ಲುಹಾಸಿದ ಬಯಲ ಮುಂಭಾಗಕ್ಕೆ ಬಂದನು. ಅಷ್ಟು ಹೊತ್ತಿಗೆ ಅವೆರಡೂ ವ್ಯಕ್ತಿಗಳೂ ಮನೆಯ ಪರಿಸರವನ್ನು ಹೊರಗಿನ ಬಯಲಿನಿಂದ ಬೇರ್ಪಡಿಸುವ ಕಟಾಂಜನದ ಹತ್ತಿರ ಒಬ್ಬರನ್ನೊಬ್ಬರು ಬೀಳ್ಕೊಳ್ಳುತ್ತಿರುವುದನ್ನು ಆತ ನೋಡಿದನು.

ಅವಳ ಪ್ರೇಮಿಕನು ಅವಳ ಮಗ್ಗುಲಿನಿಂದ ದೂರವಾದೊಡನೆಯೇ ಶ್ರೀಮತಿ ಚಾರ್ಮಂದ ತ್ವರೆಯಿಂದ ಹಿಂದಿರುಗಿದಳು. ಫಿಟ್ಜ್‌ಪಿಯರ್ಸನು ಮುಂದುವರಿದು ವೇಗದಿಂದ ಮರಗಳ ಮಬ್ಬು ಮಸುಕಿನಲ್ಲಿ ಮರೆಯಾದನು.

ಶ್ರೀಮತಿ ಚಾರ್ಮಂದಳು ನಡುಮನೆಯ ಕಿಟಕಿಯೊಳಗಿಂದ ಒಳಗೆ ಹೊಕ್ಕುವ ತನಕ ತಡೆದು ಮೆಲಬರಿ ಫಿಟ್ಜ್‌ಪಿಯರ್ಸನ ಬೆನ್ನಿಗೆ ಹೋದನು. ಇದೇ ರಾತ್ರಿ ಆ ಅಮೂಲ್ಯ ತರುಣನಿಗೆ ತನ್ನ ಮನೋಗತವನ್ನು ಆಡಿತೋರಿಸಬೇಕು — ಕಣ್ಣು ತೆರೆಯುವಂತೆ ಕಿವಿ ಹಿಂಡಬೇಕು. ಇನ್ನೇನೂ ಇಲ್ಲದಿದ್ದರೂ ಇಷ್ಟಾದರೂ ಮಾಡಬೇಕು.

ಆದರೆ ಓಕಮರಗಳ ಗುಂಪಿನ ಆ ದಟ್ಟವಾದ ನೆರಳಲ್ಲಿ ನುಗ್ಗಿದಾಗ ಅಲ್ಲಿ ಫಿಟ್ಜ್‌ಪಿಯರ್ಸ ಅವನ ಕಣ್ಣಿಗೆ ಬೀಳಲಿಲ್ಲ. ತಾನು ಏರಿಬಂದ ಕುದುರೆ 'ಬ್ಲಾಸಂ' ಕೂಡ ಕಾಣಲಿಲ್ಲ. ಆದರೆ ತನ್ನ ದಾರಿಯನ್ನು ನಿಧಾನವಾಗಿ ಬಳಸಿನೋಡುತ್ತ ಸಾಗುತ್ತ ಮುಂದೆ ಸರಿದಾಗ, ಸ್ವಲ್ಪ ಹೊತ್ತಿನಲ್ಲಿಯೆ ತಾನು 'ಬ್ಲಾಸಂ' ಕಟ್ಟಿಟ್ಟ ಮರದ ಪಕ್ಕದಲ್ಲಿಯೆ ಫಿಟ್ಜ್‌ಪಿಯರ್ಸ ತಂದ ಡಾರ್ಲಿಂಗ ನಿಂತಿರುವುದನ್ನು ಮೆಲಬರಿ ಕಂಡನು. ಒಂದು ಕ್ಷಣ ಅವನಿಗೆ ಅನಿಸಿತು—ತನ್ನ ಕುದುರೆ ತೀರ ಎಳೆಯ ತೀರ ಕಡಿಮೆ ಕಸುವುಳ್ಳ ಪ್ರಾಣಿ. ಕಟ್ಟಿದ್ದು ಕಿತ್ತುಕೊಂಡು ಓಡಿಹೋಗಿರಬಹುದು. ಆದರೆ ಲಕ್ಷ್ಯಗೊಟ್ಟು ಕೇಳಿದಾಗ ಅದು ಸ್ವಲ್ಪ ದೂರ ಮುಂದೆ ಪುಟಗಾಲಿನಿಂದ ಓಡುತ್ತಿದ್ದು, ಅದರ ಜೀನಿನ ಕಿರಿಗುಟ್ಟುವ ಸಪ್ಪಳವು, ಅದನ್ನೊಬ್ಬ ಸವಾರ ಏರಿರಬೇಕೆಂಬುದನ್ನು ಸೂಚಿಸುವುದು ಕಂಡುಬಂತು. ಹೊರಬಯಲ ಅಂಚಿನ ಚಿಕ್ಕ ಗೇಟಿನವರೆಗೆ ನಡೆದಾಗ ಮೆಲಬರಿ ಒಬ್ಬ ಕೆಲಸದಾಳನ್ನು ಭೆಟ್ಟಿಯಾದನು. ಬೂದಿಬಣ್ಣದ ಒಂದು ಕುದುರೆಯನ್ನೇರಿ

ಯಾರಾದರೂ ಹೋದದ್ದು ಆತ ಕಂಡನೋ ಎಂದು ಕೇಳಿದ್ದಕ್ಕೆ ತಾನು ಬರೆ ಡಾ. ಫಿಟ್ಜ್‌ಪಿಯರ್ಸನನ್ನು ಕಂಡನೆಂದು ಆತ ಹೇಳಿದನು.

ಮೆಲಬರಿಯ ಅನುಮಾನವೆ ನಿಜವಾಯಿತು. ಫಿಟ್ಜ್‌ಪಿಯರ್ಸನ ತನ್ನದಲ್ಲದ ಕುದುರೆಯನ್ನು ತನ್ನದೆಂದು ತಪ್ಪು ಭಾವಿಸಿ ಸವಾರಿ ಮಾಡಿದ್ದನು. ಕುದುರೆಗಳ ಪರಿಜ್ಞಾನವಿಲ್ಲದವನು ಆ ಸ್ಥಳದ ಮಬ್ಬುಗತ್ತಲಲ್ಲಿ, ಅವೆರಡೂ ಪ್ರಾಣಿಗಳು ಒಂದೇ ರೀತಿಯೇ ತೋರಲು (ಮೆಲಬರಿಯ ಕುದುರೆ ಹೆಚ್ಚು ಕಪ್ಪಾಗಿದ್ದದ್ದು ಹಗಲ ಬೆಳಕಿನಲ್ಲಿ ಕೂಡಲೆ ಗೊತ್ತಾಗುತ್ತಿತ್ತು.) ಅಂಥ ಕಣ್ಣು ತಪ್ಪು ಮಾಡುವುದು ತೀರ ಸಹಜವೆಂದು ಹೇಳಬಹುದು.

ಆತ ತ್ವರೆಯಿಂದ ತಿರುಗಿ ಹೋಗಿ ಆ ಪರಿಸ್ಥಿತಿಯಲ್ಲಿ ಏನು ಉತ್ತಮವೋ ಅದನ್ನೆ ಮಾಡಿದನು — ಮುದಿ ಡಾರ್ಲಿಂಗ ಕುದುರೆಯನ್ನೇರಿ ಫಿಟ್ಜ್‌ಪಿಯರ್ಸನ ಬೆನ್ನಿಗೆ ಕೂಡಲೆ ದೌಡು ಮಾಡಿದನು.

ಮೆಲಬರಿ ಅದೇ ತಾನೇ ಕಾಡಿನ ಹಾದಿಯನ್ನು ಹೊಕ್ಕು ನಾಗವೋಡಿಯಿಂದ ಆ ಗಾಡಿಯ ದಾರಿಯಲ್ಲಿ ಕಾಡಿನೊಳಗಿಂದ ಸಾಗಿದನು. ಆ ಹಾದಿಯು ಕೊಳೆತ ಎಲೆಗಳ ಮುದ್ದೆಯೊಳಗಿಂದ ಅಚ್ಚಿನಲ್ಲಿ ಒತ್ತಿ ತೆಗೆದಂತಿತ್ತು. ಮರ ಹೇರಿದ ಗಾಡಿಗಳು ಆಚೆ ಈಚೆಯ ಬಾಗಾಯಿತುಗಳು 'ಲೂಟಿ'ಯನ್ನು ಹೊತ್ತು ಸಾರಿಗೆ ಮಾಡುತ್ತ, ಅಗಲ ವಾದ ಆಳವಾದ ಉದ್ದ ಕುಳಿಯು ಗೆರೆ ಕೊರೆದು ಕಾಲುವೆ ತೋಡಿಕೊಟ್ಟಂತೆ ಇತ್ತು. ಮುಂದೆ ಹೋಗುತ್ತಿದ್ದಂತೆ ಒಮ್ಮೆಲೆ ಇದುರಿಗೆ ಒಂದು ಅಗಲವಾದ ಚೆಸ್ಟನಟ್ ಮರ ವನ್ನು ಸುತ್ತು ಹಾದಿಯು ತಿರುಗುವಲ್ಲಿ ಒಂದೆಡೆಗೆ ಆತ ತನ್ನ ಬ್ಲಾಸಂದ ಆಕೃತಿಯನ್ನು ಕಂಡನು. ಮೆಲಬರಿ ಡಾರ್ಲಿಂಗಿನ ಓಟವನ್ನು ತ್ವರೆಗೊಳಿಸಿದನು — ಫಿಟ್ಜ್‌ಪಿಯರ್ಸನನ್ನು ಸಂಧಿಸಿದೆನೆಂದು ಆತ ಭಾವಿಸಿದನು.

ಆದರೆ ಹತ್ತಿರ ಬಂದು ನೋಡಿದಾಗ ಕುದುರೆಯ ಬೆನ್ನ ಮೇಲೆ ಸವಾರನೇ ಇರಲಿಲ್ಲ. ಮೆಲಬರಿ ಸಮೀಪಿಸಿದುತೆ ಅದು ಮರಗಳಡಿಯಿಂದ ಚಕ್ಕಂದವಾಗಿ ಮನೆಯ ಕಡೆಗೆ ನಾನಾಲೋಟದಿಂದ ಹೋಯಿತು. ಏನೋ ಅನಾಹುತವಾಗಿರಬೇಕೆಂದು ಮೆಲಬರಿ ಊಹಿಸಿದನು. ಆ ಚೆಸ್ಟನಟ್ ಮರದಡಿಗೆ ತಲ್ಪಿದೊಡನೆ ಆತ ಕುದುರೆಯಿಂದ ಇಳಿದನು. ಒಂದೆರಡು ಮಿನಿಟು ಆಚೆ ಪರಾಂಬರಿಸಿ ಫಿಟ್ಜ್‌ಪಿಯರ್ಸನು ಅಲ್ಲಿ ನೆಲದ ಮೇಲೆ ಬಿದ್ದು ದನ್ನು ನೋಡಿದನು.

'ಓ, ಇಲ್ಲಿ ಕೈಕೊಡಿ' ಆತ ಕೂಗಿದನು, ಮೆಲಬರಿಯ ಸ್ಪರ್ಶ ಆದೊಡನೆ 'ನನ್ನನ್ನು ಕುದುರೆ ತೂರಿ ಒಗೆದು ಬಿಟ್ಟಿತು. ಆದರೆ ವಿಶೇಷ ಅಪಾಯವೇನೂ ಆಗಿಲ್ಲ ವೆಂದು ಅನಿಸುತ್ತದೆ.'

ಮೆಲಬರಿ ಆ ತರುಣನಿಗೆ 'ಬಿಗಿ'ಯಬೇಕೆಂದಿದ್ದ ಭಾಷಣವನ್ನು ಈಗ ಮಾಡಲು ಸಾಧ್ಯವೇ ಇದ್ದಿಲ್ಲ ಆದರೆ ಸ್ನೇಹ ಪ್ರದರ್ಶನವೂ ಒಂದು ಡಂಭಾಚಾರವೆನಿಸುತ್ತಿತ್ತು. ಆದ್ದರಿಂದ ಅವನು ಅಳಿಯನೊಂದಿಗೆ ಒಂದು ಶಬ್ದವನ್ನು ಆಡಲಿಲ್ಲ. ಫಿಟ್ಜ್‌ಪಿಯರ್ಸ

ನನ್ನು ಎಬ್ಬಿಸಿ ಕೂಡ್ರಿಸಿದನು. ಆತ ದಂಗುಬಡಿದಂತೆ ಪೆಟ್ಟಿನಿಂದ ಕಂಗೆಟ್ಟಂತೆ ಆಗಿದ್ದ ಹೊರತು, ಆತ ಅಂದಂತೆ ಇನ್ನೇನೂ ಅಪಾಯ ಅವನಿಗೆ ಆಗಿದ್ದಿಲ್ಲ. ಈ ಅಪಘಾತ ಹೇಗೆ ಒದಗಿಬಂತೆಂಬುದು ಊಹಿಸಲು ಶಕ್ಯವಿತ್ತು. ತನ್ನ ಕೆಳಗೆ ಡಾರ್ಲಿಂಗೇ ಇದೆಯೆಂದು ಭಾವಿಸಿ ಫಿಟ್ಝಪಿಯರ್ಸ ಹೊಸ ಎಳೆಯ ಕುದುರೆಯಿಂದ ಮೋಸ ಹೋದನು. ಆ ಕುದುರೆ ಲಾಯಕ್ಕೆ ಹೋಗುವ ಲವಲವಿಕೆಯಿಂದ ಅವನನ್ನು ಹೊತ್ತು ಹಾಕಿತು.

ಮೆಲಬರಿ ಹಳೆಯ ಮಾದರಿ ಪ್ರವಾಸಿಯಾಗಿದ್ದನು : ಶಾಟ್ಸಫೋರ್ಡಘಾರಂದಿಂದ ಆಗತಾನೇ ಬಂದುದರಿಂದ ಅವನ ಕಿಸೆಯಲ್ಲಿ ಪ್ರವಾಸಿಯ ರಂ ಮದ್ಯದ ಸೀಸೆ ಇನ್ನು ಇತ್ತು. ಹತ್ತು ಹನ್ನೆರಡು ಮೈಲಿಗಿಂತ ಹೆಚ್ಚು ದೂರದ ಪ್ರವಾಸಗಳಲ್ಲಿ ಆತ ಆ ಸೀಸೆ ಜತೆಗೆ ಒಯ್ಯುತ್ತಿದ್ದ. ಆದರೆ ಅದರಿಂದ ಆತ ವಿಶೇಷ ಕುಡಿಯುತ್ತಿದ್ದಿಲ್ಲ. ಅದನ್ನೀಗ ಸರ್ಜನ್ನನ ಗಂಟಲಲ್ಲಿ ಆತ ಹೊಯ್ದನು. ಅದರ ಪರಿಣಾಮ ಶೀಘ್ರ ಕಂಡುಬಂದಿತು. ಸರ್ಜನ್ ಬಲುಬೇಗ ಚೇತರಿಸಿಕೊಂಡನು. ಮೆಲಬರಿ ಅವನನ್ನು ಅವನ ಕಾಲ ಮೇಲೆ ನಿಲ್ಲಿಸಿದನು. ಆದರೆ ಅವನನ್ನು ಮುಂದೇನು ಮಾಡುವುದೆಂಬುದೇ ಪ್ರಶ್ನೆ ಆಗಿತ್ತು. ಕೆಲವು ಹೆಜ್ಜೆಗಿಂತ ಹೆಚ್ಚು ಆತ ನಡೆಯುವಂತೆ ಇದ್ದಿಲ್ಲ ಮತ್ತು ಆ ಇನ್ನೊಂದು ಕುದುರೆ ಹೋಗಿಬಿಟ್ಟಿತ್ತು.

ಮಹಾ ಪ್ರಯಾಸದಿಂದ ಮೆಲಬರಿ ಅವನನ್ನು ಡಾರ್ಲಿಂಗದ ಬೆನ್ನ ಮೇಲೆ ಏರಿಸಿ ಕೂಡ್ರಿಸಿ ತಾನು ಅವನ ಹಿಂದೆ ಏರಿಕೂತನು. ಮತ್ತು ಒಂದು ಭುಜದಿಂದ ಅವನ ಸೊಂಟವನ್ನು ಬಳಸಿಹಿಡಿದು ಕುದುರೆಯನ್ನು ನಡೆಯಿಸಿದನು. ಡಾರ್ಲಿಂಗದ ಬೆನ್ನು ಅಗಲವಾಗಿತ್ತು ನೇರವಾಗಿತ್ತು. ಹೆಗಲಸಂದುಗಳು ಏರಾಗಿದ್ದು ಅದು ಹಾಗೂ ಹಿಂಟೋಕ ತನಕ ಸ್ವಲ್ಪ ಅಂತರಕ್ಕೆ ಒಬ್ಬರನ್ನು ಹೊತ್ತು ಮುಂದಗತಿಯಲ್ಲಿ ಒಯ್ಯಲು ಸಮರ್ಥವಿತ್ತು.

೨೫

ವಿಂಟರಬೋರ್ನ ಹಿಂದೆ ಕೆಲಸ ಮಾಡಿದ ಕಾನುಗಳೊಳಗಿಂದ ಆ ಕುದುರೆ ಜಾಗ್ರತೆಯಿಂದ ದೃಢವಾಗಿ ಹೆಜ್ಜೆ ಇಟ್ಟು ನಡೆಯಿತು. ಹಾಗೆಯೆ ಓಕಮರಗಳು ಬೆಳೆದು ನಿಂತ ಭಾರದ ಮಣ್ಣೊಳಗಿಂದಲೂ ನಡೆಯಿತು. ಅಲ್ಲಿಂದ ಮುಂದೆ ಮಾರ್ಶಕೊಂಬ ಬಾಟಂದ ಕಡೆಗೆ — ಅಲ್ಲಿ ಮಿತಿ ಮೀರಿ ಬೆಳೆದ ಮರಗಳ ಟೊಂಗೆತೊಂಗಲುಗಳಿಂದ ನಿಬಿಡ ಕತ್ತಲೆ ಕವಿದಿತ್ತು. ಅಲ್ಲದೆ ದೆವ್ವ ಪಿಶಾಚಿಗಳ ಸುಳಿದಾಟದ ಸ್ಥಳವೆಂದೂ ಲೋಕ ಪ್ರತೀತಿ ಇತ್ತು.

ಇಷ್ಟರೊಳಗೆ ಫಿಟ್ಝಪಿಯರ್ಸ ತನ್ನ ಶಾರೀರಕ ಸಾಮರ್ಥ್ಯವನ್ನು ತಿರುಗಿ ಪಡೆದಿದ್ದನು. ಆದರೆ ಅಂದು ಮುಂಜಾನೆ ಲಂಡನ್ನಿನಲ್ಲಿ ಅವಸರದಲ್ಲಿ ತೆಗೆದುಕೊಂಡ ಉಪಾಹಾರದ ನಂತರ ಏನೂ ತಿಂದಿದ್ದಿಲ್ಲ. ಫೆಲಿಸಳ ಬಗೆಗೆ ಅವನ ಚಿಂತೆಯು ಅವನನ್ನು ಊಟ ಉಣ್ಣುವ ಮುಂಚೆಯೆ ಮನೆಯಿಂದ ಓಡಿ ಹೊರಡುವಂತೆ ಮಾಡಿತು ; ಇದರ ಫಲವಾಗಿ ಮಾವ ಕುಡಿಸಿದ ಹಳೆಯ ರಂ ಮದ್ಯ ಆ ತರುಣನ ತಲೆಗೇರಿ ಬಿಟ್ಟಿತು ಬರಿ ಹೊಟ್ಟೆಯ ಮೇಲೆ; ಮತ್ತು ಅವನ ನಾಲಿಗೆಯನ್ನು ಸಡಿಲು ಮಾಡಿತು. ತನಗೆ ಹೀಗೆ ಕೈ ನೀಡಿ ನೆರವಾದವರು ಯಾರೆಂದು ಆತ ಎಂದೂ ಗುರುತಿಸಲೇ ಇಲ್ಲ. ಮೆಲಬರಿ ಹಿಡಿದುಕೊಂಡಿರುವಾಗಲೇ ಆತ ಕಂಡಾಪಟ್ಟೆಯಾಗಿ ಅಸಂಬದ್ಧ ಮಾತುಗಳನ್ನು ಬಡಬಡಿಸಹತ್ತಿದನು.

'ನಾನು ಇಂದು ಲಂಡನ್ನಿನಿಂದ ಇಷ್ಟು ದೂರ ಬಂದೆ. ಓ ನಿಮ್ಮ ಸರಿಸಾಟಿಗಳನ್ನು ಭೆಟ್ಟಿಯಾಗಲಿಕ್ಕೆ ಅದೇ ಒಂದು ಸ್ಥಾನ. ನಾನು ಹಿಂಟೋಕಿನಲ್ಲಿ, ಅದಕ್ಕೂ ಕೆಟ್ಟ ಕಿರಿ ಹಿಂಟೋಕಿನಲ್ಲಿ, ಉಳಿಯುತ್ತೇನೆ. ಮತ್ತು ನಾನು ಇಲ್ಲಿ ಪೂರ್ತಿ ಹಾಳಾಗಿ ಹೋಗುತ್ತಿದ್ದೇನೆ. ಹಿಂಟೋಕಿನ ಹತ್ತು ಮೈಲಿಯ ಸುತ್ತಿನಲ್ಲಿ ನನ್ನನ್ನು ಅರ್ಥಮಾಡಿಕೊಳ್ಳ ಬಲ್ಲ ಮನುಷ್ಯನಿಲ್ಲ, ನಾ ಹೇಳುತ್ತೇನೆ. ಏ, ಹೆಸರೇನೊ ಗೊತ್ತಿಲ್ಲದ ಗೌಡ. ನಾನು ಶಿಕ್ಷಣ ಪಡೆದ ಮನುಷ್ಯ. ನನಗೆ ಹಲವಾರು ಭಾಷೆಗಳು ಬರುತ್ತವೆ. ಕವಿಗಳಿಗೂ ನನಗೂ ನಿಕಟಪರಿಚಯ — ಬಹಳ ಸಲಿಗೆ. ಈ ಐವತ್ತು ಮೈಲು ಸುತ್ತಿನಲ್ಲಿ ತತ್ತ್ವ ಜ್ಞಾನವನ್ನು ಇನ್ನಾರಿಗಿಂತಲೂ ಹೆಚ್ಚು ಓದಿದವನು ನಾನು. ಅದನ್ನು ಈಗ ನಾನು ಬಿಟ್ಟುಕೊಟ್ಟಂದಿನಿಂದ ಈ ಸೌಥ ಸಸೇಕ್ಸ್ ಪರಿಗಣೆಯಲ್ಲಿಯೆ ನನ್ನನ್ನು ಸರಿಗಟ್ಟಬಲ್ಲ ವಿಜ್ಞಾನಿ ಇಲ್ಲ ... ಆದರೂ ಈ ಹಿಂಟೋಕಿನಂಥ ದರಿದ್ರಕೂಪದಲ್ಲಿ ವ್ಯಾಪಾರಿಗಳೊಂದಿಗೆ ನಾನು ಬಾಳಬೇಕಾಗಿ ಬಂದಿದೆ — ನನ್ನ ಹಣೆಬರಹ.'

'ನಿಜ, ನಿಜ' ಮೆಲಬರಿ ಗೊಣಗಿದನು.

ಇಲ್ಲಿ ಫಿಟ್ಝಪಿಯರ್ಸನು, ಸೆರೆಯ ಅಮಲಿನ ಶಕ್ತಿಯಿಂದ ಸೆಟೆದೆದ್ದು ಕೂತನು, ಫಕ್ಕನೆ ಬಗ್ಗಿದ ಭಂಗಿಬಿಟ್ಟು, ಆಗ ತನ್ನ ಹೆಗಲುಗಳನ್ನು ಮೆಲಬರಿಯ ಎದೆಗೆ ಬಹಳ ಜೋರಾಗಿ ಬಡಿದನು. ಆಗ ಮುದುಕನಿಗೆ ಕುದುರೆಯ ಲಗಾಮಿನ ಮೇಲೆ ಹಿಡಿತ ವಿಟ್ಟುಕೊಳ್ಳುವುದು ಕಷ್ಟವಾಯಿತು.

'ಮಂದಿ ನನ್ನ ಗುಣ ಗ್ರಹಿಸುವುದಿಲ್ಲ. ಈ ಸುತ್ತಿನಲ್ಲಿ' ಸರ್ಜನ್ ಉದ್ಗರಿಸಿದನು. ಆ ಮೇಲೆ ದನಿ ತಗ್ಗಿಸಿ ಆತ ಮೃದುವಾಗಿ ಮೆಲ್ಲಗೆ ಮಾತು ಸೇರಿಸಿದನು — 'ಆದರೆ ಒಬ್ಬರನ್ನು ಬಿಟ್ಟು, ಒಬ್ಬರನ್ನು ಬಿಟ್ಟು — ಅದೊಂದು ಭಾವಾವೇಶದ ಜೀವ. ಜಾಣ ಳಿದ್ದಷ್ಟೇ ಭಾವದ ಕಾವುಳ್ಳವಳು. ಭಾವದ ಕಾವುಳ್ಳಷ್ಟೇ ಚೆಲುವೆ, ಚೆಲುವೆಯಿದ್ದಷ್ಟೇ ಸಿರಿವಂತೆ ; ನಾ ಹೇಳ್ತೇನೆ, ಮುದುಕಾ, ನಿನ್ನ ಈ ಹಸ್ತ ನನ್ನನ್ನು ಭಾರಿ ಬಿಗಿಯಾಗಿ ಹಿಡಿದಿವೆ. ಅಬ್ಬಾ ; ಗರುಡನ ಉಗುರುಗಳಂತೆ, ಆ ಕಾಕೇಸಸ್ ಪರ್ವತದ ಮೇಲೆ ಆ ಪ್ರೊ ... ಪ್ರೊ (ಪ್ರೊಮೆಥೂಸ್) ನ ಪಿತ್ತಾಶಯವನ್ನು ಹರಿದು ತಿಂದ ಗರುಡನಂತೆ.

ಜನ ನನ್ನ ಗುಣ ಗ್ರಹಿಸುವುದಿಲ್ಲ. ನಾ ಹೇಳ್ತೇನೆ. ಆದರೆ ಅವಳೊಬ್ಬಳನ್ನು ಬಿಟ್ಟು, ಓ, ದೇವರೆ, ನಾನೊಬ್ಬ ದೈವಗೇಡಿ. ಅವಳು ನನ್ನವಳಾಗುತ್ತಿದ್ದಳು. ಅವಳು ನನ್ನ ಹೆಸರನ್ನು ಪಡೆಯುತ್ತಿದ್ದಳು. ಆದರೆ ದುರ್ದೈವದಿಂದ ಅದು ಸಾಧ್ಯವಿಲ್ಲ. ನಾನು ನನಗಿಂತ ಕೆಳಮಟ್ಟದವಳೊಂದಿಗೆ ಕೂಡಲು ಬಗ್ಗಿದೆ. ಮತ್ತು ಅದಕ್ಕಾಗಿ ಈಗ ಹಳಹಳಿಸುತ್ತಾ ಇದ್ದೇನೆ.

ಪರಿಸ್ಥಿತಿ ಬಹಳ ಸತ್ವಪರೀಕ್ಷೆಯದಾಗಿ ಬಿಟ್ಟಿತು ಮೆಲಬರಿಗೆ,—ಶಾರೀರಕವಾಗಿಯೂ ಅಹುದು, ಮಾನಸಿಕವಾಗಿಯೂ ಅಹುದು. ಫಿಟ್ಝ್‌ಪಿಯರ್ಸನನ್ನು ಎಡ ತೋಳಿನಿಂದ ಸಾವರಿಸಿ ಸರಿಪಡಿಸಿಕೊಳ್ಳಬೇಕಾಗುತ್ತಿತ್ತು. ಆದರೆ ಅವನ ಸಂಪರ್ಕವೇ ಅಸಹ್ಯವಾಗಿತ್ತು. ಏನು ಮಾಡಬೇಕೆಂಬುದೆ ಅವನಿಗೆ ತಿಳಿಯಲಿಲ್ಲ. ಫಿಟ್ಝ್‌ಪಿಯರ್ಸನೊಂದಿಗೆ ಪ್ರತಿವಾದಿಸುವುದು ವ್ಯರ್ಥವಾಗಿತ್ತು. ಮದ್ಯದಿಂದಲೂ, ಬಿದ್ದುದರಿಂದಲೂ ಉಂಟಾದ ಅವನ ಈ ಅವಸ್ಥೆಯಲ್ಲಿ ಮೆಲಬರಿ ಮೌನವಾಗಿ ಉಳಿದನು. ತನ್ನ ಸಂಗಡಿಗನ ಮೇಲೆ ಅವನ ಹಿಡಿತವು ಮರುಕಕ್ಕಿಂತ ನಿಷ್ಠುರತೆಯಿಂದ ಬಿಗಿಯಾಗಿತ್ತು.

'ನೀನು ನನಗೆ ನೋಯಿಸುತ್ತಿರುವಿ, ಗೌಡಾ — ಅಲ್ಲ ನಿನ್ನ ಉಪಕಾರಕ್ಕಾಗಿ ನಾನು ಅಭಾರಿ. ಆದರೂ ನಾನು ಹೇಳುತ್ತೇನೆ. ಮಂದಿ ನನ್ನ ಗುಣ ಗ್ರಹಿಸುವುದಿಲ್ಲ. ನಮ್ಮಿಬ್ಬರಲ್ಲಿಯೇ ಇರಲಿ ಈ ಮಾತು — ನಾನು ಸದ್ಯ ಪ್ರಾಕ್ಟೀಸ್ ಕಳೆದುಕೊಳ್ಳುತ್ತ ಇದ್ದೇನೆ; ಇಲ್ಲಿ. ಅದೇಕೆ? ಏಕೆಂದರೆ ಅಪ್ರತಿಮ ಆಕರ್ಷಣೆ ಇದ್ದಲ್ಲಿ ನಾನು ಅಪ್ರತಿಮ ಆಕರ್ಷಣೆ ಕಾಣುತ್ತೇನೆ. ಅದು ಸ್ಥಾನಮಾನದಲ್ಲಿಯೂ ಸರಿ, ವ್ಯಕ್ತಿಯಲ್ಲಿಯೂ ಸರಿ. ಹೆಸರು ಹೇಳುವುದಿಲ್ಲ ನಾನು. ಆದ್ದರಿಂದ ಯಾರೂ ಆ ಬಗ್ಗೆ ಜಾಣರಾಗುವುದು ಬೇಡ ... ಆದರೆ ನಾನು ಅವಳನ್ನು ಕಳಕೊಂಡೆ. ಅಂದರೆ ಕಾಯಿದೆಯ ದೃಷ್ಟಿಯಿಂದ ಹೇಳುವ ಮಾತು ಇದು. ನಾನೀಗ ಸ್ವತಂತ್ರ್ಯ ಮನುಷ್ಯನಾಗಿದ್ದರೆ, ನಮ್ಮಿಬ್ಬರಲ್ಲಿ ಸಂಗತಿ ಇಂಥ ಸೂಕ್ಷ್ಮಕ್ಕೆ ಬಂದಿದೆ, ಅವಳು ನನ್ನನ್ನು ಅಲ್ಲಗಳೆಯಲಾರಳು; ಅವಳ ಆ ಸಿರಿವಂತಿಕೆಯಿಂದ (ಅದನ್ನು ನಾನು ಅದಕ್ಕಾಗಿಯೇ ಬಯಸುವುದಿಲ್ಲ.) ನನಗೆ ಒಂದು ಅವಕಾಶ ಸಿಗುವುದು, ನನ್ನ ಗೌರವದ ಮಹತ್ವಾಕಾಂಕ್ಷೆಯನ್ನು ಪೂರೈಸಿಕೊಳ್ಳಲಿಕ್ಕೆ,— ಅಂಥ ಅವಕಾಶ ಈವರೆಗೂ ನನಗೆ ಸಿಕ್ಕಿಲ್ಲ. ಮತ್ತು ಈಗ ಅದು ನನಗೆ — ಬಹುಶಃ — ಎಂದೆಂದಿಗೂ ಸಿಗಲಾರದು.'

ಮೆಲಬರಿಯ ಎದೆ ಅವನ ಬೆನ್ನೆಲುಬಿಗೆ ಬಡಿಯುತ್ತಿತ್ತು. ಅಷ್ಟು ಜೋರಾಗಿ ಬಡಿದುಕೊಳ್ಳುತ್ತಿತ್ತು ಅವನ ಮಿದುಳಿಗೆ ಕಲ್ಪನೆ ಕಿಚ್ಚು ಹಚ್ಚಿದಂತೆ ಆಗಿತ್ತು. ಆತ ಉದ್ದೀಪಿತನಾಗಿ ಕೆಳದನಿಯಲ್ಲಿ ಕೇಳಿದನು — 'ಏಕೆ?'

ಫಿಟ್ಝ್‌ಪಿಯರ್ಸ ಉತ್ತರಕೊಡುವ ಮುಂಚೆ ಕುದುರೆ ಕೆಲವು ಹೆಜ್ಜೆ ಪುಟಗಾಲು ಹಾಕಿತು. 'ಏಕೆಂದರೆ ನಾನು ಕಾಯಿದೆಯಂತೆ ಇನ್ನೊಬ್ಬಳೊಂದಿಗೆ ಕಟ್ಟಿಬಿದ್ದಿದ್ದೇನೆ; ಬಿಗಿದುಕೊಂಡಿದ್ದೇನೆ — ನಿನ್ನ ತೋಳಿನಿಂದ ನಿನ್ನೊಂದಿಗೆ ಹೇಗೋ ಹಾಗೆ. ಅಂದರೆ ನಿನ್ನ ತೋಳಿನ ಬಗ್ಗೆ ನಾನು ದೂರುತ್ತೇನೆಂದು ಅಲ್ಲ. ನನಗೆ ಸಹಾಯಮಾಡಿದ್ದಕ್ಕಾಗಿ

ನಾನು ಅಭಾರಿ. ಸರಿ. ನಾವೆಲ್ಲ ಇದ್ದೇವೆ ಇನ್ನೂ ಮನೆಗೆ ಬರಲಿಲ್ಲವೆ ? ಮನೆ ಅಂದೆನೆ ನಾನು ? ಅದು ಮನೆ — ನನ್ನ ಮನೆ. ಆ ಮನೆಯಲ್ಲಿ ನಾನು ಹೋಗಿ ಉಳಿಯು ವಂತಾಗಿದ್ದಿದ್ದರೆ !' ಮಂಕುಬಡಿದ ರೀತಿಯಲ್ಲಿ ಆತ ಒಂದು ಕೈಯನ್ನು ಪಾರ್ಕಿನ ಕಡೆಗೆ ಚಾಚಿ ತೋರಿಸಿದನು. 'ಹೀಗೆ ಕಟ್ಟಿಬೀಳಲಿಕ್ಕೆ ನಾನು ಬರೆ ಎರಡು ತಿಂಗಳು ಮುಂಚೆ ಅವಸರಪಟ್ಟೆ. ಆ ಅವಳನ್ನೆ ನಾನು ಮೊದಲಿಗೆ ನೋಡಿದ್ದರೆ.'

ಇಲ್ಲಿ ಆ ಮುದುಕನ ಭುಜವು ಡಾಕ್ಟರನನ್ನು ಗಡಗಡ ನಡುಗಿಸಿತು.

'ಎಲಾ, ಇದೇನು ಮಾಡುತ್ತಿರುವಿ?' ಆತ ಮುಂದುವರಿದನು. 'ಸುಮ್ಮನೆ ಕುಳಿತಿರು. ಇಲ್ಲವೆ ನನ್ನನ್ನು ಕೆಳಗಿಳಿಸು ; ನಾನಂದಂತೆ ಆಕೆಯನ್ನು ನಾನು ಬರೆ ಎರಡು ತಿಂಗಳಿಂದ ಕಳೆದುಕೊಂಡೆ. ಇನ್ನು ನನಗೆ ಈ ಪ್ರಪಂಚದಲ್ಲಿ ಇನ್ನೊಂದು ಅವಕಾಶವಿಲ್ಲ. ಅದೇ ನನ್ನನ್ನೂ ಅವಿಚಾರಿಯಾಗಿ ಅವಿವೇಕಿಯಾಗಿ ಮಾಡಿದೆ — ದುಡುಕೀ ದುಡುಕು ವಂತೆ ಮಾಡಿದೆ ; ಈ ಇನ್ನೊಬ್ಬಳಿಗೆ ಏನಾದರೂ ಆದರೇನೇ ಸರಿ, ಇಲ್ಲವಾದರೆ — ಇವಳೋ ಹಾಗಲ್ಲ ಚೆನ್ನಾಗಿಯೇ ಇದ್ದಾಳೆ. ಪ್ರೀತಿಗೆ ತಕ್ಕ ಸ್ವಭಾವದವಳಿದ್ದಾಳೆ; ಆದರೂ ಅವಳಿಗೇನಾದರೂ ಆದರೆ, ಈ ಕ್ಷಣಕ್ಕೆ ಅವಳು ಕಾಯಿಲೆಯೆಂದು ಕೇಳಿದ್ದೇನೆ. ಆಮೇಲೆ ಸ್ವತಂತ್ರ — ಆಮೇಲೆ ನನ್ನ ಖ್ಯಾತಿ, ನನ್ನ ಸುಖ ಎಲ್ಲ ಭದ್ರ, ಸುರಕ್ಷಿತ.'

ಆ ಮರದ ವ್ಯಾಪಾರಿಯು ಇದಿರುಗಡೆಯ ಸೀಟಿನಲ್ಲಿ ಫಿಟ್ಝಪಿಯರ್ಸ್ ಆಡಿದ ಮಾತು ಇದೆ ಕೊನೆಯವು. ಇನ್ನೂ ತನ್ನನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಏನೇನೂ ಆಗದೆ, ಮೆಲಬರಿ ಫಿಟ್ಝಪಿಯರ್ಸನ ಸೊಂಟದಿಂದ ತನ್ನ ತೋಳನ್ನು ಜಗ್ಗಿಸಿ ಎಳೆದು ಕೊಂಡು ಅವನ ಕೊರಳಪಟ್ಟಿಯನ್ನು ಹಿಡಿದನು.

'ನೀನು ಕರುಳಿಲ್ಲದ ದುಷ್ಟ, — ನಾವು ನಿನಗಾಗಿ ಮಾಡಿದ್ದೆಲ್ಲ ನೋಡಿದರೆ' ಆತ ಅದುರುವ ತುಟಿಗಳಿಂದ ಅಂದನು. 'ನೀನು ಪಡೆದ ಅವಳ ಹಣ, ನಿನಗೆ ನಾವು ಕೊಟ್ಟ ಮನೆಯಾಶ್ರಯ, ಎಲ್ಲ ನೋಡಿದರೆ—ನನಗೆ, ಈ ಜಾರ್ಜ ಮೆಲಬರಿಗೆ ನೀನು ಹೀಗೆಲ್ಲ ಹೇಳಲು ಧೈರ್ಯಪಟ್ಟೆಯೋ ? '—ಆ ಉದ್ಗಾರದೊಂದಿಗೇ ಅವನ ಹೆಗಲಿನ ಕಸುವಾದ ಬೀಸುವೊಗೆತವೂ ಬಂದಿತು. ಅದು ಆ ತರುಣನನ್ನು ತಲೆಕೆಳಗಾಗಿ ನಡುರಸ್ತೆಯಲ್ಲಿ ಒಗೆಯಿತು.

ಕೆಳಗೆ ಕೆಲವು ಬ್ರಶವುಡ್ ಬುಡಗಳ ಮೇಲೆ ಫಿಟ್ಝಫಿಯರ್ಸ್ ಧಡ್‌ನೆ ಬಿದ್ದನು. ಆ ಗಿಡಗಳನ್ನು ಅದೇ ಮುಗಿದ ಚಳಿಗಾಲದಲ್ಲಿಯೇ ಕಡಿದದ್ದು. ಡಾರ್ಲಿಂಗ್ ಕೆಲವು ಹೆಜ್ಜೆ ಮುಂದೆ ನಡೆದು ನಿಂತಿತ್ತು.

'ದೇವರು ನನ್ನನ್ನು ಕ್ಷಮಿಸಲಿ', ಮೆಲಬರಿ ಗೊಣಗುಟ್ಟಿದನು, ತಾನು ಮಾಡಿದ್ದಕ್ಕೆ ಪಶ್ಚಾತ್ತಾಪಪಟ್ಟು. 'ಅವನು ನನಗೆ ವಿಪರೀತ ವೇದನೆ ಕೊಟ್ಟ. ಸತ್ವಪರೀಕ್ಷೆಯನ್ನೇ ಮಾಡಿದ. ನಾನು ಅವನ ಕೊಲೆಯನ್ನೇ ಮಾಡಿಬಿಟ್ಟೆನೋ ಏನೋ'

ತನ್ನ ಥಡಿಯಲ್ಲಿಯೇ ಹೊರಳಿ ಅವನು ಫಿಟ್ಝಫಿಯರ್ಸ್ ಬಿದ್ದ ಸ್ಥಳದ ಕಡೆಗೆ ನೋಡಿದನು. ಅವನಿಗೆ ಪರಮಾಶ್ಚರ್ಯ—ಆ ಸರ್ಜನ್ ನಿಧಾನವಾಗಿ ಏಳುತ್ತಿದ್ದನು—

ಏನೂ ಅಪಾಯವಾಗದಿದ್ದಂತೆ, ಮತ್ತು ಎದ್ದವನೆ ಮರಗಳಲ್ಲಿ ಲಗುಬಗೆಯಿಂದ ನಡೆದು ಮರೆಯಾದನು.

ಅವನ ಹೆಜ್ಜೆಗಳ ಸದ್ದು ಅಡಗುವತನಕವೂ ಮೆಲಬರಿ ಕಿವಿಗೊಟ್ಟು ಕೇಳಿದನು. 'ದೈವದ ದಯೆ ದೊಡ್ಡದು, ಅವನು ಬಿದ್ದಲ್ಲಿ ಎಲೆಗಳ ರಾಶಿ ಇತ್ತು. ಇಲ್ಲವಾದರೆ ಇದೊಂದು ಅಪರಾಧವೇ ಆಗುತಿತ್ತು,' ಆತ ತನ್ನಷ್ಟಕ್ಕೆ ಅಂದುಕೊಂಡನು. ಆಮೇಲೆ ಅವನ ಚಿತ್ತ ಫಿಟ್ಝಪಿಯರ್ಸ್ ಆಡಿದ ಮಾತುಗಳತ್ತ ಹೊರಳಿತು. ಆಗ ಅವನ ಸಂತಾಪ ಮತ್ತೆ ಅವನಲ್ಲಿ ಉರಿದೆದ್ದಿತು. ಅದು ಇಷ್ಟು ಏರಿಬಿಟ್ಟಿತು, ಆ ಬಿದ್ದ ಪೆಟ್ಟು ಆ ಸರ್ಜನನಿಗೆ ಆಗಲೆ, ಅಲ್ಲಿಯೆ ಅಂತ್ಯವನ್ನೆ ತರಬೇಕೆಂದು ಅವನು ಇಷ್ಟಪಟ್ಟದು.

ಅವನು ಬಹಳ ದೂರಕ್ಕೆ ಸವಾರಿ ಮಾಡಿದ್ದಿಲ್ಲ. ಅಷ್ಟರಲ್ಲಿ ಅವನ ಸ್ವಂತದ ಬೂದಿಬಣ್ಣದ ಕುದುರೆ ಅಲ್ಲಿಯೇ ಕಂಟಿಗಳಲ್ಲಿ ನಿಂತದ್ದು ಆತ ನೋಡಿದನು. ಡಾರ್ಲಿಂಗನ್ನು ಒಂದು ಕ್ಷಣ ಬಿಟ್ಟು ಮೆಲಬರಿ ಮುಂದೆ ಹೋಗಿ ಆ ಎಳೆಯ ಕುದುರೆಯನ್ನು ಸುಲಭವಾಗಿ ಹಿಡಿದನು —ಆಗ ಅದು ತನ್ನ ಚಾಪಲ್ಯಕ್ಕೆ ತಾನೇ ಎದೆಗೆಟ್ಟಂತೆ ಇತ್ತು. ಅವೆರಡನ್ನು ಒಂದು ಮರಕ್ಕೆ ಗಟ್ಟಿಯಾಗಿ ಕಟ್ಟಿಟ್ಟು, ಆತ ಫಿಟ್ಝಪಿಯರ್ಸನ ಸುಳಿವೇನಾದರೂ ಇದೆಯೋ ನೋಡಬೇಕೆಂದು ಹಿಂದಕ್ಕೆ ಬಂದನು. ಕೊನೆಗೂ ತಾನು ಆ ಪಾಪಿಯೊಂದಿಗೆ ಉದ್ದೇಶಪಟ್ಟಿದ್ದಕ್ಕಿಂತ ವಿಪರೀತವಾಗಿಯೇ ನಡೆದುಕೊಂಡನೆಂದು ಅವನಿಗೆ ಮರುಕ ಅನಿಸಿತು: ಅವನು ಅಡವಿಯಲ್ಲಿ ಅತ್ತಿತ್ತ ಜಾಗ್ರತೆಯಾಗಿ ಹೆಜ್ಜೆ ಇಟ್ಟು ಅಲೆದಾಡಿದನು. ಸ್ತರದ ಮೇಲೆ ಸ್ತರವಾಗಿ ಬಿದ್ದ ಹಳೆ ಎಲೆಗಳು ಈಗ ಒರಟಾದ ಸುರುಳಿಗಳಲ್ಲಿ ಕಾಲ್ಬೆರಳು ಹುಗಿಸಿಕೊಳ್ಳುತ್ತ ಸ್ತಬ್ಧನಾಗಿ ನಿಂತು ಸುತ್ತಲೂ ನೋಡಿದನು. ರೆಂಬೆ ಕೊಂಬೆಗಳ ಜರಡಿಯೊಳಗಿಂದ ತಂಗಾಳಿ ಸೂಸಿ ಬರುತ್ತಿತ್ತು. ಕಾಂಡಗಳೂ, ಟೊಂಗೆಗಳೂ ಆಕಾಶದ ಬೆಳಕಿಗೆ ಇದಿರಾಗಿ ಎದ್ದು ನಿಂತಿದ್ದವು, ಚಾಚಿದ್ದವು. ಕಾವಲುಗಾರರಂತೆ, ದೈತ್ಯಾಕಾರದ ಮೇಣಬತ್ತಿ ಸ್ಟ್ಯಾಂಡುಗಳಂತೆ, ಶೂಲಗಳಂತೆ, ಈಟಿ-ಭರ್ಜಿಗಳಂತೆ, ಊಹೆ ರೂಪಿಸಬಹುದಾದ ಯಾವುದೇ ರೂಪವನ್ನು ತಾಳುತಿದ್ದವು. ಹುಡುಕಾಟ ಬಿಟ್ಟುಕೊಟ್ಟು ಮೆಲಬರಿ ಕುದುರೆಗಳಿದ್ದಲ್ಲಿಗೆ ಬಂದನು. ಮತ್ತು ಒಂದೊಂದು ಕೈಯಲ್ಲಿ ಒಂದೊಂದನ್ನು ಹಿಡಿದುಕೊಂಡು, ಸಾವಕಾಶವಾಗಿ ಮನೆಯ ಕಡೆಗೆ ನಡೆದನು.

ಅದೆ ದಿನ ಸಂಜೆಗೆ ಹಿಂಟೋಕ ಹಳ್ಳಿಯಿಂದ ಕಿರಿ ಹಿಂಟೋಕಿಗೆ ಒಬ್ಬ ಹುಡುಗ ತಿರುಗಿ ಬರುತಿದ್ದ. ಫಿಟ್ಝಪಿಯರ್ಸ್ ಅದೇ ಸಮಯ ಆ ದಾರಿಯಲ್ಲಿ ಮನೆಯ ಕಡೆಗೆ ಸಾಗಿದ್ದ. ಕುದುರೆಯ ಕೊರಳ ಪಟ್ಟಿಯೊಂದು ಜೀನು ಥಡಿ ದುರಸ್ತಿಯ ಮೇಸ್ತ್ರಿಯಲ್ಲಿ ರಿಪೇರಿಗಾಗಿ ಬಿದ್ದಿತ್ತು. ಅದು ಮರುದಿನ ಮುಂಜಾನೆ ಕೆಲಸಕ್ಕೆ ಬೇಕಿತ್ತು. ಅದನ್ನು ತರಲಿಕ್ಕೆ ಆ ಹುಡುಗ ರಾತ್ರಿಯಲ್ಲಿಯೇ ಹೋಗಿ ಬರಲು ಹೊರಟಿದ್ದ. ಕೊರಳ ಪಟ್ಟಿ ತನ್ನ ಕೊರಳಿಗೆ ತೊಡಿಸಿಕೊಂಡು, ಪಾರ್ಕಿನೊಳಗಿನ ಅಡ್ಡ ಹಾದಿ ಹತ್ತಿರದ್ದೆಂದು ಆ ದಾರಿ ಹಿಡಿದಿದ್ದನು. ಹೆದರಿಕೆಗೆ ಪ್ರತಿ ಮದ್ದೆಂದು ತನಗೆ ಗೊತ್ತಿದ್ದ ಒಂದು ಧಾಟಿಯಲ್ಲಿ ಸಿಳ್ಳುಹಾಕುತ್ತ ಸಾಗಿದ್ದನು.

ದಾರಿಯಲ್ಲಿ ಒಂದು ಕುದುರೆ ಎಗರಾಡುತ್ತ ತನ್ನ ಹಿಂಬದಿಗೆ ಅತ್ತಿತ್ತ ಸೋಂಕುತ್ತ ಹೋದದ್ದು ಆತನಿಗೆ ಫಕ್ಕನೆ ಗಮನಕ್ಕೆ ಬಂದಿತು. ಶತ್ರುವನ್ನೋ ಮಿತ್ರನನ್ನೋ ಯಾರನ್ನು ಅಪೇಕ್ಷಿಸಬೇಕೆಂಬುದೇನೂ ಹೊಳೆಯದೆ, ಸಿಳ್ಳನ್ನು ನಿಲ್ಲಿಸಿ ಮರಗಳಲ್ಲಿ ಹಿಂಜರಿದು ಆ ಕುದುರೆ ಮತ್ತು ಸವಾರ ಇಬ್ಬರೂ ಹಾಯ್ದು ಹೋಗುವನಕವೂ ತಡೆಯುವುದೇ ಲೇಸೆಂದು ಆ ಹುಡುಗನಿಗೆ ಮುಂಜಾಗ್ರತೆ ತೋಚಿತು. ಆ ಕುದುರೆ, ಸವಾರ ಇಬ್ಬರೂ ಸದ್ದಿಲ್ಲದೆ ಬರುತಿದ್ದರು. ಬೈಬಲಿನಲ್ಲಿ ಆತ ಓದಿದ ಮೃತ್ಯುದೇವತೆಯ ನೆನಪಾಯಿತು ಅವನಿಗೆ. ಇದರಿಂದ ಆತ ಇನ್ನಿಷ್ಟು ಮರೆಯಾಗಿ ನಿಂತನು. ಕುದುರೆಯ ಕಾಲರನ್ನು ಒಂದು ಮರದ ಮೇಲೆ ಬಿಟ್ಟು ಆತ ಅದರ ಹಿಂದೆ ಅವಿತುಕೊಂಡನು. ಆ ಕುದುರೆ ಸವಾರ ಮುಂದೆ ಬಂದನು. ಹುಡುಗನ ಕಣ್ಣು ದುರ್ಬೀನಿನಂತಿದ್ದವು. ಅವನು ತತ್‌ಕ್ಷಣ ಡಾಕ್ಟರನನ್ನು ಗುರುತಿಸಿದನು — ಆಗ ಅವನಿಗೆ ಹೊರೆ ಇಳಿದಂತೆ ಅನಿಸಿತು.

ಮೆಲಬರಿ ತರ್ಕಿಸಿದಂತೆ ಕತ್ತಲೆಯಲ್ಲಿ ಬ್ಲಾಸಂಅನ್ನು ಡಾ ರ್ಲಿ ಂ ಗೆ ಂ ದು ಫಿಟ್ಝ್‌ಪಿಯರ್ಸ್ ಭಾವಿಸಿ ಏರಿ ಹೊರಟನು. ಅಲ್ಲಿಂದ ಮುಂದೆ ಆ ಹುಡುಗ ಅವಿತ ಸ್ಥಳದ ಇದುರಿಗೆ ಬಂದಾಗಲೂ ತನ್ನ ತಪ್ಪನ್ನು ಆತ ತಿಳಿದಿರಲಿಲ್ಲ. ಆದರೆ ತನ್ನ ವಾಡಿಕೆಯ ಶಾಂತ ಕುದುರೆ ಈಗೇಕೆ ಇಷ್ಟು ಸುಟಿಯಾಗಿ ಪುಟಗಾಲು ಹಾಕುತ್ತಿದೆಯೆಂದು ಅವನಿಗೆ ಸೋಜಿಗವಾಗದೆ ಇರಲಿಲ್ಲ. ಆ ಸ್ಥಳದಲ್ಲಿ ಆ ಗಾಡಿಕಾರ ಹುಡುಗನ ಕಣ್ಣಿನಷ್ಟೆ ಚುರುಕಾದ ಕಣ್ಣೆಂದರೆ ಆ ಕುದುರೆಯದಾಗಿತ್ತು. ಅಂಥ ಪ್ರಾಣಿಗಳು ವಾಡಿಕೆಗೆ ಹೊರತಾದ ಯಾವ ಸಂಗತಿಗೂ ತೀವ್ರ ನಿಷೇಧವನ್ನು ಕಾಣಿಸುತ್ತವೆ. ಅದಕ್ಕೆ ಅನುಗುಣವಾಗಿ ಬ್ಲಾಸಂ ಮರದ ಕೆಳಗೆ ಒಂದು ಕಾಲರು (ಕೊರಳು ಪಟ್ಟಿಯನ್ನು) ಕಂಡು — ಅದು ಫಿಟ್ಝ್‌ಪಿಯರ್ಸನ ಕ ಣ್ಣಿ ಗೆ ಬಿದ್ದಿದ್ದಿಲ್ಲ — ಡಾರ್ಲಿಂಗನಂತೆ ಯಾವ ತಾಳ್ಮೆಯನ್ನು ತೋರಿಸದೆ ಸಿಡುಕಿನಿಂದ ಸಿಡಿದು ಹಾರಿತು. ಅಷ್ಟೇನು ಪಕ್ಕಾ ಸವಾರನಲ್ಲದ ಸರ್ಜನನನ್ನು ಅದು ಕೆಳಗೆ ಒಗೆಯಿತು.

ಆತ ಬಿದ್ದಲ್ಲಿಯೇ ಬಿದ್ದುಳಿದ. ಅಲುಗಾಡಲೇ ಇಲ್ಲ. ಮೆಲಬರಿ ಅವನನ್ನು ಅನಂತರ ಅದೆ ಅವಸ್ಥೆಯಲ್ಲಿ ನೋಡಿದನು. ಆ ಹುಡುಗ ಅಲ್ಲಿಂದ ಕಾಲುಕಿತ್ತನು — ಡಾಕ್ಟರರನ್ನು ಹಾಗೆ ಬಿಕ್ಕಟ್ಟಿನಲ್ಲಿ ಕೈಬಿಟ್ಟು ಓಡಿದ್ದಕ್ಕೆ ಬದಲಾಗಿ, ಹಿಂಟೋಕ ಸೇರಿದ ಮೇಲೆ ಈ ಅಪಘಾತದ ಭೀಕರ ವಾರ್ತೆಯನ್ನು ಅಲ್ಲಿ ಜೋರಾಗಿ ಹಬ್ಬಿಸಬೇಕೆಂಬ ಹಂಬಲದಿಂದ ತನ್ನ ಮನಸ್ಸನ್ನು ಸಂತೈಸಿಕೊಂಡನು: ಮತ್ತು ಹಾಗೆಯೇ ಮಾಡಿದನು ಆ ಘಟನೆಯ ಹಂದರಕ್ಕೆ ಭಯಾನಕ ನಾಟಕೀಯ ವಿವರಗಳ ಭಾರದ ಕವಚವನ್ನು ತೊಡಿಸಿದನು.

ಗ್ರೇಸಳು ತಿರುಗಿ ಬಂದಿದ್ದಳು. ಶಾಟ್ಸ್‌ಫೋರ್ಡ್ ಪೋರಂನಿಂದ ಅವಳಿಗಾಗಿ ಬಾಡಿಗೆಗಾಗಿ ತರಿಸಿದ ಎಕ್ಕಾಗಾಡಿಗೆ, ಅದನ್ನು ಅವಳ ಗಂಡ ತರಿಸಿದ್ದಿಲ್ಲವಾದರೂ — ಬಾಡಿಗೆ ತೆತ್ತು ಅದನ್ನು ತಿರುಗಿ ಕಳುಹಿಸಿ ಆಗಿತ್ತು. ಆ ಉದ್ದ ಪ್ರವಾಸವು ಅವಳನ್ನು

ಚೇತರಿಸಿಕೊಳ್ಳುವಂತೆ ಮಾಡಿತ್ತು. ಅವಳ ಬೇನೆಯು ಮೈಗಿಂತ ಹೆಚ್ಚು ಮನಸ್ಸಿಗೆ ಸಂಬಂಧಿಸಿದ್ದು, ಕಾಲಕಾಲಕ್ಕೆ ಬರುವ ನರಗುಂದುವ ಜ್ವರದಂತೆ ವಿಕಾರವಾಗಿತ್ತು. ಅವಳು ತನ್ನ ಕೂಡ್ರುವ ಕೋಣೆಗೆ ತುಸಂ ಗೆಲುವಿನ ವೃತ್ತಿಯಲ್ಲಿಯೆ ಏರಿಹೋದಳು. ಅವಳು ಬಂದೊಡನೆ ಮಲತಾಯಿಯು ಅವಳ ಗಂಡ ಲಂಡನ್ನಿನಿಂದ ಮರಳಿಬಂದದ್ದನ್ನು ಅವಳಿಗೆ ಹೇಳಿದ್ದಳು. ಬಂದೊಡನೆ ಅವನು ಯಾವುದೋ ರೋಗಿಯನ್ನು ನೋಡಲು ಹೋಗಿರಬೇಕು. ಆತ ಲಗು ಮರಳಬಹುದು. ಏಕೆಂದರೆ ಆತ ಊಟವಾಗಲಿ ಚಹ ವಾಗಲಿ ತೆಗೆದುಕೊಂಡಿದ್ದಿಲ್ಲ. ಆತ ಎಲ್ಲಿಗೆ ಹೋಗಿರಬಹುದೆಂಬುದರ ಬಗೆಗೆ ಗ್ರೇಸ ಯಾವ ಸಂದೇಹಗಳಿಗೂ ತನ್ನ ಮನಸ್ಸಿನಲ್ಲಿ ಆಶ್ರಯ ಕೊಡಲಿಲ್ಲ ಮತ್ತು ಅವಳ ಮಲ ತಾಯಿಯೂ. ಶ್ರೀಮತಿ ಚಾರ್ಮಂದಳ ದುಃಖ ಹಾಗೂ ದೇಶಾಂತರಕ್ಕೆ ಹೋಗುವ ವಿಚಾರವಾಗಿ ಯಾವ ವಾರ್ತೆಗಳನ್ನೂ ಅವಳಿಗೆ ಹೇಳಲಿಲ್ಲ.

ಆದ್ದರಿಂದ ಆ ತರುಣ ಸತಿಯು ಮೌನವಾಗಿ ಪ್ರತೀಕ್ಷಿಸುತ್ತ ಬೆಂಕಿಯ ಬಳಿಗೆ ಕುಳಿತು ಉಳಿದಳು. ಗಂಡನ ಕುರಿತು ತಿರಸ್ಕಾರದ ಒಂದು ಚಿತ್ತಕ್ಷೋಭದಲ್ಲಿ ಅವಳು ಹಿಂಟೋಕ ಹಳ್ಳಿಯನ್ನು ಬಿಟ್ಟು ಹೋಗಿದ್ದಳು. ಶ್ರೀಮತಿ ಚಾರ್ಮಂದಳ ಆತ್ಮ ನಿವೇದನೆಯ ನಂತರ, ಮತ್ತು ಆತ ಮನೆಗೆ ಮರಳಿದಾಗ ತಾನು ಮನೆಯಲ್ಲಿ ಇರಕೂಡ ದೆಂದು ನಿರ್ಧರಿಸಿದ್ದಳು. ಆದರೆ ಅವಳು ಈ ವಿಷಯವನ್ನು ಪುನರ್ವಿಮರ್ಶಿಸಿ, ತಂದೆಯ ಪ್ರಭಾವಕ್ಕೆ ಒಳಪಟ್ಟು ತಿರುಗಿ ಬರಲು ಒಪ್ಪಿದಳು. ಆಗ ತನಗಿಂತ ಮೊದಲೇ ಎಡ್ರೆಡ್ ಬಂದನೆಂದು ಕೇಳಿ ಅವಳು ಕೆಲಮಟ್ಟಿಗೆ ಪಶ್ಚಾತ್ತಾಪಪಟ್ಟಳು.

ಹಾಗೆಯೆ ಸ್ವಲ್ಪ ಹೊತ್ತಿನ ಮೇಲೆ, ಮೆಲಬರಿಯ ಹೆಂಡತಿ ಮೇಲೆ ಬಂದಳು— ಥಕ್ಕನೆ ಮತ್ತು ತುಸು ಗಾಬರಿ ಗಡಿಬಿಡಿಯಲ್ಲಿ.

'ನಿನಗೇನೊ ಹೇಳಬೇಕಾಗಿದೆ — ಏನೋ ಕೆಟ್ಟಸುದ್ದಿ', ಆಕೆ ಅಂದಳು. 'ಆದರೆ ನೀನು ಗಾಬರಿ ಆಗಬಾರದು. ಅದು ಆಗಬಹುದಾದಷ್ಟು ಕೆಟ್ಟದ್ದಲ್ಲ. ಎಡ್ರೆಡ್ ಕುದುರೆಯಿಂದ ಕೆಳಗೆ ಒಗೆಯಲ್ಪಟ್ಟನು. ಅವನಿಗೆ ವಿಶೇಷ ಅಪಾಯವಾಗಿರಲಿಕ್ಕಿಲ್ಲ. ಮಾರ್ಶಕೊಂಬ ಬಾಟಂದ ಆಚೆಯ ಅಡವಿಯಲ್ಲಿ ಆ ಅಪಘಾತ ನಡೆಯಿತಂತೆ.' ಆಮೇಲೆ ಅವಳು ಅಪಘಾತದ ಕೆಲವು ವಿವರಗಳನ್ನು ಹೇಳಿದಳು. ಆದರೆ ಆ ಹುಡುಗ ಪ್ರಚಾರಗೊಳಿಸಿದ ಕಪೋಲಕಲ್ಪಿತ ಭಯಾನಕ ಸಂಗತಿಗಳನ್ನೇನೂ ಹೇಳಲಿಲ್ಲ. 'ಅಲ್ಲಿ ಅವನು ಮನೆಗೆ ನಡೆದು ಬರಲು ಆಗದೆ ಯಾರಾದರೂ ಅವನನ್ನು ಹೊತ್ತು ತರುವಂತೆ ಆದರೆ — ನಿನಗೆ ಈಗಲೆ ಹೇಳಿಡುವುದು ಕ್ಷೇಮವೆನಿಸಿತು ನನಗೆ.'

ತಾನು ಹೇಳಿದ್ದಕ್ಕಿಂತ ನಡೆದ ಸಂಗತಿ ಬಹಳ ಕೆಟ್ಟದೆಂದು ಶ್ರೀಮತಿ ಮೆಲಬರಿ ಭಾವಿಸಿದ್ದಳು ; ಮತ್ತು ಗ್ರೇಸಳಿಗೂ ಗೊತ್ತಾಯಿತು, ಅವಳ ಆಶಾಭಾವನೆ. ಅವಳು ಕೆಲ ನಿಮಿಷ ಮಂಕು ಬಡಿದವಳಂತೆ ಕೂತುಳಿದಳು. ಅವಳಿಗಾಗಿ ಏನಾದರೂ ಮಾಡ ಬೇಕೆಂಬ ಮಲತಾಯಿಯ ಪ್ರಶ್ನೆಗೆ ಅವಳು ಬೇಡವೆಂದು ಉತ್ತರ ಕೊಟ್ಟಳು.

'ಓ, ಹೌದು. ಆ ಮಲಗುವ ಕೋಣೆಗೆ ಹೋಗಿ ಅಲ್ಲಿ ಎಲ್ಲಾ ಸರಿ ಇದೆಯೋ

ನೋಡಂ, ಏನಾದರೂ ಗಂಭೀರವೇ ಆಗಿದ್ದಲ್ಲಿ—', ಆಗ ಮೆಲಬರಿಯಮ್ಮ ಆಲಿವರಳನ್ನು ಕರೆದಂ, ಇಬ್ಬರೂ ಗ್ರೇಸಳಂ ಅಂದಂತೆ ಮಾಡಿದರು. ಅಪಾಯಗೊಂಡವನು ಬಂದಾಗ ಅವನಿಗೆ ಅಗತ್ಯ ಬೀಳಬಹುದೆಂದು ಅವರು ಊಹಿಸಿದ ಎಲ್ಲ ಸಂಗತಿಗಳನ್ನೂ ಆ ಕೋಣೆಯಲ್ಲಿ ಅಣಿಮಾಡಿ ಇಟ್ಟರು.

ಮನೆಯ ಕೆಳಗಿನ ಅಂಕಣದಲ್ಲಿ ಯಾರನ್ನೂ ಉಳಿಯಗೊಡಲಿಲ್ಲ. ಕೆಲವು ನಿಮಿಷ ಕಳೆಯಲಿಲ್ಲ. ಗ್ರೇಸಳು ಕದತಟ್ಟಿದ ಸದ್ದನ್ನು ಕೇಳಿದಳು — ಒಂದೇ ಒಂದು ಸದ್ದು, ಮಲಗುವ ಕೋಣೆಯಲ್ಲಿದ್ದವರ ಕಿವಿಗೆ ಮುಟ್ಟುವಷ್ಟು ದೊಡ್ಡದೂ ಅಲ್ಲ.

ಅವಳು ಮಾಳಿಗೆ ನಿಚ್ಚಣಿಗೆಯ ಮೇಲ್ತುದಿಗೆ ಬಂದು ಅಲ್ಲಿ ನಿಂತು ಮಂದವಾಗಿ ಅಂದಳು: ' ಮೇಲೆ ಬಾ ' ಅವಳಿಗೆ ಗೊತ್ತು, ಅಂಥ ಮನೆಗಳಲ್ಲಿ ಬಾಗಿಲಂ ತೆರೆದೇ ಇರುತ್ತವೆಂದು. ಆ ಅಗಲವಾದ ತುದಿ ಮೆಟ್ಟಲ ಸ್ಥಳದ ಮಬ್ಬುಗತ್ತಲಲ್ಲಿ ತಂಸು ಹಿಂದೆ ಸರಿದು ನಿಂತಂ ಅವಳು, ಒಬ್ಬ ಹೆಂಗಸಂ ಮೆಟ್ಟಲೇರಿ ಬರುವುದನ್ನು ಕಂಡಳು. ಅವಳನ್ನು ಆಕೆ ಮೊದಲಿಗೆ ಗುರುತಿಸಲಿಲ್ಲ. ಆದರೆ, ಅವಳ ದನಿಯಿಂದ ಗುರುತು ಹತ್ತಿತ್ತು. ಅವಳು ಸೂಕೆ ದಾಮಸನ್ ಎಂದು. ಆ ದನಿ ವಿಪರೀತ ಗಾಬರಿ ಮತ್ತು ಶೋಕದಿಂದ ಕೂಡಿತ್ತು. ಗ್ರೇಸಳ ಕೋಣೆಯ ಬಾಗಿಲ ಅರೆ ಮುಚ್ಚಿದ ಕದದೊಳಗಿಂದ ತೂರಿಬಂದ ಬೆಳಕಿನ ಕಂಬಿಯು ಅವಳ ಮೋರೆಯ ಮೇಲೆ ಬಿದ್ದಿತು. ಆ ಮೋರೆ ಬಿಗುವಾಗಿತ್ತು, ಕಳೆಗುಂದಿತ್ತು.

' ಓ ಮೆಲಬರಿ ಮಗಳೇ ; ಅಲ್ಲ, ಫಿಟ್ಝಪಿಯರ್ಸ ಅಮ್ಮಾ ' ಅವಳು ಕೈಗಳನ್ನು ತಿರುಪಿಕೊಳ್ಳುತ್ತ ಅಂದಳು. ' ಇದು ಭಯಂಕರ ಸುದ್ದಿ — ಅವರು ತೀರಿದರೆ? ಅಷ್ಟು ಕೆಟ್ಟ ನೋವು ಆಗಿದೆಯೇ? ಹೇಳಿ, ನನಗೆ ಹೇಳಿ. ನನಗೆ ಬರದೆ ಇರಲಿಕ್ಕೇ ಆಗಲಿಲ್ಲ — ಕ್ಷಮಿಸಿ, ಮೆಲಬರಿ ಮಗ...ಅಲ್ಲ ಫಿಟ್ಝಪಿಯರ್ಸಮ್ಮನವರೇ ಅನ್ನಬೇಕು ನಾನಂ.'

ಅಲ್ಲಿಯೆ ಇದ್ದ ಓಕಮರದ ದೊಡ್ಡ ಪೆಟ್ಟಿಗೆಯ ಮೇಲೆ ಗ್ರೇಸ ಕುಸಿದು ಕೂತಳು. ತನ್ನ ಕೈಗಳನ್ನು ಮೋರೆಗೆ ಒಡಿದುಕೊಂಡಳು—ಆ ಮೋರೆ, ತಲೆ ಈಗ ಕೆಂಪೇರಿತ್ತು ರಕ್ತದ ಒತ್ತಡದಿಂದ. ಈ ಸೂಕೆ ದಾಮಸನಳನ್ನು ಅವಳು ಕೂಡಲೆ ಮಾಳಿಗೆ ಇಳಿದು ಮನೆ ಬಿದ್ದು ಹೊರಡಲು ಆಜ್ಞಾಪಿಸಬೇಕೆ? ಇನ್ನು ಯಾವ ಗಳಿಗೆಗೂ ತನ್ನ ಗಂಡನನ್ನು ಹೊತ್ತಿ ತರಬಹುದು. ಮತ್ತು ಆಗ ಏನಾಗಬಹುದು? ಆದರೆ ನಿಜವಾಗಿಯೂ ಕಳವಳಗೊಂಡು ಬಂದ ಹೆಂಗಸಿಗೆ ತಾನು ಹೊರಗೆ ಹೋಗೆಂದು ಅಪ್ಪಣೆ ಕೊಡಬಹುದೆ?

ಒಂದು ಅರೆಗಳಿಗೆ ಪೂರ್ತಿ ಮೌನ ನೆಲೆಸಿತು. ಕೊನೆಗೆ ಸೂಕೆಯೆ ಅಂದಳು, ' ಏಕೆ ಮಾತಾಡುವುದಿಲ್ಲ? ಅವರು ಇಲ್ಲಿ ಇದ್ದಾರೆಯೇ? ಅವರು — ತೀರಿ ಹೋದರೆ? ಹಾಗಿದ್ದರೆ ನಾವೇಕೆ ಅವರನ್ನು ನೋಡಬಾರದು? ಅದೇನು ಅಷ್ಟು ತಪ್ಪಾಗುವುದೊ? '

ಗ್ರೇಸಳು ಉತ್ತರಕೊಡುವ ಮುಂಚೆಯೆ, ಕೆಳಗೆ ಬಾಗಿಲಿಗೆ ಇನ್ನಾರೊ ಒಬ್ಬರು ಬಂದರು — ಆ ಹೆಜ್ಜೆ ಹೆಣ್ಣು ಜಿಂಕೆಯ ಹೆಜ್ಜೆಯಂತೆ ಹಗುರಾಗಿತ್ತು. ಕದದ ಹಲಿಗೆಯ ಮೇಲೆ ಅವಸರದ ಬಡಿತವಾಯಿತು. ಬಡಿದ ಬೆರಳುಗಳು ತಾಳ್ಮೆಗೆಟ್ಟಂತೆ — ಬಾಗಿಲು ತಟ್ಟಲು ಒಂದು ಸುತ್ತಿಗೆಯೂ ಇದೆಯೊ ಇಲ್ಲವೋ ಎಂದು ಆ ಬೆರಳುಳ್ಳ ವ್ಯಕ್ತಿ ಆಲೋಚಿಸಲೆ ಇಲ್ಲವೆಂಬಂತೆ. ತಡೆಯದೆ, ಮಾಳಿಗೆಯ ತುದಿಗೆ ಬಿದ್ದ ಬೆಳಕಿನ ಕಿಂಡಿಯಿಂದ ದಾರಿಯನ್ನು ಕಂಡುಕೊಂಡು ಆ ಹೊಸ ಆಗಂತುಕ ವ್ಯಕ್ತಿ, ಮೊದಲಿನ ಅವಳಂತೆಯೇ ಮೆಟ್ಟಲುಗಳನ್ನೇರಿ ಬಂದಿತು. ಗ್ರೇಸಳು ದಿಗಿಲುಬಿದ್ದಳು. ಬಂದವಳು ಒಬ್ಬ ಗೌರವಸ್ಥ ಮಹಿಳೆ. ಗ್ರೇಸಳು ಸಾಕಷ್ಟು ಕಾಣಿಸುತ್ತಿದ್ದಳು. ಬಂದವಳು ಅವಳ ಬದಿಗೆ ಬಂದು ನಿಂತಳು.

'ಕೆಳಗೆ ಯಾರಿಗೂ ನಾನು ಕೇಳಿಸಲಿಲ್ಲ.' ಫೆಲಿಸ್ ಚಾರ್ಮಂದ ಅಂದಳು. ಅವಳ ತುಟಿಗಳ ಶುಷ್ಕತೆಯೆ ಕೇಳಿಸುವಂತಿತ್ತು. ಅವಳು ಏದುತ್ತಿದ್ದಳು. ದುಃಖ-ವ್ಯಥೆಯಿಂದ ನಿಂತಲ್ಲಿಯೇ ನೆಲಕ್ಕೆ ಕುಸಿಯುವಂತಿದ್ದಳು, 'ಏನು ಏನಾಯಿತು? ಆದ ಅನಿಷ್ಟ, ಅರಿಷ್ಟ, ಅತಿ ಕೆಟ್ಟದ್ದೇ ಆದರೂ ಹೇಳು. ಆತ ಬದುಕಬಹುದೆ?'

ಆಕೆ ಗ್ರೇಸಳನ್ನು ಕಕುಲಾತಿಯಿಂದ ಅಂಗಲಾಚಿ ನೋಡಿದಳು. ಸೂಕೆ ದಾಮಸನ್ ಅವಳ ಕಣ್ಣಿಗೆ ಬೀಳಲಿಲ್ಲ. ಸೂಕೆ ಇಂಥ ಮಹಿಳೆಯ ಆಗಮನಕ್ಕೆ ಚಕಿತಳಾಗಿ ಕತ್ತಲೆಯಲ್ಲಿ ಮೈಮುದುಡಿಕೊಂಡು ಹಿಂದೆ ಸರಿದಳು. ಶ್ರೀಮತಿ ಚಾರ್ಮಂದಳ ಪುಟ್ಟ ಪಾದಗಳಿಗೆ ಕೆಸರು ಬಳಿದಿತ್ತು. ಅವಳಿಗೆ ತಾನು ಹೇಗೆ ಕಾಣುವೆನೆಂಬುದರ ಅರಿವು–ಪರಿವೆಯಾವದೂ ಇದ್ದಿಲ್ಲ.

'ನಾನು ಏನೊ ಭಯಂಕರ ವರದಿ ಕೇಳಿದೆ' ಆಕೆ ಮುಂದುವರಿದಳು. 'ಸತ್ಯವನ್ನು ಖ ಚಿ ತ ಮಾ ಡಿ ಕೊ ಳ್ಳೋ ಣ ವೆಂ ದು ಬಂದೆ. ಅವನು — ಅವನು ಕೊಲ್ಲಲ್ಪಟ್ಟನೇ?'

'ಅವಳು ನಮಗೆ ಹೇಳುವುದಿಲ್ಲ, — ಅವರು ಸಾಯ್ತಾ ಇದಾರೆ, — ಅವರು ಅಲ್ಲಿ ಆ ಕೋಣೆಯಲ್ಲಿದ್ದಾರೆ.' ಸೂಕೆ ಸ್ಫೋಟಗೊಂಡು ನುಡಿದಳು — ಪರಿಣಾಮದ ಪರಿವೆ ಇಲ್ಲದೆ, — ಪಡಸಾಲೆಯ ಆ ತುದಿಗೆ ಮಲಗುವ ಕೋಣೆಯಲ್ಲಿ ಮೆಲಬರಿಯನ್ನು ಮತ್ತು ಆಲಿವರರ ಚಲನವಲನಗಳ ದೂರದ ಸದ್ದನ್ನು ಕೇಳಿ.

'ಎಲ್ಲಿ?' ಚಾರ್ಮಂದ ಅಂದಳು; ಸೂಕೆ ಬೆರಳೆತ್ತಿ ಆ ಸಿಟ್ಟಿನಲ್ಲಿ ಕಾಣಿಸಿದೊಡನೆ ಅವಳು ಅಲ್ಲಿಗೆ ಹೋಗಲು ಮಾಡಿದಳು.

ಗ್ರೇಸ ದಾರಿಯನ್ನು ಅಡ್ಡಗಟ್ಟಿದಳು.

'ಅವನು ಅಲ್ಲಿ ಇಲ್ಲ' ಆಕೆ ಅಂದಳು. 'ನಾನೂ ನಿನ್ನಂತೆಯೇ ಅವನನ್ನು ಇನ್ನೂ ನೋಡಿಲ್ಲ. ನಾನು ಬರೆ ವರದಿಯನ್ನು ಮಾತ್ರ ಕೇಳಿದ್ದೇನೆ — ಆದರೆ ನೀನು ಕೇಳಿದಷ್ಟು ಕೆಟ್ಟದ್ದಲ್ಲ. ನಿನಗೆ ಅದನ್ನು ಯಾರೊ ಅತಿರಂಜಿತಮಾಡಿ ಹೇಳಿರಬೇಕು.'

'ದಯಮಾಡಿ ಏನೂ ಬಚ್ಚಿಡಬೇಡ — ನನಗೆ ಎಲ್ಲವೂ ಗೊತ್ತಾಗಲಿ ' ಫೆಲಿಸ್ ಸಂಶಯದಿಂದಲೆ ಅಂದಳು.

'ನನಗೆ ಗೊತ್ತಾದದ್ದೆಲ್ಲವೂ ನಿನಗೆ ಗೊತ್ತಾಗುತ್ತದೆ. ನಿಜವಾಗಿಯೂ ನಿನಗೆ ಅವನ ಮಲಗುವ ಕೋಣೆಯಲ್ಲಿ ಹೋಗಲು ಪೂರ್ಣ ಅಧಿಕಾರವಿದೆ. ನಿಮ್ಮಿಬ್ಬರಿಗಿಂತ ಹೆಚ್ಚು ಇನ್ನಾರಿಗಿದೆ?' ಗ್ರೇಸ ಅಂದಳು, ನವಿರಾದ ಮೊನೆಯಿಟ್ಟು. ಆದರೆ ಅದರ ತಿವಿತ ಅವರಿಬ್ಬರ ಮೇಲೂ ವ್ಯರ್ಥವಾಯಿತು. ಅವಳು ಅಡ್ಡಗಟ್ಟುವುದನ್ನು ತಡೆದು, ಫೆಲಿಸಳನ್ನು ಆ ಕೋಣೆಯ ಬಾಗಿಲತನಕ ಒಯ್ದಳು ಮತ್ತು ಕದಗಳನ್ನು ದೂಡಿ ತೆರೆದಳು. 'ನಾವು ಹೆಂಡಿರೆಲ್ಲ ಒಟ್ಟಾಗಿಯೆ ಪ್ರವೇಶಿಸೋಣ. ನಾನು ಇನ್ನೊಮ್ಮೆ ಹೇಳುತ್ತೇನೆ. ನೀವು ಕೇಳಿದ್ದಕ್ಕಿಂತ ಕಡಿಮೆ ಗಾಬರಿಯ ವರದಿ ನಾನು ಕೇಳಿದ್ದು. ಅದು ಎಷ್ಟು ಹೆಚ್ಚು ಎಷ್ಟು ಕಡಿಮೆ, ನಾ ಹೇಳಲಾರೆ. ಆದರೆ ದೇವರಲ್ಲಿ ನನ್ನ ಪ್ರಾರ್ಥನೆ ಇಷ್ಟೇ — ಅದು ವಿಶೇಷವೇನೂ ಆಗದಿರಲಿ — ಇದು ಸಾಮಾನ್ಯ ಮಾನವ್ಯ — ಮರುಕದ ಸಂಗತಿ; ನೀವೂ ಬಹುಶಃ ಹಾಗೆಯೇ ಪ್ರಾರ್ಥಿಸುವಿರಿ — ಆದರೆ ಬೇರೆ ಕಾರಣದಿಂದ.'

ಆಮೇಲೆ ಅವರಿಬ್ಬರನ್ನು ಅವಳು ಅಲ್ಲಿ ಆ ಮಬ್ಬು ಬೆಳಕಿನಲ್ಲಿ ಸ್ವಲ್ಪ ಹೊತ್ತು ನೋಡುತ್ತ ನಿಂತಳು. ಫಿಟ್ಜ್‌ಪಿಯರ್ಸನ ಬರಿದಾದ ಮಂಚದ ಸುತ್ತಲು ಅವಳೊಂದಿಗೆ ಅವರು ಮೂಕವೇದನೆಯಲ್ಲಿ ಅದನ್ನೂ, ದಿಂಬಿನ ಮೇಲೆ ಇದ್ದ ಅವನ ರಾತ್ರೆಯಂಗಿ ಯನ್ನೂ ದಿಟ್ಟಿಸುತ್ತ ನಿಂತಿದ್ದರು: ಅವರು ಅವಳ ಚುಚ್ಚು ಮಾತಿಗೆ ತಿರುಗಿ ಚುಚ್ಚಿ ನುಡಿಯಲಿಲ್ಲ, ಅವಳ ವೃತ್ತಿಯನ್ನೆ ಅವರು ಲಕ್ಷಿಸಲಿಲ್ಲ. ಆಗ ಗ್ರೇಸಳ ಮುಖದ ಮೇಲೆ ಹನಿಮಂಜಿನಂತೆ ಒಂದು ಕೋಮಲಭಾವ ಕವಿಯಿತು. ರೂಢಿಯಂತೆ ಹೆಂಡತಿಯೆಂಬವಳ ಸದ್ಗುಣದ ಉಪಹಾಸದ ಕ್ರಮಬದ್ಧ ಮಾತಿನಲ್ಲಿ ಅವರಿಬ್ಬರನ್ನೂ, ಹೆಂಗಸು, ಪ್ರಾಣಿ, ಪಾತ್ರ — ಎಂದೆಲ್ಲ ಸಂಬೋಧಿಸುವುದು ಸರಿಯೇ ಇತ್ತು. ಆದರೆ ಜೀವನ? ಅದು, ಹಾಗೆಂದರೆ, ಕೊನೆಗೂ ಏನು? ಬೈಬಲ್ಲಿನೊಳಗೆ ಅಸಫನ ಪ್ರಾರ್ಥನೆ (ಸಾಮ ಸೂಕ್ತ) ಯ ಉದ್ಗಾತೃವಿನಂತೆ ಅವಳೂ ದಿನವಿಡಿ, ಪೀಡೆ ಪಟ್ಟಿದ್ದಳು, ದಂಡನೆ ಪಟ್ಟಿದ್ದಳು; ಆದರೆ ಪ್ರಾಯಶ್ಚಿತ್ತದ ಮಾತಿನಲ್ಲಿ ಆತ್ಮಸಂತೋಷ ಕ್ಕಾಗಿ ಅವಳೂ ಒಬ್ಬ ವ್ಯಕ್ತಿಯಾಗಿ ಒಂದು ತಲೆಮಾರಿನ ವಿರುದ್ಧ ಆ ಉದ್ಗಾತನಂತೆ ಅಪರಾಧ ಮಾಡಬಹುದೆ?

'ಅವರು ಸಾಯುತ್ತಿರಬಹುದು —' ಸೂಕೆ ದಾಮಸನ್ ಅಂಗಿಯ ಅಂಚಿನಿಂದ ಕಣ್ಣು ಒರಸಿಕೊಳ್ಳುತ್ತ ಬಿಕ್ಕಿದಳು.

ಅವರ ಮೋರೆಗಳಲ್ಲಿ, ಹಾವಭಾವಗಳಲ್ಲಿ ಚಿಂತೆ, ಪ್ರೀತಿ, ಎದೆಗುದಿ — ಎಲ್ಲ ಅವರಿಗೆ ದ್ರೋಹ ಬಗೆದ ಮನುಷ್ಯನ ಬಗೆಗೆ ಇದ್ದವು. ಸ್ವಾರ್ಥದಿಂದಲ್ಲದೆ ಬೇರೆ ಯಾವ ಭಾವದಿಂದಲೂ ಅವರಲ್ಲಿ ಯಾರೊಬ್ಬರೊಂದಿಗೂ ಆತ ನಡೆದುಕೊಂಡಿದ್ದಿಲ್ಲ. ಆದರೆ ಈಗಲೂ ಅವನಿಗಾಗಿ ತಮ್ಮ ಅರ್ಧ ಜೀವನವನ್ನೆ ಬಲಿಕೊಡಲು ಅಣಿಯಾಗ

ದಿದ್ದವರು ಅವರಲ್ಲಿ ಒಬ್ಬರೂ ಇದ್ದಿಲ್ಲ. ಅವನು ಪ್ರಾಣಾಪಾಯದ ಗಂಭೀರ ಪರಿಸ್ಥಿತಿಯಲ್ಲಿ ಇರಬಹುದಾದ ಪಕ್ಷದಲ್ಲಿಯೂ ಬಾರದಿರುವ ಕಂಬನಿಗಳೂ ಈಗ ಅವಳ (ಗ್ರೇಸಳ) ಕಣ್ಣಿಗೆ ಉಕ್ಕಿಬಂದವು — ಸಂಪ್ರದಾಯಕ್ಕೆ ಹೊರತಾದರೂ, ಅವನೊಂದಿಗೆ ತನ್ನಷ್ಟೇ ನಿಕಟವಾದ ಸಂಬಂಧವುಳ್ಳ ಈ ಸ್ತ್ರೀ ಬಾಂಧವರ ಕುರಿತು ಆಲೋಚಿಸಿದಾಗ, ಅವಳು ಹೊರಗೆ ಕಿರುಗಂಬಗಳ ಕಟಾಂಜನದ ಕಡೆಗೆ ಹೋಗಿ ಅದರ ಮೇಲೆ ಬಾಗಿ ನಿಂತು ಅತ್ತಳು.

ಆಮೇಲೆ ಫೆಲಿಸ ಅವಳನ್ನು ಹಿಂಬಾಲಿಸಿ ತಾನೂ ಅಳತೊಡಗಿದಳು. ಕರವಸ್ತ್ರವನ್ನು ಬಳಸದೆ ಕಂಬನಿಗಳನ್ನು ಮೂಕವಾಗಿ ಕೋಡಿಯಾಗಿ ಹರಿಯಲು ಬಿಟ್ಟಳು. ಆ ಮೂವರೂ ಹೀಗೆ ಒಟ್ಟಾಗಿ, ತಮಗೆ ತಾವೇ ತೀರ ಕನಿಕರಕ್ಕೆ ಪಾತ್ರರಾಗಿದ್ದು, ಒಬ್ಬರಿಗೊಬ್ಬರು ಕನಿಕರಪಡುತ್ತ ನಿಂತಾಗ, ಕುದುರೆಯ ಇಲ್ಲವೆ ಕುದುರೆಗಳ ಖುರಪುಟಗಳ ಸದ್ದು ಹೊರಗೆ ಪಟಾಂಗಣದಲ್ಲಿ ಕೇಳಿಬಂತು. ಮತ್ತು ಮರುಕ್ಷಣದಲ್ಲಿ ಮೆಲಬರಿಯ ದನಿ ಲಾಯದವನನ್ನು ಕೂಗುವುದು ಕೇಳಿಸಿತು.

ಗ್ರೇಸಳು ಒಮ್ಮೆಲೆ ಹಾರಿಬಿದ್ದಳು. ದಿಗ್ಗನೆ ಮಾಳಿಗೆ ಇಳಿದು ಓಡಿದಳು. ತಂದೆ ಪಟಾಂಗಣವನ್ನು ದಾಟಿ ಮನೆ ಬಾಗಿಲಿಗೆ ಬರುವಾಗ ಅವನಲ್ಲಿಗೆ ಧಾವಿಸಿದಳು. 'ಅಪ್ಪಾ, ಅವನ ಸುದ್ದಿ ಏನು? ಏನಾಗಿದೆ?'

'ಯಾರು? ಎಡ್ರೆಡನೊ?' ಮೆಲಬರಿ ತಟ್ಟನೆ ಅಂದನು. 'ಏನಾಗಿದೆ? ಏನೂ ಇಲ್ಲ; ಏನು, ಮಗೂ, ನೀನು ಆರಾಮಾಗಿ ಮನೆಗೆ ಬಂದಿಯಾ? ಅರೆ, ಈಗಾಗಲೆ ನೀನು ಸುಧಾರಿಸಿದ್ದಿ. ಆದರೆ ಇಂಥ ಹವೆಯಲ್ಲಿ ನೀನು ಹೀಗೆ ಹೊರಬೀಳಬಾರದು.'

'ಆದರೆ ಅವನು ಕುದುರೆಯಿಂದ ಕೆಳಗೊಗೆಯಲ್ಪಟ್ಟನಂತೆ.'

'ಹೌದು, ಹೌದು. ನನಗೆ ಗೊತ್ತು. ನನಗೆ ಗೊತ್ತು, ನಾನೇ ಅದನ್ನು ನೋಡಿದೆ. ಆತ ತಿರುಗಿ ಎದ್ದ. ಮತ್ತು ಎಂದಿನಂತೆಯೆ ಚೆನ್ನಾಗಿಯೆ ನಡೆದು ಹೋದ. ತರಗೆಲೆಗಳ ಮೇಲೆ ಬಿದ್ದ ಬೀಳು ಅಂಥ ಸುಖಿಯಾದ ದಾಂಡಿಗನಿಗೆ ಯಾವ ನೋವೂ ಉಂಟುಮಾಡಲಿಲ್ಲ. ಆತ ಇತ್ತ ಕಡೆಗೆ ಬರಲಿಲ್ಲ.' ಮೆಲಬರಿ ಅರ್ಥಪೂರ್ಣವಾಗಿ ಮಾತು ಮುಂದುವರಿಸಿದನು, 'ನನಗನಿಸುತ್ತದೆ, ಆತ ತನ್ನ ಕುದುರೆಯನ್ನು ಹುಡುಕಿಕೊಂಡು ಬರಲು ಹೋಗಿರಬೇಕು. ನಾನು ಅವನನ್ನು ಹುಡುಕಾಡಿದೆ, ಆದರೆ ಸಿಗಲಿಲ್ಲ. ಆದರೆ ಮರಗಳಲ್ಲಿ ಆತ ದೂರ ನಡೆದದ್ದು ನೋಡಿ ನಾನು ಅವನ ಕುದುರೆಯನ್ನು ಕಂಡು ಅದನ್ನು ಮನೆಗೆ ತಂದೆ, ಸುರಕ್ಷಿತವಾಗಿ. ಅಂದಾಗ ಈಗ ಆತ ನಡೆದೇಬರಬೇಕು. ಇನ್ನು ನೀನು ಇಲ್ಲಿ ಹೀಗೆ ರಾತ್ರೆಯ ಹವೆ ಗಾಳಿಯಲ್ಲಿ ನಿಲ್ಲಬೇಡ.'

ಅವಳು ತಂದೆಯೊಂದಿಗೆ ಮನೆಯೊಳಗೆ ಬಂದಳು. ತಿರುಗಿ ಮಾಳಿಗೆ ಏರಿ ಹೋಗಿ ತನ್ನ ಕೋಣೆಗೆ ತಲುಪಿದಾಗ ಅವಳಿಗೆ ಮಿಗಿಲಾದ ಪರಿಹಾರ ಅನಿಸಿತು. ಆ

ಇಬ್ಬರೂ 'ಸವತಿ'ಗಳು ಸದ್ದಿಲ್ಲದೆ ಮಾಯವಾಗಿದ್ದರು. ಅದನ್ನು ಕಂಡು ಅವಳು ಉಶ್ ಎಂದು ಉಸಿರುಗರೆದಳು. ಅವರು ಬಹುಶಃ ಅವಳ ತಂದೆಯ ಮಾತನ್ನು ಕೇಳಿ ತಮ್ಮ ಚಿಂತೆಗಳ ಪರಿಹಾರವಾಗಿ ಹೋಗಿರಬೇಕು.

ಸ್ವಲ್ಪ ಹೊತ್ತಿನಲ್ಲಿಯೆ ಗ್ರೇಸಳ ತಂದೆ ತಾಯಿ ಅವಳಿದ್ದಲ್ಲಿಗೆ ಬಂದರು. ಮತ್ತು ಅವಳ ಸುಖಸೌಕರ್ಯಕ್ಕೆ ಲಕ್ಷ್ಯಕೊಟ್ಟರು. ಆದರೆ ಅವಳಿಗೆ ಒಂಟಿಯಾಗಿರುವುದೆ ಲೇಸೆಂದು ಅನಿಸಿದ್ದು ಊಹಿಸಿ ಅವರಿಬ್ಬರೂ ಹೊರಟುಹೋದರು.

ಗ್ರೇಸಳು ಪ್ರತೀಕ್ಷೆಯಲ್ಲಿ ಉಳಿದಳು. ದೊಡ್ಡ ಗಡಿಯಾರ ಆಗಾಗ್ಗೆ ದನಿ ಎತ್ತುತಿತ್ತು. ಆದರೆ ಆವಳ ಗಂಡನು ತಿರುಗಿಬರಲಿಲ್ಲ. ತಂದೆ ಮಲಗಲು ಹೋಗುವ ವಾಡಿಕೆಯ ವೇಳೆಗೆ, ಮತ್ತೆ ಅವಳನ್ನು ಕಾಣಲು ಬಂದನು. 'ಎಚ್ಚರ ಕೂತಿರಬೇಡ' ಅವಳೇ ಅಂದಳು, ಆತ ಒಳಗೆ ಬಂದೊಡನೆ. 'ನಾನು ಏನೇನೂ ದಣಿದಿಲ್ಲ. ನಾನೇ ಅವನಿಗಾಗಿ ಕಾಯುತ್ತ ಕುಳಿತಿರುತ್ತೇನೆ.'

'ಅದು ಪ್ರಯೋಜನವಿಲ್ಲ, ಗ್ರೇಸ' ಮೆಲಬರಿ ಸಾವಕಾಶವಾಗಿ ಅಂದನು.

'ಏಕೆ?'

'ನಾನು ಅವನೊಂದಿಗೆ ಕಟುವಾಗಿ ಜಗಳವಾಡಿದೆ ಆ ಮೂಲಕ ಅತ ಈ ರಾತ್ರೆ ಇಲ್ಲಿ ತಿರುಗಿ ಬರಲಿಕ್ಕಿಲ್ಲವೆಂದೇ ನನ್ನ ಭಾವನೆ.'

'ಜಗಳ? ಅದು, ಅವನು ಬಿದ್ದದ್ದನ್ನು ಆ ಹುಡುಗ ನೋಡಿದ ಮೇಲೆಯೇ?'

ಮೆಲಬರಿ ಹೌದೆಂದು ತಲೆ ಅಲ್ಲಾಡಿಸಿದ, ಮೇಣಬತ್ತಿಯ ಜ್ಯೋತಿಯ ಮೇಲೆ ನೆಟ್ಟ ಕಣ್ಣನ್ನು ಹೊರಳಿಸದೆ.

'ಹೌದು. ಅದು ನಾವಿಬ್ಬರೂ ಒಟ್ಟಾಗಿ ಮನೆಗೆ ಬರುತ್ತಿರುವಾಗ', ಆತ ಅಂದನು.

ತಂದೆಯು ಮಾತಾಡುತ್ತಿರುವಾಗ ಗ್ರೇಸಳ ಎದೆಯಲ್ಲಿ ಏನೋ ಉಕ್ಕಿ ಒತ್ತಿ ಬರುತ್ತಿತ್ತು. 'ಅವನೊಂದಿಗೆ ಜಗಳಾಡಬೇಕೆಂದು ನಿನಗೆ ಅನಿಸಿತಾದರೂ ಹೇಗೆ?' ಆಕೆ ಒಮ್ಮೆಲೆ ಕೇಳಿದಳು. 'ಸುಮ್ಮನೆ ಮನೆಗೆ ಬರಲು ಅವನಿಗೆ ನೀನೇಕೆ ಬಿಡಲಿಲ್ಲ — ಅವನಿಗೆ ಹಾಗೆ ಒಲವಿದ್ದಿದ್ದರೆ? ಅವನು ನನ್ನ ಗಂಡ, ನನ್ನನ್ನು ಅವನಿಗೆ ಮದುವೆ ಮಾಡಿಕೊಟ್ಟ ಮೇಲೆ ನೀನು ಈಗ ಅವನನ್ನು ಅನಾವಶ್ಯಕವಾಗಿ ಕೆರಳಿಸಬೇಕಾಗಿಲ್ಲ. ಮೊದಲು ಅವನನ್ನು ಸ್ವೀಕರಿಸಲಿಕ್ಕೆ ನೀನೇ ನನ್ನ ಮನವೊಲಿಸಿದಿ. ಮತ್ತು ಈಗ ನಾವು ಸ್ವಾಭಾವಿಕವಾಗಿಯೇ ದೂರವಿರುವುದಕ್ಕಿಂತ ಹೆಚ್ಚಾಗಿ ನಮ್ಮನ್ನು ವಿಂಗಡಿಸುವಂಥ ಸಂಗತಿಗಳನ್ನು ನೀನು ಮಾಡುತ್ತಿರುವಿ'

'ಇಷ್ಟು ಅನ್ಯಾಯವಾಗಿ ನನ್ನನ್ನು ಆಡಿಕೊಳ್ಳುವಿ ಏಕೆ, ಗ್ರೇಸ?' ಮೆಲಬರಿ ದುಃಖ ಸಂತಪ್ತನಾಗಿ ಕೇಳಿದ. 'ನಿನ್ನನ್ನು ನಿನ್ನ ಗಂಡನಿಂದ ನಾನು ವಿಂಗಡಿಸುತ್ತಿದ್ದೇನೆಯೇ? ನೀನು ವಿಚಾರವೇ ಮಾಡಿಲ್ಲ —'

ಇನ್ನೂ ಹೆಚ್ಚು ಮಾತಾಡುವದಿತ್ತು ಅವನಿಗೆ ಆ ಭೆಟ್ಟಿಯ ಇಡಿಯ ಕಥೆಯನ್ನು ಹೇಳುವುದಿತ್ತು; ಅವಳನ್ನು ತಿರಸ್ಕರಿಸಿ ಆತ ಆಡಿದ ಮಾತುಗಳಲ್ಲಿಯೆ ಅವನಿಗೆ ಕೆರಳಿಸಿದ ಪ್ರಚೋದನೆ ಇತ್ತು — ಎಂದು ತಿಳಿಸುವದಿತ್ತು. ಅದರಿಂದ ಅವಳಿಗೆ ವಿಪರೀತ ವ್ಯಥೆಯೇ ಆಗುವಂತಿತ್ತು; ಆದ್ದರಿಂದ ಆತ ತಡೆದನು.

'ನೀನು ಮಲಗುವದು ಲೇಸು. ನೀನು ಬಹಳ ದಣಿದಿದ್ದಿ. ಗುಡ್‌ನೈಟ್' ಆತ ಸಾಂತ್ವನೆಯಿಂದ ಅಂದನು.

ಮನೆಗೆ ಮನೆಯೆ ನಿದ್ದೆಹೋಯಿತು. ಆ ವಾಸ್ತುವಿನ ಮೇಲೆ ಒಂದು ಮೌನ ಕವಿಯಿತು — ಮೆಲಬರಿಯ ಲಾಯಗಳಲ್ಲಿಯ ಕುದುರೆಗಳ ತಲೆಪಟ್ಟಿಗಳ ಸದ್ದು ಅದನ್ನು ಆಗೊಮ್ಮೆ ಈಗೊಮ್ಮೆ ಭಂಗಮಾಡುವುದನ್ನು ಬಿಟ್ಟರೆ. ತಂದೆ ಬೇಡವೆಂದು ಸಲಹೆ ಕೊಟ್ಟರೂ ಗ್ರೇಸ ಕಾದು ಕುಳಿತಳು. ಆದರೆ ಯಾರೂ ಬರಲಿಲ್ಲ.

ಗ್ರೇಸಳ ಜೀವನದಲ್ಲಿ ಅದೊಂದು ಆಯಕಟ್ಟಿನ ಮರ್ಮದ ಸಮಯವಾಗಿತ್ತು. ಆ ರಾತ್ರಿ ತನ್ನ ಗಂಡನ ಕುರಿತೇ ಆಕೆ ಬಹಳವಾಗಿ ಚಿಂತಿಸಿದಳು ಮತ್ತು ಸದ್ಯಕ್ಕೆ ವಿಂಟರಬೋರ್ನನನ್ನು ಮರೆತಳು.

'ಈ ದುಃಖಿ ಹೆಂಗಸರಿಬ್ಬರೂ ಎಡ್ರೆಡ್‌ನನ್ನು ಅದೆಷ್ಟು ಆರಾಧಿಸಿರಬಹುದು.' ಆಕೆ ತನ್ನಷ್ಟಕ್ಕೆ ಅಂದಳು. 'ಪ್ರತಿಯೊಬ್ಬರಿಗೂ ಆತ ಅದೆಷ್ಟು ಆಕರ್ಷಕವಾಗಿರಬೇಕು ಮತ್ತು ನಿಜವಾಗಿಯೂ ಆತ ಆಕರ್ಷಕನೇ, ಮೋಹಕನೇ.' ಸ್ಪರ್ಧೆಯಿಂದ ರೊಚ್ಚಿಗೆ ಬಿದ್ದು ಈ ವಿಚಾರಗಳು ತಮಗೆ ಪ್ರತಿಯಾದ ವಿಕಾರಗಳಿಗೆ ಎಡೆಕೊಟ್ಟಿರಬಹುದು — ಫಿಟ್ಝಪಿಯರ್ಸನಿಂದ ಅವುಗಳಿಗೆ ಏನೂ ಪ್ರತ್ಯುತ್ತರ ಸಿಗದಿದ್ದರಿಂದಲೇ ನಿಜವಾಗಿಯೂ ಅವಳ ಎದೆಯಗೂಡಿನಿಂದ ಒಂದು ಪ್ರೇಮಪಕ್ಷಿ ಹಾರಿಹೋಗಲು ಹಾತೊರೆಯುತ್ತಿತ್ತು. ಮತ್ತು ಅದಕ್ಕೆ ಒಂದು ನೆಲಬೀಡು ತೀರ ಅವಶ್ಯವಿತ್ತು.

ಆದರೆ ಗಂಡನು ಬರಲೇ ಇಲ್ಲ. ವಸ್ತುಸ್ಥಿತಿಯೆಂದರೆ ಫಿಟ್ಝಪಿಯರ್ಸನ ಸ್ಥಿತಿಯ ಬಗೆಗೆ ಮೆಲಬರಿ ಬಹಳ ತಪ್ಪು ಭಾವಿಸಿದ್ದನು. ಮರಗಳ ಬುಡಗಳ ಮೇಲೆ ಮಂದಿ ಬಿದ್ದರೆ ಅದರ ಪೆಟ್ಟು ಅನುಭವಿಸದೆ ಹೋಗುವುದಿಲ್ಲ. ಫಿಟ್ಝಪಿಯರ್ಸನನ್ನು ಲಕ್ಷ್ಯಗೊಟ್ಟು ಪರಾಂಬರಿಸಿದ್ದರೆ ಆ ಮುದುಕನಿಗೂ ಗೊತ್ತಾಗುತ್ತಿತ್ತು; ಎದ್ದು ಪೊದೆಗಂಟೆಗಳಲ್ಲಿ ನಡೆದಾಗ, ಆತ ಹೋಗುತ್ತಿದ್ದಂತೆ ನೆತ್ತರ ಬಸಿಯುತ್ತಿದ್ದನು; ಐವತ್ತು ಗಜ ಹೋಗಿಲ್ಲ ಅವನಿಗೆ ತಲೆತಿರುಗ ಹತ್ತಿತು ಬವಳಿಬರುವ ಲಕ್ಷಣಗಳು ಕಂಡವು. ಮತ್ತು ತಲೆಗೆ ಕೈ ಎತ್ತುತ್ತಿದ್ದಂತೆ ಅವನು ತಲೆತಿರುಗಿ ಬಿದ್ದುಬಿಟ್ಟನು.

೩೬

ಹಿಂಟೋಕಿನಲ್ಲಿ ಆ ರಾತ್ರಿ ನಿರೀಕ್ಷಿಸುತ್ತ, ಚಿಂತಿಸುತ್ತ ಕುಳಿತವಳು ಗ್ರೇಸ ಒಬ್ಬಳೇ ಅಲ್ಲ; ಫೆಲಿಸ ಚಾರ್ಮಂದಳೂ ತನ್ನ ವಾಡಿಕೆಯ ವೇಳೆಗೆ ಮಲಗಲು ಹೋಗುವ ಮನಸ್ಥಿತಿಯಲ್ಲಿ ಇದ್ದಿಲ್ಲ; ಮತ್ತು ದೊಡ್ಡಮನೆಯಲ್ಲಿ ನಡುಮನೆಯ ಅಗ್ಗಿಷ್ಟಿಕೆಯ ಬೆಂಕಿಯ ಮೇಲೆ ಆಕೆ, ಗ್ರೇಸಳು ತನ್ನ ಮನೆಯ ಪುಟ್ಟಕೋಣೆಯಲ್ಲಿ ಕೂತಂತೆಯೇ ನಿಶ್ಚಲವಾಗಿ ಆಳವಾದ ಕನವರಿಕೆಯಲ್ಲಿ ಕುಳಿತುಬಿಟ್ಟಿದ್ದಳು.

ಮೆಲಬರಿಯು ಹೇಳಿದ ವಿದ್ಯಮಾನಗಳಿಗೆ, ಅವನ ಮನೆಯ ಮಹಡಿಯ ತುದಿ ಮೆಟ್ಟಿಲ ಮೇಲೆ ನಿಂತಾಗ, ಕಿವಿಗೊಟ್ಟದ್ದರಿಂದ ಅವಳ ಬಹಳಷ್ಟು ಮನೋವ್ಯಥೆಯು ಹಗುರಾಗಿತ್ತು. ಆಗ ವೈಯಕ್ತಿಕ ಶಿಷ್ಟಾಚಾರದ ಪ್ರಜ್ಞೆ ಒಮ್ಮೆಲೆ ಅವಳಲ್ಲಿ ನುಗ್ಗಿ ಮೂಡಿಬಂದಿತು. ಅವಳು ಮಾಳಿಗೆಯನ್ನಿಳಿದು, ಬಾಗಿಲನ್ನು ಭೂತದಂತೆ ಬಿಟ್ಟು ಹೊರಟಳು. ಕಟ್ಟಡದ ಗೋಡೆಗುಂಟವೇ ಸರಿಯುತ್ತ ಪಟಾಂಗಣದ ಗೇಟಿನತ್ತ ಹೊರಳಿಹೋಗಿ ಅಲ್ಲಿಂದ ಸದ್ದಿಲ್ಲದೆ ಅವಳು ಹೊರಬಿದ್ದಳು — ಗ್ರೇಸ ಮತ್ತು ಅವಳ ತಂದೆ ಮಾತುಕತೆ ಮುಗಿಸುವಷ್ಟರಲ್ಲಿ, ಸೂಕೆ ದಾಮುಸನ್‌ಳೂ ಈ ವಿಷಯದಲ್ಲಿ ತನಗೆ ಶ್ರೇಷ್ಠಳಾದ ಈ ಮಹಿಳೆಯನ್ನೆ ಈ ಪ್ರಸಂಗದಲ್ಲಿ ಅನುಸರಿಸುವ ವಿಚಾರ ಮಾಡಿದಳು. ಫೆಲಿಸ್ ಮುಂದಿನ ಮಾಳಿಗೆ ಇಳಿದಂತೆ ಅವಳು ಹಿಂದಿನ ಮಾಳಿಗೆಯಿಂದ ಇಳಿದು, ಪಕ್ಕದ ಬಾಗಿಲಿನಿಂದ ಹೊರಬಿದ್ದು ತನ್ನ ಮನೆಗೆ ಹೋದಳು.

ಮೆಲಬರಿಯು ಅಗಸೆ ಬಾಗಿಲ ಹೊರಗೆ ಬಂದೊಡನೆ ಶ್ರೀಮತಿ ಚಾರ್ಮಂದ ತನ್ನ ದೊಡ್ಡಮನೆಗೆ ಆದಷ್ಟು ವೇಗದಿಂದ ಓಡಿದಳು. ಎಲ್ಲೂ ತಡೆಯಲಿಲ್ಲ. ತಲೆ ತಿರುಗಿಸಿ ಹಿಂದೆ ನೋಡಲಿಲ್ಲ. ಅವಳು ತನ್ನ ಮನೆಯನ್ನು, ಹೇಗೆ ಹೊರಬಿದ್ದಿದ್ದಳೊ ಹಾಗೆಯೇ ಪ್ರವೇಶಿಸಿದಳು — ನಡುಮನೆಯ ವಿಶಾಲವಾದ ಕಿಟಕಿಯಿಂದ. ಅಲ್ಲಿ ಪ್ರತಿಯೊಂದೂ ಆಕೆ ಬಿಟ್ಟು ಹೋದಂತೆಯೇ ಇತ್ತು; ಅವಳು ಬಿಟ್ಟುಹೋಗಿ ಮುಕ್ಕಾಲು ಗಂಟೆ ಆಗಿರಬೇಕು. ಮತ್ತು ಅವಳ ನಿರ್ಗಮನ ಯಾರ ಗಮನಕ್ಕೂ ಬಂದಂತೆ ಕಾಣಲಿಲ್ಲ. ಮೈಯಿಂದ ದಣಿದರೂ ಮನವೆಲ್ಲ ಬಿಗಿದಿಟ್ಟಂತೆ ಆಕೆ ಕಣ್ಣು ಕೊಕ್ಕರಿಸಿ, ಎದೆ ಬಡಿದುಕೊಳ್ಳುತ್ತಿದ್ದಂತೆ ತಾನೇನು ಮಾಡಿದನೆಂದು ತಾನೇ ತಬ್ಬಿಬ್ಬಾಗಿ ಕೂತಳು.

ಭಯಗ್ರಸ್ತವಾದ ಪ್ರೀತಿಯು ಅವಳಿಗೆ ದ್ರೋಹ ಬಗೆದಿತ್ತು. ಆ ಆಕಸ್ಮಿಕ ಭೆಟ್ಟಿಯನ್ನು ಕೊಡುವಂತೆ ಮಾಡಿತ್ತು. ಈಗ ಅದಕ್ಕೆ ಪ್ರಚೋದಕವಾದ ಭಾವನೆಯು ಶಮನಗೊಂಡಿತ್ತು; ಫಿಟ್ಸುಪಿಯರ್ಸ ಅಷ್ಟೇನು ಗಂಡಾಂತರದಲ್ಲಿ ಇಲ್ಲವೆಂಬ ಭಾವನೆಯೂ ಮೂಡಿತ್ತು. ಈಗ ತನ್ನ ಆ ಭೆಟ್ಟಿಯೇ ಅವಳಿಗೆ ಅತ್ಯಂತ ಬೇಸರವನ್ನೂ ಬೆರಗನ್ನೂ ಉಂಟು ಮಾಡಿತ್ತು. ಅವನೊಂದಿಗೆ ಕೂಡಿದ ಭಾವಾವೇಶದ ಬಂಧನದಿಂದ ಪಾರಾಗಲು ಆಕೆ ಉತ್ತಮ ಉಪಾಯವೆಂದು ಅವಳು ಈ ರೀತಿ

ಮಾಡತೊಡಗಿದ್ದಳು. ತನ್ನ ಮೋಹವನ್ನು ಅನುಚಿತವೆಂದು ಗ್ರೇಸಳಿಗೂ ತನಗೂ ಸಾರಿ ಹೇಳುವುದರಲ್ಲಿ ಹೇಗೋ ಅದು ಅನಿವಾರ್ಯವೆಂಬ ಮತಕ್ಕೆ ತಾನೆ ಪರಿವರ್ತನ ಹೊಂದಿದ್ದಳು.

ದೇವರು ಒಂದಿಷ್ಟು ಬಲವನ್ನು ಕೊಟ್ಟಿದ್ದರೆ; ಆದರೆ ದೇವರು ಹಾಗೆಂದೂ ಮಾಡುವುದಿಲ್ಲ. ಒಂದು ಸಂಗತಿ ಅಪರಿಹಾರ್ಯ. ಅವಳು ಹಿಂಟೋಕ ಬಿಟ್ಟು ಹೋಗಬೇಕು — ಇನ್ನು ಈ ಮೋಹದಿಂದ ತನ್ನನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶವಿದ್ದರೆ, ಈ ಹೆಣಗಾಟ ಈ ಹೋರಾಟ ತೀರ ದಣಿವಿನದು, ತೀರ ನಿರಾಶೆಯದು — ಅವಳು ಅಲ್ಲಿ ಉಳಿದಿರುವತನಕ. ಇದೊಂದು ಆತ್ಮಸಾಕ್ಷಿಯ ನಿರಂತರ ಶರಣಾಗತಿ — ಯಾವದಕ್ಕೆಂದು ಹೆಸರಿಸಲು ಆಕೆಗೆ ಸಾಹಸವಿದ್ದಿಲ್ಲ.

ಕ್ರಮೇಣ, ಅವಳು ಹಾಗೆಯೇ ಕುಳಿತಿರುವಾಗಲೆ ಫೆಲಿಸಳ ಮನಸ್ಸು ತನ್ನ ಜಾಣ ನಿರ್ಧಾರದಲ್ಲಿ ಅದ್ಭುತ ಬಲವನ್ನು ಬೆಳೆಸಿಕೊಂಡಿತು. ತನ್ನ ಪ್ರೇಮಿಕನು, ತಾನು ಇಷ್ಟೆಲ್ಲ ಗಾಬರಿಗೊಂಡು ಹೌಹಾರಿದರೂ ನಿಜವಾಗಿಯೂ ನಿರಪಾಯನಾಗಿರುವನೆಂಬ ಪರಿಹಾರದ ಭಾವನೆಯೂ ಅದಕ್ಕೆ ನೆರವಾಗಿರಬೇಕು. ಸದ್ಯದ ಕ್ಷಣಕ್ಕೆ ಅವಳು 'ವಿವೇಕದಿಂದ ಹುಚ್ಚೆದ್ದು, ಓಡುವ' ವೃತ್ತಿಯಲ್ಲಿ ಇದ್ದಳು. ಮತ್ತು ಅದರ ವಿವೇಕದ ಅಂಶವು ಅಲ್ಲಿಂದ ಹೊರಟು ಹೋಗುವುದೇ ಆಗಿದೆ ಮತ್ತು ಅದನ್ನು ಅದೇ ಕ್ಷಣಕ್ಕೆ ಕಾರ್ಯಗತ ಮಾಡಬೇಕು ಎಂದು ಅವಳು ತನಗೆ ತಾನೆ ಮನವರಿಕೆ ಮಾಡಿಕೊಂಡಳು. ತನ್ನ ಆಸನದಿಂದ ದಿಗ್ಗನೆ ಎದ್ದು, ಆ ಕೋಣೆಯಲ್ಲಿ ಹರಡಿಕೊಂಡಿದ್ದ ತನ್ನ ಹಗುರಾದ ಚಿಕ್ಕಪುಟ್ಟ ವಸ್ತು ಒಡವೆ ಬಟ್ಟೆಬರೆಗಳನ್ನು ಕಲೆಹಾಕಲಿಕ್ಕೆ ಅವಳು ಆರಂಭಿಸಿದಳು — ತನ್ನ ನಿರ್ಗಮನದ ಸಿದ್ಧತೆಗಳು ಈಗಾಗಲೆ ಸುರುವಾಗಿವೆಯೆಂದು ತಾನೇ ಭಾವಿಸಿಕೊಳ್ಳುವಂತೆ.

ಅತ್ತಿತ್ತ ಸುಳಿದಾಡುವಾಗ ಅವಳಿಗೆ ಬಾಗಿಲ ಹೊರಗೆ ಏನೊ ಚಿಕ್ಕ ಸದ್ದು ಕೇಳಿದಂತೆ ಭಾಸವಾಯಿತು. ಮತ್ತು ಆಕೆ ನಿಶ್ಚಲವಾಗಿ ನಿಂತಳು. ನಿಜವಾಗಿಯೂ ಅದು ಕಿಟಕಿಯ ಮೇಲೆ ತಟ್ಟಿದ ಸದ್ದು. ಒಂದು ವಿಚಾರ ಅವಳ ಮನಸ್ಸನ್ನು ಹೊಕ್ಕಿ ಕೆನ್ನೆಗಳನ್ನು ಉರಿಸಿತು. ಅತ ಆ ಕಿಟಕಿಗೆ ಹಿಂದೆ ಬಂದಿದ್ದನು; ಆದರೂ ಈಗ ಮತ್ತೆ ಆತ ಸಾಹಸ ಮಾಡುವ ಸಂಭವ ಉಂಟೆ? ಆಳುಹೋಳುಗಳೆಲ್ಲ ಹಾಸಿಗೆಯಲ್ಲಿದ್ದರು; ಮತ್ತು ಸಾಮಾನ್ಯ ಘಟನಾಕ್ರಮದಲ್ಲಿ ಅವಳೂ ಮಲಗುತಿದ್ದಳು. ಆಗ ಅವಳಿಗೆ ನೆನಪಾಯಿತು. ಆ ಕಿಟಕಿಯಿಂದ ಒಳಗೆ ಬಂದು ಅದನ್ನು ಮುಚ್ಚುವಾಗ ಅವಳು ಆ ಕದಗಳಿಗೆ ಮಿಡಹಾಕಿದ್ದಿಲ್ಲ. ಇದರಿಂದ ಬಳಗಿನ ಬೆಳಕಿನ ಒಂದು ರೇಖೆಯು ಹೊರಗೆ ಹುಲ್ಲುಹಾಸಿನ ಮೇಲೆ ನಿಂತ ಯಾವದೆ ನಿರೀಕ್ಷಕನಿಗೆ ಅವಳ ಈ ಜಾಗರಣೆಯನ್ನು ಕಾಣಿಸಿರಬಹುದು. ಹೇಗೆ ಎಲ್ಲ ಸಂಗತಿಗಳೂ ಗ್ರೇಸಳ ವಿಶ್ವಾಸಕ್ಕೆ ಅವಳು ಘಾತ ಬಗೆಯುವಂತೆಯೇ ಒಳಸಂಚು ಸಾಧಿಸುತ್ತಿವೆ.

ಆ ಕದ ತಟ್ಟುವ ಸದ್ದು ಮತ್ತೆ ಸುರುವಾಯಿತು, ಪುಟ್ಟ ಹಕ್ಕಿಯೊಂದರ

ಕೊಕ್ಕಿನ ಕುಟ್ಟುವಿಕೆಯಂತೆ. ಅವಳ ಅಂಕೆಮೀರಿದ ಆಕಾಂಕ್ಷೆಯು ವಿವೇಕವನ್ನು ಸೋಲಿಸಿತು. ಅವಳು ಹೋಗಿ ಕಿಟಕಿಯ ಕದಗಳ ಜಾರುಪಟ್ಟಿಗಳನ್ನು ಸರಿಸಿದಳು. ಕದವನ್ನು ಮುಚ್ಚಿಯೇ ಇದ್ದು ಅವನ ಕಡೆಗೆ, ಒಲ್ಲೆನೆಂದು ತಲೆದೂಗಬೇಕೆಂದು ಅವನ ನಿರ್ಧಾರವಿತ್ತು.

ಆದರೆ ಅವಳು ಹೊರಗೆ ನೋಡಿದ ದೃಶ್ಯ ನಡುರಾತ್ರಿಯಲ್ಲಿ ಒಬ್ಬ ಅಸಹಾಯ ಹೆಣ್ಣಿಗಿಂತ ಹೆಚ್ಚಾಗಿ ಎಂಥ ಬಲಿಷ್ಠ ಹೃದಯಕ್ಕೂ ಭಯಭ್ರಾಂತವಾಗಿ ಮಾಡುವಂತೆ ಇತ್ತು. ಆ ಕಿಟಕಿಯ ಶೀರ ಕೆಳಗಿನ ಕಾಜಿನ ಚೌಕಿನ ನಟ್ಟ ನಡುವೆ ಒಂದು ಮನುಷ್ಯನ ಮುಖವಿತ್ತು. ಅದು ಫಿಟ್ಸ್‌ಪಿಯರ್ಸನದಿರಬೇಕೆಂದು ಆಕೆ ಹೇಗೋ ತಕ್ಕಮಟ್ಟಿಗೆ ಗುರುತಿಸಿದಳು. ಆ ಮುಖವನ್ನು ಹೊರಗಿನ ಕಗ್ಗತ್ತಲೆ ಸುತ್ತುವರಿದಿತ್ತು. ಅದರ ಬಣ್ಣ ಹೆಣದಂತೆ ಕಂದಿ ಕಂಗೆಟ್ಟಿದ್ದು, ಮತ್ತು ನೆತ್ತರ ಬಳಿದದ್ದು, ಆ ಕಾಜಿನ ಚೌಕಟ್ಟಿನಲ್ಲಿ ಕಂಡುಬಂದಂತೆ ಆ ಮುಖವು ಅವಳ ಗಾಬರಿಗೆಟ್ಟ ಕಣ್ಣುಗಳಿಗೆ ಪಿಶಾಚ ಮುದ್ರೆಯಂತೆ ಬಡಿಯಿತು.

ಅವನು ತುಟಿಗಳನ್ನು ಅಲ್ಲಾಡಿಸಿದನು. ಅವಳ ಕಡೆಗೆ ಅಂಗಲಾಚಿ ನೋಡಿದನು. ಅವಳ ಶೀಘ್ರಗತಿಯ ಮನಸ್ಸು ಈ ದುರಂತ ಪರಿಪಾಕಕ್ಕೆ ಒಯ್ದು ಘಟನೆಗಳನ್ನೆಲ್ಲ ಒಂದು ಸಂಭಾವ್ಯ ಸರಣಿಯಲ್ಲಿ, ಒಂದು ಕ್ಷಣದಲ್ಲಿ ಜೋಡಿಸಿತು. ಬೆದರಿದ ಕೈಯಿಂದ ಕಿಟಕಿಯ ಕದಗಳನ್ನು ತೆಗೆದು ತೆರೆದು, ಅವನು ಅವಿತಂಕೊಂಡಲ್ಲಿಗೆ ಬಾಗಿ ತನ್ನ ಮೋರೆಯನ್ನು ಅವನ ಮೋರೆಗೆ ಚಿಂತಾಕುಲವಾದ ಭಾವಾವೇಶದ ಉಕ್ಕಂದದಲ್ಲಿ ಒತ್ತಿದಳು. ಒಂದು ಮಾತೂ ಆಡದೆ ಕೋಣೆಯೊಳಗೆ ಬರಲು ಅವನಿಗೆ ನೆರವಾದಳು. ಈ ನೆರಬೆಂದರೆ ಅವನನ್ನು ಆಕೆ ಎತ್ತಿಯೇ ಒಳಗೆ ತೆಗೆದುಕೊಳ್ಳಬೇಕಾಯಿತು.

ಲಗುಬಗೆಯಿಂದ ಕಿಟಕಿಯನ್ನು ಮುಚ್ಚಿ ಕದಗಳ ಮಿಡಹಾಕಿ ಅವಳು ಉಬ್ಬಸಪಡುತ್ತ ಅವನ ಮೇಲೆ ವಾಲಿದಳು.

'ನಿನಗೆ ನೋವಾಯಿತೆ? ಅಪಾಯವಾಗಿದೆಯೇ?' ಆಕೆ ಮಂದವಾಗಿಯೇ ಕೂಗಿದಳು 'ಓ ಓ ಇದೇಕೆ ಹೀಗೆ?'

'ಬಹಳವೇ ಆಗಿದೆ. ಆದರೆ ಹೆದರಬೇಡ' ಆತ ಕಷ್ಟದಿಂದ ಪಿಸುಗುಟ್ಟಿದನು. ಮತ್ತು ಹೆಚ್ಚು ಸುಖವಾಗಿ ಕೂಡ್ರುವಂತೆ ಹೊರಳಿದನು 'ಸ್ವಲ್ಪ ನೀರು, ಉಪಕಾರವಾದೀತು.'

ಅವಳು ಊಟದ ಕೋಣೆಗೆ ಓಡಿದಳು. ಅಲ್ಲಿಂದ ಒಂದು ಸೀಸೆ ಮತ್ತು ಗ್ಲಾಸು ತಂದಳು. ಅದರಿಂದ ಆತ ಲವಲವಿಕೆಯಿಂದ ಕುಡಿಯಹತ್ತಿದನು. ಆಗ ಅವನು ಹೆಚ್ಚು ಸರಿಯಾಗಿ ಮಾತಾಡುವಂತೆ ಆಯಿತು. ಮತ್ತು ಅವಳ ಸಹಾಯದಿಂದ ಸೋಫಾದಲ್ಲಿ ಹೋಗಿ ಕುಳಿತನು.

'ನೀನು ಸಾಯುತ್ತಿರುವಿಯಾ?' ಆಕೆ ಕೇಳಿದಳು. 'ಎಡ್ರೆಡ್, ನನ್ನೊಂದಿಗೆ ಮಾತಾಡು.'

'ನಾನು ಅರೆಸತ್ತಂತೆ ಆಗಿದ್ದೇನೆ' ಫಿಟ್ಜ಼ಪಿಯರ್ಸ್ ಉಸಿರಿಗಾಗಿ ಚಡಪಡಿಸುತ್ತ ಅಂದನು.' ಆದರೆ ನಾನು ಇದನ್ನು ಮೀರಿ ಗುಣವಾಗಬಲ್ಲೆ. ಇದು ಮುಖ್ಯವಾಗಿ ರಕ್ತಸ್ರಾವ.

'ಆದರೆ ಬಿದ್ದುದರಿಂದ ನಿನಗೆ ಪೆಟ್ಟಾಗಲಿಲ್ಲವೆಂದು ನನ್ನ ಭಾವನೆ ಇತ್ತು', ಅವಳು ಅಂದಳು.

'ಫೆಲಿಸ್, ನನ್ನ ಮಾವ ... ನಾನು ಅಂಬೆಗಾಲಿಕ್ಕಿ ನಿನ್ನ ಬಳಿಗೆ, ಒಂದು ಮೈಲಿಗೂ ಹೆಚ್ಚು ಸರಿದು ಬಂದಿದ್ದೇನೆ. ದೇವರೇ ಇಲ್ಲಿ ನಾನು ಬಂದು ಮುಟ್ಟಲೇ ಆರೆನೆಂದು ತಿಳಿದಿದ್ದೆ. ನಾನು ಬಂದೆ, ನಿನ್ನ ಹತ್ತಿರ ಬಂದೆನು. ಏಕೆಂದರೆ ನೀನೊಬ್ಬಳೆ ನನ್ನ ಸಖಿ ... ಈಗ ಈ ಲೋಕದಲ್ಲಿ ಉಳಿದವಳು. ನಾ ತಿರುಗಿ ಮತ್ತೆ ... ಹಿಂಟೋಕಿಗೆ ಎಂದಿಗೂ ಹೋಗಲಾರೆ. ಮೆಲಬರಿಯ ಮಾಡಿನ ಕೆಳಗೆ ಎಂದೆಂದಿಗೂ ... ಇಲ್ಲ. ನಮ್ಮಿಬ್ಬರ ನಡುವಿನ ಈ ಉಗ್ರವಾದ ಕಟುವಾದ ಕಲಹವನ್ನು ಯಾವ ಮದ್ದೂ, ಮಾದಕದ್ರವ್ಯವೂ ತಣಿಸಲಾರದು ... ನಾನು ಒಮ್ಮೆ ಗುಣವಾದರೆ ...'

'ನಿನ್ನ ತಲೆಯನ್ನು ಕಟ್ಟಲು ಕೊಡು. ಇದೀಗ ನೀನು ವಿಶ್ರಾಂತಿಪಡೆದಿರುವಿ.'

'ಸರಿ. ಆದರೆ ತಡೆ ಒಂದು ನಿಮಿಷ. ರಕ್ತಸ್ರಾವ ತನ್ನಾರೆ ತಡೆಯಿತು. ಇಲ್ಲವಾದರೆ ಈ ಮೊದಲೆ ನಾನು ಸತ್ತು ಹೆಣವಾಗಿ ಬಿಡುತ್ತಿದ್ದೆ. ಅಡವಿಯಲ್ಲಿದ್ದಾಗಲೆ ನನ್ನ ಕರವಸ್ತ್ರ ಮತ್ತು ಒಂದು ಅರ್ಧ ಪೆನ್ಸ್ ನಾಣ್ಯದಿಂದ ಆ ಕತ್ತಲೆಯಲ್ಲಿ ಸಾಧ್ಯ ವಿದ್ದಷ್ಟೂ ಬಿಗಿಯಾಗಿ ನಾನು ಸ್ರಾವ ತಡೆಯಲು ಪಟ್ಟಿ ತಿರುಪಿ ಬಿಗಿದಿಟ್ಟೆ. ಆದರೆ ಕೇಳು ಪ್ರಿಯ ಫೆಲಿಸ್, ನಾನು ಪೂರ್ತಿ ವಾಸಿಯಾಗುವನಕ ನನ್ನನ್ನು ಅಡಗಿಸಿಡುವಿಯಾ? ಏನೇ ಆಗಲಿ ಏನೇ ಬರಲಿ, ನಾನು ಮತ್ತೆ ತಿರುಗಿ ಹಿಂಟೋಕದಲ್ಲಿ ಕಾಣಬಾರದು. ಅಲ್ಲಿ ನನ್ನ ಪ್ರಾಕ್ಟೀಸ್ ಪೂರ್ತಿ ಹೋದಂತೆಯೇ. ಇದಾದನಂತರ ನನಗೆ ಶಕ್ಯವಿದ್ದರೂ ನಾನು ಅದನ್ನು ತಿರುಗಿ ಗಳಿಸಿಕೊಳ್ಳಲೊಲ್ಲೆ.'

ಈತನಕ ಫೆಲಿಸಳ ಕಣ್ಣೀರು ಅವಳ ಕಣ್ಣನ್ನು ಕುರುಡಾಗಿಸಿದವು. ತಮ್ಮಿಬ್ಬರ ಬಾಳನ್ನು ಬೇರೆ ಮಾಡಬೇಕೆಂಬ ಅವಳ ವಿವೇಕದ ಯೋಜನೆಗಳೆಲ್ಲ ಈಗ ಎಲ್ಲಿ ಹೋದುವು? ಈ ನೋವಿನಲ್ಲಿ, ಈ ಕಷ್ಟದಲ್ಲಿ, ಈ ಬಡತನದಲ್ಲಿ ಅವನನ್ನು ಆರೈಸು ವುದು ಉಪಚರಿಸುವುದು — ಅದೊಂದೇ ಅವಳ ತಲೆಯಲ್ಲಿ ನಿಂತ ವಿಚಾರ. ಮೊದಲ ನೆಯ ಹೆಜ್ಜೆ ಅವನನ್ನು ಅಡಗಿಸುವುದು, ಅದೆಲ್ಲಿ? ಎಂದು ಆಕೆ ತನ್ನನ್ನೆ ಕೇಳಿಕೊಂಡಳು. ಒಂದು ಸ್ಥಳವು ಅವಳಿಗೆ ಹೊಳೆಯಿತು.

ಊಟದ ಕೋಣೆಯಿಂದ ಅವನಿಗೆ ಸ್ವಲ್ಪ ಮದ್ಯವನ್ನು ತಂದು ಕೊಟ್ಟಳು. ಅದು ಅವನಲ್ಲಿ ತುಸು ಬಲವನ್ನು ಹೆಚ್ಚಿಸಿತು. ಆಮೇಲೆ ಅವನ ಬೂಟುಗಳನ್ನು ಕಳಚಿದಳು. ಆಗ ಆತ ಒಂದು ಬದಿಗೆ ಅವಳನ್ನು ಆನಿಸಿಕೊಂಡು, ಇನ್ನೊಂದು ಬದಿಗೆ ಕೈಗೋಲನ್ನು ಹಿಡಿದು ನೀಟಾಗಿ ನಿಲ್ಲಬಲ್ಲ. ಈ ರೀತಿ ಸಾವಧಾನ ಹೆಜ್ಜೆ ಇಟ್ಟ ಅವರು ಕೋಣೆಯಿಂದ ಹೊರಟು ಮಾಳಿಗೆ ಏರಿಹೋದರು. ಮೇಲ್ಮುದಿಗೆ ಬಂದಮೇಲೆ ಒಂದು ಪಡಸಾಲೆ

ಗುಂಟ, ಅವನಿಗೆ ವಿಶ್ರಾಂತಿಬೇಕೆನಿಸಿದಾಗ ಅಲ್ಲಲ್ಲಿ ತಂಗುತ್ತ, ಅಲ್ಲಿಂದ ಇನ್ನೊಂದು ಸಣ್ಣ ಸೋಪಾನವನ್ನೇರಿ, ಆ ಮನೆಯ ತೀರ ಬಳಸದೆ ಬಿದ್ದ ಒಂದು ಭಾಗಕ್ಕೆ ಅವರು ಬಂದರು. ಅಲ್ಲಿ ಅವಳು ಒಂದು ಕದವನ್ನು ಬೀಗ ಕಳಚಿ ತೆರೆದಳು. ಒಳಗೆ ಸಾಮಾನು ದಾಸ್ತಾನು ಮಾಡುವ ಒಂದು ಕೋಣೆ, ಅಲ್ಲಿ ಎಲ್ಲ ಬಗೆಯ ಹಳೆಯ ಬಳಸಿಬಿಟ್ಟ ಮನೆಯ ಉಪಸ್ಕರಗಳು, ಗೋಡೆಗೆ ತಾಗಿ ರಾಶಿ ಒಟ್ಟಿ ನಿಂತವು. ಕಿಟಕಿಗಳಿಂದ ಬೆಳಕು ಬರಲು ತಡೆಯಾದಂಥವು; ಅವುಗಳ ನಡುವೆ ಸಂದಿ ಮೂಲೆಗಳು, ಚಿಕ್ಕಹೊದರುಗಳು ಉಂಟಾಗಿದ್ದವು. ಅವುಗಳಲ್ಲಿ ಒಬ್ಬನಿದ್ದರೆ ಬಾಗಿಲಿನಿಂದ ಯಾವ ಕಣ್ಣು ದಿಟ್ಟಿಸಿ ನೋಡಿದರೂ ಕಂಡುಬರುವಂತಿಲ್ಲ. ಅಲ್ಲಿಯ ವಸ್ತು ಒಡವೆಗಳೆಲ್ಲ ಮುಖ್ಯವಾಗಿ ಆ ದೊಡ್ಡ ಮನೆಯ ಹಿಂದಿನ ಒಡೆಯನವು. ಅವೆಲ್ಲವನ್ನೂ ಒಟ್ಟಾಗಿಯೇ ಶ್ರೀಯುತ ಚಾರ್ಮಂಡ ಹರಾಜಿನಲ್ಲಿ ಕೊಂಡಿದ್ದನು. ಆದರೆ ಎಳೆವರೆಯದ ಹೆಂಡತಿಯ ಅಭಿರುಚಿ ಮತ್ತು ಫ್ಯಾಷನ್ನು ಬದಲಾದ್ದರಿಂದ ಅವನ್ನೆಲ್ಲ ಈ ಕತ್ತಲೆ ಕೋಣೆಗೆ ತುಂಬಲಾಗಿತ್ತು.

ಫಿಟ್ಜ್‌ಪಿಯರ್ಸನು ಗೋಡೆಗೆ ಬೆನ್ನು ಆನಿಸಿಕೊಂಡು ನೆಲದ ಮೇಲೆ ಕೂತನು. ಅವಳು ಒಂದು ಹಸೆ ಸಿದ್ಧಮಾಡಲು ಸಾಮಾನು ಹೊತ್ತು ಹಾಕಿದಳು. ಮೇಲೆ ಹೇಳಿದ ಸಂದೀಗಳಲ್ಲಿ ಒಂದು ಮೂಲೆಯಲ್ಲಿ ನೆಲದ ಮೇಲೆಯೇ ಒಂದು ಹಾಸಿಗೆ ಸಜ್ಜುಗೊಳಿಸಿದಳು. ಒಂದು ಬೋಗುಣಿಯನ್ನೂ, ನೀರನ್ನೂ ತಂದಳು. ಅವನ ಮೋರೆಯ ಮೇಲಿನ, ಕೈಗಳ ಮೇಲಿನ ಒಣಗಿದ ನೆತ್ತರವನ್ನೆಲ್ಲ ತೊಳೆದು ತೆಗೆದಳು; ಮತ್ತು ಅವನು ಸುಖವಾಗಿ ಅಡ್ಡಾದನಂತರ ತಿಂಡಿ-ತಿನಸಿನ ಕಪಾಟಿನಿಂದ ಆಹಾರವನ್ನು ತಂದು ಇಟ್ಟಳು. ಅವನು ತಿನ್ನುತ್ತಿರುವಾಗ ಅವಳ ಕಣ್ಣು ಚಿಂತೆಯಿಂದ ಅವನ ಮೋರೆಯಲ್ಲಿ ನೆಟ್ಟನಿಂತವು. ಅದರ ಪ್ರತಿಯೊಂದು ಚಲನವಲನವನ್ನೂ ಅವು ಮಮತೆಯಿಂದ ಮರುಕದಿಂದ ಹಿಂಬಾಲಿಸಿದುವು. ಇದನ್ನು ಕೇವಲ ಪ್ರೀತಿ ಸ್ನಿಗ್ಧ ಹೆಣ್ಣೆ ವ್ಯಕ್ತಮಾಡಬಲ್ಲಳು.

ಈಗ ಆತ ಸುಧಾರಿಸಿದ ಸ್ಥಿತಿಯಲ್ಲಿ ಇದ್ದನು. ತನ್ನ ಸ್ಥಿತಿಗತಿಗಳನ್ನು ಅವಳೊಂದಿಗೆ ಚರ್ಚಿಸಿದನು.

‘ನಾನು ಮೆಲಬರಿಗೆ ಏನೇನು ಆಡಿರಬೇಕೆಂದು ನನ್ನ ಊಹೆಯೊ, ಅದು ಯಾವ ಮನುಷ್ಯನ ಪಿತ್ತವನ್ನೂ ಕೆಣಕಬಹುದು — ನಿರ್ವಿಕಾರವಾಗಿ, ಅವನು ಯಾರೆಂಬುದನ್ನು ಚೆನ್ನಾಗಿ ಅರಿತಿದ್ದು ಆಡಿದ್ದರೆ. ಆದರೆ ನನಗೆ ಅವನು ಯಾರೆಂದು ತಿಳಿಯಲಿಲ್ಲ. ಮತ್ತು ಅವನು ಕುಡಿಸಿದ ಮದ್ಯದಿಂದ ನಾನು ಪೂರ್ತಿ ಮಂಕುಬಡಿದಂತೆ ಆಗಿದ್ದೆ. ಆದ್ದರಿಂದ ನಾನು ಏನೆಂದೆನೋ ನನಗೇ ತಿಳಿದಿರಲಿಲ್ಲ. ಸರಿ, ಗುಡಿಯನ್ನು ಮುಚ್ಚಿದ ಪರದೆಯು ಈಗ ಇಬ್ಭಾಗವಾಗಿ ಸೀಳಿದೆ. ನಾನು ಇನ್ನು ಮುಂದೆ ಹಿಂಟೋಕದಲ್ಲಿ ಯಾರ ಕಣ್ಣಿಗೂ ಬೀಳುವುದಿಲ್ಲ. ಆದ್ದರಿಂದ ನನ್ನ ಅಭಾವದಿಂದ ಅನಿಸಬಹುದಾದ ಗಾಬರಿಯನ್ನು ನಿವಾರಿಸುವುದಕ್ಕೆ ನನ್ನ ಪ್ರಥಮ ಪ್ರಯತ್ನ— ಆನಂತರ ನಾನು ಇಲ್ಲಿಂದ ಪರಾರಿ ಆಗುವುದು. ನನಗೆ ಅಪಾಯವಾಗಿದೆಯೆಂದು

ಯಾರಿಗೂ ಸಂಶಯ ಬರಕೂಡದು. ಇಲ್ಲವಾದರೆ ನನ್ನ ಬಗ್ಗೆ ಹಳ್ಳಿಯ ಹರಟೆ ಸುರುವಾಗುವುದು. ಫೆಲಿಸ್, ನಾನು ಈಗಲೇ ಒಂದು ಪತ್ರವನ್ನು ತಯಾರಿಸ ಬೇಕು — ನನ್ನ ಬಗೆಗೆ ಯಾವ ಶೋಧವೂ ನಡೆಯದಂತೆ. ನೀನು ಕಾಗದ ಪೆನ್ನು ತರುವುದಾದರೆ ಈಗಲೆ ನಾನು ಅದನ್ನು ಮಾಡಬಲ್ಲೆ. ಅದನ್ನು ಮುಗಿಸಿದಾಗಲೇ ನಾನು ಚೆನ್ನಾಗಿ ವಿಶ್ರಾಂತಿ ಪಡೆಯಬಲ್ಲೆ. ಪಾಪ, ಅವಳನ್ನು ಮೇಲೆ ಕೆಳಗೆ ಓಡಾಡಿಸಿ ಹೇಗೆ ದಣಿಸುತ್ತಿದ್ದೇನೆ ನಾನು.'

ಅವಳು ಲೇಖನ ಸಾಮುಗ್ರಿಯನ್ನು ತಂದಳು. ಮತ್ತು ಅವನು ತನ್ನ ನಾಮ ಮಾತ್ರ ಹೆಂಡತಿಗೆ ಒಂದು ಚಿಕ್ಕ ಚೀಟಿಯನ್ನು ಬರೆಯುವಾಗ ಒತ್ತಕರಡದ ಪುಸ್ತಕವನ್ನು ಅವನ ಕೈಗೆ ಆಧಾರವಾಗಿ ಎತ್ತಿ ಹಿಡಿದಳು.

'ನಿನ್ನ ತಂದೆಯು ನನ್ನ ಬಗೆಗೆ ತೋರಿಸಿದ ವೈರಭಾವವು, ನಾನು ಅವನ ಮನೆಗೆ ಬರದಂತೆ ಮಾಡಿರುತ್ತದೆ — ಅದು ನಿನಗೆ ಆಶ್ರಯ ಕೊಟ್ಟಿದ್ದರೂ ಕೂಡ. ನಮ್ಮಿಬ್ಬರ ಅಗಲಿಕೆ ಅನಿವಾರ್ಯ, ಏಕೆಂದರೆ ಈ ಅಗಲಿಕೆಯಲ್ಲಿ ನೀನು ಅವನ ಸಂಗಡ ಇರುವುದು ಖಚಿತ. ನಾನೀಗ ಪ್ರವಾಸ ಕೈಗೊಂಡಿದ್ದೇನೆ. ಅದು ಹಿಂಟೋಕ ದಿಂದ ಬಲು ದೂರ ಒಯ್ಯಲಿದೆ. ಆದ್ದರಿಂದ ಇನ್ನು ಕೆಲವು ಕಾಲ ನೀನು ನನ್ನನ್ನು ಅಲ್ಲಿ ನೋಡಲು ಬಯಸಬಾರದು' ಹೀಗೆ ದಾಂಪತ್ಯದ ಪತ್ರಗಳಲ್ಲಿಯೆ ಅತಿ ನಿರ್ಭಾವ ವಾದ ಪತ್ರವನ್ನು ಆತ ಬರೆದನು. ಅನಂತರ ತನ್ನ ವ್ಯಾವಸಾಯಿಕ ಕೆಲಸ ಬೊಗಸೆಗಳ ಹಾಗೂ ಇತರ ವ್ಯಾವಹಾರಿಕ ವಿಷಯಗಳ ಕುರಿತು ಗ್ರೇಸಳಿಗೆ ಕೆಲವು ಸೂಚನೆಗಳನ್ನು ನೀಡಿದನು ; ಮತ್ತು ತಾನು ತಲಪುವ ಸ್ಥಾನದ ಕುರಿತಾಗಲಿ, ಅವಳು ತನ್ನನ್ನು ಎಂದು ನೋಡಬಹುದೆಂಬುದರ ಒಂದು ಬಗೆಗೆ ಯಾವ ಸೂಚನೆಯನ್ನೂ ಕೊಡದೆ ಅವನು ಪತ್ರ ವನ್ನು ಮುಗಿಸಿದನು. ಅದನ್ನು ಪಾಕೀಟಿನಲ್ಲಿ ಹಾಕಿ ಮುಚ್ಚುವ ಮುಂಚೆ ಫೆಲಿಸಳಿಗೆ ಓದಿ ಹೇಳಲು ಅಣಿಯಾದನು. ಆದರೆ ಅವಳು ಅದನ್ನು ಕೇಳಲಾಗಲಿ, ನೋಡ ಲಾಗಲಿ ಒಪ್ಪಲಿಲ್ಲ. ಅವನ ಹೊಣೆಗಾರಿಕೆಯ ಆ ಮಗ್ಗಲು ಅವಳ ಸಹನೆಯನ್ನು ಮೀರಿದ ವ್ಯಥೆ. ಅವಳು ಫಿಟ್ಸ್‌ಪಿಯರ್ಸನಿಂದ ಆಚೆಗೆ ಹೊರಳಿ ಬಿಕ್ಕಿ ಬಿಕ್ಕಿ ಕಟುವಾಗಿ ಅಳತೊಡಗಿದಳು.

'ಇದನ್ನು ಕೆಲವು ಮೈಲು ದೂರದಿಂದ ನೀನು ಅಂಚೆಗೆ ಹಾಕಿಸಿಬಿಟ್ಟರೆ' ಆತ ಪಿಸುಗುಟ್ಟಿದ, ಪತ್ರ ಲೇಖನದ ಶ್ರಮದಿಂದ ದಣಿದು, 'ಶರ್ಟನ್ ಅಬ್ಬಾಸದಿಂದ ಅಥವಾ ಪೋರ್ಟಬೇಡಿಯಿಂದ ಅಂಚೆಗೆ ಹಾಕಿದರೆ, ಅದರಿಂದ ನನ್ನ ಆಶ್ರಯಸ್ಥಾನ ವೆಂದು ಈ ಮನೆಯ ಕುರಿತು ಎಲ್ಲ ಸಂಶಯವೂ ದೂರವಾಗುವುದು.'

'ಈ ಒಂದಲ್ಲ ಒಂದು ಸ್ಥಳಕ್ಕೆ ನಾನೇ ಗಾಡಿಯಲ್ಲಿ ಹೋಗಿಬರುತ್ತೇನೆ. ಇದನ್ನು ಗೌಪ್ಯವಾಗಿಡಲು ಏನನ್ನೂ ಮಾಡಬಹುದು' ಅವಳು ಗೊಣಗಿದಳು. ಅವ ನಿಗೆ ನೆರವಾಗುವ ಸಂಭ್ರಮವು ಆಗ ಒಸರಿತ್ತು ; ಭವಿಷ್ಯದ ಬಗೆಗೆ ಅಸ್ಪಷ್ಟ ಭಯ ವೊಂದು ಅವಳ ದನಿಯನ್ನು ಭಾರವಾಗಿಸಿತು.

ಇನ್ನೂ ಒಂದು ಸಂಗತಿಯನ್ನು ಮಾಡಬೇಕಾಗಿದೆಯೆಂದು ಫಿಟ್ಝ್‌ಪಿಯರ್ಸ್ ಅವಳಿಗೆ ಹೇಳಿದನು, 'ಹುಲ್ಲು ಹಾಸಿಗೆ, ಬೇಲಿಯ ಮೇಲಿಂದ ಸರಿದು ಬರುವಾಗ' ಆತ ಅಂದನು, 'ನಾನು ಅದರ ಕಂಬಿಗೆ ನೆತ್ತರ ಬಳಿದೆನು. ಅದು ಅದರ ಬಿಳಿಯ ಬಣ್ಣದ ಮೇಲೆ ತೀರ ಮೂಡಿಕಾಣುತ್ತದೆ — ಆ ಕತ್ತಲೆಯಲ್ಲೂ ನಾನು ಅದನ್ನು ಕಂಡೆ. ಏನೇ ಕಷ್ಟಬರಲಿ, ಅದನ್ನು ತೊಳೆದು ಹಾಕಬೇಕು. ಅದನ್ನೂ ಮಾಡುವಿಯಾ, ಫೆಲಿಸ್ ?'

ಅಂಥ ಆರಾಧನೆಯ ಪ್ರಸಂಗಗಳಲ್ಲಿ ಹೆಣ್ಣು ಏನು ಮಾಡಲಿಕ್ಕಿಲ್ಲ? ತುಂಬ ದಣಿದಿದ್ದಳು. ಆದರೂ ಅವಳು ಹೋದಳು — ಅಡ್ಡತಿಡ್ಡ ಹಾಯ್ದು, ಆ ಮಾಳಿಗೆ ಇಳಿದು ತಳದ ಅಂಕಣಕ್ಕೆ, ಅಲ್ಲಿಂದ ಒಂದು ಕಂದೀಲು ಹುಡುಕಲಿಕ್ಕೆ. ಅದನ್ನು ಹೊತ್ತಿಸಿ ತನ್ನ ನಿಲುವಂಗಿಯಲ್ಲಿ ಅಡಗಿಸಿಕೊಂಡಳು. ಆಮೇಲೆ ಒಂದು ಒದ್ದೆ ಸ್ಪಂಜು ತಂದಳು ಮತ್ತು ಕಗ್ಗತ್ತಲೆಯ ಆ ರಾತ್ರಿಯಲ್ಲಿ ಹೊರಗೆಬಿದ್ದಳು. ಅವಳು ಹತ್ತಿರ ಬರುತ್ತಲೆ ಆ ಬಿಳಿಯ ಬೇಲಿಯ ಕಂಬಿ ಅವಳ ಕಣ್ಣಿಗೆ ಕೆಕ್ಕರಿಸಿ ನೋಡಿತು. ಅವಳು ಹೊದ್ದುತಂದ ಕಂದೀಲಿನ ಕಿರಣವು ಆ ನೆತ್ತರದ ಮೇಲೆ ಬಿದ್ದಿತು — ಅದು ಎಲ್ಲಿ ಕಾಣಬಹುದೆಂದು ಆತ ಹೇಳಿದ್ದನೋ ಅಲ್ಲಿಯೇ ಇತ್ತು. ಅವಳು ನಡುಗಿದಳು. ಇದೆಲ್ಲವೂ ಒಂದು ದಿನಕ್ಕೆಲ್ಲ ತಾಳಲಾರದಷ್ಟು ಹೆಚ್ಚಾಯಿತು. ಆದರೂ ತತ್ತರಿಸುವ ಕೈಯಿಂದ ಆ ಕಂಬಿಯನ್ನು ಸ್ಪಂಜದಿಂದ ಉಜ್ಜಿ ಸ್ವಚ್ಛಮಾಡಿದಳು. ಮತ್ತು ಮನೆಗೆ ಮರಳಿದಳು.

ಇವೆಲ್ಲ ಹಲವಾರು ಕ್ರಮಗಳು ತೆಗೆದುಕೊಂಡ ವೇಳೆ ಎರಡು ತಾಸುಗಳಿಗೇನೂ ಕಡಿಮೆಯಾಗಿರಲಿಲ್ಲ. ಎಲ್ಲವನ್ನೂ ಮಾಡಿ ಮುಗಿಸಿದ ಮೇಲೆ, ಅವನ ತಾತ್ಪೂರ್ತಿಕ ಹಾಸಿಗೆಯನ್ನು ನುಣ್ಣಗೆ ಸರಿಪಡಿಸಿದ ಮೇಲೆ ಅವಳು ಅವನನ್ನು ಮುತ್ತಿಟ್ಟಳು; ಅವಳಿಗೆ ತೋಚಿದ್ದೆಲ್ಲ ವಸ್ತುಗಳನ್ನೂ ಅವನ ಕೈನಿಲುಕಿನಲ್ಲಿ ಇಟ್ಟಳು. ಮತ್ತು ಅವನನ್ನು ಬೀಳ್ಕೊಂಡು ಆ ಕೋಣೆಗೆ ಹೊರಗಿನಿಂದ ಬೀಗ ಹಾಕಿದಳು.

೩೭

ದೂರದ ಪಟ್ಟಣವೊಂದರ ಅಂಚೆ ಮುದ್ರೆ ಹೊತ್ತು ಗಂಡನ ಪತ್ರವು ಗ್ರೇಸಳ ಕೈಗೆ ಸೇರಿತು. ಆಗ ಆತ ತನ್ನಿಂದ ಒಂದೆರಡು ಮೈಲು ಒಳಗೆ ಗಾಯಗೊಂಡು ಬಿದ್ದಿರುವನೆಂಬ ಸಂಗತಿ ಅವಳ ಮನಸ್ಸಿನಲ್ಲಿ ಸುಳಿಯಲೇ ಇಲ್ಲ. ಅವಳಿಗೆ ಹಾಯೆನಿಸಿತು. ಅದು ಯಾವುದೇ ಸ್ವರೂಪದ್ದಾಗಿದ್ದರೂ, ಫಿಟ್ಝ್‌ಪಿಯರ್ಸ್ ತನ್ನ ತಂದೆಯೊಂದಿಗೆ ನಡೆದ ಆ

ಕಲಹದ ಬಗೆಗೆ ಇನ್ನು ಹೆಚ್ಚು ಕಟುವಾಗಿ ಬರೆದಿಲ್ಲ. ಆದರೆ ಅವನ ಆ ಒಕ್ಕಣಿಕೆಯು ಸಾಮಾನ್ಯ ನಿರ್ಭಾವ-ನಿಷ್ಠುರತೆ ಅವಳಲ್ಲಿ ತುಸು ಮುಂಚೆ ಬೇರೆ ಘಟನೆಗಳು ಹೊತ್ತಿಸಿದ ಕಿಡಿಗಳನ್ನು ಆರಿಸಿಬಿಟ್ಟಿತು.

ಸುದ್ದಿಯು ಆ ಕೇಂದ್ರದಿಂದ ಹಿಂಟಾಕಿನಲ್ಲಿ ತಿಳಿಸಲಾಯಿತು — ಡಾಕ್ಟರರು ಊರು ಬಿಟ್ಟುಹೋದರು. ಮತ್ತು ಆತ ಆ ಅಪಘಾತದ ರಾತ್ರಿ ಮರಳಿ ಬಂದಿಲ್ಲವೆಂಬುದು ಮೆಲಬರಿ ಕುಟುಂಬ ಬಿಟ್ಟು ಬೇರೆ ಯಾರಿಗೂ ಗೊತ್ತಿದ್ದಿಲ್ಲ. ಆದ್ದರಿಂದ ಆ ಕುರಿತು ಊರಿನಲ್ಲಿ ಯಾವ ಸಂಭ್ರಮವೂ ಪ್ರಕಟವಾಗಲಿಲ್ಲ.

ಹೀಗೆ ಮೇ ತಿಂಗಳ ಆರಂಭದ ದಿನಗಳು ಕಳೆದವು. ಆ ತಿಂಗಳ ನಡುವೆ ಒಂದು ಸಂಜೆಗೆ ಮೈಯಲ್ಲಿ ಸುತ್ತಿ ಹೊದ್ದಿಕೊಂಡ ಒಂದು ಆಕೃತಿ ಒಂದು ಕಂಕುಳಲ್ಲಿ ಹಂಸಪಾದ (ಆನುಗೋಲು) ಮತ್ತು ಇನ್ನೊಂದು ಕೈಯಲ್ಲಿ ಕೈಗೋಲು ಹಿಡಿದು, ಹಿಂಟಾಕ ದೊಡ್ಡ ಮನೆಯಿಂದ ಸದ್ದಿಲ್ಲದೆ ಹೊರಗೆ ಸರಿದು ಹುಲ್ಲು ಹಾಸನ್ನು ದಾಟಿ ಆಚೆಯ ಮರಗಳ ಆಶ್ರಯ ಸೇರಿ ಅಲ್ಲಿಂದ ನಿಧಾನವಾಗಿ ಪ್ರಯಾಸದಿಂದ ಹೆದ್ದಾರಿಯ ತೀರ ಹತ್ತಿರದ ಸ್ಥಳಕ್ಕೆ ನಡೆದುಹೋಯಿತು. ಆದರೆ ಇದನ್ನು ಇರುಳುನಡೆಯ ಹಕ್ಕಿಗಳೂ ಪ್ರಾಣಿಗಳೂ ಅಲ್ಲದೆ ಇನ್ನಾರೂ ಗಮನಿಸಲಿಲ್ಲ.

ಈ ರಹಸ್ಯಮಯ ವ್ಯಕ್ತಿ ಇಷ್ಟು ವೇಷ ಮರೆಯಿಸಿದ್ದ, ಅವನ ಹೆಂಡತಿಯೇ ಅವನನ್ನು ಗುರುತಿಸುವುದು ಕಷ್ಟವಾಗಬಹುದಿತ್ತು. ಫೆಲಿಸ್ ಚಾರ್ಮಂದ ಇಂಥ ವೇಷಾಂತರದ ವಿದ್ಯೆಯಲ್ಲಿ ಒಳ್ಳೆ ಪಳಗಿದ ಕೈಗಾರ್ತಿ. ಆ ಸಾಮಾನು ತುಂಬಿದ ಕೋಣೆಯಲ್ಲಿ ಎಲ್ಲೋ ಮೂಲೆಗುಂಪಾಗಿದ್ದ ಅವಳ ಹಳೆಯ ರಂಗಸಜ್ಜಿಕೆಯ ಕಲೆಯ ಸಾಹಿತ್ಯದಿಂದ ಅವಳು ಫಿಟ್ಜಪಿಯರ್ಸನಿಗೆ ಬಣ್ಣ ಬಳಿದಿದ್ದಳು, ಮೈಗೆ ಬಟ್ಟೆ ತುಂಬಿ ವೇಷ ಕಟ್ಟಿದ್ದಳು.

ಹೆದ್ದಾರಿಯಲ್ಲಿ ಅವನಿಗೆ ಒಂದು ಮುಚ್ಚಿದ ಸಾರೋಟು ಗಾಡಿ ಸಿಕ್ಕಿತು. ಅದು ಅವನನ್ನು ಶರ್ಟನ್ ಅಬ್ಬಾಸಿಗೆ ಒಯ್ಯಿತು. ಅಲ್ಲಿಂದ ಅವನು ದಕ್ಷಿಣ ಕರಾವಳಿಯ ತೀರ ಹತ್ತಿರದ ಬಂದರಕ್ಕೆ ಮುಂದರಿದು ಕೂಡಲೆ ಬ್ರಿಟಿಷ್ ಕೊಲ್ಲಿಯನ್ನು ದಾಟಿದನು.

ಆದರೆ ಇದಾದ ಮೂರು ದಿನಗಳ ಮೇಲೆ ಚಾರ್ಮಂದ ತನ್ನ ಪ್ರವಾಸದ ಹಾಗೂ ಯೂರೋಪ್ ಪ್ರವಾಸದ ದೀರ್ಘಾವಧಿಯ ಯೋಜನೆಯಿಂದ ಹೊರಟಳೆಂಬುದು ಪ್ರತಿಯೊಬ್ಬರಿಗೂ ಗೊತ್ತಾಯಿತು. (ಈ ಯೋಜನೆ ಮತ್ತೆ ಮತ್ತೆ ಮುಂದೂಡಲ್ಪಟ್ಟಿತ್ತು.) ಆಕೆ ಒಂದು ಮುಂಜಾನೆ ಶಕ್ಯವಿದ್ದಷ್ಟು ಆಡಂಬರವಿಲ್ಲದೆ, ಪ್ರದರ್ಶನವಿಲ್ಲದೆ ಹೊರಟುಹೋದಳು; ಜತೆಗೆ ಒಬ್ಬ ದಾಸಿಯನ್ನೂ ಒಯ್ಯಲಿಲ್ಲ. ಪರಿಚರ್ಯೆಕ್ಕೆ ಒಬ್ಬಳು ಮುಂದೆ ಪ್ರವಾಸದಲ್ಲಿ ಬಂದು ಕೂಡುವವಳಿದ್ದಳೆಂದು ಆಕೆ ಹೇಳಿದಳು. ಅನಂತರ ಹಿಂಟಾಕ ದೊಡ್ಡ ಮನೆ, ಆಗಾಗ್ಗೆ ನಿರ್ಜನವಾಗಿರು ವಂತಹದು, ಈ ಸಲ ಬಾಡಿಗೆಗೆ ಕೊಡುವದಿತ್ತು.

ವಸಂತಋತು ಬೇಸಿಗೆಯಲ್ಲಿ ಸರಿದಿದ್ದಿಲ್ಲ. ಅತ್ಯುತ್ತಮ ಪುರಾವೆಯು ಮೇಲೆ

ಆಧರಿಸಿದ ಒಂದು ಖಚಿತವಾದ ವದಂತಿ ನೆರೆಹೊರೆಯನ್ನು ಆ ಪುರಾವೆಯನ್ನು ವ್ಯಾಪಿಸಿತು. ಶ್ರೀಮತಿ ಚಾರ್ಮಂದಳೂ ಫಿಟ್ಜ್‌ಪಿಯರ್ಸನೂ ಬಾದನ್ನಿನಲ್ಲಿ ಒಟ್ಟಿಗೆ ಕಂಡುಬಂದರು. ಅದೂ, ಈವರೆಗೆ, ಚಳಿಗಾಲದಿಂದಲೂ ಈ ಹಳ್ಳಿಯ ಸಮಾಜವನ್ನು ಕೋಲಾಹಲಗೊಳಿಸಿದ ಆ ಪ್ರಶ್ನೆಯು ಪೂರ್ಣ ವಿರಾಮವನ್ನು ಹೊಂದುವಂಥ ನಿಕಟ ಸಂಪರ್ಕದಲ್ಲಿ.

ಗ್ರೇಸಳಿಗಿಂತ ಹೆಚ್ಚಾಗಿ ಮೆಲಬರಿ ಮಾನಗೇಡಿನ ಕೊಳ್ಳದಲ್ಲಿಯೆ ಬಿದ್ದಂತಿದ್ದನು. ಅವನ ಜೀವ ಕುಸಿದು ಕುಗ್ಗಿಹೋಯಿತು.

ಆದರೆ ಆತ ಪ್ರತಿ ವಾರಕ್ಕೆ ಒಮ್ಮೆ ವಾಡಿಕೆಯಂತೆ ಪೇಟೆಗೆ ಹೋಗುತ್ತಿದ್ದ. ಒಂದು ದಿನ ಆತ ಕಾಲುವೆಯಗುಂಟ ಹೋಗುತ್ತಿರುವಾಗ — ಅವನ ಮಾನಸಿಕ ಅವಸ್ಥೆಯನ್ನು ಅವನ ನಡಿಗೆಯೇ ಹೆಚ್ಚಾಗಿ ಸೂಚಿಸುತ್ತಿತ್ತು. ಅವನಿಗೆ ಪರಿಚಿತವಾದ ಒಂದು ದನಿಯು ಅವನ ಹೆಸರನ್ನೆ ಆಡಿದ್ದು ಅವನ ಕಿವಿಗೆ ಬಿದ್ದಿತು. ಅವನು ಹೊರಳಿ ಫ್ರೆಡ್ ಬ್ಯೂಕೋಕ್ ಎಂಬ ಸದ್ಗೃಹಸ್ಥನನ್ನು ನೋಡಿದನು. ಆತ ಹಿಂದೊಮ್ಮೆ ಒಳ್ಳೆ ಯಶಸ್ವಿಯಾದ ವಕೀಲನ ಕಾರಕೂನ; ಸ್ಥಾನಿಕ ಪುಟ್ಟಶಾಮಿ. ಉಡಿಗೆ ತೊಡಿಗೆಯಲ್ಲಿ ಒನಪುಗಾರ; ಶರ್ಟನ್ನಿನಲ್ಲಿಯೇ ಆತ ಚತುರನೆಂದು ಕರೆಯಲ್ಪಡುತ್ತಿದ್ದ. ಅವನ ಮಿದುಳ ನೆರವಿಲ್ಲದೆ ಅವನನ್ನು ನೇಮಿಸಿಕೊಂಡ ವಕೀಲರಿಗೆ ಉಳಿಗಾಲವೆ ಇದ್ದಿಲ್ಲ. ಆದರೆ ಅನಂತರ ಬ್ಯೂಕೊಕ್ ಮಣ್ಣು ಮುಕ್ಕಿದ್ದನು. ಕೆಳಮಟ್ಟಕ್ಕೆ ಇಳಿದಿದ್ದನು. ಅವನನ್ನು ಬಹಳ ಕಡೆಗೆ ಆಮಂತ್ರಿಸುತ್ತಿದ್ದರು. ಬೇಸಾಯಗಾರರ ಸಭೆಗಳಲ್ಲಿ, ಪುರಪ್ರಮುಖರ ಮೇಜವಾನಿಗಳಲ್ಲಿ ಆತ ಹಾಡು ಹಾಡುತ್ತಿದ್ದನು. ಒಟ್ಟಾರೆ ಅವನ ಅತಿ ಜಾಣ ಮಿದುಳಿಗಾಗಲಿ ಮೈಗಾಗಲಿ ಕ್ಷೇಮವಾಗದಷ್ಟು ಸಲ ಆಗಾಗ್ಗೆ ಆತ ತಿಂದು ಕುಡಿದು ಕೊಬ್ಬಿದ್ದನು. ಅವನು ತನ್ನ ಚಾಕರಿ ಕಳೆದುಕೊಂಡು ತನ್ನ ಗುಣಗಳನ್ನು ಬೇರೆಡೆಗೆ ಗಳಿಕೆಗೆ ಹಚ್ಚಲು ಹೋಗಿ ಅಂಡಲೆದು ಕೆಲಕಾಲ ದೂರವಿದ್ದು, ಈಗ ತನ್ನೂರಿಗೆ ಮರಳಿ ಬಂದಿದ್ದನು. ಇಲ್ಲಿ ಹಿಂಟೋಕಿನಲ್ಲಿ ಇವೆಲ್ಲ ಘಟನೆಗಳು ನಡೆಯುತ್ತಿದ್ದಾಗ್ಗೆ, ಆತ ಮುಂದಿಗೆ ಕಾಯಿದೆಯ ಸಲಹೆ ಕೊಡತೊಡಗಿದ್ದನು, ಅದೂ ಆಶ್ಚರ್ಯವೆನಿಸುವಷ್ಟು ಕಡಿಮೆ ರುಸುಮಿಗೆ. ತನ್ನ ವ್ಯವಸಾಯವನ್ನು ಆತ ಮದ್ಯದಂಗಡಿಗಳ ಬೆಂಚುಗಳ ಮೇಲೆಯೆ ಸಾಗಿಸುತ್ತಿದ್ದನು. ಹಳ್ಳಿಗರ ಮೃತ್ಯುಪತ್ರಗಳನ್ನು ಅರ್ಧ ಕ್ರೌನಿಗೆ ಮಾಡಿಕೊಡುತಿದ್ದನು. ದೊಡ್ಡ ಪಂಡಿತನ ಕಂಠದಿಂದ ಮಸಿ ದೌತಿ ಲೆಕ್ಕಣಿಕೆ ಮತ್ತು ಅರ್ಧ ಪೆನಿಯ ಹಾಳೆಗಾಗಿ ಕೂಗಿ, ಮೇಜಿನ ಮೇಲೆ ಕಪ್ಪು ಗ್ಲಾಸುಗಳಿದ್ದು ಬಿದ್ದ ವರ್ತುಳದಲ್ಲಿ ಕೈಯಿಂದ ಉದ್ದಿ ಅಲ್ಲಿ ಅದನ್ನು ಇಟ್ಟು ಅದರ ಮೇಲೆ ಕರಾರು ಪತ್ರ ಪ್ರತಿಜ್ಞಾಪತ್ರಗಳ ಕರಡು ಬರೆದು ತೆಗೆಯುತಿದ್ದನು. ಬಾಳಿನ ಆರಂಭದಲ್ಲಿ ಒಮ್ಮೆ ನೆಟ್ಟ ವಿಚಾರವನ್ನು ಮುಂದೆ ಕಿತ್ತು ಹಾಕುವುದು ತೀರ ಕಠಿಣ. ಈ ಸುತ್ತಲಿನ ಹಲವಾರು ವಯೋವೃದ್ಧ ವ್ಯಾಪಾರಿಗಳೂ ಈ ಫ್ರೆಡ್ ಬ್ಯೂಕೊಕ್ ಬಹಳಷ್ಟು ಕಾಯಿದೆ ಬಲ್ಲವನೆಂಬ ಕಲ್ಪನೆಗೆ ಇನ್ನೂ ಅಂಟಿ ಕೊಂಡಿದ್ದರು.

ಅವನೆ ಮೆಲಬರಿಯನ್ನು ಹೆಸರೆತ್ತಿ ಕರೆದವನು. 'ನೀವು ಬಹಳೇ ಕುಗ್ಗಿದಂತೆ ಕಾಣುತ್ತೀರಿ, ಮೆಲಬರಿ ರಾಯರೆ, ಹಾಗೆ ನಾನು ಅನ್ನಬಹುದಾದರೆ—' ಆತ ಅಂದನು. ಆ ಮರದ ವ್ಯಾಪಾರಿ ಅತ್ತ ಹೊರಳಿದಾಗ, 'ಆದರೆ ನಂಗೆ ಗೊತ್ತು—ನಂಗೆ ಗೊತ್ತು. ಬಹಳ ಕೆಟ್ಟ ಪ್ರಸಂಗ—ನೋಡಿರಿ, ಬಹಳ ಕೆಟ್ಟದ್ದು. ನಿಮಗೆ ಗೊತ್ತು ನಾನು ಕಾಯಿದೆ ಕಟ್ಟಿನಲ್ಲಿಯೆ ಬೆಳೆದವನು. ಮತ್ತು ಇಂಥ ಪ್ರಸಂಗಗಳಿಗೆ ವ್ಯವಸಾಯದಿಂದಲೂ ನಾನು ಹೊಸಬನಲ್ಲ, ಸೈ. ಫಿಟ್ಜ್‌ಯರ್ಸನ ಹೆಂಡತಿಗೆ ಒಂದು ಪರಿಹಾರದ ಉಪಾಯವಿದೆ.'

'ಹೇಗೆ—ಏನು ಉಪಾಯ ?' ಮೆಲಬರಿ ಕೇಳಿದನು.

'ಹೊಸ ಕಾಯಿದೆಯಲ್ಲಿ, ಸ್ವಾಮಿ ಕಳೆದ ವರ್ಷವೆ ಹೊಸದೊಂದು ಕೋರ್ಟು ತೆರೆದಿದೆ. ಮತ್ತು ಹೊಸ ಕಾನೂನಿನನ್ವಯ—೨೦-೨೧, ಕಲಂ, ಒಳ ಕಲಂ ೮೫ ರ ಅನ್ವಯ—ಮದುವೆಯಿಂದ ಬಿಡುಗಡೆ, ಮದುವೆ ಆಗುವಷ್ಟೇ ಸುಲಭ. ಬೇರೆ ಹೊಸ ಪಾರ್ಲಿಮೆಂಟಿನ ಕಾಯಿದೆ ಆಗಬೇಕಾಗಿಯೇ ಇಲ್ಲ; ಇನ್ನು ಮುಂದೆ ಶ್ರೀಮಂತರಿಗೆ ಒಂದು ಕಾಯಿದೆ ಬಡವರಿಗೆ ಇನ್ನೊಂದು—ಎಂಬ ಪ್ರಪಂಚವೇ ಇಲ್ಲ. ಆದರೆ ಹೀಗೆ ಒಳಗೆ ಬನ್ನಿ—ನಾನು ಇದೀಗ ಬಿಸಿ ರಂ ಕುಡಿಯುವವನಿದ್ದೆ. ಅದೆಲ್ಲ ನಿಮಗೆ ಬಿಡಿಸಿ ಹೇಳುತ್ತೇನೆ.

ಈ ತಿಳುವಳಿಕೆ ಮೆಲಬರಿಯನ್ನು ಚಕಿತಗೊಳಿಸಿತು. ಆತ ಪತ್ರಿಕೆಗಳನ್ನು ಓದುವದೆ ಕಡಮೆಯಾಗಿತ್ತು. ಆತ ತನ್ನ ಚಟಗಳಲ್ಲಿ ನಿಷ್ಠುರ ನಡಾವಳಿಯ ಮನುಷ್ಯನಾಗಿದ್ದ. ಅಲ್ಲದೆ ಫ್ರೆಡ್ ಬ್ಯೂಕೊಕ್‌ನೊಂದಿಗೆ ಹೆಂಡದಂಗಡಿಯನ್ನು ಹೊಕ್ಕುವ ರುಚಿಯೂ ಅವನಿಗಿದ್ದಿಲ್ಲ. ಪ್ರಪಂಚದಲ್ಲಿ ಬೇರೆ ಯಾವ ವಿಷಯದ ಬಗೆಗೂ ಅವನಂಥ ಒಂದು ವ್ಯಕ್ತಿಯ ಮಾತಿನಿಂದ ಆತ ಪ್ರಭಾವಿತನಾಗಿಯೇ ಉಳಿಯುತ್ತಿದ್ದ. ಆದರೆ ತನ್ನ ಬಡ ಹುಡುಗಿಯನ್ನು ಬಂಧನದಿಂದ ಬಿಡುಗಡೆ ಮಾಡಬಹುದೆಂಬ ಕಲ್ಪನೆಯೇ ಅಷ್ಟು ಮೋಹಕ. ಅದು ಅವನ ವಿಚಿಕಿತ್ಸಕ ವಿವೇಕವನ್ನೇ ಮರೆಯಿಸಿತು. ಆತ ಆ ಮಾಜೀ ವಕೀಲರ ಕಾರಕೂನನನ್ನು ತಡೆಯದಾದ ಮತ್ತು ಅವನೊಂದಿಗೆ ಆ ಅಂಗಡಿಯನ್ನು ಹೊಕ್ಕನು.

ಅಲ್ಲಿ ಅವರಿಬ್ಬರೂ ರಂ ಕುಡಿಯಲು ಕೂತರು. ಅದರ ಹಣ ಕ್ರಮವಾಗಿಯೇ ಮೆಲಬರಿಯೇ ತೆತ್ತನು. ಬ್ಯೂಕೊಕ್ ಬೆಂಚಿಗೆ ಶ್ರೀಮದ್ಗಾಂಭೀರ್ಯದಿಂದ ಆನಿಕೊಂಡು ಕೂತನು, ಮುಂದಿಟ್ಟ ಮದ್ಯವನ್ನು ಗಮನಿಸುವ ಪರಿವೆಯೇ ಇಲ್ಲದಂತೆ, ಆದಾಗ್ಯೂ ಅದು ಅಷ್ಟು ಬೇಗ ಮಾಯವಾಗುತ್ತಿದ್ದುದೂ ಒಂದು ರಹಸ್ಯವಾಗಿತ್ತು.

ಬ್ಯೂಕೊಕನು ತನ್ನ ಈ ಶ್ರಾವಕನಿಗೆ ಬೋಧಿಸಿದ ಹೊಸ ವಿವಾಹವಿಚ್ಛೇದ ಕಾನೂನುಗಳಲ್ಲಿ ಎಷ್ಟು ಅತಿಶಯೋಕ್ತಿ ಇತ್ತು ಎಷ್ಟು ವಂಚನೆ ಎಂಬುದು ಎಂದೂ ನಿಷ್ಕರ್ಷವಾಗಲಿಲ್ಲ. ಆದರೆ ಗ್ರೇಸಳು ಸುಲಭವಾಗಿ ಸ್ವತಂತ್ರಳಾಗಲು ಬರುವಂತಿದೆಯೆಂಬ ಪ್ರಶಸ್ತವಾಗಿ ಕಾಣುವ ಕಥೆಯನ್ನು ಆತ ಹೇಳಿದನು. ಅದಕ್ಕೆ ಅವಳ ತಂದೆ

ಆ ಯೋಜನೆಯಿಂದ ತುಂಬ ಪ್ರಭಾವಿತನಾದನು. ಅಲ್ಲಿ ಕೂತಲ್ಲಿ ಮೆಲಬರಿ ತುಟಿಗಳನ್ನೆ ತೊಯಿಸಿದ್ದಿಲ್ಲ. (ಮುಂದಿಟ್ಟ ಮದ್ಯವನ್ನು ಒಂದು ಹನಿಯೂ ಕುಡಿದಿದ್ದಿಲ್ಲ.) ಆದರೆ ತಾನು ಈ ಅಂಗಡಿಯಿಂದ ಹೊರಗೆ ಹೇಗೆ ಬಂದೆ, ಎಲ್ಲಿ ಯಾವಾಗ ತನ್ನ ಗಿಗ್‌ಗಾಡಿಯನ್ನು ಏರಿ ಕುಳಿತೆ ಮತ್ತು ಮನೆಯ ಹಾದಿ ಹಿಡಿದೆ — ಏನೇನೂ ಅವನಿಗೆ ಗೊತ್ತಾಗಲಿಲ್ಲ.

ಆದರೆ ಮನೆಗೆ ಬಂದದ್ದನ್ನು ಆತ ಕಂಡುಕೊಂಡನು. ಅವನ ಮಿದುಳೆಲ್ಲ ಉದ್ದಕ್ಕೂ ತನ್ನ ಸಂಭ್ರಮದಲ್ಲಿ ಜಾಗಟೆಯಂತೆ ಬಡಿದುಕೊಳ್ಳುತ್ತಿತ್ತು. ಢಣ ಢಣ ಎಂದು ಗ್ರೇಸಳನ್ನು ಕಾಣುವ ಮುಂಚೆ ಆತ ಆಕಸ್ಮಿಕವಾಗಿ ವಿಂಟರಬೋರ್ನನನ್ನು ಭೆಟ್ಟಿ ಯಾದನು. ಅವನು ಯಹೂದಿಗಳ ಕೌನ್ಸಿಲ್ಲು ಕಂಡ ಸಂತ ಸ್ಟೀಫನ್‌ನಂತೆ, ದೇವ ದೂತನ ಮುಖದಂಥ ಚರ್ಯೆಯುಳ್ಳವನಾಗಿ ಕಂಡನು.

ತನ್ನ ಕುದುರೆಯನ್ನು ಕೈಬಿಟ್ಟು, ವಿಂಟರಬೋರ್ನನನ್ನು ಭುಜ ಹಿಡಿದು, ಚೆಲ್ಲಿ ಸುಲಿದ ಓಕ ಕಟ್ಟಿಗೆಯ ರಾಶಿಯ ಕಡೆಗೆ ಒಯ್ದನು; ಆ ರಾಶಿ ಒಂದು ಖಾಸಗೀ ಬೇಲಿಯ ಕೆಳಗೆ ಇತ್ತು.

'ಜೈಲ್ಸ' ಆತ ಅಂದನು. ಆ ತೊಣೆಗಳ ಮೇಲೆ ಇಬ್ಬರೂ ಕೂತಮೇಲೆ, 'ದೇಶದಲ್ಲಿ ಈಗ ಹೊಸ ಕಾನೂನು ಒಂದು ಬಂದಿದೆ. ಗ್ರೇಸಳು ತೀರ ಸುಸೂತ್ರವಾಗಿ ಬಿಡುಗಡೆ ಹೊಂದಬಹುದು. ಇದು ನನಗೆ ತೀರ ಒಂದು ಯೋಗಾಯೋಗದಿಂದ ಗೊತ್ತಾಯಿತು. ಇಲ್ಲವಾದರೆ ಇನ್ನು ಹತ್ತು ವರ್ಷ ಕಳೆದರೂ ನನಗೆ ತಿಳಿದು ಬರುತ್ತಿದ್ದಿಲ್ಲ. ಅವಳು ಆತನಿಂದ ಬಿಡಿಸಿಕೊಳ್ಳಬಹುದು — ಕೇಳಿದೆಯಾ? — ಬಿಡುಗಡೆ ಆಗಬಹುದು. ಇದನ್ನು ಆಲೋಚಿಸು ಗೆಳೆಯ ಜೈಲ್ಸ.'

ಈ ಹೊಸ ಕಾಯಿದೆಯ ಪರಿಹಾರೋಪಾಯದ ಬಗೆಗೆ ತಾನು ಕೇಳಿಕೊಂಡದ್ದನ್ನೆಲ್ಲ ಅವನು ಬಣ್ಣಿಸಿದನು. ಇದಕ್ಕೆ ವಿಂಟರಬೋರ್ನ ಕಾಣಿಸಿದ ಪ್ರತಿಕ್ರಿಯೆ ಎಂದರೆ ಅವನ ಬಾಯಿಯ ಸುತ್ತು ಹತ್ತಿಕ್ಕಿದ ಒಂದು ಕಂಪನ. ಮೆಲಬರಿ ಮುಂದರಿದನು, 'ನನ್ನ ಮಗನೆ, ಇನ್ನು ನೀನು ಅವಳನ್ನು ಪಡೆಯಬಹುದು — ನಿನಗೆ ಬೇಕಿದ್ದರೆ' ಹೀಗೆ ಮಾತಾಡುವಾಗ ಅವನ ಭಾವನೆಗಳು ಗಾತ್ರದಲ್ಲಿ ಬೆಳೆದಿದ್ದವು; ಮತ್ತು ಆ ಹಳೆಯ ವಿಚಾರದ ಉಚ್ಚಾರಣೆಯ ಶಬ್ದವು ಅವನ ನೋಟವನ್ನು ಮಂಜಿನಲ್ಲಿ ಮುಳುಗಿಸಿತು.

'ನಿಮಗೆ ಖಾತ್ರಿಯಾಗಿದೆಯೇ —ಈ ಹೊಸ ಕಾನೂನಿನ ಬಗೆಗೆ', ವಿಂಟರ ಬೋರ್ನ ಕೇಳಿದನು. ಅವನಲ್ಲಿ ಭಯಾನಕ ಸಂಶಯದೊಂದಿಗೆ ಭೂತಾಕಾರದ ಹರ್ಷವು ಅದಲು ಬದಲಾಗಿ ತಲೆದೋರುತಿತ್ತು; ಅದರಿಂದ ಅವನು ತೀರ ಅಸ್ವಸ್ಥನಾದನು. ಆ ಅಸ್ವಸ್ಥತೆಯಲ್ಲಿ ಮೆಲಬರಿಯ ಕೊನೆಯ ಹೇಳಿಕೆಯನ್ನು ಪೂರ್ತಿ ಸ್ವೀಕರಿಸಲು ಆತ ನಿರಾಕರಿಸಿದನು.

ತನಗೆ ಯಾವುದೇ ಅನುಮಾನವಿಲ್ಲವೆಂದು ಮೆಲಬರಿಯು ಅಂದನು. ಏಕೆಂದರೆ ಬ್ಯೂಕೊಕ್‌ನೊಂದಿಗೆ ನಡೆದ ಮಾತುಕತೆಯ ನಂತರ ಯಾವದೊ ವಾರಪತ್ರಿಕೆಯಲ್ಲಿ ಇಂಥ ಒಂದು ಕಾನೂನಿನ ಬದಲಾವಣೆಯ ಬಗೆಗೆ ತಾನೂ ಓದಿದ್ದು ಅವನ ನೆನಪಿಗೆ

ಬಂದಿತು. ಆದರೆ ಆ ಕ್ಷಣಕ್ಕೆ ಅಂಥ ಅನಿರ್ವಾಹ ಭಯಂಕರ ಉಪಾಯಗಳಲ್ಲಿ ಆಸಕ್ತಿ ಇಲ್ಲದಿದ್ದರಿಂದ ಅವನು ಅದನ್ನು ಹಾಗೆಯೆ ದಾಟಿ ಮುಂದರಿದಿದ್ದನು.

'ಆದರೆ ಈ ವಿಷಯ ಇನ್ನು ಒಂದು ದಿನ ಮಾತ್ರವೂ, ಅನುಮಾನದಲ್ಲಿ ನಾನು ಉಳಿಯಗೊಡುವುದಿಲ್ಲ', ಆತ ಮಾತು ಮುಂದರಿಸಿದನು. 'ನಾನು ಲಂಡನ್ನಿಗೆ ಹೋಗುತ್ತೇನೆ. ಬ್ಯೂಕೊಕ್ ನನ್ನ ಸಂಗಡ ಹೋಗುತ್ತಾನೆ. ಶಕ್ಯವಿದ್ದಷ್ಟು ಬೇಗ ನಾವು ಈ ಬಗ್ಗೆ ಉತ್ತಮ ಕಾಯಿದೆಯ ಸಲಹೆ ಪಡೆಯುತ್ತೇವೆ. ಬ್ಯೂಕೊಕ್ ಪೂರಾ ವಕೀಲನೆ. ಕುಡಿಯುವ ದಾಹ ಬಿಟ್ಟರೆ ಅವನಲ್ಲಿ ಇನ್ನೇನೂ ದೋಷವಿಲ್ಲ. ಹಿಂದೊಮ್ಮೆ ಆತ ಕಾಯಿದೆಯ ಕಗ್ಗಂಟು ಬಿಡಿಸುವುದರಲ್ಲಿ ಶರ್ಟನ್ ಊರಿಗೇ ದೊಡ್ಡ ಆಧಾರವಾಗಿದ್ದ—ನಾನು ಬಲ್ಲೆ.'

ವಿಂಟರಬೋರ್ನನ ಉತ್ತರ ತೀರ ಸ್ಪಷ್ಟವಿತ್ತು. ಈ ಕ್ಷಣಕ್ಕೆ ಹೊಸ ಸಾಧ್ಯಾಸಾಧ್ಯತೆಗಳು ಅವನಿಗೆ ವಿಚಾರಕ್ಕೇ ನಿಲುಕದಂಥವು. ಆತ ಹಿಂಟೋಕ ಹಳ್ಳಿಗರ ಹೇಳಿಕೆಯಂತೆ ಒಬ್ಬ 'ಅಖಂಡ ಗಟ್ಟಿ ಆಸಾಮಿ.' ಆತ ತನ್ನ ಸ್ಥಗಿತವೃತ್ತಿಯನ್ನು ಕಾಪಾಡಿಕೊಂಡಿದ್ದು ಪ್ರತ್ಯುತ್ತರ ಕೊಡಬಾರದೆಂದಲ್ಲ; ಅವನು ತಿಳಿದುಕೊಂಡಂತೆ, ಬದುಕೇ ಅವನಿಗೆ ಕಲಿಸಿ ತಿಳಿಸಿಕೊಟ್ಟ ಸಂದಿಗ್ಧ ಮೌನ ವೃತ್ತಿಯ ಮೂಲಕವಾಗಿತ್ತು.

'ಆದರೆ', ಮರದ ವ್ಯಾಪಾರಿ ಮುಂದುವರಿದ; ಅವನ ಹಣೆಯ ಮೇಲೆ ಮೊದಲೇ ನಿರಿಗೊಂಡ ಗೆರೆಗಳಿಗೆ ಇನ್ನೂ ಒಂದೆರಡು ಚಿಂತೆಯ ರೇಷೆಗಳು ಸೇರಿಕೊಂಡವು. 'ಗ್ರೇಸಳು ಏನೂ ಚೆನ್ನಾಗಿಲ್ಲ. ಪ್ರಕೃತಿ ದೋಷವೆಂಬುದೇನೂ ಇಲ್ಲ, ನಿನಗೆ ಗೊತ್ತು. ಆದರೆ ಆ ಭಯಾನಕ ಕಾಳರಾತ್ರಿಯಿಂದ ಅವಳು ಕುಗ್ಗಿದ, ನರಗೆಟ್ಟ ಅವಸ್ಥೆಯಲ್ಲಿ ಇದ್ದಾಳೆ. ಆದರೆ ಅವಳು ಬೇಗ ನೆಟ್ಟಗಾಗಬಹುದು, ನನಗೆ ಅನುಮಾನವೇ ಇಲ್ಲ. ಈ ಹೊತ್ತು ಸಂಜೆ ಅವಳು ಹೇಗಿದ್ದಾಳೊ ನನಗೆ ಅನುಮಾನ.' ಈ ಮಾತು ಮುಗಿಸಿ ಆತ ಎದ್ದನು. ಅವಳ ಭಾವೀ ಚರಿತ್ರ ಕ್ರಮದ ಮುಂಗನಸಿನಲ್ಲಿ ಅವಳ ವ್ಯಕ್ತಿತ್ವವನ್ನೆ ತಾನು ಮರೆತು ಅತಿ ವಿಳಂಬವಾಯಿತೊ—ಎಂಬ ಒಂದು ಸಂಭ್ರಮದಲ್ಲಿ.

ತೋಟಕ್ಕೆ ಕಂದು ಬಣ್ಣವನ್ನು ಸಂಜೆ ಬಳಿಯಲು ಆರಂಭಿಸುವ ತನಕವೂ ಅವರಿಬ್ಬರೂ ಅಲ್ಲಿ ಕೂತಿದ್ದರು. ಈಗ ಇಬ್ಬರೂ ಎದ್ದು ಮೆಲಬರಿಯ ಮನೆಯತ್ತ ನಡೆದರು. ಜೈಲ್ಸ ತನ್ನ ಮುದಿ ಮಿತ್ರನ ಹಿಂದೆ ಕೆಲವು ಹೆಜ್ಜೆ ಅಂತರಕ್ಕೆ ನಡೆದಿದ್ದ. ಜೈಲ್ಸನ ಸಾಮಾನ್ಯ ಹೆಜ್ಜೆ ಗತಿಗಿಂತ ಮುದುಕನ ಆ ಕ್ಷಣದ ಉತ್ಸಾಹ ಮುಂದೆಯೇ ಹೆಜ್ಜೆ ಹಾಕಲು ಪ್ರೇರಿಸುತ್ತಿತ್ತು. ಗ್ರೇಸಳ ಸಾನ್ನಿಧ್ಯದಲ್ಲಿ ಪ್ರವೇಶ ಮಾಡಲು ಅವನಿಗೆ ನಾಚಿಕೆ, ಅವಳ ತಂದೆ ಅವನನ್ನು ಅದೇ ಭೂಮಿಕೆಯಲ್ಲಿಯೆ ಅವಳೆದುರಿಗೆ ಪ್ರಸ್ತಾಪಿಸುವುದು ಖಂಡಿತ. ಅದೂ ಅವಳ ಭಾವೀ ಸ್ಥಿತಿಗತಿಯ ಬಗೆಗೆ ನಿಶ್ಚಿತ ಅಭಿಪ್ರಾಯಕ್ಕೆ ಬರುವ ಮುಂಚೆಯೇ. ಇದು ದೇವತೆಗಳು ಹೆಜ್ಜೆ ಇಡಲು ಅಂಜುವಲ್ಲಿ ನುಗ್ಗುವ ಮೂರ್ಖರ ಕೃತ್ಯದಂತೆಯೇ ಕಂಡಿತು.

ದಿನದ ಇದೆಲ್ಲ ಉಜ್ವಲ ಆಶೋತ್ತರಗಳ ಕಾವನ್ನು ಚಳಿಯಲ್ಲಿ ಮುಳುಗಿಸುವಂಥ ಸಂಗತಿಯೂ ಬರುವುದಕ್ಕೆ ತಪ್ಪಲಿಲ್ಲ. ಆ ಮರದ ವ್ಯಾಪಾರಿಯನ್ನು ಹಿಂಬಾಲಿಸಿ ಆತ ಬಾಗಿಲಿಗೆ ತಲ್ಪಲಿಲ್ಲ. ಅಷ್ಟರಲ್ಲಿ ಆಲಿವರಮ್ಮ ಅವನಿಗೆ ಹೇಳುವುದನ್ನು ಜೈಲ್ಸ ಕೇಳಿದನು : ಆ ಮುಂಜಾವಿಗಿಂತ ಈಗ ಫಿಟ್ಝಪಿಯರ್ಸನ ಹೆಂಡತಿ ಇನ್ನೂ ಹೆಚ್ಚು ಅಸ್ವಸ್ಥಳಾಗಿದ್ದಾಳೆ. ಡಾ॥ ಜೋನ್ಸ್ ನೆರೆಹೊರೆಯಲ್ಲಿ ಬಂದಿದ್ದರು. ಅವರನ್ನೆ ಒಳಗೆ ಕರೆದು ಕಾಣಿಸಲಾಯಿತು. ಅವರು ಅವಳನ್ನು ಕೂಡಲೇ ಮಲಗಲು ಕಳುಹಿಸಿದರು. ಆದರೆ ಅವಳ ಬೇನೆ ಅಷ್ಟೇನು ಗಂಭೀರ ಸ್ವರೂಪದ್ದೆಂದು ಭಾವಿಸಬೇಕಾಗಿಲ್ಲ. ಜ್ವರವೇರಿದ, ನರಗುಂದಿದ ವಿಕಾರ, ಇತ್ತೀಚೆಯ ಘಟನೆಗಳ ಫಲ—ಇದರಿಂದಲೇ ಅವಳು ಬಳಲುತ್ತಿದ್ದಾಳೆ -- ಇನ್ನು ಕೆಲವು ದಿನಗಳಲ್ಲಿ ಖಂಡಿತವಾಗಿ ಗುಣವಾಗುವಳು.

ಆದ್ದರಿಂದ ವಿಂಟರಬೋರ್ನ ಅಲ್ಲಿ ನಿಲ್ಲಲಿಲ್ಲ. ಆ ಸಂಜೆಗೆ ಅವಳನ್ನು ನೋಡಬೇಕೆಂಬ ಅವನ ಬಯಕೆ ಬಯಲಾಯಿತು.

ಮುಂಜಾವಿನ ಅವಳ ಈ ಉಲ್ಬಣವೂ ಮೆಲಬರಿಗೆ ವಿಶೇಷ ಕುಗ್ಗು ಉಂಟು ಮಾಡಲಿಲ್ಲ. ಅವನು ಅಂದನು : ತನ್ನ ಮಗಳ ಪ್ರಕೃತಿ ಸಾಕಷ್ಟು ಸದೃಢವಾಗಿದೆ. ಈ ಮನೋವಾರ್ತೆಯ ತೊಂದರೆಗಳೇ ಅವಳನ್ನು ಕುಗ್ಗಿಸುತ್ತಿವೆ. ಒಮ್ಮೆ ವಿಮೋಚನೆ ಪಡೆದ ಮೇಲೆ ಅವಳು ತಿರುಗೊಮ್ಮೆ ಅರಳುವಳು. ಮೆಲಬರಿಯ ವಿಧಾನ ಸರಿಯಾಗಿತ್ತು. ತಾಯ್ತಂದೆಗಳು ಯಾವಾಗಲೂ ತಪ್ಪುವುದಿಲ್ಲ.

ಮರುದಿನ ಆತ ಲಂಡನ್ನಿಗಾಗಿ ಹೊರಟನು. ಜೋನ್ಸನು ಇನ್ನೊಂದು ಭೆಟ್ಟಿ ಇತ್ತು, ಅವನಿಗೆ ಆಶ್ವಾಸನವಿತ್ತಿದ್ದನು : ಅವನು ಯಾವ ಅಸ್ವಸ್ಥತೆ ಇಲ್ಲದೆ ಮನೆ ಬಿಟ್ಟು ತೆರಳಬಹುದು — ಅದೂ ಅವಳ ಅನಿಶ್ಚಿತತೆಯ ಅವಸ್ಥೆಯನ್ನು ಆದಷ್ಟು ಬೇಗ ಕೊನೆಗಾಣಿಸುವಂಥ ಇಂಥ ಒಂದು ಕಾರ್ಯಕ್ಕಾಗಿ.

ಈ ಮರದ ವ್ಯಾಪಾರಿ ಹೋಗಿ ಒಂದೆರಡು ದಿನ ಕಳೆದಿಲ್ಲ. ಯಾರೋ ಹಿಂಟೋಕದಲ್ಲಿ ಅಂದರು, ಡಾಕ್ಟರ ಪಿಟ್ಝಪಿಯರ್ಸನ ಹ್ಯಾಟು ಬೆಟ್ಟದಲ್ಲಿ ಕಂಡುಬಂತೆಂದು. ಆ ಮೇಲೆ ಆ ಸಂಜೆಗೆ ಆ ಹ್ಯಾಟನ್ನು ಮೆಲಬರಿಯ ಮನೆಗೆ ತರಲಾಯಿತು. ಮತ್ತು ಅದನ್ನು ದುರ್ದೈವಕ್ಕೆ ಗ್ರೇಸಳ ಮುಂದೆಯೇ ತಂದರು. ಅದು ಆತ ಕುದುರೆಯಿಂದ ಬಿದ್ದಂದಿನಿಂದಲೇ ನಿಸ್ಸಂಶಯವಾಗಿ ಅಲ್ಲಿ ಬೆಟ್ಟದಲ್ಲಿ ಬಿದ್ದಿರಬೇಕು ; ಆದರೆ ಆ ಹ್ಯಾಟು ಇಷ್ಟು ಸ್ವಚ್ಛ ಮತ್ತು ಅಚ್ಚುಕಟ್ಟಾಗಿತ್ತು. ಗ್ರೇಸಳು ಅಷ್ಟೆಲ್ಲ ದಿನ ಅಲ್ಲಿ ಅದು ಅಡಗಿರಬೇಕೆಂಬುದನ್ನು ನಂಬಲಿಲ್ಲ. ಬೇಸಿಗೆಯ ಹವಾಮಾನ ಮತ್ತು ಎಲೆಗಳು ಹಂದರದ ನೆರಳು ಆ ಹ್ಯಾಟನ್ನು ಹಾಗೆ ಸುರಕ್ಷಿತವಾಗಿ ಇಟ್ಟಿರಬೇಕು. ಎಂಬುದನ್ನು ಆಕೆ ನಂಬಲಿಲ್ಲ. ಈ ಸಂದರ್ಭದಲ್ಲಿ ಒಂದು ಸಣ್ಣ ಸಂಗತಿಯೂ ಅವಳ ಜ್ವರವೇರಿದ ಕಲ್ಪನೆಗೆ ಕೆಲಸ ಕೊಡಲು ಸಾಕಾಗಿತ್ತು. ಆತ ಇನ್ನೂ ನೆರೆಹೊರೆಯಲ್ಲಿಯೇ ಇದ್ದಿರಬೇಕು ಎಂದು ಆಕೆ ಭಾವಿಸಿದಳು ; ಆತ ಥಕ್ಕನೆ ತಿರುಗಿ ಕಾಣಿಸಿಕೊಳ್ಳುವನೆಂದು ಆಕೆ ಭಯಪಟ್ಟಳು. ಮತ್ತು ಅವಳ ನರಗೆಟ್ಟ ಬೇನೆಯು ಮತ್ತೆ ಉಲ್ಬಣಗೊಂಡಿತು. ಅದರ

ಪರಿಣಾಮ ಬಹಳ ಗಂಭೀರವಾಯಿತು. ಡಾ॥ ಜೋನ್ಸ್ ಚಿಂತಾಕುಲರಾಗಿ ಕಂಡರು. ಮತ್ತು ಮನೆಯವರೆಲ್ಲ ಕಂಗೆಟ್ಟರು.

ಜೂನ್ ತಿಂಗಳ ಆರಂಭವಿತ್ತು. ಈ ಸಮಯಕ್ಕೆ ಕೋಗಿಲೆ ರಾತ್ರೆಗೆ ಒಂದೆರಡು ತಾಸುಗಳನ್ನು ಬಿಟ್ಟರೆ ದಿನವಿಡೀ ತನ್ನ ಕೂಗನ್ನು ನಿಲ್ಲಿಸುವುದೇ ಅಪರೂಪವಿತ್ತು. ಬಾಲ್ಯದಿಂದಲೂ ಅಷ್ಟೊಂದು ಪ್ರಿಯ ಪರಿಚಿತವಾದ ಅದರ ಇಂಚರವೂ ಈಗ ಈ ಹುಡುಗಿಗೆ ತೀರ ಅಸಹ್ಯ ಪೀಡೆಯಾಗಿ ಬಿಟ್ಟಿತು. ಮೆಲಬರಿ ಗುರುವಾರ ಹೊರಟು ಹೋಗಿದ್ದ. ಅದರ ನಂತರದ ಶುಕ್ರವಾರ. ಫಿಟ್ಝಪಿಯರ್ಸನ ಹ್ಯಾಟು ಶೋಧವಾದ ಮರುದಿನ ಕೋಗಿಲೆಯು ನಸುಕಿಗೆ — ಎರಡು ಗಂಟೆಗೇ ಕುಕಿಲಲಿಕ್ಕೆ ಆರಂಭಿಸಿತು. ಒಮ್ಮಿಂದೊಮ್ಮೆಯೆ ಮೆಲಬರಿಯ ಸೇಬಿನ ಮರಗಳಲ್ಲಿ ಒಂದರಿಂದ — ಗ್ರೇಸಳ ಕೋಣೆಯ ಕಿಟಕಿಯಿಂದ ಮೂರುಗಜವೂ ಅಲ್ಲ, ಅಷ್ಟು ದೂರದಿಂದ,

' ಓ ! ಆತ ಬರುತ್ತಿದ್ದಾನೆ ' ಆಕೆ ಕೂಗಿದಳು. ಮತ್ತು ದಿಗಿಲಿನಲ್ಲಿ ಹೌಹಾರಿದಂತೆ ಮಂಚದಿಂದ ನೆಲಕ್ಕೇ ಹಾರಿದಳು.

ಈ ದಿಗಿಲು, ಹೌಹಾರಿಕೆಗಳು ಮಧ್ಯಾಹ್ನದವರೆಗೂ ನಡೆದುವು. ಡಾಕ್ಟರನು (ಜೋನ್ಸ್) ಬಂದು ಅವಳನ್ನು ನೋಡಿ ಮೆಲಬರಿಯ ಯಜಮಾನಿಯೊಂದಿಗೆ ಮಾತ ನಾಡಿ ಆಲೋಚನೆ ಮಾಡುತ್ತ ಕುಳಿತನು. ಆ ಸದಾ ವಿದ್ಯಮಾನವಾದ ಭಯಾತಂಕ ವನ್ನು ಅವಳ ಮನಸ್ಸಿನಿಂದ ಎಂಥ ಕಷ್ಟಬಂದರೂ ಕಿತ್ತುಹಾಕುವುದು ಅಗತ್ಯವಾಗಿತ್ತು. ಅದನ್ನೇ ಹೇಗೆ ಮಾಡಲಾದೀತೆಂದು ಆತ ಆಲೋಚನೆ ಮಾಡತೊಡಗಿದ್ದನು.

ಮನೆಯಲ್ಲಿ ಯಾರೊಬ್ಬರಿಗೂ ಒಂದು ಮಾತನ್ನು ಹೇಳದೆ, ಅಥವಾ ಹೊರಗೆ ಓಣಿಯಲ್ಲಿ ಕಾಯುತ್ತ ನಿಂತ ಅಸ್ವಸ್ಥ ಚಿತ್ತ ವಿಂಟರಬೋರ್ನನಿಗೂ ಏನೂ ತಿಳಿಸದೆ ಡಾ॥ ಜೋನ್ಸ್ ಮನೆಗೆ ಹೋಗಿ ಮೆಲಬರಿಗೆ, ಅವನ ಲಂಡನ್ ವಿಳಾಸಕ್ಕೆ ಒಂದು ಪತ್ರ ಬರೆದನು. ಅವನ ವಿಳಾಸವನ್ನು ಅವನ ಹೆಂಡತಿಯಿಂದ ಡಾಕ್ಟರನು ಪಡೆದಿದ್ದನು. ಅವನ ಪತ್ರದ ಆಶಯವಿಷ್ಟೆ — ಶ್ರೀಮತಿ ಫಿಟ್ಝಪಿಯರ್ಸಳಿಗೆ ಆದಷ್ಟು ಬೇಗ ವಿವಾಹ ಬಂಧನದ ವಿಚ್ಛೇದದ ಆಶ್ವಾಸನ ಬೇಕಾಗಿದೆ. ಈ ಬಂಧನ ಅವಳಿಗೆ ಪರಮ ಪೀಡೆ ಯಾಗಿದೆ. ಅವಳು ಬೇಗನೆ ಬಿಡುಗಡೆ ಹೊಂದಲಿದ್ದು, ಈಗಾಗಲೆ ಹಾಗೆಯೇ ವ್ಯವಹಾರತಃ ಇದ್ದಂತೆ — ಭರವಸೆ ಬೇಕು. ಇದನ್ನು ನೀವು ಕೂಡಲೆ, ಈಗಲೆ ಹೇಳುವಂತೆ ಆದರೆ ಬಹಳಷ್ಟು ಅಪಾಯವನ್ನು ತಪ್ಪಿಸಲಿಕ್ಕೆ ಅದು ಉಪಾಯವಾಗ ಬಹುದು. ಆತ ಬರೆದನು, ' ಅವಳಿಗೇ ಬರೆ ; ನನಗಲ್ಲ '.

ಶನಿವಾರ ಆತ ಹಿಂಟೋಕಿಗೆ ಸಾರೋಟನ್ನೇರಿ ಹೋದನು ; ಮತ್ತು ಒಂದೆರಡು ದಿನಗಳಲ್ಲಿ ಒಳ್ಳೆಯ ಶುಭ ಸಮಾಚಾರ ಆಕೆ ಆಕ್ಷೇಪಿಸಲು ಅಡ್ಡಿ ಇಲ್ಲವೆಂದು ಏನೋ ರಹಸ್ಯಮಯವೆನಿಸುವಂತೆ ಸಾಂತ್ವನೆಯ ಮಾತುಗಳಿಂದ ಗ್ರೇಸಳಿಗೆ ಆಶ್ವಾಸನೆ ನೀಡಿದನು.

ಮತ್ತು ಹಾಗೆಯೇ ಒದಗಿಬಂದಿತು. ರವಿವಾರ ಮುಂಜಾವು ಬಂದೊಡನೆ

ಗ್ರೇಸಳಿಗೆ ಅವಳ ತಂದೆಯಿಂದ ಒಂದು ಪತ್ರವು ಬಂದಿತು. ಅದು ಏಳು ಗಂಟೆಗೆ ಬಂದಿತು. ಅಂಚೆ ಜವಾನನು ದಟ್ಟಡಿ ಇಡುತ್ತ ಹಿಂಟೋಕ ಹಳ್ಳಿಯನ್ನು ಹಾದು ಹೋಗುವ ಹೊತ್ತಿಗೆ ಸರಿಯಾಗಿ, ಎಂಟು ಗಂಟೆಗೆ ಗ್ರೇಸಳು ಎಚ್ಚರಾದಳು — ಒಂದು ಎರಡು ತಾಸು ಆಕೆ ನಿದ್ದೆ ಮಾಡಿದ್ದೇ ಸೋಜಿಗ. ಮೆಲಬರಿಯ ಯಜಮಾನಿ ಗಂಡನ ಪತ್ರವನ್ನು ತಂದಳು.

' ನೀನೆ ಇದನ್ನು ತೆರೆಯುವಿಯಾ ? ' ಆಕೆ ಕೇಳಿದಳು.

' ಓ !, ಹೌದು, ಹೌದು ' ಗ್ರೇಸಳು ಅಂದಳು ; ತಾಳ್ಮೆಗೆಟ್ಟ ದೌರ್ಬಲ್ಯದಿಂದ. ಅವಳು ಲಕೋಟೆಯನ್ನು ಹರಿದು ತೆರೆದಳು. ಒಳಗಿದ್ದ ಹಾಳೆಯನ್ನು ಮಡಿಕೆಬಿಚ್ಚಿ ಓದಿದಳು. ಓದುತ್ತಿದ್ದಂತೆ, ಅವಳ ಬಿಳಿಯ ಕುತ್ತಿಗೆಯನ್ನು, ಕೆನ್ನೆಯನ್ನು ಲಜ್ಜೆಯ ಕೆಂಪು ಆವರಿಸಿ ಕಳೆಯೇರಿತು.

ಅವಳ ತಂದೆ ದಿಟ್ಟತನದ ವಿವೇಕವನ್ನು ಕಾಣಿಸಿದ್ದನು. ಆತ ತಿಳಿಸಿದ್ದನು — ಫಿಟ್ಝಪಿಯರ್ಸ ಮರಳಿಬರಬಹುದೆಂಬ ಭಯ ಇನ್ನು ಇರಬೇಕಾಗಿಲ್ಲ. ಸ್ವಲ್ಪವೇ ಕಾಲ ದಲ್ಲಿ ಅವಳು ಸ್ವತಂತ್ರ ಹೆಂಗಸಾಗುವಳು. ಮತ್ತು ಆದ್ದರಿಂದ ತನ್ನ ಹಳೆಯ ಪ್ರೇಮಿಕ ನನ್ನೇ ವರಿಸಲು ಬಯಸಿದರೆ, — ವಸ್ತು ಸ್ಥಿತಿಯು ಹಾಗೆಯೇ ಇದೆಯೆಂದು ಆತನಿಗೆ ವಿಶ್ವಾಸ ; ಏಕೆಂದರೆ ಹಾಗೆ ಆಗಲೆಂದೇ ಅವನದೂ ಆಳವಾದ ಅಭಿಲಾಷೆ, — ಅವಳು ಹಾಗೆ ಬಯಸಿದರೆ, ಹಾಗೆ ಮಾಡುವ ಸ್ಥಿತಿಗೆ ಅವಳು ಶೀಘ್ರದಲ್ಲಿಯೇ ಬರುವಳು. ಈ ಪತ್ರದಲ್ಲಿ ಮೆಲಬರಿ ತನ್ನ ನಂಬಿಗೆಯ ಹೊರಗೆ ಏನನ್ನೂ ಬರೆದಿದ್ದಿಲ್ಲ. ಆದರೆ ವಸ್ತು ಸ್ಥಿತಿಯ ಸಂಗತಿಗಳನ್ನು ಆತ ಆದಷ್ಟು ವಿಸ್ತರಿಸಿ ಬರೆದಿದ್ದನು — ಅವಳ ವಿವಾಹವನ್ನು ರದ್ದುಗೊಳಿಸುವ ಕಾಯಿದೆಯ ಉಪಕಾರ ಕ್ರಮಗಳು ಪೂರ್ತಿ ಇತ್ಯರ್ಥವಾದಂತೆಯೇ ಎಂದೂ ಆತ ಅಭಿಪ್ರಾಯವನ್ನು ಸೇರಿಸಿದ್ದನು.

ಸತ್ಯಸಂಗತಿಯೇನೆಂದರೆ ಡಾಕ್ಟರರ ಪತ್ರ ಬಂದೊಡನೆ, ಬಡ ಮೆಲಬರಿ ಬಹಳ ಅಸ್ವಸ್ಥನಾದನು, ಕಳವಳಗೊಂಡನು. ಅವನು ಒಮ್ಮೆಲೆ ಮಗಳ ಬಳಿಗೆ ಧಾವಿಸಲು ಎದ್ದನು. ಬ್ಯೂಕೊಕ್‌ನಿಗೆ ಬಹಳ ಕಷ್ಟಬಿತ್ತು. ಅವನನ್ನು ಹಾಗೆ ಹೋಗದಂತೆ ತಡೆ ಯಲು ಆತ ಹಿಂಟಾಕಿಗೆ ಧಾವಿಸುವಲ್ಲಿ ಏನು ಪ್ರಯೋಜನವಿತ್ತು ? ಬ್ಯೂಕೊಕ್ ಆತನಿಗೆ ಸವಾಲು ಹಾಕಿದ್ದನು. ಅವಳಿಗೆ ಏನಾದರೂ ಒಳಿತು ಮಾಡುವಂತಿದ್ದ ಸಂಗತಿಯೊಂದೇ — ವಿವಾಹ ಬಂಧನದ ವಿಚ್ಛೇದ. ಅವರು ಸಲಹೆ ಪಡೆಯಬೇಕೆಂದಿದ್ದ ಪ್ರಮುಖ ಸಾಲಿಸಿಟರನ ಸಂದರ್ಶನವು ಇನ್ನೂ ನಡೆಯಲಿತ್ತು. ಅವನನ್ನು ಭೆಟ್ಟಿಯಾಗುವುದರಲ್ಲಿ ಇದ್ದನು ಬ್ಯೂಕೊಕ್, ಮತ್ತು ಈ ಪ್ರಕರಣ ಸಾಕಷ್ಟು ಸ್ಪಷ್ಟವಿತ್ತು ; ಸರಳವಿತ್ತು. ಹೀಗೆ ಈ ಸರಳ ಭಾವಿಕ ಮೆಲಬರಿ, ಮಗಳ ಸಂಕಟದಿಂದ ಉಂಟಾದ ಗಾಬರಿಯ ಒತ್ತಾಯಕ್ಕೆ, ತನ್ನ ಸಂಗಾಡಿಯ ಮನವಿಗಳ ಒತ್ತಾಯಕ್ಕೆ ಮತ್ತು ಡಾಕ್ಟರರ ಪತ್ರದ ಅಗತ್ಯಕ್ಕೆ ಕೊನೆಗೊಮ್ಮೆ ಅವಳು ಇನ್ನು ವ್ಯವಹಾರತಃ ಸ್ವತಂತ್ರಳೇ ಎಂಬಂತೆ ಖಚಿತ ವಾಗಿಯೇ ಅವಳಿಗೆ ಪತ್ರದಲ್ಲಿ ಹೇಳಲು ಪತ್ರ ಬರೆಯಲಿಕ್ಕೆ ಕೂತನು.

'ಮತ್ತೆ ಆ ಸದ್ಗೃಹಸ್ಥನಿಗೂ ಬರೆಯುವದು ಲೇಸು' ಬ್ಲ್ಯಾಕೊಕ್ ಸೂಚಿಸಿದನು. ಈ ಪ್ರಕರಣದಲ್ಲಿ ಖ್ಯಾತಿಯನ್ನೂ ವಿಶಾಲವಾದ ವ್ಯವಸಾಯ ಲಾಭವನ್ನೂ ಗಳಿಸುವ ವಾಸನೆ ಮೂಗಿಗೆ ಬಡಿದು ಆತ ಮೆಲಬರಿಯನ್ನು ಈ ಕ್ರಮಕ್ಕೆ ಹಿಂಜರಿಯಲಾಗದಷ್ಟು ಬಿಗಿಯಾಗಿ ಕಟ್ಟಿಹಾಕಬೇಕೆಂದು ಇಚ್ಛಿಸಿದನು. ಇದಕ್ಕಾಗಿ ವಿಂಟರಬೋರ್ನನ ಬಗೆಗೆ ಗ್ರೇಸಳ ಭಾವಾವೇಶವನ್ನೂ ಕೆರಳಿಸುವುವಷ್ಟು ಬಲಿಷ್ಠ ಉಪಾಯ ಬೇರೊಂದಿಲ್ಲ. ಆದರಿಂದ ಅವಳ ತಂದೆಗೆ, ಅವಳ ಪ್ರಣಯದ ಮಾರ್ಗದಲ್ಲಿ ತೊಡಕುಗಳನ್ನು ಕಂಡಾಗ ಅವಳ ಈ ಪ್ರೀತಿಯನ್ನು ಕ್ರಮಬದ್ಧಗೊಳಿಸಬೇಕೆಂಬ ಪ್ರಯತ್ನದಿಂದ ಹಿಂಜರಿಯಲಿಕ್ಕೆ ಮನಸ್ಸೇ ಬರದಂತೆ ಆಗಬೇಕು.

ಅಳುಕಿನಿಂದ ತಾಳ್ಮೆಗೆಟ್ಟ ಮೆಲಬರಿಯು 'ಅವರೀರ್ವರನ್ನು ಒಮ್ಮೆಲೆ ಹೊರಡಿಸುವ' ಈ ವಿಚಾರದಿಂದ ಸಂತುಷ್ಟನಾದನು. ದೀರ್ಘಕಾಲ ಮುಂದೆ ಹಾಕಿದ ತನ್ನ ಈ ಪರಿಮಾರ್ಜನೆಯ ಯೋಜನೆಯನ್ನು ಈಗ ಆಚರಣೆಯಲ್ಲಿ ತರುವುದೇ ಅವನಿಗೊಂದು ಪ್ರಬಲ ವಿಕಾರವಾಗಿ ಬೆಳೆಯಿತು. ತನ್ನ ಮಗಳಿಗೆ ಬರೆದ ಈ ಪತ್ರಕ್ಕೆ ಒಂದು ಪರಿಚ್ಛೇದವನ್ನು ಹೆಚ್ಚು ಜೋಡಿಸಿದನು—ಅವಳು ಇನ್ನು ವಿಂಟರಬೋರ್ನನಿಗೆ ಉತ್ತೇಜನೆ ನೀಡಲು ಆರಂಭಿಸಿಸಬೇಕು; ಇಲ್ಲವಾದರೆ ಅವನನ್ನೂ ಆಕೆ ಕಳೆದುಕೊಳ್ಳಬಹುದು; ಹಾಗೆಯೇ ಅವನು ಜೈಲ್ಸನಿಗೂ ಬರೆದನು—ಕೊನೆಗೊಮ್ಮೆ ಅವನಿಗೆ ದಾರಿ ನಿಷ್ಕಂಟಕವಾಗಿ ತೆರೆದಂತೆ ಆಗಿದೆ. ಬಾಳು ಅಲ್ಪಾವಧಿ—ಆತ ಸಾರಿದನು. ತಾನು ಅವಳ ತಂದೆ, ಮುದುಕನಾಗುತ್ತಿದ್ದೇನೆ. ಬಾಯಿಗೂ ಬಟ್ಟಲಿಗೂ ನಡುವೆ ತಪ್ಪಿ ಹೋಗುವ ಸಂಭವಗಳೇ ಹೆಚ್ಚು. ಅವನಲ್ಲಿಯ ಅವಳ ಆಸಕ್ತಿಯನ್ನು ಕೂಡಲೇ ತಿರುಗಿ ಎಚ್ಚರಗೊಳಿಸಬೇಕು. ಅಂದರೆ ಶುಭ ಸಮಯ ಒದಗಿ ಬಂದಾಗ ಎಲ್ಲವೂ ಸಜ್ಜಾಗಿ ಇರಬೇಕು.

೩೮

ಈ ಸ್ನೇಹದ ಕಾವಿನಿಂದ ಕಳಕಳಿಸುವ ಶಬ್ದಗಳಿಂದ ವಿಂಟರಬೋರ್ನ ತುಂಬ ಪ್ರಭಾವಿತನಾದನು. ಈ ವಿನಂತಿಯ ಹೊಸವರಿಯು ಅದರ ಆಶಯವೂ ಒಮ್ಮೆಲೆ ಅವನಿಗೆ ಅಗಮ್ಯವಾಗಿ ಕಂಡಿತು. ಕೆಲವೇ ತಿಂಗಳುಗಳ ಹಿಂದೆ ಈ ಕುಟುಂಬದಿಂದ ಆತ ತೀರ ಬೇರೆ ಇಟ್ಟಂತೆ ಆಗಿದ್ದನು—ದೂರದಲ್ಲಿಯೇ ಗ್ರೇಸಳು ಬರುಹೋಗುತ್ತಿದ್ದಳು. ಸ್ಪಷ್ಟವಾಗಿಯೇ ತೋರುವ ಶ್ರೇಷ್ಠತೆಯ ಪ್ರಭೆಯು ಅಂತರದ ಅವಗುಂಠನ ಹೊಂದಿದ್ದಳು. ಜನಪ್ರಿಯನೂ, ಹೊಸ ಠೀವಿಯುವನೂ ಆದ ಡಾಕ್ಟರ ಫಿಟ್ಝಪಿಯರ್ಸನ ಹೆಂಡತಿಯಾಗಿ, ತನ್ನ ಸಾಮಾಜಿಕ ಸರಹದ್ದಿನಿಂದ ಹತಾಶಗೊಳಿಸುವಷ್ಟು ಹೊರತಾಗಿ ಆಕೆ ಸುಳಿದಾಡುತ್ತಿದ್ದಳು. ಅದೂ ತೀರ ಈಚೆಯ ಕಾಲದವರೆಗೆ—ಆಗ ಮುಚ್ಚಿದ

ಹೂಗಳು ಇನ್ನೂ ಪೂರ್ತಿ ಬಾಡಿದ್ದಿಲ್ಲವೆನ್ನುವಷ್ಟು ಹತ್ತಿರದ ಕಾಲದವರೆಗೆ. ಅದೇ ಈಗ, ಅದೇ ತನಗೆ, ಅದೇ ಆಕೆಯು ಈರ್ಷೆಯಿಂದ ಸರ್ಪಗಾವಲು ಮಾಡುತ್ತಿದ್ದ ತಂದೆ, ಧೈರ್ಯ ತಂದುಕೊಳ್ಳಲು ಉತ್ತೇಜನ ಪಡೆಯಲು ಕೇಳಿಕೊಳ್ಳುತ್ತಿದ್ದಾನೆ. ತಾನು ಹಕ್ಕಿನಿಂದ ಆಕೆಗಾಗಿ ಬೇಡಿಕೆ ಮುಂದಿಡುವ ದಿನಕ್ಕಾಗಿ ಸಿದ್ಧನಾಗಬೇಕೆಂದು ಹೇಳುತ್ತಿದ್ದಾನೆ.

ಹಳೆಯ ಹಿಂದಿನ ದಿನಗಳು ಮಬ್ಬಿನಲ್ಲಿಯ ಮೆರವಣಿಗೆಯಂತೆ ಅವನ ಮನಸ್ಸಿನಲ್ಲಿ ಬಂದವು—ಅವನನ್ನು ಮೆಲಬರಿ ಹೇಗೆ ಛೀಹಾಕಿದ್ದನು. ಅವನ ಕ್ರಿಸ್‌ಮಸ್ ಔತಣವನ್ನು ಆತ ಹೇಗೆ ತಿರಸ್ಕರಿಸಿದ್ದನು ; ಈ ಮಧುರ ಲಜ್ಜಾವತಿ ಗ್ರೇಸಳೂ ಅವನನ್ನೂ ಅವನ ಪರಿಸರವನ್ನೂ ಅವನ ಬಡ ಕ್ರೀಡ್ಲನ ಹೂಟ-ಹಂಚಿಕೆಗಳನ್ನು ಹೇಗೆ ಕಡೆಗಣಿಸಿದ್ದಳು.

ಓ, ನಂಬಿಗೆಯೇ ಬರುವಂತಿಲ್ಲ. ಇನ್ನೊಬ್ಬನೊಂದಿಗೆ ಆದ ಮದುವೆಯ ವಜ್ರದಂಥ ತೊಡಕನ್ನು ಈ ರೀತಿ ಭೇದಿಸಲು ಬರಲಾಗದು. ಇದು ರೂಢಿಗೆ ಸಂಪ್ರದಾಯಕ್ಕೆ ಹಿಂಸೆ ಮಾಡುವಂತಿದೆ. ಆದಾಗ್ಯೂ ಹೊಸ ಕಾನೂನು ಏನನ್ನೂ ಸಾಧಿಸಬಲ್ಲದು. ಆದರೆ ಈ ಹೆಣ್ಣು ತನ್ನ ಶಿಕ್ಷಣ ಸಂಸ್ಕಾರಗಳನ್ನೂ ಮಿಕ್ಕಿ ಅಂಥದೇ ಸುಸಂಸ್ಕೃತ ಸದ್ಗೃಹಸ್ಥನೊಂದಿಗೆ ಬಾಳುವ ವಾಡಿಕೆ ಇದ್ದವಳು. ತನ್ನಂಥ ಮನುಷ್ಯನ ಹೆಂಡತಿಯಾಗುವುದು ಎಂದಾದರೂ ಸಾಧ್ಯವೇ ? ಹಳ್ಳಿಯ ಹೈದ ಜೈಲ್ಸ ವಿಂಟರಬೋರ್ನ ಅಂಥ ಸುಕುಮಾರ ನವತರುಣಿಯನ್ನು 'ನವನೀತ ಕೋಮಲಾಂಗಿ' ಯನ್ನು ಸುಖಿಯಾಗಿ ಮಾಡುವುದು ಶಕ್ಯವೇ ? ಅದೂ ಈಗ ಮೊದಲಿಗಿಂತ ಹೆಚ್ಚು ದೂರದ ಅಂತಸ್ತಿನಲ್ಲಿ ಆಕೆ ನಿಂತಿರುವಾಗ ? ಅವನಿಗೆ ತಲೆತುಂಬ ಸಂಶಯ.

ಆದರೂ ಹಿಂಜರಿಕೆ ಅವನಲ್ಲಿ ಇದ್ದಿಲ್ಲ. ಮೆಲಬರಿ ಅಪೇಕ್ಷಿಸಿದಷ್ಟು ಶೀಘ್ರವಾಗಿ ಸುಟಿಯಾಗಿ ಕಾರ್ಯ ತತ್ಪರವಾಗುವುದು ಅವನಿಗೆ ಅಷ್ಟೇನೂ ಜಾಣತನದ್ದೆಂದು ಅನಿಸಲಿಲ್ಲ, — ಏಕೆಂದರೆ ಘಟನೆಗಳೇ ಅನಿಶ್ಚಿತವಾಗಿದ್ದವು. ಜೈಲ್ಸನಿಗೆ ಕಾಯಿದೆಯ ಕ್ರಮವೇನೂ ಗೊತ್ತಾಗಿದ್ದಿಲ್ಲ. ಆದರೆ ಅವನಿಗೆ ಇಷ್ಟು ಗೊತ್ತಿತ್ತು — ಗ್ರೇಸಳನ್ನು ಕಟ್ಟಿಟ್ಟ ವೈವಾಹದ ಬಂಧನವು ಹರಿಯುವ ಮುಂಚೆಯೇ ತಾನು ಪ್ರೇಮಿಕನೆಂದು ಅವಳ ಇದುರಿಗೆ ಹೆಜ್ಜೆ ಇಡುವದು, ಅವಳ ತಂದೆಯ ಬಳಲಿದ ಮನಸ್ಸಿನ ಒಂದು ದುಂದುಗನಸಾಗಿತ್ತು. ಮೆಲಬರಿಯ ತೀರ ಬಾಲಿಶ ಉತ್ಸಾಹ ಕಂಡು ಅವನಿಗೆ ಆತನ ಮೇಲೆ ಮರುಕ ಉಂಟಾಯಿತು. ಮತ್ತು ಇಂಥ ಅವಿವೇಕಿಯಾದ ಅಸಮಂಜಸವಾದ ಬಯಕೆ ಮಾಡುವಷ್ಟು ಮನೋದೌರ್ಬಲ್ಯಕ್ಕೆ ಇಳಿಯುವನೆಂದಾಗ ಮುಪ್ಪಿಗಿಳಿಯುತ್ತಿದ್ದ ಈ ಮನುಷ್ಯನು ತೀರ ಕಟುವಾಗಿಯೇ ವ್ಯಥೆಯಿಂದ ಬಳಲುತ್ತಿರಬೇಕು ಎಂದು ಅವನಿಗೆ ಅನಿಸಿತು.

ವಿಂಟರಬೋರ್ನ ತುಂಬ ಉದಾರಹೃದಯದವನಿದ್ದನು. ಈ ಮರದ ವ್ಯಾಪಾರಿ ಮಗಳ ಬಗೆಗೆ ಉತ್ಕಟ ಪ್ರೀತಿಯಲ್ಲಿ, ತನ್ನ ಆರಾಧನೆಗೆ ತೊಡಗಿದ್ದಾನೆ ; ಏಕೆಂದರೆ ಈ ಪ್ರಾಯದ ಹೆಣ್ಣು ಮದುವೆ ರದ್ದಾದ ಮೇಲೆ, ಸಂದಿಗ್ಧ ಅವಸ್ಥೆಯಲ್ಲಿ ಉಳಿಯ

ಬಾರದು. ಎಂಥ ಗಂಡನೂ ಇಲ್ಲದಿರುವುದಕ್ಕಿಂತ ಕೆಟ್ಟ ಗಂಡನು ಸಿಕ್ಕರೂ ಸರಿ; ಈ ಅವಸ್ಥೆಯಿಂದ ಆಕೆ ಪಾರಾಗಲಿಕ್ಕೆ, ಎಂದು ಆತ ಆಲೋಚಿಸಿರಬೇಕು — ಎಂದೆಲ್ಲ ದೋಷೈಕ ದೃಷ್ಟಿಯಿಂದ ವಿಂಟರಬೋರ್ನ ಭಾವಿಸದಾದನು.

ಅವನಿಗೆ ಖಚಿತವಾಗಿಯೂ ಇಷ್ಟೇ ಅನಿಸಿತು — ತನ್ನ ಮುದುಕ ಮಿತ್ರನು, ಎಳೆ ವಯಸ್ಸಿನಲ್ಲಿ ನಿಸರ್ಗವೆ ಒಟ್ಟಾಗಿ ಜೋಡಿಸಿದ ಇಬ್ಬರನ್ನು ವಿಂಗಡಿಸುವ ತಿದ್ದಲಾರದ ಪ್ರಮಾದವನ್ನು ಮಾಡಿದ್ದು ಈಗ ಸರಿಪಡಿಸುವ ಚಿಂತೆಯ ಮುಳ್ಳು ಮಣೆಯ ಮೇಲೆ ವಿಲಿವಿಲಿ ಒದ್ದಾಡುತಿದ್ದಾನೆ; ಈ ಪರಿಮಾರ್ಜನೆಯ ತವಕದಲ್ಲಿ, ಉತ್ಸಾಹದಲ್ಲಿ ಅವನು ಉಪಚಾರಕ್ರಮಗಳನ್ನು ಮರೆತ್ತಿದ್ದಾನೆ. ಕಳೆದ ವರ್ಷಗಳಲ್ಲಿಯ ಅವನ ಮುಂಜಾಗ್ರತೆಯ ವೀಕ್ಷಣೆಯೂ ಈಗ ತನ್ನನ್ನೇ ಮೀರಿ ಈ ಆತುರ ಅಧೀರತೆಗಳಿಗೆ ಕಾರಣವಾಗಿದೆ. ಆದ್ದರಿಂದ ಈ ಹೊಸ ಆರಂಭದಲ್ಲಿ ತೀರ ಮುಂಚಿತವಾದ ಪ್ರೇಮಯಾಚನೆಯಿಂದ, ಸಲಿಗೆಯ ಮುಂದರಿಕೆಯಿಂದ ಗ್ರೇಸಳಿಗೆ ಸಂಶಯಾಸ್ಪದ ಸ್ಥಿತಿಗೆ ತರದಂತೆ ಅಗತ್ಯ ಎಚ್ಚರಿಕೆಯನ್ನು ತಾನೇ ವಹಿಸಬೇಕು, ನಿರ್ವಹಿಸಬೇಕು ಎಂದು ವಿಂಟರಬೋರ್ನ ಕಂಡುಕೊಂಡನು.

ಪ್ರೀತಿಯಲ್ಲಿ ಸ್ಥಾವರ ಸ್ಥಗಿತತೆ ಎಂಬುದಿಲ್ಲ. ಮಂದಿ ಪ್ರೀತಿಯನ್ನು ಹೆಚ್ಚಾಗಿ ಮಾಡುವರು. ಅಥವಾ ಕಡಮೆಯಾಗಿ ಮಾಡುವರು. ಆದರೆ ಜೈಲ್ಸ ಅವಳ ಬಗೆಗೆ ಪ್ರಿಯತೆಯ ತನ್ನ ಭಾವನೆಯಲ್ಲಿ ಯಾವುದೆ ಕುಗ್ಗನ್ನು ಗುರುತಿಸಲಿಲ್ಲ. ಅವಳು ಅವನನ್ನು ತಿರಸ್ಕರಿಸಿ ಬೇರೆ ಮದುವೆ ಮಾಡಿದಂದಿನಿಂದ ಅವಳ ಕುರಿತಿದ್ದ ತನ್ನ ಭಾವಾವೇಶವನ್ನು ಸೌಮ್ಯಗೆಳೆತನದ ರೂಪಕ್ಕೆ ಇಳಿಸಬೇಕೆಂದು ಆತ ಪ್ರಯತ್ನಿಸುತ್ತಲೆ ಇದ್ದನು. ಇದಕ್ಕೆ ಕಾರಣ ಕೇವಲ ಅನುಕೂಲಗಾರಿಕೆ, ಉಪಾಯ ವೇದಾಂತವೆ ಆಗಿತ್ತು. ಆದರೆ ಈವರೆಗೂ ತನ್ನ ಈ ಪ್ರಯತ್ನದಲ್ಲಿ ವಿಶೇಷ ಯಶಸ್ವಿ ಆತ ಅನುಭವಿಸಿದ್ದಿಲ್ಲ.

ಒಂದು ವಾರ, ಅದಕ್ಕೂ ಹೆಚ್ಚು ಕಾಲ ಕಳೆಯಿತು. ಮೆಲಬರಿಯಿಂದ ಹೆಚ್ಚಿನ ವಾರ್ತೆ ಏನೂ ಬರಲಿಲ್ಲ. ಆದರೆ ಅವನ ಮೃದು — ಮಜ್ಜೆಯ ಮನಬಾಲೆಯ ಮೇಲೆ ಅವನು ಅರುಹಿದ ವಾರ್ತೆಯ ಪ್ರಭಾವವು ಮುದಿ ಡಾ॥ ಜೋನ್ಸ್ ಊಹಿಸಿದಂತೆಯೇ ಆಯಿತು. ಆ ಡಾಕ್ಟರನ ಔಷಧ ಸಂಗ್ರಹದಲ್ಲಿಯ ಯಾವ ಮದ್ದಿಗಿಂತಲೂ ಹೆಚ್ಚಾಗಿ ಆ ವಾರ್ತೆ — ತಂದೆಯ ಪತ್ರ — ಅವಳ ಅಸ್ವಸ್ಥ ಜೀವವನ್ನು ಸಾಂತ್ವನೆಗೊಳಿಸಿ ಚೇತರಿಸಿಕೊಳ್ಳುವಂತೆ ಮಾಡಿತು. ಇಡಿಯ ರಾತ್ರಿ ಮತ್ತು ಇಡಿಯ ಹಗಲು ಆಕೆ ತಡೆ ಇಲ್ಲವೆ ಗಾಢವಾಗಿ ನಿದ್ದೆ ಮಾಡಿದಳು. ಆ ಹೊಸ ಕಾಯಿದೆ, ಅವಳಿಗೆ ರಹಸ್ಯಮಯ, ಕಲ್ಯಾಣಕರ, ದೇವರಂಥ ಸಂಗತಿ ಅನಿಸಿತು; ಅವಳನ್ನು ಹಿಂದೊಮ್ಮೆ ಇದ್ದಂತೆ ಯಾವ ಕ್ಲೇಷ ಚಿಂತೆಗಳ ಲೇಶವೂ ಇಲ್ಲದೆ ನೆಮ್ಮದಿಯಾಗಿ ಇರಿಸಲು ಭೂಮಿಗೆ ಇಳಿದು ಬಂದ ಕೃಪೆಯೋ ಅವತಾರವೊ ಅನಿಸಿತು. ಅವಳಿಗೆ ತನ್ನ ಸ್ಥಾನಮಾನ ತುಂಬ ತಾಪದಾಯಕವಾಗಿತ್ತು. ಅದರ ಅಮೂರ್ತ

ಅವ್ಯಕ್ತ ಲಕ್ಷಣಗಳು ಅವಳಲ್ಲಿ ಒಂದು ಹೇಸಿಕೆಯನ್ನು ಉಂಟುಮಾಡುತ್ತಿದ್ದುವು. ಈ ಅವಸ್ಥೆಗೆ ಕಾರಣವಾದ ವ್ಯಕ್ತಿಯು ಬಗೆಗಿನ ಹೇಸಿಕೆಗಿಂತಲೂ ಈ ಹೇಸಿಕೆ ಹೆಚ್ಚು ಅಸಹ್ಯವೆನಿಸಿತ್ತು. ಇದು ಅಪಮಾನಕರವಾಗಿತ್ತು. ಉಪೇಕ್ಷೆ ಅಲಕ್ಷ್ಯಗಳಿಗೆ ಕಾರಣ ವಾಗಿತ್ತು. ಗೌರವಕ್ಕೆ ಭಂಗ ತರುವಂತೆ ಇತ್ತು. ಅವನನ್ನು ಆಕೆ ಮರೆಯಬಲ್ಲಳು ; ಆದರೆ ಅವಳ ಈ ಅವಸ್ಥೆ — ಪರಿಸ್ಥಿತಿ ಅವಳೊಂದಿಗೆ ಯಾವಾಗಲೂ ಉಳಿಯುವಂತೆ ಆಗಿತ್ತು.

ಅವಳು ಗುಣಮುಖವಾದ ದಿನಗಳಲ್ಲಿ ಆಕೆ ವಿಂಟರಬೋರ್ನನನ್ನು ಕಾಣಲಿಲ್ಲ. ಅವನ ಯಾವ ಸುಳಿವೂ ಕಂಡುಬರಲಿಲ್ಲ ; ಮತ್ತು ಆ ಮೂಲಕವೇ ಏನೋ ಅವಳ ಕಲ್ಪನಾವಿಲಾಸವು ಅವನ ಸುತ್ತಲೂ ಒಂದು ಅದ್ಭುತ ರಮ್ಯತೆಯ ತೆರೆಯನ್ನು ನೆಯ್ಯುವಂತೆ ಆಯಿತು. ಪೂರ್ತ ಮಾನವತೆಯ ಎಲ್ಲ ಕುಂದುಕೊರತೆಗಳೊಂದಿಗೆ ಆತ ಅವಳ ಇದುರಿಗೆ ಬಂದಿದ್ದರೆ, ನಿಂತಿದ್ದರೆ ಅಂಥ ಮೋಹಜಾಲ ಹೆಣೆದು ಕೊಳ್ಳುತ್ತಿದ್ದಿಲ್ಲ. ಅವನು ಅವಳ ಸ್ಮರಣರಂಗದಲ್ಲಿ ಒಮ್ಮೆ ಫಲದೇವತೆಯಾಗಿ ಒಮ್ಮೆ ವನದೇವತೆಯಾಗಿ ಎದ್ದುನಿಂತನು ; ಕೆಲ ಸಲ ಸಸ್ಯಶ್ಯಾಮಲ, ಹಸಿರುಪಾಚಿ ಬಳಿದು ಕೊಂಡು, ಅನೇಕ ಸಲ ಹಣ್ಣಿನ ತೋಟಗಳಲ್ಲಿ ಸೊನೆ ತುಳುಕುವ ರೆಂಬೆಕೊಂಬೆಗಳ ನಡುವೆ ಅವಳು ಅವನನ್ನು ಹಿಂದೆ ನೋಡಿದಂತೆ ; ಕೆಲ ಸಲ ಸೇಬಿನ ರಸದಿಂದ ಮೈಕೈಕಲೆಮಾಡಿಕೊಂಡು ಸೇಬಿನ ಬೀಜಗಳ ಚಕ್ಕೆ ಚೆಲ್ಲಿಕೊಂಡು, ಆತ ಬ್ಲಾಕಮೂರ ಕೊಳ್ಳದಿಂದ ತನ್ನ ಗಾಣಬೋಗುಣಿಗಳೊಂದಿಗೆ ಮರಳುವಾಗ ಆಕೆ ಕಂಡಂತೆ, ಅವಳ ಹೃದಯದ ಅಂತರಂಗದಲ್ಲಿ ತಂದೆಯ ಉತ್ಸಾಹವನ್ನೇ ಅವಳ ಸಂಭ್ರಮವು ಸರಿಗಟ್ಟುತ್ತಿತ್ತು. ತಾನು ಇನ್ನು ಅವನ ಕುರಿತು ಎಷ್ಟೊಂದು ಪ್ರೀತ್ಯಾದರವಿಟ್ಟುಕೊಂಡಿರುವೆನೆಂದು ಜೈಲ್ಸನಿಗೆ ಕಾಣಿಸಬೇಕೆಂಬುದೇ ಆ ಸಂಭ್ರಮ.

ಭವಿಷ್ಯವು ತಮ್ಮಿಬ್ಬರನ್ನು ಈ ಬಾಳಿನಲ್ಲಿ ಒಟ್ಟಿಗೆ ತರಬಹುದೇ ? ಇದೊಂದು ಅವಳಿಗೆ ನಿತ್ಯದ ಸೋಜಿಗವಾಗಿತ್ತು. ಅದು ಇನ್ನು ಹಾಗೆ ಮಾಡಲು ಯಾವ ಶಿಷ್ಟ ಸಮ್ಮತಿ ಔಚಿತ್ಯಗಳೂ ಇಲ್ಲವೆಂಬುದು ಅವಳಿಗೆ ಗೊತ್ತಿತ್ತು. ಆದರೂ ಒಳ್ಳೆಯ ಹುಡುಗಿಯರ ರೀತಿಯಿಂತೆ ಆಕೆ ತಂದೆಯ ಜ್ಞಾನ ಮತ್ತು ನಿರ್ಣಯ ಶಕ್ತಿಗಳಲ್ಲಿ ಪೂಜ್ಯ ಶ್ರದ್ಧೆ ಇಟ್ಟಿದ್ದಳು. ಆತ ಬರೆದದ್ದನ್ನು ಆಕೆ ನೆನೆದುಕೊಂಡಳು. ವಿಲಂಬದಿಂದ ಏನೇ ಅಪಾಯ ಒದಗದಂತೆ ಆಕೆ ವಿಂಟರಬೋರ್ನನಿಗೆ ತನ್ನ ಮನೋಗತದ ಸೂಚನೆಯನ್ನು ಕೊಡಬೇಕು—ಎಂದು ಆತನು ಬರೆದಿದ್ದನು. ಅಂಥ ಹೆಜ್ಜೆಗೆ ಅವಳ ಭಾವನೆಗಳೂ ಪ್ರತಿಕೂಲವಾಗಿದ್ದಿಲ್ಲ. ಆದರೆ ಇಂಥ ಸೂಚನೆ ಈ ಆರಂಭಿಕ ಅವಸ್ಥೆಯಲ್ಲಿ ಅಪಾಯಕ್ಕೆ ಕಾರಣವಾಗದಂತೆ ವ್ಯಕ್ತವಾಗಬೇಕು ಎಂದು ಅವಳಿಗೆ ಅನಿಸಿತು.

ತನ್ನ ಹಿಂದಿನ ರೂಪತ್ವದ ಒಂದು ಅಶಕ್ತಛಾಯೆಯ ಆಕಾರಕ್ಕೆ ಇಳಿದ ಆಕೆ ಈಗ ಪುಟಗಾಲು ಹಾಕಿದಂತೆ ಭರದಿಂದ ಆಶಾಮಯ ಹುರುಪಿನ ಸ್ವರೂಪಕ್ಕೆ ಬಂದುಬಿಟ್ಟಳು.

ಕೆಲವೆ ದಿನಗಳಲ್ಲಿ ಅವಳ ಮೊಗದಲ್ಲಿ ಕಾಂತಿಯು ಅರಳಿತು. ಮತ್ತು ವಾಡಿಕೆಯಂತೆ ನಡೆದಾಡಲಿಕ್ಕೆ ಆಕೆ ಸಮರ್ಥಳಾದಳು.

ಒಂದು ದಿನ ಸ್ಥಾನಪಲ್ಲಟ ಮಾಡುವುದಕ್ಕೆ ಮೆಲಬರಿ ಅವಳನ್ನು ಗಿಗ್ (ಒಗ್ಗಾಲಿಯ) ಗಾಡಿಯಲ್ಲಿ ಶರ್ಟನ್ ಪೇಟೆಗೆ ಒಯ್ಯಬೇಕೆಂದು ಪ್ರಸ್ತಾಪಿಸಿದನು. ಮೆಲಬರಿಯ ಒಬ್ಬ ಆಳು ಅಲ್ಲಿಗೆ ಏನೋ ನಿರೂಪ ಒಯ್ದು ಮುಟ್ಟಿಸಲು ಹೋಗುವವನೆ ಇದ್ದನು. ಗ್ರೇಸಳಿಗೆ ಶರ್ಟನ್ನಿನಲ್ಲಿ ಯಾವ ಕೆಲಸವೂ ಇದ್ದಿಲ್ಲ. ಆದರೆ ಬಹುಶಃ ವಿಂಟರಬೋರ್ನ ಅಲ್ಲಿ ಇದ್ದಿರಬಹುದೆಂಬ ವಿಚಾರ ಅವಳ ಮನಸ್ಸಿನಲ್ಲಿ ಸುಳಿಯಿತು. ಮತ್ತು ಈ ವಿಚಾರವು ಅಲ್ಲಿಗೆ ಈ ಸಂಚಾರದ ಸವಾರಿಯಲ್ಲಿ ಹೊಸ ಸ್ವಾರಸ್ಯ ತುಂಬಿತ್ತು.

ದಾರಿಯಲ್ಲಿ ಅವಳು ಅವನನ್ನು ಎಲ್ಲಿಯೂ ಕಾಣಲಿಲ್ಲ. ಆದರೆ 'ಕುರಿಕೇರಿ'ಯ ಅಡೆತಡೆಗಳೊಳಗಿಂದ ಅವಳ ಕುದುರೆ ನಿಧಾನವಾಗಿ ನಡೆಯುತ್ತ ಸಾಗುವಾಗ ಅವಳು ಆ ತರುಣನನ್ನು ಹಾದಿಯ ಪಕ್ಕದ ಕಲ್ಲು ಹಾಸಿಗೆಯ ಮೇಲೆ ಕಂಡಳು. ಆಗ ಅವಳು ಹಿಂದೆ ತಾನು ಶಾಲೆಯಿಂದ ಮನೆಗೆ ಮರಳಿದ ದಿನ ಅವನು ಒಂದು ಸೇಬಿನ ಗಿಡ ಎತ್ತಿಕೊಂಡು ಅದರ ಕೆಳಗೆನಿಂತ ಪ್ರಸಂಗವನ್ನು ನೆನೆದುಕೊಂಡಳು. ಆಗ ತನ್ನ ದುರಾರಾಧ್ಯವಾದ ಅಭಿರುಚಿಯಿಂದಾಗಿ ತಾನು ಕಳೆದುಕೊಂಡ ಒಂದು ಮಧುರ ಕೋಮಲ ಸುಸಂಧಿಯನ್ನು ನೆನೆದುಕೊಂಡಳು. ಅವಳ ಎದೆಯೇ ಕಿತ್ತು ಗಂಟಲಿಗೆ ಬಂದು ಒತ್ತಿದಂತಾಯಿತು. ಈಗ ಅದೆಲ್ಲ ದುರಾರಾಧ್ಯತೆಯನ್ನು ಅಭಿರುಚಿಯ ಶಿಷ್ಟ ಮಡಿವಂತಿಕೆಯನ್ನು ಅವಳು ಬಿಟ್ಟುಕೊಟ್ಟಿದ್ದಳು — ಶಪಥಹೊತ್ತು ಬಿಟ್ಟುಕೊಟ್ಟಿದ್ದಳು. ಅವಳು ಅವನನ್ನು ಕಂಡ ಆ ಕೊನೆಯ ಸಮಯವನ್ನು ಮರೆಯಲಿಲ್ಲ—ಅದೇ ಪಟ್ಟಣದಲ್ಲಿ ಆರ್ಲಅಫ್‌ವೆಸಕ್ಸ್ ಹೋಟಲಿನ ಪಟಾಂಗಣದಲ್ಲಿ ಸಿಡರಮದ್ಯವನ್ನು (ಸೇಬಿನ ರಸವನ್ನು) ತಯಾರಿಸುತ್ತಿದ್ದಾಗ ತಾನು ಆ ಹೋಟಲಿನ ಚಕ್ಕಂದದ ಮಹಿಳೆಯಾಗಿ ಮಹಡಿಯ ಮೇಲಿನ ಮೊಗಸಾಲೆಯಲ್ಲಿ ಕಿಟಕಿಯ ಇದಿರು ಕಾಣಿಸಿಕೊಂಡ ಪ್ರಸಂಗವದು.

ಗ್ರೇಸಳು ಜತೆಗೆ ಬಂದ ಮನುಷ್ಯನಿಗೆ ತನ್ನನ್ನು ಅಲ್ಲಿಯೇ ನಡುಬೀದಿಯಲ್ಲಿ ಬಿಡುವಂತೆ ಹೇಳಿದಳು. ಮತ್ತು ಕೂಡಲೆ ತನ್ನ ಪ್ರೇಮಿಕನ ಬಳಿಗೆ ನಡೆದಳು. ಜೈಲ್ಸನು ಅವಳನ್ನು ಮೊದಲು ಕಂಡಿರಲಿಲ್ಲ. ಈಗ ಅವನ ಕಣ್ಣುಗಳು ಎಷ್ಟು ಹತ್ತಿಕ್ಕಿದರೂ ಹರ್ಷಿತವಾಗಿ ಕಂಡವು. ಹಿಂದೆ ಅವರ ಭೆಟ್ಟಿಗಳಲ್ಲಿ ಗಮನಕ್ಕೆ ಬರುತಿದ್ದ ಸಂಕೋಚದ ಪೇಚಾಟ ಪೆಚ್ಚುತನ ಈ ಸಲ ಅಷ್ಟೊಂದು ಉಂಟಾಗಲಿಲ್ಲ.

ಕೆಲವು ಮಾತು ಆಡಿದ ಮೇಲೆ ಅವಳು ಅವನನ್ನು ಆಮಂತ್ರಿಸುವ ದನಿಯಲ್ಲಿ ಅಂದಳು, 'ನನಗೆ ಏನೂ ಕೆಲಸವಿಲ್ಲ. ನಿನಗೆ ತುಂಬ ಕೆಲಸವೇನೊ?'

'ನನಗೊ? ಛೇ ಏನೂ ಇಲ್ಲ. ಈಗ ಅತಿ ಜೋರಿನ ಹಂಗಾಮಿನಲ್ಲಿಯೂ ನನ್ನ ವ್ಯವಹಾರ ಸಣ್ಣದೇ ಇರುತ್ತದೆ. ಇದನ್ನು ಕೇಳಲೂ ನನಗೆ ಬೇಸರ.'

'ಸರಿ. ಹಾಗಾದರೆ — ನಾನು ಇಗರ್ಜಿಗೆ ಹೋಗುತ್ತೇನೆ. ನನ್ನ ಜತೆಗೆ ಬಾ'

ಸಾರ್ವಜನಿಕ ಜಾಹಿರಾತಿನಿಂದ ಲಗುಪಾರಾಗಲು ಈ ಉಪಾಯ ಸೂಚಿಸಿದಂತೆ ಇತ್ತು. ಏಕೆಂದರೆ ಈಗಾಗಲೇ ಹಲವಾರು ಕಣ್ಣುಗಳು ಅವಳನ್ನು ದಿಟ್ಟಿಸಿನೋಡು ತ್ತಿದ್ದವು. ಅವರ ಕುತೂಹಲವನ್ನು ಆರಿಸಲು ಸಾಕಷ್ಟು ಕಾಲಕಳೆದಂತೆ ಆಯಿತೆಂದು ಆಕೆ ಭಾವಿಸಿದಳು. ಆದರೆ ಆದದ್ದು ಬೇರೆಯೇ. ಜನ ಅವಳ ಕಡೆಗೆ ಕೋಮಲ ಆಸಕ್ತಿಯಿಂದ ನೋಡತೊಡಗಿದ್ದರು — ಗಂಡ ಬಿಟ್ಟ ಎಳೆಯ ಹೆಂಡತಿಯೆಂದು — ಅಧಿಕ ಪ್ರಸಂಗವೆನಿಸದಂತೆ, ಗ್ರಾಮ್ಯವೆನಿಸದಂತೆ ನೋಡುತ್ತಿದ್ದರು ; ಆದರೆ ಯಾವುದೇ ರೂಪದ ವಿಚಾರಣೆ ಪರಿಶೀಲನೆಗೆ ಅವಳು ಆಗ ಅಣಿಯಾಗಿದ್ದಿಲ್ಲ.

ಅವರು ಚರ್ಚಿನ ಅಂಕಣಗಳಲ್ಲಿ ಅಲೆದಾಡಿದರು ಮತ್ತು ಹಾಗೆಯೇ ಒಂದೆಡೆಗೆ ಕುಳಿತರು. ಆ ಕಟ್ಟಡದಲ್ಲಿ ಅವರಲ್ಲದೆ ಬೇರೆ ಯಾವ ಜೀವಿಯೂ ಇದ್ದಿಲ್ಲ. ಒಂದು ನಷ್ಟವಾದ ಅರ್ಲಮನೆತನದ ಕೊನೆಯ ವಂಶಜನ ಅಮೃತಶಿಲೆಯ ಗೋರಿಯನ್ನು ಅವಳು ಅವಲೋಕಿಸಿದಳು. ಅವಳು ತಲೆಯನ್ನು ಒಂದು ಬದಿಗೆ ಹೊರಳಿಸಿ ಅವನನ್ನು ಕೇಳಿದಳು — ಹಿಂದಿನ ಸಲ ಅವರೀರ್ವರೂ ಈ ಊರಿನಲ್ಲಿ ಹೀಗೆಯೇ ಏಕಾಕಿಯಾಗಿ ಕೂಡಿದ್ದು ಅವನಿಗೆ ನೆನಪಿದೆಯೇ ?

ಅವನಿಗೆ ಪೂರ್ತಿ ನೆನಪಿತ್ತು. ಅವನು ಅಂದನು, 'ಆಗ ನೀನು ಬಿಂಕದ ಹೆಣ್ಣಾಗಿದ್ದಿ — ತುಂಬ ಅಭಿಮಾನದವಳು — ಎತ್ತರವಿದ್ದಷ್ಟೇ ನಾಜೂಕೂ ಅಹುದು. ಈಗಲೂ ಹಾಗೆಯೇ ಇದ್ದಿರಬಹುದು, ಅಲ್ವೇ ?'

ಗ್ರೇಸಳು ನಿಧಾನವಾಗಿ ತಲೆಯನ್ನು ಅಲ್ಲಾಡಿಸಿದಳು. 'ದುಃಖವು ಕ್ಲೇಶವು ಅದನ್ನೆಲ್ಲ ನನ್ನಿಂದ ಹೀರಿಕೊಂಡುಬಿಟ್ಟಿದೆ' ಆಕೆ ಪ್ರಭಾವಿಯಾಗಿ ಅಂದಳು. 'ಬಹುಶಃ ಈಗ ನಾನು ಅದಕ್ಕೆ ತೀರ ವಿಪರೀತಳಾಗಿರಬಹುದು'. ಈ ಮಾತಿನಲ್ಲಿ ಅವಳು ಬಿಡಿಸಿ ಹೇಳಲಾರದಂಥ ಏನೋ ಒಂದು ಮಿಣುಕುವಂತಿತ್ತು. ಅದನ್ನು ಕುರಿತು ವಿಚಾರ ಮಾಡಲಿಕ್ಕೆ ಆತನಿಗೆ ಅವಕಾಶಕೊಡಬಾರದೆಂಬ ತ್ವರೆಯಲ್ಲಿ ಅವಳು ಮಾತು ಮುಂದರಿಸಿದಳು, 'ನನ್ನ ತಂದೆ ನಿನಗೆ ಪತ್ರವೇನಾದರೂ ಬರೆದಿದ್ದಾನೆಯೇ ?'

'ಅಹುದು' ವಿಂಟರಬೋರ್ನ ಅಂದನು. ಅವಳು ವಿಚಾರಮಗ್ನಳಾಗಿ ಅವನ ಕಡೆಗೆ ಕಣ್ಣೆತ್ತಿ ನೋಡಿದಳು ; 'ನನ್ನ ವಿಷಯವಾಗಿ ಅಲ್ಲವಷ್ಟೇ ?'

'ಅಹುದು'

ಅವಳಿಗೆ ಹೊಳೆಯಿತು. ತನಗೆ ಕೊಡಲು ಆಜ್ಞಾಪಿಸಿದಂತೆ ಅವನಿಗೆ ತನ್ನ ಸೂಚನೆಯನ್ನು ಗ್ರಹಿಸಲು ತನ್ನ ತಂದೆ ಆಜ್ಞಾಪಿಸಿರಬೇಕು. ಮತ್ತು ಅವಳಲ್ಲಿ ಈ ಹೊಳವು ಆ ಕ್ಷಣಕ್ಕೆ ಒಂದು ಕೆಂಪೇರಿದ ತೀವ್ರ ಸ್ಪಂದನವನ್ನು ಹರಿದಾಡಿಸಿತು. ಆದರೆ ಅಲ್ಲಿ ಕೂತವನು ಜೈಲ್ಸ ಒಬ್ಬನೇ. ಅವನಿಂದ ಅವಳಿಗೆ ಹೆದರಿಕೆ ಏನೂ ಇಲ್ಲ. ಅವಳ ಭರವಸೆ ಸಂಯಮ ತಿರುಗಿ ಬಂದಿತು.

'ಅವರು ಬರೆದಿದ್ದಾರೆ, ನಾನು ನಿನ್ನನ್ನು ಮಾತಾಡಿಸಿ ನೋಡಬೇಕಂತೆ — ಲೆಕ್ಕಿಸಿದರೆ ನೀನೇ ಅರಿಯಬಲ್ಲ ಆ ಸಂಗತಿಯ ದೃಷ್ಟಿಯಿಂದ' ವಿಂಟರಬೋರ್ನ ಕಿರಿದನಿಯಲ್ಲಿ ಮುಂದರಿದನು. ಈ ದಾರಿಯಲ್ಲಿ ಆಕೆಯೇ ಅವನ ಹೆಜ್ಜೆಯನ್ನು ಇಡಿಸಿದಳು. ಅಂದಾಗ ಅದನ್ನು ಅವಸರದಲ್ಲಿ ಬಿಟ್ಟು ಸರಿಯುವ ಒಲವು ಅವನಿಗೆ ಇದ್ದಿಲ್ಲ.

ಅವರಿಬ್ಬರೂ ಕೂಡಿಯೇ ಬಾಲ್ಯ ಕಳೆದವರು. ಅಂಥ ಪರಿಚಯವೇ ಕೊಡಬಲ್ಲ ವೈಯಕ್ತಿಕವಾದ ಒಂದು ಸಲಿಗೆಯ ಸಂಗಾಡಿತನ ಅವರಲ್ಲಿ ಇತ್ತು. 'ನಿನಗೆ ಗೊತ್ತು, ಜೈಲ್ಸ', ಆಕೆ ತೀರ ವ್ಯವಹಾರಿಕ ದನಿಯಲ್ಲಿ ಅಂದಳು, 'ಅದೆಲ್ಲ ಸರಿ. ಒಳ್ಳೆಯದೇ. ಆದರೆ ನಾನು ಸದ್ಯ ಅತ್ಯಂತ ವಿಚಿತ್ರ ಸಂದಿಗ್ಧ ಸ್ಥಾನದಲ್ಲಿ ಇದ್ದೇನೆ. ಆದ್ದರಿಂದ ಅಂಥ ಸಂಗತಿಗಳ ಕುರಿತು ನಾನಿಂದು ಖಚಿತವಾಗಿ ಏನೇನೂ ಹೇಳಲಾರೆ'.

'ಇಲ್ಲವೇ ?', ಆತ ಅಂದನು — ಈ ವಿಷಯದ ಕುರಿತು ಆಗಂತುಕನ ಠೀವಿಯಲ್ಲಿ. ಆತ ಅವಳ ಕಡೆಗೆ ಹೊಸ ಶೋಧದ ಕುತೂಹಲದ ಅರಿವಿಂದ ನೋಡಹತ್ತಿದ್ದನು.

ತಮ್ಮಿಬ್ಬರ ಈ ಪುನಃ ಸಮಾಗಮ ಅವಳನ್ನು ಈ ರೀತಿ ತೋರ್ಪಡಿಸಬಹುದೆಂದು ಆತ ಕಲ್ಪಿಸಿದ್ದಿಲ್ಲ. ಮೊತ್ತ ಮೊದಲ ಸಲ ಆತ ಅವಳಲ್ಲಿ ಒಂದು ಅನಪೇಕ್ಷಿತ ಭಾವವನ್ನು ಕಂಡನು. ಈ ಭಾವ ನಿಜವಾಗಿಯೂ ಅನಪೇಕ್ಷಿತವಾಗಿರಬೇಕಾಗಿ ಇದ್ದಿಲ್ಲ. ಅವಳು, ಅವನ ಇದುರಿಗೆ ನಿಂತವಳು, ಗ್ರೇಸ ಮೆಲಬರಿ ಎಂಬ ಹುಡುಗಿಯಾಗಿ ಉಳಿದಿದ್ದಿಲ್ಲ. ಆ ಹುಡುಗಿಯನ್ನು ವಾಡಿಕೆಯಿಂದ ಆತ ಬಲ್ಲ. ನಿಜವಾಗಿಯೂ ಈ ವ್ಯತ್ಯಾಸವನ್ನು, ಪರಿವರ್ತನೆಯನ್ನು ಆತನೆ ಸುಲಭವಾಗಿ ಮುಂದಾಗಿ ಊಹಿಸಿಕೊಳ್ಳಬಹುದಿತ್ತು ; ಆದರೆ ಇದು ಅವನಿಗೆ ತೋಚಿದ್ದೇ ಇಲ್ಲ. ಅವಳು ಮದುವೆಯಾದ ಹೆಂಗಸು ; ಅವಳು ಅವನಿಂದ ಮುಂದೆ, ಮೇಲೆ ಸರಿದವಳು ; ಅವಳು ತನ್ನ ಕನ್ಯತನದ ಮರ್ಯಾದೆ ಕಳೆದುಕೊಂಡಿದ್ದಿಲ್ಲವಾದರೂ ಕನ್ಯತನದ ನಾಚಿಕೆ ಕಳೆದುಕೊಂಡಿದ್ದಳು. ಈ ಅನಿವಾರ್ಯವಾದ ಪರಿವರ್ತನೆ ಅವನಿಗೆ ಗೊತ್ತು. ಆದರೆ ಅವನು ಅದನ್ನು ಗಮನಿಸಿದ್ದಿಲ್ಲ ; ಮತ್ತು ಅದೀಗ ಅವನನ್ನು ಕ್ಷಣಕಾಲ ಸ್ತಂಭೀಭೂತನಾಗಿ ಮಾಡಿತು.

ಸತ್ಯಸಂಗತಿಯೆಂದರೆ, ಫಿಟ್ಝಪಿಯರ್ಸನೊಂದಿಗೆ ಅವಳು ನಿಶ್ಚಿತಾರ್ಥವಾದಂದಿನಿಂದಲೂ ಅವನು ಅವಳೊಂದಿಗೆ ನಿಕಟ ಸಂಗಾಡಿತನದ ಸಂಪರ್ಕದಲ್ಲಿ ಎಂದಿಗೂ ಬಂದಿದ್ದಿಲ್ಲ. ಇದಕ್ಕೆ ಒಂದೇ ಒಂದು ಅಪವಾದವೆಂದರೆ, ಹಾಯ್‌ಸ್ಟಾಯ್ರ್ ದಿಬ್ಬದ ಮೇಲೆ ಆ ಸಂಜೆಗೆ ಒದಗಿದ ಸಂಕ್ಷಿಪ್ತ ಭೆಟ್ಟಿ. ಆತ ಸಿಡರ ಗಾಣದ ಯಂತ್ರೋಪಕರಣಗಳೊಂದಿಗೆ ದಿಬ್ಬವೇರಿ ಬರುವಾಗ ಆಕೆ ಸಂಧಿಸಿದ್ದಳು. ಆದರೆ ಆಗ ಆ ಭೆಟ್ಟಿಯು ತೀರ ಧಾವತಿಯದಾಗಿತ್ತು. ಅವಳು ಕುರಿತು ಯಾವದೇ ಒಳನೋಟಕ್ಕೆ ಅದು ಎಡೆಗೊಡುವಂತೆ ಇದ್ದಿಲ್ಲ.

ವಿಂಟರಬೋರ್ನನೂ ಪ್ರಗತಿ ಹೊಂದಿದ್ದನು. ಆತ ಈಗಲೂ ನಾಚಬರುಕ

ನಿದ್ದನು. ಆದರೂ ಅವಳನ್ನು ಕೆಲಮಟ್ಟಿಗೆ ವಿಮರ್ಶಿಸಬಲ್ಲವನಾಗಿದ್ದನು. ಹಿಂದೆ ಅಂಥ ಒಂದು ಕಾಲವೂ ಇತ್ತು. ಆಗ ಗ್ರೇಸ ಮೆಲಬರಿಯ ಒಂದಾನೊಂದು ಲಕ್ಷಣ ವನ್ನು ಟೀಕಿಸುವುದೆಂದರೆ ಒಂದು ದೇವತೆಯನ್ನು ಟೀಕಿಸುವಷ್ಟೇ ಅವನ ಶಕ್ತಿಯನ್ನು ಮೀರಿದ ದೂರದ ವಿಷಯವಾಗಿತ್ತು. ಮತ್ತು ಅವನ ವಿಮರ್ಶೆ, ಟೀಕೆಗಳ ಪರಿಣಾಮ ವಾಗಿ ಇಷ್ಟೊಂದು ಸಂಗತಿ ಖಚಿತವಾಗಿತ್ತು; ಇಂದು ತಾನು ಕಾಣಲು ಹೊರಬಿದ್ದು ಬಂದ ಇವಳು ಹೊಸ ಹೆಂಗಸಾಗಿದ್ದಳು. ಆ ಮೂಲದ ಗ್ರೇಸಳಿಗೆ ಸಾಧ್ಯವಿದ್ದುದಕ್ಕಿಂತ ಹೆಚ್ಚು ವಿಚಾರಗಳ, ಹೆಚ್ಚು ಪ್ರೌಢಿಮೆಯ, ಎಲ್ಲಕ್ಕೂ ಮಿಗಿಲಾಗಿ, ಹೆಚ್ಚು ಆತ್ಮ ವಿಶ್ವಾಸದ ಪ್ರಾಣಿಯಾಗಿದ್ದಳು. ಇದರಿಂದ ತಾನು ಸಂತುಷ್ಟನಾದನೋ, ಅಸಂತುಷ್ಟ ನಾದನೋ ಅವನಿಗೇ ಮೊದಲು ನಿರ್ಣಯವಾಗಲಿಲ್ಲ. ಆದರೂ ಒಟ್ಟಿನ ಮೇಲೆ ಈ ಸಾಮೀಪ್ಯವು ಅವನನ್ನು ಆಕರ್ಷಿಸಿತು.

ಅವಳು ಇಷ್ಟು ಮಧುರ, ಇಷ್ಟು ಕೋಮಲ ಸಂವೇದನೆಯವಳಾಗಿದ್ದಳು. ಅವನ ಮೌನವು, ತನಗೆ ವೈರಿಯಾಗಬಹುದೇನೋ ಅವನ ಮಿದುಳಿನಲ್ಲಿ ಮನೆಮಾಡಿ ಕೊಂಡಿದ್ದುದಕ್ಕೆ ದ್ಯೋತಕವೆಂದು ಆಕೆ ಅಂಜಿದಳು.

'ನಿನ್ನ ಹಣೆಯ ಮೇಲೆ ಆ ಗೆರೆಗಳು ಮೂಡಿಬರುವಷ್ಟು ಅದೇನು ವಿಚಾರ ಮಾಡುತ್ತಿರುವಿ ?' ಆಕೆ ಕೇಳಿದಳು. 'ಈಗ ಸಮಯ ಅಪಕ್ವವಾಗಿದೆ ಎಂದು ಹೇಳಿ ನಿನ್ನನ್ನು ನೋಯಿಸಬೇಕೆಂದು ನನ್ನ ಉದ್ದೇಶವಿರಲಿಲ್ಲ'.

ಈ ಮಾತುಗಳ ಬುಡಕ್ಕೆ ಇದ್ದ ನಿಜವಾದ ಪ್ರೇಮದ ಕನಿಕರವು ಎದೆಯನ್ನು ಮುಟ್ಟಿ ತುಂಬ ಕಳವಳಗೊಂಡು ವಿಂಟರಬೋರ್ನನು ಅವಳ ಕೈಯನ್ನು ಹಿಡಿದು ಕೊಳ್ಳುತ್ತ ಮುಖವನ್ನು ಹೊರಳಿಸಿದನು. ತಾನು ಅವಳನ್ನು ಟೀಕಿಸಿದೆನೆಂದು ಆತ ವ್ಯಸನಪಟ್ಟನು.

'ನೀನು ತುಂಬ ಒಳ್ಳೆಯವಳು, ಡಿಯರ್ ಗ್ರೇಸ', ಅವನು ತಗ್ಗಿದ ದನಿಯಲ್ಲಿ ಅಂದನು, 'ನೀನು ಹಿಂದೆ ಇದ್ದುದಕ್ಕಿಂತ ಒಳ್ಳೆಯವಳು, ಬಹಳ ಒಳ್ಳೆಯವಳಾಗಿರುವಿ'.

'ಅದು ಹೇಗೆ ?'

ಹೇಗೆಂದು ಆತ ಅವಳಿಗೆ ಹೇಳಲಾರನು. ಅವನು ತಪ್ಪಿಸಿಕೊಳ್ಳುವಂತೆ ಮೆಲ್ಲನೆ ನಕ್ಕು ಅಂದನು, 'ನೀನು ಹೆಚ್ಚು ಚೆಂದ ಕಾಣುವಿ'. ಇದನ್ನು ಹೇಳುವುದೇ ಅವನ ಮನೋಗತವಿದ್ದಿಲ್ಲ. ಅನಂತರ ಅವಳ ಕೈಯನ್ನು ಹಿಡಿದುಕೊಂಡೇ ಉಳಿದನು — ಅವಳ ಬಲಗೈಯನ್ನು ತನ್ನ ಬಲಗೈಯಲ್ಲಿ. ಇದರಿಂದ ಅವರು ಆಚೆ-ಈಚೆ ಮುಖ ಮಾಡಿ ನಿಲ್ಲುವಂತೆ ಆಯಿತು. ಅವನು ಅವಳ ಕೈಯನ್ನು ಬಿಡಲೇ ಇಲ್ಲ. ಆದ್ದರಿಂದ ಅವಳು ಒಂದು ಕೋಮಲ ನಿಷೇಧವನ್ನು ಪ್ರಕಟಿಸುವ ಸಾಹಸ ಮಾಡಿದಳು. 'ನನಗೆ ಅನಿಸುತ್ತದೆ, ಸದ್ಯ ನಾವು ಎಷ್ಟು ಮುಂದರಿಯಬಹುದೋ ಅಷ್ಟು ಮುಂದರಿದಿದ್ದೇವೆ — ನನ್ನ ಬಡ ತಂದೆ ನಾವು ಎಂದಿನಂತೆಯೇ ಮತ್ತೆ ಆಗಿದ್ದೇವೆಂದು ಸಮಾಧಾನ ಪಡು ವಷ್ಟು ದೂರ ಬಂದಿದ್ದೇವೆ. ನೋಡು, ಜೈಲ್ಸ, ನನ್ನ ಪ್ರಕರಣ ಇನ್ನೂ ನಿರ್ಣಯ

ವಾಗಿಲ್ಲ. ಮತ್ತೆ ಒಂದು ವೇಳೆ — ಓ !, ತಿಳಿದುಕೊ, ನಾನು ಬಿಡುಗಡೆಯನ್ನೇ ಪಡೆಯಲಾರೆನಾದರೆ ? — ಏನಾದರೊಂದು ಬಿಕ್ಕಟ್ಟು, ಪೇಚು, ಅಕ್ರಮ ಉಂಟಾಗಿದ್ದರೆ ? '

ಅವಳು ತ್ವರೆಯಿಂದ ಉಸಿರನ್ನೆಳೆದಳು, ಮತ್ತು ಒಮ್ಮೆಲೆ ಕಳೆಗುಂದಿದಳು ; ಬಿಳುಪಾದಳು. ಈ ಮಟ್ಟದತನಕವೂ ಅವನ ಸಂವಾದವು ಒಂದು ಪ್ರೇಮದ ಸಂಭ್ರಾಂತ ರೂಪಕವಾಗಿತ್ತು. ಭೂತಕಾಲದ ಮಬ್ಬಿನ ಆವರಣ. ಅದಕ್ಕೂ ಮಬ್ಬಿನ ವರ್ತಮಾನದ ದಿಗಂತ ಇದೊಂದು ಅವಧಿಯಲ್ಲಿ ಪೂರ್ತಿ ಮರೆತಂತೆ ಆಗಿತ್ತು. ಆದರೆ ಈಗ ಇಡಿಯ ಪರಿಸರವು ಬಂದು ಕವಿಯಿತು. ಬೆಳಕಿನಲ್ಲಿ ಇರಬೇಕಾದ ಕತ್ತಲೆಯು ಉಚಿತ ಛಾಯೆಯು ತಿರುಗಿ ಸ್ಥಾಪಿತವಾಯಿತು.

' ಅದು ಖಂಡಿತವಾಗಿಯೂ ಸರಿಯಾಗುತ್ತದೆ, ನನಗೆ ಹಾಗೆಯೇ ವಿಶ್ವಾಸವಿದೆ ' ಅವಳು ಅಸ್ವಸ್ಥ ಉಚ್ಚಾರಗಳಿಂದ ಮಾತು ಮತ್ತೆ ಎತ್ತಿಕೊಂಡಳು. ಸಾಲಿಸಿಟರ ಏನು ಹೇಳಿದನೆಂದು ನನ್ನ ಅಪ್ಪ ನಿನಗೆ ಅಂದನು ? '

' ಓ — ಅದೆಲ್ಲ ಖಂಡಿತವಾಗಿಯೂ ನಿಜವೆನ್ನು. ನಿನ್ನ ಪ್ರಕರಣ ತೀರ ಸ್ಪಷ್ಟವಿದೆ — ಅದಕ್ಕೂ ಸ್ಪಷ್ಟ ಇನ್ನೊಂದು ಇರಲಾರದು. ಆದರೆ ಕಾನೂನಿನ ಅಂಗದ ಕೆಲಸ ಇನ್ನೂ ಪೂರ್ತಿ ಆಗಿಲ್ಲ. ಅದೂ ಸ್ವಾಭಾವಿಕವೇ ಅನ್ನು '.

' ಓ ಇಲ್ಲ, ನಿಜವಾಗಿಯೂ ಮುಗಿದಿಲ್ಲ ', ಅವಳು ಅಂದಳು. ಕುಗ್ಗಿದ ವಿಚಾರದಲ್ಲಿ ಇನ್ನೂ ಮುಳುಗಿ ' ಆದರೆ ಅಪ್ಪ ಅಂದಿದ್ದ, ಅದು ಬಹುಶಃ ಮುಗಿದಂತೆ — ಅಂದಿದ್ದಿಲ್ಲವೇ ? ನಿನಗೇನಾದರೂ ಗೊತ್ತೆ, ಈ ಹೊಸ ಕಾಯಿದೆಯ ಬಗೆಗೆ ? ಇದು ಈ ಸಂಗತಿಗಳನ್ನು ಇಷ್ಟು ಸುಲಭಗೊಳಿಸುತ್ತವಂತೆ ಹೌದೆ ? '

' ಇನ್ನೇನೂ ಇಲ್ಲ. ಒಂದು ಸರ್ವಸಾಮಾನ್ಯ ಸಂಗತಿ — ಇಜ್ಜೋಡಿನ ಗಂಡ ಹೆಂಡಿರನ್ನು, ಹಿಂದೆ ಪಾರ್ಲಿಮೆಂಟಿನ ಕಾಯಿದೆ ಇಲ್ಲದೆ ಬೇರೆ ಆಗುವಂತೆ ಅನುಕೂಲ ಮಾಡಿಕೊಡಲು ಆಗುತ್ತಿದ್ದಿಲ್ಲ. ಈಗ ಅದು ಆಗುತ್ತದೆ '.

' ಅದಕ್ಕಾಗಿ ನಾನು ಒಂದು ಕಾಗದದಲ್ಲಿ ಸಹಿ ಮಾಡಬೇಕಾಗುವುದೇ ? ಏನಾದರೂ ಶಪಥ ಮಾಡಬೇಕಾಗುವುದೆ ? ಅಂಥದೇನಾದರೂ ಇದೆಯೇ ? '

' ಅಹುದು, ನಾನು ಹಾಗೆ ನಂಬಿದ್ದೇನೆ '.

' ಈ ಕಾನೂನು ಜಾರಿಯಲ್ಲಿ ಬಂದು ಎಷ್ಟು ಕಾಲವಾಯಿತು ? '

' ಒಂದು ಆರು ತಿಂಗಳು ಅಥವಾ ಒಂದು ವರ್ಷ — ಹಾಗೆ ಆ ಕಾಯಿದೆ ಪಂಡಿತ ಅಂದನೆಂದು ನನ್ನ ಭಾವನೆ '.

ಇವರಿಬ್ಬರು ಮುಗ್ಧ ಜಾನಪದ ಜೀವಿಗಳು. ಸರಕಾರಿ ಕಾನೂನಿನ ಬಗೆಗೆ ಈ ರೀತಿ ಮಾತನಾಡುವುದನ್ನು ಕೇಳಿದರೆ, ಅವರು ತಮ್ಮ ಕಪೋಲಕಲ್ಪಿತ ಜ್ಞಾನದ ಮೇಲೆ ಎಂಥ ಗಂಡಾಂತರದ ಕಟ್ಟಡವನ್ನು ಕಟ್ಟುತ್ತಿರುವರೆಂಬುದನ್ನು ಮನಗಂಡು, ಯಾವುದೇ ಮಾನವೀಯ ಅಂತಃಕರಣದ ವ್ಯಕ್ತಿ ಕಣ್ಣೀರು ಹಾಕಬಹುದಿತ್ತು. ಏನೋ ಅಗಮ್ಯ

ಅಚಿಂತ್ಯ ಶಕ್ತಿಯ ಇದುರಿಗೆ ನಿಂತ ಮಕ್ಕಳಂತೆ ಅವರು ವಿಚಾರ ಮಗ್ನರಾಗಿ ಉಳಿದರು.

'ಜೈಲ್ಸ್', ಆಕೆ ಕೊನೆಗೆ ಅಂದಳು. 'ನನ್ನ ಪರಿಸ್ಥಿತಿ ಎಷ್ಟು ಗಂಭೀರವಿದೆ ಅಥವಾ ಇತ್ತು ಎಂಬುದನ್ನು ಬಗೆಯುವಾಗ ನಾನೂ ಪೂರಾ ದಣಿದು ಹೋಗುತ್ತೇನೆ. ಈಗ ಇಲ್ಲಿಂದ ನಾವು ಹೊರಗೆ ಹೋಗಬೇಡವೇ? — ಏಕೆಂದರೆ ಯಾರಾದರೂ ನಮ್ಮನ್ನು ಕಂಡರೆ ನಾನು ತೀರ ಸ್ವೈರಚಾರಿಣಿಯೆಂದು ಕಾಣಬಹುದು — ಇಷ್ಟು ಹೊತ್ತು ನಾವಿಬ್ಬರೂ ಇಲ್ಲಿ ಕೂಡಿ ಇದ್ದದ್ದು? ನನಗೆ ಪೂರ್ತಿ ಖಚಿತವೆನಿಸುತ್ತದೆ'. ಅವಳು ಅನಿಶ್ಚಯದ ದನಿಯಲ್ಲಿ ಮುಂದರಿದಳು, ನಾನು ನಿನಗೆ ಹೀಗೆ ನನ್ನ ಕೈಯನ್ನು ಹಿಡಿಯಲು ಬಿಡಬಾರದಿತ್ತು, — ಆ ಕಾಗದ ಪತ್ರಗಳೂ, ಇನ್ನೇನೇನೋ, ಇನ್ನೂ ರುಜು ಮಾತು ಹಾಕಿ ಆಗಲಿಲ್ಲವೆಂಬುದನ್ನು ಗಮನಿಸಿದರೆ; ಅಂದರೆ ನಾನು ಎಂದಿನಂತೆ ಅಷ್ಟೇ ವಿವಾಹಿತಳಾಗಿರುವೆನೆಂದಾಯಿತು. ನನ್ನ ತಂದೆ ತನ್ನನ್ನೇ ತಾನು ಮರೆತುಬಿಟ್ಟಿದ್ದಾನೆ. ಅಂದರೆ ನಾನೇನು ನೈತಿಕವಾಗಿ ಇನ್ನಾರಿಗೂ ಬದ್ಧಳಾಗಿರುವೆನೆಂದು ಭಾವಿಸುವುದಿಲ್ಲ, — ನಡೆದ ಸಂಗತಿಗಳನ್ನೆಲ್ಲ ನೋಡಿದ ಮೇಲೆ, — ಯಾವ ಸತ್ಯವಂತ ಹೆಣ್ಣೂ ಭಾವಿಸಲಾರಳು, — ಈಗಂತೂ ಹಲವಾರು ತಿಂಗಳು ಕಳೆದವು. ಆದಾಗ್ಯೂ ನಾನು ರೀತಿ-ನೀತಿಗಳನ್ನು ನನಗೆ ಸಾಧ್ಯವಿದ್ದಷ್ಟು ಮಟ್ಟಿಗೆ ಪಾಲಿಸಬೇಕೆಂದು ನನ್ನ ಅಪೇಕ್ಷೆ'.

'ಹೌದು, ಹೌದು ಆದಾಗ್ಯೂ ನಿನ್ನ ತಂದೆ ನಮಗೆ ಜ್ಞಾಪಿಸುತ್ತಾನೆ, ಬಾಳು ಚಿಕ್ಕದ್ದೆಂದು. ನನಗೂ ಹಾಗೆಯೇ ಅನಿಸುತ್ತದೆ. ಆದ್ದರಿಂದಲೇ ನಾವು ಆರಂಭಿಸಿದ ಈ ವಿಷಯದಲ್ಲಿ ನಿನ್ನನ್ನು ಅರಿತುಕೊಳ್ಳೋಣವೆಂದು ಅಪೇಕ್ಷಿಸಿದೆ. ನಿನ್ನ ತಂದೆಯ ಪತ್ರ ಕೈಸೇರಿದಂದಿನಿಂದ ಆಗಾಗ್ಗೆ, ಡಿಯರ್ ಗ್ರೇಸ, ನಾನು ಅವನು ಅಂದುದಕ್ಕೆ ಚಿಕ್ಕ ಬಾಲಕನಂತೆ ಅಸ್ವಸ್ಥನಾಗಿ ಬಿಡುತ್ತೇನೆ. ಭಯ ಭೀತನಾಗಿಬಿಡುತ್ತೇನೆ. ಕ್ರಮಬದ್ಧವಾಗಿ ಋಜುವಾತು ಎಲ್ಲ ಆಗುವುದಕ್ಕಿಂತ ಮುಂಚೆಯೇ, ನಿನ್ನನ್ನು ಬಿಡುಗಡೆ ಮಾಡುವ ಕಾಗದ ಪತ್ರಗಳಿಗೆ ಸರಕಾರಿ ಮೊಹರು ಬೀಳುವುದಕ್ಕೆ ಮುಂಚೆಯೇ ನಮ್ಮಿಬ್ಬರಲ್ಲಿ ಒಬ್ಬರು ಸತ್ತರೆ, ಈ ಚಿಕ್ಕ, ಅಲ್ಪ ಆದರೂ ವಾಸ್ತವವಾದ ಸಂಧಿಯನ್ನು ಆದಷ್ಟು ಚೆನ್ನಾಗಿ ಉಪಯೋಗಿಸುವುದಕ್ಕೆ ಮುಂಚೆಯೇ ನಾವು ಈ ಲೋಕದಿಂದ ಜಾರಿಹೋದರೆ, ಸಾಯುತ್ತ ಬಿದ್ದಿರುವಾಗ ನಾನು ನನ್ನಷ್ಟಕ್ಕೆ ಅಂದೇನು, ಅವಳಿಗೆ ನನ್ನ ಹೃದಯವನ್ನೆಲ್ಲ ತೋಡಿಕೊಳ್ಳಬಹುದಿತ್ತು; ಅವಕಾಶ ದೊರೆತಾಗ ಅವಳಿಗೊಂದು ಬಡಮುತ್ತನ್ನು ಕೊಡಬಹುದಿತ್ತು, ದೇವರು ಮೆಚ್ಚುವಂತೆ. ಆದರೆ ನಾನು ಹಾಗೆ ಮಾಡಲೇ ಇಲ್ಲ — ಅವಳು ಒಂದಾನೊಂದು ದಿನ ನನ್ನವಳಾಗುವೆನೆಂದು ಮಾತು ಕೊಟ್ಟಾಗ್ಯೂ. ಇನ್ನು ಈಗ ನಾನು ಹಾಗೆ ಮಾಡುವುದು ಶಕ್ಯವೇ ಇಲ್ಲ. ಹೀಗೆಯೇ ನಾನು ಭಾವಿಸಬಹುದು.'

ಅವನ ತುಟಿಗಳಿಂದ ಈ ಶಬ್ದಗಳು ಹೊರಡುವುದನ್ನು ಅವಳು ವ್ಯಾಕುಲ ಆದರದಿಂದ ನೋಡುತ್ತ ಕೇಳಲಾರಂಭಿಸಿದ್ದಳು. ಆ ಶಬ್ದಗಳ ಹೊರಬೀಸುವುದು

ಅವಳಿಗೆ ಸ್ಪಷ್ಟ ಕಾಣಿಸ್ತಿತ್ತೋ ಎಂಬಂತೆ ; ಆದರೆ ಆತ ಮುಂದುವರಿದಂತೆ ಆಕೆ ತನ್ನ ಕಟಾಕ್ಷವನ್ನು ಕೆಳಗೆ ಹೊರಳಿಸಿದಳು.

'ಅಹುದು', ಆಕೆ ಅಂದಳು, 'ನಾನೂ ಹಾಗೆಯೇ ಭಾವಿಸಿದ್ದೆ. ಹಾಗೆ ಭಾವಿಸಿದ್ದರಿಂದಲೆ, ಕ್ರಮ ರೀತಿ ನೀತಿಗಳ ಬಗೆಗೆ ಮಾತಾಡುವಾಗ, ನಿನ್ನೊಂದಿಗೆ ತಣ್ಣಗೆ ನಿರ್ಭಾವವಾಗಿ ಪುನಸ್ಸು ಹತ್ತಿಕ್ಕಿಕೊಂಡು ಇರಬೇಕೆಂದೇನೂ ನನ್ನ ಉದ್ದೇಶವಿದ್ದಿಲ್ಲ. ನೀನು ಎಂದಿನಿಂದಲೂ ನನ್ನನ್ನು ಪ್ರೀತಿಸುತ್ತ ಬಂದವನು. ಹಿಂದೊಮ್ಮೆ ಆ ತಿಳಿಗೇಡಿ ತನದ ಕಾಲದಲ್ಲಿ, ಮಾಡಿದಂತೆ ನಿನ್ನ ಹೃದಯವನ್ನು ನೋಯಿಸಬೇಕೆಂದೂ ನನ್ನ ಉದ್ದೇಶವಿದ್ದಿಲ್ಲ. ಓ ಹಾಗೆ ಅಲ್ಲವೆ ಇಲ್ಲ ; ನಿಜವಾಗಿಯೂ ಅಲ್ಲ. ಆದರೆ, ನಾನು ನಿನಗೆ ಹಾಗೆ ಮಾಡಗೊಟ್ಟರೆ, ಓ ಅದು ತೀರ ಬೇಗ, ಖಂಡಿತ ಬೇಗವಾಗುವುದು' ಅವಳ ಕಣ್ಣು ಗೊಂದಲಗೊಂಡ, ಭಯಚಕಿತ ಭಾವನೆಯ ಕಂಬನಿಗಳಿಂದ ತುಂಬಿಬಂದವು.

ಅವಳ ವಿವೇಕದ ನಿರ್ಣಯಕ್ಕೆ ವಿರುದ್ಧವಾಗಿ ಅವಳ ಮೇಲೆ ಪ್ರಭಾವ ಬೀರುವುದಕ್ಕೆ ವಿಂಟರಬೋರ್ನ ಸಿದ್ಧವಿದ್ದಿಲ್ಲ. ಆತ ತೀರ ಪ್ರಾಮಾಣಿಕನಾಗಿದ್ದನು. 'ಹೌದು. ನನಗೂ ಹಾಗೆಯೇ ಅನಿಸುತ್ತದೆ'. ಆತ ಅನುತಾಪಪಟ್ಟು ಅಂದನು 'ಎಲ್ಲವೂ ಇತ್ಯರ್ಥವಾಗುವತನಕವೂ ನಾನು ತಡೆಯುವೆನು — ಕಾಯುವೆನು. ನಿನ್ನ ತಂದೆ ನಿನಗೆ ಬರೆದ ಪತ್ರಗಳಲ್ಲಿ ಏನು ಹೇಳಿದ್ದಾರೆ,...'

ಅವನ ಇಂಗಿತ ಮೆಲಬರಿ ಮಾಡಿದ ಅರ್ಜಿಯ ಕುರಿತ ಪ್ರಗತಿಯ ಬಗೆಗೆ ಇತ್ತು. ಆದರೆ ಆಕೆ ತಪ್ಪು ಭಾವಿಸಿ ಅವರಲ್ಲಿಯ ವೈಯಕ್ತಿಕ ಭಾಗದ ಬಗೆಗೆ ಮನಬಿಚ್ಚಿ ಆಡಿದಳು. 'ಅವನು ಅನ್ನುವದು — ನಾನು ಈಗ ಸೂಚಿಸಿದ್ದೇ. ನಾನು ಅದೆಲ್ಲ ತೀರ ಬಾಯ್ಬಿಟ್ಟು ಹೇಳಬೇಕೆ ?'.

'ಛೆ, ಬೇಡ — ಅದು ಗೋಪ್ಯವಾಗಿದ್ದರೆ'.

'ಗೋಪ್ಯವೇನೂ ಇಲ್ಲ. ಅದರ ಪ್ರತಿಯೊಂದು ಶಬ್ದವನ್ನೂ ನಿನಗೆ ನೇರವಾಗಿ ನಾನು ಹೇಳುತ್ತೇನೆ, ಜೈಲ್ಸ್, ನೀನು ಇಷ್ಟಪಟ್ಟರೆ. ನಿನಗೆ ಉತ್ತೇಜನ ಕೊಡಬೇಕು, ಎನ್ನುತ್ತಾನೆ ನನ್ನ ಅಪ್ಪ, ಅಹೊ. ಆದರೆ ಇಂದು ಇದಕ್ಕೂ ಮುಂದೆ ಅವನ ಆಜ್ಞೆ ಪಾಲಿಸಲಾರೆ. ಬಾ ಈಗ ಹೋಗೋಣ' ಅವಳು ಮೆಲ್ಲನೆ ತನ್ನ ಕೈಯನ್ನು ಅವನ ಕೈಯಿಂದ ಜಾರಿಸಿ ಬೇರೆ ಆದಳು ಮತ್ತು ಅವನಿಗೂ ಮುಂದೆ ಹೋಗಿ ಚರ್ಚಿನಿಂದ ಹೊರಗೆ ಬಿದ್ದಳು.

'ಊಟಗೀಟವೇನಾದರೂ ಮಾಡೋಣವೆಂದು ವಿಚಾರಮಾಡುತ್ತಿದ್ದೆ' — ವಿಂಟರಬೋರ್ನ ಅಂದನು. ಇಬ್ಬರೂ ಮುಂದೆ ನಡೆಯುವಾಗ ನೀರಸ ವ್ಯವಹಾರದ ವಿಷಯಕ್ಕೆ ಹೊರಳಿ, 'ನಿನಗೂ ಏನಾದರೂ ಬೇಕು ; ನಿನ್ನನ್ನು ನಾನು ಬಲ್ಲ ಒಂದು ಸ್ಥಳಕ್ಕೆ ಒಯ್ಯುತ್ತೇನೆ. ಹೂಂ ಅನ್ನು' ಗ್ರೇಸಳಿಗೆ ತಂದೆಯ ಮನೆಯ ಹೊರಗೆ ಒಬ್ಬರೂ ಗೆಳೆಯರೆಂಬುವವರು ಇದ್ದಿಲ್ಲ. ಫಿಟ್ಜಪಿಯರ್ಸನೊಂದಿಗೆ ಅವಳ ಬದುಕು ಅವಳಿಗೆ ಸಮಾಜದ ಸಮಾಗಮವೇನೂ ತಂದಿದ್ದಿಲ್ಲ. ಕೆಲಸಲ ಅವಳು ಹಿಂದೆ ತಿಳಿದುಂದ

ಕ್ಕಿಂತ ಹೆಚ್ಚಿನ ಆಳವಾದ ಏಕಾಂತವನ್ನೆ ತಂದಿತ್ತು. ಆದ್ದರಿಂದ ಒಬ್ಬರ ವಿಚಾರಪೂರ್ವಕ ಶುಶ್ರೂಷೆಗೆ ತಾನು ವಸ್ತುವಾದೆನೆಂಬುದೆ ಅವಳಿಗೆ ಒಂದು ವಿಶೇಷ ರುಚಿ, ಔತಣ. ಆದರೆ ಅವಳು ತನ್ನನ್ನೆ ಕೇಳಿಕೊಂಡಳು. ಹೀಗೆ ಬಹಿರಂಗವಾಗಿ ಏಕಾಕಿಯಾಗಿ ಜೈಲ್ಸ ವಿಂಟರಬೋರ್ನನ ಜತೆಗೆ ಊಟಕ್ಕೆ ಹೋಗುವದು ಅವನ ದೂರದರ್ಶಿತನಕ್ಕಿಂತ ಅಸಂಸ್ಕೃತ ಮುಗ್ಧತನದ ಮೂಲಕ ಬಂದ ಪ್ರಸ್ತಾಪವಲ್ಲವೆ? ಅವಳು ಮೃದುವಾಗಿಯೇ ಅಂದಳು ; ಆತ ಊಟವನ್ನು ಸಿದ್ಧಮಾಡಿಡಲು ಒಂದು ಸ್ಥಳದಲ್ಲಿ ಅಪ್ಪಣೆ ಕೊಡಲಿ. ಆವರೆಗೆ ತಾನು ಚರ್ಚಿನ ಮುಖಮಂಟಪದಲ್ಲಿಯೇ ಉಳಿಯುತ್ತೇನೆ. ಜೈಲ್ಸನಿಗೆ ಅವಳ ಗುಪ್ತತರ್ಕವು ಹೊಳೆಯಿತು. ಅವಳ ಮುಂದೆ ತಾನು ಉಪಚಾರ ಮರ್ಯಾದೆಗಳ ಕುರಿತು ಆದೆಷ್ಟು ಕುರುಡನಿದ್ದೇನೆ ಎಂದು ಆಲೋಚಿಸಿದನು ಮತ್ತು ಅವಳು ಇಚ್ಛಿಸಿದಂತೆ ಮಾಡಲು ಹೋದನು.

ಹತ್ತು ಮಿನಿಟೂ ಆತ ಅಲ್ಲಿಂದ ಹೋಗಿರಲಿಕ್ಕಿಲ್ಲ. ತಿರುಗಿಬಂದು ಗ್ರೇಸಳನ್ನು ತಾನು ಬಿಟ್ಟಲ್ಲಿಯೇ ಅವನು ಕಂಡನು.

'ನೀನು ಅಲ್ಲಿಗೆ ಮುಟ್ಟುವಷ್ಟರಲ್ಲಿ ಊಟ ಸಿದ್ಧವಾಗುವುದು', ಅವನೆಂದನು. ಆ ಊಟಕ್ಕೆ ಹೇಳಿದ ಖಾನಾವಳಿಯ ಹೆಸರನ್ನೂ ಅವಳಿಗೆ ತಿಳಿಸಿದನು. ಆ ಹೆಸರು ಅವಳು ಹಿಂದೆಂದೂ ಕೇಳಿದಿಲ್ಲ.

'ನಾನು ವಿಚಾರಿಸಿ ಕೇಳಿ ಕಂಡುಹಿಡಿಯುತ್ತೇನೆ', ಗ್ರೇಸಳು ಹೊರಡುತ್ತ ಹೇಳಿದಳು.

'ಹಾಗಾದರೆ ನಾನು ಮತ್ತೊಮ್ಮೆ ನಿನ್ನನ್ನು ಕಾಣಲೇ?'

'ಓ. ಸರಿ. ಅಲ್ಲಿಯೇ ನನ್ನ ಬಳಿಗೆ ಬಂದು ಬಿಡು. ಅದು ಕೂಡಿಯೇ ಜತೆಗೆ ಹೋಗುವಂತೆ ಆಗಲಿಕ್ಕಿಲ್ಲ. ನನ್ನ ಅಪ್ಪನ ಆಳು ಮತ್ತು ಅವನ ಗಿಗ್‌ಗಾಡಿ ನನಗಾಗಿ ನೀನು ಹುಡುಕಿತರಬೇಕು'.

ಅವನು ಒಂದು ಹತ್ತು ಮಿನಿಟು ಅಥವಾ ಕಾಲುಗಂಟೆ ಕಾದನು, — ಅವಳ ಊಟ ಮುಗಿದಿರಬಹುದೆಂಬುವಷ್ಟು ವೇಳೆ ಆಮೇಲೆ, ಅವಳ ಆಮಂತ್ರಣದ ಲಾಭ ಪಡೆದು ಅವಳನ್ನು ಅವಳ ಮನೆಯ ಕಡೆಗೆ ಹೊರಡಿಸಲು ಹೊರಟನು. ಮೊದಲು ನೇರವಾಗಿ ಅವಳನ್ನು ಕಳುಹಿಸಿಟ್ಟ ಆ ಖಾನಾವಳಿಗೆ ಹೋದನು. ಅದು ಅತ್ಯಂತ ಚೊಕ್ಕಟ ವಾಗಿತ್ತು. ಆದರೂ ಸಾದಾ ಮತ್ತು ಕಡಮೆ ವೆಚ್ಚದಾಗಿತ್ತು. ಹಾದಿಯಲ್ಲಿ ಅವನಿಗೆ ಒಂದು ಸಂದೇಹ — ಆ ಖಾನಾವಳಿ ಅವಳಿಗೆ ತಕ್ಕಷ್ಟು ಅಚ್ಚುಕಟ್ಟಾಗಿದೆಯೇ ಎಂದು. ಅಲ್ಲಿ ಪ್ರವೇಶಿಸಿದ ಕೂಡಲೆ, ಅವಳು ಅಲ್ಲಿ ಕೂತದ್ದನ್ನು ಕಂಡೊಡನೆಯೆ ಅವನಿಗೆ ಅನಿಸಿತು — ತಾನು ದೊಡ್ಡ ತಪ್ಪು ಮಾಡಿದೆನು. ಆ ಖಾನಾವಳಿಯಲ್ಲಿ ಇದ್ದ ಒಂದೇ ಒಂದು ಊಟದ ಮನೆಯಲ್ಲಿ ಗ್ರೇಸಳನ್ನು ಕೂಡ್ರಿಸಲಾಗಿತ್ತು. ಆ ಊಟದ ಮನೆ ಸಂತೆಯ ದಿನಗಳಲ್ಲಿ ಮಂದಿಯ ಕೂಟದ ಮನೆಯೂ ಆಗಿತ್ತು. ಸರ್ವಸಾಮಾನ್ಯ ನಡುಮನೆಯಾಗಿತ್ತು. ಉದ್ದನ್ನ ತಗ್ಗುಛತ್ತಿನ ಕೋಣೆ ನೆಲಕ್ಕೆ ಉಸುಕುಹಾಸಿದ್ದು,

ಕೇಪು ಪರದೆ ಮುಚ್ಚಿದ ಎರಡು ಅಗಲವಾದ ಕಿಟಕಿಗಳು, ಒಂದು ಬೀದಿಯ ಮೇಲೆ ಇನ್ನೊಂದು ತೋಟದ ಕಡೆ, ತೆರೆದಂಥವು. ಗ್ರೇಸಳು ಆ ಕೋಣೆಯ ಆಚೆಯ ತುದಿಯನ್ನು ಆಶ್ರಯಿಸಿದ್ದಳು, ತೋಟದ ಕಡೆಯ ಕಿಟಕಿಯ ಹತ್ತಿರ, ಕೋಣೆಯ ಮುಂಭಾಗವು ಸಂಮಿಶ್ರ ಮಂಡಳಿಯಿಂದ ತುಂಬಿತ್ತು. ಹಾಲು ಹೈನಿನ ಜನ, ಕಟುಕರು, ಯಾರಾರೋ ಬಂದು ಸೇರಿದ್ದರು — ಆದರೆ, ಅವನಿಗೆ ಅನ್ಯಾಯವಾಗದಂತೆ ಹೇಳುವದಾದರೆ, ಅವನು ಅಲ್ಲಿ ಬಂದು ಹೋದನಂತರ.

ಅವಳು ಭಾರಿ ಖಿನ್ನ ವೃತ್ತಿಯಲ್ಲಿ ಇದ್ದಳು. ಅಲ್ಲಿಗೆ ಬಂದು ಖಾನಾವಳಿಯೂ ಎಂಥದೆಂದು ಕಂಡಾಗ ಅವಳು ತಬ್ಬಿಬ್ಬಾದಳು. ಆದರೆ ಆಗಲೆ ಸಾಕಷ್ಟು ಮುಂದುವರಿದಾಗಿತ್ತು. ಅವಳು ಒಳ್ಳೆ ವೀರಾವೇಶದಿಂದ ಪ್ರವೇಶಿಸಿ ಚೊಕ್ಕ ಉದ್ದಿಟ್ಟ ಬೆನ್ನುಳ್ಳ ಬೆಂಚಿನ ಮೇಲೆ ಕೂತಳು. ಇದುರಿಗೆ ಒಂದು ಕಿರಿಯಗಲದ ಮೇಜು. ಅದರ ಮೇಲೆ ಚಾಕು, ಉಕ್ಕಿನ ಮುಳ್ಳುಗಳು, ಕಾಳುಮೆಣಸಿನ ಪುಡಿಯ ತವರಿನ ಡಬ್ಬಗಳು, ನೀಲಿ ಬಣ್ಣದ ಉಪ್ಪಿನ ಭರಣಿಗಳು, ಮತ್ತು ಗೋಡೆ ತುಂಬ ಎತ್ತು ಹೋರಿಗಳ ಮಾರಾಟದ ಜಾಹಿರಾತಿನ ಹಾಳೆಗಳು, ಹಿಂದೊಮ್ಮೆ ಹೀಗೆ ಸಾರ್ವಜನಿಕ ಸ್ಥಳದಲ್ಲಿ ಆಕೆ ಊಟ ತೆಗೆದುಕೊಂಡದ್ದು, ಫಿಟ್ಝಪಿಯರ್ಸನೊಂದಿಗೆ. ಇದೇ ಪಟ್ಟಣದ ಅರ್ಲ ಆಫ್ ಎಸೆಕ್ಸ್ ಎಂಬ ಮರ್ಯಾದಸ್ಥ ಹೊಟೇಲಿನಲ್ಲಿ, ಯೂರೋಪದಲ್ಲಿಯ ಪ್ರಚಂಡ ಹೊಟೇಲುಗಳಲ್ಲಿ, ಅಲ್ಲಲ್ಲಿ ಸಂಚರಿಸಿ ತಂಗಿಬಂದನಂತರ.

ಆದರೆ ಸದ್ಯದ ಪರಿಸ್ಥಿತಿಯಲ್ಲಿ ಜೈಲ್ಸನು ಒದಗಿಸಿದ ಈ ಸೌಕರ್ಯವಲ್ಲದೆ ಬೇರೆ ಯಾವ ವ್ಯವಸ್ಥೆಯನ್ನು ಅವಳು ಅಪೇಕ್ಷಿಸಬಹುದಿತ್ತು? ಆದಾಗ್ಯೂ ಈ ಸ್ಥಿತ್ಯಂತರಕ್ಕೆ ಅವಳು ಏನೂ ಸಿದ್ಧಳಿದ್ದಿಲ್ಲ ಫಿಟ್ಝಪಿಯರ್ಸನಿಂದ ಅವಳು ಅರಗಿಸಿಕೊಂಡ ಅಭಿರುಚಿಗಳು ತೀರ ಸೂಕ್ಷ್ಮ ರೀತಿಯವು. ಅವುಗಳಿಗೆ ವಿರುದ್ಧವಾದ ಈ ಸನ್ನಿವೇಶ ಇದಿರಾದಾಗಲೆ ಅವಳಿಗೆ ಗೊತ್ತಾಯಿತು ; ಅಂಥ ಪರಿಷ್ಕೃತ ಅಭಿರುಚಿಗಳು ತನ್ನಲ್ಲಿ ಇರುವವೆಂಬುದು. ಇದೇ ಕ್ಷಣಕ್ಕೆ ಮೇಲೆ ಹೇಳಿದ ಆ ವಿಲಾಸಮಯ ಹಾಟೇಲಿನಲ್ಲಿ ಸೊಗಸುಗಾರ ಫಿಟ್ಝಪಿಯರ್ಸನು ದೊಡ್ಡ ಬಿಲ್ಲನ್ನು ತೆರುವುದು ಹಾಗೆಯೇ ಉಳಿದಿತ್ತು — ಅವಳನ್ನು ಶರ್ಟನ್ನಿಗೆ ಬಂದಾಗೆಲ್ಲ ಅಲ್ಲಿ ಇಟ್ಟಿದ್ದಕ್ಕಾಗಿ. ಆದರೆ ಸಾಮಾಜಿಕ ಭಾವನೆಗಳೇ ಹಾಗೆ. — ಸಾಲದ ಶೂಲಕ್ಕೇರಿಸಿದ ಅಲ್ಲಿಯ ಸುಖ ಸೌಕರ್ಯಗಳಲ್ಲಿಯೂ ಅವಳು ಒಳ್ಳೆಯ ಸೊಗಸನ್ನು ಕಂಡಿದ್ದಳು. ಆದೇ ಈಗ, ವಿಂಟರಬೋರ್ನ ಪ್ರಾಮಾಣಿಕವಾಗಿ ಆಗಿಂದಾಗಲೆ ಹಣ ತೆತ್ತು ಒದಗಿಸಿದ ಈ ಸನ್ನಿವೇಶದಲ್ಲಿ ಅವಳಿಗೆ ಮಾನ ಭಂಗವಾದಂತೆ ಅನಿಸಿತು.

ಅವಳು ತನ್ನ ಸ್ಥಿತಿಯಿಂದ ಕುಗ್ಗಿಹೋದುದನ್ನು ಆತ ಕಂಡನು. ಮತ್ತು ಅವನ ಎಲ್ಲ ಸಂತೋಷ ಹೋಗಿಬಿಟ್ಟಿತು. ಬಹಳ ಹಿಂದೆ ಅವನ ಮನೆಯ ಕ್ರಿಸ್‌ಮಸ್ ಹಬ್ಬದ ಔತಣವನ್ನು ಕೆಡಿಸಿದ ಅದೇ ತೀವ್ರ ಸೂಕ್ಷ್ಮ ಸಂವೇದನೆ ಈಗ ಮತ್ತೊಮ್ಮೆ ಕೆಲಸ ಮಾಡಿತ್ತು.

ಆದರೆ ಈ ಮರುಕಳಿಸಿದ ಪರಿಣಾಮ ಗ್ರೇಸಳು ಪಳಗಿಸಿಕೊಳ್ಳುತ್ತಿದ್ದ ಉಮೇದುವಾರಿಕೆಯ ಸಹಜ ಫಲವಾಗಿತ್ತು. ಇಂಥ ಫಲವನ್ನು ಅನುಭವಿಸಿಯೂ ಆಕೆ ಹೊಸ ಅನುಭವಕ್ಕೆ ಒಗ್ಗಿಕೊಳ್ಳಬೇಕೆಂದು, ಈ ಬದುಕನ್ನು ಕಲಿತುಕೊಳ್ಳಬೇಕೆಂದು ನಿರ್ಧಾರ ಮಾಡಿದ್ದಳು. ತಮ್ಮ ಬಾಳಿನ ಹೊಸ ಪುಟವನ್ನು ತಿರುವಿದಾಗ ಇದುರಿಸ ಬೇಕಾದ ಆಕಸ್ಮಿಕ ಆಶ್ಚರ್ಯಗಳಲ್ಲಿ ಇದೂ ಒಂದಾಗಿತ್ತು. ಅವಳು ಊಟವನ್ನು ಮುಗಿಸಿದ್ದಳು. ಆ ಊಟವಾದರೂ ಒಂದು ಕಚ್ಚಿಬಿಟ್ಟ ಕ್ರಿಯೆಯಾಗಿತ್ತೆಂದು ಆತ ಕಂಡುಕೊಂಡನು. ಆದಷ್ಟು ಬೇಗ ಅವಳನ್ನು ಆ ಮನೆಯಿಂದ ಆವನು ಹೊರಗೆ ತಂದನು.

ಈಗ ಆತ ಖಿನ್ನದೃಷ್ಟಿಯಿಂದ ಅಂದನು 'ನೀನು ಏನೂ ಚೆನ್ನಾಗಿ ಮುಗಿಸಿಲ್ಲ. ನನಗೆ ಗೊತ್ತು. ಬಾ ಅರ್ಲಅಫ ಎಸೆಕ್ಸಿಗೆ ಹೋಗೋಣ. ಅಲ್ಲಿ ನಾನು ಚಹ ತರಿಸುತ್ತೇನೆ. ನನಗೆ ಸಲ್ಲಬಹುದಾದದ್ದು ನಿನಗೆ ಸಲ್ಲಲಾರದೆಂದು ನನಗೆ ನೆನಪಾಗಲಿಲ್ಲ.'

ನಡೆದದ್ದು ಕಂಡಾಗ ಆವಳ ಮೋರೆ ಇನ್ನು ಆಳವಾದ ಉದ್ವಿಗ್ನತೆಯಲ್ಲಿ ಬಾಡಿತು. 'ಓ ಬೇಡ, ಜೈಲ್ಸ ಬೇಡ,' ಅವಳು ಅತ್ಯಂತ ಕಳಕಳಿಯಿಂದ ಅಂದಳು. 'ನಿಜವಾಗಿಯೂ ಬೇಡ. ನೀನು ಹಾಗೇಕೆ ಎನ್ನುವಿ? ನಿನಗೆ ಗೊತ್ತು ಇದಕ್ಕೂ ಚೆನ್ನಾಗಿ, ನೀನು ಯಾವಾಗಲೂ ನನ್ನನ್ನು ತಪ್ಪಾಗಿಯೇ ತಿಳಿದುಕೊಳ್ಳುವಿ.'

'ಅಲ್ಲ ನಿಜವಾಗಿಯೂ ಹಾಗಲ್ಲ, ಮಿಸೆಸ್ ಫಿಟ್ಝಪಿಯರ್ಸ, ಖಾನಾವಳಿಯಲ್ಲಿ ನಿನಗೆ ಸ್ಥಾನ ತಪ್ಪಿದಂತೆ ಆದದ್ದು ಅಲ್ಲಗಳೆಯುವಿಯಾ?'

'ಆದರೂ ಅದೇ ಖಾನಾವಳಿಯಲ್ಲಿ ನಾನು ಕಳೆದ ಇಪ್ಪತ್ತು ವರ್ಷ ಹಾಯಾಗಿ ಉಂಡಿದ್ದೇನೆ ತಿಂದಿದ್ದೇನೆ, ಅದು ನನಗೆ ಮನೆಯಂತೆ ಅನಿಸಿದೆ'. 'ನಿನ್ನ ಗಂಡ ನಿನ್ನನ್ನು ಯಾವಾಗಲೂ ಅರ್ಲಆಫ್ ವೆಸೆಕ್ಸ್ ಹೋಟೆಲಿಗೇ ಒಯ್ಯುತ್ತಿದ್ದನಲ್ವೆ?'

'ಅಹುದು' ಅವಳು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಂಡಳು. ಆ ಸಂತೆ ಪೇಟೆಯ ಊರಿನ ನಡುಬೀದಿಯಲ್ಲಿ ಅವಳು ತನ್ನ ಮೇಲ್ನೋಟದ ಮೇಲ್ಮೈಯ ಕ್ಷಣಿಕ ರುಚಿಗೆ ನೋವಾಯಿತೇ ಹೊರತು, ತನ್ನ ಸ್ವಭಾವಕ್ಕಾಗಲಿ ಸ್ನೇಹ-ಮಮತೆಗಳಿಗಾಗಲಿ ಅಲ್ಲ ಎಂದು ವಿವರಿಸಲು ಹೇಗೆ ಸಾಧ್ಯ?

ಸುದೈವಕ್ಕೋ ದುರ್ದೈವಕ್ಕೋ ಅದೇ ಕ್ಷಣಕ್ಕೆ ಅವರು ಮೆಲಬರಿಯ ಆಳನ್ನು ಕಂಡರು. ಅವಳನ್ನೆ ಹುಡುಕುತ್ತ ಆತ ಶೂನ್ಯ ದೃಷ್ಟಿಯಿಂದ ಗಾಡಿ ಹೊಡೆದುಕೊಂಡು ಬರುತ್ತಿದ್ದ. ಅವಳನ್ನು ತಿರುಗಿ ಗಾಡಿಯಲ್ಲಿ ಎತ್ತಿಕೊಳ್ಳಲಿಕ್ಕೆ ಬಿಟ್ಟ ಒಂದು ತಾಸಿನ ಅವಧಿ ಕಳೆದು ಹೋಗಿತ್ತು ವಿಂಟರಬೋರ್ನ ಅವನನ್ನು ಕೂಗಿದನು. ಆಗ ತನ್ನ ವ್ಯಾಖ್ಯಾನವನ್ನು ಮುಂದರಿಸಲು ಗ್ರೇಸಳಿಗೆ ಶಕ್ಯವಾಗಲಿಲ್ಲ. ಅವಳು ಖಿನ್ನಳಾಗಿ ಗಾಡಿಯನ್ನು ಹೊಕ್ಕಳು; ಮತ್ತು ಕುದುರೆಯು ಪುಟಗಾಲು ಹಾಕಿ ಹೊರಟು ಹೋಯಿತು.

೩೯

ಆ ಸುಖಮಯವಾದ ಸಮಯದ ಅಸಮಾಧಾನಕರವಾದ ಕೊನೆಯ ಬಗೆಗೆ ವಿಂಟರ ಬೋರ್ನ ರಾತ್ರಿಯಿಡೀ ಚಿಂತಿಸಿದನು. ಆ ಚಿಂತನೆಯಲ್ಲಿ ಆ ಸುಖಸಮಯವನ್ನು ಮರೆತನು. ಅವನಿಗೆ ಮತ್ತೆ ಹೊಸ ಹೆದರಿಕೆ ಹುಟ್ಟಿತು — ಅವನನ್ನು ವರಿಸಲು ಅವಳು ಸ್ವತಂತ್ರಳಾದ ಮೇಲೂ ಅವರಿಬ್ಬರೂ ಒಟ್ಟಿಗೆ ಎಂದೂ ಸುಖಿಯಾಗಲಾರರು. ಅವಳು ಸುಸಂಸ್ಕೃತಳು ; ಅವನು ಅಪರಿಷ್ಕೃತನು. ಇದೇ ಮೂಲದ ತೊಡಕಾಗಿತ್ತು. ಅದನ್ನು ಅಲಕ್ಷಿಸುವಂತೆ ಇದ್ದಿಲ್ಲ. ಆತ ಅಷ್ಟು ವಿಚಾರಶೀಲನಾಗಿದ್ದನು. ಅವನ ಸ್ಥಾನದಲ್ಲಿ ಬೇರೆಯಾರೂ ಇದ್ದರೆ ಹಾಗೆ ಮಾಡಬಹುದಿತ್ತು.

ತಾನಾಗಿ ಎಲ್ಲಿಯೂ ದುಡುಕದ ಇತರರಿಂದ ಯಾವುದೆ ಅನುಗ್ರಹ ಉದಾರಾಶ್ರಯಗಳನ್ನು ಸ್ವಲ್ಪವೂ ಬಯಸದ ವಿನಯಶೀಲ ಮೌನ ಜೀವಿಗಳಲ್ಲಿ ಅವನೊಬ್ಬನಾಗಿದ್ದನು. ಮತ್ತು ಆ ಮೂಲಕವೆ ಇತರರ ನಡತೆಯನ್ನು ಆತ ನಿಕಟವಾಗಿ ನಿರೀಕ್ಷಿಸಿ ವಿಮರ್ಶಿಸುತ್ತಿದ್ದನು. ಅವನೇನು ಸವ್ಯಸಾಚಿಯಲ್ಲ — ಬಹು ಮುಖವೃತ್ತಿಯವನಲ್ಲ. ಅವನಲ್ಲಿ ಒಂದು ಆಸೆ ಅಥವಾ ನಂಬಿಕೆ ಹುಟ್ಟಿ ಎದ್ದು ಶಿಖರಕ್ಕೆ ಏರಿ ಇಳಿದು ಆಳಿದ ಮೇಲೆ ಮತ್ತೆ ಅದು ಮುನ್ನಿನಂತೆ ತಲೆ ಎತ್ತುವುದೇ ಕಡಿಮೆ; ಇತರ ಸ್ವಸ್ಥಚಿತ್ತರ ಎದೆಯಲ್ಲಿಯ ಹಾಗಲ್ಲ. ಹಿಂದೊಮ್ಮೆ ಅವನು ಅವಳನ್ನು ಆರಾಧಿಸಿದ್ದನು, ತನ್ನ ಬಾಳನ್ನೇ ಅವಳಿಗೆ ಅನುಕೂಲವಾಗುವಂತೆ ಮುಂಡಿಸಿಟ್ಟಿದ್ದನು. ಅವಳ ಪ್ರೇಮವನ್ನು ಯಾಚಿಸಿದ್ದನು. ಅವಳನ್ನು ಕಳೆದು ಕೊಂಡಿದ್ದನು.

ಈಗ ಅದೇ ಹಳೆಯ ಉತ್ಸಾಹದಿಂದ ಆದಾಗ್ಯೂ, ಅದೇ ಹಳೆಯ ಆಸೆ ಇಲ್ಲದೆ ಆತ ಅದೇ ಹಳೆಯ ಕಾಲುದಾರಿಯಲ್ಲಿ ಹೆಜ್ಜೆ ಹಾಕಲು ಹೊರಟಿದ್ದನು. ಮತ್ತು ಆ ದಿನ ಅವಳಿಂದ ತನ್ನನ್ನು ಅಷ್ಟೊಂದು ಮೋಹಿತನಾಗಲು ಇಂಬುಗೊಟ್ಟಿದ್ದನು.

ಆದರೆ ಅವಳ ಕಡೆಗೆ ಇನ್ನೊಂದು ಹೆಜ್ಜೆ ಹಾಕಲು ಆತ ಒಲ್ಲ. ಅಲ್ಲ ಅವಳನ್ನು ದೂರ ನೂಕಲೂ ಸಿದ್ಧ — ತನ್ನ ಅಂತಃಸಾಕ್ಷಿಗೆ ಕಪ್ಪಕಾಣಿಕೆ ಕೊಡಲಿಕ್ಕೆ. ಅವಳಿಗೆ ತನ್ನ ಸುಖಕ್ಕಾಗಿ ಒಂದು ಅಧಃಪತನದ ಕುಳಿಯನ್ನು ಅಣಿಗೊಳಿಸಲು ಬಿಡುವದು ಕೇವಲ ಪಾಪವಾಗಬಹುದು. ತನ್ನೊಂದಿಗೆ ಮದುವೆ ಮಾಡಿಕೊಳ್ಳುವಂತೆ ಅವಳನ್ನು ನೋಡಿಕೊಳ್ಳುತ್ತ ಅವಳ ಬಡ ತಂದೆಯು ಈಗ ಇದೆಲ್ಲ ಸೂಕ್ಷ್ಮಗಳಿಗೆ ಕುರುಡ ನಾಗಿದ್ದನು — ಹಿಂದೆ ಇವನ್ನೆ ಆತ ನಡುಹಗಲ ಬೆಳಕಾಗಿ ಎಣಿಸಿದ್ದನು. ಆ ಸೂಕ್ಷ್ಮಗಳನ್ನು ತಾನು ಸಾರುವುದು — ಅವಳ ಮುದ್ದು ಹಿತದ ಸಲುವಾಗಿ ಸಾರುವದು ಅವನದೇ ಕರ್ತವ್ಯವಾಗಿತ್ತು.

ಗ್ರೇಸಳಿಗೂ ಬಹಳ ಅಸ್ವಸ್ಥವಾಗಿ ರಾತ್ರಿ ಕಳೆಯಿತು. ಮತ್ತು ಅವಳ ಹಾರೈಕೆಯು ಈ ಅಸ್ವಸ್ಥತೆ ಮರುದಿನ ಮುಂಜಾನೆ ಅವಳ ತಂದೆಯ ಇನ್ನೊಂದು

ಪತ್ರವನ್ನು ಅವಳ ಕೈಯಲ್ಲಿ ಹಾಕಿದಾಗಲೂ ಕಡಮೆಯಾಗಲಿಲ್ಲ. ಅದರ ಧಾಟಿ, ಧ್ವನಿ ಹಿಂದಿನ ಪತ್ರಕ್ಕಿಂತ ತೀವ್ರ ಒತ್ತರದ್ದಾಗಿತ್ತು.

ಅವಳು ಚೆನ್ನಾಗಿದ್ದಾಳೆ ಹಿಂದಿಗಿಂತ ಸುಧಾರಿಸಿಕೊಳ್ಳುತ್ತಿದ್ದಾಳೆ. ಮನೆ ಹೊರಗೆ ಅಡ್ಡಾಡಲು ಶಕ್ತಳಾಗಿದ್ದಾಳೆ ಎಂಬುದನ್ನು ಕೇಳಿ ತನಗೆ ಎಷ್ಟು ಸಂತೋಷ ವಾಗಿದೆಯೆಂದು ಹೇಳಿ ಆತ ಮುಂದುವರಿದಿದ್ದನು :

'ಇದೊಂದು ದಣಿವಿನ, ಬೇಸರ ತರಿಸುವಂಥ ವ್ಯವಹಾರ. ನಾವು ಭೆಟ್ಟಿ ಯಾಗಲು ಬಂದ ಸಾಲಿಸಿಟರ ಊರಲ್ಲಿ ಇಲ್ಲ. ನಾನು ಮನೆಗೆ ಯಾವಾಗ ಮರಳುವೆನೋ ನನಗೇ ಗೊತ್ತಿಲ್ಲ. ಈ ವಿಲಂಬದಲ್ಲಿಯೂ ನನ್ನ ಅತಿ ದೊಡ್ಡ ಚಿಂತೆ, ನೀನೆಲ್ಲಿ ಜೈಲ್ಸ ವಿಂಟರಬೋರ್ನನ್ನು ಕಳೆದುಕೊಳ್ಳುವಿಯೋ ಎಂದು. ನಮ್ಮ ನಮ್ಮ ವ್ಯವಹಾರ ಇಲ್ಲಿ ಕುಲುಮೆಯಲ್ಲಿ ಕಾಯುತ್ತ ಬಿದ್ದಿರುವಾಗ ಅಲ್ಲಿ ಆತ ನಿನ್ನಿಂದ ದೂರನಾಗಬಹುದೇ, ಅಥವಾ ನಾಚುಬುರುಕತನದಲ್ಲಿ ನೆರೆಹೊರೆಯನ್ನು ಬಿಟ್ಟು ದೂರ ಹೋಗಬಹುದೋ ಎಂದು ಚಿಂತಿಸುವುದರಲ್ಲಿ ನನಗೆ ರಾತ್ರಿಗೆ ವಿಶ್ರಾಂತಿಯೇ ಇಲ್ಲ. ನನ್ನ ಹೃದಯವಂತೂ ಒಂದೇ ಗುರಿಗೆ ಅಂಟಿಕೊಂಡಿದೆ, — ನಿನಗೆ ಇನ್ನೊಬ್ಬ ಗಂಡನಾಗುವುದಿದ್ದರೆ ಅವನೇ ನಿನ್ನವನಾಗಬೇಕು. ಆದ್ದರಿಂದ, ಗ್ರೇಸ ಅವನಿಗೆ ತಾತ್ಕಾಲಿಕವಾಗಿ ಸ್ವಲ್ಪ ಉತ್ತೇಜನ ಕೊಡು — ಅದೀಗ ತೀರ ಲಗುವೆಂದೆನಿಸಿದರೂ. ಏಕೆಂದರೆ ಆಗಿಹೋದ ಸಂಗತಿಗಳನ್ನು ಆಲೋಚಿಸುವಾಗ ನಾನು ಮಾಡುವ ವಿಚಾರ ಒಂದೇ, — ತುಸು ತ್ವರೆಮಾಡಿದ್ದಕ್ಕಾಗಿ ದೇವರು ನನ್ನನ್ನು ನಿನ್ನನ್ನೂ ಕ್ಷಮಿಸಲಿ. ಮುದ್ದು ಮಗು, ಇದಕ್ಕೆ ನನ್ನದಿನ್ನೊಂದು ಕಾರಣವೂ ಇದೆ. ನಾನು ಗುಡ್ಡದ ಇಳಿಜಾರಿನಲ್ಲಿ ಭರದಿಂದ ಕೆಳಗೆ ಜಾರತೊಡಗಿದ್ದೇನೆಂದು ನನಗೆ ಅನಿಸುತ್ತಿದೆ. ಮತ್ತು ಇತ್ತೀಚೆಯ ವ್ಯವಹಾರಗಳು ನನಗೆ ಆ ನಿಟ್ಟಿನಲ್ಲಿ ಇನ್ನಿಷ್ಟು ನೂಕಲು ನೆರವಾಗಿವೆ. ಆದ್ದರಿಂದ ಈ ಕೆಲಸವನ್ನು ಕೊನೆಗಾಣಿಸಿದ ಹೊರತು ನಾನು ಶಾಂತಿಯಿಂದ ವಿಶ್ರಮಿಸಲಾರೆ.'

ಇದಕ್ಕೆ ಆತ ಒಂದು 'ತಾಜಾಕಲಂ' ಜೋಡಿಸಿದ್ದನು.

'ನಾನು ಇದೀಗ ಕೇಳಿದೆ — ಸಾಲಿಸಿಟರ ನಾಳೆ ಕಾಣಸಿಗಲಿರುವನು. ಆದ್ದರಿಂದ ಬಹುಶಃ ನಾಳೆ ಸಂಜೆಗೆ ನಿನಗೆ ಈ ಪತ್ರವು ಸಿಕ್ಕನಂತರ ನಾನು ಮನೆಗೆ ಮರಳುವೆನು.'

ತಂದೆಯ ಹೆಬ್ಬಯಕೆಯು ಅವಳ ಸ್ವಂತ ಅಭಿಲಾಷೆಯೊಂದಿಗೆ ಪೂರ್ತಿ ಮೈಗೆ ಮೈಗೆ ಕೂಡಿದಂತೆ ಇತ್ತು ; ಆದರೂ ನಿನ್ನೆ ಅದನ್ನು ಮುಂದರಿಸುವುದರಲ್ಲಿ ಅವಳು ವಿಂಟರಬೋರ್ನನ ಮನಸ್ಸಿಗೆ ನೋವನ್ನುಂಟು ಮಾಡುವುದರ ಅಂಚಿಗೆ ಸರಿದಿದ್ದಳು, ತಂದೆ ವಿನಂತಿಸಿಕೊಂಡಂತೆಯೆ ತಾನು ಹಳ್ಳಿಗಾಡಿನ ಒಬ್ಬ ತರುಣಿಯಾಗಬೇಕು. ಜಾನಪದ ವಧುವಾಗಬೇಕು, ತನ್ನಲ್ಲಿಯ ಪರಿಷ್ಕೃತ ಸೀಮೆಯ ಸಂಸ್ಕೃತಿಯ ತರುಣಿ ಯನ್ನು ದೂರ ಅಟ್ಟಬೇಕು ಎಂದು ಬಯಸುತ್ತಲೂ, ಅವಳ ಮೊದಲನೆಯ ಪ್ರಯತ್ನವು ಅವಳದೇ ಅನಪೇಕ್ಷಿತ ರುಚಿ ಪರಿಷ್ಕಾರದಿಂದ ಪೆಟ್ಟು ತಿಂದಿತು. ಅವಳ

ತಂದೆ ಮರಳಿಬಂದು ಜೈಲ್ಸನ ಉದಾಸೀನ ಶಾಂತವೃತ್ತಿಯನ್ನು ಕಂಡು ಖಂಡಿತ ವಾಗಿಯೂ ಅನ್ನಬಹುದು, — ಹಿಂದೆ ಫಿಟ್ಜಪಿಯರ್ಸನೊಂದಿಗೆ ಮದುವೆಯಾಗಲು ತೊಡಕುಗಳನ್ನುಂಟು ಮಾಡಲು ಅವಳಿಗೆ ಹಚ್ಚಿದ ವಿಕೃತಿಗಳೇ, ಮೊಂಡತನವೇ ಈಗ ಬಡ ವಿಂಟರಬೋರ್ನನೊಂದಿಗೆ ಒಮ್ಮೆ ಪ್ರೋತ್ಸಾಹ, ಒಮ್ಮೆ ತಾತ್ಸಾರ ಕಾಣಿಸಲು ಅವಳನ್ನು ಒತ್ತಾಯಪಡಿಸುತ್ತಿದೆಯೆಂದು.

ಆತ — ಜೈಲ್ಸ — ಅವಳ ಸುಕುಮಾರ ಆತ್ಮದ ಶ್ರುತಿಗಳನ್ನು ಮಿಡಿಯುವ ಸೂಕ್ಷ್ಮ ಕೈಯವನಾಗಿದ್ದಿಲ್ಲ. ಅದರ ಬದಲು, ತನ್ನ ವ್ಯಕ್ತಿತ್ವಕ್ಕೆ ಸಂಬಂಧಪಟ್ಟ ಎಲ್ಲದರ ಕುರಿತು ಆಕೆಗೆ ಮೂಕಳಾಗಿರಲು ಬಿಟ್ಟು ತಾನು ಅವಳಿಗೆ ಬದ್ಧನಾದವನಂತೆ ಇದ್ದನು. ಆದಾಗ್ಯೂ ಆ ದಿನ ಕಾಣಿಸಿಕೊಂಡುದಕ್ಕಿಂತ ಹೆಚ್ಚು ಆಕರ್ಷಕವಾಗಿ ಹೆಚ್ಚು ಮೋಹಕವಾಗಿ ಆತ ವರ್ತಿಸಲಾರ. ಅವಳ ಕಿಟಕಿಯ ಇದುರಿಗೆ ಒಂದು ಹೊಲದಲ್ಲಿ ಏನೊ ಹಂಗಾಮಿ ಕೆಲಸದ ಮೇಲ್ವಿಚಾರಣೆಯನ್ನು ಅವನು ವಹಿಸಿಕೊಂಡಂತಿತ್ತು. ಆತ ಅಲ್ಲಿ ಏನು ಮಾಡುತ್ತಿದ್ದನೆಂಬುದನ್ನು ಆಕೆ ಕಂಡುಹಿಡಿಯದಾದಳು. ಆದರೆ ಅವನ ಮನೋಭಾವವನ್ನೂ ತಂದೆಯನ್ನೂ ಅವಳು ನಿಜವಾಗಿ ತೀವ್ರವಾಗಿ ಅರ್ಥ ಮಾಡಿಕೊಳ್ಳಬಲ್ಲಳು. ಅವನ ಆಗಮನ — ನಿರ್ಗಮನಗಳಲ್ಲಿ ಅವಳ ನಿಟ್ಟಿನಲ್ಲಿ ಇದ್ದ ಎಲ್ಲ ಆಶೋತ್ತರಗಳನ್ನು ಬಿಟ್ಟುಕೊಟ್ಟ ದೃಢನಿರ್ಧಾರದ ಚರ್ಯೆಯನ್ನೂ ಅವಳು ಗುರುತಿಸಬಲ್ಲಳು.

ಓ, ಅವನೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಅವಳು ಅದೆಷ್ಟು ಹಾರೈಸಿ ದಳು ; ಹಂಬಲಿಸಿದಳು. ಅವಳ ತಂದೆ ಸಂಜೆಗೆ ಮನೆಗೆ ಬರುವನು. ಅದರ ಅರ್ಥವೆಂದರೆ ಎಲ್ಲ ಕಾಯಿದೆಯ ಕ್ರಮಗಳು ಆರಂಭವಾಗುವುವು. ಮತ್ತು ಇನ್ನೊಮ್ಮೆ ಇನ್ನೊಬ್ಬನನ್ನು ಒಲಿದುಕೊಳ್ಳಲಿಕ್ಕೆ ಅವಳು ಇನ್ನೂ ಸ್ವತಂತ್ರಳು. ಆದರೆ ಅವರಿಬ್ಬರೂ ಹೀಗೆ ದೂರವಾಗಿದ್ದರೆ ಆಗಂತುಕರಂತೆ ಆದರೆ, ಅವನ ಕಣ್ಣಲ್ಲಿ ಕಣ್ಣಿಟ್ಟು ನೋಡು ವುದಾದರೂ ಹೇಗೆ ?

ಅದು ಜೂನ್ ತಿಂಗಳ ಚಂದ ಹವೆಯ ಹಚ್ಚಹಸಿರು ಸಂಜೆಯಾಗಿತ್ತು. ಲಾರೆಲ್‌ಗ್ರೇಸ ಪೊದೆಗಳ ಕೆಳಗೆ ಇದ್ದ ಒಂದು ಹಳ್ಳಿಗಾಡ ಕುರ್ಚಿಯಲ್ಲಿ ತೋಟದಲ್ಲಿ ಕೂತಿದ್ದಳು. ಚೆಲ್ಲಿ ಸುಲಿದ ಓಕ ಟೊಂಗೆಗಳು ಕೆಲಸಕ್ಕೆ ಬಾರದ ಕಟ್ಟಿಗೆಯೆಂದು ಮೆಲಬರಿಯ ಮನೆಗೆ ಬಂದು ಬೀಳುತಿದ್ದವು ಅವುಗಳಿಂದ ಆ ಕುರ್ಚಿಯನ್ನು ತಯಾರಿಸಿತ್ತು. ಅವಳ ಸುತ್ತಲಿನ ಎತ್ತರದಲ್ಲಿ ಹೇರಿದ್ದ ತುಂಬ ತಿಳಿಲಿನ ತಳಿರ ರಾಶಿಯು ತೀರ ತಣ್ಣಗಾಗುತ್ತಿದ್ದ ಗಾಳಿಯಿಂದ ತೂಗಾಡಿ ಮಂದವಾಗಿ ಕೈಸನ್ನೆ ಮಾಡುವಂತೆ ಇತ್ತು. ಆ ಗಾಳಿ ಅಷ್ಟು ದುರ್ಬಲವಿದ್ದರೂ ಅವಳು ಕುಳಿತ ಆಸರೆಗೆ ಬಂದು ತಲ್ಪುತ್ತಿದ್ದಿಲ್ಲ. ಜೈಲ್ಸ ಕರೆಯಬಹುದು, — ಭೆಟ್ಟಿಕೊಡಲು ಬರಬಹುದು ಎಂದು ಆಕೆ ನಿರೀಕ್ಷಿಸಿದ್ದಳು. ಅವಳು ಮನೆಗೆ ಹೇಗೆ ಬಂದಳು, ಅಥವಾ ಇನ್ನೇನಾದರೂ ಕೇಳಬಹುದೆಂದು ತರ್ಕಿಸಿದ್ದಳು. ಆದರೆ ಅವನು ಬರಲೇ ಇಲ್ಲ.

ಆದರೆ ಆತ ಇನ್ನು ಆ ಇದುರಿನ ಹಣ್ಣಿನ ಹೊಲದಲ್ಲಿ ಅತ್ತಿಂದತ್ತ ಸುಳಿದಾಡುತ್ತ ಅವಳಿಗೆ ಆಮಿಷದಂತೆ ಕೆಣಕಿಸುತಿದ್ದನು. ಕೂತಲ್ಲಿಂದ ಅವಳು ಆತನನ್ನು ಕಾಣಬಲ್ಲಳು.

ಅಷ್ಟರಲ್ಲಿ ಕ್ರೀಡಲ್ ಒಂದು ಪತ್ರವನ್ನು ಅವನಿಗೆ ತಂದುಕೊಟ್ಟು, ತುಸು ತಡೆಲುಂಟು ಮಾಡಿದನು. ಇದರಿಂದ ಅವಳಿಗೆ ಗೊತ್ತಾಯಿತು — ಕ್ರೀಡಲ್ ಶರ್ಟನ್ನಿನಿಂದ ಆಗತಾನೇ ಬಂದಿರಬೇಕು. ಮತ್ತು ಅಪರಾಹ್ನದ ಅಂಚೆಯಿಂದ ಏನಾದರೂ ಬಂದಿದೆಯೇ ಎಂದು ಅಂಚೆಕಟ್ಟೆಯಲ್ಲಿ ಕೇಳಿರಬೇಕು. ಏಕೆಂದರೆ ಹಿಂಟಾಕದಲ್ಲಿ ಸಂಜೆಗೆ ಅಂಚೆಯ ಹಂಚುವಿಕೆ ಇದ್ದಿಲ್ಲ. ಆ ಪತ್ರದಲ್ಲಿ ಏನಿರಬಹುದು? ಅವಳು ಆಲೋಚಿಸಹತ್ತಿದಳು — ವಿಶೇಷತಃ ಅದು ತನಗೆ ಅದೆ ಮುಂಜಾನೆ ಬಂದಂತೆ ವಿಂಟರಬೋರ್ನನಿಗೆ ತನ್ನ ತಂದೆಯಿಂದ ಬಂದ ಎರಡನೆಯ ಜ್ಞಾಪಕಪತ್ರವಿರಬಹುದೆ?

ಆದರೆ ಅವಳೊಂದಿಗೆ ಯಾವ ಸಂಬಂಧವೂ ಅದಕ್ಕೆ ಇದ್ದಿಲ್ಲವೆಂಬುದು ಕಂಡು ಬಂದಿತು. ಜೈಲ್ಸ ಈ ಪತ್ರವನ್ನು ಓದಿದೊಡನೆ ಆ ಹಣ್ಣಿನ ಹೊಲದ ಬೇಲಿಯ ಒಂದು ತೆರವಾದ ಭಾಗದಲ್ಲಿ ದಿಟ್ಟಿಸಿನೋಡಿದನು. ಅದೊಂದು ಬೇಲಿಯೆನ್ನುವಂತೆ ಇತ್ತೋ ಇಲ್ಲವೋ — ಮರಗಳಿಂದ ಯಾವಾಗಲೂ ಬೀಳುತ್ತಿರುವ ಹನಿಗಳಿಂದ ಅಲ್ಲೊಂದು ಇಲ್ಲೊಂದು ಪೊದೆ ಬೆಳೆದು ಎತ್ತರದ ಮೇಲೆ ಒಡ್ಡಿನಿಂತಂತೆ ಇತ್ತು ಆ ಬೇಲಿ. ಅವನು ಅಲ್ಲಿಂದ ಆಚೆಯ ಬಾಗಾಯತನ್ನು ಹೊಕ್ಕನು. ನಿಸ್ಸಂಶಯ ವಾಗಿಯೂ ಅವನು ಆ ಬೆಟ್ಟದ ಆಚೆಯ ಬದಿಗೆ, ತಾನು ವಾಸಿಸುತ್ತಿದ್ದ ಆ ಗುಪ್ತ ಗುಡಿಸಲಿಗೆ, ಮನೆಯ ಕಡೆಗೆ ಹೋಗುತ್ತಿರಬೇಕು.

ಕಾಲನ ಗಳಿಗೆ ಬಟ್ಟಲೊಳಗಿಂದ ದುಃಖದ ಬಿಂದುಗಳು ಭರಭರನೆ ಹರಿದು ಓಡುತಿದ್ದವು. ಇದರ ಬೋಧ ಅವಳಿಗೆ ಈಗಿನ ದಿನಗಳಲ್ಲಿ ಆಗುತ್ತಿತ್ತು. ಮತ್ತು ಈಗ ತನ್ನ ತಂದೆಯ ಪತ್ರವ್ಯವಹಾರದ ಕನಿಕರದ ಜ್ಞಾಪಕಗಳಿಂದ ಜೈಲ್ಸನಂತೆ ಅವಳಿಗೂ ಈ ಕಾಲಗತಿಯ ಅರಿವು ಇನ್ನೂ ಇಮ್ಮಡಿ ಆಗುತ್ತಿತ್ತು. ಅವಳ ನವಯೌವನದ ಕಾಂತಿ ಕಳೆಯುವುದು. ಜೈಲ್ಸನ ದೀರ್ಘಬಳಲಿಕೆಯ ಭಕ್ತಿಯೂ ಪಕ್ಕನೆ ಕೊನೆಗಾಣುವುದು. ಇದೇ ಈ ಕ್ಷಣಕ್ಕೆ ಕೊನೆಗಾಣಬಹುದು. ಗಂಡಸರು ತೀರ ವಿಚಿತ್ರರಿರುತ್ತಾರೆ. ಈ ವಿಚಾರವು ಅವಳ ಎಲ್ಲ ಮೌನವನ್ನು ಸ್ತಬ್ಧತೆಯನ್ನು ಕಳೆಯಿತು. ಮತ್ತು ಅವಳ ಚಟುವಟಿಕೆಯನ್ನು ದಿಟ್ಟಗೊಳಿಸಿತು. ಅವಳು ತನ್ನ ಕುರ್ಚಿಯಿಂದ ಎದ್ದಳು. ನಿನ್ನೆಯ ಒಡಕೋ, ಜಗಳವೋ, ಇನ್ನೇನೋ ಹೆಸರು ಅದಕ್ಕೆ ಕೊಟ್ಟಿರಲಿ, ವಾಸಿಯಾಗಬೇಕಾದರೆ ಅದು ಅವಳಿಂದಲೇ, ಅದೇ ಕ್ಷಣವೇ ಆಗತಕ್ಕದ್ದು. ಅವಳು ಆಚೆಗೆ ಹಣ್ಣಿನ ಹೊಲಕ್ಕೆ ಹಾಯ್ದಳು, ಮತ್ತು ಜೈಲ್ಸನ ಬೆನ್ನಿಗೆ ಆ ಬೇಲಿಯ ಅಗಲ ಕನ್ನಿನೊಳಗಿಂದ ಹತ್ತಿಹೋದಳು. ಆತ ದೂರದಲ್ಲಿ ಹಸಿರು ಹಂದರದಡಿಗೆ ಕಂದು ನೆಲದ ಮೇಲೆ ಚಿಕ್ಕ ಚಿಗರೆಯ ಆಕೃತಿಯಲ್ಲಿ ಕರಗಿ ಕಾಣೆಯಾಗುತ್ತಿದ್ದನು.

ಜೈಲ್ಸನು ಆ ಪತ್ರವನ್ನು ಓದಿ ನೋಡಿ ಬೆಟ್ಟದತ್ತ ಹೊರಳಿಹೋದುದರಿಂದ

ಆ ಪತ್ರದಲ್ಲಿ ತನ್ನ ಉಲ್ಲೇಖ ಸಂದರ್ಭವೇನೂ ಇದ್ದಿರಕ್ಕಿಲ್ಲವೆಂದು ಭಾವಿಸುವುದರಲ್ಲಿ ಗ್ರೇಸಳು ತಪ್ಪಿದ್ದಳು — ಬಹಳವಾಗಿ ತಪ್ಪಿದ್ದಳು. ಈ ಪತ್ರವು, ತೀರ ವ್ಯಸನದ ಸಂಗತಿಯೆಂದರೆ, ಅವಳ ಕುರಿತ ಇಷ್ಟೊಂದು ಇದ್ದುದರಿಂದಲೆ ಅವನು ಹಾಗೆ ಹಿಂದಿರುಗಿ ಹೋದದ್ದು. ತನ್ನ ವ್ಯಾಕುಲ ಮನೋಭಂಗವನ್ನು ಯಾರಾದರೂ ನೋಡಬಹುದೆಂದು ಅವನು ಅಂಜಿದನು.

ಆ ಪತ್ರ ಬ್ಯೂಕೊಕನಿಂದ ಬಂದಿತ್ತು, ಮೆಲಬರಿ ಮಗಳಿಗೆ ಬರೆದ ಕೆಲವು ಗಂಟೆ ನಂತರ ಬರೆದಿತ್ತು. ಅದು ಸೋಲನ್ನು, ಅಪಯಶಸ್ಸನ್ನು ಪ್ರಕಟಿಸಿತ್ತು.

ಹಿಂದೊಮ್ಮೆ ಆ ಮಿತವ್ಯಯಗೆಟ್ಟ ಮನುಷ್ಯನಿಗೆ ಜೈಲ್ಸ ಉಪಕಾರ ಮಾಡಿದ್ದನು. ಮತ್ತು ಇದೀಗ ಬ್ಯೂಕೊಕ್ ಅದನ್ನು ಸ್ಮರಿಸಿ ತನ್ನದೇ ಆದ ರೀತಿಯಲ್ಲಿ ಪ್ರತ್ಯುಪಕಾರ ಮಾಡುವ ಕ್ಷಣವೂ ಬಂದಿತ್ತು. ಮೆಲಬರಿಯೊಂದಿಗೆ ಊರಿನಲ್ಲಿ ಇಲ್ಲದಿರುವಾಗ ಆ ವಕೀಲರ ಕಾರಕೂನನು ಸಹಜವಾಗಿಯೆ ಜೈಲ್ಸನಿಗೆ ನ್ಯಾಯ ಒದಗಿಸಿಕೊಡಬೇಕೆಂಬ ಮೆಲಬರಿ ಕುಟುಂಬದ ಯೋಜನೆಯನ್ನು ಕುರಿತು ಬಹಳಷ್ಟು ಕೇಳಿದ್ದನು. ಮತ್ತು ಈಗ ಅವನ ಪತ್ರವು, ಶಕ್ಯವಿದ್ದಷ್ಟು ಲಗುಬರೆದದ್ದು, ಅದರ ಪ್ರಯತ್ನ ವಿಫಲವಾಯಿ ತೆಂಬುದನ್ನು ವಿಂಟರಬೋರ್ನನಿಗೆ ಅರುಹುವುದಕ್ಕಾಗಿತ್ತು. ಗ್ರೇಸಳೊಂದಿಗೆ ಈ ತರುಣನು ಸುಳ್ಳು ಸಂಬಂಧದ ಭೂಮಿಕೆಯಲ್ಲಿ — ತಮ್ಮ ಯತ್ನಗಳಿಗೆ ಯಶಸ್ಸು ಬರಲಿದೆಯೆಂಬ ನಂಬಿಗೆಯಲ್ಲಿ ಉಳಿಯಬಾರದು ಎಂಬುದೆ ಅವನ ಉದ್ದೇಶವಿತ್ತು. ಸ್ವಲ್ಪದರಲ್ಲಿ ಬಂದ ಸುದ್ದಿಯೇನೆಂದರೆ, ಗ್ರೇಸಳೊಂದಿಗೆ ಫಿಟ್ಝಪಿಯರ್ಸನ ವರ್ತನೆಯು ಅವಳು ತಮ್ಮಿಬ್ಬರ ಸಂಬಂಧವನ್ನು ಕಡಿದುಕೊಳ್ಳಬೇಕೆಂಬುದಕ್ಕೆ ಸಾಕಾಗುವಷ್ಟು ಕ್ರೂರ ವಾಗಿದ್ದಿಲ್ಲ. ಜೀವನದ ಈ ಅಧ್ಯಾಯದ ಕೊನೆಯತನಕವೂ ಅವನ ಹೆಂಡಂತಿಯಾಗಿಯೇ ಉಳಿಯುವುದು ಅವಳ ಹಣೆಯಲ್ಲಿ ಬರೆದಿತ್ತು.

ಈ ದುರಂತಪ್ರಾಯವಾದ ಸಮಾಚಾರದಿಂದ ಹುಟ್ಟಿದ ತನ್ನ ಆಳವಾಗಿ ಉದ್ರೇಕ ಗೊಳಿಸುವ, ನುಗ್ಗಿಬಂದ, ಉಕ್ಕಿಬಂದ ಪ್ರೇಮದ ಕಾವಿನಲ್ಲಿ ಅವನು ಬಡ ಹುಡುಗಿ ಯೊಂದಿಗೆ ಇದ್ದ ತನ್ನ ಮೇಲ್ಮೇಲಿನ ಮತಭೇದಗಳನ್ನು ಪೂರ್ತ ಮರೆತನು.

ಅವಳನ್ನು ಶಾಶ್ವತವಾಗಿ ತ್ಯಾಗಮಾಡುವುದು, — ಕೊನೆಗೂ ಅವನಿಗೆ ಇದೊಂದೆ ಕೊನೆ. ಇನ್ನು ತನ್ನ ಅವಳ ಅನುರೂಪತೆ ಯೋಗ್ಯಾಯೋಗ್ಯತೆಗಳ ಪ್ರಶ್ನೆಯೇ ಉಳಿದಿಲ್ಲ. ಚಿಕ್ಕ-ಪುಟ್ಟ ರುಚಿ ಭೇದಗಳ ಬಗೆಗೆ ಜಗಳಗಳಿಗೆ ಅವಕಾಶವೇ ಉಳಿದಿಲ್ಲ. ಮತ್ತೆ ಅವರಿಬ್ಬರ ನಡುವೆ ತೆರೆಯು ಉರುಳಬಿದ್ದಿದೆ. ಅವಳು ತನ್ನವಳಾಗಲಾರಳು. ಅವರಲ್ಲಿ ಇತ್ತೀಚೆಗೆ ಚೇತರಿಸಿಕೊಂಡ ಆಶೆಯ ಕ್ರೌರ್ಯವು ಈಗ ಭಯಾನಕವೆನಿಸಿತು. ಇದು ಸಾಧ್ಯ, ಇದು ಆಗಿಯೇ ಬಿಡುವುದೆಂದು ಭಾವಿಸುವಷ್ಟು ಅವರೆಲ್ಲರೂ ಅಷ್ಟು ಬೋಳೆ ಹೇಗಾಗಿ ಬಿಟ್ಟರು !

ಇದೇ ಕ್ಷಣಕ್ಕೆ ತನ್ನ ಬೆನ್ನಿಗೆ ಯಾರೋ ಬರುತ್ತಿರುವ ಸದ್ದು ಕೇಳಿ ಅವನು ಹೊರಳಿದನು. ಮತ್ತು ಅವಳು ಪೊದೆಗಂಟಿಗಳ ನಡುವಿನಿಂದ ಅವನತ್ತ ತ್ವರೆಯಿಂದ

ನುಗ್ಗಿ ಬರುತ್ತಿರುವುದನ್ನು ನೋಡಿದನು. ಆ ಕ್ಷಣದಲ್ಲಿಯೇ ಅವನಿಗೆ ಹೊಳೆಯಿತು — ಅವಳಿಗೆ ಈ ಸಿಡಲಿನಂಥ ಸುದ್ದಿ ಗೊತ್ತಾಗಲಿಲ್ಲವೆಂದು.

'ಜೈಲ್ಸ್, ನೀನು ನನ್ನ ಹತ್ತಿರ ಹೊಲ ದಾಟಿ ಏಕೆ ಬರಲಿಲ್ಲ?' ಅವಳು ಕೃತಕ ಆಪಾದನೆಯ ಒಂದು ವಿಭ್ರಮೆಯಿಂದ ಕೇಳಿದಳು. 'ನಾನು ಅಲ್ಲಿ ಅದೆಷ್ಟೋ ಹೊತ್ತಿನಿಂದ ಕೂತಿದ್ದನ್ನು ನೀನು ನೋಡಲೇ ಇಲ್ಲವೆ'.

'ಓ!, ಹೌದು ನೋಡಿದ್ದೆ', ಆತ ತಾತ್ಕಾಲಿಕವಾಗಿ, ತಯಾರಿಕೆ ಇಲ್ಲದ, ಹೊತ್ತು ಹೊಡೆದುಕೊಂಡು ಹೋಗುವ ದನಿಯಲ್ಲಿ ಅಂದನು. ಅವಳ ಆ ಅನಪೇಕ್ಷಿತ ಬರುವಿಕೆಯು ಅವನನ್ನು ಯಾವ ಯೋಜನೆಯನ್ನೂ ಊಹಿಸಿಡದಂಥ ಅವಸ್ಥೆಯಲ್ಲಿ ಸಿಲುಕಿಸಿತ್ತು. ಅವನ ರೀತಿಯಿಂದ ಅವಳ ಭಾವನೆ ಬೇರೆ ಆಯಿತು — ತಾನು ಮಾತಿನಲ್ಲಿ ವಿಪರೀತ ಛೀಹಾಕಿದಂತೆ ಆಯಿತೋ ಏನೋ ಎಂದು, ಅದನ್ನು ನಯಗೊಳಿಸಬೇಕೆಂಬ ನಿರ್ಧಾರಕ್ಕೆ ಅವಳು ಬಂದಾಗ ಅವಳ ಮೊಗದ ಮೇಲೆ ಒಂದು ತಿಳಿಗೆಂಪು ಛಾಯೆ ಅಲೆಯಂತೆ ಹಬ್ಬಿಹೋಯಿತು.

'ಅಪ್ಪನಿಂದ ನನಗೆ ಇನ್ನೊಂದು ಪತ್ರ ಬಂದಿದೆ', ಅವಳು ತ್ವರೆಯಿಂದ ಮಾತು ಮುಂದರಿಸಿದಳು. ಅವನ ಅಂದಾಜು, ಈ ಸಂಜೆಗೇ ಮನೆಗೆ ಬರುವನೆಂದು ಮತ್ತು — ಅವನ ಆಸೆಗಳ ದೃಷ್ಟಿಯಿಂದ, — ನಮ್ಮಿಬ್ಬರಲ್ಲಿ ಏನಾದರೂ ಸ್ವಲ್ಪ ಮತಭೇದ ವಿದ್ದರೆ ಅವನಿಗೆ ಮನಸ್ತಾಪವಾಗುವುದು, ಜೈಲ್ಸ್'.

'ಏನೂ ಭೇದವಿಲ್ಲ', ಅವನೆಂದನು ಅವಳನ್ನು ಮೋರೆಯಿಂದ ಕೆಳವರೆಗೆ ವ್ಯಥೆಯಿಂದ ಅವಲೋಕಿಸುತ್ತ. ಆ ಕ್ರೂರ ಸತ್ಯವನ್ನು ಅವಳ ಇದಿರು ಬಚ್ಚಿಡುವುದು ಹೇಗೆಂದು ಆತ ಆಲೋಚಿಸುತ್ತಿದ್ದನು.

'ಆದಾಗ್ಯೂ — ನನಗೆ ಅಂಜಿಕೆ, ಅಲ್ಲಿ ಖಾನಾವಳಿಯಲ್ಲಿ ನಾನು ನಿನಗೆ ತಾಪದಾಯಕವಾಗಿ ನಡೆದುಕೊಂಡೆ, ಆ ಬಗ್ಗೆ ನೀನು ನನ್ನನ್ನು ಪೂರ್ತಿ ಕ್ಷಮಿಸಿಲ್ಲ'.

'ಕ್ಷಮಿಸಿದ್ದೇನೆ, ಖಂಡಿತವಾಗಿ'.

'ಆದರೆ ನೀನು ತೀರ ದುಃಖಿಯಾದ ರೀತಿಯಲ್ಲಿ ಮಾತನಾಡುತ್ತಿರುವಿ', ಅವಳು ಉತ್ತರಿಸಿದಳು; ಅವಳಿಗೆ ಒಪ್ಪುವಂಥ ಹಲವು ಮೋಹಕ ಭಂಗಿಗಳಲ್ಲಿ ಅತ್ಯಂತ ಆಕರ್ಷಕ ಮನೋಹರ ರೀತಿಯಲ್ಲಿ ಅವನ ತೀರ ಹತ್ತಿರಕ್ಕೆ ಬಂದಳು. 'ನೀನು ಎಂದಾದರೂ ಸುಖಿಯಾಗುವೆಯೆಂದು ಭಾವಿಸಲಾರೆಯಾ, ಜೈಲ್ಸ್?'

ಕೆಲವು ನಿಮಿಷ ಆತ ಉತ್ತರ ಕೊಡಲೇ ಇಲ್ಲ. 'ಶರ್ಟನ್ ಇಗರ್ಜಿಯ ಉತ್ತರದ ಮುಖದ ಮೇಲೆ ಸೂರ್ಯ ಸಪಾಟಾಗಿ ನೆತ್ತಿಯ ಮೇಲೆ ಹೊಳೆಯುತ್ತಿರಬೇಕು — ಆಗಲೇ ನನ್ನ ಸುಖ ನನಗೆ ಬರುವುದು', ಭೂಮಿಯಲ್ಲಿ ನೆಟ್ಟ ದೃಷ್ಟಿಯಿಂದ ಆತ ಅಂದನು.

'ಆದರೆ — ಆಗ ನಾನು ಶರ್ಟನ್ನಿನ ಖಾನಾವಳಿಯನ್ನು ಮೆಚ್ಚದೆ ನಿನ್ನನ್ನು ನೋಯಿಸಿದ್ದಕ್ಕಿಂತ ಹೆಚ್ಚಾಗಿ, ಬೇರೆ ಏನೋ ಇದರಲ್ಲಿ ಇದೆಯೆಂದಾಯಿತು. ಹಾಗಾ

ದರೆ ಇದು ಈ ಮೂಲಕವೇ—ಈ ಇಗರ್ಜಿಯಲ್ಲಿ ನನ್ನನ್ನು ಮುತ್ತಿಡಲು ನಿನಗೆ ನಾನು ಬಿಡಲಿಲ್ಲ; ಆದರೆ ನಿನಗೆ ಗೊತ್ತು ಜೈಲ್ಸ, ಅದು, ನನ್ನ ಭಾವನೆಗಳು ನಿನ್ನ ಬಗೆಗೆ ತಣ್ಣಗಿದ್ದವೆಂಬ ಕಾರಣದಿಂದಲ್ಲ; ಆದರೆ ಆಗ ಮಾತ್ರ ನನಗೆ ಅನಿಸಿತು, ನನ್ನ ಬಡ ಅಪ್ಪನ ಅಂಬೋಣ ಏನೇ ಇರಲಿ, ಅದೀಗ ಸ್ವಲ್ಪ ಅವಸರದ್ದು. ಅದಕ್ಕೆ ಕಾಲ ಪಕ್ವಾಗ ಲಿಲ್ಲ, ಎಂದು. ಅದೇ ನಿಜವಾದ—ಒಂದೇ ಒಂದಾದ ಕಾರಣವಾಗಿತ್ತು. ಆದರೆ ನಾನು ಕಠಿಣಳಾಗ ಬಯಸುವುದಿಲ್ಲ. ದೇವರಿಗೇ ಗೊತ್ತು. ನಾನು ಹಾಗಲ್ಲ. ಅವಳು ಹೀಗೆ ಅನ್ನುವಾಗ ಅವಳ ದನಿಯು ತತ್ತರಿಸುತ್ತಿತ್ತು. 'ಮತ್ತು ಬಹುಶಃ ನಾನೀಗ ಸ್ವಾತಂತ್ರ್ಯದ ಗಡಿಯಲ್ಲಿ ನಿಂತಿರುವೆನಾದ್ದರಿಂದ—ನೀನೂ ನನ್ನನ್ನೂ ಚುಂಬಿಸು ವುದರಲ್ಲಿ ಏನಾದರೂ ಅಪಾಯವಿದೆಯೆಂದು ನಾನು ಭಾವಿಸುವುದು ಸರಿ ಅಲ್ಲ'.

'ಅಯ್ಯೋ ದೇವರೆ', ವಿಂಟರಬೋರ್ನ ತನ್ನಷ್ಟಕ್ಕೆ ಮರುಗಿದನು. ಅವನ ತಲೆ ಪ್ರಶ್ನಾರ್ಥಕವಾಗಿ ಅವಳ ಕಡೆಗೆ ಹೊರಳಿತ್ತು. ಅವನು ಇನ್ನು ನೆಲವನ್ನೇ ದಿಟ್ಟಿಸುತ್ತ ಇದ್ದನು. ಕಳೆದ ಕೆಲವು ನಿಮಿಷಗಳಲ್ಲಿ ಅವನಿಗೆ ಈ ಹಿರಿಯ ಮೋಹ ತಪ್ಪದೆ ದಾಳಿಮಾಡುವಂತೆ ಕವಿಯುತ್ತಿತ್ತು. ಮತ್ತು ಈಗ ಮತ್ತೆ ಅದು ಮುತ್ತಿ ಬಂದಿತು. ಅವಳು ಕೊಡಮಾಡಿದ ಆ ತುಟಿಗಳ ಲಾಭ ಪಡೆಯುವುದರ ಪ್ರಮಾಣವು, ಸಾಮಾಜಿಕ ಪಾಪವು, ಜೈಲ್ಸನಂಥ ಕೌಟುಂಬಿಕ ಕಟ್ಟಳೆಗಳ ಅಳತೆಗೆ ಆಳದ, ಇಷ್ಟು ಪ್ರಾಕೃತ, ಗ್ರಾಮೀಣಬದುಕಿನ ವ್ಯಕ್ತಿಯ ಕಣ್ಣಲ್ಲಿ ಎಷ್ಟು ಮಹತ್ವವನ್ನು, ಬೃಹದಾಕಾರ ವನ್ನು ತಾಳಿತೆಂಬುದು ವಿವರಿಸುವುದೇ ಕಠಿಣ.

'ನೀನು ಏನಾದರೂ ಅಂದೆಯಾ?' ಅವಳು ಅಳುಕುತ್ತ ಕೇಳಿದಳು.

'ಓ! ಇಲ್ಲ, ಆದರೆ ಇಷ್ಟೇ—'.

'ಅಂದರೆ ನಿನ್ನ ಅಂಬೋಣ, ಈ ವಿಷಯ ಈಗಾಗಲೇ ನಿರ್ಣಯವಾಗಿರಬೇಕು —ನನ್ನ ಅಪ್ಪ ಮನೆಗೆ ಬರುವನೆಂದಾಗ?' ಅವಳು ಹಿಗ್ಗಿನಲ್ಲಿ ಅಂದಳು.

'ಹಾಂ, ಹೌದು'.

'ಹಾಗಾದರೆ ನೀನೇಕೆ ಮಾಡುವುದಿಲ್ಲ—ನಿನಗೆ ಬೇಕಾದದ್ದನ್ನು?' ಅವಳು ಅವನ ಮೀನಮೇಷಕ್ಕೆ ಮುನಿದು ತುಟಿ ಉಬ್ಬಿಸಿದಂತಿತ್ತು.

ಇಷ್ಟು ಹೊತ್ತೆಲ್ಲ ವಿಂಟರಬೋರ್ನ ತನ್ನೊಡನೆಯೇ ವೀರಾವೇಶದಿಂದ ಹೋರಾಡುತ್ತಿದ್ದನು. ಗ್ರೇಸಳ ಮರ್ಯಾದೆಯನ್ನು ತನ್ನ ಕಣ್ಮಣಿಯಷ್ಟೇ ಕಾಳಜಿ ಯಿಂದ ಆತ ಕಾಪಾಡಲು ಅಣಿಯಾಗಿದ್ದನು. ಆದರೂ ಆತ ಪುರುಷ ಮತ್ತು ಡೆಸ್ಡೆಮೊನಾ ಅನ್ನುವಂತೆ ಪುರುಷರು ದೇವತೆಗಳಲ್ಲ. ಅವಳು ಕೊಡುವ ಯಾತನೆ ಕಾಣಿಸುವ ಮೋಹದ ಇದಿರು, ಕಾಯಿದೆ-ಕಟ್ಟಳೆಗಳ ಬಗೆಗೆ ಅವಳ ಪರಿಜ್ಞಾನವಿಲ್ಲದ ಶಾಲಾ—ಕನ್ಯೆಯ ಸರಳತನದ ಇದಿರು, ಆತ ಪುರುಷನ ದೌರ್ಬಲ್ಯವನ್ನು ಹೊರ ಗೆಡಹಿದನು. ಇದು ಹೀಗಾಗುವುದಿತ್ತು. ಗ್ರೇಸಳು ತಾನು ಸ್ವತಂತ್ರಳೆಂದು ಭಾವಿಸ ಹತ್ತಿದ್ದಳು; ಅವನು ತನ್ನನ್ನು ಪ್ರೀತಿಸುತ್ತಿದ್ದನೆಂಬುದನ್ನು ಪ್ರದರ್ಶಿಸಿ ತೋರಿಸೆಂದು

ಅವಳು ಕೇಳುವಂತಿತ್ತು; ಆತನೂ ಹಾಗೆ ಪ್ರದರ್ಶಿಸಲು ಪ್ರಾಮಾಣಿಕವಾಗಿಯೂ ಸಿದ್ಧನಿದ್ದನು. ಏಕೆಂದರೆ ಬಾಳು ಕಿರಿದಾಗಿತ್ತು. ಪ್ರೇಮ ಹಿರಿದಾಗಿತ್ತು; ಬಲ ವಾಗಿತ್ತು. ಆದ್ದರಿಂದ ಆಕೆ ಫಿಟ್ಸ್‌ಪಿಯರ್ಸನೊಂದಿಗೆ ಅಭೇದ್ಯವಾಗಿ, ಅವಿಚ್ಛೇದ್ಯ ವಾಗಿ ವಿವಾಹ ಬದ್ಧಳಾಗಿದ್ದಾಳೆಂಬುದನ್ನು ಪೂರ್ತಿಯಾಗಿ ಮನಗಂಡಿದ್ದರೂ ಅವನು ತನ್ನ ಮೋಹಕತೆಗೆ ವಶನಾದನು. ನಿಜವಾಗಿಯೂ ಆತ ಯಾವುದೇ ಭೂತ, ಭವಿಷ್ಯ ವನ್ನು ಲೆಕ್ಕಿಸಲಿಲ್ಲ. ಕೇವಲ ವರ್ತಮಾನವನ್ನು ಸ್ವೀಕರಿಸಿ ಅದು ತರುವುದನ್ನು ಅಂಗೀ ಕರಿಸಿ, ಯಾರನ್ನು ಅವನು ಅಷ್ಟು ದೀರ್ಘಕಾಲ ನೋಡಿ ನಿರೀಕ್ಷಿಸಿ ಪ್ರೀತಿಸುತ್ತ ಬಂದಿದ್ದನೊ ಅವಳನ್ನು ಒಮ್ಮೆ ತನ್ನ ತೋಳತೆಕ್ಕೆಯಲ್ಲಿ ಬಲವಾಗಿ ಅವಚಿಕೊಳ್ಳ ಬೇಕೆಂಬುದನ್ನೊಂದೇ ನಿರ್ಧರಿಸಿದನು.

ಅವನ ಗಾಢಾಲಿಂಗದಿಂದ, ಸುದೀರ್ಘ ಭಾವಾವೇಶದ ಚುಂಬನದಿಂದ ಅವಳು ಒಮ್ಮೆಲೆ ಕಣ್ಣೆತ್ತಿ ನೋಡಿದಳು. ಅವಳೂ ಸ್ಫೂರ್ತಿಯಿಂದ ಪ್ರಭಾವಿತಳಾಗಿದ್ದಳು. ಓ, ನನ್ನ ಭಾವನೆ — ಅವಳು ತೊದಲಿದಳು, 'ನಾನು ನಿಜವಾಗಿಯೂ ಬಿಡುಗಡೆ ಹೊಂದಿದ್ದೇನೆ? ಇದು ಸರಿಯೇ? ನಿಜವಾಗಿಯೂ ಹೊಸ ಕಾನೂನು ಒಂದು ಇದೆಯೇ? ನಮ್ಮಪ್ಪ ಹೇಳುವುದರಲ್ಲಿ ತೀರ ಭರವಸೆಯುಳ್ಳವನಂತೆ—'

ಆತ ಉತ್ತರ ಕೊಡಲಿಲ್ಲ. ಒಂದು ಕ್ಷಣದ ನಂತರ ಗ್ರೇಸಳು ತನ್ನಷ್ಟಕ್ಕೇ ಒಮ್ಮೆಲೆ ಕಣ್ಣೀರುಗರೆಯ ಹತ್ತಿದಳು. 'ಓ, ನಮ್ಮಪ್ಪ ಮನೆಗೆ ಬಂದು ಎಲ್ಲ ಸಂಗತಿ ಬಿಡಿಸಿ ಹೇಳುವುದಿಲ್ಲವೇಕೆ?' ಅವಳು ಅವನೆದೆಯ ಮೇಲೆ ತಲೆ ಇಟ್ಟು ಬಿಕ್ಕಿ ಬಿಕ್ಕಿ ಅಂದಳು, 'ಮತ್ತು ನಾನು ಏನಿದ್ದೇನೆಂದು ಹೇಳುವುದಿಲ್ಲವೇಕೆ? ಇದು ವಿಪರೀತ ಸತ್ವಪರೀಕ್ಷೆ. ನನಗೆ ಹೀಗೆ ಮಾಡಲಿಕ್ಕೆ ಹೇಳಿ — ಆಮೇಲೆ ಹೀಗೆ ಸಂದಿಗ್ಧ ಸ್ಥಿತಿಯಲ್ಲಿ ಇಷ್ಟು ಕಾಲ ಬಿಟ್ಟು ಬಿಡುವುದು; ನನಗೇ ಗೊತ್ತಾಗುವುದಿಲ್ಲ ಏನು ಮಾಡಬೇಕೆಂದು, ಇಲ್ಲವೆ ಮಾಡ ಬಾರದ್ದನ್ನು ಮಾಡುತ್ತೇನೋ ಎಂದು.'

ವಿಂಟರಬೋರ್ನನಿಗೆ ಕೊಲೆಪಾತಕಿಯಂತೆ — ಬೈಬಲ್ಲಿನಲ್ಲಿ ಬಂದ ಭ್ರಾತೃಘಾತಕಿ ಕೇನ್‌ನಂತೆ — ಅನಿಸಿತು. ಅಲ್ಲದೆ ತನ್ನದೇ ಆದ ದುಃಖ ಬೇರೆ. ತಾನೊಬ್ಬನೇ ಬಲ್ಲ ಸುದ್ದಿಯನ್ನು ಅವಳಿಗೆ ಹೇಳದೆ ಅವಳೊಂದಿಗೆ ತಾನು ಎಂಥ ಪಾಪ ಆಚರಿಸಿದೆನು. ಅವನು ಅವಳನ್ನು ಮೇಲಕ್ಕೆ ಎತ್ತಿ ಬದಿಗೆ ಸರಿಸಿದನು. ಅವನ ಕೌರ್ಯದ ಭಾವನೆಯು ಏರುತ್ತಲೇ ಹೋಯಿತು. ಅವಳನ್ನು ಚುಂಬಿಸುವ ಕನಸಾದರೂ ಆತ ಹೇಗೆ ಕಂಡನು? ಅವನಿಗೂ ಕಣ್ಣೀರು ತಡೆದುಕೊಳ್ಳುವುದು ಕಷ್ಟವಾಯಿತು. ಎಂದಿನಂತೆ ಇಂದಿಗೂ ತಂದೆಯ ಸದುದ್ದೇಶದ, ಆದರೆ ದೊಡ್ಡ ತಪ್ಪಿನ ಧೋರಣೆಗೆ ಬಲಿಯಾದ ಈ ಬಡ ಜೀವಿಯ ಈ ಅವಸ್ಥೆಗಿಂತ ದಯನೀಯವಾದ ಸಂಗತಿ ನಿಜವಾಗಿಯೂ ಬೇರೊಂದು ಇರ ಲಾರದು.

ಮೆಲಬರಿಯ ಅತ್ಯಂತ ಆಶ್ವಾಸನೆಯ ಹೊತ್ತಿನಲ್ಲಿಯೂ ವಿಂಟರಬೋರ್ನನಿಗೆ ಒಂದು ಸಂದೇಹ ಇದ್ದೇ ಇತ್ತು. ಯಾವ ಕಾಯಿದೆಯೂ ಹಳೆಯದಿರಲಿ, ಹೊಸದಿರಲಿ,

ಗ್ರೇಸಳನ್ನು ಸಾರ್ವಜನಿಕವಾಗಿ ಬಹಿರಂಗಕ್ಕೆ ಎಳೆಯದೆ ಅವಳ ಮದುವೆಯನ್ನು ರದ್ದು ಮಾಡುವಂತೆ ಇದ್ದಿಲ್ಲ. ಅವಳ ತಂದೆಯ ಪ್ರಮಾಣ ಪತ್ರದ ಮೇಲೆ ಲೆಕ್ಕಣಿಕೆಯ ಒಂದು ಗುರುತು ಅವಳ ವಿವಾಹ ವಿಚ್ಛೇದನಕ್ಕೆ ಸಾಕೆಂದು ಅವಳ ಸೊಗಸಾದ ಕಲ್ಪನೆ. ಅದನ್ನು ತನ್ನ ಮಾತುಗಳಿಂದ ನಾಶಮಾಡಲಿಕ್ಕೆ, ನಿಜವಾಗಿಯೂ ಹೊಸ ಕಾಯಿದೆ ಏನಾಗಿದೆಯೆಂಬ ಬಗೆಗೆ ಅವನಿಗೆ ಸಾಕಷ್ಟು ಪರಿಜ್ಞಾನವಿದ್ದಿಲ್ಲ. ಆದರೂ ಪರಿಸ್ಥಿತಿಯು ಇಷ್ಟೊಂದು ನಿರುಪಾಯದ್ದಾಗಿದೆಯೆಂಬ ಶೋಚನೀಯ ಸಂಗತಿ ಅವನಿಗೆ ಹೊಳೆದಿದ್ದಿಲ್ಲ.

ಬಡ ಗ್ರೇಸಳಿಗೆ ಬರೆ ಒಂದು ಆಲಿಂಗನಕ್ಕಾಗಿ ತಾನು ಬಹಳ ಉದ್ವೇಗ — ಉದ್ರೇಕಗೊಂಡೆನೆಂದು ಅನಿಸಿರಬೇಕು. ಹಾಗೆ ಆ ಆಲಿಂಗನವೂ ಕಾಲದ ಮರವೆ ಆಗುವಷ್ಟು ದೀರ್ಘವಾಗಿತ್ತು. ಆದರೂ ಅವನ ಈಗಿನ ಗಾಂಭೀರ್ಯವನ್ನು ಕಂಡು ಆಕೆ ತಾನೇ ಶಾಂತಳಾದಳು.

'ನನಗೆ ಸಂತೋಷವೆನಿಸುತ್ತದೆ — ನಾವು ಮತ್ತೆ ಈಗ ಗೆಳೆಯರಾಗಿ ಬಿಟ್ಟೆವು'. ತನ್ನ ಕಂಬನಿಯೊಳಗಿಂದಲೂ ಮುಗುಳುನಗುತ್ತ ಅವಳು ಅಂದಳು, 'ಜೈಲ್ಸ, ನೀನು ಈಗ ತೋರಿದ್ದರ ಅರ್ಧದಷ್ಟು ಧೈರ್ಯ ನಾನು ಮದುವೆ ಯಾಗುವ ಮುಂಚೆ ತೋರಿದ್ದರೆ, ಹೀಗೆ ಎರಡನೆಯ ಸಲಕ್ಕಿಂತ ಮೊದಲನೆಯ ಸಲವೆ ನನ್ನನ್ನು ಎತ್ತಿಕೊಂಡೇ ಹೋಗಿಬಿಡುತ್ತಿದ್ದಿ. ನಾವು ನಿಜವಾಗಿಯೂ ಮದುವೆ ಯಾದರೆ, ನಿನ್ನನ್ನು ಹೀಗೆ ಸ್ವಲ್ಪ ಉತ್ತೇಜನಗೊಳಿಸಿದೇನೆಂದು ನೀನು ನನ್ನ ಬಗೆಗೆ ಕೆಟ್ಟದ್ದು ಭಾವಿಸಲಿಕ್ಕಿಲ್ಲವೆಂದು ಆಶಿಸುತ್ತೇನೆ. ಆದರೆ ನಾನೇನು ಮಾಡಲಿ? ನನ್ನ ಅಪ್ಪ ತೀರ ಅಧೀರ, ನಿನಗೆ ಗೊತ್ತು. ಅವನ ವಯಸ್ಸು, ದೌರ್ಬಲ್ಯಗಳೂ ಹೆಚ್ಚಿ ದಂತೆ ಅವನ ಅಧೀರತೆ ಇಷ್ಟು ಹೆಚ್ಚಿದೆ, ತಾನು ತಿರುಗಿಬರುವಷ್ಟರೊಳಗೆ ನಾವು ಇಬ್ಬರೂ ತುಸು ಮುಂದರಿದದ್ದು ನೋಡಬೇಕೆಂದು ಅವನ ಇಚ್ಛೆ. ಅದೊಂದೆ ನನಗೆ ನಿಮಿತ್ತ'.

ಇದೆಲ್ಲ ಮಾತು ವಿಂಟರಬೋರ್ನನಿಗೆ ಸವಿಯಾಗುವುದರ ಬದಲು ಇನ್ನಿಷ್ಟು ಕಟುವಾಯಿತು. ಕಳವಳದ್ದಾಯಿತು. ತಂದೆಯ ಊಹಾಪೋಹಗಳನ್ನು ಅವಳು ಅಷ್ಟೊಂದು ಹೇಗೆ ನಂಬಿದಳು? ಸತ್ಯವನ್ನು ಅವಳಿಗೆ ಹೇಗೆ ಅರುಹಬೇಕು ಮತ್ತು ತಾನು ನಾಚಿಕೆ ಪಟ್ಟುಕೊಳ್ಳಬೇಕು? ಎಂಬುದೇ ಅವನಿಗೆ ತೋಚಲಿಲ್ಲ. ಆದಾಗ್ಯೂ ಅದನ್ನು ಮಾಡಲೇಬೇಕೆಂದು ಅವನಿಗೆ ಅನಿಸಿತು.

ಆದರೆ ಈ ಪ್ರಕಟಣೆಯ ಬಗೆಗೆ ಅವಸರಪಡುವುದೂ ಅವನಿಗೆ ಮೀರಿದ ಮಾತು. ಅವರಿಬ್ಬರ ನಡುವೆ ಆರಂಭವಾದ ಪ್ರಿಯವಾದಗಳು, ಮುದ್ದು ಮಾತು ಗಳು, ಅವರು ನಡೆಯುವಾಗ ಮುಂದರಿದವು. ಮತ್ತು ಅವಳ ಕಣ್ಣು ತೆರೆಯುವ ಕೆಲಸಕ್ಕೆ ಆತ ಅಣಿಯಾಗುವತನಕ ಹೊತ್ತು ಸಾಕಷ್ಟು ಇಳಿದಿತ್ತು.

'ನಾವು ತಪ್ಪಿರಬಹುದು' ಆತ ಅಂಜುತ್ತಲೇ ಆರಂಭಿಸಿದನು, 'ನಾವು ಇಲ್ಲಿ

ಹಿಂಟಾಕಿನಲ್ಲಿಯೋ ಉಳಿದಾಗ ಅದೆಲ್ಲ ಸುಸೂತ್ರ ಕೂಡಿಬರುವದೆಂದು ಭಾವಿಸುವಲ್ಲಿ ನಾವು ತಪ್ಪಿರಬಹುದು. ನನಗೇನು ಖಚಿತ ಗೊತ್ತಿಲ್ಲ. ಆದರೆ ಈ ಹೊಸ ಕಾನೂನಿನಲ್ಲಿಯೂ ಮುಂದಿ ಸಾರ್ವಜನಿಕವಾಗಿ ಕೋರ್ಟಿನಲ್ಲಿ ಕಾಣಿಸಿಕೊಳ್ಳಬೇಕಾಗ ಬಹುದು ಮತ್ತು ಅಲ್ಲಿ ಏನಾದರೂ ತೊಡಕು ಎದ್ದರೆ ಮತ್ತು ನಾವು ಮದುವೆ ಯಾಗುವುದೇ ಶಕ್ಯವಾಗದಿದ್ದರೆ—'.

ಅವಳ ಕೆನ್ನೆಗಳು ನಿಧಾನವಾಗಿ ರಕ್ತಹೀನವಾದವು 'ಓ ಜೈಲ್ಸ' ಅವಳೆಂದಳು, ಅವನ ಭುಜವನ್ನು ಹಿಡಿದುಕೊಂಡು, 'ನೀನು ಏನನ್ನೋ ಕೇಳಿರುವಿ. ಏನು ನನ್ನ ಅಪ್ಪ ಅಲ್ಲಿ ಈಗಲೆ ಈ ವಿಷಯು ಇತ್ಯರ್ಥಗೊಳಿಸಲಾರನೇ? ನಿಜವಾಗಿಯೂ ಅವನು ಹಾಗೆ ಮಾಡಿರಬೇಕಷ್ಟೆ? ಓ ಜೈಲ್ಸ, ಜೈಲ್ಸ ನನ್ನನ್ನು ಮೋಸಗೊಳಿಸಬೇಡ. ನಿನಗೆ ಹೀಗೆಲ್ಲ ಮಾಡಲು ಬಿಟ್ಟು ನಾನೀಗ ಎಂಥ ಭಯಂಕರ ಪೇಚಿನಲ್ಲಿ ಇದ್ದೇನೆ?'

ಎಷ್ಟೇ ಪ್ರಯತ್ನಪಟ್ಟರೂ ಆತ ಅವಳಿಗೆ ಹೇಳಲಾರದಾದನು. ಅವನ ಮರ್ಯಾದೆಯಲ್ಲಿ ಆತ್ಮಗೌರವದಲ್ಲಿ ಅವಳಿಟ್ಟ ನಿರ್ಭರ ಅವ್ಯಕ್ತ ವಿಶ್ವಾಸವು ಅವನನ್ನು ದುರ್ಬಲನನ್ನಾಗಿ ಮಾಡಿತು. 'ನಾನು ನಿನಗೆ ತಿಳಿಸಲಾರೆ' ಆತ ಪಿಸುಗುಟ್ಟನು. ಅವನ ದನಿಯೂ ಅವರ ಕಾಲ್ಕೆಳಗಿನ ತರಗೆಲೆಗಳ ಸದ್ದಿನಷ್ಟೇ ಸಣ್ಣದಾಯಿತು. 'ನಿನ್ನ ತಂದೆ ಇನ್ನು ಬೇಗನೆ ಇಲ್ಲಿ ಬರುವನು. ನಮಗೆ ಗೊತ್ತಾಗುವುದು. ನಿನ್ನನ್ನು ನಾನು ಮನೆಗೆ ಮುಟ್ಟಿಸುತ್ತೇನೆ'.

ಅವಳು ಅವನಿಗೆ ಅನಿರ್ವಚನೀಯವಾಗಿ ಪ್ರಿಯಳಾಗಿದ್ದಳು. ಆದರೂ ಅವಳಿಗೆ ಆನಿಸಿಕೊಳ್ಳಲು ತನ್ನ ಭುಜವನ್ನು ಆತ ಅತ್ಯಂತ ಸಂಕೋಚದಿಂದ ಕೊಟ್ಟನು. ಕೊಡುವಾಗ ಆತ ತನ್ನ ಕೊನೆಯ ಮಾತನ್ನು ತಿದ್ದಿಕೊಂಡನು 'ನಿನ್ನನ್ನು ನಿಮ್ಮ ಮನೆಯ ದಾರಿಯ ತನಕವಾದರೂ ಒಯ್ಯುತ್ತೇನೆ'.

ಹೀಗೆ ಅವರಿಬ್ಬರೂ ಜತೆಯಾಗಿ ಮುಂದೆ ನಡೆದರು. ಗ್ರೇಸಳು ಸುಖ ಮತ್ತು ಸಂದೇಹಗಳ ನಡುವೆ ಕಂಪಿಸುತ್ತಿದ್ದಳು. ಅವಳ ಮನೆಯ ದಾರಿ ಕೆಲವೇ ಮಿನಿಟಿಗೆ ಬರುತ್ತಿತ್ತು. ಅವರು ಅದಕ್ಕೆ ಪೂರ್ತಿ ಇಳಿದಿದ್ದಿಲ್ಲ, ಆಗಲೆ ಅವರ ಬೆಂಗಡೆ ಒಂದು ದನಿ ಕೂಗಿತು, 'ಆ ಭುಜವನ್ನು ಹಿಂದೆಗೆದುಕೊ'.

ಒಂದು ಕ್ಷಣ ಅವರು ಅದನ್ನು ಗಮನಿಸಲಿಲ್ಲ. ಆದರೆ ಆ ದನಿ ಹೆಚ್ಚು ದೊಡ್ಡದಾಗಿ ಗಡುಸಾಗಿ ಅದನ್ನು ಕೂಗಿತು: 'ಹಿಂದೆಗೆ, ಆ ಭುಜವನ್ನು'.

ಅದು ಮೆಲಬರಿಯ ದನಿಯಾಗಿತ್ತು. ಅವರು ಕಲ್ಪಿಸಿದ್ದಕ್ಕಿಂತ ಬೇಗನೇ ಆತ ಮರಳಿದ್ದನು. ಮತ್ತು ಈಗ ಅವರನ್ನು ಸಂಧಿಸಿದ್ದನು. ಎರಡನೆಯ ಆಜ್ಞೆ ಕೇಳಿದ ಕ್ಷಣವೆ ಗ್ರೇಸಳ ಕೈಯು ಮಿಂಚಿನಂತೆ ಹಿಂದೆಗೆದಾಗಿತ್ತು.

'ನಿಮ್ಮನ್ನು ನಾನು ದೂಷಿಸೂದಿಲ್ಲ' ಆತ ಅಂದನು.—ಚಾಟಿಯ ಪೆಟ್ಟು ತಿಂದು ಕುಸಿದು ಹೋದ ದನಿಯ ವಾಕ್ಸರಣಿಯಲ್ಲಿ. 'ಆದರೆ ನೀವಿಬ್ಬರು ಇನ್ನು

ಮೇಲೆ ಹೀಗೆ ಜತೆಗೂಡಿ ತಿರುಗಕೂಡದು — ನಾನು ಚಕಿತನಾಗಿದ್ದೇನೆ. — ನಾನು ವಂಚಿತನಾಗಿದ್ದೇನೆ — ಜೈಲ್ಸ ನನಗೆ ಏನೂ ಹೇಳಬೇಡ, ಹೊರಟು ಹೋಗು.'

ವಿಂಟರಬೋರ್ನನಿಗೆ ಸತ್ಯಸಂಗತಿ ಆ ಮೊದಲೇ ಗೊತ್ತಿತ್ತು — ಎಂಬ ಸಂಗತಿ ಅವನಿಗೆ ಗೊತ್ತಿದ್ದಿಲ್ಲವೆಂಬುದು ಸ್ಪಷ್ಟವೇ ಇತ್ತು. ಮತ್ತು ಜೈಲ್ಸನೂ ಅದನ್ನು ಅವನೊಡನೆ ಚರ್ಚಿಸಲು ಅಲ್ಲಿ ನಿಲ್ಲಲಾರನು. ಆ ತರುಣ ಹೊರಟುಹೋದ ಮೇಲೆ ಮೆಲಬರಿ ಮಗಳನ್ನು ಮನೆಯೊಳಗೆ ಒಯ್ದನು — ತಾನು ಕಚೇರಿಯಾಗಿ ಬಳಸುವ ಕೋಣೆಗೆ ಒಯ್ದನು. ಅಲ್ಲಿ ಆತ ಕೂತು ಇದುರಿನ ಕಣಗಳ ಕೈಮೋಜಿನ ಇಳುಕಲ ಮೇಲೆ ಬಗ್ಗಿದನು. ಅವಳ ಬಿದರು ಕಂಗಳ ನೋಟ ಅವನ ಮೋರೆಯಲ್ಲಿಯೇ ನಟ್ಟಿತ್ತು.

ಸ್ವಲ್ಪ ನಿಧಾನಿಸಿಕೊಂಡ ಮೇಲೆ ಮೆಲಬರಿ ಅಂದನು. 'ನೀನು ಎಂದಿನಂತೆಯೇ ಇಂದೂ ಫಿಟ್ಜಪಿಯರ್ಸನ ಹೆಂಡತಿ. ನಾನೇ ಮೋಸಹೋಗಿದ್ದೆ. ಆತ ನಿನಗೆ ಇನ್ನೂ 'ಸಾಕಷ್ಟು' ಅಪಾಯ ಮಾಡಿಲ್ಲ. ನೀನು ಇನ್ನು ಅವನು ಬಾ ಅಂದರೆ ಬರಲು, ಹೋಗೆಂದರೆ ಹೋಗಲು ವಿಧೇಯಳು.'

'ಹಾಗಾದರೆ ಹಾಗೆಯೇ ಆಗಲಿ ಅಪ್ಪಾ', ಅವಳು ದುಃಖದಲ್ಲಿಯೂ ತುಂಬಿ ಅಭಿಮಾನದಿಂದ ಅಂದಳು, 'ನಾನು ಅದನ್ನು ತಾಳಬಲ್ಲೆ. ನನಗೆ ತೀರ ಕಳವಳ ಗೊಳಿಸುವುದು ನಿನ್ನ ಕಷ್ಟ'. ಅವಳು ಅವನ ಮೇಲೆ ಬಾಗಿದಳು. ಅವನ ಕುತ್ತಿಗೆಯ ಸುತ್ತು ತನ್ನ ಭುಜವನ್ನು ಇಟ್ಟಳು. ಇದರಿಂದ ಮೆಲಬರಿಯ ಕಷ್ಟ ಇನ್ನಿಷ್ಟು ಹೆಚ್ಚೇ ಆಯಿತು.

'ನನಗೆ ಏನೆಲ್ಲ ಬಂದರೂ ನಾನು ಅದನ್ನು ಲೆಕ್ಕಿಸುವುದಿಲ್ಲ.' ಗ್ರೇಸ ಮುಂದರಿದಳು. 'ನಾನು ಯಾರ ಹೆಂಡತಿ ಅಹುದೋ ಯಾರ ಹೆಂಡತಿ ಅಲ್ಲವೋ, ನಾನು ನಿಜವಾಗಿಯೂ ಜೈಲ್ಸನನ್ನು ಪ್ರೀತಿಸುತ್ತೇನೆ. ಅದು ನನ್ನ ಅಂಕೆ ಮೀರಿದ ಮಾತು. ವಸ್ತುಸ್ಥಿತಿ ಖಚಿತವಾಗಿ ಹೇಗಿರುವದೆಂಬುದು ಗೊತ್ತಾಗಿದ್ದರೆ, ಎಷ್ಟು ದೂರಕ್ಕೆ ನಾನು ಹೋಗಬಹುದಿತ್ತೋ ಅದಕ್ಕೂ ದೂರ ನಾನು ಅವನೊಂದಿಗೆ ನಡೆದಿದ್ದೇನೆ. ಆದರೆ ನಿನ್ನನ್ನು ನಾನು ದೂಷಿಸುವುದಿಲ್ಲ.'

'ಹಾಗಾದರೆ ಜೈಲ್ಸ ನಿನಗೆ ಹೇಳಲಿಲ್ಲವೆ ?' ಮೆಲಬರಿ ಅಂದನು.

'ಇಲ್ಲ' ಅವಳೆಂದಳು. 'ಅವನಿಗೆ ಗೊತ್ತಾಗಿರಲಿಕ್ಕಿಲ್ಲ. ನನ್ನೊಡನೆ ಅವನ ನಡತೆಯೆ ಸಿದ್ಧಮಾಡಿತು — ಅವನಿಗೆ ಗೊತ್ತಿಲ್ಲವೆಂದು'.

ಅವಳ ತಂದೆ ಇನ್ನು ಹೆಚ್ಚು ಏನೂ ಆಡಲಿಲ್ಲ. ಗ್ರೇಸಳು ತನ್ನ ಕೋಣೆಯ ಏಕಾಂತಕ್ಕೆ ತೆರಳಿದಳು.

ಅವಳ ಭಾರವಾದ ಅಸ್ವಸ್ಥತೆ ಬಹಳ ರೂಪಗಳನ್ನು ತಾಳಿತು. ಕೆಲಕಾಲ ಅವಳು ಈ ಪ್ರಾಮುಖ್ಯದ ಸಂಗತಿಯನ್ನು ಬದಿಗೊತ್ತಿ, ಜೈಲ್ಸನೊಂದಿಗೆ ತನ್ನ ತೀರ ಸ್ವಚ್ಛಂದ ನಡತೆಯ ಬಗೆಗೆ ವಿಚಾರ ಮಾಡಿದಳು. ಅವನ ಪ್ರಣಯ ಚೇಷ್ಟೆ,

ಸವಿಯಿದ್ದಷ್ಟೇ ಸಂಕ್ಷೇಪವಿತ್ತು. ಆದರೆ ಅವನು ಆಲೋಚನೆ ಮಾಡಿದಾಗ ತನ್ನನ್ನು ಮುಂದುಡುಕಿಗಾಗಿ ದೂಷಿಸಬಹುದೆ? ಈಗ ನಡೆದ ಹಾಗೆ ನಡೆದುಕೊಳ್ಳುವಂಥ ಸ್ಥಾನದಲ್ಲಿ ತಾನು ಇದ್ದೆನೆಂದು ಕಲ್ಪಿಸುವಷ್ಟು ಬೋಳೇ ತಾನು ಹೇಗೆ ಆದೆನು? ಹೀಗೆ ಅವಳು ಮನಸ್ಸಿನಲ್ಲಿಯೆ ತನ್ನ ಅಜ್ಞಾನವನ್ನು ಮುಗ್ಧತೆಯನ್ನು ಹಳಿದುಕೊಂಡಳು. ಆದರೂ ಅವಳ ಹೃದಯದ ಕೇಂದ್ರದಲ್ಲಿ ಗರ್ವದಲ್ಲಿ ಅದನ್ನು ತುಸು ಹರಸಿದಳು— ಕ್ಷಣಿಕವಾದರೂ ಅದು ತಂದುಕೊಟ್ಟ ಅನುಭವಕ್ಕಾಗಿ.

೪೦

ಈ ಘಟನೆಗಳಲ್ಲಿ ತೊಡಗಿದ ಜನರ ಬಾಳು ಕೆಲಕಾಲ ಹತ್ತಿಕ್ಕಿದಂತೆ ಕಟ್ಟಿಟ್ಟಂತೆ ಕಂಡಿತು. ಗ್ರೇಸಳು ಮನೆಯ ಹೊರಗೆ ಕಾಣಿಸಿಕೊಳ್ಳುವದೆ ಅಪರೂಪವಾಯಿತು. ಮನೆಯ ತೋಟದ ಹೊರಗಂತೂ ಇಲ್ಲವೇ ಇಲ್ಲ; ಏಕೆಂದರೆ ಅವಳು ಜೈಲ್ಸ ವಿಂಟರಬೋರ್ನನನ್ನು ತಾನು ಸಂಧಿಸಬಹುದೆಂದು ಹೆದರಿದ್ದಳು; ಅದು ಅವಳು ತಾಳಲಾರಳು.

ಈ ಸ್ವಯಂಭೂ ಸಂನ್ಯಾಸಿನಿಯ ಮನೆಯೊಳಗಿನ ಚಿಂತಾಮಯ, ಚಿಂತನ ಮಗ್ನ ಅಸ್ತಿತ್ವವು ಹೀಗೆಯೇ ಅನಿಯಮಿತಕಾಲದವರೆಗೆ ಮುಂದರಿಯುವಂತೆ ಕಂಡಿತು. ಅವಳು ಒಂದು ಸಂಗತಿಯನ್ನು ಅರಿತಿದ್ದಳು: ಅವಳು ಹಿಂದೆ ಕಲ್ಪಿಸಿದ ತನ್ನ ಪರಿಸ್ಥಿತಿಯು ನಿಜವಾಗುವದಕ್ಕೆ ಒಂದೇ ಒಂದು ಶಕ್ಯತೆ ಇತ್ತು. ಅವಳ ಗಂಡನ ಅನುಪಸ್ಥಿತಿಯು ದೀರ್ಘವಾಗಿ ಅನಿಯಮಿತವಾಗಿ ಮುಂದರಿಯಬೇಕು — ಅವಳಿಂದ ಆತ ಖಚಿತವಾಗಿಯೂ ಅಗಲಿದ್ದಾನೆಂಬುದನ್ನು ಅದು ಸಮರ್ಥಿಸುವಂತೆ ಆಗಬೇಕು. ಆದರೆ ಅವಳು ತನ್ನ ಮನಸ್ಸು ಅಂಥ ವಿಚಾರದಲ್ಲಿ ನಿಲ್ಲಲು ಕೊಡುತ್ತಿದ್ದಿಲ್ಲ. ಅಂಥ ಪರಿಣಾಮಕ್ಕಾಗಿ ಬುದ್ಧಿ ಪೂರ್ವಕವಾಗಿ ಅವಳು ಆಶಿಸುತ್ತಿರುವುದು ಅದಕ್ಕೂ ಕಡಮೆ. ವಿಂಟರಬೋರ್ನನ ಬಗೆಗೆ ಅವಳ ಪ್ರೀತ್ಯಾದರಗಳು, ಅವು ಪ್ರಕಟವಾದೊಡನೆ ತಿಂದ ಪೆಟ್ಟಿನಿಂದಾಗಿ, ಇನ್ನು ತರಲ-ವಿರಲವಾಗಿ, ಜೀವನದೊಂದಿಗೆ ವ್ಯವಹಾರದೊಂದಿಗೆ ಏನೂ ಸಂಬಂಧವಿಲ್ಲದ ಆಕಾಶದಂಥ ದಿವ್ಯ ಭಾವನೆಯಾಗಿ ಮಾರ್ಪಟ್ಟಿದ್ದವು.

ಜೈಲ್ಸನ ಮಟ್ಟಿಗೆ ಹೇಳುವುದಾದರೆ, ಅವನು ದೂರದ ತನ್ನ ಗುಡಿಸಿಲಿನಲ್ಲಿ ಬಿದ್ದಿದ್ದನು — ಅಥವಾ ಕುಳಿತಿದ್ದನು. ಕೆಲ ಕಾಲದಿಂದ ಅವನನ್ನು ಆವರಿಸಿದ ಒಂದು ಜ್ವರದಂಥ ಅಸ್ವಾಸ್ಥ್ಯವು, ಕಳೆದ ಚಳಿಗಾಲದಲ್ಲಿ ಆತನಿಗೆ ಬಡಿದ ಒಂದು ಚಳಿ ನಡುಕದ ಫಲವು, ಈಗ ಅವನ ಆಶೆಗಳು ನೆಲಸಮವಾದಾಗ, ಹೊಸ ನಂಜಿನ ಜೋರನ್ನು

ಪಡೆದಂತೆ ಇತ್ತು. ಆದರೆ ಅವನ ಈ ಜಾಡ್ಯದ ಸುಳಿವು ಯಾವ ಪ್ರಾಣಿಗೂ ಇದ್ದಿಲ್ಲ. ಮತ್ತು ತನ್ನ ಸ್ಥಿತಿಯು, ವೈದ್ಯನಿಗೆ ಕರೆ ಕಳುಹಿಸುವಷ್ಟು ಗಂಭೀರವೆಂದೂ ಆತ ಭಾವಿಸಿದ್ದಿಲ್ಲ. ಕೆಲವು ದಿನಗಳ ನಂತರ ಆತ ಸುಧಾರಿಸಿಕೊಂಡನು ; ದೊಡ್ಡ ಓವರ್ ಕೋಟನ್ನು ಸುತ್ತಿಕೊಂಡು ಆತ ಮನೆಯಲ್ಲಿಯೇ ಅತ್ತಿತ್ತ ಸುಳಿದಾಡತೊಡಗಿದನು. ತನ್ನ ಸಾದಾ ಜೀವನಾವಶ್ಯಕತೆಗಳಿಗೆ ತನ್ನ ಕೈಯಿಂದಲೇ ಗಮನ ಪೂರೈಸ ಹತ್ತಿದನು.

ವಸ್ತು ಸ್ಥಿತಿಯು ಹೀಗೆ ಇರುವಾಗ, ಗ್ರೇಸಳ ಮಲೆತ ಮಡುವಿನಂಥ ಬದುಕಿನ ಸ್ತಬ್ಧತೆಯು, ಒಂದು ಚಿಲುಮೆ ಚಿಮ್ಮಿ ಬಂದು ಚಲ ವಿಚಲವಾಯಿತು. ಅವಳಿಗೆ ಫಿಟ್ಸ್‌ಪಿಯರ್ಸನ ಒಂದು ಪತ್ರವು ಬಂದಿತು.

ಅದು ಅತಿ ಸೌಮ್ಯ ಭಾಷೆಯಲ್ಲಿ ಬರೆದಿದ್ದರೂ ಆಶಯದಲ್ಲಿ ಅತಿ ವಿಸ್ಮಯ ಕಾರಿಯಾದ ಪತ್ರವಾಗಿತ್ತು. ಅವನ ಅನುಪ ಸ್ಥಿತಿಯಲ್ಲಿ, ಗ್ರೇಸಳು ಅವನನ್ನು ಸಹನೆ ಯಿಂದ, ಅವನೊಂದಿಗಿನ ತನ್ನ ಸಂಬಂಧವನ್ನು ಸ್ವಸ್ಥ ಚಿತ್ತದಿಂದ ಪರಿಭಾವಿಸಲು ಹತ್ತಿದ್ದಳು. ಅವನ ಉಪಸ್ಥಿತಿಯು ಎಷ್ಟು ತಾಪದಾಯಕವಾಗಬಹುದೆಂಬುದನ್ನು ಅವಳು ಮರೆತಿದ್ದಳು. ಈಗ ಆತ ಸಂಕ್ಷಿಪ್ತವಾಗಿ ಏನೂ ಸೋಗಲಾಡಿತನವಿಲ್ಲದೆ ಬರೆದಿದ್ದನು ; ಯಾವ ನೆವಗಳನ್ನೂ ಒಡ್ಡದೆ ಆತ ತಿಳಿಸಿದ್ದನು : ತಾನು ತೀರ ಏಕಾಂಗಿ ಯಾಗಿ ಜೀವಿಸುತ್ತಿದ್ದೇನೆ ; ತಾವಿಬ್ಬರು ಈಗ ಮತ್ತೆ ಒಟ್ಟಾಗಿ ಬಾಳಬೇಕೆಂದು ತನಗೆ ಅನಿಸುತ್ತಿದೆ — ಆಕೆ ತನ್ನನ್ನೂ ಕ್ಷಮಿಸಲು ಮನಸ್ಸು ಮಾಡಿದರೆ. ಆದ್ದರಿಂದ ಅವನು ಬ್ರಿಟಿಷ್ ಕೊಲ್ಲಿಯನ್ನು ದಾಟಿ ಒಂದು ನಿರ್ದಿಷ್ಟ ದಿನ ಹಡಗದಲ್ಲಿ ಬಡವರೌಥಿಗೆ ಬಂದು ತಲ್ಪುವವನಿದ್ದೇನೆ. ಆ ದಿನವು, ಆ ಪತ್ರವನ್ನು ಆಕೆ ಓದಿದ ಮೂರು ದಿನದಾಚೆಗೆ ಇದೆಯೆಂದು ಅವಳು ಕಂಡುಕೊಂಡಳು.

ತಾನು ಹಿಂಟಾಕಿಗೆ ಬರುವುದಿಲ್ಲ. ಅದಕ್ಕೆ ಕಾರಣಗಳು ಸ್ಪಷ್ಟವೇ ಇವೆ. ಅವಳಿ ಗಿಂತ ಅವಳ ತಂದೆಯೇ ಅದನ್ನು ಹೆಚ್ಚು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಅದಕ್ಕೆ ಬದಲಾಗಿ ಅವಳೇ ಹಡಗು ಬಂದಾಗ ಅದನ್ನು ಸಂಧಿಸಲಿಕ್ಕೆ ಬಂದರಿನ ಧಕ್ಕೆಯ ಮೇಲೆ ಬರತಕ್ಕದ್ದು — ಸುಮಾರು ನಡು ರಾತ್ರೆಗೆ ಅರ್ಧ ಗಂಟೆ ಮೊದಲು. ಆಗ ಜತೆಗೆ ಸಾಕಷ್ಟು ಸಾಮಾನು ತರತಕ್ಕದ್ದು. ಅಲ್ಲಿ ಅವನನ್ನು ಕೂಡಿ ಅದೇ ವೇಳೆಗೆ ಆ ಬಂದರನ್ನು ಬಿಟ್ಟು ಹೊರಡುವ ಜೋಡಿ ಹಡಗದಲ್ಲಿ ಅವನೊಂದಿಗೆ ನಡೆಯತಕ್ಕದ್ದು. ಹೀಗೆ ಆಕೆ ಅವನೊಂದಿಗೆ ಯುರೋಪದಲ್ಲಿ ಅವನು ವಾಸಿಸುತ್ತಿದ್ದ ಸ್ಥಳಕ್ಕೆ ಹೋಗ ತಕ್ಕದ್ದು. ಆ ಸ್ಥಳ ಯಾವದೆಂದು ಆತ ಹೆಸರು ತಿಳಿಸಲಿಲ್ಲ. ಅಂದರೆ ಆ ನೆಲದ ಮೇಲೆ ಎಲ್ಲಿಯೂ ಯಾರಿಗೂ ಕಾಣಿಸಿಕೊಳ್ಳುವ ಉದ್ದೇಶ ಅವನದಿರಲಿಲ್ಲ.

ತ್ರಸ್ತ ಗ್ರೇಸಳು ಆ ಪತ್ರವನ್ನು ತಂದೆಗೆ ಒಯ್ದು ತೋರಿಸಿದಳು. ಆತ ಈಗಿತ್ತ ಲಾಗಿ ಬೇಸಿಗೆಯ ಆಗಸ್ಟಿಗೆಯ ಕೋಣೆಯ ಬೆಂಕಿ ಇಲ್ಲದ ಮೂಲೆಯಲ್ಲಿ ದೀರ್ಘ ತಾಸು ಗಳನ್ನು ಕಳೆಯುತ್ತಿದ್ದನು. ಆಗಲೂ ಚಳಿಗಾಲವೇ ಇತ್ತೋ ಎಂಬಂತೆ ಅವನ ಪಕ್ಕ ದಲ್ಲಿಯೆ ಸಿಡರ ಮದ್ಯದ ಹೂಜಿ ಇರುತ್ತಿತ್ತು. ಆದರೆ ಆತ ಅದರ ರುಚಿ ನೋಡಿದ್ದೇ

ಇರುತ್ತಿದ್ದಿಲ್ಲ; ಅದರ ಮೇಲೆ ದೂಳಿಯ ಥರ ಕೂತಿತ್ತು. ಪತ್ರವನ್ನು ಓದಿದ ಮೇಲೆ ಆತ ತಲೆ ಎತ್ತಿ ನೋಡಿದನು.

'ನೀನು ಹೋಗಲಾರೆ' ಆತ ಅಂದನು.

'ನನಗೂ ಅನಿಸಿತ್ತು, ನಾನು ಹೋಗಲಾಗದೆಂದು' ಅವಳು ಉತ್ತರವಿತ್ತಳು. 'ಆದರೆ ನೀನೇನು ಅನ್ನುವಿಯೋ ನನಗೆ ಗೊತ್ತಿದ್ದಿಲ್ಲ'.

ಆತ ಇಂಗ್ಲೆಂಡದಲ್ಲಿಯೇ ಬಂದು ಉಳಿಯುವವನಿದ್ದರೆ; ಅದೂ ಇಲ್ಲಿಗೆ ತೀರ ಹತ್ತಿರವಲ್ಲ. ಆದರೆ ಒಳ್ಳೆ ಮರ್ಯಾದಸ್ಥನಂತೆ ಬಾಳುವವನಿದ್ದರೆ, ಆಗ ನೀನು ಅವನ ಹತ್ತಿರ ಹೋಗಿ ಇರಬೇಕೆಂದು ಅವನು ಅಪೇಕ್ಷಿಸಿದರೆ, ಆಗ ನಾನು ಅವನಿಗೆ ವಿರೋಧ ಮಾಡುತಿದ್ದೆನೋ ಇಲ್ಲವೋ ಖಚಿತವಾಗಿ ಹೇಳಲಾರೆ; ಮೆಲಬರಿ ಪಿಸುಗುಟ್ಟಿದನು. 'ನಿಮ್ಮಿಬ್ಬರನ್ನು ಸಭ್ಯ-ಶಿಷ್ಟತೆಯ ಮಟ್ಟದಲ್ಲಿ ಒಂದು ಒಪ್ಪಂದವಾದ ರೀತಿಯಲ್ಲಿ ಇಡಲು ನಾನು ಎಂಥ ಕೊರತೆಯನ್ನು ಅನುಭವಿಸುತಿದ್ದೆನು. ಆದರೆ ನೀನು ವಿದೇಶಕ್ಕೆ ಹೋಗುವುದು, — ನನ್ನ ಸಮ್ಮತಿಯಿಂದ ಅದು ಸರ್ವಥಾ ಸಾಧ್ಯವಿಲ್ಲ'.

ಈ ಪ್ರಶ್ನೆ ಈ ದಿನಕ್ಕೆ ಅಲ್ಲಿಯೇ ಅಷ್ಟಕ್ಕೇ ಉಳಿಯಿತು. ವಿಳಾಸ ಕೊಡದಿದ್ದ ಕಾರಣ ಗ್ರೇಸಳು ಗಂಡನಿಗೆ ಪ್ರತ್ಯುತ್ತರ ಬರೆದು ತಿಳಿಸುವಂತೆಯೂ ಇದ್ದಿಲ್ಲ. ಮರು ದಿನ ಬಂದಿತು ಅದರ ಮುಂದಿನ ದಿನ ಬಂದಿತು. ಮತ್ತು ಅವಳು ಭೆಟ್ಟಿಯಾಗಬೇಕೆಂದು ಅವನು ಬೇಡಿಕೊಂಡ ಸಂಜೆಯೂ ಬಂದಿತು. ಆ ಇಡಿಯ ಸಂಜೆ ಆಕೆ ತನ್ನ ಕೋಣೆಯ ನಾಲ್ಕು ಗೋಡೆಗಳ ಒಳಗೇ ಉಳಿದಳು.

ಅವಳಿಗೆ ಆಗುತ್ತಿರುವ ಛಳದ ಪೀಢೆ ಏನು ಅನಾಹುತ ಆಗಲಿದೆಯೋ ಎಂಬ ಭಾರವಾದ ಸಂಶಯ ಭಾವನೆ ಒಂದು ಕಗ್ಗತ್ತಲೆಯ ಬುರುಕಿಯಂತೆ ಮೆಲಬರಿ ಕುಟುಂಬ ವನ್ನು ಕವಿದು ನಿಂತಿತು. ಅವರು ಬಹುತೇಕ ಪಿಸುದನಿಯಲ್ಲಿಯೇ ಮಾತಾಡುತಿದ್ದರು. ಫಿಟ್ಝಪಿಯರ್ಸ ಇನ್ನೇನು ಮಾಡಬಹುದೆಂದು ಅವರಿಗೆ ದಿಗಿಲು. ಅವಳು ಬಂದರಕ್ಕೆ ಬಂದಿಲ್ಲವೆಂಬುದನ್ನು ಕಂಡು ಆತ ಫ್ರಾನ್ಸಿಗೆ ಹಿಂದಿರುಗಿ ಹೋಗುವನೆಂದು ಪ್ರತಿ ಯೊಬ್ಬರದೂ ಹಂಬಲ. ಗ್ರೇಸಳಂತೂ ಅವನಿಗೆ ಅತ್ಯಂತ ಅನುಕಂಪೆಯ ಮಾತಿನಲ್ಲಿ ಬರೆಯಲು ಸಿದ್ಧ — ಆತ ಅವಳಿಂದ ಒಮ್ಮೆ ದೂರವುಳಿಯಲು ಒಪ್ಪಿದರೆ.

ರಾತ್ರಿ ಕಳೆಯಿತು; ಗ್ರೇಸಳು ಒತ್ತಿಟ್ಟಂತೆ ಬಿಗಿದಿಟ್ಟಂತೆ ಎಚ್ಚರವಾಗಿಯೇ ಉಳಿದಳು. ಅವಳ ತಂದೆ ತಾಯಿ ಬಹಳಷ್ಟು ಪಾಲು ಅದೇ ರೀತಿ. ಮರುದಿನ ಭೆಟ್ಟಿಯಾದಾಗ ಅವರು ಕಳೆಗುಂದಿದ್ದರು, ಬಿಳುಪೇರಿದ್ದರು, ಚಿಂತಾಕ್ರಾಂತರಿದ್ದರು. ಆದರೆ ಯಾರೂ ತಮ್ಮ ವಿಚಾರಗಳಲ್ಲಿ ಸುಳಿದಾಡುತಿದ್ದ ಆ ಒಂದು ವಿಷಯವನ್ನು ಎತ್ತಿ ಮಾತಾಡುತಿದ್ದಿಲ್ಲ. ಮತ್ತು ಅವಳಿಗೆ ಅನಿಸಿತು, ತೀರ ಸ್ವೈರವಾದ ಅವನ ಲಹರಿಯಲ್ಲಿ ಅವನು, ತಾನು ಅವನನ್ನು ಕೂಡಬೇಕೆಂಬ ಕಲ್ಪನೆಯನ್ನು, ಅದು ಮೂಡುತ್ತಿರು ವಾಗಲೆ ಬಿಟ್ಟುಕೊಟ್ಟಿರಬೇಕು.

ಅಷ್ಟರಲ್ಲಿ ಅಕಸ್ಮಾತ್ತಾಗಿ ಕ್ಯಾಸ್ಟರಬ್ರಿಜ್ಜಿನಿಂದ ಬರುತ್ತಿದ್ದ ಒಬ್ಬ ಮನುಷ್ಯನು

ಅವರ ಮನೆಯಲ್ಲಿ ಹೊಕ್ಕು ಸುದ್ದಿ ಕೊಟ್ಟನು — ಫಿಟ್ಜ್ ಪಿಯರ್ಸ್ ಹಿಂಟಾಕಿಗೆ ತನ್ನ ಮನೆಗೆ ಬರುವ ಹಾದಿಯಲ್ಲಿ ಇದ್ದಾನೆ. ಕಿಂಗ್ಸಆರ್ವ್ಸ್ ಹಾಟೇಲಿನಲ್ಲಿ ಆತ ಒಂದು ಸಾರೋಟನ್ನು ಬಾಡಿಗೆಗೆ ಹಿಡಿಯುತ್ತಿದ್ದುದು ಕಂಡು ಬಂದಿತು.

ಈ ಸುದ್ದಿ ಬಂದಾಗ ಗ್ರೇಸ ಮತ್ತು ಅವಳ ತಂದೆ ಇಬ್ಬರೂ ಉಪಸ್ಥಿತರಿದ್ದರು.

'ಈಗ ಆದದ್ದು ಎಷ್ಟೇ ಕೆಟ್ಟದಾದರೂ ಅದನ್ನು ಆದಷ್ಟು ಚೆನ್ನಾಗಿಯೆ ಬಗೆಯ ಬೇಕು. ಈ ಮನುಷ್ಯ ಪಶ್ಚಾತ್ತಾಪ ಪಡುತ್ತಿದ್ದಾನೆ; ಅವನ ಮೂರ್ಖತನದ ಆ ಪಾಲುಗಾರ್ತಿ ಅವನನ್ನು ಬಿಟ್ಟು ಸ್ವಿಟ್ಜರ್ಲಂಡಿಗೆ ಹೋದಳೆಂದು ನಾನು ಕೇಳಿದ್ದೇನೆ. ಆದ್ದರಿಂದ ಅವನ ಬದುಕಿನ ಆ ಪ್ರಕರಣವು ಬಹುಶಃ ಮುಗಿದಂತೆ. ಈ ಆತ ನಿನಗಾಗಿ ಒಂದು ಮನೆಯನ್ನು ಮಾಡುವನಾದರೆ ಗ್ರೇಸ, ನನಗನಿಸುತ್ತದೆ, ನೀನು ಅವನಿಗೆ ಒಲ್ಲೆ ಎನ್ನಬಾರದು. ನಿಜವಾಗಿಯೂ ಈ ಹಿಂಟಾಕದಲ್ಲಿ ಆತ ತನ್ನ ಅಭಿಮಾನಕ್ಕೆ ಪೆಟ್ಟಾಗದೆ ಉಳಿಯಲಾರ. ಆದರೆ ಅದನ್ನೂ ಆತ ಸಹಿಸುವದಾದರೆ ಹಿಂಟಾಕನ್ನೆ ಆತ ಹೆಚ್ಚಾಗಿ ಮೆಚ್ಚುವುದಾದರೆ, ನಮ್ಮ ಮನೆಯ ಆ ಖಾಲಿಯಾದ ಭಾಗವಿದೆ — ಹಿಂದಿನಂತೆಯೇ' ಅಂದನು ಮೆಲಬರಿ.

'ಓ ಅಪ್ಪಾ' ಅಂದಳು ಗ್ರೇಸ, ಬೆರಗಿನಿಂದ ತೀರ ಬಿಳುಪಾಗಿಬಿಟ್ಟು.

'ಏಕಾಗಲೊಲ್ಲದು?' ಆತ ಕೇಳಿದನು ಅವನ ಹಳೆಯ ಮೊಂಡತನ ಮತ್ತೆ ತುಸು ತಲೆದೋರಿ. ಸತ್ಯ ಸಂಗತಿಯೆಂದರೆ ಹಿಂದೆ ತಾನು ಸಿಟ್ಟಿನ ಭರದಲ್ಲಿ ಅವನನ್ನು ವಿಪರೀತ ಕರ್ಕಶವಾಗಿ ನಡೆಯಿಸಿಕೊಂಡನೆಂದು ಮನಗಂಡು, ಅವಳ ಗಂಡನೊಂದಿಗೆ ಅವನು ಇದೀಗ ಹಿಂದಿಗಿಂತ ಹೆಚ್ಚು ಮೆತ್ತಗಾಗಿಯೇ ನಡೆಯುವ ಕಡೆಗೆ ಒಲಿದಿದ್ದಾನು.

'ನಿಜವಾಗಿಯೂ ಇದೇ ಅತ್ಯಂತ ಮರ್ಯಾದಸ್ಥ, ಮಾನಾಸ್ಪದ ಸಂಗತಿ ಯಲ್ಲವೆ?' ಆತ ಮುಂದರಿದನು, 'ಮದುವೆಯಾಗಿಯೋ ಒಂಟಿಯಾಗಿಯೋ ನೀನು ಈಗಿರುವ ಸ್ಥಿತಿ ನನಗೆ ಸೇರುವುದಿಲ್ಲ. ಇದು ನನಗೂ ನೋವುಂಟು ಮಾಡುತ್ತದೆ, ನಿನಗೂ ನೋವು ಉಂಟು ಮಾಡುತ್ತದೆ. ನಮ್ಮ ಮೆಲಬರಿ ಕುಟುಂಬದಲ್ಲಿ ಇಂಥ ಒಂದು ಭಂಡಾಟ ಹಿಂದೆಂದೂ ಆದದ್ದಿಲ್ಲ'.

'ಅವನೀಗ ಒಂದು ತಾಸಿನೊಳಗೇ ಇಲ್ಲಿಗೆ ಬಂದು ಬಿಡುತ್ತಾನೆ' — ಗ್ರೇಸಳು ಪಿಸುಗುಟ್ಟಳು.

ಆ ಕೋಣೆಯಲ್ಲಿ ಕವಿದ ಸಂಜೆಯ ಮಬ್ಬು ಅವಳ ಮೋರೆಯಲ್ಲಿಯ ಹತಾಶೆಯ ದುರ್ದಶೆಯನ್ನು ಅವಳ ತಂದೆ ನೋಡದಂತೆ ಮಾಡಿತು. ಮಿಕ್ಕ ಎಲ್ಲದಕ್ಕಿಂತ ಅವಳಿಗೆ ಸೇರದ ಒಂದು ಸಂದರ್ಭವೆಂದರೆ, ಫಿಟ್ಜ್ ಪಿಯರ್ಸನು ತಿರುಗಿ ಅಲ್ಲಿಯೆ ನೆಲಸುವುದು. 'ಓ ನಾನೊಲ್ಲೆ ನಾನು ಅವನನ್ನು ನೋಡಲೊಲ್ಲೆ', ಅವಳು ಅಂದಳು ಕೆಳಗೆ ಕುಸಿ ಯುತ್ತ. ಅವಳಿಗೆ ಉನ್ಮಾದವೇರಿದಂತೆ ಆಗಿತ್ತು.

'ನೀನೊಲ್ಲೆಯೋ ಏನೆಂದು ಪ್ರಯತ್ನ ಮಾಡಿನೋಡು' ಅವನೂ ವ್ಯಗ್ರ ನಾಗಿಯೇ ಅಂದನು.

‘ಸರಿ, ಸರಿ, ನಾನು ಪ್ರಯತ್ನ ಮಾಡಬಲ್ಲೆ — ಮಾಡುತ್ತೇನೆ’ ಅವಳು ಮುಂದುಗಾಣದೆ ಅಂದಳು. ‘ನಾನು ಪ್ರಯತ್ನ ಮಾಡುವೆನು’ ಎಂದು ಹೇಳಿ ಫಕ್ಕನೆ ಜಿಗಿದೆದ್ದು ಅವಳು ಕೋಣೆಯಿಂದ ಹೊರಬಿದ್ದಳು.

ಅವಳು ಓಡಿ ಒಳಹೊಕ್ಕ ಅವಳ ಕೋಣೆಯ ಕತ್ತಲೆಯಲ್ಲಿ ಮುಂದಿನ ಅರ್ಧ ಗಂಟೆ ಏನೇನೂ ಕಾಣುವಂತೆ ಇದ್ದಿಲ್ಲ. ಆದರೆ ಒಂದು ಮೂಲೆಯಿಂದ ಲಗುಲಗು ಎಳೆದ ಶ್ವಾನದ ಉಬ್ಬಸ ಕೇಳಿಬರುತ್ತಿತ್ತು. ಆಧುನಿಕ ನರಗಳೊಂದಿಗೆ ಪ್ರಾಕೃತ, ಪ್ರಾಥಮಿಕ ಭಾವನೆಗಳು ಸೇರಿದಾಗ, ಅಂಥ ಸಾಹಚರ್ಯದಿಂದ ಅತ್ಯಂತ ವ್ಯಾಕುಲರಾದವರು ಅಂಥ ಅವಸ್ಥೆಯ ಚಾಟೀಪೆಟ್ಟನ್ನು ಅತ್ಯಂತ ತೀವ್ರವಾಗಿ ಅನುಭವಿಸುತ್ತಾರೆ, ಮನಸ್ಸಿಗೆ ಹಚ್ಚಿಕೊಳ್ಳುತ್ತಾರೆ. ಅಂಥ ಕರುಳ ಹರಕು ಜೀವಿಗಳಲ್ಲಿ ಒಂದು, ಅಲ್ಲಿ ವಿಲಿವಿಲಿ ಒದ್ದಾಡುತ್ತಿತ್ತು.

ಕಿಟಕಿಯು ತೆರೆದಿತ್ತು. ಈ ಶಾಂತಸ್ತಬ್ಧ ಬೇಸಿಗೆಯ ಸಂಜೆಯಲ್ಲಿ ಆ ಏಕಾಂತ ಪ್ರಾಂತದಲ್ಲಿ ಎದ್ದ ಯಾವ ಸದ್ದೂ — ಹಕ್ಕಿಯ ಚಿಲಿಪಿಲಿ, ಕೂಗಿನ ದನಿ ಗಾಳಿಯ ಸುತ್ತು — ಮರ, ಕುಟಿಗಳ ಮೇಲಿಂದ ಬಲು ದೂರದತನಕ ಹಬ್ಬುತ್ತಿತ್ತು. ಆದರೆ ಎದ್ದ ಸದ್ದುಗಳೂ ತೀರ ಕಡಮೆ. ಆದರೆ ಈ ಕಂದುಮಬ್ಬಿನ ಕೋಣೆಯಲ್ಲಿ ಗ್ರೇಸಳು ಅದೃಶ್ಯಳಾಗಿ ಸುಯ್ಯುತ್ತಿದ್ದಂತೆ ಹಗುರುಗಾಲಿಗಳ ದೂರದ ಸದ್ದು ಅವಳಿಗೆ ಬಂದು ತಲ್ಪಿತು — ಕುದುರೆಯ ಖುರಗಳ ಶಬ್ದವೂ ಅದರೊಂದಿಗೆ ಸೇರಿತ್ತು. ಆ ವಾಹನದ ಗತಿಯಲ್ಲಿ ಒಮ್ಮೆಲೆ ಏನೋ ತಡೆ ತೊಡಕು ಉಂಟಾಯಿತು. ಅದರಿಂದಲೇ ಅವಳ ಗಮನ ಆ ಸದ್ದಿನತ್ತ ಸೆಳೆದದ್ದು, ಈ ಸದ್ದು ಎಲ್ಲಿಂದ ಬಂತೆಂಬುದು ಅವಳಿಗೆ ಗೊತ್ತಾಯಿತು. ಆ ಸ್ಥಳವು ದಕ್ಷಿಣದಿಂದ ಪ್ರವಾಸಿಗಳು ಏರಿ ಇಳಿದು ಬರುವ ಎತ್ತರದ ಎಡೆಯಾಗಿತ್ತು. ಅವಳು ಶ್ರೀಮಂತಿ ಚಾರ್ಮುಂದಳೊಂದಿಗೆ ಆ ಬೆಟ್ಟದಿಂದ ಹೊರಬಿದ್ದ ಸ್ಥಳವಾಗಿತ್ತು. ಗ್ರೇಸಳು ನೆಲದಗುಂಟ ಜಾರುತ್ತ ಹೋಗಿ ತನ್ನ ತಲೆಯನ್ನು ಕಿಟಕಿಯ ಚೌಕಟ್ಟಿನ ಮೇಲಿಂದ ಬಗ್ಗಿಸಿ ತೆರೆದ ತಂಟಿಗಳಿಂದ ಕಿವಿಗೊಟ್ಟು ಕೇಳಹತ್ತಿದಳು. ಸಾರೋಟ ಗಾಡಿ ನಿಂತಿತ್ತು. ಗಂಡಸೊಬ್ಬ ಉದ್ಗಾರದ ಮಾತು ಆಡಿದ್ದು ಅವಳು ಕೇಳಿದಳು. ಆಮೇಲೆ ಇನ್ನೊಬ್ಬನು ಅಂದ: ‘ಈ ಕುದುರೆಗೇನು ಧಾಡಿ ಆಗಿದೆ’. ಅದು ತನ್ನ ಗಂಡನ ದನಿಯೆಂದು ಅವಳು ಗುರುತಿಸಿದಳು.

ಆ ಅಪಘಾತ — ‘ಕುದುರೆಗಾದ ಧಾಡಿ’ ಬೇಗ ಸರಿಪಡಿಸಲಾಯಿತು. ಸಾರೋಟು ಹಾದಿಯ ಇಳುಕಲಗುಂಟ ಸಾಗುವುದು ಕೇಳಿಸಿತು — ಬೇಗನೆ ಅದು ಹೆದ್ದಾರಿಯಿಂದ ಓಣಿಯಲ್ಲಿ ತಿರುಗಿತು. ಅಲ್ಲಿಂದ ಅವಳಿರುವ ಮನೆಗೆ ಒಯ್ಯುವ ದಾರಿಯಲ್ಲಿ ಬಂದಿತು.

ಗ್ರೇಸಳ ಮೈಯಲ್ಲಿ ಶೂಲಿ ಎದ್ದಂತೆ ಆಯಿತು. ತೀಕ್ಷ್ಣವೇದನೆ ಮಿಂಚಿ ಹೋಯಿತು. ಜಲಕನ್ನಿಕೆ ಡಾಫ್ನೆ ಹಿಂದೊಮ್ಮೆ ಅಪೊಲೊ ದೇವತೆಯ ಕಾಮುಕ ಭೇಟಿಯಿಂದ ಪಾರಾಗಲು ಇದ್ದಕಿಕ್ಕಂತೆ ಲಾರೆಲ್ ಮರವಾಗಿ ಮಾರ್ಪಟಿದ್ದಳಂತೆ. ಅಂಥ

ಒಂದು ಪಲಾಯನ ಪ್ರವೃತ್ತಿ ಗ್ರೇಸಳಲ್ಲಿ ಹುಡುಗಿ ಇರುವಾಗಿನಿಂದಲೂ ಬಲವಾಗಿ ಇತ್ತು. ಅದೀಗ 'ವಿಯೋಗ — ವೈಧವ್ಯ'ದ ಏಕಾಂತದಲ್ಲಿ ಮತ್ತೆ ಚೇತರಿಸಿ ಕೊಂಡಿತ್ತು. ಈಗ ಬರುವವನ ಕುರಿತು ಪ್ರತಿಭಟನೆಯ ಭಾವನೆ ಮತ್ತು ಮತ್ತೊಬ್ಬನ ಬಗೆಗೆ ಆದರದ ಭಾವ ಇವುಗಳಿಂದ ಆ ಪ್ರವೃತ್ತಿ ಕಡಮೆ ಆಗಲಿಲ್ಲ. ಅವಳು ಡ್ರೆಸಿಂಗ್ ಟೇಬಲ್ಲಿನ ಮೇಲಿದ್ದ ಒಂದು ಹಸ್ತಿದಂತಹ ಟಿಪ್ಪಣಿ ಪುಸ್ತಿಕೆಯನ್ನು ತೆರೆದು ಅದರ ಒಂದು ಹಾದಿಯಲ್ಲಿ ಪೆನ್ಸಿಲ್ಲಿನಿಂದ ಗೀಚಿದಳು. 'ನನ್ನ ಶಾಲಾ ಸಂಗಾತಿಯೊಬ್ಬಳ ಭೆಟ್ಟಿಗೆ ಹೋಗಿದ್ದೇನೆ' ಆಮೇಲೆ ಕೆಲವು ಅಗತ್ಯದ ಉಡುಪಿನ ಬಟ್ಟೆಬರೆಗಳನ್ನೆತ್ತಿ ಕೊಂಡು ಕೈಬ್ಯಾಗಿನಲ್ಲಿ ತುಂಬಿದಳು. ಮತ್ತು ಆ ದನಿಯನ್ನು ಕೇಳಿದ ಮೂರು ನಿಮಿಷ ಕಳೆದಿಲ್ಲ. ಅಷ್ಟರೊಳಗೆ ಅವಳ ತೆಳ್ಳನೆಯ ಆಕೃತಿ, ಅವಸರದಲ್ಲಿ ಹೊಂದಿಕೊಂಡಿದ್ದು, ಮೆಲಬರಿಯ ಮನೆಯ ಹಿಂದಣ ಬಾಗಿಲಿನಿಂದ ಹೊರಬಿದ್ದುದ್ದು ಕಾಣಬಹುದಾಗಿತ್ತು. ಅಲ್ಲಿಂದ ಅವಳು ಹಿತ್ತಲ ದಾರಿಯಲ್ಲಿ ಹಗುರಾಗಿ ಓಡಿ, ಬೇಲಿಯ ಸಂದಿಯೊಳಗಿಂದ ಹಾಯ್ದು ಮರಗಳಡಿಯ ಹಾವಸೆ ಮುಚ್ಚಿದ, ಗಾಡಿ ನಡೆದು ಬಿದ್ದ ಜಾಡಿನಲ್ಲಿ ನಡೆದು ಕಾನಿನ ದಟ್ಟಣೆಯನ್ನು ಸೇರಿದಳು.

ತಲೆಯ ಮೇಲೆ ಇತ್ತೀಚೆಯ ಎಲೆಗಳು ಅಚ್ಚ ಹಸಿರಾಗಿದ್ದವು — ಕೆಲವೆಡೆಗೆ ಕಾನು ದಟ್ಟವಿದ್ದಲಿ. ಈ ಛಾಯೆ ಚಳಿಗಾಲದ ಮಬ್ಬಿಗಿಂತ ಹೆಚ್ಚು ಕತ್ತಲು ಚೆಲ್ಲಿತ್ತು. ನೆಲಕ್ಕೆ ಕಿರಣ ಬಂದು ಮುಟ್ಟಲು ಒಂದು ಬಿರುಕೂ ಹೇರೆಲೆಗಳ ನಡುವೆ ಇದ್ದಿಲ್ಲ. ಆದರೆ ತೆರವಾದ ಸ್ಥಳಗಳಲ್ಲಿ ಅವಳಿಗೆ ಸುಲಭವಾಗಿ ಕಾಣುವಂತಿತ್ತು. ಬೇಸಿಗೆ ಮುಗಿ ಯುತ್ತ ಬಂದಿತ್ತು. ಹಗಲಲ್ಲಿ, ಜೇರಾಡುವ ಜಂತುಗಳು ಬಿಸಿಲಿನ ಕಿರಣಗಳಲ್ಲಿ ತೂಗಾಡುತ್ತಿದ್ದವು. ವನಸ್ಪತಿಗಳು ರಾತ್ರೆಗೆ ಇಬ್ಬನಿಯ ಗೋಲಗಳಿಂದ ಭಾರವಾಗಿ ದ್ದವು. ಮಳೆ ಸೆಳಕುಗಳ ನಂತರ ಹಬ್ಬುವ ತೇವು, ಸಂಜೆಯ ಚಳಿ ನಡುಕ, ಹೊದರು ಗಳೊಳಗಿಂದ ಬರುತ್ತಿತ್ತು.

ಸಂಜೆಯ ಈ ಹೊತ್ತಿಗೆ ತೋಟಗಳು ಯಾವಾಗಲೂ ಈ ಭೂಮಿಯವಲ್ಲವೋ ಎಂಬಂತೆ ವಿಚಿತ್ರವಾಗಿ, ಎಲೆ ಉದುರುವ ಹಂಗಾಮಿನಲ್ಲಿಗಿಂತ ಹೆಚ್ಚು ಪಿಶಾಚರೂಪ ವಾಗಿ ತೋರುತ್ತಿದ್ದವು. ಆಗ ದಟ್ಟಣೆಗಳು ಕಡಮೆ, ಸೂಕ್ಷ್ಮ ರೇಖಾಕೃತಿಗಳು ಹೆಚ್ಚು. ಹೊಳೆಯುವ ಗಿಡಗಳ ನುಣ್ಣಗಿನ ಮೇಲ್ಮೈಗಳು ದುರ್ಬಲ ಎವೆ ಇಲ್ಲದ ಕಣ್ಣುಗಳಂತೆ, ಹಂದರಗಟ್ಟಿದ ಮಬ್ಬಿನಲ್ಲಿ ಹೇಗೋ ತೂರಿ ಬಂದು ಮಾಯವಾಗುತ್ತಿರುವ ಬೆಳಕುಗಳಿಂದ ವಿಚಿತ್ರ ಮೋರೆಗಳಂತೆ, ಆಕೃತಿಗಳಂತೆ; ಆಗ ಈಗ ಮರಗಳ ಕಾಂಡಗಳ ನಡುವಿನಿಂದ ಇಣಕುವ ಆಕಾಶವು ಹೊದ್ದುಕೊಂಡು ನಿಂತ ಮೈಗಳಂತೆ, ಮತ್ತು ಟೊಂಗೆಗಳ ತುದಿಗೆ ಕೂತ ತಿಳಿಗೆಂಪು ಚಿಗುರುಗಳು ಚಾಚಿದ ನಾಲಿಗೆಗಳಂತೆ — ಒಡೆದೆದ್ದು ಕಾಣಿಸುತ್ತಿದ್ದವು.

ಆದರೆ ಇದೀಗ ಗ್ರೇಸಳ ಭಯ ಕಾಲ್ಪನಿಕ ಅಥವಾ ಮಾನಸಿಕವಿದ್ದಿಲ್ಲ. ಇವೆಲ್ಲ ವಿಕಾರಗಳನ್ನು ಅವಳು ಏನೂ ಗಮನಿಸಲಿಲ್ಲ. ಅವಳು ಎಲೆಗಳು ರಾಶಿಯಾಗಿ ತುಂಬಿದ ತಗ್ಗುಗಳನ್ನು ತಪ್ಪಿಸಿಕೊಳ್ಳುತ್ತ, ಹುಲ್ಲು, ಜಡ್ಡಿ ಹಾವಸೆಯ ಮೇಲೆಯೇ ಸಪ್ಪಳಿಲ್ಲದೆ

ಹೆಜ್ಜೆ ಇಡುತ್ತ ಆದಷ್ಟು ನಿಃಶಬ್ದವಾಗಿ ನಡೆದಳು. ಅವಳು ಒಂದೆರಡು ಸಲ ಉಸಿರು ಕಟ್ಟಿದಂತಾಗಿ ತಡೆದಳು ; ಮತ್ತು, ತನ್ನ ಎದೆ ಬಡಿತ ನಾಡಿ ಮಿಡಿತಗಳನ್ನೂ ಮೀರಿ, ಫಿಟ್ಝಪಿಯರ್ಸನು ಕೂತ ಗಾಡಿಯು ತನ್ನ ತಂದೆಯ ಆವಾರವನ್ನು ಪ್ರವೇಶಿಸುತ್ತಿದ್ದ ಸದ್ದನ್ನು ಕೇಳಿದಂತೆ ಕಲ್ಪನೆ ಮಾಡಿಕೊಂಡಳು. ಅವಳು ಹಾಗೆಯೇ ಮತ್ತೆ ಮುಂದೋಡಿದಳು.

ಶ್ರೀಮಂತಿ ಚಾರ್ಮಂದಳ ಒಡೆತನದ ಹಿಂಟಾಕ ಕಾನುಗಳು ಹಿಂದಾದವು. ಮುಂದೆ ನುಗ್ಗಿದ ಬೆಟ್ಟಗಳನ್ನು ಈ ಕಾನುಗಳಿಂದ ಪ್ರತ್ಯೇಕಿಸುತ್ತ ಒಂದು ಹೆದ್ದಾರಿ ಅಡ್ಡ ಹಾಯ್ದಿತ್ತು. ಈಗ ಗ್ರೇಸಳು ತುಸು ಜಾಗ್ರತೆಯಿಂದಲೆ ನಡೆಯ ಹತ್ತಿದಳು. ಹಾಗೆ ಅವಳು ಇಂಥ ಸ್ಥಳಗಳಿಗೆ ಸಾಮಾನ್ಯವಾಗಿ ಹಲವು ಸಲ ಬಂದು ಹೋಗಿದ್ದಳು. ಸರ್ವ ಸಾಧಾರಣ ಅಳುಕು ಅಂಜಿಕೆಗಳು ಅವಳಿಗೆ ಇದ್ದಿಲ್ಲ. ಅಲ್ಲಲ್ಲಿ ಅವಿತುಕೊಂಡ ಅಪಾಯ ಗಳಿಗೇನೂ ಅವಳು ಹೆದರಲಿಲ್ಲ. ಆದರೆ ತನ್ನ ಪ್ರಯತ್ನವೆಲ್ಲ ವ್ಯರ್ಥವಾಗಿ ತಾನು ಮನೆಗೆ ಮರಳಲೇಬೇಕಾದಿತೆಂಬುದೇ ಅವಳಿಗೆ ಭಯವಿತ್ತು.

ಅವಳು ಪಶ್ಚಿಮಕ್ಕೆ ೩-೪ ಮೈಲು ನಡೆದಳು. ಆಗೊಮ್ಮೆ ಅವಳ ಹುಡುಕಾಡುವ ಕಣ್ಣುಗಳ ಮೇಲೆ, ಅಡವಿಯಲ್ಲಿ ಅಲೆಯುವವರಿಗೆ ಪರಿಹಾರವನ್ನು ಸೌಕರ್ಯವನ್ನು ಸೂಚಿಸುವ ಆಶ್ವಾಸನೆ, ಅಂದರೆ ದೂರದ ಬೆಳಕು, ಬಂದು ಬಿದ್ದಿತು. ಅದು ಬೇರೆ ಆಗಂತುಕರಿಗೆ ಅನಿಷ್ಟ-ಅಶುಭವೆನಿಸುವಷ್ಟು ಚಿಕ್ಕದಾಗಿತ್ತು. ಆದರೆ ಅವಳಿಗೆ ಅದು ತಾನು ಅರಸುತಿದ್ದ ಸಂಗತಿಯೆನಿಸಿತು. ಅವಳು ಮುಂದೆ ನುಗ್ಗಿದಳು. ಆಗ ಒಂದು ಬಿಡಾರದ ಮಸುಕಾದ ಹೊರ ರೇಖೆಯು ಗೋಚರಿಸಿತು. ಅವಳು ಅರಸಿದ ಸ್ಥಳವೇ ಅದು ಆಗಿತ್ತು.

ಆ ಮನೆಯು ಒಂದೆ ಅಂತಸ್ತಿನ ಚಚ್ಚೌಕಾದ ಒಂದು ಗುಡಿಸಲಾಗಿತ್ತು. ನಟ್ಟ ನಡುವೆ ಒಂದು ಹೊಗೆ ಗಂಡಿಯ ನಲಿಕೆ. ಅಲ್ಲಿಂದ ಸುತ್ತಲೂ ಮಾಡು ಇಳಿ ಜಾರು, ಹಿಂದೊಮ್ಮೆ ಅದು ಇದ್ದಲಿ ಸುಡುವವನೊಬ್ಬನ ಮನೆಯಾಗಿತ್ತು. ಆಗ ಮನೆ ಮನೆಗಳಲ್ಲಿ ಅಂಥ ಇದ್ದಲಿಯನ್ನೆ ಬಳಸುತಿದ್ದರು. ಆ ಮನೆಗೆ ತೋಟವಿದ್ದಿಲ್ಲ. ಆದರೆ ಬೇಲಿ ಹಾಕಿದ ಆವಾರ ಒಂದೇ ಇತ್ತು. ಸುತ್ತಲಿನ ಮರಗಳ ನೆಳಲು ಕಾಯಿಪಲ್ಲೆ ಬೆಳೆಯಿಸಲಿಕ್ಕೆ ಮಾರಕವಾಗಿತ್ತು. ಬೆಳಕು ತೂರಿ ಬರುತಿದ್ದ ಕಿಟಕಿಯ ಕಡೆಗೆ ಅವಳು ಮುಂದರಿದಳು. ಕದಗಳಿನ್ನೂ ಮುಚ್ಚಿದ್ದಿಲ್ಲ. ಆದ್ದರಿಂದ ಕಿಟಕಿಯ ಚೌಕಟ್ಟಿನೊಳ ಗಿಂದ ಅವಳು ಒಳ ಭಾಗವನ್ನು ವೀಕ್ಷಿಸಬಹುದಿತ್ತು. ಒಳ ಮನೆಯು ಅಡಿಗೆಗೆ, ಕೂಡಲಿಕ್ಕೆ ಮತ್ತು ಮಲಗಲಿಕ್ಕೆ ಎಲ್ಲ ಒಂದೇ ಕೋಣೆ. ಸ್ವಾಭಾವಿಕವಾದ ಉಸುಕಿನ ಕಲ್ಲಿನ ನೆಲವು ಬಹು ಕಾಲದ ನಡೆದಾಟದಿಂದ ತಗ್ಗುದಿನ್ನೆಗಳಾಗಿ ಸವೆದಿತ್ತು. ಆದ್ದರಿಂದ ಅಲ್ಲಿಯ ಯಾವುದೇ ಮರಮುಟ್ಟಿನ ಸಾಮಾನು ಸಮಪಾತಳಿಯಲ್ಲಿ ನಿಂತಿದ್ದಿಲ್ಲ — ಅಲ್ಲಿಯ ಮೇಜು ಡೆಸ್ಕಿನಂತೆ ಇಳುಕಲಾಗಿಬಿಟ್ಟಿತ್ತು. ಗೋಡೆಯ ಅಗಿಷ್ಟಿಗೆಯಲ್ಲಿ ಬೆಂಕಿ ಉರಿಯುತ್ತಿತ್ತು. ಅದರ ಇದುರು ಹುರಿಯಿಂದ ಮೊಳೆಗೆ ತೂಗು ಹಾಕಿದ ಒಂದು

ಪುಟ್ಟ ಮೊಲದ ಕಳೆಬರವು (ಹಪ್ಪು) ತಿರುಗುತಿತ್ತು. ಅಗಿಷ್ಟಿಗೆಯ ಮೇಲೆ ಗೋಡೆಗೆ ಜೋಡಿಸಿದ ಶೆಲ್ಫಿನ ಹಲಗೆಗೆ ಒಂದು ತೋಳನ್ನು ಆನಿಸಿಕೊಂಡು ಆ ಬೆಂಕಿಯುರಿಗೆ ಸುಟ್ಟು ಬಾಡುತ್ತಿರುವ ಆ ಪ್ರಾಣಿಯ ಮೇಲೆ ಕಣ್ಣಿಟ್ಟು ವಿಂಟರಬೋರ್ನ ನಿಂತಿದ್ದನು. ಅವನ ಮೋರೆ ಇಷ್ಟು ತಲ್ಲೀನವಾಗಿತ್ತು. ಅವನ ವಿಚಾರಗಳ ಬಗೆಗೆ ಯಾವ ಊಹೆಯನ್ನೂ ಕಟ್ಟುವಂತೆ ಇದ್ದಿಲ್ಲ; ಅವು ಅವನ ಇದಿರಿನ ದೃಶ್ಯವನ್ನು ಕುರಿತು ಇದ್ದಿಲ್ಲವೆಂದಿಷ್ಟೇ ಹೇಳಬಹುದಿತ್ತು. ಅವಳಿಗೆ ಅನಿಸಿತು, ತಾನು ಹಿಂದೆ ಕಂಡಂದಿನಿಂದ ಅವನ ಮುಖಚರ್ಯೆ ತುಸು ಬದಲಾಗಿದೆ. ಅದು ಹಿಂದಿಗಿಂತ ಖಚಿತವಾಗಿಯೂ ರಾವು ಬಡಿದಂತೆ, ವಿರೂಪಗೊಳಿಸಿದೆಯೆಂಬುದನ್ನು ಆ ಬೆಂಕಿಯ ಬೆಳಕಿನಿಂದಾಗಿ ಅವಳು ಕಂಡುಕೊಳ್ಳಲು ಸಾಧ್ಯವಾಗಲಿಲ್ಲ.

ತನ್ನ ಪರಿಶ್ರಮದ ಫಲಿತಾಂಶವು ತಾನು ಆಶಿಸಿದಂತೆಯೇ ಆಯಿತೆಂಬುದನ್ನು ಕಂಡು ಗ್ರೇಸಳ ಕೊರಳಿನಿಂದ ಪರಿಹಾರದ ಒಂದು ನಿಟ್ಟುಸಿರು ಹೊಮ್ಮಿತು. ಅವಳು ಬಾಗಿಲಿಗೆ ಹೋಗಿ ಅದನ್ನು ತಟ್ಟಿದಳು.

ಅವನಿಗೆ ಅಡವಿಯ ಸದ್ದುಗಳ ರೂಢಿಯಾಗಿತ್ತು — ಮರಕುಟಕ, ಇಣಚಿ, ಮುಂತಾದ ಪುಟ್ಟ ಪ್ರಾಣಿಗಳ ಸದ್ದುಗಳು. ಆದ್ದರಿಂದ ಅವಳ ಪುಟ್ಟ ಸೂಚನೆಗೆ ಆತ ಗಮನ ಕೊಡಲಿಲ್ಲ. ಅವಳು ಮತ್ತೊಮ್ಮೆ ತಟ್ಟಿದಳು. ಈ ಸಲ ಆತ ಬಂದು ಬಾಗಿಲ ತೆರೆದನು.

ಕೋಣೆಯೊಳಗಿನ ಬೆಳಕು ಅವಳ ಮೋರೆಯ ಮೇಲೆ ಬಿದ್ದಾಗ ಅವನು ಬೆಚ್ಚಿಬಿದ್ದನು; ಮತ್ತು ತಾನು ಏನು ಮಾಡುತಿದ್ದೇನೆಂಬ ಅರಿವೇ ಇಲ್ಲದೆ, ಹೊಸ್ತಿಲದಾಟಿ ಅವಳ ಬಳಿಗೆ ಬಂದು ಅವಳ ಎರಡೂ ಭುಜಗಳ ಮೇಲೆ ತನ್ನ ಕೈಗಳನ್ನು ಇಟ್ಟನು. ಆಶ್ಚರ್ಯ, ಆನಂದ, ಗಾಬರಿ, ದುಃಖ ಅವನೊಳಗೆ ಬಾರಿಯಿಂದ ಒಂದನ್ನೊಂದು ಅಟ್ಟಿಕೊಂಡು ಏರಾಡಿದವು. ಗ್ರೇಸಳಿಗೂ ಹಾಗೆಯೇ ಆಯಿತು. ಈ ಬಿಕ್ಕಟ್ಟಿನ ಒತ್ತಡದಲ್ಲಿಯೂ ಒಂದು ಪ್ರಿಯವಾದ ಘಟನೆ ನಡೆದಿತ್ತು — ಅವರಿಬ್ಬರೂ ತಿರುಗಿ ಕೂಡಿದ್ದರು. ಹಾಗೆಯೇ ಅವರು ನಿಂತಿದ್ದರು —

ಮಯಣ ಬಿಳುಪಿನ ಅವರ ಮೊಗದಲಿ
ದೀರ್ಘ ಕಂಬನಿ ಹರಿಯುತ,
ಖಿನ್ನಸುಖ ತುದಿಮುಟ್ಟುತ

ಕೊನೆಗೂ ಅವನು ಈ ಮೌನವನ್ನು ಒಡೆದು ಮೆಲುದನಿಯಲ್ಲಿ ಅಂದನು : 'ಒಳಗೆ ಬಾ'.

'ಇಲ್ಲ. ಇಲ್ಲ ಜೈಲ್ಸ' ಅವಳು ಲಗುಬಗೆಯಿಂದ ನುಡಿದಳು ; ಬಾಗಿಲಿಂದ ಇನ್ನು ಹಿಂದಕ್ಕೆ ಹೆಜ್ಜೆ ಇಡುತ್ತ. 'ನಾನು ಹೀಗೆಯೇ ಹಾದುಹೋಗುತ್ತಿದ್ದೆ — ನಿನ್ನನ್ನು ಕಂಡು ಹೋಗಲು ಬಂದೆ. ನಾನು ಒಳಗೆ ಬರಲಾರೆ. ನೀನು ನನಗೆ ಸಹಾಯ ಮಾಡುವಿಯಾ? ನಾನು ಹೆದರಿದ್ದೇನೆ. ಸುತ್ತು ಬಳಸಿನ ದಾರಿಯಿಂದ

ಇವೆಲ್ಲಿಗೆ ಮತ್ತು ಅಲ್ಲಿಂದ ಎಕ್ಸೊಸಿಂಬರಿಗೆ ನಾನು ಮುಟ್ಟಬೇಕಾಗಿದೆ. ಅಲ್ಲಿ ನನ್ನ ಶಾಲೆಯ ಸಂಗಾಡಿ ಒಬ್ಬರಿದ್ದಾರೆ — ಆದರೆ ಇವೆಲ್ಲಿಗೆ ನಾನು ಒಬ್ಬಳೇ ಹೋಗಲಾರೆ. ಓ, ನೀನು ನನ್ನ ಜತೆ ಸ್ವಲ್ಪ ದಾರಿ ಬರುವೆಯಾ ? ನನ್ನನ್ನು ತಿರಸ್ಕರಿಸಬೇಡ ಜೈಲ್ಸ್, ನೊಂದುಕೊಳ್ಳಬೇಡ. ನಾನು ನಿನ್ನಲ್ಲಿಗೆ ಬರಬೇಕಾಯಿತು ; ಏಕೆಂದರೆ ನನಗೆ ಇಲ್ಲಿ ಬೇರೆ ನೆರವಿಲ್ಲ. ಮೂರು ತಿಂಗಳು ಹಿಂದೆ ನೀನು ನನ್ನ ಪ್ರೇಮಿಕನಾಗಿದ್ದಿ. ಈಗ ನೀನು ಬರೆ ಗೆಳೆಯ. ಕಾನೂನು ನಡುವೆ ಕಾಲಿಟ್ಟಿತು ; ನಾವು ಯೋಚಿಸಿದ್ದನ್ನು ನಿಷೇಧಿಸಿತು. ಅದೀಗ ಆಗದು. ಆದರೆ ನಾವು ಪ್ರಾಮಾಣಿಕವಾಗಿ ವರ್ತಿಸಲು ಸಾಧ್ಯ. ಮತ್ತು ಒಂದು ಸಣ್ಣ ತಾಸಿನ ಮಟ್ಟಿಗಾದರೂ ನೀನು ನನ್ನ ಗೆಳೆಯನಾಗ ಬಹುದು. ನನಗೆ ಇನ್ನಾರೂ—' ಅವಳಿಂದ ಮುಂದರಿಯಲು ಆಗಲಿಲ್ಲ. ಒಂದು ಕೈಯಿಂದ ಕಣ್ಣುಗಳನ್ನು ಮುಚ್ಚಿಕೊಂಡು ಒತ್ತಿಡಲು ಪ್ರಯತ್ನಮಾಡಿ ಅವಳು ಮೂಕಕಂಬನಿಗಳನ್ನು ಕರೆದಳು. ಒಂದೂ ಬಿಕ್ಕಿಲ್ಲದೆ, ನಿಟ್ಟುಸಿರಿಲ್ಲದೆ, ವಿಂಟರ ಬೋರ್ನನು ಅವಳ ಇನ್ನೊಂದು ಕೈಯನ್ನು ತನ್ನ ಎರಡೂ ಕೈಗಳಲ್ಲಿ ಹಿಡಿದನು.

'ಏನಾಗಿದೆ ?'

'ಅವನು ಬಂದಿದ್ದಾನೆ'

ಮರಣದಂಥ ಮೌನ ನೆಲಿಸಿತು, ವಿಂಟರಬೋರ್ನನು ಕೇಳುವನಕ 'ನಿನ್ನ ಅರ್ಥ ಇಷ್ಟೇ ಅಲ್ಲವೇ ಗ್ರೇಸ — ನಿನಗೆ ಪಾರಾಗಲು ನಾನು ಸಹಾಯ ಮಾಡಬೇಕು ?'.

'ಹೌದು' ಅವಳೆಂದಳು, 'ಸತ್ಯವು ಸರಿ ಇದ್ದಾಗ ತೋರಿಕೆಯ ಪರಿವೆ ಬೇಡ. ನಾನು ನನಗೇ ಅಂದುಕೊಂಡಿದ್ದೇನೆ, ನಿನ್ನನ್ನು ನಂಬಬಲ್ಲೆ.'

ಜೈಲ್ಸನಿಗೆ ಇದರಿಂದ ಗೊತ್ತಾಯಿತು ಆಕೆ ಆ ಹಿಂದೆ ಬೇಸಿಗೆಯಲ್ಲಿ, ಪ್ರೇಮಿಕ ರಾಗಿ ಕೊನೆಯ ಬಾರಿ ಭೆಟ್ಟಿಯಾಗಿದ್ದಾಗ ಅವನು ಬಗೆದ ವಂಚನೆಯನ್ನು — ಅದನ್ನು ಹಾಗೆ ಕರೆಯುವದಾದರೆ — ಅವಳು ಶಂಕಿಸಿದ್ದಿಲ್ಲ ; ಅಂದು ಆತ ಮೋಸ ಮಾಡಿದ್ದ ನೆಂಬ ಸುಳಿವು ಅವಳಿಗೆ ಹತ್ತಿದ್ದಿಲ್ಲ. ಆಗಿನ ಸೂಕ್ಷ್ಮ ತಪ್ಪಿಗಾಗಿ ಅವನಿಗೆ ಅನಿಸಿದ ಪಶ್ಚಾತ್ತಾಪದ ಭರದಲ್ಲಿ ಈಗಲಾದರೂ ಅವಳ ನಂಬಿಗೆಗೆ ತಾನು ಅರ್ಹನಾಗಬೇಕೆಂದು ಆತ ನಿರ್ಧರಿಸಿದನು. ಹಾಗೆ ಮಾಡಿ ತನ್ನ ಅಂತಃಕರಣವನ್ನು ಕೊರೆಯುವ ದೂಷಣೆ ಯನ್ನು ಅಳಿಸಿಹಾಕಬೇಕೆಂದು ಮಾಡಿದನು.

'ಕೂಡಲೆ ಬರುತ್ತೇನೆ' ಆತ ಅಂದನು 'ಒಂದು ಲಾಂದ್ರ ಹಚ್ಚಿ ತರುತ್ತೇನೆ'.

ಮಾಡಿನ ಮುನ್ಸೂರಿನ ಕೆಳಗೆ ಮೊಳೆಯಿಂದ ಒಂದು ಕಪ್ಪಾದ ಲಾಂದ್ರನ್ನು ಆತ ಕೆಳಗೆ ತೆಗೆದನು. ಅವನ ಕೈ ಹೇಗೆ ನಡುಗುತಿತ್ತೆಂಬುದನ್ನು ಅವಳು ಗಮನಿಸಲಿಲ್ಲ. ಆಯಾಸವೆ ಅವನಿಗೆ ಹೆಚ್ಚಾದಂತೆ ಅನಿಸಿತು. ಈ ರೀತಿ ಅವಳಿಗೆ ನೆರವು ಕೊಡಮಾಡಿ ಆತ ತನ್ನ, ಆಗತಾನೆ ಗುಣಮುಖವಾದ ಅವಸ್ಥೆಯ, ಇದ್ದಬಿದ್ದ ಕಸುವನ್ನು ತೆತ್ತು ಸೂರೆ ಮಾಡಲಿದ್ದನು. ಈ ಸ್ವಾರ್ಥತ್ಯಾಗ ಅವನ ಶಕ್ತಿಗೆ ಮೀರಿದ ಆತ್ಮ ಬಲಿದಾನ. ಲಾಂದ್ರ ಹೆಚ್ಚಾಯಿತು. ಅವರಿಬ್ಬರೂ ಹೊರಟರು.

೪೧

ಅವರ ಪಯಣ ಮೊದಲಿನ ನೂರು ಮಾರು ನಿಶ್ಚಲ ನಿಂತ ಮರಗಳ ಕೆಳಗಿಂದ ಇತ್ತು. ಅವುಗಳ ಮೇಲಭಾಗದ ಎಲೆಗಳು ಮಳೆಯ ಹನಿಗಳಿಂದ ಸೀತ್ಕಾರ ಮಾಡತೊಡಗಿದವು. ಅವರು ಬೆಟ್ಟದ ಕಣಿವೆಯಲ್ಲಿ ಹೊರಬರುವಷ್ಟರಲ್ಲಿ ಭಾರಿ ಮಳೆ ಆರಂಭವಾಯಿತು.

'ಇದು ಅಸಡ್ಡೆಗಳ — ಅಂದಗೇಡು.' ಗ್ರೇಸಳು ಅಂದಳು — ಒತ್ತಾಯದ ನಗೆಯಡಿಗೆ ತನ್ನ ಚಿಂತೆಯನ್ನು ಅಡಗಿಸುತ್ತ.

ವಿಂಟರಬೋರ್ನ ನಿಂತನು. 'ಗ್ರೇಸಿ', ತನ್ನ ಮನಸ್ಸನ್ನು ವಂಚಿಸಲು ಒಂದು ನಿಷ್ಠುರ ವ್ಯಾವಹಾರಿಕ ವೃತ್ತಿಯನ್ನು ಕಾಪಾಡಿಕೊಂಡು ಆತ ಅಂದನು, 'ಈ ರಾತ್ರಿಗೆ ನೀನು ಇವೆಲ್ಲಿಗೆ ಹೋಗಲಾರೆ'.

'ಆದರೆ ಹೊಗಲೇಬೇಕು'

'ಏಕೆ? ಅದು ಇಲ್ಲಿಂದ ಏಳೆಂಟು ಮೈಲು ಇದೆ. ಈ ಮಳೆಯಲ್ಲಿ ಅಲ್ಲಿಗೆ ಹೋಗುವದು ಕೇವಲ ಅಶಕ್ಯ.'

'ನಿಜವೇ? — ಏಕೆ' ಕೆಲಹೊತ್ತು ಮೌನವಿದ್ದು ಕೊನೆಗೆ ಅವಳು ದುಃಖ ದಿಂದ ಕೇಳಿದಳು. 'ನನಗೆ ಖ್ಯಾತಿ — ಪ್ರತಿಷ್ಠೆ ಎಂಬುದೇನಿದೆ?'

'ಇಕೊ ಈವಾಗ ಕೇಳು.' ಜೈಲ್ಸ ಅಂದನು. 'ನೀನು ತಿರುಗಿ ಹೋಗಲಾರೆ, ನಿನ್ನ —'

'ಇಲ್ಲ, ಇಲ್ಲ, ಇಲ್ಲ. ನನ್ನನ್ನು ಒತ್ತಾಯಗೊಳಿಸಬೇಡ.' ಆಕೆ ದೈನ್ಯದಿಂದ ನುಡಿದಳು.

'ಹಾಗಾದರೆ ಹಿಂದಿರುಗುವಾ' ಅವರು ಹೋದ ದಾರಿ ಹಿಡಿದು ಹಿಂದೆ ಬಂದರು ಮತ್ತು ತಿರುಗಿ ಅವನ ಬಾಗಿಲಮುಂದೆ ನಿಂತರು. 'ಈಗ ಈ ಮನೆ ಈ ಗಳಿಗೆಯಿಂದ ನಿನ್ನದು — ನನ್ನದಲ್ಲ.' 'ಆತ ಬುದ್ಧಿಪೂರ್ವಕವಾಗಿ ಹೇಳಿದ. 'ನನಗೆ ಹತ್ತಿರದಲ್ಲಿಯೇ ಒಂದು ಸ್ಥಳವಿದೆ. ಅಲ್ಲಿ ನಾನು ಚೆನ್ನಾಗಿ ಉಳಿಯಬಲ್ಲೆ.'

ಅವಳ ಮೊರೆ ಇಳಿಯಿತು. 'ಓ' ಅವಳು ಅವನ ಉಭಯ ಸಂಕಟವನ್ನು ನೋಡಿ ಗೋಳಾಡಿದಳು. 'ನಾನೇನು ಮಾಡಿದೆ.'

ಒಳಗಡೆ ಏನೋ ಸುಟ್ಟ ವಾಸನೆ ಬಂದಿತು. ಮತ್ತು ಆತ ಕಿಟಕಿಯೊಳಗಿಂದ ಇಣುಕಿ ನೋಡಿದನು. ಆ ಎಳೆಯ ಮೊಲವು, ಅವನ ದುರ್ಬಲ ಹಸುವೆಯನ್ನು ಒಲಿಸಲಿಕ್ಕೆಂದು ಆತ ಬೇಯಿಸುತಿದ್ದುದು ಈಗ ಕತ್ತು, ಹೋಗಲು ಹತ್ತಿತ್ತು. 'ದಯವಿಾಡಿ ಒಳಗೆ ಹೋಗಿ ಅದಕ್ಕೆ ಲಕ್ಷ್ಯಕೊಡು' ಆತ ಅಂದನು. 'ಬೇಕಾದದ್ದು ಮಾಡು, ನಾನು ಈಗ ನಿನಗೆ ಇಲ್ಲಿ ಬಿಡುತ್ತೇನೆ. ಈ ಗುಡಿಸಲಿನೊಳಗೆ ಬೇಕಾದು ದೆಲ್ಲವೂ ಸಿಗುವಂತಿದೆ.'

'ಆದರೆ, ಜೈಲ್ಸ — ನಿನ್ನ ಊಟ.' ಆಕೆ ಉದ್ಗರಿಸಿದಳು. 'ನನಗೆ ಹೊರಗಿನ ಔಟ್‌ಹೌಸ್ ಇದ್ದರೂ ನಡೆದೀತು — ನಾಳೆ ನಸುಕು ಹರಿಯುವನಕ ಏನೇ ಇದ್ದರೂ ಸರಿ.' ಆತ ನಿಷೇಧವನ್ನು ಸೂಚಿಸಿದನು. 'ನಾನು ಹೇಳುತ್ತೇನೆ — ನೀನು ಒಳಗೆ ನಡೆ. ನಿನ್ನ ಅಶಕ್ತ ಸ್ಥಿತಿಯಲ್ಲಿ ಇಲ್ಲಿ ಹೊರಗಟ್ಟಿದರೆ ನಿನಗೆ ಜ್ವರ ಹಿಡಿಯ ಬಹುದು. ನನ್ನ ಊಟ ಕಿಟಕಿಯೊಳಗಿಂದ ನನಗೆ ಕೊಡಬಹುದು — ನಿನಗೆ ನೆಮ್ಮದಿ ಅನಿಸಿದರೆ. ನಾನು ಕೆಲಹೊತ್ತು ಕಾಯಬಲ್ಲೆ.'

ಅವನು ಅವಳಿಗೆ ಬಾಗಿಲೊಳಗೆ ಹೋಗಲು ಸೌಮ್ಯವಾಗಿ ಒತ್ತಾಯಪಡಿಸಿದನು. ಅವಳು ಒಳಗೆ ಹೋಗಿ ಅವನ ಮಂಚದ ಮೇಲೆ ಕುಳಿತದ್ದನ್ನು ಕಂಡಾಗ ಅವಳಿಗೆ ಭಾರ ಇಳಿದಂತೆ ಅನಿಸಿತು. ತಾನು ಹೊಸ್ತಿಲನ್ನು ದಾಟದೆ ಆತ ಬಾಗಿಲನ್ನು ಇಕ್ಕಿ ಕೀಲಿಯನ್ನು ತಿರುವಿ ಬೀಗ ಹಾಕಿದನು. ಕಟಕಿಯ ಕದ ತಟ್ಟಿ ಆತ ಅದರ ಕೆಳ ಭಾಗವನ್ನು ತೆರೆಯಲು ಸೂಚಿಸಿದನು. ಅವಳು ಹಾಗೆ ಮಾಡಿದೊಡನೆ ಕೀಲಿಯನ್ನು ಅವಳ ಕೈಗೆ ಕೊಟ್ಟನು.

'ನೀನೀಗ ಬೀಗದೊಳಗೆ ಬಿದ್ದಿರುವಿ' ಆತ ಅಂದ; 'ಮತ್ತು ನಿನ್ನ ಒಡತಿ ಈಗ ನೀನೇ.'

ತನ್ನ ದುಃಖದ ದುರವಸ್ಥೆಯಲ್ಲಿಯೂ, ಅವನ ಧರ್ಮಭೀರುತೆಯ ಬಗೆಗೆ ಅವಳಿಗೆ ಮಂದವಾದ ಒಂದು ನಗೆ ಬರದಿರಲಿಲ್ಲ — ಬಾಗಿಲ ಆ ಕೀಲಿಯನ್ನು ತೆಗೆದು ಕೊಳ್ಳುವಾಗ.

'ನಿನಗೆ ನೆಮ್ಮದಿ ಎನಿಸುತ್ತದೆಯೋ ?' ಆತ ಮುಂದುವರಿದನು, 'ಹಾಗಿದ್ದರೆ, ಮತ್ತು ನನಗೆ ನಿನ್ನ ಊಟದ ಕೊಂಚಪಾಲು ಕೊಡಲು ಇಚ್ಛಿಸಿದರೆ ದಯಮಾಡಿ ಹಾಗೆಮಾಡು. ಇಲ್ಲವಾದರೆ ಅದೇನು ಮಹತ್ವದಲ್ಲ ಬಿಡು. ನಾನು ಬೇರೆ ಕಡೆಗೆ ಅದನ್ನು ಪಡೆಯುವೆ.'

ಕೃತಜ್ಞತಾ ಭಾವನೆಯಿಂದ ತುಂಬಿದ ಅವನ ಅನುಕಂಪೆಯು ಅವಳಿಗೆ ಕೆಲಸಕ್ಕೆ ಹಚ್ಚಿತು. ನಿಜವಾಗಿಯೂ ಈ ಅನುಕಂಪೆ ಇನ್ನೂ ಅರ್ಧದಷ್ಟೇ ಅವಳಿಗೆ ಅರ್ಥ ವಾಗಿತ್ತು. ಹತ್ತು ಮಿನಿಟುಗಳ ನಂತರ ಅವಳು ಮತ್ತೆ ಕಿಟಕಿಯ ಹತ್ತಿರ ಬಂದಳು. ಅದನ್ನು ನೂಕಿ ತೆರದಳು ಮತ್ತು ಪಿಸುದನಿಯಲ್ಲಿ ಕರೆದಳು 'ಜೈಲ್ಸ' ಆತ ಕೂಡಲೆ ದಟ್ಟ ನೆಳಲೊಳಗಿಂದ ಹೊರಬಂದನು ಮತ್ತು ಅವಳು ಪ್ಲೇಟಿನಲ್ಲಿ ಅವನ ಪಾಲಿನ ಊಟವನ್ನು ಕೈಚಾಚಿ ಕೊಡಲು ಮಾಡಿದ್ದನ್ನು ನೋಡಿದನು.

'ನಿನ್ನನ್ನು ಕೆಟ್ಟ ರೀತಿಯಲ್ಲಿ ನಡೆಯಿಸಿಕೊಳ್ಳುವದು ನನಗೆ ಸೇರದು.' ಅವಳು ಮೆಲ್ಲಗೆ ಗೊಣಗಿದಳು; ಅಪಾರ ವ್ಯಥೆ ಅವಳ ಮಾತಿನಲ್ಲಿ ತುಂಬಿತ್ತು. ಹೊರಗೆ ಎಲೆಗಳ ಮೇಲೆ ಮಳೆ ಟಪಟಪ ಬೀಳುವುದನ್ನು ಅವಳು ನೋಡಿದಳು. 'ಆದರೆ ಹೀಗೆ ವ್ಯವಸ್ಥೆ ಮಾಡಿದ್ದು ಉತ್ತಮವೇ ?'

'ಓ ಹೌದು' ಆತ ಲಗುಬಗೆಯಿಂದ ನುಡಿದನು.

'ನಾನು ಇವೆಲ್ಲಗೆ ಹೋಗಿ ಎಂದೂ ತಲ್ಪುವಂತಿದ್ದಿಲ್ಲವೆಂದು ನನಗೆ ಅನಿಸುತ್ತದೆ.'

'ಅದು ಅವಶ್ಯವೇ ಆಗಿತ್ತು.'

'ನಿನಗೆ ಅಲ್ಲಿ ಸುಖವಾದ ಸ್ಥಳ ಸಿಕ್ಕಿದೆಯೆಂದು, ಖಾತ್ರಿಯೋ?' ಅವಳಿಗೆ ಮತ್ತೆ ಸಂದೇಹ ತಲೆ ಎತ್ತಿತು.

'ಖಾತ್ರಿ. ನಿನಗೆ ಬೇಕಾದುದ್ದೆಲ್ಲ ಸಿಕ್ಕಿತೆ? ಅದೆಲ್ಲ ಬಹಳ ಅಸಡ್ಡಾಳ ಅನುಕೂಲತೆ ನಿನಗೆ — ಇದೇ ಬೇಸರ ನನಗೆ.'

'ನಾನು ದೋಷಗಳನ್ನು ಗಮನಿಸಬಲ್ಲೆನೇ? ಈ ಅವಸ್ಥೆಯನ್ನು ನಾನು ಎಂದೋ ಮೀರಿಹೋಗಿದ್ದೇನೆ, ನಿನಗೆ ಅದು ಗೊತ್ತಿರಬೇಕು, ಜೈಲ್ಸ ಅಥವಾ ಇನ್ನಾದರೂ ಗೊತ್ತಾಗಬೇಕು.'

ಅವನ ಕಣ್ಣುಗಳು ಅವಳ ಮೋರೆಯನ್ನೆ ದಿಟ್ಟಿಸಿದವು. ಅದರ ಪ್ರತಿಕ್ರಿಯೆ ವಿವಿಧ ಬಾವ ನೋಟಗಳೊಳಗಿಂದ ತೀರ ನಿಚ್ಚಳವಾಗಿ ಕಾಣಿಸುತ್ತಿತ್ತು — ತೀವ್ರ ಬಿಂದುವಿಗೆ ಅವಳ ನರಗಳ ಬಿಗಿತ ಏರಿತ್ತೆಂದು. ವಿಂಟರಬೋರ್ನನ ಹೃದಯವು ಅವನ ಎದೆಯಲ್ಲಿ ಕಸಿವಿಸಿಯಾಗುತ್ತಿದ್ದರೆ, ಅದು ಈ ಪೂರ್ತಿ ಅಸಹಾಯವಾದ ಇಂಥ ಕಠೋರತನದ ಪರಿಸ್ಥಿತಿಯ ದೃಶ್ಯವನ್ನು ಕಂಡು. ಕೊನೆಗೂ ಅವಳಿಗೊಂದು ಆಶ್ರಯವನ್ನು ಒದಗಿಸಿಕೊಟ್ಟ ಸಮಾಧಾನದಲ್ಲಿ ಅವನು ತನ್ನ ವೇದನೆಯನ್ನು ಮರೆತನು. ಅವಳ ಕೈಯಿಂದ ತನ್ನ ಪ್ಲೇಟು ಕಪ್ಪು ತೆಗೆದುಕೊಂಡು ಅಂದನು, 'ಈಗ ನಾನು ಕಿಟಕಿಯ ಕದವನ್ನು ಇಕ್ಕುತ್ತೇನೆ. ಒಳಗಡೆಗೆ ಕಬ್ಬಿಣದ ಒಂದು ಸರಳು ಇದೆ. ಅದನ್ನು ಮಿಡದಂತೆ ನೀನು ಹಾಕಿ ಭದ್ರಗೊಳಿಸಬೇಕು. ಮುಂಜಾನೆ ನಾನು ಬಂದು ಕರೆಯುವನಕ ಅಲ್ಲಾಡಬೇಡ.'

ಆತ ತೀರ ದೂರವೆಲ್ಲಾದರೂ ಹೋಗಲಿಕ್ಕಿಲ್ಲವೆಂದು ಆಕೆ ಗಾಬರಿ ವ್ಯಕ್ತ ಮಾಡಿದಳು.

'ಓ ಇಲ್ಲಿ — ನಾನು ತೀರ ಕೂಗಳತೆಯಲ್ಲಿಯೆ ಉಳಿಯುವೆನು,' ವಿಂಟರ ಬೋರ್ನ ಅಂದನು.

ಅವಳು ಈತ ಸೂಚಿಸಿದಂತೆ ಕಿಟಕಿಯ ಸರಳನ್ನು ಇಕ್ಕಿದಳು. ಅವನು ಹಿಂದೆ ಸರಿದುಹೋದನು ಗುಡಿಸಿಲಿನ ಹೊರಗಡೆ ಅವನ ಸುಖವಾದ ಸ್ಥಳವೆಂಬುದು ಒಂದು ದಸೆಗೆಟ್ಟ ಚಿಕ್ಕ ಚಪ್ಪರ, ಅತಿಕಗ್ಗದ ಮಾಳವಾಗಿತ್ತು. ನಾಲ್ಕು ಗೂಟಗಳ ಮೇಲೆ ಒಳಬದನಿಕೆಯನ್ನು ಹೊದ್ದ ಹರಕು ಹಂದರ. ಅದರಡಿಗೆ ಒಣಹುಲ್ಲು ಮತ್ತು ಕೆಲವು ಗೋಣಿಯ ಚೀಲಗಳು; ಅಂತಹದೇ ಇನ್ನೇನೋ ಸಾಮಾನು. ಅವುಗಳ ಮೇಲೆ ಆತ ಕೂತುಕೊಂಡನು; ಅಲ್ಲಿ ಕತ್ತಲೆಯಲ್ಲಿ ತಾನು ತಂದ ಊಟವನ್ನು ಉಣ್ಣಲು ಆರಂಭಿಸಿದನು. ಆದರೆ ಈಗ ಅವನ ಹಸಿವೆಯೇ ಮಾಯವಾಗಿತ್ತು. ಅವನು ಪ್ಲೇಟನ್ನು ಬದಿಗೆ ಸಿಗಿಸಿದನು. ಹುಲ್ಲು ಚೀಲಗಳನ್ನು ರ್ಝಾಡಿಸಿ ಸರಿಮಾಡಿದನು. ಅವುಗಳಿಂದ

ಒಂದು ದೊರಗು ಹಾಸುಗೆ ತಯಾರಿಸಿಕೊಂಡು, ಅದರಲ್ಲಿ ತನ್ನನ್ನು ಕುಕ್ಕರಿಸಿಕೊಂಡನು. ವೇಳೆ ಮೀರಿಹೋಗಿತ್ತು. ಆತ ನಿದ್ದೆಗಾಗಿ ಹಂಬಲಿಸಿದನು.

ಆದರೆ ನಿದ್ದೆ ಬರಲೇ ಇಲ್ಲ. ಅದಕ್ಕೆ ಹಲವಾರು ಕಾರಣಗಳು. ಅವುಗಳಲ್ಲಿ ತನ್ನ ಆಶ್ರಯಕ್ಕೆ ಬಂದವಳ ಹೊಣೆಗಾರಿಕೆಯೇನು ಕಡಿಮೆಯದಲ್ಲ. ಆತ ಎದ್ದು ಕುಳಿತನು. ಆ ಒದ್ದೆ ಮಬ್ಬಿನೊಳಗಿಂದ ಗುಡಿಸಲಿನತ್ತ ನೋಡಿದನು. ಅದರ ಹೊರಗಿನ ಲಕ್ಷಣಗಳೆಲ್ಲ ಎಂದಿನವೇ. ಅವನಿಗೆ ನಂಬಿಗೆಯೇ ಸಿಗಲೊಲ್ಲದು — ಅದರೊಳಗೆ ಅವನ ಪ್ರೀತಿಯ ಸಖಿ — ಅದಕ್ಕೂ ಕಾವಿನ ಬೇರೆ ಹೆಸರು ಆತ ಬಳಸಲಾರನು — ಇದ್ದಳು. ಅವಳು ಅವನಲ್ಲಿಗೆ ತೀರ ಅನಪೇಕ್ಷಿತವಾಗಿ ಬಂದಿದ್ದಳು. ಅಷ್ಟೇ ದುಡುಕಿನಿಂದಲೂ ಅಹುದು, ಆತ ಒಪ್ಪದೆ ಇರಲಾರನು.

ಅವಳಿಗೆ ಯಾವುದೇ ವಿವರಗಳಿಗಾಗಿ ಆತ ಕೇಳಲು ಆತ ಸಾಹಸ ಪಟ್ಟಿದ್ದಿಲ್ಲ. ಆದರೆ ಅವು ಗೊತ್ತಿರದಿದ್ದರೂ ಅವಳ ಪರಿಸ್ಥಿತಿಯು ಸಾಕಷ್ಟು ಸ್ಪಷ್ಟವಿತ್ತು. ಕಳೆದ ಜೂನ್ ತಿಂಗಳಲ್ಲಿ ಕೈಗೆ ಬಂದ ಈ ಸ್ವರ್ಗಸೀಮೆಯು ಇನ್ನು ತೆರೆಯುವುದು ಶಕ್ಯವಾಗುವಂತೆ ಸಾಮಾಜಿಕ ಕಾನೂನು ನಿಷೇಧಿಸಿದ್ದರೆ, ಸದ್ಯದ ಈ ಸತ್ವ ಪರೀಕ್ಷೆಯ ಸಂದರ್ಭವನ್ನು ಸ್ವೀಕರಿಸುವುದರಲ್ಲಿ ಅವನಿಗೆ ತುಂಬಾ ವಿರಕ್ತಿಯ ಹೆಮ್ಮೆಯೂ ಅನಿಸದಿರಲಿಲ್ಲ. ಈ ಪೃಥ್ವಿಯಲ್ಲಿ ಅವಳು ಪೂರ್ತಿಯಾಗಿ ವಿಶ್ವಾಸವಿಟ್ಟ ಒಬ್ಬನೇ ಪುರುಷನಿದ್ದನು. ಮತ್ತು ಆ ಪುರುಷ ತಾನೇ ಸರಿ. ಈ ಬಿಕ್ಕಟ್ಟು ದುಃಖದಲ್ಲಿ ಅಲ್ಲದೆ ಇನ್ನೂ ಯಾತದರಲ್ಲಿಯೂ ಕೊನೆಗಾಣಲಿಕ್ಕಿಲ್ಲ. ಆದರೆ ಅವಳು ಅವನಲ್ಲಿ ಇಟ್ಟ ವಿಶ್ವಾಸದ ಈ ವಿಜಯಶಾಲಿ ವಿಚಾರದಿಂದ ಈ ದುಃಖದ ಕಲ್ಪನೆಯಲ್ಲಿ ಒಂದು ಗಳಿಗೆ ಅಳಿಸಿಹೋಯಿತು. ಮತ್ತು ಆ ವಿಶ್ವಾಸಕ್ಕೆ ಪ್ರತ್ಯುತ್ತರ ಕೊಟ್ಟ ಅವನ ಪ್ರೀತಿಯ ಪರಿಶುದ್ಧತೆಯು ಯಾವುದೇ ದೌರ್ಬಲ್ಯಕ್ಕೆ ಒಂದು ರಕ್ಷಾಕವಚಕ್ಕೂ ಮಿಗಿಲಾದ ಭದ್ರತೆ ಅನಿಸಿತು.

ಮಳೆಯು ನಿಂತೇ ಇದ್ದಿಲ್ಲ. ಅದೀಗ ಅವನನ್ನು ಮುಚ್ಚಿದ ಆ ಹುಲ್ಲ ಚಪ್ಪರದೊಳಗಿಂದ ಅವನ ಗಮನವನ್ನು ಸೆಳೆಯಿತು. ಈ ಅಸೌಕರ್ಯಕ್ಕೆ ಉಪಾಯ ಹೂಡಲೆಂದು ಯತ್ನಿಸಲು ಅವನು ಎದ್ದನು. ಆದರೆ ಅವನ ಮುಂಡಿಯ ನಡುಕಿನಾಡಿಯ ಒತ್ತಡದ ಪೀಡಿತ ಅವನಿಗೆ ತಿಳಿಸಿತು. ಬರುವ ಬಿರುಗಾಳಿ ಮಳೆಯ ವಿರುದ್ಧ ಅವನು ಈ ಅಶಕ್ತತೆಯಲ್ಲಿ ತನ್ನ ರಕ್ಷಣೆ ಮಾಡಿಕೊಳ್ಳಲಾರನು. ಅವನು ಇದ್ದಲ್ಲಿಯೇ ಆದಷ್ಟು ಸಹನೆ ಮಾಡಿಕೊಳ್ಳಲು ಮತ್ತೆ ಬಿದ್ದುಕೊಂಡನು. ತನ್ನ ಈ ಅಶಕ್ತತೆಯ ಬಗೆಗೆ ಈತ ತನ್ನ ಮೇಲೆಯೇ ರೇಗಿಕೊಂಡನು — ತಾನು ಎಷ್ಟು ಬಲಿಷ್ಠನಿದ್ದೆ. ತನ್ನ ಸದ್ಯದ ಈ ಅವಸ್ಥೆಯನ್ನು ಅವಳು ತಿಳಿಯಲೇ ಆಗದು. ಇದು ಅತ್ಯಗತ್ಯ, ಮತ್ತು ಹಾಗೆ ಆಗಬೇಕಿದ್ದರೆ ಅವಳು ಅವನ ಮೋರೆಯನ್ನು ಹಗಲ ಬೆಳಕಿನಲ್ಲಿ ಕಾಣಲೇ ಬಾರದು. ಏಕೆಂದರೆ ಅದರ ಸೊರಗು ಸುಕ್ಕು ಅವನ ಗುಟ್ಟನ್ನು ಹೊರಗೆಡುಹುವದು.

ಮರುದಿನ ಮುಂಜಾನೆ, ಬೆಳಕು ಹರಿಯುವಷ್ಟರಲ್ಲಿ ಆತ ಎದ್ದು ತನ್ನ ಸೆಟೆದು ಕೊರಡಾದ ಕೈಕಾಲುಗಳನ್ನು ತಾನು ಬಿದ್ದಿದ್ದ ತಾಣದಲ್ಲಿಯೆ ಸರಿದಾಟಿಸಿ ಅವಳಿಗೆ ಗುಡಿಸಲ ಒಳಗೆ ಮುಂಜಾವಿನ ಉಪಹಾರಕ್ಕೆ ಬೇಕಾದುದೆಲ್ಲವನ್ನೂ ಅಣಿಗೊಳಿಸಲು ಹತ್ತಿದನು. ಕಿಟಕಿಯ ಚೌಕಿನ ಹೊರಗಡೆ ಬೆಂಚಿನಮೇಲೆ ಅವನು ನೀರು, ಸೌದೆ, ಮತ್ತು ಇತರ ಅವಶ್ಯಕತೆಯ ಸಾಮಾನುಗಳನ್ನೂ ಇಟ್ಟು ಅದರ ಬದಿಯಲ್ಲಿ ಖಡುವಿನಿಂದ ಬರೆದನು. 'ನಾನು ನಿನ್ನನ್ನು ಕಾಣದಿರುವದೇ ಲೇಸು. ನನ್ನ ತಿಂಡಿ-ತೀರ್ಥ ಬೆಂಚಿನಮೇಲೆ ಇಟ್ಟುಬಿಡು.'

ಏಳು ಗಂಟೆಗೆ ಅವನು ಅವಳ ಕಿಟಕಿಯನ್ನು ತಟ್ಟಿದನು — ಮಾತು ಕೊಟ್ಟಂತೆ. ಮತ್ತು ಅವಳು ಕಾಣಬಾರದೆಂದು ಒಮ್ಮೆಲೆ ಹಿಂಜರಿದನು. ಆದರೆ ಮರಗಳ ಟೊಂಗೆಗಳ ಅಡಿಗೆ ತನ್ನ ಆಶ್ರಯದಿಂದ ಅವನು ಅವಳನ್ನು ಚೆನ್ನಾಗಿ ನೋಡಬಹುದಿತ್ತು — ಅವನ ಸನ್ನೆಗೆ ಓಗೊಟ್ಟು ಅವಳು ಕಿಟಕಿ ತೆರೆದು ಬೆಳಕು ಅವಳ ಮುಖದ ಮೇಲೆ ಬಿದ್ದಾಗ. ಅವಳ ಅಲಸಿಕೆ ತುಂಬಿದ ಅಗಲ ಕಣ್ಣು ಸೂಚಿಸುತಿತ್ತು: ಅವನಿಗಿಂತ ಹೆಚ್ಚೇನು ಅವಳು ನಿದ್ದೆ ಮಾಡಿದ್ದಿಲ್ಲ. ಆ ಕಣ್ಣುಗಳ ನಸುಗೆಂಪು ಸೂಚಿಸುತ್ತಿತ್ತು: ಅವಳ ಎಚ್ಚರದ ತಾಸುಗಳೂ ಕಣ್ಣೀರಿನಿಂದ ನಿವೃತ್ತವಾಗಿದ್ದಿಲ್ಲ.

ಅವಳು ಈ ಬರಹವನ್ನು ಓದಿದಳು. ಅವನಿಗೆ ಅನಿಸಿತು. ಅವಳಿಗೆ ನಿರಾಶೆ ಆಯಿತು. ಆದರೂ ಆತ ಪೂರೈಸಿಟ್ಟ ಸರಕುಗಳನ್ನು ಅವಳು ಎತ್ತಿಕೊಂಡಳು. ಆತ ದೂರವೆಲ್ಲಿಯೊ ಇರಬೇಕೆಂದು ಆಕೆ ತಿಳಿದಿರಬೇಕೆಂಬುದು ಸ್ಪಷ್ಟ. ಜೈಲ್ಸ ಕಾಯುತ್ತ ಕುಳಿತನು. ಒಂದು ವಿಶ್ವಾಸದಲ್ಲಿ; ಎಷ್ಟೆ ಸುಸಂಸ್ಕೃತಳಾಗಿದ್ದರೂ ಹಳ್ಳಿಯ ಬದುಕನ್ನು ಬಲ್ಲ ಹುಡುಗಿಗೆ ಅವರ ಸಾದಾ ಆಹಾರವನ್ನು ಸಿದ್ಧಪಡಿಸುವುದರಲ್ಲಿ ಏನೊ ತೊಡಕು ಅನಿಸಲಾರದು. ಆತ ಇದನ್ನು ದೃಢವಾಗಿ ನಂಬಿದ್ದನು.

ಗುಡಿಸಲಿನಲ್ಲಿ ಎಲ್ಲವೂ ಆತ ಊಹಿಸಿದಂತೆಯೇ ಬಹುಮಟ್ಟಿಗೆ ಇತ್ತು. ಗ್ರೇಸಳು ಮಾತ್ರ ಅವನಿಗಿಂತ ಹೆಚ್ಚು ಹೊತ್ತು ನಿದ್ದೆ ಹೋಗಿದ್ದಳು. ರಾತ್ರಿಯ ಏಕಾಕಿತನದ ನಂತರ ಅವನನ್ನು ನೋಡಿದರೆ ಅವಳಿಗೆ ಸಂತೋಷವಾಗುತಿತ್ತು. ಆದರೆ ಅವನ ವಿನಂತಿಯನ್ನು ಓದಿದ ಮೇಲೆ ಅವನ ಭಾವನೆಗಳನ್ನೂ ಮನ್ನಿಸಿ, ಅವನನ್ನು ಕರೆಯಲು ಆಕೆ ಪ್ರಯತ್ನಿಸಲಿಲ್ಲ. ಒಳಗೆ ಸರಕು ಸಾಮಗ್ರಿಗಳ ಪೂರೈಕೆ ವಿಪುಲವಿದ್ದುದನ್ನು ಅವಳು ನೋಡಿದಳು. ವಾರ ವಾರಕ್ಕೂ ತನ್ನ ಬೆಣ್ಣೆ — ಹಿಟ್ಟು ಮುಂತಾದವನ್ನು ತಿರುಗಿ ತುಂಬಿಸಿರುವದು ಅವನ ಯೋಜನೆಯಾಗಿತ್ತು. ಮತ್ತು ಇದು ಇವೆಲ್ಲದಿಂದ ಆಹಾರ ಸಾಮಗ್ರಿ ಒದಗಿಸುವ ಗಾಡಿಯು ಬಂದು ಹೋದ ಮರುದಿನವಾಗಿತ್ತು. ತಿಂಡಿ ಸಿದ್ಧವಾದಮೇಲೆ, ಅವನಿಗೆ ಬೇಕಾದದ್ದನ್ನು ಅವಳು ಹೊರಗಡೆಗೆ ಇಟ್ಟಳು. ರಾತ್ರಿಯ ಊಟವನ್ನು ಇಟ್ಟಂತೆಯೇ; ಮತ್ತು ಅವನನ್ನು ನೋಡಬೇಕೆಂಬ ಅವಳ ಬಯಕೆ ಎಷ್ಟೇ ಬಲವಾಗಿದ್ದರೂ, ಕಿಟಕಿಯಿಂದ ಕೂಡಲೆ ಹಿಂಜರಿದು ಅವನನ್ನು ಅವನೊಟ್ಟಿಗೇ ಬಿಟ್ಟಳು.

ಅದೊಂದು ಸೀಸದಂಥ ಮುಂಜಾವು ; ಮಳೆಯು ಮತ್ತೆ ನಿಧಾನವಾಗಿ ಒಂದೇ ಸಮನೆ ಬೀಳಲಾರಂಭಿಸಿತು. ವಿಂಟರಬೋರ್ನನಿಂದ ಏನೂ ಕೇಳಿಬರಲಿಲ್ಲ. ಆದ್ದರಿಂದ ಆತ ದಿನದ ಕೆಲಸಕ್ಕಾಗಿ ಹೊರಟೆದ್ದು ಹೋಗಿರಬೇಕೆಂದು ಅವಳು ತೀರ್ಮಾನಿಸಿದಳು ; ಇವೆಲ್‌ದಸಕ ಅವಳ ಸಂಗಡ ಹೋಗುವೆನೆಂದು ಕೊಟ್ಟ ಮಾತನ್ನು ಆತ ಮರೆತಿರಬೇಕು. ಆದರೆ ಇದು ತಪ್ಪಿದ ತೀರ್ಮಾನವಾಗಿತ್ತು. ಏಕೆಂದರೆ ಅವನ ಅವಸ್ಥೆಯ ಮೂಲಕ, ಅತಿ ಅಶಕ್ತತೆಯಿಂದಾಗಿ ಆತ ಅವಳಿಂದ ಐವತ್ತು ಮಾರು ದೂರದಲ್ಲಿಯೆ ದಿನವಿಡಿ ಬಿದ್ದುಕೊಂಡು ಉಳಿದನು.

ಮುಂಜಾವು ಸವೆಯಿತು ; ಯಾವಾಗ ಹೊರಡುವದು, ಹೇಗೆ ಪಯಣ ಮಾಡುವುದು ಎಂಬ ಅನುಮಾನದಲ್ಲಿಯೆ ಅವಳು ಹೊತ್ತುಗಳೆದಳು. ಜಾಗೃತೆಯಿಂದ ಬಾಗಿಲನ್ನು ಒಳಗಿನಿಂದ ಸರಳು ಜಡಿದು ಭದ್ರವಾಗಿ ಇಕ್ಕಿದ್ದಳು — ಯಾವದೇ ಆಗಂತುಕನು ನುಗ್ಗಿಬಂದು ಅವಳನ್ನು ಕಾಣಬಾರದೆಂದು. ಆ ಸ್ಥಳದಲ್ಲಿ ಬೀಗವಿಕ್ಕಿಕೊಂಡು ಅವಳು ಸುರಕ್ಷಿತವಾಗಿದ್ದಳು, ಮತ್ತು ಏನೇ ಇರಲಿ, ಇನ್ನೆಲ್ಲಿಯೂ ಇದಕ್ಕಿಂತ ಹೆಚ್ಚು ಸುರಕ್ಷಿತಳಾಗಿರಬಹುದೇ ? ಎಂದು ಸಂದೇಹ ಪಟ್ಟಳು.

ಸಾಮಾನ್ಯ ಮಳೆಯ ದುರ್ದಿನದ ಆರ್ದ್ರ ಮಬ್ಬು ಅಲ್ಲಿಯ ನೆರಳಿನಿಂದಲು ಹನಿಸುವ ಎಲೆಗಳಿಂದಲೂ ಇಮ್ಮಡಿಯಾಗಿತ್ತು. ಈ ವರ್ಷ ಮಾಗಿಯು ಮಳೆಯೊಂದಿಗೆ ಬರುವಂತಿತ್ತು. ಒತ್ತಾಯದ ಆ ಮೈಗಳ್ಳತನದಲ್ಲಿ ಈ ಒಂದು ಕೋಣೆಯ ಇದ್ದ ಒಂದು ಕಿಟಕಿಯಿಂದ ಹೊರಗೆ ದಿಟ್ಟಿಸುತ್ತ ಅವಳು ಅಲ್ಲಿ ನಿರುಪದ್ರವದಿಂದ ವಾಸಿಸುತ್ತಿದ್ದ ಪ್ರಾಣಿವರ್ಗದ ಪರಿಪರಿಯ ಚಿಕ್ಕ ಸಮಾಜವನ್ನು ನೋಡುತ್ತಿದ್ದಳು — ಕೂದಲು, ತುಪ್ಪಳ, ಪರೆ — ಕವಚದ ಪ್ರಾಣಿಗಳು ; ಹಲ್ಲಿನವು ; ಚುಂಚಿನವು ; ನೆಲದೊಳಗಿನವು ; ಸಂದು ಸಂದು ಉಂಗುರುಂಗುರವುಳ್ಳವು ; ಗುಡಿಸಲನ್ನು ಸುತ್ತುತ್ತಿದ್ದವು. ಜೈಲ್ಸನು ಹೊರ ಹೊರಟು ಹೋಗಿದ್ದರಿಂದ ಗುಡಿಸಲಿನಲ್ಲಿ ಯಾರು ಇಲ್ಲವೆಂದು ಭಾವಿಸಿದಂಥವು. ಚಳಿಯಲ್ಲಿ ತಮ್ಮ ನೆಲೆಯಾಗಿ ಬಳಸುವ ದೃಷ್ಟಿಯಿಂದ ಗುಡಿಸಲನ್ನೇ ಕುತೂಹಲದಿಂದ ನೋಡುತ್ತಿದ್ದವು. ಯಾವ ಕಾಯಿದೆಯನ್ನೂ ಪಾಪವನ್ನೂ ಅರಿಯದ ಈ ನೆರಹೊರೆಯವರನ್ನು ನಿರೀಕ್ಷಿಸುತ್ತ ಅವಳು ತನ್ನ ತೊಂದರೆಗಳನ್ನು ಕೆಲಕಾಲ ಮರೆತಳು. ಅಪರಾಹ್ನದ ಕೆಲವು ಭಾಗವನ್ನು ಅವಳು ಜೈಲ್ಸನ ಆ ಮನೆಯನ್ನು ಅಚ್ಚುಕಟ್ಟಾಗಿ ಮಾಡುವದರಲ್ಲಿ ಕಳೆದನು. ತಾನು ಅಲ್ಲಿಂದ ಹೋದ ಮೇಲೆ ಬೆಲೆಯುಳ್ಳವೆಂದು ಅವನಿಗೆ ಅನಿಸಬಹುದೆಂಬ ಚಿಕ್ಕಪುಟ್ಟ ಸುಧಾರಣೆಗಳನ್ನು ಮಾಡುತ್ತ ಹೊತ್ತು ಕಳೆದಳು.

ಒಂದೆರಡು ಸಲ ಅವಳಿಗೆ ಭಾಸವಾಯಿತು. ಮರಗಳಡಿಯಲ್ಲಿ ಏನೋ ಅಸ್ಪಷ್ಟ ಮಂದ ಸದ್ದು. ಕೆಮ್ಮಿದಂತೆ ಆದರೆ ಈ ಸದ್ದು ಹತ್ತಿರಕ್ಕೆ ಬರಲೇ ಇಲ್ಲ. ಆದ್ದರಿಂದ ಅದು ಇಣಚಿಯದೋ ಹಕ್ಕಿಯದೊ ಇರಬಹುದೆಂದು ಅವಳು ತೀರ್ಮಾನಕ್ಕೆ ಬಂದಳು. ಕೊನೆಗೊಮ್ಮೆ ಹಗಲ ಬೆಳಕು ಕ್ಷೀಣವಾಯಿತು — ಅವಳು ದೊಡ್ಡದೊಂದು

ಬೆಂಕಿ ಮಾಡಿದಳು; ಏಕೆಂದರೆ ಸಂಜೆಗಳು ಚಳಿಯುವಾಗಿದ್ದವು. ನೆಳಲುಗಳ ನೆಲೆಯಲ್ಲಿ ಮನುಷ್ಯನ ಮುಖ ಗುರುತಿಸಲಿಕ್ಕೆ ಬಾರದಷ್ಟು ಕತ್ತಲೆ ಆಗುತ್ತಲೆ — ಅದೂ ತೀರ ಲಗು — ಕಿಟಕಿಯು ಹತ್ತಿರ ತಟ್ಟದ ಸದ್ದು ಆಯಿತು. ಆದ್ದರಿಂದ ಅವಳಿಗೆ ಪರಮ ಸಂತೋಷವೆನಿಸಿತು. ಅದರ ರೀತಿಯಿಂದ ಅದು ಜೈಲ್ಸನದೇ ಎಂದು ಆಕೆ ಗುರುತಿಸಿದಳು. ಅವಳು ತತ್‌ಕ್ಷಣ ಕಿಟಕಿಯು ಕೆಳಗಿನ ಕದವನ್ನು ತೆರೆದಳು. ಅವನಿಗಾಗಿ ತನ್ನ ಕೈಯನ್ನು ಹೊರಗೆ ಚಾಚಿದಳು; ಅವನ ಆಕೃತಿ ಮಸುಕಾಗಿ ಕಾಣುತ್ತಿತ್ತು ಮಾತ್ರ. ಅವನು ಅವಳ ಬೆರಳುಗಳನ್ನು ಹಿಡಿದನು. ಅವನ ಅಂಗೈಯು ಕಾವು ಮತ್ತು ನಡುಕು ಅವಳು ಗಮನಿಸಿದಳು.

ಇವನು ಇಲ್ಲಿಗೆ ಬೇಗ ತಲುಪಲಿಕ್ಕೆ ಜೋರು ಜೋರಾಗಿ ನಡೆದು ಬಂದಿರ ಬೇಕು ಎಂದು ಅವಳು ಆಲೋಚಿಸಿದಳು. ಅವಳಿಗೆ ಹೇಗೆ ಗೊತ್ತಿರಬೇಕು — ಆತ ಚಪ್ಪರದ ಹುಲ್ಲಿನಿಂದ ಹೊರಬಿದ್ದು ಹೊಟ್ಟೆ ಹೊಸೆದು ಅಲ್ಲಿಗೆ ಆದಾಗಲೇ ಬಂದಿದ್ದನೆಂದು — ಮತ್ತು ಅವನ ಕಾವು ಜ್ವರದಿಂದ ಏರಿದ್ದೆಂದು?

'ಓ ನನ್ನ ಮುದ್ದು ಜೈಲ್ಸ.' ಆಕೆ ವಿಕಾರವಾಗಿ ಉದ್ಗರಿಸಿದಳು.

'ಯಾರೂ ನಿನಗಾಗಿ ಇಷ್ಟು ಮಾಡುತ್ತಿದ್ದರು' ವಿಂಟರಬೋರ್ನ ಅಂದನು. ಒತ್ತಾಯದಿಂದ ತರುವಷ್ಟು ವ್ಯಾವಹಾರಿಕ ದನಿಯಲ್ಲ.

'ನಾನು ಇವೆಲ್ ಮತ್ತು ಎಕ್ಸೊಂಬರಿಗೆ ಹೋಗುವ ವಿಷಯು?'

'ನಾನು ಆಲೋಚಿಸುತ್ತಿದ್ದೇನೆ' ಜೈಲ್ಸ ಕೋಮಲ ಆದರದ ಭಾವನೆಯಿಂದ ಉತ್ತರವಿತ್ತನು. 'ನಿನಗೆ ಸಿಕ್ಕಿ ಬೀಳಬಾರದೆಂದು ಇಚ್ಛೆಯಿದ್ದರೆ, ನೀನು ಈಗ ಇದ್ದಲ್ಲಿಯೇ ಉಳಿಯುವದು ಲೇಸು. ನಿನಗೆ ನಾನು ಬೇರೆ ಹೇಳಬೇಕೆಂದಿಲ್ಲ, ಈ ಸ್ಥಳವು ನಿನಗೆ ಸೇರುವಷ್ಟು, ಕಾಲ ನಿನಗೆ ಸೇರಿದ್ದು. ಬಹುಶಃ ಒಂದೆರಡು ದಿನಗಳಲ್ಲಿ ನೀನು ಇಲ್ಲದಿರುವದನ್ನು ಕಂಡು ಆತ ಹೊರಟುಹೋಗಲೂಬಹುದು. ಏನೇ ಆದರೂ ಎರಡು ಮೂರು ದಿನಗಳಲ್ಲಿ ನಿನಗೆ ನೆರವಾಗಲು ನಾನು ಏನೂ ಮಾಡಬಲ್ಲೆ — ಅತ್ತಿತ್ತ ಹೋಗಿ ವಿಚಾರಣೆ ಮಾಡಬಲ್ಲೆ. ನಿನ್ನ ಸಂಗಡ ಇವೆಲ್ ಕಡೆಗೆ ಬಲು ದೂರ ಹೋಗಬಲ್ಲೆ. ಏಕೆಂದರೆ ಸಿಡರಗಾಣ ನಡೆಯಿಸುವ ಹಂಗಾಮು ಬರುತ್ತಿದೆ. ಮತ್ತು ಅತ್ತ ಕಡೆಗೆ ಸೇಬಿನ ಬೆಳೆ ಹೇಗೆ ಏನು ಎಂಬುದನ್ನು ಒಮ್ಮೆ ನಾನು ನೋಡಿ ಬರಬೇಕು. ಆದರೆ ಈಗ ಒಂದೆರಡು ದಿನ ನನಗೆ ಇಲ್ಲಿ ಕೆಲಸವಿದೆ.' ಅವನಿಗೆ ಆಸೆ — ತಾನು ಹೇಳಿದ ಅವಧಿಯಲ್ಲಿ ಅವಳ ಕೆಲಸಕ್ಕೆ ತಕ್ಕಷ್ಟು ದುಡಿಯುವಷ್ಟೆ ತಾನು ಗಟ್ಟಿಗ ನಾಗಬಲ್ಲೆನೆಂದು. 'ಇಲ್ಲಿ ಹೀಗೆ ಸೆರೆಯಾಳಾಗಿ ಅಳಿಯುವದರಿಂದ ನಿನಗೆ ಅಷ್ಟೇನು ವಿಪರೀತ ಖೇದ ಅನಿಸುವದಿಲ್ಲವಷ್ಟೇ?'

ತನಗೇನು ಅದರ ಪರಿವೆ ಇಲ್ಲವೆಂದು ಆಕೆ ಅಂದಳು. ಆದರೆ ಅವಳು ನಿಟ್ಟುಸಿರು ಬಿಟ್ಟಳು.

ದೀರ್ಘ ಪರಿಚಯದಿಂದಾಗಿ ಅವರು ಪರಸ್ಪರ ಹೃದಯು ಲಕ್ಷಣಗಳನ್ನು ದಪ್ಪ

ಅಕ್ಷರದ ಪುಸ್ತಕಗಳಂತೆ ಓದಬಲ್ಲವರಾಗಿದ್ದರು. "ಇಲ್ಲಿ ಬಂದುದಕ್ಕೆ ನಿನಗೆ ಪಶ್ಚಾತ್ತಾಪವಾಗುತ್ತಿದೆ." ಜೈಲ್ಸ ಅಂದನು, "ಇಲ್ಲಿ ಉಳಿಯಬೇಡವೆಂದು ನಾನು ಹೆಚ್ಚು ಗಡುಸಾಗಿ ನಿನಗೆ ಸಲಹೆ ಕೊಡಬೇಕಿತ್ತು".

"ಛೇ ಇಲ್ಲ, ಇಲ್ಲ, ನನ್ನ ಅಚ್ಚುಮೆಚ್ಚಿನ ಗೆಳೆಯನೇ ಇಲ್ಲ" ಗ್ರೇಸಳು ಉಬ್ಬಿದ ಎದೆಯಿಂದ ಅಂದಳು. "ನಾನು ಅದಕ್ಕಾಗಿ ವ್ಯಸನ ಪಡುತ್ತೇನೆಂದು ಭಾವಿಸಬೇಡ, ನಾನು ದುಃಖಪಡುತ್ತಿದ್ದುದು ನಿನ್ನನ್ನು ಹೀಗೆ ಬಲಾತ್ಕಾರದಿಂದ ನಡೆಯಿಸಿಕೊಂಡಿದ್ದಕ್ಕೆ, ನಿನ್ನ ಮನೆಯಿಂದ ನಿನ್ನನ್ನು ಕಿತ್ತು ಹೊರಪಡಿಸಿದ್ದಕ್ಕೆ. ನಾನು ಬಿಚ್ಚಿ ಮಾತಾಡಬಾರದೇಕೆ? ನಿನ್ನ ಬಗ್ಗೆ ನನಗೆ ಏನನಿಸುತ್ತದೆಂಬುದು ನೀನು ಬಲ್ಲೆ — ಬೇರೆ ಯಾವ ಪುರುಷನ ಬಗ್ಗೆ ನನಗೆ ಹೀಗೆ ಅನಿಸಿದ್ದಿಲ್ಲ, ಮತ್ತೆ ಅನಿಸಲಿಕ್ಕಿಲ್ಲ. ಆದರೆ ಬೇರೊಬ್ಬ ಪುರುಷನಿಗೆ ನಾನು ಶಪಥಬದ್ಧಳು. ಆದರಿಂದ ನನಗೆ ಬಿಡುಗಡೆ ಇಲ್ಲ. ಅಂದಾಗ ನಾನು ಈಗ ನಡೆಯುವಂತೆ ನಡೆಯಲೇಬೇಕು. ಮತ್ತು ನನ್ನ ವ್ರತವನ್ನು ಕಾಪಾಡಲೇಬೇಕು, ಅವನು ನನ್ನೊಂದಿಗೆ ಹಾಗೆ ನಡೆದಮೇಲೆ ಅವನೊಂದಿಗೆ ನಾನೇನು ದೈವೀ ಕಾಯಿದೆಯಿಂದ ಬದ್ಧಳಾಗಿ ಉಳಿದಿಲ್ಲ. ಆದರೆ ನಾನು ಒಮ್ಮೆ ಶಪಥ ಮಾಡಿದೆ. ಅದರಂತೆ ತೆರುತ್ತಿದ್ದೇನೆ."

ಉಳಿದ ಸಂಜೆಯೆಲ್ಲ, ಅವಳಿಗೆ ಮರುದಿನಗಳಿಗೆ ಬೇಕಾಗುವ ಸಾಮಾನು ಸರಕುಗಳನ್ನು ಕೈಗೆತ್ತಿಕೊಡುವುದರಲ್ಲಿ, ಆ ಕುರಿತು ಸಹಜ ಮಾತುಕತೆಯಲ್ಲಿ ಕಳೆಯಿತು. ಈ ಉದ್ಯೋಗವು ಅವಳ ಮನಸ್ಸನ್ನು, ಅವನ ಕುರಿತ ತನ್ನ ಒಲವು ಮತ್ತು ತನ್ನ ಸಾಮಾನ್ಯ ಬಾಳು· ಇವುಗಳ ಬಗೆಗೆ ಕರುಣಾಜನಕ ವಿಚಾರಗಳಿಂದ, ದೂರ ಸೆಳೆಯಲು ಅನುಕೂಲವಾಯಿತು. ಅವನು ಅವಳೊಂದಿಗೆ ಹೇಗೆ ನಡೆದುಕೊಳ್ಳಬೇಕೆಂದು ಮೊದಲೆ ನಿರ್ಧರಿಸಿದ್ದನು. ಆದರೆ ಈ ಪೂರ್ವ ನಿರ್ಧಾರಕ್ಕೆ ಒಂದೇ ಒಂದು ಚ್ಯುತಿ, ಅದನ್ನು ಚ್ಯುತಿಯೆಂದು ಕರೆಯಬಹುದಾದರೆ, ಘಟಿಸಿದ್ದು, ವಿವರವಾಗಿ, ಅನೈಚ್ಛಿಕವಾಗಿ ಅವಳ ಕೈಯನ್ನು ಆತ ತನ್ನ ತುಟಿಗಳಿಗೆ ಹಚ್ಚಿಕೊಂಡಾಗ, ಆಕೆ ಅವನಿಗೆ "ಶುಭರಾತ್ರಿ" ಯನ್ನು ಬಯಸಲು ಕಿಟಕಿಯೊಳಗಿಂದ ಕೈಯನ್ನು ಹೊರಗೆ ಚಾಚಿದಾಗ. ಅವಳ ಕಂಬನಿಗಳನ್ನು ಕಾಣದಿದ್ದರೂ ಅವಳು ಅಳುತ್ತಿದ್ದಳೆಂದು ಅವನಿಗೆ ಗೊತ್ತಿತ್ತು.

ಅಷ್ಟೊಂದು ಸ್ವಾರ್ಥದಿಂದ ತಾನು ಆ ಗುಡಿಸಲನ್ನು ತನಗಾಗಿ ಬಳಸುತ್ತಿದ್ದುದಕ್ಕೆ ಕ್ಷಮಿಸೆಂದು ಅವಳು ಇನ್ನೊಮ್ಮೆ ಬೇಡಿಕೊಂಡಳು. ಆದರೆ ಅವಳಿಗೆ ಅನಿಸಿತು, ಇದು ಬರೆ ಒಂದೆರಡು ದಿನಗಳ ಮಟ್ಟಿಗೆ. ಆಮೇಲೆ ತಾನು ಹೊರಟುಹೋಗಲೇಬೇಕು.

ಆತ ಕಳವಳಾತಿಯಿಂದ ಅಂದನು. "ನನಗೆ ನೀನು ಹೋಗುವುದು ಸೇರುವುದೇ ಇಲ್ಲ".

"ಓ ಜೈಲ್ಸ", ಆಕೆ ಅಂದಳು "ನಾ ಬಲ್ಲೆ ನಾ ಬಲ್ಲೆ, ಆದರೆ ನಾನು ಹೇಳೊಲ್ಲ, ನೀನು ಗಂಡು, ಇದಕ್ಕೂ ಸ್ಪಷ್ಟವಾಗಿ ನಾನು ಹೇಳಲಾರೆ. ನಿನಗೆ ಒಳಗೆ

ಬರಗೊಡಲು ನನಗೆ ತುಂಬ ಲವಲವಿಕೆ. ಆದರೆ, ನನ್ನ ಮನಸ್ಸಿನಲ್ಲಿ ಏನಿದೆಯೆಂಬುದು ನೀನು ಬಲ್ಲೆ ; ಏಕೆಂದರೆ, ನೀನು ನನ್ನನ್ನೂ ಚೆನ್ನಾಗಿ ಬಲ್ಲೆ ''

"ಅಹುದು, ಗ್ರೇಸ ಅಹುದು. ನಿನ್ನ ಮದುವೆ ಹೀಗೆ ಆಶೆಗೆ ಅವಕಾಶ ಕೊಡದಂತೆ, ಬದಲಾಯಿಸಲಾಗದಂತೆ ಮಾರ್ಪಟ್ಟಿದೆ. ಅದರಿಂದ ನಮ್ಮಿಬ್ಬರ ನಡುವಿನ ಪ್ರಶ್ನೆ ಒಂದು ರೀತಿ ಇತ್ಯರ್ಥವಾಗಿಲ್ಲವೆಂದು ನನ್ನ ಅಭಿಪ್ರಾಯವಲ್ಲ. ನನ್ನ ಅರ್ಥ ಬರೇ - ಸರಿ - ಬರೆ ಒಂದು ಭಾವನೆ, ಇನ್ನೇನು ಅಲ್ಲ''.

"ಹೆಚ್ಚೆಂದರೆ ಇನ್ನೊಂದು ವಾರ ನಾನು ಇಲ್ಲಿ ಉಳಿದರೆ ನನ್ನ ಪತ್ತೆ ಆಗುವುದು. ಮತ್ತು ಆತ ಕಾಯಿದೆಯಂತೆ ನನ್ನನ್ನು ತನ್ನ ಬಳಿಗೆ ಬರುವಂತೆ ಕಡ್ಡಾಯಗೊಳಿಸಬಹುದು''.

"ಹೌದು ನೀನು ಅನ್ನುವುದು ಸರಿಯೇನೊ. ನಿನಗೆ ಇಷ್ಟ ಕಂಡಾಗ ನೀನು ಹೋಗು ಡಿಯರ್ ಗ್ರೇಸ್''.

ಅಂದು ಸಂಜೆ ಅವನ ಕೊನೆಯ ಮಾತುಗಳು ಆಶಾದಾಯಕವೇ ಆಗಿದ್ದವು. ಅವಳಿಗೆ ಈಗಲೂ ಎಲ್ಲವೂ ಕೊನೆಗೆ ಒಟ್ಟಾಗಿಯೆ ಪರಿಣಮಿಸಬಹುದು ; ತಾನು ಅಲ್ಲಿರುವುದು ಅವಳಿಗೆ ಅಷ್ಟೊಂದು ನೋವು ಉಂಟುಮಾಡುತ್ತಿದೆಯೆಂದು ಮನಗಂಡರೆ ಫಿಟ್ಝಪಿಯರ್ಸ್ ಅವಳ ಬದುಕಿನಲ್ಲಿ ಅನಾಹುತವಾಗಿ ಪ್ರವೇಶಿಸಲಿಕ್ಕಿಲ್ಲ—ಎಂದು ಅವನ ಅಭಿಪ್ರಾಯವಾಯಿತು. ಆನಂತರ ಕಿಟಕಿಯನ್ನು ಮುಚ್ಚಿ, ಹೊರಕದಗಳನ್ನು ಇಕ್ಕಿ, ಹೆಜ್ಜೆಗಳ ಸಳಸಳ ಸದ್ದು ತೇಲಿಹೋಯಿತು.

ಅವಳು ವಿಶ್ರಾಂತಿಗಾಗಿ ಒರಗಲಿಲ್ಲ. ಅಷ್ಟರಲ್ಲಿಯೇ ಆ ರಾತ್ರಿ ಗಾಳಿಯ ರಭಸ ಹೆಚ್ಚಾಯಿತು. ವಾಸ್ತವಿಕವಾದ ಕೆಲವು ರಭಸಾಟಗಳ ನಂತರ ಈ ಬಿರುಗಾಳಿಯೊಂದಿಗೆ ಮಳೆಯೂ ಹೊಯ್ಯಲಾರಂಭಿಸಿತು. ಗಾಳಿ ಇನ್ನೂ ಜೋರಾಯಿತು. ಬಿರುಗಾಳಿ ಜಡಿ ಮಳೆ ಮುಂದರಿದಂತೆ ಒಂದು ಜಡ ದೇಹವಲ್ಲ, ಕೇವಲ ಆದರ್ಶ ನಿರ್ವರ್ಣ ನಿರಾಕಾರ ವಸ್ತು ಒಂದು ಮಾಡು ಚಪ್ಪರಗಳನ್ನು ತುಳಿದೇರಿ ರೆಂಬೆಕೊಂಬೆಗಳನ್ನು ಕಿರುಗುಡಿಸಿ, ಮರಗಳೊಳಗಿಂದ ಹೊಗೆಗೊಳವೆಗಳಿಗೆ ಹಾರಿ, ಹೊಗೆ ಕಿಂಡಿಗಳೊಳಗೆ ತಲೆಹೆಟ್ಟಿ ಗೋಡೆಗಳ ಮೂಲೆಮೂಲೆಗೂ ಬಯ್ದಾಡಿ, ಕಿರುಚಾಡಿ ಸುಳಿದಾಡುತ್ತಿತ್ತೆಂದರೆ ನಂಬದಿರುವುದೇ ಕಷ್ಟವಾಗಿತ್ತು. ಹಳೆಯ ಭಯಾನಕ ಕಥೆಗಳಲ್ಲಿಯಂತೆ, ಇಲ್ಲಿ ಆಕ್ರಮಣಕಾರಿಯು ಒಂದು ಪಿಶಾಚಿ — ಮೈಸೊಂಕಿಗೆ ಸಿಗುತ್ತಿದ್ದನೇ ಹೊರತು, ಕಣ್ಣಿಗೆ ಕಾಣುತ್ತಿದ್ದಿಲ್ಲ. ಅಡವಿಯಲ್ಲಿಯ ಬಿರುಗಾಳಿಯ ರಾತ್ರಿಯ ಈ ಪಿಶಾಚಿ ಲೀಲೆ ಅವಳು ಮೊದಲೆಂದೂ ಕಂಡಿದ್ದಿಲ್ಲ. ಅದರ ಈ ಆಘಾತ ಅವಳಿಗೆನಿಸಿದ್ದು ಇದೇ ಮೊದಲು. ಇದಕ್ಕೆ ಕಾರಣ ಈ ಮೊದಲು ಇಂದಿನಂತೆ ಅವಳು ಮಾನಸಿಕವಾಗಿ ಇಷ್ಟೊಂದು ಏಕಾಂತದಲ್ಲಿ ಇದ್ದಿಲ್ಲ. ಈಗ ಅವಳು ತನ್ನಿಂದಲೇ ಬೇರೆಯೆಂಬಂತೆ, ತನ್ನದೆ ಒಂದು ಶೂನ್ಯ ಪ್ರತಿಕೃತಿಯಾಗಿ ಮಾತ್ರ ಉಳಿದಿದ್ದಳು. ಶಾರೀರಕ ಸಜೀವತೆಯ ಮತ್ತು ಸುಸ್ಪಷ್ಟ ಮನೋಗತಗಳ ಇತ್ತೀಚೆಯ ಅವಳ ಆತ್ಮವು ಅಲ್ಲಿ ಇದ್ದಿಲ್ಲ.

ಕೆಲವೊಮ್ಮೆ ಹತ್ತಿರದ ಮರದ ಒಂದು ಟೊಂಗೆ ಇಷ್ಟು ಕೆಳಕ್ಕೆ ತೂಗಾಡುತ್ತಿತ್ತು. ಒಂದು ದೈತ್ಯ ಕೈಯು ಇದುರಾಳಿಯ ಮುಖಕ್ಕೆ ಬೀಸಿಹೊಡೆದಂತೆ ಮಾಡಿಗೆ ಬಡಿಯುತ್ತಿತ್ತು. ಅದರ ಬೆನ್ನಿಗೆ ಮಳೆಯು ನೀರು ಗಾಯದಿಂದ ನೆತ್ತರು ಬಸಿದಂತೆ ಸೋರುತ್ತಿತ್ತು. ಇದೆಲ್ಲ ಹವಾಮಾನಕ್ಕೆ ಚೈಲ್ಸ ಹೆಚ್ಚುಕಡಿಮೆ ತುತ್ತಾಗಿರಬೇಕು, ಮೈಕೊಡುತ್ತಿರಬೇಕು, ಎಷ್ಟೆಂಬುದು ಅವಳಿಗೆ ಗೊತ್ತಾಗಲಿಲ್ಲ.

ಕೊನೆಗೆ ಗ್ರೇಸಳಿಗೆ ಅವನ ಬಗೆಗೆ ಅಂಥ ಕಷ್ಟದ ಕಲ್ಪನೆಯು ಸಹನವಾಗಲಿಲ್ಲ. ಅವನು ಹೇಗೆ ಬಳಲುತ್ತಿರಲಿ, ಅದಕ್ಕೆ ಅವಳೇ ಕಾರಣಳು. ಅವಳಿಗೋಸ್ಕರವೆ ಆತ ತನ್ನ ಈ ಒಂಟಿ ಕೋಣೆಯು ಗುಡಿಸಲನ್ನು ತೆರವು ಮಾಡಿಕೊಟ್ಟಿದ್ದ. ಅಂಥ ಆತ್ಮಯಜ್ಞಕ್ಕೆ ಅವಳು ಅರ್ಹಳಲ್ಲ. ಅವನಿಂದ ಅದನ್ನು ಆಕೆ ಸ್ವೀಕರಿಸಬಾರದಿತ್ತು. ಮತ್ತೆ ಈಗ ಅವಳ ವಿಚಾರದೊಂದಿಗೆ ಚಿಂತೆ ಕಳವಳ ಹೆಚ್ಚಿದವು. ಅದರೊಂದಿಗೆ ಅವನ ಇತ್ತೀಚೆಯ ಒಡನಾಟದಲ್ಲಿಯ ಕೆಲವು ಘಟನೆಗಳು ಅವಳ ಮನಸ್ಸಿಗೆ ಮರಳಿ ತೋಚಿದವು. ಅವು ಘಟಿಸಿದ್ದಾಗ ಅವಳು ಗಮನಿಸಿಯೇ ಇದ್ದಿಲ್ಲ. ಅವನ ಮುಖಚರ್ಯೆ, ಹಿಂದಿನ ಅವನ ಚರ್ಯೆಯಿಂದ ತೀರ ಭಿನ್ನಕಾಣುವಂತಹದೇನಿತ್ತು. ಆ ಮುಖದಲ್ಲಿ? ಅದು ಇನ್ನೂ ಬಡಕಲಾಗಿತ್ತು, ಬಣ್ಣಗೆಟ್ಟಿತ್ತು. ಹಿಂದೆ ಅವಳು ಕೊಟ್ಟ ಸೇಬಿನ ಹಣ್ಣು ಹೋಲಿಕೆಗೆ ಆ ಮುಖ ಕಡಿಮೆ ಬೀಳುತಿತ್ತು. ಮತ್ತು ಅವನ ದನಿ—ಆ ದನಿ ಅಡವಿಯಲ್ಲಿ ಅವಳು ಸ್ಪಷ್ಟವಾಗಿಯೇ ಏನೋ ಬದಲಾವಣೆಯನ್ನು ಕಂಡಿದ್ದಳು ಮತ್ತೆ ಅವನ ನಡಿಗೆ; ನಿಜವಾಗಿಯೂ ಅದು ಹೆಚ್ಚು ಅಶಕ್ತ, ಹೆಚ್ಚು ಜಡ, ಹೆಚ್ಚು ದಣಿದವನ ನಡಿಗೆಯನ್ನು ಹೋಲುತಿತ್ತು. ಹಗಲಲ್ಲಿ ಅವಳು ಆಗಾಗ್ಗೆ ಕೇಳುತ್ತಿದ್ದ ಈ ಸದ್ದು, ಇಣಚಿಗಳದೆಂದು ಭಾವಿಸಿದ್ದು, ಅದು ಕೊನೆಗೂ ಅವನ ಕೆಮ್ಮಾಗಿರಬೇಕು.

ಅವಳ ಅಸ್ವಸ್ಥ ಮನಸ್ಸಿನಲ್ಲಿ ಈ ವಿಚಾರ ಬೇರೂರಿತು - ಮಿಂಟರ್ ಬೋರ್ನ ಕಾಯಿಲೆ ಬಿದ್ದಾನೆ ಅಥವಾ ಬಿದ್ದಿದ್ದನು. ಅವನ ಆತಿಥ್ಯವನ್ನು ಸ್ವೀಕರಿಸುವುದಕ್ಕೆ ತನಗೆ ಏನೋ ಸಂಕೋಚ ಅನಿಸಬಾರದೆಂದು ಈ ಆತಿಥ್ಯದ ಸ್ವರೂಪವೇ ಅತಿಥೇಯನನ್ನು ಅವನ ನಿವಾಸದಿಂದ ಹೊರತಳ್ಳುವದಾಗಿತು.

"ನನ್ನ, ನನ್ನವನೇ, ನಿಜ ಪ್ರೇಮಿಂತ-ನನ್ನ ಕನಿಕರದ ಕಕುಲಾತಿಯ ಗೆಳೆಯ". ಅವಳು ತನ್ನಷ್ಟಕ್ಕೆ ಮರುಗಿದಳು. "ಓ ಹೀಗಾಗಕೂಡದು, ಹೀಗಾಗಕೂಡದು".

ಅವಳು ದಿಗ್ಗನೆ ಮಂಚದಿಂದ ಎದ್ದಳು, ಒಂದು ದೀಪವನ್ನೆತ್ತಿಕೊಂಡಳು. ಅರ್ಧಮರ್ಧ ಬಟ್ಟೆತೊಟ್ಟುಕೊಂಡಳು ಮತ್ತು ಕೀಲಿಯನ್ನು ತೆಗೆದುಕೊಂಡು ಕೂಡಲೆ ಹೋದಳು, ಬಾಗಿಲು ಹತ್ತಿರವೇ ಇತ್ತು. ಈ ಗುಡಿಸಲಿಗೆ ಒಂದೇ ಅಂಕಣ. ಕೀಲಿ ಬೀಗದಲ್ಲಿ ತಿರುವುವ ಮೊದಲು ಅವಳು ತಡೆದಳು; ಬೆರಳು ಕೀಲಿಯನ್ನು ಬಳಸಿತ್ತು; ಇನ್ನೊಂದು ಕೈಯನ್ನು ಹಣೆಗೆ ಒತ್ತಿಕೊಂಡು ಅವಳು ಕ್ಷುಬ್ಧ ವಿಚಾರತರಂಗಗಳಲ್ಲಿ ಸಿಲುಕಿಬಿದ್ದಳು; ಕಿಟಕಿಯ ಮೇಲೆ ಟಪಟಪ ಸದ್ದು, ಹರೆಬಾರಿಸಿದಂತೆ, ಮರದಿಂದ

ಬೀಳುವ ಹನಿತೊಟಕು ಗಾಳಿಗೆ ಬಂದು ಬಡಿದಷ್ಟು, ಅವಳ ಅನಿಶ್ಚಯವನ್ನು ಮುಗಿಸಿತು. ಅವಳು ಕೀಲಿಯನ್ನು ತಿರುವಿ ಬಾಗಿಲನ್ನು ತೆರೆದಳು.

ಹೊರಗೆ ಕತ್ತಲೆಯು ಅತ್ಯಂತವಾಗಿತ್ತು. ಅವಳ ಕಣ್ಣುಗಳಿಗೆ ಅದು ಒಂದು ಜಡವಸ್ತುವಿನಂತೆ ಸೋಂಕುತಿತ್ತು. ಮಳೆಯು ಎಷ್ಟು ಭಾರವಾಗಿತ್ತು, ಎಂಬುದರ ಪೂರ್ತಿ ಅರಿವು ಅವಳಿಗೆ ಆದದ್ದು ಆಗಲೆ. ಮಾಡಿನ ಇಳಿಜಾರಿನಿಂದ ತೊಟಕುವ ನೀರು ಕಾರಂಜಿಯಂತೆ ಸಿಡಿಯುತ್ತಿತ್ತು. ಅವಳು ತುಟಿ ತೆರೆದು ಕಿವಿಗೊಟ್ಟು ನಿಂತಳು. ಬಾಗಿಲ ಕದವನ್ನು ಒಂದು ಕೈಯಿಂದ ಹಿಡಿದು ಅವಳ ಕಣ್ಣು ಈ ಮುಂಚಿನ ಕತ್ತಲೆಗೆ ರೂಢಿ ಗೊಳ್ಳುತನಕ ಹತ್ತಿರದ ಮರಗಳು ಭೂತಾಕಾರವಾಗಿ ತಮ್ಮ ತೋಳು ಬೀಸಿ ರ್‍ಗಂಟ ಪಡಿಸುವದನ್ನು ಅವಳು ನೋಡಿದಳು. ಕಟ್ಟಕಡೆಗೆ ಪ್ರಯತ್ನಪಟ್ಟು ಅವಳು ದೊಡ್ಡ ದಾಗಿ ಕೂಗಿದಳು, "ಜೈಲ್ಸ, ನೀನು ಒಳಗೆ ಬರಲಿಕ್ಕೆಬೇಕು".

ಅವಳ ಕೂಗಿಗೆ ಉತ್ತರ ಬರಲಿಲ್ಲ. ತನ್ನ ಅಳುಕಿಗೆ ತಾನೇ ಅಂಜಿ ಸೋತು ಗ್ರೇಸ ಬೇಗನೆ ಹಿಂಜರಿದಳು. ಬಾಗಿಲು ಇಕ್ಕಿಕೊಂಡಳು. ಕೆನ್ನೆಗೆ ಕಾವೇರಿ, ಕಂಪೇರಿ ನೋಡುತ್ತ ಒಳಗಡೆ ನಿಂತಳು. ಯಾರಿಗೆ ಗೊತ್ತು? ಅವನು ಚೆನ್ನಾಗಿಯೇ ಇರಬಹುದು. ಆದರೆ ಈ ವೃತ್ತಿಯು ಬಹಳ ವೇಳೆ ಉಳಿಯಲಿಲ್ಲ, ಅವಳು ಮತ್ತೆ ಮಿಂಡ ಎತ್ತಿದಳು. ಮೊದಲಿಗಿಂತ ಹೆಚ್ಚು ನಿರ್ಧಾರದಿಂದ.

"ಜೈಲ್ಸ, ಜೈಲ್ಸ" ಅವಳು ಕೂಗಿದಳು, ತನ್ನ ಪೂರ್ತಿಕಂಠ ಬಲದಿಂದ ಕೂಗಿ ದಳು. ಅವಳ ಹಿಂದಿನ ಕೂಗಿಗೆ ವಿಶಿಷ್ಟವಾದ ಯಾವದೆ ನಾಚಿಕೆ ಈ ಸಲವಿದ್ದಿಲ್ಲ. ಓ, ಒಳಗೆ ಬಾ, ಒಳಗೆ ಬಾ, ಎಲ್ಲಿರುವಿ? ನಾನು ದುಷ್ಟೆ—ನನ್ನ ಕುರಿತೇ ಹೆಚ್ಚು ವಿಚಾರ ಮಾಡಿದೆ ದುರುಳೆಯಾದೆ, ಕೇಳಿದೆಯೊ? ನಿನಗೆ ಇನ್ನು ಹೆಚ್ಚು ಹೊರಗಡೆ ನಾನು ಸಹಿಸಲಾರೆ, ನೀನಿಲ್ಲಿಗೆ ಬರಬೇಕು, ನೀನು ಇಲ್ಲಿ ಬರುವುದು ನನಗೆ ಬೇಕು ಜೈಲ್ಸ".

ಉತ್ತರ? ಅಹುದು ಅದು ಉತ್ತರವೆ ಆಗಿತ್ತು. ಆ ಕತ್ತಲೆ ಮತ್ತು ಗಾಳಿ ಯೊಳಗಿಂದ ಒಂದು ಮಂದ ದನಿಯು ಅವಳಿಗೆ ತಟ್ಟಿತು—ಆ ಹವಾಮಾನಗಳು ಅಂಶ ವೆಂಬಂತೆ ತೇಲಿಬಂತು.

"ನಾನು ಇಲ್ಲಿ ಇದ್ದೇನೆ, ನೆಟ್ಟಗಿದ್ದೇನೆ ನನಗಾಗಿ ತೊಂದರೆಪಟ್ಟುಕೊಳ್ಳ ಬೇಡ".

"ನೀನು ಒಳಗೆ ಬರುವುದಿಲ್ಲವೆ? ನೀನು ಒದ್ದೆ ಆಗಿಲ್ಲವೆ? ನನ್ನಲ್ಲಿ ಬಾ ಡಿಯರೆಸ್ಟ್. ಯಾರು ಏನೂ ಅಂದರೂ ಅನಿಸಿಕೊಂಡರೂ ನಾನು ಇನ್ನು ಪರಿವೆ ಮಾಡುವುದಿಲ್ಲ".

"ನಾನು ನೆಟ್ಟಗಿದ್ದೇನೆ", ಆತ ಮತ್ತೆ ಅಂದನು. "ನಾನು ಅಲ್ಲಿ ಬರುವ ಅಗತ್ಯವಿಲ್ಲ. ಗುಡ್‌ನೈಟ್, ಗುಡ್‌ನೈಟ್".

ಗ್ರೇಸಳು ನಿಟ್ಟುಸಿರುಬಿಟ್ಟಳು, ತಿರುಗಿದಳು ಮತ್ತು ಬಾಗಿಲನ್ನು ಸಾವಕಾಶವಾಗಿ ಹಾಕಿಕೊಂಡಳು. ತನ್ನ ಉದ್ರೇಕದ ಮಾತುಗಳಿಂದ ಅವನಿಗೆ ದಿಗಿಲುಗೊಳಿಸಿದೆನೆ?

ಬಹುಶಃ ಅವನನ್ನು ಬಹುಕಾಲ ಕಂಡಿದ್ದಿಲ್ಲ. ಆದ್ದರಿಂದ ಅವನಲ್ಲಿ ಆಕೆ ಬದಲಾವಣೆಯನ್ನು ಕಂಡಿರಬೇಕು. ಅವಳಿಗೆ ಗೊತ್ತು, ಕಾಲವು ಕೆಲಸಲ ಮುಪ್ಪನ್ನು, ಜೀರ್ಣತೆಯನ್ನು ಥಕ್ಕನೆ ಜಗ್ಗಿ ಜಗ್ಗಿ ತರುತ್ತದೆ. ಸರಿ ಅವಳು ಶಕ್ಯವಿದ್ದದ್ದನ್ನೆಲ್ಲ ಮಾಡಿದಳು, ಅವನು ಒಳಗೆ ಬರಲೊಲ್ಲ. ಅವಳು ತಿರುಗಿ ವಿಶ್ರಮಿಸಲಿಕ್ಕೆ ಅಡ್ಡಾದಳು.

೪೨

ಮರುದಿನ ಮುಂಜಾನೆ ಗ್ರೇಸಳು ಬೇಗನೆ ಕಿಟಕಿಯ ಹತ್ತಿರ ಹೋದಳು. ಆ ದಿನ ಹೇಗಾದರೂ ಅವನನ್ನು ನೋಡಲೇಬೇಕೆಂದು ಅವಳ ನಿರ್ಧಾರ. ಅದಕ್ಕಾಗಿ ಅವನ ಸಲುವಾಗಿ ಉಪಾಹಾರವನ್ನೂ ಆತುರದಿಂದ ತಯಾರಿಸಿದಳು. ಎಂಟು ಗಂಟೆ ಹೊಡೆಯಿತು, ಮತ್ತು ಈಗ ಅವಳಿಗೆ ನೆನಪಾಯಿತು, ಆತ ವಾಡಿಕೆಯಂತೆ ಅವಳನ್ನು ಎಬ್ಬಿಸಲು ಬಂದಿದ್ದಿಲ್ಲ. ಅವನದೇ ಚಿಂತೆ ಅವಳನ್ನು ಎದ್ದು ಸುಳಿದಾಡುವಂತೆ ಮಾಡಿತ್ತು.

ಅವನ ಉಪಾಹಾರ ಅದರ ಸ್ಥಳದಲ್ಲಿ ಹೊರಗಡೆಗೆ ಇಟ್ಟಾಯಿತು. ಆದರೆ ಆತ ಅದನ್ನು ತೆಗೆದುಕೊಳ್ಳಲು ಬಂದು ಕಾಣಿಸಿಕೊಳ್ಳಲಿಲ್ಲ. ಅವಳು ದಾರಿ ಕಾಯ್ದಳು. ಒಂಭತ್ತು ಗಂಟೆ ಆಯಿತು. ತಿಂಡಿ ತಣ್ಣಗಾಗಿ ಹೋಯಿತು. ಆದರೂ ಜೈಲ್ಸ ಅಲ್ಲಿ ಇದ್ದಿಲ್ಲ. ಇಡೀ ದಿನ ಪೊದೆಯ ಮೇಲೆ ಮಾತ್ರ ಮತ್ತೆ ತಾನು ಹಾಡಿದ್ದನ್ನೆ ಹಾಡುತ್ತಿದ್ದ ಥ್ರುಶ್ ಹಕ್ಕಿಯು ಇಳಿದುಬಂದು ಆ ಪ್ಲೇಟಿನಿಂದ ಒಂದು ತುತ್ತು ಹೊತ್ತುಕೊಂಡು ನುಂಗಿ ತಡೆಯಿತು, ಸುತ್ತಲೂ ನೋಡಿ ಇನ್ನೊಂದು ತುತ್ತು ಎತ್ತಿಕೊಂಡಿತು. ಹತ್ತು ಗಂಟೆಗೆ ಅವಳು ಈ ಹರಿವಾಣವನ್ನು ಒಳಗೆಳೆದುಕೊಂಡಳು, ಮತ್ತು ತನ್ನ ಒಂಟಿ ಉಪಾಹಾರಕ್ಕೆ ಕುಳಿತಳು. ಆತ ಮುಂಚೆಯೇ ಕೆಲಸಕ್ಕಾಗಿ ಎಲ್ಲಿಯೊ ಕರೆಬಂದು ಹೋಗಿರಬೇಕು; ಹೇಗೂ ಮಳೆ ಕಳೆದು ಹೊಳವಾಗಿತ್ತು.

ಆದಾಗ್ಯೂ ಅವಳು ಖಾತ್ರಿ ಮಾಡಿಕೊಳ್ಳಬಯಸಿದಳು — ಗುಡಿಸಲಿನ ಪರಿಸರವೆಲ್ಲ ಹುಡುಕಿ ಆತ ಹತ್ತಿರವೆಲ್ಲಾದರೂ ಇದ್ದಿಲ್ಲವೆಂದು. ಆದರೆ ಹಗಲು ಎಂದಿಗಿಂತ ಚೆನ್ನಾಗಿತ್ತು. ಆದ್ದರಿಂದ ಯಾವುದೆ ಹಾದಿಹೋಕನು ಇಲ್ಲವೆ ಬೆಟ್ಟದಾಳು ಅವಳನ್ನು ಅಂಥ ಸುತ್ತಾಟದ ನಡುವೆ ಕಂಡರೆ? — ಎಂಬ ಹೆದರಿಕೆ ಅವಳ ಬಯಕೆಯನ್ನೆ ಹೆಪ್ಪುಗಟ್ಟಿಸಿತು. ಗುಡಿಸಲಿನ ಏಕಾಂತವೂ ಇಂದು ಒಡೆದೆದ್ದು ಅನಿಸುತ್ತಿತ್ತು. ಏಕೆಂದರೆ ಗೋಡೆಯ ಗಡಿಯಾರವು ಕೀಲಿ ಸುತ್ತುವುದಲ್ಲದೆ, ಮತ್ತೂ ಹೊಗೆ ಕೊಳವೆಯ ಮೂಲೆಗೆ ಮಸಿಯ ಕಣಗಳು ಮಳೆಯಿಂದ ಸಡಿಲಾಗಿ ಉದುರಿದ್ದರಿಂದ ನಿಂತುಬಿಟ್ಟಿತ್ತು.

ಮಧ್ಯಾಹ್ನಕ್ಕೆ ಅವಳು ಕಿಟಕಿಯ ಹೊರಗಡೆ ಸರಸರ ಸಪ್ಪಳ ಕೇಳಿದಳು. ಆದರೆ ಅದು ಒಂದು ನೀರಹಲ್ಲಿಯಾಗಿತ್ತು — ಬಿಸಿಲು ಕಾಯಲು ಎಲೆಗಳಿಂದ ಹೊರಗೆ ಸರಿದು ಬಂದಿತ್ತು. ಇನ್ನೂ ಮುಂಬರುವ ಮೇ ತಿಂಗಳ ತನಕ ಬಿಸಿಲ ಕಿರಣಗಳು ತುಂಬ ಹಿತಕರ.

ಅವಳು ಜಾಲಂದರದೊಳಗಿಂದ ಒಂದೇ ಸಮನೆ ಇಣಿಕಿ ನೋಡುತ್ತಿದ್ದಳು; ಆದರೆ ಏನೂ ಕಾಣಿಸಿದ್ದಿಲ್ಲ. ಎದುರಿಗೆ ಕಳೆದ ವರ್ಷದ ಕಂದು ಎಲೆಗಳ ಹಾಸು ಅವುಗಳ ಮೇಲೆ ಅರಸಿಣ ಹಸಿರಿನ ಈ ಹಂಗಾಮಿನ ಎಲೆಗಳು — ಬಿರುಗಾಳಿಗೆ, ಹಂಗಾಮಿಗೂ ಮುಂಚೆ ಉದುರಿಬಿದ್ದವು. ಮೇಲೆ ಒಂದು ಹಳೆಯ ಬೀಚಮರವು ಚಾಚಿತ್ತು. ಅದಕ್ಕೆ ವಿಶಾಲವಾದ ಕಂಕುಳ ಕುಳಿಗಳು, ಪಕ್ಕಗಳಲ್ಲಿ ದೊಡ್ಡ ಜೇಬುಗನ್ನುಗಳು, ಹಿಂದೆಲ್ಲ ಟೊಂಗೆಗಳನ್ನು ಅಲ್ಲಿಂದ ಕಿತ್ತು ತೆಗೆದುದರಿಂದ, ಒಂದು ಕರಿಬಸವನಹುಳವು ಅದನ್ನು ಏರಲು ಹಣಕುತ್ತಿತ್ತು. ಸತ್ತ ಟೊಂಗೆಗಳು ವಸ್ತುಸಂಗ್ರಹಾಲಯದಲ್ಲಿಯ ಪ್ರಾಚೀನ ಜಲಜಂತುಗಳಂತೆ ಅತ್ತಿತ್ತ ಬಿದ್ದಿದ್ದವು. ಅವುಗಳ ಆಚೆಗೆ ವುಡ್‌ಬೈನ್ ದೇಟುಗಳು ಹಳೆಯ ಹಗ್ಗಗಳಂತೆ ಕೊಳೆಯುತ್ತ ಬಿದ್ದಿದ್ದವು.

ಇನ್ನೊಂದು ಕಿಟಕಿಯಿಂದ ಅವಳಿಗೆ ಕಾಣುವುದೆಂದರೆ ಇನ್ನು ಹೆಚ್ಚು ಮರಗಳು ಬದನಿಕೆಯ ಜಾಕೀಟು ತೊಟ್ಟು ಪಾಚಿಯ ಕಾಲಚೀಲವೇರಿಸಿನಿಂತಿದ್ದವು. ಅವುಗಳ ಮೂಲದಲ್ಲಿ ದೇಟೆ ಇಲ್ಲದ ಹಳದಿಯ ದಾಳಿಂಬೆ, ನಿಂಬೆಯಂತೆ ಅಕ್ರೋಡದಂತೆ ಬೆಳೆದಿದ್ದವು. ಜತೆಗೆ ದೇಟೇ ದೇಟಾಗಿ ಬೆಳೆದ ನಾಯಿಕೊಡೆಗಳೂ ಇದ್ದವು. ಅದಕ್ಕೂ ಮುಂದೆ ಇನ್ನೂ ಹೆಚ್ಚು ಮರ ಇನ್ನೂ ಒತ್ತಾಗಿ ನಿಂತಿದ್ದವು. ತಮ್ಮ ಉಳಿವಿಗಾಗಿಯೇ ಮೇಲಾಟ ನಡೆಯಿಸಿದ್ದವು. ಅವು ಟೊಂಗೆಗಳಿಗೆ ಒಂದನ್ನೊಂದು ತಿಕ್ಕಿದಾಗ ತೊಡೆದಾಗ ಆದ ಗಾಯಗಳಿಂದ ಅಂದಗೆಟ್ಟಂಥವು. ಈ ನೆರೆಹೊರೆಯವರಲ್ಲಿಯ ಘರ್ಷಣೆಯನ್ನು ಅವಳು ಮುಂಚಿನ ರಾತ್ರಿಗೆ ಕೇಳಿದ್ದು. ಅವುಗಳ ಅಡಿಯಲ್ಲಿ ಎಂದೋ ಹಿಂದೆ ಸೋತು ಮಣ್ಣು ಪಾಲಾದ ಮರಗಳ ಕೊಳೆಯುತ್ತಿದ್ದ ಬೊಡ್ಡೆ ಬುಡಗಳು ಅವುಗಳ ಹಾವಸೆಯ ಹಿನ್ನೆಲದಿಂದ ಎದ್ದು ಹಸಿರು ಒಸಡೆಗಳಲ್ಲಿ ನಿಂತ ಕರಿಯ ಹಲ್ಲುಗಳಂತೆ ಕಾಣುತ್ತಿದ್ದವು. ಇನ್ನೂ ದೂರದಲ್ಲಿ, ಅಲ್ಲಲ್ಲಿ ಉದುರಿಬಿದ್ದ ಎಲೆಗಳಿಂದ ವಿಂಗಡಗೊಂಡ ಪಾಚಿಯ ನಡುಗಡ್ಡೆಗಳು ವೈವಿಧ್ಯದ ಬೆನ್ನಿಗೆ ವೈವಿಧ್ಯ ತೋರುತ್ತ ಅಚ್ಚಹಸಿರು ತಿಳಿ ಹಸಿರಾಗಿ ಚಾಚಿದ್ದುವು. ಫರ್ ಗಿಡಗಳಂತೆ, ಪಟ್ಟೆ ರೇಶಿಮೆಯಂತೆ, ಪಟ್ಟೆ ಲೋಹದ ಚುಕ್ಕೆಗಳಂತೆ, ಪಾಚಿಯಲ್ಲದೆ ಭೂಮಿಯ ಇನ್ನಾವ ವಸ್ತುವಿಗೂ ಹೋಲದಂತೆ ವಿಧವಿಧವಾಗಿ ಹಾಸಿದ್ದವು.

ಈ ಶೂನ್ಯದಿವಸದ ಬಿಗಿತ ಗ್ರೇಸಳ ಮನಸ್ಸಿನ ಮೇಲೆ ತೀರ ಮಿಗಿಲಾಯಿತು. ಇನ್ನೊಂದು ದಿನವನ್ನು ಈ ಪರಿಸ್ಥಿತಿಯಲ್ಲಿ ಕಳೆಯುವುದು ಅಶಕ್ಯವೆಂದು ಆಕೆಗೆ ಅನಿಸಿತು. ಕೊನೆಗೆ ಸಂಜೆ ಬಂದಿತು ; ಸೂರ್ಯನು ಭೂಮಿಯ ಮೇಲೆ ತನ್ನ ಗದ್ದವಿಟ್ಟು ಈ ನೆಳಲನ್ನು ಭೇದಿಸಲು ಒಂದು ಇಬನ್ನು ಕಂಡನು. ಮತ್ತು ಈ ಆದ್ರ್ರ ವಾತಾವರಣ

ದಲ್ಲಿ ಕಿರಣ ಜಾಲವನ್ನು ಪಸರಿಸಿದನು ; ಆದರೂ ಒದ್ದೆ ಕಾಂಡಗಳು ಹೊಳೆವಂತೆ, ಬೀಚ ಮರಗಳ ಅಡಿಯ ಎಲೆಗಳ ಮೇಲೆ ಕೆಂಭೆಳಕು ರಾಚಿ ಅವನ್ನು ನೆತ್ತರ ಬಳಿದಂತೆ ಮಾಡಿದನು. ಕೊನೆಗೊಮ್ಮೆ ರಾತ್ರಿ ಕವಿಯಿತು. ಅದರೊಂದಿಗೆ ಅವನು ಮರಳಿ ಬರುವ ಹೊತ್ತು ಬಂದಿತು. ಈ ತನಕ ಅವಳು ಅನಿಶ್ಚಿತತೆಯ ಸ್ಥಿತಿಯಿಂದಾಗಿ ಕುಗ್ಗಿ ಕುಸಿಯುವಂತೆ ಆಗಿದ್ದಳು.

ಸಂಜೆಯ ಸಾದಾ ಊಟ. ಅರೆಪಾಲು ಚಹಾ ತಿಂಡಿ, ಅರೆಪಾಲು ರಾತ್ರಿಯ ಊಟ ; ಗ್ರೇಸಳು ತಯಾರಿಸಿದ್ದ ಹಾಗೆಯೇ ಒಲೆಯ ಮೇಲೆ ಕಾಯುತ್ತಿತ್ತು. ಆದರೂ ಜೈಲ್ಸ ಬರಲಿಲ್ಲ. ಅವನನ್ನು ನೋಡದೆ ಈಗ ೨೪ ತಾಸು ಕಳೆದಿದ್ದವು. ಕೋಣೆಯಲ್ಲಿ ಕತ್ತಲಾದಂತೆ ಬೆಂಕಿಯ ಪ್ರಭೆಯೊಂದೆ ಗೋಡೆಗಳ ಮಬ್ಬಿಗೆ ಅಪ್ಪಳಿಸುತ್ತಿತ್ತು. ಇನ್ನೂ ಅವನಿಂದಾಗಲಿ ಇನ್ನಾರಿಂದಾಗಲಿ ಏನಾದರೂ ಸುದ್ದಿ ಕೇಳದೆ, ಈ ರಾತ್ರಿ ಕಳೆಯುವುದು ತನ್ನ ಶಕ್ತಿಗೆ ಮೀರಿದ್ದೆಂದು ಅವಳಿಗೆ ಮನವರಿಕೆ ಆಯಿತು. ಆದಾಗ್ಯೂ ಎಂಟು ಗಂಟೆ ಕಳೆಯಿತು. ಆದರೂ ಅವನ ಆಕೃತಿ ಕಿಟಕಿಯಲ್ಲಿ ಕಾಣಿಸಿಕೊಳ್ಳಲಿಲ್ಲ.

ಊಟ ಹಾಗೆಯೇ ರುಚಿ ನೋಡದೆ ಉಳಿಯಿತು. ಮೆಲ್ಲಗೆ ಉರಿಯುತ್ತಿರುವ ಕೆಂಡಗಳ ಅಗ್ಗಿಷ್ಟಿಕೆಯ ಮುಂದಿನಿಂದ ದಿಗ್ಗನೆ ಎದ್ದು — ಅಲ್ಲಿ ಅವಳು ಭುಜಗಳಿಂದ ಮೊಣಕಾಲುಗಳನ್ನು ಒಳಗೆ ಹಿಡಿದು ಮೈಮುದುಡಿಕೊಂಡು ಕುಳಿತಿದ್ದಳು — ಅವಳು ಕೋಣೆಯನ್ನು ದಾಟಿ ಬಾಗಿಲ ಬೀಗ ತೆಗೆದಳು ಮತ್ತು ಕಿವಿಗೊಟ್ಟು ಆಲಿಸುತ್ತ ನಿಂತಳು. ಹೊತ್ತು ಕಂತುತ್ತಿದ್ದಂತೆ ಗಾಳಿಯ ಪ್ರತಿಯೊಂದು ಉಸಿರು ನಿಂತಿತ್ತು. ಆದರೆ ಮಳೆಯು ಹಿಂದಿನ ರಾತ್ರಿಯಂತೆ ಒಂದೇ ಸಮನೆ ಟಪಟಪ ಕರೆಯಲು ಸುರುವಾಗಿತ್ತು. ಗ್ರೇಸಳು ಅಲ್ಲಿ ಐದು ಮಿನಿಟು ನಿಂತಿರಬಹುದು. ಅಷ್ಟು ದೂರ ವಲ್ಲದ ತಾಣದಿಂದ ಒಂದು ಹಳೆಯ ಸದ್ದನ್ನು, ಒಂದು ಕೆಮ್ಮನ್ನು ಕೇಳಿದಂತೆ ಅವಳಿಗೆ ಭಾಸವಾಯಿತು. ಅದು ಮತ್ತೊಮ್ಮೆ ಕೇಳಿಸಿತು. ಅದು ವಿಂಟರಬೋರ್ನನದೇ ಆಗಿದ್ದರೆ ಅವನು ಅಲ್ಲಿಯೇ ಅವಳ ಸಮೀಪವೆ ಇರಬೇಕು ; ಹಾಗಾದರೆ ಅವನೇಕೆ ಅವಳಿಗೆ ಭೆಟ್ಟಿ ಕೊಡಲಿಲ್ಲ?

ಅವನಿಗೆ ಭೆಟ್ಟಿ ಕೊಡಲು ಸಾಧ್ಯವಾಗಿರಲಿಕ್ಕಿಲ್ಲ — ಎಂಬ ಒಂದು ಭಯಾನಕ ಸಂದೇಹ ಗ್ರೇಸಳಲ್ಲಿ ಮನೆಮಾಡಿತು. ಅವಳು ಕಂದೀಲಿಗಾಗಿ ವ್ಯಗ್ರಳಾಗಿ ಮೇಲೆ ನೋಡಿದಳು. ಅದು ಅಲ್ಲಿ ಅವಳ ತಲೆಯ ಮೇಲುಗಡೆ ತೂಗುತ್ತಿತ್ತು. ಅದನ್ನು ಹೊತ್ತಿಸಿ ಆ ಸದ್ದಿನ ಕಡೆಗೆ ಹೋಗುವುದೇ ಈ ಭಯಾನಕ ಸಮಸ್ಯೆಯ ಬಗೆಹರಿಕೆಗೆ ತೆರೆದ ದಾರಿಯಾಗಿತ್ತು. ಆದರೆ ಹೊರಗಿನ ಸ್ಥಿತಿಗತಿಗಳು ಅವಳನ್ನು ಅನುಮಾನದಲ್ಲಿ ಕೆಡಹಿದವು. ಮರುಕ್ಷಣಕ್ಕೆ ಅದೇ ನಿಟ್ಟಿನಿಂದ ಬಂದ ಇನ್ನಷ್ಟು ಸದ್ದುಗಳಿಂದ ಅವಳ ಮೈಯೆಲ್ಲ ಬೆವರಲ್ಲಿ ತೊಯ್ದು ತಣ್ಣಗಾಯಿತು.

ಈ ಸದ್ದುಗಳು ಮೇಲು ದನಿಯ ಗೊಣಗಾಟವಾಗಿದ್ದವು ; ಮೊದಮೊದಲು ಮಂದಿ ಏನೋ ಸಂಭಾಷಣೆ ನಡೆಯಿಸಿದಂತೆ, ಆದರೆ ಕ್ರಮೇಣ ಅವು ಒಂದೇ ದನಿಯ

ವಿವಿಧ ಪರಿಗಳೆಂದು ಸ್ಪಷ್ಟವಾಯಿತು. ಅದೊಂದು ಕೊನೆಯಿಲ್ಲದ ಏಕಪಾತ್ರೀಯ ಸಂಭಾಷಣೆ. ಕೆಲಸಲ ಅಂತಹದನ್ನು ನಾವು ಅಚೇತನ ಪ್ರಕೃತಿಯಿಂದಲೂ ಕೇಳುತ್ತೇವೆ. ನೀರು ಹರಿಯುತ್ತಿರುವ ಆಳವಾದ ಗೂಢವಾದ ಸ್ಥಳಗಳಲ್ಲಿ, ಅಥವಾ 'ಈವ್ಹಿ' ಬಳ್ಳಿಯ ಎಲೆಗಳು ಕಲ್ಲಿಗೆ ಪಟಪಟನೆ ಬಡಿಯುತ್ತಿರುವಲ್ಲಿ; ಆದರೆ ಇಲ್ಲಿ ಅವಳಿಗೆ ಕ್ರಮೇಣ ಮನವರಿಕೆ ಆಯಿತು. ಈ ದನಿ ವಿಂಟರಬೋರ್ನನದೆಂದು. ಆದರೆ ಅವನ ಮಾತಿಗೆ ಕೇಳುವವರಾರು?— ಅಷ್ಟು ಮೂಕ, ಅಷ್ಟು ಮೌನ? ಏಕೆಂದರೆ, ಆತ ತ್ವರೆಯಲ್ಲಿ ಎಡಬಿಡದೆ ವಾದಿಸುತ್ತಿದ್ದರೂ, ಮಾತು ಉತ್ತರ ಕೊಟ್ಟಂತೆ ಇದ್ದಿಲ್ಲ.

ಗ್ರೇಸಳ ಮನಸ್ಸಿನಲ್ಲಿ ಒಂದು ಭಯಂಕರ ಸ್ಪಷ್ಟೀಕರಣ ಮೂಡಿ ಹಬ್ಬಿತು. 'ಓ' ಅವಳು ಕೂಗಿದಳು — ತಳಮಳದಲ್ಲಿ. ಅವಳು ಲಗುಬಗೆಯಿಂದ ಹೊರಗೆ ಹೋಗಲು ಸಿದ್ಧಳಾದಳು. 'ಅಯ್ಯೋ ನಾನು ಸ್ವಾರ್ಥದಲ್ಲಿ ಹೇಗೆ ತಪ್ಪಿ ನಡೆದು ಕೊಳ್ಳುತಿದ್ದೇನೆ. ಯಾವಾಗಲೂ — ತೀರ ತೀರ ಸರಿಯಾಗಿ ನಡೆದುಕೊಳ್ಳುತ್ತೇನೆ. ಆ ನನ್ನ ಕ್ರೂರ ಮರ್ಯಾದೆಯು ಈ ನನ್ನ ಪ್ರಿಯತಮ ಹೃದಯವನ್ನು, ಯಾವ ಹೆಣ್ಣು ತನ್ನೆದೆಗೆ ಅಪ್ಪಿಕೊಂಡಿರಲಾರದಂಥ ಮುದ್ದು ಹೃದಯವನ್ನು ಕೊಲ್ಲುತ್ತಿರ ಬಹುದೇ?'

ಹೀಗೆ ತನ್ನಷ್ಟಕ್ಕೆ ಹಲಬುತ್ತ ಅವಳು ಕಂದೀಲನ್ನು ಹಚ್ಚಿದಳು ಮತ್ತು ಮರು ವಿಚಾರವಿಲ್ಲದೆ ಆ ಗೊಣಗು ಸದ್ದು ಬಂದ ನಿಟ್ಟಿನಲ್ಲಿ ನಡೆದಳು. ಆ ದಾರಿ ಸಣ್ಣ ಕಾಲುದಾರಿ. ನಾಲ್ವತ್ತು ಮಾರು ದೂರ. ತಟ್ಟಿಗಳ ಚಿಕ್ಕ ಚಪ್ಪರಕ್ಕೆ ಅದು ಮುಗಿಯುತಿತ್ತು. ಈ ಚಪ್ಪರ ಕಾಳು ರಾಶಿ ಹಾಕುವ ಅಂಕಣಕ್ಕಿಂತ ದೊಡ್ಡದೇನೂ ಅಲ್ಲ. ಮರ ಕಡಿಯುವ ಹಂಗಾಮಿನಲ್ಲಿ ಅಂಥ ತಟ್ಟಿಯ ಕೋಣೆಗಳು ಈ ಬೆಟ್ಟ ಕಾನುಗಳಲ್ಲಿ ಅಲ್ಲಲ್ಲಿ ಕಂಡುಬರುತ್ತಿದ್ದವು. ಇದು ಒಂದು ಗುಡಿಸಲು ಎನ್ನುವುದಕ್ಕೂ ಆಗದಷ್ಟು ಚಿಕ್ಕದು. ಇದರೊಳಗೆ ಎದ್ದು ನಿಲ್ಲಲೂ ಆಗುತ್ತಿದ್ದಿಲ್ಲ. ಅದು ಉರುವಲ ದಾಸ್ತಾನು ಮಾಡಲಿಕ್ಕೆ ನಿಲ್ಲಿಸಿದ ಸೂರು ಎಂದು ತೋರುತಿತ್ತು. ಗ್ರೇಸಳ ಕಡೆಯ ಬದಿಯು ತೆರೆದಿತ್ತು. ಅಲ್ಲಿ ಒಳಗಡೆ ಬೆಳಕನ್ನು ಹಾಯಿಸಿದಾಗ ಅವಳು ಕಂಡದ್ದೂ ಆವರೆಗೆ, ಅಲ್ಲಿಗೆ ಬರುವ ದಾರಿಯಲ್ಲಿ ತುಣಕುಮಿಣಕಾಗಿ ಭಯಾತುರ ಪೂರ್ವ ಗ್ರಹಿಕೆಯು ಚಿತ್ರಿಸಿಕೊಂಡ ದೃಶ್ಯವೇ ಆಗಿತ್ತು.

ಒಳಗಡೆ ಹುಲ್ಲಿನ ಮೇಲೆ ಅವಳ ಪ್ರೇಮಿಕನು ತನ್ನ ಹಳೆಯ ಬಟ್ಟೆಗಳಲ್ಲಿಯೇ ಬಿದ್ದಿದ್ದನು — ಅವಳು ಅಲ್ಲಿ ಬಂದು ಉಳಿದಂದಿನಿಂದಲೂ, ಅದೇ ಬಟ್ಟೆಗಳಲ್ಲಿ ಆತ ನನ್ನು ಅವಳು ನೋಡಿದ್ದಳು. ಇಷ್ಟೇ, ಈಗ ಅವನ ಹ್ಯಾಟು ತಲೆಗಿದ್ದಿಲ್ಲ. ಅವನ ಕೂದಲು ಕೆದರಿ ಜಡೆಗಟ್ಟಿತ್ತು.

ಅವನ ಬಟ್ಟೆಗಳೂ ಹುಲ್ಲೂ, ಎರಡೂ ಮಳೆಯಿಂದ ಒದ್ದೆಮುದ್ದೆ ಆಗಿದ್ದವು. ಅವನ ತೋಳುಗಳು ತಲೆಯ ಮೇಲ್ಗಡೆಗೆ ಒಗೆದಂತಿದ್ದವು. ಅವನ ಮೋರೆ ರಕ್ತ ಒತ್ತಿ ಬಂದು ಅಸ್ವಾಭಾವಿಕ ಕೆಂಪಾಗಿತ್ತು. ಅವನ ಕಣ್ಣುಗಳಲ್ಲಿ ಉರಿಯುವ ಹೊಳಪಿತ್ತು.

ಅವು ಅವಳ ಕಣ್ಣಿಗೆ ಕೂಡಿದರೂ ಆತ ಅವಳನ್ನು ಗುರುತಿಸಲಿಲ್ಲವೆಂದು ಆಕೆ ಕಂಡಳು.

'ಓ ಜೈಲ್ಸ', ಆಕೆ ಹಲುಬಿದಳು. 'ಇದೇನು ನಾನು ಮಾಡಿಬಿಟ್ಟೆ ನಿನಗೆ.'

ಆದರೆ ಅವಳು ತನ್ನನ್ನು ಹಳಿದುಕೊಳ್ಳಲಿಕ್ಕೆಂದು ಕೂಡ ಅಲ್ಲಿ ಕಾಲಹರಣ ಮಾಡಲಿಲ್ಲ. ಆಗ ಚಿಂತಿಸತಕ್ಕ ಮೊದಲನೆಯ ಸಂಗತಿಯೆಂದರೆ ಅವನನ್ನು ಗುಡಿಸಲಿನೊಳಗೆ ಒಯ್ಯುವುದು.

ಆ ಪರಿಶ್ರಮವನ್ನು ಗ್ರೇಸಳು ಹೇಗೆ ನೆರವೇರಿಸಿದಳೆಂಬುದನ್ನು ಅವಳೂ ಸರಿಯಾಗಿ ವಿವರಿಸಲಾರಳು. ಆದರೆ ಅವನ ಸುತ್ತು ತನ್ನ ತೋಳುಗಳ ತೆಕ್ಕೆ ಹಿಡಿದು ಅವನನ್ನು ಕೂತ ಭಂಗಿಯಲ್ಲಿ ಎತ್ತಿ, ಚಪ್ಪರದ ಒಂದು ಸಡಿಲಾದ ತಟ್ಟಿಯನ್ನು ತನ್ನ ಶಕ್ತಿ ಎಲ್ಲ ಹಾಕಿ ಕಿತ್ತು, ಅದರ ಮೇಲೆ ಅವನನ್ನು ಒರಗಿಸಿ ಅದರ ತುದಿಯನ್ನು ಎತ್ತಿಹಿಡಿದು ಗುಡಿಸಲಿನ ಬಾಗಿಲಿನವರೆಗೆ ಎಳೆದು ತಂದಳು. ತುಸು ನಿಧಾನಿಸಿಕೊಂಡ ನಂತರ ಒಳಗಡೆಗೆ ತಂದಳು.

ಅವಳು ಮಾಡಿದ್ದಕ್ಕೆಲ್ಲ ಜೈಲ್ಸ ಅರಮುರವಿನಲ್ಲಿ ಪ್ರತಿಭಟಿಸದೆ ಅನುಕೂಲವಾದದ್ದು ತುಸು ಸೋಜಿಗವೇ ಸರಿ. ಆದರೆ ಅವನು ಒಂದು ಕ್ಷಣ ಕೂಡ ಅವಳನ್ನು ಗುರುತಿಸಲಿಲ್ಲ. ತನ್ನಷ್ಟಕ್ಕೇ ತ್ವರಿತ ಸ್ವಗತ ಸಂಭಾಷಣೆಯನ್ನು ಮುಂದರಿಸಿದ್ದನು; ತಾನು ಮಾನಸಿಕವಾಗಿ ಬದುಕುತಿದ್ದ ಸ್ವಪ್ನಲೋಕದಲ್ಲಿಯೇ, ಯಾರೋ ದೇವತೆ ಅಥವಾ ಅತಿ ಭೌತಿಕ ವ್ಯಕ್ತಿಯೆಂದು, ಅವಳನ್ನು ಕಂಡುಕೊಂಡಿರಬೇಕು. ಈ ಕಾರ್ಯಭಾರವು ಅವಳಿಗೆ ಹತ್ತು ಮಿನಿಟಿಗೂ ಹೆಚ್ಚು ಹೊತ್ತು ತೆಗೆದುಕೊಂಡಿತು. ಅದರೆ ಅಷ್ಟು ಹೊತ್ತಿನಲ್ಲಿ, ಅವಳು ಮಿಗಿಲಾಗಿ ಕೃತಜ್ಞತೆ ತೋರುವಂತೆ, ಅವನು ಗುಡಿಸಲಲ್ಲಿ ಅವಳ ಮಂಚದ ಮೇಲೆ ಮಲಗಿದ್ದನು. ಅವನ ಒದ್ದೆ ಬಟ್ಟೆಗಳನ್ನು ಬದಲಿಸಲಾಗಿತ್ತು.

ಆಗ ದುರ್ದೈವಿಯಾದ ಗ್ರೇಸಳು ಅವನನ್ನು ಮೇಣಬತ್ತಿಯ ಬೆಳಕಿನಲ್ಲಿ ಅವಲೋಕಿಸಿದಳು. ಅವನ ಚರ್ಯೆಯಲ್ಲಿ ಅವಳನ್ನು ಕಂಗೆಡಿಸುವಂತಹದೇನೋ ಕಳೆ ಇತ್ತು. ಅವನ ವಿಚಾರಗಳ ನುಗ್ಗಿನಲ್ಲಿ ಮಿನಿಟು-ಮಿನಿಟಿಗೂ ವೇಗ ಹೆಚ್ಚುತಿತ್ತು. ಅವನ ಆತ್ಮವು ಕಲ್ಪನೆಯ ವಿಶ್ವದಲ್ಲಿ ಧೂಮಕೇತುವಿನಂತೆ ಅಂಡಲೆಯುತಿತ್ತು — ವಿಕ್ಷಿಪ್ತ, ಅನೂಹ್ಯ ಮತ್ತು ಅನುಸರಿಸಲಾರದ ರೀತಿಯಲ್ಲಿ.

ಗ್ರೇಸಳ ವ್ಯಗ್ರತೆ, ಚಿತ್ತವಿಭ್ರಮ, ಅವನದಷ್ಟೇ ಮಿಗಿಲಾಗಿತ್ತು. ಕೆಲವೇ ಗಳಿಗೆಗಳಲ್ಲಿ ಅವಳಿಗೆ ಅವನು ಸಾಯಲು ಬಂದಿದ್ದಾನೆಂದು ಅನಿಸಿತು. ತನ್ನ ಈ ವಿಚಾರವನ್ನು ಹತ್ತಿಕ್ಕಲಾಗದೆ ಅವಳು ಅವನ ಬದಿಗೆ ಮಂಡಿಯೂರಿ ಅವನ ಕೈಗಳನ್ನು, ಮೋರೆಯನ್ನು, ಕೂದಲನ್ನು ಮುತ್ತಿಟ್ಟು ಸಣ್ಣ ದನಿಯಲ್ಲಿ ಮರುಗಲು ಆರಂಭಿಸಿದಳು, 'ಅಯ್ಯೊ, ನಾ ಹೇಗೆ ಹೀಗೆ ಮಾಡಿದೆ? ನಾ ಹೇಗೆ ಹೀಗೆ ಮಾಡಿದೆ?'

ಅವನ ಸ್ವಭಾವ ಪರಿಚಯು ಅವಳಿಗೆ ಚೆನ್ನಾಗಿ ಇತ್ತು; ಆದರೂ ಅವಳ ಭೀರು ನೈತಿಕತೆಯು ಅವನ ದಾಕ್ಷಿಣ್ಯದ ಬೆಲೆಯನ್ನು ಕಡಿಮೆ ಕಟ್ಟಿತ್ತು. ಅವನ ಸ್ವಭಾವದ

ಪರಿಶುದ್ಧಿ, ಅವನ ಧರ್ಮಭೀರುವಾದ ನಯ-ನಾಜೂಕು, ಅವಳು ಪೂರ್ತಿ ಅರಿತು ಕೊಂಡಿದ್ದೇ ಇಲ್ಲ. ಅದನ್ನು ಮನಗಂಡಿದ್ದು ಈಗಲೇ. ಅವಳ ಪ್ರತ್ಯಕ್ಷ ಸಾನ್ನಿಧ್ಯ ದಲ್ಲಿ, ಏಕಾಂತದಲ್ಲಿ ಅವನು ಬಗೆದ ವಿಚಿತ್ರ ಆತ್ಮ ಯಜ್ಞದಲ್ಲಿ — ಈಗಲೇ ಅವನ ಸ್ವಭಾವದ ಸ್ವರೂಪ ಪ್ರಕಟವಾದದ್ದು.

ಇದರ ಮನವರಿಕೆ, ಅವನ ಕುರಿತು ಮೊದಲೆ ಇದ್ದ ಆಳವಾದ ಮಮತೆಗೆ, ಪೂಜ್ಯತೆಗೆ ಕಡಿಮೆಯಿಲ್ಲದ ಭಾವನೆಯನ್ನೊಂದು ಸೇರಿಸಿತು. ಈ ಹೆಣ್ಣಿನಲ್ಲಿ ಗ್ರೀಕ್ ಪುರಾಣಗಳಲ್ಲಿ ಪ್ರಣಯಕ್ಕೆ ಹೆಸರಾದ ಅಫ್ರೊಡಾಯಿಟ್ ದೇವಿಗಿಂತ ಚಾರಿತ್ರ್ಯಕ್ಕೆ ಹೆಸರಾದ ಆರ್ಟಿಮಿಸ್ ದೇವಿಯ ಅಂಶವೇ ಹೆಚ್ಚಾಗಿತ್ತು. ಅಂದಾಗ ಪ್ರಣಯದ ಕಿಂಚಿತ್ ಲೋಪ ವನ್ನು ಪೂಜ್ಯಭಾವವು ತುಂಬಿಕೊಂಡಿತು.

ಕೋಮಲ ವೃತ್ತಿಯ ನರ್ಸಳು ಮಾಡಬಹುದಾದ ಆರೈಕೆಯನ್ನೆಲ್ಲ ಗ್ರೇಸಳು ಮಾಡಿದಳು ಮತ್ತು ಬೇನಿಗನು ಮೂರ್ಛಿತನಾಗಿದ್ದರೂ ಅವನ ಕುರಿತು ತನ್ನ ಆಸ್ಥೆ ಯನ್ನು ಕೃತಿಯಲ್ಲಿ ವ್ಯಕ್ತ ಪಡಿಸುವ ಈ ಸಾಮರ್ಥ್ಯವು ಅವಳಿಗೆ ಒಂದು ಬಗೆಯ ಖಿನ್ನ ಸಂತೋಷವನ್ನು ತಂದು ಕೊಟ್ಟಿತು. ಅವಳು ಅವನ ಕಾದ ತಲೆಯನ್ನು ತೊಳೆಯು ತ್ತಿದ್ದಳು; ಅವನ ತತ್ತರಿಸುವ ಕೈಗಳನ್ನು ಹಿಡಿದಿಡುತ್ತಿದ್ದಳು. ಅವನ ಒಣಗಿದ ತುಟಿ ಗಳನ್ನು ಒದ್ದೆಮಾಡುತಿದ್ದಳು. ಅವನ ಉರಿಯುವ ಕಣ್ಣೆವೆಗಳನ್ನು ತಂಪುಗೊಳಿಸು ತ್ತಿದ್ದಳು. ಅವನ ಬಿಸಿಯಾದ ಮೈಯನ್ನು ಸ್ಪಂಜದಿಂದ ಉಜ್ಜುತಿದ್ದಳು. ಮತ್ತು ಅವನಿಗೆ ಯಾವುದೇ ರೀತಿ ಗುಣ ಮಾಡಬಹುದೆಂದು ತನ್ನ ಕಲ್ಪನೆಗೆ ತೋಚಬಹು ದಾದುದನ್ನೆಲ್ಲ, ಆ ಮನೆಯಲ್ಲಿ ಸಿಗಬಹುದಾದುದನ್ನೆಲ್ಲ ಉಪಯೋಗಿಸಿ ಅವನನ್ನು ಉಪಚರಿಸುತಿದ್ದಳು. ಇದಕ್ಕೆಲ್ಲಾ ತಾನೇ ಕಾರಣ. ಕೆಲಮಟ್ಟಿಗಾದರೂ ಕಾರಣ ವಾಗಿರಬಹುದೆಂಬ ಭಾವನೆಯು ಅವಳ ದುಃಖಕ್ಕೆ ದುರ್ದಶೆಯನ್ನು ಸೇರಿಸಿತ್ತು.

ಈ ದಿನಕ್ಕೆ 6 ತಿಂಗಳ ಹಿಂದೆ ಇಂಥದೇ ಒಂದು ದೃಶ್ಯವು ಯಾಂತ್ರಿಕ ಅಂಶ ಗಳಲ್ಲಿ ಇದನ್ನೇ ಹೋಲುವ ಸನ್ನಿವೇಶವು ಹಿಂಟೋಕ ಮನೆಯಲ್ಲಿ ಅಭಿನಯಿಸಲ್ಪಟ್ಟಿತ್ತು. ಅದು ಅವರಿಬ್ಬರ ಬಾಳಿಗೆ ಜೀವಾಳದ ಸಂಪರ್ಕವಿದ್ದ ಇನ್ನೊಂದು ಜೋಡಿಯ ನಡುವೆ ನಡೆದಿತ್ತು. ಬಹಿರಂಗವಾಗಿ ಹೀಗೆಯೇ ಅದು ಇದ್ದಿತು. ಆದರೆ ಆತ್ಮಿಕವಾಗಿ ಅದಕ್ಕೂ ಇದಕ್ಕೂ ಅನಂತವಾದ ಅಂತರ. ಆದರೆ ಹೆಣ್ಣಿನ ಭಕ್ತಿಯು ಎರಡು ಪ್ರಸಂಗಗಳಿಗೂ ಸಮಾನವಾದ ಅಂಶವಾಗಿತ್ತು.

ಗ್ರೇಸಳು ತನ್ನ ಮಮತೆಯ ಭಂಗಿಯಿಂದ ಎದ್ದಳು. ಮತ್ತು ತನ್ನ ಶಕ್ತಿಗಳನ್ನು ಹುರಿಗೊಳಿಸಿಕೊಂಡು ಒಂದು ಸಂಗತಿಯನ್ನು ಕಂಡುಕೊಂಡಳು—ಕೂಡಲೆ ವ್ಯವಹಾರಿಕ ವಾಗಿ ಏನಾದರೊಂದು ಮಾಡಲಿಕ್ಕೇ ಬೇಕು. ಕ್ಷಣಿಕ ಭಾವಾವೇಶದ ಭರದಲ್ಲಿ ಅವಳಿಗೆ ಅನಿಸಿತ್ತು; ಅವನನ್ನು ತನ್ನ ವಶದಲ್ಲಿಯೇ ಇಟ್ಟುಕೊಳ್ಳಬೇಕೆಂದು. ಹಾಗೆ ಎಷ್ಟೇ ಅನಿಸಿದರೂ ಅವನನ್ನು ಜೀವಂತ ಉಳಿಸುವ ಶಕ್ಯತೆ ಇರುವನಕವೂ ವೈದ್ಯಕೀಯ ಸಹಾಯವೂ ಅವಶ್ಯವಿತ್ತು. ಆದರೆ ಅಂಥ ಸಹಾಯವು ಅವಳ ಅಜ್ಞಾತವಾಸಕ್ಕೆ

ಮರಣಪ್ರಾಯ. ಇನ್ನು ಅವನಿಗೆ ಒಳಿತಾಗುವ ಸಂಭವ ಈಗ ಅನಿಸುವುದಕ್ಕಿಂತ ಕಡಿಮೆ ಇದ್ದರೂ, ಅವಳು ಅವನಿಗಾಗಿ ಆ ಗಂಡಾಂತರಕ್ಕೆ ತನ್ನನ್ನು ಒಡ್ಡಿಕೊಳ್ಳಲೂ ಸಿದ್ಧಳು. ಈಗ ಪ್ರಶ್ನೆ ಸಮರ್ಥನೂ ಸಮೀಪನೂ ಆದ ಡಾಕ್ಟರನನ್ನು ಅವಳು ಎಲ್ಲಿ ಹುಡುಕ ಬೇಕು ?

ಅಂಥ ಒಬ್ಬ ಮನುಷ್ಯನಿದ್ದನು ; ಒಬ್ಬನೇ ಇದ್ದನು — ಎಟಕಂವಷ್ಟು ಅಂತರದಲ್ಲಿ ವಿಂಟರಬೋರ್ನನ ಬಾಳನ್ನು ಉಳಿಸುವದು ಶಕ್ಯವಿದ್ದರೆ ಅದನ್ನು ಮಾಡ ಬಲ್ಲ ಮಿದುಳುಳ್ಳ ಮನುಷ್ಯನು ಆತ. ಮಾನವೀಯ ಒತ್ತಾಯವು ಅವನನ್ನೂ ತರಬಲ್ಲ ದಾದರೆ, ಆ ಮನುಷ್ಯನನ್ನು ಜೈಲ್ಸನ ಮಗ್ಗಲಲ್ಲಿ ತಂದು ನಿಲ್ಲಿಸಬೇಕು. ಅದು ಅವಳ ಪಲಾಯನಕ್ಕೆ ಪೂರ್ತಿ ಭಂಗ ತರುವಂತಹದು, ಆದರೂ ಆ ಪ್ರಯತ್ನ ಮಾಡಲೇಬೇಕು.

ಆದಾಗ್ಯೂ ಅವಳು ತನ್ನ ರೋಗಿಯನ್ನು ಬಿಟ್ಟು ಹೋಗಲು ಹೆದರಿದಳು. ಮಿನಿಟುಗಳು ನಾಗಾಲೋಟದಿಂದ ಓಡುತ್ತಿದ್ದವು. ಆದರೂ ಅವಳು ತನ್ನ ನಿರ್ಗಮನವನ್ನು ಮುಂದೂಡಿದಳು. ಕೊನೆಗೊಮ್ಮೆ ಹನ್ನೊಂದು ಗಂಟೆ ಆದಾಗ, ವಿಂಟರಬೋರ್ನ ಅಸ್ವಸ್ಥ ನಿದ್ದೆಯಲ್ಲಿ ಮಲಗಿದನು. ಅದು ಅವಳಿಗೆ ಒಂದು ಅವಕಾಶ ಒದಗಿಸಿದಂತೆ ಆಯಿತು.

ಲಗುಬಗೆಯಿಂದ ಅವನನ್ನು ಆದಷ್ಟು ಸುಖವಾಗಿ ಮಲಗುವಂತೆ ಮಾಡಿ ತನ್ನ ಬಟ್ಟೆ ತೊಟ್ಟು ಕಪಾಟಿನಲ್ಲಿ ತೂಗುತ್ತಿರುವ ಕಟ್ಟಿನೊಳಗಿಂದ ಒಂದು ಹೊಸ ಮೇಣ ಬತ್ತಿಯನ್ನು ತೆಗೆದುಕೊಂಡು ಅದನ್ನು ಹಚ್ಚಿ ಅದರ ಬೆಳಕು ಅವನ ಕಣ್ಣ ಮೇಲೆ ಬೀಳದಂತೆ ಇಟ್ಟು ಅವಳು ಬಾಗಿಲನ್ನು ಎಳೆದುಕೊಂಡು ಹೊರಟಳು. ಆಗ ಮಳೆ ಇದ್ದಿಲ್ಲ.

ವಿಂಟರಬೋರ್ನನ ಚೇತನ ಅವಳಿಗೆ ಜತೆಕೊಡುವಂತಿತ್ತು. ಮತ್ತು ಕತ್ತಲೆಯ ಎಲ್ಲ ಭಾವನೆಯನ್ನು ಅವಳ ಮನಸ್ಸಿನಿಂದ ಹೊರದೂಡಿತ್ತು. ಮಳೆಯು ಹಸಿ ಸೌದೆಗೂ, ಅವಳ ಹಾದಿಯಲ್ಲೆಲ್ಲ ಬಿದ್ದು ಕೊಳೆಯುತ್ತಿದ್ದ ಎಲೆಗಳಿಗೂ ರಂಜಕದ ಮಿರುಗನ್ನು ಕೊಟ್ಟಿತ್ತು. ಅದು ಅವಳ ಪಾದಗಳಿಂದ ಚದರಿದಾಗ ಆಚೆ ಈಚೆ ಹಾಲಿನ ಹೊಳೆಯಂತೆ ಹರಡುತ್ತಿತ್ತು. ಆ ಬೆಟ್ಟದೊಳಗಿಂದ ಯಾವುದೇ ಹತ್ತಿರದ ಜನ ಬಹಳ ನಡೆದಾಡ ದಂಥ ಅಡ್ಡದಾರಿಯಲ್ಲಿ ನುಗ್ಗಿ ದಾರಿ ತಪ್ಪುವ ಅಪಾಯಕ್ಕೆ ಗುರಿಯಾಗಲು ಅವಳು ಬಯಸಲಿಲ್ಲ. ಆದ್ದರಿಂದ ಅವಳು ಹೆದ್ದಾರಿಯ ಗುಂಟ ಸುತ್ತು ಹಾಯುವ ಬಯಲ ಹಾದಿಯನ್ನು ಹಿಡಿದಳು. ಅನನ್ಯ ತತ್ಪರತೆಯ ಉದ್ದೇಶದಿಂದ ಪ್ರೇರಿತಳಾಗಿ ಅವಳು ಅತಿವೇಗದಿಂದ ಸಾಗಿದಳು. ಈ ತತ್ಪರತೆಯಲ್ಲಿ ವಿರಕ್ತತೆಯ ಒಂದು ಧೈರ್ಯವೂ ಅಡಕವಾಗಿತ್ತು. ಮತ್ತು ಏನೂ ಧೃತಿಗೆಡದೆ ಒಂದು ಗಂಟೆ ಕಾಲ ಮಾರ್ಗವನ್ನು ಕ್ರಮಿಸಿ ಅವಳು ಹಾಯಿಕ್‌ಸ್ಥಾಯಿಕ್ ದಿಬ್ಬವನ್ನು ಕಂಡಳು ಮತ್ತು ಅದೇ ಹಿಂಟೋಕಿಗೆ, ಎಲ್ಲಿಂದ ಅವಳು ಕೆಲವು ದಿನ ಹಿಂದೆ ಅನಿವಾರ್ಯ ಭಯಾತಂಕದಿಂದ ತಾಳ್ಮೆಗೆಟ್ಟು ಕಾಲ್ದೆಗೆದಿದ್ದಳೊ ಅದೇ ಮನೆಗೆ, ಬಂದಳು. ಆದರೆ ಈಗ ಒದಗಿದ ಸಂಗತಿ ಎಲ್ಲ ಸ್ಥಿತ್ಯಂತರ, ಯೋಗಾಯೋಗಗಳಿಗಿಂತಲೂ ಮಿಗಿಲಾಗಿ ಅವಳ ಯೋಜನೆಯನ್ನೆ

ಬುದ್ಧಿಪೂರ್ವಕವಾಗಿ ವಿಫಲಗೊಳಿಸುವಂತೆ, ಅದರ ವೈಯಕ್ತಿಕ ಪರಿಣಾಮಗಳ ಎಲ್ಲ ಪರಿವೆಯನ್ನು ಮುಳುಗಿಸುವಂತೆ ಇತ್ತು.

ಫಿಟ್ಜ್ಪಿಯರ್ಸನ ಒಂದು ವಿಶೇಷವನ್ನು ಗ್ರೇಸಳು ಎಂದಿಗೂ ಆದರದಿಂದ ಕಾಣುತ್ತಿದ್ದಳು. ಅದು ಅವನ ವ್ಯವಸಾಯಿಕ ನೈಪುಣ್ಯ. ಇದರಲ್ಲಿ ಅವಳು ತಪ್ಪಿದ್ದಿಲ್ಲ. ಅವನ ಒಳನೋಟಕ್ಕೆ ಸರಿಯಾಗಿ ಅವನ ಛಲದ ಹಿಡಿತವಿದ್ದಿದ್ದರೆ, ಈಗಿನಂತೆ ಅದೊಂದು ಆಕಸ್ಮಿಕ ಅವಧಿಯ ವಿಷಯವಾಗಿರದಿದ್ದರೆ, ಖ್ಯಾತಿಯೂ ಸಂಪತ್ತೂ ಅವನ ಮಟ್ಟಿಗೆ ಬರೆ ಬಯಕೆಯ ಗುಟ್ಟಾಗಿ ಎಂದೂ ಉಳಿಯಬೇಕಾಗಿದ್ದಿಲ್ಲ. ಸಾಂಪ್ರದಾಯಿಕ ಪ್ರಮಾದಗಳಿಂದ, ಹೆಪ್ಪುಗಟ್ಟಿದ ಪೂರ್ವಗ್ರಹಿಕೆಗಳಿಂದ ಅವನು ಪಡೆದ ಬಿಡುಗಡೆಯೆ ಹಿಂಟೋಕದಲ್ಲಿಯೂ ಅದರ ನೆರೆಹೊರೆಯಲ್ಲಿಯೂ ಅವನ ಪ್ರಗತಿಯನ್ನು ಕುದುರಿಸುವ ಬದಲು, ಕುಂಠಿತವಾಗಿ ಮಾಡಿತ್ತು. ನಿಸರ್ಗವೇ ಗುಣಮಾಡುತ್ತಿದ್ದು, ಡಾಕ್ಟರನ ಕೆಲಸ ಅದಕ್ಕೆ ದಾರಿ ಸುಗಮಮಾಡಿ ಕೊಡುವುದು ಮಾತ್ರ ಎಂಬ ಸಂಗತಿಯಲ್ಲಿ ಅಲ್ಲಿಯ ಜನ ನಂಬುತ್ತಲೆ ಇದ್ದಿಲ್ಲ.

ತಂದೆಯ ಮನೆಯ ಇದುರಿಗೆ ಗ್ರೇಸಳು ಬಂದಾಗ ಮಧ್ಯ ರಾತ್ರೆ ಮೀರಿತ್ತು. ಈಗ ಈ ಮನೆಯಲ್ಲಿ ಅವಳ ಗಂಡನ ವಾಸ್ತವ್ಯ ತಾತ್ಕಾಲಿಕವಾಗಿ ಇರಬೇಕು, ಆತ ಈಗಾಗಲೇ ಹೊರಟು ಹೋಗಿರದಿದ್ದರೆ. ವಿಂಟರಬೋರ್ನನ ವಸತಿಸ್ಥಾನದ ಸುತ್ತಲಿನ ಕಾನುಗಳ ದಟ್ಟಣೆಯಿಂದ ಹೊರಬಂದಂದಿನಿಂದ ಆರ್ದ್ರವಾದ ಶರತ್ಕಾಲದಲ್ಲಿ ಒಂದು ವ್ಯಾಪಕವಾದ ಬೆಳಕು, ಮೋಡಗಳು ಮುಸುಕಿದ್ದರೂ ತೂಗುತ್ತಿತ್ತು. ಅಂದರೆ ಕೆಲ ಹೊತ್ತಿನ ವೃದ್ಧಿಹೊಂದಿದ ಚಂದ್ರ ಈ ಮುಗಿಲ ಕಮಾನಿನ ಆಚೆಗೆ ಬೆಳಗುತ್ತಿದ್ದನು; ಎರಡೂ ಬಿಳಿಯ ಗೇಟುಗಳೂ, ಅವುಗಳ ಕಂಬಗಳ ಮೇಲಿನ ಎರಡೂ ಗೋಲಿಗಳೂ ಪುಷ್ಟವಾಗಿದ್ದವು. ಇತ್ತೀಚೆಯ ಮಳೆಯು ಬಿಟ್ಟ ಮಡುವುಗಳೂ, ಒದ್ದೆಯಾದ ಗಾಲಿಯ ಗೆರೆಗಳೂ ಹೆಣದ ಕಣ್ಣಿನಂತೆ ತಣ್ಣಗೆ ಮಂದವಾಗಿ ಹೊಳೆಯುತ್ತಿದ್ದವು. ಅವಳು ಕೆಳಗಿನ ಗೇಟಿನಿಂದ ಪ್ರವೇಶಿಸಿದಳು. ಮತ್ತು ಪಟಾಂಗಣವನ್ನು ದಾಟಿ ತನ್ನ ಮದುವೆಯಂದಿನಿಂದ ತನ್ನದಾದ ಕೋಣೆಗಳಿದ್ದ ಪಾರ್ಶ್ವದ ಕಡೆಗೆ ಹೋದಳು. ಅಲ್ಲಿ ಒಂದು ಕಿಟಕಿಯ ಕೆಳಗೆ ನಿಂತಳು. ಅವಳ ಗಂಡ ಮನೆಯಲ್ಲಿ ಇದ್ದದ್ದೇ ಆದರೆ, ಆ ಕಿಟಕಿಯೆ ಅವನ ಮಲಗುವ ಕೋಣೆಗೆ ಬೆಳಕು ಕೊಡುವುದಾಗಿತ್ತು.

ಅವಳು ತಡವರಿಸಿದಳು, ಎದೆಯ ಮೇಲೆ ಕೈಯಿಟ್ಟುಕೊಂಡು ತಡೆದಳು — ತನಗೆ ತಾನೇ ವಿವಶಳಾಗಿ ತನ್ನ ಎಲ್ಲ ಮರೆತ ತಪ್ಪುಗಳಿಗೆ ಕಾರಣನಾದವನನ್ನು ತನ್ನೆದುರು ಕರೆಯುವುದೇ ? ಅಯ್ಯೊ — ಮುದಿ ಜೋನ ಮೈಲುಗಟ್ಟಲೆ ದೂರ; ಜೈಲ್ಸ ಬಹುಶಃ ಸಾಯುತ್ತಿದ್ದಾನೆ — ತಾನು ಇನ್ನೇನು ಮಾಡಲಿ ?

ಪರಿಶ್ರಮಕ್ಕಿಂತ ಹೆಚ್ಚಾಗಿ ತನ್ನ ಪರಿಸ್ಥಿತಿಯ ಅರಿವಿನಿಂದಾಗಿ ಅವಳು ತುಂಬ ಬೆವೆತಳು. ಆ ಸ್ಥಿತಿಯಲ್ಲಿಯೆ ಕೆಲವು ಮಳಹರಳು ಎತ್ತಿಕೊಂಡು ಕಿಟಕಿಯ ಗಾಜಿನ ಚೌಕುಗಳ ಕಡೆಗೆ ಒಗೆದಳು ಮತ್ತು ಪರಿಣಾಮಕ್ಕಾಗಿ ಕಾಯ್ದಳು. ಫಿಟ್ಜ್ಪಿಯರ್ಸ

ಮೊದಲಿಗೆ ಅಲ್ಲಿ ವಾಸ್ತವ್ಯಕ್ಕೆ ಬಂದಾಗ ಜೋಡಿಸಿದ ಇರುಳು ಗಂಟೆ ಅಲ್ಲಿಯೇ ಉಳಿದಿತ್ತು. ಆದರೆ ಅವನ ಪ್ರಾಕ್ಟೀಸು ಕುಗ್ಗಿ ಅವನೂ ಇನ್ನೊಬ್ಬಳೊಂದಿಗೆ ಪರಾರಿಯಾಗಿ ಹೋದಂದಿನಿಂದ ಆ ಗಂಟೆಯು ಉಪಯೋಗವಾಗಿಯೇ ಇದ್ದಿಲ್ಲ. ಆದ್ದರಿಂದ ಅವಳು ಅದನ್ನು ಜಗ್ಗುವ ಸಾಹಸ ಮಾಡಲಿಲ್ಲ.

ಈ ಕೋಣೆಯಲ್ಲಿ ಯಾರು ಮಲಗಿದ್ದರೋ ಅವಳು ಕೊಟ್ಟ ಸೂಚನೆಯನ್ನು — ಅದು ಎಷ್ಟೇ ಅಲ್ಪವಾಗಿದ್ದರೂ ಅವರು ಕೇಳಿದರು. ಅರೆನಿಮಿಷದಲ್ಲಿಯೆ ಕಿಟಕಿ ತೆರೆಯಿತು. ಮತ್ತು ಒಂದು ದನಿಯು ಪ್ರಶ್ನಾರ್ಥಕವಾಗಿ ನುಡಿಯಿತು — ಹೌದು? ಆ ಮಾತಾಡುವವನು ತತ್‌ಕ್ಷಣ ತನ್ನ ಗಂಡನೆಂದು ಗ್ರೇಸ ಗುರುತಿಸಿದಳು. ಈಗ ಅವಳ ಪ್ರಯತ್ನ ತನ್ನ ಮಾತಿನ ದನಿಯನ್ನು ಮರೆಮಾಡುವುದಾಯಿತು.

'ಡಾಕ್ಟರ್' ಆದಷ್ಟೂ ಅಸಾಮಾನ್ಯ ದನಿಯನ್ನು ಎಳೆದು ತಂದು ಅವಳು ಅಂದಳು. ಒಬ್ಬ ಮನುಷ್ಯ ಮರಣಾಂತಕ ಕಾಯಿಲೆಯಲ್ಲಿ ಇದ್ದಾನೆ — ಡೆಲ್‌ಬೋರೊದ ಹತ್ತಿರ ಒಂದು ಹೊಗೆ ಗಂಡಿಯ ಗುಡಿಸಲಿನಲ್ಲಿ. ನೀವು ಅವನಲ್ಲಿಗೆ ಹೋಗಲಿಕ್ಕೇಬೇಕು— ದಮ್ಮಯ್ಯ ದಯಮಾಡಿರಿ.'

'ನಾ ಹೊರಟೆ, ಕೂಡಲೆ.'

ಅವನ ಉತ್ತರದಲ್ಲಿ ವ್ಯಕ್ತವಾದ ಆ ಚುರುಕು, ಚಟುವಟಿಕೆ, ಆಶ್ಚರ್ಯ ಮತ್ತು ಸಂತೋಷವೂ ಕೂಡ, ಒಂದು ಕ್ಷಣ ಅವಳಿಗೆ ಚಕಿತಗೊಳಿಸಿದವು. ನಿಜವಾಗಿಯೂ ಅವು ಆ ಮನುಷ್ಯನ ಆಕಸ್ಮಿಕ ಸಮಾಧಾನದ ಭಾವನೆಯನ್ನೆ ಕಾಣಿಸುತ್ತಿದ್ದವು. ವಿಕ್ಷಿಪ್ತ ಚಂಚಲ ಮತ್ತು ಸಂದಿಗ್ಧ ಭೋಗಗಳಿಗೆ ತನ್ನನ್ನು ಮಾರಿಕೊಂಡಿದ್ದರಿಂದ ಉಂಟಾದ ಪರಿತಾಪದ ವೃತ್ತಿಯಲ್ಲಿ ಬಿದ್ದ ಅವನಿಗೆ ಈ ವ್ಯಾವಸಾಯಿಕ ಪರಿಶ್ರಮದ ಪರಿಪಾಟಿಯು ಹೀಗೆ ಆಕಸ್ಮಿಕವಾಗಿ ತೆರೆದದ್ದು ಒಂದು ಭಾರ ಇಳಿದಂತೆ ಅನಿಸಿತು. ಅವನ ಆತ್ಮದ ಅತ್ಯುಚ್ಚ ಅಪೇಕ್ಷೆ ಈಗ ಈ ವ್ಯಾವಸಾಯಿಕ ಸಾಧನೆಯ ಸನ್ಮಾನದ ಜೀವನವಾಗಿತ್ತು. ಅವನು ಮರಳಿಬಂದ ಮೇಲೆ ಇದು ಮೊತ್ತಮೊದಲಿನ ಕರೆ. ಇದು ನಾಯಿ, ಬೆಕ್ಕುಗಳ ಉಪಚಾರಕ್ಕಾಗಿ ಆಗಿದ್ದರೂ ಆತ ಇಂಥ ಪರಿಸ್ಥಿತಿಯಲ್ಲಿ ನಿರಾಕರಿಸುತ್ತಿದ್ದಿಲ್ಲ.

'ನಿಮಗೆ ದಾರಿ ಗೊತ್ತೇ?' ಅವಳು ಕೇಳಿದಳು.

'ಹೌದೆಂದು ಅನಿಸುತ್ತದೆ', ಆತ ಅಂದನು.

'ಒಂದು ಹೊಗೆಗಂಡಿ ಗುಡಿಸಲು — ಕಿಂಗ್ಸ ಹಿಂಟೋಕ ಕಾನಿನಲ್ಲಿ ಡೇಬೊರೊ ಸಮೀಪ' ಅವಳು ಇನ್ನೊಮ್ಮೆ ಅಂದಳು 'ಮತ್ತು, — ಕೂಡಲೆ ಬನ್ನಿ.'

'ಸರಿ ಸರಿ', ಫಿಟ್ಝಪಿಯರ್ಸ ಅಂದನು.

ಗ್ರೇಸ ಅಲ್ಲಿ ಇನ್ನೂ ತಡೆಯಲಿಲ್ಲ. ಅವಳು ಆ ಬಿಳಿಯ ಗೇಟಿನೊಳಗಿಂದ ಹೊರಬಿದ್ದಳು ಅದನ್ನು ಜಡಿದು ಇಕ್ಕಿದಳು. ಮತ್ತು ತನ್ನ ದಾರಿ ಹಿಡಿದು ಓಡಿದಳು. ಅವಳ ಗಂಡ, ಹಾಗಾದರೆ ಅವಳ ತಂದೆಯ ಮನೆಯಲ್ಲಿ ತಿರುಗಿ ಸ್ಥಾಪನೆ ಆಗಿದ್ದಾನೆಂದಾಯಿತು.

ಆತ ಆ ಮುದುಕನೊಂದಿಗೆ ಹೇಗೆ ಒಡಂಬಡಿಕೆ ಸಾಧಿಸಿಕೊಂಡ, ಅದರ ಷರತ್ತು-ಕರಾರುಗಳು ಏನಿದ್ದವು, ಅವಳಿಗೆ ಅಷ್ಟೇನು ಊಹಿಸಲು ಆಗಲಿಲ್ಲ. ಏನೊ ಒಂದು ಒಪ್ಪಂದ ಆಗಿರಬೇಕು, — ಎಂದಿಷ್ಟೇ ಆಕೆ ಅನ್ನಬಹುದು. ಆದರೆ ಆ ಪ್ರಶ್ನೆ ಅವಳ ಬಾಳಿಗೆ ತೀರ ಹತ್ತಿರದ್ದು, ಆದಾಗ್ಯೂ ಈಗ ಅದನ್ನೂ ಹೊರದೂಡುವಂಥ ಅದಕ್ಕೂ ಅಗತ್ಯದ ಪ್ರಶ್ನೆ ಇನ್ನೊಂದು ಇತ್ತು; ಅವಳು ಅಡ್ಡತಿಡ್ಡ ಹಾಯುವ ಕಾಲುದಾರಿಗಳಲ್ಲಿ ತನ್ನ ಹಾದಿ ಹುಡುಕಿಕೊಂಡು ಓಡಿದಳು.

ಈ ನಡುವೆ ಫಿಟ್ಜ್‌ಪಿಯರ್ಸ್ ಮನೆಬಿಟ್ಟು ತೆರಳುವ ತಯಾರಿಯಲ್ಲಿದ್ದನು. ಅವನ ವ್ಯಾವಸಾಯಿಕ ಉತ್ಸಾಹವನ್ನು ಮೀರಿ ಅವನ ಮಾನಸಿಕ ಅವಸ್ಥೆಯು ವಿಚಿತ್ರವಾಗಿತ್ತು. ಗ್ರೇಸಳ ಮೊದಲನೆಯ ಮಾತಿಗೆ ಅವಳ ಅಸ್ತಿತ್ವವನ್ನು ಆತ ಗುರುತಿಸಲೂ ಇಲ್ಲ ಶಂಕಿಸಲೂ ಇಲ್ಲ; ಆದರೆ ಆಕೆ ಮುಂದರಿದಂತೆ ಈ ಮಾತಾಡುವವಳ ಹಾಗೂ ತನ್ನ ಹೆಂಡತಿಯ ಧ್ವನಿಸಾಮ್ಯಕ್ಕೆ ಆತ ಎಚ್ಚರಾದನು. ಅವನು ಬಂದೊಡನೆ, ಆಕೆ ಗೆಳತಿಯ ಭೆಟ್ಟಿಗೆ ಹೋಗಿದ್ದಾಳೆಂದು ಮನೆಯವರು ಹೇಳಿದ್ದನ್ನು ಸದ್ಭಾವನೆಯಿಂದಲೆ ಆತ ನಂಬಿದ್ದನು. ಏಕೆಂದರೆ ಆಕೆಯ ಮನಸ್ಸು ಒಮ್ಮೆಲೆ ಅವನೊಂದಿಗೆ ಒಡಂಬಡಲು ಒಲಿಯಲಿಕ್ಕಿಲ್ಲ ಎಂದು ಅವನಿಗೆ ಅನಿಸಿತ್ತು. ಆದ್ದರಿಂದ ಈ ನೆರೆಹೊರೆಯ ಹೆಂಗಸು ಅವಳೇ ಎಂಬುವುದನ್ನು ಆತ ಒಮ್ಮೆಲೆ ನಂಬುವಂತೆ ಇದ್ದಿಲ್ಲ. ಆಗಿನ ಫಿಟ್ಜ್‌ಪಿಯರ್ಸ್‌ನ ಅನುತಾಪದ ಲಹರಿಯ ಒಂದು ಲಕ್ಷಣವೆಂದರೆ, ಅವಳು ಮನೆಯಲ್ಲಿ ಇಲ್ಲದಿರುವ ಸಮಾಚಾರ ಸಿಕ್ಕಮೇಲೂ, ಅವಳನ್ನು ಹಿಂಬಾಲಿಸಿಕೊಂಡು ಹೋಗಿ ಅವಳ ಭಾವನೆಗಳ ಮೇಲೆ ಬಲಾತ್ಕಾರ ಮಾಡುವ ಯಾವ ಯತ್ನವನ್ನೂ ಆತ ಮಾಡಿದ್ದಿಲ್ಲ. ಅವನ ಪ್ರವೇಶಕ್ಕೆ ತುಸುವೆ ಮುಂಚೆ ಆಕೆ ಹೊರಟುಹೋಗಿದ್ದಳೆಂದು ಯಾರೂ ಅವನಿಗೆ ತಿಳಿಸಿದ್ದಿಲ್ಲ; ಅವಳ ಈ ತ್ವರೆಯಿಂದ ಅನುಮಾನವೂ ಅವನಲ್ಲಿ ಉಂಟಾಗಿದ್ದಿಲ್ಲ.

ಬಹಳ ಗಾಬರಿ ಮತ್ತು ಆಲೋಚನೆಯನಂತರ ಮೆಲಬರಿ ಅವಳನ್ನು ಹಿಂಬಾಲಿಸ ಬಾರದೆಂದೇ ನಿಶ್ಚಯಿಸಿದ್ದನು. ಅದು ಶೋಚನೀಯವೆಂದು ಆತ ಎಷ್ಟೇ ತಿಳಿದರೂ ಅವಳ ಪಲಾಯನಕ್ಕೆ ಅವನ ಸಹಾನುಭೂತಿಯಿತ್ತು. ಅಲ್ಲದೆ, ಅವನೂ ಕಾರಣನಾದ ಕೆಲವು ಪೂರ್ವಗಾಮಿ ಘಟನೆಗಳ ದುರಂತ ಸ್ವರೂಪವು ಈಗ ನಡುವೆ ಕೈಹಾಕುವ ಅವನ ಪ್ರವೃತ್ತಿಯನ್ನೆ ತಡೆಯಿತು. ಇವೆಲ್‌ನ ಅಲ್ಲಿಂದ, ಎಕ್ಕೊಂಬರಿಯ ದಾರಿಯಲ್ಲಿ ಅವಳು ಯಾವದೇ ಸಂಕಟಕ್ಕೆ ಸಿಲುಕಲಿಕ್ಕಿಲ್ಲವೆಂದು ಆತ ನಂಬಿದ್ದನು, ಪ್ರಾರ್ಥಿಸಿದ್ದನು. ಅವಳ ಹೋಗುವಿಕೆಯು ಸ್ವಾಭಾವಿಕವಾಗಿಯೇ ಉಂಟುಮಾಡುವ ಎಲ್ಲ ಚೌಕಾಶಿಗಳನ್ನು ಆತ ಸಹಿಸಿದ್ದನು. ಕೆಲವು ತಿಂಗಳು ಹಿಂದೆ, ಇದರ ಹತ್ತರಲ್ಲಿ ಒಂದು ಪಾಲಿನಷ್ಟು ಗ್ರೇಸಳಿಂದ ಘಟಿಸಿದ್ದರೆ ಅದು ಅವನನ್ನು ಅಸಾಮಾನ್ಯ ಚೌಕಾಶಿ ತನಿಖೆ ಕೈಗೊಳ್ಳು ವಂತೆ ಪ್ರಚೋದಿಸುತಿತ್ತು.

ಇದೇ ವೃತ್ತಿಯಲ್ಲಿಯೆ, ಆತ ಫಿಟ್ಜ್‌ಪಿಯರ್ಸ್‌ನಿಗೆ ತಿರುಗಿ ತನ್ನ ಮನೆಯಲ್ಲಿ ಉಳಿಯುವದಕ್ಕೆ ಮೂಕ ಸಮ್ಮತಿಯನ್ನು ಇತ್ತದ್ದು. ಈ ಇಬ್ಬರೂ ಪುರುಷರು

ಒಬ್ಬರನ್ನೊಬ್ಬರು ಮುಖಾಮುಖಿ ಭೆಟ್ಟಿಯಾಗಿದ್ದಿಲ್ಲ. ಆದರೆ ಮೆಲಬರಿಯು ಹೆಂಡತಿ ಇಬ್ಬರ ನಡುವೆ ಮಧ್ಯಸ್ಥಳಾದಳು. ಸರ್ಜನ್ನನ ಪ್ರವೇಶವನ್ನು ಸುಗಮ ಮಾಡಿ ಕೊಟ್ಟಳು. ಎಲ್ಲವೂ ತಾತ್ಪೂರ್ತಿಕವಿತ್ತು. ಯಾರೂ ಪ್ರಶ್ನೆ ಕೇಳಿದವರಿಲ್ಲ. ಫಿಟ್ಜ್ ಪಿಯರ್ಸ ಬಂದದೂ ಒಂದು ಪಶ್ಚಾತ್ತಾಪದ ಯೋಚನೆಯಿಂದ. ಅದಕ್ಕೆ ಕಾರಣವಾದ ಪರಿಸ್ಥಿತಿಯನ್ನು ಈನಂತರ ವಿವರಿಸಲಾಗುವದು. ಅವನ ಆತ್ಮಗ್ಲಾನಿ ತೀರ ತಳವನ್ನು ಮುಟ್ಟಿತ್ತು. ಆದರೆ ಅದೂ ಹೇತುಪೂರ್ವಕವೇ ಇತ್ತು. ಮತ್ತು ಈಗ ಮರಣೋನ್ಮುಖ ರೋಗಿಯೊಬ್ಬನ ಹಾಸಿಗೆಯ ಹತ್ತಿರದ ದನಿಯೊಂದು ಅವನಿಗೆ ತಟ್ಟಿದೊಡನೆ, ತಾನು ಕಾರ್ಯೋನ್ಮುಖನಾಗಬೇಕು, ಆಟೋಪ ಆಡಂಬರವಿಲ್ಲದೆ ಶಕ್ಯವಿದ್ದಷ್ಟು ಒಳಿತನ್ನು ಮಾಡಬೇಕು, ಎಂದು ಅವನ ಅಪೇಕ್ಷೆ ಆಯಿತು. ಆದ್ದರಿಂದ ಆತ ಲಾಯದ ಆಳಿಗೆ ಕರೆದು ಕುದುರೆಯನ್ನು ಅವರ ಗಾಡಿಯನ್ನು ಸಜ್ಜುಗೊಳಿಸಲು ಹೇಳಲಿಲ್ಲ. ಗ್ರೇಸಳಂತೆ ಪಾದಚಾರಿಯಾಗಿಯೇ ಆ ಒಂದು ಹೊಗೆಗಂಡಿ ಗುಡಿಸಲಿಗಾಗಿ ಹೊರಟನು.

೪೩

ಅವಳು ಗುಡಿಸಲನ್ನು ಪ್ರವೇಶಿಸಿದಳು. ಟೊಪ್ಪಿಗೆಯನ್ನು ನಿಲುವಂಗಿಯನ್ನು ತೆಗೆದೊಗೆದಳು, ಮತ್ತು ರೋಗಿಯನ್ನು ಸಮೀಪಿಸಿದಳು. ಆತ ಮತ್ತೆ ಆ ಭಯಂಕರ ಗೊಣಗಾಟ ಸುರುಮಾಡಿದ್ದನು. ಅವನ ಕೈಗಳು ತಣ್ಣಗಾಗಿದ್ದವು. ಅವನನ್ನು ಅಲ್ಲಿ ಹಾಗೆ ನೋಡಿದ ಕ್ಷಣವೆ, ಪ್ರವಾಸದ ಉತ್ತೇಜನೆಯು ಕೆಲಹೊತ್ತು ದೂರ ಒಗೆದ ಅವಳ ಮನೋವೇದನೆಯು ಮರುಕಳಿಸಿತು.

ಆತ ನಿಜವಾಗಿಯೂ ಸಾಯುತ್ತಿರಬಹುದೇ? ಅವಳು ಅವನ ಮೈ ತೊಳೆದಳು. ಅವನನ್ನು ಮುತ್ತಿಟ್ಟಳು. ಅಲ್ಲಿ ತನ್ನೆದುರಿಗೆ ಬಿದ್ದಿರುವವನು ಬರೆ ಪ್ರೇಮಿಕನೆನಿಸಿ ಕೊಂಡವನಿಗಿಂತ ಹೆಚ್ಚಾಗಿ ತನ್ನನ್ನು ಪ್ರೇಮಿಸಿದವನು; ತನ್ನ ಸುಖಕ್ಕಾಗಿ ಆತ್ಮನಾಶ ಮಾಡಿಕೊಂಡವನು; ತಾನು ಲೆಕ್ಕಿಸಿದ್ದಕ್ಕಿಂತ ಹೆಚ್ಚು ತನ್ನ ಆತ್ಮಗೌರವಕ್ಕಾಗಿ ಸ್ವಾಭಿಮಾನಕ್ಕಾಗಿ ಪರಿವೆ ಮಾಡಿದವನು ಎಂಬುದನಲ್ಲದೆ ಇನ್ನೆಲ್ಲವನ್ನೂ ಆಕೆ ಮರೆತಳು. ಈ ಮನೋವೃತ್ತಿಯು ಚುರುಕಾದ ಹೆಜ್ಜೆ ಸದ್ದು ಕೇಳಿಬರುವತನಕ ಅವಳಿಗೆ ಗೊತ್ತಾಯಿತು ಆವು ಯಾರ ಸದ್ದು ಎಂಬುದು.

ಗ್ರೇಸಳು ಮಂಚದ ಆಚೆಯ ಬದಿಗೆ ಗೋಡೆಗೆ ಅನಿಸಿ ಕುಳಿತಳು—ತನ್ನ ಪ್ರೇಮಿಯ ಕೈ ಹಿಡಿದುಕೊಂಡು, ಅಂದರೆ ಅವಳ ಗಂಡನು ಒಳಗೆ ಬಂದಾಗ ಅವರಿಬ್ಬರ ನಡುವೆ ಆ ರೋಗಿ ಬಿದ್ದಿರುವಂತೆ. ಆತ ನಿಂತಲ್ಲಿಯೇ ನೆಲಕ್ಕೆ ತಿವಿದಿದ್ದಂತೆ ನಿಂತುಬಿಟ್ಟ—

ಗ್ರೇಸಳನ್ನು ನೋಡಿ ಮೆಲ್ಲಗೆ ನೋಟವನ್ನು ಕೆಳಕ್ಕೆ ಹಾಯಿಸಿ ಅಲ್ಲಿ ಅಂಗಾತಬಿದ್ದವನು ಯಾರೆಂಬುದನ್ನು ಕಂಡನು. ವಿಚಿತ್ರಸಂಗತಿಯೆಂದರೆ ಗಂಡನ ಸಹವಾಸದ ಬಗೆಗೆ ಗ್ರೇಸಳ ಅಶುಚಿ ವಿಪರೀತ ಭಯಂದ ರೂಪಕ್ಕೆ ಏರಿತು. ಅದು ಪ್ರತ್ಯಕ್ಷ ಪಲಾಯನದಲ್ಲಿ ಪರಿಣಮಿಸಿತ್ತು. ಆದರೆ ಈ ಕ್ಷಣಕ್ಕೆ ಅವಳಲ್ಲಿ ವ್ಯಕ್ತಿಗಳ ಭಾವನೆ ತೀರ ಕಡಿಮೆ, ತೀರ ಕೊನೆಯದಾಗಿತ್ತು. ಮೃದು ಮನಸ್ಸಿನ ಸೂಕ್ಷ್ಮ ಹೆಣ್ಣುತನವನ್ನು ಅನನ್ಯ ಭಕ್ತಿಯ ನಿವೇದನೆಯು ಆಕ್ರಮಿಸಿತ್ತು, ಆವರಿಸಿತ್ತು. ಅಲ್ಲೇ ನಿಂತವನು ಗಂಡನೆಂಬ ಆಂತರ್ಯವನ್ನೇ ಅವಳು ಮರೆತಳು. ಅವಳ ಮೋರೆಯಲ್ಲಿ ಕಂಡುಬಂದ ಮೊದಲಿನ ಭಾವವು ಪರಿಹಾರದ್ದಾಗಿತ್ತು, ಸಮಾಧಾನವಾಗಿತ್ತು. ವೈದ್ಯನ ಸನ್ನಿಧಿಯ ಸಮಾಧಾನವು ಆ ಮನುಷ್ಯನ ವಿಚಾರವನ್ನು ಅಳಿಸಿಬಿಟ್ಟಿತು. ಅದು ಮರಳಿ ಬಂದಿದ್ದರೆ ಅದು ಅರಿವಿನಾಳದಲ್ಲಿ ; ಅದು ಅವಳ ಮಾತುಗಳಿಗೆ ವ್ಯತ್ಯಯ ತರಲಿಲ್ಲ.

'ಇವನು ಸಾಯುತ್ತಾನೆಯೋ ?—ಏನಾದರೂ ಆಶೆ ಉಂಟೇ ? ಅವಳು ಕೇಳಿದಳು 'ಗ್ರೇಸ್' ಫಿಟ್ಜ್‌ಪಿಯರ್ಸ್ ಅವರ್ಣನೀಯವಾದ ಮೆಲು ದನಿಯಲ್ಲಿ ಪಿಸುಗುಟ್ಟನು—ಅದು ಸಂಬೋಧಿಸಿದಂತೆ ಅಲ್ಲ—ತೀರ ಭರ್ತ್ಸನೆಯೂ ಅಲ್ಲ.

ಆ ದೃಶ್ಯ ಅವನನ್ನು ಸೆರೆಹಿಡಿಯಿತು. ಅದು ಅದರ ಸ್ವಂತದ ಅಂತಸ್ಥ ಸ್ವರೂಪದ ಮೂಲಕವಲ್ಲ. ಆ ಸ್ವರೂಪವು ತುಂಬ ಚಕಿತಗೊಳಿಸುವಂತಹದೇ, ರೋಗಿಯ ಗೆಳತಿಯೂ ನರ್ಸಳೂ ಆದವಳ ಗಂಡನೆಂದು ಹೇಳಿಕೊಳ್ಳುವ ಅವನಿಗೆ. ಆದರೆ ಅವನನ್ನು ಸೆರೆಹಿಡಿದ ಈ ದೃಶ್ಯದ ಸ್ವರೂಪವು ಬೇರೆ ಇತ್ತು. ಅದು ಇದಕ್ಕೆ ಪ್ರತಿರೂಪವಾಗಿತ್ತು ; ಕೆಲವು ತಿಂಗಳ ಹಿಂದೆ ಆ ದೃಶ್ಯದಲ್ಲಿ ಅವನು ರೋಗಿಯಾಗಿ ಪಾತ್ರ ವಹಿಸಿದ್ದನು. ಆಗ ಅವನ ಶುಶ್ರೂಷೆ ಮಾಡಿದ ಹೆಣ್ಣು ಫೆಲಿಸ್ ಚಾರ್ಮಂದ.

'ಇವನು ಮಹಾ ಗಂಡಾಂತರದಲ್ಲಿ ಇರುವನೇ ?' ಅವಳು ಇನ್ನೊಮ್ಮೆ ಕೇಳಿದಳು.

ಫಿಟ್ಜ್‌ಪಿಯರ್ಸ್ ತನ್ನನ್ನು ಎಚ್ಚರಿಸಿಕೊಂಡನು. ಇನ್ನೂ ತುಸು ಹತ್ತಿರಕ್ಕೆ ಬಂದನು, ಮತ್ತು ನಿಂತಲ್ಲಿಂದಲೆ ವಿಂಟರಬೋರ್ನನನ್ನು ಪರೀಕ್ಷಿಸಿದನು. ಅವನ ಪರೀಕ್ಷೆ ಒಂದು ದೃಷ್ಟಿಕ್ಷೇಪಮಾತ್ರದಿಂದ ಮುಗಿಯಿತು. ಮಾತಾಡುವ ಮೊದಲು ಅವನು ಅವಳನ್ನು ನೋಡುತ್ತ ನಿಂತನು—ತನ್ನ ಮಾತುಗಳ ಪರಿಣಾಮ ಏನಾಗಬಹುದೋ ಎಂದು ಎಣಿಸುತ್ತ.

"ಅವ ಸಾಯುತ್ತಿದ್ದಾನೆ" ನಿರ್ಭಾವ ನಿಷ್ಕರ್ಷೆಯಿಂದ ಆತ ಅಂದನು.

"ಏನೂ ?" ಅವಳೆಂದಳು

"ಏನೂ ಮಾಡಲು ಸಾಧ್ಯವಿಲ್ಲ—ನಾನಾಗಲಿ ಇನ್ನಾರೆ ಆಗಲಿ. ಬೇಗನೆ ಎಲ್ಲಾ ಮುಗಿಯುವದು, ಕೈಕಾಲ ತುದಿಗಳು ಈಗಲೇ ಕೊರಡಾಗಿವೆ". ಅವನ ಕಣ್ಣು ಈಗಲೂ ಅವಳ ಮೇಲೆ ನೆಟ್ಟಿದ್ದವು. ಅವನು ಮುಟ್ಟಿದ ತೀರ್ಮಾನವು ವಿಂಟರಬೋರ್ನನಲ್ಲಿ ಅವನಿಗಿದ್ದ ವ್ಯಾವಸಾಯಿಕ ಹಾಗೂ ಇತರ ಆಸಕ್ತಿಯನ್ನು ಪೂರ್ತಿ ಮುಗಿಸಿಬಿಟ್ಟಿತ್ತು.

"ಅಂದರೆ ಇದು ಶಕ್ಯವಿಲ್ಲ, ಒಂದುವಾರ ಆಚೆಗೆ ಇವನು ಚೆನ್ನಾಗಿದ್ದ".

"ಚೆನ್ನಾಗಿದ್ದಿರಲಾರ, ನನಗೆ ಅನುಮಾನ, ಇದು ನಮ್ಮ ಮಾತಿನಲ್ಲಿ ಪರಿಪಾಕ, ಅಂತ್ಯ ಭಾಗ; ಹಿಂದೊಮ್ಮೆ ಆದ ಕಾಯಿಲೆ ಬಹುಶಃ ವಿಷಮ ಜ್ವರದ್ದು, ಎಂದು ನನ್ನ ನಿದಾನ; ಅದು ತಿಂಗಳಗಟ್ಟಲೆ ಹಿಂದಾಗಿರಬಹುದು. ಅಥವಾ ಇತ್ತೀಚೆಗಿರಬಹುದು".

"ಹಾಗೆ ನಿಮ್ಮ ಮಾತು ಸರಿ, ಕಳೆದ ವರ್ಷ ಬೇನೆಬಿದ್ದಿದ್ದ ಮತ್ತು ನಾನು ಬಂದಾಗಲೂ ಬೇನೆಯಲ್ಲಿಯೇ ಇದ್ದಿರಬೇಕು".

ಹೇಳಬೇಕಾದದ್ದು ಇನ್ನೇನೂ ಉಳಿದಿದ್ದಿಲ್ಲ. ಅವಳು ಮಂಚದ ಬದಿಯಲ್ಲಿ ಮೈ ಬಗ್ಗಿಸಿ ಕೂತಳು, ಫಿಟ್ಜ್‌ಪಿಯರ್ಸ್ ಒಂದು ಕುರ್ಚಿ ಹಿಡಿದನು. ಹೀಗೆ ಅವರು ಮೌನದಲ್ಲಿ ಉಳಿದರು. ಸಾಕಷ್ಟು ದೀರ್ಘಕಾಲವಾದರೂ, ಅವಳು ತನ್ನ ಕಣ್ಣನ್ನಾಗಲಿ ಗಂಡನತ್ತ ಹೊರಳಿಸಲಿಲ್ಲ. ಅವನು ಕಾಲಕಾಲಕ್ಕೆ ಕೆಲವು ಸಣ್ಣ ಪುಟ್ಟ ಸೂಚನೆಗಳನ್ನೂ ತನ್ನದೇ ಅಧಿಕಾರದಲ್ಲಿ ಗೊಣಗುತ್ತಿದ್ದನು—ಆ ಸಾಯಲು ಬಿದ್ದ ರೋಗಿಯ ವೇದನೆ ಕಡಿಮೆ ಮಾಡಲಿಕ್ಕೆ; ಅವನ್ನು ಅವಳು ಯಾಂತ್ರಿಕವಾಗಿ ಪಾಲಿಸುತ್ತಿದ್ದಳು - ಆಗಾಗ್ಗೆ ಅವನ ಮೇಲೆ ಮೂಕವಾಗಿ ಕಣ್ಣೀರು ಹಾಕುತ್ತ ಬಗ್ಗಿ.

ವಿಂಟರಬೋರ್ನನಿಗೆ ತಿರುಗಿ ಪ್ರಜ್ಞೆ ಬರಲೇ ಇಲ್ಲ. ಒಂದು ತಾಸಿನ ಒಳಗೇ ಅವನ ಸನ್ನಿಪಾತದ ಬಡಬಡಿಕೆ ನಿಂತಿತು. ನೋವಿಲ್ಲದ ನೆಮ್ಮದಿಯ ಉಸಿರಾಟ ತುಸು ಹೊತ್ತು ನಡೆಯಿತು. ಅದರ ಕೊನೆಗೆ ವಿಂಟರಬೋರ್ನ ಶಾಂತವಾಗಿ ಅಸು ನೀಗಿದನು.

ಆಮೇಲೆ ಫಿಟ್ಜ್‌ಪಿಯರ್ಸ ಮೌನವನ್ನು ಮುರಿದನು. "ನೀನಿಲ್ಲಿ ಬಹಳ ಕಾಲ ಉಳಿದಿರುವಿಯಾ?" ಆತ ಅಂದನು.

ಗ್ರೇಸಳು ದುಃಖದಿಂದ ಕೆರಳಿದ್ದಳು, ತನಗೊದಗಿದ್ದ ಎಲ್ಲ ಬವಣೆಗಳಿಂದ ಕಟು ವಾಗಿದ್ದಳು; ಅವಳ ಮೇಲೆ ಆಕ್ರಮಣ ಮಾಡಿದ ಕೌರ್‍ಯಗಳಿಂದ, ಬಾಳಿನಿಂದ, ದೇವ ರಿಂದಲೇ ಕೆರಳಿ ಕನಲಿದ್ದಳು. ಅವಳು ಬಾಯಿಗೆ ಬಂದಂತೆ ಉತ್ತರಕೊಟ್ಟಳು— "ಹೌದು, ಯಾವ ಹಕ್ಕಿನಿಂದ ನೀವು ಕೇಳುತ್ತೀರಿ?".

"ನಾನು ಯಾವುದೇ ಹಕ್ಕನ್ನು ಸಾಧಿಸುತ್ತೇನೆಂದು ಭಾವಿಸಬೇಡ" ಫಿಟ್ಜ್‌ಪಿಯರ್ಸ ಅಂದನು, "ನಿನ್ನ ಇಚ್ಛೆ ನಿನ್ನ ಆಯ್ಕೆ, ಆಡುವದು ಮಾಡುವದು ನಿನ್ನದು. ನಿನಗೆ ಅನಿಸುವಂತೆ ನಾನೂ ಒಪ್ಪುತ್ತೇನೆ, ನಾನು ಒಬ್ಬ ಉಂಡಾಡಿ ಪೋಲಿ ಪಶು. ನಿನ್ನ ಒಂದು ಅಂಶವನ್ನು ಪಡೆಯಲು ನಾನು ಮಾತ್ರನಲ್ಲ. ಆದರೆ ನಾನು ಇಲ್ಲಿ ಇದ್ದೇನೆ ಮತ್ತು ನಿನ್ನಲ್ಲಿ ಹಿಂದೆ ಸಾಕಷ್ಟು ಆಸಕ್ತಿ ವಹಿಸಿಯೂ ಇದ್ದೇನೆ, ಅಂದಾಗ ನಾನು ಹಾಗೆ ಕೇಳಬಹುದು".

"ಇವನು ನನ್ನ ಸರ್ವಸ್ವ" ಗ್ರೇಸಳು ಅಂದಳು. ಗಂಡ ಹೇಳಿದ್ದನ್ನು ಆಕೆ ಗಮನಿಸಿದಂತೆಯೆ ಇದ್ದಿಲ್ಲ. ತನ್ನ ಕೈಯನ್ನು ಮೃತನ ಕಣ್ಣೆವೆಗಳ ಮೇಲೆ ಪೂಜ್ಯ ಭಾವನೆಯಿಂದ ಇಡುತ್ತ, ಅಲ್ಲಿಯೇ ಅದನ್ನು ಬಹಳ ಹೊತ್ತು ಇಟ್ಟು ಮೃದು ಸ್ಪರ್ಶ ದಿಂದ ರೆಪ್ಪೆಗಳನ್ನು ಒತ್ತಿದಳು - ಪುಟ್ಟ ಹಕ್ಕಿಯು ಮೈದಡುವಂತೆ.

ಅವನು (ಫಿಟ್ಜ್‌ಪಿಯರ್ಸ) ಅವಳನ್ನು ಕೆಲಹೊತ್ತು ವೀಕ್ಷಿಸಿದನು. ಆಮೇಲೆ

ಆ ಕೋಣೆಯು ಸುತ್ತು ಕಣ್ಣುಹಾಯಿಸಿದನು. ಅಲ್ಲಿ ಅವಳು ತಂದ ಕೆಲವೇ ಬಟ್ಟೆ ಬರೆಗಳ ಮೇಲೆ ಅವನ ದೃಷ್ಟಿಯು ಬಿದ್ದಿತು.

"ಗ್ರೇಸ, ನಿನಗೆ ಹಾಗೆ ನಾನು ಕರೆಯಬಹುದಾದರೆ", ಆತ ಅಂದನು, "ನಾನು ತಿರುಗಿ ಬಂದಿದ್ದೇನೆ—ನೀನು ಬೇರೆಡೆಗೆ ನನ್ನನ್ನು ಕೂಡಲು ಅಲ್ಲಗೆಳೆದದ್ದರಿಂದ ನಾನು ನಿನ್ನ ತಂದೆಯ ಮನೆಯನ್ನು ಪ್ರವೇಶಿಸಿದ್ದೇನೆ. ಅಲ್ಲಿ ನಾನು ತೆರಬೇಕಾದ್ದುದ್ದ ನೆಲ್ಲ ತೆತ್ತು ಅನುಭವಿಸಿದ್ದೇನೆ, ಅದೂ ತತ್ತರಿಸದೆ, ಹಿಂಜರಿಯದೆ. ಏಕೆಂದರೆ ನಾನು ಅಂಥ ಮಾನಭಂಗಕ್ಕೆ ಮರ್ಯಾದೆಗೇಡಿಗೆ ಪಾತ್ರನೆಂದೇ ಭಾವಿಸಿದ್ದೇನೆ. ಆದರೆ ಅದಕ್ಕೂ ಹೆಚ್ಚಿನ ಪೆಟ್ಟುಗೇಡು ಇನ್ನೂ ನನಗಾಗಿ ಬರುವದುಂಟೇ? ಇವನೊಂದಿಗೆ ನೀನು ವಾಸಿಸುತ್ತಿರುವಿಯೆನ್ನುವಿ, ಅವನು ನಿನ್ನ ಸರ್ವಸ್ವವೆಂದಿರುವಿ, ಈ ಪ್ರತ್ಯಕ್ಷ ಪುರಾವೆಯಿಂದ ನಾನು ಅತ್ಯಂತಿಕ ಅನುಮಾನವನ್ನು ಗ್ರಹಿಸಬೇಕೆ?"

ಗೆಲುವು ಗಂಡಿಗಾಗಲಿ ಹೆಣ್ಣಿಗಾಗಲಿ ಎಂಥ ಬೆಲೆಗೂ ಆಪ್ಯಾಯಮಾನ—ಅದೂ ಹೆಣ್ಣಿಗೆ. ಅವನ ಕೈಯಲ್ಲಿ ಅಷ್ಟೆಂದು ಸುಮ್ಮನೆ ಸೌಮ್ಯವಾಗಿ ನಮ್ರವಾಗಿ ಸಹಿಸಿದ ತಾತ್ಸಾರ - ತಿರಸ್ಕಾರಗಳನ್ನೂ ಅವನಿಗೆ ತಿರುಗಿ ತೆರಲಿಕ್ಕೆ ಅವಳಿಗೆ ಇದೊಂದೆ ಮೊದ ಲಿನ ಹಾಗೂ ಕೊನೆಯ ಅವಕಾಶವಾಗಿತ್ತು.

"ಹೌದು." ಅವಳು ಉತ್ತರವಿತ್ತಳು. "ಅತ್ಯಂತಿಕ ಅನುಮಾನ" ಮತ್ತು ಹಾಗೆ ಹೇಳುವಾಗ ಅವಳ ಎದೆಯು ಹೆಮ್ಮೆಯಿಂದ ಜುಮ್ಮೆಂದಿತು. ಹಾಗೆ ಅನಿಸು ವಂತೆ ಅವಳ ಸ್ವಭಾವದಲ್ಲಿ ಒಂದು ಗುಣ ಸೂಕ್ಷ್ಮವಾಗಿ ಸೇರಿಕೊಂಡಿತ್ತು.

ಆದರೆ ತಮ್ಮ ನಡತೆಯನ್ನು ಅಷ್ಟು ಪ್ರಬಲವಾಗಿ ವಂಚಿಸುವ ಮಾತು ಆಡಿದ ಕ್ಷಣಕ್ಕೇ ಅವಳಿಗೆ ಆ ಬಗ್ಗೆ ಅರ್ಧ ಪಶ್ಚಾತ್ತಾಪವೆನಿಸಿತು. ಅವಳ ಗಂಡನು ಅವನ ಹಿಂದಿನ ಗೋಡೆಯಷ್ಟೇ ಬೆಳ್ಳಗಾಗಿಬಿಟ್ಟನು. ಅವನಲ್ಲಿ ಇದ್ದಬಿದ್ದ ಆಶೆ ಮತ್ತು ಚೈತನ್ಯವು ಒಂದೇ ಪ್ರಹಾರಕ್ಕೆ ಇಲ್ಲವಾದಂತೆ ತೋರಿತು. ಆದಾಗ್ಯೂ ಆತ ಕದಲಲಿಲ್ಲ; ಮತ್ತು ಆತ್ಮ ಸಂಯಮದ ಪ್ರಯತ್ನದಲ್ಲಿ ಅವನು ತನ್ನ ಬಾಯಿಯನ್ನು ಇಕ್ಕಳದಂತೆ ಒತ್ತಿಬಿಟ್ಟನು. ಅವನ ನಿರ್ಧಾರ ಸಾಕಷ್ಟು ಯಶಸ್ವಿಯಾಯಿತು. ಅವಳಿಗೆ ತನ್ನ ವಿಜಯಕ್ಕಿಂತ ಅವನ ನಿರ್ಧಾರ ಹಿರಿದಾಗಿ ಕಂಡಿತು.

ಮರುಕ್ಷಣಕ್ಕೆ, ಅವನು ಆಚೆಗೆ ವಿಂಟರಬೋರ್ನನ ಕಡೆಗೆ ನೋಡಿದನು.

"ಈ ಮಾತು ಕೇಳಲಿಕ್ಕೆ ನಿನಗೆ ಆಶ್ಚರ್ಯವಾಗಬಹುದೇ?" ಆತ ಅಂದನು. ಅವನಿಗೆ ಮಾತುಗಳನ್ನು ಆಡಲಿಕ್ಕೂ ಉಸಿರು ಸಾಲುತ್ತಿದ್ದಿಲ್ಲವೆಂಬಂತೆ ಕಂಡಿತು. "ಅದೇನೆಂದರೆ ಇವನು ನಿನಗೆ ಹೇಗೋ, ನನಗೆ ಹಾಗೆ ಇದ್ದ ಅವಳು, ತೀರಿ ಕೊಂಡಳು".

"ತೀರಿಕೊಂಡಳು—ಅವಳು ತೀರಿಕೊಂಡಳು" ಗ್ರೇಸ ಉದ್ಗರಿಸಿದಳು.

"ಹೌದು, ಈಗ ಈ ತರುಣನು ಇದ್ದಲ್ಲಿಯೇ ಫೆಲಿಸ್ ಚಾರ್ಮಂದಳು ಇದ್ದಾಳೆ."

"ಎಂದೂ ಇಲ್ಲ", ಗ್ರೇಸಳು ಆವೇಶದಿಂದ ಆಡಿದಳು.

ಅವಳ ಇಂಗಿತದ ಮೊನೆಯನ್ನು ಲೆಕ್ಕಿಸದೆ ಆತ ಮುಂದುವರಿದನು. “ ಮತ್ತು ನಾನು ಮರಳಿಬಂದೆ - ನಿನ್ನೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಿಕ್ಕೆ ಆದರೆ —”

ಫಿಟ್ಝಪಿಯರ್ಸ್ ಎದ್ದನು, ಹೊರಟುಹೋಗಲು ಕೋಣೆಯನ್ನು ದಾಟಿದನು— ಆಶೆಯು ಒಮ್ಮೆಲೆ ಭಂಗಕ್ಕೆ ಅಲ್ಲವಾದರೂ ಉದಾಸೀನತೆಗೆ ತಿರುಗಿದ ಮನುಷ್ಯನ ಕುಗ್ಗಿನಲ್ಲಿ ಕೆಳಗೆ ನೋಡುತ್ತ, ಬಾಗಿಲಲ್ಲಿ ತಿರುಗುವಾಗ ಅವನ ಕಣ್ಣು ಅವಳ ಮೇಲೆ ಮತ್ತೊಮ್ಮೆ ಬಿದ್ದಿತು. ಅವಳು ಆಗಲೂ ವಿಂಟರಬೋರ್ನನ ದೇಹದಮೇಲೆ ವಾಲಿದ್ದಳು. ಅವಳ ಮೋರೆ ಅವನ ಮೋರೆಗೆ ಹತ್ತಿರವಿತ್ತು.

“ ಅವನ ಬೇನೆಯಲ್ಲಿಯೂ ಅವನನ್ನು ಚುಂಬಿಸುತ್ತಿದ್ದೆಯಾ ?” ಅವಳ ಗಂಡನು ಕೇಳಿದನು.

“ ಹೌದು ”

“ ಅವನಿಗೆ ಈ ಜ್ವರದ ಅವಸ್ಥೆ ಬಂದಂದಿನಿಂದ ? ”

“ ಹೌದು ”

“ ಅವನ ತುಟಿಗಳನ್ನೊ ? ”

“ ಹೌದು, ನೂರುಸಲ ”

“ ಹಾಗಾದರೆ, ಇದರ ಕೆಲವು ಹನಿ ನೀರಿನಲ್ಲಿ ಹಾಕಿ ಆದಷ್ಟು ಬೇಗ ಕುಡಿದರೆ ಒಳ್ಳೆಯದು ”

ಅವನು ತನ್ನ ಜೇಬಿನಿಂದ ಒಂದು ಸಣ್ಣ ಸೀಸೆಯನ್ನು ಹೊರತೆಗೆದು ಅದನ್ನು ಅವಳಿಗೆ ಕೊಡಲು ತಿರುಗಿದನು.

ಗ್ರೇಸಳು ತಲೆ ಅಲ್ಲಾಡಿಸಿದಳು.

“ ನಾನು ಹೇಳಿದಂತೆ ನೀನು ಮಾಡದಿದ್ದರೆ ನೀನೂ ಬೇಗ ಅವನಂತೆಯೇ ಆಗಬಹುದು.

“ ಅಡ್ಡಿ ಇಲ್ಲ. ನನಗೆ ಪರಿವೆ ಇಲ್ಲ, ನಾನೂ ಸಾಯುವೆನು ”.

“ ನಾ ಇದನ್ನು ಇಲ್ಲಿಯೆ ಇಡುತ್ತೇನೆ ”. ಫಿಟ್ಝಪಿಯರ್ಸ್ ಅಂದನು. ಆ ಸೀಸೆಯನ್ನು ತನ್ನ ಬದಿಯಲ್ಲಿ ಗೋಡೆಯ ಹೇಡಿಗೆಯ ಮೇಲೆ ಇಡುತ್ತ. “ ನನ್ನ ಇತರ ಪಾತಕಗಳು ಏನೇ ಇದ್ದರೂ, ನಿನಗೆ ಮುಂಜಾಗ್ರತೆ ಕೊಟ್ಟಿಲ್ಲವೆಂಬ ಪಾಪ ನನ್ನ ತಲೆಗೆ ತಟ್ಟಲಿಕ್ಕಿಲ್ಲ ! ಈಗ ನಾನು ಹೋಗುತ್ತೇನೆ. ಮತ್ತು ನಿನ್ನ ಬಳಿಗೆ ಯಾರನ್ನಾದರೂ ಕಳುಹಿಸುತ್ತೇನೆ. ನೀನು ಇಲ್ಲಿರುವದು ನಿನ್ನತಂದೆಗೆ ಗೊತ್ತಿಲ್ಲ. ಆದ್ದರಿಂದ ನಾನು ಅವನಿಗೆ ತಿಳಿಸಲು ಬದ್ಧನೆಂದು ನನಗೆ ಅನಿಸುತ್ತದೆ ”.

“ ಖಂಡಿತವಾಗಿ ”.

ಫಿಟ್ಝಪಿಯರ್ಸ್ ಮಂಚವನ್ನು ಬಿಟ್ಟನು. ಮತ್ತು ಅವನ ಹೆಜ್ಜೆಯ ಸದ್ದು ಆ ಸ್ಥಳವನ್ನು ವ್ಯಾಪಿಸಿದ ಮೌನದಲ್ಲಿ ಮುಳುಗಿಹೋಯಿತು. ಗ್ರೇಸಳು ಅಲ್ಲಿಯೇ ಮಂಡಿಯೂರಿ ಅಳುತ್ತ ಉಳಿದಳು. ಎಷ್ಟು ಹೊತ್ತೋ ಅವಳಿಗೆ ತಿಳಿಯಲಿಲ್ಲ

ಆಮೇಲೆ ಅವಳು ಎದ್ದು ಕುಳಿತಳು. ಜೈಲ್ಸನ ಪ್ರತಿಮೆಯಂಥ ಚರ್ಯೆಯನ್ನು ಹೊದ್ದಿ ಮುಚ್ಚಿದಳು. ಮತ್ತು ಬಾಗಿಲಿಗೆ ಹೋಗಿ ಗಂಡನು ನಿಂತಿದ್ದ ಸ್ಥಳದಲ್ಲಿ ನಿಂತಳು. ಬೇರೆ ಯಾರೂ ಬರುವ ಸದ್ದು ಅವಳ ಕಿವಿಗೆ ಬೀಳಲಿಲ್ಲ. ಕೇಳಿಬರುವ ಸದ್ದೆಂದರೆ ತರಗೆಲೆಗಳು ಮುರಿದ ಚಿಕ್ಕ ಸಪ್ಪಳ. ತಂಪ್ಪಳದ ಹಾಸಿನಂತೆ ಅವು ಇನ್ನೂ ತಿರುಗಿ ಉಬ್ಬಿ ತಮ್ಮ ಸಾಮಾನ್ಯ, ಪಾತಾಳಿಗೆ ಎದ್ದಿದ್ದಿಲ್ಲ—ಅವಳ ಗಂಡನ ತಿರುಗಿ ಹೋಗುವ ಹೆಜ್ಜೆಗಳು ಮೆಟ್ಟಿ ತಗ್ಗಿಸಿದಲ್ಲಿ. ಇದರಿಂದ ಅವಳಿಗೆ ನೆನಪಾಯಿತು, ಅವನ ಚರ್ಯೆಯು ಬದಲಾದದ್ದು. ಅದು ಅವಳ ಮೇಲೆ ಪ್ರಭಾವ ಬೀರಿತ್ತು. ಅವನ ಮುಖದಲ್ಲಿ ಯಾವಾಗಲೂ ಇರುತ್ತಿದ್ದ ಅತ್ಯಂತ ಬೌದ್ಧಿಕತೆಯು ಮುದ್ರೆಯು ಈಗ ಕೃಶತೆಯಿಂದಾಗಿ ಇನ್ನೂ ಸೂಕ್ಷ್ಮಕಳೆಯನ್ನು ತಳೆದಿತ್ತು. ಮತ್ತು ಅದಕ್ಕೆ ಚಿಂತಾಗ್ರಸ್ತ ವಾದ ಒಂದು ಪ್ರೌಢಿಮೆಯೂ ಹೆಚ್ಚಾಗಿ ಕೂಡಿತ್ತು. ಅವಳ ಚಿಂತನೆಯ ನಡುವೆಯೆ ಇನ್ನೊಂದು ಹೆಜ್ಜೆ ಗುಡಿಸಲ ಬಾಗಿಲನ್ನೂ ಸಮೀಪಿಸಿತು, ಒಳಗೆಬಂದಿತು ಮತ್ತು ಹಾಸಿಗೆಯ ಕಾಲ ಬುಡಕ್ಕೆ ನಿಂತುಕೊಂಡಿತು.

"ಏನು ? — ಮಾರ್ಟಿನೆ ?" ಗ್ರೇಸ ಅಂದಳು.

"ಹೌದು, ನಾನು ಕೇಳಿದೆ" ಮಾರ್ಟಿ ಅಂದಳು. ಈ ಆಘಾತಕ್ಕೆ ಅವಳು ಅಕ್ಷರಶಃ ಗಾಯಗೊಂಡಂತೆ, ಜಜ್ಜಿಹೋದಂತೆ ಆಗಿದ್ದಳು. ಅವಳ ಎಲ್ಲ ತರಳತನವು ಮಾಯವಾಗಿತ್ತು.

'ಅವನು ನನಗಾಗಿ ಸತ್ತನು' ಗ್ರೇಸಳು ಭಾರವಾದ ದನಿಯಲ್ಲಿ ಪಿಸು ನುಡಿದಳು.

ಮಾರ್ಟಿಗೆ ಪೂರ್ತಿ ಬೋಧವಾಗಲಿಲ್ಲ. ಅವಳು ಉತ್ತರವಿತ್ತಳು "ಈಗ ಆತ ನಮ್ಮಿಬ್ಬರಲ್ಲಿ ಯಾರಿಗೂ ಉಳಿದಿಲ್ಲ. ನಿಮ್ಮ ಚಲುವು ಇನ್ನು ನನ್ನ ಸಾದಾತನ ಕ್ಕಿಂತ ಅವನ ಮೇಲೆ ಹೆಚ್ಚೇನೂ ಪ್ರಭಾವ ಬೀರಲಾರದು. ಅಮ್ಮಾ ನಾನು ನಿಮಗೆ ಸಹಾಯ ಮಾಡಲು ಬಂದಿದ್ದೇನೆ. ಆತ ನನ್ನ ಬಗ್ಗೆ ಎಂದೂ ಪರಿವೆ ಮಾಡಲಿಲ್ಲ. ಮತ್ತು ನಿಮ್ಮ ಬಗ್ಗೆ ಬಹಳಷ್ಟು ಪರಿವೆ ಮಾಡಿದನು. ಆದರೆ ಈಗ ನಮ್ಮಿಬ್ಬರ ಬಗ್ಗೂ — ಆತ ಒಂದೇ ರೀತಿ ಪರಿವೆ ಮಾಡುವನು."

"ಓ, ಬೇಡ, ಬೇಡ, ಮಾರ್ಟಿ."

ಮಾರ್ಟಿ ಇನ್ನೇನು ಹೇಳಲಿಲ್ಲ. ಆದರೆ ಮಂಚದಾಚೆಯಿಂದ ವಿಂಟರಬೋರ್ನನ ಮೇಲೆ ಬಾಗಿದಳು.

"ನಿನಗೆ ಭೆಟ್ಟಿಯಾದರೊ ನನ್ನ ಗಂ...ಡಾ, ಫಿಟ್ಜಪಿಯರ್ಸ ?"

"ಇಲ್ಲ"

"ಹಾಗಾದರೆ ನೀನು ಇಲ್ಲಿಗೆ ಹೇಗೆ ಬಂದಿ ?..."

"ನಾನು ಈ ದಾರಿಯಲ್ಲಿ ಕೆಲ ಸಲ ಬರುತ್ತಿರುತ್ತೇನೆ. ವರ್ಷದ ಈ ಸಮಯ ನಾನು ಈ ಬೆಟ್ಟದ ಆಚೆಯ ಬದಿಗೆ ಹೋಗುವದಿರುತ್ತದೆ - ಮುಂಚೆಯೋ ಭಟ್ಟಿ

ಸುಡಲಿಕ್ಕೆ ಬೆಂಕಿ ಹಾಕಲು ಈ ಸಮಯ ನಾನು ಆಗಾಗ್ಗೆ ಇಲ್ಲಿಂದ ಹಾದು ಹೋದದ್ದುಂಟು. ''

ಗ್ರೇಸಳು ಅವಳ ಕಡೆಗೆ ಚುರುಕಾಗಿ ನೋಡಿದಳು. '' ಅಂದಾಗ, ನಾನು ಇಲ್ಲಿ ಇದ್ದದ್ದು ನಿನಗೆ ಗೊತ್ತಾಗಿತ್ತೆ ?''

'' ಹೌದು, ಅಮ್ಮಾ ''

'' ನೀನು ಯಾರಿಗಾದರೂ ಹೇಳಿದೆಯೋ ?''

'' ಇಲ್ಲ, ನೀವು ಈ ಗುಡಿಸಲಿನಲ್ಲಿ ಉಳಿದಿರುವಿರಿ. ಅವನು ಇದನ್ನು ನಿಮಗೆ ಕೊಟ್ಟು ತಾನು ಹೊರಗೆ ವಾಸಿಸುತ್ತಿದ್ದನೆಂದು ನನಗೆ ಗೊತ್ತಾಗಿತ್ತು'

' ಅವನು ಎಲ್ಲಿ ವಾಸಿಸುತ್ತಿದ್ದನೆಂದು ಗೊತ್ತಿತ್ತೆ ?'

' ಇಲ್ಲ ಅದನ್ನು ನಾನು ಕಂಡುಹಿಡಿಯಲಿಲ್ಲ. ಅದೆಲ್ಲಿ ಡೆಲ್‌ಬೋರೋದಲ್ಲಿಯೋ ? '

' ಇಲ್ಲ, ಅಲ್ಲಿ ಅಲ್ಲ, ಮಾರ್ಟಿ. ಅಲ್ಲಿಯೇ ಆಗಿದ್ದರೆ ಅದು ಅವನನ್ನು ಉಳಿಸುತ್ತಿತ್ತು. ಉಳಿಸುತ್ತಿತ್ತು. —' ಒತ್ತಿಬಂದ ಕಣ್ಣೀರು ತಡೆಯುವುದಕ್ಕೆ ಅವಳು ಮುಖ ಹೊರಳಿಸಿದಳು ; ಮತ್ತು ಅಲ್ಲಿ ಕಿಟಕಿಯ ಬೆಂಚಿನಲ್ಲಿ ಮೇಲೆ ಒಂದು ಪುಸ್ತಕವನ್ನು ಕಂಡು ಅದನ್ನು ಎತ್ತಿಕೊಂಡಳು. ' ನೋಡು ಮಾರ್ಟಿ ಇದು ಪ್ರಾರ್ಥನಾ ಪುಸ್ತಕ. ಈತ ಧಾರ್ಮಿಕನಾಗಿ ತೋರುತ್ತಿದ್ದಿಲ್ಲ. ಆದರೆ ಹೃದಯದಿಂದ ಪರಿಶುದ್ಧ ಪರಿಪೂರ್ಣ, ಸಿದ್ಧ. ನಾವು ಅವನ ಬಳಿಯಲ್ಲಿ ಪ್ರಾರ್ಥನೆಯನ್ನು ಓದೋಣವೇ '

' ಓ ಏನೂ ಅಡ್ಡಿ ಇಲ್ಲ. ಓದೇ ಓದೋಣ ಮನಸು ಕೊಟ್ಟು '.

ಗ್ರೇಸಳು ಆ ತೆಳ್ಳನೆಯ ಕಂದುಬಣ್ಣದ ಪುಸ್ತಕವನ್ನು ತೆರೆದಳು. ಅದನ್ನು ಜೈಲ್ಸ ಕೈಗೆ ಎಟಕುವಂತೆ ಇಟ್ಟುಕೊಂಡದ್ದು, ಅದರ ಚರ್ಮದ ಹೊದಿಕೆಯ ಮೇಲೆ ಚೂರಿಯನ್ನು ಹರಿತ ಮಾಡಲಿಕ್ಕೆ. ಅವಳು ಅಂಥ ಪ್ರಸಂಗಗಳಲ್ಲಿ ಹೆಂಗಸರಿಗೆ ಸಹಜವಾದ ಭಕ್ತಿ ತುಂಬಿದ ಕಂಠದಿಂದ ಓದುತ್ತಿದ್ದಳು. ಪ್ರಾರ್ಥನೆ ಮುಗಿದಮೇಲೆ ಮಾರ್ಟಿ ಅಂದಳು. ' ಅವನ ಆತ್ಮಕ್ಕಾಗಿ ಪ್ರಾರ್ಥನೆ ಮಾಡಬೇಕೆಂದು ನನಗೆ ಅನಿಸುತ್ತದೆ '.

' ನಾನೂ ಪ್ರಾರ್ಥಿಸಬೇಕು ' ಅವಳ ಜತೆಗಾರ್ತಿ ಅಂದಳು, 'ಆದರೆ ನಾವು ಹಾಗೆ ಮಾಡಕೂಡದು '.

' ಏಕೆ ? ಯಾರಿಗೂ ಗೊತ್ತಾಗದು '.

ಗ್ರೇಸಳಿಗೆ ಅವಳ ವಾದ ತಡೆಯಲು ಆಗಲಿಲ್ಲ. ಅವನನ್ನು ಶಾರೀರಿಕವಾಗಿ ತಾನು ಉಪೇಕ್ಷಿಸಿದ್ದಕ್ಕೆ ಯೋಗ್ಯ ಪರಿಮಾರ್ಜನೆ ಮಾಡಬೇಕೆಂದು ಭಾವನೆಯಿಂದ ಅವಳು ಪ್ರಭಾವಿತಳಾಗಿದ್ದಳು ; ಅವರ ಕೋಮಲ ಕಂಠಗಳು ಕಲಬೆರೆತು ಆ ಕಿರಿಯಗಲಾದ ಕೋಣೆಯನ್ನು ಪ್ರಾರ್ಥನೆಯ ಬೇಡುನುಡಿಗಳಿಂದ ತುಂಬಿದವು. ಅದನ್ನು ಕೇಳಿದರೆ ಯಾವ ಕ್ಯಾಲ್ವಿನಿಸ್ಟ ಪಾದ್ರಿಯೂ ಒಪ್ಪುವಂತಿತ್ತು. ಅವರ ಪ್ರಾರ್ಥನೆ ಮುಗಿಯಿತು — ಎಂಬಷ್ಟರಲ್ಲಿ ಹೊಸ ಮತ್ತು ಹಲವಾರು ಹೆಜ್ಜೆಗಳು ಕೇಳಿಬಂದವು.

ಹಾಗೆಯೇ ಮಾತುಕತೆಯಲ್ಲಿ ತೊಡಗಿದ ಮಂದಿ. ಅದರಲ್ಲಿ ಒಬ್ಬ ತನ್ನ ತಂದೆಯೆಂಬು ದನ್ನು ಗ್ರೇಸಳು ಗುರುತಿಸಿದಳು.

ಅವಳೆದ್ದು ಗುಡಿಸಲಿನ ಹೊರಗಡೆಗೆ, ಬಾಗಿಲಿನಿಂದ ಹೊರಚೆಲ್ಲಿದಷ್ಟೇ ಬೆಳಕು ಬೀಳುವಲ್ಲಿಗೆ ಹೋದಳು — ಮೆಲಬರಿ ಮತ್ತು ಅವನ ಹೆಂಡತಿ ಅಲ್ಲಿ ನಿಂತಿದ್ದರು.

'ನಾನು ನಿನ್ನನ್ನು ದೂಷಿಸುವುದಿಲ್ಲ, ಗ್ರೇಸ' ಅವಳ ತಂದೆ ಅಂದನು. ಅವನ ರೀತಿ ಋಣಾನುಬಂಧ ಕಳೆದುಕೊಂಡವನಂತೆ ಇತ್ತು. ಅವನ ದನಿ ಹಳೆಯ ದನಿ ಯಂತಿದ್ದಿಲ್ಲ

'ಅವನಿಗೆ ನಿನ್ನನ್ನು ಒಪ್ಪಿಸಿಕೊಂಡಿದ್ದರಿಂದ ನಿನ್ನ ಮೇಲೂ ನಮ್ಮ ಮೇಲೂ ಒದಗಿ ಬಂದದ್ದು ದೂಷಣೆಯ ಆಚೆಯದು, ಅಳುವಿನಾಚೆಯ ಮತ್ತು ಆಕ್ರೋಶದ ಆಚೆಯದು. ನಾನೇ ನಿನ್ನನ್ನು ಅದಕ್ಕೆ ಅಟ್ಟಿದೆನೇನೋ. ಆದರೆ ನಾನು ನೊಂದಿ ದ್ದೇನೆ. ಚಾಡಿ ಏಟು ತಿಂದಿದ್ದೇನೆ. ನನಗೆ ಬೆರಗಾಗಿದೆ. ಇದರ ಮುಂದೆ ಇನ್ನು ಏನೇನು ಹೇಳತಕ್ಕದ್ದಿಲ್ಲ'.

ಉತ್ತರ ಕೊಡದೆ ಗ್ರೇಸಳು ತಿರುಗಿದಳು, ಮತ್ತು ಗುಡಿಸಿಲಿನೊಳಗೆ ಸರಿದಳು. 'ಮಾರ್ಟಿ' ಅವಳು ಲಗುಬಗೆಯಿಂದ ಅಂದಳು. "ನನ್ನ ತಂದೆಗೆ ನನ್ನ ಇಲ್ಲಿಯ ಬಾಳಿನ ಸ್ಥಿತಿ ತಿಳಿಯುವವನಕ ಅವನ ಕಣ್ಣಿಗೆ ಕಣ್ಣಿಟ್ಟು ನಾನು ನೋಡಲಾರೆ. ಹೋಗು, ಅವನಿಗೆ ಹೇಳು—ನೀನು ನನಗೆ ಹೇಳಿದ್ದನ್ನು—ನೋಡಿದ್ದನ್ನು—'ಅವನು' ತನ್ನ ಮನೆ ನನಗೆ ಬಿಟ್ಟುಕೊಟ್ಟಿದ್ದನ್ನು."

ಅವಳು ಕೆಳಗೆ ಕೂತಳು; ತನ್ನ ಮುಖವನ್ನು ಕೈಗಳಲ್ಲಿ ಹುಗಿದುಕೊಂಡು ಮಾರ್ಟಿ ಹೊರಗೆ ಹೋದಳು. ಸ್ವಲ್ಪ ಹೊತ್ತಿನಮೇಲೆ ತಿರುಗಿಬಂದಳು.

ಆಗ ಗ್ರೇಸಳು ಎದ್ದಳು ಮತ್ತು ಹೊರಗೆ ಹೋಗಿ ಮಾರ್ಟಿಯೊಂದಿಗೆ ಮಾತಾಡಿದೆಯ ಎಂದು ತಂದೆಯನ್ನು ಕೇಳಿದಳು.

'ಹೌದು' ಮೆಲಬರಿ ಅಂದನು.

'ಮತ್ತು ಆದದ್ದೆಲ್ಲವೂ ನಿನಗೆ ಗೊತ್ತಾಗಿದೆ? ನನ್ನ ಗಂಡ ಎಂಥ ವಿಪರೀತ ವನ್ನಾದರೂ ತಿಳಿಯಲಿ ಆದರೆ ನೀನು ಅಲ್ಲ'.

'ನನಗೆ ಗೊತ್ತಾಯಿತು. ಕ್ಷಮಿಸು, ಗ್ರೇಸ ದುಡುಕಿಗಿಂತ ಕೆಟ್ಟದ್ದನ್ನು ನಿನ್ನ ಬಗ್ಗೆ ಶಂಕಿಸಿದೆ. ನಿನ್ನನ್ನು ಇದಕ್ಕೂ ಚೆನ್ನಾಗಿ ನಾನು ಅರಿಯಬೇಕಿತ್ತು. ನನ್ನೊಂದಿಗೆ ಬರುವೆಯಾ—ಹಿಂದೆ ನಿನ್ನದ್ದಾಗಿದ್ದ ಮನೆಗೆ?'

'ಇಲ್ಲ, ನಾನು ಇಲ್ಲಿಯೆ ಅವನೊಂದಿಗೆ ಉಳಿಯುತ್ತೇನೆ. ಇನ್ನುಮೇಲೆ ನನ್ನ ಪರಿವೆ ಮಾಡಬೇಡ.'

ವಿಂಟರಬೋರ್ನನೊಂದಿಗೆ ಬೆಳೆದು ನಿಂತ ಅವಳ ಸಂಬಂಧಗಳು ಕೋಮಲ ವಾಗಿದ್ದವು. ಪ್ರಕ್ಷೋಭವಾಗಿದ್ದವು. ಅವು ಇತ್ತೀಚೆಗೆ ಮೆಲಬರಿಯ ಸ್ವಂತ ಜಾಲನೆ ಯಿಂದಲೇ ಕೂಡಿಬಂದವು. ಆದ್ದರಿಂದ ಅವಳ ಸದ್ಯದ ಕೃತ್ಯಗಳ ಬಗೆಗೆ ಆ ತಂದೆಯ

ಸ್ವಾಭಾವಿಕವಾದ ಸಿಟ್ಟನ್ನು ಅವು ಮಿದುಂಗೊಳಿಸದೇ ಇರಲಿಲ್ಲ. 'ಮಂಗಳೇ ಪರಿಸ್ಥಿತಿ ಕೆಟ್ಟಿದೆ' ಆತ ಉತ್ತರ ಕೊಟ್ಟನು. 'ಅದನ್ನು ಮತ್ತೂ ಕೆಡಿಸಲು ನೀನೇಕೆ ಹಠದಿಂದ ಹೆಣಗಾಡುವಿ? ಈಗ ಜೈಲ್ಸನೊಂದಿಗೆ ಇಲ್ಲಿ ಉಳಿಯುವುದರಿಂದ ನೀನು ಅವನಿಗೇನು ಒಳಿತು ಮಾಡುವಿ ? ನೋಡು ನಾನು ವಿಚಾರಣೆಗೆ ಹೊರಟಿಲ್ಲ. ನೀನು ಇಲ್ಲಿ ಬರಲು ಏಕೆ ನಿಶ್ಚಯಿಸಿದೆಯೆಂದಾಗಲಿ, ಅವನು ತೀರಿಕೊಳ್ಳದಿದ್ದರೆ ನಿನ್ನ ಕ್ರಮ ಏನಾಗ ಲಿತ್ತೆಂದಾಗಲಿ ನಾನು ಚೌಕಶಿಗೆ ಹೊರಟಿಲ್ಲ. ನಿನ್ನಲ್ಲಿ ಬುದ್ಧಿಪೂರ್ವಕವಾದ ಸಹೇತಕ ವಾದ ಕೆಡಕು ಬಂತೆಂದು ನನಗೆ ಅನಿಸುವುದಿಲ್ಲ. ನನ್ನಮಟ್ಟಿಗೆ ಹೇಳುವುದಾದರೆ, ನಿನ್ನ ಮೇಲಿನ ಎಲ್ಲ ಹಕ್ಕನ್ನು ನಾನು ಕಳೆದುಕೊಂಡಿದ್ದೇನೆ. ಅದಕ್ಕಾಗಿ ನಾನು ದೂರುವುದೂ ಇಲ್ಲ. ಆದರೆ ಈಗ ನನ್ನೊಂದಿಗೆ ನೀನು ತಿರುಗಿಬರುವುದರಿಂದ, ಅವನಿಗೇನು ನೀನು ಕಡಿಮೆ ದಯೆತೋರಿಸಿದಂತಲ್ಲ. ಅಲ್ಲದೆ ನಾಚಿಕೆಯ ಸದ್ದಿನಿಂದಲೂ ನೀನು ಪಾರಾಗುವಿ.'

'ಆದರೆ ಪಾರಾಗಬೇಕೆಂದು ನನಗೆ ಇಚ್ಛೆ ಇಲ್ಲ.'

'ನಿನ್ನ ಬಗ್ಗೆ ಅಲ್ಲವಾದರೂ, ನನ್ನ ಮತ್ತು ಇವಳ ಬಗ್ಗೆ ಆದರೂ ನೀನು ಹಾಗೆ ಇಚ್ಛಿಸಲಾರೆಯೇ ? ನೀನು ಮನೆಬಿಟ್ಟುಹೋದ ಸಂಗತಿ ನಮ್ಮ ಮನೆಯವರಲ್ಲದೇ ಬೇರೆ ಯಾರೂ ಅರಿಯರು. ಅಂದಾಗ ಬರೆ ಪೊಂಡ ಹಠಮಾರಿತನಕ್ಕೆ ಬಿದ್ದು ನೀನೇಕೆ ನನ್ನ ನೆರೆಗೂದಲನ್ನು ಮುಖದಲ್ಲಿ ಗೋಗರಿಸಬೇಕು ?'

'ನನ್ನ ಗಂಡನಲ್ಲದಿದ್ದರೆ—' ಅವಳು ಆರಂಭಿಸಿದಳು, ಅವನ ಮಾತಿನಿಂದ ಪ್ರಭಾವಿತಳಾಗಿ. 'ಆದರೆ ಅವನನ್ನು ಅಲ್ಲಿ ನಾನು ಹೇಗೆ ಭೇಟಿಯಾಗಲಿ ? ಏನೆಲ್ಲ ನಡೆದುಹೋದಮೇಲೆ ಬರೆ ಗಂಡಿನ ಗುಲಾಮಳಾದ ಪ್ರಾಣಿ ಅಲ್ಲದ ಯಾವ ಹೆಣ್ಣು ಅವನೊಂದಿಗೆ ಬದುಕಬಲ್ಲಳು ? ಹೇಗೆ ಬದುಕಬಲ್ಲಳು ?'

'ನಿನ್ನನ್ನು ನನ್ನ ಮನೆಯಿಂದ ಹೊರಗೆ ಇಡುವುದರ ಬದಲು ಆತನೇ ಹೊರಟು ಹೋಗುವನು.'

'ನಿನಗೆ ಹೇಗೆ ಗೊತ್ತು ಅಪ್ಪಾ ?'

'ಇಲ್ಲಿ ಬರುವಾಗ ದಾರಿಯಲ್ಲಿ ನಾವು ಭೆಟ್ಟಿಯಾದಿವಿ. ಅವನೇ ಹಾಗೆಂದನು.' ಮೇಲಬರಿಯಮ್ಮ ಅಂದಳು 'ಹಿಂದೆಯೂ ಹಾಗೆ ಅವನೇನೊ ಹೇಳಿದ್ದ. ಆತ ಒಟ್ಟಾರೆ ಬಹಳಷ್ಟು ಕಂಗೆಟ್ಟಿದ್ದಾನೆ.'

'ಆತ ನಮ್ಮ ಮನೆಗೆ ಬಂದಾಗಲೆ ಇವಳಿಗೆ ಹೇಳಿಬಿಟ್ಟಿದ್ದ. ತನ್ನ ಕ್ಷಮಾಪಣೆ ಕಾಲ ಮತ್ತು ಭಕ್ತಿಭಾವದಿಂದ ಕೂಡಿರುವತನಕವೂ ಕಾಯುತ್ತೇನೆಂದು.' ಮೆಲಬರಿ ಅಂದನು, 'ಅಲ್ಲವೇನೇ ಲೂಸಿ ಆತ ಹಾಗೆ ಹೇಳಿದ್ದು ?'

'ಹೌದು ನೀನೇ ಅವನಿಗೆ ಪೂರ್ಣ ಅನುಮತಿ ಕೊಡುವನಕ ಆತ ನಿನ್ನ ಬದುಕಿನಲ್ಲಿ ಸಂಗ್ರಾಮವನಲ್ಲ — ಎಂದಿದ್ದ ಗ್ರೇಸ' ಮೆಲಬರಿಯ ಹೆಂಡತಿ ಅಂದಳು.

ಫಿಟ್ಸಪಿಯರ್ಸನ ಪರ್ಯಾಲೋಚನೆಗಳ ಪೂರ್ವವೃತ್ತವು ಗ್ರೇಸಳಿಗೆ ಎಷ್ಟು

ಅನಪೇಕ್ಷಿತವೋ ಅಷ್ಟೇ ಸ್ವಾಗತಾರ್ಹವಾಗಿದ್ದಿತು. ಅವನ ಅಸ್ತಿತ್ವ ಸಾನ್ನಿಧ್ಯ ಅವಳಿಗೆ ಇಷ್ಟವಿದ್ದಿಲ್ಲ. ಆದಾಗ್ಯೂ ಅವಳು ಸೇಡಿಗಾಗಿ ಆಡಿದ ಕಟ್ಟುಕತೆ, ಅವಳನ್ನು ತಪ್ಪಿಸಿಕೊಳ್ಳಲಿಕ್ಕೆ ಅವನಿಗೆ ಬೇರೊಂದು ನೆವವನ್ನು ಕೊಟ್ಟಂತಾಯಿತು—ಈ ವಿಚಾರದಿಂದ ಅವಳಿಗೆ ವ್ಯಸನವಾಯಿತು. ಅನಂತರ ತಂದೆ ತಾಯಿಗಳೊಂದಿಗೆ ಹೋಗುವದರ ಕುರಿತು ಅವಳು ಇನ್ನೂ ಆಕ್ಷೇಪವೆತ್ತಲಿಲ್ಲ. ಅವರನ್ನು ಗುಡಿಸಿಲಿನ ಬಳಿಗೆ ಒಯ್ದಳು; ವಿಂಟರಬೋರ್ನನ ಅಂತಿಮ ದರ್ಶನ ಮಾಡಿಸಿದಳು; ತನ್ನದಾದ ಒಂದೆರಡು ವಸ್ತ್ರ ವಸ್ತುಗಳನ್ನು ಕಟ್ಟಿಕೊಂಡಳು. ಅವಳು ಇದನ್ನೆಲ್ಲ ಮಾಡುವುದರಲ್ಲಿ ತೊಡಗಿರುವಾಗ, ಮೆಲಬರಿಯು ಕರೆದ ಇಬ್ಬರು ಹೆಂಗಸರು ಒಳಗೆ ಅವರನ್ನು ಹಿಂಬಾಲಿಸಿ ಬಂದರು; ಬಡಕ್ರೀಡ್ಸ ಬಂದನು.

'ದಮ್ಮಯ್ಯ, ಮೆಲಬರಿಯಪ್ಪಾ. ನನ್ನ ಶೋಕ ನಾನು ತಡೆದುಕೊಳ್ಳಲಾರೆ—ಗುಡಸಾಗಿದ್ದರೂ' ಆತ ಅಂದನು. 'ಗುರುವಾರ ರಾತ್ರಿ ನಾನು ಅವನನ್ನು ಕಂಡಿದ್ದಿಲ್ಲ. ಅವನು ಎಲ್ಲಿ ಹೋಗಿಬಿಟ್ಟನೆಂದು ನಾನು ಚಿಂತೆ ಮಾಡಿದ್ದೆ ಮಾಡಿದ್ದು. ಸಿಡರ ಪೀಪಾಯಿಗಳನ್ನು ತೊಳೆಯಲು ನನಗೆ ಹೇಳಲು ಅವನು ಬರುವನೆಂದು ನೋಡುತ್ತಿದ್ದೆ. ಆದರೆ ಅವನು ಇಲ್ಲಿ ಹೀಗೆ—ನಾನು ಅವನನ್ನು ಮೇಜುಮಟ್ಟದ ಎತ್ತರದವನಿದ್ದಾಗಿನಿಂದಲೂ ಬಲ್ಲೆ—ಅವನ ಅಪ್ಪನನ್ನೂ ಬಲ್ಲೆ. ಸಾಯುವ ಮೊದಲು ಆತ ಎರಡು ಕೋಲು ಹಿಡಿದು ನಡೆದಾಡುತ್ತಿದ್ದ—ಮತ್ತು ಈಗ ಈ ಕುಟುಂಬದ ಕೊನೆಯನ್ನೆ ನಾನು ಕಂಡೆ. ಇವರನ್ನು ನಾವು ಕಳಕೊಳ್ಳುವಂತೆ ಇದ್ದಿಲ್ಲ. ಹಿಂಟಾಕದಲ್ಲಿ ಒಳ್ಳೇ ಮಂದೀನೇ ಅಪರೂಪ. ಇನ್ನು ಈ ರಾಬರ್ಟ ಕ್ರೀಡ್ಸನ್ನ ಊರವೆಚ್ಚದಿಂದ ಪೆಟ್ಟಿಗೇಲಿ ಹಾಕಿ ಹಲಿಗೆ ಮುಚ್ಚೋದೆ ಬಾಕಿ. ಇವನಿಗಾಗಿ ಯಾರೂ ಒಂದು ನಿಟ್ಟುಸಿರುಬಿಡುವವರು ಇನ್ನೂ ಉಳಿದಿಲ್ಲ.'

ಅವರು ಮನೆಗೆ ಹೊರಟರು—ಮಾರ್ಟಿ ಮತ್ತು ಕ್ರೀಡ್ಸ ಹಿಂದೆ ಉಳಿದರು. ಕೆಲಹೊತ್ತು ಗ್ರೇಸ್ ಮತ್ತು ಅವಳ ತಂದೆ ಒಟ್ಟಿಗೆ ನಡೆದರು—ಮಾತಾಡದೆ. ಆದಾಗಲೇ ನಸುಕಿನ ನೀಲಿ ತೆರೆವಿತ್ತು. ಬಾನಿನ ಕುಳಿರ ಕಳೆ ಅವಳ ತಣ್ಣಗಿನ ತೋಯ್ದ ಮೋರೆಯಲ್ಲಿ ಮೂಡಿತ್ತು. ಇಡಿಯ ಅಡವಿಯೆ ಸಾವಿನ ಮನೆಯಂತಿತ್ತು—ಅದರ ಉದ್ದಗಲವೆಲ್ಲ ಒಂದು ಹಾನಿಯಿಂದ ವ್ಯಾಪಿಸಿತ್ತು. ವಿಂಟರಬೋರ್ನ ಹೋದನು. ಮತ್ತು ತೋಟ, ಕಾನು ಈಗ ಅವನ ಕೊರತೆಯನ್ನು ಬಿಕೋ ಎಂದು ತೋಡಿಕೊಳ್ಳುತ್ತಿದ್ದವು; ಆ ಎಳೆಯ ಮರಗಳು ಎಷ್ಟೆಷ್ಟೋ ಅವನೇ ನೆಟ್ಟವು. ಮತ್ತು ಅವುಗಳ ಬಗೆಗೆ ಅವನೇ ಆಡಿದ್ದೂ ಎಷ್ಟೋ ನಿಜವಾಯಿತು—ಅವು ಬೀಳುವ ಮೊದಲೆ ತಾನು ಬೀಳುವೆನೆಂದಿದ್ದ. ಆ ಮರಗಳು ಅವನ ನಾಜೂಕಾದ ಕೈಗಳು ಹಾಕಿಕೊಟ್ಟ ನಿಟ್ಟಿನಲ್ಲಿಯೇ ತಮ್ಮ ಬೇರುಗಳನ್ನು ಬಿಡುತ್ತಿದ್ದವು.

'ನಿನ್ನ ಗಂಡ ನಮ್ಮ ಮನೆಗೆ ಬಂದದ್ದೂ ಒಂದು ಸಂಗತಿಗಾಗಿ ತಾಳುವಂತೆ ಆಯಿತು.' ಕೊನೆಗೊಮ್ಮೆ ಮೆಲಬರಿ ಅಂದನು 'ಮಿಸೆಸ್ ಚಾರ್ಮಂಡಳ ಸಾವು'

'ಓ ಸರಿ,' ಗ್ರೇಸ್ ಅಂದಳು, ಆ ನೆನಪಿಗೆ ಎಚ್ಚರಾಗಿ, 'ಅವನು ನನಗೆ ಹಾಗೆ ಹೇಳಿದನು.'

'ಅವಳು ಹೇಗೆ ಸತ್ತಳೆಂದು ಹೇಳಿದನೇ? ಅದು ಜೈಲ್ಸನ ಸಾವಿನಂಥ ಸಾವಲ್ಲ. ಅವಳಿಗೆ ಗುಂಡಿಕ್ಕಿದನು—ಒಬ್ಬ ಹತಾಶ ಪ್ರೇಮಿಕ. ಜರ್ಮನಿಯಲ್ಲಿ ನಡೆಯಿತು ಆ ಕತೆ. ಆ ದುರ್ದೈವಿ ಕಡೆಗೆ ತಾನೂ ಗುಂಡಿಕ್ಕಿಕೊಂಡನಂತೆ. ಆತ ದಕ್ಷಿಣ ಕಾರೋಲೀನಾದ ಒಬ್ಬ ಗೃಹಸ್ಥ; ಬಹಳ ಭಾವಾವೇಶದ ವಿಕಾರವಶ ಮನುಷ್ಯ. ಆತ ಇಲ್ಲಿಯೂ ಆಗಾಗ್ಗೆ ಒಂದು ಪಿಶಾಚಿಯಂತೆ ಅವಳ ಮನೆಯ ಸುತ್ತು ಸುಳಿದಾಡುತ್ತಿದ್ದ; ತನ್ನನ್ನು ಆಕೆ ಅನುಗ್ರಹಿಸಬೇಕೆಂದು; ಆಕೆ ಹೋದಲ್ಲೆಲ್ಲ ಹೋಗುತ್ತಿದ್ದ. ಹೀಗೆ ಕೊನೆಗಂಡಳು ಆ ಉಜ್ವಲ ಫೆಲಸ್ ಜಾರ್ಮಂದ—ಒಂದೊಮ್ಮೆ ನನಗೆ ಸ್ನೇಹಿತೆ—ಆದರೆ ನಿನಗೆ ಮಿತ್ರಳಲ್ಲ.'

'ನಾನು ಅವಳನ್ನು ಕ್ಷಮಿಸಬಲ್ಲೆ.' ಗ್ರೇಸ್ ಅಂದಳು ವಿಮನಸ್ಕತೆಯಿಂದ 'ಇದೆಲ್ಲ ನಿನಗೆ ಎಡ್ವಿಡ್ ಹೇಳಿದನೆ?'

'ಇಲ್ಲ; ಆದರೆ ಅವನು ಈ ವೃತ್ತಾಂತವನ್ನು ಪ್ರಕಟಿಸಿದ ಒಂದು ಲಂಡನ್ ಪತ್ರಿಕೆಯನ್ನು ನಮ್ಮ ನಡುಮನೆಯ ಮೇಜಿನ ಮೇಲೆ ಇಟ್ಟನು—ನಾವು ಅದನ್ನೆ ಓದುವಂತೆ ಮಡಚಿ. ಈ ವಾರ ಅದು ಶರ್ಟನ್ ಪತ್ರಿಕೆಯಲ್ಲಿ ಬರಬಹುದು, ಸಂಶಯವೇ ಇಲ್ಲ. ಈ ಘಟನೆ ಇನ್ನೂ ಗಂಭೀರವಾಗುವಂತೆ, ಅವನು ಅದಕ್ಕೂ ಮುಂಚೆ ಅವಳೊಂದಿಗೆ ತೀಕ್ಷ್ಣ ಮಾತುಕತೆ ನಡೆದು, ಅವಳನ್ನು ಬಿಟ್ಟು ಹೊರಟು ಬಂದಿದ್ದನು. ಆ ಸಂಗತಿ ಪತ್ರಿಕೆಯಲ್ಲಿ ಬರಲಿಲ್ಲ. ಅವನೇ ಲೂಸಿಗೆ ಹೇಳಿದನು ಮತ್ತು ಈ ಜಗಳಕ್ಕೆ ಕಾರಣ, ಎಲ್ಲ ಬಿಟ್ಟು ಇವಳಾಗಬೇಕೆ—ನಾವು ಈಗ ಹಿಂದೆ ಬಿಟ್ಟು ಬಂದವಳು.'

'ಅಂದರೆ ಮಾರ್ಟಿಯೇ?' ಗ್ರೇಸಳು ಈ ಮಾತುಗಳನ್ನು ಅಲಕ್ಷ್ಯದಿಂದಲೇ ಆಡಿದಳು. ಮೆಲಬರಿಯ ಕತೆಗೆ ಒಂದು ಮೊನೆಯಿತ್ತು. ಆದರೆ ಗ್ರೇಸಳಿಗೆ ಅದರ ಪರಿವೆ ಇದ್ದಿಲ್ಲ.

'ಹೌದು ಮಾರ್ಟಿ ಸೌದಳೇ' ಮಗಳನ್ನು ಸದ್ಯದ ಶೋಕದಿಂದ ಬೇರೆಡೆಗೆ ತೊಡಗಿಸಲಿಕ್ಕೆಂದೇ ಹಟದಿಂದ ಕತೆ ಮುಂದುವರಿಸಿದನು 'ಅವನು ಹೊರಟು ಹೋಗುವ ಮುಂದೆ ಈಕೆ ಅವನಿಗೊಂದು ಪತ್ರವನ್ನು ಬರೆದಿದ್ದಳು. ಅದನ್ನು ಈತ ಓದದೆ ಬಹುಕಾಲ ಜೇಬಿನಲ್ಲಿಯೇ ಇಟ್ಟುಕೊಂಡಿದ್ದನು. ಅದನ್ನು ಆತ ಜಕ್ಕನೆ ಜಾರ್ಮಂದಳ ಸಮಕ್ಷವೇ ಜೇಬಿನಿಂದ ಹೊರತೆಗೆದನು. ಮತ್ತು ದೊಡ್ಡ ದನಿಯಲ್ಲಿಯೇ ಓದಿಬಿಟ್ಟನು. ಅದರಲ್ಲಿ ಅವಳನ್ನು ಕೆರಳಿಸುವುದೇನೋ ಸಂಗತಿ ಇತ್ತು. ಅದು ಜಗಳಕ್ಕೆ ಅವರ ಒಡಕಿಗೆ ಕಾರಣವಾಯಿತು. ಈ ಒಡಕು ಒಡಂಬಡಿಸಿಕೊಳ್ಳಲಿಕ್ಕೆ ಅವಳು ಅವನನ್ನು ಹಿಂಬಾಲಿಸಿ ಹೊರಟಾಗ ಆ ಭಯಂಕರ ಸಾವು ಸಂಭವಿಸಿತು.

ಈ ಘಟನೆಯ ಸಾರಾಂಶವನ್ನು ಕೊಡುವಷ್ಟು ಮೆಲಬರಿಗೆ ಅದು ಸಾಕಷ್ಟು ಗೊತ್ತಿದ್ದಿಲ್ಲ. ಮಾರ್ಟಿ ಸೌದಳ ಪತ್ರದ ವಿಷಯ ಆವಳ ಹಾಗೂ ಶ್ರೀಮತಿ

ಜಾರ್ಮಂದಳ ವೈಯಕ್ತಿಕ ಅಲಂಕರಣಕ್ಕೆ ಸಂಬಂಧಿಸಿದ ಒಂದು ಒಡವೆಯ ಕುರಿತಾಗಿತ್ತು. ಅವಳು ಹೊಡೆದ ಗುಂಡು ಜಾರ್ಮಂದಳ ಮರ್ಮಕ್ಕೆ ತಪ್ಪದೆ ತಾಗಿತ್ತು. ಫಿಟ್ಜ಼್‌ಪಿಯರ್ಸ್ ಮತ್ತು ಫೆಲಿಸ್ ಇವರ ನಡುವಿನ ದೃಶ್ಯ ತೀಕ್ಷ್ಣವಾಗಿತ್ತು, ತನ್ನ ಪ್ರೇಮಿಕನ ಇದಿರು ಒಬ್ಬ ಹೆಣ್ಣಿಗೆ ಇನ್ನೊಬ್ಬ ಹೆಣ್ಣು ಮಾನಗೇಡು ಮಾಡುವ ಸಂದರ್ಭದಿಂದ ಉಂಟಾದ ದೃಶ್ಯ ಹಾಗೆಯೇ ತೀವ್ರವಾಗಿರುತ್ತದೆ. ಮಾರ್ಟಿಯು ಬಾಯಿಂದ ಆಡಿ ಅದನ್ನು ಉಂಟುಮಾಡಿದ್ದಿಲ್ಲ, ನಿಜವೆಂದರೆ ಆ ಬಗೆಗೆ ಆಪಾದನೆ ಫಿಟ್ಜ಼್‌ಪಿಯರ್ಸನೇ ಮಾಡಿದ್ದು. ಅದೂ ಅವಳಿಗೆ ಮಾರ್ಟಿಯು ಪತ್ರವನ್ನು ಓದಿ ತೋರಿಸಿ, ಅದೂ ಅಣಕದ ದನಿಯಲ್ಲಿ. ಏಕೆಂದರೆ ಆಗಲೇ ಫಿಟ್ಜ಼್‌ಪಿಯರ್ಸ ಅವಳ ಪ್ರಸಂಗದಿಂದ ತುಸು ಬೇಸತ್ತಿದ್ದನು. ಅವನಿಗೆ ಈ ಗೆಳತಿ ' ಹಳಸಿದ ರೊಟ್ಟಿ 'ಯೆನಿಸತೊಡಗಿತ್ತು. ಆತ ಈ ಅಲಕಾವಲಿಗಳನ್ನು ಆ ಕೇಶಪಾಶಗಳನ್ನು ಬಹಳ ಸಲ ತನ್ನ ಬೆರಳುಗಳಿಂದ ತೀಡಿದ್ದನು—ಅವೆಲ್ಲ ಕೃತಕ, ಇನ್ನೊಬ್ಬರಿಂದ ತಂದುಕೊಂಡು ಜೋಡಿಸಿದ್ದು ಎಂಬುದು ಗೊತ್ತಿಲ್ಲದೆ. ಅಂದಾಗ ಈ ಶೋಧವನ್ನು ಆಕಸ್ಮಿಕವಾಗಿ ಮಾಡಿದಾಗ ಅವನ ಸ್ವಭಾವ ಎಷ್ಟೇ ಉದಾರವಿದ್ದರೂ ಆತ ನವಿರಾದ ವ್ಯಂಗ್ಯವನ್ನು ತೋರ್ಪಡಿಸದಿರುವದೇ ಶಕ್ಯವಿತ್ತು.

ಅವರಿಬ್ಬರ ವಿರಸ ಹಾಗೆ ಆರಂಭವಾಗಿತ್ತು ಮತ್ತು ಅದರ ಕೊನೆ ದುರಂತದಲ್ಲಿ ಆಯಿತು. ಅವನು ದಿಗ್ಗನೆ ಹೊರಟಿದ್ದೂ ಹೋದೊಡನೆ ಅವಳು ಅವನನ್ನು ಸ್ಟೇಷನ್ನಿಗೆ ಹಿಂಬಾಲಿಸಿದಳು. ಆದರೆ ಟ್ರೇನು ಹೋಗಿಬಿಟ್ಟಿತು. ಆಗ ಹೊಂಬರ್ಗಕ್ಕೆ ಅವನನ್ನು ಹುಡುಕಿಕೊಂಡು ಪಯಣ ಬೆಳಸಿದಾಗ ಅವಳಿಗೆ ಅವನ ಪ್ರತಿಸ್ಪರ್ಧಿ ಭೆಟ್ಟಿಯಾದನು. ಅವನ ಬಯ್ದಾಟ ಕಲಹಕ್ಕೆ ಮುಟ್ಟಿತು ಮತ್ತು ಇಬ್ಬರ ಸಾವಿನಲ್ಲಿ ಮುಗಿಯಿತು. ಆ ವಿಕಾರವಶತೆಯ ಮತ್ತು ಅಪರಾಧದ ಕುರಿತು ಫಿಟ್ಜ಼್‌ಪಿಯರ್ಸನಿಗೆ ಅದರ ವೃತ್ತಾಂತವನ್ನು ಪತ್ರಿಕೆಯಲ್ಲಿ ಓದುವತನಕ ಏನೂ ಗೊತ್ತಿದ್ದಿಲ್ಲ. ಅವನ ಸುದೈವಕ್ಕೆ ಆ ದುರ್ದೈವಿ ಹೆಂಗಸಿನೊಂದಿಗೆ ಇದ್ದ ಅವನ ಪೂರ್ವಪರಿಚಯದ ಉಲ್ಲೇಖ ವೃತ್ತದಲ್ಲಿ ಇದ್ದಿಲ್ಲ. ಮುಂದಿನ ತನಿಖೆ ವಿಚಾರಣೆಗಳಲ್ಲಿಯೂ ಅದು ಬರಲಿಲ್ಲ. ಜೋಡುಗೋಲೆಗಳು ಏನೋ ಜೂಜಿನ ನಷ್ಟದ ಮೂಲಕವಿರಬೇಕೆಂದು ತೀರ್ಮಾನಿಸಲಾಯಿತು. ಆದರೆ ವಾಸ್ತವಿಕವಾಗಿ ಅವರಿಬ್ಬರಲ್ಲಿ ಯಾರೂ ಜೂಜಿನ ಮೇಜಿಗೆ ಭೆಟ್ಟಿ ಇತ್ತದ್ದೇ ಇದ್ದಿಲ್ಲ.

ಮೆಲಬರಿ ಮತ್ತು ಮಗಳು ಮನೆಯ ಹತ್ತಿರಕ್ಕೆ ಬಂದರು. ದಾರಿಯಲ್ಲಿ ಅವರು ಒಂದೇ ಸಜೀವ ಪ್ರಾಣಿಯನ್ನು ಕಂಡರು—ಒಂದು ಬಣಜಿಯನ್ನು. ಅದು ಮರವನ್ನು ಏರಲು ಓಡಲಿಲ್ಲ. ತಾನು ಎತ್ತಿಕೊಂಡ ಸವಿ ಚೆಸ್ಟ್‌ನಟಕಾಯಿಯನ್ನು ಒಗೆದು ಚಟ್-ಚಟ್-ಎಂದು ಕೂಗಿ ಹಿಂಗಾಲಿನಿಂದ ನೆಲವನ್ನು ತುಳಿಯಿತು. ಮನೆಯ ಮಾಡುಗಳು ಹೊಗೆಗೊಳವೆಗಳು ಟೊಂಗೆಗಳ ತೆರೆಯ ಮರೆಯಿಂದ ಹೊರಗೆ ಕಾಣಿಸಿಕೊಳ್ಳತೊಡಗಿದಾಗ ಗ್ರೇಸಳು ಬೆಚ್ಚಿದಳು ಮತ್ತು ಮುಂದರಿಯದ ಥಟ್ಟನೆ ತನ್ನನ್ನು ತಡೆದಳು.

'ನಿನಗೆ ಸ್ಪಷ್ಟ ತಿಳಿದಿರಬೇಕು,' ಆಕೆ ತನ್ನ ಮಲತಾಯಿಗೆ ಅಂದಳು, ಹಳೆಯ ಸಂದೇಹ ಕೆಲಮಟ್ಟಿಗೆ ಮರಕೊಳಿಸಿ. 'ಅವನು ಮನೆಯನ್ನು ಬಿಟ್ಟುಹೋಗುವ ಆಶ್ವಾಸನದ ಶರ್ತಿನಮೇಲೆಯೇ ನಾನು ತಿರುಗಿ ಬರುತ್ತಿದ್ದೇನೆ. ಇದನ್ನು ನೀನು ಅವನಿಗೆ ತಿಳಿಸಿಕೊಡುವೆಯಾ, ಮುಂದೆ ಅವನಿಂದ ತಪ್ಪು ಆಗದಂತೆ.'

ಮೆಲಬರಿಯ ಹೆಂಡತಿಯು ಈ ಮೊದಲು ಫಿಟ್ಜಪಿಯರ್ಸನೊಂದಿಗೆ ಕೆಲವು ದೀರ್ಘ ಸಂಭಾಷಣೆಗಳನ್ನು ಖಾಸಗಿಯಾಗಿ ನಡೆಯಿಸಿದ್ದಾಳೆ. ಅವಳು ಗ್ರೇಸಳಿಗೆ ಈಗ ಆಶ್ವಾಸನೆ ಇತ್ತಳು—ಈ ಸಂಜೆಗೆ ಬಹುಶಃ ಅವನು ಹೋಗಬಹುದು ಎಂದು. ಆಮೇಲೆ ಗ್ರೇಸ್ ಮೆಲಬರಿ ವಾಸಿಸುವ ವಿಭಾಗವನ್ನು ಪ್ರವೇಶಿಸಿದಳು ಮತ್ತು ನಡುಮನೆಯಲ್ಲಿ ಅಸ್ವಸ್ಥಚಿತ್ತಳಾಗಿ ಕುಳಿತಳು; ಅವಳ ಮಲತಾಯಿ ಫಿಟ್ಜಪಿಯರ್ಸನಿಗೆ ಕಾಣಲು ಹೋದಳು.

ಅವಳ ಇಚ್ಛೆಯನ್ನು ಆ ಡಾಕ್ಟರನು ಕೂಡಲೆ ಪಾಲಿಸಿದ್ದು ಅವನಿಗೆ ಗೌರವ ತಂದುಕೊಟ್ಟಿತು—ಹಾಗೆ ಅದು ಬರುವಂತೆ ಇದ್ದರೆ. ಮೆಲಬರಿಯಮ್ಮ ನಡುಮನೆಗೆ—ಹಿಂದಿರುಗಿ ಬರುವುದಕ್ಕೆ ಮುಂಚೆಯೇ ಅಲ್ಲಿ ಕಿಟಕಿಯ ಬೆಂಚಿನಲ್ಲಿ ಕುಳಿತ ಗ್ರೇಸಳು ಕಂಡಳು; ಅವಳ ಗಂಡನು, ಮುಂಜಾವಿನ ಬೆಳೆಯುತ್ತಿರುವ ಬೆಳಕಿನಲ್ಲಿ ಕೈಯಲ್ಲಿ ಒಂದು ಬ್ಯಾಗು ಹಿಡಿದುಕೊಂಡು ಬಾಗಿಲಿನಿಂದ ಹೊರಬಿದ್ದು ಹೋದನು. ಗೇಟಿನೊಳಗಿಂದ ಹೊರಬೀಳುವಾಗ ಆತ ತಲೆಯನ್ನು ಹೊರಳಿಸಿದನು. ಅವಳು ಕುಳಿತ ಕೋಣೆಯೊಳಗಿನ ಬೆಂಕಿಯ ಬೆಳಕು ಅವಳ ಆಕೃತಿಯನ್ನು ಕಪ್ಪಾಗಿ ಒಡೆದೆದ್ದು ಕಾಣುವಂತೆ ಮಾಡಿತು. ಕಿಟಕಿಯ ಚೌಕಟ್ಟಿನಲ್ಲಿ—ಅವಳು ಅದರೊಳಗಿಂದ ಹೊರಗೆ ನೋಡುತ್ತಿದ್ದಾಗ ಅವನೂ ಅವಳನ್ನು ಸುಸ್ಪಷ್ಟವಾಗಿ ನೋಡಿರಬೇಕು. ಮರುಕ್ಷಣದಲ್ಲಿ ಅವನು ಮುಂದೆ ಹೋದನು. ಗೇಟು ಮುಚ್ಚಿತು. ಅವನು ಅದೃಶ್ಯನಾದನು. ಗಂಡಿಸಲಿನಲ್ಲಿ ಅವಳು ಹೇಳಿದ್ದಳು, ಇನ್ನೊಬ್ಬನು ತನ್ನ ಹಕ್ಕುಗಳನ್ನು ಕಸಿದುಕೊಂಡಿದ್ದನೆಂದು. ಈಗ ಅವನನ್ನು ಆಕೆ ವನವಾಸಕ್ಕೆ ಅಟ್ಟಿದ್ದಳು.

೪೪

ಫಿಟ್ಜಪಿಯರ್ಸ ಹೋಗಿ ಒಂದು ತಾಸು ಆಗಿಲ್ಲ. ಅಷ್ಟರೊಳಗೆ ಗ್ರೇಸಳು ಕಾಯಿಲೆ ಬಿದ್ದಳು. ಮರುದಿನವೆಲ್ಲ ಅವಳು ಕೋಣೆಯಲ್ಲಿಯೇ ಕಳೆದಳು. ಮಂದಿ ಜೋನನನ್ನು ಕರೆಯಲಾಯಿತು. ಅವನು ಗೊಣಗಿದ ಏನೇನೋ ಮಾತುಗಳಲ್ಲಿ, 'ಜ್ವರದ ಲಕ್ಷಣ ಗಳು' ಎಂಬ ಶಬ್ದಗಳೂ ಬಂದವು. ಗ್ರೇಸಳು ಅದನ್ನು ಕೇಳಿದಳು. ಯಾವ ಸಾಧನ ದಿಂದ ತನಗೆ ಈ ಉಪಹತಿ ತಾನೇ ತಂದುಕೊಂಡೆನೆಂಬುದನ್ನು ಅವಳು ಊಹಿಸಿದಳು.

ಒಂದು ದಿನ ಅವಳು ಅಲ್ಲಿಯೆ ಬಿದ್ದಿದ್ದಳು. ತಲೆ ಸಿಡಿಯುತ್ತಿತ್ತು. ಅವಳಿಗೆ ಶಂಕೆ — ತಾನೂ ಮುಂದೆ ಹೋದ ಅವನನ್ನು ಸೇರಲಿಕ್ಕೆ ಹೋಗಲಿರುವೆನೋ ? ಎಂದು. ಈಗ ಅಜ್ಜಿ ಅಲಿವರ ಅವಳ ಮಂಚದ ಬದಿಗೆ ಬಂದಳು. 'ನನಗೆ ಗೊತ್ತಿಲ್ಲಮ್ಮ ಇದು ನಿನಗಾಗಿಯೋ ಏನೋ' ಅವಳೆಂದಳು. 'ಆದರೆ ಇದನ್ನು ನಾನು ಮೇಜಿನಮೇಲೆ ಕಂಡೆ. ಅಲ್ಲಿ ಮಾರ್ಟ ಬಿಟ್ಟಿದ್ದಳೆಂದು ನನಗೆ ಕಾಣುತ್ತದೆ. ಅವಳು ಈ ಮುಂಜಾನೆ ಬಂದಿದ್ದಳು.'

ಅಜ್ಜಿ ಅಲಿವರ ಎತ್ತಿ ಹಿಡಿದ ವಸ್ತುವಿನತ್ತ ಗ್ರೇಸಳು ತನ್ನ ಉರಿಯುವ ಕಣ್ಣು ಹೊರಳಿಸಿದಳು. ಅದು ಅವಳ ಗಂಡ ಆ ಗುಡಿಸಲಿನಲ್ಲಿ ಅವಳಿಗಾಗಿ ಬಿಟ್ಟುಹೋದ ಮದ್ದಿನ ಸೀಸೆ. ಅದರ ಕೆಲವು ಹನಿ ಕುಡಿಯೆಂದು ಆತ ದುಂಬಾಲ ಬಿದ್ದಿದ್ದನು — ವಿಂಟರಬೋರ್ನನ್ನೂ ನೆಲಕ್ಕೆ ಉರುಳಿಸಿದ ವ್ಯಾಧಿಗೆ ಬಲಬೀಳದಂತೆ ತನ್ನನ್ನು ಕಾಪಾಡಿಕೊಳ್ಳಲಿಕ್ಕೆ. ಆ ಸೀಸೆಯನ್ನು ಅವಳು ಶಕ್ಯವಿದ್ದಷ್ಟು ಚೆನ್ನಾಗಿ ಪರೀಕ್ಷಿಸಿದಳು. ಒಳಗಿದ್ದ ದ್ರವ ಕಂದುಬಣ್ಣದ್ದಾಗಿತ್ತು. ಅದರ ಮೇಲೆ ಇಟಾಲಿಯನ್ ಭಾಷೆಯಲ್ಲಿ ಬರೆದ ಒಂದು ಹೆಸರು ಪಟ್ಟಿ ಅಂಟಿಸಿತ್ತು. ವಿದೇಶಿ ಸಂಚಾರದಲ್ಲಿ ಎಲ್ಲೋ ಆತ ಅದನ್ನು ಪಡೆದಿರಬೇಕು. ಅವಳಿಗೆ ಇಟಾಲಿಯನ್ ಭಾಷೆ ಏನೂ ಬರುತ್ತಿದಿಲ್ಲ. ಆದರೆ ಅವಳು ಇಷ್ಟೊಂದು ಅರಿತುಕೊಳ್ಳಬಲ್ಲಳು. ಆ ಔಷಧ ಯಾವುದೋ ಜ್ವರನಿರೋಧಕವಾಗಿತ್ತು. ಅವಳ ತಂದೆ, ತಾಯಿ, ಮನೆಯ ಎಲ್ಲ ಮಂದಿ ಅವಳು ಶೀಘ್ರ ಗುಣವಾಗಬೇಕೆಂದು ಚಿಂತಾತುರರಾಗಿದ್ದರು. ಆದ್ದರಿಂದ ಅವಳು ತನ್ನ ಗಂಡನ ಸೂಚನೆಯನ್ನು ಮನ್ನಿಸುವ ನಿರ್ಧಾರ ಮಾಡಿದಳು. ಇದರಲ್ಲಿ ಏನೇ ಅಪಾಯ ಬಂದರೂ ಅವಳು ಅದನ್ನು ಇದುರಿಸಲು ಸಿದ್ಧಳಾದಳು. ಒಂದು ಗ್ಲಾಸು ನೀರು ತರಿಸಿ ಅದರಲ್ಲಿ ಕೆಲವು ಹನಿ ಮದ್ದು ಹಾಕಿಸಿದಳು.

ಅದರ ಪರಿಣಾಮ ಒಂದು ಪವಾಡವಲ್ಲದಿದ್ದರೂ ಗಮನಾರ್ಹವಾಗಿ ಆಯಿತು. ಒಂದು ತಾಸಿನೊಳಗೇ ಅವಳಿಗೆ ನೆಮ್ಮದಿ ಅನಿಸಿತು; ತಂಪೆನಿಸಿತು. ಅವಳು ಹೆಚ್ಚು ತಿಳಿಯಾಗಿ ವಿಚಾರ ಮಾಡಲು ಶಕ್ತಳಾದಳು. ಸಿಟ್ಟು ಸಿಡುಕಿಗೆ ಬುದ್ಧಿಕೊಟ್ಟು ತನ್ನನ್ನೆ ಘಾಸಿಗೊಳಿಸಿಕೊಳ್ಳುವ ಒಲವು ಕಡಿಮೆ ಆಯಿತು. ಅವಳು ಇನ್ನಷ್ಟು ಹನಿಗಳನ್ನು ಸೇವಿಸಿದಳು. ಆ ಹೊತ್ತಿನಿಂದ ಅವಳ ಜ್ವರ ಹಿಂಜರಿಯಿತು. ಮತ್ತು ನೀರು ಹೋಯ್ದ ದಳ್ಳುರಿಯಂತೆ ಆರಿಹೋಯಿತು.

'ಅವನೆಷ್ಟು ಚತುರ' ಅವಳು ಪಶ್ಚಾತ್ತಾಪದಿಂದಲೆ ಅಂದುಕೊಂಡಳು. ತನ್ನ ಈ ಹಿರಿದಾದ ಬುದ್ಧಿಶಕ್ತಿಯನ್ನು ಒಳ್ಳೆಯ ಪ್ರಯೋಜನಕ್ಕೆ ಬಳಸುವಂತೆ ಅವನಿಗೆ ಹೆಚ್ಚಿನ ತತ್ವನಿಷ್ಠೆ ಏಕೆ ಇರದೆ ಹೋಯಿತು? ಬಹುಶಃ ನನ್ನ ಈ ನಿಷ್ಪ್ರಯೋಜಕ ಬಾಳನ್ನು ಆತ ಉಳಿಸಿರಬಹುದು. ಆದರೆ ಇದು ಅವನಿಗೆ ಗೊತ್ತಿಲ್ಲ. ಅಲ್ಲದೆ ಅದನ್ನು ಉಳಿಸಿದೆನೋ ಅಳಿಸಿದೆನೋ ಅದರ ಪರಿವೆಯೆ ಅವನಿಗೆ ಇಲ್ಲ ಮತ್ತು ಆ ಮೂಲಕವೇ ನಾನೂ ಅವನಿಗೆ ಅದನ್ನು ಹೇಳಲಿಕ್ಕಿಲ್ಲ. ಬಹುಶಃ ತನ್ನ ಮದ್ದುಗಾರಿಕೆಯ ನೈಪುಣ್ಯದ

ಒಂದು ಸೊಕ್ಕಿನಲ್ಲಿ ಆತ ಈ ಮಂದ್ದನ್ನು ನನಗೆ ಕೊಟ್ಟಿರಲೂ ಬಹುದು. ನನ್ನ ಬಳಿಗೆ ತನ್ನ ಸಾಧನ ಸಂಪತ್ತುಗಳ ಶ್ರೇಷ್ಠತೆಯನ್ನು ಕಾಣಿಸಲಿಕ್ಕೆ — ಬಾಯಬಲ್ಲಿನ ಹಳೆ ಕರಾರಿನ ಕತೆಯೊಂದರಲ್ಲಿ ಎಲಿಜಾ ಸ್ವರ್ಗದ ಬೆಂಕಿಯನ್ನು ಭೂಮಿಗೆ ಎಳೆದಂತಂದಂತೆ.

ತನ್ನ ಬಾಳಿನ ಮೇಲಿನ ಈ ಅಪಯಶಸ್ವಿಯಾದ ಅಪಘಾತದಿಂದ ಗುಣವಾದೊಡನೆ, ಗ್ರೇಸಳು ಮಾರ್ಟಿಸೌದಳ ಗುಡಿಸಲಿಗೆ ಹೋದಳು. ಅವಳ ಬದುಕಿನ ಪ್ರವಾಹವು ತಿರುಗಿ ಜೈಲ್ಸ ವಿಂಟರಬೋರ್ನ್, ತಾನು ಕಳೆದುಕೊಂಡ ನಲ್ಲನ ದಿಶೆಯಲ್ಲಿ ಹೊರಳಿತ್ತು.

'ಮಾರ್ಟಿ' ಆಕೆ ಅಂದಳು 'ನಾವಿಬ್ಬರೂ ಅವನನ್ನು ಪ್ರೀತಿಸಿದೆವು. ನಾವು ಕೂಡಿಯೇ ಅವನ ಗೋರಿಗೆ ಹೋಗೋಣ',

ಚರ್ಚು ಊರಿನಿಂದ ತುಸು ಹೊರಗಡೆಗೇ ನಿಂತಿತ್ತು, ಕೇರಿಯೊಳಗಿನಿಂದ ಹಾಯದೆ ಅಲ್ಲಿಗೆ ಮುಟ್ಟುವದು ಸಾಧ್ಯವಿತ್ತು. ಆ ಸೆಪ್ಟೆಂಬರ್ ತಿಂಗಳ ಕೊನೆಯ ಸಂಜೆಗತ್ತಲಲ್ಲಿ ಅವರಿಬ್ಬರೂ ಗುಪ್ತದಾರಿಗಳಿಂದ ಅಲ್ಲಿಗೆ ಹೋದರು — ಜತೆಯಾಗಿ ಮಾತಿಲ್ಲದೆ ಮೌನದಲ್ಲಿಯೇ ಮುಂದುವರಿದರು. ಪ್ರತಿಯೊಬ್ಬಳು ತನ್ನದೆ ವಿಚಾರ ತಂದ್ರಿಯಲ್ಲಿ ತಲ್ಲೀನಳಾಗಿದ್ದಳು. ಗ್ರೇಸಳ ಕಷ್ಟ ಮಾರ್ಟಿಯದಕ್ಕಿಂತ ಮಿಗಿಲು — ತನ್ನದೆ ಅವಿವೇಕದ ಕೃತ್ಯಗಳಿಂದ ಆತನ ಬಾಳ ಬೆಳಕನ್ನು ತಾನು ನಂದಿಸಿಬಿಟ್ಟೆನೆಂಬ ಭಾವನೆ ಅವಳಿಗೆ ಪಿಶಾಚಿಯಂತೆ ಕಾಡಿತ್ತು. ಆತ ತನ್ನ ಬೇನೆಯಿಂದಾಗಿ ಸಾಯುವವನಿದ್ದ — ತಾನು ಅವನ ಮನೆಯನ್ನು ಅವನಿಂದ ಕಸಿದುಕೊಳ್ಳದಿದ್ದರೂ — ಎಂದು ಆಕೆ ತನ್ನ ಮನಸ್ಸಿಗೆ ಅರಿಕೆಮಾಡಿಕೊಡುತ್ತಿದ್ದಳು. ಕೆಲಸಲ ಈ ಪ್ರಯತ್ನದಲ್ಲಿ ಅವಳು ಯಶಸ್ವಿಯೂ ಆಗುತ್ತಿದ್ದಳು. ಕೆಲವು ಸಲ ಆಗುತ್ತಿದ್ದಿಲ್ಲ.

ಅವರಿಬ್ಬರೂ ಸಮಾಧಿಯ ಬದಿಗೆ ಜತೆಯಲ್ಲಿಯೆ ನಿಂತರು. ಹೊತ್ತು ಮುಳುಗಿತ್ತು. ಆದರೂ ಬೆಟ್ಟದ ಮಾರ್ಗ ಆ ಮಲೆನಾಡಿನ ಮೇಲಿಂದ, ಮೈಲುಗಟ್ಟಲೆ ದೂರದವರೆಗೆ ಕಾಣುತಿತ್ತು. ಪ್ರತಿವರ್ಷ ಅವನು ಹೊತ್ತು ಒಯ್ಯುವ ಸೇಬಿನಗಾಣ ಮತ್ತು ಯಂತ್ರಗಳೊಂದಿಗೆ ಇಳಿದು ನಡೆಯುವ ಕಣಿವೆಯ ಮೇಲಿಂದ ಅವರು ಕಣ್ಣು ಹಾಯಿಸಬಹುದಿತ್ತು.

ಬಹುಶಃ ಗ್ರೇಸಳ ಮೊದಲನೆಯ ದುಃಖವು — ಆತ ಬದುಕಿದ್ದರೆ ತನ್ನನ್ನು ಬೇಡುತ್ತಲೆ ಇದ್ದಿಲ್ಲವೆಂಬುದು — ಅವಳ ಎರಡನೆಯ ದುಃಖವನ್ನು ಮೃದುಗೊಳಿಸಲು ಸಮರ್ಥವಾಯಿತು. ಮಾರ್ಟಿಯ ಕಡೆಗೂ ಅದೇ ವಿಚಾರ — ಅವಳೂ ಅವನವಳು ಎಂದೂ ಆಗುತ್ತಿದ್ದಿಲ್ಲ. ಅವನು ಅವರ ಜತೆಗೆ ಇದ್ದಾಗ ಅವರ ನಡುವೆ ಯಾವ ಸಂತೃಪ್ತ ಪ್ರೇಮದ ಪ್ರತ್ಯಾಶೆಯೂ ಇದ್ದಿಲ್ಲ; ಅದ್ದರಿಂದ ಈಗ ಅವನು ಹೋದ ಮೇಲೆ ಅವರಲ್ಲಿ ಯಾರೂ ನಿರಾಶರಾಗುವಂತಿದ್ದಿಲ್ಲ.

ಕ್ರಮೇಣ ಗ್ರೇಸಳಿಗೆ ತಿಳಿದುಬಂದಿತು. ಮಾರ್ಟಿಯಂತೆ ತಾನೂ ಜೈಲ್ಸನನ್ನು ಎಂದೂ ಅರಿತುಕೊಂಡಿದ್ದಿಲ್ಲ. ಆಗ ಅವಳಿಗೆ ಅವಮಾನವಾದಂತೆ ಅನಿಸಿತು. ಹಿಂಟಾಕದ

ಹಾಗೂ ಪ್ರಪಂಚದ ಹೆಂಗಸರಲ್ಲಿ ಮಾರ್ಟಿ ಒಬ್ಬಳೆ ವಿಂಟರಬೋರ್ನನ ಪತಾಳಿಯಲ್ಲಿ ಪ್ರಕೃತಿಯೊಂದಿಗೆ ಬೌದ್ಧಿಕ ಸಮಾಗಮದಲ್ಲಿ ಆದಷ್ಟು ಸಾಮೀಪ್ಯವನ್ನು ಸಾಧಿಸಿದ್ದಳು. ಆ ಮಟ್ಟಿಗೆ ಅವಳೊಬ್ಬಳೆ ಅವನಿಗೆ ವಿರುದ್ಧಲಿಂಗಿಯ ಧರ್ಮದಲ್ಲಿ ನಿಜವಾದ ಪೂರಕ ವಾಗಿದ್ದಳು. ಅವನ ವಿಚಾರಗಳಿಗೆ ಅವಳ ವಿಚಾರಗಳು ಉಪಸಿದ್ಧಾಂತದಂತೆ ಹೊಂದಿಕೆ ಆಗುತ್ತಿದ್ದವು.

ಹಿಂಟಾಕ ಬೆಟ್ಟಗಳಿಂದ ಈ ಸೊನೆಸೊಪ್ಪುಗಳ ಅದ್ಭುತ ಲೋಕವು ಸಾಮಾನ್ಯ ಜನಕ್ಕೆ ಇಣಕುನೋಟವಾಗಿದ್ದರೂ, ಜೈಲ್ಸ ಮತ್ತು ಮಾರ್ಟಿಗೆ ನಿಚ್ಚಳವಾದ ನೋಟ ವಾಗಿತ್ತು. ಅದರ ಸೂಕ್ಷ್ಮತರ ರಹಸ್ಯಗಳೆಲ್ಲ ಅವರಿಗೆ ಸಾಮಾನ್ಯ ಕೈಬರಹದಂತೆ ಓದಬಲ್ಲವರಾಗಿದ್ದರು. ಇರುಳು, ಚಳಿ, ಗಾಳಿ, ಬಿರುಮಳೆಗಳ ನೋಟ ಮತ್ತು ಸದ್ದು, ಅದೂ ಆ ರೆಂಬೆಕೊಂಬೆಗಳ ದಟ್ಟಣೆಯಲ್ಲಿ ಗ್ರೇಸಳಿಗೆ ವಿಚಿತ್ರ ಗೂಢ, ಕೆಲಸಲ ಅದ್ಭುತ ಅಲೌಕಿಕವೆಂಬಂತೆ ಭಾಸವಾಗುತ್ತಿದ್ದವು. ಆದರೆ ಅವರಿಬ್ಬರಿಗೆ ಇವೆಲ್ಲವೂ ತೀರ ಸಾದಾ ಘಟನೆಗಳು. ಅವುಗಳ ಹುಟ್ಟು ಗುಟ್ಟು ನಡೆನೇಮಗಳೆಲ್ಲವನ್ನೂ ಅವರು ಬಲ್ಲರು. ಅವರಿಬ್ಬರೂ ಕೂಡಿಯೇ ಸಸಿ ನೆಟ್ಟಿದ್ದರು ; ಕೂಡಿಯೇ ಮರ ಕಡಿದಿದ್ದರು ; ಕೂಡಿಯೆ ವರ್ಷಗಳುರುಳಿದಂತೆ ವನ್ಯನಿಗೂಢತೆಯ ದೂರದ ಚಿಹ್ನೆಗಳನ್ನೂ ಪ್ರತೀಕ ಗಳನ್ನೂ ಮನೋಮಯವಾಗಿಯೇ ಸಂಗ್ರಹಿಸಿಕೊಂಡಿದ್ದರು ; ಮತ್ತು ಅವನ್ನೆಲ್ಲ ಒಂದು ವರ್ಣಮಾಲೆಯಾಗಿ ರೂಪಿಸಿಕೊಂಡಿದ್ದರು. ಕತ್ತಲೆಯಲ್ಲಿ ಹಾದುಹೋಗುವಾಗ ಅವರ ಮೋರೆಗೆ ಒರೆಸಿಹೋಗುವ ಟಿಸಿಲುಗಳ ಹಗುರಾದ ಬಡಿತದಿಂದ ಅವರಿಬ್ಬರಲ್ಲಿ ಯಾರೂ, ಆ ಮರದ ಜಾತಿ ಅದು ಚಾಚಿದ ದಿಕ್ಕುಗಳನ್ನೂ ಟೊಂಗೆಯೊಳಗಿನ ಗಾಳಿಯ ಮರ್ಮರ ದಿಂದ ದೂರದ ಅವುಗಳ ನಿಟ್ಟು ನಡೆಗಳನ್ನು ಹೇಳಬಲ್ಲವರಾಗಿದ್ದರು. ಒಂದು ದೃಷ್ಟಿ ಪಾತದಿಂದ ಒಂದು ಮರದ ಕಾಂಡದ ಕೆಚ್ಚು ಚೆನ್ನಾಗಿದೆಯೋ, ಕೊಳೆ ತಿನ್ನಲು ಸುರುವಾಗಿದೆಯೋ ಎಂಬುದನ್ನು ಅವರು ತಿಳಿಯುತ್ತಿದ್ದರು. ಅದರ ಬೇರುಗಳು ಮುಟ್ಟಿದ ಆಳದ ಸ್ತರಗಳನ್ನು ಅವರು ಅರಿತುಕೊಳ್ಳುತ್ತಿದ್ದರು. ಈ ಋತುಪರಿವರ್ತ ನೆಯ ಯುಕ್ತಿ ಪ್ರಯುಕ್ತಿಗಳನ್ನು ಅವರು ಜಾದೂಗಾರನ ಸ್ವಂತ ದೃಷ್ಟಿಯಿಂದ ನೋಡು ತ್ತಿದ್ದರು. ಅಲ್ಲದೆ ಪ್ರೇಕ್ಷಕರ ದೃಷ್ಟಿಯಿಂದಲ್ಲ.

'ಆತ ನಿನ್ನನ್ನು ಮದುವೆಯಾಗಬೇಕಿತ್ತು, ಮಾರ್ಟಿ, ಹೊರತು ಜಗತ್ತಿನಲ್ಲಿ ಬೇರೆ ಯಾರನ್ನೂ ಅಲ್ಲ', ಗ್ರೇಸಳು ಮನವರಿಕೆಯ ನಿರ್ಧಾರದಲ್ಲಿ ನುಡಿದಳು — ಮೇಲೆ ಬಣ್ಣಿಸಿದ ರೀತಿಯಲ್ಲಿಯೇ ಕೆಲಹೊತ್ತು ವಿಚಾರ ಮಾಡಿ.

ಮಾರ್ಟಿ ತಲೆ ಅಲ್ಲಾಡಿಸಿದಳು. 'ಅಮ್ಮಾ ನಮ್ಮ ಎಲ್ಲ ಒಟ್ಟಿಗಿನ ಬಯಲು ಗೆಲಸಗಳ ದಿನಗಳಲ್ಲಿ ವರ್ಷಗಳಲ್ಲಿ,' ಆಕೆ ಅಂದಳು. 'ಆತ ನನ್ನೊಂದಿಗೆ ಮಾತಾಡದೆ ಇದ್ದ ಒಂದೇ ವಿಷಯವೆಂದರೆ ಪ್ರೇಮ ; ನಾನೂ ಅವನೊಂದಿಗೆ ಹಾಗೆಯೇ — ಮಾತಾಡಲಿಲ್ಲ'.

'ಆದಾಗ್ಯೂ ನೀನೂ ಮತ್ತು ಅವನು ಇನ್ನಾರೂ ಅರಿಯಲಾರದ ಭಾಷೆಯಲ್ಲಿ

ಮಾತಾಡಬಲ್ಲವರಾಗಿದ್ದಿರಿ — ನನ್ನ ತಂದೆಯೂ ಅದನ್ನು ಅರಿಯಲಾರ — ಅಂಥ ಅರಿವಿಗೆ ಆತ ತೀರ ಹತ್ತಿರ. ಆದರೂ ಅದು ಮರಗಳ ಹಣ್ಣು ಹೂವುಗಳ ಭಾಷೆ'.

ಈ ಬಗೆಯ ಶೋಕಮಯ ಕಲ್ಪನಾವಿಲಾಸದಲ್ಲಿ ಅವಳು ಮಾರ್ಟಿಯೊಂದಿಗೆ ಆಡುತ್ತಿದ್ದಳು. ಆದರೆ ಅವಳ ಶೋಕದ ಕಠಿಣಕಂದವು ಉಳಿದುಬಿಟ್ಟಿತ್ತು. ಮಾರ್ಟಿಯ ಶೋಕಕ್ಕೆ ಈ ಕಂದವಿದ್ದಿಲ್ಲ. ಜೈಲ್ಸನ ಸಾವು ಅವನು ಬಯಲಿಗೆ ಗಾಳಿಗೆ ಬಿದ್ದುದರಿಂದಲೇ ಪೂರ್ತಿ ಒದಗಿಬಂದಿತ್ತು — ಎಂದು ಅವಳಿಗೆ ಮನವರಿಕೆಯಾಗಿದ್ದರೆ ಅದು ಅವಳನ್ನು ಪೂರ್ಣ ಹುಚ್ಚಿಗೇ ಅಟ್ಟಬಹುದಿತ್ತು. ಆದರೆ ಅವನ ಆ ಬಯಲ ಗೇಡು ಮೊದಲೇ ಅನಿವಾರ್ಯವಾದ ಗತಿಯನ್ನೇ ತ್ವರಿತಗೊಳಿಸಿರಬಹುದೆಂಬುದೂ ಸಾಧ್ಯವಿತ್ತು ; ಅದು ಹಾಗೆ ಆಗಿದ್ದಿಲ್ಲವೆಂದು ನಂಬಲು ಆಕೆ ಹಾರೈಸುತ್ತಿದ್ದಳು.

ಈ ಪರಿಸ್ಥಿತಿಯಲ್ಲಿ ಅವಳು ನಂಬಬಹುದಾದ ಅಭಿಪ್ರಾಯವುಳ್ಳ ವ್ಯಕ್ತಿ ಒಬ್ಬನೆ ಇದ್ದನು. ಅವಳ ಗಂಡನೆ ಆ ವ್ಯಕ್ತಿ. ಆದರೆ ಅದನ್ನು ಅವನಿಗೆ ಕೇಳುವದೆಂದರೆ, ತನ್ನ ಪಲಾಯನದ ನಂತರ ತಾನೂ ಮತ್ತು ವಿಂಟರಬೋರ್ನ ಕೂಡಿ ಬಾಳಿದ ಮೂರು ನಾಲ್ಕು ಕುತ್ತಿನ ದಿನಗಳ ಸತ್ಯಸ್ಥಿತಿಗತಿಗಳನ್ನು ಅವನಿಗೆ ತಿಳಿಸುವದು ಅಗತ್ಯವಿತ್ತು. ಆ ಕುರಿತು ಅವಳು ಮೂಲದಲ್ಲಿ ಪ್ರಕಟಿಸಿದ ಪ್ರತಿಭಟನೆಯ ವೃತ್ತಿಯನ್ನು ಹಿಂದೆಗೆದು ಕೊಳ್ಳುವುದರಲ್ಲಿ ಅವಳಿಗೆ ಒಂದು ಬಗೆಯ ದೌರ್ಬಲ್ಯ ಕಂಡಿತು. ಅದನ್ನು ಅವಳು ಕಾಣಿಸಲು ಮನಸ್ಸುಮಾಡಲಿಲ್ಲ. ಅಂದಿನ ವಸ್ತುಸ್ಥಿತಿಯ ಬಗೆಗೆ ನಿಚ್ಚಳ ನಿವೇದನೆ ಮಾಡಿಕೊಂಡರೆ ಫಿಟ್ಜಪಿಯರ್ಸ ಅದನ್ನೂ ತನ್ನನ್ನೂ ನಂಬುವನೆಂಬ ಬಗೆಗೆ ಅವಳಿಗೆ ಏನೂ ಅನುಮಾನವಿದ್ದಿಲ್ಲ. ಆದರೆ ಈ ತಿದ್ದುಪಡಿಯ ಕುರಿತು ಸ್ವೇಚ್ಛೆಯಿಂದ ಮುಂದೆ ಬಂದರೆ ಅದು ತಿರುಗಿ ಒಡಂಬಡಿಕೆಗೆ ಕೈಸನ್ನೆ ಮಾಡಿ ಕರೆದಂತೆ ; ಮತ್ತು ಸದ್ಯದ ಅವಳ ಮನಃಸ್ಥಿತಿಯಲ್ಲಿ ಅದನ್ನು ಮಾಡುವದು ಅವಶ್ಯವೆಂದು ಆಕೆ ಭಾವಿಸಲಿಲ್ಲ.

ಫಿಟ್ಜಪಿಯರ್ಸನ ಬಗೆಗೆ ಒಂದು ವಿಧಾನವನ್ನು ಮಾಡಿದರೆ ಅಷ್ಟೊಂದು ಸೋಜಿಗವೆನಿಸಲಿಕ್ಕಿಲ್ಲ. ಅದೇನೆಂದರೆ, ಅವನ ಬಗೆಗೆ ಈ ಹಿಂದೆ ಹೇಳಿದ್ದೆಲ್ಲವನ್ನು ಒಪ್ಪಿಕೊಂಡೂ, ಗ್ರೇಸಳ ಪಾತಿವ್ರತ್ಯವು ಏಕನಿಷ್ಠನಾಗಿ ಮಾಡಿ ಇದಲಾರದ ಈ ಮನುಷ್ಯನು ಅವಳು ಅದಕ್ಕೆ ವಿಪರೀತವಾದುದನ್ನೆ ಶಪಥತೊಟ್ಟು ಒಪ್ಪಿಕೊಂಡಾಗ, ಅವಳ ಕುರಿತು ಭಾವಾವೇಶ ತುಂಬಿ ಆಸಕ್ತಿ ಉಕ್ಕಿಬರುವಷ್ಟು ಉತ್ತೇಜಿತನಾದನು. ಅವಳು ಇಂಥ ಒಂದು ಪ್ರತೀಕಾರಕ್ಕೆ ಶಕ್ತಳಾಗಿದ್ದರೆ, ಅವಳು ಎಷ್ಟು ಭಯಂಕರಳೆಂಬುದನ್ನು ತಾನು ಪೂರ್ತಿ ತಿಳಿದಿರಲಿಲ್ಲವೆಂದು ಆತ ತನ್ನಷ್ಟಕ್ಕೆ ತಾನೇ ಅಂದುಕೊಳ್ಳ ಹತ್ತಿದನು ; ಮತ್ತು ವಸ್ತುಸ್ಥಿತಿಯನ್ನು ಒಪ್ಪಿಕೊಳ್ಳುವುದು ಬೇಸರದ್ದಾದರೂ ಅವನ ಸ್ವಂತದ ಅವಮಾನ ಮತ್ತು ಅನುತಾಪಗಳೇ ಅವನಲ್ಲಿ ಅವಳ ಕುರಿತು ಪ್ರಶಂಸೆಯ ಕಾವು ಕಿಡಿಯಾಗಿ ಹೊತ್ತುವಂತೆ ಮಾಡಿತು.

ಅವನು ಒಂದೆರಡು ತಿಂಗಳು ನಡುನಾಡಿನ ಒಂದು ಪಟ್ಟಣದಲ್ಲಿ ನರಗುಂದಿದ

ದುಃಖದಲ್ಲಿ ಹೇಗೋ ಕಳೆದನು. ಅವನ ದುಃಖ ಗ್ರೇಸಳದಷ್ಟೇ ಆಗಿತ್ತು; ಅವನು ಎಷ್ಟೇ ಮಟ್ಟಿಗೆ ಅವಳಿಗೆ ಕೇಡು ಬಗೆದಿದ್ದರೂ, ಅವಳು ತನಗೇ ಗೊತ್ತಾಗದಂತೆ, ಅಂಥ ಒಂದು ಜೀವಂತ ಪ್ರಾಣಿಗೆ ಕೊಡಬಹುದಾದ ಹಿಂಸೆಯುಷ್ಟೇ ಆಗಿತ್ತು. ಆಮೇಲೆ ಒಮ್ಮೆಲೆ ಅವನಲ್ಲಿ ಒಂದು ಕರೆ ಮೂಡಿಬಂದಿತು; ಅವಳು ಅಂದು ಆಗ್ರಹದಿಂದ ಒಪ್ಪಿಕೊಂಡದ್ದೆಲ್ಲ ನಿಜವೇ? ಎಂದು ಆತ ಅನುಮಾನಕ್ಕೆ ಬಿದ್ದನು. ಅದು, ಒಬ್ಬ ಮುಗ್ಧ ನಿಷ್ಪಾಪ ಹೆಣ್ಣಿನ ತಾತ್ಕಾಲಿಕ ಕೆರಳಿಕೆಯು ಕೈಗೆ ಬುದ್ಧಿಕೊಟ್ಟು ಮಾಡಿದ ಕೃತ್ಯ ವಿರಲಾರದೆ? ಅಂಥ ಒಂದು ಹೇಳಿಕೆಯಿಂದ ಆಗಬಹುದಾದ ಬಿಕ್ಕಟ್ಟಿನ ಬಗೆಗೆ ಆ ಕೆರಳಿಕೆ ಆ ಕ್ಷಣಕ್ಕೆ, ಅವಳನ್ನು ಕುರುಡಳನ್ನಾಗಿ ಮಾಡಿರಬಹುದು. ಗಂಡಾಂತರಕಾರಿಯಾದ ಮಾತಿನಸರಣಿಯಲ್ಲಿ ದುಡುಕುವ ಹೆಂಗಸರಿಗೆ ಅದರ ಪೂರ್ಣ ಬಲುಮೆಯನ್ನು ಊಹಿಸುವ ಕಲ್ಪನಾಶಕ್ತಿಯು ಕೊರತೆ ಇರುವುದುಂಟು. ಇದರ ಹಲವು ಉದಾಹರಣೆ ಗಳನ್ನು ಆತ ಬಲ್ಲ. ಅವನ ವಿಶಾಲವಾದ ಲೈಂಗಿಕ ಅನುಭವ ಇದನ್ನು ಅವನಿಗೆ ಬೋಧಿಸಿತ್ತು. ಈ ಬೋಧದ ಬೆಳಕಿನಲ್ಲಿ ಆತ ಕಂಡುಕೊಂಡಿದ್ದೇನೆಂದರೆ, ಗ್ರೇಸಳ ಆ ದಿಟ್ಟ ಹೇಳಿಕೆಗಳು, ಪತಿದ್ರೋಹದ ವಾಸ್ತವತೆಯು ಕುರಿತು ಹಸುಗೂಸಿನಂತೆ ಇದ್ದ ಒಬ್ಬಳ ಹತಾಶೆಯು ತಾಳ್ಮೆಗೇಡಿಗೆ ಮಾತ್ರ ದ್ಯೋತಕವಾಗಿದ್ದವು.

ಈ ಮನೋಯಾತನೆ ಮತ್ತು ಅಧೀರ ಅನಿಶ್ಚಿತತೆಯು ಫಿಟ್ಜ್‌ಪಿಯರ್ಸನನ್ನು ಕಿರಿಯ ಹಿಂಟಾಕಿನ ನೆರೆಹೊರೆಗೆ ಖಿನ್ನನಾಗಿ ಪಯಣ ಬೆಳೆಸುವಂತೆ ಮಾಡಿತು; ಮತ್ತು ಅಲ್ಲಿ ಅವನು ತನ್ನ ಜೀವನದಲ್ಲಿಯೆ ಒಮ್ಮೆ ಹಿಂದೆ ಪಡೆದ ಅತಿಪರಿಶುದ್ಧ ಮತ್ತು ಪವಿತ್ರ ಭಾವನಾಮಯ ಅನುಭವಗಳ ಸನ್ನಿವೇಶದ ಸುತ್ತಲು ಗಂಟೆಗಟ್ಟಲೆ ಸುಳಿದಾಡುವಂತೆ ಮಾಡಿತು. ಮೆಲಬರಿಯ ಮನೆಯ ಸುತ್ತಲಿನ ಕಾನುಗಳಲ್ಲಿ ಆತ ಸುತ್ತಾಡಿದನು — ಅಪರಾಧಿಯಂತೆ, ಯಾರ ಕಣ್ಣಿಗೂ ಬೀಳದಂತೆ ತಪ್ಪಿಸಿಕೊಂಡು. ಅದೊಂದು ಸೊಗ ಸಾದ ಸಂಜೆಯಾಗಿತ್ತು. ಆತ ಮನೆಯ ಕಡೆಗೆ ಹೊರಟಾಗ ಮಾರ್ಟಿಸೌದಳ ಗುಡಿಸಲಿನ ಹತ್ತಿರ ಹಾದುಹೋದನು. ವಾಡಿಕೆಯಂತೆ ಕಿಟಕಿಯ ಕದಗಳನ್ನು ಮುಚ್ಚದೆ ಒಳಗೆ ಮೇಣಬತ್ತಿಯನ್ನು ಹಚ್ಚಿದ್ದಳು; ಹಿಂದೆ ಹಲವು ಸಲ ಹೇಗೋ ಹಾಗೆಯೆ ಇಂದೂ ಅವನು ಅವಳನ್ನು ಒಳಗಡೆಗೆ ನೋಡಿದನು.

ಅವಳು ತನ್ನ ಕೆಲಸದ ಉಪಕರಣಗಳನ್ನು ಸ್ವಚ್ಛಮಾಡುತ್ತಿದ್ದಳು. ತಾನು ಕಾಣಿಸಿಕೊಳ್ಳಕೂಡದೆಂದು ಆತ ಮಾಡಿಕೊಂಡಿದ್ದರೂ, ಅರೆತೆರೆದ ಬಾಗಿಲಿನೊಳಗಿಂದ ಅವಳೊಂದಿಗೆ ಆತ ಮಾತಾಡದೆ ಇರದಾದನು. 'ಅದೇನು ಮಾಡುತ್ತಿರುವಿ ಮಾರ್ಟಿ?'

'ಏಕೆಂದರೆ, ಸ್ವಚ್ಛವಾಗಿ ಇಡಲಿಕ್ಕೆ, ಅವು ನನ್ನವಲ್ಲ'. ಅವನಿಗೆ ಕಾಣುವಂತೆ ಇತ್ತು; ಅವು ಅವಳ ಉಪಕರಣಗಳಲ್ಲ. ಏಕೆಂದರೆ ಅವುಗಳಲ್ಲಿ ಒಂದು ಗುದ್ದಲಿ, ದೊಡ್ಡದು, ಬಹಳ ಭಾರವಾದದ್ದು; ಇನ್ನೊಂದು ಕುಡುಗೋಲು. ಆಕೆ ಅದನ್ನು ಎರಡೂ ಕೈಗಳಿಂದ ಬಳಸಬೇಕು. ಅಷ್ಟು ಭಾರಿ ಆ ಗುದ್ದಲಿ ಹೊಸತಲ್ಲದಿದ್ದರೂ ಆಕೆ ಅದನ್ನು ಚೊಕ್ಕ ಉಜ್ಜಿದ್ದಳು; ಅದು ಬೆಳ್ಳಿಯಂತೆ ಥಳಥಳಿಸುತ್ತಿತ್ತು.

ಫಿಟ್ಜ್‌ಪಿಯರ್ಸ್ ಹೇಗೋ ಊಹಿಸಿದನು — ಅವು ಜೈಲ್ಸ್ ವಿಂಟರಬೋರ್ನನ ಉಪಕರಣಗಳೆಂದು ; ಮತ್ತು ಅವಳಿಗೆ ಆ ಕುರಿತು ಪ್ರಶ್ನೆ ಹಾಕಿದನು. ಅವಳು ಹೌದೆಂದು ಒಪ್ಪಿದಳು. 'ನಾನು ಇವನ್ನು ಇಟ್ಟುಕೊಳ್ಳುತ್ತೇನೆ', ಆಕೆ ಅಂದಳು, 'ಆದರೆ ನಾನು ಅವನ ಸೇಬಿನಗಾಣ ಮತ್ತು ಯಂತ್ರಗಳನ್ನು ಪಡೆಯಲಾರೆ. ಅವನ್ನು ಮಾರುತ್ತಾರಂತೆ; ಅವನ್ನು ಇಟ್ಟುಕೊಳ್ಳಬೇಕೆಂದು ನನ್ನ ಬಯಕೆ ಆದರೆ —'

'ಹಾಗಾದರೆ ನಾನು ಅವನ್ನು ನಿನಗಾಗಿ ಕೊಂಡುಕೊಳ್ಳುವೆನು,' ಫಿಟ್ಜ್‌ಪಿಯರ್ಸ್ ಅಂದನು. 'ನೀನು ನನಗೆ ಮಾಡಿದ ಉಪಕಾರಕ್ಕೆ ಅದು ನಾನು ಕೊಡುವ ಪ್ರತಿಫಲ'. ಅವನ ದೃಷ್ಟಿ ಆ ಹುಡುಗಿಯ ಅಪರೂಪದ ಬಣ್ಣದ ಹೆಳಲುಗಳ ಮೇಲೆ ಬಿತ್ತು. ಅವಳ ಕೇಶರಾಶಿ ಮತ್ತೆ ಬೆಳೆದಿತ್ತು. 'ಓ ಮಾರ್ಟಿ, ಈ ನಿನ್ನ ಜುಲಪ್ಪಗಳು — ಮತ್ತು ಆ ನಿನ್ನ ಪತ್ರ. ಆದರೂ ಅದನ್ನು ಕಳುಹಿಸಿದ್ದು ನಿನ್ನದೊಂದು ಉಪಕಾರ' ಆತ ಚಿಂತಿಸುತ್ತ ಆಡಿದನು.

ಅನಂತರ ಅವರೀರ್ವರಲ್ಲಿ ವಿಶ್ವಾಸ ಬೆಳೆಯಿತು. ಅಂಥ ವಿಶ್ವಾಸ ಹಿಂದೆಂದಿಗೂ ಅವಳಲ್ಲಿ ಇದ್ದಿಲ್ಲ. ಮಾರ್ಟಿ ಆ ಪತ್ರದ ಕುರಿತು ಅದನ್ನು ಬರೆಯುವ ಅವಳ ಉದ್ದೇಶದ ಕುರಿತು ಮಾತಾಡಲು ನಿಜವಾಗಿಯೂ ನಾಚಿದಳು. ಆದರೆ ಸೇಬಿನಗಾಣ ಕೊಂಡುಕೊಡುವ ಅವನ ಆಶ್ವಾಸನಕ್ಕಾಗಿ ಅವಳು ಒಳ್ಳೆ ಕಳಕಳಿಯಿಂದ ಅವನನ್ನು ಆಭಾರ ಮನ್ನಿಸಿದಳು. ಜೈಲ್ಸ ಮಾಡುತ್ತಿದ್ದಂತೆ ತಾನೂ ಮಾಗಿಯ ಹಂಗಾಮಿನಲ್ಲಿ ಆ ಗಾಣ ಹೊತ್ತುಕೊಂಡು ತಾನೂ ಸಂಚರಿಸುವೆನೆಂದಳು, ಆಕೆ. ಮುದಿ ಕ್ರೀಡ್ಸನನ್ನು ಹಸ್ತಕನಾಗಿ ಸಂಗಡ ತೆಗೆದುಕೊಂಡು ಹಾಗೆ ಅಲೆಯಲು ಅವಳು ಸಾಕಷ್ಟು ಕಸುವುಳ್ಳವಳೇ ಆಗಿದ್ದಳು.

'ಓ ಅವನಿಗೆ ನಿನಗಿಂತ ಹತ್ತಿರದವಳು ಇನ್ನೊಬ್ಬಳಿದ್ದಳು' ಫಿಟ್ಜ್‌ಪಿಯರ್ಸ್ ಅಂದನು, ಗ್ರೇಸಳನ್ನು ಉಲ್ಲೇಖಿಸಿ, 'ಅವನು ಉಳಿದಲ್ಲಿಯೆ ಉಳಿದವಳು, ಅವನು ಸಾಯುವವನಕವೂ ಸಂಗಡ ಇದ್ದವಳು'.

ಆಗ ಮಾರ್ಟಿಗೆ ಅನುಮಾನ ಬಂದಿತು, ಇವನಿಗೆ ಸತ್ಯಸಂಗತಿ ಗೊತ್ತಿಲ್ಲ. ಸಹಜವೇ ಸರಿ. ಅವನೂ ಅವನ ಹೆಂಡತಿಯೂ ಅಗಲಿ ದೂರವಿದ್ದವರು. ಆದ್ದರಿಂದ ಅವಳು ಅವನಿಗೆ ಜೈಲ್ಸನ ಔದಾರ್ಯದ ಕತೆಯನ್ನು ಹೇಳಿದಳು — ಆತ ಗ್ರೇಸಳಿಗೆ ತನ್ನ ಗುಡಿಸಲನ್ನು ಬಿಟ್ಟುಕೊಟ್ಟು, ತಾನು ತನ್ನಬಾಳನ್ನೆ ಬಲಿಕೊಡುವ ಅಪಾಯಕ್ಕೆ ಗುರಿಯಾದದ್ದು. ಸರ್ಜನನು ಅದನ್ನು ಕೇಳಿದೊಡನೆ ಅವನಿಗೆ ಜೈಲ್ಸನ ಸ್ತ್ರೀದಾಕ್ಷಿಣ್ಯದ ವೃತ್ತಿಯ ಬಗೆಗೆ ಹೇಸುವೆನಿಸಿತು. ತಾನು ಭೆಟ್ಟಿಯಾದದ್ದನ್ನು ಗೋಪ್ಯವಾಗಿ ಇಡಬೇಕೆಂದು ತನ್ನ ಇಚ್ಛೆಯನ್ನು ಮಾರ್ಟಿಗೆ ವ್ಯಕ್ತಮಾಡಿದನು. ಮತ್ತೆ ವಿಚಾರಮಗ್ನನಾಗಿ ಮನೆಗೆ ಹೋದನು ; ತನ್ನ ಈ ಹಿಂಟಾಕ ಯಾತ್ರೆ ಒಂದಕ್ಕಿಂತ ಹೆಚ್ಚು ಅರ್ಥದಲ್ಲಿ ವ್ಯರ್ಥವಾಗಲಿಲ್ಲವೆಂದು ಆತ ಭಾವಿಸಿದನು.

ಗ್ರೇಸಳ ಕ್ಷಮೆಯನ್ನು ಗಳಿಸಲು ಆತನು ಏನನ್ನೂ ತೆರಲು ಸಿದ್ಧನಿದ್ದನು. ಆದರೆ

ಆ ಬಗೆಯ ಭವಿಷ್ಯದಲ್ಲಿ ಆತ ಏನೇ ಆಶೆ ಮಾಡುವ ಸಾಹಸಪಟ್ಟರೂ, ಜೈಲ್ಸನ ನೆನಪು ಹಸಿರಾಗಿರುವವನಕ ಇನ್ನೂ ಆತ ಏನೂ ಮಾಡುವಂತೆ ಇದ್ದಿಲ್ಲ. ಪ್ರತೀಕ್ಷೆ ಮಾಡುವದು ಅನಿವಾರ್ಯವಾಗಿತ್ತು. ಸ್ವಲ್ಪ ಕಾಲಾವಧಿಯು ಅವಳ ಮನಸ್ಸನ್ನು ಕರಗಿಸಬಹುದು, ಮತ್ತು ಅವನ ಕಡೆಗೆ ಪ್ರೇಮದಿಂದ ಅಲ್ಲದಿದ್ದರೂ, ಸಹನೆಯಿಂದ ನೋಡುವಂತೆ ಅವಳನ್ನು ಒಲಿಸಬಹುದು.

೪೫

ವಿಂಟರಬೋರ್ನನ ಶೋಕದಲ್ಲಿ ಸೂತಕವಾಚರಿಸುವುದರಲ್ಲಿ ವಾರ, ತಿಂಗಳು ಕಳೆದವು. ಗ್ರೇಸ ಮತ್ತು ಮಾರ್ಟಿ ತಮ್ಮನ್ನು ಮೀಸಲಾಗಿಟ್ಟು ನಡೆಯಿಸಿದ ಚಿತ್ರಕ್ಕೆ ಶಾಂತಿ ತರುವ ಏಕರೂಪವಾದ ಆ ಸ್ಮಾರಕ ವಿಧಿಯಲ್ಲಿ ವಾರಕ್ಕೆ ಎರಡು ಸಲ ಇಬ್ಬರೂ ಸಂಜೆಯ ಮಬ್ಬಿನಲ್ಲಿ ಹಿಂಟಾಕದ ಚರ್ಚಿನ ಹೊರಾಂಗಣಕ್ಕೆ ಹೋಗಿ ಸಿಂಬಲಿನ್ ನಾಟಕ ದಲ್ಲಿಯ ಶೋಕಿಸುವ ಯುಗ್ಮದಂತೆ ಅವನ ಖಿನ್ನ ಗೋರಿಯನ್ನು ತಮ್ಮ ಹೂಗಳಿಂದಲೂ ಕಂಬನಿಗಳಿಂದಲೂ ಸವಿಗೊಳಿಸುತ್ತಿದ್ದರು.

ವ್ಯಕ್ತಿಯ ಅಪ್ಪಟ ಬೆಲೆಯು, ಉತ್ತಮ ಚಾರಿತ್ರ್ಯದ ಇದಿರು ಅವನ ಸಂಸ್ಕೃತಿ ಮತ್ತು ಇತರ ಸಿದ್ಧಿಪ್ರಾವೀಣ್ಯಗಳ ತೂಕ ಅದೆಷ್ಟು ಕಡಿಮೆ ಎಂಬುದು, ಅವನ ಮರಣ ದಿಂದ ಈಗ ಗ್ರೇಸಳು ಅತ್ಯಂತ ಪ್ರಭಾವಿಯಾಗಿ ಮನಗಾಣುವಂತೆ ಆಯಿತು. ಮಾಗಿ ಮತ್ತು ಚಳಿಗಾಲಗಳು ಸೇರಿದಂತೆ ಅವನ ಕುರಿತ ಅವಳ ಶೋಕದ ಭಾರ ಮೃದುವಾದರೂ ಅದರ ಕಾರಣದಲ್ಲಿ ತನ್ನ ಕೈಯೂ ಇರಬಹುದೆಂಬುದರ ಆತ್ಮನಿಂದೆಯು ಸ್ವಲ್ಪವೂ ಶಮನ ಹೊಂದಲಿಲ್ಲ.

ಚಳಿಗಾಲದ ಈ ಎಲೆ ಉದುರಿ ಕೊಳೆಯ ಹತ್ತುವ ಹಂಗಾಮಿನಲ್ಲಿ ಹಿಂಟಾಕಿನಲ್ಲಿ ಏನೂ ಘಟಿಸಲಿಲ್ಲ. ಅದೇ ಸುಮಾರಿಗೆ ಪರದೇಶದಲ್ಲಿ ಘಟಿಸಿದ ಶ್ರೀಮತಿ ಚಾರ್ಮಂಡಳ ನಿಧನ ಕುರಿತ ಚರ್ಚೆಗೆ ಭರತ ಇಳಿತಗಳೂ ಬಂದು ಹೋದವು. ಅವಳ ಸಾವು ಹೊಡೆದ ಗುಂಡಿಗಿಂತ ಹೆಚ್ಚಾಗಿ ಆ ವೇಳೆಗೆ ಬಡಿದ ಭಯದಿಂದ ಅವಳ ಮೈಯಲ್ಲಿ ಆದ ಕೆಟ್ಟ ಪರಿಣಾಮದಿಂದಲೇ ಉಂಟಾಯಿತೆಂದೂ ಒಂದು ವದಂತಿ ಹಬ್ಬಿತು. ಆದರೆ ಇದರ ಸತ್ಯಾಂಶ ನಿಷ್ಕರ್ಷವಾಗದೇ ಹೋಯಿತು. ಸಾವಿನ ಬಗೆಗೆ ಅನಂತರ ನಡೆದ ತನಿಖೆಗಳಿಂದ ಫಿಟ್ಜಪಿಯರ್ಸ ಪಾರಾಗಿದ್ದನು. ತನ್ನ ಪ್ರೇಯಸಿಯಿಂದ ಸ್ವಲ್ಪ ಮುಂಚೆ ಅಗಲಿದ ಯೋಗಾಯೋಗದ ಮೂಲಕ ಈ ಯೋಗಾಯೋಗವು ಘಟಿಸಿದ್ದು ಮಾರ್ಟಿ

ಸೌದಳ ಪತ್ರದ ಪ್ರಭಾವದಿಂದ. ನಿಸರ್ಗದಲ್ಲಿ ನಿಗೂಢವಾದ ಒಂದು ನಿಮಿತ್ತಕ್ಕೆ ಅದೊಂದು ಕ್ಷುದ್ರ ಉಪಕರಣವಾಗಿತ್ತು.

ಅವಳ ಶವವನ್ನು ಮನೆಗೆ ತಂದಿರಲಿಲ್ಲ. ಅವಳಿಗೆ ಇಂಗ್ಲೆಂಡದಲ್ಲಿ ಸಮಾಧಿ ಸಿಗಲಿಲ್ಲವೆಂಬುದು ಆ ವಿಕಾರವಶ ಹೆಣ್ಣಿನ ಬಾಳಿನ ಚಂಚಲ ಜ್ವರಕ್ಕೆ ಒಂದು ರೀತಿ ಸರಿಯಾಗಿಯೇ ಹೊಂದಿಕೊಂಡಿತು. ಹಿಂಟಾಕಿನ ಆ ಆಸ್ತಿಯಲ್ಲಿ ಅವಳದು ಬರೇ ಜೀವ ಮಾನದ ಭೋಗವಟೆಯ ಹಕ್ಕಾಗಿತ್ತು. ಅದು ಅವಳ ಮರಣದ ನಂತರ ಅವಳ ಗಂಡನ ಆಪ್ತನೊಬ್ಬನಿಗೆ ಹೋಯಿತು. ಅವನಿಗೆ ಫೆಲಿಸಳ ಪರಿಚಯವೇ ಇದ್ದಿಲ್ಲ. ಅಲ್ಲದೆ, ಗೊತ್ತಿದ್ದ ಮಟ್ಟಿಗೆ ಅವಳ ಯಾವ ಹೆಜ್ಜೆ ಗುರುತನ್ನೂ ಅಳಿಸಿಬಿಡುವುದೇ ಅವನ ಉದ್ದೇಶವಿದ್ದಂತೆ ಅನಿಸಿತು.

ಫೆಬ್ರುವರಿಯಲ್ಲಿ ಒಂದು ದಿನ. ಅದು ಸಂತವೆಲಂಟಾಯಿನ್ ಹಬ್ಬದ ದಿನ. ಗ್ರೇಸಳಿಗೆ ಒಂದು ಪತ್ರವು ಬಂದು ಮುಟ್ಟಿತು. (ಸಂತವೆಲಂಟಾಯಿನ್ ದಿನವೆಂದರೆ ಕ್ರೈಸ್ತರಲ್ಲಿ ಪ್ರೇಮಪತ್ರವನ್ನು, ನಲ್ಲ-ನಲ್ಲೆಯರನ್ನು ಆಯ್ದುಕೊಳ್ಳುವ ಪರ್ವಣಿ. ಪ್ರೇಮಪತ್ರಕ್ಕೆ ವೆಲಿಂಟಾಯಿನ್ ಎಂಬ ಹೆಸರು ಅದರಿಂದ ರೂಢವಾಗಿದೆ.) ಆ ಪತ್ರ ಅದೇ ದಿನ ಅವಳಿಗೆ ಮುಟ್ಟಬೇಕೆಂದು ಬಹುಕಾಲ ಹಿಂದಿನಿಂದಲೇ ಅದನ್ನು ಬರೆದ ಮನಸ್ಸು ನಿರ್ಧರಿಸಿತ್ತು.

ಅದು ಫಿಟ್ಝಪಿಯರ್ಸನ ಪತ್ರವಿತ್ತು. ಅವಳ ಗಂಡನು ಬರೆದಿದ್ದನು—ಅವನು ಎಲ್ಲಿಯೋ ಒಳನಾಡಿನ ಒಂದು ಪಟ್ಟಣದಲ್ಲಿ ನೆಲೆಸಿದ್ದನು. ಅಲ್ಲಿಯ ಸ್ಥಾನಿಕ ಡಾಕ್ಟರದ ಅಸಿಸ್ಟೆಂಟನೆಂದು ಹಂಗಾಮಿ ಚಾಕರಿಯನ್ನು ಆತ ಹಿಡಿದಿದ್ದನು. ಆ ಮದ್ದುಗಾರನ ಪದ್ಧತಿಯೆಲ್ಲ ತಪ್ಪಿತ್ತು. ಆದರೆ ಅದರ ಚಿಕಿತ್ಸೆ ಮಾಡಿ ಅದನ್ನು ಸರಿಪಡಿಸುವ ಸಾಹಸ ಅವನದಲ್ಲ. ಆ ಸ್ನಿಗ್ಧ ಸಂಪ್ರದಾಯದ ಹಬ್ಬದ ದಿನ ಆತ ಅವಳೊಂದಿಗೆ ಸಂಪರ್ಕ ಸ್ಥಾಪಿಸುವದು ಸಮರ್ಪಕವೆಂದು ತಿಳಿದು ಪ್ರಶ್ನಿಸಿದ್ದನು—ಬೇರೊಂದು ಕಡೆಯಲ್ಲಿ ತಾನು ಬಲವಾದ ಸ್ಥಿರವಾದ ಪ್ರಾಕ್ಟೀಸು ಹಿಡಿದರೆ (ಅಂಥ ಯೋಜನೆ ಅವನ ಕಣ್ಣ ಇದುರಿಗೆ ಇತ್ತು) ಅವಳು ಆದದ್ದೆಲ್ಲ ಮರೆತು ತನ್ನನ್ನು ತಿರುಗಿ ಸೇರಬಹುದೇ?

ಇಲ್ಲಿಗೆ ಪತ್ರದ ವ್ಯಾವಹಾರಿಕ ಅಂಶವು ಮುಗಿದಿತ್ತು. ಆ ಮುಂದೆ ಆತ ಹೀಗೆ ಬರೆದಿಟ್ಟನು.

"ಪ್ರಿಯ ಗ್ರೇಸ್, ನನ್ನ ಕಳೆದ ಒಂದು ವರ್ಷದ ಅನುಭವವು ನನ್ನ ಬಾಳಿಗೆ ಹತ್ತು ವರ್ಷಗಳನ್ನು ಸೇರಿಸಿದೆ. ತಪ್ಪುಗಾರ ಗಂಡ ಎಂದೂ ಸರಿಯಾಗಿ ಬೆಲೆ ಕಟ್ಟದಂಥ ಅತ್ಯಂತ ಪ್ರಿಯ ಹೆಂಡತಿ ನೀನು. ನಾನು ಹೇಳುವುದಕ್ಕೆಲ್ಲ ನೀನು ತೀರ ಉದಾಸೀನಳಾಗಿರ ಬಹುದು. ಆದರೂ ನನಗೆ ಹೇಳಗೊಡು. ಈ ಕ್ಷಣಕ್ಕೆ ನಿನ್ನನ್ನು ಗೌರವಿಸುವಷ್ಟು ಆದರಿಸು ವಷ್ಟು, ಆರಾಧಿಸುವಷ್ಟು ನಾನು ಈವರೆಗೆ ಬೇರೆ ಯಾವುದೇ ಹೆಣ್ಣನ್ನು—ಆಕೆ ಬದುಕಿ ರಲಿ, ಸತ್ತಿರಲಿ—ಪ್ರೀತಿಸಿದ್ದಿಲ್ಲ. ನಿನ್ನ ಹೃದಯದ ಬಿಂಕದಲ್ಲಿ ತುಂಟತನದಲ್ಲಿ ನೀನು ಹೇಳಿದ ಸಂಗತಿಗಳನ್ನು ನಾನು ಎಂದೂ ನಂಬಲಿಲ್ಲ." (ಈ ಮಾತು ಪೂರ್ತಿ ನಿಜವಿದ್ದಿಲ್ಲ.)

"ಅದನ್ನು ನಾನು ನಂಬಿದ್ದರೂ ಅದು ನಿನ್ನನ್ನು ನನ್ನಿಂದ ದೂರ ದೂಡುತ್ತಿದ್ದಿಲ್ಲ. ನಾನು ನನ್ನ ಪ್ರಾರ್ಥನೆಗಳನ್ನು ಪಠಣಮಾಡುವುದಕ್ಕಿಂತ ಹೆಚ್ಚಾಗಿ ನಿನ್ನ ನಳನಳಿಸುವ ತುಟಿಗಳ ಕನಸನ್ನೇ ಕಾಣುತ್ತಿರುತ್ತೇನೆ ; ನಿನ್ನ ಹಳೆಯ ಪರಿಚಯದ ಬಟ್ಟೆಗಳ ಸಳಪಳ ಸದ್ದೂ ನನ್ನ ಮನಸ್ಸಿನಲ್ಲಿ ಸುಳಿಸುಳಿದು ನನ್ನನ್ನು ಮರುಕಗೊಳಿಸುತ್ತದೆ—ಇದನ್ನು ನಿನಗೆ ನಾನು ಹೇಳುವುದರಲ್ಲಿ ಪ್ರಯೋಜನವೇನಾದರೂ ಇದೆಯೇ ?—ಇಲ್ಲ, ಏನೂ ಇಲ್ಲ. ನೀನು ಒಮ್ಮೆಯಾದರೂ ನನ್ನನ್ನು ಕಾಣುವ ಔದಾರ್ಯವನ್ನು ತೋರಿಸಿದರೆ ಸಾಕು, ಅದು ಹೆಣದಲ್ಲಿ ಹೊಸ ಉಸಿರು ನೀನು ಊದಿದಂತೆ. ಓ ನನ್ನ ಪವಿತ್ರ ಪರಿಶುದ್ಧ ಗ್ರೇಸ್, ಪಾರಿವಾಳದಂತೆ ಮರ್ಯಾದೆಯುಳ್ಳ ಚಾರುಶೀಲೆ, ನಾನು ನಿನ್ನನ್ನು ವಶಪಡಿಸಿಕೊಂಡಿದ್ದಾದರೂ ಹೇಗೆ? ಇಂದು ಪ್ರಣಯಿಗಳ ಪರ್ವ. ಈ ಪರ್ವ ಕಾಲದಲ್ಲಿ ನಿನ್ನ ಮನಸ್ಸಿನಲ್ಲಿ ನಾನು ಉಳಿಯುವಂತೆ, ನೀನು ನನಗೆ ಎಂದಿಗಿಂತ ತುಸು ಹೆಚ್ಚಾಗಿಯೇ ದ್ವೇಷಿಯಾಗಿದ್ದರೂ ಅಡ್ಡಿಯಿಲ್ಲ. ಆದರೆ ನನ್ನ ಕುರಿತು ವಿಚಾರ ಮಾಡದೇ ಉಳಿಯುವುದು ಬೇಡ. ನನ್ನ ಈ ಕಲ್ಪನೆಗಳನ್ನು ನೀನು ವಿಕ್ಷಿಪ್ತಲಹರಿ ಗಳೆಂದು ಭಾವಿಸಿದರೂ ಅಡ್ಡಿಯಿಲ್ಲ ; ಆದರೆ ಸವಿಮುದ್ದೇ, ಕಳೆದುಹೋದ ನಿಧಿಯೇ ನೆನಪಿಟ್ಟುಕೋ—ಪ್ರಕೃತಿಯು ಪ್ರೇಮದಿ ಬಲು ಸೊಗಸು. ಸೊಗಯಿಸುವಲ್ಲಿ ತನ್ನನೆ ಚೆಲ್ಲಿ ಕಳುಹಿಸುವುದು ಅದು. ಇದೆ ನನಸು—ಅಂದಿಲ್ಲವೆ ಶೇಕ್ಸ್‌ಪಿಯರ್ ಹ್ಯಾಮ್ಲೆಟ್ಟಿ ನಲ್ಲಿ? ನಿನ್ನ ಮೇಲೆ ನಾನು ಇನ್ನೂ ಹೆಚ್ಚು ಆಕ್ರಮಣ ಮಾಡುವುದಿಲ್ಲ. ಏನೇ ಇರಲಿ ಒಂದು ಚಿಕ್ಕ ಸಂದರ್ಶನಕ್ಕೆ ಭೆಟ್ಟಿಗೆ ಒಪ್ಪುವೆಯೆಂದು ಒಂದು ಸಾಲು ಬರೆದು ಕಳುಹಿಸಿ ನನ್ನನ್ನು ಸುಖಿಯಾಗಿ ಮಾಡು. ನಿನ್ನನ್ನು ಭೆಟ್ಟಿಯಾಗಿ ಬರೆ ಪರಿಚಿತನಂತೆ ಬೀಳ್ಕೊಡು ವೆನು—ಕೆಲವು ಸ್ಪಷ್ಟೀಕರಣಗಳನ್ನು ಮಾಡಲಿಕ್ಕೆ ನಿನ್ನ ಇದಿರು ನನ್ನ ನಿಲುವೆಯನ್ನು ಹೇಳಿಕೊಳ್ಳಲಿಕ್ಕೆ, ನೀನು ಇದೊಂದು ಅಲ್ಪ ಅವಕಾಶವನ್ನು ಒದಗಿಸಿದರೆ. ನನ್ನನ್ನು ನಂಬು—ನೀನು ಏನೇ ಮಾಡಲಿ ಹೇಗೇ ನೋಡಲಿ ಎಂದೆಂದಿಗೂ ನಿನ್ನ ಪ್ರೇಮಿಕ, ಹಿಂದೊಮ್ಮೆ ನಿನ್ನ ಪತಿ.

— ಇ. ಎಫ್.

ವಿಚಿತ್ರವೆಂದರೆ ಗ್ರೇಸಳಿಗೆ ಅವನಿಂದ ಪ್ರಣಯ ಪತ್ರ ಒಂದು ಬಂದದ್ದು ಇದೇ ಮೊದಲು. ಬಹುಶಃ ಮೊದಲು ಹಿಂದೆ ಅವನ ಪ್ರಣಯಾರಾಧನೆ ನಡೆದ ಸಂದರ್ಭಗಳಲ್ಲಿ ಪತ್ರಲೇಖನದ ಅವಶ್ಯಕತೆಯೇ ಇದ್ದಿಲ್ಲ. ಆದ್ದರಿಂದ ಇದರ ಓದು ಅವಳಿಗೆ ತುಂಬ ನಾವೀನ್ಯದ ರುಚಿಯನ್ನು ಕೊಟ್ಟಿತು. ಅವಳಿಗೆ ಅನಿಸಿತು, ಒಟ್ಟಾರೆ ಈತ ಪ್ರೇಮ ಪತ್ರಗಳನ್ನು ಒಳ್ಳೆ ಚೆನ್ನಾಗಿಯೇ ಬರೆಯಬಲ್ಲ. ಆದರೆ ವಿಚಾರಶೀಲವಾದ ಗ್ರೇಸಳಿಗೆ ಈ ಪತ್ರದಲ್ಲಿಯ ಬೌದ್ಧಿಕ ಆಸಕ್ತಿ ಇದ್ದುದು ಅವನು ಪ್ರಸ್ತಾಪಿಸಿದ ಭೆಟ್ಟಿಯ ಅವಕಾಶ ದಲ್ಲಿ. ಈ ಭೆಟ್ಟಿಯು ವಿಂಟರಬೋರ್ನನ ಮರಣದಲ್ಲಿ ತನ್ನ ನಿಜವಾದ ಪ್ರತ್ಯಕ್ಷ ಪಾಲುಗಾರಿಕೆ ಎಷ್ಟು ಎಂಬುದರ ಬಗೆಗೆ ಅವಳ ಸಂದೇಹಗಳನ್ನು ಸಂತೈಸಿಕೊಳ್ಳಲಿಕ್ಕೆ

ಒಂದು ಸಂಧಿಯನ್ನು ಒದಗಿಸುತ್ತಿತ್ತು. ಒಬ್ಬ ತಜ್ಞ ಮನಸ್ಸನ್ನು, ಜೈಲ್ಸನಿಗೆ ಈ ಸಮಯ ಕಂಡ ಒಬ್ಬನೇ ವ್ಯಾವಸಾಯಿಕ ಮನುಷ್ಯನನ್ನು ಸಂದರ್ಶಿಸಿ ಸಲಹೆ ಪಡೆಯುವದರ ಸಮಾಧಾನ ಅತ್ಯಂತವಾಗುವಂತಿತ್ತು. ಇನ್ನೂ ಅವಳು ತಿರಸ್ಕಾರಪೂರ್ಣ ಶೋಕಾ ಕುಲ ವೃತ್ತಿಯಲ್ಲಿ ಮಾಡಿದ ಆ ವಿಧಾನಗಳ ಮಟ್ಟಿಗೆ ಆ ಸಮಯಕ್ಕೆ ಅದು ತನ್ನ ಗೆಲುವೆಂದು ಆಕೆ ಬಗೆದಿದ್ದರೂ, ಈಗ ಆ ಕುರಿತು ಅವನ ನಂಬಿಕೆಯೇ ನಿಜವೆಂದು ಒಪ್ಪಿಕೊಳ್ಳಲು ಆಕೆ ತೀರ ಸಿದ್ಧಳಿದ್ದಳು. ಏಕೆಂದರೆ ಅಂಥ ವಿಧಾನಗಳನ್ನು ಮಾಡುವದರಲ್ಲಿ ಆಗ ತನಗೇ ತಾನು ನಡೆಮಕೊಂಡಿದ್ದರೂ, ಆಗ ಅದಕ್ಕೂ ಮಿಗಿಲಾದ, ಗಂಭೀರವಾದ ಕೃತ್ಯವನ್ನು ಆಕೆ ಮಾಡಿದಂತೆ ಆಯಿತು — ವಿಂಟರ ಬೋರ್ನನ ಸ್ಮೃತಿಗೆ ತಪ್ಪು ಬಗೆದಂತೆ ಆಯಿತು.

ತಂದೆಯನ್ನು ಕೇಳದೆ ಮನೆಯಲ್ಲಿ ಹೇಳದೆ ಗ್ರೇಸಳು ಆ ಪತ್ರಕ್ಕೆ ಉತ್ತರ ಬರೆದಳು. ಆಕೆ ಫಿಟ್ಜಪಿಯರ್ಸನನ್ನು ಭೆಟ್ಟಿಯಾಗಲು ಒಪ್ಪಿದಳು — ಆದರೆ ಎರಡು ಶರ್ತುಗಳ ಮೇಲೆ; ಒಂದು, ಭೆಟ್ಟಿಯ ಸ್ಥಳ ಹಾಯ್‌ಸ್ಟಾವರ್ ದಿಬ್ಬದ ನೆತ್ತಿಯಾಗಬೇಕು; ಇನ್ನೊಂದು, ಅವಳೊಂದಿಗೆ ಮಾರ್ಟಿ ಸೌದಳು ಬಂದರೆ ಅವನು ಆಕ್ಷೇಪಿಸಬಾರದು.

ಹೆಂಡತಿಗೆ ಬರೆದ ಪ್ರೇಮಪತ್ರದಲ್ಲಿ ಚತುರತೆಯ ಕಲೆ ಹೆಚ್ಚೋ ಕಡಿಮೆಯೋ ಏನೇ ಇದ್ದಿರಲಿ, ಅವಳ ಸಂಕ್ಷಿಪ್ತ ಉತ್ತರ ಬಂದೊಡನೆ ಅವನಿಗೆ ವಸಂತಾಗಮನದ ಸಂಭ್ರಮವೆನಿಸಿತು. ಆತ ಇತ್ತೀಚೆಯ ವರ್ಷಗಳಲ್ಲಿ ಇಂಥ ಒಂದು ಆನಂದ ಅನುಭವಿಸಿದ್ದೇ ಕಡಿಮೆ. ಇದು ಅವನ ಎಳೆ ಹೃದಯದ ಹಿಗ್ಗುಗಳಿಗೆ ಹೋಲುವಂತಿತ್ತು. ಆತ ಕೂಡಲೆ ಪ್ರತ್ಯುತ್ತರ ಕಳುಹಿಸಿದನು — ಎಲ್ಲ ಶರ್ತುಗಳನ್ನು ತಾನು ಒಪ್ಪುವೆನೆಂದು ಮತ್ತು ಅವಳು ಸೂಚಿಸಿದ ಸ್ಥಳದಲ್ಲಿ ತಾನು ಹಾಜರು ಇರುವ ದಿನವನ್ನೂ ತಾಸನ್ನೂ ತಿಳಿಸಿದನು.

ಆ ಗೊತ್ತುಪಡಿಸಿದ ದಿನ, ಮೂರುಗಂಟೆಗೆ ಕೆಲ ನಿಮಿಷ ಮೊದಲಿಗೇ ಸರ್ವ ಪರಿಚಿತ ದಿಬ್ಬವನ್ನು ಆತ ಏರುತ್ತಿದ್ದನು. ಆತ ಹಿಂಟಾಕಿನಲ್ಲಿ ಉಳಿದಷ್ಟು ಅವಧಿಯಲ್ಲಿ ಆ ದಿಬ್ಬವು ಅವರಿಬ್ಬರ ಬಾಳಿನ ಬಹಳಷ್ಟು ಮಾರ್ಮಿಕ ಪ್ರಸಂಗಗಳಿಗೆ ಕೇಂದ್ರವಾಗಿತ್ತು. ಅಲ್ಲಿಯ ಒಂದೊಂದೂ ದಿನಬಳಕೆಯ, ಮನೆಸಲಿಗೆಯ ನೋಟವು ಅವನಿಗೆ ಚೆನ್ನಾಗಿಯೇ ನೆನಪಿನಲ್ಲಿತ್ತು. ಅದನ್ನು ಮತ್ತೆ ನೋಡಿದಾಗ ಅವನ ಅನುತಾಪದ ಭಾವವು ಅವನನ್ನು ಬಿಡಲೇ ಇಲ್ಲ. ಅವನ ಬಾಳಿಗೆ ಭವಿಷ್ಯದ ಮಟ್ಟಿಗೆ ಯಾವ ದಾರಿಗಳೇ ತೆರೆದಿರಲಿ, ಈ ಹಿಂಟಾಕ ಹಳ್ಳಿಯ ಸಂತೈಕೆಯ ತಂಪು ಛಾಯೆಗಳು ಇನ್ನುಮುಂದೆ ಶಾಶ್ವತ ವಸತಿಸ್ಥಾನವೆಂಬ ದೃಷ್ಟಿಯಿಂದ ಅವನಿಗೆ ಕಟ್ಟಾಗಿ ಹೋದಂತೆ.

ಅವನು ಗ್ರೇಸಳ ಸಹವಾಸಕ್ಕಾಗಿ ಹಂಬಲಿಸಿದ್ದನು. ಆದಾಗ್ಯೂ ಅವಳ ತಿರಸ್ಕೃತ ವೇದಿಕೆಯ ಮೇಲೆ ತನ್ನ ನೈವೇದ್ಯವನ್ನೂ ಸಮರ್ಪಿಸುವುದು ಅವನ ಪ್ರಥಮ ಗುರಿಯಾಗಿತ್ತು. ಅವಳ ಆರಾಧನೆಯು ಪೂರ್ಣವಾದ ಹೊರತು, ಅವಳು ಅದರಿಂದ

ಪ್ರಸನ್ನಳಾದ ಹೊರತು, ಅವಳನ್ನು ತನ್ನಲ್ಲಿ ಬರಬೇಕೆಂದು ಆತ ಯಾವ ರೀತಿಯಲ್ಲಿಯೂ ಒತ್ತಾಯಪಡಿಸಲಾರನು. ಅವನು ಮಾಡಬಹುದಾದ ಅತಿ ಕಡಿಮೆಯ ಪರಿಮಾರ್ಜನೆಯು —ಆದಷ್ಟು ಹೆಚ್ಚು ಪರಿಹಾರ ಸಲ್ಲಿಸಲು ಆತ ಸಿದ್ಧನಿದ್ದ ಈ ಪ್ರಕರಣದಲ್ಲಿ — ಇಷ್ಟೇ ; ತನ್ನೊಂದಿಗೆ ಬಾಳುವದೋ ಬೇಡವೋ ಎಂಬ ಬಗೆಗೆ ಪರಿಪೂರ್ಣ ಇಚ್ಛಾ ಸ್ವಾತಂತ್ರ್ಯವನ್ನು ಅನುಭವಿಸಲಿಕ್ಕೆ ಅವಳನ್ನು ಬಿಡಬೇಕು.

ಇದೂ ಅಲ್ಲದೆ ಆತ ಭಾವನೆಗಳಲ್ಲಿ ಸೂಕ್ಷ್ಮಮರ್ಮಜ್ಞನಾಗಿದ್ದನು. ರಾಹು ಗನ್ನಡಿಯಡಿಗೆ ಇಟ್ಟು ನೋಡಿದಂತೆ ಅವನು ಅವುಗಳಿಂದ ವಿಚಿತ್ರವಾದ ವಿಷಾದಮಯವಾದ ಸುಖವನ್ನು ಅನುಭವಿಸುತ್ತಿದ್ದನು. ಅವನ್ನು ಇದೀಗ ಆತ ಅಳಿಯಗೊಡಲಾರನು. ಗ್ರೇಸಳಿಗೆ ಒಡಂಬಡಿಕೆಯ ಒಂದು ವ್ಯಾವಹಾರಿಕ ವಿಧಾನವನ್ನು ಸೂಚಿಸುವದರಲ್ಲಿ ಏನಾದರೂ ಮುಂದುಡುಕನ್ನು ತೋರ್ಪಡಿಸುವುದು, ಅವನಿಗೆ ಈ ಮೇಲೆ ಹೇಳಿದ ರುಚಿವೈಚಿತ್ರ್ಯದ ಸುಖಕ್ಕೆ ತಡೆಹಾಕುವಂತೆ ಅನಿಸುತ್ತಿತ್ತು. ಕೆಲಕಾಲ ಅವಳ ಸ್ವೇಚ್ಛಾಲಹರಿಯ ವಾಹನವಾಗುವದು ; ಅದಕ್ಕಿಂತ ಮಿಗಿಲೇನೂ ಆತ ಬೇಡಲಾರ. ಮತ್ತು ಅವಳು ಉಂಟುಮಾಡಿದ ಮೃದು ದುಃಖಗಳ ಚಿಂತನೆಯಲ್ಲಿಯೇ ಆತ ತನ್ನ ವಿಚಿತ್ರ ಸಾಂತ್ವನೆಯನ್ನು ಕಂಡುಕೊಂಡನು.

ಇವೆಲ್ಲ ಕಲ್ಪನೆಗಳ ಶೃತಿಗೆ ತನ್ನ ಮನಸ್ಸನ್ನು ಮೀಟುತ್ತ ಆ ದಿಬ್ಬವನ್ನು ಸಮೀಪಿಸಿದಾಗ ಫಿಟ್ಝಪಿಯರ್ಸ ಆ ದಾರಿಯಿಂದ ಒಂದು ಸಂಭ್ರಮದ ಮೆರವಣಿಗೆ ಇಳಿದು ಬರುತ್ತಿರೇವುದನ್ನು ನೋಡಿದನು ಮತ್ತು ಅದೊಂದು ಮದುವೆಯ ದಿಬ್ಬಣವಾಗಿತ್ತೆಂಬುದನ್ನು ಕಂಡುಕೊಳ್ಳಲು ಅವನಿಗೆ ಬಹಳ ವೇಳೆ ಹಿಡಿಯಲಿಲ್ಲ. ಗಾಳಿ ಚುರುಕಾಗಿದ್ದರೂ ಹೆಂಗಸರೆಲ್ಲ ಹಗುರಾದ ಬಟ್ಟೆಗಳಲ್ಲಿಯೆ ಇದ್ದರು ; ಮತ್ತು ಹೂವ ಕಸೂತಿ ಬಿಡಿಸಿದ ಗಂಡಸರ ಜಾಕೀಟುಗಳ ಥಳಕಿನ ನಮೂನೆಗಳು ಸೊಗಸಾಗಿದ್ದವು. ಪ್ರತಿಯೊಬ್ಬ ಹೆಣ್ಣೂ ತನ್ನ ಗಂಡನ ಭುಜಕ್ಕೆ ಬಿಗಿಯಾಗಿ ಅಂಟಿಕೊಂಡಿದ್ದಳು — ಇಷ್ಟು ಬಿಗಿಯಾಗಿ, ಅವನೊಂದಿಗೆ ಒಂದೊಂದು ಹೆಜ್ಜೆಹಾಕಿ ಎತ್ತಿ ತೂಗಿ ತಿರುವಿ ಇಬ್ಬರದೂ ಒಂದೇ ಭಾರ ಬಿಂದುವಿದ್ದಂತೆ ನಡೆಯುತ್ತಿದ್ದಳು. ಅವರ ನಡುವಿನ ಹೃಷ್ಟಪುಷ್ಟ ಮದುವಣಗಿತ್ತಿಯಲ್ಲಿ ಫಿಟ್ಝಪಿಯರ್ಸ ಗುರುತಿಸಿದ್ದು ಸೂಕೆದಾಮಸನ್ನಳನ್ನಲ್ಲದೆ ಇನ್ನೊಬ್ಬಳನ್ನಲ್ಲ. ಅವಳು ಹಗುರಾದ ತೆಳ್ಳನ ಗೌನಿನಲ್ಲಿ ದೈತ್ಯಳಂತೆ ಒಡೆದೆದ್ದು ಕಾಣುತ್ತಿದ್ದಳು. ಅವಳ ಪಕ್ಕದಲ್ಲಿ ನಡೆಯುತಿದ್ದ ಪುಟ್ಟ ಮದುಮಗನು ತಿಮತಾಂಗ್ಸ ಎಂಬುದನ್ನು ಆತ ನೋಡಿದನು.

ಫಿಟ್ಝಪಿಯರ್ಸ ಜಾರಿಹೋಗುವಂತಿದ್ದಿಲ್ಲ ; ಏಕೆಂದರೆ ದಿಬ್ಬಣದವರು ಆತನನ್ನು ಕಂಡಿದ್ದರು. ಆದರೆ ಫಿಟ್ಝಪಿಯರ್ಸನು ಭೆಟ್ಟಿಯಾಗಲು ಒಪ್ಪದಿದ್ದ ಪ್ರಪಂಚದ ಎಲ್ಲ ಸುಂದರಿಯರಲ್ಲಿ ಸೂಕೆ ಮುಖ್ಯಳಾಗಿದ್ದಳು. ಆದರೂ ಪ್ರಾಪ್ತ ಪರಿಸ್ಥಿತಿಯಲ್ಲಿ ಆತ ಒಳ್ಳೆಯ ಗೆಲುವೊಗದಿಂದಲೆ ಇದಿರಾದನು, ಮತ್ತು ಮುಂದುವರಿದನು. ಇದುರಿಗೆ ಬರುತ್ತಿರುವ ಮಂಡಳಿಯೂ ಆತನನ್ನೂ, ಹೆಂಡತಿಯಿಂದ ಆತನ ಅಗಲಿಕೆಯನ್ನೂ

ಚರ್ಚಿಸುತ್ತಿದ್ದಾರೆಂಬುದು ಸ್ಪಷ್ಟವಿತ್ತು. ನವದಂಪತಿಗಳು ಹತ್ತಿರಕ್ಕೆ ಬಂದೊಡನೆ ಅವನು ಅವರನ್ನು ಅಭಿನಂದಿಸಿದನು.

'ನಮ್ಮನ್ನಿಷ್ಟು ಸುತ್ತಲೂ ಕಾಣಿಸಿಕೊಂಡು ಬರೋಣವೆಂದು ನಾವು ಸೀಮೆ ತುಂಬ ಅಲೆದಾಡುತ್ತ ಹೊರಟಿದ್ದೇವೆ' ತಿಮ್ ಅಂದನು, 'ಮೊದಲು ಮೊದಲು ನಾವು ಹಿರಿಯ ಹಿಂಟಾಕಿನ ಕಡೆಗೆ ಸಾಗಿದೆವು. ಅಲ್ಲಿಂದ ತಿರುಗಿ ಇಲ್ಲಿ ಬಂದೆವು ; ಇಲ್ಲಿಂದ ರೆವಲರ್ಸ ಖಾನಾವಳಿಗೆ ಮತ್ತು ಮಾರ್ಶವುಡ್ ಊರಿಗೆ, ಹಾಗೇ ರಸ್ತೆಯ ಕತ್ತರಿ ಸುತ್ತು ಹಾಕಿ ಮನೆಗೆ; ಮನೆಗೆಂದು ನಾನೆಂದುದು, ನಿಜ. ಆದರೆ ಅದೇನು ಬಹಳ ಕಾಲವಲ್ಲ. ಇಲ್ಲಿಂದ ನಾವು ಒಂದೆರಡು ತಿಂಗಳಲ್ಲಿಯೇ ಹೊರಟೆವು.'

'ಹೌದೇ? ಎಲ್ಲಿಗೆ?'

ತಿಮ್ ತಿಳಿಸಿದನು — ಅವರು ನ್ಯೂಜಿಲೆಂಡಿಗೆ ಹೊರಟರು. ತನ್ನಮಟ್ಟಿಗೆ ಆತ ಹಿಂಟಾಕ ಹಳ್ಳಿಯಿಂದಲೆ ಸಮಾಧಾನಪಟ್ಟುಕೊಳ್ಳುತಿದ್ದಿಲ್ಲವೆಂದಲ್ಲ, ಆದರೆ ಅವನ ಈ ಹೆಂಡತಿ ಮಹಾ ಹಿರಿಯಾಸೆಯುವಳು. ಹಳ್ಳಿಯನ್ನು ಬಿಟ್ಟೇ ಹೋಗ ಬೇಕೆನ್ನುವವಳು ; ಆದ್ದರಿಂದ ಆತ ಅವಳ ಮಾತು ಒಪ್ಪಿದನು.

'ಹಾಗಾದರೆ ಗುಡ್‌ಬಾಯ್' ಫಿಟ್ಜಪಿಯರ್ಸ ಅಂದನು, 'ನಿಮ್ಮನ್ನು ನಾನು ಮತ್ತೆ ಕಾಣಲಾರೆ.' ಅವನು ತಿಮ್‌ನ ಕೈಹಿಡಿದು ಕುಲಕಿ ಅವನ ಮದುವಣಗಿತ್ತಿಯತ್ತ ಹೊರಳಿದನು...'ಗುಡ್‌ಬಾಯ್, ಸೂಕೀ' ಅವಳ ಕೈಯನ್ನು ಎತ್ತಿ ಹಿಡಿದು ಆತ ಅಂದನು, 'ನೀನು ಆಯ್ದ ಆ ಹೊಸನಾಡಿನಲ್ಲಿ ನಿನಗೂ ನಿನ್ನ ಗಂಡನಿಗೂ ಒಳ್ಳೆಯ ಆಯುರಾರೋಗ್ಯಾಭಿವೃದ್ಧಿಯನ್ನು ನಾನು ಬಯಸುತ್ತೇನೆ.' ಇಷ್ಟು ಹೇಳಿ ಆತ ಅವರನ್ನು ಬಿಟ್ಟು, ತನ್ನ ನಿಯುಕ್ತ ಕಾರ್ಯಕ್ಕಾಗಿ ತೆರಳಿದನು.

ದಿಬ್ಬಣವು ಮತ್ತೆ ಸೇರ್ಪಟ್ಟು ಮೆರವಣಿಗೆಯಲ್ಲಿ ಮುಂದೆ ಸಾಗಿತು. ಆದರೆ ತನ್ನ ಭುಜವನ್ನು ಸೂಕೆಗೆ ಆನಿಸಿಕೊಳ್ಳಲು ಕೊಡುವಾಗ ತಿಮ್ ನೋಡಿದನು — ಅವಳ ಮುಖಚರ್ಯೆ ಪೂರ್ತಿ ಪಲ್ಲಡಿಸಿಬಿಟ್ಟಿತ್ತು. 'ಹಲೋ ನನ್ನ ಚಿನ್ನಾ, ಏನಾ ಯಿತು' ಆತ ಕೇಳಿದನು.

'ಏನೂ ಇಲ್ಲ. ಹೇಳವಂಥಾದ್ದೇನೂ ಇಲ್ಲ.' ಆಕೆ ಅಂದಳು. ಆದರೆ ಅವಳ ಈ ಹಟದ ನಿರಾಕರಣೆಯನ್ನು ಸುಳ್ಳುಗಳೆಯಲು ಅವಳಿಗೆ ಬಿಕ್ಕಿ ಬಿಕ್ಕಿ ಅಳು ಬಂದಿತು. ಕೂಡಲೆ ಅವಳ ಮೋರೆಯಿಂದ ಹನಿಗಳು ತೊಟಕ ಹತ್ತಿದವು.

'ಏನು, ಏನಿದು? ಇದೇನು ಧಾಡಿ ಆಯಿತು ನಿನಗೆ? ಯಾವ ದೆವ್ವ ಬಡಿಯಿ ತೆಂದು ಹೀಗೆ?' ಆ ಮದುವಣಿಗ ಉದ್ಗಾರ ತೆಗೆದನು.

'ಅವಳಿಗೆ ದುಃಖ ಉಕ್ಕಿಬಂದಿದೆ, ನನ್ನ ಮಗು' ಮದುವಣಗಿತ್ತಿಯ ಮೊದಲ ನೆಯ ವಾರಗಿತ್ತಿಯು ಅಂದಳು. ಅವಳು ತನ್ನ ಕರವಸ್ತ್ರದ ಮಡಿಕೆ ಬಿಚ್ಚಿ ಸೂಕೆಯ ಕಣ್ಣು ಒರಸಿದಳು.

'ಮಂದಿಯನ್ನು ಬಿಟ್ಟು ಹೋಗುವದು ನನಗೆ ಎಂದೆಂದೂ ಆಗದು.' ಮಾತಾಡಲು ಸಾಧ್ಯವಾದೊಡನೆ ಸೂಕೆ ಅಂದಳು.

'ಅವನನ್ನೇ ಏಕೆ ಆಗದು?'

'ಏಕೆಂದ್ರೆ, ಅವರು ಎಷ್ಟು ಒಳ್ಳೆಯ ಡಾಕ್ಟರರು; ಅವರನ್ನು ಮತ್ತೆ ನಾವು ನೋಡೋಹಂಗಿಲ್ಲ. ಇದೇನು ಕಡಿಮೆ ನಷ್ಟವೇ — ಸಾವಿರಪಟ್ಟು ನಷ್ಟ. ನ್ಯೂಜಿಲೆಂಡದಲ್ಲಿ ಇವರಂಥ ಜಾಣ ಡಾಕ್ಟರ್ ಸಿಕ್ಕಾನೇ ? — ಇನ್ನು ಕೆಲವೇ ತಿಂಗಳಲ್ಲಿ ನನಗೆ ಒಬ್ಬ ಬೇಕೆಂದಾಗ? — ಈ ಯೋಚನೆ ಬಂದದ್ದೆ ನನ್ನ ಮನಸ್ಸು ಕಳವಳ ಗೊಂಡಿತು, ಅಳು ಬಂದ್ಬಿಡ್ತು.''

ಅವರು ಮುಂದರಿದರು. ಆದರೆ ಶಿವರ್‌ನ ಮೋರೆಯು ನಿಷ್ಪ್ರಭವಾಯಿತು, ನಿಸ್ತೇಜವಾಯಿತು. ಅವನಿಗೆ ನಿಧಾನವಾಗಿ ನೆನಪಿಗೆ ಬಂದವು — ಚಿಕ್ಕಪುಟ್ಟ ಸನ್ನಿವೇಶಗಳು, ಅವು ಘಟಿಸಿದಾಗ ಅಲಕ್ಷಿಸಿದಂಥವು. ಆ ತನಕ ಹಾದಿಯ ಇಕ್ಕೆಲದ ಬೇಲಿಗಳನ್ನೂ ತುಂಬಿ ತುಳುಕಿ, ಮದುಮಗನ ಸಂಗಾಡಿಗಳ ನಗೆಚಾಟಿಕೆಯ ಮಾತುಗಳಿಗೆ ಹೊರಹೊಮ್ಮುತ್ತಿದ್ದ ದಿಬ್ಬಣದವರ ಗಹಗಹಿಸುವ ನಗೆಯ ಕಲಕಲ ಧ್ವನಿಯು ಮತ್ತೆ ಕೇಳಿಸದಾಯಿತು.

ಈ ಹೊತ್ತಿಗೆ ಫಿಟ್ಝಪಿಯರ್ಸ ದಿಬ್ಬದ ದಾರಿಯಲ್ಲಿ ಬಲು ಮುಂದರಿದಿದ್ದನು. ಅಲ್ಲಿ ಬಲಗಡೆಯಿಂದ ಎರಡು ಆಕೃತಿಗಳು ಹೊರಬೀಳುವದನ್ನು ಆತ ನೋಡಿದನು. ಅವರೇ ಅಪೇಕ್ಷಿತರಾದ ಗ್ರೇಸ, ಮಾರ್ಟಿಸೌದ. ಅವರು ಅಲ್ಲಿಗೆ ಹತ್ತಿರದ ಗುಪ್ತ ದಾರಿಯಿಂದ ಕಾನುಗಳೊಳಗಿಂದ ಹಾದುಬಂದಿದ್ದರು. ಗ್ರೇಸಳು ತನ್ನ ಚಳಿಗಾಲದ ಬಟ್ಟೆಗಳಲ್ಲಿ ಗದ್ದದವರೆಗೂ ಮುಚ್ಚಿಹೋಗಿದ್ದಳು ; ಮತ್ತು ಅವನ ಕಣ್ಣಿಗೆ ಅವಳು ಆ ಕ್ಷಣಕ್ಕೆ ಹಿಂದೆಂದೂ ಕಾಣಿಸದಷ್ಟು ಮೋಹಕವೆನಿಸಿದಳು ! ಆ ಅಪರಾಹ್ನಕ್ಕೆ ಉಜ್ವಲ ಉಷ್ಣತೆ ಇಲ್ಲದ ಬಿಸಿಲಿನಲ್ಲಿ, ಚುರುಕಾದ ಚಳಿಗಾಳಿ ಬೀಸುತ್ತಿರುವಾಗ, ಸುತ್ತಲೂ ನೇರಲ ಬೂದುಬಣ್ಣದ ಬ್ರಶ್‌ಕಂಡಿಗಳ ರಾಶಿರಾಶಿ ಬಟ್ಟೆ ನಿಂತಿರುವಲ್ಲಿ, ತಾನು ಸಮೀಪಿಸುತ್ತಿರುವ ಈ ಚಿತ್ರವನ್ನು ಫಿಟ್ಝಪಿಯರ್ಸ ಧೇನಿಸುತ್ತ ಸಾಗಿದನು. ಕೊನೆಗೊಮ್ಮೆ ಅವರಿಬ್ಬರ ಕಣ್ಣೂ ಒಂದು ಕ್ಷಣ ಕೂಡಿದವು. ಆಗ ಅವಳು ಮರ್ಯಾದೆ ತೋರ್ಪಡಿಸುತ್ತ ತನ್ನ ನೋಟವನ್ನು ಅಡ್ಡ ಹೊರಳಿಸಿದಳು — ಮೋರೆಯ ಮುಕ್ಕಾಲು ಪಾರ್ಶ್ವ ಅವನಿಗೆ ದಿಟ್ಟಿಸಲಿಕ್ಕೆ ಕೊಡುತ್ತ. ಅದೇ ಕಾಲಕ್ಕೆ ಶಿಷ್ಟಾಚಾರದ ಪೂರ್ತಿ ದಾಕ್ಷಿಣ್ಯದಿಂದ ಅವನು ತನ್ನ ಹ್ಯಾಟನ್ನು ದೊಡ್ಡ ಕಂಸಾಕಾರವಾಗಿ ಬೀಸಿ ಎತ್ತಿದನು. ಮಾರ್ಟಿ ತುಸು ಹಿಂದೆಯೆ ; ಸರಿದಳು. ಮತ್ತು ಹತ್ತಿರಕ್ಕೆ ಬಂದ ಫಿಟ್ಝಪಿಯರ್ಸ ಹಸ್ತವನ್ನು ಚಾಚಿದಾಗ, ಗ್ರೇಸಳು ಅದನ್ನು ತನ್ನ ಬೆರಳುಗಳಿಂದ ಮುಟ್ಟಿದಳು.

'ನಾನು ಇಲ್ಲಿ ಬರಲು ಒಪ್ಪಿದೆನೇಕೆಂದರೆ, ಏನೋ ಅತಿ ಮಹತ್ವದ ಸಂಗತಿಯನ್ನು ನಿಮಗೆ ಕೇಳಿ ತಿಳಿದುಕೊಳ್ಳುವುದಿತ್ತು.' ಗ್ರೇಸಳು ಅಂದಳು. ಆದರೆ ಅವಳ ಶಬ್ದೋಚ್ಚಾರವು ಅವಳು ಬಯಸದ ನಿಟ್ಟಿನಲ್ಲಿ ಮಿಡಿಯುತ್ತ ನಡೆದಿತ್ತು.

'ನಾನು ತುಂಬ ಲಕ್ಷ್ಯಕೊಡುತ್ತಿದ್ದೇನೆ.' ಅವಳ ಗಂಡನು ಅಂದನು, 'ಏಕಾಂತಕ್ಕಾಗಿ ನಾವು ಆ ಮರಗಳ ಮರೆಗೆ ಹೋಗೋಣವೇ ?'

ಗ್ರೇಸಳು ಸಂಕೋಚಪಟ್ಟಳು. ಫಿಟ್ಝ್‌ಪಿಯರ್ಸ್ ಆಗ್ರಹ ಮಾಡಲಿಲ್ಲ. ಅವರು ಗೇಟಿನ ಹೊರಗಡೆಗೇ ಉಳಿದರು.

ಅದೇನೇ ಇದ್ದರೂ ತನ್ನ ಭುಜವನ್ನಾದರೂ ಹಿಡಿಯಬಹುದಲ್ಲ? ಆದರೆ ಇದನ್ನು ಅವಳು ಗಂಭೀರವಾಗಿ ನಿರಾಕರಿಸಿದಳು. ಅವಳ ನಿರಾಕರಣೆಯು ಮಾರ್ಟಿಗೂ ಕೇಳಿಸಿತು.

'ಏಕೆ ಬೇಡ ? '

'ಓ, ಮಿಸ್ಟರ್ ಫಿಟ್ಝ್‌ಪಿಯರ್ಸ್ — ನೀವು ಕೇಳುವಿರಾದರೂ ಹೇಗೆ ? '

'ಸರಿ, ಸರಿ,' ಆತ ಅಂದನು. ಅವನ ಉಕ್ಕಂದದ ಸಂಭ್ರಮ ಒಮ್ಮೆಲೆ ಮುಂದುಡಿ ಹೋಯಿತು.

ಅವರು ನಡೆಯುತ್ತಿದ್ದಂತೆ, ಅವಳು ಮತ್ತೆ ತನ್ನ ಪ್ರಶ್ನೆ ಎತ್ತಿದಳು. 'ನನ್ನ ಪ್ರಶ್ನೆ ಒಂದು ವಿಷಯದ ಬಗೆಗೆ. ಅದು ನಿಮಗೆ ಅಷ್ಟೊಂದು ಸುಖಕರವೂ ಅನಿಸಲಾರದೇನೋ. ಆದರೆ ಹಾಗೆಂದು ನಾನು ವಿಶೇಷ ಕಾಳಜಿ ವಹಿಸಿ ಯೋಚಿಸಬೇಕಾಗಿ ಇಲ್ಲ.'

'ಛೇ ಇಲ್ಲವೇ ಇಲ್ಲ.' ಆತ ಧೀರೋದಾತ್ತವಾಗಿ ಅಂದನು.

ಆಮೇಲೆ ಆಕೆ ಅವನನ್ನು ಬಡ ವಿಂಟರಬೋರ್ನನ ಪ್ರಾಣೋತ್ಕ್ರಮಣದ ಪ್ರಸಂಗಕ್ಕೆ ಒಯ್ದಳು. ಅವನ ಮರಣಾಂತಿಕ ಕಾಯಿಲೆ ಬಂದ ಆ ನಿರ್ದಿಷ್ಟವಾದ ಪರಿಸ್ಥಿತಿಯನ್ನು ವಿವರಿಸಿದಳು — ವಿಶೇಷತಃ ಅವನು ಆಶ್ರಯ ಪಡೆದ ಆ ಕಿರಿಚಪ್ಪರದ ತೇವಿನ ಅಂಶವನ್ನೂ, ತಾನು ಅಲ್ಲಿ ಅನುಭವಿಸುತ್ತಿದ್ದ ತೊಂದರೆಗಳನ್ನೂ, ಅವನು ಅವಳಿಂದ ಅಡಗಿಸಿಟ್ಟಿದ್ದನ್ನೂ, ಅವನು ಅಲ್ಲಿ ಸಹಿಸಿದ್ದೆಲ್ಲವನ್ನೂ, ಅವಳ ಕುರಿತು ಆತ ಜಾಗ್ರತೆಯಿಂದ ಧರ್ಮ ಭೀರುತೆಯಿಂದ ಮಾಡಿದ್ದೆಲ್ಲವನ್ನೂ ಅವಳು ಒತ್ತಿ ಹೇಳಿದಳು. ಅವನನ್ನು ಸಾವಿಗೆ ಅಟ್ಟಿದ ಪಾಪವು ತನ್ನ ಮೇಲೆ ಬರುವದೇ ಎಂದು ಕೇಳಿದಳು. ಆಗ ಆ ಗತಗೋಷ್ಟಿಯ ಸಿಂಹಾವಲೋಕನೆಯಿಂದ ಕಂಬನಿಗಳು ಉಕ್ಕಿಬಂದವು.

ಅವಳ ಕಥನವು ಪರ್ಯಾಯವಾಗಿ ವ್ಯಕ್ತಪಡಿಸಿದ ಸಂಗತಿಯಿಂದ ಫಿಟ್ಝ್‌ಪಿಯರ್ಸ್ ತನಗಾದ ಆನಂದವನ್ನು ಪ್ರಕಟವಾಗಿ ಕಾಣಿಸದೆ ಇರದಾದನು. ಅವಳ ಪ್ರೇಮಿಕನೊಂದಿಗೆ ನಿರುಪದ್ರವಿಯಾಗಿ ನಡೆದ ಪಲಾಯನ — ಪ್ರಸಂಗ, ಅವಳದೇ ಬನ್ನಣೆಯಿಂದ ಗಂಭೀರವಾಗಿ ಕಂಡಿದ್ದು, ಅವನಿಗೆ ಸಮಾಧಾನಗೊಳಿಸಿತು. ಈ ನಿರುಪದ್ರವತೆ ಆ ಪ್ರಸಂಗದ ಉದ್ದೇಶವೇ ಆಗಿತ್ತೋ ಯೋಗಾಯೋಗದ ಫಲವಾಗಿತ್ತೋ — ಆ ಕುರಿತು ವಿಚಿಕಿತ್ಸೆಗೆ ಹೋಗಬೇಕೆಂದು ಅವನಿಗೆ ಅನ್ನಿಸಲೇ ಇಲ್ಲ. ಅವಳ ಪ್ರಶ್ನೆಯ ಬಗೆಗೆ ಅವನು ಹೇಳಿದನು — ತನ್ನ ನಿರ್ಣಯದಂತೆ ಯಾವ ಮಾನವೀಪ್ರಾಣಿಯೂ ಅದಕ್ಕೆ ಉತ್ತರ ನೀಡಲಾರನು. ಒಟ್ಟಿನ ಮೇಲೆ ಶಕ್ಯಾಶಕ್ಯತೆಯ ತೂಕ ಅವಳಿಗೆ

ಅನುಕೂಲವಾಗಿ ಒಲಿಯುತ್ತದೆಂದು ಆತ ಅಭಿಪ್ರಾಯಪಟ್ಟನು. ಬಾಳಿನ ಕೊನೆಯ ತಿಂಗಳುಗಳಲ್ಲಿ ವಿಂಟರಬೋರ್ನನ ತೋರಿಕೆಯು ಕಸುವು ಒಂದು ಮೋಸವೇ ಆಗಿತ್ತು. ಆ ಹೊಂಚು ಸಾಧಿಸುವ ರೋಗದ ಲಕ್ಷಣವೇ ಹಾಗೆ. ಮೊದಲನೆಯ ಆಘಾತದನಂತರ ರೋಗಿಯ ತೋರಿಕೆಯ ಸುಧಾರಣೆ ಒಂದು ಶಾರೀರಕ ಮೋಸವಾಗಿದ್ದುದು ಅನೇಕ ಸಲ ಘಟಿಸಿದ್ದುಂಟು.

ಗ್ರೇಸಳಿಗೆ ಅನಿಸಿದ ಸಮಾಧಾನವು ಫಿಟ್ಝಪಿಯರ್ಸನು ಕೊಟ್ಟ ಆಶ್ವಾಸನದಿಂದ ಎಷ್ಟೋ, ಅಷ್ಟೇ, ಒಂದು ಬುದ್ಧಿವಂತ ಮನಸ್ಸಿನೊಂದಿಗೆ ಆ ದುರ್ಘಟನೆಯ ವಿವರಗಳ ಕುರಿತು ತನ್ನ ಪರಿಜ್ಞಾನವನ್ನು ಹಂಚಿಕೊಂಡದ್ದರಿಂದಲೂ ಇತ್ತು. 'ಒಳ್ಳೆಯದು ಹಾಗಾದರೆ, ಈ ಕೇಸನ್ನು ನಿಮ್ಮ ಮುಂದೆ ಇಟ್ಟು, ನಿಮ್ಮ ವ್ಯಾವಸಾಯಿಕ ಅಭಿಪ್ರಾಯವನ್ನು ಪಡೆಯುವುದೇ ನಾನು ಇಂದು ಇಲ್ಲಿಗೆ ಬರಲು ಒಪ್ಪಿದ್ದ ಉದ್ದೇಶವಾಗಿತ್ತು.' ಆಕೆ ಅಂದಳು, ಅವನು ತನ್ನ ತೀರ್ಮಾನಕ್ಕೆ ಬಂದನಂತರ.

'ಬೇರೆ ಯಾವದೇ ಉದ್ದೇಶಕ್ಕಾಗಿ ಇದ್ದಿಲ್ಲವೇ?' ಆತ ದುಃಖದ ದನಿಯಲ್ಲಿ ಕೇಳಿದನು.

'ಒಟ್ಟಾರೆ ಇದೊಂದೇ.'

ಅವರಿಬ್ಬರೂ ಆ ತೋಟದ ಗೇಟ ಬಳಿಗೆ ನಿಂತು ಆಚೆಗೆ ಇಪ್ಪತ್ತು ಮೂವತ್ತು ಮೈನಾಹಕ್ಕಿಗಳು ಹುಲ್ಲಲ್ಲಿ ಕಾಳು ಹೆಕ್ಕುತಿದ್ದುದನ್ನು ನೋಡಿದರು. ಆತ ಮತ್ತೆ ಮೆಲುದನಿಯಲ್ಲಿ ಮಾತುಕತೆ ಮುಂದುವರಿಸಿದನು. 'ಇಷ್ಟಾದರೂ ನನ್ನ ಬಾಳಿನಲ್ಲಿ ಹಿಂದೆಂದೂ ಪ್ರೀತಿಸದಿದ್ದಷ್ಟು ತೀವ್ರವಾಗಿ ನಿನ್ನನ್ನು ನಾನು ಪ್ರೀತಿಸುತ್ತಿದ್ದೇನೆ.'

ಗ್ರೇಸಳು ಆ ಹಕ್ಕಿಗಳ ಮೇಲಿನ ತನ್ನ ನೋಟವನ್ನು ಚಲಿಸಲಿಲ್ಲ ಮತ್ತು ತನ್ನ ಕೋಮಲ ತುಟಿಗಳನ್ನು ಮುಡಚಿಟ್ಟಳು — ಅವನ್ನು ಅಂಕೆಯಲ್ಲಿ ಇಟ್ಟುಕೊಳ್ಳಲಿಕ್ಕೋ ಎಂಬಂತೆ.

'ಇದೊಂದು ಬೇರೆಯೇ ಮಾದರಿಯ ಪ್ರೀತಿ.' ಆತ ಅಂದನು, 'ಕಡಿಮೆ ಆವೇಶದ್ದು; ಹೆಚ್ಚು ಆಳವಾದದ್ದು. ಪ್ರೀತಿಯ ವಿಷಯದ ಭೌತಿಕ ಸ್ಥಿತಿಗತಿಗಳೊಂದಿಗೆ ಇದರ ಸಂಪರ್ಕವೇನೂ ಇಲ್ಲ; ಇದು ಹೆಚ್ಚು ಹತ್ತಿರದ ನಿರೀಕ್ಷಣೆಯಲ್ಲಿ ಪ್ರಕಟವಾಗುವ ಆ ವ್ಯಕ್ತಿಯ ಶೀಲದೊಂದಿಗೆ, ಸಜ್ಜನಿಕೆಯೊಂದಿಗೆ ಪ್ರೇಮವು ಹೆಚ್ಚು ತಿಳಿಯಾದ ಜ್ಞಾನದಿಂದ ಮಾತಾಡುತ್ತದೆ; ಜ್ಞಾನವು ಹೆಚ್ಚು ಪ್ರಿಯವಾದ ಪ್ರೇಮದಿಂದ.'

'ಇದು ಶೇಕ್ಸ್‌ಪಿಯರನ 'ಮೆಝರ್ ಫಾರ್ ಮೆಝರ್' ನಾಟಕದ ಮಾತು' ಆಕೆ ಕಪಟದ ದನಿಯಲ್ಲಿ ಅಂದಳು.

'ಓ ಹೌದು. ಅದನ್ನು ನಾನು ಒಂದು ಅವತರಣಿಕೆಯಾಗಿ ಅಂದೆ' ಫಿಟ್ಝಪಿಯರ್ಸ ಧಾರಾಳವಾಗಿ ಅಂದನು. 'ಅಂದಾಗ ನೀನು ನಿನ್ನ ಹೃದಯದ ಒಂದು ಸಣ್ಣ, ತೀರಸಣ್ಣ ಚೂರನ್ನು ನನಗೆ ಕೊಡಬಾರದೇಕೆ?'

ಆಗಲೆ ಹತ್ತಿರದ ಕಾಡಿನಲ್ಲಿ ಒಂದು ಮರವು ಮುರಿದು ಬಿತ್ತು. ಧಡಿರ್ರನೆ ಕುಸಿದ ಅದರ ಸದ್ದು ಆ ಕ್ಷಣಕ್ಕೆ ವಿಂಟರಬೋರ್ನನ ನಿರಾಡಂಬರ ನಿರಭಿಮಾನ ನಿಷ್ಠೆಯನ್ನೆಲ್ಲ ಒಮ್ಮೆಲೆ ನೆನಪಿಗೆ ತಂದುಕೊಟ್ಟಿತು. 'ಆ ಮಾತು ಕೇಳಬೇಡ, ನನ್ನ ಹೃದಯು ಜೈಲ್ಸನೊಂದಿಗೆ ಗೋರಿಯಲ್ಲಿ ಹೂಳಿದೆ.' ಅವಳು ದೃಢವಾಗಿ ಹೇಳಿದಳು.

'ನನ್ನದೂ ನಿನ್ನೊಂದಿಗೆ ಇದೆ — ಅದಕ್ಕಿಂತ ಕಡಿಮೆ ಆಳವಿಲ್ಲ, ಈ ಗೋರಿ ನನಗೆ ಅನಿಸುತ್ತದೆ.'

'ನನಗೆ ಬಹಳ ವ್ಯಸನವಾಗುತ್ತದೆ. ಆದರೆ ನನ್ನದು ನಿರುಪಾಯ.'

'ನೀನು ಹಟದಿಂದ ಆ ಗೋರಿಯನ್ನು ತೆರೆದಿಡುತ್ತಿರುವಾಗ ನನ್ನ ಬಗೆಗೆ ನಿನಗೆ ವ್ಯಸನ ಹೇಗೆ ಆಗುವುದು?'

'ಓ ಹಾಗಲ್ಲ — ಅದು ಹಾಗಲ್ಲ.' ಗ್ರೇಸಳು ಲಗುಬಗೆಯಿಂದ ಅಂದಳು, ಮತ್ತು ಅವನಿಂದ ದೂರ ಹೋಗಲು ಸರಿದಳು.

'ಆದರೆ ಡಿಯರೆಸ್ಟ್ ಗ್ರೇಸ;' ಅವನಂದನು, 'ನೀನು ಇಲ್ಲಿಗೆ ಬರುವ ಅನುಗ್ರಹ ಮಾಡಿದಿ. ಆಗ ನನಗೆ ಅನಿಸಿತು, ನಾನು ಬಹುದೀರ್ಘ ಉಮೇದುವಾರಿಕೆಯ ಅವಧಿಯೊಳಗಿಂದ ಹಾದು ಬಂದಿದ್ದೇನೆ — ಆದ್ದರಿಂದ ನೀನು ನನ್ನೊಂದಿಗೆ ಔದಾರ್ಯ ತೋರುವಿಯೆಂದು. ಆದರೆ, ನಾವಿಬ್ಬರೂ ಪೂರ್ತಿ ಒಡಂಬಟ್ಟು ಎರಕವಾಗಿ ಬಾಳುವ ಆಶೆಯೇ ಉಳಿದಿಲ್ಲವಾದರೆ, ನನ್ನನ್ನು ಸೌಮ್ಯವಾಗಿ ಆದರೂ ನಡೆಯಿಸಿಕೊಳ್ಳು — ನಾನೊಬ್ಬ ಕಡುಪಾತಕಿ ಆದರೂ.'

'ನೀವು ಪಾತಕಿಯೆಂದು ನಾನು ಹೇಳಲಿಲ್ಲ — ಎಂದಿಗೂ ಹೇಳಿದ್ದು ಇಲ್ಲ.'

'ಆದರೆ ನನ್ನ ಕಡೆಗೆ ನೀನು ಅಂಥ ಒಂದು ತಿರಸ್ಕಾರದಿಂದ ನೋಡುವಿ, ನನ್ನನ್ನು ಹಾಗೆಯೇ ಭಾವಿಸುವೆಯೆಂದು ನನಗೆ ಹೆದರಿಕೆ.'

ಗ್ರೇಸಳ ಹೃದಯದಲ್ಲಿ ತುಮುಲ; ಅವನೊಂದಿಗೆ ಕಠೋರವಾಗಬಾರದು ಎಂಬ ಇಚ್ಛೆ ಒಂದೆಡೆ; ಆದರೆ ಅವನನ್ನು ತಾನು ಅಡ್ಡದಾರಿಗೆ ಒಯ್ಯಬಹುದು, ತಪ್ಪು ತಿಳಿವಳಿಕೆಗೆ ತಾನು ಕಾರಣಳಾಗಬಹುದು ಎಂಬ ಭಯ ಇನ್ನೊಂದೆಡೆ. 'ನನಗೆ ತಿರಸ್ಕಾರವೆನಿಸಿದ ಹೊರತು ನಾನು ತಿರಸ್ಕಾರದಿಂದ ನೋಡಲಾರೆ. ನನಗೆ ಅನಿಸುವದೆಲ್ಲ ಒಂದೇ — ಅಪ್ರೀತಿ, ಪ್ರೀತಿಯ ಅಭಾವ.'

'ನಾನು ಬಹಳ ಕೆಟ್ಟವನಾಗಿ ನಡೆದೆ, ನನಗೆ ಗೊತ್ತು.' ಆತ ಉತ್ತರವಿತ್ತನು, 'ಆದರೆ ನೀನು ನಿಜವಾಗಿಯೂ ನನ್ನನ್ನು ಮತ್ತೆ ಪ್ರೀತಿಸದಿದ್ದರೆ, ನಾನು ಶಾಶ್ವತವಾಗಿ ನಿನ್ನಿಂದ ದೂರ ಹೋಗಿಬಿಡುವೆ; ಕರ್ತವ್ಯಕ್ಕಾಗಿ ಇನ್ನಾವದೋ ನಿಮಿತ್ತಕ್ಕಾಗಿ ನನ್ನನ್ನು ನೀನು ಸ್ವಾಗತಿಸುವದು ಬೇಡ. ನನ್ನ ವೈಯಕ್ತಿಕ ಸುಖಸೌಕರ್ಯಕ್ಕಿಂತ ಹೆಚ್ಚು, ನಿನ್ನ ಕ್ಷೇಮ ಮತ್ತು ಪ್ರೇಮಕ್ಕಾಗಿ ಹಂಬಲಿಸದಿದ್ದರೆ ನಾನು ಇಲ್ಲಿಗೆ ಎಂದಿಗೂ ತಿರುಗಿ ಬರುತ್ತಿದ್ದಿಲ್ಲ. ದೂರದಲ್ಲಿ ಒಂದು ಪ್ರಾಕ್ಟೀಸು ಪಡೆದು ಯಾರ ಅಪೇಕ್ಷೆಯೂ ಇಲ್ಲದೆ ನನ್ನ ಪಾಡಿಗೆ ನಾನು ಉಳಿದುಬಿಡುತ್ತಿದ್ದೆ; ನನ್ನ ಬದುಕನ್ನು ನಾನು ಬದುಕು

ತ್ತಿದ್ದೆ. ಆದರೆ ಎಲ್ಲಿ ನನ್ನ ಹೆಸರಿಗೆ ಕಪ್ಪುಬಳಿದಿತ್ತೋ ಪೃಥ್ವಿಯ ಮೇಲಿನ ಅದೇ ಒಂದು ಸ್ಥಳಕ್ಕೆ, ನನ್ನಬಾಳಿನಲ್ಲಿಯೇ ಬೇರೆ ಯಾರೊಬ್ಬನಿಂದಲೂ ಆಗದಿದ್ದಷ್ಟು ಕೆಟ್ಟ ರೀತಿಯಲ್ಲಿ ಯಾರೂ ನನ್ನನ್ನು ನಡೆಯಿಸಿಕೊಂಡನೋ ಅಂಥ ಮನುಷ್ಯನ ಮನೆಗೆ ನಾನು ತಿರುಗಿ ಬರುವುದನ್ನೇ ಆಯ್ದುಕೊಂಡೆ, ಏಕೆ? ಎಲ್ಲ ನಿನಗಾಗಿ.'

ಇದು ನಿರಾಕರಿಸಲಾಗದಷ್ಟು ನಿಜವಿತ್ತು ಮತ್ತು ಇದರ ಪ್ರಭಾವ ಗ್ರೇಸಳ ಮೇಲೆ ಬಿದ್ದಿತು. ಅವಳಿಗೆ ಅನಿಸಹತ್ತಿತು — ತಾನು ಇವನೊಂದಿಗೆ ವಿಪರೀತ ಪೆಟ್ಟಾಗುವಷ್ಟು ನಿಷ್ಠುರಳಾಗಿಬಿಟ್ಟೆ.

'ನೀನು ಹೋಗುವ ಮುಂಚೆ,' ಆತ ಮುಂದುವರಿದನು, 'ನನ್ನ ಕುರಿತು ನಿನ್ನ ಮನೋಗತವೇನೆಂಬುದು ನನಗೆ ಬೇಕು. ನಾನು ಏನು ಮಾಡಬೇಕು, ಅಥವಾ ಮಾಡಬಾರದು ಎಂದು ನಿನ್ನ ಅಪೇಕ್ಷೆ ಇದೆ?'

'ನನ್ನಿಂದ ನೀವು ಸ್ವತಂತ್ರರು. ಅಂದಾಗ ಈ ಪ್ರಶ್ನೆ ಕೇಳುವವರು ನನ್ನನ್ನು ಅಣಕಿಸಿದಂತೆ; ನಿಮಗೆ ಉಪದೇಶ ಕೊಡುವದು ನನ್ನಿಂದ ದೂರವಿರಲಿ. ಆದರೆ ಈ ಕುರಿತು ವಿಚಾರಮಾಡಿ ನೋಡುವೆನು. ಉಪದೇಶವನ್ನು ಬೇರೆಯವರಿಗೆ ಕೊಡುವದಕ್ಕಿಂತ ನಾನೇ ಅದನ್ನು ಪಡೆಯಬೇಕಾದ ಅಗತ್ಯ ಹೆಚ್ಚಾಗಿದೆ.'

'ಈವರೆಗೆ ಬದುಕಿದ ಹೆಂಗಸರಲ್ಲಿಯೇ ಪರಮ ಜಾಣೆ, ಪರಮ ಪ್ರಿಯಳೇ, ನಿನಗೆ ಉಪದೇಶ ಸಲಹೆಗಳ ಅಗತ್ಯವಿಲ್ಲ. ಇದ್ದಿದ್ದರೆ......'

'ನೀವು ಅದನ್ನು ನನಗೆ ಕೊಡುವಿರಾ?'

'ನಾನು ಕೊಟ್ಟ ಉಪದೇಶದಂತೆ ನೀನು ನಡೆಯುವಿಯಾ?'

'ಇದು ಯೋಗ್ಯ ವಿಚಾರಣೆ ಅಲ್ಲ.' ಗಾಂಭೀರ್ಯದಲ್ಲಿಯೂ ಅವಳು ಮುಗುಳು ನಗೆ ಸೂಸಿ ಅಂದಳು, 'ನಾನು ಅದನ್ನು ಕೇಳಲು ಅಡ್ಡಿಯೇನೂ ಇಲ್ಲ — ನನಗೆ ಈಗ ಪರಮ ಯೋಗ್ಯ, ಪರಮ ವಿಹಿತವಾದ ಕ್ರಮ ಯಾವುದೆಂದು ನಿಮ್ಮ ಯೋಚನೆ.'

'ಇದನ್ನು ಹೇಳುವುದು ನನಗೆ ಇಷ್ಟು ಸುಲಭ, ಆದರೂ ಹೇಳಲು ನನಗೆ ಧೈರ್ಯ ಸಾಲದು. ಅದರಿಂದ ನಿನ್ನ ನಿಷೇಧ ಪ್ರತಿಭಟನೆಗಳೇ ಕೆರಳಬಹುದು.'

ಅವನ ಆ ಉಪದೇಶ ಅಥವಾ ಸಲಹೆ ಏನೆಂಬುದನ್ನು ಅರಿತು ಅವಳು ಅವನಿಗೆ ಮತ್ತೆ ಒತ್ತಾಯ ಮಾಡಲಿಲ್ಲ; ಮತ್ತು ಮಾರ್ಟಿಗೆ ಕೈಮಾಡಿ ಕರೆದು ಅವನನ್ನು ಬಿಟ್ಟು ಹೊರಡಲು ಉದ್ಯುಕ್ತಳಾದಳು. ಆಗ ಅವನು ಅವಳನ್ನು ಅಡ್ಡಗಟ್ಟಿ ಕೇಳಿದನು. 'ಓ, ಒಂದು ನಿಮಿಷ. ಡಿಯರ್ ಗ್ರೇಸ — ನನಗೆ ಇನ್ನೊಮ್ಮೆ ಭೆಟ್ಟಿ ಯಾಗುವೆಯಾ?'

ಕೊನೆಗೂ ಅವಳು ಅವನನ್ನು ಮತ್ತೆ ಕಾಣಲು ಒಪ್ಪಿದಳು — ಹದಿನೈದು ದಿನಗಳ ನಂತರ ಅದೇ ವಾರಕ್ಕೆ. ಈ ದೀರ್ಘ ಅವಧಿಯ ಕುರಿತು ಫಿಟ್ಜಪಿಯರ್ಸ ತಕರಾರು ಮಾಡಿದನು. ಆದರೆ ಅದೇ ಗಾಬರಿಗೆಟ್ಟ ಕಳಕಳಿಯಿಂದ ಅವಳು ಅವನಿಗೆ ವಿನಂತಿಸಿಕೊಂಡಳು — ಅದಕ್ಕೂ ಬೇಗ ಬರಬೇಡವೆಂದು. ಆತನೂ ಅವಸರದಲ್ಲಿ

ಅವಳ ಇಚ್ಛೆಗೆ ತಲೆಬಾಗಿದನು. ಅವಳನ್ನು ತನ್ನದೇ ಸುಧಾರಣೆ ಹಾಗೂ ಕಲ್ಯಾಣಕ್ಕಾಗಿ ಒಬ್ಬ ಮಿತ್ರಳೆಂದೇ ಭಾವಿಸುವೆನು. ಅವಳೇ ಆ ಪ್ರತಿಷ್ಠೆಯನ್ನು ಮೀರಲು ಅವನಿಗೆ ಬಿಡುವವನಕ — ಎಂದೂ ಅರಿಕೆ ಮಾಡಿಕೊಂಡನು.

ಇದೆಲ್ಲವೂ ಅವಳಿಗೆ ಆಶ್ವಾಸನ ನೀಡಲಿಕ್ಕೆ ಆಗಿತ್ತು ; ಏಕೆಂದರೆ ಅವಳ ವಿಶ್ವಾಸವನ್ನು ಆತ ಇನ್ನೂ ಗಳಿಸಿದ್ದಿಲ್ಲವೆಂಬುದು ತೀರ ಸ್ಪಷ್ಟವಿತ್ತು. ಇದರಿಂದ ಫಿಟ್ಜ್ ಪಿಯರ್ಸನಿಗೆ ಆಶ್ಚರ್ಯ ; ಅವನ ಎಲ್ಲ ಪೂರ್ವಾನುಭವದಿಂದ ಹೊರಟ ಸಿದ್ಧಾಂತಾನುಮಾನಗಳೂ ಬುಡಮೇಲಾಗಿದ್ದವು : ಅವನಿಗೆ ಮದುವೆಯಾಗಿದ್ದರೂ ಈ ಹುಡುಗಿ ಇನ್ನೂ ಇಷ್ಟು ಲಜ್ಜಾವತಿಯಾಗಿದ್ದಳು, ಸಂಕೋಚ ಪ್ರಕೃತಿಯವಳಾಗಿದ್ದಳು. ಈ ಲಕ್ಷಣವು ತನ್ನದೇ ಆದ ಒಂದು ಮೋಹಕತೆಯನ್ನು ಪಡೆದಿತ್ತು. ಆದಾಗ್ಯೂ ಆತ ಮನೆಯ ಕಡೆಗೆ ಹೊರಟಾಗ ಅವನ ವಿಚಾರಗಳು ಗಂಭೀರವಾದವು, ಮಬ್ಬು ಕವಿದಂತಾದವು : ಹಿಂದೊಮ್ಮೆ ಅಸಂದಿಗ್ಧ ಮತ್ತು ಮುಗ್ಧಜೀವಿಯಾದ ಈ ಸೌಮ್ಯ ಹೆಣ್ಣಿನಲ್ಲಿ ಇಷ್ಟೊಂದು ವಿಂಗಿಲಾದ ಜಾಗರೂಕತೆ ಉಂಟುಮಾಡಿದ ತನ್ನ ಅಪರಾಧ, ಅದುಕೊಟ್ಟ ನೋವು ಎಷ್ಟೊ ಆಳವಾಗಿದ್ದಿರಬೇಕು — ಎಂಬುದನ್ನು ಆತ ಕಂಡುಕೊಂಡನು.

ಅವಳನ್ನು ಜುಲುಮೆಯಿಂದ ಒಲಿಸಿಕೊಳ್ಳಲು ಆತ ಒಪ್ಪಲಿಲ್ಲ. ಅದಕ್ಕೆ ಅವನ ಸದಭಿರುಚಿ ಅಷ್ಟು ಸೂಕ್ಷ್ಮವಿತ್ತು. ತನ್ನ ಮರೆಯಲ್ಲಿ ತನ್ನೊಂದಿಗೆ ಬಾಳುವ ಹೆಣ್ಣಿನ ಸಂಶಯಕ್ಕೆ ಅಥವಾ ತಿರಸ್ಕಾರಕ್ಕೆ ವಿಷಯವಾಗುವ ವಿಚಾರವೇ ಅವನಿಗೆ ಸಹನೆಯಾಗದು. ಈಗ ಇದ್ದಂತೆ ಅವನ ಬಾಳು ಹೆಚ್ಚು ಸಹ್ಯವೆನಿಸಿತು.

ಅವನು ಹೋದನಂತರ, ಮಾರ್ಟಿ ಗ್ರೇಸಳನ್ನು ಕೂಡಿದಳು. ತನ್ನ ಭೂತಪೂರ್ವ ಗಂಡನೊಂದಿಗೆ — ಅವನನ್ನು ಹಾಗೆಯೇ ಭಾವಿಸುವುದು ಅವಳಿಗೆ ಲೇಸೆನಿಸಿತ್ತು. ಕೇವಲ ಬೌದ್ಧಿಕ ಅಥವಾ ಮಾನಸಿಕ ಸಂಬಂಧವನ್ನು ಇಟ್ಟುಕೊಳ್ಳುವ ಪ್ರಶ್ನೆಯ ಬಗೆಗೆ ಮಾರ್ಟಿಯ ಸಲಹೆ ಕೇಳೋಣವೇ ಎಂದೂ ಅವಳಿಗೆ ಅನಿಸಿತು. ಆದರ ಮಾರ್ಟಿಯೇ ಅದರ ವಿಷಯದಲ್ಲಿ ಹೆಚ್ಚು ಆಸಕ್ತಿ ಕಾಣಿಸಲಿಲ್ಲ. ಆದ್ದರಿಂದ ಗ್ರೇಸಳು ಏನೂ ಹೇಳಲಿಲ್ಲ. ಅವರಿಗೆ ಹಿಂದೆ ಧಡಿರ್ ಎಂದು ಕೇಳಿಸಿದ ಮರಬಿದ್ದ ಸ್ಥಳದಲ್ಲಿಯೇ ಆತ ನಿಂತಿದ್ದನು. ಫಿಟ್ಜ್ ಪಿಯರ್ಸನನ್ನು ತಾನು ಭೆಟ್ಟಿಯಾದ ಸಂಗತಿಯನ್ನೂ ಗೋಪ್ಯವಾಗಿ ಇಡಲು ಮಾರ್ಟಿಗೆ ಹೇಳಿ ಗ್ರೇಸಳು ಆ ಹುಡುಗಿಯನ್ನು ಬಿಟ್ಟು ತನ್ನ ತಂದೆಯನ್ನು ಕೂಡಲು ಹೋದಳು. ಏನೇ ಇರಲಿ, ಪ್ರಸಂಗವಶದಿಂದ ತನ್ನ ಗಂಡನನ್ನು ಕಾಣುವುದರ ಯುಕ್ತಾಯುಕ್ತತೆಯ ಕುರಿತು ತಂದೆಯೊಂದಿಗೆ ವಿಚಾರ ವಿನಿಮಯ ಮಾಡೋಣ ಎಂದು ಆಕೆ ಬಗೆದಳು.

ಅವಳ ತಂದೆ ಹಿಗ್ಗಿನಲ್ಲಿದ್ದನು. ಮುಂದಿನ ದಿನಗಳಲ್ಲಿರುವಂತೆ ಆತ ಅವಳೊಂದಿಗೆ ಹೆಜ್ಜೆ ಹಾಕುತ್ತಿದ್ದನು. 'ನಿನ್ನ ಬಗೆಗೆ ವಿಚಾರಮಾಡುತ್ತಿದ್ದೆ. ನೀನೇ ಬಂದಿ... ಆತ ಅಂದನು, 'ನಾನು ಆಲೋಚಿಸಿದ್ದೇನೆ—ಆದದ್ದೆಲ್ಲ ಒಳಿತೆ ಆಯಿತು. ನಿನ್ನ ಗಂಡ

ಊರು ಬಿಟ್ಟು ಹೋದನು. ಅವನು ನಿನ್ನ ಬಾಳಿನಿಂದಲೇ ಎದ್ದು ಹೋದನೆಂದು ತಿಳಿ. ಹೋಗಲಿ, ಎಷ್ಟೋ ಹೆಂಗಸರಿಗೆ ಇದಕ್ಕೂ ಕೆಟ್ಟ ಗತಿ ಬಂದದ್ದುಂಟು. ನೀನು ಇಲ್ಲಿ ಸುಖವಾಗಿ ಇರಬಹುದು. ಆತ ದೇಶಾಂತರಕ್ಕೆ ವಲಸೆ ಹೋಗಲಿ. ತನ್ನ ಹಿತಕ್ಕಾಗಿ ಏನು ಬೇಕೋ ಮಾಡಲಿ. ಅವನು ತನಗೆ ಸಲ್ಲಬೇಕೆಂದು ಅಪೇಕ್ಷಿಸಿದ ಇನ್ನಿಷ್ಟು ಹಣವನ್ನು ಅವನಿಗೆ ಕಳುಹಿಸಿಕೊಡಲು ನನ್ನದೇನೂ ಅಡ್ಡಿ ಇಲ್ಲ—ಅದಕ್ಕಾಗಿ ಆತ ನಿನ್ನನ್ನು ಮತ್ತೆ ಪೀಡಿಸಬಾರದು. ಅವನ ತೊಂದರೆ ನಿನಗೆ ಮತ್ತೆ ಆಗಬಾರದು. ಅವನಿಗೆ ಇಲ್ಲಿಯೇ ವಾಸ್ತವ್ಯಮಾಡುವುದಾದರೆ ನನ್ನನ್ನು ಕಾಣದೆ ಅವನೊಂದಿಗೆ ಮಾತಾಡದೆ ಉಳಿಯುವದು ಕಠಿಣ. ಮತ್ತೆ ಹಾಗೆ ಮಾಡುವದು ಉಭಯ ಪಕ್ಷಕ್ಕೂ ತಾಪದಾಯಕವಾಗುತ್ತಿತ್ತು.'

ಅವನ ಈ ಅಭಿಪ್ರಾಯಗಳು ಅವಳ ಉದ್ದೇಶಕ್ಕೆ ತಡೆ ಹಾಕಿದವು. ಅವುಗಳ ಬೆನ್ನಿಗೆ ತಾನು ತನ್ನ ಗಂಡನಿಗೆ ಭೆಟ್ಟಿ ಗೊತ್ತು ಮಾಡಿ ಇದೀಗ ಹೋಗಿ ಸಿಕ್ಕಿ ಬಂದೆನೆಂದು ಹೇಳುವದು ಹೇಗೆ? 'ಹಾಗಾದರೆ ನಾನು ಅವನೊಂದಿಗೆ ಸಂಪರ್ಕವಿಟ್ಟುಕೊಳ್ಳಬಾರದೆಂದು ನಿನ್ನ ಸಲಹೆಯೇ?' ಅವಳು ಕೇಳಿದಳು.

'ನಿನಗೆ ನಾನು ಇನ್ನು ಎಂದೂ ಏನೂ ಸಲಹೆ ಕೊಡಲಾರೆ. ನಿನ್ನ ಯಜಮಾನಿ ನೀನೇ—ನಿನಗೆ ಇಷ್ಟವಿದ್ದಂತೆ ಮಾಡು. ಆದರೂ ನನ್ನ ಅಭಿಪ್ರಾಯವಿಷ್ಟೇ — ಅವನೊಂದಿಗೆ ಬಾಳಲು ನೀನು ಒಲ್ಲೆಯಾದರೆ ಅವನಿಲ್ಲದೆ ನೀನು ಬಾಳುವದು ಲೇಸು. ಅವನೊಂದಿಗೆ ಮತ್ತೆ ಕಣ್ಣುಮುಚ್ಚಾಲೆ ಬೇಡ, ಚಿನ್ನಾಟ, ಅಣಕಾಟ ಬೇಡ. ನೀನು ಅವನನ್ನು ಕಳುಹಿಸಿದಿ, ಅವನು ಈಗ ಹೋಗಿಬಿಟ್ಟನು. ಸರಿ ಒಳ್ಳೇದು ಆಯಿತು. ಅವನ ಉಸಾಬರಿಗೆ ಮತ್ತೆ ಹೋಗಬೇಡ.'

ಗ್ರೇಸಳಿಗೆ ತಾನು ಏನೋ ಅಪರಾಧ ಮಾಡಿದಂತೆ ಅನಿಸಿತು—ಅದೇಕೆ ಹಾಗೆ ಎಂದು ಅವಳಿಗೇ ಗೊತ್ತಾಗಲಿಲ್ಲ—ಮತ್ತು ಅವಳು ಅವನಲ್ಲಿ ಏನನ್ನೂ ಒಪ್ಪಿಕೊಳ್ಳಲಿಲ್ಲ.

೪೬

ಈಗ ಬೆಟ್ಟ ಕಾನುಗಳಲ್ಲಿ ಆಸಕ್ತಿ ಉಳಿದಿದ್ದಿಲ್ಲ; ಗ್ರೇಸಳು ಮನೆಯೊಳಗೇ ಬಹಳ ಹೊತ್ತು ಕಳೆಯುತ್ತಿದ್ದಳು. ಅವಳೀಗ ಒಳ್ಳೆ ವಿದ್ಯಾರ್ಥಿನಿಯೇ ಆಗಿಬಿಟ್ಟಿದ್ದಳು. ಮದುವೆಯಾದಂದಿನಿಂದಲೂ ಅವಳು ಇಷ್ಟು ಹೆಚ್ಚು ಓದಿದ್ದಿಲ್ಲ. ಆದರೆ ಅವಳ ಈ ಏಕಾಂತವಾಸವು ಮಾರ್ಟಿಯ ಸಂಗಡ ವಿಂಟರಬೋರ್ನನ ಸಮಾಧಿಗೆ ನೇಮದಿಂದ

ಭೇಟ್ಟಿ ಕೊಟ್ಟುಬರುವುದರಿಂದ ಭಂಗವಾಗುತ್ತಿತ್ತು. ಈ ವಿಧಿಯನ್ನು ಅವಳು ಒಳ್ಳೆಯ ಭಾವಿಕ ನಿಯಮದಿಂದ ಪಾಲಿಸುತ್ತಿದ್ದಳು. ಕಾಲಕ್ಕೆ ಒದಗಿಬರುವ ಸ್ನೋ ಡ್ರಾಪ್ಸ್, ಪ್ರಿಮರೋಜ್ ಮುಂತಾದ ವನಸುಮಗಳನ್ನು ಆ ಗೋರಿಗೆ ಏರಿಸಿ ಬರುತ್ತಿದ್ದಳು.

ಒಂದು ಅಪರಾಹ್ನ ಸೂರ್ಯಾಸ್ತದ ಸಮಯಕ್ಕೆ ಅವಳು ತನ್ನ ತೋಟದ ಹಿಂದೆ ಮರಗಳ ಕೆಳಗೆ ನಿಂತಿದ್ದಳು. ಹಿಂಟಾಕದ ಮಿಕ್ಕ ಹಿತ್ತಲು ಪ್ರಾಕಾರಗಳೂ ಹೀಗೆಯೇ ಕಾನಿನಲ್ಲಿ ನುಗ್ಗಿ ನಿಂತಿದ್ದವು. ಅಲ್ಲಿಂದ ಒಂದು ಸಣ್ಣ ಕಾಲುದಾರಿ ಹಾಯುತ್ತಿತ್ತು. ಬೇಲಿಯೊಳಗಿಂದ ಹೋಗಿ ಆ ದಾರಿಯು ಮಾರ್ಟಿಯ ಮತ್ತು ಮೆಲಬರಿಯ ಮನೆಗಳಿಗೆ ಒಂದು ಗುಪ್ತದಾರಿಯನ್ನು ಮಾಡಿತ್ತು. ಗ್ರೇಸಳು ಇದೇ ದಾರಿ ಹಿಡಿದು ಅಲ್ಲಿ ಪ್ರವೇಶ ಮಾಡುವವಳಿದ್ದಳು. ಆಗಲೆ ಒಂದು ಆಕೃತಿ ಅದೇ ದಾರಿಯಲ್ಲಿ ಅವಳನ್ನು ಸಮೀಪಿಸಿತು. ಅವನು ಕೈಯೆತ್ತಿ ಅವಳನ್ನು ತಡೆದನು. ಅವನು ಅವಳ ಗಂಡನು.

'ನನಗೆ ಆನಂದವಾಗಿದೆ,' ಅವನೆಂದನು, ಉಬ್ಬಸಬಿಡುತ್ತ ಹತ್ತಿರ ಬಂದು; ಮತ್ತು ಅವನ ಮಾತನ್ನು ನಂಬದಿರಲು ಕಾರಣವಿದ್ದಿಲ್ಲ. 'ಸ್ವಲ್ಪ ದೂರದಿಂದಲೆ ನಾನು ನಿನ್ನನ್ನು ನೋಡಿದೆನು—ನನಗೆ ಭಯ. ನಾನು ಇಲ್ಲಿ ಮುಟ್ಟುವ ಮುಂದೆಯೇ ನೀನು ಒಳಗೆ ಹೋಗಿಬಿಡುವೆಯೋ ಎಂದು'

'ಗೊತ್ತುಮಾಡಿದ ಅವಧಿಗಿಂತ ಒಂದು ವಾರ ಮುಂಚೆಯೆ ಆಯಿತು ಇದು' ಅವಳು ಛೀ ಹಾಕುವ ದನಿಯಲ್ಲಿ ಅಂದಳು. 'ಕಳೆದ ಭೆಟ್ಟಿಯಿಂದ ಹದಿನೈದು ದಿನ ವೆಂದು ನಾನು ಹೇಳಿದ್ದೆ.'

'ಅಂದರೆ ನೀನು ನನ್ನನ್ನು ಕಾಣಲು ಒಪ್ಪಿಲ್ಲವಾದರೂ, ನಿನ್ನನ್ನು ಇಣಿಕಿ ನೋಡಲು ಯತ್ನ ಮಾಡದೆ ನಾನು ಹದಿನೈದು ದಿನಗಟ್ಟಲೆ ತಡೆಯುವೆನೆಂದು ನೀನು ಭಾವಿಸಲಾರೆ. ನಾವು ಕಳೆದ ಸಲ ಭೆಟ್ಟಿಯಾದನಂತರ ಈವರೆಗೆ ನಾನು ಸಂಜೆಗತ್ತಲಲ್ಲಿ ಈ ದಾರಿಯಲ್ಲಿ ಮೂರು ನಾಲ್ಕುಸಲ ಬಂದು ಹೋದೆನೆಂದರೆ ನೀನು ಸಿಟ್ಟಿಗೇಳಲಿಕ್ಕಿಲ್ಲ ವಷ್ಟೆ? ಇರಲಿ, ನೀನು ಹೇಗಿದ್ದೀ?'

ಅವಳು ಅವನಿಗೆ ಕೈಯನ್ನು ಕೊಡಲು ಹಿಂದೆಗೆಯಲಿಲ್ಲ. ಆದರೆ ಉಪಚಾರಕ್ಕೆ ಬೇಕಾದುದಕ್ಕಿಂತ ಒಂದು ಕ್ಷಣ ಹೆಚ್ಚು ಕಾಲ ಅದನ್ನು ತನ್ನ ಕೈಯಲ್ಲಿ ಇಟ್ಟುಕೊಳ್ಳುವ ಇಚ್ಛೆಯನ್ನು ಆತ ಕಾಣಿಸಿದನು. ಆಗ ಅವಳು ತನ್ನ ಕೈಯನ್ನು ಮುಂದುಡಿಸಿ ಸಣ್ಣ ಮಾಡಿದಳು; ಅದು ಅವನ ಕೈಯಿಂದ ಜಾರಿತು. ಆತ ಈ ನಿಟ್ಟಿನಲ್ಲಿ ಮಾಡಿದ ಯತ್ನಗಳನ್ನು ಯಾವಾಗಲೂ ಅವಳ ಬೆದರಿದ ನೋಟ ಹಿಂಬಾಲಿಸುತ್ತಿತ್ತು. ಈಗಲೂ ಅದೇ ಗಾಬರಿಯಿಂದ ಅವಳು ನೋಡಿದಳು. ಅವನು ಕಂಡನು; ಅವಳಿನ್ನೂ ಈ ನುಸುಳುವ ವೃತ್ತಿಯಿಂದ ಹೊರಬಿದ್ದಿದ್ದಿಲ್ಲ; ಇನ್ನೂ ಅವಳನ್ನು ಲೆಕ್ಕಕ್ಕೆ ಹಿಡಿದು ಕೊಂಡೇ ನಡೆಯುವಂತೆ ಇದ್ದಿಲ್ಲ. ಅದಕ್ಕೆ ಸರಿಯಾಗಿಯೆ ಅವನು ಅವಳನ್ನು ಸಂತೈಸಲು ಜಾಗ್ರತೆ ವಹಿಸಿದನು.

ಅವನು ಒಪ್ಪಿಕೊಂಡ ಮಾತು ಕೆಲಮಟ್ಟಿಗೆ ಅವಳ ಮೇಲೆ ಪ್ರಭಾವ ಬೀರಿತು.

‘ ನೀವು ಅಷ್ಟು ಪದೇ ಪದೇ ಬರುತ್ತಿರುವಿರೆಂದು ನನಗೆ ಕಲ್ಪನೆ ಇದ್ದಿಲ್ಲ ’ ಆಕೆ ಅಂದಳು, ‘ ಎಷ್ಟು ದೂರದಿಂದ ಬರುತ್ತೀರಿ ? ’

‘ ಶರ್ಟನ್ ಅಬ್ಬಾಸದಿಂದ. ಅಲ್ಲಿ ನಾನು ಸದ್ಯ ತಾತ್ಪೂರ್ತಿಕವಾಗಿ ಉಳಿದಿದ್ದೇನೆ. ಅಲ್ಲಿಂದ ಇಲ್ಲಿಗೆ ನಡೆದು ಬರುತ್ತೇನೆ. ಏಕೆಂದರೆ ಗಾಡಿಗೀಡಿ ಬಾಡಿಗೆಗೆ ಹಿಡಿದರೆ ಮಂದಿಗೆ ನಾನು ಬರುವದು ಗೊತ್ತಾಗುತ್ತದೆ. ಮತ್ತು ನಿನ್ನೊಂದಿಗೆ ನನ್ನ ಈವರೆಗಿನ ಯಶಸ್ಸು ಇಂಥ ಸಂಧಾನದ ಯತ್ನಗಳಿಗೆ ತಕ್ಕವಾಗಿಲ್ಲ. ಈಗ ಮೈಡಿಯರ್— ನಾನು ಹೀಗೆ ನಿನ್ನನ್ನು ಕರೆಯಬೇಕು—ಒಂದು ಪ್ರಶ್ನೆ ನಿನ್ನ ಮುಂದೆ ಇಡುತ್ತೇನೆ. ವಸಂತಋತು ಸರಿದಂತೆ ನನ್ನನ್ನು ತುಸು ಹೆಚ್ಚು ಸಲ ಭೆಟ್ಟಿಯಾಗುವಿಯಾ ? ’

ಗ್ರೇಸಳು ಅನಪೇಕ್ಷಿತ ಗಾಂಭೀರ್ಯದಲ್ಲಿ ಮಗ್ನಳಾದಳು ಈ ಪ್ರಶ್ನೆಯಿಂದ ತಪ್ಪಿಸಿಕೊಳ್ಳುತ್ತ ಅವಳೆಂದಳು ‘ ನೀವು ನಿಮ್ಮ ವ್ಯವಸಾಯಕ್ಕೆ ಹೆಚ್ಚು ಏಕಾಗ್ರತೆ ಲಕ್ಷ್ಯ ಕೊಡುವುದು ಲೇಸು. ಮತ್ತು ನಿಮ್ಮ ಲಕ್ಷಣವನ್ನು ಅಡ್ಡ ಸೆಳೆಯುವ ಇತರ ವ್ಯಾಸಂಗಗಳನ್ನು ಬಿಟ್ಟುಕೊಡಿ. ಅಂದರೆ ನನಗೆ ಖಾತ್ರಿ ಇದೆ. ನೀವು ಪ್ರಗತಿ ಹೊಂದುವಿರಿ. ’

‘ ನಾನು ಈಗ ಮಾಡುತ್ತಿರುವದು ಅದನ್ನೆ. ನಿನಗೆ ಕೇಳಿಕೊಳ್ಳುವವನಿದ್ದೆ— ನನ್ನ ಎಲ್ಲ ತತ್ವಜ್ಞಾನದ ಗ್ರಂಥಗಳನ್ನು ಸುಡು ಅಥವಾ ಎಲ್ಲಾದರೂ ಒಗೆದುಬಿಡು, ಎಂದು. ಅವೆಲ್ಲ ನಿನ್ನ ಕೋಣೆಗಳಲ್ಲಿ ಬೀರುಗಳಲ್ಲಿ ಇವೆ. ಸತ್ಯಸಂಗತಿಯೆಂದರೆ, ಇಂಥ ಗಹನ ತಾತ್ವಿಕ ವ್ಯಾಸಂಗದ ಬಗೆಗೆ—ನಾನು ಎಂದೂ ಬಹಳ ಪರಿವೆ ಮಾಡಿದವನೇ ಅಲ್ಲ. ’

‘ ನೀವು ಹೇಳಿದ್ದು ಕೇಳಿ ನನಗೆ ಸಂತೋಷವಾಯಿತು ಮತ್ತು ಆ ಬೇರೆ ಪುಸ್ತಕಗಳು ?—ಹಳೆ ನಾಟಕಗಳ ರಾಶಿ ? ಮದ್ದಿನ ಮನುಷ್ಯನಿಗೆ ಅವುಗಳಿಂದೇನು ಪ್ರಯೋಜನ ? ’

‘ ಏನೇನೂ ಇಲ್ಲ. ಅವನ್ನೂ ಮಾರಿಬಿಡು, ಶರ್ಟನ್ ಸಂತೆಯಲ್ಲಿ, ಬಂದಷ್ಟು ಬೆಲೆಗೆ ’ ಆತ ಹರ್ಷದಿಂದಲೇ ಹೇಳಿದನು.

‘ ಮತ್ತು ಆ ಭಯಂಕರ ಫ್ರೆಂಚ್ ನಾವಲ್ ಕಥೆಗಳು—ಅವುಗಳ ಅಸಹ್ಯ ಸ್ಪೆಲಿಂಗ್, ಆ ‘ ಫಿಲ್‌ರ್ಘ ’, ಆ ‘ ಅಂಗ ಮತ್ತು ಇಲೆರ್ಘ ’ ಮತ್ತು ‘ ಮಾರೀ ’ ಯೋ ‘ ಮಾಘಾಯ ’ಯೋ ಏನೇನೊ ಉಚ್ಚಾರದ ಪದಗಳ ಅದ್ಭುತ ಕಥೆಗಳು ? ’

‘ ಅಂದರೆ ಗ್ರೇಸ ನೀನು ಅವನ್ನು ಓದಿರಲಿಕ್ಕಿಲ್ಲವಷ್ಟೇ ?

‘ ಓ ಇಲ್ಲ—ಅವುಗಳಲ್ಲಿ ಬರೆ ಇಣುಕಿ ನೋಡಿದೆ, ಇಷ್ಟೇ ’

‘ ಮನೆಗೆ ಹೋದಕೂಡಲೆ, ನೀನು ಅವನೆಲ್ಲ ಬೆಂಕಿಗೆ ಹಾಕಿ ಹೋಳಿಮಾಡಿಬಿಡು. ನಾನೇ ಅದನ್ನು ಮಾಡುವವನಿದ್ದೆ. ಅವನ್ನೆಲ್ಲ ಕಲೆ ಹಾಕುವಾಗ ನನಗೇನು ಬಡಿದಿತ್ತೋ. ಈಗ ನನ್ನ ಹತ್ತಿರ ಕೆಲವೇ ವ್ಯವಸಾಯಿಕ ಕೈಪಿಡಿಗಳಿರುತ್ತವೆ ಮತ್ತು ನಾನೂ ಈಗ ಶುದ್ಧ ವ್ಯಾವಹಾರಿಕ ಮನುಷ್ಯನಾಗಿದ್ದೇನೆ. ಬೇಗನೇ ನಿನಗೆ ಏನೋ ಶುಭವಾರ್ತೆ

ಹೇಳುವ ಆಸೆ ಇಟ್ಟುಕೊಂಡಿದ್ದೇನೆ. ಆಗ ನೀನು—ನನ್ನಲ್ಲಿಗೆ ಬರುವ ಯೋಚನೆ ಮಾಡುವಿಯಾ ?'

'ಸದ್ಯಕ್ಕೆ ನನ್ನನ್ನು ನೀವು ಒತ್ತಾಯಪಡಿಸದಿದ್ದರೆ ಒಳ್ಳೆಯದು' ಆಕೆ ಭಾವನೆಯಿಂದಲೇ ಹೇಳಿದಳು 'ನೀವು ಹೇಳಿದ್ದೀರಿ— ಉಪಯುಕ್ತ ಪರಿಣಾಮಕಾರಿ ಯಾದ ಹೊಸ ಬಾಳನ್ನು ನಡೆಯಿಸುವಿರೆಂದು. ನನ್ನ ಕೇಳುವ ಮೊದಲು ಅದನ್ನು ಕೆಲಕಾಲ ಆಚರಣೆಯಲ್ಲಿ ತಂದಿದ್ದನ್ನು ನೋಡಿದರೆ, ನನಗೂ ಮೆಚ್ಚಿಗೆ ಆದೀತು. ಇದೂ ಅಲ್ಲದೆ ನಾನು ನಿಮ್ಮೊಡನೆ ಬಾಳಲಾರೆ.'

'ಅದೇಕೆ ?'

ಗ್ರೇಸಳು ಕೆಲ ನಿಮಿಷ ಮೌನವಾಗಿದ್ದಳು. 'ನಾನು ಮಾರ್ಟಿಯೊಂದಿಗೆ ಜೈಲ್ಸನ ಗೋರಿಗೆ ಭೆಟ್ಟಿ ಕೊಡುತ್ತಿರುತ್ತೇನೆ. ನಾನು ಅವನನ್ನು ಪೂಜಿಸುತ್ತೇನೆಂದರೂ ಅಡ್ಡಿ ಇಲ್ಲ. ಅವನಿಗೆ ಅಂಥ ಭಕ್ತಿಯನ್ನು ತೋರಿಸುವೆವೆಂದು ನಾವಿಬ್ಬರೂ ಆಣೆ ಹೊತ್ತಿರುವೆವು. ಮತ್ತು ಅದನ್ನು ಪಾಲಿಸವುದೇ ನನ್ನ ಉದ್ದೇಶ.'

'ಸರಿ. ನನ್ನದೇನು ಅದಕ್ಕೆ ಅಡ್ಡಿ ಇಲ್ಲ. ಇನ್ನೇನೂ ಅಪೇಕ್ಷಿಸಲು ನನಗೆ ಹಕ್ಕು ಇಲ್ಲ ಮತ್ತು ನೀನು ಇದರಿಂದ ದೂರವಿರಬೇಕೆಂದು, ಇದನ್ನು ಬಿಟ್ಟುಕೊಡಬೇಕೆಂದು ನಾನು ಇಚ್ಛಿಸುವುದಿಲ್ಲ. ಬೇರೆಯವರಷ್ಟೇ ಚೆನ್ನಾಗಿ ನಾನೂ ಆ ಮನುಷ್ಯನನ್ನು ಮೆಚ್ಚಿದ್ದೆ. ಹೆಚ್ಚೇನು, ನಾನೂ ನಿನ್ನ ಸಂಗಡ ಕೆಲವು ದೂರದವರೆಗೆ ಆ ಸ್ಥಳಕ್ಕೆ ಬಂದು, ನೀನು ತಿರುಗಿ ಬರುವನಕ ಹತ್ತಿರವೇ ದಣಪೆಯೊಂದರಲ್ಲಿ ಕುಳಿತು ಸಿಗಾರು ಸೇದಿ ಮುಗಿಸುತ್ತೇನೆ.'

'ಅಂದರೆ ನೀವು ಧೂಮಪಾನವನ್ನು ಇನ್ನು ಬಿಟ್ಟಿಲ್ಲವೆಂದಾಯಿತು ?'

'ಅದೂ ಸರಿ. ಇಲ್ಲ, ಬಿಡಬೇಕೆಂದು ಯೋಚನೆ ಮಾಡಿದ್ದೆ, ಮಾಡುತ್ತೇನೆ, ಆದರೆ—'.

ಅವನ ಅತ್ಯಂತ ದಾಕ್ಷಿಣ್ಯವು ಗ್ರೇಸಳನ್ನು ತುಸು ಕಂಗೆಡಿಸಿತು. ಮತ್ತು ಧೂಮ ಪಾನದ ಬಗೆಗೆ ಎತ್ತಿದ ಪ್ರಶ್ನೆ ಮನಸ್ಸನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನವಾಗಿತ್ತು. ಕೂಡಲೆ ಬಡ ಜೈಲ್ಸನ ಹತಾಶ ಪಿಶಾಚಿಯು ಕಡೆಗೆ ಅವಳ ಮನಸ್ಸು ಹೊರಳಿ ಕಣ್ಣಲ್ಲಿ ತೇವ ತುಂಬಿ ಅವಳು ದೃಢವಾಗಿಯೇ ಅಂದಳು, 'ನೀವು ಈ ವಿಷಯಕ್ಕೆ ಲಘುವಾಗಿ ಮಾತಾಡಿದರೆ, ಹಾಗೆಯೇ ಮಾತಾಡಿದ್ದರೆ — ನನಗೆ ಅದು ಸೇರುವುದಿಲ್ಲ. ನಾನು ಅದನ್ನು ಸಹಿಸಲಾರೆ. ನಿಮ್ಮೊಂದಿಗೆ ಮನಬಿಚ್ಚಿ ಆಡುವುದಾದರೆ — ತೀರ ಮನ ಬಿಚ್ಚಿ — ನಾನು ಆತನನ್ನು ಇನ್ನೂ ನನ್ನ ವಾಗ್ದತ್ತ ಪ್ರೇಮಿಕನೆಂದೇ ಭಾವಿಸಿದ್ದೇನೆ. ನಾನು ಹಾಗೆ ಭಾವಿಸದೆ ಇರಲಾರೆ. ಅಂದಾಗ ನಾನು ನಿಮ್ಮನ್ನು ಸೇರುವುದು ತಪ್ಪಾ ದೀತು.'

ಫಿಟ್ಜಪಿಯರ್ಸ ಈಗ ಅಸ್ವಸ್ಥನಾದನು, 'ಇನ್ನು ನಿನ್ನ ವಾಗ್ದತ್ತ ಪ್ರೇಮಿಕ ನೆಂದು ಹೇಳುವಿ' ಆತ ಉತ್ತರವಾಗಿ ನುಡಿದನು, 'ಹಾಗಾದರೆ ನಾವು, ಸಾಮಾನ್ಯ ಜನ

ತಿಳಿಯುವಂತೆ ನೀನು ಅವನಿಗೆ ಯಾವಾಗ ವಾಗ್ದತ್ತಳಾಗಿದ್ದಿ? ನಿನ್ನ ವಿವಾಹ ಅವನೊಂದಿಗೆ ನಿಶ್ಚಯವಾದದ್ದು ಯಾವಾಗ?'

'ನೀವು ಬಿಟ್ಟು ಹೋದಾಗ'

'ಅದು ಹೇಗೆ ಸಾಧ್ಯ?'

ಗ್ರೇಸಳು ಈ ಮಾತುಕತೆಯನ್ನೇ ತಪ್ಪಿಸಿಕೊಳ್ಳಬಹುದಿತ್ತು. ಆದರೆ ಅವಳ ಸಹಜ ಪ್ರಾಂಜಲತೆ ಅವಳನ್ನು ಮುಂದರಿಸಿತು. ಅದು ಯಾವಾಗೆಂದರೆ, ನಿಮ್ಮೊಡನೆ ಆದ ನನ್ನ ವಿವಾಹ ರದ್ದು ಆಗಲಿದೆಯೆಂಬ ಕಲ್ಪನೆಯಲ್ಲಿ ನಾನು ಇದ್ದಾಗ. ಆಗ, ಆಮೇಲೆ ಆತ ನನ್ನನ್ನು ಮದುವೆ ಆಗಬಲ್ಲನೆಂದು ನಾನು ಭಾವಿಸಿದ್ದಾಗ. ಆಗ ನಾನು ಅವನಿಗೆ ಉತ್ತೇಜನ ಕೊಟ್ಟೆ— ನನ್ನನ್ನು ಪ್ರೀತಿಸಲಿಕ್ಕೆ.'

ಫಿಟ್ಜ್‌ಪಿಯರ್ಸ್ ಈ ಮಾತಿನ ಪೆಟ್ಟಿಗೆ ಎದ್ದುಕಾಣುವಂತೆಯೇ ಹಿಂಜರಿದನು. ಆದಾಗ್ಯೂ ಒಟ್ಟಾರೆ ಅದನ್ನೆಲ್ಲ ಹೇಳುವುದರಲ್ಲಿ ಅವಳು ಸರಿಯಾದುದನ್ನೇ ಮಾಡಿದ್ದಳು. ಅವಳು ಅತ್ಯಂತ ಪ್ರಾಮಾಣಿಕತೆಯಲ್ಲಿ ಸರಿಯಾಗಿಯೇ ನಡೆದಿದ್ದಾಳೆಂದು ಅನಿಸಿತು. ಅವಳು ಅವನಿಗಿತ್ತ ನಿರಾಕರಣೆಯ ಮಾತಿನ ಪೆಟ್ಟಿನಲ್ಲಿಯೂ ಅವಳ ಬಗೆಗೆ ಅವನ ಸ್ನೇಹಪೂರ್ಣದ ಪ್ರಶಾಂತ ಭಾವವನ್ನು ಆ ಅನಿಸಿಕೆ ಅಬಾಧಿತವಾಗಿಯೆ ಇಟ್ಟಿತು. ತನ್ನನ್ನು ತಳ್ಳಿ ಇನ್ನೊಬ್ಬನನ್ನು ತನ್ನ ಸ್ಥಾನದಲ್ಲಿ ಸ್ಥಾಪಿಸಲು ಗ್ರೇಸಳು ಬುದ್ಧಿಪೂರ್ವಕವಾಗಿ ಕ್ರಮವಹಿಸುತ್ತಿದ್ದಾಳೆಂದು ಒಪ್ಪಿಕೊಂಡ ಮಾತ್ರಕ್ಕೆ ಅವನಿಗೆ ಅದು ದುಃಖವನ್ನೆ ತರದ ಕಾಲವೂ ಒಂದು ಇತ್ತು. ಆದರೆ ಈಗ ಅವಳ ವರ್ಚಸ್ಸು ಅವನ ಮೇಲೆ ಮಿಗಿಲಾಗಿತ್ತು. ಅವಳು ಹೀಗೆಲ್ಲ ಆಡುವುದನ್ನು ಆತ ತಾಳಲಾರ. ಅವನಿಗೆ ಅವನ ಕುರಿತು ಉನ್ನತ ಆದರ ಭಾವವೇನೂ ಉಳಿದಿದ್ದಿಲ್ಲ. ಆದಾಗ್ಯೂ ಅವಳಿಂದ ಆತ ಅಷ್ಟು ಪ್ರಭಾವಿತನಾಗಿದ್ದನು.

'ನನಗೆ ತುಂಬ ಅನ್ಯಾಯ, ಕ್ರೂರ ಆಘಾತ, ನಿನ್ನ ಈ ಮಾತು' ಆತ ಕಟುವಾಗಿಯೇ ಅಂದನು, 'ಓ ಗ್ರೇಸ, ನಿನ್ನನ್ನು ನಾನು ಅರಿತಿದ್ದಿಲ್ಲ — ನಿನ್ನನ್ನು ತ್ಯಾಗ ಮಾಡಲು ಹವಣಿಸಿದೆ. ಇನ್ನು ನಾನು ಕೇಳಿ ಏನೂ ಪ್ರಯೋಜನದ ಆಸೆ ಉಳಿದಿಲ್ಲವೆಂದು ಅನಿಸುತ್ತದೆ — ಆದರೂ ಕೇಳುತ್ತೇನೆ. ನೀನು ನಿನ್ನ ಹೃದಯದಲ್ಲಿ ನನ್ನ ಬಗ್ಗೆ ಮತ್ತೆ ಒಂದಿಷ್ಟು ಪ್ರೇಮವನ್ನು ಕಂಡುಕೊಳ್ಳಲಾರೆಯಾ?'

'ಅದು ಶಕ್ಯವಿದ್ದಿದ್ದರೆ ನಾನು ನಿಮ್ಮ ಬಯಕೆ ಪೂರೈಸುತ್ತಿದ್ದೆ. ಆದರೆ ಅದು ನನಗೆ ಶಕ್ಯವಿಲ್ಲ, ಇದೇ ನನ್ನ ಭಾವನೆ'—ಅವಳು ಉತ್ತರವಿತ್ತಳು, ತರ್ಕವಿಸಂಗತವಾದ ಒಂದು ಪಶ್ಚಾತ್ತಾಪದಿಂದ, 'ಮತ್ತು ನನ್ನ ಬಾಳಿನಲ್ಲಿ ನಿಮ್ಮ ಸಂಗಡ ಒಬ್ಬ ಪ್ರೇಮಿಕನನ್ನು ನಾನು ಇಟ್ಟುಕೊಂಡರೆ ನೀವೇಕೆ ಪರಿವೆ ಮಾಡಬೇಕೊ — ನಿಮ್ಮ ಬಾಳಿನಲ್ಲಿಯೇ ಬಹಳಷ್ಟು ಪ್ರೇಯಸಿಗಳು ಬಂದಿರುವಾಗ?'

'ಆದರೆ ನಾನು ನಿನಗೆ ಹೇಳಬಲ್ಲೆ — ಅವರೆಲ್ಲರನ್ನು ಒಟ್ಟು ಹಾಕಿದರೂ ಅವರಿ

ಗಿಂತ ನಿನ್ನನ್ನು ನಾನು ಪ್ರಾಮಾಣಿಕವಾಗಿಯೂ ಹೆಚ್ಚಾಗಿ ಪ್ರೀತಿಸುತ್ತೇನೆ. ಮತ್ತು ಇಂಥ ಮಾತನ್ನು ಅಥವಾ ಇದನ್ನೇ ನೀನು ನನಗೆ ಹೇಳುವುದಿಲ್ಲ.'

'ಸಾರಿ, ಆದರೆ ನಾನು ಹೇಳಲಾರೆ' ಅವಳು, ಮತ್ತೆ ನಿಟ್ಟುಸಿರುಬಿಟ್ಟು.

'ಎಂದಾದರೂ ಹೇಳಬಲ್ಲೆಯಾ?— ಇದೆ ನನಗೆ ಸಂಶಯ' ಅವಳ ಅಸ್ಪಷ್ಟ ಮುಖದಲ್ಲಿ ಕಣ್ಣಿಟ್ಟು ಆತ ಅಂದನು — ಭವಿಷ್ಯವನ್ನು ಅಲ್ಲಿ, ಅದರಲ್ಲಿ ಆತ ಅರಸುತಿದ್ದಂತೆ 'ಈಗ ದಯೆಂದೋರು, ದಮ್ಮಯ್ಯ, ಹೇಳು. ನನಗೆ ಹೇಳು. ನೀನು ಯತ್ನ ಮಾಡುವಿಯಾ?'

'ನಿಮ್ಮನ್ನು ಮತ್ತೆ ಪ್ರೀತಿಸಲಿಕ್ಕೆ?'

'ಹೌದು ಸಾಧ್ಯವಾದರೆ'

'ಹೇಗೆ ಉತ್ತರ ಕೊಡಬೇಕೊ ನಾನರಿಯೆ.' ಅವಳು ಉತ್ತರಿಸಿದಳು. ಅವಳ ಮಾತಿನ ಸತ್ಯತೆಯನ್ನು ಅವಳ ಸಂಕೋಚ, ಅಸ್ವಸ್ಥತೆ ಪ್ರಮಾಣಿಸುವಂತಿತ್ತು. 'ನಿಮ್ಮನ್ನು ಭೆಟ್ಟಿಯಾಗಲು ಅಥವಾ ಬಿಡಲು ನನಗೆ ನೀವು ಸ್ವತಂತ್ರವಾಗಿ ಬಿಟ್ಟುಬಿಡುವಿರಷ್ಟೆ.'

'ಖಂಡಿತವಾಗಿ. ಯಾಕೆ? ಈ ಕುರಿತು ನಾನು ಮುಂಚೆ ಕೊಟ್ಟ ಆಶ್ವಾಸನವನ್ನು ಶಂಕಿಸುವಂತೆ, ನಾನೇನಾದರೂ ಆಧಾರ ಒದಗಿಸಿದ್ದೇನೆಯೇ?.'

ಹಾಗೇನೂ ಆತ ಮಾಡಿದ್ದಿಲ್ಲವೆಂದು ಆಕೆ ಒಪ್ಪಿಕೊಳ್ಳಲೇಬೇಕಾಯಿತು.

'ಅಂದಾಗ, ನೀನು ನಿನ್ನ ಹೃದಯವನ್ನು ಸಮಾಧಿಯೊಳಗಿಂದ ಹೊರಗೆ ತೆಗೆದುಕೊಳ್ಳಬಹುದು' ಆತ ಖಿನ್ನವಾದ ಅಣಕಾಟದಲ್ಲಿ ನುಡಿದನು 'ಅದು ಅಲ್ಲಿ ಉಳಿದು ಬಹಳ ಕಾಲವಾಯಿತು.'

ಅವಳು ಮೆಲ್ಲಗೆ ತಲೆ ಅಲ್ಲಾಡಿಸಿದಳು. ಆದರೆ ಅಂದಳು. 'ನಿಮ್ಮನ್ನು ಇದಕ್ಕೂ ಹೆಚ್ಚು ನೆನೆಯಲು ನಾನು ಯತ್ನಿಸುವೆ — ಸಾಧ್ಯವಾದರೆ.'

ಫಿಟ್ಝ್‌ಪಿಯರ್ಸ್ ಇಷ್ಟರಿಂದಲೇ ತೃಪ್ತಿಹೊಂದಬೇಕಾಯಿತು. ಮತ್ತು ಇನ್ನೊಮ್ಮೆ ಎಂದು ಭೆಟ್ಟಿಯೆಂದು ಆತ ಕೇಳಿದನು.

'ನಾನು ಗೊತ್ತು ಮಾಡಿದಂತೆ — ಹದಿನೈದು ದಿನಕ್ಕೆ.'

'ಹದಿನೈದು ದಿನ ಆಗಲೇ ಬೇಕಾದರೆ, ಹದಿನೈದು ದಿನಕ್ಕೆ'

'ಈಸಲವಾದರೂ ಆಗಲೇಬೇಕು. ನಿಮ್ಮನ್ನು ಮತ್ತೆ ಕಾಣುವ ದಿನ ಬರುವಷ್ಟರೊಳಗೆ ನಾನು ಈ ಅವಧಿಯನ್ನು ಕಡಿಮೆ ಮಾಡಲು ಸಾಧ್ಯವೊ — ನೋಡುತ್ತೇನೆ.'

'ಇರಲಿ ಹಾಗೆಯೇ ಆಗಲಿ. ನಾನು ವಾರಕ್ಕೆ ಎರಡು ಸಲವಾದರೂ ಬಂದು ನಿನ್ನನ್ನು ಕಿಟಕಿಯಲ್ಲಿ ನೋಡಿ ಹೋಗುವೆನು.'

'ಆಮಟ್ಟಿಗೆ ನಿಮಗೆ ಬೇಕಾದಂತೆ ನೀವು ಮಾಡಬಹುದು. ಗುಡ್‌ನೈಟ್–'

'ಪತಿಯೆಂದು ಹೇಳು.'

'ಆ ಶಬ್ದವನ್ನು ಅವನಿಗಾಗಿ ಬಳಸಲಿಕ್ಕೆ ಅವಳಿಗೆ ಒಲವೂ ಆದಂತೆ ಅನಿಸಿತು. ಆದರೆ; 'ಇಲ್ಲ. ಇಲ್ಲ. ನಾ ಹೇಳಲಾರೆ' ಎಂದು ಉದ್ಗರಿಸಿ ಅವಳು ತೋಟದ ಬೇಲಿಯೊಳಗಿಂದ ನುಸುಳಿ ಮಾಯವಾದಳು.

ತಾನು ಅವಳ ಮನೆಯ ಪರಿಸರದಲ್ಲಿ ಸುಳಿದಾಡುವೆನೆಂದು ಹೇಳಿದಾಗ ಫಿಟ್ಜ್‌ಪಿಯರ್ಸ ಅತಿಶಯೋಕ್ತಿಯನ್ನು ಮಾಡಿದ್ದಿಲ್ಲ. ಆದರೆ ಈ ಕ್ರಮದಲ್ಲಿ ಪದೇ ಪದೇ ಅವನ ಪ್ರಯತ್ನವು, ಅವಳೇ ತನಗೆ ವಿಹಿತವೆಂದು ಹಾಕಿಕೊಟ್ಟ ಹದಿನೈದು ದಿನದ ಅವಧಿಗಿಂತ ಹೆಚ್ಚು ಬೇಗ ಅವಳನ್ನು ಕಾಣುವುದರಲ್ಲಿ ಫಲಕಾರಿಯಾಗಲಿಲ್ಲ. ಆದರೆ ಈ ಅವಧಿಗೆ ಮಾತ್ರ ಅವಳು ನಿಯಮಿತವಾಗಿ ವೇಳೆ ತಪ್ಪದೆ ಬರುತಿದ್ದಳು. ಆ ವಸಂತ ಋತು ಸರಿದಂತೆ ಈ ಭೆಟ್ಟಿಗಳು ಮುಂದುವರಿದವು. ಆದರೂ ಅವುಗಳ ಸಂಖ್ಯೆ ಹೆಚ್ಚಾಯಿತೇ ಹೊರತು ಸ್ವರೂಪ ಬದಲಾಗಲಿಲ್ಲ.

ಟಾಂಗ ಕುಟುಂಬ ವಾಸಿಸುವ ಗುಡಿಸಲಿನ ಪುಟ್ಟ ಹಿತ್ತಲು ಮೆಲಬರಿಯ ದೊಡ್ಡ ಆವಾರಕ್ಕೆ ಹೊಂದಿಕೊಂಡಿತ್ತು. ಈ ಕುಟುಂಬದಲ್ಲಿ ಇದ್ದವರೆಂದರೆ ತಂದೆ ಮಗ ಮತ್ತು ಮಗನ ಹೆಂಡತಿ ಇಷ್ಟೇ ಮಂದಿ. ತರುಣ ತಿಮ್‌ನು ಮೆಲಬರಿಯ ಮನೆಯ ಕೆಲಸ ಬಿಟ್ಟು ತನ್ನ ಆವಾರದ ಮೂಲೆಗೆ ಒಂದು ಪುಟ್ಟ ಹೂಬಳ್ಳಿಯ ಹಂದರದಡಿಗೆ ಚಿಲುಮೆ ಸೇದುತ್ತ ಸಂಜೆಯ ಮಬ್ಬಿನಲ್ಲಿ ನಿಂತಾಗ, ಹೊರಗೆ ಕಾಲು ದಾರಿಯ ಗುಂಟ ಆ ಸರ್ಜನ್ (ಫಿಟ್ಜ್‌ಪಿಯರ್ಸ)ನು ಹಾದು ಹೋಗುವುದನ್ನು ಆಗಾಗ್ಗೆ ನೋಡಿದ್ದನು. ಫಿಟ್ಜ್‌ಪಿಯರ್ಸ ಯಾವಾಗಲೂ ನಡೆಯುವುದು ಉಂಡಾಡಿ ಅಲೆದಾಡು ವಂತೆ, ಏನೋ ಚಿಂತೆಯಲ್ಲಿ ಬದಿಗೆ ಹಾಯುವಾಗ ಪಕ್ಕದ ತೋಟಗಳಲ್ಲಿ ಒಂದೊಂದಾಗಿ ಚುರುಕಾಗಿ ಕಣ್ಣು ಹಾಯಿಸುತ್ತ. ಇಷ್ಟು ದೂರ ನಡೆದು ಬಂದಮೇಲೆ ಈ ಆಸಕ್ತಿಯ ಸ್ಥಳವನ್ನು ಬಿಟ್ಟು ಹೋಗುವ ಇಚ್ಛೆ ಫಿಟ್ಜ್‌ಪಿಯರ್ಸನಿಗೆ ಇದ್ದಿಲ್ಲ. ಯಾರನ್ನು ತನ್ನ ಬಾಹುಪಾಶಗಳಲ್ಲಿ ಬಲವಾಗಿ ಬಿಗಿದಪ್ಪಿಕೊಳ್ಳಬೇಕೆಂದು ಆತ ತುಂಬ ಭಾವಾವೇಶದಿಂದ ಬಯಸುತ್ತಿದ್ದನೊ ಅವಳ ಒಂದು ಇಣಕು ನೋಟಕ್ಕಾಗಿ ಆತ ಯಾವಾಗಲೂ ಆಸೆ ಪಟ್ಟು ತಳಮಳಿಸುತ್ತಿದ್ದನು.

ಈಗ ಈ ಸಂಜೆಗತ್ತಲೆಯಲ್ಲಿ ಈ ತೋಟಗಳ ಬದಿಯಗುಂಟ, ಈ ಅಲೆದಾಟಗಳ ಪ್ರಗತಿಯನ್ನು ಕಂಡು ತಿಮ್‌ನಿಗ ಸೋಜಿಗ. ಅವುಗಳ ಇಂಗಿತವೇನಿರಬಹುದೆಂದು ಆತ ಯೋಚನೆಗೆ ಬಿದ್ದ. ಫಿಟ್ಜ್‌ಪಿರ್ಯನ ಹೃದಯದಲ್ಲಿಯ ಏಕಮೇವ ಭಾವನೆಯ ಪುನರುಜ್ಜೀವನವನ್ನು ಊಹಿಸುವುದು ಸ್ವಾಭಾವಿಕವಾಗಿಯೇ ಅವನ ಸಾಮರ್ಥ್ಯದ ಹೊರಗಿನ ಮಾತಾಗಿತ್ತು. ತಾನೇ ಹಿಂದೊಮ್ಮೆ ಬಿಟ್ಟುಕೊಟ್ಟ ಹೆಣ್ಣಿನ ಲವಲವಿಸುವ ಪ್ರೇಮಿಕನಾಗುವುದರಲ್ಲಿ ಇಷ್ಟೊಂದು ಆಳವಾದ ಭಾವನಾಮಯವಾದ, ಬಹುತೇಕ ಕಲಾತ್ಮಕವಾದ, ಆನಂದವನ್ನು ಪಡೆಯಬಲ್ಲ ಈ ಜೀವಾಳದ ಸೂಕ್ಷ್ಮತೆಯು ಈ ಹರಯದ ಗರಗಸದಾರನಿಗೆ ತೀರ ಹುಚ್ಚಾಪಟ್ಟೆಯೆಂದೇ ತೋರಬಹುದಿತ್ತು. ಫಿಟ್ಜ್‌ಪಿಯರ್ಸ ಮತ್ತು ಅವನ ಹೆಂಡತಿ ಬೇರೆಯಾಗಿದ್ದರು; ಅಂದಾಗ ಅವರಿಬ್ಬರಲ್ಲಿ

ಪ್ರೇಮಂದ ಪ್ರಶ್ನೆಯೇ ಉಳಿದಿದ್ದಿಲ್ಲ. ಆದರೆ ಅವನ ಸೂಕಿ ಅವರ ಮದುವೆಯ ದಿನದ ಆ ಭೆಟ್ಟಿಯನಂತರದಿಂದ ಅವನ ಒತ್ತಾಯಂದ ವಿಚಾರಣೆಗೆ ತಂತ್ತಾಗಿ ತನ್ನ ಹಿಂದಿನ ಜೀವನದ 'ಹಲಕಿತನ'ಗಳನ್ನೆಲ್ಲ ಪಶ್ಚಾತ್ತಾಪದಿಂದ ಒಪ್ಪಿಕೊಂಡಿದ್ದಳು. ಅಂದಾಗ ಎಲ್ಲ ವಿದ್ಯಮಾನಗಳನ್ನೂ ಒಟ್ಟಾಗಿ ಪರಿಶೀಲಿಸಿ ಆತ ಫಿಟ್ಜಪಿಯರ್ಸನ ಈ ಗೂಢ ಭೆಟ್ಟಿಗಳನ್ನು ತನ್ನ ಮನೆಯೊಳಗಿರುವ ಸೂಕಿಯೊಂದಿಗೆ ಜೋಡಿಸುವ ಒಂದು ತೀರ್ಮಾನಕ್ಕೆ ಬಾರದೇ ಉಳಿಯಲು ಶಕ್ಯವಾಗಲಿಲ್ಲ. ಆದರೆ ಅವನು ಒಂದು ನಿಶ್ಚಿಂತತೆಗೆ ಬಂದು ಮುಟ್ಟಿದ್ದ. ಅವರು ದೇಶಾಂತರಕ್ಕೆ ಹೋಗುವ ಹಡಗು ಅದೇ ತಿಂಗಳಲ್ಲಿ ಹೊರಡಲಿತ್ತು. ಮತ್ತು ಆಗ ಸೂಕಿ ಫಿಟ್ಜಪಿಯರ್ಸನ ದಾರಿಯಿಂದ ಶಾಶ್ವತವಾಗಿ ದೂರವಾಗುವವಳಿದ್ದಳು.

ನಡುವಿನ ಅವಧಿ ಕೊನೆಗೊಮ್ಮೆ ಮುಗಿಯಿತು. ಅದು ಹೊರಡುವ ದಿನ ಬಂದಿತು. ದಿನವಿಡೀ ಸಿದ್ಧತೆಗಳನ್ನು ಮಾಡಿ ಮುಗಿಸಿ, ಅದರಿಂದ ದಣಿದು ಬೇಸತ್ತು ಅವರಿಬ್ಬರೂ ತಿವರ್‌ನ ತಂದೆ ಅವರಿಗಾಗಿ ಕೊಟ್ಟಿಟ್ಟ ಕೋಣೆಯಲ್ಲಿ ಕುಳಿತಿದ್ದರು. ಒಂದು ಮೂಲೆಯಲ್ಲಿ ಅವರ ಪೆಟ್ಟಿಗೆಗಳು ನಿಂತಿದ್ದವು—ಜಡಿದು ತುಂಬಿ ಹುರಿಬಿಗಿದು ಅವರ ದೊಡ್ಡ ಪಿಠಾರೆ ಈ ಮೊದಲೆ ಕಳಿಸಲ್ಪಟ್ಟಿತ್ತು, ಹಡಗದ ಉಗ್ರಾಣದಲ್ಲಿ ಇಡಲಿಕ್ಕೆ. ಅಗಷ್ಟಿಗೆಯ ಬೆಂಕಿ ಸೂಕಿಯ ದುಂಡು ಮುಖದ ಮೇಲೆ ಪುಷ್ಟ ಮೈಯ ಮೇಲೆ, ಮೂಲೆಯಲ್ಲಿ ಕೂತ ತಿವರ್‌ನ ಮೋರೆಯಲ್ಲಿ, ಅವನ ತಂದೆಯ ಆ ಗುಡಿಸಿಲಿನ ಗೋಡೆಗಳಮೇಲೆ ಕಿಡುತಿತ್ತು. ಆಕೆ ಅದನ್ನು ನೋಡುತ್ತ ನಿಂತಿದ್ದಳು. ಆ ಸ್ಥಳವನ್ನು ಅವರು ಆ ದಿನ ನೋಡುವುದು ಕೊನೆಯ ಸಲವಾಗಿತ್ತು.

ತಿವರ್ ಟಾಂಗನೂ ಸುಖಿಯಾಗಿದ್ದಿಲ್ಲ. ದೇಶಾಂತರಕ್ಕೆ ವಲಸೆ ಹೋಗುವ ಯೋಚನೆಯು ಅವನನ್ನು ತಂದೆಯಿಂದ ಅಗಲಿಸುತ್ತಿತ್ತು.— ಏಕೆಂದರೆ ಮುದಿ ಟಾಂಗ ಹಿಂಟಾಕ ಬಿಟ್ಟು ಹೋಗಲು ಎಂದಿಗೂ ಸಿದ್ಧನಿದ್ದಿಲ್ಲ. ಮತ್ತು ಸೂಕಿಯ ಖ್ಯಾತಿ ಮತ್ತು ತನ್ನ ಸ್ವಂತದ ಅಭಿಮಾನಿಗಳ ಸಲುವಾಗಿ ಅಲ್ಲದಿದ್ದರೆ ಆತ ಈ ಯೋಜನೆಯನ್ನೇ ಕೊನೆಯ ಘಳಿಗೆ ಬಿಟ್ಟುಕೊಡಲು ತಿವರ್ ಸಿದ್ಧನಿದ್ದನು. ಆ ಕೋಣೆಯ ಹಿಂಭಾಗದಲ್ಲಿ ಕೂತು ಆತ ಅವಳನ್ನೂ ಬೆಂಕಿಯನ್ನೂ ಪೆಟ್ಟಿಗೆಗಳನ್ನೂ ವ್ಯಗ್ರವೃತ್ತಿಯಿಂದ ನೋಡುತ್ತಿದ್ದನು. ಒಂದು ಸಂಗತಿಯನ್ನು ಆತ ಆ ಸಂಜೆಗೆ ವಿಶೇಷವಾಗಿ ಗಮನಿಸಿದ್ದನು—ಅವಳು ಅಸ್ವಸ್ಥಳಾಗಿದ್ದಳು. ಕೆಲಸದಲ್ಲಿ ಅಸ್ಥಿರಳಾಗಿದ್ದಳು. ಕೂತುಳಿಯಲು ಅವಳಿಗೆ ಸಾಧ್ಯವೇ ಆಗುತ್ತಿದ್ದಿಲ್ಲ, ಮತ್ತು ಎದ್ದು ಕಾಣುವಷ್ಟು ಮಟ್ಟಿಗೆ ಕುಗ್ಗಿ ಹೋಗಿದ್ದಳು,

'ಕೊನೆಗೂ ಹೊರಟು ಹೋಗಬೇಕಾಗಿಬಂತಲ್ಲಾ, ಎಂದು ದುಃಖಪಡುತ್ತೀಯಾ ಸೂಕಿ?' ಆತ ಕೇಳಿದನು.

ಅವಳು ಅನಿಚ್ಛೆಯಿಂದಲೇ ಎಂಬಂತೆ ನಿಟ್ಟುಸಿರುಬಿಟ್ಟಳು. 'ಹಾಗೆ ಅನಿಸು

ತ್ತಿದೆಯೊ ಏನೊ ನನಗೆ ಗೊತ್ತಿಲ್ಲ. ಆದರೆ ಹುಟ್ಟಿದೂರು ಬಿಟ್ಟು ದೂರ ಹೋಗುವ ಹಾಗೆ ಅನಿಸುವುದು ಸಹಜವಲ್ಲವೆ ?

' ಆದರೆ ನೀನು ಇಲ್ಲಿ ಹುಟ್ಟಿದವಳಲ್ಲ—ನನ್ನ ಹಾಂಗೆ '

' ಇಲ್ಲ ನಿಜ.'

' ನಂಗೆ ಅನಿಸುತ್ತದೆ, ನಿನ್ನ ಜತೆ ಬರಬೇಕೆಂದು ಅನಿಸುವ ಜನ ಹಿಂದೆ ಬಿಟ್ಟು ಹೋಗಬೇಕಾಗಿದೆ.'

' ಹಾಂಗೇಕೆ ಅಂತೀಯ ?

' ನಾ ಬಹಳಷ್ಟು ಕೇಳಿದ್ದೇನೆ ಮತ್ತು ಕಂಡಿದ್ದೇನೆ. ಮತ್ತೆ ಹೇಳುತ್ತೇನೆ ಸೂಕೆ, ನಿನ್ನನ್ನು ಇಲ್ಲಿಂದ ಒಯ್ಯುವದು ಒಂದು ಒಳ್ಳೆಯ ಸಂಗತಿ—ನನ್ನ ಮಟ್ಟಿಗೆ. ಪರದೇಶ ದಲ್ಲಿ ಆತ ಹೇಗೂ ನಡೆಯಲಿ, ಇಲ್ಲಿ ನಮ್ಮೂರಲ್ಲಿ ಅದು ನಂಗೆ ಸಹನೆ ಆಗದು.'

ಈ ಮಾತುಗಳಿಂದ ಸೂಕೆಯ ಮೋರೆಯ ಅಸ್ವಸ್ಥಿಯ ಚರ್ಯೆ ಬದಲಾಗಲಿಲ್ಲ. ಅವಳು ಏನೂ ಉತ್ತರ ಕೊಡಲಿಲ್ಲ. ಅನಂತರ ಬೇಗನೆ ಆತ ತನ್ನ ಹಿತ್ತಿಲ ಆಚೆಯ ಮೂಲೆಯಲ್ಲಿ ದಿನನಿತ್ಯದ ಹೊಗೆಸೊಪ್ಪಿನ ಪೈಪು (ಚಿಲಿಮು) ಸೇದಲು ಎದ್ದು ಹೋದನು.

ಸೂಕೆಯ ಅಸ್ವಸ್ಥತೆಗೆ ತಿಮ್ ಸಂಶಯ ಪಟ್ಟ ಈ ಸದ್ಗೃಹಸ್ತನ ಅಸ್ತಿತ್ವವೆ ಕಾರಣವಾಗಿತ್ತು. ಆದರೆ ಅದು ಬೇರೊಂದು ಬಗೆಯಲ್ಲಿ ಅವಳಿಗೆ ನ್ಯಾಯವಾಗುವಂತೆಯೇ ಹೇಳುವುದಾದರೆ ಆತ ಭಾವಿಸಿದ್ದಕ್ಕಿಂತಲೂ ಹೆಚ್ಚು ಮುಗ್ಧಭಾವದಲ್ಲಿ ಕಾರಣವಾಗಿತ್ತು. ಫಿಟ್ಜಿಪಿಯರ್ಸ್ ಹಿಂಟಾಕಿಗೆ ವಾರದಲ್ಲಿ ಒಂದೆರಡುಸಲ ಗುಪ್ತವಾಗಿ ಬರುತ್ತಿರುವುದನ್ನು ಅವಳು ಹೇಗೋ ಯೋಗಾಯೋಗದಿಂದ ಕಂಡುಹಿಡಿದಿದ್ದಳು. ಮತ್ತು ಅವನ ಏಳು ಪಯಣಗಳಲ್ಲಿ ಈ ಸಂಜೆ ಒಂದು ಮುಚ್ಚಿನದೆಂದೂ ಆಕೆ ಅರಿತಿದ್ದಳು. ಮರುದಿನವೇ ದೇಶಾಂತರಕ್ಕೆ ಹೊರಡುವವಳಾದ್ದರಿಂದ ಅವನ ಇಣಕು ನೋಟವಾದರೂ ಪಡೆಯಬೇಕು. ಅವನಿಗೂ ಬೇರೆ ಯಾರಿಗೂ ಗೊತ್ತಾಗಬಾರದು. ಮೌನವಾಗಿ ಅವನಿಗೆ ಕೊನೆಯ ವಂದನೆ ಸಲ್ಲಿಸಿ ಬೀಳ್ಕೊಳ್ಳಬೇಕು. ಇಂಥ ಒಂದು ಭಾವನಾಮಯ ಅನುಭವ ತಾನು ಪಡೆಯುವದರಿಂದ ಯಾವ ದೊಡ್ಡ ಅಪಾಯವೂ ಇಲ್ಲವೆಂದು ಸೂಕೆ ಆಲೋಚಿಸಿದಳು. ಫಿಟ್ಜಿಪಿಯರ್ಸ್ ಅಲ್ಲಿಂದ ಹಾದು ಹೋಗುವ ಹೊತ್ತು ಹತ್ತಿರ ಬಂದಿತೆಂದು ಅರಿತು ಆಕೆ ತನ್ನ ಈ ಭಾವನೆಗಳನ್ನು ಬಚ್ಚಿಡದೆ ಹೋದಳು. ಆದ್ದರಿಂದ ತಿಮ್ ಕೋಣೆಬಿಟ್ಟು ಹೊರಟೊಡನೆಯೇ ಅವಳೂ ಸದ್ದು ಮಾಡದೆ ಮನೆಯ ಹೊರಗೆ ಬಿದ್ದಳು. ಆ ಡಾಕ್ಟರನು ಕಣ್ಣು ತಕ್ಕೆಯಲ್ಲಿ ಹಾದುಹೋಗುವದನ್ನು ನೋಡಲು ಶಕ್ಯವಾಗುವ ಹಿತ್ತಿಲ ಮೂಲೆಗೆ ಓಡಿದಳು. ಆತ ಇಷ್ಟರಲ್ಲಿಯೆ ಹೋಗಿದ್ದರೆ ಉಪಾಯವಿದ್ದಿಲ್ಲ.

ವಿರುದ್ಧ ದಿಕ್ಕಿನ ಮೂಲೆಯಲ್ಲಿದ್ದ ಹೂಬಳ್ಳಿಯ ಹಂದರದಡಿಗೆ ಹೊತ್ತು ಕಳೆಯುತ್ತಿರುವ ತಿಮ್‌ನಿಗೆ ಅವಳ ತಿಳಿಬಣ್ಣದ ಅರಳೆಯ ಬಟ್ಟೆಗಳು ಕಾಣುವಂತಿತ್ತು. ಆದರೆ ಆತ ಮಾತ್ರ ಅವಳಿಂದ ಮರೆಯಾಗಿದ್ದನು. ಅವಳು ಕಳ್ಳಗತ್ತಿನಿಂದ

ಬೇಲಿಯೊಳಗೆ ಏರಿ ಕುಳಿತಳು. ಅಲ್ಲಿಂದ ಬರಹೋಗುವವರ ಕಣ್ಣಿಗೆ ಬೀಳದೆ ಹಾದಿಯನ್ನು ನಿರೀಕ್ಷಿಸುವದು ಅವಳ ಉದ್ದೇಶವೆಂಬುದು ಯಾರಿಗೂ ಎಳ್ಳಷ್ಟು ಸಂಶಯು ಬರುವಂತಿದ್ದಿಲ್ಲ.

ತಿವರ್ ಈಚೆಗೆ ಸಾಗಿ ಬಂದು ಅವಳ ಹಿಂದುಗಡೆ ನಿಂತನು. ಸೂಕೆ ಬೆಚ್ಚಿಬಿದ್ದಳು. ಆತ ಅಷ್ಟು ಹತ್ತಿರವೆ ಇರಬಹುದೆಂಬುದನ್ನು ಆಕೆ ದಡ್ಡತನದಲ್ಲಿ ಮರೆಯುವ ತಪ್ಪು ಮಾಡಿದ್ದಳು. ಅವಳು ಒಮ್ಮೆಲೆ ಬೇಲಿಯಿಂದ ಕೆಳಗಿಳಿದಳು.

'ಹೀಗೊ, ಅವನು ಈ ಹೊತ್ತು ರಾತ್ರಿ ಬರುವನೋ' ತಿವರ್ ಚಿಕ್ಕದಾಗಿ ಚುಚ್ಚಿ ನುಡಿದನು. 'ಮತ್ತು ನಮಗೆ ನಮ್ಮ ಪ್ರೀತಿಯುವರನ್ನು ಕಾಣುವದೆಂದರೆ ಯಾವಾಗಲೂ ಲವಲವಿಕೆ ತಳವುಳ.'

'ಹೌದು ಅವನು ಈ ರಾತ್ರಿ ಬರುವನು. ಮತ್ತು ನಮಗೆ ನಮ್ಮ ಪ್ರೀತಿಯುವರನ್ನು ಕಾಣುವುದೆಂದರೆ ಯಾವಾಗಲೂ ಲವಲವಿಕೆಯೋ' ಆವಳು ಪ್ರತಿಭಟಿಸಿ ಅಂದಳು.

'ಹಾಗಾದರೆ ನೀನು ಮನೆಯೊಳಗೆ ಸ್ವಲ್ಪ ಕಾಲಿಡುವೆಯೊ? ನಿನ್ನ ಪ್ರೀತಿಯುವನು ಅಲ್ಲಿಯೇ ನಿನಗೆ ಬಂದು ಭೆಟ್ಟಿಯಾಗುವನು. ನಾಳೆ ನಸುಕಿಗೆ ಮೂರೂವರೆಯೊಳಗೆ ನಾವು ಎದ್ದು ಹೊರಡಬೇಕು. ಈಗ ಎಂಟರೊಳಗೆ ನಾವು ನಿದ್ದೆ ಹೋಗದಿದ್ದರೆ, ನಾಳೆ ಹಗಲೆಲ್ಲ ನಮ್ಮ ಮೋರೆಗಳು ಗೋಡೆಯ ಗಡಿಯಾರದ ಪೆಟ್ಟಿಗೆಯಂತೆ ಉದ್ದವಾಗಬಹುದು.'

ಆವಳು ಒಂದು ನಿಮಿಷ ಅನುಮಾನ ಮಾಡಿದಳು. ಆದರೆ ಕೊನೆಗೆ ಅವನ ಅವನ ಅಜ್ಞೆಯನ್ನು ಪಾಲಿಸಿದಳು. ಹಿತ್ತಲೊಳಗಿಂದ ನಡೆದು ಮೆಲ್ಲಗೆ ಮನೆಯನ್ನು ಸೇರಿದಳು. ಅವಳ ಬೆನ್ನಿಗೆ ಮಿಡ ಹಾಕಿದ ಸದ್ದು ಅವನು ಕೇಳಿದನು.

ತಿವರ್ ಮಿತಿಮೀರಿ ಕೆರಳಿಬಿಟ್ಟನು. ಈತನಕ ಅವನ ಮದುವೆ ಪೂರ್ತಿ ಅಪಯಶಸ್ವಿಯಾಗಿತ್ತು. ಕಟುವಾದ ಪಶ್ಚಾತ್ತಾಪಕ್ಕೆ ಮೂಲವಾಗಿತ್ತು. ಮತ್ತು ತನ್ನ ಈ ಸ್ಥಿತಿಯನ್ನು ಸುಧಾರಿಸುವ ಒಂದೇ ಕ್ರಮವೆಂದರೆ ಈ ದೇಶವನ್ನೇ ಬಿಟ್ಟುಹೋಗುವದಾಗಿತ್ತು. ಅದೂ ದುಃಖದ ಸಂಗತಿಯೇ. ಅಲ್ಲದೆ ಅಷ್ಟೇನು ಪರಿಣಾಮಕಾರಿಯೂ ಆಗುವಂತಿಲ್ಲ. ಏನೇ ಮಾಡಲಿ ಅವನ ಕೌಟುಂಬಿಕ ಆಕಾಶದಲ್ಲಿ ಆ ದಿನವಿಡೀ ಕಳವಳ ಕವಿದಿತ್ತು. ಅದೇ ರೀತಿ ಆತ ಚಿಂತಿಸಿದನು. ಚಿಂತಿಸಿದಷ್ಟು ಅವನ ಅಸಹನೆ ಬಲವಾಗಿ ರೇಗಿತು. ತನ್ನ ಈ ಅಸಂತೋಷದ ಪೇಚಿನ ಕಾರಣಕ್ಕೆ ಬಲವಾದ ಪೆಟ್ಟು ಕೊಡುವ ಒಂದು ಹಂಚಿಕೆಗಾಗಿ ಆತ ಒತ್ತಾಯಪಟ್ಟನು. ಕೆಲ ಗಳಿಗೆ ಆಲೋಚಿಸಿದರೂ ಆವನಿಗೆ ಅಂಥ ಒಂದು ಹಂಚಿಕೆ ಹೊಳೆಯಲಿಲ್ಲ. ಆದರೆ ಆಮೇಲೆ ಒಂದು ಕಲ್ಪನೆ ತೋಚಿತು.

ಫಕ್ಕನೆ ಒಂದು ನಿರ್ಧಾರಕ್ಕೆ ಬಂದು ಆತ ಹಿತ್ತಲಗುಂಟ ತ್ವರೆಯಿಂದ ಹೋದನು. ಆಚೆಯ ಒಂದು ಗುಡಿಸಲಿನ ಹಿತ್ತಲನ್ನು ಹೊಕ್ಕನು. ಅಲ್ಲಿ ಹಿಂದೆ ಒಬ್ಬ ಬೇಟೆಯಾಳು (ಬೆಟ್ಟದ ಕಾವಲುಗಾರ) ಉಳಿಯುತ್ತಿದ್ದನು. ತಿವರ್ ಹಾದಿಯಿಳಿದು ಆ ಮನೆಯ

ಹಿಂಗಡೆಗೆ ಹೋದನು. ಅಲ್ಲಿ ಸದ್ಯ ಒಬ್ಬ ಮುದುಕಿ ವಾಸಿಸುತ್ತಿದ್ದಳು. ಅಲ್ಲಿಯ ಗೋಡೆಯ ಹತ್ತಿರ ಹೋಗಿ ಆತ ನಿಂತನು. ಅಲ್ಲಿ ನೆಲ ಇಳಿಜಾರಾಗಿದ್ದರಿಂದ ಗುಡಿಸಲಿನ ಮುಂಜೂರು ಕೈಗೆ ನಿಲುಕುವಂತಿತ್ತು. ಅವನು ತನ್ನ ತೋಳನ್ನು ಆ ಸೂರಿನ ಕೆಳಗಡೆಗೆ ಒಳಗೆ ನೂಕಿದನು—ಗೋಡೆಯ ಮೇಲಿನ ಅವಕಾಶದಲ್ಲಿ ಕೈಯಾಡಿಸಿ ನೋಡಿದನು.

'ಓ , ನನ್ನ ನೆನಪು ನನಗೆ ಕೈಕೊಡಲಿಲ್ಲ,' ಆತ ಮಾತಿಲ್ಲದೆ ತುಟಿಯಾಡಿಸಿ ಪಿಸುಗುಟ್ಟನು. ಸ್ವಲ್ಪ ಪ್ರಯಾಸದಿಂದ ಆತ ಜೇಡರಬಲೆ ಸುತ್ತಿದ ಕಬ್ಬಿಣದ ಚೌಕಟ್ಟಿನ ಒಂದು ಸಾಮಾನನ್ನು ಕೆಳಗೆಳೆದುಕೊಂಡನು. ಅದು ಮೂರು ಅಡಿ ಉದ್ದ ಅರ್ಧ ಅಡಿ ಅಗಲವಿತ್ತು. ಹೊತ್ತು ಕಟಿದ ಬಾಡುವ ಬೆಳಕಿನಲ್ಲಿ ಸಾಧ್ಯವಿದ್ದಷ್ಟು ಕಣ್ಣು ಬಿಟ್ಟು ತಿವ್ ಆ ವಸ್ತುವನ್ನು ಧ್ಯಾನಿಸಿದನು.

'ಇದು ಅವನ ಆ ಚೆಂದ ಕಾಲ ಮೂಳೆಗಳನ್ನು ಅಂದಗೆಡಿಸುವುದೆಂದು ನನ್ನ ಲೆಕ್ಕ.' ಆತ ಅಂದನು.

ಅದು ಕಳ್ಳರನ್ನು ಹಿಡಿದಿಡುವ ಬೋನು ಆಗಿತ್ತು.

೪೭

ಭದ್ರವಾದ ಕಲಾತ್ಮಕ ಚಿತ್ರಹಿಂಸೆಯನ್ನು ಕೊಡಮಾಡುವುದಕ್ಕಾಗಿ ತಯಾರಿಸಿದ ಸಾಧನಗಳ ಉತ್ತಮಿಕೆಗೆ ಅನುಗುಣವಾಗಿ ಅಂಥ ಸ್ವಯಂಚಾಲಿತ ಯಂತ್ರಗಳ ಶೋಧಕರ ಅನುಕ್ರಮವನ್ನು ಸಿದ್ಧಮಾಡುವದಾದರೆ ಆ ಕಳ್ಳರನ್ನು ಹಿಡಿಯುವ ಬೋನಿನ ಸೃಷ್ಟಿಕರ್ತನು ತೀರ ಉನ್ನತನಲ್ಲದಿದ್ದರೂ ತುಂಬ ಮನ್ನಣೆಯ ಸ್ಥಾನವನ್ನು ಪಡೆಯಬಹುದು.

ಅದರಲ್ಲಿಯೂ ಆ ವನಪಾಲಕನ ಹೊರಕೊಟ್ಟಿಗೆಯಲ್ಲಿ ಸಿಕ್ಕ ಆ ವಿಶಿಷ್ಟ ರೂಪದ ಕಳ್ಳರ ಬೋನು ಕಂಡುಹಿಡಿದ ಕಲ್ಪಕ ಒಂದು ಮಾದರಿಯವನೆಂದು ಹೇಳಬೇಕು. ಏಕೆಂದರೆ ತಿವ್‌ನು ಅಗೆದು ಹೊರತೆಗೆದ ಈ ಮಾದರಿಯ ಪಕ್ಕದಲ್ಲಿ ಬೇರೆ ಆಯ — ಆಕಾರಗಳ ಪಂಜರಗಳನ್ನು ಸಾಲಾಗಿ ಇಟ್ಟರೆ ಸಂಚಾರೀ ಪ್ರಾಣಿ ಸಂಗ್ರಹಾಲಯದಲ್ಲಿ ಹಿರೆಹುದ್ದೆಯ ಸ್ಥಾನದಲ್ಲಿದ್ದ ಹುಲಿ ಅಥವಾ ಸಿಂಹದೊಂದಿಗೆ ಕರಡಿಗಳೂ ಕಾಡು ಕೋಣಗಳೂ ತೋಳಗಳೂ ವಹಿಸುವ ಗೌಣ ಸ್ಥಾನವನ್ನು ಅವು ಪಡೆಯುತ್ತಿದ್ದವು. 'ಮೆರಿ ಇಂಗ್ಲೆಂಡ್' (ಸೊಗಸುಗಾರ ಇಂಗ್ಲೆಂಡು) ಎಂದು ಹಿಂದಿನಿಂದ ಕರೆಯಿಸಿಕೊಂಡ ಆ ಕಾಲಖಂಡದ ನೈಜವಾದ ಅವಧಿಯ ಶತಮಾನಗಳಲ್ಲಿ—ವಿಶೇಷತಃ

ಗ್ರಾಮಾಂತರದ ಪ್ರಾಂತಗಳಲ್ಲಿ — ಇಂಥ ಯಂತ್ರಗಳ ಹಲವು ಮಾದರಿಗಳು ಬಳಕೆಯಲ್ಲಿದ್ದರೂ, ಅವು ಹತ್ತೊಂಬತ್ತನೆಯ ಶತಮಾನದ ಮೂರನೆಯ ದಶಕದವರೆಗೂ ಪ್ರಚಲಿತವಾಗಿದ್ದರೂ, ಈ ಒಂದು ಮಾದರಿಗೆ ಅಗ್ರಸ್ಥಾನ ಸಲ್ಲುತ್ತಿತ್ತು. ತೋಟಗಳಿಗೆ ಎಸ್ಟೇಟುಗಳಿಗೆ ಹೊಸ ಹೊಸ ಮಾದರಿಗಳ ಅವಶ್ಯಕತೆಯಿದ್ದಾಗಲೂ ಈ ಮಾದರಿಯ ಬೋನನ್ನೆ ಅನುಕರಿಸಲಾಗುತ್ತಿತ್ತು.

ಮೃದುಹೃದಯದ ಜಮೀನುದಾರರು ಅಲ್ಲಲ್ಲದ ಮಾದರಿಗಳನ್ನು ಬಳಸುತ್ತಿದ್ದರು. ಅವರ ಕನಿಕರ ತಿರಸ್ಕಾರಕ್ಕೆ ಯೋಗ್ಯವಿತ್ತು. ಈ ಬೋನುಗಳ ದವಡೆಗಳು ಹಲ್ಲು ಕಳೆದುಕೊಂಡು ಬರೆ ಒಸಡು ಉಳಿದ ಬಚ್ಚಬಾಯಿಯ ಮುದುಕಿಯ ದವಡೆಗಳನ್ನು ಹೋಲುತ್ತಿದ್ದವು. ಅನಂತರ ನಡುಮಟ್ಟದವು ಅರೆ ಹಲ್ಲಿನ ಮಾದರಿಗಳು. ಮಧ್ಯಮ ಸ್ವಭಾವದ ಹಳ್ಳಿಯ ವತನದಾರರು ಅಥವಾ ತಮ್ಮ ಹೆಂಡಂದಿರ ಕೈಯಲ್ಲಿ ಬುದ್ಧಿ ಕೊಟ್ಟಂಥವರು ಆಯೋಜಿಸಿದಂಥವು; ಎರಡು ಅಂಗುಲ ಮರುಕ, ಎರಡು ಅಂಗುಲ ಕ್ರೌರ್ಯ, ಎರಡಂಗುಲ ಚಿಮಟಿಗೆ, ಎರಡಂಗುಲ ದಬ್ಬಣ—ಹೀಗೆಲ್ಲ ಅವುಗಳ ದವಡೆಗಳಗುಂಟ ಹಲ್ಲು ಇರುತ್ತಿದ್ದವು. ಇನ್ನು ಇವುಗಳಿಂದ ಬೇರೆಯೇ ಒಂದು ವರ್ಗವಾಗಿ ಗಾಯಗೊಳಿಸುವ, ಜಜ್ಜುವ, ಮಾಂಸವನ್ನು ಪರಚದೆ ಬರೆ ಎಲುಬನ್ನು ಜಜ್ಜುವ, ದವಡೆಯುಳ್ಳ ಬೋನುಗಳೂ ಇದ್ದವು.

ಇಂಥ ಒಂದು ಬೋನು ಜೋಡಿಸಿಟ್ಟರೆ ಅದರ ನೋಟ ಅದಕ್ಕೆ ಜೀವಕಳೆ ತುಂಬಿದಂತೆ ಕಣ್ಣುಕಟ್ಟುತ್ತಿತ್ತು. ಶಾರ್ಕಮೀನು (ಕಡಲ ಹುಲಿ), ಮೊಸಳೆ, ಮತ್ತು ಚೇಳು ಇವುಗಳ ಜೋಡಣೆಯ ಒಂದು ಸ್ವರೂಪವನ್ನು ಅದು ಪ್ರದರ್ಶಿಸುತ್ತಿತ್ತು. ಒಂದೊಂದು ಹಲ್ಲೂ ಚೂಪಾಗಿ ಮೇಲೆದ್ದು ಮೊನೆಗೊಂಡ ಒಂದು ಮುಳ್ಳಿನಂತೆ ಇತ್ತು. ೬ ದವಡೆಗಳು ಮುಚ್ಚಿಕೊಂಡಾಗ ಅವು ಒಂದು ಬಿಟ್ಟು ಒಂದು ಆಚೆ ಈಚೆಯಿಂದ ಕಚ್ಚಿ ನಿಲ್ಲುತ್ತಿದ್ದವು. ಅವು ತೆರೆದಾಗ ಅರೆಸುತ್ತುಗಳು ೨–೩ ಅಡಿ ವ್ಯಾಸದ ಒಂದು ಪೂರ್ತಿ ವರ್ತುಳವನ್ನುಂಟುಮಾಡಿದ್ದವು. ಅವುಗಳ ನಡುವಿನ ಹಲಗೆ, ಹೆಜ್ಜೆ ಇಡುವ ಮೆಟ್ಟುಮಣೆ ಆ ವರ್ತುಳದ ನಡುವೆ ಒಂದು ಅಡಿ ಅಗಲದ ಚಚ್ಚೌಕಾಗಿತ್ತು. ಅದರ ಕೆಳಗಿನಿಂದ ಆ ಯಂತ್ರದ ಜೀವಾಳ, ಎರಡು ಸ್ಪ್ರಿಂಗುಗಳ ಸುರುಳಿಗಳು ಚಾಚಿದ್ದವು. ಅವು ಒಂದೊಂದು ಸೆಟೆದುಕೊಂಡ ತನ್ನ ಬಿರುಸಿನಲ್ಲಿ ಕಳ್ಳ ಕಾಲಿಟ್ಟಾಗ ಸೊನ್ನೆಯಂತೆ ಅವಶ್ಯವಾದ ಕೆಲಸವನ್ನು ಕೊಡುತ್ತಿದ್ದವು. ದೇಹದ ಇಡಿಯ ಭಾರವೆ ಅವನನ್ನು ಕೆಳಗೆ ಒತ್ತುತ್ತಿತ್ತು. ಆದರೆ ಈಗ ಜಂಗು ಹತ್ತಿ ಅವುಗಳ ಕಸುವು ಕುಗ್ಗಿತ್ತು.

ತಿವರ್‌ನ ಮುತ್ತಜ್ಜ ಇಂಥ ಬೋನಿನಲ್ಲಿ ಒಂದು ರಾತ್ರಿ ಆರು ತಾಸು ಸಿಕ್ಕಿ ಬಿದ್ದಿದ್ದ. ಹಣ್ಣುಗಳ್ಳರನ್ನು ಹಿಡಿದು ಹಾಕುವದೊಂದು ಮೋಜಿನ ಆಟವಾಗಿತ್ತು, ಹಿಂಟಾಕದ ಹುಡುಗರಿಗೆ. ತಿವರ್ ಆ ಬೋನು ಹೊತ್ತು ಮನೆಗೆ ತಂದು ತನ್ನ ತೋಟಕ್ಕೆ ಅದು ಸರಿಯಾಗಿ ಕೆಲಸ ಕೊಡುವುದೋ ನೋಡಿಕೊಂಡ; ಮತ್ತು ಒಂದು ಪೊದೆಯ ಮರೆಗೊಯ್ದು, ತೋಟದ ಗಡಿಯಾಚೆ ಸುಳಿದಾಡಿ ನೋಡಿಬರಲು ಹೊರ

ಟನು ಮತ್ತು ಇತರ ಸುಳಿವು ಕಂಡು ಹಿಡಿಯಲು ಗಸ್ತು ತಿರುಗಲಿಕ್ಕೆ ಮುಂದೆ ನಡೆದನು. ಹಿಂದೆ ಹೇಳಿದಂತೆ ಕೆಲಸಲ ದಿವಸಗಟ್ಟಲೆ ಈ ದಾರಿಯಿಂದ ಯಾರೂ ಸುಳಿದಾಡು ತ್ತಿದ್ದಿಲ್ಲ. ಆದರೆ ಬೇಕಾದವನೊಬ್ಬ ಬಿಟ್ಟು ಬೇರೆ ಯಾರೊಬ್ಬ ಹಾದಿಹೋಕ ಆ ದಾರಿ ಯಿಂದ ಬರುವ ಸಂಭವವಿತ್ತು ಮತ್ತು ತನ್ನ ಬಲಿಯ ಗುರುತು ಹಿಡಿಯುವುದರಲ್ಲಿ ತುಂಬ ಕಾಳಜಿ ವಹಿಸುವುದು ತಿವರ್‌ನ ಕರ್ತವ್ಯವಾಗಿತ್ತು.

ಬಲಗಡೆಗೆ ಏರಿಯಗುಂಟ ಒಂದು ನೂರುಗಜ ಮುಂದೆ ಹೋಗಿ ಅವನು 'ಹೊಲ್ಲಿ' ಪೊದೆಗಳು ದಟ್ಟವಾಗಿ ಬೆಳೆದ ಒಂದು ಗೋಣೆಗೆ ಬಂದು ತಲ್ಪಿದನು. ಅದರಾಚೆಗೆ ಕೆಲವು ಅಂತರದವರೆಗೆ ಬೆಟ್ಟ ಬಯಲಾಗಿತ್ತು ಮತ್ತು ಫಿಟ್ಜ್‌ಪಿಯರ್ಸ್ ಅಲ್ಲಿಗೆ ಬರಬೇಕಾದರೆ ಅನುಸರಿಸಬೇಕಾದ ಮಾರ್ಗವು — ಆತ ಈ ರಾತ್ರಿಗೆ ಬರುವ ದಾದರೆ — ದೂರದಿಂದಲೇ ಕಾಣುತಿತ್ತು.

ಕೆಲವು ಹೊತ್ತು ಅವನದಾಗಲಿ ಬೇರೆ ಯಾರದಾಗಲಿ ಸುಳಿವೇ ಇರಲಿಲ್ಲ. ಆಮೇಲೆ ನಡುದೂರದ ಮಬ್ಬಿನಲ್ಲಿ ಒಂದು ಬಿಂದುವು ಆಕಾರಗೊಂಡಿತು — ಬ್ರಶವುಡ್ ಕಂಟೆಗಳ ಇಕ್ಕೆಲಗಳ ದಟ್ಟಣೆಯ ನಡುವೆ ಈ ಬಿಂದು ದೊಡ್ಡದಾಗತೊಡಗಿತು. ಮತ್ತು ಹುಲ್ಲಜಡ್ಡಿಯ ಮೇಲೆ ಹೆಜ್ಜೆಗಳು ಹೊಸೆದು ಬರುವ ಸದ್ದು ತಿವರ್‌ನಿಗೆ ಕೇಳಿಸಿತು. ಆ ಬೀಸಾಗಿ ಬರುವ ರೀತಿಯೂ, ಆತನ ಸರಿಯಾದ ರೇಖಾಕೃತಿ ಕಾಣುವ ಮೊದಲೆ ಬರುವಾತನು ಫಿಟ್ಜ್‌ಪಿಯರ್ಸನೆಂದು ಸೂಚಿಸಿತು.

ತಿವರ್ ಟಾಂಗ ಸುತ್ತ ತಿರುಗಿ ದಿಬ್ಬದ ವಿರುದ್ಧ ಬದಿಯ ಇಳಕಲುಗುಂಟ ಓಡಿದನು. ತಿರುಗಿ ತನ್ನ ಹಿತ್ತಲಿನ ತುದಿಗೆ ಬಂದು ತಲುಪಿದನು. ಕಳ್ಳರ ಹಿಡಿಯುವ ಬೋನನ್ನು ಹೊರಗೆಳೆದು, ಎರಡು ಎಳೆ ಓಕಮರಗಳ ನಡುವಿನ ಅವಕಾಶದೆಡೆಗೆ ಅವನ್ನು ಮೆಲ್ಲಗೆ ಎಳೆದು ಒಯ್ದನು. ಜೋರಾಗಿ ಜಗ್ಗಿದರೆ ಅದರ ಮೆಟ್ಟುವಣೆ ಕುಸಿದು ಬೀಳುತ್ತಿತ್ತು. ಆ ಓಕಮರಗಳು ಇಂಗ್ಲಿಷ್ ' ವಿ ' ಆಕಾರದಲ್ಲಿ ಆಚೆ ಈಚೆ ಬೆಳೆದು ಚಾಚಿದ್ದವು. ಅವುಗಳ ಬುಡಗಳು ಮಾತ್ರ ಹತ್ತಿರಕ್ಕೆ ಇದ್ದವು. ಹಿಂದೆಲ್ಲ ಕಂಟಿಗಳು ಹಬ್ಬಿದ್ದವು. ಆದ್ದರಿಂದ ಕಾಲುದಾರಿಯಲ್ಲಿ ಬರುವವರಿಗೆ ಇದರೊಳಗಿಂದ ನಡೆದುಬರಲೇ ಬೇಕಿತ್ತು. ಈ ಅವಕಾಶದಲ್ಲಿ ಆತ ಈ ಬೋನು ಜೋಡಿಸಿ ಇಟ್ಟನು. ಅದೇ ಮೆಲ್ಲಗಿನ ಕೈವಾಡದಿಂದ ಆ ಬೋನಿನ ಸರಪಳಿಯನ್ನು ಒಂದು ಮರಕ್ಕೆ ಸುತ್ತಿ ಬೀಗ ಹಾಕಿ ಆ ದವಡೆಗಳ ಕಾಪಿನ ಕೀಲನ್ನು ಜಾರಿಸಿಟ್ಟನು. ಬೋನು ಜೋಡಿಸು ವವನ ತೋಳಿಗೆ ಆ ದವಡೆ ಆಕಸ್ಮಾತ್ತಾಗಿ ಕಚ್ಚಿ ಹಿಡಿಯದಂತೆ ಈ ಕವಚವಿತ್ತು. ಇವೆಲ್ಲ ಸಿದ್ಧತೆಗಳನ್ನು ಮಾಡಿದ ನಂತರ ತಿಮ್ ಹತ್ತಿರದ ಬೇಲಿಯೊಳಗಿಂದ ಜಿಗಿದು ಹಾದಿ ಗುಂಟ ಓಡಿ, ಮೆಲ್ಲಗೆ ತನ್ನ ಮನೆಯನ್ನು ಪ್ರವೇಶಿಸಿದನು.

ಅವನ ಆಜ್ಜಿಗೆ ತಲೆಬಾಗಿ ಸೂಕೆ ನಿದ್ದೆ ಹೋಗಿದ್ದಳು. ಬಾಗಿಲಿಕ್ಕಿ ಮಿಡಹಾಕಿದ ಕೂಡಲೆ ತಿವರ್ ಬೂಟುಬಿಚ್ಚಿ ದೂರ ಒದ್ದೊಗೆದನು—ಮಾಳಿಗೆಯ ಮೆಟ್ಟಲುಗಳಡಿಗೆ. ಮತ್ತು ಮೇಣಬತ್ತಿಯನ್ನುರಿಸದೆ ಅಡ್ಡಾಗಲು ಅಣಿಯಾದನು. ಆದಷ್ಟು ಬೇಗ ಬಟ್ಟೆ

ಕಳಚಿ ಮಲಗಲು ಹೋಗುವುದು ಅವನ ಉದ್ದೇಶ. ಆದರೆ ಅವನ ಈ ಚಟುವಟಿಕೆಗಳು ಮುಗಿಯುವ ಮುಂಚೆಯೇ ಹೊರಗೆ ಒಂದು ದೀರ್ಘವಾದ ಕೂಗು ಮೊಳಗಿತು — ಅದು ಇರುಳನ್ನು ಭೇದಿಸುವಂತಿತ್ತು. ಆದರೆ ಯಾರೆಂದು ಗೊತ್ತಾಗುವಂತೆ ಇದ್ದಿಲ್ಲ.

'ಏನದು?' ಸೂಕೆ ದಿಗಿಲುಬಿದ್ದು ದಿಗ್ಗನೆ ಎದ್ದು ಕೂತು ಅಂದಳು.

'ಯಾರೋ ಮೊಲವನ್ನು ಬೋನಿನಲ್ಲಿ ಹಿಡಿದಂತೆ ಕಾಣುತ್ತದೆ.'

'ಓ ಇಲ್ಲ' ಅವಳೆಂದಳು 'ಇದು ಮೊಲವಲ್ಲ. ಅದಕ್ಕೂ ದೊಡ್ಡ ದನಿ, ಕೇಳು.'

'ನೀನು ಸುಮ್ಮನೆ ಬಿದ್ದುಕೊ,' ತಿಮ್ ಅಂದನು. 'ಇಲ್ಲದಿದ್ದರೆ ಮೂರುವರೆ ಗಂಟೆಗೆ ಹೇಗೆ ಏಳುವಿ?'

ಅವಳು ಅಡ್ಡಾದಳು ಮತ್ತು ಸುಮ್ಮನಾದಳು. ತಿಮ್ ಕಳ್ಳಹೆಜ್ಜೆಯಲ್ಲಿ ಎದ್ದು ಕಿಟಕಿಯನ್ನು ತೆರೆದು ಕಿವಿಗೊಟ್ಟನು. ಮನೆಯ ಸುತ್ತಲಿನ ವಿವಿಧ ಮಾದರಿಯ ಮರಗಳ ವಾದ್ಯದ ಮಂದಸ್ವರ ಮೇಳವನ್ನು ಮೀರಿ ಕಳ್ಳರಬೋನು ಜೋಡಿಸಿಟ್ಟ ಎಡೆಯಿಂದ ಸರಪಳಿ ಜಗ್ಗಿದ ಸದ್ದು ಅವನಿಗೆ ಕೇಳಿಸಿತು. ಆದರೆ ಅದರಾಚೆಯ ಮಾನವೀಯ ಶಬ್ದವೇನೂ ಬರಲಿಲ್ಲ.

ತಿಮ್ ಗೊಂದಲದಲ್ಲಿ ಬಿದ್ದನು. ತನ್ನ ಹೆಂಡತಿಯ ಗಡಿಬಿಡಿಯಲ್ಲಿ ಆತ ಇಂಥ ಕೂಗಿನ ಲೆಕ್ಕ ಹಾಕಿದ್ದಿಲ್ಲ. ಇನ್ನು ಒಂದೇ ಕೂಗು ಏಕೆ? ಒಂದಿದ್ದರೆ ಇನ್ನೊಂದು ಇನ್ನಿಷ್ಟು ಏಕೆ ಇಲ್ಲ? ಆದರೆ ಇದಕ್ಕೆ ಉತ್ತರ ನೀಡುವ ಯತ್ನವನ್ನು ಆತ ಬೇಗನೆ ಬಿಟ್ಟುಕೊಟ್ಟನು. ಅವನ ಪಾಲಿಗೆ ಹಿಂಟಾಕ ಹಳ್ಳಿ ಈಗಾಗಲೇ ಸತ್ತಂತೆ. ಇನ್ನು ಆರೇಳು ತಾಸುಗಳಲ್ಲಿ ಅವನು ಅದರ ಬಾಳಿನ ಪರಿಧಿಯಿಂದ ಹೊರಗೆ ದಕ್ಷಿಣ ಧ್ರುವದತ್ತ ಒಯ್ಯುವ ಹಾದಿಯಲ್ಲಿ ಇರುವನು. ಆತ ಕಿಟಕಿಯನ್ನು ಮುಚ್ಚಿ ಅಡ್ಡಾದನು.

ತಿಮ್‌ನ ಈ ಚಟುವಟಿಕೆಗಳಿಗೆ ಜನ್ಮಕೊಟ್ಟ ಆ ತಾಸು ಬೇರೆಡೆಗೆ ಇದಕ್ಕೂ ಹೆಚ್ಚು ಸಕ್ರಿಯವಾಗಿ ಸಾಗಿತ್ತು. ಗಂಡನನ್ನು ಭೆಟ್ಟಿಯಾಗಲು ನೇಮಕವಾದ ಗಳಿಗೆಗಾಗಿ ತಂದೆಯ ಮನೆಯಲ್ಲಿ ಕಾಯುತ್ತಾ, ಗ್ರೇಸಳು ಹಲವು ವಿಷಯಗಳನ್ನು ಕುರಿತು ಚಿಂತಿಸಿದಳು. ಈಗ ಹೊರಗೆ ಹೊರಡುವ ಮುಂದೆ ತನ್ನ ತಂದೆಗೆ, ತನ್ನ ಹಾಗೂ ಎಡ್ರೆಡ್‌ನ ನಡುವಿನ ಅಗಲಿಕೆ, ಆತ ಭಾವಿಸಿದಷ್ಟು ಅಥವಾ ಅವಳ ಸುಖಕ್ಕೆ ಅಗತ್ಯವೆನಿಸಿದಷ್ಟು ಪೂರ್ತಿಯಾಗಿ ಇರುವುದಿಲ್ಲವೆಂಬುದನ್ನು ತಿಳಿಸಬೇಕೆ? ಆದರೆ ಹಾಗೆ ಮಾಡಿದರೆ ಕೆಲಮಟ್ಟಿಗೆ ಅವಳು ತನ್ನ ಗಂಡನ ಪರವಾಗಿ ಕ್ಷಮೆಗಾಗಿ ವಾದಿಸಿದಂತೆ. ಅಷ್ಟುತನಕ ಆಕೆ ಸಿದ್ಧಳಿದ್ದಿಲ್ಲ.

ಅವನ ಮಟ್ಟಿಗೆ ಹೇಳುವದಾದರೆ ಆತನು ಅವಳನ್ನು ಅನುಕಂಪ ಮೃದುವಾದ ಗಾಂಭೀರ್ಯದ ವೃತ್ತಿಯಲ್ಲಿಯೇ ಇಟ್ಟಂತೆ ಇತ್ತು. ನಿಜವಾಗಿಯೂ ಆತ ಬದಲಾಗಿದ್ದನು. ಆತ ಎಂಥ ಪರಿಸ್ಥಿತಿಯಲ್ಲಿಯೂ ಅವಳ ಕುರಿತು ಯಾವಾಗಲೂ ರೀತಿಯಲ್ಲಿ ಸೌಮ್ಯನಾಗಿಯೇ ಇದ್ದನು. ಇನ್ನಾದರೂ ಅವನನ್ನು ಪ್ರಾಮಾಣಿಕ ಹಾಗೂ

ಯೋಗ್ಯತೆಯುಳ್ಳ ಗಂಡನಾಗಿ ಮಾರ್ಪಡಿಸುವುದು ಆಕೆಗೆ ಸಾಧ್ಯವೆ? ಅವಳು ಆತನನ್ನು ಮದುವೆ ಆಗಿದ್ದಳು. ಅದನ್ನು ಮರೆಮಾಚುವುದು ಶಕ್ಯವಿದ್ದಿಲ್ಲ. ಮತ್ತೆ ಈಗ ಅವನನ್ನು ಆಕೆ ಇನ್ನುಮುಂದೆ ದೂರವಿಡಬೇಕೆ? ತಾನು ಬರಹೋಗುವುದರ ಬಗೆಗೆ ಆತ ತೀರ ಅಲ್ಪ ಲಹರಿಗೂ ತುಂಬಾ ಸಭ್ಯತೆಯು ಆದರ ತೋರುತ್ತಿದ್ದನು. ಅವಳ ಗಂಡನೆಂಬ ಅಧಿಕಾರದಲ್ಲಿ ಆತ ಆ ಕುರಿತು ತುಸು ಅನುಗ್ರಹವನ್ನೇ ಕಾಣಿಸ ಬಹುದಿತ್ತು. ಆದರೆ ಕಾಯಿದೆಯಂತೆ ಗಂಡನಾಗಿಯೂ ಆತ ಹಾಗೆ ನಡೆಯುಲಿಲ್ಲ. ಅವನ ಶೀಲದ ಈ ಅಂಶವು ಅವಳಿಗೆ ಅನಪೇಕ್ಷವಿತ್ತು. ಅಷ್ಟೇ ಅದು ಆಕರ್ಷಕವೂ ಇತ್ತು. ಆಕೆ ಅವನ ಸಾಮ್ರಾಜ್ಞಿಯೂ ಆತ ಅವಳ ಗುಲಾಮನೂ ಆಗಿದ್ದರೆ, ಅವಳ ಇಚ್ಛೆಯು ವಿರುದ್ಧ ಅವಳ ಇದಿರು ನುಗ್ಗುವದನ್ನು ತಪ್ಪಿಸುವದರಲ್ಲಿ ಆತ ಇದಕ್ಕೂ ಹೆಚ್ಚು ಸೂಕ್ಷ್ಮ ಕಾಳಜಿ ವಹಿಸುತ್ತಿರಲಿಲ್ಲ.

ಏನೋ ಒಂದು ನೆನಪಾಗಿ ಅದರ ಒತ್ತಾಯಕ್ಕೆ ಆಕೆ ಪ್ರಾರ್ಥನಾ ಪುಸ್ತಕವನ್ನು ಕೆಳಗೆ ತೆಗೆದು ಅದರೊಳಗಿನ ವಿವಾಹದ ಸೂಕ್ತಗಳ ಭಾಗದತ್ತ ಹೊರಳಿದಳು. ಅದನ್ನು ಸಾವಕಾಶವಾಗಿ ಓದಿದಾಗ, ತನ್ನ ಇತ್ತೀಚೆಯ ಉದ್ಧಟವೃತ್ತಿಯ ಕುರಿತು ಅವಳು ತನಗೆ ತಾನೇ ಅಸಹ್ಯಪಟ್ಟುಕೊಂಡಳು. ಹಿಂಟಾಕಿನ ಆ ಹಳೆಯ ಚರ್ಚಿನಲ್ಲಿ ಅವಳು ಆದೆಷ್ಟು ಪವಿತ್ರ ಗಂಭೀರ ಶಪಥಗಳನ್ನು ಮಾಡಿದ್ದಳು. ಅದೂ ಮತ್ತೆ ಬಹಳಕಾಲದ ಹಿಂದೆ ಅಲ್ಲ. ಅವಳು ಸುದೀರ್ಘ ಚಿಂತನೆಯಲ್ಲಿ ತನ್ನನ್ನೆ ಮರೆತಳು—ಶಪಥ ಮಾಡುವಾಗ ಅದರ ಪೂರ್ತಿ ಅರ್ಥವನ್ನೂ ಶಕ್ತಿಯನ್ನೂ ಗುರುತಿಸಲಾರದೆ ಹೊತ್ತಂಥ ಶಪಥಗಳಿಂದ ಒಬ್ಬ ವ್ಯಕ್ತಿಯ ಮನಃಸಾಕ್ಷಿಯು ಎಷ್ಟುಮಟ್ಟಿಗೆ ಬದ್ಧವಾಗಿರಬಲ್ಲದು? ಯಾರನ್ನು ದೇವರು ಜತೆಗೂಡಿಸಿರುವನೂ—ಹೀಗೆ ಆರಂಭವಾಗುವ ಆ ವಾಕ್ಯವು ಬಲವಾದ ಭಕ್ತಿಭಾವನೆಯುಳ್ಳ ಸೌಮ್ಯ ಹೆಂಗಸಿಗೆ ಕಂಗೆಡಿಸುವಂತೆ ಮಾಡುವಂಥ ದಾಗಿತ್ತು. ಅವಳಿಗೆ ಸೋಜಿಗ ಸಂದೇಹ—ದೇವರು ನಿಜವಾಗಿಯೂ ತಮ್ಮಿಬ್ಬರನ್ನು ಜತೆಗೂಡಿಸಿದ್ದಾನೆಯೇ? ಈ ಕುರಿತು ಆಲೋಚನೆ ಮುಗಿಯುವ ಮುಂಚೆಯೇ ಅವಳು ಗಂಡನನ್ನು ಭೆಟ್ಟಿಯಾಗುವ ನಿಯಮಿತ ಸಮಯ ಸಮೀಪಿಸಿತು. ಮತ್ತು ಅವಳು ಮನೆಯಿಂದ ಹೊರಟಳು—ತಿಮ್ ಟಾಂಗ ತನ್ನ ಮನೆಗೆ ಅದೇ ಕ್ಷಣಕ್ಕೆ ತಿರುಗಿ ಹೋಗಿದ್ದನು.

ಈ ಆಯಕಟ್ಟಿನ ಸಂದರ್ಭಕ್ಕೆ ಅಲ್ಲಿಯ ವಸ್ತುಸ್ಥಿತಿಯು ಹೀಗಿತ್ತು. ಟಾಂಗನ ಹಿತ್ತಲಿನ ಬಲದ ತುದಿಗೆ ಇನ್ನೂರು ಗಜ ಅಂತರಕ್ಕೆ ಪಿಟ್ಸ್‌ಪಿಯರ್ಸ್ ಮುಂದುವರಿಯುತ್ತಲೆ ಇದ್ದನು. ಆತ ಬಹುತೇಕ ಬೆಟ್ಟ ಮುಚ್ಚಿದ ಆ ದಿಬ್ಬವನ್ನು ಏರಿ ತುದಿಗೆ ಬಂದಿದ್ದನು. ಆ ದಾರಿ ಮುಂದೆ ಆ ಎರಡು ಎಳೆಯ ಓಕಮರಗಳ ನಡುವಿನಿಂದ ಹಾಯುವುದೇ ಆಗಿತ್ತು. ಆದರೆ ಎಡಕ್ಕೆ ಇನ್ನೂರು ಗಜ ದೂರಕ್ಕೆ ಅಥವಾ ಅದಕ್ಕೂ ಕಡಿಮೆ ಅಂತರಕ್ಕೆ ಆತ ಊಹಿಸಲೇ ಶಕ್ಯವಿಲ್ಲದ ಒಂದು ಸನ್ನಿವೇಶ ನಿರ್ಮಾಣವಾಗುತ್ತಿತ್ತು.—ಮೇಲೆ ಹೇಳಿದಂತೆ ಗ್ರೇಸಳು ತನ್ನ ತಂದೆಯ ಹಿತ್ತಲಿನ ಮೇಲ್ಮುದಿಯಿಂದ

ಮುಂದುವರೆದು ಬರುತ್ತಿದ್ದಳು, ತಿವರ್‌ನ ಉದ್ದಿಷ್ಟ ಬಲಿಯನ್ನು ಭೆಟ್ಟಿಯಾಗಲಿಕ್ಕೆ. ಈ ಗಂಡ ಹೆಂಡಿರ ನಡುದಾರಿಯಲ್ಲಿ ಆ ರಾಕ್ಷಸೀ ಬೋನು ಸದ್ದಿಲ್ಲದೆ ಬಾಯಿ ಕಳೆದು ಸಿದ್ಧವಾಗಿತ್ತು.

ಆ ರಾತ್ರಿ ಫಿಟ್ಜ಼ಪಿಯರ್ಸ್‌ನ ಸಂಚಾರ ಉಲ್ಲಾಸಪೂರ್ಣವಾಗಿತ್ತು. ಏಕೆಂದರೆ ಅವನಿಗೆ ಈಗ ಮನದಟ್ಟಾಗಿತ್ತು—ತಾನು ಅನುಸರಿಸಿದ ಸೌಮ್ಯವೂ ಸಾವಕಾಶವೂ ಆದ ಪದ್ಧತಿಯು ಯಶಸ್ಸಿನ ಭರವಸೆ ಕೊಡುವಂತಿತ್ತು. ಗ್ರೇಸಳಲ್ಲಿ ತನ್ನ ಕುರಿತು ಕೊನರತೊಡಗಿದ ವಿಶ್ವಾಸದ ನಾಜೂಕಿನ ಮೊಗ್ಗೆಯನ್ನು ಕೊಲ್ಲದಂತೆ, ಆತ ತನ್ನ ಮೇಲೆಯೇ ನಡೆಯಿಸಬೇಕಾಗಿ ಬಂದ ಸಂಯಮವೇ ಅವನ ಅಭಿಲಾಷೆಯ ಜ್ವಾಲೆಯನ್ನು ಇನ್ನಷ್ಟು ಹೊತ್ತಿಸಿತ್ತು. ಆತ ಗ್ರೇಸಳಿಗಿಂತ ಬಹಳ ವೇಗದಿಂದ ನಡೆಯುತ್ತಿದ್ದನು. ಅವರಿಬ್ಬರಿಗೂ ಹಾಗೆಯೇ ನಡೆದಿದ್ದರೆ ಆತ ಆಕೆಗಿಂತ ಒಂದರಗಳಿಗೆ ಮುಂಚೆಯೇ ಆ ಬೋನಿನ ಬಳಿಗೆ ಬಂದು ಮುಟ್ಟುತ್ತಿದ್ದನು. ಆದರೆ ಈ ನಡುವೆ ಹೊಸದೊಂದು ಪ್ರಸಂಗ ಒದಗಿ ಬಂದಿತು. ಕದ್ದುಮುಚ್ಚಿ ಸುಳಿದಾಡುವವರ ಕಣ್ಣು ಕಿವಿಗಳಿಂದ ತಪ್ಪಿಸಿಕೊಳ್ಳಲು—ಅವರು ಇಂದಿನ ರಾತ್ರಿಯ ಈ ಭೆಟ್ಟಿಯನ್ನು ಮೇಲೆ ಹೇಳಿದ ದಿಬ್ಬದ ತುದಿಗೆ 'ಹೊಮುಮುರ'ದ ಬುಡಕ್ಕೆಂದು ಯೋಚಿಸಿದ್ದರು. ಆದ್ದರಿಂದ ಆ ಮೇರೆಗೆ ಆ ಮರವನ್ನು ತಲ್ಪಿದೊಡನೆ ಫಿಟ್ಜ಼ಪಿಯರ್ಸ್‌ನು ಅವಳಿಗಾಗಿ ಕಾಯುತ್ತ ನಿಂತುಬಿಟ್ಟನು.

ಅಲ್ಲಿಯ ಮೈ ಪರಚುವ ಎಲೆಗಳ ನಡುವೆ ಆತ ನಿಂತು ಎರಡು ಗಳಿಗೆ ಆಗಲಿಲ್ಲ, ಅಷ್ಟರಲ್ಲಿ ಆ ದಿಬ್ಬದ ಆಚೆಯ ಬದಿಯಿಂದ ಯಾರೊ ಚೀರಿಕೊಂಡಿದ್ದು ಕೇಳಿದಂತೆ ಅವನಿಗೆ ಭಾಸವಾಯಿತು. ಅದು ಏನಾಗಿರಬಹುದು ಆತ ತರ್ಕಕ್ಕೆ ಬಿದ್ದನು; ಆದರೆ ಆಗ ಇರುವ ಅಲ್ಪ ಸ್ವಲ್ಪ ಗಾಳಿಯೂ ವಿರುದ್ಧ ನಿಟ್ಟಿನಲ್ಲಿಯೇ ಬೀಸುತ್ತಿತ್ತು. ಮತ್ತು ಅವನ ವೃತ್ತಿಯೂ ಒಳ್ಳೆ ಗೆಲುವಿನದಾಗಿತ್ತು. ಹಿಂಟಾಕ ಹಳ್ಳಿಯಲ್ಲಿ ಹಳೆಯ ಇಂಗ್ಲಿಷ್ ಪರಂಪರೆಯಿಂದಲೂ ಪ್ರೇಮಿಕರ ನಡುವೆ ಉಳಿದು ಬಂದ ಮೂಢನಂಬಿಗೆಗಳ ವಿಚಿತ್ರ ಹಾಗೂ ವಿಕಟವಿನೋದದ ಹುಚ್ಚಾಟಗಳಿಗೆ ಸಂಬಂಧಪಟ್ಟ ಯಾವುದೋ ಕುಚೇಷ್ಟೆಯ ಸದ್ದಿನ ಮೂಲದಲ್ಲಿರಬೇಕೆಂದು ಆತ ಭಾವಿಸಿದನು. ಮತ್ತು ತಾನು ನಿಂತಲ್ಲಿಯೇ ಇನ್ನೂ ಹತ್ತು ಮಿನಿಟು ಕಾಯುತ್ತ ನಿಂತನು. ಆಮೇಲೆ ತುಸು ಅಸ್ವಸ್ಥತೆ ಅನಿಸಿ ಅವನ ಮನಸ್ಸು ಆ ಚೀರಿದ ದನಿಯತ್ತ ಮತ್ತೆ ಹೊರಳಿತು. ಆತ ಆ ತುದಿಯಿಂದ ಆಚೆಗೆ ಮುಂದರಿದು ಹಸಿರುಹುಂದರ ಇಳುಕುಗುಂಟ ಕೆಳಗೆ ನಡೆದನು. ಮತ್ತು ಇಕ್ಕಟ್ಟಾದ ದಾರಿ ತೆರೆದು ನಿಂತ ಆ ಅಕ್ಕತಂಗಿ ಓಕಮರಗಳ ಜೋಡಿಯ ಹತ್ತಿರ ಬಂದನು.

ಫಿಟ್ಜ಼ಪಿಯರ್ಸ್ ಎಡವಿದನು. ಮುಗ್ಗುರಿಸಿ ಬೀಳುವವನೇ ಇದ್ದನು. ತಾನು ಎಡವಿದ್ದು ಯಾವುದಕ್ಕೆಂದು ನೋಡಲು ಕೈಚಾಚಿದಾಗ ಅದಕ್ಕೆ ರೇಶಿಮೆಯ ಬಟ್ಟೆಯ ನೀರಿಗೆಗಳ ರಾಶಿ ಹಾಗೂ ಕಬ್ಬಿಣದ ಏನೊ ರಚನೆಯ ಸಂಪರ್ಕವಾಯಿತು. ಆದರೆ

ಇದು ಅವನ ಮನಸ್ಸಿಗೆ ಸ್ಪಷ್ಟೀಕರಣದ ಯಾವ ಕಲ್ಪನೆಯನ್ನೂ ಕೊಡದೆ ಹೋಯಿತು. ಬೆಂಕಿಕಡ್ಡಿಯನ್ನು ಕೆರೆಯುವದು ಒಂದು ಕ್ಷಣದ ಕೆಲಸವಾಗಿತ್ತು. ಮತ್ತು ಆಗ ಆತ ನೋಡಿದ್ದು ಅವನ ರಕ್ತವನ್ನೇ ಹೆಪ್ಪುಗಟ್ಟಿತು.

ಕಳ್ಳರ ಬೋನು ಮುಗಿದು ಬಿದ್ದಿತ್ತು. ಅದರ ದವಡೆಗಳ ನಡುವೆ ಒಬ್ಬ ಹೆಂಗಸಿನ ಉಡಿಗೆಯು—ಕಸೂತಿ ಕೆಲಸದ ರೇಶಿಮೆಯ ಲಂಗದ—ಚೂರು ಬಿರುಸಾಗಿ ಹಿಡಿದಿತ್ತು—ತೀರ ಬಿರುಸಾಗಿ ದವಡೆಯ ಕಬ್ಬಿಣದ ಹಲ್ಲುಗಳು ಅದರೊಳಗಿಂದ ಅದು ಪಾರಾಗಿ ಹೋಗಿ ಹತ್ತಿಪ್ಪತ್ತು ಕಡೆ ಅದಕ್ಕೆ ಛಿದ್ರಗಳನ್ನು ಮಾಡಿದವು. ಅವನಿಗೆ ಆ ಲಂಗದ ಗುರುತು ಒಮ್ಮೆಲೇ ಆಯಿತು.—ತನ್ನ ಹೆಂಡತಿಯದೇ ಒಂದು ಲಂಗ ಅದು. ಆ ಹಿಂದಿನ ಸಲ ಅವಳು ಅವನನ್ನು ಭೆಟ್ಟಿಯಾದ ಸಮಯ ಆಕೆ ಇದನ್ನು ತೊಟ್ಟಿದ್ದಳು.

ಹಿಂಟಾಕ ದೊಡ್ಡ ಮನೆಯಲ್ಲಿ ಸಂಗ್ರಹದಲ್ಲಿದ್ದ ಇಂಥ ಯಂತ್ರೋಪಕರಣಗಳ ಪರಿಣಾಮವನ್ನು ಆತ ಪರಿಶೀಲಿಸಿದ್ದನು. ಮತ್ತು ಅದೇ ಕ್ಷಣಕ್ಕೆ ಅವನೊಳಗಿಂದ ಈ ವಿಚಾರ ಮಿಂಚಿಹೋಯಿತು—ಗ್ರೇಸಳು ಇಂಥ ಒಂದು ಯಂತ್ರದಲ್ಲಿ ಸೆರೆ ಹಿಡಿಯಲ್ಪಟ್ಟಿರಬೇಕು. ಹಾದಿ ಹೋಕನಾರಿಂದಲೋ ಅವಳ ಛಿನ್ನವಿಚ್ಛಿನ್ನ ಅವಸ್ಥೆಯಲ್ಲಿ ಹೊರತೆಗೆಯಲ್ಪಟ್ಟು ಮನೆಗೆ ಒಯ್ಯಲ್ಪಟ್ಟಿರಬೇಕು ಮತ್ತು ಅವಳನ್ನು ಹೀಗೆ ಬಿಡುಗಡೆ ಮಾಡುವ ಕಷ್ಟದಲ್ಲಿ ಅವಳ ಬಟ್ಟೆಯ ಕೆಲವೊಂದು ಚೂರು ಹಿಂದೆ ಬಿಡಲ್ಪಟ್ಟಿರಬೇಕು. ಈ ದೃಢ ಮನವರಿಕೆಯು ಅವನ ಉನ್ನತ ಆಶೆಯ ಹೊನಲಲ್ಲಿಯೇ ಆಘಾತ ಮಾಡಿತು. ತೀರ ಬಲಿಷ್ಠ ಪೆಟ್ಟು ಕೊಟ್ಟಿತು. ಆತ ತನ್ನ ದೇಹಕ್ಕೆ ಏನೋ ಯಾತನೆ ಆದಂತೆ ಕೂಗಿದನು. ಮತ್ತು ತನ್ನ ವ್ಯವಸ್ಥೆಯಲ್ಲಿ ನೆಲಕ್ಕೆ ಬಗ್ಗಿದನು.

ಗ್ರೇಸಳ ವಿರುದ್ಧ ಘಟಿಸಿದ ಅವನ ಪಾಪಗಳಿಂದಾಗಿ ಆತ ಅನುಭವಿಸುತ್ತಿರುವ ದಂಡನೆಯು ಗುಣ ಮತ್ತು ತೀವ್ರತೆಗಳಲ್ಲಿ ಇದಕ್ಕೂ ಸಮೀಪದ ಶಿಕ್ಷೆ ಇನ್ನೊಂದು ಇದ್ದಿಲ್ಲ. "ಓ ನನ್ನವಳೇ—ನನ್ನ ಪ್ರಿಯಳೇ ಓ ಕ್ರೂರ ವಿಧಿಯೇ. ಇದು ವಿಪರೀತವಾಯಿತು." ಆತ ಕೂಗಾಡಿದ್ದನು, ತತ್ತರಿಸುತ್ತ ವಿಲಿವಿಲಿ ಒದ್ದಾಡುತ್ತ.

ಅವನ ದುಃಖದ ದನಿಯು ಅಲ್ಲಿ ಯಾರಾದರೂ ಇದ್ದರೆ ಅವರು ಕೇಳಬಹುದಾದಷ್ಟು ದೊಡ್ಡದಾಗಿತ್ತು ಮತ್ತು ಅಂಥ ಒಂದು ವ್ಯಕ್ತಿ ಅಲ್ಲಿತ್ತು. ಓಕಮರಗಳ ಎಡಕ್ಕೆ ಬಲಕ್ಕೆ ದಟ್ಟವಾದ ಪೊದೆಗಳಿದ್ದವು. ಮರಗಳ ನಡುವಿನ ದಾರಿ ಇಕ್ಕಟ್ಟಿನದಾಗಿತ್ತು. ಮತ್ತು ಆ ಪೊದೆಗಳ ಹಿಂದಿನಿಂದ ಒಂದು ಹೆಣ್ಣಿನ ಆಕೃತಿ ನುಸುಳಿ ಬಂದಿತು. ಆ ಮಬ್ಬುಗತ್ತಲೆಯಲ್ಲಿಯೂ ಅವಳ ಆ ಆಕೃತಿ ಬಾಹ್ಯರೇಖೆಯಲ್ಲಿ ಮಾಟವಾಗಿದ್ದರೂ ಕಣ್ಣಿಗೆ ಒಡೆದೆದ್ದು ಕಾಣುವಷ್ಟು ವಿಚಿತ್ರವೆನಿಸಿತು.

ಅವಳು ಸೊಂಟದವರೆಗೂ ಬೆಳ್ಳಗೆ ಕಾಣುತಿದ್ದಳು. ಮತ್ತು ಮೇಲೆ ಬಟ್ಟೆ ತೊಟ್ಟಿದ್ದಳು. ಅಂದರೆ ಸ್ವಲ್ಪದರಲ್ಲಿ ಹೇಳುವುದಾದರೆ ಆಕೆ ಗ್ರೇಸ, ಅವನ ಹೆಂಡತಿಯಾಗಿದ್ದಳು. ಮತ್ತು ಆ ಬೋನಿನಲ್ಲಿ ಸಿಕ್ಕ ಲಂಗ ಹರಿದುಹೋಗಿ ಅವಳಿಗೆ ಆ ಮಟ್ಟಿಗೆ ಬಟ್ಟೆಯ ಕೊರತೆ ಬಿದ್ದಿತ್ತು.

'ನನ್ನ ಬಗ್ಗೆ ಶೋಕ ಪಡಬೇಡ—ಬೇಡ, ಡಿಯರ್ ಎಡ್ರೆಡ್' ಅವಳು ಉದ್ಗರಿಸಿದಳು—ಅವನ ಕಡೆಗೆ ಓಡಿ ಅವನ ಮೇಲೆ ಮಣಿಯುತ್ತ 'ನನಗೆ ಒಂದು ಚೂರೂ ನೋವಾಗಿಲ್ಲ. ಬಿಡುಗಡೆ ಮಾಡಿಕೊಂಡು ನಿನ್ನನ್ನು ಕಾಣಲು ಮುಂದೆ ಬರುತ್ತಿದ್ದೆ. ಆದರೆ ನಾನು ಹೆಜ್ಜೆ ಸಪ್ಪಳ ಕೇಳಿದೆ. ಮತ್ತು ಅಡಗಿಕೊಂಡೆ. ಏಕೆಂದರೆ ನನ್ನ ಮೈಮೇಲೆ ಕೆಲವು ಬಟ್ಟೆಗಳೇ ಉಳಿದಿಲ್ಲ. ಮತ್ತು ಬರುವವರು ಯಾರೆಂಬುದು ನನಗೆ ಗೊತ್ತಾಗಲಿಲ್ಲ.'

ಫಿಟ್ಝಪಿಯರ್ಸ್ ದಿಗ್ಗನೆ ಜಿಗಿದು ಎದ್ದು ನಿಂತನು. ಮತ್ತು ಅವನ ಮುಂದಿನ ಕೃತ್ಯವು ಅವನಿಗೆ ಎಷ್ಟು ಅಯೋಚಿತವೋ ಅಷ್ಟೇ ಅವಳ ಮಟ್ಟಿಗೆ ಅದು ಅಪ್ರತಿಕಾರಿಯಾಗಿತ್ತು. ಆತ ಮೊದಲು ಎಣಿಸದೆ ದುಡುಕಿದ ; ಆಕೆ ಏನೂ ಆತಂಕವಿಲ್ಲದೆ ಅದಕ್ಕೆ ಒಳಪಟ್ಟಳು. ಗಂಡುಬೀರಿ ಇಲ್ಲವೆ ತಾಟಿಕೆ ಅಲ್ಲದ ಯಾವ ಹೆಂಗಸೂ ಹಾಗೆ ಮಾಡಬಹುದಿತ್ತು. ಆತ ತನ್ನ ತೋಳುಗಳಿಂದ ಪೂರ್ತಿಯಾಗಿ ಅವಳನ್ನು ಬಳಸಿ ಅಪ್ಪಿದನು. ಮತ್ತು ಅವಳನ್ನು ತನ್ನ ಎದೆಗೆ ಒತ್ತಿ ಅವಿವೇಕದಿಂದ ಚುಂಬಿಸಿದನು.

'ನೀನು ಸತ್ತಿಲ್ಲ. ನಿನಗೆ ಅಪಾಯವಾಗಿಲ್ಲ. ದೇವರೆ, ದೇವರೇ.' ಆತ ತನಗಾದ ಆನಂದ ಮತ್ತು ನಿಶ್ಚಿಂತೆಯ ಅತಿರೇಕದಲ್ಲಿ ಬಿಕ್ಕುತ್ತಲೆ ಅಂದನು. 'ಗ್ರೇಸ, ನನ್ನಾಕೆ, ನನ್ನ ಚಿನ್ನ. ಹೇಗೆ ಹೇಗೆ ಇದು ಆಯಿತು?

'ನಾನು ನಿನ್ನ ಕಡೆಗೇ ಬರುತ್ತಿದ್ದೆ.' ಆಕೆ ಅವನ ಮೋರೆಗೆ ತನ್ನ ಮೋರೆ ಒತ್ತಿ ಇದ್ದ ಬಸಿರುಗಟ್ಟಿನ ಅವಸ್ಥೆಯಲ್ಲಿಯೇ ಆದಷ್ಟು ಸ್ಪಷ್ಟವಾಗಿ ಅಂದಳು 'ಆದಷ್ಟು ಹೊತ್ತಿಗೆ ಸರಿಯಾಗಿ ನಿನ್ನನ್ನು ಭೆಟ್ಟಿಯಾಗಬೇಕೆಂದು ನಾನು ಯತ್ನಿಸುತ್ತಿದ್ದೆ. ನನಗೆ ಹೊರಡಲು ಒಂದು ಗಳಿಗೆ ತಡವಾಯಿತು. ಆದ್ದರಿಂದ ನಾನು ಹಾದಿಗುಂಟ ಬಲು ವೇಗದಿಂದ ಓಡುತ್ತ ಬಂದೆ. ಅದೇ ನನ್ನ ಸುದೈವ. ನಾನು ಈ ಮರಗಳ ನಡುವಿನಿಂದ ಹಾಯ್ದು ಕೂಡಲೆ ಹಿಂದಿನಿಂದ ನನ್ನ ಬಟ್ಟೆಗೆ ಏನೋ ದೊಡ್ಡ ಸದ್ದು ಮಾಡಿ ಕಚ್ಚಿ ಹಿಡಿದಂತೆ ಅನಿಸಿತು. ಮತ್ತು ಮರುಕ್ಷಣಕ್ಕೆ ನಾನು ಹಿಂದಕ್ಕೆ ಜಗ್ಗಲ್ಪಟ್ಟೆ, ನೆಲಕ್ಕೆ ಬಿದ್ದೆ, ಹೆದರಿ ಕಂಗೆಟ್ಟು ಚೀರಿಕೊಂಡೆ—ಅಲ್ಲಿ ಯಾರೊ ಮನುಷ್ಯ ನನ್ನನ್ನು ಕೊಲೆ ಮಾಡಲಿಕ್ಕೆ ಅವಿತಿರಬೇಕೆಂದು ತಿಳಿದೆ. ಆದರೆ ಮರುಕ್ಷಣಕ್ಕೆ ನಾನು ಕಂಡೆ—ಅದು ಕಬ್ಬಿಣದ ಪಂಜರ. ಮತ್ತು ನನ್ನ ಲಂಗ ಅದರಲ್ಲಿ ಸಿಕ್ಕಿಕೊಂಡಿದೆ. ನಾನು ಈಚೆ ಆಚೆ ಎಳೆದಾಡಿದೆ, ಆದರೆ ಯಂತ್ರ ನನ್ನನ್ನು ಹೋಗಲು ಬಿಡದು—ಎಷ್ಟು ಜಗ್ಗಾಡಿದರೂ ಬಿಡದು. ಆಗ ಏನು ಮಾಡಬೇಕೆಂದೇ ನನಗೆ ಗೊತ್ತಾಗಲಿಲ್ಲ. ನನ್ನ ತಂದೆಯಾಗಲಿ ಬೇರೆ ಯಾರಿ ಯಾರಿಗಾಗಲಿ ಗಾಬರಿಗೊಳಿಸುವದು ನನಗೆ ಬೇಕಾಗಿರಲಿಲ್ಲ. ಏಕೆಂದರೆ ನಿನ್ನೊಂದಿಗೆ ನನ್ನ ಈ ಭೆಟ್ಟಿಗಳನ್ನು ಯಾರೂ ಅರಿಯಬಾರದೆಂದು ನನ್ನ ಅಪೇಕ್ಷೆ. ಅಂದಾಗ ನನ್ನ ಲಂಗ ಕಳಚಿ ಜಾರಿಕೊಳ್ಳುವದಲ್ಲದೆ ಬೇರೆ ಹಂಚಿಕೆ ನನಗೆ ಹೊಳೆಯಲೇ ಇಲ್ಲ. ಹೀಗೆಯೇ ಮುಂದೆ ಓಡಿ ನನಗಾದ ಈ ವಿಚಿತ್ರ ಅಪಘಾತವನ್ನು ನಿನಗೆ ಹೇಳಬೇಕೆಂದು ಮಾಡಿದೆ. ಆದರೆ ಲಂಗ ಅಲ್ಲಿ ಹಿಂದೆ ಬಿಟ್ಟು ನನ್ನನ್ನು ಬಿಡಿಸಿಕೊಂಡಿದ್ದೇ

ತಡ, ನಾನು ಹೆಜ್ಜೆ ಸದ್ದು ಕೇಳಿದೆ. ನೀನೇ—ಎಂಬುದು ನನಗೆ ಖಾತ್ರಿ ಇದ್ದಿಲ್ಲ. ಅಂಥ ಅಂದಗೆಟ್ಟ ಬಿಕ್ಕಟ್ಟಿನಲ್ಲಿ ಯಾರಿಗೂ ನಾನು ಕಾಣಿಸಿಕೊಳ್ಳಬಾರದೆಂದು ಹೀಗೆ ಅಡಗಿಕೊಂಡೆ'

'ನಿನ್ನ ವೇಗವೇ ನಿನ್ನನ್ನು ಉಳಿಸಿತು, ಇನ್ನೇನೂ ಅಲ್ಲ. ಸಾಮಾನ್ಯ ನಡಿಗೆಯಿಂದ ನೀನು ಬಂದಿದ್ದರೆ ನಿನ್ನ ಒಂದು ಅಥವಾ ಎರಡೂ ಕಾಲು ಮುರಿದು ಹೋಗುತ್ತಿತ್ತು.'

'ಅಥವಾ ನಿನ್ನದು. ನೀನೇ ನನಗಿಂತ ಮುಂಚೆ ಇಲ್ಲಿ ಬಂದು ಮುಟ್ಟಿದ್ದರೆ' ಆ ಶಕ್ಯತೆಯ ಭಯಾನಕತೆಯನ್ನು ಪೂರ್ತಿ ಮನಗಂಡು ಅಂದಳು. ಆದರೆ ಆ ಬೋನಿನ ಹಳೆಯ ಸ್ಪ್ರಿಂಗುಗಳು ಅಷ್ಟೊಂದು ಅನಾಹುತ ಮಾಡಬಹುದು ಎಂಬುದೂ ತುಸು ಅನುಮಾನವೇ ಇತ್ತು. 'ಓ ಎಡ್ರೆಡ್, ಇಂದು ನಮ್ಮನ್ನು ನೋಡಿಕೊಳ್ಳುವ ಒಂದು ಕಣ್ಣು—ದೇವರ ಕಣ್ಣು—ಜಾಗೃತವಾಗಿದೆ. ನಾವು ಅದಕ್ಕೆ ಋಣಿಯಾಗಿ ಇರಬೇಕು.'

ಆತ ತನ್ನ ಮೋರೆಯನ್ನು ಅವಳ ಮೋರೆಗೆ ಒತ್ತುತ್ತಲೇ ಹೇಳಿದನು 'ನೀನು ನನ್ನವಳು—ಮತ್ತೆ ಈಗ ನನ್ನವಳು.'

ಅವಳು ಒಪ್ಪಿದಳು; ಅಹುದು ಅವಳು ಅವನವಳು. 'ನನಗೆ ಅಪಾಯವಾಗಿದೆಯೆಂದು ತಿಳಿದಾಗ ನೀನು ಅಂದದ್ದು ನಾನು ಕೇಳಿದೆ.' ಆಕೆ ಲಜ್ಜೆಯಿಂದ ಮುಂದುವರಿದಳು. 'ಮತ್ತು ನನಗೆ ಗೊತ್ತು, ನೀನು ಬಳಲಿದಂತೆ ನನಗಾಗಿ ಬಳಲುವ ಮನುಷ್ಯನಿಗೆ ನನ್ನ ಬಗೆಗೆ ಕೋಮಲವಾದ ಆದರವಿರಲೇಬೇಕು. ಆದರೆ ಈ ಅರಿಷ್ಟ ಸಾಮಾನು ಇಲ್ಲಿ ಬಂದಿತಾದರೂ ಹೇಗೆ?'

'ನನಗೆ ಅನಿಸುತ್ತದೆ—ಇದು ತೋಟಗಳ್ಳರ ಪಾರುಪತ್ಯಕ್ಕಾಗಿ ಏನೋ ಏರ್ಪಾಟಿರಬೇಕು' ಫಿಟ್ಝ್‌ಪಿಯರ್ಸ್ ಇನ್ನೂ ಅವಳಿಗೆ ಒದಗಿದ ಗಂಡಾಂತರದಿಂದ ತುಂಬ ತತ್ತರಿಸಿ ಹೋಗಿದ್ದ, ಮತ್ತು ಅಲ್ಲಿಯೇ ತುಸು ಹೊತ್ತು ಕೂತಿರಬೇಕೆಂದು ಮನಸ್ಸು ಮಾಡಿದನು. ಆದರೆ ಗ್ರೇಸಳು ಅಂದಳು. 'ನನ್ನ ಲಂಗ ಹೇಗಾದರೂ ತಿರುಗಿ ಸಿಕ್ಕರೆ, ಯಾರಿಗೂ ಏನೂ ಗೊತ್ತಾಗಲಿಕ್ಕಿಲ್ಲ.' ಆಗ ಆತ ಎದ್ದನು.

ಅವರ ಜೋಡಿಪ್ರಯತ್ನದಿಂದ, ಇಬ್ಬರೂ ಆ ಬೋನಿನ ಒಂದೊಂದು ಸ್ಪ್ರಿಂಗಿನ ಮೇಲೆ ನಿಂತು ಅದನ್ನು ಸಾಕಷ್ಟು ಒತ್ತಿ, ಅದರ ಬಾಯಿ ತೆರೆದು ಹತ್ತಿರದ ಒಂದು ಸೌದೆಯ ಹೊರೆಯಿಂದ ಒಂದು ಚೆಕ್ಕೆಯನ್ನು ಸುಲಿದು ಅದರ ದವಡೆಯಲ್ಲಿ ಅಡ್ಡ ಇಟ್ಟರು. ಆಗ ಲಂಗದ ರೇಶಿಮೆಬಟ್ಟೆಯ ತಂತ್ತನ್ನು ಆ ರಾಕ್ಷಸಿ ಹಲ್ಲುಗಳ ನಡುವಿನಿಂದ ಬಿಡಿಸಿ ತೆಗೆಯುವುದು ಸಾಧ್ಯವಾಯಿತು. ಲಂಗವು ಅಲ್ಲಲ್ಲಿ ಚಿಕ್ಕ ಛಿದ್ರಗಳಿಂದ ನೆರಿಗೆ ಮಡಿಕೆಗಳಿಂದ ತುಂಬಿದ್ದರೂ ಹರಿದು ಹೋಗಿದ್ದಿಲ್ಲ. ಅದನ್ನು ತಿರುಗಿ ತೊಡಲಿಕ್ಕೆ ಫಿಟ್ಝ್‌ಪಿಯರ್ಸ್ ಅವಳಿಗೆ ಸಹಾಯ ಮಾಡಿದನು. ತಿರುಗಿ ಹೀಗೆ ಅವಳ ವಾಡಿಕೆಯ ಪೂರ್ವದ ಸ್ಥಿತಿಗೆ ಬಂದನಂತರ ಅವರಿಬ್ಬರೂ ಕೂಡಿಯೆ ದಾರಿ ನಡೆಯಹತ್ತಿದ್ದರು. ಗ್ರೇಸಳು ಅವನ ಭುಜವನ್ನು ಹಿಡಿದು ಆನಿದಳು; ಅವನು ಅದನ್ನು ತಿದ್ದಿ

ಅವಳ ಸೊಂಟವನ್ನೆ ಬಳಸಿ ಹಿಡಿದನು. ಈ ಅನಿರೀಕ್ಷಿತ ರೀತಿಯಲ್ಲಿ ಅವರ ನಡುವಿನ ವೈಚಳಿ ಕರಗಿದ ಮೇಲೆ ಅವಳು ಇನ್ನು ಸಂಕೋಚ ಗಾಂಭೀರ್ಯಗಳಿಗಾಗಿ ಹೆಣಗಾಡ ಲಿಲ್ಲ. 'ನೀನು ನಮ್ಮ ಮನೆಯೊಳಗೇ ಬರಬೇಕೆಂದು ನನ್ನ ಹೇಳಿಕೆ,' ಅವಳು ಅಂದಳು 'ಆದರೆ ನಮ್ಮ ಭೆಟ್ಟಿಗಳ ಸಮಾಚಾರ ಅಪ್ಪನಿಂದ ನಾನು ಬಚ್ಚಿಟ್ಟಿದ್ದೇನೆ. ಈಗ ನಾನು ಅವನನ್ನು ಅದಕ್ಕಾಗಿ ಅಣಿಗೊಳಿಸಬೇಕು.'

'ಪರಿವೆ ಮಾಡಬೇಡ ನನ್ನ ಚಿನ್ನ. ನಾನು ಆಮಂತ್ರಣವನ್ನು ಒಪ್ಪದಿರುವುದೇ ಲೇಸು. ಅದು ನನ್ನಿಂದ ಸಾಧ್ಯವಿಲ್ಲ. ನಾನು ಇಲ್ಲಿ ತಿರುಗಿ ಉಳಿಯಲಾರೆ — ಇದು ನನ್ನ ಸಲುವಾಗಿ ಎಷ್ಟೋ ನಿನ್ನ ಸಲುವಾಗಿಯೂ ಅಷ್ಟೇ. ಈ ಅಂಶದ ಕುರಿತು ನಿನಗೆ ಒಂದು ವಾರ್ತೆ ಹೇಳುವುದಿದೆ. ಆದರೆ ಆಗ ನನ್ನ ದಿಗಿಲು ಅದನ್ನು ನನ್ನ ತಲೆ ಯಿಂದಲೆ ಓಡಿಸಿತ್ತು. ಮಿಡ್‌ಲ್ಯಾಂಡಿನಲ್ಲಿ ನಾನು ಒಂದು ಪ್ರಾಕ್ಟೀಸನ್ನು–ಅಲ್ಲ, ಅದರಲ್ಲಿ ಪಾಲುಗಾರಿಕೆಯನ್ನು-ಕೊಂಡಿದ್ದೇನೆ. ಮತ್ತು ಅಲ್ಲಿಗೆ ಈಗ ಒಂದು ವಾರದಲ್ಲಿ ಹೋಗಿ ಕಾಯಂ ನೆಲೆಸಬೇಕಾಗಿದೆ. ನನ್ನ ದೊಡ್ಡಜ್ಜಿ ಎಂಟು ತಿಂಗಳ ಹಿಂದೆ ಸತ್ತಳು; ಮತ್ತು ನನಗಾಗಿ ಈ ಖರೀದಿಗೆ ಸಾಲುವಷ್ಟು ಹಣ ಬಿಟ್ಟುಹೋದಳು. ಅಲ್ಲಿ ಸ್ವಲ್ಪ ಕಾಲಕ್ಕಾಗಿ ಒಂದು ಸಣ್ಣ ಸಜ್ಜಾದ ಮನೆಯನ್ನು ಹಿಡಿದಿದ್ದೇನೆ — ನಮಗಾಗಿ ಸ್ವಂತ ಒಂದು ಮನೆಯನ್ನು ನಾವು ಕೊಂಡುಕೊಳ್ಳುವತನಕ.'

ಅವನು ಆ ಮನೆಯ, ಅದರ ಪರಿಸರದ, ಅದರ ಕಿಟಕಿಗಳಿಂದ ಕಾಣುವ ದೃಶ್ಯ ಗಳ ಬಣ್ಣನೆ ಮಾಡಿದನು; ಮತ್ತು ಗ್ರೇಸಳಿಗೆ ಅದರಲ್ಲಿ ಆಸಕ್ತಿ ಹೆಚ್ಚಿತು. 'ಆದರೆ ನೀನೇಕೆ ಈಗಲೆ ಅಲ್ಲಿಗೆ ಹೋಗಿಲ್ಲ?' ಆಕೆ ಕೇಳಿದಳು.

'ಏಕೆಂದರೆ ನಿನ್ನಿಂದ ಆಶ್ವಾಸನ ಪಡೆಯುವನಕವೂ ನಾನು ಇಲ್ಲಿಂದ ಕಾಲುಕಿತ್ತು ಹೋಗುವಂತಿಲ್ಲ. ಈಗ ಡಾರ್ಲಿಂಗ್, ನೀನೂ ನನ್ನ ಜತೆಗೆ ಹೊರಡುವಿಯಲ್ಲವೇ, ಅಲ್ಲಿಗೆ ಬೇಗ? ಬರುವಿಯಲ್ಲವೆ? ಈ ರಾತ್ರಿ ಅದನ್ನು ನಿರ್ಧರಿಸಿಬಿಟ್ಟಂತಿದೆ, ಅಲ್ವೆ?'

ಗ್ರೇಸಳ ತತ್ತರಿಕೆ ತಡವರಿಕೆ ಎಲ್ಲ ಮಾಯವಾಗಿ ಬಿಟ್ಟಿತು. ಅವಳು ಒಲ್ಲೆ ಯೆನ್ನಲಿಲ್ಲ. ಅವರಿಬ್ಬರೂ ಕೂಡಿಯೆ ಮುಂದೆ ನಡೆದರು.

ಆ ಸಾಹಸ ಪ್ರಸಂಗ ಅದರ ಫಲವಾಗಿ ಬಂದ ಅವರ ಪುನರ್ಮಿಲನ, ಅದರಿಂದ ಒತ್ತಿಬಂದ ಭಾವನೆಗಳ ಉದ್ರೇಕ — ಇವೆಲ್ಲ ಕೂಡಿ ಗ್ರೇಸಳಿಗೆ ಅವರ ನಿರುದ್ದೇಶ ಅಲೆದಾಟದ ನಿಟ್ಟಿನ ಕುರಿತು ಮರವು ಉಂಟಾಗುವಂತೆ ಮಾಡಿತು. ಕೊನೆಗೂ ಅವರು ಆ ಬೆಟ್ಟದ ಅತಿ ನಿಬಿಡ ಭಾಗ ಸುತ್ತುಗಟ್ಟಿದ ಕಣಿವೆಯಲ್ಲಿ ಬಂದು ನಿಂತಿದ್ದು ಅವಳು ಕಂಡಳು. ಗಮನಕ್ಕೆ ಬಾರದಂತೆ ತನ್ನ ಕಿರಣಗಳನ್ನು ತುಂಬುತ್ತಿದ್ದ ಚಂದ್ರನು ಸುಮಾರು ನೇರವಾಗಿಯೇ ನೆತ್ತಿಗೇರಿ ಆ ದೃಶ್ಯವನ್ನು ಬೆಳಗುತ್ತಿದ್ದನು. ಈ ವರ್ಷದ ಮಟ್ಟಿಗೆ ಅದು ಒಂದು ಅಪರೂಪದ ಮೃದುವಾದ, ಬೆಚ್ಚಗಿನ, ಸೊಗಸಾದ ಸಂಜೆಯಾಗಿತ್ತು. ಮೇ ತಿಂಗಳ ಆ ಅವಧಿಯಲ್ಲಿ ಬೀಚ ಮರಗಳು ಪಾತರಗಿತ್ತಿಯ ಪಕ್ಕಗಳಂಥ ಮಿದು ವಾದ ನುಣುಪಾದ ದೊಡ್ಡ ದೊಡ್ಡ ನಿಶ್ಚಲ ಎಳೆಯೆಲೆಗಳ ಸುರುಳಿಗಳನ್ನು ಒಮ್ಮೆಲೆ

ಬಿಚ್ಚಹತ್ತಿದ್ದವು. ಅಂಥ ಎಲೆಗಳನ್ನು ಹೇರಿಕೊಂಡ ಟೊಂಗೆಗಳು ಸುತ್ತಲೆಲ್ಲ ತಣ್ಣಗೆ ತೂಗಾಡುತಿದ್ದವು. ಮತ್ತು ಅವರನ್ನು ಪೂರ್ತಿ ಸುತ್ತುವರಿದಿದ್ದವು. ಅಂದರೆ ಅವ ರೊಂದು ಹಸಿರು ಪುಷ್ಪ ಪಾತ್ರೆಯಲ್ಲಿ ಇದ್ದಂತೆ — ಆ ಪಾತ್ರೆಯು ತಳಕ್ಕೆ ಹಾವಸೆ, ಮತ್ತು ಬದಿಗೆಲ್ಲ ಎಲೆಗಳು. ಇಲ್ಲಿ ಅವರು ಕೂತುಕೊಂಡರು.

ಮುಂಗಿಲುಂಗಳೆಲ್ಲ ಪಶ್ಚಿಮದಲ್ಲಿ ಅಡಕಲಿರಿಸಿ ಇಟ್ಟಂತೆ ಇದ್ದವು ; ಇದರಿಂದ ಆ ಸಂಜೆಗೆ ಸರಿದು ಹೋಗಲಿದ್ದ ಸಂಜೆ ಬೆಳಕು ದೀರ್ಘಕಾಲದವರೆಗೆ ತಡೆಹಿಡಿದಿಟ್ಟಂತೆ ಆಗಿತ್ತು. ಇದರಿಂದ ಆ ವೇಳೆ ನಿಜವಾಗಿ ಇರುವುದಕ್ಕಿಂತ ಮುಂಚಿತವೇ ಎಂಬಂತೆ ಭಾಸವಾಗುತ್ತಿತ್ತು. ಅಂದರೆ ಒಮ್ಮೆಲೆ ಅವಳಿಗೆ ವೇಳೆಯ ಪ್ರಶ್ನೆ ಕಾಡಿತು.

'ನಾನು ತಿರುಗಿ ಹೋಗಲೆಬೇಕು' ಅವಳು ಜಿಗಿದೆದ್ದು ಅಂದಳು. ಮತ್ತು ಹೆಚ್ಚಿನ ವಿಲಂಬವಿಲ್ಲದೆ ಅವರು ಹಿಂಟಾಕದತ್ತ ಮೊಗಹೊರಳಿಸಿದರು. ಅವರು ಹಾದಿ ನಡೆಯು ತಿದ್ದಾಗ ಫಿಟ್ಝಪಿಯರ್ಸ್, ಆಗಲೆ ಬಲವಾದ ಬೆಳದಿಂಗಳ ನೆರವಿನಿಂದ ತನ್ನ ಗಡಿಯಾರ ವನ್ನು ನೋಡಿದನು.

'ಅಯ್ಯೋ ಟ್ರೇನು ತಪ್ಪಿತು' ಆತ ಅಂದನು.

'ಅಯ್ಯಯ್ಯೋ, ನಾವು ಯಾವಲ್ಲಿಗೆ ಬಂದಂತಾಗಿದೆ'; ಆಕೆ ಅಂದಳು.

'ಶರ್ಟನ್ನಿನ ನಿಟ್ಟಿನಲ್ಲಿ ಎರಡು ಮೈಲು.'

'ಹಾಗಾದರೆ ನೀನು ತ್ವರೆಮಾಡಿ ಮುಂದೆ ನಡೆ ಎಡ್ರೆಡ್. ನನಗೆ ಏನೇನೂ ಭಯವಿಲ್ಲ. ನಾವೀಗ ಇರುವ ಬೆಟ್ಟದ ಭಾಗವನ್ನು ನಾನು ಗುರುತಿಸಬಲ್ಲೆ. ಮತ್ತು ತಿರುಗಿ ಹೋಗುವ ನನ್ನ ದಾರಿ ನಾನು ಸುಲಭವಾಗಿ ಹಿಡಿಯಬಲ್ಲೆ. ನಾವು ಜಗಳ ಬಗೆಹರಿಸಿಕೊಂಡಿದ್ದೇವೆಂದು ನಾನು ಅಪ್ಪನಿಗೆ ಹೇಳುತ್ತೇನೆ. ಈಗ ಅನಿಸುತ್ತದೆ, ನಮ್ಮ ಭೆಟ್ಟಿ ಇಷ್ಟೊಂದು ಗೌಪ್ಯವಿಡಬಾರದಾಗಿತ್ತು, ನಾನು. ಏಕೆಂದರೆ ನಿನ್ನನ್ನು ನಾನು ಭೆಟ್ಟಿಯಾಗುತ್ತಲೇ ಇದ್ದೆ ಎಂದು ತಿಳಿದರೆ ಅಪ್ಪ ಕೆರಳಲೂಬಹುದು. ಅವನಿಗೆ ವಯಸ್ಸಾಗುತ್ತಿದೆ. ಸಿಟ್ಟು ಸಿಡುಕು ಹೆಚ್ಚಾಗುತ್ತಿದೆ. ಅದಕ್ಕಾಗಿಯೇ ನಾನು ಅವನಿಗೆ ಹೇಳದೆ ಇಟ್ಟಿದ್ದು. ಇನ್ನು ಗುಡ್‌ಬಾಯ್.'

'ಆದರೆ ಇಂದು ನಾನು ಅರ್ಲ್ ಆಫ್ ವೆಸೆಕ್ಸ್ ಹಾಟೆಲ್ಲಿ ಈ ರಾತ್ರಿ ಉಳಿಯಲೇ ಬೇಕು. ಏಕೆಂದರೆ ನನಗೆ ಹೇಗೂ ಟ್ರೇನು ಸಿಗುವಂತಿಲ್ಲ. ಆದ್ದರಿಂದ ನಾನು ನಿನ್ನ ಯೋಗಕ್ಷೇಮ ನೋಡಿಕೊಳ್ಳುವುದು ಹೆಚ್ಚು ಕುಶಲವೇನೋ.'

'ಆದರೆ ನಮ್ಮಪ್ಪ ಏನು ತಿಳಿದುಕೊಂಡಾನು — ನನ್ನ ಅವಸ್ಥೆ ಏನಾಯಿತೊ ಎಂದು. ನಾನು ಎಲ್ಲಿ ಇರುವೆನೆಂದು ಅವನಿಗೆ ಏನೇನೂ ಗೊತ್ತಿಲ್ಲ. ನಾನು ಕೆಲವೇ ನಿಮಿಷಕ್ಕಾಗಿ ತೋಟದಲ್ಲಿ ಅಡ್ಡಾಡಲು ಹೊರಬಿದ್ದೆನೆಂದು ಅವನ ಎಣಿಕೆ.'

'ಅವನು ಖಂಡಿತ ಊಹಿಸಬಲ್ಲ, ನನ್ನನ್ನು ಯಾರಾದರೂ ನೋಡಿರಲೇ ಬೇಕು. ನಾಳೆ ನಾನೇ ನಿನ್ನ ಸಂಗಡ ಮನೆಯುವರೆಗೂ ಮುಟ್ಟಿಸಲು ಬರುವೆನು.'

'ಅಂದರೆ ಆ ಹೊಸದಾಗಿ ಸಜ್ಜುಗೊಳಿಸಿದ ಸ್ಥಳವಲ್ಲವೇ — ಆ ಅರ್ಲ್ ಆಫ್ ವೆಸೆಕ್ಸ್?'

'ಹಾಗಾದರೆ ನಿನಗೆ ಜನಪ್ರಸಿದ್ಧಿಯ ಬಗ್ಗೆ ಅಷ್ಟೊಂದು ಸಂಕೋಚವಿದ್ದರೆ, ನಾವು ಬೇರೆ ಒಂದು ಏಕಾಂತ ಶಾಂತಸ್ಥಳದಲ್ಲಿ ಉಳಿಯೋಣ.'

'ಛೆ ಬೇಡ — ಅದಕ್ಕಾಗಿ ಅಲ್ಲ, ನನ್ನ ವಿಶೇಷ ಆಗ್ರಹ. ಆ...ಆದರೆ ನನ್ನ ಹತ್ತಿರ ಒಂದು ಬ್ರಶ್ ಇಲ್ಲ, ಬಾಚಣಿಕೆ ಇಲ್ಲ.'

೪೮

ಆ ಸಂಜೆಯೆಲ್ಲ ಮೆಲಬರಿ ಬಾಗಿಲಿಗೆ ಬಂದು ಅನ್ನುತ್ತಿದ್ದ: 'ಆ ಹುಡುಗಿ ಎಲ್ಲಿ ಹೋಗಿಬಿಟ್ಟಳೋ, ನನ್ನ ಇಡೀ ಬದುಕಿನಲ್ಲಿಯೇ ಅವಳು ಹೀಗೆ ಹೊರಬಿದ್ದು ಹೋದದ್ದು ಗೊತ್ತಿಲ್ಲ. ಅವಳು ನಿಜವಾಗಿ ಹೇಳಿದ್ದಳು. ತಾನು ತೋಟಕ್ಕೆ ಹೋಗಿ ಏನೋ ಅಜವಾನದ ಸೊಪ್ಪು ಹುಡುಕಿ ತರುತ್ತೇನೆಂದು.'

ಮೆಲಬರಿ ತೋಟವೆಲ್ಲ ಹುಡುಕಾಡಿದನು. ಹೊರಗಿನ ಮನೆವಾಳ ಹೆಣ್ಣಿನ ತೋಟ ಎಲ್ಲ ಹುಡುಕಿನೋಡಿದನು. ಆದರೆ ಅವಳ ಯಾವ ಸುಳಿವೂ ಹತ್ತಲಿಲ್ಲ. ಆಮೇಲೆ ಆತನ ನಿದ್ದೆಹೋಗದ ತನ್ನ ಕೆಲಸಗಾರರ ಗುಡಿಸಲುಗಳಿಗೆ ಹೋಗಿ ವಿಚಾರಿಸಿದನು. ಟಾಂಗ್ಸರ ಮನೆಗೆ ಹೋಗಲಿಲ್ಲ. ಏಕೆಂದರೆ ಅವನಿಗೆ ಗೊತ್ತು ಆ ಎಳೆಯ ದಂಪತಿ ನಸುಕಿಗಿಂತ ಮುಂಚೆಯೇ ಹೊರಟು ಹೋಗುವವರಿದ್ದರು. ಈ ಚೌಕಶಿಗಳ ನಡುವೆ ಅವನ ಕೆಲಸಗಾರರಲ್ಲಿ ಒಬ್ಬನ ಹೆಂಡತಿ ತುಸು ಅಜಾಗ್ರತೆಯಿಂದಲೇ ನಡೆದ ಒಂದು ಸಂಗತಿಯನ್ನು ಹೊರಗೆಡಹಿದಳು — ಅವಳು ಅಡವಿಯಲ್ಲಿ ಒಂದು ಚೀರಿದ ದನಿ ಕೇಳಿದ್ದಳು. ಆದರೆ ಅದು ಯಾವ ನಿಟ್ಟಿನಿಂದಲೋ ಹೇಳಲಾರಳು.

ಇದು ಮೆಲಬರಿಯ ಗಾಬರಿಯನ್ನು ಒಂದು ರೀತಿ ಕೊನೆಗಾಣಿಸಿತು. ಅವನ ಮಂದಿಗೆ ಕಂದೀಲುಗಳನ್ನು ಉರಿಸಲು ಹೇಳಿದನು. ಮತ್ತು ತಾನೇ ಮುಂದಾಳಾಗಿ ಅವರನ್ನೆಲ್ಲ ಹೊರಡಿಸಿದನು. ಕ್ರೀಡ್ಸ ಹಿಂದಿನಿಂದ ಬಂದು ಸೇರಿಕೊಂಡ, ಕೆಲವು ಹಗ್ಗ ಹಾಗೂ ಗರುಡ ಪಾತಾಳದ ಒಂದು ಗಂಟನ್ನೆ ಕಟ್ಟಿ ಹೊತ್ತುಕೊಂಡು; ಅದನ್ನು ಹಿಂದೆಬಿಟ್ಟು ಬರಲು ಹೇಳಿದರೂ ಆತ ಕೇಳಲೇ ಇಲ್ಲ. ಅದೇ ರೀತಿ ಕ್ವಾಟ್ರೆ ಮತ್ತು ಆ ಚರಖಿದವನೂ ಬಂದು ಮಂಡಳಿಯನ್ನು ಸೇರಿದರು.

ಅವರು ಹಳ್ಳಿಯ ಪರಿಸರವನ್ನು ಹುಡುಕಾಡಿದರು. ಮತ್ತು ಸ್ವಲ್ಪವೇ ಕಾಲದಲ್ಲಿ ಆ ಕಳ್ಳರನ್ನು ಹಿಡಿಯುವ ಬೋನನ್ನು ಕಂಡರು. ಈ ಶೋಧವು ಅವರಿಗೊಂದು

ಘಟನೆಯು ಹೊಸ ವಿವರವನ್ನು ಒದಗಿಸಿತೇ ಹೊರತು ಊಹೆಗೆ ನೆರವಾಗಲಿಲ್ಲ. ಆದರೆ ಮೆಲಬರಿಯು ಅನಿಶ್ಚಿತವಾದ ಗಾಬರಿ ತೀರ ಮಿಗಿಲಾಯಿತು. ನೆಲಕ್ಕೆ ಮೇಣಬತ್ತಿಯನ್ನು ಎತ್ತಿ ಹಿಡಿದಾಗ ಅವನು ಆ ಬೋನಿನ ಹಲ್ಲುಗಳ ನಡುವೆ ಗ್ರೇಸಳ ಬಟ್ಟೆಯ ಕೆಲವು ಚಿಂದಿಗಳನ್ನು ಕಂಡನು. ಮುಂದೆ ಡೆಲ್‌ಬೋರೋದ ಒಬ್ಬ ಅಡವಿ ಕೆಲಸಗಾರ ಸಿಗುವ ತನಕ ಅವರಿಗೆ ಯಾವ ಸಮಾಚಾರವೂ ಸಿಗಲಿಲ್ಲ. ಆತ ಹೇಳಿದನು : ಅವಳ ತಂದೆ ಗ್ರೇಸಳ ಬಗೆಗೆ ಕೊಟ್ಟ ವರ್ಣನೆಯನ್ನು ಹೋಲುವಂಥ ಒಬ್ಬ ಹೆಂಗಸನ್ನು ಆತ ಕಂಡಿದ್ದನು. ಆಕೆ ಒಬ್ಬ ಸದ್ಗೃಹಸ್ಥನ ಭುಜಕ್ಕೆ ಆನಿಸಿಕೊಂಡು ಅಡವಿಯೊಳಗಿಂದ ಶರ್ಟನ್ನದತ್ತ ನಡೆದಿದ್ದನು.

'ಆತ ಅವಳನ್ನು ಸಾವರಿಸಿ ಹಿಡಿದಿದ್ದನೇ ?' ಮೆಲಬರಿ ಅಂದನು.

'ಹೌದು ಹಾಗೇನೆ' ಆ ಮನುಷ್ಯ ಅಂದನು.

'ಅವಳು ಕುಂಟುತ್ತ ನಡೆಯುತ್ತಿದ್ದಳೇ ?'

'ಅವಳ ತಲೆ ಅವನ ಕಡೆಗೆ ತುಸುವಾಲಿದ್ದುದು ನಿಜ.'

ಕ್ರೀಡ್ಸ ಶೋಕಪೂರ್ಣವಾಗಿ ಮರುಗಿದನು.

ಮೆಲಬರಿಗೆ ಫಿಟ್ಜಪಿಯರ್ಸನ ಅಸ್ತಿತ್ವದ ಸುಳಿವೇ ಇದ್ದಿಲ್ಲ. ಆತ ಈ ವರದಿಯನ್ನು ಬೋನಿನ ಹಾಗೂ ಚೀರಿದ ಸಂಗತಿಯೊಂದಿಗೆ ತಳಕು ಹಾಕಿದನು. ಇದೆಲ್ಲ ಏನೆಂದು ಅವನಿಗೆ ಅರ್ಥವಾಗಲಿಲ್ಲ. ಆದರೂ ಬೋನಿನಲ್ಲಿ ಕಂಡುಬಂದ ಆ ಭೀಕರ ಘಟನೆಯು ಅವನನ್ನು ಮುಂದುವರಿಯುವಂತೆ ಮಾಡಿತು. ಹಾಗೆಯೇ ಅವರು ಶರ್ಟನ್ ಕಡೆಗೆ ಮುಂದುವರಿದರು. ದಾರಿಯುದ್ದಕ್ಕೂ ಕೂಗುತ್ತಲೇ ನಡೆದರು. ಮತ್ತು ಕ್ರಮೇಣ ಹೆದ್ದಾರಿಗೆ ಬಂದು ತಲ್ಪಿದರು.

ಶರ್ಟನ್ ಅಬ್ಬಾಸನ್ನು ಸಮೀಪಿಸುತಿದ್ದಂತೆ, ಹಾದಿಹೋಕರು ಸಿಕ್ಕಾಗೆಲ್ಲ ಹಿಂದಿನ ವರದಿಯನ್ನು ಸಮರ್ಥಿಸುವ ಸಮಾಚಾರವನ್ನೇ ಕೊಟ್ಟರು. ಆದರೆ ಈ ನಂತರದ ವರದಿಗಳಲ್ಲಿ ಆ ಸದ್ಗೃಹಸ್ಥನ ಭುಜದ ಆನಿಕೆಯು ಮಾಯವಾಗಿತ್ತು. ಕೊನೆಗೆ ಅವರು ಶರ್ಟನ್ನಿನ ತೀರ ಹತ್ತಿರಕ್ಕೆ ಬಂದು ಮುಟ್ಟಿದಾಗ, ಮೆಲಬರಿ ಅವನ ನಂಬಿಗಸ್ಥ ಸಂಗಾತಿಗಳಿಗೆ ತಿಳಿಸಿದನು. ಅಷ್ಟು ತಡವಾದ ಹೊತ್ತಿಗೆ ಅವರನ್ನು ಆತ ಇನ್ನೂ ಮುಂದಕ್ಕೆ ಎಳೆದೊಯ್ಯಲೊಲ್ಲ. ಇನ್ನು ಆತ ತಾನೇ ಮುಂದುವರಿದು ಹೋಗಿ ಆ ಹೆಂಗಸು ನಿಜವಾಗಿಯೂ ಗ್ರೇಸಳೇ ಏನೋ ಎಂದು ವಿಚಾರಿಸಬಲ್ಲ. ಆದರೆ ಅವರು ಅವನನ್ನು ಆ ಚಿಂತಾಕ್ರಾಂತ ಸ್ಥಿತಿಯಲ್ಲಿ ಬಿಡಲೊಲ್ಲರು. ಅವರು ಹಾಗೆಯೇ ಕಾಲೆಳೆದುಕೊಂಡು ನಡೆದರು. ಪಟ್ಟಣದ ದೀಪಗಳ ಬೆಳಕು ಅವರ ಮೋರೆಗಳನ್ನು ಬೆಳಗಲು ಆರಂಭಿಸಿತು. ನಗರಪ್ರವೇಶದಲ್ಲಿಯೇ ಅವರಿಗೆ ತವಮ್ಮ ಬೇಟೆಯ ಬಗೆಗೆ ಹೊಸ ಸುದ್ದಿ ತಿಳಿದುಬಂತು. ಆದರೆ ಅದಕ್ಕೆ ಹೊಸ ಪರಿ ಇತ್ತು. ಈ ಹೆಂಗಸು ಮುಂದೆ ರಸ್ತೆಗುಂಟ ಒಬ್ಬಳೇ ನಡೆದು ಹೋಗಿದ್ದಳು.

'ದೇವರೇ'— ಹಾಗಾದರೆ ಅವಳಿಗೆ ಯಾರೋ ಮಂತ್ರಮಾಟ ಮಾಡಿರಬೇಕು. ಅಥವಾ ಅವಳು ನಿದ್ದೆಯಲ್ಲಿಯೇ ನಡೆದುಬಂದಿರಬೇಕು'

'ಆದರೆ ಈ ಹೆಂಗಸು ಗ್ರೇಸಳೇ ಎಂಬ ಗುರುತು ಖಚಿತವಾಗಿದ್ದಿಲ್ಲ. ಆದಾಗ್ಯೂ ಅವರು ರಸ್ತೆಗುಂಟ ಭಾರವಾಗಿ ಹೆಜ್ಜೆ ಇಡುತ್ತ ಮುಂದಾದರು. ಪರಕೊಮ, ನಾಪಿತ, ಮಾರ್ಟಿಯ ಕೇಶರಾಶಿಯನ್ನು ಇಳಿಸಿದ ಪರಾಕ್ರಮಿ, ತನ್ನ ಅಂಗಡಿಯ ಬಾಗಿಲಲ್ಲಿ ನಿಂತಿದ್ದನು. ಅವರು ಯಥಾಕ್ರಮವಾಗಿ ಅವನನ್ನು ಕೇಳಿದರು.

'ಓ ಕಿರಿಯ ಹಿಂಟಾಕ ಈವಾಗ ಹೇಗಿದೆ?' ಆತ ಉತ್ತರಕೊಡುವ ಮುಂಚೆ ಕುಶಲ ಪ್ರಶ್ನೆಯನ್ನು ಕೇಳಿದನು. 'ನಾನು ಅಲ್ಲಿಗೆ ಹೋದದ್ದು ಒಂದು ಚಳಿಗಾಲದ ರಾತ್ರಿಗೆ, ಮೂರು ವರ್ಷಗಳ ಹಿಂದೆ — ಆಗಲೂ ಆ ಹಳ್ಳಿ ಹುಡುಕುವುದರಲ್ಲಿ ನನ್ನನ್ನೆ ನಾನು ಕಳೆದುಕೊಂಡೆ. ಅಂದಿನಿಂದ ಅತ್ತಕಡೆಗೆ ನಾನು ಕಾಲಿಟ್ಟಿಲ್ಲ. ನೀವಾದರೂ ಹೇಗೆ ಆ ಒಕ್ಕಣ್ಣ ರಾಜ್ಯದಲ್ಲಿ ಬದುಕಿದ್ದೀರೋ. ಹಿರಿಯ ಹಿಂಟಾಕೂ ಹಾಳೇ. ಆದರೆ ಕಿರಿಯ ಹಿಂಟಾಕ? ಕೇಳಬೇಡಿ. ಅಲ್ಲಿಯ ಆ ಗೂಗೆಗಳು ಕಣ್ಣಕಪ್ಪಡಿಗಳು ನನ್ನನ್ನು ಬೇಸರ ಹಚ್ಚಿ ಹುಚ್ಚುಹಿಡಿಸಿಬಿಡುವುವು. ಆ ರಾತ್ರಿ ನಾನು ಹೋಗಿ ಬಂದನಂತರ ನನ್ನ ಜೀವಕ್ಕೆ ತಿರುಗಿ ಗೆಲವು ತುಂಬಿಕೊಳ್ಳಲಿಕ್ಕೆ ನನಗೆ ಇಡೀ ಎರಡು ದಿನ ಬೇಕಾಯಿತು. ಮೆಲಬರಿ, ಸ್ವಾಮೀ, ನೀವು ನಾಲ್ಕು ಹಣ ಕೂಡಿಸಿಟ್ಟವರು, ನೀವೇಕೆ ಇನ್ನು ಅಲ್ಲಿಂದ ರಿಟಾಯರಾಗಿ ಇಲ್ಲಿ ಬಂದು ಉಳಿಯಬಾರದು? ಇಲ್ಲಿ ಪ್ರಪಂಚವನ್ನು ಕಾಣಬಹುದು.'

ಕಟ್ಟಕಡೆಗೂ ಒಮ್ಮೆ ಆತ ಕೊಟ್ಟ ಉತ್ತರದಿಂದ ಅವರು ಶರ್ಟನ್ನಿನಲ್ಲಿ ಅತ್ಯುತ್ತಮ ವಸತಿ ಸೌಕರ್ಯ ಕೊಡಬಲ್ಲ ಒಂದೇ ಒಂದು ಸ್ಥಾನವಾದ ಅರ್ಲ್ ಆಫ್ ವೆಸೆಕ್ಸ್ ಹಾಟೆಲಿನ ಹಾದಿ ಹಿಡಿದರು. ಆ ಪಟ್ಟಣಕ್ಕೆ ರೈಲು ಬಂದದ್ದರೊಂದಿಗೇ ಈ ಹಾಟೆಲು ತಿರುಗಿ ಕಟ್ಟಲಾಗಿತ್ತು.

ಉಳಿದವರನ್ನು ಹೊರಗೆ ಬಿಟ್ಟು ಮೆಲಬರಿ ಅಲ್ಲಿ ಯೋಗ್ಯ ಚೌಕಶಿ ಮಾಡಿದನು. ಅವನ ಗಾಬರಿ ಕಡಿಮೆ ಆಯಿತು. ಆದರೂ ಅವನ ಗೊಂದಲ ಹೆಚ್ಚಿತು. ಅಂಥ ಒಬ್ಬ ಹೆಂಗಸು ಅಲ್ಲಿ ಇರುವಳೆಂದು ಉತ್ತರ ದೊರೆತಾಗ 'ಅವಳು ನನ್ನ ಮಗಳೊ?' ಮೆಲಬರಿ ಕೇಳಿದನು, ಆ ಹಾಟೆಲ ಪರಿಚಾರಕನಿಗೆ ಅವಳು ಗೊತ್ತಿಲ್ಲ.

'ನಿನಗೆ ಆ ಬಾಯಿಯವರ ಹೆಸರು ಗೊತ್ತೋ?'

ಇದು ಮಾಣಿಗೆ ಗೊತ್ತಿದ್ದಿಲ್ಲ. ಹಾಟೆಲು ಈಗ ವಹಿಸಿಕೊಂಡವರು ಹೊಚ್ಚ ಹೊಸ ಜನ; ದೂರದಿಂದ ಬಂದವರು. ಅವರಿಗೆ ಉಳಿಯಲು ಬಂದ ಆ ಸದ್ಗೃಹಸ್ಥ ಚೆನ್ನಾಗಿ ನೋಡಿ ಗೊತ್ತು. ಆದ್ದರಿಂದ ಅವನ ಹೆಸರು ಹಚ್ಚಿಸುವ ಅವಶ್ಯಕತೆ ಅವರಿಗೆ ಕಾಣಲಿಲ್ಲ.

'ಓ ಆ ಸದ್ಗೃಹಸ್ಥ ಈಗ ಮತ್ತೆ ಕಾಣಿಸಿಕೊಳ್ಳುತ್ತಾನೆ' ಮೆಲಬರಿ ತನ್ನಷ್ಟಕ್ಕೆ

ಆಡಿಕೊಂಡನು. 'ಸರಿ; ನಾನು ಆ ಬಾಯುವರನ್ನು ಕಾಣಬೇಕಾಗಿದೆ' ಆತ ಜಾಹೀರು ಮಾಡಿದನು.

ಅವನ ನಿರೂಪ ಮೇಲೆ ಕಳುಹಿಸಲಾಯಿತು. ತುಸು ವಿಲಂಬದ ನಂತರ ಗ್ರೇಸಳ ಆಕೃತಿ ಮಹಡಿಯ ನಿಚ್ಚಣಿಕೆಯ ಸಂತ್ರಿನಲ್ಲಿ ಮೆಟ್ಟಲು ಇಳಿಯುತ್ತ ಬರುವುದು ಕಾಣಿಸಿತು. ಅವಳ ಠೀವಿ ನೋಡಿದರೆ ಆಕೆ ಅಲ್ಲಿಯೇ ವಾಸಿಸಿದವಳಂತೆ. ಆದರೆ ಇತರ ದೃಷ್ಟಿಯಿಂದ ಆಕೆ ಅಪರಾಧಿಯಂತೆ ಭಯ ಚಕಿತಳಂತೆ ಕಂಡುಬಂದಳು.

'ಇದೇನು?— ಎಲಾ ಇವಳೇ' ತಂದೆ ಆರಂಭಿಸಿದನು, 'ನೀನು ಅಜವಾನ ತರಲು ಹೋಗಿದ್ದಿಯೆಂದು ನಾನು ತಿಳಿದಿದ್ದೆ.'

'ಹೌದು ಹೌದು. ತರಲಿಕ್ಕೆ ಹೋಗಿದ್ದೆ — ಆದರೆ ಅದೆಲ್ಲ ಸರಿಹೋಯಿತು.' ಗ್ರೇಸಳು ಗಾಬರಿಯಿಂದ ಪಿಸುಗುಟ್ಟಿದಳು. ನಾನು ಇಲ್ಲಿ ಒಬ್ಬಳೇ ಇಲ್ಲ. ನಾನು ಇಲ್ಲಿ ಎಡ್ರೆಡ್‌ನ ಸಂಗಡ ಇದ್ದೇನೆ. ಇದು ಕೇವಲ ಒಂದು ಅಪಘಾತದ ಮೂಲಕ ಅಪ್ಪಾ.'

'ಎಡ್ರೆಡ್? ಅಪಘಾತ? ಅವನು ಇಲ್ಲಿ ಹೇಗೆ ಬಂದ? ಆತ ಇನ್ನೂರು ಮೈಲು ದೂರ ಇರುವನೆಂದು ನಾನು ತಿಳಿದಿದ್ದೆ.'

'ಹೌದು — ಹಾಗೆ ಆತ ಇರುವವನು — ನನ್ನ ಅರ್ಥಹೀಗೆ, ಇನ್ನೂರು ಮೈಲು ದೂರದಲ್ಲಿ ಅವನಿಗೆ ಒಂದು ಚೆನ್ನಾದ ಪ್ರಾಕ್ಟೀಸು ಸಿಕ್ಕಿದೆ. ಅದನ್ನು ಆತ ತನ್ನ ಹಣದಿಂದಲೆ ಕೊಂಡಿದಾನೆ. ಆ ಹಣ ಅವನ ಪಾಲಿಗೆ ಬಂದದ್ದು. ಆದರೆ ಅವನು ಇಲ್ಲಿಗೆ ಪಯಣ ಬೆಳೆಸಿದ; ನಾನು ಆ ಬೋನಿನಲ್ಲಿ ಪೂರ್ತಿ ಸಿಕ್ಕಿಯೇ ಬೀಳುತಿದ್ದೆ. ಮತ್ತು ಈ ರೀತಿ ನಾನು ಈಗ ಇಲ್ಲಿದ್ದೇನೆ. ನಿನಗೆ ಒಬ್ಬ ಆಳಿನೊಂದಿಗೆ ಈ ಸುದ್ದಿ ತಿಳಿಸಬೇಕೆಂದು ನಾವು ಇದೀಗ ವಿಚಾರದಲ್ಲಿದ್ದೆವು.'

ಈ ಸ್ಪಷ್ಟೀಕರಣದಿಂದ ಮೇಲಬರಿಗೆ ವಿಶೇಷವೇನೂ ಬೆಳಕು ಬಿದ್ದಂತೆ ಕಾಣಲಿಲ್ಲ.

'ನೀನು ಕಳ್ಳರ ಬೋನಿನಲ್ಲಿ ಸಿಕ್ಕಿಬಿದ್ದೆಯಾ?'

'ಹೌದು — ನನ್ನ ಬಟ್ಟೆ. ಇದು ಕೂಡಿಬಂದದ್ದು ಈ ಮೂಲಕವೇ. ಈಗ ಎಡ್ರೆಡ್ ಮಹಡಿಯಲ್ಲಿ ನಡುಮನೆಯಲ್ಲಿ ಕೂತಿದ್ದಾನೆ' ಆಕೆ ಮುಂದುವರಿದಳು. 'ನಿನ್ನನ್ನು ಕಾಣಲು ಆತ ಒಪ್ಪದಿರಲಾರ. ನನಗೆ ಖಾತ್ರಿಯಿದೆ.'

'ಅಯ್ಯೋ ದೈವವೇ ನಾನೇನು ಅವನನ್ನು ಕಾಣಬೇಕಾಗಿಲ್ಲ. ಈಗಾಗಲೇ ಅವನನ್ನು ವಿಪರೀತ ಸಲ ಕಂಡಿದ್ದಾಗಿದೆ. ನಿನ್ನ ಸಂತೋಷಕ್ಕೆಂದೇ ಆದರೆ ಇನ್ನೊಮ್ಮೆ ಎಂದಾದರೂ ಅವನನ್ನು ಕಾಣುವೆನು'

'ಅವನು ನನ್ನನ್ನು ನೋಡಲು ಬಂದನು. ನಾನು ಈಗ ಹೇಳಿದ ಆ ದೊಡ್ಡ ಪ್ರಾಕ್ಟೀಸಿನ ಪಾಲುಗಾರಿಕೆಯ ಬಗೆಗೆ ನನ್ನ ಸಲಹೆ ಕೇಳಬೇಕೆಂದು ಬಂದನು. ಅದು ತುಂಬ ಆಶಾದಾಯಕವಾಗಿದೆ.'

'ಓ ಹೀಗೋ. ಬಹಳ ಸಂತೋಷ' ಮೆಲಬರಿ ಶುಷ್ಕವಾಗಿ ಆಡಿದನು.

ಕೆಲ ನಿಮಿಷ ಸ್ತಬ್ಧತೆ ಕವಿಯಿತು. ಆ ನಡುವೆ ಮೆಲಬರಿಯ ಸಂಗಾತಿಗಳ ಪ್ರಶ್ನಾರ್ಥಕ ಮೋರೆಗಳೂ ಕಂದು ಬಿಳಿ ಬಟ್ಟೆಗಳೂ ಬಾಗಿಲಲ್ಲ ಕಾಣಿಸಿಕೊಂಡವು.

'ನೀನು ನಮ್ಮ ಜತೆ ಬರುವುದಿಲ್ಲವೆ?' ಆತ ಕೇಳಿದನು.

'ನಾ — ನಾನು ಒಲ್ಲೆ' ಅಂದಳು ಗ್ರೇಸ ನಾಚಿ ಕೆಂಪಾಗುತ್ತಾ.

'ಹೂಂ — ಸರಿ. ಒಳ್ಳೇದು. ನಿನಗೆ ನೀನೇ ಯಜಮಾನಿ.' ಆತ ಉತ್ತರಿಸಿದನು. ಅವನ ದನಿ ಅವನ ಮಾತಿಗೆ ವಿರುದ್ಧವಾದ ಭಾವವನ್ನೆ ಸಾರಿ ಹೇಳುತ್ತಿತ್ತು. 'ಗುಡ್‌ನೈಟ್' ಅಂದು ಮೆಲಬರಿ ಬಾಗಿಲಕಡೆ ಹಿಂಜರಿದನು.

'ಸಿಟ್ಟಾಗಬೇಡ, ಅಪ್ಪಾ,' ಅವನನ್ನು ಕೆಲವು ಹೆಜ್ಜೆ ಹಿಂಬಾಲಿಸಿ ಆಕೆ ಅಂದಳು. 'ನಾನು ಇದನ್ನು ಮಾಡಿದ್ದು ಒಳಿತಿಗಾಗಿಯೇ'

'ನನಗೆ ಸಿಟ್ಟಿಲ್ಲ. ಇಷ್ಟು ಮಾತ್ರ ನಿಜ. ಈ ವಿಷಯದಲ್ಲಿ ನಾನು ತುಸು ತಪ್ಪುದಾರಿಗೆ ಎಳೆಯಲ್ಪಟ್ಟೆ. ಏನೇ ಇರಲಿ, ಗುಡ್‌ನೈಟ್. ನಾನೀಗ ಮನೆಗೆ ಹೋಗಬೇಕು.'

ಆತ ಹಾಟೇಲು ಬಿಟ್ಟು ಹೊರಬಿದ್ದ. ಅದೂ ಪರಿಹಾರದ ಭಾವನೆ ಇಲ್ಲದೇ ಅಲ್ಲ. ಏಕೆಂದರೆ ತನ್ನ ಕಳೆದುಕೊಂಡ ಮಗಳೊಂದಿಗೆ ಮಾತಾಡುವಾಗ ಅಪರಿಚಿತರ ಕಣ್ಣು ಕೆಳಗೆ ಇರುವದು ಅವನಿಗೆ ತುಂಬ ಸಂಕಟದ್ದಾಗಿತ್ತು. ಅವನ ಈ ಶೋಧಕ ಪಡೆಯು ಅಲ್ಲಿ ಅಸಡ್ಡಾಳ ಕಾಣುತಿತ್ತು. ಅವರು ಇದ್ದಕ್ಕಿದ್ದಂತೆ ಹುಡುಕಲು ನುಗ್ಗಿದವರು. ಕೆಲವರು ಬರೆ ಶರ್ಟ ತೊಟ್ಟವರು, ಇತರರು ತೊಗಲಿನ ಮೇಲಂಗಿ ಕಟ್ಟಿಕೊಂಡವರು; ಎಲ್ಲರೂ ಬಹಳಷ್ಟು ಮಾಸಿದವರು, ಮರಗಳ ತೊಗಟೆ ಸುಲಿಯುವ ಕೆಲಸದಿಂದ ಎದ್ದು ಬಂದವರು ಹೊರತು ಶರ್ಟಿನ್ ಸಂತೆಯ ಬಟ್ಟೆ ತೊಟ್ಟವರಲ್ಲ; ಕ್ರೀಡ್ಸ ತನ್ನ ಹಗ್ಗ ಗರುಡ ಪಾತಾಳಗಳನ್ನು ಹೊತ್ತು ಮುಂದೊದಗಲಿರುವ ಏನೋ ದುರಂತದ ಅವಿರ್ಭಾವದೊಂದಿಗೆ ಈ ಅಸಡ್ಡಾಳ ಅಂದ ಗೇಡಿತನಕ್ಕೆ ಒಂದು ವಿಷಣ್ಣತೆಯನ್ನು ಸೇರಿಸುವಂತಿತ್ತು.

'ಈವಾಗ ನೆರೆಹೊರೆಯವರೇ' ಮೆಲಬರಿ ಅವರನ್ನು ಕೂಡುತ್ತಲೇ ಅಂದನು 'ತುಂಬ ತಡವಾಗಿದೆ. ಆದ್ದರಿಂದ ಆದಷ್ಟು ಬೇಗ ನಾವು ಮನೆಯತ್ತ ಕಾಲು ಓಡಿಸುವಾ. ನಿಮಗೆ ಒಂದು ಮಾತು ಹೇಳಬೇಕಾಗಿದೆ. ಇಲ್ಲಿ ಏನೋ ತಪ್ಪಾಗಿದೆ— ಫಿಟ್ಝಪಿಯರ್ಸ ಮತ್ತು ಅವನ ಹೆಂಡತಿ ಇಬ್ಬರೂ ಏನೇನೋ ಒಡಂಬಡಿಗೆ ಮಾಡಿ ಕೊಂಡಿದ್ದಾರೆ. ಅದೇನೆಂಬುದು ನನಗೆ ಅರ್ಥವಾಗಲಿಲ್ಲ. ಮಿಡ್‌ಲ್ಯಾಂಡ್ ಸೀಮೆಯಲ್ಲಿ ಯಾವದೋ ಮಹತ್ವದ ಪ್ರಾಕ್ಟೀಸು ಅವನ ಪಾಲಿಗೆ ಬಂದಿದೆ. ಆದ್ದರಿಂದ ಒಂದು ರಾತ್ರಿ ಅವಳು ಅವನನ್ನು ಭೆಟ್ಟಿ ಆಗುವುದು ಅಗತ್ಯವಿದ್ದಿತು—ಅವಳು ಹಾಗೆ ಅನ್ನುತ್ತಾಳೆ. ಆದದ್ದೆಲ್ಲ ಇಷ್ಟೇ—ಮತ್ತು ನನಗೆ ತುಂಬ ದುಃಖವಾಗಿದೆ. ನಿಮ್ಮನ್ನು ಇದಕ್ಕಾಗಿ ಇಲ್ಲಿಯವರೆಗೆ ಎಳೆದು ತಂದನಲ್ಲ ಎಂದು.'

'ಸರಿ ಹಾಗಾದರೆ' ಚರಖಿದವನು ಅಂದನು 'ನಾವಿಲ್ಲಿ ಏಳು ಮೈಲು ದೂರ

ಮನೆ ಬಿಟ್ಟು ಕಾಲೆಳೆದುಕೊಂಡು ಬಂದ್ವಿ. ಈಗ ಮತ್ತೆ ರಾತ್ರಿಯ ವೇಳೆ ನಮ್ಮದೆಂದು ಹೇಳಲಿಕ್ಕೆ ಇಲ್ಲಿ ಒಂದು ಮನೆಯೂ ಇಲ್ಲ. ನಾಲ್ಕು ಕಾಲಿನ ಪ್ರಾಣಿಯೂ ಹರಿದಾಡುವುದಿಲ್ಲ. ನನ್ನ ಅಂಬೋಣ. ಹೀಗೆ ನಾವು ಇಡೀ ರಸ್ತೆ ತಿರುಗಿ ತುಳಿಯುವುದಕ್ಕೆ ಮುಂಚೆ ನಮ್ಮ ನರಗಳಿಗೆ ತಾಕತ್ತು ಬರಲಿಕ್ಕೆ ಒಂದು ತುತ್ತು ಮತ್ತು ಏನಾದರೊಂದು ಹನಿ ಗುಟುಕು ತೆಗೆದುಕೊಂಡರೆ ಹೇಗೆ? ನನ್ನ ಗಂಟಲಂತೂ ಒಣಗಿ ಗಳವಾಗಿದೆ. ನೀವೇನು ಅಂತೀರಿ?'

ಈ ಘೋಷಣೆಯ ಪ್ರಶ್ನೆಯ ಮೇಲೆ ಎಲ್ಲರೂ ಒಮ್ಮತಕ್ಕೆ ಬಂದರು. ಮತ್ತು ಅಲ್ಲಿಂದ ಹಳೆಯ ಹಿಂದಿನ ಓಣಿಗೆ ಬಂದರು. ಅಲ್ಲಿಯ ಮದ್ಯದ ಅಂಗಡಿಯ ಬಾಗಿಲಿಗೆ ಇಳಿಬಿಟ್ಟ ಕೆಂಪು ಪರದೆಯೊಂದೆ ಹೊಳೆಯುವ ಬಣ್ಣದ ಒಡವೆ ಆಗಿತ್ತು. ಹಿಂದೆ ವಿಂಟರಬೋರ್ನ್ ಗ್ರೇಸಳನ್ನು ಊಟಕ್ಕೆಂದು ತಂದುಬಿಟ್ಟದ್ದು ಇಲ್ಲಿಯೇ ಆಗಿತ್ತು. ಅವರೆಲ್ಲ ಅಂಗಡಿಯ ಕೊಠಡಿಯಲ್ಲಿ ಎಡವುತ್ತ ನುಗ್ಗಿ ಕುಕ್ಕರಿಸಿದೊಡನೆ ಮೆಲಬರಿ ಅವರಿಗೆ ತಿಂಡಿ ತೀರ್ಥ ಹಂಚಲು ಅಪ್ಪಣೆ ಕೊಟ್ಟನು. ಅವರು ಅಲ್ಲಿಯ ಉದ್ದ ಮೇಜಿನಗುಂಟ ಆರಾಮವಾಗಿ ಕೂತು ಕೆಳಗೆ ಮೀನಿನ ಎಲುಬುಗಳು ತುಂಬಿ ಹರಡಿದ ಉಸುಕಿನಲ್ಲಿ ತಮ್ಮ ಕಾಲುಗಳನ್ನು ಚಾಚಿದರು. ಮತ್ತು ಮೆಲಬರಿ ವಾಡಿಕೆಯಂತೆ ಅಸ್ವಸ್ಥ ಚಂಚಲತೆಯಲ್ಲಿ ಬಾಗಿಲಿಗೆ ಹೋಗಿ ನಿಂತು ಅವರಿಗಾಗಿ ಅತ್ತಿಂದಿತ್ತ ಕಣ್ಣು ಹಾಯಿಸಿದನು.

'ಸರಿ—ಅವನು ಅವಳ ಗಂಡ' ಮೆಲಬರಿ ತನ್ನಷ್ಟಕ್ಕೆ ಅಂದನು. 'ಅವಳಿಗೆ ಇಷ್ಟವಿದ್ದರೆ ಅವನನ್ನು ತನ್ನ ಹಸೆಗೆ ತಿರುಗಿ ತೆಗೆದುಕೊಳ್ಳಲಿ. ಆದರೆ ಅವಳು ನೆನಪಿಟ್ಟುಕೊಳ್ಳಲಿ. ಈ ವರ್ಷ ಇವಳನ್ನು ಹೇಗೋ ಹಾಗೆಯೇ ಮುಂದಿನ ವರ್ಷ ಇವನು ಕೊರಳಿಗೆ ಬಿದ್ದು ಮುದ್ದಾಡುವ ಹೆಣ್ಣು, ಈಗ, ಇದೇ ಗಳಿಗೆಗೇ, ಇನ್ನೆಲ್ಲಿಯೋ ನಡೆದಾಡುತ್ತಿದ್ದಾಳೆ, ನಗೆಯಾಡುತ್ತಿದ್ದಾಳೆ. ಫೆಲಿಸ ಚಾರ್ಮಂದಳನ್ನು ಕಳೆದ ವರ್ಷ ಮಾಡಿದಂತೆ, ಮತ್ತು ಸೂಕೆ ದಾಮಸನ್ನಳನ್ನು ಆಚೆಯ ವರ್ಷ. ಇವಳಿಗೆ ಇದೊಂದು ವ್ಯರ್ಥ ಆಸೆ, ಹತಾಶೆ. ದೇವರಿಗೆ ಗೊತ್ತು. ಇದರ ಕೊನೆ ಏನೋ''

ಆ ಅಂಗಡಿಯ (ಖಾನಾವಳಿ) ಯ ಒಳಗೂ ಪುನರ್ಮಿಲಿತ ದಂಪತಿಯ ಕುರಿತೇ ಮಾತು ನಡೆದಿತ್ತು.

'ಆಕೆ ನನ್ನ ಮಗಳಾಗಿದ್ದರೆ ನಾನು ಒಳ್ಳೆಯ ಏಟು ಬಿಗಿಯುತ್ತಿದ್ದೆ. ತೋಟಕ್ಕೆ ಹೋಗುತ್ತೇನೆಂದು ನೆಪಮಾಡಿ ನಮ್ಮಂಥ ಮಂದಿಯನ್ನು ನಾಳೆ ನಸುಕಿನ ಐದು ಗಂಟೆಗೆ ಏಳಬೇಕಾದವರನ್ನು ಹೀಗೆ ಹನ್ನೆರಡು ಮೈಲು ಓಡಲು ಹಚ್ಚಿದಳಲ್ಲ.' ಅಂದ ಒಬ್ಬ ತೊಗಟೆ ಸುಲಿಯುವ ಆಳು. ಈತ ಮೆಲಬರಿಯ ಬಳಿಗೆ ನೇಮದಿಂದ ಕೆಲಸ ಮಾಡುವವನಲ್ಲ. ಆದ್ದರಿಂದ ತುಸು ಜೋರಾದ ಅಭಿಪ್ರಾಯಗಳನ್ನು ಆಡಿ ತೋರಿಸಬಲ್ಲ.

'ನಾನು ಇಷ್ಟು ಬಿಸಿ ಬಿಸಿ ಮಾತನಾಡಲಾರೆ,' ಚರಖ ತಿರುಗಿಸುವಾತ ಅಂದನು. 'ಆದರೆ ಗಂಡ ಹೆಂಡತಿ ತಾವು ಒಬ್ಬರನ್ನೊಬ್ಬರು ಬಿಟ್ಟೆವೆಂದು ಊರ ತುಂಬ ಸುದ್ದಿ

ಮಾಡಿ ನೆರೆಹೊರೆಯುವರನ್ನೆಲ್ಲ ಕೆರಳಿಸಿ ಕೊನೆಗೆ ಅವರನ್ನೆಲ್ಲ ಹೀಗೆ ಗಾಂಪರನ್ನಾಗಿ ಮಾಡುವುದಾದರೆ ನಾನು ಈ ಇಪ್ಪತ್ತೈದು ವರ್ಷ ಒಂದು ಕಾಲಮೇಲೆ ನಿಂತದ್ದೇ ಸುಳ್ಳು.'

ಅವನ ಮಾತು ಕೇಳಿದವರಿಗೆಲ್ಲ ಗೊತ್ತು, ಅವನ ಈ ಒಂಟಿಕಾಲಿನ ಉಲ್ಲೇಖ ಅವನು ವೆಂಟ್ಟೆ ತಿರುಗಿಸುವ ಲೇಥಿನ ಕುರಿತೆಂದು. ಇದನ್ನು ಹೀಗೆ ಸೂಚ್ಯವಾಗಿ ಹೇಳಿ ಅವರ ಮೇಲೆ ಪ್ರಭಾವ ಬೀರಬೇಕೆಂದು ಅವನ ಬಯಕೆ. ಮತ್ತು ಕ್ರೀಡ್ಸನಡುವೆ ದನಿಗೂಡಿಸಿದನು 'ಈ ಪ್ರಾಯದ ಹೆಣ್ಣುಗಳು ಈಗಿನ ದಿನಮಾನದಲ್ಲಿ ಹೀಗೆ ಅಂಕೆ ಮೀರಿ ಮೈಸೊಕ್ಕಿನಿಂದ ನಡೆಯುವುದೇ ಒಂದು ಥರಾ ಆಗಿಬಿಟ್ಟಿದೆ. ಅವಳೇಕೆ ತನ್ನ ಅಪ್ಪನ ಹತ್ತಿರವೇ ಉಳಿದು ನಂಬಿಗಸ್ತಳಾಗಿ ಇರಬಾರದು ?' ಬಡ ಕ್ರೀಡ್ಸ ನಂಬಿಗಸ್ಥಿಕೆಯು ಮಾತಿನಿಂದ ತನ್ನ ಹಳೆಯ ಒಡೆಯನ ಬಗೆಗೇ ವಿಚಾರ ಮಾಡುವಂತಿತ್ತು.

'ಆದರೆ ಮಂದಿಯನ್ನು ಹೀಗೆ ಮೋಸ ಮಾಡುವದು ಮದುವೆಯ ತದಂಗದಲ್ಲಿ ಅಪೂರ್ವವೇನೂ ಅಲ್ಲ ಬಿಡಿ.' ಕ್ವಾಟ್ರೀಗೌಡ ಅಂದನು, 'ನನಗೆ ಒಂದು ಗಂಡ ಹೆಂಡಿರ ಜೋಡಿ ಗೊತ್ತು. ಅಲ್ಲಿ ಯಾರೇನು ಹೊರಗಿನವರಿಲ್ಲ. ಎಲ್ಲ ನಮ್ಮವರೇ. ಆದ್ದರಿಂದ ಒಪ್ಪಿಕೊಂಡರೆ ತಪ್ಪಿಲ್ಲ. ಆ ಜೋಡಿ ನನ್ನದೇ ಆಪ್ತರು—ಅವರು ಈ ಒಂದು ಗಂಟೆ ಕಾಲ ಉರಿಪಿಂಡ ಅಂದರೆ ಉರಿಪಿಂಡರಾಗುತ್ತಿದ್ದರು—ಬೆಂಕಿ ಕೆದರುವ ಸರಳಾದರೆ ಸರಳು, ಚಿಮುಟವಾದರೆ ಚಿಮುಟ, ತಿದಿ ಆದರೆ ತಿದಿ. ಕರಿಯುವ ಬಂಡಿ ಆದರೆ ಬಂಡಿ. ಕೈಗೆ ಸಿಕ್ಕಿದ್ದು ಒಬ್ಬರಿಗೊಬ್ಬರು ಎತ್ತಿ ಒಗೆದು ಕೋಣೆತುಂಬ ತೂರಾಡಿಸಿ ಮನೆ ತುಂಬ ಆಚೆ ಈಚೆ ಮೇಲೆ ಕೆಳಗೆ ಓಡಾಡಿ ತಮ್ಮ ಸೇಡಿನ ಆರ್ಭಟದಿಂದ ತುಂಬುತ್ತಿದ್ದರು. ಅದೇ ಮರುಗಳಿಗೆ ಅವರಿಬ್ಬರೂ ದನಿಗೂಡಿಸಿ ಒಟ್ಟಾಗಿ ಜೋಡಿಯಲ್ಲಿ ಹಂಡಬಂಡ ಗೋವಿನ ಪದ್ಯ ಹಾಡುವುದನ್ನು ನೀವೆಲ್ಲ ಕೇಳಬಹುದಿತ್ತು—ಇಬ್ಬರೂ ದೇವರ ಜವಳಿ ಮಕ್ಕಳಷ್ಟು ಶಾಂತಮೂರ್ತಿಗಳಾಗಿ, ಅವರ ಕಂಠಗಳೂ ಬಹಳ ಸೊಗಸಾಗಿದ್ದವು. ಬೀದಿಯಲ್ಲಿ ಲಾವಣಿ ಹಾಡುತ್ತ ತಿರುಗುವವರಂತೆ ಅವರ ತಾರಸ್ವರಗಳು ಇಂಪಾಗಿ ಕೇಳಿಸುತ್ತಿದ್ದವು. ಒಬ್ಬರಿಗೊಬ್ಬರು ಎತ್ತಿಕೊಟ್ಟು.'

'ಈ ಜೋಡಿಗಳೇ ಹಾಗೆ. ಅವರು ತಮ್ಮ ಜಗಳಗಳನ್ನು ಏನೆಲ್ಲ ವಿಚಿತ್ರ ರೀತಿಯಲ್ಲಿ ರಾಜಿ ಮಾಡಿಕೊಂಡುಬಿಡುತ್ತಾರೆ.' ಈ ತೊಗಟೆ ಸುಲಿಯುವಾತ ಅಂದನು 'ನನಗೆ ಒಬ್ಬ ಹೆಂಗಸು ಗೊತ್ತು. ಅವಳ ಗಂಡ ಅವಳನ್ನು ಬಿಟ್ಟುಹೋಗಿ ೨೪ ವರ್ಷಗಳಾಗಿದ್ದವು. ಆದರೆ ಒಂದು ರಾತ್ರಿ ಆತ ಮನೆಗೆ ಬಂದ. ಆಗ ಈ ಹೆಂಡತಿ ಬೆಂಕಿಯ ಬಳಿಯಲ್ಲಿ ಕೂತಿದ್ದಳು; ಆತ ಬಂದು ಆಚೆಗೆ ಹೊಗೆಗಿಂಡಿಯ ಮೂಕೆಯಲ್ಲಿ ಕುಳಿತ. 'ಒಳ್ಳೇದು' ಅವಳೆಂದಳು. 'ನಿನಗೇನಾದರೂ ಸಮಾಚಾರವಿದೆಯೇ ?' 'ನನಗೆ ಗೊತ್ತಿದ್ದ ಮಟ್ಟಿಗೆ ಏನೂ ಇಲ್ಲ. ನಿನ್ನದೇನು ಸಮಾಚಾರ ?' ಅಂದನು ಆತ. 'ಇನ್ನೇನೂ ಇಲ್ಲ.' ಆಕೆ ಹೇಳಿದಳು 'ಇಷ್ಟೇ—ನಿನ್ನ ನಂತರ ಕೈಹಿಡಿದ ಗಂಡನಿಂದ ಹುಟ್ಟಿದ ನನ್ನ ಮಗಳ ಮದುವೆ ಕಳೆದ ತಿಂಗಳು ಆಯಿತು. ಅವನೂ ನನ್ನನ್ನೂ

ವಿಧವೆಯಾಗಿ ಮಾಡಿಬಿಟ್ಟು ಹೋದ ಒಂದು ವರ್ಷದಮೇಲೆ. 'ಓ' ಮತ್ತೇನಾದರೂ ಇದೆಯೊ ?' ಆತ ಕೇಳಿದನು.

'ಇಲ್ಲ' ಅಂದಳಾಕೆ. ಮತ್ತು ಅವರಿಬ್ಬರೂ ಅಲ್ಲಿಯೇ ಅಗಿಷ್ಟಿಗೆಯ ಆಚೆ ಈಚೆ ಕೂತೆ ಉಳಿದರು. ನೆರಮನೆಯವರು ಕಂಡಾಗ ಇಬ್ಬರೂ ತಮ್ಮ ತಮ್ಮ ಕುರ್ಚಿಯಲ್ಲಿ ಗೊರಕೆ ಹೊಡೆಯುತ್ತಿದ್ದರು—ಅವರಿಗೆ ಮುಂದೇನು ಮಾತನಾಡಲಿಕ್ಕೆ ವಿಷಯವೇ ಸಿಗದೆ ಸುಮ್ಮನೆ ಕೂತಲ್ಲಿಯೇ ನಿದ್ದೆಹೋಗಿದ್ದರು.'

'ಸರಿ ಆ ಗಂಡಸು ಯಾರೇ ಇರಲಿ, ನನಗೆ ಅದರ ಫಿಕೀರು ಇಲ್ಲ.' ಕ್ರೀಡ್ಸ ಅಂದನು. 'ಅವರಿಗೆ ತಿರುಗಿ ಒಬ್ಬರಲ್ಲೆ ಒಬ್ಬರು ರುಚಿ ಕಂಡುಕೊಳ್ಳಲಿಕ್ಕೆ ತುಂಬ ಕಾಲ ಹಿಡಿಯಿತು. ಆದರೆ ಈ ಇಬ್ಬರಿಗೆ ಹಾಗಲ್ಲ.'

'ಇಲ್ಲ ಅಲ್ಲದೆ ಆತ ಬರೇ ಶುಂಠಿ—ಒಣ ರಗಳೆಯ ಮನುಷ್ಯ. ಮತ್ತು ಇವಳೋ ಮಹಾಪಂಡಿತೆ.'

'ಈಗಿನ ಕಾಲದಲ್ಲಿ ಈ ಹೆಂಗಸಾದರೂ ಏನೆಲ್ಲ ಕಲಿತವರಿರುತ್ತಾರಪ್ಪಾ. ಎಷ್ಟೆಲ್ಲ ಬಲ್ಲವರಿರುತ್ತಾರೆ.' ಚರಖದ ಆಸಾಮಿ ಅಂದ 'ನನ್ನ ಕಾಲದಲ್ಲಿಯು ಹಾಗೆ ಇವರನ್ನು ಮೋಸಗೊಳಿಸಲಿಕ್ಕೆ ಬರುವುದಿಲ್ಲ.'

'ಹಾಗಾದರೂ ಅವರು ಬಲ್ಲ ವಿಷಯವೇನೂ ಕಡಿಮೆ ಇದ್ದಿಲ್ಲ.' ಜಾನ ಅಪ್‌ಜಾನ ಅಂದನು 'ಆಗಲೂ ನಮ್ಮ ಗಂಡಸರಿಗಿಂತಲೂ ಆವರು ಬಹಳಷ್ಟು ಹೆಚ್ಚೇ ತಿಳಿದಿರುತ್ತಾರೆ. ಅದೇಕೆ ನಾನು ನನ್ನ ಹೆಂಡತಿ ಅವಳ ಆರಾಧನೆಗೆ ಬಿದ್ದಾಗ ಆಕೆ ನನ್ನನ್ನು ತನ್ನ ಚೆಲುವಾದ ಬದಿಗೆ ನಿಂತು ನಡೆಯುಲು ಹಚ್ಚುವ ಅವಳ ಆ ಕೌಶಲ್ಯವೇ ಕೌಶಲ್ಯ. ಅದು ಯಾರ ನಂಬಿಗೆಯನ್ನು ಮೀರುವಂಥದಾಗಿತ್ತು. ನಿಮಗೆ ಗೊತ್ತಿರಲು ಸಾಕು ಅವಳ ಮೋರೆಗೆ ಒಂದು ಚೆಲುವಾದ ಬದಿಯೂ ಇದೆ—ಇನ್ನೊಂದು ಅಂದಗೇಡಿ ಬದಿಯೂ ಇದೆ.'

'ನಾನೇನು ಅದನ್ನು ಅಷ್ಟು ವಿಶೇಷವಾಗಿ ವಿಂಗಡಿಸಿ ನೋಡಿಲ್ಲ.' ಚರಖದವ ಶಾಂತವಾಗಿ ಹೇಳಿದನು.

'ಸರಿ' ಅಪ್‌ಜಾನ್ ಧೃತಿಗೆಡದೆ ಮುಂದರಿದನು 'ಅವಳಿಗೆ ಹಾಗಿದೆ. ಈ ಪ್ರಪಂಚದಲ್ಲಿ ಎಲ್ಲ ಹೆಂಗಸರಿಗೂ ಹಾಗೇನೇ—ಅವರು ಒಂದು ಮಗ್ಗಲಿಗೆ ಇನ್ನೊಂದು ಮಗ್ಗಲಿಗಿಂತ ಹೆಚ್ಚು ಚೆಂದವಾಗಿರುತ್ತಾರೆ. ಮತ್ತು ನಾನಂದಂತೆ ತನ್ನ ಚೆಂದ ಮಗ್ಗಲಲ್ಲಿಯೆ ನಾನು ನಡೆಯುವಂತೆ ಮಾಡಲು ಅವಳು ಪಡುವ ಕಷ್ಟಕ್ಕೆ ಕೊನೆನೇ ಇಲ್ಲ. ನಾವು ಸೂರ್ಯನ ಜತೆಗೇ ಸಾಗುತ್ತಿರಲಿ ಇದಿರಾಗಿ ಸಾಗುತ್ತಿರಲಿ, ಗುಡ್ಡ ಏರುತ್ತಿರಲಿ, ಇಳಿಯುತ್ತಿರಲಿ, ಗಾಳಿಯುಗುಂಟ ನಡೆದಿರಲಿ, ಅಡ್ಡಹಾಯ್ದಿರಲಿ, ಅವಳ ಮೋರೆಯ ಮೇಲಿನ ಆ ಮಚ್ಚೆನ ಗಂಟು ಬೇರೆಯ ಕಡೆಗೆ ಇರುತ್ತಿತ್ತು. ಮತ್ತು ಗಲ್ಲದ ಗುಳಿ ನನ್ನ ಕಡೆಗೇ. ನಾನೋ ಸಾದಾ ಬಡವಾ—ಅವಳ ತಿರವು ಮುರವುಗಳನ್ನು ತಿಳಿದುಕೊಳ್ಳಲಿಕ್ಕೆ ಅವಳೂ ನನಗಿಂತ ಎರಡು ವರ್ಷಕ್ಕೆ ಎಳೆಯವಳಾದರೂ ಅಷ್ಟೊಂದು

ತಂತ್ರಗಾರ್ತಿ. ನನ್ನನ್ನು ಕುರುಡ ಟಗರವನ್ನು ಕೊರಳಿಗೆ ನೂಲು ಕಟ್ಟಿ ಎಳೆದೊಯ್ಯು ವಂತೆ ಜಗ್ಗಿ ಒಯ್ಯುತ್ತಿದ್ದಳು; ಅದು ನಮ್ಮ ಪ್ರೇಮಾರಾಧನೆಯ ಮೂರನೆಯ ಹಂತವಿತ್ತು. ಇಲ್ಲಿ ಈಗಲೇ ಹೆಂಗಸರು ಹೆಚ್ಚು ಜಾಣರಾಗಿದ್ದರೆಂಬ ಮಾತು ಹುರುಳಿಲ್ಲದ್ದು. ಅವರು ಯಾವಾಗಲೂ ಬೇರೆ ಏನೂ ಇದ್ದಿದ್ದೇ ಇಲ್ಲ.'

'ಮಿಸ್ಟರ್ ಆಪ್‌ಜಾನ್, ಪ್ರೇಮಾರಾಧನೆಯಲ್ಲಿ ಅದೆಷ್ಟು ಹಂತರವಿರುತ್ತದೆ?' ಒಬ್ಬ ಹರೆಯದ ಆಳು ಕೇಳಿದನು—ಹಿಂದೆ ವಿಂಟರಬೋರ್ನನ ಕ್ರಿಸ್‌ಮಿಸ್ ಮೋಜವಾಣಿ ಯಲ್ಲಿ ನೆರವಾದವನು ಅವನೇ.

'ಐದು—ತೀರ ತಣ್ಣಗಿನಿಂದ ತೀರ ಬಿಸಿ ಕಾವೇರಿದತನಕ ಐದು—ನನ್ನ ಮಟ್ಟಿಗೆ ಅಂತೂ ಐದೇ ಇದ್ದವು.'

'ಅವುಗಳ ವರದಿ ಕೊಡ್ತೀರಾ?'

'ಸರಿ ಕೊಡಬಲ್ಲೆ; ನಿಜವಾಗಿಯೂ ಕೊಡಬಲ್ಲೆ. ಆದರೆ ಅದೀಗ ಅನಾವಶ್ಯಕ. ಅವು ನಿನಗೆ ತನ್ನಾರೆ ಪ್ರಕೃತಿಯಿಂದಲೇ ಬರುತ್ತವೆ. ಪ್ರಾಯದ ಪೋರಾ, ಬೇಗ ಬಂದಷ್ಟು ನಿನಗೆ ಲೇಸು.'

'ಸದ್ಯಕ್ಕಂತೂ ಫಿಟ್ಝ್‌ಪಿಯರ್ಸನ ಹೆಂಡತಿ ಆ ಡಾಕ್ಟರನನ್ನು ಎಳೆದು ಒಯ್ದೇ ಇದ್ದಾಳೆ—ನಿನ್ನ ಹೆಂಡತಿ ನಿನ್ನ ಒಯ್ದಂತೆ' ಚರಖದವನು ಅಂದನು 'ಅವನನ್ನು ಪೂರಾ ಈಲು ಮಾಡಿದ್ದಾಳೆ, ಮೆತ್ತಗೆ ಮಾಡಿದ್ದಾಳೆ. ಆದರೆ ಇದು ಎಷ್ಟು ಕಾಲ ತಾಳುವದೊ ನಾನು ಹೇಳಲಾರೆ. ಒಂದು ರಾತ್ರಿ ನಾನು ನಮ್ಮ ತೋಟದ ತುದಿಗೆ ತಂತಿಯ ಬೇಲಿ ಸರಿಮಾಡುತ್ತಿದ್ದೆ. ಆಗ ಆತ ಅವಳಿಗೆ ಬೇಲಿಯ ಆಚೆಯಿಂದ ಭೆಟ್ಟಿಯಾದ. ಆಗ ಅವಳು ಅವನನ್ನು ದೊರೆಸಾನಿಯಂತೆ ದೂರವಿಟ್ಟು ಬಿಂಕದಲ್ಲಿ ನಡೆದುಕೊಂಡು, ಅವನಿಂದ ಜಪ್ಪಿಸಿಕೊಂಡು ಆ ಬಡಪಾಯಿಯನ್ನು ಮುಂದೆ ಬರಲಿಕ್ಕೇ ಕೊಡಲಿಲ್ಲ. ಅದನ್ನು ನೋಡಿದರೆ ಯಾರ ರಕ್ತವೂ ಹೆಪ್ಪುಗಟ್ಟಬಹುದಿತ್ತು. ಅಂಥ ಹುಡುಗಿ ಹಾಗೆ ನಡೆಯಬಹುದೆಂದು ನನಗೆಂದೂ ಅನಿಸಿದ್ದಿಲ್ಲ.'

ಈ ಮೆಲಬರಿ ಕೋಣೆಯತ್ತ ಹೊರಳಿದನು. ಆಗ ಆ ಮಂದಿ ತಮ್ಮ ದಣಿವಾರಿತೆಂದು ಹೇಳಿದರು. ಅವರೆಲ್ಲರೂ ಮನೆಯ ಕಡೆಗೆ ಮರುಪ್ರಯಾಣ ಆರಂಭಿಸಿದರು. ಈಗ ಅದು ಅಷ್ಟೇನು ಹಿಗ್ಗಿಲ್ಲದೆ ಸಾಗಲಿಲ್ಲ. ಏಕೆಂದರೆ ಬಾನಿನಲ್ಲಿ ಎತ್ತರಕ್ಕೆ ತಿಂಗಳು ಏರಿಬಂದು ಸುತ್ತಲೂ ಬೆಳಕು ಹರಡಿತ್ತು. ಇಡಿಯ ಅಂತರವನ್ನು ಕಾಲ್ನಡಿಗೆಯಿಂದಲೆ ಕ್ರಮಿಸಬೇಕಿತ್ತು. ಆದ್ದರಿಂದ ಹೆದ್ದಾರಿಗಿಂತ ಹತ್ತಿರದ ಒಂದು ಕಾಲ್ದಾರಿ ಹಿಡಿದು ಅವರು ಬಂದರು. ಆ ಹಳ್ಳಿಗಾಡನ್ನು ಚೆನ್ನಾಗಿ ಬಲ್ಲವರಿಗಲ್ಲದೆ ಉಳಿದವರಿಗೆ ಆ ದಾರಿ ದುರ್ಗಮವಾಗಿತ್ತು. ಈ ದಾರಿ ಅವರನ್ನು ಚರ್ಚಿನ ಮೇಲಿಂದ ಒಯ್ಯಿತು. ಅಲ್ಲಿಯ ಶ್ಮಶಾನವನ್ನು ಹಾಯುವಾಗ ಅದರ ಗೇಟಿನ ಬಳಿಯಲ್ಲಿ ಒಂದು ಆಕೃತಿ ನಿಶ್ಚಲವಾಗಿ ನಿಂತದ್ದನ್ನು ಅವರು ತಮ್ಮ ಹಾದಿಯ ಹರಟೆಯ ನಡುವೆಯೂ ಗಮನಿಸಿದರು.

'ಅದು ಮಾರ್ಟಿಸೌದಳಿರಬೇಕೆಂದು ನನಗೆ ತೋರುತ್ತದೆ, ಚರಖಿದವನು ಅಂದನು. ಹರಟೆಯು ನಡುವೆಯೆ ಅಡ್ಡಮಾತೆತ್ತಿ 'ನನಗೂ ಆಕೆಯೇ ಎಂದು ಕಾಣುತ್ತದೆ. ಅವಳು ಯಾವಾಗಲೂ ಒಂದು ಒಂಟಿ ಹುಡುಗಿ' ಅಪ್‌ಜಾನ್ ಅಂದನು. ಮತ್ತು ಅವರು ಮನೆಯ ಕಡೆಗೆ ಮುಂದರಿದರು. ಆ ಸಂಗತಿಯ ಬಗೆಗೆ ಮುಂದೇನೂ ವಿಚಾರ ಮಾಡಲಿಲ್ಲ.

ಅವರ ಊಹೆ ನಿಜವೇ ಇತ್ತು. ಅವಳು ಮಾರ್ಟಿಯೇ ಆಗಿದ್ದಳು. ಆ ಸಂಜೆ ಆಕೆ ಮತ್ತು ಗ್ರೇಸ ಜೈಲ್ಸನ ಗೋರಿಯ ಮೇಲೆ ಗೋಪ್ಯವಾಗಿ ಹೂವೇರಿಸಲು ಬರುವ ವಾಡಿಕೆ ಇಟ್ಟುಕೊಂಡ ವಾರದ ದಿನವಾಗಿತ್ತು ಮತ್ತು ಎಂಟು ತಿಂಗಳ ಹಿಂದೆ ಅವನ ಮರಣವಾದಂದಿನಿಂದ ಗ್ರೇಸಳು ಈ ನೇಮವನ್ನು ತಪ್ಪಿಸಿದ್ದು ಇದೇ ಮೊದಲಿನಸಲವಾಗಿತ್ತು. ಮಲಬರಿಯ ಮನೆಯ ಹೊರಗಡೆಗೇ ಹಾದಿಯಲ್ಲಿ ಮಾರ್ಟಿ ಕಾಯುತ್ತ ನಿಂತಿದ್ದಳು. ಅಲ್ಲಿಯೇ ಅವಳ ಸಂಗಾತಿ ಅವಳನ್ನೂ ಬಂದು ಕೂಡುವ ವಾಡಿಕೆ. ಕೊನೆಗೂ ಗ್ರೇಸಳು ತನಗೆ ತಪ್ಪಿದ್ದಳು. ಮುಂದಾಗಿ ನಡೆದಿರಬೇಕು ಎಂದು ಅವಳು ಚರ್ಚಿನ ಅವಾರದತ್ತ ತನ್ನ ಹಾದಿ ಹಿಡಿದು ಹೋದಾಗ ಮುಂದೆಲ್ಲಿಯೂ ಗ್ರೇಸಳನ್ನು ಕಾಣಲಿಲ್ಲ. ಹಾಗೆಯೇ ಆಕೆ ಚರ್ಚನ್ನು ತಲ್ಪಿದಳು. ಅಲ್ಲಿಯೂ ಗ್ರೇಸಳು ಇದ್ದಿಲ್ಲ. ಆದರೂ ಅವಳ ಸಂಗಾಡಿತನದ ಭಾವನೆಯು ಅವಳನ್ನು ಒಂಟಿಯಾಗಿ ಈ ಸಮಾಧಿಯನ್ನು ಸಂದರ್ಶಿಸಲು ಹೋಗಲು ಬಿಡಲಿಲ್ಲ. ಈ ವಿಲಂಬ ಅನಿವಾರ್ಯವಾಗಿಯೇ ಘಟಿಸಿರಬೇಕೆಂದು ಇನ್ನೂ ಭಾವಿಸಿ ತನ್ನ ಪುಟ್ಟ ಹೂವಿನ ಬುಟ್ಟಿಯನ್ನು ಕೈಯಲ್ಲಿ ಗಟ್ಟಿಯಾಗಿ ಹಿಡಿದು ಪಾದಗಳೆಲ್ಲ ಅಲ್ಲಿಯ ತೇವಿನ ತಂಪಿಗೆ ಕೊರತಾಗಿ ಹೋದರೂ ಅಲ್ಲಿಯೇ ಆಕೆ ನಿಂತಳು. ಎರಡು ತಾಸು ಮೀರಿ ವೇಳೆ ಸರಿಯಿತು. ಆಗ ಅವಳು ಮಲಬರಿಯ ಮುಂದಿಯ ಹೆಜ್ಜೆ ಸಪ್ಪಳವನ್ನು ಕೇಳಿದಳು. ಅವರು ತಮ್ಮ ಹುಡುಕಾಟದಿಂದ ಹಿಂದಿರುಗಿ ಬರುತ್ತಿದ್ದರು. ಆ ರಾತ್ರಿಯ ನಿಃಶಬ್ದತೆಯಲ್ಲಿ ಅವರಾಡುವ ಮಾತಿನ ಚೂರುಪಾರು ಮಾರ್ಟಿ ಕೇಳದೇ ಉಳಿಯಲಿಲ್ಲ. ಆದ್ದರಿಂದ ಅವಳಿಗೆ ಏನು ಘಟಿಸಿರಬೇಕೆಂಬುದರ ಒಂದು ಸಾಮಾನ್ಯ ಕಲ್ಪನೆ ಬಂದಿತು. ಗ್ರೇಸಳು ಜೈಲ್ಸನಿಂದ ಬೇರೆಯಾದ ಇನ್ನೊಬ್ಬ ಪುರುಷನ ತೋಳತೆಕ್ಕೆಯಲ್ಲಿ ಈಗ ಇರುವಳೆಂದು ಅವಳು ಊಹಿಸಿದಳು.

ಅವರು ಆ ದಿಬ್ಬ ಇಳಿದುಹೋದೊಡನೆಯೇ ಆಕೆ ಚರ್ಚಿನ ಆವಾರವನ್ನು (ಗೋರಿಗಳ ಶ್ಮಶಾನವನ್ನು) ಪ್ರವೇಶಿಸಿದಳು; ಅಲ್ಲಿ ಪೊದೆಗಳ ಹಿಂದೆ ಒಂದು ಏಕಾಂತ ಸ್ಥಳಕ್ಕೆ ಹೋದಳು; ಅಲ್ಲಿ ಜೈಲ್ಸ ವಿಂಟರಬೋರ್ನನ ಕೊನೆಯ ಶಯ್ಯೆಯನ್ನು ಸೂಚಿಸುವ ಒಂದು ಅನಲಂಕೃತ ಕಲ್ಲು ನಿಂತಿತ್ತು. ಅಲ್ಲಿ ತಿಂಗಳ ಬೆಳಕಿನಲ್ಲಿ ಏಕಾಂತ ಮೌನದಲ್ಲಿ ಏಕಾಕಿಯಾಗಿ ಆ ಹುಡುಗಿಯು ನಿಂತಳು; ತೆಳ್ಳನೆ ಬೆಳ್ಳನೆ ನೀಟಾಗಿ ಪದರು ನೆರಿಗೆಗಳಲ್ಲದ ಸಾದಾ ಗೌನು ತೊಟ್ಟ ಅವಳ ಹೆಣ್ಣುತನದ ಉಬ್ಬು ತಗ್ಗುಗಳ ಬಾಹ್ಯ ರೇಖೆಗಳು ಏನೂ ಎದ್ದು ಕಾಣದಷ್ಟು ಬೆಳೆಯದೇ ಇದ್ದವು. ಅವಳ ಮೈಯಲ್ಲಿಯೆ ಬಡತನದ ಹಾಗೂ ದುಡಿಮೆಯ ಕುರುಹುಗಳೂ ಆ ಮಂಜು ಮುಸುಕಿದ ಹೊತ್ತಿನಲ್ಲಿ

ಮಾಯವಾಗಿದ್ದವು. ಅವಳು ಮಹೋನ್ನತಿಯನ್ನೆ ಕೆಲವು ಅಂಶ ಮುಟ್ಟಿದಂತೆ ಕಾಣುತ್ತಿತ್ತು. ಆ ಮೂರ್ತಿ ಮಾನವತೆಯ ಇನ್ನೂ ಉನ್ನತವಾದ ಗುಣಕ್ಕಾಗಿ ಆಕೆ ಲೈಂಗಿಕಲಕ್ಷಣಗಳನ್ನು ಉಪೇಕ್ಷಿಸಿ ತಳ್ಳಿದಂತೆ ಇತ್ತು.

ಅವಳು ಮಣಿದಳು. ಸಮಾಧಿಯ ಮೇಲಿನ ಬಾಡಿದ ನಿರ್ಮಾಲ್ಯಗಳನ್ನು ಉಡುಗಿ ಮಾಡಿದಳು. ಅವು ಕಳೆದ ವಾರ ಗ್ರೇಸಳೂ ಅವಳೂ ಏರಿಸಿದ ಹೂಗಳು ಮತ್ತು ಆ ಸ್ಥಾನದಲ್ಲಿ ತಾನು ತಂದು ಹೊಸ ಹೂಗಳನ್ನು ಇಟ್ಟಳು.

‘ಈಗ ನನ್ನವನೆ, ನನ್ನ ದೊರೆಯೆ,’ ಆಕೆ ಪಿಸುಗುಟ್ಟಳು ‘ಈಗ ನೀನು ನನ್ನವನು ಕೇವಲ ನನ್ನವನು. ಏಕೆಂದರೆ ಆಕೆ ನಿನ್ನನ್ನು ಕೊನೆಗೂ ಮರೆತುಬಿಟ್ಟಳು, ನೀನು ಆಕೆಗಾಗಿಯೇ ದೇಹವಿಟ್ಟರೂ. ಆದರೆ ನಾನು ಎಚ್ಚರಾದಾಗೆಲ್ಲ ನಿನ್ನನ್ನು ಚಿಂತಿಸುತ್ತೇನೆ. ಅಡ್ಡ ಬಿದ್ದಾಗಲೂ ನಿನ್ನನ್ನೆ ಮತ್ತೆ ಧ್ಯಾನಿಸುತ್ತೇನೆ. ನಾನು ಲಾರ್ಚ ಸಸಿಗಳನ್ನು ನೆಡುವಾಗ ಅಂದುಕೊಳ್ಳುತ್ತೇನೆ—ನಿನ್ನಂತೆ ಯಾರೂ ಆ ಸಸಿಗಳನ್ನು ನೆಡಲಾರರು. ಗೂಟಗಳನ್ನು ಸೀಳುವಾಗ, ಸೇಬಿನ ಗಾಣವನ್ನು ತಿರುಗಿಸುವಾಗ ನಾನು ಹೇಳುತ್ತೇನೆ—ನಿನ್ನಂತೆ ಇನ್ನಾರೂ ಅದನ್ನು ಮಾಡಲಾರರು. ನಾನು ನಿನ್ನನ್ನು ನಿನ್ನ ಹೆಸರನ್ನು ಮರೆಯುವಂತಾದರೆ, ಅಂದು ನನ್ನ ಸ್ವಂತ ಮನೆಯನ್ನೆ, ಸ್ವರ್ಗವನ್ನೆ, ದೇವರನ್ನೆ ನಾನು ಮರೆಯುವಂತಾಗಲಿ. ಆದರೆ ಇಲ್ಲ ಇಲ್ಲ ನನ್ನ ಚಿನ್ನ, ನನ್ನ ದೊರೆ, ನಾ ನಿನ್ನನ್ನು ಎಂದೆಂದೂ ಮರೆಯಲಾರೆ ; ಏಕೆಂದರೆ ನೀನೇ ಅಂಥ ಒಳ್ಳೆಯ ಮನುಷ್ಯ. ಅಂಥ ಒಳ್ಳೆಯದನ್ನೇ ಮಾಡಿದವನು’

ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ನಿಯಮಿತ

ಬೆಂಗಳೂರು

ಜೀವನ ಚರಿತ್ರೆ

		ಸಾದಾ ರೂ.	ಉತ್ತಮ ರೂ.
ಥಾಮಸ್ ಎಡಿಸನ್	ಗೌರೀಶ ಕಾಯ್ಕಿಣಿ	೨-೦೦	—
ಎಡ್ಮಂಡ್ ಬರ್ಕ್	ಎಚ್. ಕೃಷ್ಣರಾವ್	೩-೫೦	—
ಜಾನ್ ಕೆನಡಿ	ಮೂಲ : ಜೇಮ್ಸ್ ಮೆಕ್‌ಗ್ರೆಗರ್ ಬರ್ನ್ಸ್		
	ಅನುವಾದ : ಪಿ. ಎಸ್. ಭಟ್	೨-೦೦	—
ನನ್ನ ಬಾಳುವೆಯ ಹೋರಾಟ	ಮೂಲ : ಖಾನ್ ಅಬ್ದುಲ್ ಗಫಾರ್ ಖಾನ್		
	ಅನು : ಎಂ. ವಾಸುದೇವ ಭಟ್	೮-೦೦	—

ಕಾದಂಬರಿ

		ಸಾದಾ ರೂ.	ಉತ್ತಮ ರೂ.
ನಾಗಶ್ರೀ	ಹಂಪ ನಾಗರಾಜಯ್ಯ	೩-೦೦	—
ರಾಜಮಹಾರಾಜರು	ಮೂಲ : ಮನೋಹರ ಮಾಳಗಾಂವ್‌ಕರ್		
	ಅನುವಾದ : ಶಂಕರ ಪಾಟೀಲ	೬-೫೦	೮-೫೦
ಮಹಾಕವಿ ಕಾಳಿದಾಸ	ಪದ್ಮನಾಭ ಸೋಮಯಾಜಿ	೫-೦೦	೬-೫೦
ಶೀರದ ತೆರೆ	ಅಮೃತ ಸೋಮೇಶ್ವರ	೬-೦೦	—

ನಾಟಕ

		ಸಾದಾ ರೂ.	ಉತ್ತಮ ರೂ.
ಅಪಕಾರಿಯ ಕಥೆ	ಮೂಲ : ಡೇವಿಡ್ ಹಾರ್ಸ್‌ಬರ್ಗ್		
	ಅನುವಾದ : ಬಿ. ಚಂದ್ರಶೇಖರ್	೩-೦೦	—

		ಸಾದಾ ರೂ.	ಉತ್ತಮ ರೂ.

ಕಥಾ ಸಂಗ್ರಹ

ಕಣ್ಣಿ ಕಿತ್ತ ಹಸು	ಸುಧಾಕರ	೧-೫೦	—
ಜನಪದ ಕಥಾವಳಿ	ಎಚ್. ಜೆ. ಲಕ್ಕಪ್ಪಗೌಡ	೧೦-೦೦	—
ನೀರಿಲ್ಲದ ನಲ್ಲಿ	ಬಿ. ಎ. ಸನದಿ	೪-೦೦	—

ನಗೆಬರಹ ಸಂಗ್ರಹ

ಏನೇ ಬರಲಿ ರಮ್ಮಿ ಇರಲಿ	ಎಸ್. ಎನ್. ಶಿವಸ್ವಾಮಿ	೨-೦೦	—

ಶಿಶು ಸಾಹಿತ್ಯ

ತುಪ್ಪಾ ರೊಟ್ಟಿ ಗೇ ಗೇ ಗೇ	ಕಾವ್ಯಾನಂದ	೦-೭೫	—
ಮಕ್ಕಳ ರವೀಂದ್ರರು	ಎಲ್. ಗುಂಡಪ್ಪ	೧-೦೦	—
ಮಾತನಾಡಿದ ಗಿಳಿ	ಪರಮೇಶ್ವರ	೧-೦೦	—
ಬುದ್ಧಿವಂತರು	ಭಾರತೀದೇವಿ	೧-೦೦	—
ಕನ್ನಡ ನಾಡಿನ ಕಲಿ	ದೇ. ಜವರೇಗೌಡ	೧-೦೦	—
ಸಿಗೋರ	ಭಾರತೀಸುತ	೧-೦೦	—
ರಾಬಿನ್‌ಸನ್ ಕ್ರೂಸೋ	ಜಿ. ವೆಂಕಟಸುಬ್ಬಯ್ಯ	೧-೦೦	—
ಜಾಣ ಗೆಲ್ಲುತ್ತಾನೆ	ಕುಮಾರ ವೆಂಕಣ್ಣ	೧-೦೦	—
ಪೆಟಿಗೆ ಬಂದ ಪುಟ್ಟ	ವಾಸುದೇವ	೧-೦೦	—
ರಾಜಹಂಸ	ಪಾರ್ವತೀಯ	೧-೦೦	—
ಮಧುಚಂದ್ರ	ಪಾರ್ವತೀಯ	೧-೦೦	—
ಕುವೆಂಪು ಕಥೆ	ಎಸ್. ಚನ್ನಪ್ಪ	೧-೫೦	—
ಪ್ರಾಣಿ ಪ್ರಪಂಚ	ರಾಮಕೃಷ್ಣಮೂರ್ತಿ	೧-೦೦	—

		ಸಾದಾ ರೂ.	ಉತ್ತಮ ರೂ.

ನವ ಅಕ್ಷರಸ್ಥರ ಸಾಹಿತ್ಯ

ಕೆಂಪಮ್ಮನ ಮಗು	ಅನುಪಮಾ ನಿರಂಜನ	೧-೫೦	—
ಸೊಳ್ಳೆ ಹರಡುವ ರೋಗಗಳು	ಭಾರತೀಸುತ	೧-೫೦	—
ಕೂಡಿ ದುಡಿಯೋಣ	ಕುಮಾರ ವೆಂಕಣ್ಣ	೧-೦೦	—

ಸಂಪಾದಿತ

ಅಕ್ರೂರ ಚರಿತ್ರೆಯು ಸಂಗ್ರಹ	ಪ್ರೊ. ಜಿ. ವೆಂಕಟಸುಬ್ಬಯ್ಯ	೨-೨೫	—

ಕವನ ಸಂಕಲನ

ಆತ್ಮಗೀತೆ	ವಿ. ಜಿ. ಭಟ್ಟ	೩-೦೦	—

ರೂಪಕ ಸಂಕಲನ

ಜಾಹ್ನವಿಗೆ ಜೋಡಿ ದೀವಿಗೆ	ಪು. ತಿ. ನರಸಿಂಹಾಚಾರ್	೩-೦೦	—

ನಿಘಂಟು

ಕಾವ್ಯ ಪದಮಂಜರಿ	ಪ್ರ. ಸಂ: ಸ. ಸ. ಮಾಳವಾಡ	—	೬-೦೦

ವೈಚಾರಿಕ, ಐತಿಹಾಸಿಕ, ವಿಮರ್ಶಾತ್ಮಕ, ವೈಜ್ಞಾನಿಕ

ಹಿಮಾಲಯದ ದಳ್ಳುರಿ	ನಿರಂಜನ	೧-೫೦	—
ಸಾಹಿತ್ಯ ಪ್ರವೇಶ	ಅನುವಾದ: ಸಿ. ಪಿ. ಕೆ.	೮-೦೦	—
ಸಾಹಿತ್ಯ ವಿಮರ್ಶೆಯ ತತ್ವಗಳು	ಅನುವಾದ: ಸಿ. ಪಿ. ಕೆ.	೩-೦೦	—
ಕಾವ್ಯ ಕುತೂಹಲ	ಪು. ತಿ. ನರಸಿಂಹಾಚಾರ್	೩-೦೦	೪-೦೦
ಕುಮಾರವ್ಯಾಸ ಮತ್ತು ಕೃಷ್ಣಕಥೆ	ಎನ್ಕೆ ಕುಲಕರ್ಣಿ	೨-೦೦	೩-೦೦
ವಾಙ್ಮಯ ತಪಸ್ಸು	ಕಡೆಂಗೋಡ್ಲು ಶಂಕರಭಟ್ಟ	೬-೦೦	೮-೦೦

		ಸಾದಾ ರೂ.	ಉತ್ತಮ ರೂ.
ಕನ್ನಡ ಸಂಸ್ಕೃತಿ	ಎಂ. ಮರಿಯಪ್ಪ ಭಟ್ಟ	೮-೦೦	೧೦-೦೦
ಸೋವಿಯೆತ್ ದಿನಚರಿ	ಎಚ್. ವಿ. ಶ್ರೀರಂಗರಾಜ್	೩-೦೦	೪-೦೦
ವಿದೇಶದಲ್ಲಿ ನಾಲ್ಕು ವಾರ	ದೇ. ಜವರೇಗೌಡ	೮-೦೦	—
ಮಾನವ, ಚಂದ್ರನ ಮೇಲೆ	ಜಿ. ಟಿ. ನಾರಾಯಣರಾವ್	೩-೦೦	—
ಕರ್ಣಾಟಕದ ಇತಿಹಾಸ ದರ್ಶನ	ಎಂ. ವಿ. ಕೃಷ್ಣರಾವ್— ಎಂ. ಕೇಶವ ಭಟ್ಟ		೫೦-೦೦
ಮೃಗ-ಶಿರ	ರಾ. ಶಿ.	೪-೦೦	—
ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಸಮೀಕ್ಷೆ	ಕೋ. ಚೆನ್ನಬಸಪ್ಪ	—	೧೬-೦೦
ಕುವೆಂಪು ಸಾಹಿತ್ಯ — ಕೆಲವು ಅಧ್ಯಯನಗಳು	ದೇ. ಜವರೇಗೌಡ	೧೨-೦೦	೧೮-೦೦
ಇದು ಯಾವ ನಾಯಿ?	ಮ. ಲ. ನರಸಿಂಹ ಅಯ್ಯಂಗಾರ್	೬-೦೦	—
ಎಕ್ಸ್‌ಪೊ-೭೦	ಯುವಜನ ನಿಯೋಗದ ಪ್ರವಾಸಾನುಭವ		೪-೦೦
ಭರತೇಶನ ದಿನಚರಿ	ಪಿ. ಕೆ. ನಾರಾಯಣ		೩-೦೦
ಸಾಹಿತ್ಯ ಮಂಥನ	ಟಿ. ಪಿ. ವೆಂಕಟಾಚಲಶಾಸ್ತ್ರಿ		೧೨-೦೦
ಒಡೆಯರು ಮತ್ತು ಮೈಸೂರು	ಮ. ಶ್ರೀಧರಮೂರ್ತಿ		೨-೦೦
ಅಂಕಣ	ನಿರಂಜನ	—	೨೦-೦೦
ಮಹಾ ಯಾತ್ರಿಕರು	ಎಸ್. ಕೆ. ನರಸಿಂಹಮೂರ್ತಿ	೯-೦೦	

ಜ್ಞಾನ ಗಂಗೋತ್ರಿ (ಕಿರಿಯರ ವಿಶ್ವಕೋಶ)

ಮನುಕುಲದ ಕಥೆ	ಪ್ರ. ಸಂ.: ನಿರಂಜನ	೫೦-೦೦
ಜೀವಜಗತ್ತು	,,	೫೦-೦೦
ಭೌತಜಗತ್ತು	,,	೫೦-೦೦
ಯಂತ್ರಜಗತ್ತು	,,	೫೦-೦೦
ಕಲೆ, ಸಾಹಿತ್ಯ	,,	೫೦-೦೦
ಕ್ರೀಡೆ ಮತ್ತು ಮನೋಲ್ಲಾಸ	,,	೫೦-೦೦
ಭಾರತದ ಕಥೆ	,,	೫೦-೦೦

ಕನ್ನಡದ ಖ್ಯಾತ ಲೇಖಕ ಗೌರೀಶ ಕಾಯ್ಕಿಣಿ ಅವರಿಂದ

ಶ್ರೇಷ್ಠ ಆಂಗ್ಲ ಕಾದಂಬರಿಯ ಕನ್ನಡ ಅನುವಾದ

ಮಲೆನಾಡಿಗರು

ಪ್ರಕಟಣೆ ೫೬